
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣರ ಬಯಲಾಟಗಳು

ಸಂಪಾದಕರು
ಡಾ. ವೀರಣ್ಣ ದಂಡೆ ಡಾ. ಜಯಶ್ರೀ ದಂಡೆ



ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.೫೮೫೧೦೬

ಶರಣರ ಬಯಲಾಟಗಳು

Sharanara Bayalatagalu:

Chief Investigators & Ed. : **Dr. Veeranna Dande, Dr. Jayashree Dande,**
Institute of Kannada Studies, Gulbarga University, Gulbarga-585 106.

Funded by : **Goverment of Karnataka.**

First Impression : 2012

Pages : Liii + 679

Paper used : 80 GSM Maplitho

Price : Rs. 500=00

Cover Design by : **Dr. Akash D.,** Artist, Gulbarga.

ಶರಣರ ಬಯಲಾಟಗಳು : ಪ್ರಧಾನ ಸಂಶೋಧಕರು ಮತ್ತು ಸಂಪಾದಕರು :
ಡಾ। ವೀರಣ್ಣ ದಂಡೆ, ಡಾ। ಜಯಶ್ರೀ ದಂಡೆ,
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

ಪ್ರಕಾಶಕರು : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಪುಟಗಳು : Liii+ ೬೭೯

ಪ್ರಥಮ ಮುದ್ರಣ : ೨೦೧೨

ಬಳಸಿದ ಕಾಗದ : ೮೦ ಜಿಎಸ್‌ಎಂ ಮ್ಯಾಪ್ಲಿಥೊ ಕಾಗದ

ಬೆಲೆ : ರೂ. ೫೦೦=೦೦

ಮುಖಪುಟ ವಿನ್ಯಾಸ : **ಡಾ। ಆಕಾಶ ಡಿ.,** ಕಲಾವಿದರು, ಕಲಬುರ್ಗಿ

ಕೃತಿ ದೊರೆಯುವ ಸ್ಥಳ : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ

ಮುದ್ರಕರು :
ಪ್ರಿಂಟ್ ಪಾರ್ಕ್
೧೪೯೬/೪, ೩ ಕ್ರಾಸ್, ಮರಿಯಪ್ಪನ ಪಾಳ್ಯ
ಶ್ರೀರಾಮಪುರಂ ಪೋಸ್ಟ್, ಬೆಂಗಳೂರು-೨೧
ದೂ.ವಾ.೦೮೦-೨೩೪೨೨೮೩೮

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ

(ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ ಯೋಜನೆ)

ಶರಣರ ಬಯಲಾಟಗಳು

ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು

ಡಾ. ವೀರಣ್ಣ ದಂಡೆ, ಡಾ. ಜಯಶ್ರೀ ದಂಡೆ

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ,

ಕಲಬುರ್ಗಿ – ೫೮೫ ೧೦೬

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬಿ. ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ. ಕೆ. ಖಂಡೋಬಾ	ಡಾ. ಡಿ. ಬಿ. ನಾಯಕ
ಡಾ. ವ್ಹಿ. ಜಿ. ಪೂಜಾರ	ಡಾ. ಬಸವರಾಜ ಸಬರದ
ಡಾ. ವೀರಣ್ಣ ದಂಡೆ	ಡಾ. ಬಿ.ಎಸ್.ಪೋಲಿಸ ಪಾಟೀಲ
ಡಾ. ಎಚ್. ಟಿ. ಪೋತೆ	ಡಾ. ಎಸ್. ಎಂ. ಹಿರೇಮಠ

ಡಾ. ಜಯಶ್ರೀ ದಂಡೆ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌದ
ಬೆಂಗಳೂರು–560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಭುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ ಲೇಖಕರೂ ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು- 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕದ ರಾಜ್ಯಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಅಡಿಯಲ್ಲಿ ಗುಲಬರ್ಗಾ

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
☎ 22205781ಮ 2203400
ಫ್ಯಾಕ್ಸ್: 22353105
ಇ-ಮೇಲ್: secy-kc@karnataka.Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡವು ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯುಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ೫ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ

ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ"** (**ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ**) ಎಂಬ ಯೋಜನೆಯಡಿ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಈ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು.

ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ"** (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / **ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು, ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುತ್ತೇನೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ

ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುವೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಈ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತಗ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ. ಎಸ್.ಎಲ್.ಹಿರೇಮಠ ಅವರನ್ನು ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆದ ಡಾ। ವೀರಣ್ಣ ದಂಡೆ ಹಗೂ ಡಾ। ಜಯಶ್ರೀ ದಂಡೆ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

ಪ್ರಧಾನ ಸಂಶೋಧಕರ ನುಡಿ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ನಾಡಿನ ತುಂಬ ಕನ್ನಡದ ಕೆಲಸಗಳು ಮೈತುಂಬಿ ನಡೆಯಬೇಕೆಂಬ ಕರ್ನಾಟಕ ಸರ್ಕಾರದ ಅತ್ಯಂತ ಉತ್ಸಾಹದಾಯಕ ಮತ್ತು ಸಮಯೋಚಿತ ಅಪರೂಪದ ನಿರ್ಧಾರ ಒಂದು ಐತಿಹಾಸಿಕ ದಾಖಲೆಯಾಗಿ ಉಳಿಯುವಂತಹದು. ಕನ್ನಡಕ್ಕೆ ಇದೊಂದು ಅಪರೂಪದ ಅವಕಾಶವೆಂದೇ ಹೇಳಬೇಕು. ಇದರಿಂದ ಕನ್ನಡದ ಸುವರ್ಣ ಯುಗವೊಂದು ಪ್ರಾರಂಭವಾದಂತಾಗಿದೆ. ಇಂತಹ ಒಂದು ಶುಭಾರಂಭವನ್ನು ಪ್ರಾರಂಭಿಸಲು ಕಾರಣರಾದವರು ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಸಂದರ್ಭವನ್ನು ಬಳಸಿಕೊಂಡು, ಕೇಂದ್ರ ಸರ್ಕಾರದಿಂದ ಧನಸಹಾಯ ದೊರೆಯುವ ಮುಂಚೆಯೇ ಕರ್ನಾಟಕ ಸರ್ಕಾರದ ಆದ್ಯಕರ್ತವ್ಯವೆಂದು ಭಾವಿಸಿ, ಮಾನ್ಯ ಶ್ರೀ ಯಡಿಯೂರಪ್ಪ ಅವರು ಕರ್ನಾಟಕದ ೧೧ ವಿಶ್ವವಿದ್ಯಾಲಯಗಳಿಗೆ, ಕನ್ನಡದ ಚಟುವಟಿಕೆಗಳ ಅಭಿವೃದ್ಧಿಗಾಗಿ ತಲಾ ೨ ಕೋಟಿ ರೂಪಾಯಿಗಳನ್ನು ಧನಸಹಾಯವಾಗಿ ಕೊಡುವುದಾಗಿ ಘೋಷಿಸಿದರು. ಮತ್ತು ಕೂಡಲೇ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದರು. ಆ ಫಲವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಳೀಯವಾಗಿ ಮಹತ್ವಪಡೆದ ಅನೇಕ ಸಂಗತಿಗಳ ಬಗ್ಗೆ ಸಂಶೋಧನೆಗಳು ನಡೆಯಬೇಕೆಂಬ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿತು.

ಅಂತಹದರಲ್ಲಿ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಮೌಖಿಕ ಮಾಹಿತಿ ಮತ್ತು ಸಾಹಿತ್ಯ ಇವುಗಳ ಸಂಗ್ರಹ ಮತ್ತು ದಾಖಲೀಕರಣ ಅತ್ಯಂತ ಮಹತ್ವದ ಯೋಜನೆಯಾಗಿದೆ. ಹೈದ್ರಾಬಾದ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕದ ತುಂಬ, ಮತ್ತು ನೆರೆಯ ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಶರಣರ ಸ್ಮಾರಕಗಳಿವೆ. ಶರಣರ ಸ್ಮಾರಕಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರದಲ್ಲಿವೆ.

'ವೀರನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾರೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)**. ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆಗಿರುವ ಡಾ। ವೀರಣ್ಣ ದಂಡೆ ಹಗೂ ಡಾ। ಜಯಶ್ರೀ ದಂಡೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಾಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಸಂಪುಟದ ಕೆಲಸ ಇಷ್ಟೊಂದು ಸಮೃದ್ಧವಾಗಿ ಆಗಲು ಕಾರಣರಾದವರು ಶ್ರೀ ಆನಂದ ಸಿದ್ದಾಮಣಿ, ಅನಿಲ ತೆಗ್ಗಿನಮನಿ, ಸಾಹೇಬಗೌಡ ಸಿಂದಗಿ, ಡಾ। ವೀರಯ್ಯಸ್ವಾಮಿ, ಕು. ಸವಿತಾ ಶಿವಲಿಂಗಪ್ಪ. ಜೊತೆಗೆ ಶರಣರ ಬಯಲಾಟಗಳನ್ನು ಸಂಗ್ರಹಿಸಿ ಆಗಾಗ ಪ್ರಕಟಿಸುತ್ತ ಬಂದ ಹಿರಿಯರಿಗೆ, ಅವನ್ನು ಪ್ರಕಟಿಸಿಕೊಳ್ಳಲು ಅನುಮತಿ ಇತ್ತ ಮಹನೀಯರಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಶರಣರ ಕುರಿತು ಅಧ್ಯಯನ ಮಾಡುವವರಿಗೆ ಈ ಸಂಪುಟಗಳು ಸಹಾಯವಾದರೆ ನಮಗೆ ಅದೇ ಅತ್ಯಂತ ಸಂತೋಷದ ಸಂಗತಿಯಾಗುತ್ತದೆ.

ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿ ಕೊಟ್ಟ ಪ್ರಿಂಟ್ ಪಾರ್ಕ್‌ನ ಮಾಲಿಕರಾದ ಶ್ರೀ ಜಿ.ಬಿ. ಪಾಟೀಲ ಅವರಿಗೆ ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಡಾ। ವೀರಣ್ಣ ದಂಡೆ
ಡಾ। ಜಯಶ್ರೀ ದಂಡೆ

ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ವೀರಣ್ಣ ದಂಡೆ ಹಗೂ ಡಾ। ಜಯಶ್ರೀ ದಂಡೆ ಅವರನ್ನು ಅಭಿನಂದಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

ಪ್ರಸ್ತಾವನೆ

೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದಂತೆ ಮೌಖಿಕ ಮಾಹಿತಿ ಮತ್ತು ಸಾಹಿತ್ಯವನ್ನು ಸಂಗ್ರಹಿಸುವ ಪ್ರಕಟಿಸುವ **"ಶರಣ ಸ್ಮಾರಕಗಳ ಕ್ಷೇತ್ರ ಕಾರ್ಯಯೋಜನೆ"** (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ, ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಎಂಬ ಯೋಜನೆಯಡಿ ಹೊರಬರುತ್ತಿರುವ ಯೋಜನೆಯನ್ನು ಮುಂದಿಟ್ಟುಕೊಂಡು ವ್ಯಾಪಕವಾದ ಕ್ಷೇತ್ರಕಾರ್ಯಕೈಕೊಂಡಾಗ ನಮ್ಮ ಗಮನಕ್ಕೆ ಬಂದ ಸಂಗತಿ ಎಂದರೆ ವಿಶೇಷವಾಗಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ, ಶರಣರ ಬಗೆಗೆ ಸ್ಮಾರಕಗಳಿರುವ ಊರುಗಳಲ್ಲಿ ಶರಣರ ಕುರಿತು ಸಾಕಷ್ಟು ಮಾಹಿತಿಗಳು ಪ್ರಚಾರದಲ್ಲಿವೆ. ಅಲ್ಲಲ್ಲಿಯ ಸ್ಥಳಿಯರು ಅಭಿಮಾನದಿಂದ ಅವುಗಳನ್ನು ಹೇಳಿಕೊಳ್ಳುತ್ತಾರೆ. ಶರಣರ ಬಗೆಗೆ ಸಣ್ಣ ಸಣ್ಣ ಹಾಡುಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಪ್ರಚಾರದಲ್ಲಿವೆ. ಆ ಹಾಡುಗಳನ್ನು ಜಾತಿಭೇದವಿಲ್ಲದೆ ಎಲ್ಲ ಸಮುದಾಯದ ಸ್ತ್ರೀ–ಪುರುಷರು ಸೃಷ್ಟಿಸುತ್ತ ಬಂದಿದ್ದಾರೆ ಮತ್ತು ಅವುಗಳನ್ನು ಶ್ರದ್ಧೆಯಿಂದ ಹಾಡುತ್ತಾರೆ. ಬದುಕಿನ ಪ್ರತಿ ಸಂದರ್ಭದಲ್ಲೂ ಶರಣರ ಹಾಡುಗಳು ಸೇರಿಕೊಂಡಿವೆ. ಮದುವೆ, ಸೋಬಾನ, ಜೋಗುಳ, ಹಂತಿ, ರಿವಾಯತ, ಲಾವಣಿ ಹೀಗೆ ಯಾವುದೇ ಸಂದರ್ಭದಲ್ಲೂ ಕನಿಷ್ಠಪಕ್ಷ ಶರಣರ ನೆನೆಕೆಯಾದರೂ ಅಲ್ಲಿರುತ್ತದೆ. ಇದು ನಮಗೆ ವ್ಯಾಪಕವಾಗಿ ಕಂಡುಬಂದ ಸಂಗತಿ. ಅಂದರೆ ಶರಣರು ಉತ್ತರ ಕರ್ನಾಟಕದ ಜನರ ಬದುಕಿನಲ್ಲಿ ರಕ್ತಗತವಾಗಿ ಹೋಗಿದ್ದಾರೆ. ಅದಕ್ಕಾಗಿ ಶರಣರನ್ನು ಬೇರ್ಪಡಿಸಿ ಈ ಭಾಗದ ಜನರ ನಡೆನುಡಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಆದರೆ ನಾವು ಗಮನಿಸಿದಂತೆ ರಂಗಮಾಧ್ಯಮಗಳಿಗೆ ಬಂದರೆ, ವಿಶೇಷವಾಗಿ ಬಯಲಾಟ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶನಗೊಳ್ಳುತ್ತ ಬಂದಿರುವ ನಾಟಕಗಳ ಸೃಷ್ಟಿ ಹಾಡುಗಳಷ್ಟು ವ್ಯಾಪಕವಾಗಿ ಇಲ್ಲ. ಇವೆಲ್ಲ ಹೆಚ್ಚಾಗಿ ಹುಟ್ಟಿಕೊಂಡದ್ದು ಮುಂಬೈಪ್ರಾಂತಕ್ಕೆ ಸೇರಿದ ಜಿಲ್ಲೆಗಳಲ್ಲಿ. ಬೆಳಗಾಂವ, ಬಿಜಾಪೂರ, ಧಾರವಾಡ ಹೀಗೆ ಈ ಜಿಲ್ಲೆಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಅವೆಲ್ಲ ಹುಟ್ಟಿಕೊಂಡಿವೆ. ಒಂದು ಬಯಲಾಟ ಮಾತ್ರ ಹೈದ್ರಾಬಾದ ಕರ್ನಾಟಕ ಪ್ರದೇಶದ ಕೊಪ್ಪಳ ಜಿಲ್ಲೆಯ

ಅವುಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವ ಮಹತ್ವದ ಯೋಜನೆ ನಮ್ಮದು.

"ಶರಣ ಸ್ಮಾರಕಗಳ ಕ್ಷೇತ್ರ ಕಾರ್ಯಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ, ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಯೋಜನೆಯಡಿ ಹೊರಬರುತ್ತಿರುವ **'ಶರಣರ ಬಯಲಾಟಗಳು'** ಎಂಬ ಈ ಸಂಪುಟದಲ್ಲಿ ಈವರೆಗೆ ಪ್ರಕಟವಾದ ಶರಣರಿಗೆ ಸಂಬಂಧಪಟ್ಟ ದೊಡ್ಡಾಟ, ಸಣ್ಣಾಟ ಹಾಗೂ ಯಕ್ಷಗಾನಗಳನ್ನು ಒಂದೆಡೆ ಪ್ರಕಟಿಸಲಾಗಿದೆ. ಇದರಲ್ಲಿ ಅಪ್ರಕಟಿತ ಒಂದು ಬಯಲಾಟವೂ ಸೇರಿದೆ. ಅದನ್ನು ಡಾ। ಬಸವರಾಜ ಮಲಶೆಟ್ಟಿ ಅವರು ಒದಗಿಸಿದ್ದಾರೆ. ಹೀಗೆ ಇವೆಲ್ಲ ಒಂದೆಡೆ ದೊರೆಯುವುದರಿಂದ ಶರಣರ ಬಗೆಗೆ ಹುಟ್ಟಿಕೊಂಡ ಬಯಲಾಟಗಳ ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಮತ್ತು ಬಯಲಾಟದ ಕವಿಗಳು ಇವುಗಳ ವಸ್ತುವನ್ನು ಎಲ್ಲಿಂದ ಪಡೆದರು, ಮಾರ್ಪಾಡುಗಳನ್ನು ಹೇಗೆ ಮಾಡಿಕೊಂಡರು, ಹೀಗೆ ಮಾಡಿಕೊಳ್ಳುವಾಗ ಅದರ ಹಿಂದಿರುವ ಅವರ ಭಾವನೆ ಎಂತಹದು ಎಂಬಿತ್ಯಾದಿ ವಿಷಯಗಳನ್ನು ಅರಿತುಕೊಳ್ಳಲು ಇದರಿಂದ ಸಹಾಯವಾಗುತ್ತದೆ. ಈ ಸಂಪುಟಕ್ಕೆ ತಮ್ಮ ಕೃತಿಗಳನ್ನು ಬಳಸಿಕೊಳ್ಳಲು ಅನುಮತಿ ಇತ್ತ ಮಹನೀಯರುಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಕನ್ನಡದ ಬಗ್ಗೆ ವಿಶಾಲವಾದ ಹೃದವಂತಿಕೆಯನ್ನು ಮೆರೆದ ಕರ್ನಾಟಕ ಸರ್ಕಾರಕ್ಕೆ ಮೊದಲು ನಮ್ಮ ನಮನಗಳು ಸಲ್ಲುತ್ತವೆ. ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯಡಿಯೂರಪ್ಪ ಅವರು, ಈಗಿನ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಡಿ. ವ್ಹಿ. ಸದಾನಂದಗೌಡ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಗೋವಿಂದ ಎಂ. ಕಾರ್ಜೋಳ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಅವರು ಹಾಗೂ ಆಯುಕ್ತರಾದ ಡಾ। ಮನು ಬಳಿಗಾರ ಅವರು ಅಭಿನಂದನೆಗೆ ಅರ್ಹರಾಗಿದ್ದಾರೆ.

ನಮ್ಮ ಕುಲಪತಿಗಳಾದ ಮಾನ್ಯ ಪ್ರೊ. ಈ. ಟಿ. ಪುಟ್ಟಯ್ಯನವರು ತುಂಬಾ ಆಸಕ್ತಿ ವಹಿಸಿ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯ ಕೆಲಸಗಳು ಚುರುಕಿನಿಂದ ನಡೆಯಲು ಕಾರಣರಾಗಿದ್ದಾರೆ. ಮಾನ್ಯ ಕುಲಸಚಿವರಾದ ಡಾ। ಎಸ್.ಎಲ್. ಹಿರೇಮಠ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಅದಕ್ಕಾಗಿ ನಾವು ಈ ಮಹನೀಯರುಗಳಿಗೆ ಆಭಾರಿಯಾಗಿದ್ದೇವೆ. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿಗಳನ್ನೂ ಅಧ್ಯಕ್ಷರಾದ ಡಾ। ನಾಗಾಬಾಯಿ ಬುಳ್ಳಾ ಅವರನ್ನೂ ಈ ಸಂದರ್ಭದಲ್ಲಿ ನೆನೆಸುತ್ತೇವೆ.

ಗಜಾನನ ಸ್ತುತಿಯೊಂದಿಗೆ ಆಗುತ್ತದೆ. ಆಮೇಲೆ ಗುದಿನೇಶನಲ್ಲಿ ಮತಿ ಕೊಡೆಂದು ಪ್ರಾರ್ಥಿಸುತ್ತಾನೆ. ಆಶೀರ್ವದಿಸಲು ಕೇಳಿಕೊಳ್ಳುತ್ತಾನೆ. ಶಿವ-ಗೌರಿಯರನ್ನು, ಸರಸ್ವತಿಯನ್ನು ಸ್ತುತಿಸುತ್ತಾನೆ. ಬಸವಣ್ಣ ಧರೆಯಲ್ಲಿ ಉದಿಸಿ, ನಾನಾ ಮಹಿಮೆ ತೋರಿ ಚಾರ್ವಾಕ ಮತ ಮುರಿದು ಶಿವಧರ್ಮವನ್ನು ಬೆಳೆಸಿದ ಕಥೆಯನ್ನು ಸಭೆಯಲ್ಲಿ ನಿಂತು ಹೇಳುತ್ತೇನೆ ಎಂದು ಪ್ರಾರಂಭದಲ್ಲಿಯೇ ನಿವೇದಿಸಿಕೊಂಡಿದ್ದಾನೆ.

ನಾರದನು ಭೂ ಸಂಚಾರ ಮಾಡಿ, ಮರ್ತ್ಯದ ಅವ್ಯವಹಾರಗಳನ್ನೆಲ್ಲ ಕಂಡಿದ್ದಾನೆ. ಬೌದ್ಧ, ಚಾರ್ವಾಕ, ಸುಗತ, ಶ್ರವಣ, ಜೈನಧರ್ಮಗಳಿಂದ ಸಮಾಜದ ಸ್ಥಿತಿ ಏನಾಗಿದೆ ಎನ್ನುವುದನ್ನೂ ಕಲಿಯ ಬಲಾಢ್ಯತೆಯಿಂದ ಶಿವನಿಂದೆ, ಅಷ್ಟಾವರಣ ತುಚ್ಛೆ ನಡೆದಿರುವುದನ್ನೂ ಕಿವಿಯಿಂದ ಕೇಳಲಾಗದು ಎಂದು ಮರಗುತ್ತಾನೆ. ಕೈಲಾಸದಲ್ಲಿ ಗಣಾಧೀಶ್ವರರ ನಡುವೆ ಕೋಟಿಸೂರ್ಯ ಪ್ರಕಾಶನಾಗಿ ಬೆಳಗುತ್ತಿರುವ ಶಿವನಿಗೆ ಈ ವಿಷಯವನ್ನು ವಂದಿಸಿ ಹೇಳುತ್ತಾನೆ. ನಂದಿಗೆ ವೀರಶೈವ ಮತೋದ್ಧಾರಕನೆಂದೆ ಸಂಬೋಧಿಸುತ್ತಾನೆ. ನಮಸ್ಕರಿಸುತ್ತಾನೆ. ಪಾರ್ವತಿಯೂ ಲೋಕವಿಷಯವನ್ನು ಕೇಳುವ ಕೌತುಕದಲ್ಲಿದ್ದಳು. ನಾರದ ಹೇಳುವ ವಿಷಯ ಕೇಳಿ ಎಲ್ಲರಿಗೂ ಆಶ್ಚರ್ಯ ಆಗುತ್ತದೆ. ವಾತಾವರಣ ತಿಳಿಗೊಳಿಸಲು, ನನಗೂ ನಂದಿಗೂ ಎಳ್ಳಷ್ಟು ಭೇದವಿಲ್ಲ, ಅವನನ್ನೇ ಭೂಲೋಕಕ್ಕೆ ಕಳಿಸುವೆ ಎನ್ನುತ್ತಾನೆ ಶಿವ. ನಾರದ ಅದಕ್ಕೆ ಬೆಂಬಲಿಸುತ್ತಾನೆ. ಗಂಗೆಯನ್ನೂ ಕಳಿಸಿ, ಬಸವನ ಪತ್ನಿಯಾಗೆಂದು ಹರಸುತ್ತಾನೆ. ಯಾವ ಹೆಂಡತಿಯೂ ಇಂತಹ ಮಾತುಗಳನ್ನು ಒಪ್ಪುವುದಿಲ್ಲ. ಹಾಗೆ ಇಲ್ಲಿ ಗಂಗೆಯೂ ದೇವತೆಯ ಸ್ಥಾನದಲ್ಲಿದ್ದು, ಲೌಕಿಕರಂತೆ ವಿರೋಧಿಸುತ್ತಾಳೆ. ನೀವೇ ನಿಮ್ಮ ಪತ್ನಿಯನ್ನು ಇನ್ನೊಬ್ಬರ ಪತ್ನಿಯಾಗೆಂದು ಹೇಳುವುದು ಯೋಗ್ಯ ಮಾತಲ್ಲ ಎಂದು ನಿಮಗೆ ಅನಿಸಲಿಲ್ಲವೆ? ಎಂಬುದು ಆಕೆಯ ಪ್ರಶ್ನೆ. ಬಸವನನ್ನು ನಾನೆಂದೇ ಭಾವಿಸು ಎಂಬುದು ಶಿವನ ಸಮಜಾಯಿಸಿ. ವಿಧಿಯಿಲ್ಲದೆ ಒಪ್ಪಿಕೊಳ್ಳುತ್ತಾಳೆ. ಶಿವಭಕ್ತ ಶಿಖಾಮಣಿ ಬಲದೇವ ಮಂತ್ರಿಯ ಮಗಳಾಗಿ ಗಂಗೆಯು ಗಂಗಾಂಬಿಕೆಯಾಗಿ ಜನಿಸುತ್ತಾಳೆ. ನಂದಿಯೂ ಒಪ್ಪಿಕೊಂಡು, ಶಿವನಾಜ್ಞೆ ಹೊತ್ತು ಮರ್ತ್ಯದಲ್ಲಿ ಜನಿಸುತ್ತಾನೆ. ನಂದಿ ಕೇಳುವ ಮೊದಲೇ ಶಿವನು ತಾನೇ ಗುರುವಾಗಿ ಬಂದು ಜ್ಞಾನಸೌಖ್ಯವನ್ನು ಕೊಡುತ್ತೇನೆ ಎಂದೂ, ಇಷ್ಟಲಿಂಗವಾಗಿ ಬಸವನ ಅಂಗದ ಮೇಲಿದ್ದು, ಎಲ್ಲವನ್ನು ಭೋಗಿಸುವುದಾಗಿಯೂ ಜಂಗಮವಾಗಿ ಬಂದು ಪ್ರಸಾದ ಸ್ವೀಕರಿಸುವುದಾಗಿಯೂ, ತನ್ನ ಪ್ರಾಣ ಸ್ವರೂಪದಂತಿರುವ ಗಣಸಮೂಹವನ್ನು ಬಸವನ ಜೊತೆ ಕಳಿಸಿ ಕೊಡುವುದಾಗಿಯೂ ಶಿವ ಹೇಳುತ್ತಾನೆ. ಮರ್ತ್ಯದಲ್ಲಿರುವ ಭಕ್ತರ ಭಕ್ತಿ ಮರೆಯದೇ ನಂದೀಶ್ವರನನ್ನು ಮಾದರಸ, ಮಾದಲಾಂಬಿಕೆಯರ ಮಗನಾಗಿ ಜನಿಸುವಂತೆ ಮಾಡಿ ಎಂದು ಪಾರ್ವತಿ

ಕುಕನೂರಿನಲ್ಲಿ ಹುಟ್ಟಿಕೊಂಡಿದೆ. ಇನ್ನೂ ಒಬ್ಬಿಬ್ಬರು ಬಯಲಾಟಗಳನ್ನು ಬರೆದ ಬಗ್ಗೆ ಸುಳುಹು ದೊರೆತರೂ ನಮಗೆ ಅವು ದೊರೆಯಲಿಲ್ಲ.

ಶರಣರ ಕುರಿತ ಬಯಲಾಟಗಳೆಲ್ಲ ಒಂದೆಡೆ ಪ್ರಕಟವಾದರೆ, ಮುಂದಿನ ಅಭ್ಯಾಸಕ್ಕೆ ಅನುಕೂಲವಾಗುತ್ತದೆ, ಮತ್ತು ಬಯಲಾಟಗಳಲ್ಲಿ ಶರಣರ ಬಗೆಗೆ ಮೂಡಿದ ಭಾವನೆಗಳು ಎಂತಹವು ಎಂಬುದು ಗೊತ್ತಾಗುತ್ತದೆ ಎಂಬ ಉದ್ದೇಶದಿಂದ **'ಶರಣರ ಬಯಲಾಟಗಳು'** ಎಂಬ ಈ ಸಂಪುಟವನ್ನು ಸಂಪಾದಿಸಲಾಗಿದೆ. ಈ ಸಂಪುಟದಲ್ಲಿ ಸೇರಿಸಿರುವ ಬಯಲಾಟಗಳು ಹೀಗಿವೆ:

೧. ಶ್ರೀ ಬಸವೇಶ್ವರ ಚರಿತ್ರೆ (ದೊಡ್ಡಾಟ, ಅಪ್ರಕಟಿತ ಹಸ್ತಪ್ರತಿಯನ್ನು ಒದಗಿಸಿದವರು ಡಾ. ಬಸವರಾಜ ಮಲಶೆಟ್ಟಿ).

೨. ಅಲ್ಲಮಪ್ರಭು (ಸಣ್ಣಾಟ), ಸಂ. ಡಾ। ಎಂ.ಎಸ್. ಸುಂಕಾಪುರ

೩. ಪ್ರಭುದೇವರ ಯಕ್ಷಗಾನ, ಸಂ. ಡಾ। ಎಂ.ಎಸ್.ಲಠ್ಠೆ, ಡಾ। ಎಸ್.ಡಿ.ಸೌದತ್ತಿಮಠ

೪. ಮಾಯಾ ಕೋಲಾಹಲ (ಯಕ್ಷಗಾನ), ಮಂಜುನಾಥ ಭಾಗವತ ಹೊಸ್ತೋಟ

೫. ಅಕ್ಕಮಹಾದೇವಿ (ಸಣ್ಣಾಟ), ಸಂ. ಡಾ. ಶಾಂತಾ ಇಮ್ರಾಪೂರ

೬. ಶಿವಶರಣ ಹರಳಯ್ಯ (ಸಣ್ಣಾಟ), ಸಂ. ಡಾ। ಎಂ.ಎಸ್. ಲಠ್ಠೆ

ನಾವು ಗಮನಿಸಿದಂತೆ ಬಸವಣ್ಣ ಮತ್ತು ಪ್ರಭುದೇವರು ಇವರ ಬಗೆಗಿನ ವಸ್ತು ಬಯಲಾಟ ಮತ್ತು ನಾಟಕಗಳಿಗೆ ಮುಖ್ಯವಾಗಿ ಉಪಯೋಗವಾಗಿದೆ. ಅದರಲ್ಲೂ ಅಲ್ಲಮಪ್ರಭುಗಳ ಬದುಕು, ನಡೆ ಯಕ್ಷಗಾನಕ್ಕೂ ವಸ್ತುವಾಗಿರುವುದು ವಿಶೇಷ. ಅಲ್ಲಮಪ್ರಭುವಿನ ಯಕ್ಷಗಾನ ಮತ್ತು ಬಯಲಾಟಗಳಿಗೆ ಪ್ರಭುಲಿಂಗಲೀಲೆ, ಬಸವಣ್ಣನವರ ಕುರಿತ ಬಯಲಾಟಗಳಿಗೆ 'ಬಸವ ಪುರಾಣ'ದ ಕಥೆಗಳು ಹೆಚ್ಚಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಜೊತೆಗೆ ಹರಿಹರನ ರಗಳೆಗಳೂ ಕೃತಿಕಾರರ ಸಹಾಯಕ್ಕೆ ಉಪಯೋಗವಾಗಿವೆ. ಇದನ್ನು ಗಮನಿಸಿದರೆ ವಿಶೇಷವಾಗಿ ಯಕ್ಷಗಾನ ಮತ್ತು ದೊಡ್ಡಾಟಗಳು ತಕ್ಕಮಟ್ಟಿಗೆ ಶಿಕ್ಷಣ ಪಡೆದವರ ಸೃಷ್ಟಿಗಳೆ ಆಗಿರುವುದು ಗಮನಾರ್ಹ.

೧. ಶ್ರೀ ಬಸವೇಶ್ವರ ಚರಿತೆ (ದೊಡ್ಡಾಟ): ಶ್ರೀಬಸವೇಶ್ವರ ಚರಿತೆ ದೊಡ್ಡಾಟವು ಹೈದ್ರಾಬಾದ ಕರ್ನಾಟಕಕ್ಕೆ ಸೇರಿದ, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮನಿವಾಸಿಯಿಂದ ರಚನೆ ಆದುದು. ಕೃತಿಯಲ್ಲಿ ಕುಂತಳಪುರ ನಿವಾಸಿ ಎಂದು ಹೇಳಿದೆ. ಆದರೆ ಬರೆದವರ ಹೆಸರು ಗೊತ್ತಾಗುವುದಿಲ್ಲ. ಆ ಊರಿನ ಗುದ್ನೇಶ್ವರ ದೇವನು ಕವಿಯ ಆರಾಧ್ಯ ದೈವ. ಕೃತಿಯ ಪ್ರಾರಂಭ

ಮಾದಲಾಂಬಿಕೆ ಅಂದೇ ಒಂದು ಅದ್ಭುತ ಕನಸನ್ನು ಕಾಣುತ್ತಾಳೆ. ಮಾದರಸನಲ್ಲಿ ಹೇಳುತ್ತಾಳೆ– ಮದೋನ್ಮತ್ತ ಆನೆ, ದಿವ್ಯ ವೃಷಭ, ಕಮಲ, ಸೂರ್ಯ, ಮೇರುಪರ್ವತ, ಸಮುದ್ರ, ಚಂದ್ರರನ್ನು ಸ್ವಪ್ನದಲ್ಲಿ ಕಂಡಿರುತ್ತಾಳೆ. ಇದೆಲ್ಲ ಪುತ್ರನ ಆಗಮನ ಶುಭಚಿನ್ಹೆ ಎಂದು ಕನಸನ್ನು ಬಿಡಿಸಿ ವಿವರಿಸಿ, ಮಾದಲಾಂಬಿಕೆಯಲ್ಲಿ ಪುತ್ರ ವಾತ್ಸಲ್ಯ ಭಾವನೆ ತುಂಬುತ್ತಾನೆ. ಮಾದಲಾಂಬಿಕೆ ಸಖಿ ಶಾಂತಮತಿಯ ಜೊತೆ ನಗುನಗುತ್ತ ಸಮಯ ಕಳಿಯುತ್ತಾಳೆ. ಗರ್ಭಧಾರಣೆ ಆಗುತ್ತದೆ. ಗರ್ಭಸಂಸ್ಕಾರವೆಲ್ಲ ಅಲ್ಲಿ ನಡೆಯುತ್ತವೆ. ಶಿವನು ತನ್ನ ಸತ್ಪುತ್ರನನ್ನು, ಅಷ್ಟಾವರಣ ಸಂಪನ್ನ ಮಹಾಜ್ಞಾನಿಯನ್ನು, ಜಗದ ಜ್ಯೋತಿಯನ್ನು ಸುಸೂತ್ರವಾಗಿ ತಾಯಿ ಮಗ್ಗಲು ಮಲಗಿಸಿ ಲಿಂಗಧಾರಣೆ ಸಂಸ್ಕಾರವನ್ನೂ ಮಾಡಿಸಿ, ಪಂಚಾಕ್ಷರಿ ಮಂತ್ರವನ್ನು ಬಲಗಿವಿಯಲ್ಲಿ ಹೇಳಿ, ಬಸವ ಬಸವ ಬಸವ ಎಂದು ಉಸುರಿ ಮಾಯವಾಗುವನು. ಮಾದಲಾಂಬೆ ನಿದ್ರೆತಳೆದೆದ್ದು ಈ ಪುಣ್ಯ ಪುತ್ರನನ್ನು ನೋಡುವಳು. ಶಾಂತಮತಿಯನ್ನು ಎಚ್ಚರಿಸಿ, ಮಾದರಸರಿಗೆ ಶುಭಸಮಾಚಾರ ಮುಟ್ಟಿಸುವಳು. ದಂಪತಿಗಳಿಬ್ಬರೂ ದಿವ್ಯಪುತ್ರನನ್ನು ಕಂಡು ಕೊಂಡಾಡುವರು. ಮಗುವಿನ ನಾಮಕರಣಕ್ಕೆ ಮುತ್ತೈದೆಯರನ್ನು ಕರೆಸಿ, ಜೋಗುಳ ಹಾಡಿ, ಬಸವನೆಂದು ನಾಮಕರಣ ಮಾಡಿದರು. ಅಲ್ಲಿಗೆ ಚರಮೂರ್ತಿಯೊಬ್ಬರು ಬಂದು ವೀರಶೈವ ಮತೋದ್ಧಾರ ಮಾಡೆಂದು ಕೂಸಿಗೆ ಹರಸುತ್ತಾರೆ. ಬಸವನು ಭಕ್ತಿಯ ಸಂಸ್ಕಾರ ಪಡೆಯುತ್ತ ಐದುವರುಷದವನಾಗುತ್ತಾನೆ. ಅವನಿಗೆ ಶಿಕ್ಷಣ ಕೊಡಿಸಲು ಸಾಲಿಮಠಕ್ಕೆ ಹಾಕುತ್ತಾರೆ. ಅಲ್ಲಿ ದಾಮೋದರ, ಮುದ್ದ, ಕೇಶವ, ಚಿದಂಬರ, ಮೊದಲಾದ ಶಿಷ್ಯರೆಲ್ಲ ಬಂದಿರುತ್ತಾರೆ.

ಇಲ್ಲಿ ಒಂದು ಘಟನೆ ನಡೆದು ಹೋಗುತ್ತದೆ. ಗುರುಗಳು ಬಾವಿಗೆ ಹೋಗಿ ಪಾಟಿ ತೊಳೆದು ತಂದು ಸರಸ್ವತಿ ಪೂಜೆ ಮಾಡಲು ಹೇಳುತ್ತಾರೆ. ಹುಡುಗರೆಲ್ಲ ಹಾಗೆ ಮಾಡಲು ಬಾವಿಯ ಹತ್ತಿರ ಹೋಗುತ್ತಾರೆ. ಚಿದಂಬರ ಆದ್ಹೇಗೋ ಕಾಲುಜಾರಿ ಬಾವಿಯೊಳಗೆ ಬೀಳುತ್ತಾನೆ. ಚೀರುತ್ತಾನೆ. ಅವನ ಪ್ರಾಣ ಉಳಿಯದು ಎಂದುಕೊಂಡು ಬೇರೆ ಹುಡುಗರೆಲ್ಲ ಈ ಅಪವಾದವನ್ನು ಬಸವಣ್ಣನ ಮೇಲೆ ಹಾಕುತ್ತಾರೆ. ಚಿದಂಬರನ ತಂದೆ ಗೋವಿಂದ ಭಟ್ಟನಿಗೆ ವಿಷಯ ಮುಟ್ಟುತ್ತದೆ. ಶಿವನಲ್ಲಿ ಪ್ರಾರ್ಥಿಸುತ್ತಾನೆ. ಹೀಗೆ ಮಾಡಿದವನು ಬಸವ ಎನ್ನುತ್ತಾರೆ. ಪಾದದಾಣೆ ಮಾಡಿ ಬಸವನೇ ನೂಕಿದವನು ಎನ್ನುತ್ತ ಗೋವಿಂದ ಭಟ್ಟ ಶೋಕಿಸುತ್ತಾನೆ. ತನ್ನ ಮಗ ಬಸವ ಹೀಗೆ ಮಾಡಿರಲು ಸಾಧ್ಯವಿಲ್ಲ ಎಂದು ಮಾದರಸ ಹೇಳಿದರೂ ಕೇಳುವದಿಲ್ಲ. ತಂದೆಯು ಬಸವನನ್ನು ಕರೆಸಿ ವಿಚಾರಿಸುತ್ತಾನೆ. ಬಸವ ತಾನು ನಿರಪರಾಧಿ ಎಂದು ಸಮರ್ಥಿಸಿಕೊಳ್ಳುತ್ತಾನೆ. ಬಸವ ಎಷ್ಟು ಮುಗ್ಧನೆಂದರೆ,

ಹೇಳುತ್ತಾಳೆ. ಆಗ ಶಿವನು ಸಮ್ಮತಿಸುವ ಜೊತೆಗೆ, ಪಾರ್ವತಿಗೂ ಆ ಭಕ್ತರ ಮಗಳು ಅಕ್ಕನಾಗಮ್ಮನಾಗಿ ಜನಿಸು ಎಂದು ಹರಸುತ್ತಾನೆ. ನಂದೀಶನಿಗೆ ನಿನಗೆ ಬೆಂಬಲವಾಗಿ ಪಾರ್ವತಿಯನ್ನೇ ಕಳಿಸುತ್ತೇನೆಂದೂ ಹೇಳಿರುವ ಈ ವಿಷಯಗಳೆಲ್ಲ ಹೊಸದಾಗಿಯೇ ಕಾಣಿಸುತ್ತವೆ.

ಇತ್ತ ಮರ್ತ್ಯಲೋಕದಲ್ಲಿ ಪುಣ್ಯಾತ್ಮ ಬಸವನೆಂಬ ಕಾರಣಿಕನನ್ನು ಹೆರುವ ತಾಯಿ ಮಾದಲಾಂಬಿಕೆ ಖಿನ್ನತೆಯಲ್ಲಿದ್ದಾಳೆ. ಆಕೆಯ ಸಖಿ ಶಾಂತಮತಿ ಆಕೆಯೊಂದಿಗೆ ಕುಶಲೋಪಚಾರ ವಿಚಾರಿಸುವುದು, ಮಕ್ಕಳಿಲ್ಲವೆಂಬ ದುಃಖದಲ್ಲಿರುವ ಸಖಿಯನ್ನು ಸಮಾಧಾನಗೊಳಿಸುವುದು, ಮತ್ತೆ ಮಾದಲಾಂಬಿಕೆ ಮಕ್ಕಳಿಲ್ಲದವರಿಗೆ ಗತಿಯಿಲ್ಲವೆಂದು ಶೋಕಿಸುವುದು, ಪ್ರಾರಬ್ಧ ಕರ್ಮವೆಂದು ಹಳಿದುಕೊಳ್ಳುವುದು, ಮತ್ತೆ ಸಖಿ ಗುದಿನೇಶ್ವರನನ್ನು ಪೂಜಿಸಿ ಮನೋಭಿಷ್ಟ ಪಡೆಯಲು ಹೇಳಿರುವುದು ನಡೆದಿದೆ. ಇಲ್ಲೆಲ್ಲ ಒಂದೆಡೆ ನಕಾರಾತ್ಮಕ ಚಿಂತನೆ ಇನ್ನೊಂದೆಡೆ ಆಸೆ ಹುಟ್ಟಿಸುವ ಸಕಾರಾತ್ಮಕ ಚಿಂತನೆ ಏಕಕಾಲದಲ್ಲಿಯೇ ಕಾಣಿಸುತ್ತದೆ. ಮಾದರಸ ಕೂಡ ಮಾದಲಾಂಬಿಕೆಗೆ ಮಕ್ಕಳಿಲ್ಲವೆಂದು ಕೊರಗುವುದು ಬೇಡ ಎನ್ನುವದರ ಜೊತೆಗೆ ಲೌಕಿಕ ಮಾತುಗಳನ್ನಾಡುತ್ತಾನೆ. ಮಗನ ಜನನ ಆದ ಮಾತ್ರಕ್ಕೆ ದುಃಖ ಕೊನೆಯಾಗುತ್ತದೆ ಅಂದುಕೊಳ್ಳಬೇಡ. ಹುಟ್ಟಿದ ಮಗ ರೋಗಿಯೋ ಅಜ್ಞಾನಿ-ಮೂರ್ಖನೋ ಆಗಿ ಹುಟ್ಟಿದರೆ ಮತ್ತಷ್ಟು ದುಃಖವಲ್ಲವೇ? ಅಲ್ಪಾಯುಷಿ ಆಗಿ ಮರಣಹೊಂದಿದರೆ ಇನ್ನೂ ತಾಪವಲ್ಲವೆ? ಎಂದು ಹೇಳಿದಾಗಲೂ ಹೆಣ್ಣು ತಾಯ್ತನ ಅನುಭವಿಸಿದಾಗಲೇ ಪುಣ್ಯ, ಇಲ್ಲದಿದ್ದರೆ ಬಂಜೆಯೆಂಬ ಪಾಪ ಕೊನೆವರೆಗೂ ನನ್ನನ್ನು ಬಾಧಿಸುತ್ತದೆ ಎಂದು ಅತಿಯಾಗಿ ಶೋಕಿಸುತ್ತಾಳೆ. ಕಾಶೀನಾಥ ಬಂದು ಅವರ ಮನದ ಆಸೆ ತಿಳಿದು, ನಂದೀಶ್ವರನನ್ನು ಪೂಜಿಸಿದರೆ ಇಷ್ಟಾರ್ಥ ಸಿದ್ಧಿ ಆಗುತ್ತದೆ, ಹುಟ್ಟುವ ಮಗುವಿಗೆ ಬಸವ ಬಸವಾ ಎಂದು ಕರೆಯಬೇಕೆಂದು ಅಪ್ಪಣೆ ಕೊಡಿಸಿ ಹೋಗುತ್ತಾನೆ. ಗುದಿನೇಶ್ವರನಲ್ಲಿ ಕಾಶೀನಾಥರು ಪ್ರಾರ್ಥಿಸುತ್ತಾರೆ. ಗುರು ಕಾಶಿನಾಥರ ಆಜ್ಞೆಯಂತೆ ನಂದೀಶ್ವರ ದೇವಾಲಯಕ್ಕೆ ಹೋಗಿ ಪೂಜಿಸಲು ದಂಪತಿಗಳು ಉತ್ಸುಕತೆಯಿಂದ ಸಿದ್ಧರಾಗುತ್ತಾರೆ. ನಿರ್ಮಲ ಮನಸ್ಸಿನಿಂದ ಹೋಗಿ ಪೂಜಿಸಿ, ಮಂಗಲ ಮಾಡುತ್ತಾರೆ. ನಂದಿಯು ತನ್ನ ಶಿರವನ್ನು ಸ್ವತಃ ಅಲುಗಾಡಿಸಿ ಕೊಟ್ಟ ಈ ಪುಷ್ಪ ಪ್ರಸಾದವನ್ನು ತಗೆದುಕೊ ಎಂದು ಮಾದರಸನು ಮಾದಲಾಂಬಿಕೆಗೆ ಹೇಳುತ್ತಾನೆ. ಇಲ್ಲಿ ಬಾಚರಸ ಮತ್ತು ಕಕ್ಕಯ್ಯನವರ ಪ್ರಸಾದದ ಮಹತ್ವ ಜಗತ್‌ಪ್ರಸಿದ್ಧವಾದ ಮಾಹಿತಿಯನ್ನು ಮಾದಲಾಂಬಿಕೆಯ ಗಮನಕ್ಕೆ ಮಾದರಸ ತಂದು, ನಂದಿಕೊಟ್ಟ ಪುಷ್ಪ ಪ್ರಸಾದದಲ್ಲಿ ನಂಬಿಕೆ ಇಡುವಂತೆ ಹೇಳುತ್ತಾನೆ. ಆಕೆಯ ಮುಖಕಾಂತಿಯನ್ನು ಬಣ್ಣಿಸುತ್ತಾನೆ.

ಸಂಸ್ಕಾರಕ್ಕೆ ಬೇಕಾದ ಎಲ್ಲ ಸಿದ್ಧತೆಗಳು ಅಲ್ಲಿ ಆಗುತ್ತವೆ. ಬಸವನಿಗೆ ಇದೊಂದೂ ಗೊತ್ತಿಲ್ಲ. ಆಶ್ಚರ್ಯದಿಂದ ಎಲ್ಲರ ಸಂಭ್ರಮಕ್ಕೆ ಕಾರಣವೇನೆಂದು ಪ್ರಶ್ನಿಸುತ್ತಾನೆ. ವಿಷಯ ತಿಳಿದಾದ ಮೇಲೆ ಪುರೋಹಿತರಿಗೆ ಹೋಗಲು ಆದೇಶಿಸುತ್ತಾನೆ. ತಂದೆ ಮತ ಧರ್ಮದ ಸಂಸ್ಕಾರದಂತಿರಬೇಕೆಂದು ಹೇಳುತ್ತಾನೆ. ಶಿವಸಂಸ್ಕಾರ ಆದಮೇಲೆ ಮತ್ತೆ ಮತ್ತೆ ಬೇರೆ ಸಂಸ್ಕಾರ ಬೇಕಿಲ್ಲವೆಂದು ನಿರಾಕರಿಸುತ್ತಾನೆ. ಗಾಯತ್ರಿ ಮಂತ್ರಕ್ಕೆ ಶಿವನೇ ಆದಿದೇವನಾಗಿದ್ದರಿಂದ, ನಾನೀಗಾಗಲೇ ಶಿವಮಂತ್ರ ಪಡೆದಾದ ಮೇಲೂ ಮತ್ತೆ ಮತ್ತೆ ಬೇರೆ ಬೇರೆ ಸಂಸ್ಕಾರಗಳಿಗೆ ಒಳಗಾಗಲಾರೆ ಎಂಬುದು ಬಸವನ ಸ್ಪಷ್ಟ ನಿಲವು. ತಂದೆ ಮಗನ ನಡುವೆ ಈ ವಿಷಯವಾಗಿ ಸಾಕಷ್ಟು ಚರ್ಚೆ ಆಗುತ್ತದೆ. ಬಸವ ತನ್ನ ಹಠವನ್ನು ಬಿಡುವುದಿಲ್ಲ. ತಂದೆ ತಾಯಿಗಳಿಗೆ ಉಪದೇಶ ಮಾಡುತ್ತಾನೆ. ಈ ಕಾರಣಕ್ಕಾಗಿ ಹೆತ್ತವರನ್ನು, ಊರನ್ನು ಬಿಟ್ಟು ಕೂಡಲಸಂಗಮಕ್ಕೆ ಹೋಗಲು ನಿರ್ಧರಿಸುತ್ತಾನೆ. ಹೆತ್ತವರು ಹರಸುತ್ತಾರೆ.

ಕೂಡಲ ಸಂಗಮಕ್ಕೆ ಬರುತ್ತಾನೆ. ಸಂಗನ ಸನ್ನಿಧಿಯಲ್ಲಿ ನಿಂತು ಧ್ಯಾನಿಸುತ್ತಾನೆ. ಸಂಗನೂ ಬಸವನ ನಿರ್ಣಯಕ್ಕೆ ಬೆರಗಾಗುತ್ತಾನೆ. ಹರಸುತ್ತಾನೆ. ಆಗಲೇ ಬಲದೇವ ಮಂತ್ರಿಯ ಆಗಮನ ಆಗುತ್ತದೆ. ಧಾರ್ಮಿಕ ಮಾತುಕತೆಗಳಾದ ಮೇಲೆ ಗಂಗಾಂಬಿಕೆಯನ್ನು ಬಸವನಿಗಿತ್ತು ಮದುವೆ ಮಾಡುವ ಯೋಚನೆಗೆ ಬಂದು ಬಿಡುತ್ತಾನೆ. ತನ್ನ ಮಗಳನ್ನು ವಿವಾಹವಾಗಿ ತನ್ನನ್ನು ರಕ್ಷಿಸಬೇಕೆಂದೂ ವಿನಂತಿಸಿಕೊಳ್ಳುತ್ತಾನೆ. ಆಗ ಬಸವಣ್ಣ ತಾನು ಲಿಂಗವಂತ, ಅಷ್ಟಾವರಣ ಸಂಪನ್ನ, ನನ್ನ ಸರ್ವಸ್ವವೂ ಅವೇ. ಅಲ್ಲಿಗೆ ಜಾತಿಯಲ್ಲಿ ಭಿನ್ನತೆ ಬಂತು- ತಾವು ಇದಕ್ಕೆ ಒಪ್ಪಿಕೊಳ್ಳುತ್ತೀರಾ? ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡುತ್ತೀರಾ? ಎಂಬ ಮುಖ್ಯಮಾತುಗಳನ್ನು ಬಯಲಾಟದ ಕರ್ತೃ ಬಸವಣ್ಣನಿಂದ ಆಡಿಸಿದ್ದಾನೆ. ಈ ಮೂಲಕ ಅಂದಿನ ಜಾತಿವ್ಯವಸ್ಥೆಯ ಬಿಗುವನ್ನೂ ಪರಿಚಯಿಸಿದ್ದಾನೆ. ಬಸವಣ್ಣನ ಮಾತಿಗೆ ಸೋದರಮಾವ ಬಲದೇವ ಒಪ್ಪಿಕೊಂಡು, ತಂದೆ ಮಗಳಿಬ್ಬರೂ ಲಿಂಗದೀಕ್ಷೆ ಪಡೆದುಕೊಳ್ಳುತ್ತಾರೆ. ವಿವಾಹಕ್ಕೆ ವಿಚಾರಿಸಿ, ದಿನ ಗೊತ್ತು ಮಾಡಿ, ಬಸವನಿಗೆ ಕಲ್ಯಾಣದಿಂದ ಪತ್ರ ಬರೆಯಬೇಕಾದ ಸಂದರ್ಭ ಎದುರಾದಾಗ, ಬಲದೇವ ಮಂತ್ರಿ ಸೇವಕನ ಜೊತೆ ಚರ್ಚಿಸುತ್ತಾನೆ. ಆಗ ಆತ ಬಸವಣ್ಣ ಮತೋದ್ಧಾರಕ ಎಂದು ಹೇಳುತ್ತಾನೆ. ಬಲದೇವ ಮಂತ್ರಿ ಇನ್ನಷ್ಟು ಮುಂದುವರೆದು ವೀರಶೈವ ಮತಸ್ಥಾಪನಾಚಾರ್ಯ ಎಂದೂ ಇನ್ನೂ ಹಲವು ಗುಣವಿಶೇಷಣಗಳನ್ನು ಹಚ್ಚಿ ಹೊಗಳಿ ಬರೆಯುತ್ತಾನೆ. ಆದರೆ ಅಳಿಯನ ಪಾದಕಮಲಗಳಿಗೆ ನಮಸ್ಕಾರ ಹೇಳಿದ್ದು ಒಂದೆಡೆ ಅತಿ ಎನಿಸುತ್ತದೆ. ಇನ್ನೊಂದೆಡೆ ವಿನಯವಾಗಿ ಭಕ್ತ-ಭಕ್ತರ ನಡುವಿನ ವ್ಯವಹಾರವಾಗಿ, ಲಿಂಗದೀಕ್ಷೆಯ ಪರಿಣಾಮವಾಗಿಯೂ ಕಾಣಿಸುತ್ತದೆ.

ತನ್ನನ್ನು ತಾನು ತಪ್ಪಿತಸ್ಥನಲ್ಲ ಎಂದು ಪ್ರಮಾಣಿಕರಿಸಲು ಬಾವಿಯಲ್ಲಿ ಬಿದ್ದು ಸತ್ತ ಚಿದಂಬರನಿಂದಲೇ ನುಡಿಸುತ್ತೇನೆ ನಡೆಯಿರಿ ಎನ್ನುತ್ತಾನೆ. ತಂದೆ ಮಾದರಸನಿಗೆ ಬಸವನ ಮಾತು ಮೂರ್ಖತನದ್ದೆನಿಸುತ್ತದೆ. ವೀರಶೈವರು ಸುಳ್ಳು ಮಾತನಾಡುವುದಿಲ್ಲ. ಅವನಿಂದಲೇ ಸಾಕ್ಷಿ ಹೇಳಿಸುವುದು ಸತ್ಯ ಎಂದೇ ಬಸವ ಮತ್ತೆ ಮತ್ತೆ ಪುನರುಚ್ಚರಿಸುತ್ತಾನೆ.

ಬಾವಿಯ ಹತ್ತಿರ ಊರ ಜನ ಸೇರುತ್ತಾರೆ. ಭೋ ಶಂಭೋ ನನ್ನನ್ನು ನೀನೇ ರಕ್ಷಿಸು ಎಂದು ಪ್ರಾರ್ಥಿಸುತ್ತ ಬಸವನು 'ಏ ಚಿದಂಬರಾ ಚಿದಂಬರಾ ನಿನ್ನನ್ನು ಈ ಬಾವಿಯಲ್ಲಿ ನೂಕಿ ಕೊಂದವರಾರು ಹೇಳು. ಜೋರಾಗಿ ಹೇಳು, ಎಲ್ಲರೂ ಕೇಳುವಂತೆ ಹೇಳು' ಎನ್ನುತ್ತಾನೆ. ಆಗ ಬಾವಿಯೊಳಗಿಂದ ಚಿದಂಬರ ಕೂಗಿ ದೈವಕ್ಕೆ ಹೇಳುತ್ತಾನೆ– 'ನನ್ನನ್ನು ಯಾರೂ ನೂಕಲಿಲ್ಲ. ನಾನೇ ಕಾಲು ಜಾರಿ ಬಿದ್ದಿರುವೆ. ಬಸವ ದಯಾಳು. ಅವನು ನನ್ನನ್ನು ನೂಕಿಲ್ಲ' ಎಂದು ಕೂಗಿ ಹೇಳುತ್ತಾನೆ. ತಂದೆ ಮಾದರಸನಿಗೆ ಸಂತೋಷ ಆಗುತ್ತದೆ. ಗೋವಿಂದ ಭಟ್ಟರೇ ಈಗ ಸಾಲಿ ಹುಡುಗರಿಗೆ ಶಿಕ್ಷೆ ಆಗಬೇಕೊ? ನಿಮಗೆ ಆಗಬೇಕೊ? ಎಂದು ಕೋಪಿಸಿಕೊಳ್ಳುತ್ತಾನೆ. ಬಸವ ದಯದೋರಿ ಅವರನ್ನು ಬಿಟ್ಟು ಬಿಡಲು ಹೇಳುತ್ತಾನೆ. ಚಿದಂಬರನನ್ನು ಬಾವಿಯಿಂದ ತಗೆಯುತ್ತಾರೆ. ಮಗನನ್ನು ಕರೆದುಕೊಂಡು ಬಸವಣ್ಣನಿಗೆ ಧನ್ಯವಾದ ಹೇಳಿ ಎಲ್ಲರೂ ಹೋಗುತ್ತಾರೆ. ಸಂಗಮೇಶ್ವರನು ಕೂಡ ಬಸವನ ಯಾವುದೇ ಕಾರ್ಯಕ್ಕೆ ವಿಘ್ನಗಳು ಬಾರದಂತೆ ಬೆಂಬಲವಾಗಿ ನಿಂತು ಕಾಪಾಡುತ್ತೇನೆಂದು ಹರಸುತ್ತಾನೆ. ಬಸವನ ಈ ಮಹಿಮೆ ಅರಿತ ಜನ ಆಗಲೇ ತಮ್ಮ ಸಂಕಷ್ಟಗಳನ್ನು ನಿವಾರಣೆ ಮಾಡೆಂದು ಬಸವಣ್ಣನಲ್ಲಿ ಬರತೊಡಗುತ್ತಾರೆ. ಎಲ್ಲರ ಅಂತಃಶಕ್ತಿಯಲ್ಲಿ ಭಕ್ತಿಬೀಜ ಬಿತ್ತಿ ಬೆಳೆಯುವ ಪ್ರಯತ್ನದಲ್ಲಿ ಬಸವ ಮುಂದುವರೆಯುತ್ತಾನೆ.

ತಾಯಿ ಮಾದಲಾಂಬಿಕೆ ಮಗನಿಗೆ ಸೂಕ್ಷ್ಮವಾದ ಧರ್ಮಸಂಕಟದ ಸೂಚನೆಯೊಂದನ್ನು ಕೊಡುತ್ತಾಳೆ. ಅಷ್ಟಾವರಣದ ಬೆಳವಿಗೆಗೆ ನೀನು ಪ್ರಯತ್ನಿಸುವುದು ಯೋಗ್ಯವೆ. ಆದರೆ ನಮ್ಮ ಜನ ನಿನ್ನ ಈ ಮಾರ್ಗವನ್ನು ಒಪ್ಪುತ್ತಾರೆಯೆ? ಎಂಬ ಅನುಮಾನ ನನ್ನನ್ನು ಕಾಡುತ್ತದೆ ಎಂದು ಅವಳು ಹೇಳುತ್ತಾಳೆ. ಆಗ ತಾಯಿಯೊಂದಿಗೆ ಜಾತಿ–ಕುಲದ ಚರ್ಚೆ ಮಾಡುತ್ತಾನೆ. ಅಷ್ಟಾವರಣದ ಮಹತ್ವವನ್ನು ತಾಯಿಗೂ ತಿಳಿಸುತ್ತಾನೆ.

ಬಸವನ ಜೀವನದಲ್ಲಿ ಹೊಸ ತಿರುವು ತಂದುಕೊಟ್ಟ ಮಹತ್ವದ ಘಟನೆ ಎಂದರೆ ಉಪನಯನದ್ದು. ಬಸವನಿಗೀಗ ಎಂಟು ವರ್ಷ. ಮನೆಯವರು ಪುರೋಹಿತರು ಮೊದಲ್ಗೊಂಡು ಈ ವಿಷಯ ಚರ್ಚಿಸುತ್ತಾರೆ. ಉಪನಯನ

ಅವೇ ಪ್ರಸಂಗಗಳನ್ನು ಇಲ್ಲಿ ಬಳಸಿಕೊಂಡಂತೆ ಇದೆ. ಬಿಜ್ಜಳನ ಆಸ್ಥಾನದ ಇಬ್ಬರು ಅಧಿಕಾರಿಗಳ ಅಳಿಯನ ಬರುವಿಗಾಗಿ ಗುಡಿತೋರಣ ಕಟ್ಟಿಸಿ, ಬರಮಾಡಿಕೊಳ್ಳಲು ಆದೇಶಿಸಿದ್ದಾನೆ.

ಬಸವಣ್ಣ ಮದುವೆ ಮುಗಿಸಿಕೊಂಡು ಮತ್ತೆ ಸಂಗಮಕ್ಕೆ ಹೋಗಿದ್ದಾನೆ. ಬಿಜ್ಜಳನು ಬಸವನನ್ನು ಮತ್ತೆ ಕಲ್ಯಾಣಕ್ಕೆ ಬರಮಾಡಿಕೊಳ್ಳುವ ವ್ಯವಸ್ಥೆ ಮಾಡಿದ್ದಾನೆ. ಬಸವಣ್ಣನನ್ನು, ಬಸವಣ್ಣನ ದಿವ್ಯ ತೇಜದ ವ್ಯಕ್ತಿತ್ವವನ್ನು ಎಲ್ಲರೂ ಹೊಗಳುವವರೇ. ದೇವರೆ ಬರುತ್ತಿರುವನೋ ಎಂಬಂತೆ ಸ್ವಾಗತ ಮಾಡಲು ಬಸವಕಲ್ಯಾಣ ಸಜ್ಜುಗೊಂಡಿದೆ. ಸಂಗಮನಾಥನ ಅಪ್ಪಣೆ ಪಡೆದು, ಬಸವಣ್ಣ ಕಲ್ಯಾಣದತ್ತ ಪ್ರಯಾಣ ಬೆಳೆಸುತ್ತಾನೆ. ಕಲ್ಯಾಣದಲ್ಲಿ ಬಿಜ್ಜಳ ಬಸವನನ್ನು ಕಾತರದಿಂದ ಕಾಯುತ್ತಿರುತ್ತಾನೆ. ವಂದನೆಯೊಂದಿಗೆ ಬಸವಣ್ಣನನ್ನು ಸ್ವಾಗತಿಸುತ್ತಾನೆ. ರಾಜ, ಮಂತ್ರಿ, ಕೊಂಡೆಮಂಚಣ್ಣ, ಸೇನಾಧೀಶ ಎಲ್ಲರೂ ಮೆಚ್ಚುಗೆಯ ಮಾತುಗಳನ್ನೇ ಆಡುತ್ತಾರೆ. ರಾಜನಿಗೆ ನಯ-ವಿನಯ-ಭಯ-ಭಕ್ತಿಯಿಂದ ನಡೆದುಕೊಂಡರೆ ಶಿವ ಕಾಪಾಡುತ್ತಾನೆಂದು ಬಸವಣ್ಣನವರು ರಾಜನಿಗೆ ಹೇಳುತ್ತಿರುವಾಗಲೇ ಓಲಗದಲ್ಲಿ ಇದ್ದಕ್ಕಿದ್ದಂತೆ ಲಿಪಿಯ ಕಟ್ಟೊಂದು ಬೀಳುತ್ತದೆ. ಎಲ್ಲರಿಗೂ ಆಶ್ಚರ್ಯವೇ ಆಶ್ಚರ್ಯ. ಈ ಚಮತ್ಕಾರಕ್ಕೆ ಎಲ್ಲರೂ ಬೆರಗಾಗಿದ್ದಾರೆ. ಕೊಂಡೆಮಂಚಣ್ಣ ರಾಜನ ಕೈಗೆ ಲಿಪಿಯನ್ನು ಕೊಟ್ಟು ಓದಲು ಹೇಳುತ್ತಾನೆ. ಲಿಪಿ ಪ್ರಕಾಶಮಾನವಾಗಿ ತೋರುತ್ತದೆ. ಎಲ್ಲರಿಗೂ ಆಶ್ಚರ್ಯ, ಆದರೆ ಲಿಪಿಯಾರಿಗೂ ತಿಳಿಯುತ್ತಿಲ್ಲ. ಓದಲು ಬರುತ್ತಿಲ್ಲ. ಬಸವೇಶ್ವರನ ಆಗಮನದೊಂದಿಗೇ ಈ ಲಿಪಿ ಬಂದಿದೆ ಎಂದರೆ ಏನೋ ವಿಶೇಷ ಇರಲೇಬೇಕೆಂದು ರಾಜ ಹೇಳುತ್ತಾನೆ.

ಮಾಧವಭಟ್ಟ, ಕೇಶಂಭಟ್ಟ, ಗೋವಿಂದಭಟ್ಟ, ಬಾಣಭಟ್ಟ ಮೊದಲಾದ ಎಲ್ಲ ಪಂಡಿತರನ್ನು ರಾಜ ಆಸ್ಥಾನಕ್ಕೆ ಕರೆಸಿಕೊಳ್ಳುತ್ತಾನೆ. ಲಿಪಿ ಓದಿದವರಿಗೆ ಭೂಮಿ ಇನಾಮು ನೀಡಿ ಗೌರವಿಸುವುದಾಗಿ ಹೇಳುತ್ತಾನೆ. ಓದಲಾಗದಿದ್ದರೆ ಕೊಟ್ಟ ಭೂಮಿಯನ್ನು ಮರಳಿಸಬೇಕಾಗುತ್ತದೆಂದು ರಾಜ ಕರಾರು ಹಾಕುತ್ತಾನೆ. ಎಲ್ಲ ವಿದ್ವಾಂಸ ಭಟ್ಟರು ಪ್ರಯತ್ನಿಸಿ ಆಗುತ್ತದೆ. ಯಾರಿಂದಲೂ ಓದಲು ಆಗುವುದಿಲ್ಲ. ಯಾರು ಓದುತ್ತಾರೋ ಅವರು ಹೇಳಿದಂತೆ ತಾವು ನಡೆದುಕೊಳ್ಳುವುದಾಗಿ ಪಂಡಿತರೆಲ್ಲ ಆಶ್ವಾಸನೆ ಕೊಡುತ್ತಾರೆ. ರಾಜನೂ ಲಿಪಿ ಓದಿದವರಿಗೆ ರಾಜ್ಯದಲ್ಲಿ ಸರ್ವಾಧಿಕಾರ ಕೊಡುವುದಾಗಿಯೂ ಅವರ ಆಜ್ಞೆಯೇ ಎಲ್ಲರಿಗೂ ಮಾನ್ಯ ಎಂದು ಹೇಳುತ್ತಾನೆ. ಆಗ ಬಸವಣ್ಣ ಸಂಗಮನಾಥನನ್ನು ಸ್ಮರಿಸುತ್ತ, ತಾನು ಓದುತ್ತೇನೆ ಕರುಣಿಸು ಎಂದು ಪ್ರಾರ್ಥಿಸುತ್ತಾನೆ. ರಾಜನಿಗೂ ತಾನು ಓದುವುದಾಗಿ ಹೇಳುತ್ತಾನೆ. ರಾಜ ಹೊಗಳುತ್ತಲೇ ಬಸವನ ಕೈಗೆ ಲಿಪಿಯನ್ನು ಒಪ್ಪಿಸುತ್ತಾನೆ. ಓದದಿದ್ದರೆ ರಾಜದಂಡ ತೆರಬೇಕಾಗುತ್ತದೆಂದೂ ಎಚ್ಚರಿಸುತ್ತಾನೆ. ಉಳಿದೆಲ್ಲ ಭಟ್ಟರು ಅಪಹಾಸ್ಯ

ಲಗ್ನಪತ್ರಿಕೆ ಸಿದ್ಧವಾಗಿ, ಬಸವಣ್ಣನವರಿಗೆ ಮುಟ್ಟಿಸಲು ಸೇವಕನನ್ನೇ ಕಳಿಸುತ್ತಾರೆ. ಬಸವಣ್ಣನಿಗೆ ಸುದ್ದಿ ತಿಳಿಯುತ್ತದೆ. ಸೇವಕ ಬಸವಣ್ಣನವರನ್ನು ಕರೆದುಕೊಂಡು ಹೋಗಲು ಗಜವನ್ನು ತಂದಿದ್ದಾನೆ. ಮರುದಿನ ಉದಯಕಾಲದಲ್ಲಿ ಮದುವೆ. ಹಿಂದಿನ ದಿನ ಬಸವಣ್ಣ ಕೂಡಲ ಸಂಗಮದಲ್ಲಿದ್ದಾರೆ. ಎಲ್ಲಿ ಬಸವ ಕಲ್ಯಾಣ, ಎಲ್ಲಿ ಕೂಡಲ ಸಂಗಮ? ಆದರೂ ಪ್ರಯಾಣಕ್ಕೆ ಸಿದ್ಧತೆ ಆಯಿತು. ಕಲ್ಯಾಣವನ್ನು ತಲಪುತ್ತಾರೆ. ಸೋದರಮಾವ ಬಲದೇವ ಬಸವಣ್ಣನವರನ್ನು ಎದುರುಗೊಳ್ಳುತ್ತಾನೆ. ಮತ್ತೆಯೂ ವಂದನೆ ಹೇಳುತ್ತಾನೆ. ಅಳಿಯನಿಗೆ ಗೊತ್ತು ಮಾಡಿದ ಪೀಠದಲ್ಲಿ ಕುಳ್ಳಿರಿಸುತ್ತಾನೆ. ಅಳಿಯನನ್ನು ತನ್ನ ಭಾಗ್ಯವೆಂದು ಹೊಗಳುತ್ತಾನೆ. ಹೊಗಳುತ್ತಲೇ ಬಸವನಿಗೆ ಇನ್ನೊಂದು ಸಂಗತಿಯನ್ನು ಹೇಳುತ್ತಾನೆ. ಮದುವೆ ಮಂಟಪದಲ್ಲಿ ಬಸವ ಮದುಮಗನಾಗಿ ಕುಳಿತಿದ್ದಾನೆ. ಆ ಸಮಯಕ್ಕೆ ಬಲದೇವ ತನ್ನ ಸಹೋದರ ಸಿದ್ಧರಸನ ಮಗಳು ನೀಲಲೋಚನೆಯನ್ನೂ ಏಕಕಾಲಕ್ಕೆ ಮದುವೆ ಆಗಬೇಕು ಎಂದು ಹೇಳುತ್ತಾನೆ. ಹರಿಹರನೂ ಬಸವರಾಜ ದೇವರ ರಗಳೆಯಲ್ಲಿ ಏಕಕಾಲಕ್ಕೆ ಇಬ್ಬರನ್ನು ವಿವಾಹವಾದ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಹಾಗೇ ಇಲ್ಲಿ ಈ ಬಯಲಾಟದ ಕರ್ತೃವಿನ ಜಾಣ್ಮೆಯನ್ನು ಮೆಚ್ಚಿಕೊಳ್ಳಬೇಕಾದದ್ದೇ. ಬಸವಣ್ಣನ ಎರಡನೇ ವಿವಾಹದ ಸುತ್ತ ಎದ್ದಿರುವ ಗುಮಾನಿಗಳನ್ನೆಲ್ಲ ಏಕಕಾಲಕ್ಕೆ ಮದುವೆ ಮಾಡಿಸುವ ಮೂಲಕ ಪರಿಹರಿಸಿ ಬಿಟ್ಟಿದ್ದಾನೆ. ಇಲ್ಲಿ ಅನುಮಾನಗಳಿಗೆ ಅವಕಾಶವೇ ಇಲ್ಲ. ಜನಪದರ ಜಾಣ ಜ್ಞಾನಾನುಭಾವ ಯಾರಿಗೂ ತಟ್ಟನೆ ಹೊಳೆಯುವಂತಹದೂ ಅಲ್ಲ. ನಿಲುಕುವಂತಹದೂ ಅಲ್ಲ. ಬಸವಣ್ಣ ಕೂಡ ಮರುಮಾತಿಲ್ಲದೆ ಲಿಂಗದೀಕ್ಷೆ ಮಾಡಿಸಿ, ಇಬ್ಬರನ್ನೂ ಏಕಕಾಲಕ್ಕೆ ಮದುವೆ ಆಗುತ್ತಾನೆ.

ಈ ಪ್ರಸಂಗ ಹರಿಹರನನ್ನು ಹೊರತು ಪಡಿಸಿ ಮತ್ತೆಲ್ಲಿಯೂ ಹೀಗೆ ಬಂದಿರುವದಿಲ್ಲ. ಸಾಂಪ್ರದಾಯಿಕ ಆಚರಣೆಗಳೊಂದಿಗೆ ಕಲ್ಯಾಣ ಕಾರ್ಯ ಮುಗಿಯುತ್ತದೆ. ಎಲ್ಲರಿಗೂ ಉಡುಗೆ ತೊಡುಗೆ ಕೊಟ್ಟಾಗುತ್ತದೆ. ಬಲದೇವರಿಗೆ ಸಂತೃಪ್ತಿ ಆಗುತ್ತದೆ. ಆ ಹೆಣ್ಣುಮಕ್ಕಳನ್ನು ಬಸವನ ಕೈಗೆ ಒಪ್ಪಿಸಿ, ತನ್ನ ಕರ್ತವ್ಯ ಮುಗಿಯಿತೆಂಬಂತೆ, ಇನ್ನು ಕೈಲಾಸ ಕಾಣುತ್ತೇನೆಂದು ಹೇಳಿಬಿಡುತ್ತಾನೆ.

ಬಿಜ್ಜಳನ ಆಡಳಿತವಿರುವ ಪ್ರದೇಶಕ್ಕೆ ಬಂದ ಕಾರಣ ಬಸವಣ್ಣ ತನ್ನಷ್ಟಕ್ಕೆ ತಾನಿರುತ್ತಾನೆ. ಬಿಜ್ಜಳ ಮಾತ್ರ ತನ್ನ ಮಂತ್ರಿಯೊಂದಿಗೆ ಸಮಾಲೋಚನೆ ನಡೆಸಿ, ಮಂತ್ರಿ ಸಲಹೆಯ ಮೇರೆಗೆ ಬಲದೇವರಸನ ಮಗಳಗಂಡ ಬಸವಣ್ಣನನ್ನು ಮುಖ್ಯ ಮಂತ್ರಿ ಸ್ಥಾನಕ್ಕೆ ನೇಮಿಸಲು ಸಮ್ಮತಿಸುತ್ತಾನೆ. ಆ ಸಂಭ್ರಮದಲ್ಲಿ ಎಲ್ಲರೂ ಮೈಮರೆಯುತ್ತಾರೆ. ಹರಿಹರ ಬಸವಣ್ಣನನ್ನು ಬಸವನನ್ನಾಗಿ, ದೇವನನ್ನಾಗಿ, ರಾಜನನ್ನಾಗಿ ಪರಿಚಯಿಸಲು ರಗಳೆಯನ್ನು ಬರೆದಂತೆ ಈ ದೊಡ್ಡಾಟದ ಕರ್ತೃ

ಅಲ್ಲಿ ಮಸಾಲಿ ದೀನಸು, ಕಿರಾಣಿ ದೀನಸುಗಳನ್ನು ಕಂಚು ತಾಮ್ರ ಹಿತ್ತಾಳೆಗಳಿಗೆ ಕೊಡುತ್ತೇನೆಂದು ಬಸವಣ್ಣ ಕೂಗಿ ಗ್ರಾಹಕರನ್ನು ಕರೆಯುತ್ತಿರುತ್ತಾನೆ. ವ್ಯಾಪಾರ ಆಗುತ್ತದೆ. ಜಂಗಮವಾಡಿಗೆ ಹೋಗಿ ದ್ವಾರ ಪಾಲಕರನ್ನು ಮಾತನಾಡಿಸುತ್ತಾನೆ. ಅವನು ಪರಿಚಯ ಕೇಳುತ್ತಾನೆ. ತಾನು ಬಂದ ಕಾರಣ ಹೇಳಿ, ತನ್ನ ಹೆಸರು ಸಂಗ ಎಂದು ತಿಳಿಸಿ, ತಾನು ಜಂಗಮ ಪಾದೋದಕವಿಲ್ಲದೆ ಪ್ರಸಾದ ಸ್ವೀಕರಿಸುವುದಿಲ್ಲವೆಂದೂ, ಅದಕ್ಕಾಗಿ ಮೂರು ದಿವಸಗಳಿಂದ ಉಪವಾಸವಿರು ವುದಾಗಿಯೂ ಹೇಳಿದಾಗ ದ್ವಾರಪಾಲಕ ಬಂದವನು ಜಂಗಮ ಪ್ರಾಣಿಯೆಂದೇ ತಿಳಿದು, ತೂಕಕೊಟ್ಟು ಒಳಗೆ ಹೋಗಲು ಹೇಳುತ್ತಾನೆ. ಹೊರಗೆ ಹೋಗುವಾಗಲೂ ತೂಕಕೊಟ್ಟು ಹೋಗಬೇಕೆಂಬ ಕರಾರು ಹಾಕುತ್ತಾನೆ. ಬಸವಣ್ಣ ಹಾಗೆ ಮಾಡುತ್ತಾನೆ. ಒಳಗಿನ ಜಂಗಮರನ್ನು ಪೂಜಿಸಿ ಪ್ರಸಾದ ಪಡೆಯುತ್ತಾನೆ. ತಾನು ತಂದ ಬೋನದ ಬುತ್ತಿ ಪ್ರಸಾದವನ್ನು ಜಂಗಮರಿಗೆ ಅರ್ಪಿಸುತ್ತಾನೆ. ಎಲ್ಲರೂ ಪ್ರಸಾದವನ್ನು ಹೊಗಳುವವರೆ. ಬಸವಣ್ಣನ ಮನೆಯ ಪ್ರಸಾದದ ಬಗ್ಗೆ ಕೇಳಿದ್ದೇವೆ ಎಂದು ಅವನ ದರ್ಶನ ಪಡೆಯುವ ಆಸೆಯನ್ನು ವ್ಯಕ್ತಪಡಿಸುತ್ತಾರೆ. ಕೋರಿಶೆಟ್ಟಿ ಕರೆದುಕೊಂಡು ಹೋಗುವ ಭರವಸೆ ಕೊಡುತ್ತಾನೆ. ಇದು ಕಷ್ಟ ಎಂದರೂ ಬಸವ ಅವರಿಗೆಲ್ಲ ಭಯಪಡದಿರಲು ಹೇಳಿ ಎಲ್ಲರಿಗೂ ತಾನು ತಂದ ಹಸಬಿಯೊಳಗೆ ಪ್ರವೇಶಿಸಲು ಹೇಳುತ್ತಾನೆ. ಅದೇನೋ ಸರಿ ಆ ಆರು ಸಾವಿರ ಜನ ಜಂಗಮರನ್ನು ಹೊತ್ತೊಯ್ಯಬೇಕಲ್ಲ ಅದು ಕಠಿಣ. ಅಂತೂ ಹೊರುತ್ತಾನೆ. ತೂಕ ಆಗುತ್ತದೆ. ವ್ಯತ್ಯಾಸ ಕಾಣಿಸುವದಿಲ್ಲ. ಬಿಟ್ಟುಬಿಡುತ್ತಾರೆ. ನಂತರ ಮಹಾದೇವ ಭೂಪಾಲ ಜಂಗಮವಾಡಿಯ ಐಶ್ವರ್ಯ ನೋಡಲು ಬರುತ್ತಾನೆ. ಅಲ್ಲಿ ಒಬ್ಬ ಜಂಗಮನೂ ಇಲ್ಲ. ಏನು? ಎಲ್ಲಿಗೆ ಹೋದರು? ಯಾರು ಬಂದಿದ್ದರು? ಎಂದೆಲ್ಲ ವಿಚಾರಿಸುತ್ತಾನೆ. ನಡೆದ ಸಂಗತಿ ಗಮನಕ್ಕೆ ತರುತ್ತಾರೆ. ಮಹಾದೇವ ಭೂಪಾಲ ಇದು ಬಸವನಿಗೆ ಮಾತ್ರ ಸಾಧ್ಯವಾಗುವಂತಹದು ಎಂದು ಹೇಳುತ್ತಾನೆ. ಕಲ್ಯಾಣ ನಗರಕ್ಕೆ ಮುತ್ತಿಗೆ ಹಾಕುವ ಯೋಚನೆ ಮಾಡುತ್ತಾನೆ.

ಕಲ್ಯಾಣದಲ್ಲಿ ಮಡಿವಾಳ ಮಾಚಯ್ಯನನ್ನು ಮಹಾದೇವ ಭೂಪಾಲ ಕಾಣುತ್ತಾನೆ. ಮಾಂಡವ್ಯಪುರದಲ್ಲಿ ಘಟಿಸಿದ ಘಟನೆಯನ್ನು ಗಮನಕ್ಕೆ ತರುತ್ತಾನೆ. ಕೋಪಗೊಳ್ಳುತ್ತಾನೆ. ಮಾಚಯ್ಯ ಸಮಾಧಾನ ಪಡಿಸುತ್ತಾನೆ. ಇಲ್ಲಿ ಯಾವ ಇಂದ್ರ, ಮಹೇಂದ್ರ ಜಾಲದ ಗಾರುಡವಿದ್ಯೆ ನಡೆದಿರುವದಿಲ್ಲ. ಅವನ ಮೇಲೆ ವೃಥಾ ಕೋಪ ತಾಳಬೇಡಿ. ನಿಮ್ಮ ನಿಯಮ ಮೀರಿ ಅವನು ನಡೆದುಕೊಂಡಿಲ್ಲ. ತೂಕಕೊಟ್ಟು ಒಳಗೆ ಹೋಗಿದ್ದಾನೆ. ಹೊರಗೂ ಬಂದಿದ್ದಾನೆ. ಅಂದ ಮೇಲೆ ಅವನು ಸಾಮಾನ್ಯನೆ? ಯೋಚಿಸಿ ನೋಡಿ. ಅವನ ಮಹಿಮೆ ಹೊಗಳಲಸದಳವಲ್ಲ. ತಿಳಿಯಿತೆ? ಆಮೇಲೆ

ಮಾಡಿ ನಗುತ್ತಾರೆ. ಅದ್ಯಾವುದನ್ನೂ ಬಸವಣ್ಣ ಗಂಭೀರವಾಗಿ ತಗೆದುಕೊಳ್ಳುವುದಿಲ್ಲ.

ಸಂಗಮೇಶ್ವರನ ಮೇಲೆ ಭಾರ ಹಾಕಿ ಲಿಪಿಯನ್ನು ಓದುತ್ತಾನೆ. ಅದರಲ್ಲಿ ಬರೆದಿರುವುದೇನೆಂದರೆ "ಓಂದೆ ಚಾಲುಕ್ಯವಂಶಜರಾದ ರಾಜಾಧಿರಾಜರು ಈ ನಿನ್ನ ರತ್ನಖಚಿತವಾದ ಸಿಂಹಾಸನದ ಬುಡದಲ್ಲಿ ಎಂಭತ್ತುಕೋಟಿ ದ್ರವ್ಯವನ್ನು ಹೂಳಿಟ್ಟಿರುವರೆಂದು ಈ ಲಿಪಿಯ ಗೂಢಾರ್ಥ ಇರುತ್ತದೆ. ಈ ದ್ರವ್ಯವು ಶಿವಭಕ್ತರಿಗೆ ವಶವಾಗುತ್ತದೆ". ಆಗ ಬಿಜ್ಜಳ ಬೆರಗಾಗುತ್ತಾನೆ. ಬಸವನ ಬುದ್ಧಿಶಾಲಿ ಗುಣ, ಲಿಪಿ ಓದುವುದು ದೇವಾನುದೇವತೆಗಳಿಗೂ ಸಾಧ್ಯವಿರದ ಮಾತೆಂದು ಹೊಗಳುತ್ತಾರೆ. ಆಗ ಪಂಡಿತರು 'ಓದಿದರೆ ಆಯಿತೆ? ಮೊದಲು ದ್ರವ್ಯಸಿಗಲಿ, ಆಗ ಹೊಗಳಿ' ಎಂದು ವಾದ ಹೊಡುತ್ತಾರೆ. ಬಸವಣ್ಣ ಮತ್ತೆ ಅವರ ಪಂಥ ಸ್ವೀಕರಿಸುತ್ತಾನೆ. ಪಂಡಿತರು, ರಾಜ ಎಲ್ಲರೂ ಮತ್ತೆ ಮತ್ತೆ ಬಸವ ಭಂಡಾರ ತೋರಿಸಿದರೆ ಅವನಾಜ್ಞೆಯಂತೆ ನಡೆದುಕೊಳ್ಳುವುದಾಗಿ ಭರವಸೆ ನೀಡುತ್ತಾರೆ. ಭಂಡಾರ ತೋರಿಸದಿದ್ದರೆ ಅವರೆಲ್ಲ ಹೇಳಿದಂತೆ ನಡೆದುಕೊಳ್ಳುವುದಾಗಿ ಬಸವಣ್ಣ ಹೇಳುತ್ತಾರೆ. ಬಸವ ಸಂಗನನ್ನು ನೆನೆದು, ಸಿಂಹಾಸನದ ಕೆಳಗಿನ ನಿಕ್ಷೇಪವನ್ನು ತೋರಿಸಿಯೇ ಬಿಡುತ್ತಾನೆ. ರಕ್ಷಣೆಯ ಭಾರವನ್ನು ಬಸವಣ್ಣನ ಮೇಲೆ ರಾಜ ಹೊರಿಸುತ್ತಾನೆ. ಮುದ್ರೆಯ ಉಂಗುರ ನೀಡಿ, ಪ್ರಧಾನ ಮಂತ್ರಿ ಪದವಿ ನೀಡಿ ಗೌರವಿಸುತ್ತಾನೆ.

ಮುಂದೆ ಮಡಿವಾಳ ಮಾಚಯ್ಯನ ಪ್ರಸಂಗ ಬರುತ್ತದೆ. ಹರಗುರು ಚರಮೂರ್ತಿಗಳ ಬಟ್ಟೆ ಮಡಿಮಾಡುವ ಕಾಯಕಕ್ಕೆ ಮಾತ್ರ ಮೀಸಲಾದ ಮಡಿವಾಳನ ಕಾಯಕವನ್ನು ವಿರೋಧಿಸುತ್ತಾರೆ. ಅವನು ಹಾದಿಯಲ್ಲಿ ಹೊರಟರೆ ಭವಿಗಳು ಎದುರಿಗೆ ಬರಬಾರದೆಂದೂ ಹೇಳುತ್ತಾನೆ. ಭವಿ ಮಡಿಬಟ್ಟೆ ಮುಟ್ಟಿ ಮಾಚಯ್ಯನ ಶಿಕ್ಷೆಗೆ ಗುರಿ ಆಗುತ್ತಾನೆ. ಆ ಕಾರಣಕ್ಕಾಗಿ ಮಾಚಯ್ಯನ ಭಕ್ತಿ ಪರೀಕ್ಷೆ ನಡೆಯುತ್ತದೆ. ಮಾಚಯ್ಯನ ಎದುರು ಮದವೇರಿದ ಆನೆಯನ್ನು ಬಿಡುತ್ತಾರೆ. ಮಾಚಯ್ಯ ತನ್ನ ಭಕ್ತಿಯ ಶಕ್ತಿಯನ್ನು ತೋರಿಸುತ್ತಾನೆ. ಆಮೇಲೆ ಆನೆ ಮತ್ತು ಮಾವುತನಿಗೆ ಪ್ರಾಣಪ್ರತಿಷ್ಠೆ ಮಾಡಲು ಬಸವ ಹೇಳಿದಾಗ, ಹಾಗೇ ಮಾಡುತ್ತಾನೆ.

ಮತ್ತೊಂದು ಘಟನೆ ಇಲ್ಲಿ ನಡೆಯುತ್ತದೆ. ಬಸವಣ್ಣನಿಗೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಮಹೇಶ್ವರರನ್ನು, ಗಣಂಗಳನ್ನು ತೃಪ್ತಿಪಡಿಸಲು ಸಂಗಮನಾಥ ಆಜ್ಞೆ ಮಾಡುತ್ತಾನೆ. ಆಗ ಬಸವನಿಗೆ ಚಿಂತೆ. ತನ್ನಲ್ಲಿ ಒಂದು ಲಕ್ಷದ ತೊಂಬತ್ತುಸಾವಿರ ಗಣಂಗಳು ಮಾತ್ರ ಇದ್ದಾರೆ. ಇನ್ನೂ ಆರುಸಾವಿರ ಜನ ಇಲ್ಲವಲ್ಲ ಎಂದು ಕೊರಗುತ್ತಾನೆ. ಆಗ ಕಾಶ್ಮೀರದ ಮಹಾದೇವ ಭೂಪಾಲನಲ್ಲಿ ಆರುಸಾವಿರ ಜನ ಇದ್ದಾರೆ, ಹೋಗಿ ಕರೆದುತಾ ಎಂದು ಹೇಳಿದಂತೆ ಅನಿಸುತ್ತದೆ. ಬಸವಣ್ಣ ಹಾಗೇ ಮಾಡಲು ಮುಂದಾಗುತ್ತಾನೆ. ಕೋರಿಶೆಟ್ಟಿ ವೇಷತೊಟ್ಟು, ಕಾಶ್ಮೀರಕ್ಕೆ ಹೋಗುತ್ತಾನೆ.

ಅವರು ತರುವ ಸಂಭಾಷಣೆ, ಬಳಸಿದ ಭಾಷೆ ಶುದ್ಧ ಜನಪದೀಯವಾಗಿದೆ. ಈ ದೊಡ್ಡಾಟವನ್ನು ಗಣಪತಿಯ ಸ್ತೋತ್ರದೊಂದಿಗೆ ಪ್ರಾರಂಭಿಸುತ್ತಾರೆ. ತನ್ನ ಊರನ್ನು ಕವಿ ಎಷ್ಟು ಪೂಜ್ಯ ಪವಿತ್ರ ಭಾವನೆಯಿಂದ ಕಂಡಿದ್ದಾನೆ ಎನ್ನುವುದೂ ವಿಶೇಷವೆ. ಗರತಿ ತನ್ನ ತವರಲ್ಲಿಯ ತಾಯಿಯಲ್ಲಿಯೇ 'ಕಾಶಿ'ಯನ್ನು ಕಂಡು ಸಂಭ್ರಮಿಸುವಂತೆ ಕವಿ 'ಕಾಶಿಗಿಂತಲೂ ಲೇಸು ತನ್ನ ದೇವನಗರ' ಎನ್ನುತ್ತಾನೆ. ಪಾರ್ವತಿ ಸ್ತೋತ್ರ, ಗಣಪತಿಯ ಪ್ರವೇಶ, ಸಾರಥಿಯಲ್ಲಿ ತಾನು 'ಬಸವ ವಿಜಯ' ಕಥಾಸಾರ ಬರೆಯುವ ಉದ್ದೇಶವನ್ನು ವ್ಯಕ್ತಪಡಿಸುತ್ತಾನೆ.

ಕೈಲಾಸದಲ್ಲಿ ಪರಶಿವ ಪಾರ್ವತಿಯರ ಸಭೆ ಸೇರಿದೆ. ಪರಶಿವ ಪಾರ್ವತಿಯರು ಪ್ರಕೃತಿ ಬಗ್ಗೆ ಮಾತನಾಡುತ್ತಾರೆ. ಗಂಗಾದೇವಿ ಸಮುದ್ರ ಮಂಥನದ ಪ್ರಸಂಗ ನೆನೆದು ತನ್ನ ಪರಿಚಯ ಮಾಡಿಕೊಳ್ಳುತ್ತಾಳೆ. ನಾರದನ ಪ್ರವೇಶವಾಗುತ್ತದೆ. ನಾರದನೊಂದಿಗೆ ಪರಶಿವ ಸಂವಾದ ನಡೆಸುತ್ತಾನೆ. ಮರ್ತ್ಯದಲ್ಲಿಯ ಜನರು ವಿಭೂತಿ ಧರಿಸುತ್ತಿಲ್ಲ, ದಾನಧರ್ಮ ಜಪ–ತಪ–ನೇಮಗಳಿಲ್ಲ. ಇವೆಲ್ಲ ನಿನಗೆ ತಿಳಿಯದೇ ಇರುವ ಸಂಗತಿಗಳೇನು? ನಾನು ದೇಶ–ವಿದೇಶಗಳನ್ನೆಲ್ಲ ಸುತ್ತಿದೆ. ನಿನ್ನ ಕೈಲಾಸದಂತೆ ಕಾಣುವ, ಶೋಭಿಸುವ ಪುರ ಬಾಗೇವಾಡಿ ಎನಿಸಿತು. ಅಲ್ಲಿ ವೀರಭದ್ರ–ಭದ್ರಕಾಳಿಯರು, ಭಾಗ್ಯವಂತರಾದ ಮಾದರಸ ಮಾದಲಾಂಬಿಕೆಯೆಂಬ ಶಿವಬ್ರಾಹ್ಮಣ ದಂಪತಿಗಳಿದ್ದಾರೆ. ಆದರೆ ಅವರಿಗೆ ಸಂತಾನವಿಲ್ಲ. ಆ ಚಿಂತೆಯಲ್ಲಿದ್ದಾರೆ. ನಿತ್ಯ ನಿನ್ನ ಪೂಜೆ ಮಾಡುತ್ತಿದ್ದಾರೆ. ಅವರ ಬಗ್ಗೆ ಯೋಚಿಸಿ, ಮಗನನ್ನು ಕರುಣಿಸಿ ನಿಶ್ಚಿಂತರಾಗಿರಬೇಕು ಎಂದು ವಿನಂತಿಸಿಕೊಳ್ಳುತ್ತಾನೆ. ಶಿವೆಯೂ ಶಿವ ಅದನ್ನೇ ಸಮ್ಮತಿಸಿ, ನಂದಿಯನ್ನು ಬರಮಾಡಿಕೊಂಡು, ಅವನಿಗೆ ಮರ್ತ್ಯದ ಅಗ್ರಹಾರ ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಮಗ ಬಸವನಾಗಿ ಹುಟ್ಟಲು ಅನುಗ್ರಹಿಸುತ್ತಾರೆ. ಮರ್ತ್ಯದ ಜಡತ್ವ ಕಳೆಯಲು ಆದೇಶಿಸುತ್ತಾನೆ. ವೀರಶೈವ ಧರ್ಮ ಸಂಸ್ಥಾಪಿಸೆಂದು, ಶರಣರನ್ನು ಪೊರೆಯೆಂದು ಹರಸುತ್ತಾನೆ. ಆದರೆ ವೃಷಭ ಶಿವನನ್ನು ಅಗಲಿ ಇರಲಾರೆನೆಂದು ದುಃಖಿಸುತ್ತಾನೆ. ಖೋಡಿ ಲೋಕದತ್ತ ದೃಷ್ಟಿ ಸಹ ಹಾಯಿಸಲಾರೆ ಎಂದು ಶೋಕಿಸುತ್ತಾನೆ. ಆಗ ಶಿವನು ನಿನ್ನ ಹೃದಯಕಮಲದಲ್ಲಿ ಗುರು ರೂಪದಿಂದ ನಾನು ಇರುತ್ತೇನೆ, ನಿನ್ನ ಜೊತೆಗೇ ಬರುತ್ತೇನೆ ಎಂದು ಭರವಸೆ ಕೊಡುತ್ತಾನೆ. ಪಾರ್ವತಿ–ನಂದೀಶನ ನಡುವೆಯೂ ಸಂವಾದ ನಡೆಯುತ್ತದೆ. ಶಿವನ ಮಾತುಗಳಿಗೆ ಪಾರ್ವತಿ ಬೆಂಬಲಿಸುತ್ತಾ ತಾನೂ ಅದೇ ಮಾತುಗಳನ್ನು ಹೇಳಿ ಕರುಣಿಸುತ್ತಾಳೆ. ಆದರೂ ಅಗಲಲಾಗದ ಸ್ಥಿತಿಯಲ್ಲಿ ನಂದೀಶ ರೋದಿಸುತ್ತಾನೆ. ಆದರೆ ಮರ್ತ್ಯಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಈ ಪ್ರಸಂಗದ ಬೆಳವಣಿಗೆ ಹರಿಹರನ ಬಸವ – ಕೂಡಲಸಂಗರ ಆತ್ಮೀಯ

ಬಸವಣ್ಣನವರ ಹತ್ತಿರ ಮಹಾದೇವ ಭೂಪಾಲನನ್ನು ಕರೆದು ತಂದು ಭೇಟಿ ಮಾಡಿಸುತ್ತಾನೆ. ಆಗ ಬಸವ ತನ್ನದು ತಪ್ಪೆಂದು, ಮಹಾದೇವ ಭೂಪಾಲ ತನ್ನದು ಅಪರಾಧವೆಂದೂ ಹೇಳಿಕೊಳ್ಳುವುದು, ಕೊನೆಗೆ ಭೂಪಾಲನಿಗೆ ಮೋಳಿಗೆ ಕಾಯಕ ಕೊಟ್ಟು ಕಲ್ಯಾಣದಲ್ಲಿಯೇ ಇರಲು ಹೇಳುತ್ತಾರೆ.

ಮತ್ತೊಂದು ಪ್ರಸಂಗವನ್ನು ಕರ್ತೃ ಇಲ್ಲಿ ತರುತ್ತಾನೆ. ಕಿನ್ನರಯ್ಯನ ಪ್ರಸಂಗವದು. ತನ್ನ ಮೂಲ ಊರನ್ನೂ ತೊರೆದು, ಕಿನ್ನರಯ್ಯ ಕಲ್ಯಾಣಕ್ಕೆ ಬಂದಿರುತ್ತಾನೆ. ವಿಟನಿಂದ ತಪ್ಪಿಸಿಕೊಂಡು ಶಿವನ ರಕ್ಷಣೆ ಬಯಸಿಬಂದ ಕುರಿಯನ್ನು ರಕ್ಷಿಸುತ್ತಾನೆ. ವೇಶ್ಯೆಯ ಪ್ರಸಂಗ ಬರುತ್ತದೆ. ಕಿನ್ನರಯ್ಯನ ಮೇಲೆ ರಾಜನಲ್ಲಿ ದೂರು ಕೊಡುತ್ತಾರೆ. ಅಲ್ಲಿ ಶರಣ ಗೆಲ್ಲುತ್ತಾನೆ. ವಿಟನ ಮನಸ್ಸನ್ನು ಪರಿವರ್ತಿಸುತ್ತಾನೆ.

ಕೊನೆಯಲ್ಲಿ ಜಗದೇವ ಮಲ್ಲಿಬೊಮ್ಮರ ಪ್ರಸಂಗ. ಜಗದೇವ ಬಸವತತ್ತ್ವದ ಜೊತೆಗಿದ್ದೂ, ಜನನ ಸಂಸ್ಕಾರದಿಂದ ಬಿಡಿಸಿಕೊಳ್ಳಲಾಗದೆ, ಮತ್ತೆ ಆಚರಣೆಯಲ್ಲಿ ಅದನ್ನೇ ಅನುಸರಿಸಿದಾಗ, ಮಲ್ಲಿಬೊಮ್ಮ ವಿರೋಧಿಸುತ್ತಾನೆ. ಬಸವಣ್ಣನಲ್ಲಿ ಕ್ಷಮೆ ಕೇಳಲು ಹೇಳುತ್ತಾನೆ. ಬಸವಣ್ಣ ಜಗದೇವನ ವರ್ತನೆಗೆ ಬೇಸರಿಸಿಕೊಳ್ಳುತ್ತಾನೆ. ಜಗದೇವ ಕ್ಷಮಿಸಲು ಪ್ರಾರ್ಥಿಸಿಕೊಳ್ಳುತ್ತಾನೆ. ಹರಳಯ್ಯ ಮಧುವಯ್ಯರಿಗೆ ಶಿಕ್ಷೆ ಆದಾಗ ಬಸವನ ಆಜ್ಞೆಯನ್ನು ಜಗದೇವ ಪಾಲಿಸುತ್ತಾನೆ. ಸೋಮಲಾದೇವಿ ಇದಕ್ಕೆ ಬೆಂಬಲಿಸುತ್ತಾಳೆ. ಜಗದೇವ-ಬಿಜ್ಜಳನ ನಡುವೆ ಯುದ್ಧವಾಗುತ್ತದೆ. ತನ್ನ ಶಿರಸ್ಸನ್ನೆ ಶಿವನಿಗೆ ಅರ್ಪಿಸಲು ಸಿದ್ಧನಾಗುತ್ತಾನೆ. ಆಗ ಶಿವ ಬಂದು ಎಲ್ಲರ ಜೊತೆಗೆ ಬಿಜ್ಜಳನನ್ನೂ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

ಬಸವ ವಿಜಯ : ಶ್ರೀಗುರುಲಿಂಗಪ್ಪ ವಾಲೀಕಾರ ಅವರು ವಿಜಾಪೂರ ಜಿಲ್ಲೆಯ ದೇವಣಗಾಂವ ಗ್ರಾಮದವರು. ೧೯೪೯ರಲ್ಲಿ 'ಬಸವ ವಿಜಯ' ಪ್ರಕಟವಾಗುವಾಗ ಕವಿ ೬೦ ವರ್ಷಗಳ ಮೇಲ್ಪಟ್ಟು ವಯಸ್ಸನ್ನು ಹೊಂದಿದ್ದರು ಎಂದು ಸಂಪಾದಕರಾದ ಡಾ. ಎಂ. ಎಸ್. ಲಠ್ಠೆ ಅವರು ಬರೆಯುತ್ತಾರೆ. ಗುರಲಿಂಗಪ್ಪ ಪ್ರಸಿದ್ಧ ಜಾನಪದ ಕವಿ. ಶರಣರ ಬಗೆಗೆ ಇನ್ನೂ ಹಲವಾರು ಬಯಲಾಟಗಳನ್ನು ಬರೆದಿದ್ದಾರೆಂದು ತಿಳಿದು ಬರುತ್ತದೆ. ತಾವೇ ಪಾತ್ರ ಹಾಕಿ ಕೂಡ ಅವರು ನಟನಾಗಿ ನಟಿಸಿದ್ದೂ ಉಂಟು. ತಾಲೀಮ ಮಾಡಿಸುವ ಮಾಸ್ತರ ಆಗಿಯೂ ಅವರು ಹೆಸರುವಾಸಿ ಆಗಿದ್ದರು.

ಅಲ್ಲಮಪ್ರಭುಗಳ ಸಣ್ಣಾಟ, ಯಕ್ಷಗಾನಗಳನ್ನು ರಚಿಸುವಾಗ ಕವಿಗಳಿಗೆ ಪ್ರಭುಲಿಂಗಲೀಲೆ ಮಾದರಿ ಆದಂತೆ, ಇಲ್ಲಿ 'ಬಸವ ವಿಜಯ' ದೊಡ್ಡಾಟ ಬರೆಯುವಾಗ ಗುರುಲಿಂಗಪ್ಪ ಅವರಿಗೆ 'ಬಸವಪುರಾಣ' ಮಾದರಿ ಆಗಿದೆ. ಇಲ್ಲಿ

ಇತ್ತ ಬಸವಣ್ಣ ಗಂಗಾಂಬಿಕೆ ನಡುವೆ ದಾಸೋಹದ ಚರ್ಚೆ ನಡೆಯುತ್ತದೆ. ಬಸವಣ್ಣ–ಬಿಜ್ಜಳನ ನಡುವೆ ಸಂವಾದ ನಡೆಯುತ್ತದೆ. ಬಸವಣ್ಣನ ಸಾತ್ವಿಕ ಚಿಂತನೆ, ಬಿಜ್ಜಳನ ತಾಮಸ ಚಿಂತನೆ, ಇಲ್ಲಿ ಹೊಂದಾಣಿಕೆಯೆ ಇಲ್ಲ. ಬಸವಣ್ಣ ನುಡಿಗೆ ಲಿಂಗದ, ಅತ್ಯಮೂಲ್ಯ ಮುತ್ತು ಮಾಣಿಕ್ಯ, ಸ್ಫಟಿಕದ ಸ್ಥಾನವನ್ನು ಕೊಟ್ಟವನು. ನುಡಿಯನ್ನೆ ಬದುಕಿಗೆ ಸಿದ್ಧಾಂತವಾಗಿಸಿಕೊಂಡವನು. ಮೃದುವಚನವೆ ಸಕಲ ಜಪತಪ ಎಂದವನು. ಅಂಥವನಿಂದ ಒರಟು ಮಾತುಗಳನ್ನಾಡಿಸಿದ್ದು ಸ್ವಲ್ಪ ಮುಜುಗುರವನ್ನು ತರುತ್ತದೆ. ಅಕ್ಕನಾಗಮ್ಮ ಸಹೋದರನ ಲೀಲೆಯನ್ನು ಬಣ್ಣಿಸುತ್ತಾಳೆ. ಗಂಡ ಶಿವದೇವನನ್ನು ನೆನೆದು ದೇವನಲ್ಲಿ ಪ್ರಾರ್ಥಿಸುತ್ತಾಳೆ. ಬಸವನ ಮಾನಾಪಮಾನವನ್ನು ಶಿವನ ಮೇಲೇ ಹೊರಿಸುತ್ತಾಳೆ.

ಕೊನೆಯಲ್ಲಿ ಹರಳಯ್ಯ–ಮಧುವರಸರ ಪ್ರಸಂಗ ಬರುತ್ತದೆ. ಶರಣೆಂದರೆ ಪ್ರತಿಯಾಗಿ ಬಸವಣ್ಣ ಶರಣು ಶರಣಾರ್ಥಿ ಎಂದ ಘಟನೆ, ಅದರ ಭಾರ ಇಳುಹಿಕೊಳ್ಳಲು ತೊಡೆಯ ಚರ್ಮದ ಚಮ್ಮಾವುಗೆ ಮಾಡುವ ಸೂಚನೆ ಕೊಡುವ ಹರಳಯ್ಯನ ಹೆಂಡತಿ ಕಲ್ಯಾಣಮ್ಮ, ಅಂಥ ಪವಿತ್ರ ಪಾದುಕೆ ಮುಟ್ಟಲೂ ಅಂಜಿದ ಬಸವನು ಅವುಗಳನ್ನು ತಲೆಯ ಮೇಲಿಟ್ಟುಕೊಂಡು ಸಂಭ್ರಮಿಸುತ್ತಾನೆ. ಆದರೆ ಹರಳಯ್ಯನವರು ಎಷ್ಟೇ ತಿಳಿಸಿ ಹೇಳಿದರೂ ಕೇಳದೆ, ಮಧುವರಸನು ಮೆಟ್ಟಿಕೊಂಡಾಗ ಮೈಗೆ ಕಿಚ್ಚು ಹತ್ತಿದಂತೆ ಒದ್ದಾಡುವನು. ದಾಸಿ ಲಿಂಗಮ್ಮ ಹರಳಯ್ಯನವರ ದೋಣಿ ನೀರು ತಂದು ಉರಿ ಸಮಾಧಾನ ಪಡಿಸುವಳು. ತನ್ನ ತಪ್ಪಿಗೆ ಮಧುವರಸ ಪಶ್ಚಾತಾಪ ಪಡುತ್ತಾನೆ. ಹರಳಯ್ಯನ ದೋಣಿಯ ಮರ್ಮ ಅರಿತು ಸಂತೋಷ ಪಡುತ್ತಾನೆ. ಇಬ್ಬರ ನಡುವೆ ಸಂಬಂಧ ಏರ್ಪಡುತ್ತದೆ.

ಮುಂದೆ ಬಿಜ್ಜಳನಿಂದ ಕಣ್ಣು ಕೀಳುವ ಶಿಕ್ಷೆ ಆಗುತ್ತದೆ. ಕಲ್ಯಾಣಮ್ಮ ನೊಂದುಕೊಳ್ಳುತ್ತಾಳೆ. ದುಷ್ಟ, ದುರುಳ, ಕುಟಿಲ, ಕಪಟ, ಕ್ರೂರ, ಭ್ರಷ್ಟ ಭವಿ ಬಿಜ್ಜಳನ ಭ್ರಮೆಗೆ 'ಪರರ ಪೀಡೆಗೆ ನರಕ ತಪ್ಪದೆಂದು' ಹಿಡಿಶಾಪ ಹಾಕುತ್ತಾಳೆ. ಕಲ್ಯಾಣಮ್ಮ ಬಿಜ್ಜಳನೊಂದಿಗೆ ವಾದಿಸುತ್ತಾಳೆ. ಬಿಜ್ಜಳನ ಪಟ್ಟದರಸಿ ಮಂಡಿತಾಮತಿಯಲ್ಲಿ ಗೋಳಿಡುತ್ತಾಳೆ. ಮಂಡಿತಾಮತಿ ಬಿಜ್ಜಳನಿಗೆ ತಿಳಿಹೇಳುತ್ತಾಳೆ. ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿ ಬಿಜ್ಜಳ ಇರಲಿಲ್ಲ. ಶರಣ ಹರಳಯ್ಯ ಮಧುವಯ್ಯರನ್ನು ಆನೆ ಕಾಲಿಗೆ ಕಟ್ಟಿ ಕಲ್ಯಾಣ ಪಟ್ಟಣದ ಬೀದಿ ಬೀದಿಯಲ್ಲಿ ಎಳಿಸಲು ಆಜ್ಞೆ ಮಾಡುತ್ತಾನೆ.

ಕಲ್ಯಾಣಮ್ಮ ಹರಳಯ್ಯ ಮರಗುತ್ತಾರೆ. ಬಸವಣ್ಣನಿಗೆ ಸುದ್ದಿ ಮುಟ್ಟಿಸಲು ಹರಳಯ್ಯ ಕಲ್ಯಾಣಮ್ಮನಿಗೆ ಹೇಳುತ್ತಾನೆ. ಬಸವಣ್ಣ ಶಿವನಾಮ ಸ್ಮರಣೆ ಮಾಡುತ್ತ

ಸಂವಾದವನ್ನು ಸ್ಮರಣೆಗೆ ತರುತ್ತದೆ. ಇಲ್ಲಿ ಕರ್ತೃ ಬಾಗೇವಾಡಿ, ಕೂಡಲಸಂಗಮದ ಪ್ರಸಂಗವನ್ನು ತರುವುದೇ ಇಲ್ಲ. ನೇರವಾಗಿ ಬಿಜ್ಜಳನಿರುವ ಕ್ಷೇತ್ರಕ್ಕೆ ಬಸವ ಬರುತ್ತಾನೆ.

ಬಿಜ್ಜಳನ ಸಭಾದಲ್ಲಿರುವ ಸಾರಥಿಗೆ ತಾನು ಮಾದಿರಾಜ ಮಾದಲಾಂಬಿಕೆಯ ಗರ್ಭಸಂಜಾತ ಬಸವನೆಂದು ಪರಿಚಯಿಸಿಕೊಳ್ಳುತ್ತಾನೆ. ಹಾಗೇ ಕೊಂಡೆಮಂಚಣ್ಣ, ಮಧುವರಸರು ತಮ್ಮ ತಮ್ಮ ಪರಿಚಯ ಮಾಡಿಕೊಳ್ಳುತ್ತಾರೆ. ಇಲ್ಲಿ ಬಸವಣ್ಣನ ಬಾಯಿಂದಾಡಿಸುವ ಮಾತುಗಳೆಲ್ಲ ಬಸವನ ವಚನಗಳ ಗದ್ಯ ರೂಪವಾಗಿ ಕಾಣಿಸುತ್ತವೆ. ಬಸವಕಲ್ಯಾಣಕ್ಕೆ ಬಸವ ಬಂದೊಡನೆ ತಾನು ಪರೋಪಕಾರಾರ್ಥವಾಗಿ ಬಂದುದನ್ನು ಹೇಳಿಕೊಂಡಾಗ ಮಧುವರಸನು ನಿನ್ನ ವೇತನದಲ್ಲಿ ಏನಾದರೂ ಮಾಡು ಎಂದು ದುರಹಂಕಾರದಿಂದ ನುಡಿಯುತ್ತಾನೆ. ಬಿಜ್ಜಳ ಇಂಥವನನ್ನು ನಂಬಿ ರಾಜ್ಯಾಧಿಕಾರ ಬಸವನಿಗೆ ಒಪ್ಪಿಸಿದ್ದು ತಪ್ಪೆನ್ನತ್ತಾನೆ. ಅವನ ನಡಾವಳಿ ಅಲ್ಲಿದ್ದವರಿಗೆ ನುಂಗಲಾರದ ತುತ್ತಾಗುತ್ತದೆ.

ಬಿಜ್ಜಳನಿಗೆ ಅರವತ್ತೇಳು ಜನ ಹೆಂಡಿರಿದ್ದರೆಂದು, ಅವನ ಪಟ್ಟದರಾಣಿ ಮಂಡಿತಾಮತಿ ಎಂದು ಹೇಳುವದು ಹೊಸ ವಿಷಯವಾಗಿ ಕಾಣಿಸುತ್ತದೆ. ಮಂಚಣ್ಣನ ಚಾಡಿ ಮಾತಿಗೆ ಕಿವಿಗೊಡದಿರಲು ಮಂಡಿತಾಮತಿ ಬಿಜ್ಜಳನಲ್ಲಿ ಪ್ರಾರ್ಥಿಸುತ್ತಾಳೆ. ಬಸವಣ್ಣನ ಘನ ವ್ಯಕ್ತಿತ್ವಕ್ಕೆ ಅವಮಾನ ಮಾಡಿದರೆ ಶಾಂತಿನಿಧಿ ಚೆನ್ನಮಲ್ಲಿಕಾರ್ಜುನ ಒಪ್ಪುವುದಿಲ್ಲ ಎಂದು ತಿಳಿಸಲು ಪ್ರಯತ್ನಿಸುತ್ತಾಳೆ. ಆದರೆ ಬೊಕ್ಕಸದ ದ್ರವ್ಯ ಕರಗಿ ಹೋದರೂ ಅದನ್ನು ನೋಡಿಕೊಂಡು ಸುಮ್ಮನಿರಬೇಕೆ? ಎಂಬುದು ಬಿಜ್ಜಳನ ಆತಂಕ.

ಆಗ ಮಂಡಿತಾಮತಿ ಇನ್ನಷ್ಟು ಸಂಗತಿಗಳನ್ನು ಹೇಳುತ್ತಾಳೆ. ಬಸವಣ್ಣ ಕಾಶ್ಮೀರಕ್ಕೆ ಹೋಗಿ ಜೋಳಿಗೆಯಲ್ಲಿ ಜಂಗಮರನ್ನು ತುಂಬಿಕೊಂಡು ಬಂದ ಸಂಗತಿಯ ಜೊತೆಗೆ, ಮಹಾದೇವ ಭೂಪಾಲ ಬೆನ್ನಟ್ಟಿ ಬಂದಾಗ ಬಸವ ಹನ್ನೆರಡು ಸಾವಿರ ಜಂಗಮರನ್ನು ರಕ್ಷಿಸಿದ ವರ್ತಮಾನವನ್ನು ಬಿಜ್ಜಳನ ಗಮನಕ್ಕೆ ತಂದು, ಶರಣರ ಘನ ಮಹಿಮೆಯನ್ನು ಅರಹುತ್ತಾಳೆ. ಆಕೆಯ ಮಾತನ್ನು ಬಿಜ್ಜಳ ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಮಾದಲಾಂಬಿಕೆಯ ಕಂದನನ್ನು ಅಂದಗೆಡಿಸಿಯೇ ತೀರುವೆನೆಂಬ ಪ್ರತಿಜ್ಞೆ ಮಾಡುತ್ತಾನೆ. ಆದರೂ ಮಂಡಿತಾಮತಿ ಬಸವನ ವ್ಯಕ್ತಿತ್ವದ ಪರಿಚಯ ಮಾಡುತ್ತಾ ಹೋಗುತ್ತಾಳೆ. ಅವನ ಮೇಲೆ ಹಗೆ ಸಾಧಿಸುವುದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬ ತಿಳಿವಳಿಕೆ ಕೊಡಲು ಯತ್ನಿಸುತ್ತಾಳೆ. ಅದರಿಂದ ಯಾವ ಪ್ರಯೋಜನ ಆಗುವದಿಲ್ಲ. ಬಿಜ್ಜಳನ ಬಾಯಿ ಸಡಿಲಾಗುತ್ತ ಹೋಗುತ್ತದೆ.

ಕೃತಿಯನ್ನು, ಒಂದು ಚರಿತ್ರೆ ಆಧರಿತ ಕೃತಿಯನ್ನು ರಚಿಸಿದನೆಂದು ತಿಳಿದುಬರುತ್ತದೆ. ಹೀಗೆ ಒಟ್ಟು ೧೮ ಯಕ್ಷಗಾನ ಕೃತಿಗಳನ್ನು ರಚಿಸಿದ ಮಾಹಿತಿ ನಮಗೆ ಲಭ್ಯವಾಗುತ್ತದೆ. ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ್ದು 'ಪ್ರಭುದೇವರ ಯಕ್ಷಗಾನ' ಏಕೈಕ ಕೃತಿ ಆಗಿದೆ. ಇಲ್ಲಿ **ಪ್ರಭುಲಿಂಗಲೀಲೆಗೆ** ಯಕ್ಷಗಾನ ಮಾದರಿಯಲ್ಲಿ ವ್ಯಾಖ್ಯಾನ ಬರೆಯುತ್ತಿರುವನೇನೋ ಎಂಬಂತೆ ಭಾಸವಾಗುತ್ತದೆ.

'ಮಾಯಾಕೋಲಾಹಲ' ಯಕ್ಷಗಾನವನ್ನು ಬರೆದವರು ಈಗಿನ ಪ್ರಸಿದ್ಧ ಯಕ್ಷಗಾನ ಪ್ರಸಂಗ ಕರ್ತರು ಮತ್ತು ಭಾಗವತರಾದ ಮಂಜುನಾಥ ಹೊಸ್ತೋಟ ಅವರು. ಇವರು ಕಾರವಾರ ಜಿಲ್ಲೆಗೆ ಸೇರಿದ ಹೊಸ್ತೋಟ ಎಂಬ ಗ್ರಾಮದವರು.

'ಮಾಯಾಕೋಲಾಹಲ' ಯಕ್ಷಗಾನ ಪ್ರಸಂಗವು ಪ್ರಭುಲಿಂಗಲೀಲೆಯ ಪ್ರಾರಂಭದ ಪದ್ಯಗಳೊಂದಿಗೆ ಪ್ರಾರಂಭವಾದುದು ವಿಶೇಷ ಎನಿಸುತ್ತದೆ. ಹಾಗೇ **'ಪ್ರಭುದೇವರ ಯಕ್ಷಗಾನ'**ವು ಶ್ರೀಗುರು ಬಸವಲಿಂಗನನ್ನು, ಗಣಾಧಿಪತಿಯನ್ನು, ಶಾರದೆಯನ್ನು ಸ್ತುತಿಸುವ ಮೂಲಕ ಚಾಲನೆಯನ್ನು ಪಡೆದುಕೊಂಡಿದೆ. ನಂತರ ಪ್ರಭುಲಿಂಗಲೀಲೆಯ ಪದ್ಯಗಳು ಬರುತ್ತವೆ. ಎರಡರಲ್ಲೂ 'ಸತ್ತವರ ಕಥೆಯಲ್ಲ' ನುಡಿ ಇದ್ದು, ಇನ್ನೆರಡು ನುಡಿಗಳು ಬೇರೆ ಬೇರೆ ಇವೆ. **'ಪ್ರಭುದೇವರ ಯಕ್ಷಗಾನ'**ದ ಆದಿಯನ್ನು ಗಮನಿಸುವಾಗ ಹರಿಹರನ ರಗಳೆಗಳ ಆದಿ ನೆನಪಾಗುತ್ತದೆ. ಹರಿಹರನಿಗೆ ಕೈಲಾಸ–ಶಿವ, ಶಿವ–ಕೈಲಾಸದ ವರ್ಣನೆ ಎಷ್ಟು ಮುಖ್ಯವೋ ಹಾಗೇ ಇಲ್ಲಿಯೂ ಕೂಡ ರಜತಗಿರಿ, ಕೈಲಾಸ ಬಣ್ಣನೆಯ ಪದ್ಯಗಳ ಆಯ್ಕೆ ಮಾಡಿಕೊಳ್ಳುತ್ತಾರೆ. **'ಮಾಯಾಕೋಲಾಹಲ'** ಯಕ್ಷಗಾನ ಬಯಲಾಟದ ಕರ್ತೃವಿಗೆ ಅಲ್ಲಮನ ಅಮಲ ಜ್ಞಾನ–ಭಕ್ತಿ, ಸಾತ್ವಿಕ–ವಿರಕ್ತಿ ಎರಡರ ಅನುಭವವಿರುವುದನ್ನು ಇಲ್ಲಿ ಸೂಕ್ಷ್ಮವಾಗಿ ಗುರುತಿಸಿಕೊಳ್ಳಬಹುದಾಗಿದೆ. ಹೀಗಾಗಿ ವೈರಾಗ್ಯಮೂರ್ತಿ ಅಲ್ಲಮನ (ಶಿವನ ಸಾತ್ವಿಕ ಕಳೆಯ) ಶಿವ ತೇಜವನ್ನು ಕುಂದದಂತೆ ಕಾಪಾಡಲು ಸಾಧ್ಯವಾಗಿದೆ. ಮಂಜುನಾಥ ಭಾಗವತ ಹೊಸ್ತೋಟ ಅವರಿಂದ ರಚನೆಯಾದ **'ಮಾಯಾ ಕೋಲಾಹಲ'** ಮತ್ತು ದುರುದಂಡೀಶ ಕವಿಯಿಂದ ರಚಿಸಲ್ಪಟ್ಟ **'ಪ್ರಭುದೇವರ ಯಕ್ಷಗಾನ'** ಈ ಎರಡೂ ಕೃತಿಗಳನ್ನು ಓದುವಾಗ ಚಾಮರಸನ ಪ್ರಭುಲಿಂಗಲೀಲೆಯ ಕವಿತ್ವದ ಸಾರ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ.

ಅನುಪಮ ಚರಿತ ವ್ಯೋಮಮೂರುತಿ ಅಲ್ಲಮನ ವ್ಯಕ್ತಿತ್ವವನ್ನು ಕಟ್ಟಿಕೊಡುವುದು ಸುಲಭವಾದುದಲ್ಲ. ಆದರೂ ಈ ಮೂರೂ ಕೃತಿಗಳ ಕರ್ತೃಗಳು ಆ ಪ್ರಯತ್ನದಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೆ. ಅಲ್ಲಮನ ಜೀವನಕ್ಕೆ ಪಾರದರ್ಶಕತೆಯ ಸ್ಪರ್ಶವನ್ನು ಕೊಡಲು ಪ್ರಯತ್ನಿಸಿದ್ದಾರೆ. **'ಮಾಯಾಕೋಲಾಹಲ'** ಯಕ್ಷಗಾನದಲ್ಲಿ ಕೈಲಾಸದಲ್ಲಿದ್ದ

ಕೂಡಲಸಂಗನ ಪಾದೋದಕವನ್ನು ಅವರ ಕಣ್ಣಿಗೆ ಚಿಮುಕಿಸಲು ಹೇಳುತ್ತಾನೆ. ಕಲ್ಯಾಣಮ್ಮ ಭಕ್ತಿಯಿಂದ ಹಾಗೇ ಮಾಡುತ್ತಾಳೆ. ಅವರಿಬ್ಬರ ಅಂಧತ್ವ ದೂರಾಗುತ್ತದೆ. ಅವರಿಗೆ ಕಟಕರ ಕೇರಿಯಾಗುತ್ತಿರುವ ಕಲ್ಯಾಣದಿಂದ ಹೊರಟು ಹೋಗಲು ಬಸವಣ್ಣ ಹೇಳುತ್ತಾನೆ. ಇದು ಇಲ್ಲಿ ಜನಪದರ ಸುಖಾಂತ್ಯದ ನಿರೀಕ್ಷೆ ಆಗಿದೆ. ಜಗದೇವ ಬಿಜ್ಜಳನ ನಡುವೆ ಮತ್ತೆ ವಾದನಡೆಯುತ್ತದೆ. ಬಿಜ್ಜಳನಿಗಾದ ಶಾಸ್ತಿಯನ್ನು ಸಾರಲು ಜಗದೇವ ಹೇಳುತ್ತಾನೆ. ಹೀಗೆ ಬಸವ ವಿಜಯವಾಗುತ್ತದೆ. ಶರಣರಿಗೆ ಜಯ ಆಗುತ್ತದೆ. ಕಟುಕರಿಗೆ ಶಿಕ್ಷೆ ಆಗುತ್ತದೆ.

ಅಲ್ಲಮಪ್ರಭು ಕುರಿತ ಬಯಲಾಟಗಳು : ಅಸಾಧಾರಣ ವ್ಯಕ್ತಿತ್ವ, ಸಾತ್ವಿಕ ಜೀವನ, ಮಾಯಾಕೋಲಾಹಲ, ವ್ಯೋಮಮೂರ್ತಿ ಎನಿಸಿಕೊಂಡ ಅಲ್ಲಮಪ್ರಭು ಭವ್ಯ ಬದುಕಿನ ದರ್ಶನವನ್ನು 'ಅಲ್ಲಮ ಪ್ರಭು' ಎಂಬ ಸಣ್ಣಾಟ, 'ಪ್ರಭುದೇವರ ಯಕ್ಷಗಾನ' ಹಾಗೂ 'ಮಾಯಾಕೋಲಾಹಲ' (ಯಕ್ಷಗಾನ) ಎಂಬ ಮೂರು ಬಯಲಾಟ ಕೃತಿಗಳು ಮಾಡಿಸುತ್ತವೆ.

'ಅಲ್ಲಮಪ್ರಭು' ಎಂಬ ಸಣ್ಣಾಟದ ಕರ್ತೃ ಲಿಂಗೈಕ್ಯ ಯಲ್ಲಪ್ಪ ಫಕೀರಪ್ಪ ಮುನೆನ್ನಿ ಮಾಸ್ತರರು. ಇವರ ಕಾವ್ಯನಾಮ 'ಶಿವಾನಂದ'. ಶಿವಾನಂದ ಕಾವ್ಯನಾಮದಲ್ಲಿ ಸುಮಾರು ೧೪ ಬಯಲಾಟಗಳನ್ನು ರಚಿಸಿದ್ದಾರೆಂದು ಹೇಳಲಾಗುತ್ತದೆ. ಲಭ್ಯವಿಲ್ಲದ ಇನ್ನೂ ಎಷ್ಟೋ ಕೃತಿಗಳಿವೆ ಎಂದೂ ತಿಳಿದುಬರುತ್ತದೆ. ಕವಿ ತನ್ನ ಕಾವ್ಯದಲ್ಲಿ ತನ್ನನ್ನು 'ಕವಿಕುಲರತ್ನ ಶಿವಾನಂದ', 'ಕಲಿ ಶಿವಾನಂದ' ಎಂದು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಶಿವಾನಂದ ಕವಿ ೧೯೪೫ರವರೆಗೆ ಬದುಕಿದ್ದರೆಂದು ತಿಳಿದುಬರುತ್ತದೆ. ಇವರು ಅಂದಿನ ಕಾಲದಲ್ಲಿ ಇಂಗ್ಲೀಷ ೩ನೇ ಇಯತ್ತೆ ವರೆಗೆ ಓದಿದವರು. ಆದರೆ ದೇಸಿ ಕೃತಿಗಳನ್ನು ಕನ್ನಡಕ್ಕೆ ಕೊಟ್ಟ ಅಪರೂಪದ ಕವಿ. ಇವರ ಹುಟ್ಟೂರು ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 'ಹಣ್ಣಿಕೇರಿ'. ಇದನ್ನು ಕವಿ ಫಲಪುರವೆಂದು ಕರೆದಿರುವುದು ವಿಶೇಷ.

'ಪ್ರಭುದೇವರ ಯಕ್ಷಗಾನ' ವನ್ನು ದುರದುಂಡೀಶ ಕಾವ್ಯನಾಮದ ಕವಿ ಶಿವಬಸವಯ್ಯನವರು ರಚಿಸಿದ್ದಾರೆ. ಇವರ ಊರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಚಿವುಟಗುಂಡಿ ಗ್ರಾಮ. ನಂತರ ಬೈಲಹೊಂಗಲದಲ್ಲಿ ಮಠ ಕಟ್ಟಿ ನೆಲಸಿದರೆಂದು ತಿಳಿಯುತ್ತದೆ. ಹೊಂಗಲನ್ನು ಕವಿ 'ಕನಕ ಕಂಠನಗರ' 'ಹೇಮಗ್ರೀವ ನಗರ' ಎಂದು ಬಣ್ಣಿಸುತ್ತಾನೆ. ಕವಿ ದುರದುಂಡೀಶನ ಕಾಲ ಸುಮಾರು ೧೭೭೫ (೧೮೧೬?) ದಿಂದ ೧೮೬೫-೭೦ಕ್ಕೆ ಬಂದು ನಿಲ್ಲುತ್ತದೆ. ದುರದುಂಡೀಶನು ಸುಮಾರು ೧೧ ಯಕ್ಷಗಾನ ಕೃತಿಗಳನ್ನೂ, ೪ ಕಥಿ ಎಂದು ಹೇಳುವ ಪುರಾತನ ಆಟಗಳನ್ನು, ಒಂದು ಮಹಾಭಾರತದ ಯುದ್ಧ ಪ್ರಸಂಗದ

'ಅಲ್ಲಮಪ್ರಭು' ಸಣ್ಣಾಟದಲ್ಲಿ ಕೌಶಿಕರಾಜನ ಪ್ರವೇಶ, ಸಾತ್ವಿಕಿ ಮಂದಿರ ಪ್ರವೇಶ, ಅರಮನೆ ಪ್ರವೇಶ, ಸಾತ್ವಿಕಿ–ಕೌಶಿಕ ಪ್ರವೇಶ, ದೂತಿ–ಅಲ್ಲಮ ಪ್ರವೇಶ, ಜೊತೆಗೆ ಮುಕ್ತಿ ಪ್ರವೇಶವಾಗುತ್ತದೆ. **'ಪ್ರಭುದೇವರ ಯಕ್ಷಗಾನ'**ವು ಇಡಿಯಾಗಿ ಅಲ್ಲಮ–ಮಾಯೆಗೆ ಸೀಮಿತವಾಗಿದ್ದು, ಅವರಿಬ್ಬರ ಸಂಬಂಧಿಗಳು ಮಾತ್ರ ಇಲ್ಲಿ ಬರುತ್ತವೆ. ಮಾಯೆ ಸೋತಾಗ ಪಾರ್ವತಿ ಆ ಸೋಲನ್ನು ಒಪ್ಪಿಕೊಳ್ಳುತ್ತಾಳೆ. ನಂತರ ಶಿವನಾಜ್ಞೆಯಂತೆ ಬಸವ, ಅಕ್ಕನಾಗಮ್ಮ, ಅಕ್ಕಮಹಾದೇವಿಯರ ಜನನ ಆಗುತ್ತದೆ. "ಇಂತು ಎಸೆವ ಪ್ರಭುದೇವರ ಇತಿಹಾಸವನ್ನು ಬಿಡದೇ ಆದಿ ಅಂತ್ಯವನ್ನು ಕೇಳಿದ ಸದ್ಭಕ್ತರಿಗೆ ಭಕ್ತಿ ಸುಜ್ಞಾನ, ವೈರಾಗ್ಯಗಳನಿತ್ತು ಸಲಹುವುದು ಸತ್ಯ" ಎಂದು ಕವಿ ಹೇಳುತ್ತಾನೆ. ಕೃತಿ ಓದಿದರ ಫಲ ಪುಣ್ಯವಿದು ಎಂದು ಹೇಳಿದ್ದು ಜನಪದರ ನಂಬಿಕೆಯನ್ನು ಪ್ರೋತ್ಸಾಹಿಸುತ್ತದೆ.

'ಅಲ್ಲಮಪ್ರಭು' ಸಣ್ಣಾಟದ ಪ್ರಾರಂಭದಲ್ಲಿ ಮಾಯೆ–ಅಲ್ಲಮನ ನಡುವೆ ಸಾಕಷ್ಟು ಚರ್ಚೆ ಆಗುತ್ತದೆ. ಅಲ್ಲಮ ಪಾಪಕೂಪದಲ್ಲಿ ಬೀಳುವುದು ಸರಿಯಲ್ಲ ಎಂದು ನಾನಾ ಪರಿಯಲ್ಲಿ ತಿಳಿಸಲೆತ್ನಿಸಿದನು. ಅಜ್ಞಾನಿಗಳ ಕಣ್ಣಿಗೆ ಸತ್ಯವೆನ್ನುವಂತೆ ಭ್ರಮಾಲೋಕದಲ್ಲಿ ಕಟ್ಟಿಹಾಕುವುದು ಉಚಿತ ಮಾರ್ಗವಲ್ಲವೆಂದು ತಿಳಿಸುತ್ತಾರೆ. ಮಾಯೆ ಸೋತು ಪಾರ್ವತಿಯಲ್ಲಿಗೆ ಹೋಗಿ ಶರಣಾಗತಳಾಗಿ ತಾನು ಅಲ್ಲಮನನ್ನು ಗೆಲ್ಲುವಲ್ಲಿ ವಿಫಲಳಾದುದಕ್ಕೆ ಮರುಗಿದ್ದಾಳೆ. ಆ ಮಾತನ್ನು ಪಾರ್ವತಿಗೆ ಅರ್ಪಿಸಿದ್ದಾಳೆ. ಪಾರ್ವತಿ ಈಗ ಅಲ್ಲಮನನ್ನು ಗೆಲ್ಲಲು ಸಾತ್ವಿಕಿಯನ್ನು(ಮಹಾದೇವಿ) ಉಡುತಡಿಯಲ್ಲಿ ಹುಟ್ಟುವಂತೆ ಅನುಗ್ರಹಿಸಿದ್ದಾಳೆ. ಉಡುತಡಿಯಲ್ಲಿ ಸಾತ್ವಿಕಿಯ ಗಾಂಭೀರ್ಯ ಪೂಜೆ ಮುಂತಾದುವನ್ನು ಕಂಡು ಅಲ್ಲಮ ಬೆರಗಾಗುತ್ತಾನೆ. ಅವಳಿಗೆ ಕಲ್ಯಾಣದಲ್ಲಿಯೆ ನೋಡುವ ಸಂಕಲ್ಪ ಮಾಡುತ್ತಾನೆ. ಆದರೂ ಸಾತ್ವಿಕಿಯ ಲಿಂಗದಲ್ಲಿ ತೋರಿ ಮಾಯವಾಗುತ್ತಾನೆ.

ಕೌಶಿಕನು ಸಾತ್ವಿಕಿಯ ಸೌಂದರ್ಯಕ್ಕೆ ಮಾರುಹೋಗುತ್ತಾನೆ. ಮಂತ್ರಿಯೊಂದಿಗೆ ಮಾತನಾಡಿ ಆಕೆಯನ್ನು ಕರೆತರಲು ಹೇಳುತ್ತಾನೆ. ಮಂತ್ರಿ ರಾಜನಿಗೆ ಪಟ್ಟದರಸಿ ಪದ್ಮಿನಿ ಇರುವಾಗ ಬೇರೆ ಹೆಣ್ಣನ್ನು ಮೋಹಿಸುವುದು, ನೋಡುವುದು ತಪ್ಪೆಂದು ಹೇಳುತ್ತಾನೆ. ಆದರೂ ರಾಜ ತನ್ನ ಹಠವನ್ನೇ ಮುಂದುವರೆಸುತ್ತಾನೆ. ಆಕೆಯನ್ನು ಲಗ್ನವಾಗುವ ಬಯಕೆಯನ್ನು ಮುಂದಿಡುತ್ತಾನೆ. ಆಕೆಯನ್ನೇ ಪಟ್ಟದರಸಿ ಮಾಡುವ ಹಂಬಲವನ್ನು ವ್ಯಕ್ತಪಡಿಸುತ್ತಾನೆ. ಕೊನೆಗೆ ಮಂತ್ರಿ ಈ ಕೆಲಸಕ್ಕಾಗಿ ಮಾಳಮ್ಮಾ ಎಂಬ ದೂತಿಯನ್ನು ನೇಮಿಸುತ್ತಾನೆ. ಕೌಶಿಕ–ದೂತಿ ನಡುವೆಯೂ ಸಂವಾದ ನಡೆಯುತ್ತದೆ. ನಿರ್ಮಲ ಸುಮತಿಯರ ಮಗಳು ಸರಸಮತಿಯಾದ ಸಾತ್ವಿಕಿಯನ್ನು ನನ್ನೊಡನೆ ಲಗ್ನವಾಗಲು ಒಡಂಬಡಿಸಿಕೊಂಡು ಬರಬೇಕು ಎಂದು ಹೇಳಿ,

ಶಿವನು ಪಾರ್ವತಿಯಲ್ಲಿ ಮರ್ತ್ಯಲೋಕದಲ್ಲಿದ್ದ ಬಳ್ಳಿಗಾವೆಯಲ್ಲಿದ್ದ ಅನುಭಾವಿ ಅಲ್ಲಮನೆಂಬ ಜಂಗಮನ ಬಣ್ಣನೆಯನ್ನು ಮಾಡುತ್ತಾನೆ. ಮಾಯಾ ಮೋಹಗಳಿಗೆ ಸಿಲುಕುವವನಲ್ಲ ಎಂದು ಹೇಳುತ್ತಾನೆ. ಇದನ್ನು ಕೇಳಿದ ಪಾರ್ವತಿ ಕುದ್ದುಹೋಗುತ್ತಾಳೆ. ತನ್ನ ಪತಿ ಶಿವನಿಗಿಂತ ಮಿಗಿಲಾದವರು ಈ ಲೋಕದಲ್ಲಿ ಬೇರೆಯಾರೋ ಇರಲು ಸಾಧ್ಯವುಂಟೆ? ಎಂಬುದು ಅವಳ ಪ್ರಶ್ನೆ. ಅಲ್ಲದೇ ಮಾಯಾ ಮೋಹಕ್ಕೆ ಸಿಲುಕದ ಗಂಡು ಇರಲು ಸಾಧ್ಯವೇ? ಎಂಬುದು ಇನ್ನೊಂದು ಪ್ರಶ್ನೆ. ಹೀಗಾಗಿ ತನ್ನ ತಾಮಸಕಳೆಯಾದ ಘೋರ ಮಾಯೆಯನ್ನು ಅಲ್ಲಮನನ್ನು ಹೆಡಮುರಿಗಿ ಕಟ್ಟಿತರಲು ಮರ್ತ್ಯಕ್ಕೆ ಕಳಿಸುತ್ತಾಳೆ. ಈ ಪ್ರಸಂಗವು ದಂಪತಿಗಳಿಬ್ಬರಿಗೂ ಪ್ರತಿಷ್ಠೆಯ ಸವಾಲಾಗಿ ಕಾಣಿಸುತ್ತದೆ. ಶಿವನ ಸಾತ್ವಿಕ ಕಳೆ ಅಲ್ಲಮ. ಸಾತ್ವಿಕ ಶಕ್ತಿಯ ಮುಂದೆ ತಾಮಸದ ಆಟ ನಡೆಯದು ಎಂಬುದನ್ನು ಇಲ್ಲಿ ಗುರುತಿಸಿ ಕೊಳ್ಳಬಹುದಾಗಿದೆ. ದುರದುಂಡೀಶನೂ **'ಪ್ರಭುದೇವರ ಯಕ್ಷಗಾನ'**ದಲ್ಲಿ ಇದೇ ಕ್ರಮವನ್ನು ಅನುಸರಿಸಿದ್ದಾನೆ.

'ಅಲ್ಲಮಪ್ರಭು' ಸಣ್ಣಾಟ, (೧೯೭೩ ರಲ್ಲಿ ಪ್ರಥಮ ಮುದ್ರಣ, ೧೯೮೯ರಲ್ಲಿ ದ್ವಿತೀಯ ಮುದ್ರಣ ಕಂಡಿದೆ), **'ಪ್ರಭುದೇವರ ಯಕ್ಷಗಾನ'** (೧೯೮೨ಲ್ಲಿ ಪ್ರಥಮ ಮುದ್ರಣ), **'ಮಾಯಾಕೋಲಾಹಲ'** (೧೯೯೫ರಲ್ಲಿ ಪ್ರಥಮ ಮುದ್ರಣ) ಕೃತಿಗಳು ೧೯೭೩ ರಿಂದ ೧೯೯೫ರ ಅವಧಿಯ ನಡುವೆ ಪ್ರಕಟವಾಗಿವೆ. ಮೂರೂ ಕೃತಿಗಳ ಕರ್ತೃಗಳು ಬೆಳಗಾವಿ ಜಿಲ್ಲೆಯವರೆ ಎಂಬುದೊಂದು ವಿಶೇಷವೇ ಸರಿ. ಮೂವರೂ ಅದೇ ಪರಿಸರದ ಕರ್ತೃಗಳಾಗಿರುವುದರಿಂದ ಒಬ್ಬರ ಪ್ರಭಾವ ಇನ್ನೊಬ್ಬರ ಮೇಲೆ ಸಹಜವಾಗಿಯೇ ಆಗಿದೆ. ಹೀಗಾಗಿ ಮೂವರೂ ಪ್ರಭುಲಿಂಗಲೀಲೆಯನ್ನೇ ಮಾದರಿಯಾಗಿ ಇಟ್ಟುಕೊಂಡಿದ್ದಾರೆ. ಹೀಗಾಗಿ ಕಥಾತಂತ್ರಗಳಲ್ಲಿ ಹೇಳಿಕೊಳ್ಳಬಹುದಾದ ವ್ಯತ್ಯಾಸ ಕಾಣಿಸುವದಿಲ್ಲ.

ಮೂರು ಕೃತಿಗಳಲ್ಲೂ ಮಾಯಾ ಮೋಹಜಾಲ ಬೀಸಿ ಅಲ್ಲಮನನ್ನು ಬಲೆಗೆ ಹಾಕಿಕೊಳ್ಳಲೆತ್ನಿಸಿದ ಮಾಯೆಯನ್ನು ಸಾತ್ವಿಕತೆಯಿಂದ ಗೆದ್ದ ಅಲ್ಲಮ ಕಾಣಿಸುತ್ತಾನೆ. ಪಾರ್ವತಿ ತನ್ನ ಪಂಥದ ತಪ್ಪನ್ನು ಒಪ್ಪಿಕೊಳ್ಳುತ್ತಾಳೆ. ಆಗ ಶಿವ ಇದು ಸೋಲಲ್ಲ, ಆದಿಶಕ್ತಿಯ ಚೈತನ್ಯ. ಈ ಲೀಲೆಯಿಂದ ಲೋಕಕ್ಕೆ ಶಿವತತ್ತ್ವದ ಮಹತ್ವ ವಿದಿತವಾದಂತಾಯಿತು ಎಂದು ಪಾರ್ವತಿಯನ್ನು ಹೊಗಳುತ್ತಾನೆ. ಇಲ್ಲಿಗೆ **'ಮಾಯಾ ಕೋಲಾಹಲ'** ಮುಕ್ತಾಯವಾಗುತ್ತದೆ. ಬೇರೆ ಬೇರೆ ಪ್ರಸಂಗಗಳಲ್ಲಿ ಅಲ್ಲಮನ ಪಾತ್ರ ಎಂತಹದು ಎಂಬುದನ್ನು **'ಅಲ್ಲಮ ಪ್ರಭು'** ಸಣ್ಣಾಟ, **'ಪ್ರಭುದೇವರ ಯಕ್ಷಗಾನ'** ವ್ಯಕ್ತಪಡಿಸುತ್ತವೆ.

ನೈತಿಕತೆ ರಕ್ಷಿಸಿಕೊಳ್ಳುವಾಗ ಇಂತಹದೇ ತಂತ್ರಗಳನ್ನು ಬಳಸಿಕೊಳ್ಳುವುದು ಸಾಮಾನ್ಯ ಸಂಗತಿ ಆಗಿ ಕಾಣಿಸುತ್ತದೆ. ಅಂಥ ತಂತ್ರ ಸಾತ್ವಿಕಿಯ ಮಾತಿನಲ್ಲಿ ಅಡಗಿದೆ.

ಅವಳ ಮನದ ರಹಸ್ಯ ಅರಿಯುವಷ್ಟು ಜ್ಞಾನಿ ಕೌಶಿಕನಲ್ಲ. ತನ್ನ ವಿಕಾರ ಗುಣದಿಂದಾಗಿ ಬೇರೇನೊಂದೂ ಕಾಣದ ಸ್ಥಿತಿಯಲ್ಲಿದ್ದಾನೆ. ಸಾತ್ವಿಕಿ ಅರಮನೆಗೆ ಬರಲು, ಅವಳೊಡನೆ ಸಂಯಮದಿಂದ ವರ್ತಿಸುವ ಗುಣ ಕೂಡ ಕಾಣಿಸುವದಿಲ್ಲ. ನೇರವಾಗಿ ಆಕೆಯನ್ನು ಸಮೀಪ ಕರೆದು ತನ್ನ ಬಯಕೆ ಈಡೇರಿಸಲು ಬೇಡಿಕೊಳ್ಳುತ್ತಾನೆ. ಅದಕ್ಕೆ ಅಕ್ಕನ ಪ್ರತಿಕ್ರಿಯೆ 'ಕಾಮವೊಂದು ಹೊಲೆ', ಮರುಳಮತಿಯಂತೆ ಒದ್ದಾಡದಿರಲು ಹೇಳುತ್ತಾಳೆ. ಅವನ ಕಾಮದ ಕಣ್ಣಿಗೆ ಬೇರೇನೂ ಕಾಣಿಸದ ಸಾತ್ವಿಕಿಯ ಸಾತ್ವಿಕ ಮಾತುಗಳು ಅವನ ಮೇಲೆ ಪರಿಣಾಮ ಬೀರಲಿಲ್ಲ. ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಎಂದು ಹೇಳಿದರೂ ದುಷ್ಟಬುದ್ಧಿ ತೋರಿಸುತ್ತಾನೆ ಕೌಶಿಕ. ಮುಟ್ಟಿದರೆ ಸುಟ್ಟು ಭಸ್ಮವಾಗಿ ಹೋಗುವಿ ಎಂದರೂ ತನ್ನ ಪುರುಷ ಪ್ರಬಲತೆ, ರಾಜದರ್ಪ ತೋರಿಸುತ್ತಲೇ ಹೋಗುತ್ತಾನೆ. ಶಿವಭಕ್ತನಾಗು ಎಂದು ಹೇಳುವ ಸಾತ್ವಿಕಿಯ ನೀತಿ ಅವನಿಗೆ ಇಷ್ಟವಾಗುವುದೇ ಇಲ್ಲ. ಬೋರ್ಗಲ್ಲ ಮೇಲೆ ನೀರೆರೆದಂತಾಯಿತು. ಮಕ್ಕಳಿಲ್ಲದವರಿಗೆ ಮುಕ್ತಿಯಿಲ್ಲ ಎಂದು ಕೌಶಿಕ ಹೇಳಿದಾಗ, ಸಾತ್ವಿಕಿ ಮುಕ್ತಿಯ ಅರ್ಥ ಹೇಳುತ್ತಾಳೆ. ಮುಟ್ಟಿದರೆ ಕೆಡುವಿ, ಮಧುವರಸನಂತೆ ದುಃಖಕ್ಕೆ ಗುರಿಯಾಗುವಿ. ಕಲ್ಯಾಣ ಪಟ್ಟಣದ ಹರಳಯ್ಯನ ಪ್ರಸಂಗ ಹೇಳಿದರೂ ಕೌಶಿಕನಿಗೆ ಬುದ್ಧಿ ಸ್ಥಿಮಿತಕ್ಕೆ ಬರಲಿಲ್ಲ. ಇವೆಲ್ಲ ಸಾತ್ವಿಕಿಯ ಬಡಿವಾರದ ಮಾತುಗಳಾಗಿ ಕಾಣಿಸುತ್ತವೆ. ಮತ್ತೆ ಸಂಸಾರ, ಸುಖ-ದುಃಖದ ಬಗ್ಗೆ ಚರ್ಚೆ ನಡೆಯುತ್ತದೆ. ಕೌಶಿಕ ಮತ್ತೆ ಮತ್ತೆ ಸೀರೆ ಸೆಳೆವ ಮಾತನಾಡುತ್ತಾನೆ. ಸೆಳೆಯಲೂ ಪ್ರಾರಂಭಿಸುತ್ತಾನೆ. ಸೆಳೆದು ಸೆಳೆದು ಸೋತು ಹೋಗುತ್ತಾನೆ. ಕಣ್ಣಿಗೆ ಕತ್ತಲೆ ಬರುತ್ತದೆ. ಆಗ ಅವಳನ್ನು ಶಿವಯೋಗಿಣಿ ಎಂದು ಒಪ್ಪಿಕೊಳ್ಳುತ್ತಾನೆ. ಕ್ಷಮಿಸಲು ಹೇಳುತ್ತಾನೆ. ಅವಳಿಂದಲೇ ಪರಿಹಾರ ಪಡೆದುಕೊಳ್ಳಲು ತವಕಿಸುತ್ತಾನೆ. ಅವನ ಪಶ್ಚಾತಾಪ, ತಾಯೆ ಎಂಬ ಸಂಬೋಧನೆ ಕೇಳಿ ಸಾತ್ವಿಕಿ ಕ್ಷಮಿಸಿ ಬಿಡುತ್ತಾಳೆ. ಇದು ಆಕೆಯ ದೊಡ್ಡಗುಣ. ಆಕೆಯನ್ನು ಗುರುವಾಗಿ ಸ್ವೀಕರಿಸಿದಾಗ ಅವನಿಗೆ ಮಂಗಲದ ಹರಕೆ ಕೊಟ್ಟಳು.

ಅಲ್ಲಮ ದೂತಿಯ ಜೊತೆ ಸಂವಾದ, ನಂತರ ಅಲ್ಲಮ ಸಾತ್ವಿಕಿಯ ನಡುವೆ ಸಂವಾದ ನಡೆದಿದೆ. ಅಲ್ಲಮ ಸಾತ್ವಿಕಿಯ ಮೇಲೆ ಆರೋಪ ಹೊರಿಸುತ್ತಾನೆ. ನೀನು ಜನರನ್ನು ಗೋಳಾಡಿಸಿ ಕಷ್ಟಕ್ಕೆ ನೂಕುವಿ ಎಂದು ಜರಿಯುತ್ತಾನೆ. ಇಲ್ಲಿ ಸಾತ್ವಿಕಿ ಅಲ್ಲಮನಿಗೆ ತಮ್ಮಾ ಎಂದು ಕರೆದಿರುವುದು ಆಶ್ಚರ್ಯದ ಸಂಗತಿ. ಚಾರ್ವಾಕ ಎಂಬ ಪಾತ್ರಕ್ಕೆ ಶಿವಶರಣರ ಮೈಮನದಲ್ಲಿ ಎಂದೂ ಹೊಲೆಯಿಲ್ಲ ಎಂದು ವಿನಂತಿಸಿಕೊಳ್ಳುತ್ತಾಳೆ. ಆಗ ಅಲ್ಲಮ ಸಾತ್ವಿಕಿ ಶರೀರವನ್ನೇ ಸೀಳಿ ತೋರಿಸಲು

ಆಕೆಯನ್ನು ಒಪ್ಪಿಸಿದರೆ, ದೂತಿಗೆ ಕೇಳಿದ್ದನ್ನು ಕೊಡುವುದಾಗಿಯೂ ಕೌಶಿಕ ರಾಜ ಭರವಸೆಯನ್ನು ಕೊಡುತ್ತಾನೆ. ಆಗ ಧೂತಿ ಸಾತ್ವಿಕಿ ಶುದ್ಧ ಶಿವಯೋಗಿಣಿ, ಆಕೆ ತನಗೆ ಮದುವೆ ಆಗಿದೆ ಎಂದು ಹೇಳುತ್ತಾಳೆಂಬ ಸತ್ಯ ಸಂಗತಿಯನ್ನು ತಿಳಿಸಿದರೂ ಕೌಶಿಕ ಆ ಪತಿ ಬೇರೆ ಯಾರೂ ಆಗಿರಲು ಸಾಧ್ಯವೇ ಇಲ್ಲ; ತಾನೇ (ಕೌಶಿಕನೇ) ಎಂದು ಆಕೆ ಹೇಳುತ್ತಾಳೆ. ಹೋಗಿ ಕೇಳು ಎನ್ನುವಷ್ಟರ ಮಟ್ಟಿಗೆ ಅವನಿಗೆ ವಿಶ್ವಾಸ ಹೇಳುತ್ತಾಳೆ. ಕುದುರೆಯೇರಿ ಬರುವಾಗಲೇ ನಾನು ಆಕೆಯ ಸಂಭ್ರಮನೋಡಿ, ಆಕೆಯ ಪ್ರೀತಿಯನ್ನು ಖಚಿತಪಡಿಸಿಕೊಂಡಿದ್ದೇನೆ ಎಂದು ಹೇಳಿಬಿಡುತ್ತಾನೆ. ನೋಡಿದ ಮಾತ್ರಕ್ಕೆ ನೀವು ಹೀಗೆ ಅಂದುಕೊಳ್ಳುವುದು ಸರಿಯಲ್ಲ ಎಂದು ದೂತಿ ತಿಳಿಸಿ ಹೇಳಿದಾಗಲೂ ಒಪ್ಪಿಕೊಳ್ಳುವುದಿಲ್ಲ.

ದೂತಿ ಸಾತ್ವಿಕಿ ಮನೆಗೆ ಬಂದು ಸಾವಕಾಶ ಮಾತು ತಗೆದು ಕೌಶಿಕನ ಮನದಿಂಗಿತದ ಶುಭ ವಾರ್ತೆ ತಿಳಿಸುತ್ತಾಳೆ. ಪರರ ಸುದ್ದಿ ತನಗೇಕೆಂದು ಸಾತ್ವಿಕಿ ತನ್ನ ನಿರಾಸಕ್ತಿಯನ್ನು ತೋರ್ಪಡಿಸುತ್ತಾಳೆ. ಮಿಥ್ಯ ವೈಭವಗಳಿಗೆ ಶಿವಶರಣರೆಂದೂ ಮಾರುಹೋಗರೆಂಬ ಸತ್ಯವನ್ನು ನಿಮ್ಮ ರಾಜನಿಗೆ ತಿಳಿಸು ಎಂದು ಹೇಳುತ್ತಾಳೆ. ದೂತಿ ಕೌಶಿಕನಿಗೆ ಈ ವಿಷಯವನ್ನು ಅರುಹುತ್ತಾಳೆ. ಕೌಶಿಕ ತನ್ನ ವಿಕೃತ ಸ್ವಭಾವದ ಮುಖವನ್ನು ಪರಿಚಯಿಸುತ್ತಾನೆ. ಭಾಷೆ ಒರಟಾಗುತ್ತದೆ. ಈಗ ಸಂಧಾನಕ್ಕೆ ಮಂತ್ರಿಯನ್ನೇ ಕಳಿಸುತ್ತಾನೆ. ನಿರ್ಮಲನೆದುರು ನಿಮ್ಮ ಭಾಗ್ಯದ ಬಾಗಿಲು ತೆರೆದಿದೆ, ಕೌಶಿಕ ನಿಮ್ಮ ಮಗಳನ್ನು ಇಷ್ಟಪಟ್ಟಿದ್ದಾನೆ ಎಂದೆಲ್ಲಾ ಹೇಳುತ್ತಾನೆ. ಈ ಮಾತುಗಳೆಲ್ಲ ಸಾತ್ವಿಕಿ ತಂದೆಗೆ ಅಪದ್ಧ ಮಾತುಗಳಾಗಿ ಕಾಣಿಸುತ್ತವೆ. ಭಕ್ತ-ಭವಿಗಳ ನಡುವೆ ಸಂಬಂಧ ಏರ್ಪಡದು ಎಂದು ನಿಷ್ಠುರವಾಗಿ ನುಡಿಯುತ್ತಾನೆ. ಇಲ್ಲಿ ನೀತಿಗೆ ಬೆಲೆಯಿಲ್ಲವೆಂಬುದು ಮಂತ್ರಿ ಮಾತಿನಿಂದ ಸ್ಪಷ್ಟವಾಗುತ್ತದೆ. ಯಾವುದೇ ರೀತಿಯ ಭೀತಿಯ ಮಾತುಗಳು ನಿರ್ಮಲನ ಮೇಲೆ ಪರಿಣಾಮ ಬೀರುವುದಿಲ್ಲ. ಶರಣರು ಪಾಪಕ್ಕೆ ಹೆದರಬಲ್ಲರೆ ಹೊರತು ಭೂಪರಿಗಲ್ಲ ಎಂದೂ ಹೇಳುತ್ತಾನೆ. ನನಗೆ ಏನೇ ಶಿಕ್ಷೆ ಕೊಟ್ಟರೂ ಸರಿಯೇ ವಿವಾಹ ವಿಚಾರ ಮಾತ್ರ ನಮಗೆ ಸಮ್ಮತವಿಲ್ಲದ ಸಂಗತಿ ಎಂದೇ ಹೇಳುತ್ತಾನೆ. ಅಲ್ಲಿಯವರೆಗೆ ಮೌನಿ ಆಗಿದ್ದ, ಈ ಮಾತುಗಳನ್ನು ಕೇಳಿಸಿಕೊಳ್ಳದೇ ಇದ್ದ ಸಾತ್ವಿಕಿ, ತನ್ನ ತಂದೆಯ ಬಂಧನಕ್ಕೆ ಕಾರಣ ಕೇಳುತ್ತಾಳೆ. ಆಗ ದೂತಿ ಹೊತ್ತು ತಂದ ವಿಷಯವನ್ನು ನೆನಪಿಸಿಕೊಡುತ್ತಾನೆ. ನನಗೋಸ್ಕರ ನನ್ನ ತಂದೆಗೇಕೆ ಶಿಕ್ಷೆ? ನಾನೇ ಬರುತ್ತೇನೆಂದು ಸಾತ್ವಿಕಿ ತಾನೇ ಹೋಗುವ ನಿರ್ಣಯಕ್ಕೆ ಬರುತ್ತಾಳೆ. ಆದರೆ ಒಂದು ಕರಾರನ್ನು ಹೇಳಿ, ಅದಕ್ಕೊಪ್ಪಿದರೆ ಅರಮನೆಗೆ ಬರುವ ವಿಷಯ ತಿಳಿಸುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಎಷ್ಟೋ ಜನಪದ ಕಥೆಗಳಲ್ಲಿ ಹೆಣ್ಣುಮಕ್ಕಳು ಪರಪುರುಷರಿಂದ ತಮ್ಮ ಶೀಲ,

ಅಲ್ಲಮನು ದೂತಿಯ ಜೊತೆ ಗುರುಲಿಂಗ ಜಂಗಮದ ಬಗ್ಗೆ; ತ್ರಿಮೂರ್ತಿಗಳ ಬಗ್ಗೆ, ತನ್ನ ಹೆಸರಿನ ಬಗ್ಗೆ ವಿಶ್ಲೇಷಣೆ ಕೊಡುತ್ತಾನೆ. ಸಂಸಾರದ ಬಲೆಯೊಳಗೆ ಬಿದ್ದು ಜ್ಞಾನವನ್ನು ಮಣ್ಣುಗೂಡಿಸುವ, ಆಚಾರಗೆಟ್ಟು ಅನಾಚಾರದ ಭಿಕ್ಷೆಯಿಂದ ತನ್ನ ಉದರ ತುಂಬಿಕೊಳ್ಳುವ ಹೀನ ತಾನಲ್ಲ ಎಂಬ ಪರಿಚಯ ಮಾಡಿಕೊಡುವುದನ್ನು ಗಮನಿಸಿದಾಗ ಶೂನ್ಯಸಂಪಾದನೆಯ ನೆನಪಾಗದೆ ಇರದು. ತಾನು ಶಿವಾಮೃತ ಉಣ್ಣುವ ನಿರಾಭಾರಿ ಜಂಗಮನೆಂದೂ ಶಿವಭಕ್ತರಾದ ಶಿವಶರಣ ಶರಣೆಯರ ಸತ್ವಪರೀಕ್ಷೆ ಮಾಡಿ ಅವರಿಗೆ ಸದ್ಗತಿಯನ್ನು ತೋರಿಸಿ, ಉದ್ಧಾರ ಮಾಡಲು ಬಂದ ಪರಮಗುರು ತಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಅಷ್ಟಾವರಣದ ಮಹತ್ವ ತಿಳಿಸುತ್ತಾನೆ. ತಾನು ಹುಟ್ಟು–ಸಾವು ಇಲ್ಲದ, ಆದಿ ಅನಾದಿ ಇಲ್ಲದ, ತಾಯಿ ತಂದೆ ಇಲ್ಲದ ಉಪಮಾತೀತ ಎಂದು ಪರಿಚಯಿಸಿಕೊಳ್ಳುತ್ತಾನೆ. ಆಗ ದೂತಿ ಎತ್ತುವ ಪ್ರಶ್ನೆಗಳು ವಾಸ್ತವ ಪ್ರಪಂಚದ ಪ್ರಶ್ನೆಗಳು. ಇನ್ನೊಂದು ಹೊಸ ಸಂಗತಿಯು ನಮ್ಮ ಗಮನಕ್ಕೆ ಬರುತ್ತದೆ. ಅಲ್ಲಮ–ಅಕ್ಕನ ಭೇಟಿ ಆದುದು ಬಸವಕಲ್ಯಾಣದ ಅನುಭವ ಮಂಟಪದಲ್ಲಿಯೇ ಎಂಬುದು ನಮಗೆಲ್ಲರಿಗೂ ತಿಳಿದ ಸಂಗತಿ. ಆದರೆ ಇಲ್ಲಿ ಅಕ್ಕನನ್ನು ಉಡತಡಿಯಲ್ಲಿಯೇ ಅಲ್ಲಮ ಕಾಣುತ್ತಾನೆ. ಆ ಭಕ್ತಿನಿಧಿಯನ್ನು ಕಾಣುವ ತವಕವನ್ನು ವ್ಯಕ್ತಪಡಿಸುತ್ತಾನೆ.

ದೂತಿಯೆ ಮೊದಲು ಅಕ್ಕನಲ್ಲಿಗೆ ಬರುತ್ತಾಳೆ. ಮತ್ತೆ ಇಬ್ಬರ ನಡುವೆ ಸಂವಾದ ನಡೆಯುತ್ತದೆ. ದೂತಿ ಒಬ್ಬ ಲೌಕಿಕಳಾಗಿ, ಲೌಕಿಕ ಸಮೂಹ ಪ್ರಜೆಯ ಪ್ರತಿನಿಧಿಯಾಗಿ ನಿಂತು ಮಾತನಾಡುವಂತೆ ಕಂಡರೆ, ಅಕ್ಕ ಲೌಕಿಕ ಜಂಜಡದಿಂದ ದೂರ ಉಳಿದ ವಿರಕ್ತ ಜೀವನದ ಪ್ರತಿನಿಧಿಯಾಗಿ ಮಾತನಾಡುತ್ತಾಳೆ. ಆದರೆ ಇಲ್ಲಿ ಕವಿ ಅಕ್ಕನಿಂದ ದೂತಿಯನ್ನು ಪರಿಚಯಿಸಿ ಕೊಡುವಾಗ 'ಶರಣದಾಸಿ' ಎಂದು ಪರಿಚಯಿಸಿದ್ದು, ಶರಣರ ಪಾರಿಭಾಷಿಕ ಪದಗಳಿಗೆ ಭಿನ್ನವಾದುದು. ಹೀಗಾಗಿ ಇಂಥೆಡೆಗಳಲ್ಲಿ ಶರಣರ ಭಾಷೆಯನ್ನು ಬಳಸಿಕೊಳ್ಳಲು ಕರ್ತೃವಿಗೆ ಸಾಧ್ಯವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಕ್ಕಮಹಾದೇವಿಗೆ ಶಂಕರನೆಂಬೊಬ್ಬ ಸಹೋದರನಿದ್ದ ಎಂದು ಇಲ್ಲಿ ಬರುತ್ತದೆ. ಅಕ್ಕನ ಪೂಜೆಗೆ ಬೇಕಾದ ಹೂಪತ್ರಿಗಳನ್ನು ಪ್ರೀತಿಯಿಂದ ತಂದುಕೊಡುವ ಕೆಲಸ ಅವನದಾಗಿತ್ತು. ಅಕ್ಕ ಪೂಜೆ ಮಾಡಿ ಆ ಸುಖವನ್ನು ಹಂಚಿಕೊಳ್ಳುತ್ತ ಅದರ ಮುಂದೆ ಬೇರೆ ಇನ್ನೇನೂ ಸಮಬಾರದು ಎಂಬ ಸಂಗತಿಯನ್ನು ಹೇಳುತ್ತಾಳೆ. ಇಲ್ಲೆಲ್ಲ ಒಂದಿಷ್ಟು ಒರಟುತನವೇ ಹೆಚ್ಚು ಕಾಣಿಸಿಕೊಳ್ಳುತ್ತದೆ.

ಅಲ್ಲಮ ಅಕ್ಕನ ದಿವ್ಯತೇಜಸ್ಸನ್ನು ಕಾಣುತ್ತಾನೆ. ಆಕೆಯ ಸಮಾಧಿಸ್ಥಿತಿ, ಸಿದ್ಧಿ ನೋಡಿ ಬೆರಗಾಗುತ್ತಾನೆ. ಭಕ್ತಿ ಜ್ಞಾನ ವೈರಾಗ್ಯದ ಮುಪ್ಪುರಿ ಆದ ಮಹಾದೇವಿಯನ್ನು ಉದ್ಧರಿಸುತ್ತೇನೆ ಎನ್ನುತ್ತ ಆಡುವ ಮಾತುಗಳು ಅಲ್ಲಮ ತಾನೇ ಶಿವ, ಶಿವನೇ

ಹೇಳುತ್ತಾನೆ. ಸಾತ್ವಿಕಿ ಹಾಗೇ ಮಾಡಲು ಸಿದ್ಧಳಾಗುತ್ತಾಳೆ. ಆಗ ಅಲ್ಲಮ ಪ್ರತ್ಯಕ್ಷನಾಗಿ ಆಕೆಯನ್ನು ಧನ್ಯಳನ್ನಾಗಿ ಮಾಡುತ್ತಾನೆ. ಅಲ್ಲಮ ಸಾತ್ವಿಕಿಯನ್ನು ಎರಡು ಸಾರೆ ಕಂಡರೂ ಉಡುತಡಿಯಲ್ಲಿಯೇ ಕಂಡಿದ್ದಾನೆ. ಇಲ್ಲಿ ಕಲ್ಯಾಣದ ಪ್ರಸ್ತಾಪವಿಲ್ಲ. ಅನುಭವ ಮಂಟಪದಲ್ಲಿ ಪರೀಕ್ಷೆ ನಡೆದ ಸಂಗತಿ ಇಲ್ಲ. ಮಹಾದೇವಿ ಅಕ್ಕನೆಂಬ ಹೆಸರಿನ ಬದಲು ಸಾತ್ವಿಕಿ ಎಂದೇ ಇಲ್ಲಿ ಕರೆಯಲಾಗಿದೆ. ಹೀಗೆ ಬೇರೆ ಬೇರೆ ಪ್ರಸಂಗಳನ್ನು ತಂದು ಅಲ್ಲಮನ ವ್ಯಕ್ತಿತ್ವವನ್ನು ಕವಿ ಪರಿಚಯಿಸಿ ಕೊಟ್ಟಿದ್ದಾನೆ.

ಅಕ್ಕಮಹಾದೇವಿ (ಸಣ್ಣಾಟ) : 'ಅಲ್ಲಮಪ್ರಭು' ಸಣ್ಣಾಟದ ಕರ್ತೃ ಶಿವಾನಂದ ಕವಿಯೇ 'ಅಕ್ಕಮಹಾದೇವಿ' ಸಣ್ಣಾಟದ ಕರ್ತೃ ಆಗಿದ್ದಾನೆ. ಶ್ರೀ ಶಿವಾನಂದ ಕವಿಗಳು ಕ್ರಿ.ಶ ೧೯೪೫೭ ವರೆಗೆ ಜೀವಿಸಿದ್ದರೆಂದು ತಿಳಿದು ಬರುತ್ತದೆ. ಈ ಸಣ್ಣಾಟದ ರಚನೆಯ ಕಾಲ ಸುಮಾರು ಕ್ರಿ.ಶ. ೧೯೩೦-೧೯೪೦ ಎಂದು ಹೇಳಲಾಗುತ್ತದೆ.

ಹನ್ನೆರಡನೆಯ ಶತಮಾನದ ಮೇರು ಕಿರೀಟದಂತೆ ಕಂಡು, ಅರುಹಿನಲ್ಲಿ ಹಿರಿಯತನದ ಸ್ಥಾನ ಪಡೆದವಳು ಅಕ್ಕಮಹಾದೇವಿ. ಇಂಥ ವ್ಯಕ್ತಿತ್ವವನ್ನು ಸಣ್ಣಾಟದ ಮೂಲಕ ಪ್ರದರ್ಶನಕ್ಕೆ ಅಣಿಮಾಡಿಕೊಟ್ಟವರು ಶ್ರೀ ಶಿವಾನಂದ ಕವಿಗಳು. ಜನಪದರ ಸೂಕ್ಷ್ಮವಾದ ಜೀವನ ಗ್ರಹಿಕೆ ಶಿಷ್ಟ ಕವಿಗಳಿಗಿಂತ ಭಿನ್ನವಾಗಿರುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಅವರು ಬದುಕನ್ನು ಪ್ರೀತಿಸುವಂತೆ, ಉತ್ತಮ ಜನರನ್ನು ಪ್ರೀತಿಸಿ ಹಚ್ಚಿಕೊಳ್ಳುತ್ತಾರೆ. ಆದರೆ ಸ್ವಭಾವ ವಿರೋಧವಾಗಿ ಕಂಡಲ್ಲಿ ಅದನ್ನು ಮುಲಾಜಿಲ್ಲದೆ ನಿರಾಕರಣೆ ಮಾಡಿಬಿಡುತ್ತಾರೆ. ಆ ಗುಣಗಳನ್ನು ಈ ಕೃತಿಯ ಪಾತ್ರಗಳ ಮೂಲಕ ಪರಿಚಯಿಸಿ ಕೊಡುವ ಪ್ರಯತ್ನ ನಡೆದಿದೆ. ಈ ಸಣ್ಣಾಟ ವಿಘ್ನೇಶ್ವರ, ದುರ್ಗಾದೇವಿ, ಸರಸ್ವತಿ, ಲಕ್ಷ್ಮಿ, ಶಿವ, ಬಸವೇಶ್ವರ, ದುರಿತ ನಿವಾರಣ ಮಾಡುವ ಗಿರಿಜಾರಮಣನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ.

ಈ ಆಟ ಅಲ್ಲಮ ದೂತಿಯೊಂದಿಗೆ ಸಂವಾದ ನಡೆಸುವ ಪ್ರಸಂಗದಿಂದ ಅನಾವರಣಗೊಳ್ಳುತ್ತದೆ. ಇಲ್ಲಿ ಕರ್ತೃ ಶಿವಾನಂದ ಅವರು ತಮ್ಮ ಸಮಕಾಲೀನ ವ್ಯವಹಾರಿಕ ಭಾಷೆಯನ್ನು ಬಳಸುತ್ತಾರೆ. ಅದು ಧಾರ್ಮಿಕ ಪುರುಷರನ್ನು ಸಂಬೋಧಿಸುವಲ್ಲಿಯೂ ಎದ್ದು ಕಾಣಿಸುತ್ತದೆ. ಅಲ್ಲಮನ ಕಾವಿವೇಷ, ಚಿಗರಿ ಚರ್ಮ, ರುದ್ರಾಕ್ಷಿ ಮಾಲೆಗಳನ್ನು ನೋಡಿ 'ಪಾದ್ರಿ ಸಾಬಾ' ಎಂದು ಕರೆದಿರುವುದು ಆಶ್ಚರ್ಯ. ಆಮೇಲೆ ಅಲ್ಲಾನೋ? ಮುಲ್ಲಾನೋ? ಎಂದು ಹೇಳುವುದನ್ನು ಗಮನಿಸಬಹುದಾಗಿದೆ. ತನ್ನ ಸಮಕಾಲೀನ ಸಂದರ್ಭದ ಆಡಳಿತಾತ್ಮಕ ವ್ಯವಸ್ಥೆ ಸಹಜವಾಗಿ ಕವಿಯ ಮನಸ್ಸನ್ನು ವ್ಯಾಪಿಸಿದ ಕಾರಣ, ಆ ಭಾಷೆ, ಅಂದಿನ ವ್ಯವಸ್ಥೆಯ ಸಂಗತಿಗಳನ್ನು ತಂದಿರಬಹುದೆಂಬುದು ತೋರುತ್ತದೆ.

ಹೋಗುತ್ತಾರೆಂದೂ ಅಪ್ಪಣೆ ಕೊಡಿಸುತ್ತಾನೆ. ಮತ್ತೆ ಶ್ರೀಶೈಲದ ಕದಳಿವನದಲ್ಲಿ ತಮ್ಮ ನಿಜರೂಪ ತೋರಿಸುವ ಭರವಸೆ ಕೊಡುತ್ತಾನೆ. ಅಕ್ಕ ಅಲ್ಲಮರನ್ನು ಪೂಜಿಸಿ, ಧನ್ಯಳಾದೆನೆಂದು ಅಕ್ಕ ತೃಪ್ತಿ ಪಡುತ್ತಾಳೆ. ಇಲ್ಲಿಗೆ ಮೊದಲ ಅಂಕ ಮುಗಿಯುತ್ತದೆ.

ಅಂಕ ಎರಡರಲ್ಲಿ ಅಕ್ಕಮಹಾದೇವಿಯ ತಂದೆ ನಿರ್ಮಲಶೆಟ್ಟಿ ಕುಬುಸದ ಖಣಾ ಮಾರುವವನಾಗಿ ಬರುತ್ತಾನೆ. ಬೆಳಗಿನಿಂದ ಪ್ರಯತ್ನಿಸಿದರೂ ಒಂದೂ ಖಣಾ ವ್ಯಾಪಾರವಾಗದೇ ಇರುವುದಕ್ಕೆ ಖಿನ್ನನಾಗಿದ್ದಾನೆ. ನಿರ್ಮಲಸೆಟ್ಟಿಯ ಹೆಂಡತಿಯ ಹೆಸರು ಇಲ್ಲಿ ಬಸವಲಿಂಗಿ ಎಂದು ಬಂದಿದೆ. ಈ ಹೆಸರು ಎಲ್ಲಿಯೂ ಉಲ್ಲೇಖಿತವಾಗಿಲ್ಲ. ಆಕೆ ದುರಗವ್ವನ ಬೇನೆಯಲ್ಲಿ ಸತ್ತು ಹೊದದ್ದು, ಅಕ್ಕನ ಶಿವಪೂಜೆಯನ್ನು ನಿರ್ಮಲಶೆಟ್ಟಿ 'ಅದೆಂಥಾ ಸುಡಗಾಡ ಶಿವಯೋಗವೋ? ಎಲ್ಲಿ ಕಲ್ತಾಳೋ ಏನೋ?' ಎಂದು ಹೇಳಿರುವ ಮಾತುಗಳನ್ನು ಕೇಳಿದರೆ ಆಶ್ಚರ್ಯವಾಗದೇ ಇರದು. ಅಕ್ಕನ ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ ಇಬ್ಬರೂ ಶಿವಪೂಜೆ ನಿಷ್ಠರೆಂದೇ ಶಿಷ್ಟಕಾವ್ಯಗಳು ಮತ್ತು ಮೌಖಿಕ ಸಾಹಿತ್ಯ ಸಾರಿ ಹೇಳುತ್ತವೆ. ಆದರೆ ಈ ಸಣ್ಣಾಟದ ಕರ್ತೃ ಇಲ್ಲಿ ವಿಚಿತ್ರ ಪ್ರಸಂಗವನ್ನು ರೂಪಿಸಿಕೊಂಡಿದ್ದಾನೆ. ಆದರೆ ಅಕ್ಕನನ್ನು ಹೆತ್ತವರು ಇಷ್ಟು ಸಂಸ್ಕಾರಹೀನರಿದ್ದರೆ? ಎಂಬ ಪ್ರಶ್ನೆಯನ್ನು ಓದುಗರಲ್ಲಿ ಮೂಡಿಸದೇ ಇರದು. ಇದೇ ನಿರ್ಮಲಶೆಟ್ಟಿ ಕೊನೆಗೆ ಕೌಶಿಕನ ಪ್ರಸಂಗ ಬಂದಾಗ ಮಾತ್ರ ಮತ್ತೆ ಸಂಸ್ಕಾರವಂತನಾಗಿ ವರ್ತಿಸುತ್ತಾನೆ. ತನ್ನ ಮಗಳಪರವಾಗಿ ಮಾತನಾಡಿ ಮತ್ತೆ ತಂದೆತನದ ಜವಾಬ್ದಾರಿಯನ್ನು ಉಳಿಸಿಕೊಳ್ಳುತ್ತಾನೆ.

ಆಮೇಲೆ ಕೌಶಿಕ ಮತ್ತು ದೂತಿಯ ನಡುವೆ ಸಂವಾದ ನಡೆಯುತ್ತದೆ. ದೂತಿ ಸಂಧಾನಕಾರಳಾಗಿ ಅಕ್ಕನಲ್ಲಿಗೆ ಹೋಗಿ ಕೌಶಿಕನೊಂದಿಗೆ ಮದುವೆ ಆಗಲು ಒಪ್ಪಿಸುವ, ಒತ್ತಾಯಿಸುವ ಕೆಲಸಕ್ಕೆ ಅಣಿ ಆಗುತ್ತಾಳೆ. ಆದರೂ ಇಲ್ಲಿ ಕೌಶಿಕನ ಹೆಂಡತಿ ಚಾರುಮತಿ ಹೆಣ್ಣಾಗಿ, ಹೆಂಡತಿಯಾಗಿ ತಾನು ಏನು ಹೇಳಲು ಸಾಧ್ಯವೋ ಅಂಥ ನೈತಿಕತೆಯ ಎಚ್ಚರಿಕೆಯನ್ನು ಮೂಡಿಸಲು, ಪರನಾರಿ ವ್ಯಸನವನ್ನು ಬಿಡು ಬಿಡು ಎಂದು ಹೇಳಲು ಪ್ರಯತ್ನಿಸಿ ಸೋಲುತ್ತಾಳೆ. ರಾಜವಂಶದಲ್ಲಿ ಹುಟ್ಟಿ ಇಂಥ ಪಾಪದ ಕೆಲಸ ಮಾಡುವದು ನ್ಯಾಯಯುತ ಮಾರ್ಗವಲ್ಲವೆಂದು ಎಚ್ಚರಿಸುತ್ತಾಳೆ. ಒಳ್ಳೆಯ ಮಾತುಗಳು ಕೌಶಿಕನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಹೆಂಡತಿಯನ್ನು ಮಹಾದೇವಿಗೋಸ್ಕರ ಬಹಳ ಕ್ರೂರವಾಗಿ ನಡೆಸಿಕೊಳ್ಳುತ್ತಾನೆ. ಹೆಂಡತಿ ಮತ್ತೂ ತಿಳಿ ಹೇಳುತ್ತಾಳೆ. ಪದಭ್ರಷ್ಟನಾಗುವಿ ಎಂದು ಭವಿಷ್ಯನುಡಿಯುತ್ತಾಳೆ. ದೂತಿಯ ಕೈಯಲ್ಲಿ ದಿವ್ಯ ವಸ್ತ್ರ ಆಭರಣಗಳನ್ನು ಕೊಟ್ಟು ಮಹಾದೇವಿಯನ್ನು ಒಪ್ಪಿಸಿ, ಕರೆತರಲು ಹೇಳುತ್ತಾನೆ.

ತಾನು ಎಂಬಂತೆ ನುಡಿಯುತ್ತಾನೆ. ಗುಡ್ಡವ್ವೆ, ನಂಬಿ, ಬಾಣಾಸುರನ ಭಕ್ತಿಗೆ ಶಿವನು ಒಲಿದು ಅವರ ಸೇವೆ ಮಾಡಿದ ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಾನೆ. ಈಗ ಅಕ್ಕನನ್ನು ಉದ್ಧರಿಸುವ ಸಮಯ ಎಂದುಕೊಳ್ಳುತ್ತಾನೆ. ಅಕ್ಕನ ಸಮಾಧಿಸ್ಥ ಸ್ಥಿತಿಯಲ್ಲಿ ಕಾಣಿಸಿಕೊಳ್ಳುತ್ತಾನೆ. ಕಣ್ಣುಬಿಟ್ಟು ನೋಡಿದಾಗ ಯಾರೂ ಕಾಣದೇ ಹೋದಾಗ ಮತ್ತೆ ಧ್ಯಾನಸ್ಥ ಸ್ಥಿತಿಗೆ ಹೋಗುತ್ತಾಳೆ. ಮತ್ತೆ ಮತ್ತೆ ಅಲ್ಲಮ ಆಕೆಯ ಧ್ಯಾನಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತ ಆಕೆಯ ಏಕಾಂತಕ್ಕೆ ವಿಘ್ನವೊಡ್ಡುತ್ತಾನೆ. ಆದರೂ ಅಕ್ಕ ವಿಚಲಿತಳಾಗುವದಿಲ್ಲ. ಅವಳ ದೃಢ ಸಂಕಲ್ಪ ಕಂಡು ಅವಳೆದರು ಜಾಗ್ರತಾವಸ್ಥೆಯಲ್ಲಿ ಅಲ್ಲಮ ಕಾಣಿಸಿಕೊಳ್ಳುತ್ತಾನೆ. ದೂತಿಯ ಮುಂದೆ ಜಂಬದಿಂದ ಮಾತನಾಡಿದ ಅಲ್ಲಮ ಅಕ್ಕನ ಎದರು ವಿನೀತನಾಗಿ ಮಾತನಾಡುತ್ತಾನೆ. ಯಾರೂ ಕೇಳದ ಬಡ ಜಂಗಮ ತಾನೆಂದು ಪರಿಚಯಿಸಿಕೊಳ್ಳುತ್ತಾನೆ. ಜಗದ ವೇಷಧಾರಿ ಜಂಗಮರು ಕೋಣನಂತೆ ತಿರುಗುವ ಕ್ರಮವನ್ನು ಖಂಡಿಸುತ್ತಾನೆ. ಅಂಥ ಕೋಣರಿಗೆ ಬುದ್ಧಿ ಹೇಳಲು ಹೋಗಿ, ಎಲ್ಲರಿಂದ ಹುಚ್ಚನೆಂಬ ಪಟ್ಟ ಪಡೆದ ಬವಣೆಯನ್ನು ತೋಡಿಕೊಳ್ಳುತ್ತಾನೆ. ತನ್ನನ್ನು ಸಂಕಟದಿಂದ ಪಾರುಮಾಡಲು ವಿನಮ್ರದಿಂದ ಅಕ್ಕನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಈ ಸನ್ನಿವೇಶ ಸಂಪೂರ್ಣ ಹೊಸ ಸೃಷ್ಟಿಯಾಗಿ ಕಾಣಿಸುತ್ತದೆ.

ಸಿದ್ಧರಾಮನನ್ನು ಅಷ್ಟಾವರಣ ಸಂಪನ್ನನನ್ನಾಗಿಸಲು ಪ್ರಯತ್ನಿಸಿದಾಗ ಎದುರಾದ ನೊಸಲಗ್ಗಣ್ಣ ಉರಿಯ ಜ್ವಾಲೆಯ ಪಸರಿಸುವಿಕೆಯನ್ನು ಅಲ್ಲಮ ಹೇಳುತ್ತಾನೆ. ಶಿವನನ್ನು ನಿಂದಿಸಲು ಪ್ರಯತ್ನಿಸಿದಾಗ, ಅಕ್ಕ ಶಿವನನ್ನು ಸಮರ್ಥಿಸಿಕೊಳ್ಳುತ್ತಾಳೆ. ಇಡೀ ಲೋಕವನ್ನೆ ವಿಷದ ಜ್ವಾಲೆಯಿಂದ ರಕ್ಷಿಸಿದ ಶಿವನ ಲೀಲೆಯನ್ನು ಹೇಳಿ, ಶಿವನನ್ನು ಬಣ್ಣಿಸುತ್ತಾಳೆ. ಹೀಗೇ ಬೇರೆ ಬೇರೆ ಶಿವನ ಲೀಲೆಗಳನ್ನು ಅಕ್ಕ ಹೇಳುತ್ತ ಹೋಗುವುದು, ಅಲ್ಲಮ ಪ್ರಶ್ನಿಸುತ್ತ ಹೋಗುವುದು, ಇಂಥ ಸಂವಾದವನ್ನು ಬೆಳೆಸುವುದು ಇಲ್ಲಿಯ ಕಥೆಯ ಮುಖ್ಯ ಅಂಶವಾಗಿ ಕಾಣಿಸುತ್ತದೆ. ಅಕ್ಕ ಬಂದವರು ಮತ್ತಾರೂ ಆಗಿರಲು ಸಾಧ್ಯವೇ ಇಲ್ಲ, ಅಲ್ಲಮಪ್ರಭುಗಳೇ ಎಂದು ಖಚಿತಪಡಿಸಿಕೊಂಡು ಬಣ್ಣಿಸುತ್ತಾಳೆ. ಆಗ ಅಕ್ಕನೂ ಸಾಮಾನ್ಯಳಲ್ಲ ಸಾಕ್ಷಾತ್ ಪಾರ್ವತಿಯೆ ಎಂದು ಅಲ್ಲಮ ಬಣ್ಣಿಸುತ್ತಾನೆ. ಅಕ್ಕ ಅಲ್ಲಮನನ್ನು ಪೂಜಿಸಹೋದಾಗ ಅಲ್ಲಮ ಮಾಯವಾಗಿ ಬಿಡುತ್ತಾಳೆ. ಆಗ ಮತ್ತೆ ದೂತಿ ಪ್ರವೇಶಿಸುತ್ತಾಳೆ. ಅಕ್ಕನ ಹುಡುಕಾಟವನ್ನು ಗಮನಿಸಿ ಕಳೆದುಕೊಂಡ ಗುರುಲಿಂಗ ಜಂಗಮರೂಪಿ ಅಲ್ಲಮನ ವಿಷಯ ಹೇಳುತ್ತಾಳೆ. ದೂತಿ ಸಂಧಾನ ಮಾಡಿಸಿ, ಅಲ್ಲಮನನ್ನು ಕರೆತರುತ್ತಾಳೆ. ಅಲ್ಲಮ ಅಕ್ಕನಿಗೆ ಶಿವಭಕ್ತಿ ಪ್ರಭಾವನ್ನು ಜಗತ್ತಿನಾದ್ಯಂತ ಹರುಡುವಂತೆ ಮಾಡೆಂದು ಹರಸಿ, ಉಡುತಡಿ ಪಟ್ಟಣದಲ್ಲಿರಲು ಹೇಳುತ್ತಾನೆ. ಅಕ್ಕನಿಗೆ ಪ್ರತಿಕೂಲ ಆಗುವವರು, ಅಕ್ಕನ ಶಾಪದಿಂದ ಸುಟ್ಟು

ಅದಕ್ಕೆ ಅಕ್ಕ ಒಪ್ಪಿಕೊಳ್ಳುವದಿಲ್ಲ. ಅಕ್ಕನಿಗೆ ಬಲವಾದ ಬೆಂಬಲವಾಗಿ ಸಹೋದರ ಶಂಕರ ನಿಲ್ಲುತ್ತಾನೆ.

ಮಹಾದೇವಿ ದೂತಿಯ ಕೂಡ ಬಂದ ಸುದ್ದಿ ತಿಳಿದ ಕೌಶಿಕ ಆಗಲೇ ಮನದಲ್ಲಿ ಗಾಂಧರ್ವ ವಿವಾಹದ ಲೆಕ್ಕಾಚಾರ ಹಾಕಿಕೊಳ್ಳುತ್ತಾನೆ. ಆದರೆ ಆಗುವುದೇ ಬೇರೆ. ಅಕ್ಕ ಬಂದೊಡನೆ ಸಲುಗೆ ತೋರಲು ಹೋಗಿ ಕೌಶಿಕ ಛೀಮಾರಿ ಹಾಕಿಸಿಕೊಳ್ಳುತ್ತಾನೆ. ಅಕ್ಕ ಕೌಶಿಕನನ್ನು ಪಾಪಿಷ್ಟ, ದುರಾತ್ಮ ಎಂದು ದೂಷಿಸುತ್ತಾಳೆ. ದೂರ ನಿಂತು ಮಾತನಾಡಲು ಎಚ್ಚರಿಕೆ ಕೊಡುತ್ತಾಳೆ. ಸಮೀಪ ಬಂದರೆ ಪರಿಣಾಮ ನೆಟ್ಟಗಾಗುವದಿಲ್ಲ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದೂ ಹೇಳುತ್ತಾಳೆ. ಆದರೂ ಕಾಮಿ ಆದ ಕೌಶಿಕನಿಗೆ ಇದಾವುದೂ ಕೇಳಿಸುವುದೇ ಇಲ್ಲ. ಮಡದಿಯೆಂದೇ ಕರೆಯಲು ಪ್ರಾರಂಭಿಸುತ್ತಾನೆ. ಪ್ರಣಯ ಪ್ರಲಾಪವನ್ನು ಮುಂದೊಡ್ಡತ್ತಲೇ ಇರುತ್ತಾನೆ. ಅಕ್ಕ ಬುದ್ಧಿ ಹೇಳುತ್ತಲೇ ಹೋಗುತ್ತಾಳೆ. ಕಾಯದ ನಶ್ವರತೆಯನ್ನು ಮನವರಿಕೆ ಮಾಡಿಕೊಡುತ್ತಾಳೆ. ನರಜನ್ಮ ಪುಣ್ಯಫಲದಿಂದ ಪ್ರಾಪ್ತವಾಗಿರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ಹೇಳುತ್ತಾಳೆ. ಶರಣರು ಎಂದೂ ತಪ್ಪು ಮಾಡಲಾರರು ಎಂದು ವಿಶ್ವಾಸದಿಂದ ಸಮರ್ಥಿಸಿಕೊಳ್ಳುತ್ತಾಳೆ. ಇನ್ನೂ ಮಗು ಗರ್ಭದಲ್ಲಿದ್ದಾಗಲೇ ಲಿಂಗಧಾರಣೆ ಆಗುತ್ತದೆ. ಹೀಗಾಗಿ ಅವರು ತಪ್ಪು ಮಾಡಲಾರರು ಎಂಬುದು ಅಕ್ಕನ ವಾದ. ಕೌಶಿಕನ ಪ್ರತಿವಾದ ಸೌಂದರ ನಂಬಿ ಶಿಶುಹತ್ಯೆ ಏಕೆ ಮಾಡಿದ? ಎಂದು. ಹೀಗೆ ಚರ್ಚೆ ಮುಂದುವರಿಯುತ್ತದೆ. ಮುಸುಡೆ ಚೌಡಯ್ಯ ಮುಂತಾದ ಶರಣರ ಪರಿಚಯ ಮಾಡಿಕೊಡುತ್ತಾಳೆ.

ಮತ್ತೆ ಮತ್ತೆ ಕೌಶಿಕ ಮೈಕೈ ಮುಟ್ಟುವ ಪ್ರಯತ್ನ ಮುಂದುವರೆಸಿದಾಗ 'ಥೂ ಮೂರ್ಖಾ ! ಸರ್ಪನ ತಲೆಯೊಳಗಿನ ರತ್ನವು ಏನು ಮಾಡಿದರೂ ಸಿಗುವದಿಲ್ಲ'. ಹೀಗೆ ನಿನ್ನ ಉದ್ಧಟತನ ಮುಂದುವರೆದರೆ ಪರಿಣಾಮ ನೆಟ್ಟಗಾಗುವುದಿಲ್ಲ. ಅಷ್ಟಾವರಣ ಸಂಪನ್ನನಾಗಿ ಶಿವಭಕ್ತನಾಗು ಎಂದು ಹೇಳಿದರೂ ಮತ್ತೆ ತನ್ನ ದುಷ್ಟತನ ಮುಂದುವರಿಸುತ್ತಾನೆ. ಆಗ ಅಕ್ಕ ಹಾಕುವ ಶಾಪ ಜನಪದರ ಅಂತರಂಗದ ದನಿಯಾಗಿ ಹೊರಬಂದಿದೆ. 'ನಿನ್ನನ್ನು ಉಡುತಡಿ ಪಟ್ಟಣದೊಳಗೆ ಭಿಕ್ಷೆ ಬೇಡಲು ಹಚ್ಚದಿದ್ದರೆ ನಾನು ಉಟ್ಟ ಸೀರೆಗೆ ನಿಲಿಗೆಯೆ ಇಲ್ಲ' ಎಂದು ಹೇಳಿರುವ ಮಾತು ಇಲ್ಲಿ ಗಮನಾರ್ಹ. ಅಕ್ಕ ಮಾಯವಾಗುತ್ತಾಳೆ. ಕೌಶಿಕ ಹುಚ್ಚಾಗಿ ಹುಡುಕುತ್ತಾನೆ. ದೂತಿ ಸಹಾಯಕ್ಕೆ ಬರುತ್ತಾಳೆ. ಮಹಾದೇವಿ ಇಲ್ಲದೆ ತನ್ನ ಜೀವ ಉಳಿಯುವದಿಲ್ಲ. ಆಕೆಗಾಗಿ ತಾನು ಸತ್ತರೂ ಚಿಂತೆ ಇಲ್ಲ ಎಂಬ ತೀರ್ಮಾನ ಕೌಶಿಕನದು.

ಮಹಾದೇವಿ ದೂತಿಯ ಶ್ರಮದಿಂದ ಮತ್ತೆ ಸಿಗುತ್ತಾಳೆ. ಕೌಶಿಕನೆದುರು ಬರುತ್ತಾಳೆ. ದುಡುಕಿ ಕೌಶಿಕ ಅಕ್ಕನ ಸೀರೆ ಸೆಳೆಯುತ್ತಾನೆ. ಎಷ್ಟು ಸೆಳೆದರೂ

ಅಂಕ ಮೂರರಲ್ಲಿ ಮಹಾದೇವಿಯ ಮನೆಗೆ ದೂತಿ ಬರುತ್ತಾಳೆ. ಆಸೆ ತೋರಿಸುವ ಮಾತಿನೊಂದಿಗೆ ರಾಜನ ವಿಚಾರಗಳನ್ನು ಮಹಾದೇವಿಯ ಮುಂದೆ ದೂತಿ ಇಡುತ್ತಾಳೆ. ಇಬ್ಬರ ನಡುವೆ ಲೌಕಿಕ ಮಾತುಕತೆ ನಡೆಯುತ್ತದೆ. ಆಭರಣಗಳನ್ನು ಮಹಾದೇವಿ ನಿರಾಕರಿಸುತ್ತಾಳೆ. ತನಗೆ ಒಡವೆ ವೈಯ್ಯಾರ ಬೇಡವೆನ್ನುತ್ತಾಳೆ. ಇಂಥ ಒಡವೆಗಳನ್ನು ಪಡೆದ ವಿಷಯ ರಾಜನಿಗೆ ತಿಳಿದರೆ ತಮಗೆ ಶಿಕ್ಷೆ ಆಗುತ್ತದೆಂದೂ ಹೇಳುತ್ತಾಳೆ ಅಕ್ಕ. ಇವುಗಳನ್ನು ರಾಜನೇ ಕಳಿಸಿದ್ದಾನೆಂದು ದೂತಿ ಹೇಳಿದಾಗ ಅಕ್ಕನಿಗೆ ಆಶ್ಚರ್ಯ. ಹಾಗಾದರೆ ಕೊಟ್ಟು ಹೋಗು ಎಂದು ಬಿಡುತ್ತಾಳೆ. ಅದರ ಹಿಂದಿರುವ ಉದ್ದೇಶ ಆಕೆಗೆ ತಿಳಿದಿಲ್ಲ. ಆಗ ಆ ವಿಷಯವನ್ನು ದೂತಿ ಅಕ್ಕನಿಗೆ ಸ್ಪಷ್ಟಪಡಿಸಲು ಪ್ರಯತ್ನಿಸುತ್ತಾಳೆ. ರಾಜ ಇವುಗಳನ್ನು ನಾನು ಸನ್ಯಾಸಿ ಇರುವುದರಿಂದ ಅವುಗಳನ್ನು ಸುಟ್ಟು ಬೂದಿ ಹಚ್ಚಿಕೊಳ್ಳಲು ಕಳಿಸಿರುತ್ತಾನೆ. ಅಷ್ಟೆ ಕಾರಣ ಈಗಿಂದಲೇ ಈ ಆಭರಣಗಳನ್ನು ಸುಟ್ಟುಬಿಡುತ್ತೇನೆ ಎಂದು ಹೇಳುವಲ್ಲಿ ಅಕ್ಕನ ಮುಗ್ಧತೆ, ನಿರ್ಮೋಹದ ಗುಣ ಎದ್ದು ಕಾಣಿಸುತ್ತದೆ. ಲೌಕಿಕ ವ್ಯವಹಾರ ಜ್ಞಾನದಿಂದ ಬಹುದೂರ ಇದ್ದ ಅಕ್ಕ ನಮಗಿಲ್ಲಿ ಕಾಣಿಸುತ್ತಾಳೆ.

ಈ ವಿಷಯದ ಕುರಿತು ದೂತಿ–ಅಕ್ಕನ ನಡುವೆ ಹೀಗೇ ಚರ್ಚೆ ಮುಂದುವರೆದು, ದೂತಿ ಕೌಶಿಕನ ಮದುವೆ ಪ್ರಸ್ತಾಪ ಮುಂದೆ ಇಡುತ್ತಾಳೆ. ಆವಾಗಲೂ ರಾಜ ಹಾಗೆ ಮಾಡಿರಲು ಸಾಧ್ಯವಿಲ್ಲ ಎಂಬ ಸದ್ಭಾವದ ಮಾತುಗಳನ್ನೇ ಆಡುತ್ತಾಳೆ. ಒಂದು ಸಾರೆ ಕೊಟ್ಟ ವಸ್ತು ಕೊಟ್ಟವರದಾಗಿರುವದಿಲ್ಲ, ಪಡೆದವರದಾಗಿರುತ್ತದೆ. ದೂತಿಯನ್ನು ಹೊರಹೋಗಲು ಹೇಳುತ್ತಾಳೆ. ಆಭರಣಗಳ ಮೇಲೆ ಮೋಹವುಳ್ಳ ದೂತಿ, ನೀನು ಈ ಆಭರಣಗಳನ್ನು ಸುಡುವದಿಲ್ಲವೆಂದು ಪ್ರಮಾಣ ಮಾಡಿದರೆ ಮಾತ್ರ ಹೋಗುವೆ ಎಂದು ಹೇಳಿಯೂ ಕೌಶಿಕನ ಪರವಾಗಿ ನಿಂತು ಮತ್ತು ಹೆಣ್ಣು ಒಂಟಿಯಾಗಿ ಇರುವುದು ಕಷ್ಟ, ಗಂಡನನ್ನು ಮಾಡಿಕೊಂಡು ಸುಖವಾಗಿರಬೇಕೆಂಬ ಲೋಕಜ್ಞಾನದ ಮಾತನ್ನು ಆಡುತ್ತಾಳೆ.

ಏನಾದರೂ ಜಗ್ಗದ ಅಕ್ಕನ ವ್ಯಕ್ತಿತ್ವ ಅರಿತ ದೂತಿಗೆ ಸಂಕೀರ್ಣ ಪರಿಸ್ಥಿತಿ. ಅತ್ತ ರಾಜನಾಜ್ಞೆ ಮೀರುವಂತಿಲ್ಲ. ಇತ್ತ ಅಕ್ಕನ ನಿಶ್ಚಲ ನಿಲವನ್ನು ಪ್ರಶ್ನಿಸಿ ಎದುರು ಹಾಕಿಕೊಳ್ಳುವಂತಿಲ್ಲ. ಆದರೂ ತನಗೆ ಶಿಕ್ಷೆ ಆಗದಿರಲಿ ಎಂಬ ಕಾರಣಕ್ಕಾಗಿ ಒರಟುತನದಿಂದ ನಡೆದುಕೊಳ್ಳುತ್ತಾಳೆ. ಸೈನಿಕರನ್ನು ಕರೆದು, ಅಕ್ಕನನ್ನು ಕರೆದುಕೊಂಡು ಹೋಗಲು ಸಿದ್ಧರಾಗುತ್ತಾರೆ. ಅಕ್ಕ ತಮ್ಮನಾದ ಶಂಕರನಿಗೆ ಭರವಸೆ ಕೊಡುತ್ತಾಳೆ. ಆ ಕೌಶಿಕನಿಗೆ ಬುದ್ಧಿ ಕಲಿಸಿ ಬರುವೆನೆಂದು ಹೊರಟೇ ಬಿಡುತ್ತಾಳೆ. ಆಗ ಸಹೋದರ ಶಂಕರ ಅಕ್ಕನನ್ನು ತಡೆದು ತಾನೇ ಹೋಗಿ ಬುದ್ಧಿ ಕಲಿಸಿ ಬರುವುದಾಗಿ ಹೇಳುತ್ತಾನೆ.

ಸಂಗತಿಯೂ ನೂತನ ಸೇರ್ಪಡೆ.

ಕೌಶಿಕ ಶ್ರೀಶೈಲದತ್ತ ಹೋಗುವುದನ್ನು ತಡೆಯಲು ದೂತಿ, ಚಾರುಮತಿ ಸಾಕಷ್ಟು ಪ್ರಯತ್ನಿಸುತ್ತಾರೆ. ಗುರುವಿನ ಆಜ್ಞೆ ಮೀರದೆ ನಡೆವ ನರನಾಗಿ ಕೌಶಿಕ ಕಾಣಿಸುತ್ತಿದ್ದಾನೇ ಹೊರತು ರಾಜನಾಗಿ ಅಲ್ಲ. ಸನ್ಯಾಸಿ ಆಗಿ ಹೊರಟ ಗಂಡನನ್ನು ತಡೆಯಲು ದೂತಿಗೆ ಚಾರುಮತಿ ಹೇಳುತ್ತಾಳೆ. ತನಗೆ ಮೋಸ ಮಾಡಿ ಹೊರಟ ಗಂಡನ ಬಗ್ಗೆ ದೇವರಲ್ಲಿ ನಿವೇದಿಸಿಕೊಳ್ಳುತ್ತಾಳೆ. ತನಗಾದ ಆಘಾತವನ್ನು ಬಿಡದೆ ಹೇಳಿಕೊಳ್ಳುತ್ತಾಳೆ. ತಾನು ಜೀವಂತವಾಗಿರಲಾರೆ ಎಂಬ ತೀರ್ಮಾನಕ್ಕೆ ಬರುತ್ತಾಳೆ. ಕೌಶಿಕನ ನಿರ್ಧಾರ ಅರಿತ ದೂತಿಯೂ ಚಾರುಮತಿಗೆ ಒಂದು ಬೇತು ಹೇಳಿಕೊಡುತ್ತಾಳೆ. ಆಗ ಚಾರುಮತಿ ತನ್ನ ವಿಫಲತೆ ಹೇಳುತ್ತಾಳೆ. ದೂತಿ ಹೇಳುವ ಬೇತು ಅರಸನಿಗೂ ಗೊತ್ತಾಗದೆ ಇರುವಂತಹದು. ಕಾಡಿನಲ್ಲಿ ಪ್ರಯಾಣಿಸುತ್ತ ಹೋಗುವಾಗ, ಚಾರುಮತಿ ರಾಜಕುಮಾರನ ವೇಷಧರಿಸಿ, ಅಲಂಕಾರ ಮಾಡಿಕೊಂಡು ಹೊರಡುತ್ತಾಳೆ. ಕಾಡಿನಲ್ಲಿ ಗಂಡ–ಹೆಂಡತಿ ನಡುವೆ ಚರ್ಚೆ ನಡೆಯುತ್ತದೆ. ಚಂದ್ರಸೇನ ಎಂಬ ಹೆಸರಿನಿಂದ ತನ್ನನ್ನು ಪರಿಚಯಿಸಿಕೊಳ್ಳುತ್ತಾಳೆ. ಇಬ್ಬರ ನಡುವೆ ಚರ್ಚೆ ಆಗುತ್ತದೆ. ಅರಮನೆಗೆ ಮರಳಿಹೋಗಲು ಒತ್ತಾಯಿಸುತ್ತಾಳೆ. ಆಗ ಕೌಶಿಕ ಅಕ್ಕನಿಂದ ತಾನು ದೀಕ್ಷೆ ಪಡೆದುದಾಗಿ ಹೇಳುತ್ತಾನೆ. ಅಲ್ಲಮ ಮಹಾದೇವಿಯರ ಉಪದೇಶಕ್ಕೆ ಮರುಳಾಗದಿರಲು ಚಾರುಮತಿ ಎಚ್ಚರಿಸುತ್ತಾಳೆ.

ಹೆಂಡತಿ ಎಂದು ತಿಳಿಯದೆ ಚಂದ್ರಸೇನ ಎಂದು ಭ್ರಮಿಸಿ ಬಾಯಿಗೆ ಬಂದಂತೆ ಆಡುತ್ತಾನೆ. ಸಂಸಾರ ಬಿಟ್ಟು ಹೊರಟ ತನಗೆ ಯಾವ ಮೋಹದ ಹಂಗಿಲ್ಲವೆನ್ನುತ್ತಾನೆ. ಮಣಿಯದ ಗಂಡನ ನಿಶ್ಚಲತೆ ಕಂಡು, ಮೊದಲಿನ ವಿಕೃತ ಸ್ವಭಾವದ ಕೌಶಿಕ ಎಲ್ಲಿ ಹೋದ? ಎಂದು ಶೋಕಿಸುತ್ತಾಳೆ. ಆದರೂ ಪ್ರಯತ್ನ ಮುಂದುವರೆದಿದೆ. ಸಮೀಪದ ಬದರಿಕಾಶ್ರಮದಲ್ಲಿ ಕ್ಯಾತಯ್ಯನೆಂಬ ಋಷಿಯಿದ್ದಾನೆ. ಅವನನ್ನಾದರೂ ಮಾತನಾಡಿಸಿ ನೋಡು ಎಂದೂ, ಅವರೂ ಮಹಾತ್ಮರು ಎಂದೂ ಕೌಶಿಕನಿಗೆ ಹೇಳುತ್ತಾಳೆ. ಕೌಶಿಕ ಹಾಗೇ ಮಾಡುತ್ತಾನೆ. ಇವನಿಗಿಂತ ಮುಂಚೆ ತಾನೆ ಆ ವೇಷ ಧರಿಸಿ ಅಲ್ಲಿರುತ್ತಾಳೆ. ಇಲ್ಲಿಯೂ ವಿಫಲಳಾಗುತ್ತಾಳೆ. ಎಲ್ಲ ಸಂಗತಿ ಗೊತ್ತಿದ್ದ ಕಾರಣ ಕೌಶಿಕ ಹೇಳುವ ಮುಂಚೆ ಭವಿಷ್ಯ ನುಡಿಯುತ್ತಾಳೆ. ಇಂದ್ರಜಾಲ, ಮಹೇಂದ್ರಜಾಲದ ವಿಷಯ ಹೇಳಿ ನಿರಾಶೆ ಮಾಡುತ್ತಾಳೆ. ಆದರೂ ಕೌಶಿಕ ಯಾವ ಮಾತಿಗೂ ಜಗ್ಗುವುದಿಲ್ಲ, ಬಗ್ಗುವುದಿಲ್ಲ. ಬಂದ ದಾರಿಗೆ ಸುಂಕವಿಲ್ಲದವರಂತೆ ಮರಳಿ ಹೋಗಿ, ದೇವರನ್ನು ಪ್ರಾರ್ಥಿಸುವುದಾಗಿ ಸಂಕಲ್ಪ ತೊಡುತ್ತಾಳೆ.

ಚಾರುಮತಿಯ ಪತಿಭಕ್ತಿಯನ್ನು ಅಲ್ಲಮ ಮೆಚ್ಚಿಕೊಳ್ಳುತ್ತಾನೆ. ತಮ್ಮ ರಾಜ್ಯ

ಮುಗಿಯದೆ ಅಕ್ಷಯಾಂಬರವಾಗುತ್ತದೆ. ಇಂಥೆಡೆಗಳಲ್ಲಿ ಮಹಾಭಾರತದ ದುಶ್ಯಾಸನ ದ್ರೌಪದಿ ಸೀರೆ ಸೆಳೆಯುವ ಪ್ರಸಂಗ ಕರ್ತೃವಿಗೆ ಪ್ರೇರಣೆ ಆಗಿರಬೇಕು. ಶರಣರ ಚರಿತ್ರೆಯಲ್ಲಿ ಅದೂ ಅಕ್ಕನ ಜೀವನದಲ್ಲಿ ನಡೆಯಿತೆನ್ನಬಹುದಾದ ಈ ಘಟನೆಯ ಹೊಸ ಮಾರ್ಪಾಡು ಇಲ್ಲಿದೆ. ಅಕ್ಕ ಶಾಪ ಹಾಕುತ್ತಾಳೆ. ಮೈಯೆಲ್ಲ ಉರುಪಿನ ತಾಪದಿಂದ ಕೌಶಿಕ ಒದ್ದಾಡುತ್ತಾನೆ. ಇದೂ ಕೂಡ ಹೊಸದಾಗಿ ಸೇರಿದ ಪ್ರಸಂಗ. ಇಲ್ಲೆಲ್ಲ ಹರಳಯ್ಯನ ಪಾದುಕೆ ಮುಟ್ಟಿಹೋಗಿ ಉರಿಪಿನಿಂದ ಒದ್ದಾಡಿದ ಮಧುವಯ್ಯನ ಪ್ರಸಂಗ ಕರ್ತೃವಿಗೆ ಪ್ರೇರಣೆ ಆಗಿ ನಿಂತಿರಬೇಕು.

ತಾಪತಾಳದ ಕೌಶಿಕನ ಬಾಯಲ್ಲಿ ಬಸವೇಶ್ವರ ಎಂಬ ನಾಮಸ್ಮರಣೆ ಉಲಿದಿದ್ದು ಕೂಡ ಇಲ್ಲಿ ಆಶ್ಚರ್ಯವೆ. ಹಾಗೆ ನಾರಾಯಣ ಮುಕುಂದನನ್ನು ನೆನೆದು ಪ್ರಾಣ ಉಳಿಸಿಕೊಳ್ಳುವ ಪ್ರಯತ್ನದತ್ತ ಮುಂದುವರಿಯುತ್ತಾನೆ. ದೂತಿ ಸಹಾಯಕ್ಕೆ ಬರುತ್ತಾಳೆ. ಮಹಾದೇವಿಯ ಕಾಲಿಗೆ ಬಿದ್ದು ಕ್ಷಮೆ ಕೇಳದ ಹೊರತು ಈ ತಾಪ ಶಮನವಾಗದೆಂದು ದೂತಿ ಕೌಶಿಕನಿಗೆ ಸೂಚಿಸುತ್ತಾಳೆ. ಆಕೆ ಹೇಳಿದಂತೆ ಕೇಳುವ ಭರವಸೆಯನ್ನು ಕೌಶಿಕ ಕೊಡುತ್ತಾನೆ. ಮಹಾದೇವಿಯನ್ನು ತಾಯಿ, ಗುರು ಎಂದು ಗೌರವಿಸುವುದಾಗಿ ಹೇಳುತ್ತಾನೆ. ಈ ಮಾತನ್ನು ದೂತಿ ಮಹಾದೇವಿಗೆ ತಲುಪಿಸುತ್ತಾಳೆ. ಮತ್ತೆ ಮಹಾದೇವಿ ಮರುಗಿ ಕೌಶಿಕನಲ್ಲಿ ಬರುತ್ತಾಳೆ. ಮತ್ತೆ ಸಂವಾದ ನಡೆದು, ತಾಯಿಯೆಂದು ಮಹಾದೇವಿಯನ್ನು ಕೌಶಿಕ ಕರೆದಾಗ, ಹಿಂದಿನ ಅವನ ಒರಟು ನಡೆ-ನುಡಿಯನ್ನು ಮಹಾದೇವಿ ನೆನಪಿಸಿ ಕೊಡುತ್ತಾಳೆ. ಶಿವದೀಕ್ಷೆ ಪಡೆದು ಶಿವಭಕ್ತನಾದರೆ ಮಾತ್ರ ನಿನ್ನ ಈ ತಾಪ ಕಡಿಮೆ ಆಗುತ್ತದೆಂದು ಹೇಳಿ ಭಸ್ಮ ಹಚ್ಚುತ್ತಾಳೆ. ಎಲ್ಲ ತಣ್ಣಗಾಗುತ್ತದೆ.

ಅಷ್ಟಾವರಣದ ಮಹತ್ವವನ್ನು ತಿಳಿಸುತ್ತಾಳೆ. ಗುರುಭಕ್ತ, ಕಲಿಗಣನಾಥ, ಕೆಂಭಾವಿ ಭೋಗಯ್ಯ, ವಾಚಕ, ಭುಜಬಲ, ಅನಸೂಯಾ, ಸುಪ್ರಸಿದ್ಧನೆಂಬ ಬ್ರಾಹ್ಮಣ, ಸಾನಂದ ಋಷಿ ಒಂದೊಂದು ಆವರಣಕ್ಕೆ ಒಬ್ಬೊಬ್ಬರು ಪ್ರಸಿದ್ಧರಾಗಿದ್ದಾರೆಂದು ಇವರೆಲ್ಲರ ಕಥೆಗಳನ್ನು ಹೇಳಿ, ವಿಶ್ವಾಸ ಮೂಡಿಸಿದ್ದಾಳೆ. ತಕ್ಷಣವೇ ಕೌಶಿಕ ತನಗೆ ಲಿಂಗಧಾರಣೆ ಆಗಬೇಕೆಂಬ ಬೇಡಿಕೆ ಮುಂದೆ ಇತ್ತಾಗ, ಶ್ರೀಶೈಲದಲ್ಲಿ ಶಿವಸ್ವರೂಪಿ ಮಹಾಪ್ರಭುಸ್ವಾಮಿಗಳಿದ್ದಾರೆ, ಅಲ್ಲಿ ನಿನಗೆ ದೀಕ್ಷೆ ಕೊಡಿಸುತ್ತೇನೆ ಎಂದು ಹೇಳುತ್ತಾಳೆ. ಕೌಶಿಕ-ಮಹಾದೇವಿ ಇಬ್ಬರೂ ಶ್ರೀಶೈಲದತ್ತ ಪ್ರಯಾಣ ಬೆಳೆಸುತ್ತಾರೆ. ಈ ಪ್ರಸಂಗವು ಕೂಡ ಈ ಸಣ್ಣಾಟದ ಕರ್ತೃವಿನ ಮಾರ್ಪಾಡಾಗಿದೆ. ಶಿಷ್ಟಕಾವ್ಯ ಪುರಾಣ, ರಗಳೆ, ಇತರೆ ಮೌಖಿಕ ಪರಂಪರೆಯ ಸಾಹಿತ್ಯದಲ್ಲಾಗಲಿ ಈ ಪ್ರಸಂಗದ ಸೃಷ್ಟಿ ಇಲ್ಲ. ಇದು ವಿನೂತನ ಸೇರ್ಪಡೆ. ಇಲ್ಲಿ ಅಕ್ಕ ಬಸವಕಲ್ಯಾಣಕ್ಕೆ ಬರುವದಿಲ್ಲ. ಅಲ್ಲಿ ಆಕೆಯ ಪರೀಕ್ಷೆ ನಡೆಯುವುದಿಲ್ಲ. ಉಡುತಡಿಯಲ್ಲಿಯೆ ಎಲ್ಲವೂ ನಡೆದು ಬಿಡುತ್ತದೆ. ಕೌಶಿಕ ಹೀಗೆ ಲಿಂಗದೀಕ್ಷೆಗಾಗಿ ಅಕ್ಕನೊಂದಿಗೆ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದ

೪. ಮಧುವಯ್ಯನ ಉರಿಯೂತ ಕಡಿಮೆ ಮಾಡಲು ಆಸ್ಥಾನದ ವೈದ್ಯರಿದ್ದಾರೆ. ನೀರು ತರುವ ದಾಸಿ ಶಾಮಲೆ ಇದ್ದಾಳೆ.

ಸಾಮಾನ್ಯವಾಗಿ ಶಿಷ್ಟ ಕಾವ್ಯ, ಪುರಾಣಗಳಲ್ಲಿ ಕಾಣುವ ಅಂಶಗಳೇ ಜನಪದರಲ್ಲಿಯೂ ಕಾಣಿಸುತ್ತವೆ. ಶಿಷ್ಟ ಕವಿಗಳ ಕಾವ್ಯರಚನೆಗೆ ಜನಪದರ ಮೌಖಿಕ ಪ್ರಮಾಣಗಳು ಪ್ರೇರಣೆ ನೀಡಿರಲೇಬೇಕು. ಹೀಗಾಗಿಯೇ ಶ್ರೀ ನೀಲಕಂಠಪ್ಪ ಅವರು ಹರಳಯ್ಯನ ಜೀವನಕ್ಕೆ ಸಂಬಂಧಿಸಿದಂತೆ ಉಳಿದುಕೊಂಡುಬಂದ ಪ್ರಚಲಿತ ಸಂಗತಿಗಳನ್ನು, ಘಟನೆಗಳನ್ನು ಇಟ್ಟುಕೊಂಡೇ ತನ್ನ ಕೃತಿಗೆ ನಾಟಕೀಯತೆಯನ್ನು ತಂದುಕೊಡುತ್ತಾರೆ.

ಹರಳಯ್ಯ-ಚೆನ್ನಮ್ಮ (ಕಲ್ಯಾಣಮ್ಮ) ಭಕ್ತ ದಂಪತಿಗಳು. ಇವರ ಭಕ್ತಿಯ ಅರ್ಪಣೆ ಅತ್ಯಂತ ಘನವಾದುದು. ತಾನು ಅರ್ಪಿಸಿದ ಒಂದು ಶರಣಾರ್ಥಿಗೆ ಬಸವಣ್ಣ ಪ್ರತಿಯಾಗಿ 'ಶರಣು ಶರಣಾರ್ಥಿ' ಎಂದು ಹೇಳಿದ್ದೇ ಒಂದು ಮಹಾ ಅಪರಾಧವಾಗಿ ಕಂಡಿದೆ. ಆ ಭಾರ ಇಳುಹಿಕೊಳ್ಳಲು ಹೆಂಡತಿಯೊಡನೆ ಸಮಾಲೋಚನೆ ನಡೆಸಿ, ತಮ್ಮ ತಾವೇ ಅರ್ಪಣೆಗೆ ಗುರುಪಡಿಸಿಕೊಳ್ಳುವ ವಿಧಾನದಲ್ಲಿ ಜನಪದರ ನಂಬಿಗೆ, ನಿಷ್ಠೆ, ಸೂಕ್ಷ್ಮ ಸಂವೇದನಾಗುಣ ಎದ್ದು ಕಾಣಿಸುತ್ತದೆ. ಹರಕೆ ಎನ್ನುವ ರೀತಿಯಲ್ಲಿ ಹರಳಯ್ಯನ ಬಲದೊಡೆಯ ಚರ್ಮ, ಚೆನ್ನಮ್ಮನ ಎಡದೊಡೆಯ ಚರ್ಮದಿಂದ ಕುಶಲ ಕುಸುರಿನೊಂದಿಗೆ ಒಂದು ಜೊತೆ ಪಾದರಕ್ಷೆ ತಯಾರಿಸಿ, ಅಲ್ಲಲ್ಲಿ ಮುತ್ತು ರತ್ನಾದಿಗಳನ್ನು ಹಚ್ಚುತ್ತಾರೆ. ಚೆನ್ನಮ್ಮ 'ಬಸವಪ್ರಭುವಿನ ಪಾದಕ್ಕೆ ಒಪ್ಪುವಂಥವು' ಎಂದು ಹೇಳಿ ತೀವ್ರ ಒಯ್ದು ಬಸವಣ್ಣನವರಿಗೆ ಮುಟ್ಟಿಸಲು ಹೇಳುತ್ತಾಳೆ. ಆ ಮಾತನ್ನು ಆಲಿಸಿ, ಹರಳಯ್ಯ ಭಕ್ತಿಕಾಣಿಕೆಯಾದ ಪಾದರಕ್ಷೆಗಳನ್ನು ಮಡಿವಸ್ತ್ರದಲ್ಲಿ ಕಟ್ಟಿಕೊಂಡು ತಂದಿರುತ್ತಾನೆ. ಬಸವಣ್ಣ ಅವುಗಳನ್ನು ನೋಡಿ ಬೆರಗಾಗಿ, ಹರಳಯ್ಯನ ಕಾಯಕ ನಿಪುಣತೆ, ಸೂಕ್ಷ್ಮ ಕುಸುರಿ ಕೆಲಸ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಹರಳಯ್ಯ ಪ್ರತಿಯಾಗಿ ಪಾದರಕ್ಷೆಗಳನ್ನು ಮೆಟ್ಟಲು ಬಸವಣ್ಣನವರಿಗೆ ಹೇಳಿದರೆ, ಬಸವ ಒಪ್ಪುವುದಿಲ್ಲ. 'ಇವು ಅಪ್ರತಿಮವಾದದ್ದರಿಂದ ಅಪ್ರತಿಮ ಮಹಿಮಾಶಾಲಿಯಾದ ಆ ಅಲ್ಲಮಪ್ರಭುರಾಯನೇ ಇವನ್ನು ಮೆಟ್ಟತಕ್ಕ ಸಮರ್ಥನು' ಎಂದು ಬಸವನಿಂದ ಮಾತನಾಡಿಸಿದ್ದು ಇಲ್ಲಿ ಹೊಸ ಸೇರ್ಪಡೆ. 'ಪ್ರಭು ಬರುವವರೆಗೆ ಈ ಜೋಡುಗಳನ್ನು ಜೋಕೆಯಿಂದಿಡು' ಎಂದು ಬಸವ ಹೇಳಿ ಕಳಿಸುವುದು, ಬಸವನಿಂದ ಶಕುನ ನುಡಿಸುವುದು ಇಲ್ಲಿ ಹೊಸದಾಗಿ ಕಾಣಿಸುತ್ತದೆ. ಬಸವನ ಎಚ್ಚರಿಕೆ ಮಾತೆಂದರೆ 'ಆತನ ಹೊರ್ತು ಬೇರೆ ಯಾವನಾದರೂ ಇವನ್ನು ಕಾಲಿಗೆ ಮೆಟ್ಟಿದರೆ ಸಾಕು, ಆತನು ಉರಿದು ಬಿದ್ದು ಸತ್ತುಹೋಗುವನು. ಇದು ಸತ್ಯಮಾತು'. ಅವನ ಪಾದರಕ್ಷೆಗಳನ್ನು ನೋಡಿ ಮೆಚ್ಚಿದ

ತಮಗೆ ದೊರೆತು, ಪತಿ ಕೌಶಿಕ ರಾಜನಾಗಿ ಉಡುತಡಿಯನ್ನು ಆಳಬೆಕು, ಸನ್ಯಾಸ ತ್ಯಜಿಸಬೇಕೆಂದು ಅಲ್ಲಮನಲ್ಲಿ ಕೇಳಿಕೊಳ್ಳುತ್ತಾಳೆ. ಆದರೆ ಕೌಶಿಕ ಇದಕ್ಕೆ ಒಪ್ಪದೆ ಮುಕ್ತಿ ಬಯಕೆಯನ್ನು ಹೇಳುತ್ತಾನೆ. ಆದರೆ ಅಲ್ಲಮ ಹಾಗೆ ಹೇಳದೆ, ಗಂಡ–ಹೆಂಡತಿ ಸುಖದಿಂದ ರಾಜ್ಯಭಾರ ಮಾಡಿ ಎಂದು ಹರಸಿ ಕಳಿಸುತ್ತಾನೆ. ಅಕ್ಕನ ಶಾಪದಿಂದ ಪಟ್ಟ ಕಷ್ಟ ದೂರಾಗುತ್ತದೆ. ಸತಿ–ಪತಿ ಶಿವಭಕ್ತಿ ದೀಕ್ಷೆ ಪಡೆದು ಪುನರ್ ಮದುವೆ ಆಗಿ, ಮಲ್ಲಿಕಾರ್ಜುನನ ಆಶೀರ್ವಾದ ಪಡೆದು ಧನ್ಯರಾಗುತ್ತಾರೆ.

ಜನಪದರ ಮನಸ್ಸು ಸುಖಾಂತವಾಗಿಯೆ ಎಲ್ಲವನ್ನೂ ಮುಗಿಸಲು ಪ್ರಯತ್ನಿಸುತ್ತಿರುತ್ತದೆಂಬುದನ್ನು ಇಲ್ಲಿ ಕಾಣುತ್ತೇವೆ.

ಶಿವಶರಣ ಹರಳಯ್ಯ (ಡಪ್ಪಿನಾಟ): ಈ ಡಪ್ಪಿನಾಟದ ಕರ್ತೃ ನೀಲಕಂಠ ಪತ್ತಾರ ಎಂಬ ಕವಿ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕಾದ್ರೊಳ್ಳಿ ಎಂಬ ಗ್ರಾಮದಲ್ಲಿ ನೀಲಕಂಠ ಅವರ ಜನನ. ೧೮೯೫ರಿಂದ ೧೯೭೨ರವರೆಗೆ ಇವರು ಬದುಕಿದ್ದರೆಂದು ತಿಳಿದು ಬರುತ್ತದೆ. ಇವರು ಹತ್ತಿಪ್ಪತ್ತು ಸಣ್ಣಾಟಗಳನ್ನು ರಚಿಸಿದ ಮಾಹಿತಿ ನಮಗೆ ಲಭ್ಯವಾಗುತ್ತದೆ. ಇವರೇ ರಚಿಸಿದರೆಂದು ಹೇಳುವ 'ಅಕ್ಕಮಹಾದೇವಿ' ಸಣ್ಣಾಟವೂ ಒಂದಿದೆ.

'ಶಿವಶರಣ ಹರಳಯ್ಯ' ಒಂದು ಚಿಕ್ಕದಾದ ಡಪ್ಪಿನಾಟ. ಕಲ್ಯಾಣ ಕ್ರಾಂತಿಗೆ ಕಾರಣ ಎಂದು ಇಂದಿಗೂ ಹೇಳುತ್ತ ಬಂದಿರುವ ಹರಳಯ್ಯನವರ ಕಥೆಯೇ ಈ ಆಟದ ವಸ್ತು. ಇದರ ರಚನೆಯನ್ನು ಗಮನಿಸಿದಾಗ ಅತ್ತ ಅಚ್ಚದೇಸೀ ಅಲ್ಲದ, ಇತ್ತ ಪೂರ್ಣ ಶಿಷ್ಟವಲ್ಲದ ರೀತಿಯಲ್ಲಿ ಕೃತಿ ರಚನೆಯಾಗಿದೆ. ಶ್ರೀ ನೀಲಕಂಠ ಮಾಸ್ತರರು ಇಲ್ಲಿ ಸಂಪೂರ್ಣ ಸ್ವತಂತ್ರರಾಗಿದ್ದಾರೆ. ತಮಗೆ ಏನು ಹೇಳಬೇಕೆನಿಸುತ್ತದೆಯೋ ಅದನ್ನು ಮುಕ್ತವಾಗಿ ಹೇಳಿಕೊಂಡಿದ್ದಾರೆ. ಇಲ್ಲಿ ಅವರು ಯಾರದೋ ಋಣ ತೀರಿಸಬೇಕಾದ ಅನಿವಾರ್ಯಕ್ಕೆ ಒಳಗಾಗಿಲ್ಲ. ಭಾಷೆ, ವಸ್ತುವಿನ ಆಯ್ಕೆಯಲ್ಲಿ ಅವರು ಸ್ವತಂತ್ರರು.

೧. ಪಾತ್ರಗಳ ಹೆಸರಿನಲ್ಲಿ ಬದಲಾವಣೆ. ಉದಾ: ಹರಳಯ್ಯನ ಹೆಂಡತಿ ಚೆನ್ನವ್ವ (ಉಳಿದೆಲ್ಲ ಕಾವ್ಯ, ಪುರಾಣಗಳಲ್ಲಿ ಕಲ್ಯಾಣಮ್ಮ ಇದೆ).

೨. ಹರಳಯ್ಯನ ಮಗ ಸದಾಶಿವ (ಉಳಿದ ಕೃತಿಗಳಲ್ಲಿ ಶೀಲವಂತ ಇದೆ).

೩. ಮಧುವರಸನ ಹೆಂಡತಿ ಪದ್ಮಾ, ಗೊಲ್ಲರು ಇವೆಲ್ಲ ಹೊಸ ಪಾತ್ರ ಪ್ರವೇಶಗಳು.

ಪರಿವಿಡಿ

ಬಸವನ ಮಡದಿ ನೀಲಮ್ಮ ತನ್ನ ಕೊರಳ ಚಂದ್ರಹಾರವನ್ನಿತ್ತು ಸಂಭಾವಿಸುವುದೂ ಕೂಡ ಇಲ್ಲಿ ಹೊಸದು. ಇಲ್ಲೆಲ್ಲ ಜನಪದರ ಕೃತಜ್ಞತಾಭಾವ ಎದ್ದು ಕಾಣಿಸುತ್ತದೆ.

ಮುಂದಿನ ಘಟನೆಗಳೆಲ್ಲ ಯಥಾವತ್ತಾಗಿ ಬಂದಿವೆ. ಮಧುವಯ್ಯ ಒತ್ತಾಯದಿಂದ ಜೋಡುಗಳನ್ನು ಮೆಡುವುದು, ಸಂಭಾಷಣೆಯಲ್ಲಿ ಮಾತ್ರ ಹರಳಯ್ಯನ ಬಾಯಿ ಸಡಿಲಾಗಿರುವುದು ಇಲ್ಲಿ ಕಾಣಿಸುತ್ತದೆ. ಸೌಜನ್ಯ ಮೀರಿದ ಹರಳಯ್ಯ-ಮಧುವಯ್ಯರ ಸಂವಾದ, ಮೆಟ್ಟು ಮುಟ್ಟಿ ಉರಿಯೆದ್ದು ಒದ್ದಾಡುವ ಮಧುವಯ್ಯ, ಒದ್ದಾಡಿ ಸತ್ತು ಹೋಗೆಂಬ ಹರಳಯ್ಯನ ಶಾಪ, ಪಾದರಕ್ಷೆಯನ್ನು ತಾನೇ ತಗೆದುಕೊಂಡು ಹೋಗುವುದು, ನಂತರ ಯಾವ ವೈದ್ಯ ಉಪಚಾರಕ್ಕೂ ಶಮನವಾಗದ ಉರಿ. ಶ್ಯಾಮಲೆ ಎಂಬ ದಾಸಿ ಹರಳಯ್ಯನ ಬಚ್ಚಲಗುಂಡಿಯ ನೀರನ್ನು ತಂದು ಮಧುವಯ್ಯನ ಮೇಲೆ ಸುರಿಯುವುದು, ಅವನ ಮೈಯ ತಾಪ ತಣ್ಣಗಾಗುವುದು, ನಂತರ ಇಬ್ಬರಲ್ಲಿ ಪರಸ್ಪರ ಪ್ರೀತಿ ಹುಟ್ಟಿ-ನೆಂಟಸ್ತನದವರೆಗೆ ಬೆಳೆಯುವುದು. ಇದು ಮುಂದೆ ಕಲ್ಯಾಣದ ಕ್ರಾಂತಿಗೆ ನಾಂದಿ ಆಗುತ್ತದೆ. ರಾಜ ಬಿಜ್ಜಳ ಹರಳಯ್ಯ ಮಧುವಯ್ಯನವರಿಗೆ ಆನೆಕಾಲಿಗೆ ಕಟ್ಟಿ ಎಳೆಸುವ ಶಿಕ್ಷೆಗೆ ಗುರಿ ಮಾಡುವುದು, ಬಸವಣ್ಣ ಕಲ್ಯಾಣ ಬಿಟ್ಟು ಸಂಗಮದೆಡೆ ಪ್ರಯಾಣ ಬೆಳೆಸುವುದು, ಕೊನೆಗೆ ಮಂಗಲವನ್ನು ಮಾಡಿ, ನೀಲಕಂಠ ಕವಿ ಡಪ್ಪಿನಾಟವನ್ನು ಮುಗಿಸುತ್ತಾನೆ.

–ಸಂಪಾದಕರು

*

ಶ್ರೀ ಬಸವೇಶ್ವರ ಚರಿತ್ರೆ
(ದೊಡ್ಡಾಟ)

ಪಾತ್ರ ಪರಿಚಯ

ಬಸವಣ್ಣ

ನಾರದ

ಪರಮೇಶ

ಪಾರ್ವತಿ

ಗಂಗಾ

ನಂದಿ

ಮಾದಲಾಂಬಿಕೆ

ಶಾಂತಮತಿ

ಮಾದರಸ

ಬಾಲಬಸವ

ದೊಡ್ಡಬಸವ

ಕಾಶಿನಾಥ

ಮುದ್ದ

ದಾಮೋದರ

ಚಿದಂಬರ

ಕೇಶವ

ಗೋವಿಂದಭಟ್ಟ

ಸೇವಕ

ಸಂಗಮೇಶ

ಪುರೋಹಿತ

ಬಲದೇವ

ಚರಮೂರ್ತಿ

ಬಿಜ್ಜಳ

ಮಂತ್ರಿ

ಸೇನಾಧೀಶ

ಕೊಂಡೆ ಮಂಚಣ್ಣ

ಭವಿ

೧ನೇ ಭಟ

೨ನೇ ಭಟ

ರಾಮ ಭಟ್ಟ

ಮಾಧವ ಭಟ್ಟ

ಕೇಶಂ ಭಟ್ಟ

ಮಡಿವಾಳ ಮಾಚಯ್ಯ

ಮಹಾದೇವ ಭೂಪಾಲ

ವೀರ

ಧೀರ

ಕೋರೀಶೆಟ್ಟಿ

ಶಿವಯ್ಯ

ಮೃತ್ಯುಂಜಯ

ಇಂದುಧರಯ್ಯ

ಪಾಲಾಕ್ಷಯ್ಯ

ಕಿನ್ನರಯ್ಯ

ವಿಟಗಾರ

ವೇಶ್ಯಾ ಸ್ತ್ರೀ

ಜಗದೇವ

ಮಲ್ಲೇಬೊಮ್ಮಯ್ಯ

ಸೋಮಲಾದೇವಿ

ಹರಳಯ್ಯ

ಮಧುವಯ್ಯ

ದ್ವಾರ ರಕ್ಷಕ

ಹುಡುಗರು

ಮಾಸ್ತರ

ಐಯ್ಯನವರು

ಮಂಗಲವನಿತೆಯರು

ಪಂಡಿತರು

ಬಾಳಂಭಟ್ಟ

ಜಯಲಕ್ಷ್ಮಿ

ಗಣಸ್ತುತಿ

ಶ್ರೀ ಗಜಾನನಂ ಭೂತಗಣಾದಿ ಸೇವಿತಂ ।
ಕಪಿತ್ಥ ಜಂಭೂಫಲಸಾರಭಕ್ಷಿತಂ । ಉಮಾಸುತಂ ।
ಶೋಕವಿನಾಶ ಕಾರಣಂ ನಮಾಮಿ ವಿಘ್ನೇಶ್ವರ
ಪಾದ ಪಂಕಜಂ ॥

೧

(ಅಡತಾಳ)

ಪೊಡವಿಯೊಳ್ ಕುಂತಳವಡಿಯಾ ।
ಗುದಿನೇಶನೇ ಬಿಡದೆ ನಾ । ಭಜಿಸುವೆನು ।
ಕೊಡು ಎನಗೆ ಮತಿಯಾ ॥

ಶ್ರೀ ಗೌರೀವರಪುತ್ರ ಸತತ ಶುಭಚಾರಿತ್ರ ।
ಬಿಡದೆ ನಾ ಭಜಿಸುವೆನು ।
ಕೊಡುಯೆನಗೆ ಮತಿಯಾ ॥ (ವರವಾ)

೨

ಶೂಲಧರನೇ ಪಾಲಿಸು ವರವ ॥ ಪಲ್ಲ ॥

ಗುರು ಹಿರಿಯರ ಕಂಡು ಪಾದಕ್ಕೆರಗುವೆ ।
ಎರಗುವಂಥ ಮನವ ಕೊಟ್ಟು ಸಲಹೋ ದೇವಾ ॥ ೧ ॥

ನಮಗೆ ವಿದ್ಯಾಬುದ್ಧಿ ಕೊಡುವಂಥ ಗುರುವಿಗೆ ।
ಮನವೊಪ್ಪಿ ನಮಿಸುವೆ ಕೊಡು ಎನಗೆ ಮತಿಯಾ ॥ ೨ ॥

ಧರೆಯೊಳು ಮೆರೆಯುವ ಪರತರ ಗುದಿನೇಶಾ ।
ದಯದಿಂದ ಎನಗೆ ಆಶೀರ್ವದಿಸೊ ಈಶಾ ॥ ೩ ॥

॥ ಮಂಗಲ ಶುಭಮಂಗಲ ॥

ಗೌರೀವರನೇ ಕರುಣಾಸಾಗರನೇ ।
ಅಂಬರಕೇಶನೇ ಶಂಭೋ ಸರ್ವೇಶನೆ ॥

ಶಂಭೋ ಮುರಾರಿಯ ವೈರಿ ನಂಬಿದೆನಯ್ಯಾದೇವ ।
ಮಾಯಾಮರ್ಧನ ಶಂಭೋ ॥
ತಲೆಬಾಗಿ ಸ್ಮರಿಸುವೆ ಕುಂತಳಪುರವಾಸ ।
ಶ್ರೀಗುರು ಗುದಿನೇಶಾ ॥

ಸರಸ್ವತಿ ಸ್ತುತಿ

ನೀಲವೇಣಿಯೆ ನಿನ್ನ ಬಾಲಕನು ನಾನಮ್ಮ ।
ನಾಲಿಗೆಯಲಿ ನಲಿನಲಿದಾಡಿಸಿ ನುಡಿಸವ್ವಾ ಸತ್ಕಥೆಯ ॥ ೧ ॥

ಪೊಡವಿಯಲಿ ಮೆರೆಯುವ ಒಡೆಯ ಗುದಿನೇಶನ ।
ಬಿಡದೆ ಭಜಿಸುವೆನು ನಾನು ಕೊಡು ಎನಗೆ ಮತಿಯಾ ॥ ೨ ॥

ಹಡೆದಮ್ಮ ನಿನ್ನಂಘ್ರಿಗೆ ಬಿಡದೆ ನಾನೆರಗುವೆನು ।
ಎಡರಿದ ತೊಡರನು ಕಡಿದು ಪರಿಹರಿಸೈ ಜನನಿ ॥ ೩ ॥

ಪೊಡವಿಯೊಳು ಕುಂತಳವೊಡಿಯಾ ಗುದಿನೇಶನ ।
ಬಿಡದೆ ನಾ ಭಜಿಸುವೆನು ಕೊಡು ಯನಗೆ ವರವ ॥ ೪ ॥

(ಭಾಮಿನಿ ಷಟ್ಪದಿ)

ಪರಮ ಶಿವನಾಜ್ಞೆಯಲಿ ನಂದಿಯು ।
ಪರಮ ಬಸವನ ನಾಮದಿಂದಲಿ ।
ಧರೆಯೊಳುದಿಸುತ್ತ ನಾನಾ ಮಹಿಮೆಗಳ ತೋರಿ ।
ದುರುಳದಿನ ಚಾರ್ವಾಕ ಮತಗಳು ।
ಮುರಿದು ಶಿವಧರ್ಮವನು ಬೆಳೆಸುತೆ
ಮೆರೆವ ಕಥೆಯನು ಪೇಳ್ವೆ ನಾನೀ ಸಭೆಯೊಳಗಿಂದು ॥ ೧ ॥

ದೃಶ್ಯ – ೧
(ನಾರದನ ಪ್ರವೇಶ)

ನಾರದನ ಪದ :

ಯತಿಪತಿ ಮುನಿಪನು ಬಂದ ।
ಕ್ಷಿತಿ ನರಲೋಕದಲಿಂದ ॥
ಹರಿಗೋವಿಂದನ ಸ್ಮರಣೆಯಿಂದ
ಸುರಚರ ಬ್ರಹ್ಮಾನಂದ ॥ ೧ ॥

ನಾರದ: ಭೋ ಜಗದ ವ್ಯಾಪಕನಾದ ಪರಮಾತ್ಮನೇ ನಮೋ ನಮಃ. ಶ್ರೀ ಗುರು ಗುದಿನೇಶ್ವರನೇ ನಮಸ್ಕರಿಸುವೆ. ಒಳ್ಳೆಯದು, ಶಂಭೋ ಹೀಗೆ ಬಿಟ್ಟರೆ ಜಗತೆಲ್ಲಾ ಹಾಳಾಗಿ ನರಕವನ್ನೇ ಹೊಂದುತ್ತದೆ.ಇರಲಿ, ಇಲ್ಲಿ ನಮ್ಮ ಪ್ರತಾಪವನ್ನು ತೋರಿಸೋಣ. ಯಾಕೆಂದರೆ, ದೊಡ್ಡವರಿಗೆ ಖಬರಿರುತ್ತದೇನು? ಅರಿವೇ ಇರುವುದಿಲ್ಲಾ. ಶಿವನೆಂದರೇನು ಆರಾಂ ಪುರುಷನು, ಬೋಳಾ ಶಂಕರನು. ಭೂಲೋಕವು ಕೆಟ್ಟಿರುವದೆಂಬ ಎಚ್ಚರವೇ ಇಲ್ಲ. ಇದನ್ನು ನಾನಾಗಿಯೇ ಬಯಲಿಗೆ ಹಾಕಬೇಕು. ಇಲ್ಲದಿದ್ದರೆ, ವ್ಯರ್ಥವಾಗಿ ಲೋಕವೆಲ್ಲಾ ಅನರ್ಥಕ್ಕೆ ಕಾರಣವಾಗುತ್ತದೆ. ಆದ್ದರಿಂದ, ಮುದ್ದಾಂ ನಾನೇ ಕೋಶಿಸ್ ಮಾಡಿ, ಆ ಭಗವಂತನಿಗೆ ತಿಳಿಸಬೇಕು. ಅಂದರೆ, ಕೆಲಸವಾಗುವದು.

ಶಿವಶಿವಾ ! ಯೇನ್ ಕರ್ಮಭೂಮಿಯೋ ಈ ಭರತ ಖಂಡ – ಮಂಡಲವೆಲ್ಲ, ತಂಡ–ತಂಡವಾಗಿ ಬ್ರಹ್ಮಾಂಡವೆಲ್ಲಾ ಜೈನಮತವಾಗಿಯೇ ತೋರುತ್ತದೆ. ಯತ್ತೆತ್ತ ನೋಡಿದರೂ ಬಸ್ತಿಗಳೇ ತೋರುತ್ತವೆ. ಯತ್ತೆತ್ತ ಕೇಳಿದರೂ ಬೌದ್ಧಶಾಸ್ತ್ರವೇ ಕರ್ಣಕ್ಕೆ ಕೇಳುತ್ತದೆ. ಶಿವ ಶಿವಾ ! ಶಿವಶಬ್ದವು, ಶಿವಭಕ್ತರು ಶಿವಸ್ಥಾನವು ಸ್ವಪ್ನದಲ್ಲಿ ಸಹ ಕಾಣುವಂತಿಲ್ಲ. ಹರಹರಾ ಶಂಭೋ ಸುಮ್ಮನಿರುವೆಯೊ?

ಬೌದ್ಧ, ಚಾರ್ವಾಕ, ಸುಗತ, ಶ್ರವಣ, ಜೈನಧರ್ಮಗಳ ವ್ಯತಿರಿಕ್ತ ಯಾರೂ ಕಾಣುವಂತಿಲ್ಲ. ಅಯ್ಯೋ ಪರಮಾತ್ಮನೇ ಹೀಗೆ ಜಗತ್ತೆಲ್ಲಾ ಬೌದ್ಧ

ಧರ್ಮದಿಂದ ತುಂಬಿದ ಬಳಿಕ, ಲೋಕವೆಲ್ಲಾ ಹಾಳಾಗಿ ನರಕವನ್ನೇ ಹೊಂದುತ್ತದೆ. ಶಿವಶಿವಾ ಹೇಗೆ ಮಾಡಲಿ? ಇದು ಕಲಿಪುರುಷನ ಹವವೇ ಇರುವದು. ವಾಹ್ ! ಕಲಿಮಹಾರಾಜನೇ ನೀನೇ ಬಲಾಢ್ಯನು. ಈ ಸುಗತರು ಮಾಡುವ ವೇದಾಗಮ ಧೂಷಣೆಯನ್ನು, ಶಿವನಿಂದೆಯನ್ನು ಅಷ್ಟಾವರ್ಣದ ತುಚ್ಛೆಯನ್ನು ಈ ಕಿವಿಯಿಂದ ಕೇಳಲಾರೆನು.

ಒಳ್ಳೇದು, ನಾನು ಈಗಿಂದೀಗಲೇ ಕೈಲಾಸಕ್ಕೆ ಹೋಗಿ, ಶಂಕರನಿಗೆ ಅರುಹಿ, ಈ ಭರತಖಂಡವನ್ನು ಶಿವಮತವನ್ನಾಗಿ ಮಾಡದಿದ್ದರೆ, ನಾನು ನಾರದ ಮಹರ್ಷಿಯೇ ಅಲ್ಲ. ಆದ್ದರಿಂದ ಈಗಿಂದೀಗಲೇ ಕೈಲಾಸಕ್ಕೆ ಹೋಗುತ್ತೇನೆ.

ನಾರದನ ಪದ :

ಹರಿವಿಧಿವಂದಿತ ಚರಣ ಸರೋರೂಹ ।
ಶರಣಾದರು ಜನ ಸುರಭೂಜ ॥
ಪರಮಾತ್ಮ ಶಂಕರ ಪರಮ ಪರಾತ್ಪರ ।
ಪೊರೆ ಕರುಣಾಕರ ಶಂಕರನೆ ॥ ೨ ॥

ನಾರದ: ಅಹಾ ಈ ರಜತಾದ್ರಿ ಪರ್ವತವು ಎಷ್ಟು ಮಂಗಲಮಯವಾಗಿ ತೋರುತ್ತಿರುವದೋ ಶಿವ ಶಿವಾ ! ಈ ಕೈಲಾಸವನ್ನು ಸೇರುವವರೇ ಧನ್ಯರು. ಈ ಮಹಾ ಮೇರು ಪರ್ವತವು ರತ್ನದ ಭಿತ್ತಿಗಳಿಂದಲೂ, ಸುವರ್ಣದ ಕಪಾಟುಗಳಿಂದಲೂ ಎಷ್ಟು ಶೋಭಿತವಾಗಿ ತೋರುತ್ತಿರುವುದು. ಶಂಭೋ ನಿನ್ನ ಪಾದವನ್ನು ಕಾಣದೆ, ವ್ಯರ್ಥವಾಗಿ ಮೂರ್ಖರು ಜಗತ್ತಿನಲ್ಲಿ ಪಾಪಕ್ಕೆ ಈಡಾಗುವರಲ್ಲಾ! ಏನು ಮಾಡಲಿ. ಒಳ್ಳೇದು, ಇದು ಕಲಿಪುರುಷನ ಹವವೇ ಇರುವದು. ಇದು ಸಮಯವಲ್ಲ ; ವೇಳೆಯು ಪರಣವಾಗುವುದು. ಇನ್ನು ಒಳಗೆ ಗಮಿಸುವಾ.

ಕೈಲಾಸ ದೃಶ್ಯ

ಆಹಾ, ಶ್ರೀಶಂಕರನು ಎಷ್ಟು ಗಣಾಧೀಶ್ವರರಿಂದ ಒಡಗೂಡಿ ಕೂತಿರುವನು. ಈ ಜಗದೀಶ್ವರನು ಕೋಟಿಸೂರ್ಯಪ್ರಕಾಶನಾಗಿಯೂ ಕರಿವ್ಯಾಘ್ರಸಿಂಹ ಚರ್ಮಗಳಿಂದ ಅಲಂಕೃತನಾಗಿ ಚಂದ್ರ, ಗಂಗಾ, ಪಾರ್ವತಿ, ನಂದಿ, ಭೃಂಗಿ, ತ್ರಿಶೂಲ ಮೊದಲಾದವುಗಳಿಂದಲೇ ಒಪ್ಪಿರುವನು. ಒಳ್ಳೇದು, ಇನ್ನು ಹತ್ತಿರವೇ ಗಮಿಸುವಾ, ಭೋ ಮಂಗಲ ಸ್ವರೂಪನೇ ನಿನಗೆ

ಜಯಜಯಕಾರವಾಗಲಿ. ಗಜಸುರಾಂತಕ, ವಿಷಕಂಠ, ವೃಷಭಧ್ವಜ, ಸರ್ಪಾಭರಣ, ಸಕಲದೇವಾರ್ಚಿತ, ಭಕ್ತಿಸುಖದಾಯುಕ, ನಿಗಮಾಗಮಗೋಚರ ತಮ್ಮ ದಂಪತಿ ಮೊದಲಾದವರ ಪಾದಾರವಿಂದಕ್ಕೆ ಅಭಿವಂದಿಸುತ್ತೇನೆ.

ಪರಮೇಶ್ವರ: ಬನ್ನಿರಿ ನಾರದ ಮಹಾಮುನಿಗಳೇ. ನಿಮಗೆ ಜಯಜಯ ಸರ್ವೋತ್ತರುಷವಾಗಲಿ.

ನಾರದ : ಶ್ರೀ ಮದ್ವೀರಶೈವ ಮತೋದ್ಧಾರಕನಾದ ನಂದಿಕೇಶ್ವರನೇ ನಿನ್ನ ಪಾದಾರವಿಂದಕ್ಕೆ ನಮಸ್ಕರಿಸುತ್ತೇನೆ.

ನಂದೀಶ : ಬನ್ನಿರಿ ಬನ್ನಿರಿ, ವಿರಂಚಪುತ್ರ, ಸತ್ಕಲಾಪಚರಿತ್ರ, ಪರಮಪವಿತಾ ಅಖಿಳಾಂಡ ಬ್ರಹ್ಮಾಂಡ ನವಖಾಂಡ ಸುದ್ಧಿಸೂತ್ರಾ ವಿಮಸಗಾತ್ರ, ಶಿವಭಕ್ತಿವಿಚಿತ್ರ, ಶುಭಮಸ್ತು ಶುಭಮಸ್ತು. ನೀವು ಮಾಡುವ ಕಾರ್ಯವು ಬಹುಶಿಸ್ತು, ನಿಮ್ಮಲ್ಲಿರುವುದು ಸಮಸ್ತು. ಆಗಲಿ ನಿಮ್ಮ ಯೋಗ್ಯಸ್ಥಾನಕ್ಕೆ ವಿಶ್ರಮಿಸಿರಿ.

ನಾರದ: ಭೋ ಜಗನ್ಮಾತೆ ಜಗದ್ಭರಿತೆ ನಿಮ್ಮ ಪಾದಾರವಿಂದಕ್ಕೆ ನಮಸ್ಕರಿಸುತ್ತೇನೆ.

ಪಾರ್ವತಿ: ನಾರದರೇ ನಿಮಗೆ ಕಲ್ಯಾಣವಾಗಲಿ. ಮುನಿಪರೇ, ನೀವು ಯಾವ-ಯಾವ ಲೋಕವನ್ನು ಸಂಚರಿಸಿ ಬಂದಿರುವಿರಿ? ಭೂ ಲೋಕದಲ್ಲಿ ಶಿವಭಕ್ತಿಯೆಂಬ ಬಳ್ಳಿಯು ವಿಸ್ತಾರವಾಗಿ ಹಬ್ಬಿರುವುದೋ ಅಥವಾ ಇಲ್ಲವೋ ಕಥನ ಮಾಡಿರಿ.

ನಾರದ: ಶಾಂಭವಿ ಅವ್ವನವರು ನಾನು ಮೊದಲೇ ಭಿನ್ನೈಸಿ ಕೇಳಿಕೊಳ್ಳಬೇಕೆಂಬ ಕಾರ್ಯಕ್ಕೆ ತಾವೇ ಸೂಚಿಸಿದಿರಿ. ಮಾತಾಪಿತರೇ ಭಿನ್ನೈಸುತ್ತೇನೆ ಆಲಿಸಿರಿ.

ನಾರದನ ಪದ :

ಪೇಳುವೆ ಲಾಲಿಸು ಬಾಳಾಂಬಕ ನೀನು ।
ಭೂ ಲೋಕದ ಸುದ್ದಿಯನು । ನಾನು ।
ಎಲ್ಲಿ ನೋಡಿದಲ್ಲಿ । ಮಲ್ಲಚಾರ್ವಾಕರು ।
ಖುಲ್ಲಜೈನರು ತೋರುಹರು ॥ ೩ ॥

ನಾರದ : ಭೋ ಶಂಭೋ ದೇವಿಯವರು ಕೇಳಿದ ವಿಷಯವನ್ನು ವಿಸ್ತಾರವಾಗಿ ವರ್ಣಿಸುವೆ ಚೆನ್ನಾಗಿ ಲಾಲಿಸಿರಿ. ಶಿವಭಕ್ತಿಯು ಎಲ್ಲಾ ಲೋಕದಲ್ಲಿ ವಿಶೇಷವಾಗಿರುವದು. ಆದರೆ, ಭೂಲೋಕದಲ್ಲಿ ಮಾತ್ರ ಬಹುಗುಪ್ತವಾಗಿರುವದು. ಶಂಭೋ ಆ ಭರತ ಖಂಡ ಕರ್ಮಭೂಮಿಯಲ್ಲಿ ಜೈನ, ಬೌದ್ಧ, ಚಾರ್ವಾಕಾದಿ ಮತಗಳು ಹೆಚ್ಚಿ, ಶಿವಮತವನ್ನು ನಿಂದಿಸಿ, ಅಷ್ಟಾವರ್ಣವನ್ನು ದೂಷಿಸುತ್ತಿರುವರು. ಪ್ರಜೆಗಳು ಸಹ ಪ್ರಭುಗಳಾಗಿರುವರು. ಎಲ್ಲಿ ನೋಡಿದರೂ, ಶಿವಾಲಯದ ಮಹಾದ್ವಾರಗಳು ಕಲ್ಲುಗಳಿಂದ ಮುಚ್ಚಲ್ಪಟ್ಟಿರುವವು. ಜಂಗಮ ಆಚಾರ್ಯರಿಗೆ ಕೊಟ್ಟಿದ್ದ ಗ್ರಾಮ, ಭೂಮಿ, ಮಠ–ಮಾನ್ಯಗಳೆಲ್ಲಾ ಹಾಳಾದವು. ಎಲ್ಲಿ ನೋಡಿದಲ್ಲಿಯೂ ಜೈನ ಬಸದಿಗಳು, ಜಿನಭಕ್ತರು ತುಂಬಿರುವರು. ಸಕಲ ಧರ್ಮಗಳು, ನೀತಿಗಳು, ಸದಾಚಾರಗಳು ಮುಳುಗಿ, ಅಧರ್ಮ–ಅನಾಚಾರ, ಹಾದರ, ಮೋಸ ಡಾಂಭಿಕತನ ಇವೇ ಮೊದಲಾದ ದುರ್ಗುಣ, ದುಷ್ಟಟ, ದುರ್ಬುದ್ಧಿ, ದುರ್ಮನಸ್ಸು, ದುಃಸ್ವಭಾವಗಳು ಆವರಿಸಿಕೊಂಡಿರುವವು. ಕಾರಣ, ಶಿವಾನುಭಾವಿಗಳು ಹೊರಪಡದೆ ಗುಪ್ತರಾಗಿರುವರು. ಕೆಲವು ಶಿವಭಕ್ತರು ಇತರ ವೇಷವನ್ನು ಧಾರಣೆ ಮಾಡಿಕೊಂಡು ಲೌಕಿಕವನ್ನು ಮರೆತು ಪರವಶರಾಗಿರುವರು. ಮಹತ್ವಗಳಿಲ್ಲದೆ ಮೂಢಜನರಲ್ಲಿ ಅಜ್ಞಾನವು ತುಂಬಿ, ನಂಬಿಗೆ ಹುಟ್ಟದೆ, ಲೋಕವು ಬಹು ಕೆಟ್ಟಿರುವದು. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮಂತ್ರಗಳೆಂಬ ಅಷ್ಟಾವರ್ಣಗಳೆಲ್ಲ ಅಡಗಿ, ಜ್ಞಾನವು ಕಡಿಮೆಯಾಗಿರುವದು ದೇವಾ, ತಾವೇ ಅವತರಿಸಬೇಕು.

ಪರಮೇಶ್ವರನ ಪದ :

ಲಾಲಿಸು ಯತಿವರ ಪೇಳುವೆನು ನಾನೀಗ ।
ಭಕ್ತಿಯ ಮಾರ್ಗವನು । ಇನ್ನು ॥
ವೀರಶೈವ ಮತಾದಿಚಂದ್ರನು ।
ಮುರಾರಿ ನಂದಿಯನು ನಾನು ॥೧॥

ಪರಮೇಶ್ವರ: ಅಯ್ಯಾ ನಾರದರೇ, ನನ್ನ ಸ್ವರೂಪನಾದ ಈ ನಂದೀಶ್ವರನನ್ನು ಕಳುಹಿಸಿಕೊಡುತ್ತೇನೆ. ನನಗೂ ನಂದೀಶ್ವರನಿಗೂ ಎಳ್ಳಷ್ಟಾದರೂ ಭೇದವಿಲ್ಲ. ಈತನು ಭಕ್ತಿಬೀಜನು, ಮುಕ್ತಿಕೋಶನು. ಯನ್ನೊಳು ಅನುರಾಗದಿಂದ ಮೆರೆಯುವವನು. ಆ ಕಾರಣವಾಗಿ, ಈ

ನಂದೀಶನನ್ನು ಕಳಿಸುತ್ತೇನೆ. ಈತನು ಭಕ್ತಿ, ಜ್ಞಾನ, ಶಿವಾಚಾರವನ್ನು ಪ್ರತಿಷ್ಠಾಪಿಸುವನು. ಸಕಲ ಧರ್ಮಗಳ ನೀತಿಗಳನ್ನು ಕಾಪಾಡುವನು. ದ್ವಿತೀಯ ಶಂಭುವಾದ ಈ ನಂದೀಶ್ವರನಿಂದಲೇ ಲೋಕವೆಲ್ಲಾ ಸಂತುಷ್ಟವಾಗುವುದಯ್ಯಾ ನಾರದರೇ.

ನಾರದನ ಪದ :

ಹರನು ಮತೋದ್ಧಾರ ಪುರಹರನು ನೀನಲ್ಲದೆ ।
ನರರು ಪಾರಾಗುವರೇ । ದೇವಾ ॥
ಕರ್ಮ ಕುದ್ದರಮತ ಧರೆಯೊಳು ತುಂಬಿ ।
ಹೊರ ಚೆಲ್ಲುತಿರುವುದು । ಇಂದು ॥

ನಾರದ: ದೇವಾದಿ ದೇವಾ, ಶಿವಭಕ್ತರಿಗೆ ಭಾಗ್ಯ ಸ್ವರೂಪನಾಗಿ, ಲೋಕಕ್ಕೆ ಮಂಗಲಕರವಾದ, ತನ್ನ ಅಭಿವೃದ್ಧಿಯುಳ್ಳವನಾಗಿ ಉತ್ಕೃಷ್ಟವಾದ ಅವತಾರವನ್ನು ಎತ್ತಿದವನಾಗಿ ಮೊರೆ ಹೊಕ್ಕವರನ್ನು ರಕ್ಷಿಸಿ, ಶಿವಜ್ಞಾನ ತೇಜಸ್ಸಿನಿಂದ ಪೂರ್ಣನಾಗಿ, ಲೋಕಕ್ಕೆ ಆದಿಗುರುವಾಗಿ, ಪ್ರಮಥಶ್ರೇಷ್ಠನಾಗಿ, ಶಿವಜ್ಞಾನವೆಂಬ ಆಕಾಶವೇ ತನ್ನ ಪಟ್ಟಣವಾದ ಈ ಆದಿ ನಂದೀಶ್ವರನಿಂದಾದರೂ, ವೀರಶೈವ ಮತ ಜೀರ್ಣೋದ್ಧಾರ ಗೈಯುವುದು ದುರ್ಲಭವು. ನನಗೆ ಹಾಗೆ ಕಂಡು ಬರುತ್ತದೆ. ಯಾಕೆಂದರೆ, ಮತಗಳು ಅತೀ ವೆಗ್ಗಳವಾಗಿ ಶಿವಭಕ್ತರ ಆಚಾರಕ್ಕೆ ಕಂಟಕವಾಗಿರುವವು. ಕಾರಣ, ನೀವೇ ಅವತರಿಸಬೇಕು ದೇವಾ.

ಪರಮಾತ್ಮನ ಪದ :

ದೋಷರಹಿತ ನಂದೀಶ ಮುನಿರಾಯ ।
ಈಶ ವೃಷಭ ಭಕ್ತಿಬೀಜ ಮುನಿರಾಯ ॥
ಮೃತ್ಯುಂಜಯನೀತ ಮುನಿರಾಯ ।
ವಾಸವಾದಿ ವಂದಿತನು ಮುನಿರಾಯ ॥

ಪರಮಾತ್ಮ: ನಾರದ ಮಹರ್ಷಿಗಳೇ, ಈ ನಂದೀಶ್ವರನು ನಿರ್ವಿಕಾರನು, ನಿರ್ಲೇಪನು, ವಿಶಾಲಭಕ್ತಿವುಳ್ಳವನು, ಅಗಣಿತವಾದ ಮಹತ್ವಕ್ಕೆ ಸ್ಥಾನೀಭೂತನು. ಎಡೆಬಿಡದೆ ತನ್ನನ್ನು ಭಜಿಸಿದವರಿಗೆ ಕೊರತೆರಹಿತವಾದ ಸುಖವನ್ನು ಕೊಡುವವನು. ಈ ಮಹಿಮನನ್ನು ವರ್ಣಿಸುವುದು ಅಸಾಧ್ಯವಾದದ್ದು.

ವಿಷ್ಣು, ಬ್ರಹ್ಮ, ಸುರೇಂದ್ರರಿಗೆ ಅಗೋಚರನು. ಪರಕ್ಕೆ ಪರವಾದ ಈ ವೃಷಭೇಂದ್ರನನ್ನು ಪ್ರಮಥರೆಲ್ಲರೂ ಆಗಿಂದ್ದಾಗ್ಗೆ ಕೊಂಡಾಡುತ್ತಾರೆ.

ಈ ಮಹಾತ್ಮನು ನನಗಿಂತಲೂ ಅಧಿಕನು. ಈತನ ಘನವನ್ನು ತಿಳಿಯುವುದು ನನಗೂ ಅಸಾಧ್ಯವು ಕಂಡ್ಯಾ ಬ್ರಹ್ಮಪುತ್ರಾ.

ನಾರದನ ಪದ :

ವಿಹಿತ ವಿಹಿತ ನಿನ್ನ ವಚನ । ಶಂಭುಲಿಂಗಾ ।
ಅಹಿತಮತವ ಶಿಕ್ಷಕನಲ್ಲೋ । ಶಂಭುಲಿಂಗಾ ।
ಪಾಹಿ ಪಾಹಿ ನೀನು ಹೊರಡು । ಶಂಭುಲಿಂಗಾ ।
ದ್ರೋಹಿಶಿಕ್ಷಕ ಕರ್ತ ನೀನೆ । ಶಂಭುಲಿಂಗಾ ।

ನಾರದ : ಭೋ ಶಂಭೋಶಂಕರ, ನಿನ್ನ ಉಪದೇಶಗಳನ್ನು ಪಡೆದು ಶಿಷ್ಯನಾಗಿ, ಶಿವಭಕ್ತರಲ್ಲಿ ಅಗ್ರೇಶ್ವರನಾಗಿ, ಸಕಲವಿದ್ಯೆಗಳಲ್ಲಿ ಪರಿಪೂರ್ಣನಾಗಿ, ಶಿವಜ್ಞಾನಾಮೃತದಿಂದ ತೃಪ್ತನಾಗಿ, ಚಿತ್ತುಯುಕ್ತನಾಗಿ, ಸಕಲೇಂದ್ರಿಯ ಸುಭಾಗತ ಸೌಖ್ಯವನ್ನು ಆಯಾ ಲಿಂಗಗಳಿಗೆ ಅರ್ಪಿಸಿ, ಅವುಗಳ ಪ್ರಸಾದದಿಂದ, ಆನಂದವನ್ನು ತಾನು ಅನುಭವಿಸಿ ತೃಪ್ತನಾಗಿ, ಶಿವಯೋಗಸಂಪನ್ನರಾದವರಿಗೆ ಮಾತ್ರ, ಸುಖದಾಯಕನಾಗಿರಬಹುದು ಆದರೆ, ಪಾಪಾತ್ಮರಾದ ವೇದಬಾಹಿರರಲ್ಲಿ ಅಗಣಿತ ಮಹಿಮೆಯನ್ನು ತೋರಿಸಿ, ಶಿವಮಯವಾಗಿ ಮಾಡಬೇಕಾದರೆ, ಅನ್ಯರಿಗೆ ದುರ್ಲಭವು. ಯಜಮಾನರೇ ಈ ಕಾರ್ಯವನ್ನು ತಾವು ಎರಡನೆಯವರ ಮೇಲೆ ಹಾಕಬಾರದು. ಇರಲಿ, ನಿಮಗೂ ನಂದೀಶನಿಗೂ ಏನೂ ಭೇದವಿಲ್ಲ, ನನ್ನ ಸ್ವರೂಪನಾದ ಈ ನಂದೀಶನನ್ನು ಕಳಿಸಿಕೊಡುತ್ತೇನೆ ಅಂತ ಅಂದಿರಲ್ಲ ಇದರ ಅಭಿಪ್ರಾಯವೇನು? ಹೇಳಿರಿ.

ಪರಮೇಶ್ವರನ ಪದ :

ನಡೆ – ನುಡಿಯ ಬಿಡದೆ ಚರಿಪ ಮುನಿರಾಯ ।
ಮೃಡನ ಭಕ್ತಿ ನಂದೀಪ। ಮುನಿರಾಯ ॥
ಪೊಡವಿಯೊಳು ಶಿವಮತವ ಮುನಿರಾಯ ।
ಬಿಡದೆ ತುಂಬುವನು ನಂದಿ ಮುನಿರಾಯ ॥

ಪರಮೇಶ್ವರ : ಏನಯ್ಯ ನಾರದರೆ, ನುಡಿದಂತೆ ನಡೆಯಬೇಕಾದರೆ, ಈ ನಂದೀಶ್ವರನಲ್ಲದೆ ಮತ್ತಾರಿಂದ ಆಗದು. ಈ ಸಾಕ್ಷಾತ್ ನಂದೀಶ್ವರನು ಎಂತಹ ಗಂಡಾಂತರ ಬಂದೊದಗಿದರೂ ಸಡಗರದಿಂದಲೇ ನುಡಿದ ವಚನವನ್ನು ಸಿದ್ಧಾಂತ ಮಾಡಿ, ಎಡೆಬಿಡದೆ ಪರಮಾನಂದ ದೊಳು ಮುಳುಗ್ಯಾಡುವನು. ಅಗೋಚರನೂ, ಅಸಾಧ್ಯನೂ,

ನಿಗಮಾಗಮತೀತನೂ. ಶ್ರೀ ಗುರು ಗುದಿನೇಶನಲ್ಲಿ ಎಡೆಬಿಡದೆ ಹೊಂದಿಕೊಂಡಿರುವ. ಆದ್ದರಿಂದ, ಭೂಲೋಕದಲ್ಲಿ ಭಕ್ತಿ, ಜ್ಞಾನ, ವೈರಾಗ್ಯವನ್ನು ಪ್ರಕಟಿಸಬೇಕಾದರೆ, ಈ ನಂದೀಶ್ವರನಲ್ಲದೆ, ನನ್ನಿಂದಲೂ, ನನ್ನ ಮಕ್ಕಳಿಂದಲೂ ಆಗಲಾರದು. ಈತನು ಆದಿಗೆ ಆದಿಯಾಗಿ, ಶಿವಲಿಂಗಕ್ಕೆ ವಾಹನನಾದವನು. ಈತನ ಮಹಿಮೆಯು ನಿಮಗೆ ಹೇಗೆ ತಿಳಿದೀತು? ನಾರದರೇ, ಈ ಸಾಕ್ಷಾತ್ ದ್ವಿತೀಯ ಶಂಭುವೇ ಪರಮಾತ್ಮನೆಂದು ತಿಳಿ. ನೀನು ಭೂಲೋಕಕ್ಕೆ ಹೋಗಿ, ಕೊಂಡೆ ಮಂಚಣ್ಣನಾಗಿ ಹುಟ್ಟಿ ಈ ಬಸವನ ಮೇಲೆ ಚಾಡಿಯನ್ನು ಹೇಳಿ ಭಕ್ತಿಯನ್ನು ಹೊರಪಡಿಸು ಕಂಡ್ಯಾ. ನಾರದರೇ, ಭೂಲೋಕದಲ್ಲಿ ಕಲ್ಯಾಣಪಟ್ಟಣಕ್ಕೆ ಅರಸನಾದ ಬಿಜ್ಜಳನಿಗೆ ಕೊಂಡೆಮಂಚಣ್ಣ ಮಂತ್ರಿಯಾಗು ನಡೆ.

ನಾರದ : ಭೋ ಆದಿನಂದೀಶ್ವರಾ, ನಿಮ್ಮ ದಿವ್ಯವಾದ ಪಾದಾರವಿಂದಕ್ಕೆ ಪುನಃ ನಮಸ್ಕಾರವಿರಲಿ. ದ್ವಿತೀಯ ಶಂಭೂ ನಿನ್ನ ಮಹಿಮೆಯನ್ನು ತಿಳಿಯಬೇಕಾದರೆ, ನಮ್ಮಂತಹ ಯಃಕಶ್ಚಿತರಿಗೆ ಸಾಧ್ಯವೇ ಸ್ವಾಮಿ. ಇರಲಿ, ದೇವಾಧಿದೇವಾ ತಮ್ಮನ್ನು ಆಶ್ರಮಿಸಿದವರಿಗೆ ಮಹಾಜ್ಞಾನವನ್ನುಂಟು ಮಾಡುವ ಮಹಾಶಂಭುವೇ, ಈ ಪೂಜ್ಯನಾದ ನಂದೀಶ್ವರನನ್ನು ಭೂಲೋಕಕ್ಕೆ ಕಳಿಸಿ ಪವಾಡಗಳನ್ನು ಉಂಟುಮಾಡಿಸು ಮಹಾದೇವನೇ. ಸಕಲ ಪ್ರಪಂಚಕ್ಕೂ ಪೂಜ್ಯನಾಗಿ, ಶಿವಧರ್ಮ ಮಾರ್ಗವನ್ನು ಪ್ರಕಟಿಸಿ, ಗುರು, ಲಿಂಗ, ಜಂಗಮ ತ್ರಿವಿಧ ಭಕ್ತಿಯಲ್ಲಿ ಅಧೀನನೆನಿಸಿ ಭೂಲೋಕದಲ್ಲಿ ಅಷ್ಟಾವರಣವನ್ನು ಸ್ಥಾಪಿಸಿ, ಶಿವನೇ ಸರ್ವೋತ್ತಮನೆಂದು ಪ್ರಸಿದ್ಧಗೊಳಿಸು. ಮಹಾಜ್ಞಾನವನ್ನು ಉಂಟುಮಾಡಿಸುವ ಭಾರವು ತಮ್ಮದೇ ಆಗಿರುತ್ತದೆ. ಆದ್ದರಿಂದ, ಜಾಗೃತಿಯಿಂದ ನಂದೀಶ್ವರನನ್ನು ಪೃಥ್ವಿಗೆ ಕಳಿಸು ಭೋ ಪಾರ್ವತೀಶ್ವರಾ. ಚಂದ್ರಮೌಳಿ, ತಮ್ಮ ಅಪ್ಪಣೆ ಪ್ರಕಾರ ಭೂಲೋಕಕ್ಕೆ ಹೋಗಿ ಕೊಂಡೆಮಂಚಣ್ಣನಾಗಿ ಹುಟ್ಟಿ ಬಸವೇಶ್ವರನ ಮೇಲೆ ಚಾಡಿಯನ್ನು ಮೇಲಿಂದ ಮೇಲೆ ಹೇಳಿ, ಭಕ್ತಿಯನ್ನು ಹೊರಪಡಿಸುತ್ತೇನೆ. ಜಾಗೃತಿಯಿಂದ ಭೂಲೋಕಕ್ಕೆ ಹೋಗುತ್ತೇನೆ. (ಹೋಗುವನು)

ಶಿವ : ಹೇ ಗಂಗಾ, ನೀನು ಭೂಲೋಕಕ್ಕೆ ಹೋಗಿ, ಯನ್ನ ಸದ್ಧರ್ಮ ಮೂರ್ತಿಯಾದ ಈ ಬಸವನಿಗೆ ಪತ್ನಿಯಾಗಿ, ಜಂಗಮರ ಸೇವೆ ಮಾಡಿ, ಮೋಕ್ಷವನ್ನು ಪಡೆ ತಿಳಿಯಿತೆ?

ಗಂಗೆಯ ಪದ :

ಪಶುಪತಿ ನಿನ್ನಯ ಪೆಸರಿಸಿ ಸ್ತುತಿಸುವೆ ।
ಪಸನಾದ ಜಡೆಯೊಳು ಕುಶಲಾಗಿ ನಾನು ।
ಭೂಮಿಗೆ ನಾನು ಗಮಿಸಲಾರೆನು ಇನ್ನು ।
ಸೋಮಶೇಖರ ಯನ್ನ ರಕ್ಷಿಸೊ ಗುರುವೇ ॥ ೧ ॥

ಗಂಗೆ : ಹಾ ಹಾ ! ಪರಮೇಶ್ವರಾ, ಎಂತಹ ಅಹಿತವಚನವನ್ನು ಆಡುವಿರಿ. ಶಿವ ಶಿವ. ನಾನು ಪತಿಯೇ ದೈವವೆಂದು ಶ್ರುತಿವಾಕ್ಯವನ್ನು ಸ್ವೀಕರಿಸಿ, ನಿಮ್ಮ ಪಾದಸೇವೆಗೈದು, ನಡೆಯುವೆನು. ಅಂದ ಬಳಿಕೆ, ಬಸವನಿಗೆ ಪತ್ನಿಯಾಗುವ ಬಗೆ ಹೇಗೆ? ಹೇಳಿರಿ.

ಶಿವ: ಹೇ ಸದ್ಗುಣಮಣಿಭೂಷಿತಳಾದ ಗಂಗಾದೇವಿಯೇ ಕೇಳು, ಈ ಭೃಂಗೀಶ್ವರ, ಚಂಡೇಶ್ವರ ಮೊದಲಾದವರೇ ನನ್ನ ಸಮಾಜಿಕರನ್ನು ಪ್ರಮಥರೆಂದು ತಿಳಿದು, ಈ ವೃಷಭೇಶ್ವರನನ್ನು ಮಾತ್ರ ನನ್ನಂತಲೇ ಭಾವಿಸು. ಯಾಕೆಂದರೆ, ಆದಿಯಲ್ಲಿ ನಾನು ಲೋಕವನ್ನು ನಿರ್ಮಿಸಿ, ಅವುಗಳ ಆಶ್ರಯಕ್ಕಾಗಿ ಧರ್ಮವೆಂಬ ಅಂಶವನ್ನು ಮೊದಲೇ ಸತ್ಪುರುಷರ ಹೃದಯದಲ್ಲಿ ಸ್ಥಾಪಿಸಿದೆನು. ಸಕಲ ವೇದಮಾರ್ಗ ಮರ್ಮಗಳಿಗೆ ಆಧಾರವಾದ ಕರಚರಣಾದ್ಯ ಅವಯವಗಳು ಉಳ್ಳಂತಹ ಈ ವೃಷಭಸ್ವರೂಪನಾದ, ನನ್ನ ಕಲಿಯು ಮಹಾ ಪ್ರಳಯದಲ್ಲಿ ಮರಳಿ ನನ್ನ ಸೇರಿತು. ಆದ್ದರಿಂದ, ಈ ಮಹಿಮನ ರೂಪವೇ ನನ್ನ ರೂಪ. ಇದು ನಿಶ್ಚಯವೆಂದು ತಿಳಿ ಗಂಗಾ. ಸಂಶಯವೇಕೆ? ಈತನು ಅರಿಷಡ್ವರ್ಗದೂರನು, ಅಗೋಚರನು, ಅಸಾಧ್ಯನು. ಅಂದ ಬಳಿಕ ನೀನು ಭೂಮಿಗೆ ಹೋಗಿ, ಗಣಾಧೀಶ್ವರನಿಗೆ ಭಕ್ತಿಪೂರ್ವಕವಾಗಿ, ಪಂಚಾಮೃತ ಭೋಜನವ ಮಾಡಿಸಿ, ಈ ಬಸವನ ಸೇವಾಕಾರ್ಯದಲ್ಲಿ ಧುರೀಣಳಾಗಿ ಮೋಕ್ಷಮಂ ಪಡೆ ಗಂಗಾ.

ಗಂಗೆ : ಏ ಶಂಭೋ ವಿಷ್ಣು, ಬ್ರಹ್ಮ ಸುರಪ ಮೊದಲಾದ ದೇವತೆಗಳೆಂಬ ಪಶುಪತಿಯಾದ ರುದ್ರನೇ ನಿಮ್ಮ ಚಿದ್ರೂಪವನ್ನು ತಿಳಿಯಬೇಕಾದರೆ, ನಾನು ಯೋಗ್ಯಳೆ? ತಮ್ಮ ಸುಬೋಧೆಯಿಂದ ನಂದೀಶ್ವರನ ಮಹಿಮೆಯನ್ನು ತಿಳಿದು ಕೇಳಿ ಧನ್ಯಳಾದೆ. ಯನ್ನ ಸಂಶಯಂಧಕಾರವು ದೂರಾಯಿತು. ತಮ್ಮ ಅಪ್ಪಣೆಯ ಪ್ರಕಾರ ಭೂಲೋಕಕ್ಕೆ ಹೋಗುತ್ತೇನೆ.

ಶಿವಭಕ್ತಶಿಖಾಮಣಿಯಾದ ಬಲದೇವ ಮಂತ್ರಿಯವರಿಗೆ ಮಗಳಾಗಿ, ಮತಾಧಿಕಾರಿಯಾದ ಬಸವರಸರಿಗೆ ಪತ್ನಿಯಾಗಿ, ಗಣಂಗಳ ಭೋಜನಕ್ಕೆ ಪಕ್ವಾನ್ನದಿಂದ

ಭಕ್ತಿಯನ್ನು ವೆಗ್ಗಳಿಸಿ, ಮೋಕ್ಷವನ್ನು ಪಡೆದುಕೊಳ್ಳುತ್ತೇನೆ. ಭೂಲೋಕಕ್ಕೆ ಹೋಗುತ್ತೇನೆ ಅಪ್ಪಣೆಯನ್ನು ದಯಪಾಲಿಸಿರಿ.

ಶಿವನ ಪದ :

ಬಾರೈ ನಂದಿಯೆ ತೊರಿತದಿ ಬೇಗನೆ ।
ಧರೆಯೊಳು ಅವತರಿಸಿ ।
ಪರಮತ ಖಂಡಿಸಿ ಹರಮತ ಗೈಯುತ ।
ಬಸವ ನಾಮದಲಿ ॥

ನಂದಿ ಪದ :

ನೀಲಕಂಠ ನಿನ್ನ ಆಜ್ಞೆಯ ಹೊಂದುವೆ ।
ಕ್ಷಿತಿಗೆ ನಾ ಪೋಗುವೆನು ।
ಹಿತದಲಿ ನಿನ್ನನು ಸ್ತುತಿಸುತ ಭಕ್ತಿಯ ।
ಪತಿ ಕಲಿಸಿ ಪಾಲಿಸುವೆ ।

ಶಿವ : ನಂದೀಶ್ವರಾ, ಭೂಮಿಯಲ್ಲಿ ಶಿವಭಕ್ತಿ ಹಿತಾರ್ಥಮಯವಾಗಿ ಬಸವನೆಂಬ ನಾಮದಿಂದ ಅವತರಿಸಿ ಭಕ್ತಿ, ಜ್ಞಾನ, ಸದಾಚಾರ ಸದ್ಗುಣಗಳನ್ನು ವಿಸ್ತರಿಸಿ ಭೂಮಿಯಲ್ಲೆಲ್ಲಾ ನಿನ್ನ ಮಹಿಮೆಯನ್ನು ವ್ಯಕ್ತಪಡಿಸುವೆಯಾ ನಂದೀಶ.

ನಂದಿ : ವಾಹ್ ಪರಮಾತ್ಮನೇ, ನಿಮ್ಮ ಪಾದವನ್ನು ಎಷ್ಟು ಕೊಂಡಾಡಿದರೂ ತೀರದು. ಶಂಭೋ ಕೈಲಾಸಪತಿ, ತಮ್ಮ ಅಪ್ಪಣೆಯ ಪ್ರಕಾರ ಭೂಲೋಕಕ್ಕೆ ಹೋಗಿ ಶಿವಮತವನ್ನು ಉದ್ಧಾರಮಾಡಿ, ಪರಮತವೆಂಬ ಅಂಧಕಾರವನ್ನು ಶಿವನಾಮ ಉಚ್ಚರಣೆಯಿಂಗ ಓಡಿಸುತ್ತೇನೆ. ಸ್ವಾಮಿ ಜಗದ ರಕ್ಷಕ, ಸಕಲ ಪ್ರಪಂಚಕ್ಕೂ ನೀನೇ ಪತಿಯಾಗಿ, ಸರ್ವಂತರ್ಯಾಮಿಯಾಗಿ ಇರುವಲ್ಲಿ, ಈ ಲೋಕದಲ್ಲಿಯೂ ಭೂಲೋಕದಲ್ಲಿಯೂ ಭೇದ ಎಲ್ಲಿರುವದು? 'ಸರ್ವಮಯಂ ಜಗತ್ತು ಶಿವಾತ್ಪರತರಂ ನಾಸ್ತಿ' ಎಂಬುದಂತೆ ಪ್ರಮಾಣವಿದೆ. ದೇವಾ, ಭೂಲೋಕದಲ್ಲಿ ಶಿವಭಕ್ತಿಯನ್ನು ಹರಡುವಂತೆ ಮಾಡುವ ಭಾರವು ನಮಗಿದೆ. ಇಗೋ, ಶ್ರೀ ಮನ್‌ಮಹಾ ಗುದ್ನೇಶ್ವರನ ಅಂತಃಕರಣದಿಂದ ಭೂಲೋಕದ ಕರ್ಮಕುಲವನ್ನು ನಾಶಮಾಡಿ, ವೀರಶೈವ ಮತವನ್ನು ಉದ್ಧಾರ ಮಾಡಿ, ದಿಗ್ವಿಜಯನಾಗಿ ಬಂದು, ನಿನ್ನ ಪಾದವನ್ನು ಕಾಣುತ್ತೇನೆ. ಈಶಾ ಸದ್ಗುಣಕೋಶಾ.

ಶಿವ : ನಂದೀಶಾ, ಚಿಂತೆಯನ್ನು ಬಿಡು ಬಿಡು. ನಾನೇ ಗುರುವಾಗಿ ಬಂದು, ಜ್ಞಾನ – ಸೌಖ್ಯವನ್ನು ಕೊಡುತ್ತೇನೆ. ಇಷ್ಟಲಿಂಗವಾಗಿ ನಿನ್ನ ತನು – ಕರಣಾದಿಗಳಲ್ಲಿ ನೆಲೆಸಿ, ಭೋಗಿಸುವೆನು. ಜಂಗಮ ಸ್ವರೂಪನಾಗಿ ಬಂದು, ಪ್ರಸಾದ ತೆಗೆದುಕೊಳ್ಳುವೆನು. ನನ್ನ ಪ್ರಾಣಸ್ವರೂಪರಾದ ಗಣಸಮೂಹವನ್ನು ನಿನ್ನ ಜೊತೆಗೆ ಕಳಿಸಿ ಕೊಡುತ್ತೇನೆ ನಂದೀಶಾ ಪೋಗು.

ಪಾರ್ವತಿ : ಪ್ರಾಣೇಶ್ವರಾ, ತಾವು ಭಕ್ತರಿಗೆ ಇದೇ ಪ್ರಕಾರವಾಗಿ ಅಪ್ಪಣೆಯನ್ನು ಕೊಟ್ಟು, ನಂತರ ಅದನ್ನು ಮರೆತು ಬಿಡುವಿರಿ. ಯಾಕೆಂದರೆ, ಬಾಗೇವಾಡಿಯಲ್ಲಿರುವ ವೃಷಭೇಶ್ವರನನ್ನು ಪೂಜಿಸುವ ಮಂಡಿಗಿ ಮಾದರಸರು – ಮಾದಲಾಂಬಿಕೆಯರು ಪುತ್ರ ಅಪೇಕ್ಷೆಯಿಂದ ಬಳಲುತ್ತಿರುವರು. ಈ ನಂದೀಶ್ವರನನ್ನು ಅವರಿಗೆ ಮಗನಾಗಿ ಜನಿಸುವಂತೆ ಅಪ್ಪಣೆ ಮಾಡಬೇಕು ಭೂತನಾಥ.

ಶಿವ : ಪಾರ್ವತಿದೇವಿ, ನಿನ್ನ ಮಾತು ನಿಜವೇ ಸರಿ. ಆದರೆ ಈ ನಂದೀಶ್ವರನನ್ನು ಆ ಬಾಗೇವಾಡಿ ವೃಷಭೇಶ್ವರನಲ್ಲಿ ಭಕ್ತಿ ಹೊಂದಿರುವ ಮಾದರಸ – ಮಾದಲಾಂಬಿಕೆಯರಿಗೆ ಮಗನಾಗಿ ಕಳಿಸುತ್ತೇನೆ. ಹೇ ಪಾರ್ವತಿ, ನೀನು ಬೆಂಬಲವಾಗಿ ಹೋಗಿ, ಅವರ ಮಗಳಾಗಿ, ಅಕ್ಕನಾಗಮ್ಮಳಾಗಿ ಜನಿಸಿ, ಜಂಗಮರ ಸೇವೆಯನ್ನು ಮನಗೊಟ್ಟು ಮಾಡು ನಡೆ. ನಂದೀಶ್ವರ ತಡವೇಕೆ? ಪೊಡವಿಗೆ ತೆರಳು. ಮೃಡಮತಗಳನ್ನು ಅಡಿಗಡಿಗೆ ಅತಿವೆಗ್ಗಳಪಡಿಸು ಕಂಡ್ಯಾ ನಂದೀಶಾ.

ನಂದೀಶ : ಭೋ ತ್ರಿಯಂಬಕ, ನಿಮ್ಮ ಅಪ್ಪಣೆಯ ಪ್ರಕಾರ, ಭೂಲೋಕಕ್ಕೆ ಹೋಗಿ, ಬಾಗೇವಾಡಿಯಲ್ಲಿರುವ ನಂದೀಶ್ವರನಲ್ಲಿ ಅಂತರ್ಗತನಾಗುತ್ತೇನೆ. ಆದ್ದರಿಂದ, ಭೂಲೋಕವನ್ನು ಕುರಿತು ಗಮನ ಮಾಡುತ್ತೇನೆ. ಶಿವಭೋ, ಶಿವಭೋ ಗುದಿನೇಶನೇ ನೀನೇ ಕಾಯಿ.

ದೃಶ್ಯ – ೨

(ಮಕ್ಕಳು ಇಲ್ಲದೆ ವ್ಯಸನದಲ್ಲಿ ಮಾದಲಾಂಬಿಕೆ ಕುಳಿತಿರುತ್ತಾಳೆ. ಅಲ್ಲಿಗೆ ಸಖಿ ಶಾಂತಮತಿ ಪ್ರವೇಶಿಸುತ್ತಾಳೆ.) (ಮನೆಯದೃಶ್ಯ)

ಶಾಂತಮತಿ ಪದ :

ಚಿಂತಿಯಾತಕೆ ದೇವಿ ಅಂತರಂಗವ ಪೇಳೆ ।
ಸುತಸುಖ ನಿಮಗಿಲ್ಲೇ ತಾಯೇ । ಇಂತು ನೀ ।

ಈ ಪರಿ ಭ್ರಾಂತಿಯಿಂದ ಇರುವುದು ।
ಶಾಂತವಲ್ಲವು ಕೇಳೇ ತಾಯೆ ॥

ಶಾಂತಮತಿ: ಅಮ್ಮಾ ಮಾದಲಾಂಬಿಕೆಯರೇ, ನಿಮ್ಮ ಮುಖಕಮಲವು ರಾಹು ತೊಡಕಿದ ಚಂದ್ರನಂತೆ ಕಳೆಗುಂದಿರುವುದಕ್ಕೆ ಕಾರಣವೇನು? ಹೇಳಬೇಕು.

ಮಾದಲಾಂಬಿಕೆ ಪದ :

ಮಕ್ಕಳು ಇಲ್ಲದೆ ದುಃಖ ಹೊಂದಿರುವೆನು ।
ತಕ್ಕಂಥ ಸತಿಯಳೇ ಕೇಳೆ ॥
ಅಕ್ಕರದಿಂದಲಿ ಸತ್ಕುಲದೀಪನು ।
ದಕ್ಕದೇ ಇರುವನು ದಾಸೇ ॥

ಮಾದಲಾಂಬಿಕೆ :

ಶ್ಲೋಕಾ –

ನಿಶಾರತ್ನಂ ಚಂದ್ರಂ ।
ಸಭಾರತ್ನಂ ಮಹಾವಿದ್ವಾನ್ ।
ಶ್ರವಣಘಟರತ್ನ ಶಿವಕಥಾಃ ।
ಗೃಹರತ್ನಂ ಬಾಲಕಃ ॥

ಸಖೀ ಏನು ಹೇಳಲಿ? ಭೂಮಿಯಲ್ಲಿ ಹೆಣ್ಣೆಂಬುದು ಹುಟ್ಟಬಾರದು. ನಾನು ಘನವಾದ ದುಃಖದಲ್ಲಿ ಮುಳುಗಿರುವೆನು. ಗೆಳತಿ, ಮಗನೆಂಬ ರತ್ನವು ಮನೆಯೊಳಿಲ್ಲದಿರಲು ಶೋಭಿಸುವದೇ? ಇದು ಅಲ್ಲದೇ, ಶಿವಪುರಾಣವು, ಆಗಮವು, ಶಿಭಜನೆಯು, ಶಿವ ಕೀರ್ತನೆಯು, ಶೃತಿಗಳು ಸಹಿತ ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲೆಂದು ಹೇಳುತ್ತವೆ. ಸಖೀ ಶಾಸ್ತ್ರಜ್ಞರ ವಚನವನ್ನು ಕೇಳಿ, ಎದೆ ಒಡೆದು, ಹೌಹಾರಿ ಕುಳಿತಿರುವೆ, ಇದಕ್ಕೆ ಗತಿಯೇನು?

ಶಾಂತಮತಿ :

ಅಮ್ಮಾ –

"ಅನಿತ್ಯಾನಿ ಶರೀರಾಣಿ ।
ವಿಭವೋ ನೈವಶಾಶ್ವತಂ ।
ನಿತ್ಯ ಸನ್ನಿತೋ ಮೃತ್ಯುಃ ।
ಕರ್ತವ್ಯಧರ್ಮ ಸಂಗ್ರಹಃ ॥"

ದೇವಿಯವರೆ. ಸಂತಾಪದಿಂದ ಬಳಲಿದರೆ ಆಗುವುದೇನು? ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಪಡಿಯದೆ ಈಗ ಬಯಸಿದರೆ ಬರಬಹುದೆ? ಈ ಸಂತಾಪವನ್ನು ದೂರಮಾಡಬೇಕಮ್ಮ ಪದ್ಮಗಂಧೀ.

ಮಾದಲಾಂಬಿಕೆ : ದಾಸಿಯರೇ, ಯೌವ್ವನ ಕಾಲದಲ್ಲಿ ಮಕ್ಕಳನ್ನು ಹಡೆದು, ನಳಿನ ತೋಳುಗಳಿಂದ ಎತ್ತಿ, ನೇತ್ರದಿಂದ ನೋಡಿ, ಮುದ್ದು ಕೊಡುವುದನ್ನು ನೋಡುವುದು. ನಾವು ಪೂರ್ವದಲ್ಲಿ ನೋಂಪಿಯನ್ನು ನೂತಿರಲಿಕ್ಕಿಲ್ಲವೆ?

ಶಾಂತಮತಿ : ಅಮ್ಮಾ ಜನನಿ, ಮನುಷ್ಯರಿಗೆ ದೇವರು ಅವರವರ ಪುಣ್ಯಕ್ಕೆ ತಕ್ಕಂತೆ, ಸುಖ – ದುಃಖಗಳನ್ನು ಸಮನಾಗಿ ಕೊಟ್ಟಿರುತ್ತಾನೆ. ಕಾರಣ, ನೀವು ವ್ಯರ್ಥವಾಗಿ ದುಃಖಿಸುವುದು ನಿರರ್ಥಕವೇ ಸರಿ. ತಾಯಿ ಈ ಇಚ್ಛೆಯನ್ನು ತಾವು ಬಿಡಬೇಕೆಂದು ಬೇಡಿಕೊಳ್ಳುತ್ತೇನೆ.

ಮಾದಲಾಂಬಿಕೆ : ಸಖಿಯಳೇ ನಾನು ಹೇಳುವ ವಚನ ರಚನೆಗಳನ್ನು ಚಿತ್ತವಿಟ್ಟು ಲಾಲಿಸು. "ಲಕ್ಷಣ – ಶೋಭೆಯಿಲ್ಲದ ಧಾತ್ರಿಯು, ಯೋಗವಿಲ್ಲದ ಕುದುರೆಯು, ಗುದಿನೇಶ್ವರನ ಮನೋಹರವಾದ ಮಹಿಮೆಯನ್ನು ಕವಿತಾ ರಚನೆಗಳಿಂದ ಕೊಂಡಾಡದೆ ಇರುವಂಥ ಶಾಸ್ತ್ರವು ಹೇಗೆ ಶೋಭಿಸುವುದಿಲ್ಲವೋ" ಹಾಗೆ ನಾನಾದರೂ ಸರಿ. ನಮ್ಮಂತಹ ಮಕ್ಕಳಿಲ್ಲದವರ ಬಾಳ್ವೆಯು ಇದ್ದು ಏನು ಮಾಡಬೇಕು?

(ಶ್ಲೋಕ) – "ಅಪುತ್ರಶ್ಯ ಗತಿರ್ನಾಸ್ತಿ ।
ಸ್ವರ್ಗೋ ನೈವನೈವಚಃಹ ॥"

ಅಂದ ಹಾಗೆ, ಮಕ್ಕಳಿಲ್ಲದವರಿಗೆ ಸ್ವರ್ಗವು ದೊರೆಯುವುದಿಲ್ಲ. ಬಂಜೆಯೆನಿಸಿ ಬಾಳುವುದಕ್ಕಿಂತಲೂ ಮರಣ ಹೊಂದುವುದೇ ಲೇಸು. ಆದರೆ ನಮ್ಮ ಪ್ರಾರಬ್ಧ ಕರ್ಮಕ್ಕೆ ಮಾಡತಕ್ಕದ್ದೇನು ಸಖೀ?

ಶಾಂತಮತಿ : ಅಮ್ಮಾ ತಾಯಿಯವರೇ, ನೀವೆಷ್ಟು ದುಃಖಗೊಂಡರೂ ವ್ಯರ್ಥವೇ ಸರಿ. ಈಶ ಮಹೇಶನಾದ ಗುದಿನೇಶ್ವರನ ಪಾದಾರವಿಂದವನ್ನು ಎಡೆಬಿಡದೆ ಭಜಿಸಿದ್ದೇ ಆದರೆ, ನಿಮ್ಮ ಮನೋಭಿಷ್ಟವನ್ನು ಪೂರ್ಣ ಮಾಡುವನಮ್ಮಾ ತಾಯಿ. ಅವ್ವಾ ಈ ಸುಂದರವಾದ ಮಂದಿರಕ್ಕೆ ಮಹಾರಾಜರು ಬರುವಂತೆ ತೋರುತ್ತದೆ. ನನಗೆ ಅಪ್ಪಣೆಯನ್ನು ದಯಪಾಲಿಸಿ ಅಮ್ಮ.

(ಮಾದರಸನ ಪ್ರವೇಶ)

ಮಾದರಸನ ಪದ :

ಚಿಂತಿ ಯಾತಕೆ ನನ್ನಯ ಸತಿಯಳೆ ।
ಅಂತರಂಗವ ಪೇಳೆ । ಇಂತು ಈ ॥
ಪರಿ ಶೋಕದೊಳು ಇರುವುದು ।
ಕಾರಣವೇನಿರುವುದು ಸತಿಯೇ ॥

ಮಾದರಸ : ಭೋ ಪ್ರಾಣಸಖೀ, ಕಸ್ತೂರಿಯಂತೆ ಮೈಕಂಪುಳ್ಳ ಕಾಂತೆಯೇ, ಮನಸ್ತಾಪವೆಂಬ ಬಿಸಿಲಿಂದ ನಿನ್ನ ಮುಖವೆಂಬ ಚಂದ್ರಮಂಡಲವು ನಗೆಯೆಂಬ ಬೆಳದಿಂಗಳನ್ನು ತೊರೆದಿರುವುದೇಕೆ? ಕಮಲಮುಖಿ, ನಿನ್ನ ಮಧುರವಾದ ಕೆಂದುಟಿಗಳು ಬತ್ತಿರುವ ಕಾರಣವೇನು? ಇದೂ ಅಲ್ಲದೆ, ನಿನ್ನ ಸಂತೋಷವೆಂಬ ಸಮುದ್ರದ ಹೆಚ್ಚುವಿಕೆಯು ತಗ್ಗಿರುವುದಲ್ಲೆ, ಇದರ ಅಭಿಪ್ರಾಯವೇನು? ಪುನಃ ನೇತ್ರಗಳೆಂಬ ನೈದಿಲೆಗಳಂತೂ ತೀರಾ ಬಾಡಿರುವವು. ಕಾರಣ ಇವುಗಳ ನಿಮಿತ್ಯವೇನು? ತಡಮಾಡದೇ ಹೇಳು. ಆಹಾ ಇದೇನು ಚಮತ್ಕಾರವು. ನಾನು ಬಂದಾಕ್ಷಣ ಮಾತನಾಡತಕ್ಕಂಥ ಈ ಕೋಮಲೆಯು ಮಾತನಾಡದೇ ಸುಮ್ಮನಿರುವ ಕಾರಣವೇನು ಇರಬಹುದು? ಈ ಸಾರಿ ಮಾತನಾಡಿಸಿ ನೋಡುತ್ತೇನೆ. 'ಹೇ ಮತ್ತಗಂಗಳೇ ನಿನ್ನ ಕರಕಮಲವೆಂಬ ಶಸ್ತ್ರವು ಕಪೋಲವೆಂಬ ಶಶಿಮಂಡವನ್ನು ತಲ್ಪಿರುವುದೇಕೆ? ನಿನ್ನ ಕೆಂಪನೆಯ ತುಟಿಗಳಿಂದ ಮೃತ್ಯುವನ್ನು ದೂರ ಮಾಡುವ ಅಮೃತಧಾರೆಯು ಬತ್ತಿದ ಸಂಗತಿಯೇನು? ತೀವ್ರವಾಗಿ ತಿಳಿಸು.'

ಮಾದಲಾಂಬಿಕೆ : ಪ್ರಿಯಾ, ದುಃಖಾಗ್ನಿ ವೆಗ್ಗಳವಾದ ನನಗೆ ಮಹನೀಯರ ವಾಕ್ಯಕ್ಕೆ ಉತ್ತರವೇ ಜರಗಲೊಲ್ಲದು. ಹೇಳಬೇಕೆಂದರೆ, ದಗ್ಧ ಸ್ವರವು ಉತ್ಪನ್ನವಾಗಿ ದುಃಖಕ್ಕೆ ಕಾರಣವಾಗುತ್ತದೆ. ಶಿವಶಿವಾ ಹೇಗೆ ಮಾಡಲಿ, ಹೇಳದಿರ್ದಡೆ ಈ ಮಾದರಸ ಮಹಾರಾಜರು ವ್ಯಸನಾಂಬುಧಿಯೊಳಗೆ ಮುಳುಗಿ ಬಿಡುವರು. ಹಾ ಹಾ! ಪರಮೇಶ್ವರಾ ಈ ಮಹಾತಾಪವನ್ನು ಅಂತರ್ಗತವಹಿಸಿ ಹೇಳಬೇಕೆಂದರೆ ಲಜ್ಜೆ ಉತ್ಪನ್ನವಾಗುತ್ತದೆ. ಶಿವ ಶಿವಾ ನೀನೇ ಕರುಣಿಸು.

ಮಾದರಸ : ಕಮಲನೇತ್ರೆ, ನಿನ್ನ ದಿವ್ಯವಾದ ತೋಳುಗಳಲ್ಲಿ ನಟ್ಟಿರುವವು ವಂಕಿಗಳು, ಮುಂಗೈಯಲ್ಲಿ ಬಂಗಾರದ ಬಳೆಗಳು ಸರದಾಡುವವು. ಮತ್ತು ನಿನ್ನ

ಮಾಪಿನ ತಳಿರೋಪಾದಿಯಲ್ಲಿರುವ ಪಾದದಲ್ಲಿ ಮುತ್ತು – ರತ್ನ ಖಚಿತವಾದ ತೋಡೇವುಗಳು ಬಿಚ್ಚಿ ನೆಲಕ್ಕೆ ಬಿದ್ದಿರುವವು. ಉಡುರಾಜಮುಖೀ ನಿನ್ನ ಮುಖಕಾಂತಿಯು ಕುಂದಿರುವುದಕ್ಕೆ ಕಾರಣವೇನು? ತಿಳಿಸು.

ಮಾದಲಾಂಬಿಕೆ ಪದ :

ಪ್ರಾಣಕಾಂತನೇ ಕೇಳೋ ಯೇನಿದು ಕರ್ಮವು ।
ಸ್ವಾನುರಾಗದಿಯೆಮಗೆ ತನಯರಿಲ್ಲವಲ್ಲಾ ।
ಹೀನಜನ್ಮವ ಧರಿಸಿ ಧರೆಯೊಳು ।
ಶೂನ್ಯಳಾಗಿ ಸುಖಿಪಲೆಂತು ।
ವಿನಯದಿಂದಲಿ ಸತಿ – ಪತಿಗಳು ।
ಮನಕೆ ಆನಂದ ಬಿಡುವದೆಂತು ॥

ಮಾದಲಾಂಬಿಕೆ : ಪ್ರಾಣದರಸ, ತನ್ನ ಕೈಗಳಿಂದ ನನ್ನ ಬೆರಳುಗಳನ್ನು ಹಿಡಿದು, ಭೋ ತಾಯಿ ನಡೆಯುವೆನೆಂದು, ತೊದಲ್ನುಡಿಗಳನ್ನಾಡಿ, ಒಂದೆರಡು ದಟ್ಟಡಿಗಳನ್ನಿಡುತ್ತ, ಭರದಿಂದ ನಿರಿಗೆಯನ್ನೆಳೆಯುವ ಸುರಚಿರವಾದ ಕಂದನು ಪ್ರೀತಿಯಿಂದ ಆಡುವ ಆಟವನ್ನು ಈ ನೇತ್ರಗಳು ಎಂದು ಕಂಡಾವೋ ಮನೋಹರಾ.

ಮಾದರಸನ : ಚಿನ್ಮಯಳಾದ ಮಡದಿಯೇ ಕೇಳು, ಮಗನ ವ್ಯಸನದಿಂದ ಬಸವಳಿದು ಕಸಿವಿಸಿಗೊಳ್ಳಬೇಡ. ಯಾಕೆಂದರೆ, ಮಗನ ಜನನವಾದರೆ, ದುಃಖವು ತೀರುವುದೇ? ಮಗನು ರೋಗಿಯಾಗಿ, ಅಜ್ಞಾನಿ–ಮೂರ್ಖನಾದರಂತೂ ತೀರಾ ದುಃಖ. ಅದಂತಿರಲಿ, ಅಲ್ಪ ಆಯುಷ್ಯವಂತನಾಗಿ, ಯೌವ್ವನಕ್ಕೆ ಬಂದು, ವಿದ್ಯಾಕೋವಿದನೆನಿಸಿ ಮೃತಪಟ್ಟರಂತೂ ಅತೀ ದುಃಖವೆಗ್ಗಳವಾಗಿ ನಾವು ಸಾಯುವ ಹೊತ್ತು ಬರುತ್ತದೆ. ಆದ್ದರಿಂದ, ಇದರ ಸಂತಾಪವನ್ನು ದೂರಮಾಡಿ, ಅಹೋರಾತ್ರಿ ಎಡೆಬಿಡದೆ, ಶಿವಧ್ಯಾನ, ಶಿವಭಜನ, ಶಿವಕೀರ್ತನ, ಜಂಗಮತೃಪ್ತಿ ಮಾಡಿಸಿ, ಮೋಕ್ಷವನ್ನು ಪಡೆದುಕೊಳ್ಳಬೇಕು. ಮತ್ಸ್ಯಗಂಗಳೇ ನಿಶ್ಚಯವಾಗಿ ತಿಳಿದು ನೋಡು.

ಮಾದಲಾಂಬಿಕೆ ಪದ :

ಮಕ್ಕಳಿಲ್ಲದವರ ಬಾಳ್ವೆ ರೆಕ್ಕೆಮುರಿದ ಪಕ್ಷಿಯಂತೆ ।
ಮುಕ್ಕಣ್ಣ ಶಿವನೆಮಗೆ ಮರೆತಿರುವನಲ್ಲಾ ।
ಭಿಕ್ಷೆ ಬೇಡುವ ಅನಾಥರೆಲ್ಲರು ಮಕ್ಕಳಿಲ್ಲದ ಮೂರ್ಖರೆಂದು ।
ರೊಕ್ಕ ಸಹಿತ ತೆಗೆದುಕೊಳ್ಳದೆ ಕೊಕ್ಕರಾಡುತ ಹೊರಡಿಪರಲ್ಲಾ ॥

ಮಾದಲಾಂಬಿಕೆ: ಪ್ರಾಣನಾಥ, – "ನಪುತ್ರಾತ್ಪರ । ತೋ ಲಾಭೋ ನ ಭಾರ್ಯಯಂ ಪರಸುರ್ವಥಾಃ" ಎನ್ನುವಂತೆ, – ಪುತ್ರಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲ. ಪುತ್ರನಿಲ್ಲದಿದ್ದರೆ ಮೋಕ್ಷವಿಲ್ಲ. ಹೀಗೆಂದು ಆರ್ಯರ ವಚನವುಂಟು. ಜ್ಞಾನಿಗಳಾದ ಯತಿಗಳು ಅವರ ಮನೆಯಲ್ಲಿ ಅನ್ನೋದಕವನ್ನು ಸಹಿತ ಸೇವಿಸುವುದಿಲ್ಲ. ಮರಣ ಪರ್ಯಂತವಾಗಿ ಬಂಜೆಯೆನಿಸಿಕೊಂಡು ನಾನಿರಲಾರೆ. ಪ್ರಿಯಾ ಬಾಲಕನ ಲೀಲೆಯನ್ನು ನೋಡದೆ ಇರುವ ನೇತ್ರಗಳು ನೇತ್ರಗಳೆನಿಸಿಕೊಳ್ಳುವವೆ? ಸುಂದರಾ, ಸುಕುಮಾರನನ್ನು ಎತ್ತಿ ಟೊಂಕದಲ್ಲಿರಿಸಿಕೊಳ್ಳದ ನಡುವಿಗೆ ನಡುವೆನ್ನಬಹುದೆ? ಕಾಂತಾ, ಕಂದನನ್ನು ಎತ್ತಿ ತೊಡೆಯ ಮೇಲೆ ಹಾಕಿಕೊಂಡು, ಜೋಗುಳ ಪಾಡದ ಬಾಯಿಗೆ ಬಾಯಿ ಎನ್ನಬಹುದೆ? ಮೋಹನಾಂಗಾ, ನಾನು ಪುತ್ರನನ್ನು ಹೆತ್ತವರ ಸಮವೇ? ಹೇಳು.

ಮಾದರಸ: ಪದ್ಮವದನೇ, ರೂಪದಲ್ಲಿ ಪಂಚಶರನಿಗಿಂತಲೂ, ಸೋಮನಗಿಂತಲೂ, ಶರಜನ್ಮನಿಗಿಂತಲೂ, ಗಾಂಭೀರ್ಯದಲ್ಲಿ ಶರಧಿಗಿಂತಲೂ, ವಿದ್ಯೆಯಲ್ಲಿ ಲಂಬೋಧರನಿಗಿಂತಲೂ, ಭಕ್ತಿಯಲ್ಲಿ ಪುರಾತನರಿಗಿಂತಲೂ ಹೆಚ್ಚಾಗಿ ತೋರುತ್ತಿರುವ ಪುತ್ಥಳಿಗೊಂಬೆಯಂತೆ ಒಪ್ಪುತ್ತಿರುವ ಮಗನ ಮುಖವನ್ನು ನೋಡಿ, ಮುದ್ದಾದ ಗದ್ದವನ್ನು ಹಿಡಿದು, ಆಲಂಗಿಸಿ, ನಗಿಸಿ, ತೊದಲ್ನುಡಿಗಳನ್ನು ಕೇಳುವದು, ಪುಣ್ಯ ಪಡೆದುಕೊಳ್ಳದೇ ಸುಪುತ್ರನು ದೊರೆಯುವನೇ? ರಾಣಿ ತಿಂಥಿಣಿ ತೋಟವಾಸಿಯಾದ ಶ್ರೀ ಗುದಿನೇಶ್ವರನ ಕರುಣವಿದ್ದಂತಾಗಲಿ.

ಮಾದಲಾಂಬಿಕೆ: ಪ್ರಾಣೇಶ್ವರಾ, ಈ ಪುತ್ರಶೋಕ ನಮಗೆ ಒದಗಬೇಕಾದರೆ, ನಾವು ಪೂರ್ವದಲ್ಲಿ ಶಿವಭಕ್ತರನ್ನು ತಿರಸ್ಕಾರ ಮಾಡಿರುವೆವೊ, ಮುಕ್ತಿದಾಯಕನಾದ ಪರಮೇಶ್ವರನನ್ನು ಪೂಜಿಸದೆ ಅನ್ನವನ್ನು ಭುಂಜಿಸಿರುವೆವೊ, ಮನೋಹರವಾದ ಶಿವಾಮೃತವನ್ನು ಕೈಕೊಂಡು ಬಿಟ್ಟಿರುವೆವೊ, ಅಷ್ಟಾವರಣವನ್ನು ನಿಂದಿಸಿ ಪರಧರ್ಮವನ್ನು ಕೈಕೊಂಡಿರುವೆವೊ? ಇರದಿದ್ದರೆ, ಇಷ್ಟೊಂದು ಪುತ್ರಶೋಕ ನಮಗೆ ಲಭಿಸುವುದುಂಟೇ? ಶಿವ ಶಿವಾ ಈ ಪುತ್ರಶೋಕ ನಿವಾರಣೆಗೆ ಶ್ರೀಗುರು ಗುದಿನೇಶ್ವರನ ಪಾದವೇ ಸಾಕ್ಷಿ.

ಮಾದರಸ: ಭೋ ಎನ್ನ ಮನವಿಲಾಸವೇ ಇಷ್ಟೊಂದು ಸಂತಾಪವೇಕೆ? ಪೂರ್ವಜನ್ಮದಲ್ಲಿ ಜಗದ್‌ವ್ಯಾಪಕನಾದಂಥ ಪರಮಾತ್ಮನನ್ನು ಕುರಿತು ಸದ್ಗುಣಗಳಿಂದ ವಿಚಾರಿಸಿ, ತ್ರಿಕರಣ ಶುದ್ಧವಾಗಿ ಆ ಪರಶಿವನನ್ನು

ಆರಾಧಿಸದ ಕಾರಣ, ನಮ್ಮ ಅಭೀಷ್ಟೆಗಳನ್ನು ಹೀಗೆ ಅಪೂರ್ಣಮಾಡಿರುವನು. ಪುಣ್ಯ ಎಸಗದೆ, ಸುಖವು ದೊರೆಯಲಾರದು. ಪುಣ್ಯವೇ ಶ್ರೇಷ್ಠವು ಪ್ರಿಯೆ. ಈ ಆನಂದಮಂಟಪದಲ್ಲಿ ಸ್ವಲ್ಪ ಆನಂದವಾಗಿ ಗುರುಭಜನೆ ಗೈಯ್ಯುವಾ ಕೂಡು.

(ಕಾಶೀನಾಥನ ಪ್ರವೇಶ)

ಕಾಶೀನಾಥ **ಪದ :**

ಶಿವ ಶಿವ ಶಂಕರ ಭವಭಯದೂರನೇ ।
ದೇವರ ದೇವನೇ ಪಾಲಿಸೊ ನೀ ॥
ಮಾಯಾರಹಿತನೇ ಕಾಯೋ ಎನ್ನನು ।
ರಾಯರಾಯರ ಪೂಜಿತನೇ ॥

ಶಿವ ಶಿವ ಶಂಕರಾ, ಜಗದೀಶ್ವರಾ ಪಾಹಿ ಪಾಹಿ । ರಕ್ಷಿಸು ರಕ್ಷಿಸು. ಯಲೋ ದ್ವಾರದಲ್ಲಿ ಯಾರಿರುವರೋ?

ದ್ವಾರರಕ್ಷಕ : ಸ್ವಾಮೀ, ದ್ವಾರರಕ್ಷಕನಿರುವೆನು.

ಕಾಶೀನಾಥ: ದ್ವಾರರಕ್ಷಕ ದ್ವಾರಬಾಗಿಲಿನಲ್ಲಿ ಕಾಶೀನಾಥ ಮಹಾಸ್ವಾಮಿಗಳು ಬಂದಿರುವರೆಂದು ನಿಮ್ಮ ರಾಜರಿಗೆ ತಿಳಿಸು.

ದ್ವಾರರಕ್ಷಕ : ರಾಜಾಧಿರಾಜ ಮಾದರಸ ಮಹಾರಾಜ

ಮಾದರಸ : ದ್ವಾರರಕ್ಷಕ ಶಬ್ಧೋತ್ಪತ್ತಿಗೆ ಕಾರಣವೇನು?

ದ್ವಾರರಕ್ಷಕ: ದ್ವಾರದಲ್ಲಿ ಕಾಶೀನಾಥ ಮಹಾಸ್ವಾಮಿಗಳು ಬಂದಿರುವರು ಅಪ್ಪಣೆಯೇ?

ಮಾದರಸ: ಒಳ್ಳೆಯದು, ಆ ಮಹಾತ್ಮರನ್ನು ಒಳಗೆಬಿಡು. ಗುರು ಮಹಾರಾಜಾ ತಮ್ಮ ಪಾದಾರವಿಂದಕ್ಕೆ ಶಿರಸಾಷ್ಟಾಂಗ ನಮಸ್ಕಾರಗಳು.

ಕಾಶೀನಾಥ: ಮಹಾರಾಜರೆ ನಿಮಗೆ ಶ್ರೀರಸ್ತು ಶುಭಮಸ್ತು.

ಮಾದಲಾಂಬಿಕೆ: ಮಹಾಸ್ವಾಮಿಗಳೆ ತಮ್ಮ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ.

ಕಾಶೀನಾಥ: ಅಮ್ಮಾ ಮಗಳೇ ಸಾಧ್ವೀಮಣಿ ನಿನಗೆ ಪುತ್ರೋದ್ಭವಿಸಲಿ.

ಮಾದರಸ : ಸ್ವಾಮಿಗಳೇ ಈ ಸಿಂಹಪೀಠವನ್ನು ಅಲಂಕರಿಸಬೇಕು.

ಕಾಶೀನಾಥ : ತಥಾಸ್ತು. ಕೊಡುತ್ತೇವೆ. ತಾವೂ ಮಂಡಿಸಿರಿ.

ಮಾದರಸ: ಗುರು ಮಹಾರಾಜ ಸಂತತಿಯೆಂಬ ಕಮಲಕ್ಕೆ ಸೂರ್ಯರೇ, ನಿಮ್ಮ ಸೇವೆಯಿಂದ ನನ್ನ ಮನಸ್ಸೆಂಬ ಕಮಲವು ಅರಳಿತು, ಧನ್ಯನಾದೆ. ಈ ಭೂಮಿಯಲ್ಲಿ ನನ್ನಂಥ ಕೃತಾರ್ಥರುಂಟೆ ? ಕಾರಣ ಗುರುಮಹಾರಾಜ ನನ್ನ ಮನೋಭಿಷ್ಟವನ್ನು ಪೂರ್ಣ ಮಾಡಬೇಕ್ಕೆ ದೇವಾ.

ಕಾಶೀನಾಥ: ವಸುಧೀಶನೇ ಮುಖವು ರಾಹು ತೊಡಕಿದ ಚಂದ್ರನಂತೆ ಕಳೆಗುಂದಿರುವುದಕ್ಕೆ ಕಾರಣವೇನು? ಮಾದಲಾಂಬಿಕೆಯವರ ಮುಖವಂತೂ ಕಾಳೋರಗಕ್ಕೆ ಹೆದರುವ ಬಾಲಕನ ಭಾವವನ್ನು ತಾಳಿದೆ. ಒಳ್ಳೆಯದು, ನಿಮ್ಮ ಹಣೆಯಲ್ಲಿ ವಿಭೂತಿ ರೇಖೆಗಳಿಲ್ಲವೇಕೆ? ಕಾರಣ ನಿಮ್ಮಲ್ಲಿ ಏನೋ ಒಂದು ಸಂತಾಪ ಸಂಕಲ್ಪವಿದ್ದಂತೆ ಕಂಡು ಬರುತ್ತಿದೆ. ನನಗೆ ಹೇಳಿರಿ.

ಉಭಯ ದಂಪತಿಗಳು ಪದ :

ರಕ್ಷಿಸು ಗುರುವೆ ಇಕ್ಷು ಚಾಪನರಿಪು ।
ದಕ್ಷವೈರಿಯ ರೂಪ ಇಕ್ಷಿಸು ಗತಿಯ ।
ಮಕ್ಕಳಾಕಾಂಕ್ಷೆಯು ತೆಕ್ಕಿ ಬಿದ್ದಿರುವದು ।
ತಕ್ಕಂಥ ಪುತ್ರನ ಇತ್ತು ಪಾಲಿಸು ನೀನು ॥

ಮಾದರಸ : ಸ್ವಾಮಿ ಸಕಲರಾಜರ ಕಿರೀಟದಲ್ಲಿ ಕೆತ್ತಿಸಿದ ರತ್ನಗಳ ಪ್ರಕಾಶವೆಂಬ ಅರ್ಕನಿಂದ ಅರಳಲ್ಪಟ್ಟ ನನ್ನ ಮನಸ್ಸು, ನಿಮ್ಮ ಪಾದಾರವಿಂದಕ್ಕೆ ನಮಸ್ಕಾರವಿರಲಿ. ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲೆಂದು ಶಿವಪುರಾಣದಲ್ಲಿ ಹೇಳಲ್ಪಟ್ಟ ವಾಕ್ಯವನ್ನು ಕೇಳಿ, ಮಾದಲಾಂಬಿಕೆಯವರು ನಾನೂ ಸಹ ದುಃಖದಲ್ಲಿಯೇ ಇರುವೆವು. ಶರೀರವೆಂಬ ಬಳ್ಳಿಗೆ ಫಲವಾವುದು? ನಮ್ಮ ಪುತ್ರ ಸಂತಾಪವನ್ನು ದೂರಮಾಡಬೇಕೆಂದು ಬೇಡಿಕೊಳ್ಳುವೆನ್ನೆ ಗುರುನಾಥಾ.

ಕಾಶೀನಾಥ : ಹೋ ಹೋ ಮಹಾರಾಜರೇ, ಪುತ್ರಶೋಕದಿಂದ ಇಷ್ಟೊಂದು ಸಂತಾಪವೇಕೆ? ನಮ್ಮ ವಾಕ್ಯವನ್ನು ಕೇಳಿರಿ, ಅದೇನೆಂದರೆ ಈ ಪುರದ ಬಹಿರ್ಭಾಗದಲ್ಲಿರುವ ದ್ವಿತೀಯ ಶಂಭುವೆನಿಸಿದ, ನಂದೀಶ್ವರನನ್ನು ಪೂಜಿಸಿರಿ. ನೀವು ಪೂಜಿಸಿದ್ದಾದರೆ, ಆ ನಂದೀಶ್ವರನು ದಿವ್ಯ ಪುತ್ರನನ್ನು ಕೊಡುತ್ತಾನೆ. ಕಾರಣ, ನೀವು ಸೋಮವಾರ ಆದಿಯಾಗಿ

ನಂದೀಶ್ವರನ ನೋಂಪಿಯನ್ನು ಮಾಡಿರಿ. ನಿಮ್ಮ ಇಷ್ಟಾರ್ಥವು ನಿಶ್ಚಯವಾಗಿ ಸಿದ್ಧಿಯಾಗುತ್ತದೆ. ಆ ಪುತ್ರನಿಗೆ ಮಾತ್ರ ನೀವು ಬಸವ ಬಸವಾ ಅಂತ ಕರೆಯಲಿಕ್ಕೇ ಬೇಕು. ನಾವು ಹೋಗುತ್ತೇವೆ, ಅಪ್ಪಣೆ ಕೊಡಿರಿ.

ಮಾದರಸ : ಗುರುವರ್ಯರೇ ಹೋಗಿ ಬನ್ನಿರಿ. ನಮಸ್ಕಾರವಿರಲಿ ಧನ್ಯರಾದೆವು, ಧನ್ಯರಾದೆವು.

ಕಾಶೀನಾಥ: ಮಹಾರಾಜರೇ ನಿಮಗೆ ಸತ್ಪುತ್ರನು ಹುಟ್ಟುವನು. ಇದು ನಿಶ್ಚಯ. ಶಂಭೋ ಗುರು ಗುದಿನೇಶ್ವರನೇ ಇವರ ಕಾರ್ಯವನ್ನು ತೀವ್ರವಾಗಿ ನೆರವೇರಿಸು.

ಮಾದರಸ: ಸದ್ಗುರುನಾಥನ ಶುಭೋದಾಮೃತದಿಂದ ಕಾರ್ಯವು ಪೂರ್ಣವಾಯಿತು. ಈ ಭವಸಾಗರವನ್ನು ದಾಟಲಿಕ್ಕೇನೂ ಅಡ್ಡಿಯಿಲ್ಲ. ತಡವೇಕೆ, ನಳಿನಾಕ್ಷಿ ರತ್ನ ಖಚಿತವಾದ ಕಲಶವನ್ನು ಪೂಜಾ ಸಾಮಾಗ್ರಿಗಳನ್ನು ತೆಗೆದುಕೊಂಡು ಬಾ. ಗುರುವರ್ಯರ ಆಜ್ಞೆಯ ಪ್ರಕಾರ, ನಂದೀಶ್ವರನ ದೇವಾಲಯಕ್ಕೆ ಹೋಗುವಾ ನಡೆ.

ಮಾದಲಾಂಬಿಕೆ : ಪ್ರಿಯಾ, ತಮ್ಮ ಅಪ್ಪಣೆ ಪ್ರಕಾರ ಸಿದ್ಧಗೊಳಿಸಿದ್ದೇನೆ ಹೋಗುವಾ ನಡೆಯಿರಿ.

(ನಂದೀಶ್ವರ ದೇವಾಲಯದ ದೃಶ್ಯ)

ಮಾದರಸ : **ಪದ**

ನಡಿ ನಡಿ ತಡವ್ಯಾತಕೆ ಕುಡುತಿಗಂಗಳೆ ಬೇಗ ।
ಮೃಢರೂಪ ನಂದಿಯ ಬಳಿಗೆ ।
ಗಂಧ ಅಕ್ಷತೆಯಿಂದ ಚಂದದಿಂ ಪೂಜಿಸಿ ।
ಕಂದನ ಪಡೆದು ತರುವುದಕೆ ॥

ಮಾದರಸ : ಭೋ ನಂದಿನಾಥ ಪ್ರಭುವೇ ತಮ್ಮ ಸುಂದರ ಪಾದಕ್ಕೆ ಈ ದೀನನು ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಆನಂದಪ್ರಭೋ ತಮ್ಮ ಆನಂದವನ್ನು ತಿಳಿಯಬೇಕಾದರೆ, ವಾಕ್ಪತಿ, ಶ್ರೀಪತಿ, ಶೇಷಪತಿಗಳಿಗೆ ಅಸಾಧ್ಯವಿರುವಲ್ಲಿ ಅಲ್ಪಮತಿಯಿಂದ ಏನಾಗುವುದು? ಭೋ ಆದಿ ನಂದೀಶ್ವರ ನಿನ್ನನ್ನು ಕುರಿತು ನಾನು ಶುಚಿರ್ಭೂತನಾಗಿ, ನಿರ್ಮಲೋದಕದಿಂದ, ಅಭಿಷೇಕವನ್ನು ಗೈಯ್ಯುತ್ತೇನೆ. ಚಂದ್ರಮುಖಿ,

ನಿರ್ಮಲವಾದ ಪನ್ನೀರು ತುಂಬಿದ ಬಂಗಾರದ ತಂಬಿಗೆಯಿಂದ ಸ್ವಚ್ಛವಾಗಿ ಸ್ವಾಮಿಯ ಜಳಕವನ್ನು ಮಾಡಿಸುತ್ತೇನೆ.

ಶ್ಲೋಕ

"ಜಲಂ ಶಾಂತಿ ಕರಂ ಶೈವಂ ಗಂಧಮಾಯುಷ್ಯವರ್ಧನಂ ।
ಅಕ್ಷತೆ ಶತ್ರುನಾಶಂ ಪುಷ್ಪಮೈಶ್ವರ್ಯವರ್ಧನಂ ।
ಧೂಪಂ ಹಿತೆ ಪಾಪಾನಿದೀಂಪಂ ಮೃತ್ಯುಂನಾಶನಂ ।
ನೈವೇದ್ಯಂ ಲಭಿತೆ ರಾಜಂ ತಾಂಬೂಲಂ ಫಲಮುತ್ತಮಂ ॥"

ಎಂಬಂತೆ ಆರ್ಯರ ವಚನವುಂಟು. ಆ ಕಾರಣವಾಗಿ, ನಾವು ಭಕ್ತಿಯಿಂದ ಈ ಮಹಾತ್ಮನನ್ನು ಕ್ರಮೋಕ್ತವಾಗಿ ಪೂಜಿಸುವೆ. ಶಂಭೋ ಭಗವಾನ್ ಭೋ, ಶಿವಧೋ ಶಿವಧೋ ! ಮೃತ್ಯುಂಜಯ ಪಾಹಿ ಪಾಹಿ ! ರಕ್ಷಿಸು ರಕ್ಷಿಸು.
ಹೇ ಪ್ರಾಣಸಖಿ, ಕರ್ಪುರವನ್ನು ಹಚ್ಚು ಮಂಗಲವನ್ನು ಹಾಡುವಾ.

ಮಂಗಳಾರತಿ ಪದ :

ಮಗಲಂ ಜಯ ಜಯ ಶೃಂಗಾರಮೂರ್ತಿಗೆ ।
ಅಂಗಜಭಂಗಗೆ ಶಂಕರೆಗೆ ॥
ಪರತ್ಪರ ಮೂರುತಿ ಪರಿಯಜವಂದಿತ ।
ಸುರಮುನಿ ರಕ್ಷಿಸು ರಕ್ಷಿಸು ನೀ ॥

ದಂಪತಿಗಳು: ಭೋ ದಯಾಸಾಗರನೇ, ದೀನೋದ್ಧಾರನಾದ ನಂದಿಕೇಶ್ವರನೇ ಭಕ್ತರ ಇಷ್ಟಾರ್ಥವನ್ನಿತ್ತು ಕಾಪಾಡು ದೇವಾ. ನಿಮ್ಮಂಥ ಪುತ್ರನನ್ನು ಕೊಟ್ಟು ಕಾಪಾಡಬೇಕೆಂದು ಬೇಡಿಕೊಳ್ಳುತ್ತೇನೆ. ಆ ಮಗನಿಗೆ ನಿಮ್ಮ ಹೆಸರನ್ನಿಡುತ್ತೇನೆ. ಕೃಪೆಯ ಮಾಡು ಕರುಣಾಕರ ಭಕ್ತವತ್ಸಲಾ ಕೈಮುಗಿದು ಬೇಡಿಕೊಳ್ಳುತ್ತೇನೆ.

ಹಾ ಹಾ ! ಪ್ರಿಯೇ ಭೂಲೋಕದಲ್ಲಿ ನಾವೇ ಧನ್ಯರು. ಮಹಾ ಪ್ರಸಾದವು ಸಿಕ್ಕಿತು. ಪ್ರಸಾದವು ಶ್ರೇಷ್ಠವು. ಪ್ರಸಾದವನ್ನು ನಂಬಿದಂಥ ಬಾಚರಸರು ಜಗತ್ಪ್ರಸಿದ್ಧವಾಗಲಿಲ್ಲವೇ? ಆದ್ದರಿಂದ, ಈ ಕುಸುಮವನ್ನು ತೆಗೆದುಕೋ ಪ್ರಿಯೇ. ಈ ಸಾಕ್ಷಾತ್ ನಂದಿನಾಥನು ತನ್ನ ಶಿರಭಾಗದಿಂದ ತಲೆಯನ್ನು ಪ್ರತ್ಯಕ್ಷ ಅಲುಗಾಡಿಸಿಕೊಟ್ಟ ಈ ಕುಸುಮವನ್ನು ಸ್ವೀಕರಿಸು. ಇನ್ನು ಸತ್ಪುತ್ರನ ಉದ್ಭವ ಆಗಲಿಕ್ಕೇನೂ ಸಂಶಯವಿಲ್ಲ. ಪ್ರಸಾದವೇನು ಸಾಮಾನ್ಯವೇ? ಈ ಪ್ರಸಾದ ಮಹಾತ್ಮೆಯಿಂದ ಮರೆದಂಥ ನಮ್ಮ ಕಕ್ಕಯ್ಯನವರ ಚರಿತ್ರೆಯನ್ನು

ಕೇಳಿಲ್ಲವೆ? ಅಂದ ಬಳಿಕ ನಾವು ಈ ಪ್ರಸಾದದಿಂದ ಸಾಯುಜ್ಯವನ್ನೇ ಹೊಂದುತ್ತೇವೆ. ತಿಳಿಯಿತೆ ಏಳು ಗಮಿಸುವಾ.

ಮಾದಲಾಂಬಿಕೆ: ನಡೆಯಿರಿ ಹೋಗುವಾ.

ಮಾದರಸ : ಹಾಹಾ, ರಮಣೀಮಣಿ ಸ್ವಲ್ಪ ನಿಲ್ಲು, ನಿಲ್ಲು. ಈ ನಂದೀಶ್ವರನ ದೇವಾಲಯವು ಎಷ್ಟು ಮನೋಹರವಾಗಿದೆ. ಈ ಕ್ಷೇತ್ರವನ್ನು ನೋಡುವವರೇ ಧನ್ಯರು. ನಳಿನಾಕ್ಷಿ ಈ ರಂಗಮಂಟಪದಲ್ಲಿ ಸ್ವಲ್ಪ ಕೂಡು. ನಿನ್ನ ಮನವೆಂಬ ಹಂಸಪಕ್ಷಿಯು ಹಿಮಕರಣ ಪ್ರಭೆಯಂತೆ ಆನಂದವಾಗಿ ಶೋಭಿಸುತ್ತದೆ. ಅಹಾ ಏನು ರೂಪವೋ ಇಂಥ ಅಮೂಲ್ಯವಾದ ರೂಪ ಒದಗಬೇಕಾದರೆ, ಇದು ಪ್ರಸಾದದ ಮಹತ್ವವೇ ಇರುತ್ತದೆ. ಪ್ರಿಯೆ ನೋಡಿದಿಯಾ ಪ್ರಸಾದದ ಮಹತ್ವವನ್ನು.

ಮಾದಲಾಂಬಿಕೆ: ಆಹಾ ಪ್ರಿಯಾ ನನ್ನಲ್ಲಿ ಆಶ್ಚರ್ಯಕರವಾದ ರೂಪವು ಅಂಥಾದ್ದೇನಿರಬಹುದು? ಹೇಳು.

ಮಾದರಸ : ಕ್ಷೀರವಾಣಿ ಕಡುಜಾಣೆ. ಚಂದ್ರಮಂಡಲವನ್ನು ಕಂಡು ಜೊನ್ನಕ್ಕಿಯು ಎಷ್ಟು ಆನಂದ ಹೊಂದುವುದೋ ಮತ್ತು ಜಾತಕಪಕ್ಷಿಯು ಸ್ವಾತೀ ನಕ್ಷತ್ರವನ್ನು ಕಂಡು ಎಷ್ಟು ಸಂತೋಷ ಹೊಂದುವುದೋ, ಅಂತೆಯೇ ನಿನ್ನ ಮುಖ ಚಂದ್ರವನ್ನು ಕಂಡು ನನ್ನ ಮನಸ್ಸೆಂಬ ಸಮುದ್ರವು ಉಕ್ಕೇರುವುದು ಕೆಳದಿಯೆ.

ಮಾದಲಾಂಬಿಕೆ:ಪ್ರಿಯಾ ಹಾಗಾದರೆ, ಆಲಸ್ಯವೇಕೆ? ತಡಮಾಡದೆ, ಶಯನಮಂದಿರಕ್ಕೆ ಹೋಗುವಾ ನಡೆ.

ಮಾದರಸ : ಹೌದು ನಡೆ ಹೋಗುವಾ. ಆಹಾ ಆನಂದವನ್ನು ಶಿವಾರ್ಪಿತ ಮಾಡಿ ಆನಂದ ಹೊಂದುವಾ. ಆದ್ದರಿಂದ ಮಂದಿರದತ್ತ ಗಮಿಸುವಾ ನಡೆ.

(ಮನೆಯ ದೃಶ್ಯ)

ಮಾದಲಾಂಬಿಕೆ : ಮೋಹನಾಂಗ ವಿಪರೀತ ಕನಸು ಕಂಡೆನು. ತಡಮಾಡದೆ ಏಳು ಏಳು.

ಮಾದರಸ : ಪ್ರಿಯೆ, ಆಶ್ಚರ್ಯಕರವಾದ ಸ್ವಪ್ನವಾಯಿತೆ ಹೇಳು ಹೇಳು. ಅದರ ತಾತ್ಪರ್ಯವನ್ನು ತಿಳಿಯುತ್ತೇನೆ.

ಮಾದಲಾಂಬಿಕೆ **ಪದ**

ಸುಂದರಾಂಗ ಕೇಳೋ ನೀನು ।
ಇಂದು ಎನಗೆ ಬಿದ್ದ ಸ್ವಪ್ನದ ಫಲ ॥

ಮಾದರಸ **ಪದ**

ಏನು ಕನಸ ಕಂಡೆ ನೀನು ।
ವಿನಯದಿಂದ ಪೇಳು ನೀನೀಗಲೇ ॥

ಮಾದಲಾಂಬಿಕೆ **ಪದ**

ಸೂರ್ಯಚಂದ್ರರು ಪರತತ್ವವು ।
ಸಾರವಾಗಿ ತೋರುತಿರ್ಪರು ॥

ಮಾದರಸ **ಪದ**

ನಿನ್ನ ಸ್ವಪ್ನವು ಲೇಸಾಯ್ತು ।
ಸನ್ನುತಾಂಗಿ ಕೇಳು ನೀ ಮುದದಲಿ ॥

ಮಾದಲಾಂಬಿಕೆ: ಪ್ರಿಯಾ ಮದೋನ್ಮತ್ತವಾದ ಆನೆಯನ್ನು, ದಿವ್ಯತರವಾದ ವೃಷಭೇಶ್ವರನನ್ನು, ಕಮಲವನ್ನು, ಸೂರ್ಯನನ್ನು, ಮೇರುಪರ್ವತವನ್ನು ಸಮುದ್ರವನ್ನು, ಚಂದ್ರನನ್ನು ಸ್ವಪ್ನದಲ್ಲಿ ಕಂಡೆನು. ಇದರ ಫಲವೇನು? ಹೇಳಿರಿ.

ಮಾದರಸ : ಮಧುರವಾಣಿಯೇ ಈ ಸ್ವಪ್ನದ ಫಲವನ್ನು ನಾನು ಎಷ್ಟು ವರ್ಣಿಸಿದರೂ ತೀರದು. ಕೇಳಿ ಪರಮಾನಂದ ಭರಿತನಾದೆನು. ಆನೆಯನ್ನು ಕಂಡದ್ದಕ್ಕೆ ಭದ್ರಸ್ವರೂಪನಾದ ಮಗನು ಹುಟ್ಟುವನು. ಕಮಲವನ್ನು ಕಂಡದ್ದಕ್ಕೆ ಸದ್ಗುಣಮಣಿ ಅಷ್ಟಾವರಣಭೂಷಿತನಾಗುವನು. ಜಂಗಮಪ್ರಾಣಿಯಾಗುವನು. ಪ್ರಿಯೆ ಇದರ ಶುಭವನ್ನು ಎಷ್ಟೆಂದು ಹೇಳಲಿ? ಮತ್ರ್ಯಗಂಗಳೇ ಆನಂದಾಲಯವನ್ನು ಕುರಿತು ಗಮನ ಮಾಡುತ್ತೇನೆ. ಗುದಿನೇಶಾ, ಗುದಿನೇಶಾ.

ಮಾದಲಾಂಬಿಕೆ : ಸಖಿ ಶಾಂತಮತಿ ಎತ್ತ ಹೋದಿ, ಇತ್ತ ಬಾರೆ ನಿನ್ನ ಬಿಟ್ಟು ನಾನು ಅರೆಘಳಿಗೆ ಇರಲಾರೆ.

ಶಾಂತಮತಿ: ಅಮ್ಮಾ ಪೃಥ್ವಿಯನ್ನಾಳುವ ಮಹಾರಾಜರೇ ನಿಮ್ಮ ಬಳಿಯಲ್ಲಿದ್ದ ಬಳಿಕ ನಾನಿದ್ದು ಮಾಡತಕ್ಕದ್ದು ಏನು?

ಮಾದಲಾಂಬಿಕೆ : ಶಾಂತಮತಿ ಮಾತಿನಲಿ ನೀನು ಬಹುಕುಶಲಳು. ಆದರೆ, ಹೀಗೆ ಮಾತಿನಿಂದ ನಿಂದಿಸಬೇಡ.

ಶಾಂತಮತಿ: ನೀವೇ ಹೀಗೆ ಸಿಟ್ಟಿಗೆದ್ದ ಬಳಿಕ ನಾನು ಇರಲಿಕ್ಕೆ ಕಾರಣವೇ ಇಲ್ಲ ನಾನು ಹೋಗುತ್ತೇನೆ.

ಮಾದಲಾಂಬಿಕೆ: ಬಾ ಬಾ ಗೆಳತಿ ಹಾಸ್ಯಾಸ್ಪದವಾದ ರಸೋಕ್ತಿಗಳನ್ನು ಆಡಿದರೆ ಕೋಪವೇಕೆ?

ಶಾಂತಮತಿ **ಪದ**

ವಾರಿಜಾಕ್ಷಿ ನಿನ್ನ ಗಾತ್ರ ಬೇರೆಯಾಗಿ ತೋರ್ಪದಲ್ಲೆ ।
ನಾರಿಮಣಿಯಳೇನು ಬಗೆಯು ತಿಳಿಸು ಯನಗೆ ॥

ಮಾದಲಾಂಬಿಕೆ **ಪದ**

ದಾಸಿ ನೀನು ವೇಳೆಯನ್ನು ।
ಘಾಸಿಯಾಗಿ ಮಾಡುವರೇ ॥
ಈಶ ನಂದೀಶ ಎಮಗೆ ।
ಸುಖವನಿತ್ತನು ಕಾಣೆ ॥

ಶಾಂತಮತಿ **ಪದ**

ಇಂದುವದನೆ ನಿನ್ನ ಮುಖ ।
ಇಂದುವಿನಂತೆ ಶುಭ್ರವಾಗಿ ॥
ಅಂದವಾಗಿ ತೋರ್ಪದಲ್ಲೆ ।
ತಿಳಿಸವ್ವ ಯನಗೆ ॥

ಶಾಂತಮತಿ : ಅಮ್ಮಾ ಜನನಿ ನಿನ್ನ ತ್ರಿವಳಿಗಳು ಅಡಗಿ, ಮುಖಚಂದ್ರನ ಕಾಂತಿಯು ಹೆಚ್ಚಿರುವುದಲ್ಲೇ. ಕಮಲದ ಮಗ್ಗಿಯಂತೆ ಒಪ್ಪುವ ನಿನ್ನ ಕುಚವು ಕಪ್ಪಾಗಿರುವುದು. ಸರ್ವಾಂಗವೆಲ್ಲಾ ಶುಭ್ರಮಯವಾಗಿ ತೋರುವದು. ಇದನ್ನೆಲ್ಲ ನಾನು ಬಲ್ಲೆನು ಅವ್ವನವರೆ.

ಮಾದಲಾಂಬಿಕೆ : ಎಂಥಾಕೇ ನಮ್ಮವ್ವ ನೀನು, ಯಾವ ಕಾಲದಲ್ಲಾದರೂ ಹಾಸ್ಯವನ್ನೇ ಮಾಡುವಿ. ಬಲು ಮಾತುಗಳನ್ನಾಡಿ ಪ್ರಯೋಜನವೇನು? ನೀನು ಲಜ್ಜೆಯನ್ನುಂಟು ಮಾಡಬೇಡ, ಸಾಕು ಸಾಕು ಸುಮ್ಮನಿರು.

ಶಾಂತಮತಿ : ಜನನಿ ನಿನ್ನ ರತ್ನಖಚಿತವಾದ ಮುತ್ತುಗಳು ತುಂಬಿದ ಎದೆಯ ಮೇಲೆ ಇಂದ್ರನೀಲದ ಪಚ್ಚೆಮಣಿಯಂತೆ ನಿನ್ನ ರಮಣೀಯವಾದ

ಕುಚಚೂಚಕವು ಅತೀ ಕಪ್ಪಿನಿಂದ ಒಪ್ಪಿರುವದು. ಇದು ಎನಗೆ ಗೊತ್ತಾಯಿತವ್ವಾ ಅವ್ವನವರೇ.

ಮಾದಲಾಂಬಿಕೆ: ಗೆಳತಿ ನೀನು ಎಂಥಾ ಕುಶಲಳು. ನಾನೇನು ಮಾಡಲಿ, ಈ ಎನ್ನ ತನುವಿನ ಛಾಯೆಯೇ ಹೀಗಿರುವದು. ನೀನೇನು ಅರಿಯದವಳೇ ಸುಮ್ಮ - ಸುಮ್ಮನೆ ಹಾಸ್ಯವನ್ನು ಗೈಯಬೇಡ. ನೀನು ಬಲ್ಲವಳಿದ್ದ ಕಾರಣ ಹೇಳುವುದೇನು? ಈ ನಾಲ್ಕು ತಿಂಗಳಿನ ಗರ್ಭವನ್ನು ಶಿವ ಸ್ವರೂಪನಾದ ಗುದಿನೇಶ್ವರನು ಕಾಪಾಡಲೆಂದು ಬೇಡಿಕೊಳ್ಳುತ್ತೇನೆ.

ಶಾಂತಮತಿಯ: ಅಮ್ಮಾ ಕದಳೀಪತ್ರದಂತೆ ತೋರುವ ನಿನ್ನ ಉದರವು ಬೆಳೆಯುತ್ತಿರುವದು. ಕೋಮಲರಾಜೆಯು ಕಪ್ಪನ್ನು ವಹಿಸಿರುವದು. ನಿನ್ನ ಕೇಶಗಳು ಕಮಲವನ್ನು ಹೊಂದಿರುವವು. ವರಗುರು ಗುದಿನೇಶ್ವರನು ನಿನಗೆ ಸುಪುತ್ರನನ್ನು ಕೊಡುವನು. ತಾಯೀ ಈ ನಾಲ್ಕು ತಿಂಗಳದ ತಾಪವು ದೂರಾಯಿತು.

ಮಾದಲಾಂಬಿಕೆ: ಶಾಂತಮತಿ ಮಹಿಮ ಪುರುಷನಾದ ನಂದೀಶ್ವರನ ಅಂತಃಕರಣದಿಂದ ಚತುರ್ಮಾಸಗಳು ತುಂಬಿದವು. ಕಾರಣ ಐದನೇ ಮಾಸಕ್ಕೆ ಶ್ರೀ ಗುರು ಗುದಿನೇಶ್ವರನ ಕರುಣೆಯಿಂದ ಮುಂದಿನ ಕಾರ್ಯ ನೆರವೇರಿಸು.

ಶಾಂತಮತಿ: ಅಮ್ಮಾ ಜನನಿ ಪರಮಾನಂದ ಆಯಿತು. ಸೀಮಂತ ಕಾರ್ಯಕ್ಕೆ ನಾರಿಕೇಳಾದಿ ಫಲವನ್ನು ತರಲಿಕ್ಕೆ ಹೋಗುವೆನು.

ಮಾದಲಾಂಬಿಕೆ: ಸಖಿ ತಡಮಾಡದೆ ತೆಗೆದುಕೊಂಡು ಬಾ.

ಶಾಂತಮತಿ: ಅಮ್ಮಾ ಕಮಲನೇತ್ರೆ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಬಂದೆನು. ಈ ಶೃಂಗಾರವಾದ ಸಿಂಹಪೀಠದಲ್ಲಿ ಅಲಂಕರಿಸಿರಿ. ಗಂಧ-ಕಸ್ತೂರಿಯನ್ನು, ಅರೆ ಬಿರಿದ ಮಲ್ಲಿಗೆಮಾಲೆಯನ್ನು ತಂದಿರುವೆನು. ಈಶನ ಅಂತಃಕರಣದಿಂದ ಕೈಕೊಳ್ಳಮ್ಮ ತಾಯಿ.

ಮಾದಲಾಂಬಿಕೆ: ಶಾಂತಮತಿ ಹಾಗೆಯೇ ಆಗಲಿ. ಈ ರತ್ನ ಖಚಿತವಾದ ಸಿಂಹಾಸನದಲ್ಲಿ ಕೂಡುವೆನು. ನಿನ್ನ ಅನುರಾಗವಿದ್ದಂತೆ ಆಗಲಿ.

ಶಾಂತಮತಿ : **ಪದ**

ಶಾಸಿಯ ತುಂಬುವೆ ಈಶನ ಕರುಣದಿ ।
ಲೇಸಾಗಿ ಸ್ತುತಿಸುವೆ ಈಶ್ವರನಾ ॥

ದೋಷರಹಿತನ ಪಾಶ ದೂರನಾ ।
ಲೇಸಾಗಿ ಸ್ತುತಿಸವ್ವಾ ನೀ ಬೇಗ ॥

ಮಾದಲಾಂಬಿಕೆ: ಪದ

ದಾಸಿಯೆ ನೀ ಕೇಳು ಲೇಸಾಗಿ ಸ್ತುತಿಸುವೆ ।
ವಾಸುಕಿ ಭೂಷಣ ಈಶ್ವರನಾ ॥
ಲೇಸು ಲೇಸಾಗಿ ಈಶನ ಭಜಿಸುವೆ ।
ಹಸನಾಗಿ ಧರಿಸವ್ವಾ ಶಾಸಿಯನು ॥

ಶಾಂತಮತಿ: ಪದ

ಚಂದಚಂದದಿ ಶಾಸಿಯನಿಡುವೆ ।
ಚಂದಿರವದನೆಯೆ ನಿನಗೀಗ ॥
ಗಂಧ ಕಸ್ತೂರಿ ಅಕ್ಷತೆಯಿಂದಲಿ ।
ಚೆನ್ನಾಗಿ ನಿನಗೆ ತಂದಿರುವೆ ॥

ಶಾಂತಮತಿ : ಅಮ್ಮಾ ಮಾದಲಾಂಬಿಕೆಯೇ ಶಾಸಿಯನ್ನು ತುಂಬಿದೆನು ನಾರಿಕೇಳಫಲವನ್ನು ಇಡುವೆನು.

ಮಾದಲಾಂಬಿಕೆ: ಶಾಂತಮತಿ ತೀವ್ರವಾಗಿ ಉಡಿಯನ್ನು ತುಂಬು.

ಶಾಂತಮತಿ: ಪದ

ಉಡಿಯ ತುಂಬುವೆ ಕುಡತಿಗಂಗಳೇ ।
ಒಡನೆ ನಿಮ್ಮ ಮಡಿಲಿಗೆ ಬೇಗ ಉಡಿಯ ತುಂಬುವೆ॥

ಮಾದಲಾಂಬಿಕೆ : ಪದ

ತುಂಬು ಬೇಗನೆ ಇಂಬವಾಗಿಯೇ ಶಂಭೋ ।
ಶಂಭೋ ಶಂಭೋ ಎಂದು ತುಂಬು ಬೇಗನೆ ॥

ಶಾಂತಮತಿ : ಪದ

ಮುತ್ತು ರತ್ನವ ಉತ್ತತ್ತಿ ಫಲಗಳು ।
ಮೆತ್ತಗಾದ ಹಣ್ಣುಗಳನು ಉಡಿಯ ತುಂಬುವೆ ॥

ಶಾಂತಮತಿ: ಅಮ್ಮಾ ಕುಂಕುಮ ಸೌಭಾಗ್ಯವತಿಯೇ ಎಲ್ಲಾ ಕಾರ್ಯಗಳು ಮುಗಿದವು. ಆರತಿಯನ್ನು ಬೆಳಗುತ್ತೇನೆ.

ಮಾದಲಾಂಬಿಕೆ: ಅಮ್ಮಾ ಕಳಶವನ್ನು ಬೆಳಗು. ನಿನ್ನ ಗಂಡನ ಹೆಸರನ್ನು ಹೇಳು.

ಶಾಂತಮತಿ: ಮೊದಲು ತಾವೇ ಹೇಳಿರಿ.

ಮಾದಲಾಂಬಿಕೆ: ಬಂಗಾರದ ಕಂಕಣ ಮುತ್ತಿನ ಪೈಝಣ, ಮುಂಗೈಯೊಳ್ ಧರಿಸಿ, ಮುಂಗುರುಳುಗಳನ್ನು ಹಿಂಗದೆ ತೀಡಿ ತೀಡಿ, ಮಂಗಲರೂಪವನ್ನು ಮಂಗಲವಾದ ಕನ್ನಡಿಯಿಂದ ನೋಡಿಕೊಳ್ಳುವ, ಕಂದರ್ಪನ ರೂಪದಂತೆಸೆವ, ಮಾದರಸ ಮಹಾರಾಜರೆಂದು ತಿಳಿ.

ಶಾಂತಮತಿ: ಊರ ಹೊಲ ಮಾಡಿದರೂ, ಮೂರು ಹೇರು ಜೋಳ ಬೆಳೆಯದೆ, ವರುಷಾವರುಷಾ ಆರುನೂರು ರೂಪಾಯಿಗಳನ್ನು ಪರೋಪಕಾರಕ್ಕೆ ಸಾಲಾ ಮಾಡುವ ದರಿದ್ರದೊರಿ, ಮಕ್ಕಳುಮರಿ ಬಕ್ಕರೆ ಇಲ್ಲದೆ ಅರಿವೆ ಇಲ್ಲದೆ, ವರಲಿದಾಗ್ಯೂ, ವರಗುರು ಗುದಿನೇಶ್ವರನ ಚರಣದೊಳು ಬೆರೆದಿರುವ ವೇದಮೂರ್ತಿ ತೋಂಟದ ಸ್ವಾಮಿಗಳೆಂದು ತಿಳಿಯಮ್ಮಾ ತಾಯಿ.

ಮಾದಲಾಂಬಿಕೆ: ಶಾಂತಮತಿ ಎನಗೆ ಎಂತಹ ಬೇನೆಗಳು ವೆಗ್ಗಳವಾದವು ನೋಡೆ. ಕಾರಣ, ಶಯನಮಂದಿರಕ್ಕೆ ಪೋಗುವಾ ನಡೆ.

ಶಾಂತಮತಿ: ಜನನಿ ಪೋಗುವಾ ನಡೆಯಿರಿ.

(ಮನಿ ಸೀನು)

ಶಿವ : **ಪದ**

ಎಂಥಾ ಶ್ರಮ ಏದು ಶಾಂತಾಗಿ ತೋರ್ಪುದು ।
ಚಿಂತಿ ಚಿಂತಾಮಣಿಯಂತೆ ನೋಡು ।
ಅತಿಹಿತ ಮನದಿಂ ಶಿವನನು ನುತಿಸುತ ॥
ಯತಿಯಂತೆ ತೋರ್ಪಳು ಪತಿವ್ರತೆಯು ।
ಸುತನನು ಈಕಿಯ ಚಿತ್ತದೊಳಿರಿಸುತ ।
ಸತ್ಯಾಗಿ ಪಾಡುತ ಪೋಪೇವು ॥

ಶಿವ: ಸುಕುಮಾರನೇ ನೀನು ಆದಿಗೆ ಆದಿಯಾಗಿ ಸಂಸಿದ್ಧನಾದಂಥವನು ಸತ್ವಗುಣದಿಂದ ಪೂರ್ಣನಾದಂಥವನು. ಮಾಯಾಜಾಲಕ್ಕೆ ಮೀರಿದಂಥವನು. ಮೂರುಲೋಕದಲ್ಲಿ ಮೀರಿದ ಮದವನ್ನು ದೂರೀಕರಿಸಿದವನು. ಕೇವಲ ನನ್ನ ಹೃದಯವೇ ಸ್ಥಾನವಾಗಿರುವದು. ನನ್ನ ಜ್ಞಾನವೇ ನಿನಗೆ ಆಭರಣವಾಗಿರುವುದು. ಅಷ್ಟಾವರಣವೇ

ತಾಯಿಯಾಗಿರುವುದು. ನನ್ನ ಪಂಚಾಕ್ಷರಿ ಮಹಾಮಂತ್ರವೇ ತಂದೆಯಾಗಿರುವುದು. ಮಹನೀಯರಾದ ಅಮರ ಗಣಂಗಳೇ ನಿನಗೆ ಬಂಧುಯೆನಿಸಿಕೊಳ್ಳುವರು. ಶಿವಶಕ್ತಿಯೆಂಬ ಸ್ತ್ರೀಯಳಿಗೆ ದರ್ಪಣ ಸ್ವರೂಪನಾದಂಥವನು. ಭೂಲೋಕದಲ್ಲಿ ನಿನ್ನಿಂದಲೇ ಶಿವಮತ ವೃದ್ಧಿಗೊಳ್ಳಬೇಕಾಗಿದೆ. ಆದಕಾರಣ, ನಿನಗೆ ಗುರು-ಲಿಂಗ-ಜಂಗಮ ನಾನೇ ಆಗಿ ಅನುಕೂಲಿಸುತ್ತೇನೆ.

ಹಾ ಹಾ, ಎನ್ನ ಜ್ಯೋತಿಯೇ ಯನ್ನ ಸ್ವರೂಪಿಯೇ ಎನ್ನ ಆನಂದವ ತಿಳಿಯೇ ಈ ಸುಕುಮಾರನಿಗೆ ದಿವ್ಯತರವಾದ ಇಷ್ಟಲಿಂಗವನ್ನು ಧಾರಣಮಾಡಿ, ಪಂಚಾಕ್ಷರಿ ಮಹಾಮಂತ್ರವನ್ನು ಬಲಗಿವಿಯಲ್ಲಿ ಬೊಧಿಸಿ, ಈ ಸುಕುಮಾರನನ್ನು ನಿದ್ರಿ ಹತ್ತಿ ಮಲಗಿರುವ ಮಾದಲಾಂಬಿಕೆಯವರ ಮಗ್ಗಲಲ್ಲಿ ಮಲಗಿಸಿ, ಶಿಶುವಿಗೆ ಬಸವನೆಂಬೋ ನಾಮವನ್ನು ಧರಿಸುವುದಕ್ಕೆ ಇವರ ಸ್ವಪ್ನದಲ್ಲಿ ನನ್ನ ವೃತ್ತಾಂತವನ್ನು ತಿಳಿಯುವಂತೆ ಮಾಡುತ್ತೇನೆ. ಆದ್ದರಿಂದ, ಈ ಕಾರ್ಯವನ್ನು ಈಗಿಂದೀಗಲೇ ದಿಗ್ವಿಜಯ ಮಾಡುವೆನು ಬಸವ ಬಸವ ಬಸವಾ.

ಮಾದಲಾಂಬಿಕೆ: ಸಖೀ, ತಡಮಾಡದೇ ಏಳು ಏಳು. ಯಾಕೆಂದರೆ, ನಾನು ನಿದ್ರಿಯಿಂದ ಅಶಕ್ತಳಾಗಿ ಮಲಗಿರುವಾಗ, ನನ್ನ ಮಗ್ಗಲಲ್ಲಿ ಗಿರಿಜಾರಮಣನು ಹಾಕಿರುವ ಕೂಸಿನ ಮಹಿಮೆಯನ್ನು ಎಷ್ಟೆಂದು ಹೇಳಲಿ? ಕಂದರ್ಪನ ಸಮಾನ ಸುಂದರ ಕಂದನು ತೋರುವನು ನೋಡೆ.

ಮಾದಲಾಂಬಿಕೆ **ಪದ**

ಎಂಥಾ ಸೋಜಿಗವಿದು ದಾಸಿ ಕೇಳಮ್ಮಾ ನೀನು ।
ಶಾಂತಮತಿ ನೋಡು ।
ಕಂತುಹರ ತಾಯನ್ನು ಹಂತೇಲೆ ।
ಮಗನಾಗಿ ಶಾಂತ ತೋರಿದನಮ್ಮಾ ॥

ಶಾಂತಮತಿ : ಹೌದಲ್ಲೇ ತಾಯಿ, ಚಂದ್ರನನ್ನೂ ತಿರಸ್ಕಾರ ಮಾಡುವ ಮಗನು ತೋರುವನು. ಇದು ಏನು ಸೋಜಿಗವು? ಶಿವನ ಮಹಿಮೆಯೇ ಇರುವುದು.

ಮಾದಲಾಂಬಿಕೆ : **ಪದ**

ತರುಣಿಯೇ ನೀ ಕೇಳು ಇನ್ನು ಹೇಳುವೆನು ।
ಧರುಣಿಪ ರಾಯರ ಕರೆದು ತಾ ಬೇಗನೇ ।
ಸರಸದಿಂದಲಿ ತೆರಳವ್ವಾ ನೀನು ॥

ಮಾದಲಾಂಬಿಕೆ: ಲಲನಾಮಣಿ, ಧರಣಿಕಾಂತನಾದ ಎನ್ನ ಪತಿಯನ್ನು ಬೇಗನೆ ಕರೆದುಕೊಂಡು ಬಾ. ಮಗನ ಅಧಿಕವಾದ ಆಶ್ಚರ್ಯವನ್ನು ನೋಡಿ, ಹರುಷಾಬ್ಧಿಯಲ್ಲಿ ಮುಳುಗಲಿ ಹೋಗು, ಹೋಗು.

ಶಾಂತಮತಿ: ಹಾಗಾದರೆ ಹೋಗುತ್ತೇನೆ ತಾಯಿ.

ಮಾದರಸನ : **ಪದ**

ಏನಿದು ಕೌತುಕ ಮಾನುನಿವತಿಯಳೆ ।
ಫಣಿವೇಣಿ ರಾಣಿಯಳೇ ।
ತನಯನು ತೋರ್ವನು ಏನಿದು ಚಮತ್ಕಾರ ।
ನನ್ನ ನಂದಿ ಉದಿಸಿದನೇ ॥

ಮಾದರಸ: ಆಹಾ ಇದೇನಾಶ್ಚರ್ಯವು ! ಮಾದಲಾಂಬಿಕೆಯವರೇ, ದ್ವಿತೀಯಶಂಭುವೆನಿಸಿದ ನಂದೀಶ್ವರನು ನನ್ನ ಮೇಲೆ ಅಂತಃಕರುಣ ಕಟಾಕ್ಷೆಯನ್ನು ತೋರಿ, ಮಗನನ್ನು ಉತ್ಪನ್ನ ಮಾಡಿದಂತೆ ತೋರುತ್ತದೆ. ನಾವೇ ಧನ್ಯರು. ವ್ರತವನ್ನು ಮಾಡಿದ್ದು ಸಾರ್ಥಕವಾಯಿತು. ಈ ಮಗುವಿಗೆ ನಾಮಕರಣ ಮಾಡಬೇಕಾದರೆ, ಬಸವ ಬಸವಾ ಎಂದು ಪ್ರಸಿದ್ಧವಾಗಿ ಕರಿಯಲಿಕ್ಕೆ ಬೇಕು. ಶ್ರೀ ಗುರು ಗುದಿನೇಶ್ವರ ಅಂತಃಕರಣವು ಪೂರ್ಣವಾಯಿತು. ನಮ್ಮ ದುಃಖವೆಂಬ ಅಂಧಕಾರವು ಮಗನಾರ್ಕನಿಂದ ಓಡಿತು, ಕಂಡ್ಯಾ ವಲ್ಲಭಿ.

ಮಾದಲಾಂಬಿಕೆ: ನಾಥಾ ಈ ಮಗುವಿನ ಮುಖದ ರೂಪವನ್ನು ಎಷ್ಟೆಂದು ಕೊಂಡಾಡಲಿ? ನಮ್ಮ ಇಷ್ಟದೇವನಾದ ನಂದೀಶ್ವರನೇ ಈ ಮಗುವಾಗಿ ಬಂದಿರಬಹುದೇನು! ನಮ್ಮ ಜನ್ಮಮಾತ್ರ ಸಾರ್ಥಕವಾಯಿತು. ಈ ಭವಸಾಗರವನ್ನು ದಾಟಲಿಕ್ಕೇನೂ ಅಡ್ಡಿಯಿಲ್ಲ ನಾವೇ ಧನ್ಯರು.

ಮಾದರಸ : ನೈದಿಲೆಯಂತೆ ಕಾಂತಿಯುಳ್ಳ ಕಾಂತೆಯೇ ಈ ಸುಕುಮಾರನು ಹುಟ್ಟಿದ್ದು ನಮಗೆ ಹೇಗಾಯಿತೆಂದರೆ, ಹುಟ್ಟುಗುರುಡನಿಗೆ ನೇತ್ರ ಕಂಡಂತೆ,

ರೋಗಿಯು ಸಂಜೀವಿನಿ ಕಂಡಂತೆ, ಕಮಲಮುಖಿ ಸಾಕ್ಷಾತ್ ಶಿವನ ಧರ್ಮವೇ ಈ ಶಿಸುರೂಪ ಧಾರಣ ಮಾಡಿ ಅವತರಿಸಿರಬಹುದು. ಹೌದು ಹೌದು, ನಾವೇ ಮೋಕ್ಷಕ್ಕೆ ಕರ್ತರು.

ಮಾದಲಾಂಬಿಕೆ: ಪ್ರಿಯಾ, ಈ ಶಿಸುವನ್ನು ನೋಡಿ ನನಗೆ ಪರಮ ಸಂತೋಷವಾಯಿತು. ಸ್ತುತನು ಜನಿಸಿ ಇಂದಿಗೆ ಹನ್ನೆರಡು ದಿವಸಗಳಾದವು. ಶಾಸ್ತ್ರವಿಧಿ ಪ್ರಕಾರ, ತೊಟ್ಟಿಲಲ್ಲಿ ಮಲಗಿಸಿ, ಜೋಗುಳವನ್ನು ಪಾಡಲಿ. ಮತ್ತು ನಂದೀಶ್ವರನ ಅನುಗ್ರಹದಿಂದ ಹುಟ್ಟಿದ ಕಾರಣ, ಈ ಶಿಸುವಿಗೆ ಬಸವನಾಮ ಸಾರ್ಥಕವಾಯಿತೆಂದು ಮುತ್ತೈದಿಯರು ಪುಷ್ಪ-ಫಲಗಳನ್ನು ಗಂಧ-ಕಸ್ತೂರಿಯನ್ನು ಅಂಗಕ್ಕೆ ಲೇಪಿಸಿ, ಬಸವಾ ಎಂಬ ನಾಮಾಂಕಿತವನ್ನು ಇಟ್ಟು, ವಸ್ತ್ರಾಭರಣಗಳನ್ನು ತೆಗೆದುಕೊಂಡು ಹೋಗಲಿ, ಕರಿಸಿರಿ.

ಮಾದರಸ: ಸಖೀ ಶಾಂತಮತೀ ಮಂಗಲವನಿತೆಯರಿಂದ ಈ ಮಗುವಿಗೆ ನಾಮಕರಣ ಮಾಡಿ, ಜೋಗುಳವನ್ನು ಹಾಡಿರಿ. ಸೇವಕಾ, ಚರಮೂರ್ತಿಗಳನ್ನು ಕರೆದುಕೊಂಡು ಬಾ.

ಶಾಂತಮತಿ : ಮಹಾರಾಜರೇ, ತಮ್ಮ ಅಪ್ಪಣೆಯ ಪ್ರಕಾರ, ಜೋಗುಳವನ್ನು ಹಾಡುತ್ತೇವೆ.

ಜೋಗುಳ ಪದ

ಜೋ ಜೋ ಮಲಗಯ್ಯ ಬಸವೇಶಾ ॥ ಪಲ್ಲ ॥

ಬಾಳೆಯ ವನದೊಳು ಬಾಲನ ತೊಟ್ಟಿಲ ಕಟ್ಟಿ ।
ಬಾಲಾ ಬಸವೇಶನೇ । ಮಲಗಯ್ಯ ಬಸವೇಶ ॥ ೧ ॥

ಲಿಂಬಿಯ ವನದೊಳು ರಂಬೇರು ತೊಟ್ಟಿಲ ಕಟ್ಟಿ ।
ಲೀಲೆಯ ಬಸವಣ್ಣಾ । ಮಲಗಯ್ಯ ಬಸವಣ್ಣಾ ॥ ೨ ॥

ಉತ್ತತ್ತಿ ವನದೊಳು ಮಿತ್ರೇರು ತೊಟ್ಟಿಲ ಕಟ್ಟಿ ।
ಪುತ್ರ ಬಸವೇಶನೆ । ಮಲಗಯ್ಯ ಬಸವೇಶಾ ॥ ೩ ॥

ಚರಮೂರ್ತಿ: ಭೋ ವೀರಶೈವ ಮತೋದ್ಧಾರಕನಾದ ಬಸವೇಶಾ, ನಿನಗೆ ಕಲ್ಯಾಣವಾಗಲಿ. ನಿನ್ನನ್ನು ವರ್ಣಿಸಬೇಕಾದರೆ, ಯಾರಿಗೆ ಸಾಧ್ಯವಾದೀತು? ನಿಗಮಾಗಮ ಗೋಚರನೆ, ನಿನ್ನ ಕರುಣ ಕಟಾಕ್ಷವು ಜಗತ್ತನ್ನೇ ಕಾಪಾಡಲಿ. ಬಸವ ನನ್ನ ಆಸ್ಥಾನವಂ ಕುರಿತು ಗಮನ ಮಾಡುತ್ತೇನೆ.

ಮಾದರಸ :ಸ್ವಾಮಿಗಳೇ ಈ ದಕ್ಷಿಣೆಯನ್ನು ತೆಗೆದುಕೊಳ್ಳಿರಿ.

ಚರಮೂರ್ತಿ: ರಾಜಾ, ತೆಗೆದುಕೊಳ್ಳುತ್ತೇವೆ. ಧನ್ಯಧನ್ಯ.

ಶಾಂತಮತಿ: ಮಾದಲಾಂಬಿಕೆಯವರೇ ಅರಳೆಲಿ ಮಾಗಾಯಿ ಕೊರಳ ತಾಯಿತ, ಕಾಲಗಡಗ, ಉರುಗಾಮುರಿ, ಪುತ್ಥಳಿಗುಂಡು, ಬಿಂದಳ್ಳಿಗಳಿಂದೊಪ್ಪುವ ಈ ಬಾಲಕನ ಚೆಲುವಿಕೆಯನ್ನು ನಾನು ಎಷ್ಟು ವರ್ಣಿಸಲಿ? ಮನ್ಮಥನೋ, ಏನ್ ಸಾಕ್ಷಾತ್ ಶಿವನೋ ಈ ರೂಪವನ್ನು ಧಾರಣಮಾಡಿಕೊಂಡು ಅವತಾರ ಮಾಡಿರಬಹುದು. ಇಲ್ಲದಿದ್ದರೆ, ಈ ಇಷ್ಟಲಿಂಗ ಸಹಿತನಾಗಿ ಜನಿಸುವುದುಂಟೆ? ನೀವು ಅನಂತಜನ್ಮದಲ್ಲಿ ಮಾಡಿದ ಪುಣ್ಯವನ್ನು ಈತನೊಬ್ಬನೇ ಈ ರೂಪದಲ್ಲಿ ಧಾರಣ ಮಾಡಿಕೊಂಡು ಅವತಾರ ಮಾಡಿರುವನು, ಕಂಡ್ಯಾ. ಬಸವ ಬಸವಾ ನಿನ್ನ ಪಾದಕ್ಕೆ ನಮಸ್ಕಾರವಿರಲಿ. ನಾನು ಧನ್ಯಳಾದೆ. ಭೋಜನ ಶಾಲೆಯನ್ನು ಕರಿತು ಗಮನ ಮಾಡುತ್ತೇನೆ.

ಮಾದರಸ : ಹೌದು ಹೌದು ಮಗನೇ ಐದುವರುಷ ನಡೆಯುತ್ತಿವೆ. ತಡವೇಕೆ? ಶಾಲೆಗೆ ಈಗಲೇ ಕಳಿಸಿಬರುತ್ತೇನೆ.

ಮಾದರಸ: **ಪದ**

ಕಳಿಸುವೆ ಸಾಲೆಗೆ ಎನ್ನ ನಳಿನಮುಖ ಮಗನನ್ನು ।
ಘಳಿಲನೇ ಕಳಿಸಿ ಬರುವೆನು। ನಾನು ॥
ಶೂಲಿ ಭಕ್ತನು ನೀನು। ಶೀಲನಾಗಿಯು ಇನ್ನು ।
ಲೋಲಾದಿ ಸಾಲಿಯ ಕಲಿಯೋ ಬಸವ ॥

ಮಾದರಸ: ಸುಪುತ್ರನೇ ವೀರಶೈವ ಶರಧಿಗೆ ಚಂದ್ರನೇ, ಬಾಬಾ ಮಗನೇ, ಈಗಿಂದೀಗಲೇ ಸಾಲಿಗೆ ಕಳಿಸಿ ಬರುತ್ತೇನೆ. ವಿದ್ಯೆಯನ್ನು ಕಲಿತು ಶ್ರೀಗುರು ಗುದಿನೇಶ್ವರನ ಅಂತಃಕರುಣದಿಂದ ಪ್ರಸಿದ್ಧಿಯನ್ನು ಹೊಂದು ನಡೆ.

ಬಸವ : ತಂದೆಯೇ ಮಕ್ಕಳನ್ನು ಸಾಲಿಗೆ ಕಳಿಸದೇ ಇದ್ದರೆ, ತಂದೆ ತಾಯಿಗಳೇ ಮಕ್ಕಳ ಪಾಲಿಗೆ ಶತ್ರುವೆಂದು ತಿಳಿಯಬೇಕು. ಮಕ್ಕಳನ್ನು ದನ ಕಾಯಲಿಕ್ಕೆ ಹಚ್ಚುವುದು, ಭಿಕ್ಷಾ ಬೇಡಲಿಕ್ಕೆ ಕಳಿಸುವುದು ತಂದೆ – ತಾಯಿಗಳ ಧರ್ಮವಲ್ಲ. ಆದ್ದರಿಂದ, ನಾನು ಸಾಲೀಮಠವನ್ನು ಕುರಿತು ಗಮನ ಮಾಡುತ್ತೇನೆ.

(ಶಾಲೆ ಸೀನು)

ಸಾಲಿ ಹುಡುಗರು   ಪದ

ಹುಡುಗರೆಲ್ಲರು ಬನ್ನಿರಯ್ಯ ತಡವು ಮಾಡದೆ ಶಾಲೆಗೆ ।
ಬಿಡದೆ ನಾವು ಹೋಗಿ ಇನ್ನು ಪಾಠವನ್ನು ಕಲಿಯೋಣ ॥ ೧ ॥

ಹೌದು ಹೌದು ನಡೆಯಿರಯ್ಯ ಬುದ್ಧಿಕೊಡುವ ಶಾಲೆಗೆ ।
ವಿದ್ಯೆಯನ್ನು ಕಲಿತು ನಾವು ಶುದ್ಧವಾಗಿ ನಡಿಯೋಣಾ ॥ ೨ ॥

ಸಾಲಿಕಲಿತು ಶಾಣ್ಯಾರಾಗಿ ಶೂಲಿಶಿವನ ಭಜಿಸೋಣ ।
ಕಾಲಕಾಲಕೆ ಶಿವನಸ್ತೋತ್ರವ ಬಿಡದೆ ನಾವು ನುಡಿಯೋಣಾ ॥ ೩ ॥

ಹುಡುಗರು: ಯಲೋ ಹುಡುಗರಿರಾ, ಅಯ್ಯನವರು ಬರುವುದರೊಳಗಾಗಿ ನಮ್ಮ-ನಮ್ಮ ಪಾಠವನ್ನು ಕಲಿಯೋಣ ಕೂಡ್ರಿ.

ಮಾಸ್ತರ : ಇನ್ನು ಸಾಲಿಯ ಸಮಯ ಆಯಿತು ; ಸಾಲಿಯ ಕಡೆಗೆ ಹೋಗುವಾ.

ಹುಡುಗರು : ಮಾಸ್ತರ ಬಂದರು ಓದಿರಿ ಓದಿರಿ.

ಮಾಸ್ತರ : ಎಲೋ ದಾಮೋದರ, ಮುದ್ದಾ, ಕೇಶವ ಎಲ್ಲಾ ಹುಡುಗರು ಬಂದಿರುವರೋ.

ಹುಡುಗರು: ಎಲ್ಲಾ ಹುಡುಗರು ಬಂದಿರುವರು.

ಮಾಸ್ತರ : ಎಲೋ ಹುಡುಗರಿರಾ, ಇಂದು ಚತುರ್ದಸಿ. ರಂಗು ಹಾಕಬೇಕು. ಎಲ್ಲಾ ಹುಡುಗರು ಭಾವಿಗೆ ಹೋಗಿ ಪಾಟಿಯನ್ನು ತೊಳೆದುಕೊಂಡು ಬಂದು ಸರಸ್ವತಿ ಪೂಜೆ ಮಾಡಿರಿ. ಭಾವಿಯಲ್ಲಿ ಹುಷಾರ ಹೋಗಿರಿ.

(ಭಾವಿಯ ಸೀನು)

ಎಲ್ಲಾ ಹುಡುಗರು: ಎಲೋ ಹುಡುಗರೇ ಇದೇ ಭಾವಿಯು. ಈ ಪಾಟಿಯನ್ನು ತೊಳೆಯಿರಿ. ಜಲ್ದಿ ರಂಗು ಹಾಕುವಾ.

ಚಿದಂಬರ : ಎಲೋ ಹುಡುಗರಿರಾ ಭಾವಿಯೊಳಗೆ ಬಿದ್ದೆನು, ಬಿದ್ದೆನು ಸತ್ತೆ ಸತ್ತೆ.

ದಾಮೋದರ :ಎಲೋ ಮುದ್ದಾ, ಕೇಶವಾ, ಚಿದಂಬರನು ತನ್ನಷ್ಟಕ್ಕೆ ತಾನೇ ಕಾಲುಜಾರಿ ಭಾವಿಯಲ್ಲಿ ಬಿದ್ದನು. ಇವನ ಪ್ರಾಣವು ಉಳಿಯುವುದಿಲ್ಲವು. ಈ ತುಪಾನಿಯ ಬಸವನೇ ನೂಕಿ ಕೊಂದನೆಂದು ಇವನ ತಂದೆ ಮುಂದೆ ಹೇಳಬೇಕು. ಅಂದರೆ ಬಸವನಿಗೆ ಜನ್ಮ ಘಾತಕವಾಗಬಹುದು, ನಡೆಯಿರಿ ಹೋಗುವಾ.

ಮುದ್ದ : ಹೌದು ಹೌದು, ನಡೆಯಿರಿ. ಚಿದಂಬರನ ತಂದೆ ಗೋವಿಂದಭಟ್ಟನಿಗೆ ಹೇಳಿ ಬಸವನ ಪ್ರಾಣವನ್ನು ತೆಗೆಸುವಾ, ಬೇಗನೆ ಹೋಗುವಾ.

ಗೋವಿಂದಭಟ್ಟ: ಶಿವ ಶಿವಾ, ದಿನಹೋದ ಮೇಲೆ ಇರಬಾರದು. ಮುದಿಯರಿಗೆ ಯಾರು ಸೇರುವರು? ಹಡೆದ ಮಗ ಸೇರುವನೇನು? ಇಲ್ಲಾ. ಹಡೆದ ತಂದೆಯೆಂದು ಅನ್ನ-ನೀರು ಹಾಕಿ ಜೋಪಾನ ಮಾಡುವನೇ? ಇಲ್ಲ. ಶಿವ ಶಿವಾ ಈಗಿನ ಕಾಲದಲ್ಲಿ ಅಂಥಾ ಪುಣ್ಯವಂತ ಮಕ್ಕಳು ಇರುವರೇ? ಇಲ್ಲವೇ ಇಲ್ಲ. ಅಯ್ಯೋ ಹೆಂಡತಿಯಂತೂ ತೀರಾ ದೂರ ಹಾಯುತ್ತಾಳೆ. ಸೇರುವುದೇ ಇಲ್ಲ. ಅಂದ ಬಳಿಕ ಮಕ್ಕಳು ಮರಿಯಾರು? ಹೆಂಡತಿಯು ಮುದುಕನಾದ ಗಂಡನನ್ನು ಮೈ ತೊಳೆಸಿ, ಬಿಸಿ ರೊಟ್ಟಿ – ಅನ್ನ ಮಾಡಿ ಉಣಿಸುವಳೇನು? ಇಲ್ಲ. ಶಿವ ಶಿವಾ ಅಂಥ ಪುಣ್ಯವಂತ ಹೆಂಡತಿ ಸಿಗುವುದು ದುರ್ಲಭವೇ ಸರಿ. ಒಟ್ಟಾರೆ ಹೇಳಬೇಕಾದರೆ, ಮುದುಕರಾದ ಮೇಲೆ ಇರಬಾರದು. ದೇವರು ಬೇಗನೆ ಒಯ್ಯಬೇಕು. ಮರ್ಯಾದೆ ಕಳೆದುಕೊಂಡು ಇರಬಾರದು ಬಲುಬೇಸರ. ಶಿವ ಶಿವಾ ಒಯ್ಯೊ ಒಯ್ಯೊ. ಎಂಥವರಿಗಾದರೂ ಬಡತನ ಕೊಡಬಾರದು. ಬಡತನ ಬಂದರೂ ಬರಲಿ, ಸಾಲಾ ಮಾತ್ರ ಏಳೇಳು ಜನ್ಮಕ್ಕೂ ಮಾಡಬಾರದು. ಮಕ್ಕಳು-ಮರಿ ಕೂಳಿಲ್ಲದೆ ಸತ್ತರೂ ಚಿಂತೆಯಿಲ್ಲ ಸಾಲಾ ಮಾತ್ರ ಸಾಪ ಸಾಪ ಮಾಡಬಾರದು. ಶಿವ ಶಿವಾ ನಾನು ಇನ್ನೊಂದು ಹೇಳುವುದೇನೆಂದರೆ, ಬಡತನ ಬಂದರೂ ಬರಲಿ, ಸಾಲಾ ಮಾಡಿದರೂ, ಬೇಡುವುದನ್ನು ಮಾತ್ರ ಸರ್ವಥಾ ದೇವರೇ ಕೊಡಬೇಡ. ಬೇಡುವದೆಂದರೆ ಬಲು ಹಗುರು. ಇಂಥ ಹಗುರು ಜಗತ್ತಿನಲ್ಲಿ ಯಾವುದೂ ಇಲ್ಲ. ಸರ್ವಥಾ ಬೇಡಬಾರದು. ನನಗಂತೂ ಭಿಕ್ಷೆ ಬೇಡುವುದು ಸಾಕಾಗಿ ಹೋಗಿದೆ. ದೇವಾ, ನೀನೇ ನನ್ನ ಕುಟುಂಬವನ್ನು ಬದುಕಿಸು ಶಿವಧೋ.

ದಾಮೋದರ : ಯಜಮಾನರೇ, ಗೋವಿಂದ ಭಟ್ಟರೇ, ನಿಮ್ಮ ಮಗ ಚಿದಂಬರನು ಸ್ವರ್ಗಸ್ಥನಾದನು.

ಗೋವಿಂದಭಟ್ಟ: ಸ್ವರ್ಗಾಧೀಶನಾದ ದೇವಿಂದ್ರನು ಭೋಗಸಂಪತ್ತಿನಿಂದ ಮೆರೆಯುವನು. ಅವನ ಭೋಗಕ್ಕೆ ಎಣೆಯೇ ಇಲ್ಲ. ದೇವರು ಅವನಿಗೆ ಅಷ್ಟೈಶ್ವರ್ಯವನ್ನು ಕೊಟ್ಟಿರುತ್ತಾನೆ. ಕಮ್ಮಗೆ ಪಂಚಾಮೃತವನ್ನು ಊಟಾ ಮಾಡುತ್ತಾನೆ. ನಮಗೆ ಹ್ಯಾಗೆ ಬಂದೀತಯ್ಯಾ ವಟುಗಳಿರಾ?

ಮುದ್ದ : ಓಹೋ ಮುದುಕ ಯಜಮಾನರೇ ನಿಮ್ಮ ಮಗ ಚಿದಂಬರನು ವೈಕುಂಠವನ್ನು ಸೇರಿದನು.

ಗೋವಿಂದಭಟ್ಟ : ಹೌದು, ಅಲ್ಲವೆನ್ನುವರಾರು? ವೈಕುಂಠ ಪತಿಯು ಲಕ್ಷ್ಮಿಯಗಂಡ. ಅವನಿಗೇನು ಕಡಿಮೆ. ಕ್ಷೀರಸಾಗರವನ್ನೇ ಕೊಟ್ಟುಬಿಟ್ಟಿರುತ್ತಾನೆ. ಯಾತರ ಚಿಂತಿ? ಚಿಂತಿ ಎನ್ನುವುದನ್ನೇ ನನ್ನ ಹೆಸರಿನಲ್ಲಿ ಖಾತೆ ಮಾಡಿಸಿರುತ್ತಾನೆ.

ದಾಮೋದರ : ಅಯ್ಯ ಗೋವಿಂದಭಟ್ಟರೇ, ನಿಮ್ಮ ಮಗ ಕೈಲಾಸ ಸೇರಿದನು.

ಗೋವಿಂದಭಟ್ಟ: ಹೌದಲೇ ಹುಡುಗರಿರಾ, ಅರಿಯದವನ ಮುಂದೆ ಹೇಳಿದ ಹಾಗೆ, ನನ್ನ ಮುಂದೆ ಹೇಳುತ್ತೀರಲ್ಲ, ಏನು ಶಾಣ್ಯಾರಪ್ಪ ನೀವು? ಕೈಲಾಸವು ಶಿವನಲೋಕ. ಅವನಿಗೇನು ಕಡಿಮೆ. ಅನೇಕ ಮಂದಿ ಭಕ್ತರಿರುವರು. ಆ ಭಕ್ತರ ಮನೆಗೆ ಹೋಗಿ ಎಥೇಚ್ಛವಾಗಿ ಹೊಡೆದು ಬರುವನು. ಅವನಿಗೇನು ಚಿಂತಿ ಹೇಳಿರಿ. ಚಿಂತಿ ಎನ್ನುವುದನ್ನು ದೇವರು ನನ್ನ ಪಾಲಿಗೆ ಬಿಟ್ಟಿರುವನು ಕಂಡಿರ್ಯಾ, ಹುಡುಗರಿರಾ.

ಮುದ್ದ : ಓಹೋ ! ಇವರು ಕಿವುಡರೇ ಇರುತ್ತಾರೆ. ಜಗ್ಗಿ ಹೇಳುವಾ. ಯಜಮಾನರೇ, ನಿಮ್ಮ ಮಗ ಚಿದಂಬರನು ಯಮಲೋಕವನ್ನು ಹೊಂದಿದನು.

ಗೋವಿಂದಭಟ್ಟ: ಇದು ಖರೇವು. ಅಲ್ಲವೆನ್ನುವವರ್‍ಯಾರು? ಯಮಲೋಕದಲ್ಲಿ ಯಮಧರ್ಮನು ಪಾಪ ಮಾಡಿದವರಿಗೆ ಮಹಾ ಶಿಕ್ಷೆಯನ್ನು ಕೊಟ್ಟು, ನರಕಕುಂಡದೊಳಗೆ ಹಾಕುತ್ತಾನೆ. ಪಾಪಿಷ್ಟರು ನರಕವನ್ನೇ ಅನುಭವಿಸುತ್ತಾರೆ, ಇದು ನನಗೆ ಗೊತ್ತಿರುವುದು.

ಪಂಡಿತರಾಗಿ ಹೇಳುತ್ತಾರ ಮಕ್ಕಳು. ಛೀ ರಂಡೇಗಂಡರೇ ಹೋಗಿರಿ. ಯಾಕೆ ಚೇಷ್ಟೆಯನ್ನು ಮಾಡುವಿರಿ ನಡಿರಿ.

ದಾಮೋದರ : ಎಲೋ ಮುದ್ದನೇ, ಈ ಗೋವಿಂದಭಟ್ಟರು ಸರಗಿವುಡರೇ ಇರುವರು. ಕಿವಿಯಲ್ಲಿ ಬಸವನೇ ಭಾವಿಯಲ್ಲಿ ನೂಕಿ ಕೊಂದನೆಂದು ಜಗ್ಗಿ ಹೇಳಬೇಕು.

ಮುದ್ದ : ಹೌದು, ಹೌದು, ಇವರ ಕಿವಿಯಲ್ಲಿ ಜಗ್ಗಿ ಮಾತಾಡಬೇಕು.

ದಾಮೋದರ: ಓ ಹೋ ಯಜಮಾನರೇ, ನಿಮ್ಮ ಹುಡುಗ ಚಿದಂಬರನನ್ನು ರಾಜನ ಮಗನಾದ ಬಸವನು ಭಾವಿಯಲ್ಲಿ ನೂಕಿ, ಕೊಂದು ಬಿಟ್ಟನು. ಹೋಗು, ರಾಜನಿಗೆ ಫಿರ್ಯಾದಿ ಮಾಡು. ಆದದ್ದಾಗುತ್ತದೆ ನಡೆ, ಹೋಗು.

ಮುದ್ದ : ಹೌದು ಹೌದು, ನಾವು ಬೇಡ–ಬೇಡ ಅನ್ನಲಿಕ್ಕೂ, ಮಾದರಸನ ಮಗನಾದ ಬಸವನು ಭಾವಿಯೊಳಗೆ ಕೆಡವಿದನು. ಇನ್ನೆಲ್ಲಿ ಚಿದಂಬರ? ಎರವಾದನು. ಹೋಗು, ಅತಗೋತ ರಾಜನಿಗೆ ಫಿರ್ಯಾದಿ ಮಾಡು ನಡೆ.

ಗೋವಿಂದಭಟ್ಟ: ಅಯ್ಯೋ ! ಎನ್ನ ಮೋಹದ ಮಗನೇ, ಚಿದಂಬರಾ ಎರವಾದಿಯಾ? ಮುಪ್ಪಿನ ತಂದೆಯನ್ನು ಬಿಟ್ಟು ಹೋದೆಯಾ? ಶಿವಶಿವಾ ನನಗೆ ಗತಿ ಯಾರು? ಅಯ್ಯೋ ರಾಜನಿಗೆ ಫಿರ್ಯಾದಿ ಮಾಡುತ್ತೇನೆ. ಏನು ಹೇಳುತ್ತಾನೋ ಹೇಳಲಿ, 'ಮಹಾರಾಜರೇ ನಿಮ್ಮ ಮಗನಾದ ಬಸವನು ನನ್ನ ಮಗನಾದ ಚಿದಂಬರನನ್ನು ಭಾವಿಯಲ್ಲಿ ನೂಕಿ, ಕೊಂದನಂತೆ. ನನ್ನ ಗತಿಯೇನು? ನಿಮ್ಮ ಮಗನಾಗಿದ್ದರೆ, ಇಷ್ಟೊತ್ತಿಗೆ ಗಲ್ಲು ಮಾಡಿಸುತ್ತಿದ್ದಿರಿ. ಎಷ್ಟಾದರೂ ಬಡವರದು ಬೇಕಾಳಜಿ ಅಲ್ಲವೆ? ಅಯ್ಯೋ ಮಗನೇ ಸತ್ತಿಯಾ? ನನ್ನ ಗತಿ ಯೇನು? ಯಾರು ದಿಕ್ಕು? ನೀರು ಕೊಡುವರಾರು? ಅನ್ನ ಹಾಕುವವರಾರು? ನೀವೇ ಹೇಳಿರಿ.

ಮಾದರಸ : ಆಹಾ ಹಾ ಇದೇನು ಚಮತ್ಕಾರವು ! ಮುದುಕ ಯಜಮಾನರೇ, ಹೀಗೇಕೆ ಮಾತಾಡುವಿರಿ? ನಮ್ಮ ಬಸವನು ನಿಮ್ಮ ಮಗನನ್ನು ಭಾವಿಯಲ್ಲಿ ನುಗಿಸಿದನೇ? ಛೇ ಛೇ ! ಇದು ಸುಳ್ಳು ಸುಳ್ಳು! ಬಸವನು ಹಾಗೆ ಮಾಡುವವನು ಅಲ್ಲಲ್ಲಾ ಗೋವಿಂದಭಟ್ಟರೇ ಸುಳ್ಳು ಏಕೆ ಹೇಳುತ್ತೀರಿ! ಯಜಮಾನರೇ, ನೀವು ವೃದ್ಧರು ಸುಳ್ಳು ಹೇಳಬಾರದು.

ಗೋವಿಂದಭಟ್ಟ : ದ್ಯಾವುರು ನಾವು ಸುಳ್ಳು ಹೇಳುತ್ತೇವೆ, ಹ್ಯಾಗೆ? ಸಾಲಿ ಹುಡುಗರನ್ನು ವಿಚಾರಿಸಿರಿ. ಆ ಹುಡುಗರು ಸುಳ್ಳು ಹೇಳುವರೇ? ನಮ್ಮ ಹೊಟ್ಟೀಲೆ ಅವನೊಬ್ಬನೇ ಮಗ. ನಾವು ಮುಪ್ಪಿನವರು. ನಮ್ಮನ್ನು ಜೋಪಾನ ಮಾಡುವರು ದಾರು? ನನಗೆ ಯಾರೂ ದಿಕ್ಕಿಲ್ಲ. ನನ್ನ ರೊಕ್ಕ ಸಂಪಾದನೆ ಆದರೂ ಏನೂ ಇಲ್ಲ. ನಾನು ಇಷ್ಟು ದಿವಸ ಗಟ್ಟಿ – ಮುಟ್ಟಿದ್ದೆ. ಹಳ್ಳಿಪಳ್ಳಿ ಅಡ್ಡಾಡಿ, ಪಂಚಾಂಗ ಹೇಳಿ, ನಾಲ್ಕು ದುಡ್ಡಾಗಲೀ, ಪಾವು ಜೋಳವಾಗಲಿ ರೊಕ್ಕವಾ ತರುತ್ತಿದ್ದೆ. ಈಗ ಮುಪ್ಪಾವರಿಸಿರುವುದು. ಅಡ್ಡಾಡುವ ತ್ರಾಣವಿಲ್ಲಾ. ಪಂಚಾಂಗ ಹೇಳುವ ಶಕ್ತಿಯಿಲ್ಲ. ಮರಾಯಾ, ನನ್ನ ಗತಿಯೇನು? ನೀವೇ ಹೇಳಿರಿ. ಇದು ಬಿಡದ ಕರ್ಮ.

ಮಾದರಸ : ಓಹೋ, ಯಜಮಾನರೇ ನಿಮ್ಮ ದೇವರಾಣಿಯಾಗಿ ಕರೇವೇ ಆಣಿ

ಮಾಡಬೇಡಿರಿ. ದೇವರು ಮೆಚ್ಚಲಿಕ್ಕಿಲ್ಲಾ ಖರೇ ಹೇಳಿರಿ. ಪಾಪವು ಹೋಗ್ಹೊಡುವುದಿಲ್ಲ.

ಗೋವಿಂದಭಟ್ಟ : ದ್ಯಾವ್ರು ಖರೇವು. ನಮ್ಮ ದೇವರು ಗೋವಿಂದನ ಪಾದಸಾಕ್ಷಿಯಾಗಿ ಖರೇವು.

ಮಾದರಸ: ಒಳ್ಳೇದು, ಸ್ವಲ್ಪ ತಡೆಯಿರಿ, ಬಸವನನ್ನು ವಿಚಾರಮಾಡುತ್ತೇನೆ. ಯಾಕೆಂದರೆ, ಅವನು ವೀರಶೈವಮಾರ್ಗವನ್ನೇ ಸ್ವೀಕರಿಸುತ್ತಾನೆ. ಅವನ ಗುಣವನ್ನು ನೋಡುತ್ತಿರಲಿಕ್ಕಾಗಿ, ಅನ್ಯಾಯ ಮಾರ್ಗಕ್ಕೆ ವರ್ತಿಸುವುದಿಲ್ಲವೆಂಬಂತೆ ಕಂಡು ಬರುತ್ತದೆ. ಒಳ್ಳೆಯದು, ಪ್ರತ್ಯಕ್ಷವಾದರೂ ಪರಾಮರ್ಶಿಸಿ ನೋಡಬೇಕಾಗಿದೆ. ಇದು ಸಾಮಾನ್ಯವಲ್ಲ, ಗೋವಿಂದಭಟ್ಟರೇ ನೀವು ಇಲ್ಲಿಯೇ ಕುಳಿತುಕೊಳ್ಳಿ, ಸೇವಕಾ 'ಬಸವನನ್ನು ಕಚೇರಿಗೆ ತೀವ್ರವಾಗಿ ಕರೆದುಕೊಂಡು ಬಾ.'

ಸೇವಕ : ಹೂಂನ್ರೀ.

ಬಸವ : ಅಪ್ಪಾ ಬಂದಿರುವೆನು. ಏನಪ್ಪಣೆ ತಿಳಿಸಿ ಕೊಡ್ರಿ. ಆ ಕಾರ್ಯವನ್ನು ಪೂರ್ಣಮಾಡಿಕೊಡುವೆನು.

ಮಾದರಸ : ಏನಯ್ಯಾ ಬಸವೇಶಾ, ನಂದೀವ್ರತವನ್ನು ಮಾಡಿದ್ದಕ್ಕೆ ಯೋಗ್ಯಮಗನು ಹುಟ್ಟಿದಿ. ಬಸವಾ ಒಳ್ಳೆಯ ಕೆಲಸವನ್ನೇ ಮಾಡಿದಿ. ಇಂಥ ಅಧಮ ಕೆಲಸ ಮಾಡಲಿಕ್ಕೆ ತಿಳಿಯಲಿಲ್ಲವೇ? ಅಯ್ಯೋ ನಿನಗೆ ಯಾವ ಶಿಕ್ಷೆಯನ್ನು ಮಾಡಿದರೆ ಉಪಯೋಗವದೆ? ಬಸವಾ, ಈ ಗೋವಿಂದಭಟ್ಟರ ಮಗನನ್ನು ಭಾವಿಯೊಳಗೆ ನೂಕಬೇಕೆ? ಅವನ ಪ್ರಾಣ ಉಳಿದಿಲ್ಲ. ಸಾಲಿಹುಡುಗರು ನೀನೇ ನೂಕಿ ಕೊಂದೆಯೆಂದು ಹೇಳುತ್ತಾರಂತೆ. ಅಂದಬಳಿಕ, ಇದರ ಸಂಗತಿ ಏನು? ಚೆನ್ನಾಗಿ ಹೇಳು.

ಬಸವ : ಅಪ್ಪಾ ನೀನು ಅರಿಯದಲೇ ಮಾತಾಡಿದರೆ, ನಾನೇನು ಹೇಳಲಿ? ನಾನು ನಿರಪರಾಧಿ. ಆ ಎಲ್ಲಾ ಹುಡುಗರು ನಾನೇ ಕೊಂದೆನೆಂದು ಹೇಳಿದ ಬಳಿಕ ಮಾಡತಕ್ಕದ್ದೇನಿರುವುದು? ಒಳ್ಳೆಯದು, ಭಾವಿಗೆ ಹೋಗೋಣ ನಡೆಯಿರಿ. ಭಾವಿಯಲ್ಲಿ ಬಿದ್ದು ಸತ್ತವನನ್ನು ವಿಚಾರಿಸಿದರೆ, ತಾನೇ ತಿಳಿಯುತ್ತದೆ.

ಮಾದರಸ : ಛೇ ಮೂರ್ಖ ಬಾಲಕ, ಸತ್ತ ಹುಡುಗ ಹೇಗೆ ಮಾತಾಡುವನು? ಮೂರ್ಖನಿದ್ದಿ ನೀನು. ನೀನೇ ನೂಕಿರಬಹುದೆಂದು ಭಾಸವಾಗುತ್ತಿದೆ.

ಬಸವ : ತಂದೆಯೇ ನಾನು ನಿರಪರಾಧಿಯೇ ಆಗಿದ್ದರೆ, ಆತ ಏಕೆ ಮಾತನಾಡುವುದಿಲ್ಲ? ನಾವು ವೀರಶೈವರು ಸುಳ್ಳನಾಡುವರೇ? ಯಜಮಾನರೇ.

ಮಾದರಸ: ಓಹೋ ನೀನು ಅವನ ಕಡಿಯಿಂದ ನೂಕಿಲ್ಲವೆಂದು ಸಾಕ್ಷಿ ನುಡಿಸುವಿಯೋ?

ಬಸವ : ನುಡಿಸುವೆನು. ನಡೆಯಿರಿ ಭಾವಿಗೆ ಹೋಗೋಣ. ಅಲ್ಲಿ ಯಾವ ಸಂಗತಿಯಾದರೂ ತಾನೇ ತಿಳಿಯುತ್ತದೆ.

ಮಾದರಸ : ಹಾಗಾದರೆ, ನಡಿ ಹೋಗುವಾ, ಮುದುಕ ಯಜಮಾನರೆ ಏಳಿರಿ ಭಾವಿಗೆ ಹೋಗುವಾ. ಬಸವಾ ಇವರ ಕೈ ಹಿಡಿದುಕೋ. ಮೆಲ್ಲಗೆ ಬರ್ರಿ. ಬಸವಾ. ಇದೇ ಭಾವಿಯು ಇನ್ನು ತಡವೇಕೆ? ಎಲ್ಲರೂ ಕೇಳುವಂತೆ ಮಾತನಾಡಿಸು.

ಬಸವ : ಭೋ, ಇಲ್ಲಿ ನೆರೆದಿರುವ ಸಭಿಕರೇ, ಕೆಳಿರಿ ಕೇಳಿರಿ, ಸತ್ತ ಹುಡುಗನನ್ನು ಮಾತಾಡಿಸುತ್ತೇನೆ. ಭೋ. ಶಂಭೋ, ನನ್ನನ್ನು ನೀನೇ ಕಾಪಾಡಬೇಕು. ನಿನ್ನನ್ನು ನಂಬಿದಂಥ ಭಕ್ತರಿಗೆ ಕುಂದುಕೊರತೆಗಳಿರುವವೇ? ದೇವಾ ಮಾತಾಡಿಸುತ್ತೇನೆ, ಏ ಚಿದಂಬರಾ ಚಿದಂಬರಾ, ನಿನ್ನನ್ನು ಈ ಭಾವಿಯಲ್ಲಿ ನೂಕಿ ಕೊಂದವರಾರು? ಹೇಳು. ಎಲ್ಲಾ ಜನರು ಕೇಳುವಂತೆ ಹೇಳು.

ಚಿದಂಬರ : ಓಹೋ ದೈವದವರೇ, ಮಹಾರಾಜರೇ, ನನ್ನನ್ನು ಯಾರೂ ನೂಕಲಿಲ್ಲ. ನಾನೇ ಕಾಲುಜಾರಿ ಬಿದ್ದು ಸತ್ತೆನು. ಬಸವನು ನನ್ನನ್ನು ಯಾಕೆ ನೂಕುವನು? ಅವನು ದಯಾಳು ಇರುವನು. ಕೇಳಿರಿ, ಕೇಳಿರಿ.

ಮಾದರಸ : ವಾಹ್ ! ಬಸವೇಶಾ, ಏನು ಸತ್ಯಶರಣನೋ. ವೀರಶೈವ ಭಕ್ತನು ಹೌದು ಹೌದು. ಗೋವಿಂಧ ಭಟ್ಟರೇ ಇವನು ನಿಮ್ಮ ಮಗನು ಹೌದೋ? ಬಸವನು ನಿಮ್ಮ ಹುಡುಗನಿಂದ ಸಾಕ್ಷಿ ನುಡಿಸಿದ್ದು ಗೊತ್ತಾಯಿತೋ? ಇದರ ಮೇಲಿಂದ, ನಿಮಗೂ ಸಾಲೀ ಹುಡುಗರಿಗೂ ಏನು ಮಾಡಬೇಕು? ಯಾವ ಶಿಕ್ಷೆ ಕೊಡಬೇಕು?

ಬಸವ : ತಂದೆಯವರೇ ಈ ಮೂರ್ಖರು ಮಾಡಿರುವ ಅಪರಾಧವನ್ನು ಕ್ಷಮಿಸು. ಇವರನ್ನು ಧರ್ಮಸೆರೆ ಬಿಡಿಸಿರಿ.

ಮಾದರಸ : ಬಸವಾ ನಿನ್ನ ಮಾತಿನಿಂದ ಇವರನ್ನು ಧರ್ಮಸೆರೆಯಿಂದ ಬಿಡುತ್ತೇನೆ. ಗೋವಿಂದಭಟ್ಟರೇ, ನಿಮ್ಮ ಹುಡುಗನನ್ನು ಕರೆದುಕೊಂಡು ಮನೆಗೆ

ಹೋಗಿರಿ. ಶ್ರೀ ಗುದಿನೇಶ್ವರನು ಮೆಚ್ಚುವಂತೆ ಬಾಳ್ವೆ ಮಾಡಿರಿ, ತಿಳಿಯಿತೆ?

ಗೋವಿಂದಭಟ್ಟ : ಬಿಡು ಮಹಾರಾಯ, ಪುಣ್ಯಬರಲಿ. ಬಸವಣ್ಣ ನಿನ್ನ ಪಾದಕ್ಕೆ ನಮಸ್ಕಾರವಿರಲಿ. ಅಪ್ಪಾ ಮಗನೇ, ದೇಹಕ್ಕೆ ಎಲ್ಲಿಯಾದರೂ ಪೆಟ್ಟು ತಗುಲಿರುವುದೇನು? ಬಾಲಕಾ ಚಿದಂಬರಾ, ಮಾತಾಡು. ಎನ್ನ ಜೀವದ ಮಗನೇ, ಅಯ್ಯೋ ಶಿವ ಶಿವಾ ! ಇವನು ಸತ್ತಿರುವನು. ಬಸವಣ್ಣಾ ನೀನು ಮಾತಾಡಿಸಿದರೆ, ಮಾತಾಡುವನು. ನಾನು ಮಾತಾಡಿದರೆ ಸತ್ತಿರುವನು. ಬಸವಾ, ಎನ್ನ ಮೇಲೆ ದಯೆ ಮಾಡಬೇಕು. ನಾನು ಮುದುಕನು, ನನ್ನನ್ನು ಜೋಪಾನ ಮಾಡುವವರಾರು? ನೀನೇ ಎನಗೆ ಗತಿ. ಈ ಎನ್ನ ಜನ್ಮಕ್ಕೆ ಧಿಕ್ಕಾರವಿರಲಿ. ಈ ಶರೀರವನ್ನು ನಿಮ್ಮ ಪಾದಕ್ಕೆ ಇಟ್ಟಿರುವೆನು, ರಕ್ಷಿಸು ರಕ್ಷಿಸು.

ಬಸವನ : ಎಲೋ ಚಿದಂಬರಾ, ನಿನ್ನ ಮಾತಾ–ಪಿತೃಗಳು ದುಃಖ ಪಡುತ್ತಿರುವರು. ಏಳು, ಏಳು ಧನ್ಯನಾದಿ. ತಂದೆಯ ಕೈ ಹಿಡಿದುಕೊಂಡು ಮನಗೆ ಹೋಗು, ಸತ್ಯವಾಗಿ ನಡೆ. ಸುಳ್ಳು ಹೇಳಬೇಡ. ಶಿವಭಜನೆ ಮಾಡು, ಮೋಕ್ಷವಾಗುವದು.

ದಾಮೋದರ : ಬಸವೇಶ ಈ ಕಾರ್ಯವನ್ನು ಮಾಡಿದವರು ನಾವು ಅಜ್ಞಾನಿಗಳು. ಗತ ಅಪರಾಧವನ್ನು ಕ್ಷಮಿಸಬೇಕು. ನಿನ್ನ ಚರಣಕ್ಕೆ ಶರಣಾಗತರಾಗಿದ್ದೇವೆ ಬಸವೇಶಾ, ನಾವು ನಿಮ್ಮ ಗೆಳೆಯರಲ್ಲವೇ?

ಮುದ್ದ : ಬಸವಾ ನಿನ್ನ ಉಪಕಾರವನ್ನು ಮರೆಯುವುದಿಲ್ಲ. ಜನ್ಮ–ಜನ್ಮಾಂತರ ಕೊಂಡಾಡುತ್ತೇವೆ. ದೀನರರನ್ನು ಕಾಪಾಡು ಕಾಪಾಡು.

ಚಿದಂಬರ : ಬಸವೇಶಾ ನಿನ್ನ ಪಾದಕ್ಕೆ ನಮಸ್ಕಾರ. ಪುನಃ ಹುಟ್ಟಿ ಬಂದೆ. ಬಸವಾ ನಿನ್ನನ್ನು ಎಷ್ಟು ಕೊಂಡಾಡಲಿ? ನನ್ನ ಜನ್ಮಕ್ಕೆ ಧಿಕ್ಕಾರ ಧಿಕ್ಕಾರ ! ಬಸವ ಬಸವಾ ರಕ್ಷಿಸು.

ಬಸವ : ಎಲೋ ಹುಡುಗರಿರಾ, ನಾನು ನಿಮ್ಮಂತೆ ಅಜ್ಞಾನಿಯಲ್ಲ. ನಿಮ್ಮ ಧರ್ಮಸರೆ ಬಿಡಿಸುತ್ತೇನೆ. ಇನ್ನು ಮೇಲೆ ಮಾತ್ರ, ಇಂಥ ಕೆಟ್ಟ ಕೆಲಸವನ್ನು ಮಾಡಬೇಡಿರಿ. ಯಾವಾಗಲೂ ಶಿವನಾಮ ಉಚ್ಚರಿಸಿರಿ. ನಿಮಗೆ ಯಾವ ಭಯವಿರುವುದಿಲ್ಲಾ. ನಡೆಯಿರಿ ನಿಮ್ಮ – ನಿಮ್ಮ ಮನೆಗೆ. ದೇವ ಗುದಿನೇಶ್ವರ ಸ್ವಾಮಿ ನಿಮ್ಮನ್ನು ಕಾಪಾಡಲಿ, ಐಶ್ವರ್ಯವನ್ನು ಕೊಡಲಿ. ಆಯುಷ್ಯವನ್ನು ಹೆಚ್ಚು ಮಾಡಲಿ, ಧನ್ಯರಾದಿರಿ ನಡೆಯಿರಿ ನಡೆಯಿರಿ.

– ೧ನೇ ಅಂಕ ಮುಕ್ತಾಯ –

ಅಂಕ – ೨
ದೃಶ್ಯ – ೧

(ಬಸವೇಶ್ವರನ ಪ್ರವೇಶ)

ಬಸವರಾಜರು ಸಭೆಗೆ ಬಂದರು ಶಶಿಧರನನು ।
ಬೇಗ ಸ್ತುತಿಸುತ ವಸುಧಿಯೊಳು ।
ಶಿವಮತವಗ್ಯೆಯ್ಯುವಕ್ಕೋಸ್ಕರ ಇಂದು ॥

ಬಸವೇಶ್ವರ: ಭೋ, ದೇವಾಧಿದೇವಾ ನಿನ್ನ ಸದ್ಗುಣಗಳನ್ನು ವರ್ಣಿಸಬೇಕಾದರೆ, ಸಹಸ್ರಮುಖಿಗಳನ್ನು ಧರಿಸಿದ ಆದಿಶೇಷನಿಗೂ ಅಸಾಧ್ಯವಾದ ಬಳಿಕ, ಈ ಪಾಮರನಿಗೆ ಜ್ಞಾತವಾದೀತೆ? ದೇವಾ, ಸಮುದ್ರವೆಂಬ ಪಾತ್ರೆಯಲ್ಲಿ, ಅಂಜನಾದ್ರಿಯೆಂಬ ಕಾಡಿಗೆಯನ್ನು ಬೆರೆಸಿ, ಮಸಿಯ ಮಾಡಿ, ಸುರತರು ಶಾಖೆಯ ಲೇಖನಿಯನ್ನು ಮಾಡಿ, ಭೂಮಿಯೆಂಬ ಕಾಗದದ ಮೇಲೆ ಸಹಸ್ರಾವಧಿ ವರುಷ ಪರ್ಯಂತರ ಶಾರದೆಯು ನಿನ್ನ ಗುಣಗಳನ್ನು ಬರೆದಾಗಿಯೂ ಪಾರುಗಾಣದೆ ಹುಚ್ಚಳಂತೆ ಕುಳಿತಿರುವಳು.

ಪ್ರಭೋ, ನೀನೇ ಈ ಸೃಷ್ಠಿ – ಸ್ಥಿತಿ – ಲಯಗಳಿಗೆ ಕಾರಣೀಭೂತನು. ನೀನೇ ಚರಾಚರ ವಸ್ತುಗಳಲ್ಲಿ ವ್ಯಾಪಕನು. ನೀಲಕಂಧರ ನಿನ್ನ ಸಮಾನ ಕರುಣಾಶಾಲಿಗಳು ಯಾರಿರುವರು? ಯಾವ ಸುರಾಸುರರು ಸಮುದ್ರ ಮಂಥನ ಕಾಲದಲ್ಲಿ ಮಂದರ ಪರ್ವತವನ್ನೇ ಕಡುಗೋಲು ಮಾಡಿ, ಮಹಾಶೇಷನನ್ನೇ ರಜ್ಜುಮಾಡಿ, ಸಾಗರವನ್ನು ಮಥಿಸುವಲ್ಲಿ ಭಯಂಕರವಾದ (ಹಗ್ಗ) ಕಾಲಕೂಟವು ಉತ್ಪನ್ನವಾಗಲು, ಅದರ ಪ್ರಭಾವದಿಂದ ನಕ್ಷತ್ರಗಳು ಪತನವಾದವು. ಸಮುದ್ರವು ಉಕ್ಕೇರಿತು. ಚತುರ್ದಶಲೋಕಗಳು ದಹಿಸಲಾರಂಭಿಸಿದವು. ಈ ಅನರ್ಥವನ್ನು ಕಂಡು, ಭಯ ಭೀತರಾದ ವಿಷ್ಣು – ಬ್ರಹ್ಮಾದಿ ದೇವತೆಗಳು ನಿನ್ನ ಚರಣಾರವಿಂದಕ್ಕೆ ಶರಣಾಗತರಾಗಲು, ಆ ಭಯಂಕರವಾದ ವಿಷವನ್ನು ಪಾನ ಮಾಡಿ, ಸಕಲರಿಂದಲೂ ವಂದಿತನಾಗಿ, ನೀಲಕಂಧರ

ಎನಿಸಿಕೊಂಡೆ. ಚಂದ್ರಮೌಳಿ, ಜಯಶಂಕರಾ, ಸಕಲಜನರಕ್ಷಕ, ದುಷ್ಟರಾಕ್ಷಸರ ಶಿಕ್ಷಕ, ಆರ್ತಜನಭಕ್ತ ರಕ್ಷಾಮಣಿ. ಗಿರಿಜೆ ವಿಕಸನದ್ಯುಮಣಿ ಪಾಹಿ ಪಾಹಿ !

ನಿನ್ನ ಕೋಪವಾದರೂ ಸಾಮಾನ್ಯವೆನ್ನಬೇಕೆ? ಯಾವ ಬ್ರಹ್ಮದೇವನು ತನ್ನಿಂದ ಜನಿಸಿದ ಸರಸ್ವತಿಯನ್ನು ದಮನ ಮಾಡಿದ ಕೂಡಲೇ ಅವನ ದಂಡವನ್ನು ಛೇದಿಸಿ, ಚತುರ್ಮುಖನಾಗಿ ಮಾಡಿ, ಬ್ರಹ್ಮ ಕಮಲಧಾರಿಯಾಗಿಸಿ, ಧರೆಯಲ್ಲಿಯೂ – ಪರದಲ್ಲಿಯೂ ಖ್ಯಾತಿಗೊಂಡೆ. ಭೋ, ಜಗದರಕ್ಷಕ ಈ ದಾಸನನ್ನು ರಕ್ಷಿಸು. ಭವಸಾಗರವನ್ನು ದಾಟಿಸು. ಮೋಹವೆಂಬ ಘೋರಾರಣ್ಯದಲ್ಲಿ ಬಿದ್ದು ತಿರುಗಿ ಬರಲು ಮಾರ್ಗದೋರದೆ, ಬಳಲುತ್ತಿರುವೆನು. ಶಿವಭೋ, ಶಿವಭೋ.

ಧೂರ್ಜಟ್ಟಿಯೇ, ನಮೋ ನಮಃ. ಈ ಭಕ್ತನನ್ನು ಆದರಿಸಿ, ಭಕ್ತವತ್ಸಲನೆಂಬ ಬಿರುದನ್ನು ಸಫಲಗೊಳಿಸು ಗಿರಿಜಾಪತೀ, ಕರುಣಾಕರ ಮಂದಪ್ರಜ್ಞನು ಏನೋ ಬೇಡುವನೆಂದು ನಿಂದಿಸಬೇಡ. ಮಗನು ಎಷ್ಟೋ ಅಪರಾಧ ಮಾಡಿದರೂ ಜನಕನು ಕ್ಷಮಿಸುವನು. ನೀನಂತೂ ಜಗತ್ತಿಗೇ ಜನಕನು. ದಯಮಾಡಿ ಕರುಣಿಸು, ಕರುಣಿಸೆಂದು ಕೈಮುಗಿದು ಬೇಡಿಕೊಳ್ಳುವೆನು ಶಂಭೋ ಶಂಭೋ ಶಂಭೋ

(ಸಂಗಮೇಶ್ವರ ದೇವಾಲಯದ ದೃಶ್ಯ)

ಸಂಗಮೇಶ : ಬಸವೇಶಾ, ನಿನ್ನ ಕಾರ್ಯಕ್ಕೆ ಯಾವ ವಿಘ್ನಗಳು ಬಾರದಂತೆ ನಾನು ಬೆಂಬಲವಾಗಿ ನಿಂತು, ನಿನ್ನ ಕಾರ್ಯವನ್ನು ಪೂರ್ಣಮಾಡುವೆನು.

ಬಸವ : ಆಹಾ ! ಇದೇನು ಚಮತ್ಕಾರವು. ನನ್ನ ಗುರುಮೂರ್ತಿ ಆದ ಸಂಗಮೇಶ್ವರನ ಶಬ್ದೋತ್ಪತ್ತಿಯು ಪ್ರತ್ಯಕ್ಷವಾಯಿತಲ್ಲ. ಧನ್ಯನಾದೆ, ಶಿವ ಶಿವಾ, ಏನು ಚಮತ್ಕಾರವು ನನ್ನ ಗುರುಮೂರ್ತಿಯು ಮಾಯವಾದನಲ್ಲಾ, ಎಲ್ಲೋ ಪೋದನು. ಆಕಾಶವನ್ನು ಸೇರಿದನೇ? ಅಯ್ಯೋ ! ಗುರುನಾಥ ನನ್ನನ್ನು ನಡುಸಮುದ್ರದೊಳು ಕೈಬಿಟ್ಟು ಹೋದೆಯಾ? ದೇವಲೋಕವನ್ನು ಸೇರಿದಿಯಾ? ದೇವತೆಗಳೇ ನೀವೇ ಧನ್ಯರು. ದೇವತೆಗಳೇ ನನ್ನ ಗುರುನಾಥನನ್ನು ಕಳಿಸಿಕೊಡಿ. ಭೋ ಶರಣರೇ, ಶಿವಶರಣರೇ, ನನ್ನ ಗುರು ಮಹಾರಾಜರನ್ನು ದಯಮಾಡಿ ಕಳಿಸಿಕೊಡಿ. ನನ್ನ ಮೊರೆಯನ್ನು ಕೇಳಿ, ನನ್ನ ಗುರುನಾಥನನ್ನು ಕಳಿಸಿಕೊಡಿ ಎಂದು ಬೇಡಿಕೊಳ್ಳುವೆನು. ಹಾ ಹಾ ಛೇ ಮೂರ್ಖಮನಸ್ಸೇ

ಹೀಗೇಕೆ ಹೌಹಾರಿ ಮಾತಾಡುವಿ? ಸುಮ್ಮನಿರು. ಹೌದು ಹೌದು ಇದೇನು ಭ್ರಾಂತಾಸ್ಪದವು ನನ್ನ ಗುರುಮೂರ್ತಿಯು ನನ್ನಲ್ಲೇ ಇರಲಿಕ್ಕಾಗಿ ಯಾವ ಭಯವಿರುವದು. ಛೇ ಮೂರ್ಖಮನಸ್ಸೇ ಮೂರ್ಖನಂತೆ ಸಂಕಟಕ್ಕೆ ಒಳಗಾಗಿರುವೆಯಲ್ಲಾ? ಶಂಭೋ ಸಂಗಮೇಶಾ, ನಿನ್ನ ಆಜ್ಞೆಯ ಪ್ರಕಾರ, ವೀರಶೈವ ಮತವನ್ನು ಉದ್ಧಾರ ಮಾಡಿ, ಪರಮತವನ್ನು ಖಂಡನೆ ಮಾಡಿ, ಅಷ್ಟಾವರಣವನ್ನು ಪ್ರಕಟಿಸಿ, ನಿನ್ನ ಪಾದವನ್ನು ಕಾಣದಿದ್ದರೆ, ನಾನು ವೀರಶೈವ ಭಕ್ತನೇ?

ಒಳ್ಳೆಯದು, ಇನ್ನು ತಡವೇಕೆ, ಲಿಂಗಾರ್ಚನೆಯ ಮಂದಿರದತ್ತ ಹೋಗುತ್ತೇನೆ. ಹಾ ಇದೇನು? ಅಲ್ಲಿ ಸೇವಕನು ಬರುವಂತೆ ತೋರುತ್ತಿದೆ ಒಳ್ಳೆಯದು, ಬರಲಿ. ವಿಶ್ರಾಂತಿಗೋಸ್ಕರ ಇಲ್ಲಿ ಸ್ವಲ್ಪ ಕೂಡುವೆನು.

ಸೇವಕ : ಭೋ, ಬಸವೇಶ್ವರ ನಿನ್ನ ಪಾದಕಮಲಕ್ಕೆ ಶಿರಸಾಷ್ಟಾಂಗ ನಮಸ್ಕಾರ. ಬಿನ್ನಹ, – ನನ್ನ ಅಜ್ಞಾನವೆಂಬ ಕಾವಳಕ್ಕೆ ಭಾಸ್ಕರನೇ, ವೀರಶೈವ ಮತೋದ್ಧಾರಕನೇ, ಜಂಗಮ ಪ್ರಾಣವೇ ನನ್ನ ಪ್ರಾಣವೆಂದು ಮೆರೆಯುವವನೆ, ಅಷ್ಟಾವರಣ ಭೂಷಿತನೇ, ಶಿವನಿಂದಕರ ಶಿರಚ್ಛೇದನನೆ, ಪರಮತವೆಂಬ ಮೇಘಾಸ್ವದಕ್ಕೆ ಮಾರುತನೆ, ಈ ಸಂಸಾರ ಚಕ್ರವನ್ನು ದೂರಮಾಡಿ, ಈ ಬಡಜೀವಿಗೆ ಮೋಕ್ಷಮಾರ್ಗವನ್ನು ತಿಳಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಬಸವ : (ಸೇವಕನನ್ನು ಕುರಿತು) ನಿನ್ನ ಜನ್ಮವು ಸಾರ್ಥಕವಾಯಿತು. ನೀನು ಮಾಡಿದ ಪ್ರಶ್ನೆಯು ಬಹುಯೋಗ್ಯವಾದದ್ದು. ಜೀವನಿಗೆ ಮೋಕ್ಷವಾಗಬೇಕಾದರೆ, ಎಂಬತ್ತುನಾಲ್ಕು ಲಕ್ಷ ಜೀವರಾಶಿಯಲ್ಲಿ ಮಾನವಜನ್ಮ ಬರುವುದು ದುರ್ಲಭವು. ಅದರೊಳಗೆ ಶಿವಭಕ್ತನಾಗಿ ಹುಟ್ಟಿ ಬರುವುದಂತೂ ಪರಮ ದುರ್ಲಭವು. ಇಂಥಾ ಜನ್ಮವನ್ನು ಪಡೆದು, ಶಿವಭಕ್ತನಾಗದಿದ್ದರೆ, ಅವನ ಜನ್ಮವು ಪಶುವಿಗಿಂತಲೂ ಕಡೆ ಎಂದು ತಿಳಿಯಬೇಕು. ಮನುಷ್ಯನಿಗೆ ಬಾಲ್ಯ – ಯೌವ್ವನ, ವಾರ್ಧಕ್ಯಗಳೆಂಬ ಅವಸ್ಥಾತ್ರಯಗಳುಂಟು.

ಮೂರ್ಖ ಮಾನವರು ಕ್ರೀಡೆಯಲ್ಲಿ ಬಾಲ್ಯವನ್ನು, ತರುಣಿಯಲ್ಲಿ ಯೌವ್ವನವನ್ನು, ನಿರರ್ಥಕವಾದ ಆಕಾಂಕ್ಷೆಯಲ್ಲಿ ವಾರ್ಧಕ್ಯವನ್ನು ಕಳೆದ ಬಳಿಕ, – ಶಿವಭಜನೆಗೂ, ಶಿವಪೂಜೆಗೂ ಅವಧಿಯೇ ಇಲ್ಲದಂತಾಯಿತಲ್ಲಾ. ಪಂಚಮಹಾಭೂತಗಳಿಂದ ಉತ್ಪನ್ನವಾದ ಈ

ದೇಹವು ನಶ್ವರವಾದದ್ದು. ಈ ದೇಹದ ಮೋಹದಿಂದ ಆಸಕ್ತನಾಗಿ ಸಂಸಾರ ಚಕ್ರದಲ್ಲಿ ತಿರುಗುತ್ತಿರುವನು. ಅಹಂಕಾರ, ಮಮಕಾರ ಭೂತಗಳು ಶಿವಪಂಚಾಕ್ಷರಿ ಮಂತ್ರ ಉಪದೇಶವಾಗದ ವಿನಃ ಹೋಗಲಾರವು.

ಸೇವಕಾ, ನಿನಗೆ ಬಹುಜನ್ಮ ಸುಕೃತದಿಂದ ಈ ಶಿವಭಕ್ತಿ ಎಂಬ ಬೋಧೆಯು ದೊರೆಯಿತು. ಇಂದಿಗೆ ನಿನ್ನ ಭವನಾಶ ಭೇದಿಸಿತು. ಪ್ರಭಾಕರಣ ಕಂಡ ಕಾರ್ಗತ್ತಲೆಯಂತೆ ಪಾಪಕಾರ್ಯಗಳು ನಾಶವಾದವು, ಧನ್ಯನಾದೆ. ಕೈಲಾಸವು ಪ್ರಾಪ್ತಿಯಾಗಿ ಮೋಕ್ಷ ಆಗುವುದು, ತಿಳಿಯಿತೇ? ತನು-ಮನ-ಧನವನ್ನು ಶಿವಾರ್ಪಿತ ಮಾಡು. ಭಕ್ತಾದಿಗಳಿಗೆ ಎದುರಾಗಬೇಡ. ಮುಕ್ತಿಯನ್ನು ಪಡೆಯುವುದಕ್ಕೆ ನಿನಗೆ ಇದೇ ಹಾದಿ ತಿಳಿಯಿತೇ? ನಿನ್ನ ಸ್ಥಾನವನ್ನು ಕುರಿತು ಗಮನ ಮಾಡು, ನಡೆ.

ಸೇವಕ : ಭೋ, ಬಸವದೇವಾ, ತಮ್ಮ ಪರಮವಾಕ್ಯದಿಂದ ಧನ್ಯನಾದೆ. ನನ್ನ ಜನ್ಮವು ಪವಿತ್ರವಾಯಿತು. ನೀವು ಹೇಳಿದ ಸುಬೋಧೆಯಂತೆ ನಡೆದುಕೊಳ್ಳುತ್ತೇನೆ. ಪ್ರಭೂ ತಮ್ಮ ಪೂಜಾ ಸಾಮಾನುಗಳನ್ನು ತಯಾರು ಮಾಡುವುದಕ್ಕೆ ಆಸ್ಥಾನದತ್ತ ಗಮಿಸುತ್ತೇನೆ. ಬಸವ ಬಸವಾ....

ಬಸವ : ನಾನೂ ನನ್ನ ಗುರುಮೂರ್ತಿಯಾದ ಸಂಗಮೇಶ್ವರನ ಆಸ್ಥಾನಕ್ಕೆ ಹೋಗಬೇಕೆಂಬ ಆಲೋಚನೆಯನ್ನೇ ಗೈಯ್ಯುವೆನು. ಆದರೆ, ಮತವನ್ನು ಉದ್ಧಾರ ಮಾಡಬೇಕಾದರೆ, ಹೇಗೆ ಮಾಡಬೇಕಾದೀತು? ಒಳ್ಳೆಯದು, ಹೀಗೆ ಮಾಡುವಾ. ಮೊದಲು ತಂದೆ-ತಾಯಿಗಳನ್ನು ತಿದ್ದಬೇಕು. ಯಾಕೆಂದರೆ, ಅವರ ಕರ್ಮವು ಇನ್ನೂ ನಿರಶನವಾಗಿಲ್ಲ. ಅವರ ಕರ್ಮವನ್ನು ತ್ಯಾಗ ಮಾಡಿಸಿ, ಅಷ್ಟಾವರಣವನ್ನು ಪ್ರಕಟಿಸಿ, ವೀರಶೈವ ಮಾರ್ಗಕ್ಕೆ ಹಚ್ಚುವಾ, ಇದೇ ಪರಮ ಉಪಾಯವು. ಆದ್ದರಿಂದ, ತಾಯಿ ಮಂದಿರದತ್ತ ಹೊರಡುತ್ತೇನೆ.

ದೃಶ್ಯ – ೨

(ತಾಯಿ ಕುರಿತು)

ಅಹೋ ಜನನಿ, ತಮ್ಮ ಸುಂದರ ಪಾದಕಮಲಂಗಳಿಗೆ ಬಾಲಭೃಂಗನ ಬಿನ್ನಹ. ತಮ್ಮ ಮಾತೃ ಆಶೀರ್ವಾದವನ್ನು ಪೂರೈಸಬೇಕೆಂದು ಬೇಡಿಕೊಳ್ಳುವೆನಮ್ಮಾ ಮಾತೆ.

ಮಾದಲಾಂಬಿಕೆ : ಅಪ್ಪಾ ಮಗನೇ, ಏಳು ಏಳು ನಿನಗೆ ಕಲ್ಯಾಣವಾಗಲಿ ಬಸವೇಶಾ. ನಿನ್ನ ನಡತೆಯನ್ನು ನೋಡಿ ನನಗೆ ಪರಮಾಶ್ಚರ್ಯವಾಗಿದೆ. ಹೇಳುತ್ತೇನೆ ಕೇಳು :–

ಮಾದಲಾಂಬಿಕೆ ಪದ :

ದಯಾಸಾಗರನೆ ಕುಮುದಮುಖ ಬಾರೋ ಮಗನೆ ।
ಬಸವರಾಜನೆ ನೀನು ಮಾಡುವ ಕೆಲಸವು ಏನೇನು ।
ಅಷ್ಟಾವರಣವನ್ನು ಘಟ್ಯಾಗಿ ಹಿಡಿದಿರುವಿ ಶ್ರೇಷ್ಠನಾಗಿ ತಿಳಿಸೋ ಬೇಗ ॥

ಮಾದಲಾಂಬಿಕೆ : ಅಪ್ಪಾ ಮಗನೇ, ನಮ್ಮ ಜಾತಿ–ಧರ್ಮವನ್ನು ಬಿಟ್ಟು, ಅಷ್ಟಾವರಣವೇ ಶ್ರೇಷ್ಠವೆಂದು ಪೂಜಿಸುತ್ತಾ ಹೋದರೆ, ನಮ್ಮ ಧರ್ಮದವರು ಸೇರುತ್ತಾರೆಯೇ ಮಗನೇ? ಇಷ್ಟುದಿನ ಸಣ್ಣಾತನಿದ್ದೆ. ಏನು ಮಾಡಿದರೂ ಚೆಂದವಾಯಿತು. ಇನ್ನೂ ಹಾಗೆಯೇ ಮಾಡಿದರೆ, ನಮ್ಮವರು ಸೇರುತ್ತಾರೆಯೇ ಮಗು? ನನ್ನ ದೇವರು ಅಷ್ಟಾವರಣ ಎಂದು ಹೇಳುತ್ತೀಯಲ್ಲಾ ಆ ಗುರು–ಲಿಂಗ–ಜಂಗಮಗಳ ಪ್ರತಿಷ್ಠೆ ಏನು? ತಿಳುಹಿಸು.

ಬಸವ : ತಾಯಿಯೇ ನಿಮಗೂ ಕೂಡಾ ಜಾತಿ–ಅಭಿಮಾನವಿದ್ದಂತೆ ಕಾಣುತ್ತದೆ. ಅಮ್ಮಾ ಕುಲಗಳೆಂಬ ನದಿಗಳು ವೀರಶೈವ ಮತವೆಂಬ ಸಮುದ್ರವನ್ನು ಕೂಡುವವರೆಗೂ ಮೋಕ್ಷವಾಗಲರಿಯದು. ನಿಮಗೂ ಯಾವುದೋ ಒಂದು ಹುಚ್ಚು ಭ್ರಾಂತಿಯು ಆವರಿಸಿದಂತೆ ತೋರುತ್ತದೆ. ಕನಸಿನಲ್ಲಿ ಕಂಡ ದ್ರವ್ಯವನ್ನು ತಂದು ಧನವಾನನಾಗುವೆನೆಂಬಂತೆ ತೋರುತ್ತದೆ. ಶಿವಭಕ್ತಿಯೆಂಬ ಶುದ್ಧಜಲದಿಂದ ತೊಳೆ..., ಉದ್ಧಾರವಾದೀತೆ ಹೊರತು, ಅನ್ಯಥಾ ಆಗಲಾರದು ತಾಯಿ, ತಿಳಿದು ನೋಡಿರಿ.

ಮಾದಲಾಂಬಿಕೆ: ಅಪ್ಪಾ ಮಗನೇ ಬಸವೇಶಾ, ನಮ್ಮ ಧರ್ಮದಲ್ಲಿ ಹುಟ್ಟಿ, ಅದನ್ನೇ ಧಿಕ್ಕಾರ ಮಾಡುವುದೇ? ಹೀಗೆ ಮಾಡುವುದು ಯಾವ ಶಾಸ್ತ್ರದಲ್ಲಿ ಹೇಳುತ್ತದೆ ಹೇಳು.

ಬಸವ : ಅವ್ವಾ ಭಕ್ತರಲ್ಲಿ ಕುಲವನ್ನು, ಆಚಾರವನ್ನು ವಿಚಾರಮಾಡಬಾರದು. ಏಕೆಂದರೆ, ಕಲ್ಲು ಎಲ್ಲಿಯತನಕ ಲಿಂಗಾಕೃತಿ ಆಗುವುದಿಲ್ಲವೋ ಅಲ್ಲಿಯತನಕ ಕಲ್ಲೆ ಎನ್ನಿಸಿಕೊಳ್ಳುವುದು. ಹಾಗೇ ಮನುಷ್ಯನು ಶಿವಸಾಕ್ಷಾತ್ಕಾರ ಹೊಂದುವ ತನಕ ಮನುಷ್ಯನೇ ಸರಿ. ಶಿವಸಂಸ್ಕಾರ ಹೊಂದಿದ ಬಳಿಕ ಅವನೂ ಶಿವನೇ ಆಗುವನು. ಹಾಗೆಯೇ ಭಕ್ತನು

ಎಂಥ ಕುಲದಲ್ಲಿ ಹುಟ್ಟಿದರೂ ಉತ್ಕೃಷ್ಟನೇ ಸರಿ. ಸಕಲ ಲೋಕಗಳಿಗೆ ಪಾರ್ವತಿಯೇ ತಾಯಿ. ಶಿವನೇ ತಂದೆಯು. ಆದ ಕಾರಣ, ವಿಚಾರ ಮಾಡಿದರೆ, ಮೂರು ಲೋಕದಲ್ಲಿಯೂ ಸಕಲ ಶಿವಭಕ್ತಿಯಿಂದಲೇ ಶಿವಭಕ್ತನಾಗಿ ಮುನಿ ಶ್ರೇಷ್ಠರಾಗಲಿಲ್ಲವೆ? ತಾಯಿ ನೀವೂ ಇವರಂತೆ ಶಿವಭಕ್ತಿ ಉಳ್ಳವರಾದರೆ, ನಿಮ್ಮ ಜನ್ಮವು ಸಾರ್ಥಕವಾಗುವುದು ತಿಳಿದು ನೋಡಿರಿ.

ಮಾದಲಾಂಬಿಕೆ: ನನ್ನ ಮುದ್ದು ಮೋಹದ ಬಸವಣ್ಣಾ, ಮುಕ್ಕಣ್ಣನ ಭಕ್ತಿಯನ್ನು ಮಾಡುವ ಭಕ್ತರ ಅಭಿಪ್ರಾಯವು ಹಾಗಿರಲಿ, ಮೊದಲು ಅಷ್ಟಾವರಣವೇ ಶ್ರೇಷ್ಠವೆಂದು ಹೇಳಿದಿಯಲ್ಲಾ ಅದರ ಅಭಿಪ್ರಾಯವೇನು? ಗುರು–ಲಿಂಗ–ಜಂಗಮದ ಮಹತ್ವವೇನು? ವಿವರಿಸಪ್ಪಾ ಮಗನೇ.

ಬಸವ : ಅಮ್ಮಾ ಇನ್ನೂ ನಿಮಗೆ ಜ್ಞಾನವಾಗಲಿಲ್ಲವೆ? ಜನನಿ ಅಷ್ಟಾವರಣದ ಮಹತ್ವವನ್ನು ಗಟ್ಟಿಯಾಗಿ ವರ್ಣಿಸಬೇಕಾದರೆ, ಸೃಷ್ಟಿಕರ್ತನಾದ ಬ್ರಹ್ಮನಿಗೂ, ಫಣಿಪತಿ ಶ್ರೇಷ್ಠವಾದ ಆದಿಶೇಷನಿಗೆ ಆಗಲಾರದು.

ಅಷ್ಟಾವರಣವೇ ನನ್ನ ತಾಯಿ, ಮಹಾಮಂತ್ರವೇ ನನ್ನ ತಂದೆ, ಜಂಗಮರೇ ನನ್ನ ಬಂಧು – ಬಳಗ, ಸಂಗಮನಾಥನೇ ನನ್ನ ಗುರು. ಈ ಅಷ್ಟಾವರಣವನ್ನು ನಂಬಿದಂಥ ನಮ್ಮ ಶಿವಶರಣಗಣ ಯಾವ ಗಣಪದವಿಯಾಗಿರುತ್ತದೆಂದು ಗೊತ್ತಿಲ್ಲವೇ ತಾಯಿ? ಅವ್ವಾ, ಈ ಅಷ್ಟಾವರಣದ ಪೈಕಿ ಮೊದಲು ಗುರುವಿನ ಬಗ್ಗೆ ಹೇಳುತ್ತೇನೆ ಕೇಳಿರಿ – ಯಾರು ಗುರುವೋ ಅವನೇ ಶಿವನು. ಯಾರು ಶಿವನೋ ಅವನೇ ಗುರು. ಹೀಗೆಂಬ ವಚನದಿಂದಲೂ, 'ನಾಸ್ತಿ ತತ್ವಂ ಪರೋ ಪರಂ' ಅಂದರೆ, ಗುರುವಿಗಿಂತಲೂ ಪರವಸ್ತು ಇಲ್ಲೆಂಬ ಶೃತಿಯಿಂದಲೂ 'ತ್ರಿಸಂಧ್ಯಾಸು ಗುರುಃ ಪೂಜಾಃ' ಅಂದರೆ, ತ್ರಿಕಾಲದಲ್ಲಿ ಯಾವನು ಗುರುಪೂಜೆಯನ್ನು ಮಾಡುವನೋ ಅವನೇ ಧನ್ಯನು, ಅವನೇ ಮೋಕ್ಷದಾಯಕನು. ಅವನೇ ಸಾಕ್ಷಾತ್ ಪರಬ್ರಹ್ಮನು, ಎಂಬಂತೆ ಈ ಸಾಕ್ಷಾತ್ ಪರಮಾತ್ಮನೇ ಜಂಗಮ ರೂಪಧಾರಣ ಮಾಡಿಕೊಂಡು ಲೋಕೋದ್ಧಾರಕ್ಕಾಗಿ, ಅವತರಿಸಿರುವನು. ಅಂದ ಬಳಿಕ, ಜಂಗಮವೆಂಬ ಮೂರು ಅಕ್ಷರದ ಪರಿಣಾಮವನ್ನು ವರ್ಣಿಸಬೇಕಾದರೆ, ಯಾರಿಗೆ ತಾನೇ ಸಾಧ್ಯವಾದೀತು? ತಾಯಿ ಜಂಗಮವೇ ಶ್ರೇಷ್ಠ, ಜಂಗಮವೇ ಅಧಿಕ, ಜಂಗಮವೇ ಜಗದ್ಭರಿತ ಎಂದು ತಿಳಿಯಮ್ಮಾ ತಾಯೀ.

ಮಾದಲಾಂಬಿಕೆ ಪದ :

ಜಂಗಮ ಪಾದವ ಭಜಿಸಿ ।
ಮಂಗಲವೇನಿದು ನಿನಗೆ ರುದ್ರಾಕ್ಷಿ ॥
ತುಂಗವಿಭೂತಿಯ ಧರಿಸುತೆ ।
ಓಗೆಂದು ನಡೆದುಕೊಂಡಿರುವುದೀಗ ॥

ಮಾದಲಾಂಬಿಕೆ : ಅಪ್ಪಾ ಶಿವಭಕ್ತ ಶಿರೋಮಣಿಯಾದ ಬಸವೇಶಾ, ನಿನ್ನ ವೀರಶೈವ ಮತವೇ ಶ್ರೇಷ್ಠವೆಂದು ಗೊತ್ತಾಯಿತು. ಜಂಗಮರೇ ಮೂಲ ಸ್ಥಾನಭೂತರೆಂಬುವುದು ತಿಳಿಯಿತು. ಅಂದ ಬಳಿಕ, ಚರಮೂರ್ತಿಗಳು ತಾವೇ ಶ್ರೇಷ್ಠರಿದ್ದು, – ಈ ರುದ್ರಾಕ್ಷಿ, ವಿಭೂತಿ, ಪಾದೋದಕ, ಪ್ರಸಾದ, ಮಂತ್ರ – ಇವುಗಳನ್ನು ಯಾಕೆ ಧರಿಸಬೇಕು? ಇವುಗಳಲ್ಲಿ ಇರತಕ್ಕಂಥ ಮಹತ್ವವೇನು? ತಿಳಿಸಪ್ಪ.

ಬಸವ : ಅಮ್ಮಾ ಶ್ರೀವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ ಮಂತ್ರ ಇವುಗಳನ್ನು ವರ್ಣಿಸಬೇಕಾದರೆ, ಆದಿ – ಅನಾದಿ – ಬುನಾದಿ ಅತ್ತತ್ತಲಿಂದವರಾದರೂ ಆಗಲರಿಯದು. ತಾಯಿ, ಯಾವ ಕಾರ್ಯಕ್ಕಾದರೂ ಈ ವಿಭೂತಿ ಬೇಕೇ ಬೇಕು. ಅಮ್ಮಾ ಶಿವಶಿವ ಎಂದು ಶಿವನನ್ನು ಕೊಂಡಾಡುತ್ತಾ ಶ್ರೀ ವಿಭೂತಿಯನ್ನು ಯಾರು ಧರಿಸುತ್ತಾರೋ, ಅವರ ಕಾಯವೇ ಕೈಲಾಸ. ನಂಬಿದಂತಹ ನಮ್ಮ ಶರಣರಾದ ವೇಮರಾಧ್ಯರು ಇಂಥ ಶ್ರೀ ವಿಭೂತಿಯನ್ನು ಸಂಪ್ರೋಕ್ಷಿಸಿ, ಸರ್ಪದಿಂದ ಕಚ್ಚಲ್ಪಟ್ಟು ಮೃತನಾದಂಥ ರಾಜನನ್ನು ಬದುಕಿಸಿ, ಗಣಪದವಿಗೆ ಸೇರಲಿಲ್ಲವೇ? ಅಪ್ಪಾ ಜೈನ ಕುಲದಲ್ಲಿ ಉದ್ಭವನಾದ ವಾಗೀಶನನ್ನು ಶಿವಭಕ್ತಳಾದ ಅವನ ಅಕ್ಕ ಅವನ ಫಣೆಗೆ ವಿಭೂತಿಯನ್ನು ಹಚ್ಚಿದ್ದರಿಂದ, ಅಜ್ಞಾನ – ಅಂಧಕಾರವು ದೂರಾಗಿ, ಗುರುಶ್ರೇಷ್ಠನಾಗಿ ಜಗತ್ತಿನಲ್ಲಿ ಶಿವಭಕ್ತ ಶಿಖಾಮಣಿ ಎನಿಸಿಕೊಂಡು ಸಾಯುಜ್ಯವನ್ನೇ ಹೊಂದಿದರು. ಅಪ್ಪಾ ಈ ಅಷ್ಟಾವರಣವೇ ಎನ್ನ ಆಭರಣವಾಗಿದೆ. ಈ ಅಷ್ಟಾವರಣಗಳಿದ್ದರೆ ಸಾಕು, ಬೇರೆ ಕರ್ಮಗಳಿಂದೇನು ಪ್ರಯೋಜನ? ತಾಯಿ ನಾನು ಬಾಲಕನು. ಯಜಮಾನರಿಗೆ ಹೆಚ್ಚಿಗೆ ಹೇಳಲು ಶಕ್ಯನಲ್ಲ ತಾವೇ ತಿಳಿಯಿರಿ.

ಮಾದಲಾಂಬಿಕೆ: ಮಗೂ, ನಿನ್ನ ಪರಮಬೋಧೆಯಿಂದ ನನ್ನ ಜನ್ಮವು ಸಫಲವಾಯಿತು. ನಾನು ಧನ್ಯಳಾದೆ. ಈ ಅಷ್ಟಾವರಣವನ್ನು ಪೂಜಿಸಿ ಮುಕ್ತಿಯನ್ನು ಪಡೆಯುತ್ತೇನೆ. ನಿನಗೆ ಕಲ್ಯಾಣವಾಗಲಿ. ಯಜಮಾನರು

ಬರುವ ಕಾಲವಾಯಿತು. ನಾನು ಭೋಜನಶಾಲೆಗೆ ಹೋಗುತ್ತೇನೆ, ನೀನೂ ದಯಮಾಡಿಸು ಬಸವಾ.

ಬಸವ : ಅಪ್ಪನವರು ಭೋಜನ ಶಾಲೆಗೆ ಹೋದರು. ನಾನೂ ದಯಮಾಡಿಸುತ್ತೇನೆ. ಅವರ ಕರ್ಮವು ನಿಗಶನವಾಯಿತು. ಮೋಕ್ಷವಾಗಲಿಕ್ಕೇನೂ ಅಡ್ಡಿಯಿಲ್ಲ. ಒಳ್ಳೆಯದು, ಇನ್ನು ತಂದೆಯವರ ಅಭಿಪ್ರಾಯವೇನಿರುವುದೋ ಏನೋ ತಿಳಿದುಕೊಳ್ಳುತ್ತೇನೆ. ಆದ್ದರಿಂದ, ಅವರತ್ತ ಗಮಿಸುತ್ತೇನೆ, ಸಂಗಮೇಶಾ.

ದೃಶ್ಯ – ೩

ಮಾಧರಸ: ದ್ವಾರದಲ್ಲಿ ಯಾರಿರುವರೊ?

ಸೇವಕ : ಮಹಾಪ್ರಭು ನಾನು ಸೇವಕನಿರುವೆನು.

ಮಾದರಸ : ಸೇವಕ, ನಮ್ಮ ಪುರೋಹಿತರನ್ನು ಕರೆದುಕೊಂಡು ಬಾ.

ಪುರೋಹಿತರ ಪದ :

ಕರಿಸಿದ ಕಾರಣ ತ್ವರಿತದಿ ಪೇಳ್ಳೈ ।
ಪರಿಹರಿಸುವೆ ನಾನು । ಇನ್ನು ॥
ನಿನ್ನ ಕಾರ್ಯವ ನಾನು ಚೆನ್ನಾಗಿ ಮಾಡುವೆ ।
ಸನ್ನುತ ಕೆಲಸವು ಏನು ಹೇಳು ।

ಪುರೋಹಿತ: ಶಂಭೋ ಹರಹರಾ ನಾರಾಯಣ, ಗೋವಿಂದ ಭೋ, ಗೋವಿಂದ ಭೋ.

ಮಾದರಸ: ಬನ್ನಿರಿ ಬನ್ನಿರಿ ಪುರೋಹಿತರೇ ನಮಸ್ಕರಿಸುವೆ.

ಪುರೋಹಿತ: ರಾಜೇಂದ್ರಾ, ಕಲ್ಯಾಣ ಕಲ್ಯಾಣ.

ಮಾದರಸ : ಪೂಜ್ಯರೇ, ಈ ಪೀಠಕ್ಕೆ ಅಲಂಕರಿಸಿರಿ.

ಪುರೋಹಿತ: ನಾವು ಕೂಡುತ್ತೇವೆ, ತಾವು ಮಂಡಿಸಿರಿ.

ಮಾದರಸ: ನಾವೂ ಕೂಡುತ್ತೇವೆ.

ಪುರೋಹಿತ: ಮಹಾರಾಜರೇ, ಎಲ್ಲಾ ಕ್ಷೇಮವೇ?

ಮಾದರಸ: ಮಹಾಸ್ವಾಮಿಗಳೇ ಎಲ್ಲಾ ಕ್ಷೇಮವಿರುವದು.

ಪುರೋಹಿತ: ಸಂತೋಷ ಸಂತೋಷ ಮಹಾರಾಜರೇ.ನಮ್ಮನ್ನುಕರೆಸಿದ ಕಾರಣವೇನು? ಯಾವ ಸಂಗತಿಯಿರುವದು? ಹೇಳಿರಿ. ಆ ಕಾರ್ಯವನ್ನು ಈಗಿಂದೀಗಲೇ ನೆರವೇರಿಸಿ ಕೊಡುವೆವು ಬೇಗ ತಿಳಿಸಿರಿ.

ಮಾದರಸ: ಪೂಜ್ಯರೇ, ನಮ್ಮ ಸುಕುಮಾರನಾದ ಬಸವನಿಗೆ ಎಂಟು ವರುಷ ತುಂಬುತ್ತಾ ಬಂದಿರುತ್ತವೆ. ಕಾರಣ ಉಪನಯನವನ್ನು ಮಾಡಬೇಕಿದೆ. ಶುಭಮುಹೂರ್ತವನ್ನು ತೆಗೆಯಿರಿ.

ಪುರೋಹಿತ: ಓಹೋ ನಮಗೆ ಯಥೇಚ್ಛವಾಗಿ ಭೋಜನ ದ್ರವ್ಯವು ಸಿಗುವುದು. ಮಹಾರಾಜರೇ, ಪಂಚಾಂಗವನ್ನು ನೋಡುತ್ತೇವೆ. ರಾಜರೇ ಯಾವತ್ತೂ ಶುಭಮುಹೂರ್ತವೇ ಇರುತ್ತದೆ. ಇನ್ನು ಉಪನಯಕ್ಕೆ ಪೂಜಾ ದ್ರವ್ಯಾದಿಗಳನ್ನು ತರಿಸಿರಿ.

ಮಾದರಸ : ಸೇವಕಾ, ಪೂಜಾ ದ್ರವ್ಯಗಳನ್ನು ತೆಗೆದುಕೊಂಡು ಬಾ.

ಸೇವಕ : ರಾಜರೇ, ಪೂಜಾಸಾಮಾನುಗಳನ್ನು ತಂದಿದ್ದೇನೆ. ಸ್ವಾಮಿ, ಪುರೋಹಿತರೇ ತೆಗೆದುಕೊಳ್ಳಿರಿ.

ಪುರೋಹಿತ : ಮಹಾರಾಜರೇ ಬಸವನನ್ನು ಬೇಗನೇ ಕರೆಯಿಸಿ.

ಮಾದರಸ : ಸೇವಕಾ, ಬಸವನನ್ನು ಸ್ನಾನಮಾಡಿಸಿಕೊಂಡು ಬೇಗನೇ ಕರೆದುಕೊಂಡು ಬಾ.

ಬಸವನ ಪದ :

ಏನಿದು ಕಾರ್ಯವು ನಡೆದಿರುವ ಸಂಭ್ರಮ ಸಾನುರಾಗದಲಿ ।
ಜನಕನೇ ತಿಳಿಯದು, ಚಿನ್ಮಯ ಶಿವನನ್ನು ಮರೆತಂತೆ ತೋರುವುದು ॥

ಬಸವ : ಭೋ, ತಂದೆಯೇ ಇಷ್ಟು ತವಕದಿಂದ ಇದೇನು ಸಂಭ್ರಮವನ್ನು ನಡೆಸಿರುವಿರಿ. ಓಹೋ, ಏನೋ ಒಂದು ಹುಚ್ಚು ಹರಟೆಯನ್ನು ಎಬ್ಬಿಸಿರುವರಲ್ಲಾ, ಏನು ಚಮತ್ಕಾರ. ಒಳ್ಳೆಯದು, ಏನಯ್ಯಾ ಪುರೋಹಿತರೇ, ಇದೇನು ಹುಚ್ಚು, ಪುರೋಹಿತರೇ ನಿಮ್ಮ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿರಿ.

ಪುರೋಹಿತ : ಓಹೋ ನಮ್ಮ ಕೆಲಸವು ಇಲ್ಲಿಗೆ ನಿಂತಿತು. ನಮ್ಮ ಗಂಟು ಹೋಗುವದೇ? ನಮಗೆ ಹೇಗಾದರೂ ಹಣ ದೊರೆತರೆ ಸಾಕು. ದಿಲ್ಲಿ ಹಾಳಾದರೇನು? ಹಳ್ಳಿ ಪಟ್ಟಣವಾದರೇನು? ಮಹಾರಾಜರೇ, ನಾವು ಹೋಗುತ್ತೇವೆ.

ಬಸವ : ದಯಮಾಡಿಸಿರಿ.

ಪುರೋಹಿತ : ಬಸವಣ್ಣನವರೇ ನಿಮಗೆ ನಮಸ್ಕಾರವಿರಲಿ. ದೇವರು ಅನಂತ ಕಲ್ಯಾಣ ಮಾಡಲಿ. ನಮಗೆ ಅಪ್ಪಣೆ ಕೊಟ್ಟದ್ದೇ ಲಾಭ.

ಮಾದರಸ : ಏನಯ್ಯಾ ಸುಕುಮಾರನೇ, ನಿನಗೆ ಬ್ರಹ್ಮೋಪದೇಶದ ಉಪನಯನವನ್ನು ಮಾಡಿಸಬೇಕಾಗಿದೆ. ಅದರ ಸಲುವಾಗಿ ನಾನು ಪ್ರಯತ್ನಪಟ್ಟಿದ್ದೇನೆ. ಈ ಉಪನಯನವು ದ್ವಿಜರಿಗೆ ಮುಖ್ಯ ಕರ್ಮ. ಇದಕ್ಕೆ ನೀನು ತಿರಸ್ಕಾರ ಮಾಡಬಾರದು. ಬಸವೇಶಾ, ಅನ್ಯಥಾ ಆಲೋಚನೆ ಮಾಡಬಾರದು. ಮತಧರ್ಮದಂತೆ ವರ್ತಿಸಲೇಬೇಕು ತಿಳಿದು ನೋಡು.

ಬಸವ : ಜನಕನೇ ನಿನಗೇನು ಭ್ರಾಂತಿ ಹಿಡಿಯಿತೊ? ಇಲ್ಲವೆ, ಪಿತ್ತವು ತಲೆಗೇರಿತೋ, ಹುಚ್ಚು ಹಿಡಿಯಿತೋ? ನಾನು ಹುಟ್ಟಿದ ದಿನದಲ್ಲಿಯೇ ಕೂಡಲಸಂಗಮನಾಥನು ಬಂದು, ಶಿವದೀಕ್ಷೆಯನ್ನು ಮಾಡಿದ ಸಂಗತಿಯನ್ನು ಮರೆತು ಬಿಟ್ಟಿರುವಿರೇನು? ಶಿವಶಿವಾ, ಶಿವಸಂಸ್ಕಾರದಿಂದ ಕೃತಾರ್ಥವಾದ ಜನ್ಮವುಳ್ಳವನು ದ್ವಿಜಸಂಸ್ಕಾರವೆಂಬ ಉಪನಯನವನ್ನು ಅಪೇಕ್ಷಿಸುವುದಿಲ್ಲ. ಯಜಮಾನರೇ, ಶಿವದೀಕ್ಷೆಯಿಂದ ಪರಿಶುದ್ಧವಾದೆನು. ತಾನೇ ಅನಿತ್ಯವಾದ ಸ್ವರ್ಗಾದಿ ಭೋಗವನ್ನು ಕೊಡುವ ಕರ್ಮದ ಬೇರನ್ನು ಕೀಳುವುದರಲ್ಲಿ ಸಮರ್ಥವಾದ ಶಿವಾಚಾರವನ್ನು ಬಿಟ್ಟು, ಕರ್ಮಗಳಿಗೆ ಆಶ್ರಯವಾದ ಉಪನಯನವನ್ನು ಹೇಗೆ ಹೊಂದುವದು? ಛೇ ! ಯಜಮಾನರೇ, ಏನು ಮಾತಾಡುವಿರಿ? ನೀವೇ ಹೇಳಿರಿ.

ಮಾದರಸ: ಮಾತಿನಲ್ಲಿ ಕುಶಲನಾದ ಬಸವೇಶಾ ಕೇಳು, ದ್ವಿಜ ಚಿನ್ಹೆಯು ಶಿವಚಿನ್ಹೆಯಲ್ಲವೇ? ಯಾತಕ್ಕೆ ನೀನು ಅದನ್ನು ಅಂಗೀಕರಿಸುವುದಿಲ್ಲ?

ಬಸವ : ಈ ಅಂಧಕಾರವನ್ನು ಬಿಟ್ಟು, ನನ್ನ ಮಾತನ್ನು ಕೇಳು. ನಾರಾಯಣನ ಕೂದಲೆಳಿಗಳಿಂದ ಮಾಡಲ್ಪಟ್ಟ ಹುರಿಯೇ ಯಜ್ಞೋಪವೀತ ಎಂದು ಕರೆಯಲ್ಪಡುತ್ತದೆ. ಪ್ರಳಯದಲ್ಲಿ ಅಡಗಿದ್ದ ಶ್ರೀ ವಿಷ್ಣುವಿನ ಮೈ ಮೂಳೆಯೇ ದಂಡವೆಂದು ಹೇಳಲ್ಪಡುತ್ತದೆ. ನರಸಿಂಹನ ದೇಹದಿಂದ ಎಳೆಯಲ್ಪಟ್ಟ ಚರ್ಮವೇ ಕೃಷ್ಣಾಜೀನವೆಂದು ತಿಳಿಯಲ್ಪಟ್ಟಿತು. ಬ್ರಹ್ಮನ ತಲೆಯೋರೆ ಭಿಕ್ಷಾಪಾತ್ರೆಯಾಗಿ ಕಲ್ಪಿಸಲ್ಪಡುತ್ತಬೆ. ದ್ವಿಜರು ಜಪಿಸಲ್ಪಡುವ ಗಾಯತ್ರಿ ಮಂತ್ರಕ್ಕೆ ಪರಮಾತ್ಮಸ್ವರೂಪ ಶಿವನೇ ಆದಿದೇವನಾಗಿದ್ದಾನೆ. ಶಿವನನ್ನು ಬಿಟ್ಟು ಯಾವ ಬ್ರಹ್ಮಕರ್ಮವಿರುವುದು? ದೇವತೆಗಳೊಳಗೆ ಶಿವನೇ

ಬ್ರಹ್ಮಾಂಶನೆಂಬುದಾಗಿ ಆಗಮ ವಚನವುಂಟು. ಆದ ಕಾರಣದಿಂದ ಬ್ರಾಹ್ಮಣನು ಹೇಗೆ ಶಿವಕುಲೋತ್ಪನ್ನನಲ್ಲ. ಬಸವ ನೀನು ಹುಡುಗುತನದ ಚಪಲತೆ ಬಿಟ್ಟು ಸುಮ್ಮನಿರು. ಬಸವೇಶಾ ನನ್ನ ಮಾತನ್ನು ಕೇಳು ಮಗನೇ, ಒಡಂಬಡು.

ಬಸವ : ಏನಯ್ಯಾ, ಮೂಢಾತ್ಮರ ಸಂಗದಿಂದ ಮಂಕಾದ ಬುದ್ಧಿಯುಳ್ಳ ತಂದೆಯೇ ಕೇಳು. ಮನುಷ್ಯರಲ್ಲಿ ಶುದ್ಧರು – ಪ್ರಾಕೃತರು ಎಂದು ಎರಡು ವಿಧ. ಶಿವದೀಕ್ಷಾಸಂಪನ್ನರಾದ ವೀರಶೈವರೇ ಶುದ್ಧರು. ಶಿವದೀಕ್ಷೆ ಇಲ್ಲದವರೇ ಪ್ರಾಕೃತರು. ಉಪನಯನ ಇಲ್ಲದವರಾಗಿಯೂ ಚಂಡೇಶ್ವರ ಮುಂತಾದವರು ಸರ್ವಜರು ಸರ್ವಸಂಪನ್ನರು ಪೂಜ್ಯರಾಗಿಲ್ಲವೆ? ಇದು ಅಲ್ಲದೆ, ಪರಶಿವನು ತನ್ನ ಭೃತ್ಯನನ್ನು ಮತ್ತೊಬ್ಬರಿಗೆ ಕೊಡುವವನೇ ಅಲ್ಲ. ಯಾಕೆಂದರೆ, ಸುಂದರ ನಂಬಿಯೆಂಬ ಭಕ್ತನನ್ನು ತನ್ನ ಮಗನೆಂದು ಸ್ಥಾಪಿಸಿ, ಮುನಯರಾಜನಿಂದ ತೆಗೆದುಕೊಂಡನು. ಮಹಾರಾಜರೇ ತಿಳಿದು ನೋಡಿರಿ. ಇದಕ್ಕೆ ಒಡಂಬಡಿರಿ. ಅಷ್ಟಾವರಣಕ್ಕೆ ಲಕ್ಷ್ಯಕೊಡಿ. ನಿಮಗೆ ಮೋಕ್ಷವಾಗುವದು.

ಮಾದರಸನ ಪದ :

ಸುಂದರ ಸುಕುಮಾರ ಚೆನ್ನಾಗಿ ನೀಕೇಳು ।
ಅಂದವಾಗಿ ನಾ ಹೇಳುವೆನು ॥
ಹಿಂದಿನ ಹಿರಿಯರು ನಡೆದಂತೆ ನಡೆಯಬೇಕು ।
ಕುಂದು ಹೊರಲುಬೇಡ ನೀನು ॥

ಮಾದರಸ : ಏನಯ್ಯಾ, ಬಸವೇಶಾ ನೀನು ಹೇಳಿದ ಪ್ರಾಮಾಣಿಕವಾದ ಮಾತನ್ನು ಕೇಳಿದೆನು. ಆದರೆ ಹೀಗೆ ಮಾತನಾಡಿದರೆ, ನಮ್ಮ ವಿಪ್ರರು ಸೇರುತ್ತಾರೆಯೇ? ಮಗನೇ, ಈ ವಿಪ್ರರಲ್ಲಿ ನನ್ನ ನಗೆಗೇಡು ಮಾಡದೇ, ನನ್ನ ಪಂಥವನ್ನು ನೆರವೇರಿಸು. ಗುರು–ಹಿರಿಯರ ವಚನವನ್ನು ಮೀರಬಾರದು. ಇವು ಶಿವಚಿಹ್ನೆಗಳೇ ಇರುವವು. ಮಗನೇ ಎನ್ನ ವಾಕ್ಯವನ್ನು ಅಂಗೀಕರಿಸು.

ಬಸವನ ಪದ :

ಮೂರ್ಖ ಯಜಮಾನರೇ, ಯಾತಕ್ಕೆ ಹೇಳುವಿರಿ ।
ಕಾಕುಭ್ರಷ್ಟರ ಆಚಾರವ ಸಾಕು ಮಾಡಿರಿ ।
ಇನ್ನು ಬೇಕಾದ ಪದವಿ ಕೊಡುವ ।
ಶಿವಮಾರ್ಗವನ್ನು ಹಿಡಿಯಿರಿ ॥ ೧ ॥

ಬಸವ : ಓಹೋ, ಮೂರ್ಖ ಯಜಮಾನರೇ, ಇನ್ನೂ ನಿಮಗೆ ಜ್ಞಾನವಾಗಿಲ್ಲವೇ? ಜಾತಿ ಅಭಿಮಾನವು ಎಷ್ಟಿರುವುದು? ನಿಮ್ಮ ಜ್ಞಾನಾಂಧಕಾರಕ್ಕೆ ಮಿತಿಯೇ ಇಲ್ಲ. ನೀವು ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ ಕೇಳಿರಿ. ವೇದವೇ ಶ್ರೇಷ್ಠವೆಂದು ಹೇಳಿದಿರಲ್ಲಾ ಯಜಮಾನರೇ, ಶಿವನ ಉಸಿರಿನಿಂದ ಹುಟ್ಟಿದ ವೇದಗಳಿಗಿಂತಲೂ, ತುಟಿ, ದವಡೆ, ಹಲ್ಲು, ಮುಂತಾದ ಅವಯವಗಳ ಸಂಯೋಗದಿಂದ ಉಂಟಾದ ಆಗಮಗಳು, ಶ್ರೇಷ್ಠವಾದವುಗಳಲ್ಲವೇ? ಆದಕಾರಣ, ಶಿವಾಗಮವು ವೇದಕ್ಕಿಂತಲೂ ಹೆಚ್ಚು ಪ್ರಮಾಣವೆಂದು ಜ್ಞಾನಿಗಳು ಹೇಳುತ್ತಾರೆ. ಯಜಮಾನರೇ, ನೀವು ಶಿವಪೂಜೆ ಒಂದರಲ್ಲಿಯೇ ನಿರತರಾಗಿರಿ. ಶಿವಯೋಗಿಯ ಸೇವೆಯಲ್ಲಿ ಪ್ರೀತಿಯುಳ್ಳವರಾಗಿರಿ. ಈ ಪ್ರಾಕೃತ ಜನರ ಭಯವನ್ನು ಬಿಟ್ಟು, ಸುಖದಿಂದಿರು. ಅಷ್ಟಾವರಣವನ್ನು ಹೊಂದಿರಿ.

ಅಮ್ಮಾ ಜನನಿ, ನೀನೂ ಕೂಡಾ, ತಂದೆಯ ಪಾದಸೇವೆಯಲ್ಲಿ ಆಸಕ್ತಳಾಗಿ, ಜಂಗಮಪಾದ ಪೂಜೆಯಿಂದ ಪರಿಪೂರ್ಣವಾದ ಇಷ್ಟಾರ್ಥ ಉಳ್ಳವರಾಗಿರಿ. ಶಿವಮುದ್ರೆಯ ಮಹಿಮೆಯಿಂದಲೂ, ನಂದೀಶ್ವರನಲ್ಲಿ ಹುಟ್ಟಿರುವ ಭಕ್ತಿಯಿಂದಲೂ, ನೀವು ಪೂರ್ವದಲ್ಲಿಯೇ ಪುಣ್ಯಶಾಲಿಗಳು. ನನಗೆ ತಂದೆ-ತಾಯಿಗಳಾಗಿದ್ದರಿಂದ, ಇನ್ನೂ ವಿಶೇಷ ಪುಣ್ಯಶಾಲಿಗಳಾದಿರಿ. ಪ್ರಾಕೃತಾಚಾರಗಳಿಗೆ ದೂರವಾದ ಶಿವಾಚಾರಗಳಲ್ಲಿ ಪ್ರೀತಿಯನ್ನಿಟ್ಟಿರುವ ನಾನು, ಅನಾಚಾರಗಳಿಗೆ ಮತ್ತು ಅನಾಚಾರಗಳಿಗೆ ಆಸ್ಪದವಿತ್ತ ಈ ಸ್ಥಳದಲ್ಲಿರುವುದಕ್ಕೆ ಅಪೇಕ್ಷಿಸುವುದಿಲ್ಲ, ತಿಳಿಯಿತೆ? ಮಾತಾ-ಪಿತೃಗಳೇ ನೀವು ಧನ್ಯರಾದಿರಿ. ನಿಮ್ಮ ಕರ್ಮವು ನಿರಸನವಾಯಿತು. ವೀರಶೈವ ಮಾರ್ಗವು ಕೈಸೇರಿತು. ಭವರೋಗವು ನಿವಾರಣೆಯಾಯಿತು. ನಿಮ್ಮ ಜನ್ಮವು ಸಫಲವಾಯಿತು. ನೀವೇ ಮೋಕ್ಷಕ್ಕೆ ಕರ್ತರು, ಕರ್ತರು.

ಮಾದರಸ : ಬಸವೇಶಾ ನಿನ್ನ ಪರಮೋಪದೇಶದಿಂದ ನಾವು ಧನ್ಯರಾದೆವು. ಇಂದಿಗೆ ನಮ್ಮ ಭವಪಾಶವು ಛೇದಿಸಿತು. ನಾವು ಪರಿಶುದ್ಧರಾದೆವು. ಬಸವೇಶ, ವ್ಯರ್ಥವಾಗಿ ನಮ್ಮ ಮತವೆಂಬ ಅಂಧಕಾರದಲ್ಲಿ ಬಿದ್ದು, ಸತ್ತು ಹೋಗುತ್ತಿದ್ದವು. ಉದ್ಧಾರ ಮಾಡಿದಿ ಬಸವಾ, ನಿನ್ನ ಉಪಕಾರವನ್ನು ಜನ್ಮ-ಜನ್ಮಾಂತರ ಸ್ಮರಿಸುತ್ತೇವೆ.

ಬಸವ: ಜನನಿ - ಜನಕರಿರಾ, ನೀವು ಧನ್ಯರಾದಿರಿ. ಅಷ್ಟಾವರಣವನ್ನು ಮರೆಯಬೇಡಿರಿ. ಪಂಚಾಕ್ಷರಿ ಮಂತ್ರ ಜಪಿಸಿರಿ. ಶಿವಶರಣರ

ಆಜ್ಞಾನುಸಾರವಾಗಿ ನಡೆಯಿರಿ. ಗಣಾಧೀಶ್ವರರೇ, ಸಾಕ್ಷಾತ್ ಇಷ್ಟದೇವರೆಂದು ತಿಳಿಯಿರಿ. ಶಿವಭಕ್ತಿಯಿಂದ ಹಗಲಿರುಳು ಧ್ಯಾನ ಮಾಡಿರಿ. ಅರಿಷಡ್ವರ್ಗವನ್ನು ದೂರಮಾಡಿರಿ. ನಾಲ್ಕುವೇದಗಳ ಅರ್ಥವನ್ನು ಬಲ್ಲ ದ್ವಿಜಶ್ರೇಷ್ಠನಿಗಿಂತಲೂ ಭಕ್ತಸಂಪನ್ನನಾದ ಶ್ವಪಚನಾದರೂ ಶಿವನಿಗೆ ಪ್ರೀತಿಯುಳ್ಳವನಾಗುತ್ತಾನೆಂದು ತಿಳಿದುಕೊಳ್ಳಿರಿ, ಯಜಮಾನರೇ ನನ್ನ ಗುರುಮೂರ್ತಿಯಾದ ಸಂಗಮನಾಥನ ಅಪ್ಪಣೆಯಾಗಿದೆ. ಆದ್ದರಿಂದ. ಸಂಗಮೇಶ್ವರನ ದೇವಸ್ಥಾನಕ್ಕೆ ಹೋಗಬೇಕಾಗಿದೆ. ನಿಮ್ಮ ಪಾದಗಳನ್ನು ನೀಡಿ, ನಮಸ್ಕಾರ ಮಾಡುತ್ತೇನೆ. ಕರುಣವಿರಲಿ ಹೋಗಿ ಬರುವೆನು. ನನ್ನನ್ನು ಮಾತ್ರ ಮರೆಯಬೇಡಿರಿ.

ತಾಯಿಯವರೇ, ನಿಮ್ಮನ್ನು ಬಿಟ್ಟು ಹೋಗಲಿಕ್ಕೆ ನನ್ನ ಕೈ-ಕಾಲುಗಳೇ ಏಳಲೊಲ್ಲವು. ನಿರ್ವಾಯಿಲ್ಲದೇ, ಹೋಗಬೇಕಾಗಿದೆ. ಅಂದಾಗ ಮಾತ್ರ ಸಾರ್ಥಕವಾಗುವದು. ತಾಯಿ ತವರು ಮನೆಯಲ್ಲಿ ಮಾತ್ರ ಹೆಣ್ಣುಮಗಳನ್ನು ಇಟ್ಟುಕೊಳ್ಳಬೇಡಿರಿ. ಬೇಡಿಕೊಳ್ಳುವೆನು. ಒಳ್ಳೆಯದು, ಇನ್ನು ತಡವೇಕೆ? ತಂದೆ-ತಾಯಿಗಳ ಆಜ್ಞೆಯಾಯಿತು. ಈಗ ನಂದೀಶ್ವರನತ್ತ ಹೋಗಬೇಕಿದೆ, ಆದ್ದರಿಂದ ನಂದೀಶ್ವರನ ದೇವಾಲಯವನ್ನು ಪ್ರವೇಶಿಸುತ್ತೇನೆ. (ಹೋಗುವನು)

ಮಾದರಸ: ಆಹಾ, ಅಂಗನಾಮಣಿ ಬಸವೇಶ್ವರನು ಸಂಗಮನಾಥನಲ್ಲಿಗೆ ದಯಮಾಡಿಸಿದನು. ಆಗಲಿ, ಬಸನೆಂಬುವ ನಾಮದ ಮಗನು ನಮ್ಮಲ್ಲಿರಲು ನಾವೇ ಧನ್ಯರು. ನಡೆ, ಗುದಿನೇಶ್ವರನ ಸ್ತೋತ್ರ ಮಾಡುತ್ತಾ, ನಮ್ಮ ಆಸ್ಥಾನಕ್ಕೆ ಹೋಗುವಾ.

(ನಂದೀಶ್ವರ ದೇವಾಲಯದ ದೃಶ್ಯ)

ಬಸವ : ಆಹಾ, ಈ ನಂದೀಶ್ವರನ ದೇವಾಲಯವು ಎಷ್ಟು ರಮ್ಯವಾಗಿ ತೋರುತ್ತದೆ. ಆಹಾ, ಏನು ದೇವಾಲಯವೋ? ಈ ಕ್ಷೇತ್ರವನ್ನು ನೋಡುವವರೇ ಧನ್ಯರು. ಒಳ್ಳೆಯದು, ಇನ್ನು ಒಳಗೆ ಹೋಗುವ. ಭೋ, ಆದಿ ನಂದೀಶ್ವರ ನಿನ್ನ ದಿವ್ಯವಾದ ಪಾದಕಮಲಗಳಿಗೆ ಈ ದೀನನ ಶಿರಸಾಷ್ಟಾಂಗ ನಮಸ್ಕಾರ.

ಬಿನ್ನಹ - ಆಹಾ, ಧನ್ಯನಾದೆ. ಮಹಾಪ್ರಭೂ ನಿನ್ನ ದರ್ಶನವನ್ನು ತೆಗೆದುಕೊಳ್ಳುವುದೇ ಪುಣ್ಯವು. ಶಂಭೋ, ಆದಿ ನಂದೀಶ್ವರ, ನಿನ್ನನ್ನು ಕುರಿತು ಬೇಡಿಕೊಳ್ಳುವುದೇನೆಂದರೆ, ಈಗ ನನ್ನ ಗುರುಮೂರ್ತಿಯಾದ

ಸಂಗಮೇಶ್ವರನ ಅಪ್ಪಣೆಯಾಗಿದೆ. ತಮ್ಮ ಅನುಗ್ರಹವಾಗಬೇಕೆಂದು ಬೇಡಿಕೊಳ್ಳುತ್ತೇನೆ. ವ್ಹಾಹ್, ಧನ್ಯನಾದೆ. ನನ್ನ ಗುರುಮೂರ್ತಿಯ ಸ್ಥಾನಕ್ಕೆ ಹೋಗಲೆನ್ನುವಂತೆ, ತನ್ನ ಶಿರೋಭಾಗವನ್ನು ಪ್ರತ್ಯಕ್ಷ ಅಳಗ್ಯಾಡಿಸಿದರು. ಇನ್ನು ತಡವ್ಯಾಕೆ? ಸಂಗಮನಾಥನ ಕ್ಷೇತ್ರದತ್ತ ಸಂಚರಿಸುತ್ತೇನೆ.

(ಸಂಗಮನಾಥನ ಮಂದಿರ)

ಸಂಗಮೇಶ : ಆಹಾ, ಇದೇನು ಚಮತ್ಕಾರವು ! ಎನ್ನ ಇಷ್ಟಲಿಂಗ ನೋಡುತ್ತಿರಲಾಗಿ, ಭಕ್ತಿಶ್ರೇಷ್ಠನಾದಂಥ ನನ್ನ ಮಗನಾದ ಬಸವೇಶನು ಬರುವಂತೆ ತೋರುತ್ತದೆ. ಬಸವೇಶಾ ಬಾ ಬಾ, ನಿನಗೆ ದಿವ್ಯವಾದ ನಿಜರೂಪವನ್ನು ತೋರುತ್ತೇನೆ. ಶಿವನಾಮಾಮೃತವನ್ನು ಪಾನಮಾಡಿಸುತ್ತೇನೆ.

ಬಸವನ ಪದ :

ದೇವಾ ದೇವಾ ನಿನ್ನ ಸ್ಥಲವು ಏನು ಶೋಭೆಯು ।
ಯಾವ ದಿಕ್ಕಿನಲ್ಲಿ ಕಾಣ್ವೆ ಮಹತ್ವ – ಸಡಗರ ಎಲ್ಲಿ ನೋಡಿದಲ್ಲಿ ।
ಶಿವನ ಗೋಷ್ಠಿ ಶಬ್ದವು ಅಲ್ಲಿಗಲ್ಲಿ ತೋರುವ ಶಿವನ ಮಂದಿರ ॥

ಬಸವ : ಆಹಾ, ಎನ್ನ ಗುರುಮೂರ್ತಿ ಸಂಗಮೇಶ್ವರನ ಗೋಪುರವು ಎಷ್ಟು ಪ್ರಕಾಶವಾಗಿ ಕಾಣಲ್ಪಡುತ್ತದೆ. ಯಾವ ಕಡೆ ನೋಡಿದರೂ, ಋಷಿಗಳ ತಂಡವು, ಸಾಧು – ಸತ್ಪುರುಷರ ಸಂತತಿಯು, ಜಂಗಮರ ಅರವಂಟಿಗೆಗಳು, ನೋಡುವವರ ಕಣ್ಣಿಗೆ ಎರಡನೇ ಕೈಲಾಸವೆಂಬ ಪರಿಯಲ್ಲಿ ತೋರುತಿರ್ಪುದು. ಸೇವಕಾ, ಇಂಥ ಕ್ಷೇತ್ರವನ್ನು ಕಾಣುವವರೇ ಧನ್ಯರು. ಸೇವಕಾ, ಯಾರ ಆಜ್ಞೆಯಿಂದ ವೀರಭದ್ರನು ದಕ್ಷಬ್ರಹ್ಮನ ಶಿರಸ್ಸಿನೊಡನೆ, ಯಜ್ಞಪುರುಷನ ಶಿರಸ್ಸನ್ನು ತೆಗೆದನೋ, ಯಜ್ಞಕ್ಕೆ ಬಂದಿದ್ದ ಇಂದ್ರಾದಿಗಳನ್ನೆಲ್ಲಾ ಜಯಿಸಿದನೋ ಆ ವೃಷಭ ವಾಹನನ ಪಾದಕ್ಕೆ ನನ್ನ ನಮಸ್ಕಾರವು. ಈ ದೀನನನ್ನು ರಕ್ಷಿಸೋ ಸಂಗಮೇಶಾ.

ಸಂಗಮೇಶನ ಪದ :

ಬಸವರಾಜ ಬಾರೋ ನೀನು ಅಸಮ ಮಹಿಮನೆ ।
ವಸುಧಿಯಲ್ಲಿ ನಿನ್ನ ಸಮಾನ ಭಕ್ತರಿರುವರೇ ॥
ಶಿವನ ಭಜನೆ, ಶಿವನ ಸ್ತುತಿ ಶಿವನ ಸ್ಮರಣೆಯು ।
ಶಿವರೂಪ ಜಂಗಮರ ವಚನ ಮೀರದೇ ॥

ಬಸವ : ಭೋ, ಗುರುಮಹಾರಾಜಾ ನಿನ್ನ ಪಾದಭಕ್ತಿಯೇ ಎನಗೆ ಬೇಕಾದ ವರವು. ಇಂಥಾ ವರವನ್ನು ಬಿಟ್ಟು, ಬೇರೆ ವರವನ್ನು ಬೇಡಲಿಕ್ಕೆ ನಾನೇನು ಮೂಢನಲ್ಲ. ನಿನ್ನ ಪಾದಭಕ್ತಿಯೇ ಎನಗೆ ಮುಕ್ತಿಯ ಸಾಮ್ರಾಜ್ಯವು. ಆದ್ದರಿಂದ, ನಿಮ್ಮ ಪಾದಭಕ್ತಿ ಆಚರಣೆಯನ್ನೇ ಬೋಧಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಸಂಗಮೇಶ : ಬಸವೇಶಾ, ಶಿವಕಥಾಶ್ರವಣ, ಶಿವಸ್ತುತಿ, ಶಿವಸ್ಮರಣೆ, ಶಿವಪಾದಪೂಜೆ, ಜಂಗಮ ನಮಸ್ಕಾರ, ಶಿವಾರ್ಚನೆ, ನಿಸ್ವಾರ್ಥ ಸೇವೆ ಪ್ರಾಣ ಸಮರ್ಪಣೆ ಎಂಬುವುದಾಗಿ ಶಿವಭಕ್ತಿಯು ಒಂಬತ್ತು ವಿಧವಾಗಿರುವುದು. ಕಾರಣ, ಯಾವಾಗಲೂ ಅನ್ಯದೇವರನ್ನು ಸ್ಮರಿಸುವ ಆಸೆಯನ್ನು ದೂರಮಾಡು. ಗುರುಸೇವೆಗೆ ದೇಹವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ಅರ್ಪಿಸಿ ಮೆರೆಯುವವನೇ ಭಕ್ತಿಗೆ ಶ್ರೇಷ್ಠನು. ಈ ಮಾರ್ಗವನ್ನು ಆಚರಿಸಿ, ಶಿವಮತವನ್ನು ಉದ್ಧಾರಮಾಡು. ತಿಳಿಯಿತೆ?

ಬಸವ : ಗುರುಮೂರ್ತಿಯಾದ ಸಂಗಮೇಶ್ವರನೇ, ನಿನ್ನ ಆಜ್ಞೆ ಪ್ರಕಾರ, ಶತ್ರುಗಳನ್ನು ತಗ್ಗಿಸಿ, ಮಿತ್ರರನ್ನು ಹೆಚ್ಚಿಸುತ್ತಾ, ರಾಜ್ಯವನ್ನು ಶಿವಾಚಾರದ ರಾಜ್ಯವನ್ನಾಗಿ ಮಾಡುವುದಕ್ಕೆ ಯತ್ನಿಸುತ್ತೇನೆ. ಗುರುವೇ ನಿತ್ಯ ಶಿವರಾತ್ರಿ ವ್ರತವನ್ನು ಆಚರಿಸುತ್ತೇನೆ. ಭಕ್ತರನ್ನು ಶಿವನೆಂದು ಭಾವಿಸುತ್ತೇನೆ. ಭಕ್ತರ ಕುಲವು ಯಾವುದೆಂದು ವಿಚಾರಿಸುವುದಿಲ್ಲ. ಭಕ್ತರಲ್ಲಿ ತಪ್ಪುಗಳನ್ನು ಎಣಿಸುವುದಿಲ್ಲ. ಪ್ರತಿ ದಿನವೂ ಯಾಚಕರಿಗೆ ದಾನ ನೀಡುತ್ತೇನೆ. ಕನಸಿನಲ್ಲಿಯೂ ಶಿವನನ್ನು ನೆನೆಯುತ್ತೇನೆ. ಸತ್ಪುರುಷರೊಡನೆ ಸಂಭಾಷಣೆಯನ್ನು ಮಾಡುತ್ತೇನೆ. ಶಿವನಪ್ಪಣೆಯಲ್ಲೂ, ಶಿವಾಚಾರದಲ್ಲಿಯೂ ಯಾವುದನ್ನು ನಡೆಸಬೇಕೋ ಸಂಸಾರನಾಶಕವಾದ ನಿರ್ಮಲವಾದ ಕರ್ಮವನ್ನೆಲ್ಲಾ ಆಚರಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ. ಈ ಪ್ರತಿಜ್ಞೆಗೆ ನನ್ನಿಂದ ಕುಂದು–ಕೊರತೆಗಳು ಬಂದದ್ದು ಸಹಜವಾದರೆ, ಆ ಕಾಲಕ್ಕೆ ನನ್ನ ಸರ್ವಸ್ವವನ್ನು ನಿನ್ನ ಪಾದಕ್ಕೆ ಅರ್ಪಣೆ ಮಾಡುತ್ತೇನೆ.

ಸಂಗಮೇಶ: ಬಸವೇಶಾ, ನಿನ್ನ ದೃಢತರವಾದ ನಡೆ–ನುಡಿಯನ್ನು ನೋಡಿ, ಪರಮಾನಂದಾಬ್ಧಿಯೊಳು ಮುಳುಗಿದಂತಾಯಿತು. ಕಲ್ಯಾಣ ಕಲ್ಯಾಣ. ಚಿರಾಯುಭವಃ ಬಸವೇಶ ಕ್ಷೇಮವಾಗಿರು. ನಾನು ಅಂತರ್ಗತನಾಗುತ್ತೇನೆ. ಅಪ್ಪಣೆಗೈಯ್ಯುವೆ.

ಬಸವ : ಗುರುವರ್ಯರೇ, ನಮಸ್ಕಾರ. ಹೋಗಿ ಬನ್ನಿ ಧನ್ಯನಾದೆ.

ಸಂಗಮನಾಥ: ಧನ್ಯ ಧನ್ಯ ಭಪ್ಪರೇ ಬಸವೇಶಾ, ನಿನ್ನ ಭಕ್ತಿ ಸಾಯುಜ್ಯಕ್ಕೆ ಬೆಲೆಯೇ ಇಲ್ಲ. ಬಸವ ನಿನ್ನ ನಾಮವನ್ನು ಎಷ್ಟು ಕೊಂಡಾಡಿದರೂ ತೀರದು. ಬಸವ ಬಸವವೆಂಬ ನಾಮಾಮೃತವನ್ನು ಯಾವ ಮನುಷ್ಯರು ನುಡಿವರೋ ಅವರೇ ಧನ್ಯರು; ಅವರೇ ವೀರಶೈವರು. ಅವರ ಸಮಾನ ಸ್ವರ್ಗ – ಮರ್ತ್ಯ – ಪಾತಾಳದಲ್ಲಿರುವರೇ! ಅವರ ಭವಮರಣ ದೂರಾಗುವುದು ಅಲ್ಲದೆ, ಮೋಕ್ಷನಿಧಿಯು ಕೈ ಸೇರುವುದು. ಬಸವ ನಿನ್ನ ನಾಮ ಅಮೃತವು. ಬಸವ – ಬಸವನೆಂದು ಕಾಲ ಕಳೆದರೆ, ಶ್ರೀ ಗುರು ಗುದಿನೇಶ್ವರನು ಕಲ್ಯಾಣ ಮಾಡುವನು. ಈಗ ನಾನು ನನ್ನಾಶ್ರಮಕ್ಕೆ ಸಾಗುತ್ತೇನೆ.

ಸೇವಕ : ಆಹಾ, ಇದೇನು ಚಮತ್ಕಾರವು. ಪರಮಾಶ್ಚರ್ಯವು ಜಗತ್ತಿನಲ್ಲಿ ಶಿವಭಕ್ತರಾದ ಸತ್ಪುರುಷರ ಸಂಗವೇ ಶ್ರೇಷ್ಠವಾದದ್ದು, ಈಗ ಪ್ರತ್ಯಕ್ಷವಾಯಿತು. ಶ್ರೀಗುರು ಬಸವೇಶ್ವರನ ಸೇವೆ ಮಾಡಿದ್ದೂ ಸಾರ್ಥಕವಾಯಿತು. ಸಾಕ್ಷಾತ್ ಈ ಸಂಗಮೇಶ್ವರರೇ ತಪಸ್ವಿಯ ವೇಷದಿಂದ ಈ ಬಸವೇಶ್ವರನಿಗೆ ಪ್ರತ್ಯಕ್ಷವಾಗಿ ಮಾತಾಡಿ, ಅಭಯವನ್ನು ಇತ್ತು ದಯ ಮಾಡಿಸಿದರು. ಈ ಬಸವೇಶ್ವರನ ಅಂತಃಕರಣದಿಂದ ಸಂಗಮೇಶ್ವರನ ಪಾದವನ್ನು ಕಂಡೆವು. ನಾವೇ ಧನ್ಯರು. ಬಸವೇಶ್ವರ ಸ್ನಾನಕ್ಕೆ ನದಿಯತ್ತ ಹೋಗುತ್ತೇನೆ. ಬಸವ ಬಸವಾ.

ಬಸವ : ನಾನೂ ಸ್ನಾನಕ್ಕೋಸ್ಕರ ನದಿಯತ್ತ ಸಾಗುತ್ತೇನೆ. ಶಿವಶಿವ ಸ್ನಾನ ಮಾಡದ ವಿನಃ ಯಾವ ಪದಾರ್ಥವನ್ನೂ ಸ್ವೀಕಾರ ಮಾಡಬಾರದು. 'ಆಚಾರೇ ಪ್ರಥಮೋ ಧರ್ಮಃ' ಎಂಬುವಂತೆ ಆಚಾರವೇ ಮೊದಲನೆಯ ಧರ್ಮವಾಗಿದೆ. ಆದ್ದರಿಂದ ಆಚಾರವನ್ನೇ ಸ್ವೀಕರಿಸಬೇಕು. ಆಚಾರದಿಂಗಲೇ ವಿಚಾರ ದೊರೆಯುವುದು. ವಿಚಾರದಿಂದಲೇ ಭಕ್ತಿ ದೊರೆಯುವುದು. ಭಕ್ತಿಯಿಂದಲೇ ಮುಕ್ತಿಯಾಗುವುದು. ಶಂಭೋ ಸಂಗಮೇಶಾ, ಯಾಕೋ ಎನ್ನ ಬಲಭುಜವು ಬಲನೇತ್ರವು ಹಾರುತ್ತಿವೆ. ಏನು ಶುಭಕಾರ್ಯಗಳು ಇರಬಹುದು. ಛೇ ಮೂರ್ಖಮನಸ್ಸೇ ಗುರುನಾಥನ ಸ್ಮರಣೆಗಿಂತಲೂ ಶುಭಕಾರ್ಯಗಳಿರುವವೇ? ಇಲ್ಲ ಒಳ್ಳೆಯದು, ಇದೇನು ಚಮತ್ಕಾರವು? ಕಲ್ಯಾಣಪಟ್ಟಣದಿಂದ ಭಕ್ತಶ್ರೇಷ್ಠನಾದ ನನ್ನ ಸೋದರಮಾವ ಬಲದೇವ ಮಂತ್ರಿಗಳು ಬರುವಂತೆ ತೋರುತ್ತದೆ. ಒಳ್ಳೆಯದು ಬರಲಿ. ಅವರು ಬರುವುದರೊಳಗಾಗಿ ಬೇಗನೆ ಸ್ನಾನವನ್ನು ಮುಗಿಸಿಕೊಂಡು ಬರುತ್ತೇನೆ. ಸಂಗಮೇಶಾ ಸಂಗಮೇಶಾ.....

(ಬಲದೇವ ಮಂತ್ರಿಯ ಪ್ರವೇಶ. ನದಿಯ ದೃಶ್ಯ)

ಬಲದೇವಮಂತ್ರಿ ಪದ :

ಬಸವರಾಜನೆ ರಕ್ಷಿಸು ನೀ ಎನ್ನ ।
ಶಶಿಧರ ರೂಪನೇ ॥
ಕುಶಲಮತಿಯಳು ಬಿಸಜಾಕ್ಷಿ ಗಂಗಳ ।
ಕುಸುಮವ ಧರಿಸುವೆನು ॥

ಬಲದೇವ: ಓಂ ಬಸವನೇ, ಭವಶರಧಿಗೆ ಸೇತುವೇ, ಅಷ್ಟಾವರಣ ಭೂಷಿತನೇ ಸಿಂಕುಮಾರನೆಂಬ ರಕ್ಕಸನ ವಕ್ಕಲಿಕ್ಕಿದವನೇ, ಬಸವೇಶನೆ ರಕ್ಷಿಸು ರಕ್ಷಿಸು. ಎನ್ನ ತನು – ಮನವನ್ನು ನಿನ್ನ ಶ್ರೀಪಾದಕ್ಕೆ ಅರ್ಪಿಸುತ್ತೇನೆ. ದ್ವಿತೀಯ ಶಂಭುವೇ, ದಯಾನಿಧಿ – ದೀನಭಂಧು ನಿನ್ನ ನಾಮವನ್ನು ಎಷ್ಟು ಕೊಂಡಾಡಿದರೂ ತೀರದು.

ಎನ್ನ ಕುಲಬಾಂಧವನೇ, ವೀರಶೈವ ಮತವಾರುಧಿಗೆ ಚಂದ್ರನೇ ಭವಿಮತವೆಂಬ ಪರ್ವತಕ್ಕೆ ಇಂದ್ರನೇ, ಜಂಗಮಪ್ರಾಣನೇ, ಬಸವಾ ನಿನ್ನ ನಾಮವನ್ನು ವರ್ಣಿಸಬೇಕಾದರೆ, ಆದಿಶೇಷನಿಗೂ ಅಸಾಧ್ಯವು. ಜಂಗಮಪ್ರಾಣವೇ ಎನ್ನ ಪ್ರಾಣವೆಂದು ಮೆರೆದವನೇ. ನಿಗಮಾಗಮ ಗೋಚರನೇ, ಭಪ್ಪರೇ ಬಸವಾ, ನೀನೇ ಭಕ್ತಾದಿಭಕ್ತನು. ನಿನ್ನ ಶ್ರೀ ಪಾದಕಮಲಕ್ಕೆ ನನ್ನ ನಮಸ್ಕಾರವಿರಲಿ.

ಆಹಾ ಶಿವಶಿವಾ, ಹೇಗಾದರೂ ಈ ಸಂಗಮಕ್ಷೇತ್ರಕ್ಕೆ ಬಂದು ಬಿದ್ದೆನು. ಇನ್ನು ತಡವೇಕೆ? ಬಸವೇಶ್ವರನಿರುವ ಸಂಗಮನಾಥನ ಮಂಟಪದತ್ತ ಸಾಗುತ್ತೇನೆ. ಬಸವ ಬಸವ ಬಸವಪ್ರಭು ತಮ್ಮ ಸುಂದರ ಪಾದಕ್ಕೆ ಈ ದೀನನ ದೀರ್ಘದಂಡ ನಮಸ್ಕಾರ. ಬಿನ್ನಹ ಮಾಡುತ್ತೇನೆ. – ದೇವಾಧಿದೇವಾ ಈ ಬಡವನ ಕಡೆಗೆ ಲಕ್ಷ್ಯ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ರಕ್ಷಿಸು ರಕ್ಷಿಸು....

ಬಸವ : ಮಾವನವರೇ ಬನ್ನಿರಿ. ತಮ್ಮ ದರ್ಶನವು ನನಗೆ ಪರಮಸಂತೋಷ ನೀಡಿತು. ಜಯವಾಗಲಿ, ಈ
ಯೋಗ್ಯ ಸ್ಥಾನಕ್ಕೆ ವಿಶ್ರಮಿಸಿರಿ.

ಬಲದೇವ : ವಿಶ್ರಮಿಸುತ್ತೇವೆ.

ಬಸವ: ತಾವು ದಯಮಾಡಿಸಿದ್ದು ನನಗೆ ಆತ್ಮಾನಂದವಾಯಿತು. ಆಗಲಿ, ತಾವು ಬಂದ ಕಾರ್ಯವೇನೆಂದು ತಿಳಿಸಿದರೆ, ನಾನು ಆ ಕಾರ್ಯವನ್ನು ಆಲಸ್ಯಮಾಡದೇ ಪೂರ್ಣಮಾಡುವೆನು.

ಬಲದೇವ: ಬಸವೇಶಾ, ಮುಕ್ತಿಗೆ ರಾಜನಾಗಿಯೂ, ಭಕ್ತಿಗೆ ಬೀಜನಾಗಿಯೂ ಜಂಗಮರಿಗೆ ತವರುಮನೆಯಾಗಿಯೂ ಇರುವ ನಿನ್ನ ಕೀರ್ತಿಯೆಂಬ ಚಂದ್ರನನ್ನು ಕೇಳಿ ನಾನು ಹರುಷಾಂಬುಧಿಯೊಳು ಮುಳುಗಿ, ಬಂದಿರುವೆನು. ಬಸವ, ನನ್ನ ಸುಕುಮಾರಿಯಾದ ಗಂಗಾಂಬಿಕೆಯನ್ನು ಪಾಣಿಗ್ರಹಣ ಮಾಡಿಕೊಂಡು, ನಮ್ಮೆಲ್ಲರನ್ನು ಧನ್ಯರನ್ನಾಗಿ ಮಾಡಬೇಕೆಂದು ಬೇಡಿಕೊಂಬುವೆನಯ್ಯ ಬಸವ ಬಸವಾ. ಈ ಭವಸಾಗರವನ್ನು ದಾಟಿಸಿ, ಮುಕ್ತಿಯನ್ನು ಈಯಬೇಕೆಂದು ಜಂಗಮಪ್ರಾಣಿ, ಶರಣಾಗ್ರಣಿ ಪರುಷದ ಖಣಿ, ಮುಕ್ತಿಯ ಮಣಿ ಬಸವಾ ರಕ್ಷಿಸು ರಕ್ಷಿಸು.

ಬಸವ : ಮಂತ್ರಿವರ್ಯರೇ, ನಿಮ್ಮ ಮಾತು ವಾಸ್ತವವೇ. ಅಂದರೆ, ಮಾವನವರೇ ನಾನು ವೀರಶೈವನು, ಅಷ್ಟಾವರಣಭಕ್ತನು, ಗುರು–ಲಿಂಗ–ಜಂಗಮಕ್ಕೆ ತನು–ಮನವನ್ನು ಅರ್ಪಿತಮಾಡಿರುವೆನು. ಭಕ್ತಾದಿಗಳೇ ನನ್ನ ಬೀಗರು, ಪಂಚಾಕ್ಷರೀ – ಷಡಕ್ಷರೀ ಮಂತ್ರಗಳೇ ನನ್ನ ತಂದಿ–ತಾಯಿ, ಸಂಗಮೇಶ್ವರನೇ ನನ್ನ ಗುರುವು, ಅವನನ್ನೇ ಇಷ್ಟದೇವನಾಗಿವುಳ್ಳ ನಾನು ವೀರಶೈವ ಮತದವನು. ಹೀಗಾದಾಗ, ನನ್ನ ಜೊತೆ ಬೀಗತನವನ್ನು ಮಾಡಿಕೊಳ್ಳುವ ಬಗೆ ಹೇಗೆ? ಇದು ಅಸಂಭವವೂ. ನೀವು ಶೈವರು. ನಿಮ್ಮ ಕುವರಿಯನ್ನು ನಾನು ಪಾಣಿಗ್ರಹಣ ಮಾಡಿಕೊಳ್ಳುವ ರೀತಿ ಹೇಗೆ? ನೀವೇ ಹೇಳಿರಿ.

ಬಲದೇವ : ಸದ್ಗುಣಮಣಿಭೂಷಿತನಾದ ಬಸವೇಶಾ, ರತಿಯಂತೆ ಸುಂದರಿಯಾದ ಎನ್ನ ಮಗಳನ್ನು ನಿಮ್ಮ ವೀರಶೈವ ಧರ್ಮದ ಪ್ರಕಾರ, ಶಿವದೀಕ್ಷೆಯನ್ನು ಮಾಡಿಸಿಕೊಂಡು, ಲಗ್ನವಾಗಬೇಕೆಂದು ಕನ್ಯಾ ತಂದೆಯಾಗಿ ತಮ್ಮ ಪಾದಕ್ಕೆ ನಮಸ್ಕಾರ ಮಾಡಿರುವೆನು. ಸಾಕ್ಷಾತ್ ಪಂಚಪರುಷವುಳ್ಳ ದ್ವಿತೀಯ ಶಂಭುವೆ ನಿನ್ನ ದರ್ಶನದಿಂದ ಎನ್ನ ಭವವಿಮೋಚನವಾಯಿತು. ನಾನು ಶುದ್ಧನಾದೆ, ಮಾನ್ಯನಾದೆ. ಮೋಕ್ಷಾಂಗನಿಯು ಪುಷ್ಪಮಾಲಿಕೆಯನ್ನು ಹಾಕಲಿಕ್ಕೆ ಏನೂ ಸಂಶಯವಿಲ್ಲ. ಅನಂತ ಮಹಿಮಾಶಾಲಿಯು, ಬಸವ ಎಂಬುವ ನಾಮವು ಕಾಮಧೇನು ಕಲ್ಪವೃಕ್ಷ, ಚಿಂತಾಮಣಿ, ಪರುಷದ ಖಣಿ, ಮೋಕ್ಷದ ಮಣಿ, ಭಕ್ತಿಗೆ

ಸ್ಥಾನವಾಗಿರುವುದು. ಬಸವಾ ಬಸವಾ ಎಂಬುವವನಿಗೆ ಹಸಿವು – ತೃಷೆಗಳುಂಟೆ? ಭವಮರಣಗಳುಂಟೆ? ಮೃತ್ಯವುಂಟೆ ಕಾಲನಿಗೆ? ಗುಡಿನೇಶ್ವರಾ ರಕ್ಷಿಸು ರಕ್ಷಿಸು.

ಬಸವ : ನಿಮ್ಮ ಇಷ್ಟದಂತೆ ನಿಮಗೂ ಆಕೆಗೂ ಶಿವದೀಕ್ಷೆಯನ್ನು ಉಂಟು ಮಾಡಿಸಿ, ಆ ಗಂಗಾಮಣಿಯಾದ ಗಂಗಾಮುಖಿಯನ್ನು ಪಾಣಿಗ್ರಹಣ ಮಾಡಿಕೊಳ್ಳುತ್ತೇನೆ. ಕಾರ್ಯವನ್ನು ಸಿದ್ಧಪಡಿಸಿರಿ.

ಬಲದೇವ : ಆದಿ – ಅನಾದಿಗೆ ಸ್ಥಾನೀಭೂತನಾದಂಥ ಬಸವರಾಜನೇ ನಿನ್ನ ಪರಮಾಮೃತದಂಥ ವಾಕ್ಯದಿಂದ ಧನ್ಯನಾದೆ. ಎನ್ನ ಭವಸಾಗರ ಸಂಕಟವು ಇಂದಿಗೆ ನಿವಾರಣೆಯಾಯಿತು. ವೀರಶೈವ ಮಾರ್ಗವು ಕೈಸೇರಿತು. ಎನ್ನ ಪುಣ್ಯಕ್ಕೆ ಎಣೆಯೇ ಇಲ್ಲ. ಬಸವೇಶಾ, ಲಗ್ನದ ಕಾರ್ಯವನ್ನು ನೆರವೇರಿಸುವುದಕ್ಕೆ ಈಗಿಂದೀಗಲೇ ಕಲ್ಯಾಣಕ್ಕೆ ಸಾಗುತ್ತೇನೆ.

ಬಸವ : ನಾನು ನಿನ್ನ ಗುರುಮೂರ್ತಿಯಾದ ಸಂಗಮೇಶ್ವರನ ಸೇವೆಯ ನಿಮಿತ್ಯಾರ್ಥವಾಗಿ ಗರ್ಭಾಲಯದತ್ತ ಸಾಗುತ್ತೇನೆ.

ದೃಶ್ಯ : ಕಲ್ಯಾಣದಲ್ಲಿ ಬಲದೇವನ ಮನೆ

ಬಲದೇವ : ಪರಿಚಾರಕ, ಯಾವತ್ತು ಕಾರ್ಯವು ಸಿದ್ಧವಾಯಿತು. ಬಸವೇಶ್ವರನನ್ನು ಕರೆತರುವುದಕ್ಕೆ ಪತ್ರವನ್ನು ಬರೆಯುತ್ತೇನೆ. ಸೇವಕಾ, ಬಸವೇಶ್ವರನಿಗೆ ಏನೆಂದು ಪತ್ರ ಬರೆಯಬೇಕಾದೀತು?

ಸೇವಕ : ಬಲದೇವ ಮಂತ್ರಿಯರೇ, ಆ ಬಸವೇಶ್ವರನು ಸಾಕ್ಷಾತ್ ಪರಮಾತ್ಮನೇ ಇರುವನು. ಮತ್ತು ಮತೋದ್ಧಾರಕ, ಅಷ್ಟಾವರಣ ಭಕ್ತನಿರುವನೆಂದು ಬರೆದರಾಯಿತು.

ಬಲದೇವ : ಹೌದು ಹೌದು, ದ್ವಿತೀಯಶಂಭುವಾದ ಪರಮಾತ್ಮನೇ ಇರುವನು. ಚಿಂತೆಯಾಕೆ? ಪತ್ರವನ್ನು ಬರೆಯುತ್ತೇನೆ. ಸೇವಕಾ, ಪತ್ರ ಹೀಗಿರುವುದು ನೋಡು, ಓದಿ ಹೇಳುತ್ತೇನೆ.

"ಶ್ರೀಮದ್ ವೀರಶೈವ ಮತಸ್ಥಾಪಕಾಚಾರ್ಯನಾದಂಥ ರಾಜ್ಯ ಪೂಜಿತ, ರಾಜ್ಯಮಾನ್ಯ ರಾಜ, ಶ್ರೀ ಕಪ್ಪಡಿ ಸಂಗಮೇಶ್ವರನಲ್ಲಿರುವಂಥ, ಅಷ್ಟಾವರಣ ಭೂಷಿತನಾದಂತಹ, ಜಂಗಮಪ್ರಾಣನಾದಂಥ, ತನು–ಮನ ಧನವನ್ನು ಶಿವಾರ್ಪಿತ ಮಾಡಿದಂಥ, ರಕ್ಕಸ ಅರಿಯಾದಂಥ, ಸುರಪ ಮೊದಲಾದ ದೇವತೆಗಳಿಂದ ವಂದಿತನಾದಂಥ ಮುಕ್ಕಣ್ಣ ಭಕ್ತಾಗ್ರಣ್ಯ ಬಸವಣ್ಣನವರ

ಪಾದಕಮಲಕ್ಕೆ ಶ್ರೀ ಕಲ್ಯಾಣಪಟ್ಟಣದಲ್ಲಿರುವ ಬಲದೇವಮಂತ್ರಿಯವರು ಮಾಡುವ ನಮಸ್ಕಾರ. ನಿಮ್ಮ ಕ್ಷೇಮ ಬರೆಯಿರಿ.

ಬಿನ್ನಪ : ಈಗ ನಿಮಗೆ ಪತ್ರ ಬರೆಯಲಿಕ್ಕೆ ಕಾರಣವೇನೆಂದರೆ, – ಈಗ ಮನೆಯಲ್ಲಿ ನಮ್ಮ ಮಗಳಾದ ಚಿರಂಜೀವಿ ಶ್ರೀ ಗಂಗಾಂಬಿಕೆಯವರ ಲಗ್ನ ಹಾಗೂ ತಮ್ಮ ಕರಗ್ರಹಣ ವಿಷಯವಿದೆ. ಮಾರ್ಗಶಿರ ಶುದ್ಧ ಐದು ಮಂಗಳವಾರದಂದು ದೇವತಾಕಾರ್ಯವಿದೆ. ತಾವು – ತಮ್ಮೆಲ್ಲಾ ಮಿತ್ರಮಂಡಳಿ ಸಹಿತ ಬಂದು, ಈ ಮಂಗಲಕಾರ್ಯವನ್ನು ಸಾಂಗಗೊಳಿಸಿ ಕೀರ್ತಿಯನ್ನು ಪಡೆದುಕೊಳ್ಳುವಿರೆಂದು ಬೇಡಿಕೊಳ್ಳುತ್ತೇನೆ.

ಇಂತೀ ಶಿರಸಾಷ್ಟಾಂಗ ನಮಸ್ಕಾರಗಳು.

ಪರಿಚಾರಕಾ, – ಈ ಲಗ್ನಪತ್ರವನ್ನು ತೆಗೆದುಕೊಂಡು ಸಂಗಮೇಶ್ವರಕ್ಕೆ ಹೋಗಿ, ಬಸವೇಶನಿಗೆ ಮುಟ್ಟಿಸಿ, ಬೇಗನೆ ಕರೆದುಕೊಂಡ ಬಾ. ನಿನ್ನ ಮಾತಿನಿಂದ ಎಲ್ಲಾ ಹಕೀಕತ್ತು ತಿಳುಹಿಸು.

ಸೇವಕ : ಮಂತ್ರಿವರ್ಯರೇ ಹೋಗಿ ಬರುತ್ತೇನೆ.

ಕೂಡಲ ಸಂಗಮೇಶ್ವರನ ಪ್ರಾಂಗಣ

ಬಸವ : ಜಗದ್ವ್ಯಾಪಕನಾದ ಸಂಗಮೇಶ್ವರನೇ ನಿನ್ನ ದಿವ್ಯ ಅಂತಃಕರುಣದಿಂದ ಎಲ್ಲಾ ಕಾರ್ಯವು ಪೂರ್ಣವಾದವು. ನಿನ್ನಿಂದಲೇ ನಾನು ಧನ್ಯನು. ನನಗೆ ಗತಿ – ಮತಿ – ಪತಿ – ಶೃತಿ ಎಲ್ಲವೂ ನೀನೇ. ನಿನ್ನ ಹೊರತು, ಯಾರೂ ಇಲ್ಲವು. ಜೀಯಾ, ಸಕಲಕಾರ್ಯಕ್ಕೂ ನೀನೇ ಆದ್ಯನಾಗಿ ವರ್ತಿಸು.

ಆಹಾ, ಇದೇನು? ಬಲದೇವಮಂತ್ರಿಯವರ ಸೇವಕನು ಎಂತಹ ತುರ್ತಾಗಿ ಬರುತ್ತಿದ್ದಾನೆ. ಒಳ್ಳೆಯದು, ಬರಲಿ ತಾತ್ಪರ್ಯವನ್ನು ತಿಳಿಯೋಣ.

ಸೇವಕ : ನಮೋ ನಮೋಃ ಬಸವೇಶ್ವರಾ, ನಿನ್ನ ಪಾದಕ್ಕೆ ನಮಸ್ಕಾರವು.

ಬಸವೇಶ : ಸೇವಕಾ ಧನ್ಯ ಧನ್ಯ. ಈ ಪೀಠಕ್ಕೆ ಅಲಂಕರಿಸು, ನೀನು ಬಂದಿರುವ ಕಾರ್ಯವನ್ನು ತಿಳುಹಿಸು.

ಸೇವಕ : ಬಸವಾ, ಬಲದೇವ ಮಂತ್ರಿಗಳು ಕಳಿಸಿರುವ ಈ ಪತ್ರವನ್ನು ಸ್ವೀಕರಿಸಿ.

ಬಸವ : ಸಂಗಮೇಶ್ವರನೇ ನಿಮ್ಮ ಮಹಿಮೆಯನ್ನು ತಿಳಿಯುವರಾರು? ಈ ಕಾರ್ಯವನ್ನು ತಾವೇ ಮಾಡಿದಂತೆ ತೋರುತ್ತದೆ. ಆಗಲಿ, ತಮ್ಮ ಅಪ್ಪಣೆಯಂತೆ ಸಿದ್ಧವಿರುವೆನು. ಒಳ್ಳೆಯದು, ಪರಿಚಾರಕ ಈ ಪತ್ರದ ಅಭಿಪ್ರಾಯು ತಿಳಿಯಿತು. ಕಾರ್ಯವು ಸಿದ್ಧವಾಗಿರುವುದೋ?

ಸೇವಕ : ಬುದ್ಧಿ, ಈ ಕಾರ್ಯವು ಮೊದಲೇ ಸಿದ್ಧವಾಗಿರುವದು. ನಾಳೆ ಉದಯಕಾಲದಲ್ಲಿ ಲಗ್ನವಿರುತ್ತದೆ, ದಯಮಾಡಿಸಿರಿ. ಈ ವಸ್ತ್ರಾಭರಣಗಳನ್ನು ಧರಿಸಿಕೊಂಡು, ಗಜವನ್ನು ವಾಹನವಾಗಿಸಿಕೊಂಡು ಜಲ್ದಿ ಹೋಗುವಾ ನಡೆಯಿರಿ.

ಬಸವಣ್ಣ : ಹಾಗಾದರೆ, ಬೇಗನೆ ಭೋಜನವನ್ನು ತೀರಿಸಿಕೊಂಡು ಕಲ್ಯಾಣ ಪಟ್ಟಣದತ್ತ ಹೊರಡುವಾ ನಡೆಯಿರಿ.

ದೃಶ್ಯ : ಕಲ್ಯಾಣ – ಬಲದೇವನ ಮನೆ

ಬಲದೇವ : ನಮೋ ನಮಃ ಬಸವೇಶಾ, ನಿಮ್ಮ ದಿವ್ಯ ಚರಣಾರವಿಂದಕ್ಕೆ ವಂದಿಸುತ್ತೇನೆ.

ಬಸವ : ಮಂತ್ರಿವರ್ಯರೇ ದೇವರು ತಮಗೆ ಮೋಕ್ಷವನ್ನು ನೀಡಲಿ.

ಬಲದೇವ : ಬಸವೇಶಾ, ಈ ಸಿಂಹಪೀಠಕ್ಕೆ ಅಲಂಕರಿಸಿ.

ಬಸವ : ತಮ್ಮ ಇಷ್ಟದಂತೆಯೇ ಈ ಸಿಂಹಾಸನವನ್ನು ಅಲಂಕರಿಸುವೆ. ತಾವು ಮಂಡಿಸಿರಿ.

ಬಲದೇವ : ಬಸವೇಶಾ, ಭಕ್ತಿಕೋಶಾ, ಎನಗೆ ನೀನು ಅಳಿಯನಾಗಿದ್ದರಿಂದ, ನನ್ನ ಜನ್ಮವು ಸಾಫಲ್ಯವಾಯಿತು.

ಶಿವ ಶಿವಾ, ಅಳಿಯನೆನ್ನಬೇಕೆ? ಸಾಕ್ಷಾತ್ ದೇವಾಧಿದೇವನು ನೀನು. ಅಮ್ಮಾ ಗಂಗಾಂಬಿಕೆ, ಈ ಬಸವೇಶ್ವರರ ಎಡಭಾಗದಲ್ಲಿ ಮಂಡಿಸಿರಿ. ಓಂ ಬಸವೇಶ, ಓಂ ಬಸವೇಶ, ನನ್ನ ಅನುಜನಾದ ಸಿದ್ಧರಸನ ಮಗಳಾದ ನೀಲಲೋಚನೆಯನ್ನೂ ಪಾಣಿಗ್ರಹಣ ಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ಬಸವ : ಮಾವನವರೇ, ನಿಮ್ಮ ಅಪ್ಪಣೆಯಂತೆ ನೀಲಲೋಚನೆಯವರಿಗೆ ಶಿವದೀಕ್ಷೆ ಮಾಡಿಸಿದ್ದಾಗಿದೆ. ಕಾರಣ ಆಕೆಯನ್ನು ನಿಮ್ಮ ಮಾತಿನಂತೆ ಪಾಣಿಗ್ರಹಣ ಮಾಡಿಕೊಳ್ಳುತ್ತೇನೆ. ತಾವೂ ಕುಳಿತುಕೊಂಡು ಲಗ್ನ ಪ್ರಾರಂಭಿಸಿರಿ.

(ವಿವಾಹ ಮಂಟಪ ದೃಶ್ಯ)

ಬಲದೇವ: ಅಮ್ಮಾ ಮಂಗಲವನಿತೆಯರೇ ಬನ್ನಿರಿ. ತಡವೇಕೆ ಮದುಮಕ್ಕಳನ್ನಾಗಿ ಮಾಡಬೇಕಿದೆ. ಶೀಘ್ರವಾಗಿ ಅವರಿಗೆ ಹರಿದ್ರಲೇಪನ ಮಾಡಿರಿ.

ಮಂಗಲವನಿತೆಯರ ಪದ :

ಬಸವರಾಜಗೆ ಗಂಗಾದೇವಿಗೆ ಹಸನವಾಗಿ ।
ನಾವು ಇನ್ನು ಅರಿಷಿಣ ಹಚ್ಚುವೆವು ॥
ಅರಿಷಿಣ ಹಚ್ಚುವೆವು ಕೈ – ಮೈಯ್ಯಿಗೆ ।
ಚರಣಕ್ಕೆಲ್ಲ ಹಚ್ಚಿ ನಾವು ನೀರ ಹಾಕುವೆವು ॥

ಮಂಗಲವನಿತೆ : ಮಂತ್ರಿವರ್ಯರೇ, ದಂಪತಿಗಳಿಗೆ ಹರಿದ್ರಲೇಪನವನ್ನು ಮಾಡಿದೆವು. ಮುಂದೇನಪ್ಪಣೆ?

ಬಲದೇವ: ಅಮ್ಮಾ ಮುತ್ತೈದಿಯರೇ ತಡವೇಕೆ? ಬಸವೇಶನಿಗೂ ಗಂಗಾದೇವಿ – ನೀಲಲೋಚನೆಯರಿಗೂ ಶಾಸೆಯನಿಟ್ಟು, ಶೋಭಾನವನ್ನು ಮಾಡಿರಿ.

ಮಂಗಲವನಿತೆಯರ ಪದ :

ಶೋಭಾನವೆನ್ನೀರೆ, ಶೋಭಾನವೆನ್ನೀರೆ ।
ಶೋಭಾನವೆನ್ನೆ ಶಿವನಿಗೇ । ಶೋಭಾನವ ॥ ಪಲ್ಲ ॥

ಶೋಭಾನವೆನ್ನೀರೆ ಬಸವನಿಗೆ ಗಂಗಾಗ ।
ಶೋಭಾನವೆನ್ನೆ ಬಸವನಿಗೆ ॥ ೧ ॥

ಭಕ್ತಿಯ ಶರಧಿಗೆ ಮುಕ್ತಿಯ ಕೋಶಗೆ ।
ಸತ್ಯಾಗೆ ಅನ್ನೆ ಬಸವನಿಗೆ ॥ ೨ ॥

ನೀಲಮ್ಮತಾಯಿಗೆ ಮಂಗಲಮೂರ್ತಿಗೆ ।
ಮಂಗಲವೆನ್ನೆ ಬಸವನಿಗೆ ॥ ೩ ॥

ಮಂಗಲವನಿತೆಯರು : ಪ್ರಭುಗಳೇ, ಮಂಗಲಕಾರ್ಯಗಳೆಲ್ಲ ತೀರಿದವು. ಮುಂದೇನಪ್ಪಣೆ?

ಬಲದೇವ: ಅಮ್ಮಾ ಮಂಗಲವನಿತೆಯರೇ ಒಳ್ಳೆಯದಾಯಿತು. ಸೇವಕಾ, ಇನ್ನು ತಡವೇಕೆ? ಗುರು – ಹಿರಿಯರಿಗೆ ಅಕ್ಕಿಕಾಳನ್ನು ಮುಟ್ಟಿಸು.

ಸೇವಕ : ಭೂಪಾಲರೇ, ಗುರು – ಹಿರಿಯರಿಗೆ, ದೇವಾಚಾರದವರಿಗೆ ಅಕ್ಕಿಕಾಳನ್ನು ಮುಟ್ಟಿಸಿದ್ದೇನೆ.

ಬಲದೇವ : ಗುರು – ಹಿರಿಯರಾದ ಚರಮೂರ್ತಿಗಳೇ ಶೀಘ್ರವಾಗಿ ಮಂಗಲಧಾರಣೆ ಮಾಡಿರಿ

(ಚರಮೂರ್ತಿ ಮಂಗಲಧಾರಣೆ)

ಚರಮೂರ್ತಿ: ಮಂತ್ರಿಗಳೇ ಅಕ್ಕಿಕಾಳನ್ನು ಎಲ್ಲರಿಗೂ ಮುಟ್ಟಿಸಿರುವಿರೋ?

ಬಲದೇವ : ಎಲ್ಲರಿಗೂ ಮುಟ್ಟಿರುತ್ತವೆ.

ಚರಮೂರ್ತಿ ಮಂತ್ರ :

ತದೇವ ಲಗ್ನಂ ಸುಧಿನಂತುದೇವಾ ।
ತಾರಾಬಲಂ ಚಂದ್ರಬಲಂತುದೇವಾ ।
ವಿದ್ಯಾಬಲಂ ದೈವಬಲಂತುದೇವಾ ।
ಗೌರಿಪತೇ ಪಾದಯುಗ್ಮಂ ಸ್ಮರಾಮೀ ।
ಇತೀ ವಧೂ – ವರೌ ಅಕ್ಷತಧಾರಣಂ ॥

ಬಲದೇವ : ಎಲವೋ ಪರಿಚಾರಕ, ಪೂಜ್ಯರಾದ ಗಣಸಮೂಹಕ್ಕೆ ಮಣಿ–ಕನಕ – ವಸ್ತ್ರಾಭರಣಗಳನ್ನು ತೆಗೆದು ಕೊಂಡು ಬಾ.

ಸೇವಕ : ಪ್ರಭುಗಳೇ ಎಲ್ಲಾ ವಸ್ತ್ರಾಭರಣಗಳನ್ನು ತಂದಿರುವೆನು, ತೆಗೆದುಕೊಳ್ಳಿರಿ.

ಬಲದೇವ: ಸೇವಕಾ, ಎಲ್ಲಾ ಗುರುಮೂರ್ತಿಗಳಿಗೆ, ಜಂಗಮರಿಗೆ ದಕ್ಷಿಣೆಯನ್ನು ಮುಟ್ಟಿಸು.

ಸೇವಕ : ಮಹಾನೀಯರೇ, ಇದನ್ನು ತೆಗೆದುಕೊಳ್ಳಿರಿ.

ಬಲದೇವ : ಸೇವಕಾ, ಈ ಮಂಗಲವನಿತೆಯರಿಗೆ ಮಡಿ ಪೀತಾಂಬರವನ್ನು ಕೊಟ್ಟು ಕಳುಹಿಸು.

ಸೇವಕ : ಅಮ್ಮಾ ಮಂಗಲವನಿತೆಯರೇ, ಈ ಎಲ್ಲ ಸಾಮಾನುಗಳನ್ನು ತೆಗೆದುಕೊಳ್ಳಿರಿ.

ಮಂಗಲವನಿತೆಯರು : ಒಳ್ಳೆಯದು, ಸ್ವೀಕರಿಸುತ್ತೇವೆ.

ಬಲದೇವ : ಬಸವೇಶಾ, ನಾನು ಧನ್ಯನಾದೆ. ಈಗೆ ನನ್ನ ಎಲ್ಲ ಇಷ್ಟಾರ್ಥಗಳನ್ನು ನಿಮ್ಮ ಪಾದಕ್ಕೆ ಅರ್ಪಿಸಿದ್ದೇನೆ. ಸ್ವೀಕರಿಸಬೇಕು. ಈ ಸಂಸಾರವು ಸಾಕು, ಕೈಲಾಸವನ್ನು ಕಾಣುತ್ತೇನೆ.

(ಬಿಜ್ಜಳನ ಅರಮನೆ ದೃಶ್ಯ)

(ಬಿಜ್ಜಳ, ಮಂತ್ರಿ, ಸೇನಾಧೀಶ, ಕೊಂಡೆಮಂಚಣ್ಣ)

(ಸಭಾ. ದರ್ಬಾರ ಸೀನು)

(ಭಾಮಿನಿ)

ಧರುಣಿಪತಿ ಬಿಜ್ಜಳನ ಸಭೆಯಲಿ ।
ವರಭಟರು ಮಂತ್ರಿಗಳು ಇರುವರು ।
ಸರಸದಿಂದಲಿ ತೋರುತಿರ್ಪುದು ರಾಜನಾಸ್ಥಾನ ॥ ೧ ॥

ಬಿಜ್ಜಳ : ಪ್ರಧಾನಶ್ರೇಷ್ಠ ನಮ್ಮ ಕಲ್ಯಾಣಪಟ್ಟಣದಲ್ಲಿ ಎಲ್ಲರೂ ಸುಶೀಲರಾಗಿ ವರ್ತಿಸುತ್ತಿರುವರೋ? ಅಥವಾ ಅಧಮಶೀಲರಾಗಿರುವರೋ? ರಾಜಾಜ್ಞೆಗೆ ಭಂಗವಿರುವದೊ? ಅಲ್ಲದೆ, ತಮ್ಮ – ತಮ್ಮ ಜಾತಿ – ಧರ್ಮದಂತೆ ವರ್ತಿಸದೆ, ತಿರಸ್ಕಾರದಿಂದ, ವೇದ – ಬಾಹಿರರಾಗಿರುವರೋ? ಏನು, ತೀವ್ರವಾಗಿ ಹೇಳು.

ಮಂತ್ರಿ : ಪರರಾಜರೆಂಬ ಮದಗಜಗಳಿಗೆ ಕಂಠೀರವನಂತೆ ಮೆರೆಯುವ ಸತ್ಯಸಂಧನಾದ ಬಿಜ್ಜಳ ಭೂಪತಿಯೇ ಕೇಳು, ಈ ನಮ್ಮ ಕಲ್ಯಾಣಪಟ್ಟಣದಲ್ಲಿ ಎಲ್ಲಾ ಪ್ರಜೆಗಳು ತಮ್ಮ ತಮ್ಮ ವರ್ಣಾಶ್ರಮದಂತೆ ನಡೆಯುತ್ತಾ, ತಮ್ಮ ಅಂತಃಕರುಣ ಕಟಾಕ್ಷೆಯಂಬ ಬೆಳದಿಂಗಳ ಪ್ರಕಾಶದಿಂದ ಸಮಸ್ತ ಭೋಗ–ಸುಖದಿಂದ ಸಾಮ್ರಾಜ್ಯವನ್ನು ಅನುಭವಿಸುತ್ತಲೇ ಇರುವರು. ಮಹಾರಾಜರೇ, ನಿಮ್ಮಂಥ ಪುಣ್ಯಾತ್ಮ ಧಾರ್ಮಿಕರು ತ್ರೈಲೋಕದಲ್ಲಿ ಇಲ್ಲವೇ ಇಲ್ಲ. ಸರ್ವಪ್ರಜೆಗಳು ಇದೇ ರಾಜನ ಆಳ್ವಿಕೆಯು ಸದಾಕಾಲ ಇರಲೆಂದು ಅನನ್ಯ ಭಾವದಿಂದ ಭದ್ರ ಸ್ವರೂಪರಾದ ತಿಂತಿಣಿ ತೋಟವಾಸಿಯಾದ ಶ್ರೀಗುರು ಗುದಿನೇಶ್ವರರನ್ನು ಸ್ಮರಿಸುತ್ತಲೇ ಇರುವರು ಮಹಾನ್.

ಬಿಜ್ಜಳ : ಮಂತ್ರಿವರ್ಯ ನಿನ್ನಂಥ ಬುದ್ಧಿಕೌಶಲ್ಯನಿರುವುದರಿಂದ, ಯಾವುದಕ್ಕೂ ಕೊರತೆಯಿರದು. ಒಳ್ಳೆಯದು, ನಿನ್ನ ಸ್ಥಾನಕ್ಕೆ ವಿಶ್ರಮಿಸು. ಸೇನಾಧೀಶನೇ, ನಿನ್ನ ಸೈನ್ಯದಲ್ಲಿ ಯಾರಾದರೂ ನಿನ್ನ ಆಜ್ಞೆಯಂತೆ ನಡೆಯುತ್ತಿಲ್ಲವೋ? ತಿಳಿಸು. ಮತ್ತು ಪರರಾಜ್ಯ, ದೇಶದ ರಾಜರು ತಿರುಗಿ ಬಿದ್ದು, ಕಪ್ಪವನ್ನು ಮುಟ್ಟಿಸದೆ ಇರುತ್ತಿರುವರೋ ಏನು? ಬೇಗನೆ ತಿಳಿಸು.

ಸೇನಾಧೀಶ : ರಾಜಾಧಿರಾಜ ಶಿಖಾಮಣಿಯಾದ ಬಿಜ್ಜಳ ಭೂಪತಿಯೇ ಕೇಳು,

ಐವತ್ತಾರು ದೇಶದ ರಾಜರ ಕಡೆಯಿಂದ ಯಾವ ತಕರಾರು ಇಲ್ಲದೆ, ನಮ್ಮ ಕಂದಾಯದ ಕಾಣಿಕೆಯ ಕೋಶವನ್ನು ತಂದು ಕಥಾಮಣಿಗೆ ದಾಖಲು ಮಾಡಿಸುವುದಲ್ಲದೆ, ಮಂತ್ರಿಯವರಿಗೆ ಒಪ್ಪಿಸಿ ದ್ರವ್ಯದ ಭಂಡಾರದಲ್ಲಿ ಇಡಿಸಿದ್ದೇನೆ. ಭೂಪೇಂದ್ರನೇ ನನ್ನ ಸೈನ್ಯದಲ್ಲಿ ಎಲ್ಲರೂ ನನ್ನಾಜ್ಞೆಯಂತೆಯೇ ವರ್ತಿಸುತ್ತಾರೆ. ಇದೇ ನಮ್ಮ ರಾಜರ ಆಳ್ವಿಕೆಯು ಚಿರಕಾಲ ಇರಲೆಂದು ತಿಂತಿಣಿ ತೋಟವಾಸಿಯಾದ ಶ್ರೀಗುರು ಗುದಿನೇಶ್ವರನನ್ನು ಭಜಿಸುತ್ತಲೇ ಇರುವರು, ಮಹಾನ್.

ಬಿಜ್ಜಳ : ವ್ಹಾಹವ್ವಾ ! ಬಹಾದ್ದೂರ ಸೇನಾಧೀಶನೇ ನಿನ್ನ ಪರಾಕ್ರಮಕ್ಕೆ ಬೆಲೆಯೇ ಇಲ್ಲ. ನಿನ್ನಂಥ ಭುಜಬಲ ಪರಾಕ್ರಮಿಯು ಇರುವುದರಿಂದ ಯಾವ ರಾಜರು ಏನು ಮಾಡುವರು? ಒಳ್ಳೆಯದು ನಿನ್ನ ಯೋಗ್ಯಸ್ಥಾನವನ್ನು ಅಲಂಕರಿಸು.

ಬಿಜ್ಜಳನ ಪದ :

ಸಚಿವಶ್ರೇಷ್ಠ ಕೇಳು ಎನ್ನ ವಚನವನ್ನೀಗ ।
ಸೂಚಿಸುವೆ ನಾನಿನಗೆ ಶೀಘ್ರದಿಂದೀಗ ॥ ಪಲ್ಲ ॥

ಸಕಲರಾಜರಿಗಿಂತ ಕುಶಲಮಂತ್ರಿವರ್ಯನ ।
ಮುಖ್ಯವಾಗಿ ಹುಡುಕಬೇಕು ತಿಳಿಸು ಬೇಗನೆ ॥

ಬಿಜ್ಜಳ : ಪರಾಕ್ರಮಶಾಲಿಯಾದ ಮಂತ್ರಿಶೇಷ್ಠಾ ಸೃಷ್ಟಿಯೊಳು ಅಟ್ಟಹಾಸದಿಂದ ಮೆರೆಯುವ ಅಂಗ – ವಂಗ – ಕಳಿಂಗ – ಕಾಂಭೋಜ – ಮಾಗದ – ಮಲೆಯಾಳ – ಸೌರಾಷ್ಟ್ರ – ನೇಪಾಳ ಮೊದಲಾದ ರಾಜಾಧಿರಾಜರು ಕಪ್ಪವನ್ನು ತಂದೊಪ್ಪಿಸಿದ್ದು, ಎನಗೆ ಅತ್ಯಾನಂದವಾಯಿತು. ವೀರಾಧಿವೀರ ಗಾಂಭೀರ್ಯ ಬಲಭದ್ರನಂತೆ ಮೆರೆಯುವ ಬಲದೇವ ಮಂತ್ರಿಗಳು ಸ್ವರ್ಗಸ್ಥರಾದ ಪ್ರಯುಕ್ತ ಅಂತಹ ವೀರಾಧಿವೀರನಾದ ಪರಾಕ್ರಮಶಾಲಿ ಭಾಸ್ಕರನಂತೆ ಮೆರೆಯುವ ಮಂತ್ರಿವರ್ಯರನ್ನು ಹುಡುಕಲೇಬೇಕು. ಮಂತ್ರಿಶೇಷ್ಠಾ, ಇದರ ಸಂಗತಿಯನ್ನು ಸವಿಸ್ತಾರವಾಗಿ ವ್ಯಕ್ತಪಡಿಸು.

ಮಂತ್ರಿಪದ :

ವ್ಯಸನವೇಕೆ ಕೇಳೋ ನೀನು ಭೂಮಿಪಾಲನೇ ।
ಅಸಮಮೂರ್ತಿ ಬಸವಯಿರುವ ಕುಶಲದಿಂದಲಿ ।
ವಸುಧೆಯಲ್ಲಿ ಮೆರೆವ ಸಂಗಮೇಶ್ವರನ ಸುಸ್ಲೀಲವಾಗಿ ಕರೆಸು ಬಸವದೇವನ ॥ ೧॥

ಮಂತ್ರಿ : ಧಾತ್ರಿಪಾಲನೇ, ಪೃಥ್ವಿಪಾಲನೇ ಕೇಳು ನಿಮ್ಮ ಬಲದೇವ ಮಂತ್ರಿಯವರ

ಮಗಳಾದ ಗಂಗಾಂಬಿಕೆಯವರ ಪತಿ ಸಾಕ್ಷಾತ್, ವ್ಯೋಮನಾಥ, ವೀರಶೈವ ಮತೋದ್ಧಾರಕ, ಅಷ್ಟಾವರಣ ಭಕ್ತ, ಸಕಲ ವಿದ್ಯಾವಿಶಾರದನಾಗಿಯೂ, ಸದ್ಗುಣಮಣಿಭೂಷಿತನಾಗಿಯೂ ಸಂಗಮೇಶ್ವರನ ಸೇವಾನುಗ್ರಹನಾಗಿಯೂ, ಸದ್ಗುಣ ಮಣಿಭೂಷಿತನಾಗಿಯೂ ಸಂಗಮೇಶ್ವರನ ಸೇವಾನು ಗ್ರಹನಾಗಿಯೂ, ಕಪ್ಪಡಿಸಂಗಮದಲ್ಲಿರುವ ಆ ಮಹಾತ್ಮನ ಹೆಸರು ಬಸವನೆಂದು. ಆ ಸಾಕ್ಷಾತ್ ಬಸವೇಶ್ವರನು ನಿಮಗೆ ಮುಖ್ಯಮಂತ್ರಿಯಾದರೆ ನಿಮ್ಮ ಸಾಮ್ರಾಜ್ಯಕ್ಕೆ ಕೊನೆಯೇ ಇಲ್ಲ ಕೇಳಿರಿ ಭೂಪಾಲರೇ.

ಬಿಜ್ಜಳ : ಮಂತ್ರಿಶ್ರೇಷ್ಠಾ, ಆ ಸಾಕ್ಷಾತ್ ಮಹಿಮಾಶಾಲಿಯಾದ, ಬಸವೇಶ್ವರನ ಅಗಮ್ಯ ವಾರ್ತೆಯನ್ನು ನಾನು ಮೊದಲೇ ನಮ್ಮ ಮಂತ್ರಿಶ್ರೇಷ್ಠರಾದ ಬಲದೇವ, ಸಿದ್ಧರಸರಿಂದಲೇ ಕೇಳಿದ್ದೆ. ಆ ಕಾರಣ, ಎನ್ನ ಭಾಗ್ಯನಿಧಿ ನಿಕ್ಷೇಪವನ್ನು, ಕಾಮಧೇನು – ಕಲ್ಪವೃಕ್ಷ – ಚಿಂತಾಮಣಿಗಿಂತಲೂ ಹೆಚ್ಚಾದ ಪರುಷದ ಖಣಿಯನ್ನು ತೀವ್ರವಾಗಿ ಆಲಸ್ಯಮಾಡದೆ ಕರೆದುಕೊಂಡು ಬನ್ನಿ. ತಿಳಿಯಿತೆ? ಆತನನ್ನು ಪರಮವೈಭವದಿಂದ ಒಡಗೂಡಿ ಬರುವಂಥವರಾಗಿ ಹೋಗಿರಿ.

ಮಂತ್ರಿ : ಮಹಾರಾಜಾ, ತಮ್ಮ ಅಪ್ಪಣೆಯಂತೆ ಆ ಸಾಕ್ಷಾತ್ ವೀರಾಧೀವೀರ, ಶಿವಮತೋದ್ಧಾರ, ಸಂಗಮೇಶ್ವರನ ಭಕ್ತನಾದ ಶ್ರೀಗುರು ಬಸವೇಶ್ವರನನ್ನು ವೈಭವಪೂರ್ವಕವಾಗಿ ಕರೆದುಕೊಂಡು ಬರುವುದಕ್ಕೆ ಈಗಿಂದೀಗಲೇ ಸಂಗಮೇಶ್ವರ ಕ್ಷೇತ್ರಕ್ಕೆ ಹೋಗುತ್ತೇನೆ.

ಬಿಜ್ಜಳ : ಸೇನಾಧೀಶ ಮೊದಲಾದವರೇ, ಆ ಸಾಕ್ಷಾತ್ ಬಸವರಾಜದೇವರು ಬರುವ ಮಾರ್ಗದಲ್ಲಿ, ಪಟ್ಟಣ ಯಾವತ್ತೂ ತೋರಣಗಳಿಂದಲೂ, ಕಂಬಸ್ಥಂಭಗಳಿಂದಲೂ, ನಾರಿಕೇಳಾದಿಗಳಿಂದಲೂ, ಘಮ–ಘಮಿಸುವ ಪುಷ್ಪಗಳಿಂದಲೂ, ಮುತ್ತಿನಗುಚ್ಛಗಳಿಂದಲೂ ಸಿದ್ಧಪಡಿಸಿ ಮತ್ತು ಎಲ್ಲ ಸೈನಿಕರು ಶಿಸ್ತಿನಿಂದಲೂ, ಅಲ್ಲಿಗಲ್ಲಿಗೆ ಕಾವಲು ನಿಂತಿರಬೇಕು. ಸರ್ವ ಬೀದಿಗಳಲ್ಲಂತೂ ಸುವಾಸನೆಯ ಪನ್ನೀರಿನಿಂದ ಸಳಿಯನ್ನು ಹಾಕಿಸಬೇಕು. ಇದಲ್ಲದೆ, ಸಮಸ್ತ ಓಲಗದವರು ಶ್ರೀ ಬಸವೇಶ್ವರನ ಮಹೋತ್ಸವ ಕಾಲದಲ್ಲಿ ಮಾತ್ರ ಬಸವರಾಜ ಬಹುಧೀರ ಎಂಬ ಜೈಘೋಷ – ಪರಾಕದಲ್ಲಿಯೇ ತೊಡಗಿರಬೇಕು. ಯಾವುದಕ್ಕೂ ಕೊರತೆಯುಂಟಾಗದಂತೆ ನೋಡಿಕೊಳ್ಳಿ. ನಿಮ್ಮ ಯೋಗ್ಯತೆಯನ್ನು ಹೆಚ್ಚಿಸಿ, ಜಾಗ್ರತಿಯಿಂದ ಈ ಕಾರ್ಯವನ್ನು ನೆರವೇರಿಸಿರಿ.

ಸೇನಾಧೀಶ: ಸತ್ಯಸಂಧನಾದ ಬಿಜ್ಜಳ ಭೂಪತಿಯೇ ಕೇಳು. ನಿನ್ನ ಆಜ್ಞೆಯಂತೆ ಸಾಕ್ಷಾತ್ ಶ್ರೀ ಬಸವಪ್ರಭುಗಳು ಬರುವಮಾರ್ಗದಲ್ಲಿ ನವರತ್ನ ನಿರ್ಮಿತವಾದ ಮಂಟಪವನ್ನು ರಚಿಸಿ. ಬೀದಿಯಲ್ಲಿ ಪನ್ನೀರಿನ ಛಳಿಯನ್ನು ಹೊಡಿಸಿ, ಮಕರಂದದ ಸುವಾಸನೆಯನ್ನು ಏರ್ಪಡಿಸುವುದಕ್ಕಾಗಿ ನಾನೇ ಮುದ್ದಾಂ ನನ್ನ ಕಾಲ್ಬಲ ತೆಗೆದುಕೊಂಡು ಶ್ರೀಗುರು ಗುದಿನೇಶ್ವರನನ್ನು ಧ್ಯಾನಿಸುತ್ತಲೇ ಹೋಗುವೆನು.

ಕೊಂಡೆಮಂಚಣ್ಣ : ಮಹಾನ್, ತಮ್ಮ ಅಪ್ಪಣೆಯಂತೆ ಎಲ್ಲಾ ಕೆಲಸಗಳನ್ನು ಸರಿಯಾಗಿ ಮಾಡಿಸಿರುವೆವು. ಪ್ರಭೂ ಆ ಶೃಂಗರಿಸಿದ ಶೃಂಗಾರ ಮಾರ್ಗವನ್ನು ನೋಡುವ ನಿಮಿತ್ಯ ತಾವೇ ದಯಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬಿಜ್ಜಳ ಅರಸ : ಆಗಲಿ ಹಾಗಾದರೆ ಹೋಗುವಾ ನಡೆಯಿರಿ.

(ಸಂಗಮೇಶ್ವರ ಕ್ಷೇತ್ರ)

ಬಸವ : ಭೋ, ಗುರುನಾಥ ನಿನ್ನ ನಾಮಾಮೃತದಿಂದಲೇ ಧನ್ಯನಾಗಿರುವೆ. ಸ್ವಪ್ನದಲ್ಲಿಯೂ ಯಾವುದೇ ಭಯವಿಲ್ಲ. ಶಂಭೋ ಶಂಕರಾ, ಯಾಕೋ ಎನ್ನ ಬಲನೇತ್ರವು, ಬಲಭುಜವು ಹಾರುತ್ತಲಿವೆ. ಏನು ಶುಭಕಾರ್ಯಗಳಿರಬಹುದು? ಛೇ ! ಮೂರ್ಖಮನಸ್ಸೇ, ಗುರುನಾಮ ಸ್ಮರಣೆಗಿಂತಲೂ ಹೆಚ್ಚಿನ ಶುಭಕಾರ್ಯಗಳಿರುವವೇ? ಇಲ್ಲ ಒಳ್ಳೆಯದು, ಜ್ಞಾನದೃಷ್ಟಿಯಿಂದ ನೋಡುತ್ತಿರಲಾಗಿ, ಕಲ್ಯಾಣಪಟ್ಟಣದ ಬಿಜ್ಜಳ ಮಹಾರಾಜರ ಮಂತ್ರಿಯವರು ಬರುವಂತೆ ತೋರುತ್ತದೆ. ಒಳ್ಳೆಯದು, ಬರಲಿ. ನಾವು ಈ ರಂಗಮಂಟಪದಲ್ಲಿ ವಿಶ್ರಾಂತಿ ಹೊಂದುವಾ.

ಮಂತ್ರಿ : ಆಹಾ ಶ್ರೀಗುರು ಸಂಗಮೇಶ್ವರರ ಕ್ಷೇತ್ರವು ಎಷ್ಟು ವಿಶಾಲವಾಗಿ ತೋರುತ್ತದೆ. ಇಂಥಾ ಕ್ಷೇತ್ರ ನೋಡುವವರೇ ಧನ್ಯರು. ಬಸವೇಶ್ವರನ ಉದ್ದೇಶದಿಂದ ನಾನು ಈ ಸಂಗಮೇಶ್ವರ ಕ್ಷೇತ್ರವನ್ನು ಕಂಡೆನು. ಬಸವೇಶ್ವರನ ದರ್ಶನಕ್ಕೆ ಗರ್ಭಾಲಯದತ್ತ ಸಾಗುತ್ತೇನೆ. ಬಸವಾ ನಮೋ ನಮಃ ಬಸವೇಶ್ವರ ನಿನ್ನ ದಿವ್ಯ ಚರಣಾರವಿಂದಕ್ಕೆ ಶಿರಸಾಷ್ಟಾಂಗ ನಮಸ್ಕಾರ. ಬಿನ್ನಹ –

ಬಸವ : ಧನ್ಯ ಧನ್ಯ ಮಹನೀಯರೇ, ನಿಮಗೆ ಜಯವಾಗಲಿ. ಈ ಯೋಗ್ಯಸ್ಥಾನಕ್ಕೆ ವಿಶ್ರಮಿಸಿರಿ.

ಮಂತ್ರಿ : ಬಸವರಾಜರೇ ತಮ್ಮಾಜ್ಞೆಯೇ ಯನಗೆ ಮಾನ್ಯ. ವಿಶ್ರಮಿಸುವೆ.

ಬಸವ : ಮಹನೀಯರೇ ತಾವು ಯಾರು? ತಮ್ಮ ಹೆಸರೇನು? ದೇಶ ಯಾವುದು? ಇಲ್ಲಿಗೆ ಬರಲಿಕ್ಕೆ ಕಾರಣವೇನು? ಕಥನಮಾಡಿರಿ. ತಮ್ಮ ಕಾರ್ಯವನ್ನು ಪೂರ್ಣಮಾಡುವೆನು.

ಮಂತ್ರಿ : ಬಸವರಾಜರೇ ತಮ್ಮನ್ನು ಕರೆದುಕೊಂಡು ಬರುವುದಕ್ಕೆ ಕಲ್ಯಾಣಪಟ್ಟಣದ ದೊರೆಯಾದ ಬಿಜ್ಜಳ ಮಹಾರಾಜರ ಅಪ್ಪಣೆಯಾಗಿದೆ. ಮಂತ್ರಿಪಟ್ಟಕ್ಕೆ ಆಶ್ರಯವಾಗಬೇಕಿದೆ. ಆದ್ದರಿಂದ, ತಡ ಮಾಡಬೇಡಿರಿ. ಈ ದಿವ್ಯತರವಾದ ಆಭರಣಗಳನ್ನು ತೆಗೆದುಕೊಳ್ಳಿರಿ. ಈ ರತ್ನಖಚಿತವಾದ ಆಭರಣದಿಂದ ಶೃಂಗಾರ ಮಾಡಿದ ಆನೆಯನ್ನು ಹತ್ತಿರಿ. ಕಲ್ಯಾಣ ಪಟ್ಟಣಕ್ಕೆ ಹೋಗುವಾ.

ಬಸವ : ದಯಾಸಾಗರನಾದ ಸಂಗಮೇಶ ನಿನ್ನ ಅಪ್ಪಣೆಯಂತೆ ಅವತರಿಸಿದೆನು. ಆದರೆ ಭಕ್ತಿ–ಜ್ಞಾನ–ಸದಾಚಾರ–ಸದ್ಗುಣಗಳನ್ನು ನೀವೇ ನಾನಾಗಿ ಪ್ರಕಟಿಸಬೇಕು. ನೀನು ನನಗೆ ಗುರುವಾಗಿ, ಲಿಂಗವಾಗಿ, ಜಂಗಮವಾಗಿ ಪ್ರಸಾದವನ್ನು ಕೊಡುತ್ತ, ನನ್ನ ಪ್ರಾಣಸ್ವರೂಪನಾಗಿ ನನ್ನ ಜೊತೆಗೆ ನೀನಿರಲೇಬೇಕು. ಈ ಸಮಯದಲ್ಲಿ ಕಲ್ಯಾಣದ ಮಂತ್ರಿ ಪಟ್ಟಕ್ಕೆ ನಿನ್ನ ಹೆಸರೇ ಸೂಚಿಸಲಾಗಿದೆ. ತಮ್ಮ ಅಪ್ಪಣೆಯಂತೆ ನಾನು ಹೋಗುತ್ತೇನೆ. ಸಂಗಮೇಶ ಮಾನಾಭಿಮಾನವು ನಿನ್ನದೇ ಇರುತ್ತದೆ. ಮಂತ್ರಿವರ್ಯರೇ ಇನ್ನು ತಡವೇಕೆ? ಭೋಜನವನ್ನು ತೀರಿಸಿಕೊಂಡು ಕಲ್ಯಾಣಪಟ್ಟಣಕ್ಕೆ ಹೋಗುವಾ ನಡೆಯಿರಿ.

ಮಂತ್ರಿ : ಹೋಗುವಾ ನಡೆಯಿರಿ.

ಬಿಜ್ಜಳನ ಪದ :

ಬಾರೈ ಬಸವನೇ ಶಶಿಧರ ರೂಪನೇ ।
ಚಾರು ಚರಣಕೆ ನರಸುರವಂದಿತ ।
ಹರಗಣ ಪೂಜಿತ ಧರುಣಿಯನು ಧರಿಸು ॥

ಬಿಜ್ಜಳ : ಮಹಾ ಬಸವೇಂದ್ರಾ ವಂದಿಸುತ್ತೇನೆ.

ಬಸವ : ನಿನಗೆ ಕುಬೇರ ವರ್ಧನಾಡ್ಯೋ ಭವ ।

ಮಂತ್ರಿ : ಮಹಾ ಬಸವೇಶ್ವರರೇ ನಮಸ್ಕರಿಸುತ್ತೇನೆ.

ಬಸವ : ಮಂತ್ರಿವರ್ಯ ನಿನಗೆ ಚಿರಾಯುರ್ಭವಃ

ಕೊಂಡೆಮಂಚಣ್ಣ: ಬಸವರಾಜರೇ ನಮಸ್ಕರಿಸುವೆ.

ಬಸವ : ಮಂಚಣ್ಣಪ್ರಧಾನರೇ ನಿಮಗೆ ಕಲ್ಯಾಣೋದ್ಭವಃ

ಸೇನಾಧೀಶ: ಬಸವಪ್ರಭುಗಳೇ ತಮ್ಮ ಪಾದಕ್ಕೆ ನಮಸ್ಕಾರ.

ಬಸವ : ಸೇನಾಧೀಶರೇ ನಿಮಗೆ ಮಂಗಲೋದ್ಭವಃ,

ಬಿಜ್ಜಳ : ಭೋ ಯನ್ನ ಮಾನಸಾಂಬುಧಿ ಚಂದ್ರನೇ, ನವರತ್ನದಿಂದ ನಿರ್ಮಿತವಾದ ಸಿಂಹಾಸನಕ್ಕೆ ಮಂಡಿಸಿರಿ.

ಬಸವ : ತಥಾಸ್ತುಃ ಅಲಂಕರಿಸುವೆ, ತಾವು ಮಂಡಿಸಿರಿ.

ಬಿಜ್ಜಳ : ಪ್ರಧಾನಶ್ರೇಷ್ಠಾ ಮಲ್ಲಿಗೆ, ಜಾಜಿ, ಸಂಪಿಗೆ, ನೈದಿಲೆ ಮೊದಲಾದ ಪುಷ್ಪಗಳಿಂದೊಪ್ಪುವ ಪುಷ್ಪಮಾಲೆಯನ್ನು ತೆಗೆದುಕೊಂಡು ಬಾ.

ಮಂತ್ರಿ : ಅಪ್ಪಣೆ ಮಹಾನ್ ಪ್ರಭುಗಳೇ, ತಂದಿರುವೆನು. ಈ ಪುಷ್ಪಮಾಲೆಯನ್ನು ತೆಗೆದುಕೊಳ್ಳಿರಿ.

ಬಿಜ್ಜಳ : ಭೋ ದೇವತಾಮಹಾತ್ಮನೇ ತಮ್ಮ ಶ್ರೇಷ್ಠವಾದ ಬಸವ ಬಸವ ಎಂಬುವ ನಾಮಾಂಕಿತದ ಪುಷ್ಪಮಾಲಿಕೆಯು ತ್ರೈಜಗತ್ಯದ ತುಂಬಾ ಹಬ್ಬಲೆಂದು ತಮ್ಮ ಕೊರಳೊಳು ಈ ಪುಷ್ಪ ಮಾಲೆಯನ್ನು ತಮ್ಮ ಶ್ರೀ ಸಂಗಮೇಶನನ್ನು ಧ್ಯಾನಿಸುತ್ತಾ ಧರಿಸುತ್ತೇನೆ. ಪೂಜ್ಯರೇ ಸ್ವೀಕರಿಸಬೇಕು.

ಬಸವ : ಭೂಪಾಲರೇ ತಮ್ಮ ಯಶಸ್ಸು ತ್ರೈಲೋಕಕ್ಕೂ ಕೀರ್ತಿ ಹೊಂದಲೆಂದು ಜಯಲಕ್ಷ್ಮಿಯು ನಿಮ್ಮಲ್ಲಿಯೇ ಸದಾವಕಾಲ ಇರಲೆಂದು, ಈ ಕಲ್ಯಾಣನಗರವು ಸಾಕ್ಷಾತ್ ಶಿವನ ಕೈಲಾಸವೋ ಎಂಬಂತೆ ಆಗಲೆಂದು ಶ್ರೀ ಸಂಗಮನಾಥನನ್ನು ಕುರಿತು ಬೇಡಿಕೊಳ್ಳುತ್ತೇನೆ.

ಬಿಜ್ಜಳ : ಬಸವರಾಜರೇ ತಮ್ಮ ದರ್ಶನದಿಂದ ಧನ್ಯನಾದೆ. ಜಗತ್ತಿನಲ್ಲಿ ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲದಂತಾಯಿತು. ನಿನ್ನ ದರ್ಶನದಿಂದ ಕುಲಕೋಟಿ ಉದ್ಧಾರವಾಯಿತು. ಬಸವ ಈಗ ನಿಮ್ಮ ದರ್ಶನದ ಕಟಾಕ್ಷದಿಂದ ಎನಗೆ ಏನಾಯಿತೆಂದರೆ, ಇಂದುವನ್ನು ಕಂಡ ಅಂಬುಧಿಯಂತೆ, ದ್ರವ್ಯವನ್ನು ಕಂಡ ಬಡವನಂತೆ, ಸಾಧ್ವಿಯು ಪತಿಯನ್ನು ಕಂಡಂತೆ, ನನ್ನ ಜನ್ಮವು ಸಫಲವಾಯಿತು. ಆದರೆ, ಬಸವರಾಜರೇ ತಮ್ಮನ್ನು ಕುರಿತು ಹೀಗೆ ಬೇಡಿಕೊಳ್ಳುವೆ ಆಲಿಸಬೇಕು.

ಬಸವನೇ ಬಸವನೇ ವಸುಧಿಯ ರಕ್ಷಿಸು ।
ಪಶುಪತಿ ಅವತಾರ ಹಸನಾಗಿ ಮಂತ್ರಿಯ ।
ಕಾರಭಾರ ಮಾಡುತ। ಪಸರಿಸು ನೀ ಬೇಗ ॥

ಬಿಜ್ಜಳ : ಭೋ ಬಸವೇಶ್ವರನೇ, ಅಜ್ಞಾನವೆಂಬ ಅಂಧಕಾರಕ್ಕೆ ಭಾಸ್ಕರನೇ ಜ್ಞಾನಾಂಬುಧಿಗೆ ಉಡುರಾಜನೆ, ತ್ರೈಭುವನಕ್ಕೆ ಪ್ರಸಿದ್ಧರಾಗಿ ಈ ಐವತ್ತಾರು ದೇಶಾಧೀಶರನ್ನು ಗದ್ಗದನೇ ನಡುಗಿಸುತ್ತಾ ದೇವತಾ ಸ್ವರೂಪನಾಗಿ, ಯಾವತ್ತೂ ಮಂತ್ರಿಗಳಿಗೆ ಸಿಖಾಮಣಿಯಾಗಿ, ಸದ್ಧರ್ಮದಿಂದಲೇ ರಾಜಪರಿಪಾಲನೆಯಂ ಹೊತ್ತು ಮೆರೆದಂಥ ನಿಮ್ಮ ಮಾವನವರಾದ ಬಲದೇವ ಮಂತ್ರಿಗಳು ಮತ್ತು ಅವರ ಅನುಜರು ಸಹ ಸ್ವರ್ಗಸ್ತರಾದರು. ಅವರಂತೆ ನೀವು ಜಗತ್ಪ್ರಸಿದ್ಧರಾಗಿರಿ. ಧಾತರೆನಿಸಿಕೊಂಡು ಪ್ರಜೆಗಳನ್ನು ಮಕ್ಕಳಂತೆ ರಕ್ಷಿಸಿ, ಈ ಪ್ರಧಾನ ಪಟ್ಟವನ್ನು ವಹಿಸಿ, ವಿಶಾಲವಾದ ಕೀರ್ತಿಯನ್ನು ಪಡೆದುಕೊಳ್ಳುವ ಭಾರವು ತಮ್ಮದೇ ಆಗಿರುತ್ತದೆ. ಬಸವನೇ ಓಂ ಬಸವನೇ ನಿಮ್ಮನ್ನು ಎಷ್ಟು ಕೊಂಡಾಡಿದರೂ ನನ್ನ ಮನಸ್ಸಿಗೆ ಸಾಕಾಗುವಂತಿಲ್ಲಾ ಬಸವನೇ, ತಮಗೆ ಬೇಡಿಕೊಳ್ಳುವುದು ಇಷ್ಟೆ.

ಬಸವ : ರಾಜೇಂದ್ರನೇ, ಸಕಲ ಲೋಕವನ್ನು ಪರಿಪಾಲಿಸುವ ಪರಶಿವನಿಗೆ ನಿನ್ನ ಪಾಲನೆಯೆಂಬುದು ಎಷ್ಟು ಮಾತ್ರದ್ದು. ಶಿವಭಕ್ತರಲ್ಲಿ ಅಹಂಕಾರವನ್ನು ತೋರಿಸದೆ, ನಯ-ವಿನಯ, ಭಯ-ಭಕ್ತಿಯಿಂದಲೇ ವರ್ತಿಸು. ಅಂದರೆ ಪರಶಿವನು ನಿನ್ನನ್ನು ಕಾಪಾಡುತ್ತಾನೆ. ಶಿವಭಕ್ತರು ಬಹು ಸಮರ್ಥರಿರುತ್ತಾರೆ. ಕಾರಣ, ನೀನು ಅವರಲ್ಲಿ ಭಕ್ತಿಯನ್ನು ವಹಿಸು. ಶಿವಭಕ್ತರಲ್ಲಿ ಭಕ್ತಿಯನ್ನು ದುರ್ಜನರಲ್ಲಿ ಶಿಕ್ಷೆಯನ್ನು ಸದಾ ಮಾಡುತ್ತಲೇ ಇರು. ಈ ವಿಷಯದಲ್ಲಿ ಪರಶುರಾಮ-ವಿಶ್ವಾಮಿತ್ರ-ದುರ್ವಾಸರ ವ್ಯಾಪಾರವೇ ಪ್ರಮಾಣವೆಂದು ತಿಳಿ.

(ಇದ್ದಕ್ಕಿದ್ದಂತೆ ಶಿವ ಲಿಪಿಯ ಕಟ್ಟೊಂದು ಬೀಳುತ್ತದೆ ಆಸ್ಥಾನದಲ್ಲಿ)

ಕೊಂಡೆಮಂಚಣ್ಣ : ಆಹಾಃ ಇದೇನು ಚಮತ್ಕಾರವು! ಸೂರ್ಯಪ್ರಕಾಶವಾದ ಲಿಪಿಯು ಆಕಾಶಮಾರ್ಗದಿಂದ ಧುಮುಕಬೇಕಾದರೆ ಏನಿರಬಹುದು? ಶಿವಶಿವ ಒಳ್ಳೆಯದು ಮುಂದೆ ತಾನೇ ಗೊತ್ತಾಗುತ್ತದೆ. ರಾಜರೇ ಕೋಲ್ಮಿಂಚಿನಂತೆ ಪ್ರಕಾಶವಾದ ಈ ಲಿಪಿಯು ಆಕಾಶಮಾರ್ಗದಿಂದ ಬಿದ್ದಿರುವುದು ತೆಗೆದುಕೊಳ್ಳಿರಿ, ಏನು ಚಮತ್ಕಾರವು ಓದಿರಿ.

ಬಿಜ್ಜಳ : ಆಹಾಃ ಪ್ರಧಾನ, ಏನು ಚಮತ್ಕಾರವು, ಸೂರ್ಯ ಪ್ರಕಾಶವನ್ನು ತಿರಸ್ಕರಿಸುವ ಈ ಲಿಪಿ ಆಕಾಶಮಾರ್ಗದಿಂದ ಭಯಂಕರವಾಗಿ ಧುಮುಕಬೇಕಾದರೆ, ಏನಿರಬಹುದು? ಒಳ್ಳೆಯದು, ಮಂಚಣ್ಣನವರೇ ಈ ಲಿಪಿಯನ್ನು ಮಂತ್ರಿಯವರಿಗೆ ತೋರಿಸು.

ಮಂಚಣ್ಣ : ಮಂತ್ರಿವರ್ಯರೇ ಈ ಲಿಪಿಯನ್ನು ಸ್ವೀಕರಿಸಿ, ಇದನ್ನು ಓದುವುದು ತಮಗೂ ಅಸಾಧ್ಯವೇ ಸರಿ.

ಮಂತ್ರಿ : ಆಹಾಃ ಇದು ಏನು ಚಮತ್ಕಾರವು !. ಈ ಲಿಪಿಯನ್ನು ಓದಬೇಕಾದರೆ, ತ್ರಿಮೂರ್ತಿಗಳಿಗೆ ಸಾಧ್ಯವೇ? ಸರಿ, ಅಂದ ಬಳಿಕ ನಮ್ಮಂಥ ಯಕಶ್ಚಿತಮತಿಗಳಿಗೆ ಅಸಾಧ್ಯವೇ ಸರಿ. ಮಹಾರಾಜರೇ ಇದು ಶಿವ ಲಿಪಿಯು. ಇದನ್ನು ಓದುವುದು ನಮ್ಮಂಥವರಿಗೆ ಸಾಧ್ಯವೇ? ದೇವತೆಗಳ ಬರಹವೇ ಇರುತ್ತದೆ. ಮಹಾರಾಜರೇ ಇದನ್ನು ತಾವೇ ತೆಗೆದುಕೊಳ್ಳಬಹುದು.

ಬಿಜ್ಜಳ : ಆಹಾಃ ಏನು ಆಶ್ಚರ್ಯದ ಲಿಪಿಯೋ ಇದು. ಈ ಲಿಪಿಯು ಎಷ್ಟು ಪ್ರಕಾಶವೋ, ಈ ಎಲ್ಲ ಸಭಿಕರನ್ನು ಮೂರ್ಛೆಗೊಳಿಸಿತು. ಆಹಾ, ಪೂರ್ವಾದ್ರಿಯಲ್ಲಿ ಉದಿಸಿದ ದಿನಕರನ ಸಹಸ್ರ ಕಿರಣವೋ ಏನು ಸಾಕ್ಷಾತ್ ಸದ್ಧರ್ಮ ಮೂರ್ತಿ ಈ ಬಸವೇಶ್ವರನು ಮುಹೂರ್ತಗೊಂಡಿರುವನೆಂಬ ಉದ್ದೇಶದಿಂದ ಪರಮೇಶ್ವರನು ತನ್ನ ಆಶೀರ್ವಾದಯಂಬ ಕಟಾಕ್ಷವನ್ನು ಬಸವನ ಮೇಲೆ ಬೀರಿರುವ ಛಾಯೆಯೋ, ಏನೋ ತಿಳಿಯದು. ಆಹಾಹಾ, ಈ ಶಿವಲಿಪಿಯು ಆಕಾಶಮಾರ್ಗದಿಂದ ಧುಮುಕಬೇಕಾದರೆ, ಏನೋ ಒಂದು ಅಗಮ್ಯವಾದ ಮಹತ್ವವಿದ್ದಂತೆ ತೋರುತ್ತದೆ. ಅಯ್ಯೋ ಏನು ಸೋಜಿಗದ ಲಿಪಿಯೋ, ಮಂತ್ರಿವರ್ಯಾ, ಈ ಬರಹವನ್ನು ಓದುವುದು ನನಗೂ ಅಸಾಧ್ಯವೇ ಸರಿ. ಇದು ತ್ರಿಮೂರ್ತಿಗಳ ಬರಹವೇ ಇರುವುದು. ಕಾರಣ, ನಮ್ಮ ಪಟ್ಟಣದಲ್ಲಿರುವ ಎಲ್ಲ ಮಹಾನ್ ಪಂಡಿತರಾದ ಬ್ರಾಹ್ಮಣರನ್ನು ತೀವ್ರ ಕರೆಸುವಂಥವನಾಗು.

ಮಂತ್ರಿ : ಮಂಚಣ್ಣನವರೇ ನಮ್ಮ ಪಟ್ಟಣದಲ್ಲಿರುವಂಥ ಮಾಧವ ಭಟ್ಟ ಕೇಶಂಭಟ್ಟ, ರಾಮಭಟ್ಟ, ಗೋವಿಂದ ಭಟ್ಟ, ಬಾಳಂ ಭಟ್ಟ ಮೊದಲಾದ ಸಮಸ್ತ ಪಂಡಿತರನ್ನು ಕರೆದುಕೊಂಡು ಬರುವಂಥವರಾಗಿರಿ.

ಮಂಚಣ್ಣ : ಅಪ್ಪಣೆ ಮಹಾನ್ ....

(ಪಂಡಿತರ ಪ್ರವೇಶ)

ಎಲ್ಲ ಪಂಡಿತರು : ಮಹಾರಾಜರೇ ತಮ್ಮ ಸಿಂಹಾಸನಕ್ಕೆ ವಂದಿಸುತ್ತೇವೆ.

ಬಿಜ್ಜಳ ರಾಜ : ಬನ್ನಿರಿ ಬನ್ನಿರಿ, ಮಹಾ ಪಂಡಿತರೇ, ನಿಮ್ಮ – ನಿಮ್ಮ ಯೋಗ್ಯಸ್ಥಾನಕ್ಕೆ ಮಂಡಿಸಿರಿ.

ಪಂಡಿತರು : ಒಳ್ಳೆಯದು ಮಹಾರಾಜರೇ ಮಂಡಿಸುತ್ತೇವೆ. ಮಹಾರಾಜರೆ ನಮ್ಮನ್ನು ಕರೆಸಿದ ಕಾರಣವಾವುದು? ಅಂಥ ಪ್ರಸಂಗವೇನಿರುವುದು? ಇದ್ದರೆ ಹೇಳಬಹುದು, ತಾವು ಸೂಚಿಸಿದ ಕಾರ್ಯವನ್ನು ತೀವ್ರವಾಗಿ ಮಾಡುವೆವು.

ಬಿಜ್ಜಳ ಅರಸ : ಪಂಡಿತರೇ ನೀವು ಎಲ್ಲ ಬರಹ ಬಲ್ಲವರು. ಅಂದ ಬಳಿಕ ಈ ಲಿಪಿಯನ್ನು ತೆಗೆದುಕೊಳ್ಳಿರಿ. ಓದಿರಿ, ಇದರ ವೃತ್ತಾಂತವನ್ನು ಚೆನ್ನಾಗಿ ತಿಳಿಸಿರಿ. ಪಂಡಿತರೆ ನಿಮಗೆ ಬಹು ಮರ್ಯಾದೆ ಮಾಡುವುದಲ್ಲದೆ ಇನಾಮು ಭೂಮಿಯನ್ನು ಸಹ ಹಾಕಿ ಕೊಡುತ್ತೇನೆ. ಇಲ್ಲದಿದ್ದರೆ, ಮೊದಲಿದ್ದ ಇನಾಮು ಭೂಮಿಯನ್ನು ಕಸಿದುಕೊಳ್ಳುವುದಲ್ಲದೆ, ಪ್ರಾಯಶ್ಚಿತ ಮಾಡಬೇಕಾಗಿ ಬಂದೀತು. ಮಾಧವಭಟ್ಟರೇ, ಮೊದಲು ಈ ಲಿಪಿಯನ್ನು ನೀವೇ ಓದಿರಿ.

ಮಾಧವ ಭಟ್ಟ : ತನ್ನಿರಿ ಮಹಾರಾಜರೇ, ಏನು ಆಶ್ಚರ್ಯದ ಸುದ್ದಿಯನ್ನು ಹೇಳುತ್ತೀರಿ? ಎಲ್ಲ ಲಿಪಿಬಲ್ಲವರ ಮುಂದೆ ಈ ಕಾಗದದ ಲಿಪಿಯನ್ನು ಓದುವುದು ಯಾವ ಘನವಾದ ಮಹತ್ವವು? ಆಹಾ, ಏನು ಆಶ್ಚರ್ಯದ ಲಿಪಿ ಇದು? ಎಲ್ಲ ಬರಹಗಳನ್ನು, ಸರ್ವದೇಶದ ಭಾಷೆಗಳನ್ನು ಆರು ಶಾಸ್ತ್ರಗಳನ್ನು, ಹದಿನೆಂಟು ಪುರಾಣಗಳನ್ನು ಮುಖೋದ್ಗತವಾಗಿ ಹೇಳುವ ಶಕ್ತಿ ನನಗುಂಟು. ಆದರೆ, ಈ ಲಿಪಿಯಲ್ಲಿ ಒಂದು ಶ್ರೀಕಾರ ಸಹ ತಿಳಿಯಲೊಲ್ಲದು. ಹರಹರಾ ನಾರಾಯಣಾ ನಾನೇನು ಮಾಡಲಿ? ರಾಜನಿಗೆ ಏನೆಂದು ಉತ್ತರ ಕೊಡಲಿ? ಪಂಡಿತ ಶಿಖಾಮಣಿ ಎನಿಸಿಕೊಂಡು ಅನರ್ಥವಾಯಿತು. ನಾರಾಯಣ ಗೋವಿಂದ ಭೋ, ಸಂಭಾವನೆಯನ್ನು, ಇನಾಂಭೂಮಿಯನ್ನು ಕಳೆದುಕೊಳ್ಳುವ ಹೊತ್ತು ಬಂದಿತು. ಶಿವಶಿವಾ ವಿಧಿಯು ನಮ್ಮನ್ನೇ ನೋಡುತ್ತಾ ಕೂತಿದ್ದೀತೆ? ಈ ಲಿಪಿಗೆ ಟಾಳಿ ಬಡಿದು ಹೋಗಲಿ. ಹಣಿ ಹಣಿ ಘಟ್ಟಿಸಿಕೊಂಡರೂ ಬರುವಂತಿಲ್ಲ. ರಾಮಭಟ್ಟರ ಕಡೆಗೆ ಕೊಟ್ಟರಾಯಿತು. ಅವರು ಅಹಂಕಾರದಿಂದ ಬಂದಿದ್ದರು ಭೇಷಾಯಿತು. ರಾಮಭಟ್ಟರೇ ಈ ಲಿಪಿಯನ್ನು ತಕ್ಕೊಳ್ಳಿರಿ,–

ರಾಮ ಭಟ್ಟ : ತನ್ನಿರಿ ಮಾಧವಭಟ್ಟರೇ, ನಿಮಗೆ ಆಗದ ಪತ್ರವು ನಮ್ಮಿಂದ ಸಾಧ್ಯವಾಗುತ್ತದೆಯೇ? ಆಗಲಿ ತನ್ನಿರಿ, ಓಹೋ ಈ ಪತ್ರವು ಮಾತ್ರ ನನಗಿಷ್ಟು ಓದಲು ಬರುವಂತಿಲ್ಲ. ನನ್ನ ದೃಷ್ಟಿ ಹರಿಯುತ್ತಿಲ್ಲ. ಓದಲಿಕ್ಕೆ ಬರುತ್ತಿಲ್ಲವೆಂದರೂ ಚಿಂತೆ ಇಲ್ಲ, ಸರ್ವಥಾ ಇದನ್ನು ಓದಲಿಕ್ಕಾಗುವುದಿಲ್ಲ. ಕೇಶಂಭಟ್ಟರ ಕಡೆಗೆ ಕೊಡುತ್ತೇನೆ. ಕೇಶಂಭಟ್ಟರೆ, ಇದನ್ನು ಹಿಡಿಯಿರಿ,--

ಕೇಶಂ ಭಟ್ಟ: ಓಹೋ ಹೋ, ಎನಗೆ ಈ ಪತ್ರ ಹಿಡಿದ ಕೂಡಲೇ ಕಣ್ಣಿಗೆ ಬಿಸಿಲ್‌ಗುದುರೆಯನ್ನು ಕಂಡಂತಾಯಿತು. ನಾವು ಮಾತ್ರ ಇಂಥದನ್ನು ಓದುವಲ್ಲಿ ಜಾಣರಲ್ಲ. ಎಂಥಾದ್ದರಲ್ಲಿ ನಾವು ಜಾಣರೆಂದರೆ, ಕಡುಬು, ಕಜ್ಜಾಯ, ಹೋಳಿಗಿಯನ್ನು ಗಡದ್ದಾಗಿ ಹೊಡೆದು, ಡೊಣ್ಣೆ ತುಂಬಿದ ತುಪ್ಪದಿಂದ ಚಂಡಿಕೆಯ ಮೇಲೆ ಕೈಯಾಡಿಸಿ, ಎದ್ದೆದ್ದಿ ಹೊಡೆಯುದಷ್ಟೇ ಬಲ್ಲೆವು. ಈ ಲಿಪಿಯನ್ನು ಮಾತ್ರ ನಮ್ಮ ಸಮೀಪಕ್ಕೆ ತರಬಾರದು. ಗೋವಿಂದಭಟ್ಟರ ಕಡೆಗೆ ಕೊಡಿರಿ. ಅವರು ನಿಪುಣರಿರುತ್ತಾರೆ. ಅವರು ಓದುತ್ತಾರೆ ಕೊಡಿರಿ.

ಗೋವಿಂದ ಭಟ್ಟ : ಓಹೋ ಭಟ್ಟರೇ, ಸರ್ವಥಾ ನಮ್ಮ ಸಮೀಪಕ್ಕೆ ತರಬಾರದು. ನಮ್ಮಿಂದ ಸರ್ವಥಾ ಓದುವುದು ಆಗುವುದಿಲ್ಲ. ಇನಾಮು ಭೂಮಿಯನ್ನು ಕಸಿದುಕೊಂಡರೂ ಚಿಂತಿಯಿಲ್ಲಾ. ಊರು ಬಿಡಿಸಿದರೂ ಚಿಂತಿಯಿಲ್ಲ. ನೀವೇನಾದರೂ ಮಾಡಿಕೊಳ್ಳಿರಿ. ನಿಮ್ಮಿಂದ ಆಗದಿದ್ದರೆ, ನಮ್ಮಿಂದಾಗದೆಂದು ರಾಜರಿಗೆ ತಿರುಗಿಕೊಡಿ. ಮರ್ಯಾದೆ ಹುಡುಕಿದರೆ, ಆಗುವುದೇನು? ಕೊಡ್ರಿ.

ಮಾಧವ ಭಟ್ಟ : ಪ್ರಭುಗಳೇ ಇದು ಶಿವಲಿಪಿಯು. ಇದನ್ನು ಬ್ರಹ್ಮ, ವಿಷ್ಣು, ರುದ್ರ, ಆದಿಶೇಷ, ಬ್ರಹಸ್ಪತಿ, ಷಣ್ಮುಖ, ಗಣಪತಿ ಇವರುಗಳಲ್ಲಿ ಯಾರಾದರೂ ಓದಬೇಕೇ ಹೊರತು, ಉಳಿದವರಿಂದ ಆಗಲಾರದು. ಮಹಾರಾಜರೇ ಈ ಭೂಮಿಯಲ್ಲಿ ಈ ಲಿಪಿಯನ್ನು ಯಾರು ಓದುವರು ! ಓದಿದರೋ, ಅವರ ವಚನದಂತೆ ನಾವು ನಡೆದುಕೊಳ್ಳುತ್ತೇವೆ. ಇದು ಸತ್ಯ ಸತ್ಯವೆನ್ನಿರಿ.

ಬಿಜ್ಜಳ : ಛೇ ಖೂಳಿನ ಪಂಡಿತರೆ, ನಿಮ್ಮ ಪಂಡಿತಗಿರಿಗೆ ಏನು ಮಾಡಬೇಕು? ನೀವು ಎರಡನೆಯವರ ಮನೆಯನ್ನು ಹಾಳು ಮಾಡುವ ಪಂಡಿತರು ಮಾತ್ರ. ಹೌದು, ಛೇ ಮೂರ್ಖ ಪಂಡಿತರೇ ಇಲ್ಲಿಯವರೆಗೆ ಬೇಕಾದಂಥ ರಸವತ್ತಾದ ಪಕ್ವಾನ್ನಗಳನ್ನು ಉಂಡು, ನನ್ನ ರಾಜಧಾನಿಯ ನಿಕ್ಷೇಪವನ್ನು ಹಾಳು ಮಾಡಿದಿರಿ. ಅರಣ್ಯ ಪಂಡಿತರೇ, ಪಂತೀಪಠಾಣರೇ ನಿಮಗೆ

ಕೊಟ್ಟ ಇನಾಮು, ದ್ರವ್ಯ ವ್ಯರ್ಥವಾಯಿತು. ಅಯ್ಯೋ ಭೋಜನಪ್ರಿಯ ಬ್ರಾಹ್ಮಣರೇ ಅಂದ ಹಾಗೆ ನಿಮ್ಮ ಅಂಗ ಪೌರುಷ ತಿಳಿದಂತಾಯಿತು. ನಿಮ್ಮನ್ನು ಇದೇ ಸಭೆಯಲ್ಲಿ ಮುಖಭಂಗಿತರನ್ನು ಮಾಡಿಸುವುದಲ್ಲದೆ, ಪರರಾಜ್ಯಕ್ಕೆ ದೂಡಿಸುತ್ತೇನೆ. ಸ್ವಲ್ಪ ತಡೆಯಿರಿ. ಒಳ್ಳೆಯದು, ಸಭಿಕರೇ ಈ ಆಶ್ಚರ್ಯಕರವಾದ ಶಿವಲಿಪಿಯನ್ನು ಯಾರು ಓದುತ್ತಾರೋ ಅವರಿಗೆ ನನ್ನ ರಾಜ್ಯದಲ್ಲಿ ಸರ್ವಾಧಿಕಾರವನ್ನು ಕೊಡುವುದಲ್ಲದೆ, ಅವರು ಬೇಡಿದ್ದನ್ನು ಒಪ್ಪಿಸುತ್ತೇನೆ. ಇದೂ ಅಲ್ಲದೆ, ಅವರಾಜ್ಞೆಯೇ ಎಲ್ಲರಿಗೂ ಮಾನ್ಯವೆಂದು ರಾಜ್ಯ ಹುಕುಂ ಠರಾವು ನೇಮಿಸಿ ಬಿಡುತ್ತೇನೆ. ಈ ನುಡಿಯು ನಿಶ್ಚಯವೆಂದು ತಿಳಿಯಿರಿ.

ಬಸವಣ್ಣ : ಶ್ರೀ ಗುರು ಸಂಗಮೇಶ್ವರನೇ ಇದೇನು ಈ ಸಭೆಯಲ್ಲಿ ಒಬ್ಬರಾದರೂ ಈ ಲಿಪಿಯನ್ನು ಓದುತ್ತೇವೆ ಎನ್ನುವಂಥ ದಾತರು ಇಲ್ಲವೇ ಇಲ್ಲ. ಗುರುನಾಥ ನಿನ್ನ ಅಂತಃಕರುಣದಿಂದ ಈ ಪತ್ರವನ್ನು ತೆಗೆದುಕೊಳ್ಳುತ್ತೇನೆ. ನೀನೇ ಕರುಣಿಸು. ಮಹಾರಾಜರೇ ಈ ಲಿಪಿಯನ್ನು ನಾನು ಓದುತ್ತೇನೆ.

ಬಿಜ್ಜಳ : ವ್ಹಾಹ್‌ವ್ಹಾ ಬಸವೇಶ, ನಿಮ್ಮ ಪರಮವಾಕ್ಯದಿಂದ ನಾನು ಧನ್ಯನಾದೆ. ಆನಂದಾಬ್ಧಿಯೊಳು ಮುಳುಗಿದಂತಾಯಿತು. ಮಹನೀಯನೇ ನಿನ್ನ ಪ್ರಕಾಶವು ತ್ರೈಜಗತ್ತಿಗೆ ಹಬ್ಬುತ್ತದೆಂದು ಕಂಡು ಬರುತ್ತದೆ. ನಿಮ್ಮ ನಸೀಬಾ ಬಸವೇಶಾ ಇಗೋ, ಈ ಲಿಪಿಯನ್ನು ತೆಗೆದುಕೊಳ್ಳಿರಿ, ಓದಿ ಹೇಳಿರಿ. ಓದಿದರೆ ಮಾತ್ರ ಪ್ರಧಾನ ಪಟ್ಟವನ್ನು ಒಪ್ಪಿಸುವುದಲ್ಲದೆ, ರಾಜಕೀಯ ಸಹ ಒಪ್ಪಿಸಲಿಕ್ಕೆ ಬಂದೀತು. ಆದರೆ, ಓದದಿದ್ದರೆ ಮಾತ್ರ, ರಾಜದಂಡನವನ್ನು ಮಾಡಬೇಕಾಗುತ್ತದೆ. ಬಹು ಹುಷಾರ್ ಇದು ಪರೀಕ್ಷೆಯ ಕಾಲ.

ಬಸವ : ಭೋ, ಗುರುಮೂರ್ತಿಯಾದ ಸಂಗಮೇಶ್ವರನೆ ನಿನ್ನ ಕರುಣ ಕಟಾಕ್ಷವು ಭಕ್ತರ ಮೇಲೆ ಪೂರ್ಣವಿರಲಿಕ್ಕಾಗಿ, ಯಾವುದಕ್ಕೂ ಸಂದೇಹವೇನು? ಈ ಲಿಪಿಯನ್ನು ಓದುವುದು ಅಗಾಧವೇ? ಮೊರಟದ ಬಂಕಯ್ಯ ಬಂಜೆಯಾದ ಹಸುವಿನಿಂದ ಹಾಲನ್ನು ಕರಿಯಲಿಲ್ಲವೇ? ಮತ್ತು ಪಶುವನ್ನು ಕಟ್ಟುವ ಗೂಟದಿಂದ ಬಿಲ್ವಪತ್ರಿಯನ್ನು ಕೊಯ್ದು ಕೊಡಲಿಲ್ಲವೆ? ನಮ್ಮ ಬಾಹೂರ ಬ್ರಹ್ಮಯ್ಯನವರು ಕಲ್ಲು ಬಸವನಿಗೆ ಕಬ್ಬನ್ನು ತಿನ್ನಿಸಲಿಲ್ಲವೇ? ಅಂದ ಬಳಿಕ ಶಿವಭಕ್ತರಿಗೆ ಅಸಾಧ್ಯವಾದ ಕಾರ್ಯಗಳಿರುವವೇ? ಗುರುನಾಥಾ ಈ ಕಾಲದಲ್ಲಿ ನೀನೇ ರಕ್ಷಿಸು.

ಮಾಧವ ಭಟ್ಟ : ಏನೋ ಬಸವನೇ ಈ ಲಿಪಿಯನ್ನು ನೀನು ಓದುವಿ ಏನು? ಛೇ ಛೇ ಇದು ಆಗದ ಮಾತು. ಯಾತಕ್ಕೆ ಆಡುವಿಯೋ ಶೈವನೇ? ನಿನ್ನಂಥ ಯಕಃಶ್ಚಿತ ಪೋರನಿಗೆ ಈ ಪತ್ರವನ್ನು ಓದಲಿಕ್ಕೆ ಬರುವುದೆ? ನಮ್ಮಂಥ ಸಕಲ ವೇದಾಂಗವನ್ನು ಬಲ್ಲಿದ ಪಂಡಿತರಿಗೆ ತಿಳಿಯದಂಥ ಈ ಲಿಪಿಯನ್ನು ನೀನು ಹೇಗೆ ಓದುತ್ತೀ? ಇದು ಹುಡುಗಾಟಿಯಾ? ಬಿಡೋ ಪೋರನೆ. ವೇದದ ಗುರುತು ಸ್ವಲ್ಪವಾದರೂ ನಿನಗೆ ಇರುವುದೇ? ಇಂಥ ಪಂಡಿತರ ಸಭೆಯಲ್ಲಿ ಹೇಗೆ ಓದುತ್ತೇನೆಂದು ಮಾತಾಡಿದೆಯೋ ಶೈವನೇ?

ರಾಮಭಟ್ಟ : ನೋಡ್ರಿ ಮಾಧವಭಟ್ಟರೇ, ಬಟ್ಟಿನಷ್ಟು ವಿಭೂತಿಯನ್ನು ಇಟ್ಟಾ ಕ್ಷಣವೇ ಬೆಟ್ಟದಷ್ಟು ಪದವಿ ಬಂದಂತಾಯಿತು. ಎಲೋ ಶೈವನೇ ಈ ಪತ್ರವನ್ನು ನೀನು ಓದುವಿಯಾ? ಓದುವ ನಿನ್ನ ಯೋಗ್ಯತೆ ನೋಡು. ಒಳ್ಳೆಯದು, ಓದು ನೋಡುವಾ. ನೋಡು, ನೋಡಿ ಮಾತಾಡು.

ಕೇಶಂ ಭಟ್ಟ : ಓಹೋ ಗೋವಿಂಧಭಟ್ಟರೇ, ಇವರಿಗಾದರು ಗೋವಿಂದನೆ ಸರಿ. ನಿಮ್ಮ ಹೆಸರಾದರೂ ಗೋವಿಂದ. ಇವರಿಗೂ ಗೋವಿಂದಾ. ಏನ್ರಿ ಪಂಡಿತರೇ ಇಂಥಾ ವೀರಶೈವರಿಗೆಲ್ಲಾ ಈ ಪತ್ರವು ತಿಳಿಯುವುದುಂಟೆ? ಛೇ, ಲಿಂಗಾಂಗಿಗಳೆನ್ನುವರು. ಯಾವುದೇ ಪಂಡಿತರು ಹಿಂದೆಯೂ ಇರಲಿಲ್ಲ ಮುಂದೆ ಈಗಿನ ಕಾಲದಲ್ಲಿಯೂ ಇಲ್ಲ. ಶಹಬ್ಬಾಶ್ ಎಲೋ ಬಸವನೇ, ನೀನು ಓದುತ್ತಿಯೋ, ಓದುವಂಥವನಾಗು. ಇಲ್ಲದಿದ್ದರೆ, ನೀನು ಆಡಿದ ವಚನದಂತೆ ನಡೆಯಬೇಕಾಗುತ್ತದೆ ನೋಡು.

ಗೋವಿಂದ ಭಟ್ಟ : ಓಹೋ ಮಾಧವಭಟ್ಟರೇ, ಕೇಶಂಭಟ್ಟರೇ, ಈ ಸಭೆಯಲ್ಲಿ ಮೂರ್ಖ ಬಸವನು ಈ ಲಿಪಿಯನ್ನು ಓದುತ್ತೇನೆಂದು ನಿಶ್ಚಯಿಸಿರುವನು. ಒಳ್ಳೆಯದು, ಇವನ ಕಡೆಯಿಂದ ಆಗುವುದಿಲ್ಲ. ಇವನನ್ನು ಮಾನಭಂಗ ಮಾಡಿಸಿ. ಇವನು ಹಿಂದೆ ಆಡಿದ ವಚನದಂತೆ ನಡೆಯುವ ಹಾಗೆ ಮಾಡೋಣ. ಏನಯ್ಯಾ ಬಸವೇಶ ಯಾತಕ್ಕೆ ಕುಳಿತಿರುವಿ? ಓದು ಲಿಪಿಯನ್ನು.

ಬಸವಣ್ಣ : ಎಲೋ ವಿಪ್ರರೇ, ಮನಸ್ಸಿಗೆ ಬಂದ ಹಾಗೆ ಆಳಿಗೊಂದರಂತೆ ಮಾತು ಯಾತಕ್ಕೆ ಮಾತಾಡುವಿರಿ? ಚತುರ್ವೇದ ಬಲ್ಲೆವೆಂದವರು ಓದಲಿಲ್ಲವೇಕೆ? ವೇದವನ್ನು ಓದಲು ಕಲಿಯುವುದು ಅಗಾಧವೇನು? ಮೂರ್ಖರೇ, ನಮ್ಮ ಶಿವಭಕ್ತರ ಮನೆಯ ದಾಸಿಯ ಎಂಜಲವನ್ನು ತಿನ್ನುವ ನಾಯಿಗಳು ಕೂಡ ವೇದವನ್ನು ಓದುತ್ತವೆ. ಗೊತ್ತಿಲ್ಲವೆ?

ನಮ್ಮ ಹಾವಿನ್ಹಾಳ ಕಲ್ಲಯ್ಯನವರು ನಾಯಿಯಿಂದ ವೇದವನ್ನು ಓದಿಸಲಿಲ್ಲವೇ? ಅಂದ ಬಳಿಕ, ವೀರಶೈವರು ಈ ಲಿಪಿಯನ್ನು ಓದುವದು ಆಶ್ಚರ್ಯವೇ? ವೀರಶೈವರಿಗೆ ಯಾವ ಕಾರ್ಯವು ಅಸಾಧ್ಯವಿರುವದು. ಸ್ವಲ್ಪ ತಡೆಯಿರಿ, ಎಲ್ಲಾ ಸಭಿಕರು ಕೇಳುವಂತೆ ಓದಿ ಹೇಳುತ್ತೇನೆ. ಭೂಪಾಲ ಮಣಿಗಳೇ ಈ ಶಿವಲಿಪಿಯಲ್ಲಿ ಬರೆದಿರುವುದು ಏನೆಂದು ಓದುತ್ತೇನೆ ಕೇಳಿರಿ, –

'ಶ್ರೀ ಮದ್‌ಜಗದ್ರಕ್ಷಕನ ಕಡೆಯಿಂದ ನಮ್ಮ ಶ್ರೀ ಮದ್‌ಭೂಪಾಲಮಣಿ ರಾಜಾಧಿರಾಜ ಕಲ್ಯಾಣ ಪಟ್ಟಕ್ಕೆ ಅರಸನಾದ ಬಿಜ್ಜಳ ಮಹಾರಾಜನಿಗೆ ಕೈಲಾಸವಾಸಿಯಾದ ಪರಶಿವನು ಬರೆದು ಕಳಿಸಿರುವ ಈ ಶಿವಲಿಪಿಯೇನೆಂದರೆ, – ಹಿಂದೆ ಚಾಲುಕ್ಯವಂಶಜರಾದ ರಾಜಾಧಿರಾಜರು ಈ ನಿನ್ನ ರತ್ನಖಚಿತವಾದ ಸಿಂಹಾಸನದ ಬುಡದಲ್ಲಿ ಎಂಬತ್ತು ಕೋಟಿ ದ್ರವ್ಯವನ್ನು ಹೂಳಿಟ್ಟಿರುವರೆಂದು ಈ ಲಿಪಿಯ ಗೂಢಾರ್ಥ ಇರುತ್ತದೆ. ಈ ದ್ರವ್ಯವು ಶಿವಭಕ್ತರಿಗೆ ವಶವಾಗುತ್ತದೆ. ತಿಳಿಯಿರಿ, ಇಷ್ಟೇ ಸರಿ. ಹೇಳತಕ್ಕದ್ದು ಮತ್ತೇನೂ ಇಲ್ಲ ಇಂತೀ ಆಶೀರ್ವಾದಗಳು

ಬಿಜ್ಜಳ: ವ್ಹಾಹ್ ಬಹಾದ್ದೂರ್ ಬಸವೇಶಾ, ನಿನ್ನ ಸಮಾನ ಪಂಡಿತರು ಈ ಬ್ರಹ್ಮಾಂಡದಲ್ಲಿರುವರೇ? ಈ ಲಿಪಿಯನ್ನು ಓದಬೇಕಾದರೆ, ಸಾಮಾನ್ಯವೇ? ದೇವತೆಗಳಲ್ಲಿ ಶ್ರೇಷ್ಠರಾದ ಗಣಪತಿ ಮೊದಲಾದವರಿಗೆ ಅಸಾಧ್ಯ. ಬಸವೇಶಾ, ನನ್ನ ರಾಜಕೀಯವೇ ನಿನ್ನದಾಯಿತು. ನಿನ್ನಂಥ ಮಹಾಬುದ್ಧಿಶಾಲಿಗೆ ಏನು ಕೊಟ್ಟರೂ ಸಾಲದು. ಇಂಥ ರಾಜಸಭೆಯನ್ನು ಗೆಲ್ಲುವ ವಿಷಯದಲ್ಲಿ ಶರಭನಾಗಿರಲಿಕ್ಕೆ ಇಂಥ ಮಾತಾಂಧ ಪಂಡಿತರು ಕೋಟಿ ಮಂದಿ ನಿಂದೆಯನ್ನಾಡುವರು. ಭಾಪ್ಪುರೇ ಬಸವರಾಜ ಪ್ರಭೂ ಈಗ ನನ್ನ ರಾಜಧಾನಿಯು ಹೇಗೆ ಒಪ್ಪಿರುವುದೆಂದರೆ, ಸ್ವರ್ಗಾಧೀಶನಾದ ದೇವೇಂದ್ರನ ಮಂತ್ರಿಶ್ರೇಷ್ಠನಾದ ಬ್ರಹಸ್ಪತಿಗಿಂತಲೂ, ವೃಷಭಪರ್ವನೆಂಬ ರಾಕ್ಷಸ ಅರಸನ ಸಭೆಯಲ್ಲಿರುವ ಮಂತ್ರಿಶ್ರೇಷ್ಠನಾದ ಶುಕ್ರಾಚಾರ್ಯರಿಗಿಂತಲೂ ಹೆಚ್ಚಾಗಿ ಒಪ್ಪುವಂಥದ್ದಾಯಿತು. ಬಸವಾ, ಸಮುದ್ರದ ಹಡಗಿನಲ್ಲಿ ಕೋಟಿ ಮಂದಿ ಇದ್ದರೂ, ನಾವಿಕನಿಲ್ಲದಿದ್ದರೆ ಹೇಗೆ ನಿಷ್ಪ್ರಯೋಜನವೋ ಹಾಗೆ ಈ ಬ್ರಾಹ್ಮಣರಿದ್ದು ಏನು ಮಾಡಬೇಕು? ನೀನೊಬ್ಬ ಚಂದ್ರನಿದ್ದರೆ ಸಾಕು, ಬಸವೇಶಾ ಭಕ್ತಿಕೋಶಾ.

ಎಲ್ಲಾ ಭಟ್ಟರು: ಓಹೋ ಮಹಾರಾಜರೇ, ಯಾಕೆ ಇವನ ಪ್ರತಾಪವನ್ನು ಮಾಡುತ್ತಿರುವಿರಿ? ಸ್ವಲ್ಪ ತಡೆಯಿರಿ. ಓದಿದಾಕ್ಷಣಕ್ಕೇ ಆಯಿತೆ? ವಿಚಾರ ಮಾಡಿರಿ. ಏನಯ್ಯಾ ಬಸವೇಶಾ ಈಗ ನೀನು ಸಿಂಹಾಸನದ

ಬುಡದಲ್ಲಿ ನಿಕ್ಷೇಪವಿದೆಯೆಂದು ಹೇಳಿದಿಯಲ್ಲಾ, ಇದು ಸುಳ್ಳಾದರೆ ಹೇಗೆ ಮಾಡುವೆ? ಓದಿದಂತೆ ಏಳು ಕೊಪ್ಪರಿಗೆ ಅಥವಾ ಎಂಬತ್ತು ಕೋಟಿ ದ್ರವ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸು. ಕಲ್ಪನೆ ಮಾಡಿ ಎಲ್ಲರಿಗೂ ಓದಲಿಕ್ಕೆ ಬರುತ್ತದೆ ತಿಳಿಯಿತೆ?

ಬಸವಣ್ಣ : ಮೂರ್ಖ ಪಂಡಿತರೇ, ಲಿಪಿಯನ್ನು ಓದಿ ಹೇಳಿದಂತೆ ನಿಕ್ಷೇಪವನ್ನು ತೋರಿಸಿದರೆ, ನೀವೇನು ಪಂಥ ಮಾಡುವಿರಿ? ಹೇಳಿರಿ.

ಪಂಡಿತ : ಒಳ್ಳೆಯದು, ಎಲೋ ಬಸವೇಶಾ, ನೀನು ನಿಕ್ಷೇಪವನ್ನು ಹೊರಪಡಿಸಿದರೆ, ನಾವೆಲ್ಲ ನಿಮ್ಮ ಮಾತಿನಂತೆಯೇ ನಡೆದುಕೊಳ್ಳುತ್ತೇವೆ ಇದೇ ನಮ್ಮ ಪಂಥ

ಬಸವಣ್ಣ : ಎಲಾ ವಿಪ್ರರೇ, ಶ್ರೀಮತ್ಪರಮಾತ್ಮನ ಅಪ್ಪಣೆಯಂತೆ ಬಂದ ಈ ಶಿವಲಿಪಿಯನ್ನು ನಾನು ಓದಿ ಹೇಳಿದಂತೆ ಈ ರಾಜ ಸಿಂಹಾಸನದ ಬುಡದಲ್ಲಿದ್ದ ಎಂಬತ್ತು ಕೋಟಿ ದ್ರವ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸದಿದ್ದರೆ, ನಾನು ನಿಮ್ಮ ಮಾತಿನಂತೆ ನಡೆದುಕೊಳ್ಳುತ್ತೇನೆ, ಇದೇ ನನ್ನ ಪಂಥ.

ಬಿಜ್ಜಳ : ಓಹೋ ಪಂಡಿತರೇ ಕೇಳಿರಿ, ಈ ಪತ್ರವನ್ನು ಓದಿದಂತೆ ಈ ಬಸವನು ಸಿಂಹಾಸನದ ಬುಡದಲ್ಲಿ ಎಂಬುತ್ತು ಕೋಟಿ ದ್ರವ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸಿದರೆ, ನೀವು ಆಡಿದಂತೆ ನಿಮ್ಮ ನೀವೆಲ್ಲರೂ ಬಸವನ ಮಾತಿನಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಸುಮ್ಮನೆ ಕೂಡ್ರಿ.

ಪಂಡಿತ : ಆಹಾ ದೊರೆಗಳೇ ನಿಶ್ಚಯ ನಿಶ್ಚಯ. ಇವನ ಮಾತಿನಂತೆ ನಡೆದುಕೊಂಡು ಶರಣಾಗತರಾಗುತ್ತೇವೆ. ಇದು ಗಟ್ಟಿ,

ಬಿಜ್ಜಳ : ಒಳ್ಳೆಯದು ಪಂಡಿತರು ನೀವು ಒಂದು ವೇಳೆ ಬಸವನ ಮಾತಿನಂತೆ ನಡೆಯದಿದ್ದರೆ ಏನು ಮಾಡಬೇಕು?

ಪಂಡಿತ: ಮಹಾರಾಜರೇ ನಾವು ಒಂದು ವೇಳೆ ಬಸವನ ಮಾತಿನಂತೆ ನಡೆಯದಿದ್ದರೆ, ರಾಜಶಿಕ್ಷೆಗೆ ಒಳಗಾಗುತ್ತೇವೆ.

ಬಿಜ್ಜಳ : ಏನಯ್ಯಾ ಬಸವೇಶಾ, ನೀನು ಓದಿದಂತೆ ಈ ರಾಜಸಿಂಹಾಸದ ಬುಡದಿಂದ ನಿಕ್ಷೇಪವನ್ನು ತೋರಿಸುವುದು ನಿಶ್ಚಯವೋ? ತೋರಿಸದಿದ್ದರೆ ಹೇಗೆ?

ಬಸವಣ್ಣ : ಮಹಾರಾಜರೇ ನಾನು ಓದಿ ಹೇಳಿದಂತೆ ದ್ರವ್ಯವನ್ನು ತೋರಿಸಿದಿದ್ದರೆ, ನಿಮ್ಮ ವಚನದಂತೆ ನಡೆದುಕೊಳ್ಳುತ್ತೇನೆ.

ಬಿಜ್ಜಳ : ಒಳ್ಳೆಯದು. ಬಸವಾ ನೀನು ಆ ಕಾಲಕ್ಕೆ ಮಾತಿನಂತೆ ನಡೆಯದಿದ್ದರೆ ಏನು ಮಾಡಬೇಕು?

ಬಸವ : ಪ್ರಭುಗಳೇ ನಾನು ಆ ಕಾಲಕ್ಕೆ ನಿಮ್ಮ ಮಾತಿನಂತೆ ನಡೆಯದಿದ್ದರೆ ರಾಜಶಿಕ್ಷೆಗೆ ಗುರಿಯಾಗುತ್ತೇನೆ.

ಬಿಜ್ಜಳ : ಹಾಗಾದರೆ, ಸರ್ವರೂ ಈ ಕಥಾಮಣಿಗೆ ಸಹಿ ಮಾಡಿರಿ.

(ಕಥಾಮಣಿಗೆ ಸರ್ವರೂ ಸಹಿ ಮಾಡುವರು)

ಬಸವ : ಮಹಾರಾಜರೇ, ತಾವು ಸಹಿ ಮಾಡಬೇಕು.

ಬಿಜ್ಜಳ : ನಾನು ಏಕೆ ಸಹಿ ಮಾಡಬೇಕು?

ಬಸವ : ನಂತರ ಸೋತವರನ್ನು ಶಿಕ್ಷೆ ನೀಡದೇ ಬಿಟ್ಟರೆ, ತಮಗೆ ಶಿಕ್ಷೆ ನೀಡಲಿಕ್ಕೆ.

ಬಿಜ್ಜಳ : ಬಸವೇಶಾ ಇದೇನು? ನನಗೂ ಶಿಕ್ಷೆ ಇರುತ್ತದೆಯೊ?

ಬಸವ : ಹೌದು ನಿಮಗೂ ಶಿಕ್ಷೆ ಇರುತ್ತದೆ.

ಬಿಜ್ಜಳ : ಹಾಗಾದರೆ, ಶಿಕ್ಷೆ ಕೊಡುವವರಾರು?

ಬಸವ : ಗುರು–ಹಿರಿಯರಾದ ದೈವದವರು ಅಥವಾ ಪಂಚರು.

ಬಿಜ್ಜಳ : ಒಳ್ಳೆಯದು, ನಾನೂ ಸಹಿ ಮಾಡುತ್ತೇನೆ.

ಬಸವ : ಈ ಕಥಾಮಣಿಯನ್ನು ಪಂಚರ ಕಡೆಗೆ ಕೊಟ್ಟು ಬಿಡಿ. ಅವರಲ್ಲಿಯೆ ಇರಲಿ.

ಬಿಜ್ಜಳ : ಹಾಗೇ ಆಗಲಿ ಬಸವೇಶಾ. ತಡವೇಕೆ? ನಿಕ್ಷೇಪ ತೋರಿಸು.

ಬಸವ : ಮಹಾರಾಜರೇ ಸಿಂಹಾಸನದಿಂದ ಇಳಿಯಿರಿ. ಎಲ್ಲರೂ ಸರಿದು ನಿಲ್ಲಿರಿ. ಭೋ ಗುರುನಾಥ ಸಂಗಮನಾಥ ನಿನ್ನ ಭಕ್ತರಿಗೆ ಯಾವ ಯಾವ ಕಾರ್ಯಗಳು ಸಾಧ್ಯವಿರುತ್ತವೆ? ಶಂಭೋ ಶಂಕರ ಈ ಸಿಂಹಾಸನದ ಬುಡದಲ್ಲಿ ನಾನು ಪ್ರತ್ಯಕ್ಷವಾಗಿ ನಿಕ್ಷೇಪವನ್ನು ತೋರಿಸದಿದ್ದರೆ, ನಾನು ವೀರಶೈವನೂ ಅಲ್ಲ ; ನಿನ್ನ ಭಕ್ತನೂ ಅಲ್ಲ. ಏನಾಶ್ಚರ್ಯವು ! ಎಲೋ ನಿಕ್ಷೇಪ ಮಹಾರಾಜರೇ ನಿಮ್ಮ ಅವತಾರವನ್ನು ತೋರಿಸಿ. ತೋರಿಸದಿದ್ದರೆ ನಿನಗೆ ಪರಿಣಾಮವಾಗಲಿಕ್ಕಿಲ್ಲ ತಿಳಿದು ನೋಡು, ಸುಟ್ಟು ಬಿಟ್ಟೇನು. ನಾನ್ಯಾರಿರುವೆ ಎಂಬುದನ್ನು ಮರೆತಿರುವಿಯೇನು? ಯಾಕೆ ಜಯಲಕ್ಷ್ಮಿಯೇ ಮಲಗಿರುವೆಯೇನು?

ಏಳು ಏಳು ಓಂದಕ್ಕೆ ನಿನಗಾದ ಪ್ರಾಯಃಶ್ಚಿತವನ್ನು ತಿಳಿದು, ಈಗ ಪ್ರತ್ಯಕ್ಷಳಾಗು. ಆಗದಿದ್ದರೆ, ನಿನ್ನನ್ನು ಭಕ್ಷಿಸಿಬಿಟ್ಟೇನು ಮೂಢಳೇ.

ಜಯಲಕ್ಷ್ಮಿ : ಭೋ ಶ್ರೀಗುರು ಬಸವ ಮಹಾರಾಜರೇ ನಿಮ್ಮ ಶ್ರೀಪಾದ ಕಮಲಕ್ಕೆ ಈ ದೀನಳು ಅಭಿವಂದಿಸುವೆ. ಮಗಳು ಮಾಡಿದ ಅಪರಾಧವನ್ನು ತಂದೆಯು ಕ್ಷಮಿಸಬೇಕು.

ಬಸವ : ವ್ಹಾಹ್‌ವಾ ಜಯಲಕ್ಷ್ಮಿಯೇ ಧನ್ಯಳಾದೆ. ಸ್ವಲ್ಪ ಅಡಗು ಅಡಗು. ಈ ಮೂರ್ಖ ಮಾನವರಿಗೆ ನಿನ್ನ ಮುಖಾವಲೋಕನ ಮಾಡಕೂಡದು. ಯಲ್ಯೆ ಸರ್ಪನೇ, ವ್ಯಾಘ್ರನೇ, ಮಹಿಷನೇ, ರಾಕ್ಷಸನೇ ಏಳಿರಿ, ಧನ್ಯರಾದಿರಿ ನನ್ನ ದರ್ಶನದಿಂದ ನಿಮ್ಮ ಶಾಪವು ವಿಮೋಚನವಾಯಿತು. ಗಂಧರ್ವ ಲೋಕವನ್ನು ಕುರಿತು ಗಮನಮಾಡಿರಿ. ಗುರು ಮಹಾರಾಜಾ ನಿನ್ನ ಅಂತಃಕರುಣವು ಭಕ್ತರ ಮೇಲೆ ಎಷ್ಟಿರುವುದು? ಕುಬೇರನ ನವನಿಧಿಯನ್ನೇ ತೋರಿಸಿಬಿಟ್ಟೆಯಲ್ಲಾ? ಮಹಾರಾಜರೆ, ಈ ಸಿಂಹಾಸನದ ಬುಡದಲ್ಲಿದ್ದ ನಿಕ್ಷೇಪವನ್ನು ತೆಗೆದು ಕಡೆಗೆ ಹಾಕಿರುವೆನು. ನೋಡಿಕೊಳ್ಳಿರಿ, ಪಂಡಿತರೇ, ಓಂದು ದೇವರಿಗೆ ಮಂಡಿಯನ್ನು ಚಾಚಿ, ನಮಿಸಿ ಪಂಡಿತರಾದೆವೆಂದು ತಂಡ-ತಂಡವಾಗಿ ಕೊಂಡಾಡುವ ಓಂದು ಬ್ರಾಹ್ಮಣರೇ ನಿಮ್ಮ ಪಂಥವೇನಾಯಿತು? ದ್ರವ್ಯವನ್ನು ಕಂಡಿರೊ? ಹಾಗಾದರೆ, ನೀವು ಆಡಿದಂತೆ ನಮ್ಮ ವಚನದ ಪ್ರಕಾರ ನಡೆಯುವುದಕ್ಕೆ ಸಿದ್ಧರಾಗಿರಿ.

ಬಿಜ್ಜಳ : ಹೌದು ಹೌದು, ಆಲಸ್ಯವೇಕೆ? ಬಸವೇಶ್ವರನು ಹೇಳಿದ ಹಾಗೆ ಎಂಬತ್ತು ಕೋಟಿ ದ್ರವ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸಿರುವನು. ಇನ್ನು ನೀವು ಆಡಿದ ಮಾತಿನಂತೆ, ಬಸವನು ಹೇಳಿದ ವಚನದಂತೆ ನಡೆಯಲೇ ಬೇಕು. ಇಲ್ಲವಾದರೆ, ರಾಜಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ವಿಚಾರ ಮಾಡಿ, ಯಾವುದು ಬೇಕು?

ಪಂಡಿತ: ಓಹೊ, ಮಹಾರಾಜರೆ ಬಸವನು ಎಂಬತ್ತು ಕೋಟಿ ದ್ರವ್ಯವನ್ನು ತೋರಿಸಿದನು. ಈ ಬಸವೇಶ್ವರನ ಪಾದಕ್ಕೆ ಶರಣಾಗತರಾಗುತ್ತೇವೆ. ಬಸವಾ ನಿಮ್ಮ ಆಜ್ಞೆಯಂತೆ ನಾವು ನಿಮಗೆ ಕೊಟ್ಟ ವಚನದ ಮಾತಿನಂತೆ ನಡೆದುಕೊಳ್ಳಲು ಸಿದ್ಧರಿರುತ್ತೇವೆ. ಬಸವಾ ನಮ್ಮನ್ನು ಸ್ವೀಕರಿಸಬೇಕು.

ಬಸವ : ಧನ್ಯರಾದಿರಿ, ಮಾನ್ಯರಾದಿರಿ, ನಿಮ್ಮ ಜನ್ಮವು ಸಫಲವಾಯಿತು. ಗಣಾಧೀಶ್ವರರ ಮಠದತ್ತ ಸಾಗಿರಿ.

ಪಂಡಿತರ ಪದ :

ಧನ್ಯವಾದೆವು ಮಾನ್ಯರಾದೆವು ಉನ್ನುತಾ ಬಸವೇಶ ।
ನಿನ್ನ ಭಜನೆಯ ಚೆನ್ನಾಗಿ ಮಾಡುತ ಮೋಕ್ಷವ ಪಡೆವೆವು ।

ಪಂಡಿತ : ಬಸವಾ ಬಸವಾ ಬಸವೇಶ್ವರ ಮಹಾತ್ಮರೇ....

ಬಿಜ್ಜಳ : ಭೋ, ಬಸವೇಶಾ ಎಂಬತ್ತು ಕೋಟಿ ದ್ರವ್ಯವನ್ನು ಪ್ರತ್ಯಕ್ಷ ಮಾಡಿ ತೋರಿಸಿದಿರಿ. ವ್ಹಾಹ್‌ವ್ಹಾ ಬಸವಶ್ರೇಷ್ಠಾ ನೀನು ಜಗದ ಉದ್ಧಾರಕ್ಕಾಗಿ ಅವತರಿಸಿದ ವೇದಾಂತ ಪುರುಷನೇ ಹೊರತು, ಸಾಮಾನ್ಯನಲ್ಲ. ನನ್ನ ಪುಣ್ಯವಿಶೇಷದಿಂದ ದೊರಕಿದಿರಿ. ಈ ಎನ್ನ ಸಾಮ್ರಾಜ್ಯವು ನಿರಂತರ ನಡೆದುಕೊಂಡು ಹೋಗುವಂತೆ ಮುಖ್ಯಮಂತ್ರಿ ಪದವಿಯನ್ನು ಪರಿಗ್ರಹಿಸಬೇಕು. ಮತ್ತು ನನ್ನ ಈ ಐಶ್ವರ್ಯವನ್ನು ನಿಮ್ಮ ಶ್ರೇಷ್ಠವಾದ ಹಸ್ತಕಮಲಕ್ಕೆ ಅರ್ಪಿಸಿರುತ್ತೇನೆ. ನಿಮ್ಮ ಮಾವನವರಾದ ಬಲದೇವ ಮಂತ್ರಿಯವರು ಹೇಗೆ ಕಾರಭಾರವನ್ನು ವಹಿಸಿಕೊಂಡಿದ್ದರೋ, ಅವರಂತೆ ನೀವೂ ವಹಿಸಿಕೊಂಡು ನನ್ನನ್ನು ಕಾಪಾಡಬೇಕು. ಇಷ್ಟೇ ಎನ್ನ ಅಭೀಷ್ಟೆಯು. ಸೇವಕಾ, ಶ್ರೀ ಬಸವೇಶ್ವರರಿಗೆ ಮಂತ್ರ ಪಟ್ಟವನ್ನು ಕಟ್ಟಬೇಕಾಗಿದೆ. ಆದ್ದರಿಂದ, ಎಲ್ಲ ಚರಮೂರ್ತಿಗಳನ್ನು ದೈವದವರನ್ನು ಕರೆದುಕೊಂಡು ಬಾ.

ಚರಮೂರ್ತಿಗಳು : ಶ್ರೀ ಬಸವೇಶ್ವರ ಮಹಾರಾಜರಿಗೆ ಜಯವಾಗಲಿ.

ಬಿಜ್ಜಳ : ಈ ಮುದ್ರೆ ಉಂಗುರವನ್ನು, ಚಂದ್ರಾಯುಧವನ್ನು ಪರಿಗ್ರಹಿಸಿ.

ಬಸವಣ್ಣ : ಮಹಾರಾಜರೇ, ಇಂದು ನನಗೆ ಪ್ರಧಾನ ಪದವಿಯನ್ನು ನೀಡಿದಿರಿ. ಆದರೆ, ತಾವು ಜ್ಞಾನಿಗಳು, ಪ್ರತಾಪಶಾಲಿಗಳು, ರಾಜ್ಯಕಾರ್ಯ ಧುರಂಧರರು ಇದ್ದಾಗ್ಯೂ, ವ್ರತಾಚಾರಕ್ಕನುಸರಿಸಿ ಕೆಲವು ನುಡಿಗಳನ್ನು ತಮಗೆ ಹೇಳುತ್ತೇನೆ. ದಯಮಾಡಿ, ನನ್ನ ಮಾತಿನ ಕಡೆಗೆ ಲಕ್ಷ್ಯ ಕೊಡಬೇಕು. ಸಿರಿ ಎನ್ನುವುದು ಕನಸಿನಲ್ಲಿ ಕಂಡ ಪದಾರ್ಥದಂತೆ, ಕ್ಷಣಿಕವಾದದ್ದು. ಪ್ರಾರಬ್ಧಕರ್ಮಕ್ಕನುಸಾರವಾಗಿ ಮಾನವನ ಹೃದಯದಲ್ಲಿ ಬಂದು, ಭೋಗ ತೀರಿದ ಬಳಿಕ ಹೋಗುವನು. ಭೂಮಿಪಾಲಕನು ಸರ್ವರಿಗೂ ಹಿತೈಷಿಯಾಗಿರಬೇಕು. "ಎಥಾ ರಾಜಃ ತಥಾ ಪ್ರಜಾಃ" ಎಂಬ ವಾಕ್ಯ ಇರುವುದರಿಂದ, ದೇಶಪರಿಪಾಲನೆ ಮಾಡುವ ಭೂಪಾಲನು ಧರ್ಮಾನುಷ್ಟನಾಗಿ ಶುದ್ಧ ವೀರಶೈವನಾಗಿ, ಪುತ್ರರಂತೆ ಪ್ರಜೆಗಳನ್ನು ಪಾಲಿಸಿದರೆ ಪ್ರಜೆಗಳೂ ಅದೇ ಆಚರಣೆಯನ್ನು

ಮಾಡುವರು. ರಾಜನು ದುರಾಚಾರಿ ಆದರೆ, ಪ್ರಜೆಗಳೂ ದುರ್ವ್ಯವಹಾರದಲ್ಲಿ ತೊಡಗುವರು. ಆದ್ದರಿಂದ, ತಾವು ಈ ಸತ್ಯ ಸದಾಚಾರವನ್ನು ಅನುಸರಿಸುತ್ತ ರಾಜ್ಯ ಪರಿಪಾಲನೆ ಮಾಡಬೇಕು. ಇಷ್ಟೇ ಎನ್ನಭಿಷ್ಟವು.

ಬಿಜ್ಜಳ : ಶಿವಮತವೆಂಬ ವಾರುಧಿಗೆ ಹಿಮಕರನೆ, ಅಜ್ಞಾನವೆಂಬ ಕಾವಳಕ್ಕೆ ದಿನಕರನೆ, ಪರಮತಗಳೆಂಬ ತರಗೆಲಿಗಳಿಗೆ ಅಗ್ನಿದೇವನೆ, ಓಂ ಬಸವೇಶಾ ನಿಮ್ಮನ್ನು ವರ್ಣಿಸಬೇಕಾದರೆ, ಆದಿಶೇಷನಿಗೂ ಅಸದಳವು. ಬಸವ ನಿನ್ನ ಸಮಾನ ಸ್ವರ್ಗ, ಮರ್ತ್ಯ, ಪಾತಾಳದಲ್ಲಿ ಯಾರು ಇರುವರೆ? ಇಲ್ಲ. ಸೇವಕಾ, ಬಸವೇಶ್ವರರಿಗೆ ವಸ್ತ್ರಾಭರಣಗಳನ್ನು ತೆಗೆದುಕೊಂಡು ಬಾ. ಬಸವ ಪ್ರಧಾನರೇ, ಈ ವಸ್ತ್ರಾಭರಣಗಳನ್ನು ಸ್ವೀಕರಿಸಬೇಕು.

ಬಸವಣ್ಣ : ಆಗಲಿ ಮಹಾರಾಜರೇ ಸ್ವೀಕರಿಸುತ್ತೇನೆ.

ಸೇವಕ : ರಾಜಾಧಿರಾಜ ಬಿಜ್ಜಳ ಮಹಾರಾಜ.

ಬಿಜ್ಜಳರಾಜ ಸೇವಕಾ, ಶಬ್ಧೋತ್ಪತ್ತಿಗೆ ಕಾರಣವೇನು?

ಸೇವಕ : ಮಹಾರಾಜರೇ ಸೂರ್ಯನು ಪಶ್ಚಿಮಾಂಬುಧಿಗೆ ಹೋಗಿರುವನೆಂದು ಗಡಿಯಾಳ ಮುಖದಿಂದ ತಿಳಿದು ಬರುತ್ತದೆ.

ಬಿಜ್ಜಳ : ಸಭಿಕರೇ ಸೂರ್ಯನು ಪಶ್ಚಿಮಾಂಬುಧಿಗೆ ತೆರಳುತ್ತಿರುವನೆಂದು ಪರಿಚಾರಕನಿಂದ ತಿಳಿದು ಬರುತ್ತಿದೆ. ಆದ್ದರಿಂದ ಈ ಸಭೆಯನ್ನು ವಿಸರ್ಜಿಸಿ, ನಿಮ್ಮ ಗೃಹಕ್ಕೆ ತೆರಳಿರಿ. ಸೇವಕಾ, –ಬಂಗಾರದಂತಹ ಬಲದೇವ ಮಂತ್ರಿಯರ ಅರಮನೆಗೆ ಈ ಬಸವೇಶನನ್ನು, ಭಕ್ತಾದಿಗಳನ್ನು ಕಳುಹಿಸಿ ಬನ್ನಿ.

(ಮಡಿವಾಳ ಮಾಚಯ್ಯನ ಪ್ರವೇಶ)

ಮಾಚಯ್ಯ : ಶ್ರೀ ಗುರು ಕಲ್ಲಿನಾಥನೇ ನಮೋ ನಮಃ ಶ್ರೀಗುರು ಗುದಿನೇಶ್ವರನೇ ನಿನ್ನ ದಿವ್ಯ ಚರಣಾರವಿಂದಕ್ಕೆ ಅನಂತ ನಮಸ್ಕಾರವು. ವೀರಶೈವ ಮತಾಭಿಮಾನಿಗಳೇ, ಶಿವಶರಣರೇ ನಿಮ್ಮ ವೀರಶೈವ ಸಮಾಜಕ್ಕೆ ಧೀರ್ಘ ದಂಡನಮಸ್ಕಾರವಿರಲಿ. ಶಂಭೋ ಹಾ ಇದೇನು ಪರಮಾಶ್ಚರ್ಯವು ! ಎನ್ನ ಇಷ್ಟಲಿಂಗವನ್ನು ನೋಡುತ್ತಿರಲಾಗಿ ಶ್ರೀ ಕಲ್ಯಾಣದಲ್ಲಿರುವ ಬಸವೇಶ್ವರರ ಶಿವಭಕ್ತಿ ಪ್ರಕಾಶವು ದಶದಿಕ್ಕನ್ನು ಆವರಿಸಿ,

ಪರಮತವೆಂಬೊ ಅಂಧಕಾರವನ್ನು ಓಡಿಸಿರುವುದು. ವ್ಹಾಹ್‌ವ್ಹಾ ಬಸವೇಶಾ, ಭಕ್ತಿಕೋಶಾ, ನಿನ್ನ ಭಕ್ತಿ ಶೌರ್ಯಕ್ಕೆ ಬೆಲೆಯೇ ಇಲ್ಲ. ಬಸವಾ ನಿನ್ನ ಶ್ರೀ ಚರಣಕ್ಕೆ ನಮಸ್ಕಾರವು. ಒಳ್ಳೆಯದು. ಇನ್ನು ತಡವೇಕೆ? ಈ ಹಿಪ್ಪರಗಿ ಪುರದ ಜನರೆಲ್ಲರೂ ಸದ್ಭಕ್ತರಾಗಿ, ವೀರಶೈವ ಮತವನ್ನು ಅವಲಂಬಿಸಿರುವರು. ನಾನು ಇನ್ನು ಇಲ್ಲಿರಲು ಕಾರಣವೇನಿಲ್ಲ. ಆದ್ದರಿಂದ, ಮೋಕ್ಷದಾಯಕನಾದ ಶ್ರೀಗುರು ಬಸವೇಶ್ವರನ ದರ್ಶನಾರ್ಥವಾಗಿ ಕಲ್ಯಾಣದತ್ತ ಸಾಗುವಾ.

(ಕಲ್ಯಾಣನಗರದ ಸೀನು)

ಬಸವ : ಶ್ರೀಗುರು ಸಂಗಮನಾಥನೇ ನಮೋ ನಮಃ. ನಿನ್ನ ಅಂತಃಕರಣದಿಂದಲೇ ನನ್ನ ಕಾರ್ಯಗಳು ಸಾಂಗವಾಗಿ ಜರುಗುತ್ತಿವೆ. ಶಂಭೋ ಗುರುನಾಥಾ ಆಹಾ ಇದೇನು ಚಮತ್ಕಾರವು? ಎನ್ನ ಇಷ್ಟಲಿಂಗದಲ್ಲಿ ನೋಡುತ್ತಿರಲಾಗಿ, ಶ್ರೀ ಮಡಿವಾಳ ಮಾಚಯ್ಯನವರು ಹಿಪ್ಪರಗಿ ಎಂಬ ಪಟ್ಟಣವನ್ನು ಬಿಟ್ಟು, ಈ ಕಲ್ಯಾಣನಗರಕ್ಕೆ ದಯಮಾಡಿಸುವಂತೆ ತೋರುತ್ತಿದೆ. ಒಳ್ಳೆಯದು, ಆ ಮಹಾತ್ಮನನ್ನು ಕರೆತರುವುದಕ್ಕೆ ಈಗಿಂದೀಗಲೇ ಹೋಗುವೆನು. ಸಂಗಮೇಶಾ....

ಮಾಚಯ್ಯ : ಆಹಾ ಹಾ ಏನು ಕಲ್ಯಾಣನಗರವೋ! ಮುಕ್ತಾಂಗನೆಯರ ಆಸ್ಥಾನವು. ಹೌದು ಹೌದು ಬಸವಾ ಎಲ್ಲಿ ನೋಡಿದರೂ, ನಿನ್ನ ಭಕ್ತಿಯ ಸಾಮ್ರಾಜ್ಯವೇ ತೋರುತ್ತದೆ. ಎಲ್ಲಿ ನೋಡಿದರೂ, ಶ್ರೀ ಮಹೇಶ್ವರನ ಮಹೋತ್ಸವವೇ ಮೆರೆಯುತ್ತಿರುವುದು. ಇದಲ್ಲದೆ, ಆಕಾಶ ಪರ್ಯಂತರವಾಗಿ ಬಸವ ಬಸವ ಎಂಬುವ ಜೈಘೋಷದ ಶಬ್ದವೇ ಮೊಳಗಿರುವುದು. ಬಸವಾ ನಿನ್ನ ಕೀರ್ತಿಯೆಂಬ ಪ್ರಕಾಶವು ಸಹಸ್ರಾವಧಿ ಚಂದ್ರರಿಗಿಂತಲೂ ಹೆಚ್ಚಾಗಿಯೇ ತೋರುತಿರ್ಪುದು. ವ್ಹಾಹ್‌ವಾ ಈ ಕಲ್ಯಾಣಪುರವನ್ನು ಎಷ್ಟು ವರ್ಣಿಸಿದರೂ ತೀರದು. ಈ ನಗರದ ಅಷ್ಟಾವರಣವೆಂಬ ಭಕ್ತಿಸಾಮ್ರಾಜ್ಯವನ್ನು ಕಂಡು ನಾನು ಧನ್ಯನಾದೆ. ಒಳ್ಳೆಯದು, ಇನ್ನು ಬಸವೇಶ್ವರರ ದರ್ಶನಕ್ಕಾಗಿ, ಒಳಗೆ ಹೋಗುತ್ತೇನೆ. – ಭೋ ಬಸವೇಶ್ವರಾ ನಿನ್ನ ಪಾದವನ್ನು ಕಂಡು ಧನ್ಯನಾದೆ. ನಿನ್ನ ಶ್ರೀ ಪಾದಕ್ಕೆ ನಮಸ್ಕಾರವು.

ಬಸವ : ವೀರಶೈವ ಪ್ರಭುಗಳೇ ಜಯ ಜಯ. ನಿಮ್ಮ ಶ್ರೀ ಚರಣಕಮಲಕ್ಕೆ ಈ ಬಾಲಭೃಂಗನ ನಮಸ್ಕಾರಗಳು.

ಮಾಚಯ್ಯ : ಬಸವಪ್ರಭು ನಿಮ್ಮ ಸೌಭಾಗ್ಯಕ್ಕೆ ಎಣೆಯೇ ಇಲ್ಲ. ನಿನಗೆ ಆ ಪರಶಿವನು ಜಯಜಯಕಾರವನ್ನುಂಟು ಮಾಡಲಿ.

ಬಸವ : ಮತೋದ್ಧಾರಕರೇ, ಶರಭಾವತಾರಿಗಳೇ, ಈ ವೀರ ಸಿಂಹಾಸನಕ್ಕೆ ತಾವು ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾಚಯ್ಯ : ವೀರಶೈವ ಮತೋದ್ಧಾರಕನಾದ ಬಸವರಾಜನೇ ಈ ವೀರಸಿಂಹಾಸನಕ್ಕೆ ತಾವೇ ಮಂಡಿಸಬೇಕು. ನಾನು ತಮ್ಮ ಮುಂಭಾಗದಲ್ಲಿ ಮಂಡಿಸುವೆನು.

ಬಸವ : ತಥಾಸ್ತು ಮಂಡಿಸುವೆನು.

ಮಾಚಯ್ಯ : ವ್ಹಾಹ್‌ವಾ ! ಬಸವೇಶಾ ಏನು ಭಕ್ತಿಸಾಗರನೋ, ನಿನ್ನ ಭಕ್ತಿಯ ಐಶ್ವರ್ಯವನ್ನು ನಾನು ಎಷ್ಟು ಕೊಂಡಾಡಿದರೂ ಸಾಲದು. ದ್ವಿತೀಯ ಶಂಭುವೇ ನಿನ್ನ ಮಹಿಮೆಯನ್ನು ತಿಳಿಯಬೇಕಾದರೆ, ದೇವಾಧಿದೇವನಿಗೂ ಆಗದು. ಮಹಾಪ್ರಭೂ ನಿನ್ನ ಪಾದವನ್ನು ಕುರಿತು ನಾನು ಬೇಡಿಕೊಳ್ಳುವದೇನೆಂದರೆ, ನಿನ್ನ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಾಧೀಶ್ವರರ ಬಟ್ಟೆಗಳನ್ನು ಮಡಿಮಾಡಿ ಕೊಡುವ ಕಾಯಕವನ್ನು ನನಗೆ ಕೊಡಬೇಕೆಂದು ಬೇಡಿಕೊಳ್ಳುವೆನು.

ಬಸವ: ಮಹಾಸ್ವಾಮಿಗಳೇ ಪ್ರಮಥರ ಬಟ್ಟೆಗಳನ್ನು ಮಡಿಮಾಡಿ ಕೊಡುವ ಈ ಕಾಯಕವನ್ನು ಸ್ವೀಕರಿಸಿ. ಮತ್ತು ವೀರಗಂಟೆಯನ್ನು ಶಿವನಿಂದಕರಾದ ಭವಿಗಳ ಶಿರಚ್ಛೇದನಕ್ಕಾಗಿ ಈ ಚಂದ್ರಾಯುಧವನ್ನು ತೆಗೆದುಕೊಳ್ಳಿರಿ.

ಮಾಚಯ್ಯ : ಹಾ, ಇನ್ನು ತಡವೇಕೆ? ಬಸವರಾಜರಿಂದ ಕಾಯಕವನ್ನು ಕೈಕೊಂಡೆನು. ಪ್ರಮಥರ ಬಟ್ಟೆಯನ್ನು ಮಡಿಮಾಡಿಕೊಂಡು ಬರುವುದಕ್ಕೆ ನದಿಯತ್ತ ಸಾಗುತ್ತೇನೆ.ಬಸವಾ ಬಸವಾ ಬಸವಾ.

ಬಸವ: ನಾನೂ ಜಂಗಮರ ಸೇವಾ ನಿಮಿತ್ಯಾರ್ಥವಾಗಿ ದಾಸೋಹ ಮಠವನ್ನು ಕುರಿತು ಗಮನ ಮಾಡುತ್ತೇನೆ.

ಮಾಚಯ್ಯನ ಪದ :

ಮಡಿಯ ವಸ್ತ್ರಗಳನ್ನು ತರುವೆನು ಭವಿಗಳೇ ।
ತಡಿಯದೇ ಸರಿಯಿರಿ ಬೇಗಾ ॥ ಪಲ್ಲ ॥

ಮುಟ್ಟಿದವರ ಶಿರ ಕುಟ್ಟುವೆ ನಾ ಇನ್ನು ।
ಅಟ್ಟುವೆ ಯಮಪುರಕೆ ಈಗ ॥ ೧ ॥

ಮಾಚಯ್ಯ : ಹರಗುರು ಚರಮೂರ್ತಿಗಳ ಪರಮ ಪರತರ ಬಟ್ಟೆಗಳನ್ನು ಹರುಷದಿಂದ ಗಂಟು ಕಟ್ಟಿಕೊಂಡು, ಶಿರದೊಳು ಹೊತ್ತು ಬರುವೆನು. ಪರಮಧಿಕರು ಗರ್ವಿಷ್ಠರಾಗಿ ಮುಟ್ಟಿದ ಕೂಡಲೇ ಘುಡಿಘುಡಿಸಿ, ಪಲ್ಗಡಿದು, ಪೊಡವಿಯೊಳ್ ಕೆಡಹಿ ತಡಿಯದೆ, ಯಮಪುರಿಗೆ ಕಳಿಸುವೆ. ವೀರಘಂಟೆಯ ಘೋರ ಶಬ್ದವನ್ನು ಕೇಳದೆ ಇರುವ ವೈರಿಗಳ ರುಂಡ ಮುರಿವೆ. ಪರವಾದಿಗಳ ಗುಂಡಿಗೆಯನ್ನು ಖಂಡಿಸುವ ವೀರಘಂಟೆಯ ಮಡಿವಾಳ ಮಾಚಯ್ಯನು ಬಂದನೆಂದು ಬೀದಿಯಲ್ಲಿ ಭವಿಗಳು ನಿಲ್ಲದೆ ಮೋದದಿಂದ ದೂರ ಸರಿಯಿರಿ. ದೂರ ಸರಿಯಿರಿ.

(ಬೀದಿಯ ದೃಶ್ಯ)

ಭವಿ : ಆಹಾ ಯಾವನೋ ಇವನು ಪ್ರಮಥರ ಬಟ್ಟೆಗಳನ್ನು ತೊಳೆಯುವ ಮಡಿವಾಳನಂತೆ. ಬೀದಿಯಲ್ಲಿ ಯಾರೂ ಭವಿಗಳು ಇರಬಾರದಂತೆ. ಇದೂ ಅಲ್ಲದೆ, ಮುಟ್ಟಿದವರ ಶಿರವ ಕುಟ್ಟ ಕುಟ್ಟ ಮೆಟ್ಟಿ, ಅಟ್ಟಹಾಸದಿಂದ ಕೆಡುಹುವನಂತೆ. ಮತ್ತು ಯಮಪುರಕ್ಕೆ ಕಳುಹಿಸುವನಂತೆ. ಇದು ಯಾವ ಶೀಲವು? ಇಂತಹ ಶೀಲದವನನ್ನು ನಾನು ಎಲ್ಲಿಯೂ ಕಂಡಿಲ್ಲವು. ಶಹಬಾಷ್, ಒಳ್ಳೆಯದು. ನಾನು ಘಟ್ಟಿಸಿ ನುಡಿಯುತ್ತ, ನಡೆಯುತ್ತ ಇವನ ಘಟ್ಟಿತನದ ಶೌರ್ಯವನ್ನು ನೋಡಿಯೇ ಬಿಡುತ್ತೇನೆ. ಎಲೋ ನಿಲ್ಲು ನಿಲ್ಲು ಖಳಾ.

ಮಾಚಯ್ಯ : ಎಲವೋ ಮಲಿನಾತ್ಮಕನಾದ ಕೆಟ್ಟ ಭವಿಯೇ ವೀರ ಘಂಟೆಯ ಶಬ್ಧವನ್ನು ಕೇಳಿದ ಕೂಡಲೇ ವಾರೆಯಾಗಿ ಹೋಗುವುದನ್ನು ಬಿಟ್ಟು, ನಾನು ಸಾರಿ – ಸಾರಿ ಹೇಳಿದ ವಚನವನ್ನು ಮೀರಿ, ಎದುರಾಗಿ ಬರುವಿಯಾ? ಮೂರ್ಖ. ಎನ್ನ ಕರದಲ್ಲಿರುವ ಕರವಾಳದಿಂದ ನಿನ್ನ ಶಿರವನ್ನು ಹರಿದು. ಸೂರ್ಯಮಂಡಲ ಪರ್ಯಂತರ ತೂರುತ್ತೇನೆ. ತಿಳಿದುಕೋ. ಇದುರಾಗಬೇಡ. ವಾರಿಯಾಗು, ಸಾರಿ ಹೇಳುತ್ತೇನೆ.

ಭವಿ : ಎಲವೋ ಮಡಿವಾಳನೇ ಉಬ್ಬಿ – ಕೊಬ್ಬಿ ಅಬ್ಬರದಿಂದ ಕುಟ್ಟು – ಕುಟ್ಟೆಂದು ಕೂಗುತ್ತಾ, ಘುಡಿ – ಘುಡಿಸಿ ಆರ್ಭಟ ಮಾಡಿ ಬರುವ ನಿನ್ನ ಮಾರ್ಮಲಿತ ಬಿಡಿ ನುಡಿಯ ಗುಣಕ್ಕೆ ಬೆದರಿ, ಮಾರ್ಗ ಬಿಡುವವರಾರು? ಪೊಡವಿ – ರಾಜಬೀದಿಯಲ್ಲಿ ಹುಡುಗಾಟಿಕೆ ಮಾಡುವಿಯಾ ಮೂರ್ಖ. ಬಿಡು ಬಿಡು ನಿನ್ನ ಬಡಿವಾರದ ನುಡಿಗಳನ್ನು ಪೊಡವಿಪತಿ ಬಿಜ್ಜಳನಿಂದ ನಿನ್ನ ಬಿಡದೇ ದಂಡಿಸುವೆನು. ನಿನ್ನ ಅಖಂಡವಾದ ಮಹಾಮ್ಮೇರುವಿನಂತಿರುವ ಬಟ್ಟೆಯ ಮಟ್ಟಿಯನ್ನು

ಸೃಷ್ಟಿಯೊಳು ಬಿಚ್ಚಿ – ಬಿಚ್ಚಿ, ಅಚ್ಯುತನಗರ ಪರ್ಯಂತರ ತೂರುವೆ. ರಾಜಬೀದಿಯಲ್ಲಿ ರಾಜ್ಯಕಾರ್ಯ್ದೆಯನ್ನು ಮರೆತು, ಮದೋನ್ಮತ್ತನಾಗಿ ತಿರುಗುತ್ತಿರುವಿಯಾ ಮತಾಂಧ. ನಿನ್ನ ಸೊಕ್ಕನ್ನು ಮುರಿದಿಕ್ಕಿ, ತಕ್ಕ ಶಿಕ್ಷೆಯನ್ನು ನೇಮಿಸಿ, ಧಕ್ಕಿಯಾಗುವ ಸಲಾಖೆಯನ್ನು ಜಡಿಸದಿದ್ದರೆ, ನಾನು ಭವಿಯೋ? ನೀಚಾ, ನಿನ್ನ ಮೃತ್ಯುವಿನ ರೂಪಕ್ಕೆ ಕಟಕದ ಜನರನ್ನು ಬೆದರಿಸುವಂತೆ ನನ್ನನು ಬೆದರಿಸುವಿಯಾ? ಮೂರ್ಖಾ ನಿನ್ನ ಶೌರ್ಯವನ್ನು ನಾನು ಬಲ್ಲೆ. ಸರಿಯಾಗಿ ಸಮರಕ್ಕೆ ನಿಲ್ಲು. ನಿನ್ನ ಗಟ್ಟಿತರವಾದ ವೀರಘಂಟೆಯನ್ನು ಪ್ರಮಥರ ಬಟ್ಟೆಯನ್ನು ಯಮಪುರಕ್ಕೆ ಅಟ್ಟದೇ ಬಿಡೆನು. ಜಾಗ್ರತಿ. ಇದುರಾಗಿ ನಿಲ್ಲು ಅಗಸಾ ಬಿಡು ನಿನ್ನ ಮಾತಿನ ಸೋಗನ್ನು.

ಮಾಚಯ್ಯ : ಎಲವೋ ದುರಾತ್ಮನಾದ ನೀಚ ಭವಿಯೇ, ಪಿತ್ತ ತಲೆಗೇರಿಸಿಕೊಂಡು, ಬಡದೇಹಿಗಳಂತೆ ಅಡಿಗಡಿಗೆ ಸ್ವಾನ ಬೊಗಳುವಂತೆ ಬೊಗುಳುವೆಯಲ್ಲಾ, ಇದು ನಿನ್ನ ಜಾತಿಯ ಸ್ವಭಾವವೊ? ಅಥವಾ ತಲೆಯೊಳಗಿನ ಹುಚ್ಚೊ? ಸೊಕ್ಕೊ? ಎಲೋ ನೀಚ ಶೂನ್ಯನೇ ಈ ಕೈಚೂರಿಯಿಂದ ನಿನ್ನ ಶಿರ ಹರಿಯುತ್ತೇನೆ. ನಿನ್ನ ಕುಲದೇವತಾ ಸ್ಮರಣೆಯನ್ನು ಮಾಡು. ತಡೆಯುವಂತಿಲ್ಲ. ನಿಮಿಷ ಮಾತ್ರದಲ್ಲಿ ಕೊಂದು ಬಿಡುತ್ತೇನೆ ಮೂರ್ಖ.

ಭವಿ : ಆಹಾ ಇವನೇನು ಸಸಾರ ಮನುಷ್ಯನೇನಲ್ಲಲ್ಲಾ. ಸಾಕ್ಷಾತ್ ಮಹಾನ್ ಪರ್ವತಗಳನ್ನೆತ್ತಿ ಸಮುದ್ರಕ್ಕೆ ಸೇತುವೆಯನ್ನು ತಯಾರು ಮಾಡಿದ ವಜ್ರ ಶರೀರ, ಧರುಣಿ ತೂಕದ ರಕ್ಕಸರ ವೈರಿಯಂತಿರುವ ಹನುಮಂತನೋ? ಏನ್‌ವೀರಾಧೀವೀರ ಶಿವಮತೋದ್ಧಾರ ಈ ಭೂಮಿಯನ್ನೇ ಶೃಂಗಾಗ್ರಗಳಿಂದೆತ್ತಿ ತ್ರಿಪುರಕ್ಕೆ ಸುರಿಗೆಯಾಗಿ ನಿಲ್ಲಿಸಿದ ವೃಷಭೇಶ್ವರನೆಂಬ ಎತ್ತೋ? ಅಥವಾ ವಜ್ರಪರ್ವತವೋ ಎಂಬಂತೆ ತೋರುತ್ತಾನೆ. ಅಯ್ಯೋ ಇವನೇನು ಅಗಸನಲ್ಲ. ದೇವತಾಪುರುಷ, ಶಂಭುಭಕ್ತ, ಜಗದ್ಭರಿತ ಶರಣನೇ ಇರಬಹುದು. ವ್ಹಾಹ್‌ವಾ ಇದ್ದರೂ ಇರಲಿ, ಇವನ ವೀರಶೌರ್ಯವನ್ನು ಬಾಹುಬಲ ಶಕ್ತಿಯನ್ನು ನೋಡಿಯೇ ಬಿಡುತ್ತೇನೆ. ಎಲೋ, ಪ್ರಮಥರ ಬಟ್ಟೆಗಳನ್ನು ಮುಟ್ಟಿರುತ್ತೇನೆ ನೋಡು.

ಮಾಚಯ್ಯ : ಎಲವೋ ಕೆಟ್ಟ ಹೊಲಿಯನಾದ ಭ್ರಷ್ಟಭವಿಯೇ ನಿನ್ನ ಕೆಟ್ಟ ಸೊಟ್ಟನೆ ದೇಹವನ್ನು ಧ್ರುವ ಪಟ್ಟಣ ಪರ್ಯಂತರ ತೂರಿ ಬಿಟ್ಟಿರುವೆನು ಎಲವೋ, ಈ ಕಲ್ಯಾಣ ನಗರದಲ್ಲಿರುವ ಎಲ್ಲಾ ಭವಿಗಳಿರಾ, ಶಿವಭಕ್ತರಾದ ವೀರಶೈವ

ಮಾರ್ಗಕ್ಕೆ ಅಡ್ಡಾದರೆ, ನಿಮಗೂ ಇದೇ ಶಿಕ್ಷೆಯೆಂದು ತಿಳಿಯಿರಿ. ಆದರೆ, ಇನ್ನು ವೇಳೆಯಾಯಿತು. ಗಣಾಧೀಶ್ವರರ ಬಟ್ಟೆಗಳನ್ನು ಮಡಿ ಮಾಡಿ, ತರುವುದಕ್ಕಾಗಿ ಪುನಃ ಶ್ರೀ ಗುದಿನೇಶ್ವರ ಧ್ಯಾನಾಸಕ್ತನಾಗಿ ನದಿಯತ್ತ ಸಾಗುತ್ತೇನೆ. ಬಸವ ಬಸವಾ.....

ದೃಶ್ಯ – ಬಿಜ್ಜಳನ ಆಸ್ಥಾನ

ಸೇವಕ : ನಮೋ ನಮಃ ಬಿಜ್ಜಳ ಮಹಾರಾಜರೇ ಕೇಳಿರಿ. ಈ ನಗರದಲ್ಲಿ ಉಬ್ಬಿ ಕೊಬ್ಬಿದ ರಜಕನು ಹೆಬ್ಬುಲಿಯಂತೆ ಅರ್ಭಟ ಮಾಡುತ್ತ ಕೈಯಲ್ಲಿ ಕಠಾರಿಯನ್ನು ಹಿಡಿದು, ಯಾರು ತನ್ನನ್ನು ಮುಟ್ಟುವರೋ ಆ ಮುಟ್ಟಿದ ಭವಿಯನ್ನು ತಕ್ಷಣದಲ್ಲಿಯೇ ಶಿರಸ್ಸನ್ನು ತಾರಾ ಮಂಡಲ ಪರ್ಯಂತರ ತೂರಿ ಬಿಡುವೆನೆಂದು ಸಿಂಹನಾದ ಮಾಡುತ್ತಾ, ಶಿವಭಕ್ತಿಯ ಆಚಾರವು ತಲೆಗೇರಿ, ಬಿಂಕದಿಂದ ರಾಜಭೀತಿಯಿಲ್ಲದೆ ಕೊಲ್ಲುತಿರುವನು. ಲೋಕದಲ್ಲಿ ಶಿವಭಕ್ತರು ಪ್ರಾಣಹಿಂಸೆಯನ್ನು ಮಾಡುವುದು ಯಾವ ಶಾಸ್ತ್ರದಲ್ಲಿ ಹೇಳುತ್ತದೆ? ಜೀಯಾ, ಇವತ್ತಿನ ದಿವಸದಲ್ಲಿ ನಿರಪರಾಧಿಯಾದ ಒಬ್ಬ ಭವಿಯು ಅವನನ್ನು ಸೋಂಕಿದನು. ಮುಟ್ಟಿದರೆ ಏನಾಯಿತು? ಅವನನ್ನು ತನ್ನ ಕಠಾರಿಯಿಂದ ಹೊಡೆದು, ಧೃವ ಮಂಡಲ ಪರ್ಯಂತರ ತೂರಿಬಿಟ್ಟನು. ನಿನ್ನೆ ಘಂಟೆ ಆರು ತಾಸಿನಲ್ಲಿ ತೂರಿದ ಶವವು ಇವತ್ತು ೬ ತಾಸಾದರೂ ಕೂಡ ಭೂಮಿಗೆ ವಾಪಾಸಾಗಲಿಲ್ಲ ದೇವಾ, ಆ ಶವವನ್ನು ಆಕಾಶವೇ ನುಂಗಿತೋ ಅಥವಾ ಸಮುದ್ರದ ಪಾಲಾಯಿತೊ? ತಿಳಿಯದು. ಜೀಯಾ, ಇಷ್ಟೇ ಸರಿ ಹೇಳತಕ್ಕದ್ದು ಇನ್ನೇನೂ ಇಲ್ಲ ಪ್ರಭೂ.

ಬಿಜ್ಜಳ: ಏನಯ್ಯಾ ಬಸವೇಶಾ, ಶಿವಭಕ್ತರು ರಾಕ್ಷಸರೋ, ಅಥವಾ ಮನುಷ್ಯ ರೂಪದ ಹುಲಿಯೋ? ಹೀಗೇನಾದರೂ ಇರಬಹುದೇನು ದಯವಿಲ್ಲದೆ ಮನುಷ್ಯರನ್ನು ಕೊಂದು ತಿನ್ನುತ್ತಾರಲ್ಲವೇ? ಆ ರಜಕನು ನರರೂಪ ತಾಳಿದ ಮೃತ್ಯು ದೇವತೆಯೋ? ಪರಮತವೆಂಬ ಕಡಲನ್ನು ಕುಡಿಯುವ ಅಗಸ್ತ್ಯನೋ? ಭವಿಗಳೆಂಬ ವೃಕ್ಷವನ್ನು ಛೇದಿಸುವ ಕುಠಾರನೊ? ಏನೋ ಇವನನ್ನು ಯಾವ ರೂಪದವನೆನ್ನಬೇಕು? ಬಸವ ಆ ನಿರಪರಾಧಿಯಾದ ಭವಿಯುನ್ನು ಕೊಲ್ಲಬೇಕಾದರೆ, ರಾಜನ ಭೀತಿಯಂಥೂ ಇಲ್ಲದಂತಾಯಿತಲ್ಲ. ಅಂದ ಬಳಿಕ ಇಂಥಾ ನೀಚ, ಅಧಮ ಕಾರ್ಯ ಮಾಡಬೇಕಾದರೆ, ನಿನ್ನ ಬಲದಿಂದಲೇ ಮಾಡುತ್ತಿರಬಹುದು. ಬಸವಾ ಆದರೂ ಆಗಲಿ,

ಆಯುಧಪಾಣಿಯಾದವನು ಆಯುಧವನ್ನು ಹಿಡಿದು, ನಿರಪರಾಧಿಯಂತೆ ತನ್ನ ಆಟಾಟೋಪವನ್ನು ತೋರಿಸುವುದು ನ್ಯಾಯವೇ? ಶಸ್ತ್ರವನ್ನು ಹಿಡಿದಿರುವ ನಿರಪರಾಧಿ ನಿರಾಯುಧನನ್ನು ಕೊಂದನೆಂದ ಬಳಿಕ ಇದು ಎಷ್ಟರಮಟ್ಟಿಗೆ ತಪ್ಪು ಇರಬಹುದೆಂಬುದನ್ನು ನೀನೇ ವಿಚಾರಿಸುವಂಥದ್ದು. ಇಂಥಾ ಕೆಟ್ಟ ದುಷ್ಟ ಅಗಸನು ನನ್ನ ನಗರದಲ್ಲಿ ಮೆರೆಯುತ್ತಿರುವನಲ್ಲಾ ಇದು ಪರಮ ಆಶ್ಚರ್ಯವು. ಬಸವಾ, ಹೀಗೆ ಇದ್ದರೂ ಇರಲಿ. ಮುಟ್ಟಿದ ಕೂಡಲೇ ಬಟ್ಟೆಗಳೇನು ನಷ್ಟವಾಗಿ ಹೋದವೋ? ಏನು ಮಾಸಿದವೋ? ಇಂಥಾ ನೀಚಕೃತ್ಯಗಳನ್ನು ಮಾಡುವುದು ಶಿವಭಕ್ತರ ಆಚಾರವೇ? ಆ ಭ್ರಷ್ಟನನ್ನು ಅಟ್ಟಹಾಸದಿಂದ ಕುಟ್ಟಿ ಕುಟ್ಟಿ ಯಮಪಟ್ಟಣಕ್ಕೆ ಅಟ್ಟಿಸುವೆ. ಭೋ, ಸೈನಿಕರಿರಾ ಭೋಂಕನೆ ಹೂಂಕರಿಸುತ್ತ ಮೆರೆಯುವ ಮಡಿವಾಳನನ್ನು ಬರುವ ಮಾರ್ಗದಲ್ಲಿ ಅವನ ನಿಲ್ಲಿಸಿ, ತೋಳುಗಳಿಗೆ ಬಂಧಿಸಿ, ತಡ ಮಾಡದೆ ಎಳೆದುಕೊಂಡು ಬರ್ರಿ ಇಲ್ಲದಿದ್ದರೆ, ಅಲ್ಲಿಯೇ ಕೊಂದುಬರ್ರಿ . ಜಾಗ್ರತಿಯಿಂದ ಹೋಗಿರಿ.

ಬಸವ : ಮಹಾರಾಜರೇ ಇದೇನು? ಮುಂದಾಗುವ ಫಲವನ್ನು ವಿಚಾರಿಸದೆ ಹೀಗೇಕೆ ಬಾಯಿಗೆ ಬಂದಂತೆ ಮಾತಾಡುವಿರಿ. ವಿಚಾರವಿಲ್ಲೇನು? ಯಾವ ಕಾರ್ಯವನ್ನು ಮಾಡಬೇಕಾದರೆ ವಿಚಾರ ಮಾಡದೇ ಅದರ ಇಂಗಿತವನ್ನು ತಿಳಿಯದೆ ಅಜ್ಞಾನಿಗಳಂತೆ ಬಾಯಿಗೆ ಬಂದಂತೆ ಮಾತಾಡಿದರೆ ನಿಮಗೇನೆನ್ನಬೇಕು? ಇದು ರಾಜಪದ್ಧತಿಯೇ ಅಲ್ಲ, ಅಂದ ಬಳಿಕ ಇದು ನ್ಯಾಯವಲ್ಲ. ಮಹಾರಾಜರೇ ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡತಕ್ಕದ್ದು. ಈ ಮಾಚಯ್ಯನನ್ನು ಕೇವಲ ರಜಕನೆಂದು ಭಾವಿಸಬೇಡ. ಈ ಕ್ರೂರವಾದ ದುಡುಕುತನವನ್ನು ಬಿಟ್ಟು, ನನ್ನ ಮಾತನ್ನು ಕೇಳಿರಿ. 'ಬ್ರಾಹ್ಮಣೋ ಭಗವಾನ್ ರುದ್ರನೆಂಬ' ವಚನಕ್ಕೆ ಸಾಫಲ್ಯದಂತೆ ಈತನು ಸಕಲ ಯಜ್ಞಗಳಿಗೂ ಅಧಿಪತಿಯಾದ ಮೊದಲನೆಯ ಬ್ರಾಹ್ಮಣನಾಗಿದ್ದಾನೆ. ಮತ್ತು ಅಸುರರಿಂದ ಉಂಟಾದ ಉಪದ್ರವಗಳಿಂದ ದೇವತೆಗಳನ್ನು ಸಂರಕ್ಷಿಸಿರುವ ಹಾಗೂ ಶತ್ರುಗಳಿಂದ ಅಲ್ಲಾಡಿಸಲಾಗದ ಮಹಿಮೆಯುಳ್ಳ ಆದಿಕ್ಷತ್ರಿಯನಾಗಿದ್ದಾನೆ. ಶಿವನ ಕಳೆಯಿಂದ ಕೂಡಿದ ಶಿವಶರಣರ ಮೇಲೆ ಬಲಿಷ್ಠರ ಪ್ರಯತ್ನವೇನೂ ನಡೆಯಲಾರದು. ಶರಭಾವತಾರಿಯಾದ ವೀರಭದ್ರೇಶ್ವರನಲ್ಲಿ ಯಾರ ಶಸ್ತ್ರವು ನಡೆದೀತು? ಆದ್ದರಿಂದ, ಮಡಿವಾಳ ಮಾಚಯ್ಯನವರ ಮೇಲೆ ಸುಭಟರನ್ನು ಕಳಿಸುವುದು ಅಯೋಗ್ಯವು ರಾಜರೇ. ಮಹಾರಾಜರೇ ಶಿವಶರಣರಿಗೆ ತ್ರಿಮೂರ್ತಿಗಳ ಪಾಡಿಲ್ಲೆಂದ ಬಳಿಕ

ನಿಮ್ಮಂಥ ಯಕಶ್ಚಿತ ರಾಜರು ಏನು ಮಾಡುವರು? ಇದನ್ನು ತಿಳಿದು, ಸರ್ವಥಾ ಆ ಮಹಾತ್ಮರ ಬಳಿಗೆ ನಿನ್ನ ಸೈನ್ಯವನ್ನು ಕಳಿಸಬೇಡ. ನಾನು ನಿಮಗೆ ಸಾರಿ ಹೇಳುತ್ತೇನೆ. ಸತ್ಪುರುಷರ ಮಾತನ್ನು ಮೀರುವುದು ಅಸಂಬದ್ಧ. ಇದರ ಮೇಲೆ ನಿಮ್ಮ ಇಚ್ಛೆ, ತಿಳಿದು ನೋಡಿರಿ.

ಬಿಜ್ಜಳ : ಏನೋ ಬಸವೇಶಾ, ಮತದ ಅಭಿಮಾನದಿಂದ ನೀನು ಹೀಗೆ, ಭಯವನ್ನು ಕಲ್ಪಿಸಿ ಹೆದರುಸುತ್ತೀಯೋ? ಅಯ್ಯೋ ನಿನ್ನ ಇಂಗಿತವು ತಿಳಿಯಿತು. ಸ್ವಲ್ಪ ತಡೆ. ಎಲವೋ ವೀರಭದ್ರರೇ ದೇವ – ದಾನವರು ಮೆಚ್ಚುವಂತೆ ಯುದ್ಧವನ್ನು ಮಾಡಿರಿ. ಆ ಅಬದ್ಧ ಅಧಮ ಮೂರ್ಖನನ್ನೊದ್ದು ಗುದ್ದಿ ಕೊಂದು ಬನ್ನಿ. ಇಲ್ಲವಾದರೆ, ಇಂದ್ರನ ಐರಾವತವನ್ನು ತಿರಸ್ಕರಿಸುವ ಬಹು ಸಾಮರ್ಥ್ಯವುಳ್ಳ ನಮ್ಮ ಆನೆಯನ್ನು ಆ ಅಗಸನ ಮೇಲೆ ಬಿಟ್ಟು ಬನ್ನಿ, ತಿಳಿಯಿತೆ? ಬಹು ಹುಷಾರಿ. ಇಲ್ಲದಿದ್ದರೆ, ನಿಮ್ಮನ್ನು ತಕ್ಷಣದಲ್ಲಿ ಆಕಾಶ ಧ್ರುವಮಂಡಲ ಪರ್ಯಂತರ ತೂರಿ ಬಿಡುವನು. ನೋಡಿಕೊಳ್ಳಿರಿ ಹೋಗಿರಿ.

ಒಂದನೇ ವೀರಭಟ : ಭೋ ರಾಜಶ್ರೇಷ್ಠ ನಿನ್ನಾಜ್ಞೆಯ ಮೇರೆಗೆ ಹೋಗಿ, ಆ ರಜಕಾಧಮನನ್ನು ಕೊಂದು ನಿಮ್ಮ ಕೋಪಾಗ್ನಿಯನ್ನು ನಂದಿಸುತ್ತೇನೆ. ಜೀಯಾ. ಅವನ ದೃಡತರವಾದ ದೇಹವೆಂಬ ಗುಡ್ಡಕ್ಕೆ ಸಿಡಿಲಿನಂತೆ ಘುಡ–ಘುಡಿಸಿ, ಆರ್ಭಟಿಸಿ ಧರುಣಿಯನ್ನು ಪುಡಿ–ಪುಡಿಗೈದು ಅವನನ್ನು ಆಕಾಶ ಮಂಡಲಕ್ಕೆ ತೂರಿ, ನಿನ್ನ ಆನಂದವೆಂಬ ಸಮುದ್ರವನ್ನು ಉಕ್ಕೇರಿಸುವುದಕ್ಕೆ ಚಂದ್ರನಂತೆಂದು ತಿಳಿಯೈ ಭೂಪಾಲನೇ.

ಮಾಚಯ್ಯ: ಓಂ ಶ್ರೀಮದ್ ವೀರಶೈವ ಮತಸ್ಥಾಪನಾಧಿಕಾರಿಯಾದ ಶ್ರೀ ಬಸವರಾಜರೇ ನಮೋ ನಮಃ. ಆದರೆ, ವೀರಶೈವಧರ್ಮದಂತೆ, ನಡೆಯದೆ, ವೀರಶೈವ ಧರ್ಮಕ್ಕೆ ವಿರುದ್ಧವಾಗಿ ವರ್ತಿಸಿದ ಅಧಮ, ಮೂರ್ಖ, ಚಾಂಡಾಲರನ್ನು ಯಮಪುರಕ್ಕೆ ಕಳುಹದೆ ಬಿಡುವರೇ? ಎಲವೋ ಮತಾಂಧ ಭವಿಗಳೇ, ಆ ಬಿಜ್ಜಳನಿಗೆ ಫಿರ್ಯಾದೆಯನ್ನು ಮಾಡಿರುವಿರೋ? ಒಳ್ಳೆಯದು, ಅವನು ಜಾತಿ ಅಭಿಮಾನದಿಂದ ಯಾವ ದಂಡನ್ನು ಕಳಿಸುತ್ತಾನೋ ಕಳಿಸಲಿ. ನೋಡಿಯೇ ಬಿಡುತ್ತೇನೆ. ಒಳ್ಳೆಯದು. ನಾನೂ ಅದೇ ಮಾರ್ಗವನ್ನೇ ಹುಡುಕುತ್ತಿರುವೆನು. ಬರಲಿ, ದೇವರು ತಾನಾಗಿಯೇ ಕೈ ಕಲಸಿಕೊಟ್ಟಂತಾಯಿತು, ಬರ್ಲಿ.

೧ ನೇ ಭಟನ ಪದ :

ನಿಲ್ಲೊ ನಿಲ್ಲೆಲೋ ಎಲ್ಲಿಗೆ ಹೋಗುವಿ ।
ಖುಲ್ಲ ಮಡಿವಾಳನೇ ॥
ಕಲ್ಯಾಣ ಪುರದೊಳು ಬಲ್ಲಿದ ನೀನೆಂದು ।
ನಿಲ್ಲದೆ ಕೊಲ್ಲುವೆನು ॥

ಮಾಚಯ್ಯನ ಪದ :

ಯಾತಕ್ಕೆ ಬೊಗಳುವಿ ಸ್ವಾನ ನಾಯಿಯೇ ಕೇಳೋ ।
ಮತಿಯಿಲ್ಲದ ಮೂರ್ಖನೇ ನೀನು ।
ಕ್ಷಿತಿಯೊಳು ನಿನ್ನನು ಹತಿಸುವೆ ನಾ ಇನ್ನು ।
ಸತ್ಯದಿ ಮೆರೆಯುವೆನು ನಾನು ॥

೧ನೇ ಭಟ: ಎಲವೋ ರಜಕ ರಜಕಾ ನಿಲ್ಲು ನಿಲ್ಲು. ಎಲ್ಲಿಗೆ ಗಮಿಸುವೆಯೊ? ದುರಾತ್ಮ. ನಾನು ಮಹಾರಾಜನ ಅಪ್ಪಣೆಯಂ ಹೊತ್ತು, ನಿನ್ನ ಕತ್ತನ್ನು ಕತ್ತರಿಸುವುದಕ್ಕೆ ಒತ್ತರದಿಂದ ಚಿತ್ತೀಶಕೋಟಿ ದೇವತೆಗಳೊಳು ಅತ್ಯಧಿಕನಾದ ಚಿತ್ತಜಾರಿಯು ಸಖನಂತೆ ಅತ್ಯುಗ್ರದಿಂದ ಮೃತ್ಯುವಿನೋಲ್ಬಂದಿರುವೆನು. ನಿನ್ನ ಕರ್ಮವೃತ್ತಿಯನ್ನು ಬಲ್ಲೆನು. ನೀನು ಇಷ್ಟಲಿಂಗಧಾರಿ, ವೀರಶೈವ ಮತೋದ್ಧಾರಕವಾದ ನಾಮಾವಳಿಗಳನ್ನು ಹೊತ್ತು, ಘಟ್ಟಿಯಾಗಿ ಸೃಷ್ಟಿಯೊಳು ಅಟ್ಟಹಾಸದಿಂದ ಹೊತ್ತುಕೊಂಡು ಬರುವ ನಿನ್ನ ಇಂಗಿತವನ್ನು ನಾನು ಬಲ್ಲೆನು. ಮಂಗನಾಟವನ್ನು ಬೆರಸಿ, ಭಂಗಿ ಸೇದುವರಂತೆ ಅಂಗಲಾಚಿ ಬೇಡುವೆಯೋ ಅಧಮಾಧಮ. ಆ ಭವಿಯು ಮುಟ್ಟಿದ ಕೂಡಲೇ ನಿನ್ನ ಬಟ್ಟೆ ಮಾಸಿದವೋ? ಅಪವಿತ್ರವಾದವೋ? ನಿಜಾ ಹೀಗಿದ್ದು, ಆ ನಿರಪರಾಧಿಯಾದ ಆ ಭವಿಯನ್ನು ಕೊಂದ ದೋಷವು ಬಿಡುವುದೆ? ಮೂಢ ಶಿಖಾಮಣಿ.

ಮಾಚಯ್ಯ : ಎಲವೋ ಕರ್ಮವಾದಿಯೇ, ಉಪವಾಸಾದಿ ವ್ರತಗಳನ್ನು ಕರ್ತವ್ಯವೆಂದು ಹೇಳುವಿಯಲ್ಲ, ತಡೆ. ಪತಿಯೇ ದೈವವೆಂದು ತಿಳಿದಿರುವ ಸಾಧ್ವಿಮಣಿಯು ಪತಿಯ ಅಪ್ಪಣೆ ಹೊರತು, ಇತರ ತೀರ್ಥಜಲ ಸ್ನಾನ, ಉಪವಾಸ, ಪಾರಾಯಣ, ಕಲ್ಲು-ಮಣ್ಣು-ತಾಮ್ರ ಮೊದಲಾದವುಗಳ ಪೂಜೆ ಇಂಥವುಗಳನ್ನು ಎಂದಿಗೂ ಮಾಡುವುದಿಲ್ಲ. ಇವೆಲ್ಲ ನಿಮ್ಮಂಥವರು ಆಚರಿಸತಕ್ಕ ಧರ್ಮಗಳು. ನಮ್ಮ ವೀರಶೈವ

ಶಿಷ್ಟಾಚಾರದ ಮಹತ್ವವನ್ನು ನೀನೇನು ಬಲ್ಲಿಯೊ ಹಂದಿಯೇ. ಅಣು-ರೇಣು-ತೃಣಕಾಷ್ಟಾದಿಗಳಲ್ಲಿ ಪರಿಪೂರ್ಣನಾಗಿರುವ ಶಿವನ ಮಹಿಮೆಯು ಶಿವಭಕ್ತರಿಗಲ್ಲದೆ, ಲಿಂಗರಹಿತರಿಗೆ ಇದರ ಇಂಗಿತವು ತಿಳಿಯುವುದೇ? ಮೂಢ ಕಪಿಯೇ.

೧ನೇ ಭಟ : ಛೇ ಮೂಢಾತ್ಮನಾದ ಮಡಿವಾಳನೇ ಸರಿ ಸರಿ ನಿನ್ನ ಮಹತ್ವವು ಗೊತ್ತಾಯಿತು. ಮೂರ್ಖ ಯಾವತ್ತೂ ಜಗತ್ತು ಶಿವನಿಂದ ಪರಿಪೂರ್ಣವಾಗಿ ತುಂಬಿರುವುದೆಂದು ಸಾರಿದೆಯಲ್ಲ ಒಳ್ಳೆಯದು. ಶಿವನು ಬ್ರಹ್ಮಾಂಡದ ತುಂಬ ಅಖಂಡವಾಗಿ ರುಂಡ-ಪಿಶಾಚಿಗಳಂತೆ ಜಗನ್ಮಯವಾದರೂ ಇರಬಹುದು. ಇರಲಿ, ಜಗತ್ತಿನ ತುಂಬಾ ಅಲ್ಲದೆ, ಅಣು-ರೇಣು-ತೃಣಕಾಷ್ಟಾದಿಗಳಲ್ಲಿ ಸಹ ಪರಿಪೂರ್ಣವಾಗಿದ್ದ ಬಳಿಕ, ಕುಲ-ಹದಿನೆಂಟು ಜಾತಿಯವರು, ಪಶು-ಪಕ್ಷಿ-ಮೃಗಗಳು ಇಂಥ ಅನೇಕ ಹೀನ ಜಾತಿಯವರು ಸಹ ಅಡ್ಡಾಡುವ ಮಾರ್ಗದಾವುದು? ಇದು ಅಲ್ಲದೆ, ಮಲ-ಮೂತ್ರಾದಿಗಳನ್ನು ತ್ಯಜಿಸುವುದಕ್ಕೆ ಮತ್ತಾವ ಸ್ಥಳ ಗೊತ್ತಿರುವುದು? ಏನೋ ಮೂಢ ಶಿರೋಮಣಿಯೇ, ಇವುಗಳನ್ನು ನಿಮ್ಮ ಶಿವನ ಮೇಲೆ ಬಿಡುವುದೆಂತೋ? ಇಂಥಾ ದುರಾಚಾರದ ಕೃತ್ಯವು ನಿಮ್ಮಲ್ಲಿರಲು ನಾವು ವೀರಶೈವರೆನ್ನುವುದು, ನಾವೇ ಶ್ರೇಷ್ಠರೆಂದು ಬೊಗಳುವುದನ್ನು ಕೇಳಿ, ರಾಜ್ಯದ ಜನರು ನಗದೇ ಇರುತ್ತಾರೆಯೇ? ಅಧಮ ವೇದವನ್ನು ಬಲ್ಲ ಕೋವಿದರು, ಗುರು-ಲಿಂಗ-ಜಂಗಮ ಭಕ್ತರು, ಅಷ್ಟಾವರಣ ಪಂಡಿತರು ಎನ್ನುವ ನಿನ್ನ ಅಯೋಗ್ಯವಾದ ವಚನವನ್ನು ಕೇಳಿ, ಛೇ ಮಂದಮತಿ ಅಪಭ್ರಂಶವೆಂದು ನಿನ್ನನ್ನು ನಿಂದಿಸದೇ ಬಿಡುವರೆ? ನಿಂದನೆ ಮತ್ತು ಬಂಧನಕ್ಕಾದರೂ ಆ ಕೆಲಸಕ್ಕೆ ಸಂಶಯವಿಲ್ಲ. ಮೂರ್ಖ ತಡಮಾಡದೇ ಉತ್ತರಕ್ಕೆ ಪ್ರತಿ ಉತ್ತರವನ್ನು ನೀಡು.

ಮಾಚಯ್ಯ: ಎಲವೋ ಕುಟಿಲಾತ್ಮನೇ, ನಿನಗೆ ಇನ್ನೂ ಈ ಸಂಗತಿಯು ಗೊತ್ತಾಗಲಿಲ್ಲವೆ? ಮತಿಯಿಲ್ಲದವನೇ ಶಿವನು ಜಗನ್ಮಯನಾದರೆ ಅಡ್ಡಾಡುವ ಬಗೆ ಹೇಗೆಂದು ಬೊಗಳುವಿಯಲ್ಲಾ ಅಧಮಾಧಮನೇ ಕೇಳು, – ಅಂಗದಲ್ಲಿ ಲಿಂಗವಿಲ್ಲದೆ ಮಂಗದೇಹಿಗಳಾದ ಸಿಂಗಮೂಳರ ಭಂಗದೇಹವನ್ನು ಮೆಟ್ಟಿ ಮೆಟ್ಟಿ, ಘಟ್ಟಿಯಾಗಿ ಅಟ್ಟಹಾಸದಿಂದ ದುಷ್ಟರನ್ನು ಕುಟ್ಟಿ ಕುಟ್ಟಿ ಪೊರೆಯುವಂತೆ ಒದ್ದು, ಅದ್ಭುತ ಘರ್ಜನೆಯಂತೆ ಮದೋನ್ಮತ್ತದಿಂದ ಶಿವನೇ ಸರ್ವೋತ್ತಮ ಜಗದ್ಭರಿತನೆಂತೆಂದು

ಅಪ್ಪಾಡುತ್ತೇವೆ, ಕಂಡ್ಯಾ ಮೂಢನೇ. ಇದು ಒಂದನೇ ಪ್ರಶ್ನೆ. ಇನ್ನು ಜಗತ್ತಿನ ತುಂಬಾ ಎಳ್ಳಷ್ಟು ಬಿಡದೆ, ತುಂಬಿಕೊಂಡಿದ್ದಾನೆಂದು ಬಳಿಕ ಮಲಮೂತ್ರಕ್ಕೆ ಸ್ಥಳ ಉಳಿದಿಲ್ಲವೆಂದು ಬೊಗಳಿದಿಯಲ್ಲಾ, ಖೂಳನಾಯಿಯೇ ಕೇಳು. ಜಗತ್ಕರ್ತ ವಿಷ್ಣುವಲ್ಲಭ, ಮಾರಾಂತಕ, ಕಾಲಾಂತಕ, ತ್ರಿಪುರಾಂತಕ, ಮಹೇಶನಾದ ಪರಶಿವಮೂರ್ತಿಯ ಸ್ತೋತ್ರವನ್ನು ಯಾವ ಅಧಮಾಧಮರು ಮಾಡುವುದಿಲ್ಲವೋ, ಅಂಥ ಭಂಡ ಹೊಲೆಯರ, ನೀಚ ಚಾಂಡಾಲರ ತುಂಡು ಬಾಯೊಳಗೆ ತಂಡ-ತಂಡವಾಗಿ ಮಲಮೂತ್ರಾದಿಗಳನ್ನು ಖಂಡಿತವಾಗಿ ವಿಸರ್ಜಿಸುವುದಕ್ಕೆ ವಿಸ್ತಾರವಾಗಿ, ಪ್ರಶಸ್ತದಿಂದ ಆ ಶಿವದ್ರೋಹಿ ಅಧಮರ ಬಾಯಿ ಎಂಬ ಸ್ಥಳವನ್ನು ಠರಾವು ಮಾಡಿಸಿರುವದು. ಮೂಢಾ ಇದರ ಹೊರತು ಜಗತ್ತಿನಲ್ಲಿ ಶಿವನಿಲ್ಲದ ಸ್ಥಳವು ಮತ್ತ್ಯಾವುದು ಇರುವುದಿಲ್ಲಾ ಕಂಡ್ಯಾ ಅಂಧಕ. ಎಲವೋ ಜ್ಞಾನಶೂನ್ಯನೇ ಕಾಡಿಗೆಯಲ್ಲಿ ಬಿಳಿಪುಂಟೆ? ಅಗ್ನಿಯಲ್ಲಿ ತಂಪುಂಟೆ? ಕಪ್ಪೆಯಲ್ಲಿ ಮಧುರ ಸ್ವರವುಂಟೆ? ನಿನ್ನಂಥ ಅಧಮಾಧಮನಲ್ಲಿ ಬುದ್ಧಿಯುಂಟೆ? ಬುದ್ಧಿಗೇಡಿ, ಬುದ್ಧಿಯಿಲ್ಲದೆ ಹುಚ್ಚನಂತೆ ಯಾತಕ್ಕೆ ಕೊಚ್ಚುವಿಯೊ? ಬಚ್ಚ ಬಾಯಾದೀತು, ತುಚ್ಛ ತುಚ್ಛ ನುಡಿಗಳನ್ನು ಉಚ್ಚರಿಸದಿರು. ಶಿವನುಡಿಯೆಂಬ ಸರ್ಪ ಕಚ್ಚೀತು. ದೂರ ನಿಲ್ಲು. ನಿನ್ನ ವಂಶರಾಶಿಗೆ ಕಾಲ ಮೃತ್ಯು ಎಂದು ತಿಳಿದುಕೊ ಘಾತಕ. ಶ್ರೀ ಗುದಿನೇಶ್ವರನ ಧ್ಯಾನವಿಲ್ಲವೋ ಘಾತಕಾ.

೧ನೇ ಭಟ : ಎಲವೋ ಗುಡ್ಡದೋಪಾದಿಯಲ್ಲಿ ಬೆಳೆದ ಹೆಡ್ಡ ಮಡಿವಾಳನೇ, ಕೇಳು – ನೀನು ಝೇಂಕಾರ ಮಾಡುತ್ತ ಸಿಂಹನಾದವನ್ನು ಮಾಡಿ, ಘರ್ಜಿಸಿ ಕಾಲ್ಗಗ್ಗರಿಯ ಝಣತ್ಕಾರದಿಂದ ಅಬ್ಬರಿಸಿ, ಕೊಬ್ಬದಿಂದುಬ್ಬೇರಿ ಕೋಲಾಹಲ ಸ್ವರವನ್ನು ಬೀರುತ್ತ ಬರುವ ನಿನ್ನ ಶಿವಮತವು ಒತ್ತಟ್ಟಿಗಿರಲಿ, ಮೂರ್ಖಾ ನೀನು ಪರಾಕ್ರಮಿಯಾದರೆ, ಎನಗೆ ಇದಿರಾಗಿ ಸಮರಕ್ಕೆ ನಿಲ್ಲು, ನಿಲ್ಲು ಗೊಲ್ಲಾ. ಗೊಲ್ಲನಂತೆ ಏಕೆ ಬೊಗಳುವಿಯೊ? ಈ ಹರಿತವಾದ ಶಸ್ತ್ರದಿಂದ ನಿನ್ನ ವಿಸ್ತಾರವಾದ ಶರೀರದಲ್ಲಿ ಚುಚ್ಚಿ ಚುಚ್ಚಿ ಚಿಲಿಲಿಲಿ ಎಂದು ರಕ್ತ ಹರಿಯುವಂತೆ, ಮಾಡಿ ಕಸಿವಿಸಿಗೊಳಿಸಿ, ಮುಂದಲೆಯ ಜಡೆಯನ್ನು ಹಿಡಿದು ಕೆಡಹಿ ಈ ಸುರಗಿಯಿಂದ ನಿನ್ನ ದೇಹವನ್ನು ಇಬ್ಭಾಗ ಮಾಡಿ ಸೀಳಿ ಭೂತಗಳಿಗೆ ಔತಣವನ್ನು ಮಾಡಿಸದಿದ್ದರೆ, ದಿಟ್ಟ ಪರಾಕ್ರಮಿ ಬಿಜ್ಜಳನ ಭಟನಾಗಿ

ಪ್ರಯೋಜನವೇನು? ಎಲೋ ಇನ್ನು ತಡವೇಕೆ? ನಿನ್ನ ನಿಟಿಲಾಕ್ಷನಾದ ವಿರೂಪಾಕ್ಷನನ್ನು ಈ ಕ್ಷಣದಲ್ಲಿ ನೆನೆಯುವಂಥವನಾಗು ನೀಚಾ.

ಮಾಚಯ್ಯ: ಯಲೌ ಮೂಢಾಧಮ ಹಿಂಡು ಶೂರರಲ್ಲಿ ಸಮರವನ್ನು ಗ್ಯೆದು ಖಂಡಿಸುವೆನೆಂಬ ಮದೋನ್ಮತವು ನಿನಗಿರಬಹುದು. ಎಲೋ ದುಷ್ಟ ಶಿರೋಮಣಿ ನಿನ್ನ ಮ್ಯೆ ಸೊಕ್ಕಿನಿಂದ ಕಠಿಣ ನುಡಿಗಳನ್ನಾಡುತ್ತಾ ಸಮರಕ್ಕೆ ನಿಂತಿರುವದು ಹೇಗಾಗುವದೆಂದರೆ, ಮೊಲ, ಜಿಂಕೆ, ನರಿ, ತೋಳ, ಹುಲಿ, ಕರಡಿ ಮೊದಲಾದವುಗಳನ್ನು ಕಟ್ಟಿಕೊಂಡಂತೆ, ಸಿಂಹರಾಜನ ಸಮರಕ್ಕೆ ಬಂದಂತಾಯಿತು. ತುಭ್ಯಾ ಹುಚ್ಚ ಹಿಡಿದವನಂತೆ ಎಚ್ಚರ ತಪ್ಪಿ ನೀಚ ನುಡಿಗಳನ್ನಾಡಬೇಡ. ನೀಚನೇ, ಕಿಚ್ಚುಗಣ್ಣಿನ ಭಕ್ತರ ಕೂಡ ಪೇಚಾಡಿದ ದಕ್ಷನು ಗರ್ವಿಷ್ಠನಾಗಿ ಅಚ್ಯುತನಿಗೆ ಮರೆ ಬೀಳಲು ಆ ಆಚ್ಯುತನು ಆ ಶರಭ ಮೂರ್ತಿಗೆ ಎದುರಾಗದೆ ಹುಲಿಯ ರೂಪವನ್ನು ಧರಿಸಲಿಲ್ಲವೇ! ಇದು ಅಲ್ಲದೆ, ಆ ಧನುಜಾರಿಯು ಮದವೇರಿ ಮತ್ತೊಂದು ಸಮಯದೋಳ್ ಮುದದಿಂದ ಹೆದರದೆ ವಕ್ರದಿಂ ಚಕ್ರವಂ ಬಿಡಲು, ಆ ಧನುಜಾರಿ ಚಕ್ರವು ಆ ಶಿವಭಕ್ತ ಶಿರೋಮಣಿಯಾದ ದದೀಚಿ ಮಹಾಋಷಿಗಳ ದೇಹಕ್ಕೆ ಸೋಂಕಿದ ಕೂಡಲೇ ಪುಂಡರೀಕ್ಷನ ಚಕ್ರ[illegible]ಡ್ಡಿಗಿಂತಲೂ ಕಡೆಯಾಗಿ ಬೆಂಡಾಗಿ ಬೀಳಲಿ[illegible] ಭಂಡಾ. ಭ[illegible]ರಿಗೆ ಭಂಡ ಪಾಷಾಂಡನಂತೆ ಏತಕ್ಕೆ ಒದ[illegible]ೋ ಗಾರ್ಧ[illegible]. ಜಗತ್ತಿನಲ್ಲಿ ಗುಂದಿನೇಶ್ವರ ಭಕ್ತರಿಗೆ ಇ[illegible] ನಿಲ್ಲುವ ಸಾಮಾರ್ಥ್ಯರಿರುವರೇ ಮೂರ್ಖಾ. ಸದ್ಯಕ್ಕೆ [illegible]ಕ್ಕೆ ನಿಲ್ಲು ನಿನ್ನ [illegible]ಕ್ತಿಯನ್ನು ನೋಡುವಾ:

೧ನೇ ಚ[illegible]: [illegible]ವೋ ಮಲಿನ ಬಟ್ಟೆಯನ್ನು ತೊಳೆಯುವ ಅಗಸಾ ಬಿಡು ನಿನ್ನ ಮಾತಿನ ಸೊಗಸಾ. ಓಂದಕ್ಕೆ ಯುದ್ಧ ಮಾಡಿ ಅಂದಗೆಟ್ಟು ಹೋದವರ ಸುದ್ದಿಯನ್ನು ನನ್ನ ಮುಂದೆ ಹೇಳಬೇಡ. ಅಂದಗೇಡಿ ಮಂದಮತಿಯಂತೆ ಯಾತಕ್ಕೆ ಪ್ರತಾಪವನ್ನು ಹೊಯಿಕೊಳ್ಳುವಿಯೋ ಅಧಮ. ನೀನು ಬಂಥರ ಪರಾಕ್ರಮಿಯಾದರೆ ಈ ಸಂದಿಸಿದ ಸಂಗ್ರಾಮದೋಳ್ ಹೊಂದಿಕೊಂಡು ಸಿದ್ಧನಾಗಿ ಯುದ್ಧಮಾಡು. ಇಂಥ ವೀರಪರಾಕ್ರಮನೆದುರಿನೋಳ್ ನಿನ್ನ ಸೌರ್ಯವು ಮಾರುವದೇ ಅಧೀರನೆ. ಮದೋನ್ಮತವಾದ ಮದ್ದಾನೆಯು ಕೇಸರಿಯ ಮರಿಯನ್ನು ಕಂಡು ಚಿರ್ ಚಿರ್ ಎಂದು ಬಾಯ್ದೆರೆದು ಪ್ರಾಣ ಬಿಟ್ಟಂತೆ. ಮೂರ್ಖಿ ವ್ಯರ್ಥ ನನ್ನ ಸೌರ್ಯಕ್ಕೆ ಈಡಾಗಿ ವ್ಯರ್ಥ ಪ್ರಾಣ ಕಳೆದುಕೊಳ್ಳಬೇಡ.

ಧರ್ಮಸೆರೆ ಬಿಡುತ್ತೇನೆ. ಎನಗೆ ಶರಣಾಗತನಾಗಿ ನಿನ್ನ ಆಸ್ಥಾನವನ್ನು ಕುರಿತು ಗಮನ ಹರಿಸು. ಪುನಃ ನಾಳಿನ ದಿವಸ ಇದೇ ರೂಪವನ್ನು ತೋರಿಸಿದರೆ, ಮಾತ್ರ ಗುರುಗುದಿನೇಶನ ಪಾದ ಸಾಕ್ಷಿಯಾಗಿ ನಿನ್ನ ಶಿರ ಹರಿಯುವದು ನಿಶ್ಚಯವೆಂದು ಭಾವಿಸು.

ಮಾಚಯ್ಯ: ಎಲವೋ ಮೃತ್ಯುವಿನ ಬಾಯಿಗೆ ತುತ್ತಾಗುವ ಬಿಜ್ಜಳನ ಭಂಟನೆ ಮುಂದೆ ಬರುವ ಹಾನಿಯನ್ನರಿಯದೆ, ಗ್ರಾಮ ಶೂಕರನಂತೆ, ಯಾತಕ್ಕೆ ಬೊಗಳುವಿಯೋ ಸ್ವಾನನೇ. ಎಷ್ಟು ಮಂದಿ ಇರುವಿರಿ ಅಷ್ಟು ಮಂದಿ ಒಟ್ಟುಗೂಡಿ ಒಮ್ಮಲೇ ಮಲ್ಲ ಯುದ್ಧವನ್ನು ತೋರಿಸಿರಿ. ಮೂರ್ಖರೆ, ಒಬ್ಬೊಬ್ಬರಾಳತನಕ್ಕೆ ಬರುವಿರೋ ಚಾಂಡಾಲರೆ, ಹಿಂದೆ ಕೌರವನ ಹನ್ನೆರಡು ಸಾವಿರ ಜಟ್ಟಿಯರನ್ನು ಒನಕೆಯಿಂದ ಕುಟ್ಟಿದ ಭಿಕಾರಿ ಭೀಮಸೇನ ರೌದ್ರಾವತಾರಿಯಂತೆ ಆಗುತ್ತದೆಂದು ತಿಳಿಯಿರಿ ತಿಳಿಯಿತೆ, ಮೂಢರೇ ನಿಮ್ಮಂಥ ಅಧಮಾಧಮರಿಗೆ ಬೆದರುವ ಪ್ರಾಣಿ ನಾನಲ್ಲ. ಅಯ್ಯೊ ನರಾಧಮ ಕದಳಿ ತೋಟವನ್ನು ಹೊಕ್ಕ ಮದಗಜವು ನಿರ್ಮೂಲ ಮಾಡುವಂತೆ ನಿಮ್ಮೆಲ್ಲರನ್ನು ಜಯಿಸುವ ಸಾಮಾರ್ಥ್ಯ ನನಗುಂಟು. ಇದನ್ನರಿಯದೆ ಕಾಡಾಗ್ನಿಯ ದೀವಿಗೆಯ ಕೂಡ ಅನೇಕ ಪತಂಗಗಳು ಬಿದ್ದು ಸತ್ತಂತೆ ವ್ಯರ್ಥ ಸಾಯಬೇಡ. ಪ್ರಾಣ ತಪ್ಪಿಸಿಕೊಂಡು ಓಡಿ ಹೋಗುವನಾಗು. ಹುಲ್ಲು ಜೀವಿಯಲ್ಲ ಹುಟ್ಟಿ ಬರಲಿಕ್ಕೆ. ಮೂರ್ಖ ತುರ್ತು ಶ್ರೀ ಗುರು ಗುದಿನೇಶನ ಧ್ಯಾನ ಮಾಡುತ್ತ (ಇಲ್ಲಿ ಭಟನು ಓಡಿ ಹೋಗುವನು).

ಮಾಚಯ್ಯ : ಎಲವೋ ಮೂರ್ಖಾ. ದುರುಳ ಬಿಜ್ಜಳನ ಭಟನಾದ ಕೆಟ್ಟ ಭವಿಯೇ. ಶಿವ ನಿಂದಕ. ಜೀವವನ್ನು ತಪ್ಪಿಸಿಕೊಂಡು ಹೋದಿಯಾ. ಮೂಢ ನಿನ್ನಂಥ ಮೂಢರು ರೂಢಿಯೊಳಿರುವರೇ? ಪಾತಾಳದಲ್ಲಿ ಅಡಗಿದರೂ ಕೂಡಾ ಬಿಡುವುದುಂಟೆ? ಕಡು ಮೂಢನೆ ಉರಿನೇತ್ರ ಇರುತ್ತದೆಂಬುದನ್ನರಿಯದ ದುರಾತ್ಮರೇ ನಿಮ್ಮಂಥ ಶಿವಭಕ್ತ ದ್ರೋಹಿಗಳಾದ ಭವಿಗಳ ಕುಲಗಳ ಮರಗಳ ಬೇರನ್ನು ಕಿತ್ತೊಗೆಯುವ ನಿಮಿತ್ಯಾರ್ಥವಾಗಿಯೇ ಬಂದಿರುವೆನು. ದಕ್ಷಾರಿ ಎಂಬುದನ್ನು ಅರಿಯಿರ್ರ್ಯಾ. ನರಕುರಿಗಳೇ ಶಿವಭಕ್ತರಿಗೆ ಎದುರಾಗಿ, ಜೀವಿಸುವ ಪರಾಕ್ರಮರಿರುವರೇ? ಪಂದಿಗಳಿರಾ, ವೀರಶೈವರ ಪರಾಕ್ರಮವು ಅವರ ಮಹಿಮಾತಿಶಯವು ನಿಮ್ಮಂಥ ಪಶುಗಳಿಗೆ ಗೊತ್ತಾಗುವದೇ? ಪಶುಗಳೇ ನಿಮ್ಮಂಥ ಪಶುಗಳನ್ನು ಕೊಲ್ಲುವದು ಒಂದು ನಿಮಿಷದಲ್ಲಿ ಸವರಿ

ಬಿಟ್ಟೇನು? ನಿಮ್ಮ ಅಧಮಾಧಮನಾದ ಬಿಜ್ಜಳನಿಗೆ ಶಿವಭಕ್ತರ ಮಹಿಮೆಯನ್ನು ತಿಳಿಸಲೆನ್ನುವದಕ್ಕೆ ಕೈ ಕಾದಿರುತ್ತೇನೆ. ಮತ್ತು ಶ್ರೀಗುರುಬಸವೇಶ್ವರನ ಮರ್ಜಿಯಂತೆ ನಡೆಯಬೇಕಾಗಿದೆ. ತಿಳಿಯಿತೆ. ಒಳ್ಳೇದು ಹೋಗು ಹೋಗು. ನಿನ್ನ ತಾಯಿ ಹೊಟ್ಟೆ ತಣ್ಣಗಿದೆ ಬದುಕಿಕೋ. ಬಸವಪ್ರಭು ನಿನ್ನ ಕರುಣ ಕಟಾಕ್ಷ ಒಂದಿದ್ದರೆ ಸಾಕು. ಇನ್ನು ತಡವೇಕೆ ಶ್ರೀಗುರು ಗುದಿನೇಶ್ವರನನ್ನು ಧ್ಯಾನಿಸುತ್ತಾ ಭವಿಗಳ ಮಾರ್ಗವನ್ನು ಕಾಯುತ್ತಲೇ ನಿಂತು ಬಿಡುತ್ತೇನೆ. ಯಾವ ಮಧಾಂಧರು ಬರುತ್ತಾರೋ ಬರಲಿ. ಹತಾರವು ತಯಾರ ಇರುತ್ತದೆ. ಬಸವ ಬಸವ.

೨ನೇ ಭಟನ ಪದ :

ನಿಲ್ಲಲೋ ಮಡಿವಾಳ ಎಲ್ಲಿಗೆ ಗಮಿಸುವಿ ।
ಕೊಲ್ಲದೆ ಬಿಡುವೆನೆ ನಾನು । ಖಿಲ್ಲತನವ ಬಿಡು ।
ಹಲ್ಲು ಮುರಿಯುವೆ ನಾನು। ಬಂದಿರುವೇ ನಾನು ॥ ೧ ॥

ಮಾಚಯ್ಯ ಪದ :

ಪಶುಪತಿ ಭಕ್ತರಿಗೆ ರಸನಿಯೋಳ್ಸರಿಯುಂಟೆ ।
ಪಶು ಮೂರ್ಖಗಾರ್ಧಪನೆ ನೀನು। ಆಸನ ಘಾತಕ ।
ನಿನ್ನ ಹೇಸಿನ ದೇಹವ ಬೇಸ್ಯಾಗಿ ಥಳಿಸುವೆನು ನಾನು ॥ ೧ ॥

೨ನೇ ಭಟ : ಎಲವೋ ಭಂಡರ ಸಿಖಾಮಣಿ ಗಂಡುಗಲಿಯಾದ ಮಂಡ ಮಡಿವಾಳನೇ ಕೇಳು. ಈ ಪ್ರಚಂಡ ಪರಾಕ್ರಮವು ನಿನಗೆ ಬರಬೇಕಾದರೆ ಯಾರಿಂದ ಬರುವಂತದ್ದಾಯಿತು. ಖಿಲ್ಲಾ ಬಲ್ಲಿದ ಮಲ್ಲನನ್ನು ಜೈಸಿದನೆಂದು ಅರ್ಭಟಿಸಿ ಆಯುಧವನ್ನು ಹಿಡಿದು ಭೀಕರಾಕೃತಿಯನ್ನು ಎನ್ನ ಮುಂದೆ ತೋರಿಸಬೇಡ. ಅಥವಾ ನಮ್ಮ ಭಟನನ್ನು ಬೆದರಿಸಿ ಪಲಾಯನ ಮಾಡಿದೆನೆಂಬೋದು ಇರಬಹುದು. ಮೂಢ ಸ್ವಲ್ಪ ತಡೆ. ಹುಲ್ಲೆಯು ಹುಲಿಯ ಕೂಡ ಹೆಣಗಾಡಲು ಬಂದಂತೆ ನೀಂ ಬರೋಣವಾಯಿತು. ಮೂರ್ಖಾ ನಿನ್ನ ಪೌರುಷವನ್ನು ನಾಂ ಬಲ್ಲೆ. ನಿನ್ನಂಥ ಅಧಮನಿಗೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವವನಲ್ಲ. ನಿನ್ನನ್ನು ಲಕ್ಷಿಸದೆ ಈಕ್ಷಣದಲ್ಲಿ ಯಮಪುರಕ್ಕೆ ಅಟ್ಟುವೆ. ಇಗೋ ಇನ್ನು ತಡವೇಕೆ ನನ್ನ ಕೋದಂಡವನ್ನು ನೋಡು ನಿನ್ನ ಶಿರಹರಿಯುವದು ನಿಶ್ಚಯವೆಂದು ತಿಳಿ ತಿಳಿ. ಮೂಢ ನಾ ಹೀಗೆ ಮಾಡದಿದ್ದರೆ ಬಿಜ್ಜಳ

ಮಹಾರಾಜನ ಭಟನಾಗಿ ಸಾರ್ಥಕವೇನು. ತೀವ್ರ ಯುದ್ಧಕ್ಕೆ ಸಿದ್ಧನಾಗು ಬುದ್ಧಿಗೇಡಿ.

ಮಾಚಯ್ಯ : ಎಲೋ ನೀಚಾತ್ಮನೇ ಒಣ ಪೌರುಷದ ನುಡಿಗಳನ್ನು ಆಡಬೇಡ. ತಮಂಧದೊಡ್ಡಿಗೆ ಬಾಲ್ಯ ಸೂರ್ಯನು ಬೆದರುವನೇ ಮೂರ್ಖ. ಕಾಡಾನೆಯ ಭೀಕರವನ್ನು ಕಂಡು ಮೃಗದಿಪನು ಅಂಜುವನೇ? ಬೆಟ್ಟಗಳಿಗೆ ವಜ್ರಾಯುಧವು ಹೆದರುವದೇ? ಮೂಢ. ವಿಚಾರ ಮಾಡದೇ ಹಿಡಿಯುತ್ತೇನೆಂದು ಕೊಬ್ಬೇರಿ ಕೂಗಬೇಡ. ಎನ್ನ ಚರಣಕ್ಕೆ ಶರಣಾಗತನಾಗು. ಅಂದರೆ ಶ್ರೀ ಗುರು ಗುದಿನೇಶ್ವರ ಕಾಪಾಡುತ್ತಾನೆ. ಇಲ್ಲದಿದ್ದರೆ ನಿನ್ನ ಶಿರವನ್ನು ಹರಿದು ರಕ್ತ ಪ್ರಹರ ಹರಿಸಿ ಬಿಡುತ್ತೇನೆ ನೋಡು. ಭ್ರಷ್ಟ ಶಿವಭಕ್ತರಿಗೆ ಹರಿ ಅಜ ಸುರೇಂದ್ರರು ಸಹ ಸರಿಯಲ್ಲವೆಂದ ಬಳಿಕ ನಿನ್ನಂಥ ಯಕ್ಕಶ್ಚಿತ ನರಕುರಿಯ ಪಾಡೇನು ನರಾಧಮ. ಶಿವಭಕ್ತ ಪ್ರಭುರ್ಮಮ ಎಂದು ತ್ರೈ ಮೂರ್ತಿಗಳು ಸಹ ಸಹಿ ಮಾಡಿರುತ್ತಾರೆ. ಬುದ್ಧಿಗೇಡಿ ಇದನ್ನು ತಿಳಿದು ಶರಣಾಗತಾನಾಗು. ಧರ್ಮಸೆರೆ ಬಿಡುತ್ತೇನೆ. ಬದುಕಿಕೋ.

೨ನೇ ಭಟ: ಎಲೋ ಮೂರ್ಖ ನನ್ನಂಥ ವಿರಾಧಿವೀರನ ಸಮ್ಮುಖದೊಳುನಿಂತು ಯುದ್ಧವನ್ನು ಮಾಡುವ ಸಮರ್ಥರನ್ನು ಕಾಣೆನು. ಗಾರ್ಧಪಾ ವ್ಯರ್ಥವಾಗಿ ಯಾತಕ್ಕೆ ಆಟೋಪದ ನುಡಿಗಳನ್ನು ಬಳಸುವೆಯೋ ಅಧಮಾ. ವ್ಯರ್ಥ ನನ್ನ ಮುಂದೆ ನಾಂ ವೀರಶೈವ ಶಿವಭಕ್ತ ಶಿರೋಮಣಿಯೆಂದು ಹೇಳುವ ನಿನ್ನ ಪೌರುಷವು ಹೇಗಾಗುವದೆಂದರೆ ಶುನಕನಂ ಕಂಡು ಓಡಿ ಹೋಗುವ ಜಂಬೂಕನಂತೆ ಮತ್ತು ಮೃಗೇಂದ್ರನ ಕಂಡು ದಂತಿಯು ಕಳವಳಗೊಂಡು ಪ್ರಾಣ ಬಿಟ್ಟು ಸತ್ತಂತೆ ವ್ಯರ್ಥ ಸಾಯಬೇಡ. ನಿನ್ನ ಆಸ್ಥಾನವನ್ನು ಕುರಿತು ಗಮನ ಹರಿಸು. ಮೂರ್ಖ ಶಿವಭಕ್ತರಿಗೆ ಹರಿ ಅಜಸುರೇಂದ್ರರು ಸರಿ ಇಲ್ಲವೆಂದು ಡಾಂಭೀಕವನ್ನು ಹೇಳಬೇಡ. ಹೇಳುವಿಯಾ ಅಧಮಾಧಮಾ ನಿನ್ನ ಹಲ್ಲುಗಳನ್ನು ಮುರಿದು ಬಲ್ಲಿದನೆಂದು ಬೊಗಳುವ ನಾಲಿಗೆಯನ್ನು ಸರ್ರನೆ ಕಿತ್ತು ರಕ್ತ ಪಾನ ಮಾಡಿ ಬಿಡುವೆ ಮೂಢಾ ಗಾಢಾ.

ಮಾಚಯ್ಯ: ಎಲವೋ ಮಂಡಲದಲ್ಲಿ ಹೆಂಡದೇವರನ್ನು ಕಂಡಕಂಡಂತೆ ಡಾಂಭಿಕತನದಿಂದ ಪೂಜೆಯ ಮಾಡಿ ಬಂಡ ಹೊಲಿಯರಂತೆ ನಾಚಿಕಿಲ್ಲದ ಎಡಿಯ ಅನ್ನವನ್ನು ತಿಂದು ತಿಂದು ತುಂಡು ನಾಯಿಯಂತೆ ಕುಯ್ ಕುಯ್ ಎಂದು ಕೊಬ್ಬಿನಿಂದ ಅಬ್ಬರಿಸಿ ಉಬ್ಬುಬ್ಬಿ ಒದರುವ

ಮಬ್ಬಿನ ಶುನಕನೇ ಕೇಳು, ಸಾಕ್ಷಾತ್ ಜಗದ್ರಕ್ಷಕ ನಿಟಿಲಾಕ್ಷ ರಾಕ್ಷಸರ ರುಂಡ ಮಾಲೆಯಂ ತಂಡ ತಂಡದಿಂ ಧರಿಸಿ, ಇಕ್ಷು ಚಾಪನ ಸೊಕ್ಕನ್ನೊಕ್ಕಲಿಕ್ಕಿ ಮುಕ್ಕಣ್ಣನೆನಿಸಿ, ರಕ್ಕಸಾಂತಕನಿಗೆ ಚಕ್ರವನ್ನಿತ್ತು ಅಹಂಕಾರದಿಂ ಮೆರೆದ ಬ್ರಹ್ಮನ ಕತ್ತನ್ನು ಕತ್ತರಿಸಿದಂಥ ದೇವಾಧಿದೇವಾ ಶಂಭುಮೂರ್ತಿ ಮೃತ್ಯುಂಜಯನ ಭಕ್ತರಾದ ಶಿವಶರಣರು ಸಟಿಯಾಡುವರೇ ಸ್ವಾನಾ. ಮೋಕ್ಷವನ್ನು ಕೊಡತಕ್ಕಂಥ ಪರಮಾತ್ಮನಂ ಬಿಟ್ಟು ಕೆಟ್ಟದೇವತೆಗಳನ್ನು ಪೂಜೆ ಮಾಡಿದರೆ ಭವಮರಣ ತಪ್ಪುವದೇ ನೀಚನೇ. ಕಲ್ಪವೃಕ್ಷಕ್ಕೆ ಜಾಲಿಮರವು ಸರಿಯಾಗುವದೇ, ಅಮೃತಕ್ಕೆ ಎಂಜಲವು ಸರಿಯಾಗುವದುಂಟೆ. ರತ್ನವನ್ನು ಕಂಡು ಅನೇಕ ಗಾಜಿನ ಬಳೆಗಳೆ ನಿಂದಿಸಿದಂತೆ ಯಾತಕ್ಕೆ ಹೊಯ್ಕೊಳ್ಳುವಿಯೋ ಜ್ಞಾನವಿಲ್ಲದ ಕುರುಡನೇ. ಅಂಧಕಾ ಜಂಗಮವೇ ಶ್ರೇಷ್ಠ, ಜಂಗಮವೇ ಅಧಿಕ, ಜಂಗಮವೇ ಜಗದ್ಭರಿತ. ಇಂಥಾ ಜಂಗಮ ಪ್ರಾಣವೇ ಎನ್ನ ಪ್ರಾಣವೆಂದು ಯಾವನು ನಡೆಯುವನೋ ಅವನೇ ದೇವತಾ, ಅವನೇ ಸತ್ಯ ಶರಣ. ಅಷ್ಟಾವರಣ ಭಕ್ತ. ಇಂಥ ವೀರಶೈವನಿಗೆ ಯಾವ ಭಯವಿರುವದೈ ಅವಿವೇಕಿ.

೨ನೇ ಭಟ: ಎಲವೋ ಮೂಢ ಮಡಿವಾಳನೇ ನಿಮ್ಮ ಶಿವನು ಘನಮಹಿಮನೆಂದು ವ್ಯರ್ಥವಾಗಿ ಯಾತಕ್ಕೆ ಒಣ ಪೌರುಷದ ನುಡಿಗಳನ್ನಾಡುತ್ತೀಯೋ. ಮೂಢನೇ ಮೂರ್ಖ ನಿಮ್ಮ ಶಿವನು ಅವನನ್ನು ಕಾಣದೇ ಭಂಗಪಟ್ಟು ಇನ್ನೇನು ಗತಿಯೆಂದು ಸ್ಮಶಾನವನ್ನು ಸೇರಿ ಕಳವಳಗೊಂಡು ಜಠರಾಗ್ನಿಯ ಬಾಧೆಯನ್ನು ತಡೆಯಲಾರದೆ ಹೆಣದ ಡೋಗಿಗಳನ್ನು ಕೈಯಲ್ಲಿ ಹಿಡಿದುಕೊಂಡು ಪುರದ ಬೀದಿಯಲ್ಲಿ ತಿರುಗುತ್ತಾ ತಿರುಗುತ್ತಾ ತಿರಿದುಂಡನೇಕೆ ? ತಿರುಕಾ ಇದು ಅಲ್ಲದೆ ನಿಮ್ಮ ಶಿವನು ದೊಡ್ಡವನಾದರೆ ರಕ್ಕಸರಿಗೆ ಬೆದರಿ ಭಯಗೊಂಡು ಮಹಾಮೇರುವಿನಲ್ಲಿ ಅಡಗಿದನೇಕೆ. ವಿಚಾರವಿಲ್ಲದವನೇ ನಮ್ಮ ಸಾಕ್ಷಾತ್ ಜಗದ್ರೂಪ ವಿಷ್ಣು ಲೋಕಕಂಟಕನಾದ ಹಿರಣ್ಯಕಶಪ್ಪನನ್ನು ವಧಿಸಿ ಹೊಟ್ಟೆಯಂ ಬಗೆದು ರಕ್ತಪಾನ ಮಾಡಿ, ಸಕಲ ದೇವತೆಗಳನ್ನು ಸಂರಕ್ಷಿಸಲಿಲ್ಲವೆ? ಮತಿ ಇಲ್ಲದಧಮಾ ಮತ್ತು ರಕ್ಕಸನಾದ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿ ಒಂದು ಪಾದವನ್ನು ಆಕಾಶಕ್ಕೆ ಸೋಂಕಿಸಲಿಲ್ಲವೇ. ಇಂಥ ಶ್ರೀ ಮನ್ಮಹಾ ವಿಷ್ಣುವಿನ ಪ್ರತಾಪವು ಪುರಾಣೋಕ್ತಿಯಲ್ಲಿ ಸಹ ಪ್ರಸಿದ್ಧವಾಗಿರುತ್ತದೆ. ಬುದ್ಧಿಯಿಲ್ಲದ ಅಧಮಾ ವ್ಯರ್ಥ ನಿಮ್ಮ ಶಿವನ

ಪೌರುಷವನ್ನು ಮುಂದೆ ಹೇಳುವದನ್ನು ಸಾಕು ಮಾಡು. ಬೇಗನೇ ಯುದ್ಧಕ್ಕೆ ಸಿದ್ಧನಾಗು.

ಮಾಚಯ್ಯ: ಛೀ ಮೂರ್ಖಾ ದ್ವಂದ್ವಾರ್ಥವನ್ನು ಯಾತಕ್ಕೆ ಬೊಗಳುವಿಯೋ ನಿಂದಕ ಶಾಸ್ತ್ರಾಧಾರ ನಿನಗೇನು ಗೊತ್ತು ಬುದ್ಧಿ ಶೂನ್ಯನೇ. ಗಾಧರ್ಪನಂತೆ ಯಾತಕ್ಕೆ ಒದ್ರಾಡುವಿಯೋ. ಮಂದಮತಿ ಶ್ರೀ ವಿಷ್ಣುಕರ್ತನಾದ ಬ್ರಹ್ಮನು ಅಹಂಕಾರದಿಂದ ನಾನೇ ಸಾಕ್ಷಾತ್ ಪರಬ್ರಹ್ಮ ಪರಮಾತ್ಮ ಸದಾಶಿವನೆಂದು ನುಡಿಯಲು ನಮ್ಮ ಶಿವನು ಕೋಪಗೊಂಡು ಚಳ್ಳುಗುರಿನಿಂದ ಅವನ ಮಧ್ಯದ ತಲೆಯನ್ನು ಕತ್ತರಿಸಿ ಬ್ರಹ್ಮಕಪಾಲಮಂ ಮಾಡಿಕೊಂಡಿರುವದನ್ನು ಮರೆತಿರುವೆಯೋ ನೀಚಾ. ವಿಚಾರ ಶೂನ್ಯನೆ ಹಿರಣ್ಯಕಶ್ಯಪನೆಂಬ ರಾಕ್ಷಸನು ಲೋಕ ಕಂಟಕನಾದದ್ದೇನು ನಿಜ, ಆದರೆ ದೇವತೆಗಳು ನಮ್ಮ ಶಿವನಿಗೆ ಮೊರೆಯಿಡಲು ಪರಮಾತ್ಮನು ಅವನನ್ನು ಕೊಲ್ಲುವುದಕ್ಕೆ ಹರಿಗೆ ಅಪ್ಪಣೆಯನ್ನು ಕೊಡಲು ಆ ನಿಮ್ಮ ಹರಿಯು ನರಸಿಂಹನಾಗಿ ಅವನ ಕರಳಂಬಗೆದು, ರಕ್ತವನ್ನು ಕುಡಿದು ಮದವೇರಿ ಜಗವನ್ನು ಬಾಧಿಸುತ್ತಿರಲು, ಅವನನ್ನು ಕೊಲ್ಲುವದಕ್ಕೆ ನಮ್ಮ ಶ್ರೀಗುರು ವೀರಭದ್ರದೇವರು ಶರಭಾವತಾರಮಂ ತಾಳಿ ಆ ನರಸಿಂಹನ ಶಿರಹರಿದು ಚರ್ಮಮಂ ಸುಲಿದು ಪರಶಿವನಿಗೆ ಹೊದಿಕಿಯಂ ಮಾಡಿಕೊಂಡು ಮೆರೆದದ್ದು ಗೊತ್ತಿಲ್ಲವೆ ಬುದ್ದಿಗೇಡಿ. ಮತ್ತು ಬಲಿಚಕ್ರವರ್ತಿಯನ್ನು ನಿಮ್ಮ ಹರಿಯು ವಾಮನನಾಗಿ ಅವನಂ ಪಾತಾಳಕ್ಕೆ ಮೆಟ್ಟಿ ಒಂದು ಪಾದವನ್ನು ಆಕಾಶಕ್ಕೆ ಇಡಲು, ಆ ಪಾದವು ಊರ್ಧ್ವಲೋಕಕ್ಕೆ ಕಂಟಕವಾಗಲು ನಮ್ಮ ಸಾಕ್ಷಾತ್ ಶಿವನು ಇದನ್ನರಿದು ವಾಮನನ್ನು ಕೊಂದು ಅವನ ನಡು ಬೆನ್ನಿನ ಎಲುಬನ್ನು ಕರದೋಳ್ ಧರಿಸಿ ವಿಷ್ಣು ಕಳಂಕ ಧರನೆಂಬ ನಾಮಂ ಹೊತ್ತು ಜಗತ್ತಿನಲ್ಲಿ ಮೆರೆದದ್ದು ಗೊತ್ತಿಲ್ಲವೆ. ಮೂರ್ಖಾಧಮ, ಮೂರ್ಖಾಸುಳ್ಳಿಗೆ ತವರ ಮನಿಯಾದ ಕಳ್ಳಾ ಸುಳ್ಳೇ ಯಾತಕ್ಕೆ ತರ್ಕಿಸುವಿಯೋ, ಆ ಕರ್ಣನಿಗೆ ಗೂಗೆ ನಿಂದಿಸಿದರೇನಾಗುವದು. ಜಾಗ್ರತಿ ಸಮರಕ್ಕೆ ನಿಲ್ಲು ಖುಲ್ಲಾ.

೨ನೇ ಭಟ : ಛೀ ಮೂರ್ಖರಜಕನೇ ಶಿವನೇ ಸರ್ವೋತ್ತಮನೆಂದು ಹೇಳುತ್ತಿಯಲ್ಲ, ಮೂರ್ಖ ಪಂಡಿತ ಸೋಮುಕಾಸುರನು ಲೋಕಕಂಟಕನಾಗಿ ತ್ರಿಭುವನಗಳನ್ನು ಬಾಧಿಸುತ್ತಿರಲು ಮತ್ತು ಚತುರ್ವೇದಗಳನ್ನು ಕದ್ದು ಸಮುದ್ರದೋಳ್ ಅಡಗಲು ನಮ್ಮ ಜಗತ್ಪಾಲಕನಾದ ಶ್ರೀಹರಿಗೆ ಅಜಸುರೇಂದ್ರರು ಮೊರೆ ಇಡಲು ಹರಿಯು ಮತ್ಸ್ಯವತಾರಮಂ ಧರಿಸಿ,

ಸಮುದ್ರವನ್ನು ಪ್ರವೇಶಿಸಿ ಆ ನೀಚನಾದ ಸೋಮಕಾಸುರನನ್ನು ಸಂಹರಿಸಿ ವೇದವನ್ನು ತೆಗೆದುಕೊಂಡು ಬರಲಿಲ್ಲವೇ ಪಿಶಾಚಿ. ಇಂಥ ಮಹಿಮಾತಿಶಯವು ನಿಮ್ಮ ಬೂದಿ ಬಡಕನಾದ ಶಿವನೆಂಬೊ ಗೊರವನಿಗೆ ಇರುವದೇ ಮೂರ್ಖಾ, ಇದಂತಿರಲಿ. ನರಕಾಸುರನೆಂಬ ರಾಕ್ಷಸನು ದಿಕ್ಪಾಲನನ್ನು ಸೆರೆ ಹಿಡಿದು, ಬ್ರಹ್ಮಾಂಡ ತಂಡಲವನ್ನು ಆಂಡಲಿದು ಪೀಡಿಸುವ ಕಾಲದಲ್ಲಿ ನಿಮ್ಮ ಶಿವನು ಮಲಗಿದ್ದನೋ ಏನ್ ಸತ್ತಿದ್ದನೋ ಹೇಡಿಯಾಗಿದ್ದನೋ. ಹೌದು ಹೌದು. ಅಂಥ ಸಮರ್ಥನಾಗಿದ್ದರೆ, ಆ ನರಕಾಸುರನನ್ನು ಕೊಂದು ದೇವತೆಗಳ ಬಾಧೆಯನ್ನು ಯಾಕೆ ಪರಿಹರಿಸಬಾರದು ಮೂಢಾ. ನಮ್ಮ ಅಂತಃಕರುಣ ಶಾಲಿಯಾದ ಅಸುರಾಂತಕನು ವರಾಹ ಅವತಾರವನ್ನು ತಾಳಿ ಆ ನರಕಾಸುರನನ್ನು ಕೊಂದು ಲೋಕ ಕಂಟಕವನ್ನು ಪರಿಹರಿಸಲಿಲ್ಲವೇ ಬೂದಿ ಬಡಕ. ಇದು ಅಲ್ಲದೆ ನಿಮ್ಮ ಶಿವನು ಪೂಜ್ಯನಾದರೆ ಆ ದಕ್ಷಬ್ರಹ್ಮನ ಯಜ್ಞಕ್ಕೆ ಯಾಕೆ ಅಗ್ರಗಣ್ಯನಾಗಲಿಲ್ಲ. ಇಂಥ ಆ ಪೂಜ್ಯನಾದ ನಿಮ್ಮ ಶಿವನ ಪೌರುಷವನ್ನು ಕೊಂಡಾಡಲಿಕ್ಕೆ ನಾಚಿಕೆ ಬರುವದಿಲ್ಲವೇ ಅಗಸ ನೀನು ಮಾಡುವದು ಮೋಸ.

ಮಾಚಯ್ಯ: ಎಲವೋ ಭಂಡರ ಶಿಖಾಮಣಿಯಾದ ಚಂಡ ಪರವಾದಿಯೇ ಕೇಳು ತಂಡ ತಂಡದ ನುಡಿಗಳನ್ನಾಡಿ ಮಾನಭಂಗವನ್ನು ಮಾಡಿಕೊಳ್ಳಬೇಡ. ಮೂಢಾ, ಆ ಸೋಮಕಾಸುರನೆಂಬ ದೈತ್ಯನನ್ನು ನಾಶಗೊಳಿಸಲಿಕ್ಕೆ ನಿಮ್ಮ ವಿಷ್ಣುವಿಗೆ ನಮ್ಮ ಶಿವನು ಅಪ್ಪಣೆಯನ್ನು ಇತ್ತನು. ಹರನಾಜ್ಞೆಯನ್ನು ಕೈಕೊಂಡು ಹರಿಯು ಮತ್ಸ್ಯ ಅವತಾರವನ್ನು ಧರಿಸಿ ಸೋಮಕಾಸುರನನ್ನು ಕೊಂದ ಬಿಂಕದಿಂದ ನಮ್ಮ ಶಿವನಂ ಮರೆತು ಜಗತ್ತನ್ನು ಲಯ ಮಾಡುತ್ತಿರಲು ಶಂಕರನು ಭಗವಾನ್ ರುದ್ರನಾಗಿ ಆ ನಿಮ್ಮ ಹರಿಯ ಮತ್ಸ್ಯ ಅವತಾರವನ್ನು ಖಂಡಿಸಿದ್ದು ಗೊತ್ತಿಲ್ಲವೇ ಮೂರ್ಖ. ಮತ್ತು ಭ್ರಷ್ಟನಾದ ನಿಮ್ಮ ಹರಿಯು ನರಕಾಸುರನನ್ನು ಸಂಹಾರ ಮಾಡುವದಕ್ಕೋಸ್ಕರ ವರಾಹನಾಗಿ ಆ ನರಕಾಸುರ ದೈತ್ಯನನ್ನು ಸಂಹರಿಸಿ ನರಕ ಕೋಟಿಯನ್ನು ಬಂಧಿಸಿ ಅಜ್ಞಾನ ಅಂಧಕಾರದೊಳಗೆ ಮುಳುಗಿ ಮುಂದೆ ಬರುವ ಹಾನಿಯನ್ನು ತಿಳಿಯದೆ ಸೊಕ್ಕಿ ಎಕ್ಕಲನಾಗಿ ಜಗತ್ತನ್ನು ಬಾಧಿಸುತ್ತಿರಲು ನಮ್ಮ ತಾರಕ ಧ್ವಂಸಿಯಾದ ಶ್ರೀ ಷಣ್ಮುಖದೇವರು ಆ ಹಂದಿಯಾದ ನಿಮ್ಮ ಹರಿಯನ್ನು ಸದೆ ಬಡಿದು ಅವನ ಕೋರೆ ದವಡಿಯನ್ನು ಮುರಿದು ಜಗತ್ತನ್ನು ಪರಿಪಾಲಿಸಲಿಲ್ಲವೆ. ? ಕಪಿ ಅಧಮಾಧಮ ಇದು ಅಲ್ಲದೆ ನಿಮ್ಮ ಕೃಷ್ಣನು ಶಿವನಂ ಮರೆತು ದಕ್ಷನ

ಯಾಗಕ್ಕೆ ಅಗ್ರಗಣ್ಯನಾಗಿರುವಲ್ಲಿ ನಮ್ಮ ಶ್ರೀ ವೀರಭದ್ರದೇವರು ಶರಜಾಲಮಂ ಹೊಡೆಯಲು ನಿಮ್ಮ ಹರಿಯು ಜಿಂಕೆ ರೂಪವನ್ನು ಧಾರಣಮಾಡಿಕೊಂಡು ಓಡಿ ಹೋಗಲು ವೀರಭದ್ರ ದೇವನು ಆ ಜಿಂಕೆಯನ್ನು ಕೊಲ್ಲಲಿಲ್ಲವೆ. ಕಪಿಯ ಆ ಕಪಟ ಕೃಷ್ಣಾಜಿನವನ್ನು ನಿರಾರ್ಥಕ ಮಾಡಲಾಗದೆಂದು, ವೀರಭದ್ರನಿಗೆ ನಿಮ್ಮ ಕೃಷ್ಣನು ಬೇಡಿಕೊಳ್ಳಲು ಯಾಗಕಾಲದಲ್ಲಿ ಕೃಷ್ಣಾಜಿನವನ್ನು ಧರಿಸುವದಕ್ಕೆ ವೀರಭದ್ರನು ಅಪ್ಪಣೆಯನ್ನು ಕೊಟ್ಟು ದಕ್ಷ ಬ್ರಹ್ಮನಿಗೆ ಕುರಿತಲೆಯಂ ಇಟ್ಟು ಸೂರ್ಯನ ಹಲ್ಲಂ ಮುರಿದು ಅಗ್ನಿ ನಾಲಿಗೆಯಂ ಕಿತ್ತು ಲಕ್ಷ್ಮೀದೇವಿಯ ಮಲಿಯಂ ಸವರಿ ಸರಸ್ವತಿ ಮೂಗಂಕೊಯ್ದು ಸರ್ವದೇವತೆಗಳನ್ನು ಭಂಗಗೊಳಿಸಲಿಲ್ಲವೇ. ಮೂರ್ಖಾ ಇಂಥ ಶಿವನ ಮಹಿಮೆ ಗೊತ್ತಿಲ್ಲವೆ. ಕತ್ತೆಯಂತೆ ಯಾತಕ್ಕೆ ಒದರುವಿಯೋ ಮೂಢ ಅಧಮಾ.

೨ನೇ ಭಟ ಪದ :

ತುಡುಗ ಮಡಿವಾಳನೇ ಯಾತಕ್ಕೆ ಬೊಗಳುವಿ ।
ಪೊಡವಿಗೆ ವಿಷ್ಣುವನೇ ಆದಿ ದೃಢಮತಿ ವ್ಯಾಸನು ।
ಬಿಡದೇ ಕೈಯತ್ತಿರುವ ಖಿಡುಮೂರ್ಖಗೊತ್ತಿಲ್ಲವೆ ನಿನಗೆ ॥ ೧ ॥

ಮಾಚಯ್ಯ ಪದ :

ಹರಿಯೆಂಬ ಹೆಣ್ಣಿಗೆ ಹರನೇ ಗಂಡಾಗಿರುವ ।
ಸೊರಗಿದ ಶೂಕನೇ ನೀನು ಹರಿಯೇ ದೇವರೆ ಮ ।
ಎತ್ತಿದ ಕರಗಳ ತವಹರಿಸಿದವರ್ಯಾರು ನಂದೀ ॥ ೧ ॥

೨ನೇ ಭಟ: ಛೇ ಕಡು ಮೂರ್ಖನಾದ ತುಡುಗ ಮಡಿವಾಳನೇ ಕೇಳು ನಿನ್ನ ತುಡುಗ ಗುಣಗಳನ್ನು ಎಷ್ಟೆಂದು ವರ್ಣಿಸಿದರೂ ತೀರದು. ಮೂರ್ಖ ಇಲ್ಲ ಸಲ್ಲದ್ದನ್ನು ಎಲ್ಲಿಂದ ಹುಡುಕ್ಯಾಡಿ ತರುವಿಯೋ ಖಿಲ್ಲಾ. ನಮ್ಮ ಆದಿ ನಾರಾಯಣ ಮೂರ್ತಿಯು ಜಗತ್ತಿಗೆ ಆದಿಶಕ್ತಿ ಆದಿಶಕ್ತಿ ಎಂದು ಎನಿಸಿಕೊಂಡು ಮೋಹಿನಿ ರೂಪವನ್ನು ಧಾರಣ ಮಾಡಿ ಲೋಕ ಕಂಟಕನಾದ ನಿಮ್ಮ ಶಿವನಿಂದ ಉರಿಹಸ್ತವನ್ನು ಪಡೆದ ಬಸ್ಮಾಸುರನನ್ನು ಭಸ್ಮ ಮಾಡಿ ಬ್ರಹ್ಮಾಂಡ ಮಂಡಲವನ್ನು ಕಾಪಾಡಲಿಲ್ಲವೆ. ಮೂಢರ ಶಿಖಾಮಣಿ ಮತ್ತು ವಿಷ್ಣುಮಯಂ ಜಗತ್ತೆಂದು ನಿಮ್ಮ ಕೈಲಾಸವೆನಿಸುವ

ಕಾಶಿಯಲ್ಲಿ ವ್ಯಾಸನು ಕೇಶವನೇ ಜಗದೀಶನೆಂದು ಕೈಯತ್ತಿ ಹೇಳಿರುವದನ್ನು ಮರೆತಿರುವಿಯೋ ಮೂರ್ಖ ತಿಳಿದು ನೋಡು.

ಮಾಚಯ್ಯ: ಎಲವೋ ಉಬ್ಬಿಕೊಬ್ಬಿದ ಮಬ್ಬಿನ ಚಾಂಡಾಲನೆ ಕೇಳು. ಮೂರ್ಖ ನಿಮ್ಮ ಹರಿಯು ಆದಿಶಕ್ತಿಯಾದದ್ದೇನು ನಿಜ. ಆದರೆ ಆ ನಿಮ್ಮ ಹೆಣ್ಣಾದ ಹರಿಗೆ ಗಂಡನ್ಯಾರು ಮೂರ್ಖ. ವಿಚಾರವಿಲ್ಲದೆ ಬೊಗಳಬೇಡ. ಭ್ರಷ್ಟ ಅಟ್ಟಹಾಸದಿಂದ ಘಟ್ಟಿಯಾಗಿ ನಮ್ಮ ಹರಿಯೇ ಆದಿಶಕ್ತಿ. ಆದಿಶಕ್ತಿ ಎಂದೆನ್ನಲಿಕ್ಕೆ ನಾಚಿಕೆ ಬರುವದಿಲ್ಲವೇ? ಶಿವನಿಂದಕ ಕೆಟ್ಟ ಭವಿಯೇ ನೀಚಾತ್ಮ ಆ ಹೆಣ್ಣಾದ ಹರಿಗೆ ನಮ್ಮ ಶಿವನೇ ಗಂಡನಾಗಿ ಜಗತ್ತೆಲ್ಲವನ್ನು ಕಾಪಾಡಲಿಲ್ಲವೇ? ಕಾಪಾಡುವದು ಮರೆತಿರುವಿಯೋ ಮೂಢಾ? ಆ ಕಾರಣ ನಮ್ಮ ಶಿವನಿಗೆ ವಿಷ್ಣುವಲ್ಲಭನೆಂಬ ನಾಮವು ಜಗತ್ಪ್ರಸಿದ್ಧವಾಗಿ ಶೃತಿಯು ಕೂಗುವದಿಲ್ಲವೆ? ಪಗಲ್ಗಣ್ಣಿಲ್ಲದ ಗೂಗಿಯೇ ಇದು ಅಲ್ಲದೆ ನಮ್ಮ ಶಿವನು ಜಗದ್ರೂಪಕನಿದ್ದಾನೆಂಬುದನ್ನು ಅರಿತಿರುವಿಯಾ. ಅರಿಯದ ಕಬ್ಬಲಗಿತ್ತಿಯ ಮಗನಾದ ವ್ಯಾಸನು ಕಾಶಿಯಲ್ಲಿ ಹೇಸದೆ ಹರಿಯೇ ಸರ್ವೋತ್ತಮನೆಂದು ಕೂಗಿದನಷ್ಟೆ. ಆ ಕಾಲದಲ್ಲಿ ಶಿವನ ಚಿದ್ರೂಪನಾದ ಶ್ರೀ ನಂದೀಶ್ವರನು ಆ ಖೂಳಮೂಳ ವ್ಯಾಸನ ತೋಳುಗಳನ್ನು ಕ್ಷಣ ಮಾತ್ರದಲ್ಲಿ ಕತ್ತರಿಸಿ ತನ್ನ ಧ್ವಜದಲ್ಲಿ ಕಟ್ಟಿಕೊಂಡು ದಿಗ್ಭರಿತನಾಗಿ ಮೆರೆಯಲಿಲ್ಲವೆ ಅಧಮಾಧಮ. ಈಗಲೂ ನಮ್ಮ ಮಹೇಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದೋಳ್ ನಂದಿ ಧ್ವಜದಲ್ಲಿ ವ್ಯಾಸನ ತೋಳುಗಳನ್ನು ಕಟ್ಟಿ ಪ್ರತ್ಯಕ್ಷವಾಗಿ ಮೆರೆಯುತ್ತದೆ. ಮೂರ್ಖ ಹೀಗೆ ಪ್ರತ್ಯಕ್ಷ ಪ್ರಮಾಣವಿದ್ದು ಅರಿಯದಲೇ ಮಾತಾಡಿ ಹಳೇ ಹಾದರವನ್ನು ತೆಗೆಸಿಕೊಂಡು ಮಾನಭಂಗ ಹೊಂದುವದು ಲೇಸಲ್ಲಾ ನೀನು ಶೂರನಾದರೆ ಭುಜ ಸ್ಫಾಲಿನಂಗೈದು ಯುದ್ಧಕ್ಕೆ ಸನ್ನದ್ಧನಾಗೊ ಬುದ್ಧಿಹೀನನೆ.

೨ನೇ ಭಟ: ಛೀ ಮೂರ್ಖ ಹರಿನಿಂದಕ ಶ್ರೀಪ್ರತಿರೇಕಮೇವಾ ಜಗತಾ ಪಿತೃ ಹಿತಾಹಿತಃ ಎನ್ನುವಂತೆ ಮತ್ತು ಸಾಕ್ಷಿಣಾಃ ಪ್ರಹಲ್ಲಾದ ಪಶ್ವೆವಿಭೀಷಣ ಸ್ವಕರೀರಾಟ್ ಪಾಂಚಾಲೇ ಅಹಲ್ಲಾ ಧ್ರುವಃ ಎಂಬಂತೆ ಮೂಢ ರಜಕನೆ ಶಿವನೇ ದೊಡ್ಡವನೆಂದು ವಾತ್ಸಲ್ಯದ ನುಡಿಗಳನ್ನು ಹೇಳಬೇಡ. ಜಗತ್ತನ್ನು ಸಂರಕ್ಷಣೆ ಮಾಡುವಂಥ ಪಾಪಹರನಾದಂಥ ಲಕ್ಷ್ಮಿಪತಿಯಾದಂಥ ವಿಷ್ಣುವೇ ಅತ್ಯಧಿಕನೆಂಬುದಕ್ಕೆ ಸಾಕ್ಷೀ ಕೊಡುತ್ತೇನೆ. ಕೇಳು ಅಧಮ ವಿಭೀಷಣ ಪ್ರಹಲ್ಲಾದ ಗಜಶ್ರೇಷ್ಠನು ದ್ರೌಪದಿ, ಅಹಲ್ಯ, ದ್ರುವನು ಇವರೇ

ಮೊದಲಾದವರು ಶಾಶ್ವತವಾದ ಪದವಿಯನ್ನು ಹೊಂದಲಿಲ್ಲವೆ. ಜ್ಞಾನ ಹೀನನೇ ಇದು ಪ್ರತ್ಯಕ್ಷ ಪ್ರಮಾಣ. ಹೀಗಿದ್ದು ನಮ್ಮ ಸಾಕ್ಷಾತ್ ಹರಿಯೇ ಸರ್ವೋತ್ತಮನೆಂಬುದಕ್ಕೂ ಸಾಕ್ಷಿ ಭೂತನೆಂಬುದಕ್ಕೂ ಪ್ರಬಲ ಸಾಕ್ಷಿಯನ್ನು ಕೊಟ್ಟಿದ್ದೇನೆ. ಕೇಳಿದಿಯಾ ಮೂರ್ಖ ಇದಕ್ಕೇನು ತರ್ಕ.

ಮಾಚಯ್ಯ: ಛೀ ದೈವದ್ರೋಹಿ "ಪ್ರಹಲ್ಲಾದಶ್ಚ ಗುರುದ್ರೋಹಿ ವಿಭೀಷಣ ಬ್ರಾತೃಘಾತಕಃ ಕರಿತಿರ್ಯೋ ಸ್ವಭಾವಶ್ಚ ನಾರಿ ದ್ವಂದ್ವಾಪಾತಕರ್ ದ್ರುವಬಾಲಕ ಮನೋವಾಸ್ತಿಷಡ್ಯೆತೆ ಸಾಕ್ಷಿ ವರ್ಜಿತಃ" ಎಲವೋ ನೀಚಾತ್ಮನೇ ನೀನು ಸಾಕ್ಷಿ ಕೊಟ್ಟ ತಾತ್ಪರ್ಯವನ್ನು ಕೇಳುತ್ತೇನೆ. ಕೇಳು ಮೂರ್ಖಾ ಪ್ರಹಲ್ಲಾದನು ಅಯೋಗ್ಯನು. ಗುರು ದ್ರೋಹಿಯಾಗಿರುವನು. ವಿಭೀಷಣನೆಂಬವನು ಅಧಮನು ಕುಲನಾಶಕನು. ಅಣ್ಣನಾದ ರಾವಣನನ್ನು ರಾಮನಿಂದ ಕೊಲ್ಲಿಸಿದ ನೀಚನು. ಆನೆಯೆಂಬುವದು ಪಶುವು. ಇದರ ಸಾಕ್ಷಿಯನ್ನಾದರೂ ಕೊಟ್ಟವನಾದರೂ ಪಶುವು. ಮೂರ್ಖಾ ದ್ರೌಪದಿಗೆ ಐದು ಜನ ಗಂಡರಿರುವರು ಭಂಡತನವಲ್ಲವೆ. ಇದಂತಿರಲಿ. ಆರನೆಯವನಾದ ಕರ್ಣನ ಮೇಲೆ ಮನಸ್ಸಿಟ್ಟವಳ ಸಾಕ್ಷಿಯು ಅಯೋಗ್ಯವು ಮತ್ತು ಸ್ತ್ರೀಯು ಅನಾದಿಕಾರಿಯು. ಅಹಲ್ಯಯೆಂಬುವಳು ಶಾಪದಿಂದ ಕಲ್ಲಾದಳು. ದೃವನೆಂಬುವನು ಬಾಲಕನು. ಅಜ್ಞಾನಿಯು ಇವರ ಸಾಕ್ಷಿಯು ಜಗತ್ತಿನಲ್ಲಿ ಎಂದೂ ಮರೆಯುವದಿಲ್ಲ. ಇವರಂ ಮಾಡಿದರೆ ಇವರಿಷ್ಟರು ಅಯೋಗ್ಯರೇ ಇರುತ್ತಾರೆ. ಇವರಿಗೆ ಮೋಕ್ಷವಿಲ್ಲ. ಮೂರ್ಖ ಶಿವನೇ ಸರ್ವೋತ್ತಮನೆನ್ನುವದಕ್ಕೆ ಸಾಕ್ಷಿ ಕೊಡುತ್ತೇನೆ ಕೇಳು. ಅಧಮಾ ಹದಿನಾಲ್ಕು ಲೋಕಕ್ಕೆ ಶಿವನೇ ಅಧಿಕ. ಅಧಿಕನೆಂಬುವದಕ್ಕೆ ಸಾಕ್ಷಿಯೇನೆಂದರೆ ಮಹಾಜ್ಞಾನಿ ಶಿವಭಕ್ತ ಶುಕಮುನೀಶ್ವರನು ಸಾಕ್ಷಾತ್ ದೇವಾಧಿದೇವಾ ಶಿವನೇ ದೇವರಲ್ಲದೆ ಬಾಕಿ ದೇವತೆಗಳಾದ ವಿಷ್ಣು ಬ್ರಹ್ಮೇಂದ್ರಾದಿ ಮೊದಲಾದ ದೇವರ್ಕಳು ಕಾಲಧೀನರಲ್ಲದೆ ಇವರಿಂದೇನಾಗುವದೆಂದು ಅವರ ಪದವಿಗಳನ್ನು ತುಚ್ಛ ಮಾಡಿ, ಪರಮಾತ್ಮನೆ ಸರ್ವೋತ್ತಮ ಮೋಕ್ಷದಾಯಕನೆಂದು ವಾಕ್ತ್ರಿಷ್ಠೆಯೆಂದು ಉಗ್ರ ತಪವನ್ನಾಚರಿಸಲು ಆ ಶುಕುಮುನಿಯೋಗೀಶ್ವರನ ತಪಸ್ಸನ್ನು ಕೆಡಿಸಬೇಕೆಂದು ನಿಮ್ಮ ವಿಷ್ಣು ಬ್ರಹ್ಮೇಂದ್ರಾದಿ ದೇವತೆಗಳು ಎಷ್ಟೋ ಕಂಟಕಗಳನ್ನುಂಟು ಮಾಡಲು ಆ ಕಂಟಕಾದಿಗಳು ನಮ್ಮ ಶಿವನಾಮೋಚ್ಛಾರಣೆಯೆಂಬಗ್ನಿಯಿಂದ ಸುಟ್ಟು ಬಸ್ಮವಾಗಲಿಲ್ಲವೇ! ದೇವತೆಗಳು ಮುಖ ಭಂಗಿತರಾಗಿ ನಮ್ಮ ಶಿವಯೋಗಿಗೆ ಶರಣಾಗತರಾಗಿದ್ದನ್ನು ಮರೆತಿರುವಿಯೋ ಪಾಪಾತ್ಮ. ಮತ್ತು ಋಷಿ ಶ್ರೇಷ್ಠನಾದ ಗೌತಮನು

ಶಿವನೇ ಸರ್ವೋತ್ತಮನೆಂದು ತನ್ನ ಪಾದದೋಳ್ ಸಹಸ್ರಾರು ಅಗ್ನಿನೇತ್ರಗಳನ್ನು ತೋರಿಸಿ ಆ ವೈಷ್ಣವ ರೂಪ ಧಾರಣ ಮಾಡಿದ. ಶಿವನು ವಿಷ್ಣುವೇ ದೇವನೆಂತೆಂಬುವನ ಮತವನ್ನು ಖಂಡನೆ ಮಾಡಲಿಲ್ಲವೆ? ತುಡುಗಾ ಶಿವನೇ ಸರ್ವೋತ್ತಮನೆಂಬುದಕ್ಕೆ ಚತುರ್ವೇದಗಳೇ ಸಾಕ್ಷಿ. ಶಿವನೇ ಅಧಿಕ, ಅಧಿಕನೆಂದು ಕೂಗುತ್ತವೆ. ಕಿವಿ ಕೇಳುವದಿಲ್ಲವೇ ಕಿವುಡನೇ. ಶಿವನು ದಯಾಂಬುಧಿಯಂಬುವದಕ್ಕೆ ಯಮನ ಎದಿಯೆ ಸಾಕ್ಷಿಹುಣ್ಣು ಬಿದ್ದಿರುವದು. ಶಿವನೆ ಶಾಶ್ವತವೆಂಬುದಕ್ಕೆ ಶಿವನ ಕರಕಮಲದಲ್ಲಿದ್ದ ಬ್ರಹ್ಮನ ಕಪಾಲವೇ ಸಾಕ್ಷಿ ಜೋಳಿಗೆಯಾಗಿರುವದು. ಶಿವನು ಆದಿ ಅಂತ್ಯ ರಹಿತನು ಎಂಬುದಕ್ಕೆ ಹಂದಿ ಹದ್ದುಗಳಾಗಿ ವಿಷ್ಣುಬ್ರಹ್ಮರು ಉರಿಲಿಂಗೋದ್ಭವದ ಪಾದ ಸಿರಸ್ಸು ಕಾಣದೇ ಹೋದರು. ಅಧಮಾ ತಿಳಿದು ನೋಡು ಯಾತಕ್ಕೆ ಒದ್ದಾಡುವಿ? ಶ್ರೀ ಗುರು ಗುದಿನೇಶ್ವರನೇ ಗತಿಯೆಂದು ಯುದ್ಧಕ್ಕೆ ನಿಲ್ಲು ನಿಲ್ಲು ಮಲ್ಲನೆ.

೨ನೇ ಭಟ: ಓಹೋ ಈ ಮಹಾತ್ಮನನ್ನು ಸೋಲಿಸಬೇಕಾದರೆ ಸಾಕ್ಷಾತ್ ಶಿವನ ಮಕ್ಕಳಾದ ಗಣಪತಿ ಮೊದಲಾದವರಿಗೂ ಅಸಾಧ್ಯವೇ ಸರಿ. ಇವನೇನು ಪರಶಿವನೋ ಪ್ರಳಯಕಾಲದ ರುದ್ರನೋ, ಭೈರವನೋ ತಿಳಿಯದು. ಹಾಹಾ ನಮ್ಮಂಥ ಪಾಮರರಿಂದೇನಾಗುವದು? ಶಿವಶಿವಾ ವ್ಯರ್ಥಪ್ರಾಣ ಕಳೆದುಕೊಳ್ಳಬಾರದು. ಹುಲ್ಲು ಜೀವಿಯಲ್ಲ ಹುಟ್ಟಿ ಬರಲಿಕ್ಕೆ. ಒಳ್ಳೇದು ಇನ್ನೊಂದಾಲೋಚನೆಯು ಗೊತ್ತಾಯಿತು. ಈ ಪರಾಕ್ರಮಶಾಲಿಯಾದ ಶಿವಶರಣರನ್ನು ಕೊಲ್ಲಬೇಕಾದರೆ ನಮ್ಮ ಬಿಜ್ಜಳ ಮಹಾರಾಜನ ಪಟ್ಟದಾಸಿಯು ಮದೋನ್ಮತ್ತವಾಗಿ ಭೂಲೋಕದ ಜೀವಿಗಳಿಗೆ ಮಾರಿಯೋ ಮೃತ್ಯುವಿಯೋ ಪರಶಕ್ತಿಯೋ ಅನ್ನುವಂತೆ ಕಾಣುತ್ತದೆ. ಆದ್ದರಿಂದ ಆ ಭಯಂಕರವಾದ ಆನೆಯನ್ನು ಇವನ ಮೇಲೆ ಬಿಡಲಿಕ್ಕೆ ರಾಜೀಸ್ಥಾನವನ್ನು ಕುರಿತು ಗಮನ ಹರಿಸುತ್ತೇನೆ. ಇದೇ ವಿಹಿತವು.

ಮಾಚಯ್ಯ: ಎಲೋ ಅಧಮರಾದ ನೀಚರೇ ಅಂದಗೆಟ್ಟು ಹಂದಿಗಳಂತೆ ಮಂದ ಮತಿಗಳಾಗಿ ಹೊಯ್ಯಕೋತ ಓಡಿ ಹೋದಿರೋ. ಮೂರ್ಖರೇ ನಿಮ್ಮಂಥ ಹೇಡಿ ಭಟ್ಟರನ್ನು ಮೂರು ಲೋಕದಲ್ಲಿ ಯಾರನ್ನೂ ಕಾಣಲಿಕ್ಕಿಲ್ಲಾ. ಏನ್ ಸಮರ್ಥರೋ ಶಹಭಾಷ್. ಬಿಜ್ಜಳನ ವೀರ ಭಟರು ಹೌದು ಹೌದು. ನಿಮ್ಮ ವೀರ ಭಟರನ್ನು ಕೂಳುಹಾಕಿ ಇಟ್ಟುಕೊಳ್ಳುವವನಾದರೂ ಖೂಳ ಅಧಮನೇ ಇರಬಹುದು. ಭಲೇ

ಎನ್ನ ಮೇಲೆ ನಿಮ್ಮ ಮದೋನ್ಮತ್ತವಾದ ಆನೆಯನ್ನು ಬಿಟ್ಟು ಎನ್ನ ಪ್ರಾಣವನ್ನು ತೆಗೆಯಬೇಕೆಂಬ ಆಲೋಚನೆಯನ್ನು ಮಾಡಿರುವಿರೋ. ಒಳ್ಳೇದು ಅಧಮರೇ ನಾನೂ ಇದಕ್ಕಾಗಿಯೇ ತಪಸ್ಸು ಮಾಡುತ್ತಿದ್ದೆ. ಸಿಂಹರಾಜನ ಹಸುವಿಗೆ ಭೇಷಾಯಿತು. ಇಗೋ ಉಬ್ಬುತ ಕೊಬ್ಬುತ ಅಬ್ಬರಿಸಿ ಬರುವ ಆನೆಯನ್ನು ಇಬ್ಭಾಗ ಮಾಡಿ ಸೀಳಿ ಒಗೆಯದಿದ್ದರೆ, ವೀರ ಬೊಬ್ಬೆಯ ಕ್ಯಾಕಿಯನ್ನು ಹೊಡೆಯುವ ವೀರ ಘಂಟಿಯ ಮಡಿವಾಳ ಮಾಚಯ್ಯನೆಂಬ ಹೆಸರ್ಯಾತಕ್ಕೆ ಮೂರ್ಖರೇ. ಬಿಡಿ ಬಿಡಿ ಆನೆಯನ್ನು ನಮ್ಮ ಮಹಾದೇವನು ಗಜಾಸುರನನ್ನು ಸಂಹರಿಸಿದಂತೆ ಸಂಹರಿಸುವದು ನಿಶ್ಚಯವೆಂದು ತಿಳಿಯಿರಿ.

ಭಟ : ಎಲೌ ಮೂರ್ಖಮಡಿವಾಳ ಮದೋನ್ಮತ್ತವಾದ ಆನೆಯನ್ನು ಬಿಟ್ಟಿರುವೆನು ಇದರಲ್ಲಿ ಪಾರಾಗು. ನಿನ್ನ ಸೊಕ್ಕಿಗೆ ತಕ್ಕಂತಾಯಿತು ರಕ್ಕಸಾ.

ಮಾಚಯ್ಯ: ಅಧಮರೆ ಆನೆಯನ್ನು ಬಿಟ್ಟಿದ್ದು ಪರಮ ಸಂತೋಷವಾಯಿತು. ಎಲೈ ಅಲ್ಪ ಜಂತುವೇ ಆನಿಯೇ ಈ ಕ್ಷಣದಲ್ಲಿಯೇ ಆಕಾಶ ಮಂಡಲಕ್ಕೆ ಚಿಮ್ಮಿರುವೆನು. ಶ್ರೀ ಗುರುಗುದೀನೇಶನ ಪ್ರೇರಣೆಯಿಂದ ಮೋಕ್ಷವನ್ನು ಹೊಂದು ನಡೆ.

೨ನೇ ಭಟ: ಆಹಾಹಾ. ಇಂಥ ಮದೋನ್ಮತ್ತ ನೀಲಗಿರಿಯಂತಿರುವ ಆನಿಯನ್ನು ಸಂಹಾರ ಮಾಡಿದ್ದು ಆಶ್ಚರ್ಯವು. ಪರಮಪುರುಷನೇ ಇರಬಹುದು. ಒಳ್ಳೇದು ರಾಜಾಸ್ತಾನವನ್ನು ಕುರಿತು ಗಮನ ಹರಿಸುತ್ತೇನೆ. (ಹೋಗುವನು).

೨ನೇ ಭಟ: ಬಿಜ್ಜಳನ ಆಸ್ಥಾನ. ಬಸವೇಶ್ವರರೂ ಇದ್ದಾರೆ)

ಭೋ ಬಿಜ್ಜಳ ಮಹಾರಾಜರೇ ಮಡಿವಾಳ ಮಾಚಯ್ಯನವರ ಸಂಗಡ ಯುದ್ಧವನ್ನು ಮಾಡಿ ಗೆದೆಯುವದು ತ್ರೈಮೂರ್ತಿಗಳಿಗೂ ಅಸಾಧ್ಯವೇ ಸರಿ. ಪ್ರಭೋ ವಿಚಾರ ಮಾಡಿ ನೋಡಿದರೆ ನೀಲಗಿರಿಯಂತಿರುವ ನಮ್ಮ ಮದ್ದಾನೆಯು ಸಾಮಾನ್ಯವೇ! ಅಂಥ ಭೀಕರ ರೂಪದ ಗಜವನ್ನು ಆ ಮಹಾತ್ಮನ ಮೇಲೆ ಬಿಡಲು ಸೊಂಡಿಯನ್ನು ಹಿಡಿದು ನೆಲಕಪ್ಪಳಿಸಲು ಕಿರ್‍ರೆಂದು ಘೋರ ಸ್ವರವನ್ನು ಮಾಡಿ ಕೈಲಾಸವನ್ನು ಕಂಡಿತು. ಆ ಮಹಾತ್ಮನ ಪರಾಕ್ರಮವನ್ನು ವರ್ಣಿಸುವುದು ಆದಿಶೇಷನಿಗೂ ಅಸಾಧ್ಯವು. ಭೂಪರ ಮುಂದಿನ ಕಾರ್ಯವನ್ನು ತಾವೇ ಯತ್ನಿಸತಕ್ಕದ್ದು.

ಬಿಜ್ಜಳ : ಬಸವೇಶ್ವರ ಆಶ್ಚರ್ಯ ಆಶ್ಚರ್ಯ. ನೀವು ಹೇಳಿದ್ದು ನಿಜವು ಹಾಹಾ.

ನಿಮ್ಮ ಮಾತನ್ನು ಧಿಕ್ಕಾರ ಮಾಡಿ, ಸೊಕ್ಕಿನಿಂದ ಹೇಳಿ. ಯಕ್ಕಲರಾದ ರಕ್ಕಸರಂತಿರುವ ಮಿಕ್ಕಿದ ಭಟರನ್ನು ಮತ್ತು ಮಕ್ಕ ಮಾರಿಯಂತಿರುವ ಸೊಕ್ಕಿದ ಆನಿಯನ್ನು ಬಿಟ್ಟದ್ದು ನನ್ನದೇ ಸೊಕ್ಕು. ಸೊಕ್ಕಿಗೆ ತಕ್ಕಾಂತಾಯಿತು. ಇಂಥ ಮದೋನ್ಮತ್ತವಾದ ಆನಿಯನ್ನು ಸೀಳಬೇಕಾದರೆ ಸಾಮಾನ್ಯವೇ. ಕ್ಷತ್ರಿಯ ರಾಜಾಧಿರಾಜರಿಗೆ ಈ ಪರಾಕ್ರಮವು ಇರಲಾರದು. ವಾಹ್ವಾ ಪಾಂಡವರ ಪೈಕಿ ಭೀಮ ಇದ್ದಾನೆಂದು ಹೇಳುತ್ತಾರಷ್ಟೆ. ಈಗ ಮಾತ್ರ ಪ್ರತ್ಯಕ್ಷವಾಯಿತು. ಶಿವಭಕ್ತರು ಸಾಮಾನ್ಯರಲ್ಲವೆಂದು ಕಂಡು ಬಂತು. ಬಸವೇಶ್ವರ ವೀರಶೈವನಾದ ಮಡಿವಾಳ ಮಾಚಯ್ಯನವರು ದಾರಾಗಿರಬಹುದು. ಇವರ ಸಂಗತಿಯನ್ನು ಎನಗೆ ವಿಸ್ತಾರವಾಗಿ ಹೇಳಬೇಕು.

ಬಸವ: ಮಹಾರಾಜರೇ ಬೆಂಕಿಯಾದರೆ ಬೆಣ್ಣೆ ಕರುಗುತ್ತದೆಂಬುವಂತೆ ಈಗ ನಿಮಗೆ ಅರಿಕೆಯಾಯಿತೆ? ಮೂರ್ಖ ರಾಜರೇ ಮೊದಲು ನಿಮಗೆ ನಾನು ಹೇಳಲಿಲ್ಲವೆ. ಅಯ್ಯಾ ನನ್ನ ಮಾತು ಧಿಕ್ಕಾರ ಮಾಡಿದ್ದಕ್ಕೆ ಇಂಥ ಪ್ರಾಯಶ್ಚಿತ್ತ ಹೊಂದಿದಿರಿ. ರಾಜರೇ ಶಿವಭಕ್ತರನ್ನು ತಡಹಿ ತ್ರೈಲೋಕದಲ್ಲಿ ಬದುಕುವರ್ಯಾರು ತಿಳಿಯಿತೆ? ಒಳ್ಳೇದು ನೀನು ಬದುಕಿಕೊಳ್ಳುವದಕ್ಕೆ ದೃಷ್ಟಾಂತವೇನೆಂದರೆ ಕರಿವೂರೆಂಬ ಪಟ್ಟಣದಲ್ಲಿ ಒಬ್ಬನೊಬ್ಬ ಶಿವಭಕ್ತನು ಶಿವಪೂಜೆಗೋಸ್ಕರ ಪುಷ್ಪವನ್ನು ಎತ್ತಿಕೊಂಡು ಬರುತ್ತಿದ್ದನು. ಆ ಕಾಲದಲ್ಲಿ ಅದೇ ಊರ ಅರಸನಾದ ಕರಿಕಾಲ ಚೋಳ ಮಹಾರಾಜನ ಪಟ್ಟದಾನೆಯು ಮದೋನ್ಮತ್ತವಾಗಿ ಸರಪಳಿಯನ್ನು ಹರಿದುಕೊಂಡು ಅದೇ ಮಾರ್ಗವಾಗಿ ಬರುತ್ತಿರಲು ಆನಿಯು ಆ ಶಿವಭಕ್ತನನ್ನು ಕಂಡು ಆರ್ಭಟಿಸಿ ಕಾಲ್ಕೆದರಿ ಕೊಲ್ಲುವ ಸಮಯದಲ್ಲಿ ಶಿವಧೋ ಶಿವಧೋಯೆಂದು ಕೂಗಿದನು. ಆ ದೀನ ಸ್ವರವನ್ನು ಕೇಳಿದ ವೀರಶೈವ ಶಿರೋಮಣಿಯಾದ ಇರಿಭಕ್ತನೆಂಬ ಶರಣನು ಕಾಲಭೈರವನೋ ಏನೋ ಎಂಬುವಂತೆ ಅವತಾರವನ್ನು ಧರಿಸಿ ಅಲ್ಲಿಗೆ ಬಂದು ನೋಡುತ್ತಿರಲಿಕ್ಕಾಗಿ ಅದ್ಭುತನಾಗಿ ಮದೋನ್ಮತ್ತವಾದ ಆನಿಯನ್ನು ಜಿಗಿದು ಆಕಾಶಮಂಡಲಕ್ಕೆ ಚಿಮ್ಮಿ ರುದ್ರಾವತಾರನಾಗಿ, ಅಲ್ಪ ಜಂತುವೆ ಎಂದು ನಿಂತಿರಲು ಈ ವರ್ತಮಾನವನ್ನು ಕರಿಕಾಲಚೋಳ ಮಹಾರಾಜನು ಕೇಳಿ ಗದಗದನೇ ನಡುಗುತ್ತಾ ಇರಿವತ್ತಯ್ಯನವರಿಗೆ ನಮಸ್ಕಾರ ಮಾಡಿ ನನ್ನ ಆನಿಯು ಮಾಡಿದ ಅಪರಾಧವು ನನ್ನದೆಂದು ಸಾಷ್ಟಾಂಗವೆರಗಿ ಬೇಡಿಕೊಳ್ಳಲು ಆ ಇರಿವತ್ತಯ್ಯನವರು ಅಂತಕರಣಪಟ್ಟು ಸತ್ತ ಭಕ್ತನಿಗೂ ಆನಿಗೂ

ಪ್ರಾಣ ಪ್ರತಿಷ್ಠೆಯನ್ನು ಮಾಡಿ, ವೀರಶೈವ ಮಾರ್ಗವನ್ನು ರಾಜಾ ಮೊದಲಾದವರಿಗೆ ಬೋಧಿಸಿ ಜಗತ್ತಿನಲ್ಲಿ ಪ್ರಸಿದ್ಧರಾಗಿ ಮೆರೆದಿರುವರು. ಕಾರಣ ರಾಜರೇ ನೀವಾದರೂ ಅವರಂತೆ ಆ ಮಡಿವಾಳ ಮಾಚಯ್ಯನವರಿಗೆ ಶರಣು ಹೊಕ್ಕರೆ ಪಾರಾದಿರಲ್ಲದೇ ಹೊರತು ಇಲ್ಲದಿದ್ದರೆ ನೀನು ತ್ರಿಮೂರ್ತಿಗಳ ಬೆನ್ನುಬಿದ್ದರೂ ಕೂಡಾ ನಿನ್ನನ್ನು ಪಾತಾಳವನ್ನು ಕಾಣಿಸದೇ ಬಿಡರು. ಇದು ನಿಶ್ಚಯವೆಂದು ತಿಳಿಯಿರಿ ಇದಕ್ಕೇನೆನ್ನುವಿರಿ.

ಬಿಜ್ಜಳ : ಮಹನೀಯನಾದ ಬಸವೇಶಾ ನಿಮ್ಮ ಮಹಿಮೆಯನ್ನು ತಿಳಿಯಬೇಕಾದರೆ ಬಸವಪ್ರಭೋ ನೀವು ಹೇಳಿದ ಮಾತು ನಿಜವೇ ಸರಿ. ನಿಮ್ಮ ಪರಮ ವಾಕ್ಯವಂತು ನನಗೆ ಪೂರ್ಣ ನಂಬಿಕೆಯು ಇತ್ತು. ಅಧಮಾಧಮನೆಂಬ ಕೊಂಡೀ ಮಂಚಣ್ಣನು ನನ್ನ ಮನಸ್ಸು ತಿರುಗಿಸಿ ನಿಮ್ಮ ಮೇಲೆ ಕೋಪ ಹುಟ್ಟಿಸುವ ದುರ್ಬೋಧವನ್ನೇ ಬೋಧಿಸಿದನು. ಬಸವಾ ಶಿವಭಕ್ತರ ಸಮಾನ ದೇವತೆಗಳುಂಟೆ. ಹರಹರಾ ಈ ಶರಣನಾದ ಮಡಿವಾಳ ಮಾಚಯ್ಯನವರು ಸಾಧಾರಣವಾಗಿದ್ದರೆ, ನಮ್ಮ ಮದೋನ್ಮತ್ತವಾದ ಆನೆಯನ್ನು ಕೊಲ್ಲುವದಾಗುತ್ತಿತ್ತೆ, ವಾಹವ್ವಾ ಬಸವೇಶ ವೀರಶೈವರೇ ಜಗತ್ತಿಗೆ ಕರ್ತರು. ಅವರೇ ಶ್ರೇಷ್ಠರು. ಅವರೇ ಪೂಜ್ಯರು. ಆದ್ದರಿಂದ ಸಾಕ್ಷಾತ್ ಶಿವಸ್ವರೂಪನಾದ ಮಡಿವಾಳ ಮಾಚಯ್ಯನವರ ಪಾದಕ್ಕೆ ನಮ್ಮ ಯಾವತ್ತು ದಂಡು ದರ್ಬಾರು ಸಹಿತ ತೆಗೆದುಕೊಂಡು ದರ್ಶನಕ್ಕೆ ಹೋಗುವ ನಡೆಯಿರಿ.

ಬಸವ : ಮಹಾರಾಜರೇ ಆ ಮಹನೀಯರಾದ ಮಡಿವಾಳ ಮಾಚಯ್ಯನವರು ಸಾಕ್ಷಾತ್ ಪರಶಿವನೇ ಇರುವನು ನಡಿಯಿರಿ ಹೋಗುವಾ.

ಬಿಜ್ಜಳನ ಪದ :

ಮಡಿವಾಳ ಮಾಚಿದೇವನೇ ನಿನ್ನಯ ಅಡಿದಾವರಿ ।
ಗಳಿಗೆ ಅಪರಾಧ ಬಿಡದೆ ಕರುಣಿಸು ಮೃಢರೂಪ ನೀ ಇನ್ನು ॥ ೧ ॥

ಬಿಜ್ಜಳ: ನಮೋ ನಮೋ ಮಾಚಿದೇವನೇ ಶಿವ ಸ್ವರೂಪನೆ ವೀರಶೈವ ಮತೋದ್ಧಾರಕನೇ ಅಷ್ಟಾವರಣ ಭೂಷಿತನೇ ಭವಿಮತವೆಂಬ ಆನೆಗೆ ಸಿಂಹನೇ ಶಿವನಿಂದಕರೆಂಬ ಸರ್ಪಕ್ಕೆ ಗರುಡನೇ ನಿಮ್ಮ ಪಾದಾರವಿಂದಕ್ಕೆ ಈ ಅಧಮಾಧಮನು ಬಿದ್ದಿರುವನು. ಇವರ ಶತ ಅಪರಾಧವನ್ನು ನೋಡದೆ ಕ್ಷಮಾ ಮಾಡಬೇಕೆಂದು ದೀನ ಸ್ವರದಿಂದ ಬೇಡಿಕೊಳ್ಳುತ್ತೇನೆ.

ದೇವಾ ತಮ್ಮ ಕೋಪ ಜ್ವಾಲೆಗೆ ತೃಣವೆಂಬ ಹುಲ್ಲು ಉಳಿಯುವದುಂಟೆ. ನಿನ್ನ ಕರುಣಾ ಕಟಾಕ್ಷ ಮಾತ್ರದಿಂದ ಕಾಪಾಡಬೇಕು. ದೇವಾ ಬೇಡಿಕೊಳ್ಳುತ್ತೇನೆ.

ಬಸವ : ನಮೋ ನಮೋ ಮಹಾಸ್ವಾಮಿಗಳೇ ತಮ್ಮ ಪಾದಕ್ಕೆ ಫಣಿ ಪಾತ್ರನಾಗುತ್ತೇನೆ.

ಮಾಚಯ್ಯ: ಬಸವದೇವಾ. ತಮ್ಮ ಪಾದಕ್ಕೆ ಶಿರಸಾಷ್ಟಾಂಗ ನಮಸ್ಕಾರವಿರಲಿ. ಈ ವೀರಸಿಂಹಾಸನಕ್ಕೆ ತಾವು ಮಂಡಿಸಬೇಕು.

ಬಸವ : ಮಹನಿಯರೇ ತಾವು ಮಂಡಿಸತಕ್ಕದ್ದು.

ಮಾಚಯ್ಯ: ಪ್ರಭು ಬಸವರಾಜರೆ ನಾನು ಇಲ್ಲೆ ಕೂಡುವೆ.

ಬಸವ : ಶಿವಶರಣರೇ ನಾನು ಮೊದಲು ಬಿಜ್ಜಳನಿಗೆ ಹಿತೋಪದೇಶವನ್ನು ಹೇಳಿದರೆ ಧಿಕ್ಕಾರ ಮಾಡಿ, ಅಹಂಕಾರ ಮದದಿಂದ ಆನೆಯನ್ನು ಬಿಡಿಸಿ ಮರ್ಯಾದೆ ಭ್ರಷ್ಟತೆಯಂ ಹೊಂದಿ ನಿಮ್ಮ ಪಾದಕ್ಕೆ ಲಜ್ಜಾಯುಕ್ತನಾಗಿ ಅಭಯಮಂ ಹೊಂದುವದಕ್ಕೆ ಸಾಷ್ಟಾಂಗ ಪಣಿಪಾತ್ರನಾಗಿರುವನು. ಶಿವರೂಪಿಗಳೇ ನಿಮ್ಮೊಡನೆ ಯುದ್ಧವನ್ನು ಮಾಡಿ ಬದುಕುವವರ್‍ಯಾರು? ಈ ಬಿಜ್ಜಳನು ನಿಮಗೆ ತೃಣ ಸಮಾನವು? ಇಂಥವನ ಮೇಲೆ ಕೋಪವೇಕೆ? ಕುಕ್ಕುಟನ ಮೇಲೆ ಪಾಶುಪತಾಸ್ತ್ರವ ಬಿಡಬೇಕೆ ದೇವಾ. ಈ ಮೂರ್ಖನ ಶತ ಅಪರಾಧವನ್ನು ನೋಡದೆ ಕ್ಷಮಿಸಬೇಕೆಂದು ತಮ್ಮ ಪಾದಕ್ಕೆ ಕ್ಷಮೆಯನ್ನು ಬೇಡುವೆನು.

ಮಾಚಯ್ಯ: ಬಸವೇಶ ನಿಮ್ಮ ಮಾತಿನ ಮೇಲಿಂದ ಈ ಖೂಳನನ್ನು ಎಬ್ಬಿಸುತ್ತೇನೆ. ಈ ಮೂರ್ಖನು, ಅಧಮನು, ನಿಮ್ಮಂಥ ಸತ್ಪುರುಷರು ಹೇಳಿದ ಸುಬೋಧೆಯನ್ನು ಮೀರಿ ಇಂಥ ತುಂಡಾಟಿಕೆಯನ್ನು ಮಾಡಬೇಕಾದರೆ, ಎಂಥಾ ಚಾಂಡಾಲರಿರಬಹುದು. ಬಸವ ಒಳ್ಳೇದು ನಿನ್ನಾಜ್ಞೆಯೇ ಎನಗೆ ಮಾನ್ಯವು. ಆಗಲಿ ಇವರ ತಪ್ಪನ್ನು ಕ್ಷಮಾ ಮಾಡುತ್ತೇನೆ. ಎಲೋ ಬಿಜ್ಜಳ ಇಕೋ ಇನ್ನು ಮೇಲೆ ಮಾತ್ರ ಶಿವಭಕ್ತರ ಮೇಲೆ ಅನ್ಯಾಯ ಮಾಡಿದರೆ ನಿನ್ನ ಗತಿ ನೆಟ್ಟಗಾಗುವುದಿಲ್ಲ. ಎಚ್ಚರದಿಂದ ನಡೆಯುವನಾಗು ತಿಳಿಯಿತೆ? ನಿನ್ನ ಸೊಕ್ಕನ್ನು ಮುಕ್ಕಣ್ಣನ ಭಕ್ತರ ಮೇಲೆ ತೋರಿಸಬೇಡ. ಬಹು ಅಕ್ಕರೆಯಿಂದ ನಡೆಯುವನಾಗು ತಿಳಿಯಿತೆ?

ಬಸವ : ಮಹಿಮಾಶಾಲಿಗಳಾದ ಮಾಚಯ್ಯ ಸ್ವಾಮಿಗಳೇ ಈ ಮಾಹುತನಿಗೆ, ಆನೆಗೆ ಪ್ರಾಣ ಪ್ರತಿಷ್ಠೆ ಮಾಡಬೇಕೆಂದು ಬೇಡಿಕೊಳ್ಳುವೆನು.

ಮಾಚಯ್ಯ: ಶ್ರೀಮನ್ಮಹಾ ಮಹಿಮ ಶಾಲಿಗಳಾದ ಬಸವರಾಜರೆ ನಿಮ್ಮ ನಾಮವನ್ನು ಎಷ್ಟು ವರ್ಣಿಸಿದರೂ ತೀರದು. ಬಸವ ನಿನ್ನ ನಾಮವನ್ನು ಪಾನ ಮಾಡುವವರ ಸುಕೃತಕ್ಕೆ ಬೆಲೆಯೇ ಇಲ್ಲ. ಅವನೇ ಧನ್ಯ. ಆಗಲಿ ಬಸವ ನಿನ್ನ ಆಜ್ಞೆ ಪ್ರಕಾರ ಸತ್ತ ಜೀವಿಗಳನ್ನು ಬದುಕಿಸುತ್ತೇನೆ. ಮೂರ್ಖರು ಮಾಡಿದ ತಪ್ಪನ್ನು ಜ್ಞಾನಿಗಳು ಕ್ಷಮಿಸಬೇಕು. ಒಳ್ಳೇದು ಎಲೋ ಮಾಹುತ, ಗಜವೇ ಏಳಿರಿ ಏಳಿರಿ. ಶ್ರೀ ಗುರು ತಿಂತ್ರಿಣಿ ತೋಟ ವಾಸಿಯಾದ ಗುದಿನೇಶ್ವರನ ಅಂತಃಕರುಣದಿಂದ ಧನ್ಯರಾದಿರಿ. ನಡೆಯಿರಿ ನಿಮ್ಮ ಆಸ್ಥಾನಕ್ಕೆ. ಓಹೋ ಬಸವೇಶ್ವರ ಇದೇನಾಶ್ಚರ್ಯವು? ಮೊದಲಿಗೆ ಆಕಾಶ ಮಂಡಲಕ್ಕೆ ಹೋದವನು ಇಲ್ಲಿಯೇ ಅಸುವಳಿದು ಬಿದ್ದಿರುವನು. ಇವನಿಗೂ ಪ್ರಾಣದಾನ ಮಾಡುತ್ತೇನೆ. ಇವನ ಕರ್ಮವು ಇವನಿಗೇ ಇರಲಿ. ಒಳ್ಳೇದು ಶಿವ ಶಿವ ಬಸವ ಬಸವ. ಎಲವೋ ಭವಿಯೇ ಏಳು ನಿನ್ನ ಆಸ್ಥಾನಮಂ ಕುರಿತು ಗಮನಮಾಡು. ಇಗೋ ಮುಂದೆ ಶಿವಭಕ್ತರ ಗೊಡವಿಗೆ ಹೋಗಬೇಡ. ಶರಣರಿಗೆ ಎದುರಾಗಬೇಡ ತಿಳಿಯಿತೆ?

ಭವಿಯ: ಉಗ್ರಮೂರ್ತಿಯಾದ ಮಾಚಯ್ಯ ಸ್ವಾಮಿಗಳೇ ನಿನ್ನ ಶ್ರೀಪಾದಕ್ಕೆ ತನುಮನಧನವನ್ನು ತ್ರಿಕರ್ಣ ಪೂರ್ವಕವಾಗಿ ಅರ್ಪಿಸಿದೆನು ದೇವಾ. ತಮ್ಮ ಅಂತಕರುಣದಿಂದ ಪುನಃ ಹುಟ್ಟಿ ಬಂದೆ. ನಿಮ್ಮ ದರ್ಶನದಿಂದಲೂ ನಿಮ್ಮ ಸುಬೋಧೆಯಿಂದಲೂ ಧನ್ಯನಾದೆ. ಈ ಎನ್ನ ಭವಿ ಜನ್ಮವೆಂಬ ಅಂಧಕಾರವು ಶಿವಮತವೆಂಬ ಸೂರ್ಯನಿಂದ ದೂರಾಯಿತು. ಮಹಾ ಮಹಿಮನೇ ವೇದಮೂರ್ತಿಯೇ ನೀನೆ ಸಾಕ್ಷಾತ್ ರುದ್ರ ಮೂರ್ತಿಯೇ ಇರುವಿ. ನಿನ್ನ ಪರಮ ಪವಿತ್ರವಾದ ಶಿವನಾಮವನ್ನು ಹಗಲಿರುಳು ಒಂದೇ ಸವನೇ ಮಾಡುತ್ತೇನೆ. ಭೋ ದ್ವಿತೀಯ ಶಂಭೋ ಬಸವ ಪ್ರಭೋ ನಿನ್ನ ದಿವ್ಯ ಚರಣಕ್ಕೆ ನಮಸ್ಕಾರವಿರಲಿ. ನಿಮ್ಮ ದರ್ಶನದಿಂದ ಎನ್ನ ಭವಪಾಶವು ಹರಿದು ಹೋಯಿತು. ಧನ್ಯನಾದೆ ಎನ್ನ ಶಿವಭಕ್ತರ ಆಸ್ಥಾನವನ್ನು ಕುರಿತು ಗಮನ ಹರಿಸುತ್ತೇನೆ. ಅಪ್ಪಣೆಯಂ ದಯಾಪಾಲಿಸಿರಿ ಬಸವ ಬಸವ.

ಮಾಚಯ್ಯ: ಭೋ ಜಗದ್ವ್ಯಾಪಕನಾದ ಬಸವೇಶ್ವರ ನಿನ್ನ ಅಂತಃಕರುಣ ಎನ್ನ ಮೇಲೆ ಪೂರ್ಣವಿರುವದರಿಂದ ಇಂಥ ಮಹತ್ವ ಕಾರ್ಯಗಳು ನೆರವೇರಿದವು. ಬಸವ ಈ ಕಲ್ಯಾಣ ಪಟ್ಟಣದಲ್ಲಿ ಶ್ರೀಮದ್ವೀರಶೈವ ಮತವು ವೃದ್ಧಿಗೊಳ್ಳುವದಾಯಿತು. ಬಸವ ನಿನ್ನನ್ನು ನಾನು ಎಷ್ಟು ಕೊಂಡಾಡಿದರೂ ತೀರದು. ಬಸವ ಇನ್ನು ತಡವಾಯಿತು. ಪ್ರಮಥರ

ಬಟ್ಟೆಗಳನ್ನು ಮಡಿ ಮಾಡಿಕೊಂಡು ಬರುವುದಕ್ಕೆ ನದಿಯನ್ನು ಕುರಿತು ಗಮನ ಮಾಡುತ್ತೇನೆ. ಅಪ್ಪಣೆಯಾಗಬೇಕು. ನಮಸ್ಕಾರವಿರಲಿ ಬಸವ ಬಸವ.

ಬಸವ : ಪ್ರಭುಗಳೇ ರಾಜಾಸ್ಥಾನವನ್ನು ಕುರಿತು ಹೋಗುವ ಬನ್ನಿರಿ.

(ಎಲ್ಲರೂ ಹೋಗುವರು)

ಬಸವ : ಗುರು ಲಿಂಗ ಜಂಗಮದ ಮಹಿಮೆಯನ್ನು ನಾನು ಎಷ್ಟು ವರ್ಣಿಸಲಿ. ಚಿನ್ಮಯ ನಿರಂಜನನಾದ ಜಂಗಮ ಮೂರ್ತಿಯು ಚೈತನ್ಯ ರೂಪವಾದದ್ದು. ಸದ್ಭಕ್ತ ಶಿಖಾಮಣಿಯಾದಂಥ ಭವ್ಯ ತರವಾದ ಆಚಾರಬದ್ಧನಾಗಿ ಸಿದ್ಧಾಸನ ರೂಢದಿಂದ ದಿಗ್ಬಂಧನಗೈದು ಸಹಸ್ರ ದಳಗಳಲ್ಲಿ ಹೊಳೆಯಲ್ಪಟ್ಟ ಚಿತ್ಕಳೆಯ ಭವ್ಯವಾದ ಗುರುಮೂರ್ತಿಯಂ ಭಾವದಲ್ಲಿ ತಂದು ಮನಸ್ಸಿನಿಂದ ಕಲ್ಪಿಸಿ ದೃಷ್ಟಿಸಿ ನೋಡಿ ವಿಶ್ವರೂಪವನ್ನು ಕರಸಿಟ್ಟು ಚಿದ್ಘನಲಿಂಗವನ್ನು ಭಕ್ತನು ಪೂಜಿಸುವ ಸಮಯದೋಳ್ ಮಂಗಳಾತ್ಮಕನಾದ ಜಂಗಮ ಮೂರ್ತಿಯು ಆಕಾಶದಲ್ಲಿ ಬಂದ ಕೂಡಲೆ ಲಿಂಗ ಪೂಜೆಯನ್ನು ದೂರಗೈಯಬೇಕು. ಯಾಕೆಂದರೆ ಜಂಗಮ ಮೂರ್ತಿಗಳೆಂದರೆ ಜಗದಾದಿ ಬೀಜನಾದಂಥವನು. ನಿರಂಜನನು ನಿರ್ವಿಕಾರನು ಮಾಯಾರಹಿತನು ಮಹಾಮಂತ್ರಕ್ಕೆ ಬೀಜ ರೂಪನು. ಅವರ ಪಾದ ತೀರ್ಥ ಪ್ರಸಾದವನ್ನು ಸವಿದು ತೃಪ್ತಿಯನ್ನು ಹೊಂದಿ ಜಂಗಮನನ್ನು ಲಿಂಗವನ್ನು ಆನಂದಗೊಳಿಸುವದೇ ಭಕ್ತಿ ಲಕ್ಷಣವೆಂದು ಶ್ರೀ ಗುರುಸಂಗಮೇಶ್ವರನು ಬೋಧಿಸಿರುವನು. ಶಿವ ಶಿವ ಇಂಥ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳನ್ನು ಪೂಜಿಸೆಂದು ಶ್ರೀ ಗುರು ಸಂಗಮೇಶ್ವರನ ಅಪ್ಪಣೆಯಾಗಿದೆ. ಗುರುನಾಥ ಸಂಗಮನಾಥ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಮಹೇಶ್ವರರನ್ನು ಸಂಪಾದಿಸಿರುವೆನು. ಆದರೆ ಇನ್ನಾರು ಸಾವಿರ ಜಂಗಮ ಮೂರ್ತಿಗಳನ್ನು ಎಲ್ಲಿ ಶೋಧಿಸಲಿ? ಎಲ್ಲಿ ಹುಡಕಲಿ? ಏನು ಮಾಡಲಿ? ಶಂಭೋ ಗುರುನಾಥ ನೀನೇ ಈ ಕಾರ್ಯವನ್ನು ನೆರವೇರಿಸಿ ಕೊಡಬೇಕು. ಆಗಲಿ ಇಲ್ಲಿ ಸ್ವಲ್ಪ ಹೊತ್ತು ಕೂತು ಆಲೋಚನೆ ಮಾಡುವಾ.

(ಆಕಾಶವಾಣಿ ಶಬ್ದವು)

ಆಹೋ ಬಸವ ಬಸವ ಕಾಶ್ಮೀರ ದೇಶದ ಮಾಂಡವ್ಯ ನಗರದ

ಅರಸನಾದ ಮಹಾದೇವ ಭೂಪಾಲನಲ್ಲಿ ಆರು ಸಾವಿರಗಣಾಧೀಶ್ವರರು ಇರುವರು. ತಿಳಿದುಕೋ.

ಬಸವ : ಆಹಾ ಇದೇನ್ ಶಬ್ದವು ಕಾಶ್ಮೀರ ದೇಶವನ್ನು ಪರಿಪಾಲನೆ ಮಾಡುವ ಮಾಂಡವ್ಯ ನಗರದ ಅರಸನಾದ ಮಹಾದೇವ ಭೂಪಾಲನಲ್ಲಿ ಆರುಸಾವಿರ ಗಣಾಧೀಶ್ವರರು ಇರುವರೆಂದು, ಆಕಾಶವಾಣಿಯ ಶಬ್ದವಾಯಿತಲ್ಲ! ಶಿವ ಶಿವ ಏನಿರಬಹುದು. ಇದು ನನ್ನ ಗುರುಮೂರ್ತಿಯ ಅಭಿಪ್ರಾಯವಿರಬಹುದು. ಒಳ್ಳೇದು ಆ ಜಂಗಮ ಮೂರ್ತಿಯ ವಾಡಿಯನ್ನು ಹೋಗಬೇಕಾದರೆ ತ್ರೈಮೂರ್ತಿಗಳಿಗೆ ಅಸಾಧ್ಯವಿರುತ್ತದಂತೆ. ಮತ್ತು ಬಿಚ್ಚಗತ್ತಿ ಹಾಕೇವು. ಒಬ್ಬರನ್ನು ಸಹ ಬಿಡುವದಿಲ್ಲವಂತೆ ಬಿಟ್ಟರೂ ಕೂಡಾ ತೂಕಾ ಮಾಡಿ ಬಿಡುತ್ತಾರಂತೆ ಶಿವ ಶಿವ ಇಂಥ ಕಠಿಣ ಇಕ್ಕಟ್ಟಿನಲ್ಲಿದ್ದ ಐಯ್ಯನರವನ್ನು ತರುವ ಬಗೆ ಹೇಗೆ? ವಾಹ್ವಾ ಒಳ್ಳೇದು. ಗುರು ಸಂಗಮನಾಥ ಇವರನ್ನು ತರಬೇಕಾದರೆ ಕೋರಿ ಶೆಟ್ಟಿ ವೇಷವನ್ನು ಗೈದು ಆರು ಸಾವಿರ ಜಂಗಮ ಮೂರ್ತಿಗಳನ್ನು ಹಸಬಿಯೋಳ್ತುಂಬಿ ಹೊತ್ತು ತರುವೆನು. ಇದೇ ಉಪಾಯವು. ಆದ್ದರಿಂದ ಈಗಿಂದೀಗಲೇ ಕಾಶ್ಮೀರ ದೇಶವನ್ನು ಕುರಿತು ಗಮನ ಮಾಡುತ್ತೇನೆ, ಸಂಗಮೇಶಾ.

(ಎರಡನೇ ಅಂಕ ಸಮಾಪ್ತಿಯು)

(ಮಹಾದೇವ ಭೂಪಾಲನ ಪ್ರವೇಶ)

(ಭಾಮಿನಿ)

ಮಾಂಡವ್ಯ ನಗರದ ಪಂಡಿತೋತ್ತಮ
ಚಂಡ ವಿಕ್ರಮ ಭೂಮಿಪಾಲನು
ಚಂಡಿಕಾ ಪತಿಯವರ ಭಕ್ತಿ ಮಾಡ್ವನನವರತ.

ಮಹಾದೇವ: ಭೋ ಶ್ರೀಮತ್ಪರಮ ಪರತರ ಕೈಲಾಸವಾಸಿಯಾದ ಶಂಭುಮೂರ್ತಿಯೇ ಜಯ ಜಯ. ನಿನ್ನ ಸ್ವರೂಪಿಗಳಾದ ಜಂಗಮಾರ್ಯರ ಪಾದ ಧೂಳಿಯಿಂದ ಧನ್ಯನಾದೆ ಮಾನ್ಯನಾದೆ. ಆರು ಸಾವಿರ ಗಣಾಧೀಶ್ವರರೆಂಬ ರತ್ನದ ಧನಸಂಪಾದನೆಯಿಂದ ಜಗತ್ತಿನಲ್ಲಿ ಪ್ರಖ್ಯಾತಿ ಹೊಂದಿದೆನು. ನಾನೇ ತ್ರೈ ಜಗತ್ತಿಗೆ ಶ್ರೇಷ್ಠನು ಈ ಚರಮೂರ್ತಿಗಳ ಪಾದದಾಶೀರ್ವಾದದಿಂದಲೇ ಮಾರ್ಮಲಿತ ದೇಶಾಧೀಶರ ಸೊಕ್ಕನ್ಸೊಕ್ಕಲಿಕ್ಕಿ ತಕ್ಕ ಶಿಕ್ಷೆಯ ನೇಮಿಸದಿದ್ದರೆ, ಭಪ್ಪರೇ ವೀರಾಧಿವೀರ ಮಾಂಡವ್ಯನಗರದ ಮಹಾಭೂಪಾಲನೆಂಬೋ ನಾಮ ಸುಡಬೇಕು. ಶಂಭೋ ಜಗದೀಶ್ವರಾ ನೀನೆ ಕರುಣಿಸು. ಎಲವೋ ಜಂಗಮವಾಡಿಯನ್ನು ಕಾಯುವ ದ್ವಾರ ಪಾಲಕರೆ ಎಚ್ಚರದಿಂದಿರುವಿರೋ ಇಲ್ಲವೋ? ಏನ್ ಮಾಡುವಿರಿ ತೀವ್ರ ಕಥನ ಮಾಡಿರಿ.

ವೀರ : ರಾಜಾಧಿರಾಜ ಮಹಾದೇವ ಭೂಪಾಲ ಮಹಾರಾಜರೇ ತಮ್ಮ ಆಜ್ಞೆ ಪ್ರಕಾರ ಸಿದ್ಧರಾಗಿ ಅಗ್ನಿ ನೇತ್ರನ ದ್ವಾರವಂ ಕಾಯುವ ಕಾಲ ಬೈರವನಂತೆ ಮರೆಯುವವು. ಅಂದ ಬಳಿಕ ಯಾವ ವೈರಿಗಳು ಬಂದು ನಮ್ಮ ಸಂಗಡ ಯುದ್ಧ ಮಾಡಿ ಜಯಸಿ ಒಳಿಯಕ್ಕೆ ಹೋಗುವ ಸಾಮರ್ಥ್ಯಗಳನ್ನು ಕಾಣೆವು ದೇವಾ. ಇದೂ ಅಲ್ಲದೆ ತ್ರೈಮೂರ್ತಿಗಳು ಸಹ ಇದುರಾಗಿ ಬಂದು ನಿಂತರೆ ತತಃಕ್ಷಣದಲ್ಲಿಯೇ ಅವರ ಶಿರಸ್ಸು ಚಂಡಾಡಿ ಆಕಾಶ ಮಂಡಲಕ್ಕೆ ತೋರದಿದ್ದರೆ ಬಾಪುರೇ ವೀರಾಧಿವೀರ ದ್ವಾರಪಾಲಕನೆಂಬ ನಾಮ ಹೊತ್ತು ಮೆರೆಯಬೇಕೆ... ಭೂಪಾಲನೆ.

ಧೀರ : ಪಟು ಪರಾಕ್ರಮಶಾಲಿಯಾದ ವೀರಾಧಿವೀರ ಮಾಂಡವ್ಯ ನಗರದ ಮಹಾದೇವ ಭೂಪಾಲನೇ ಉರಿನೇತ್ರ ಧಾರಿಯಾದ ಫಾಲಾಕ್ಷನ

ಘಣೆಯಿಂದ ಉದ್ಭವನಾದ ವೀರಭದ್ರನೋ ಕಾಲರುದ್ರನೋ, ಕಾಲ ಭೈರವನೋ ಏನೋ ಅನ್ನುವ ಹಾಗೆ ನಿನ್ನ ಚರಮೂರ್ತಿಗಳ ದ್ವಾರವನ್ನು ಕಾಯುವಲ್ಲಿ ಯಾವ ರಾಕ್ಷಸರ ಭೀತಿಯು, ಯಾವ ದೇವತೆಗಳ ಭೀತಿಯು ಏನು ಮಾಡುವವು? ಪ್ರಭೋ ಒಂದು ಸಾರಿ ಸಾಕ್ಷಾತ್ ಚಂದ್ರಶೇಖರನೇ ಬರಲಿ ಅವನು ಓಡಿದಿರುವ ತ್ರಿಶೂಲವನ್ನು ಮುರಿದು ಸ್ಮಶಾನಕ್ಕೆ ಕಳಿಸುವದು ನಿಶ್ಚಯವೆಂದು ತಿಳಿಯಿಲ್ಯೆ ಭೂಪೋತ್ತಮ.

ಭೂಪಾಲ: ಭಾಪ್ಪುರೇ ಭಾಪ್ಪುರೇ ಶಹಬಾಶ್ ವಾಃ ದ್ವಾರಪಾಲಕರೇ ನಿಮ್ಮ ಸಮಾನ ಸಮರ್ಥರು ತ್ರೈಜಗತ್ತಿನಲ್ಲಿರುವರೇ? ವೀರರೇ ಒಳ್ಳೇದು. ಎಲೌ ದ್ವಾರಪಾಲಕರೇ ಇವತ್ತಿನ ದಿವಸ ನಿಮಗೆ ಕಟ್ಟಾಜ್ಞೆ ನೇಮಿಸಲ್ಪಡುವದೇನಂದರೆ ಇಕೋ ಈ ಎನ್ನ ಪ್ರಾಣ ಸ್ವರೂಪಿಗಳಾದಂಥ ಜಂಗಮಾರ್ಯರ ವಾಡಿಯ ದೇವತಾಮಠದೊಳಿಯಕ್ಕೆ ಯಾರನ್ನೂ ಬಿಡಕೂಡದು. ಜರ್ ಒಂದು ವೇಳೆ ಯಾವ ಶಿವಭಕ್ತರು ಬಂದು ಜಂಗಮ ಪಾದೋದಕವನ್ನು ಭಕ್ತಿವಹಿಸಿ ಬೇಡಿದರೆ ಮಾತ್ರ ಅವರನ್ನು ತೂಕಾ ಮಾಡಿ ಒಳಿಯಕ್ಕೆ ಬಿಡ್ರಿ ಮತ್ತು ತೂಕಾ ಮಾಡಿ ಹೊರಿಯಕ್ಕೆ ಕಳಿಸಿರಿ, ತಿಳಿಯಿತೆ. ಹುಷಾರ್. ಎಚ್ಚರದಿಂದ ಕಾಯುವರಾಗಿರಿ ಇಲ್ಲದಿದ್ದರೆ ಉಳಿಯಲಿಕ್ಕಿಲ್ಲ. ಕಬರ್‌ದಾರ್. ಎನ್ನ ಆಸ್ಥಾನವನ್ನು ಕುರಿತು ಗಮನ ಮಾಡುತ್ತೇನೆ. ಶಂಭೋ ಗುರುನಾಥ, ಜಂಗಮವೇ ಶ್ರೇಷ್ಠ ಜಂಗಮವೇ ಆತ್ಯಧಿಕವೆಂದು ಜೈಭೇರಿಯಂ ಹೊಡೆಯುವಂಥವನಾಗಲ್ಯೆ ಸೇವಕ.

ಕೋರಿಶೆಟ್ಟಿ ಪದ :

ನೋಡು ನೋಡು ಪುರವು ಎಂಥ ರಮ್ಯವಾಗಿದೆ ।
ಮೃಢನ ಪುರವೋ ಎಂಬ ಹಾಗೇ ತೋರು ತಿರ್ಪದೋ ।
ಮಾಂಡೆಪುರವ ಕಂಡು ನಾನು ಧನ್ಯನಾದೆನೋ ।
ಖಾಂಡವ ವನವ ಎಂಬು ಹಾಗೆ ಬಪ್ಪುತ್ತಿರುವದೋ ॥ ೧ ॥

ಕೋರಿಶೆಟ್ಟಿ : ಆಹಾ ಸಂಗಮನಾಥ ಈ ಭವ್ಯತರವಾದಂಥ ಮಾಂಡವ್ಯ ಪಟ್ಟಣವನ್ನು ಕಂಡು ಧನ್ಯನಾದೆ. ಈ ಪಟ್ಟಣವು ಕೈಲಾಸವೆನ್ನುವದಕ್ಕೇನು ಸಂಶಯವಿಲ್ಲ. ಈ ನಗರಕ್ಕೆ ಎನ್ನ ಕಲ್ಯಾಣ ಪಟ್ಟಣವು ಹೋಲುವದಿಲ್ಲ. ಇಂಥ ಭವ್ಯವನ್ನು ಶ್ರೀ ಗುದಿನೇಶ್ವರನೇ ಈ ಮಹಾದೇವ ಭೂಪಾಲ ಮಹಾರಾಜನಿಗೆ ಕೊಡಬೇಕಾದರೆ ಇವನು ಎಂಥಾ ಜಂಗಮ ಭಕ್ತಿಯನ್ನು ಮಾಡಿರಬಹುದು. ಶಿವ ಶಿವಾ ಇಂಥ ಜಂಗಮ ಭಕ್ತಿಯನ್ನು

ಕೈಗೊಂಡಿರುವ ಈ ಭಕ್ತನ ಜಂಗಮಾರ್ಚ್ಯರನ್ನು ನಾನು ಕದ್ದುಕೊಂಡು ಹೋಗುವದು ಪಾಪವಲ್ಲವೇ? ಸಂಗಮೇಶ್ವರ ಈ ಉಭಯ ಭಕ್ತರ ಭಾರವು ನಿನ್ನದೇ ಇರುತ್ತದೆ. ಒಳ್ಳೇದು ಇನ್ನು ಈ ಮಠದಲ್ಲಿರುವ ಎನ್ನ ಗುರುಮೂರ್ತಿಗಳಾದ ಗಣಾಧೀಶ್ವರರನ್ನು ಶೋಧಿಸುವದಕ್ಕಾಗಿ ಇಲ್ಲಿ ನನ್ನ ವ್ಯಾಪಾರವನ್ನು ಮಾಡಿಕೊಳ್ಳುವೆ.

ಕೋರಿಶೆಟ್ಟಿ ಪದ :

ಬನ್ನಿರಿ ಕೊಡುವೆನು ಇಂಗು ಜೀರಿಗಿಯನ ಹವೀಜಾ ।
ಮಸಾಲಿಯನು ಚನ್ನಾಗಿ ತಕ್ಕೊಳ್ಳಿರಿ ಕಂಚು ತಾಮ್ರಕ್ಕೆ ।
ಇನ್ನು ಹಿತ್ತಾಳಿಗೆ ಕೊಡುವೆನು ॥ ೧ ॥

ಕೋರಿಶೆಟ್ಟಿ: ಅಮ್ಮಾ ತಾಯಿಗಳಿರಾ ನಾನು ಕೋರಿ ಶೆಟ್ಟಿಯು. ನನ್ನಲ್ಲಿರುವ ಜೀನಸು ಇಂಗು, ಜೀರಿಗೆ, ಹವೀಜಾ, ದಾಲಚಿನ್ನಿ, ಮೆಣಸು, ಸುಂಠಿ, ಲವಂಗ, ಯಾಲಕ್ಕಿ, ಪುಠಾಣಿ ಮೊದಲಾದವುಗಳನ್ನು ತಾಯಿಗಳೇ ಕಂಚು, ತಾಮ್ರ, ಹಿತ್ತಾಳಿಗೆ ಕೊಡುವೆನು. ಅಮ್ಮಗಳಿರಾ ತಕೊಳ್ಳಿರಿ ಮಾತೋಶ್ರೀಯವರೆ. ಆಹಾ ಗುರುನಾಥ ಇಲ್ಲಿ ನನ್ನ ವ್ಯಾಪಾರವಾಯಿತು. ಆದರೂ ಕೂಡಾ ಈ ಪುರದಲ್ಲಿ ಯಾವ ಕಡೆ ನೋಡಿದರೂ ನನ್ನ ಗುರುಮೂರ್ತಿಗಳ ದರ್ಶನವೇ ಆಗಲಿಲ್ಲವಲ್ಲ. ಶಿವಾಶಿವಾ ಹಾಯಿ ಹಾಯಿ ಗುರು ಸಂಗಮನಾಥ ಎಲ್ಲಿ ಶೋಧಿಸಲಿ? ಎಲ್ಲಿ ಹುಡುಕಲಿ? ಏನು ಮಾಡಲಿ ಸಂಗಮೇಶ. ನೀನೇ ಕರುಣಿಸಬೇಕು. ಒಳ್ಳೇದು ಆಗಲಿ ಸ್ವಲ್ಪ ಹೊತ್ತು ಆ ದೇವಾಲಯದಲ್ಲಿ ಕೂತು ಯೋಚಿಸುವಾ.

(ಆಕಾಶವಾಣಿ : ಪಶ್ಚಿಮಾದ್ರಿಯಲ್ಲಿ ಜಂಗಮವಾಡಿ ಇದೆ)

ಆಹಾಹಾ ಇದೇನ್ ಚಮತ್ಕಾರವು. ಪಶ್ಚಿಮಾದ್ರಿಯಲ್ಲಿ ಜಂಗಮವಾಡಿ ಯಿರುತ್ತದೆಂದು ಶಬ್ದವಾಯಿತಲ್ಲ. ಶಿವಾ ಶಿವಾ ಇದು ನನ್ನ ಗುರುಮೂರ್ತಿಯ ಮಹಿಮವೇ ಇರಬಹುದು. ಇನ್ನು ತಡವೇಕೆ ಇಲ್ಲಿ ನಿಲ್ಲದೆ ಜಂಗಮವಾಡಿಯನ್ನು ಕುರಿತು ಪ್ರವೇಶಿಸುವಾ. ಆಹಾ ಇದೇ ಜಂಗಮವಾಡಿಯು. ವಾಹಾವ್ವಾ ಎನ್ ಜಂಗಮವಾಡಿಯೋ ರಜತಾದ್ರಿ ಪರ್ವತಕ್ಕಿಂತಲೂ ಉನ್ನತವಾಗಿಯೇ ತೋರುತ್ತದೆ. ಗುರುನಾಥ ಇದು ದೇವತಾ ಸೃಷ್ಟಿಯೇ ಇರಬಹುದು. ಇಲ್ಲವಾದರೆ ಆಕಾಶ ಪರಿಯಂತರವಾಗಿ ಬಂಗಾರ ಕೋಟೆಯು ಇರಬೇಕಾದರೆ

ಸಾಮಾನ್ಯವೇ? ಇನ್ನು ತಡವೇಕೆ ಮಠದೊಳಿಯಕ್ಕೆ ಗಮನಿಸುವಾ. ದ್ವಾರಪಾಲಕರೇ ನಮಸ್ಕರಿಸುವೆ.

ದ್ವಾರಪಾಲಕ: ಯಾವನ್ಹೋ ನೀನು ಯಾವ ದೇಶದವನು ನಿನ್ನ ಹೆಸರೇನು? ಇಲ್ಲಿ ಬರಲಿಕ್ಕೆ ಕಾರಣವೇನು? ತಿಳುಹಿಸು.

ಕೋರಿಶೆಟ್ಟಿ: ಮಹಾನಿಯರೇ ನಾನು ಕೋರಿಶೆಟ್ಟಿಯು. ನನ್ನ ಹೆಸರು ಸಂಗನು. ನನ್ನ ಊರು ಕಲ್ಯಾಣವು. ಇಲ್ಲಿಗೆ ಬರಲಿಕ್ಕೆ ಕಾರಣವೇನೆಂದರೆ ವ್ಯಾಪಾರ ನಿಮಿತ್ಯಾರ್ಥವಾಗಿ ಬಂದಿರುವೆನು. ಈ ಪುರದಲ್ಲಿ ನನ್ನ ವ್ಯಾಪಾರವಾಯಿತು. ಆದರೆ ಜಂಗಮ ಪಾದೋದಕವಿಲ್ಲದೆ ಮೂರು ದಿವಸವಾಯಿತು. ಭೋಜನವಂತೂ ಇಲ್ಲವೇ ಇಲ್ಲ. ಆ ಊರ ಆದ್ಯಾಂತ ಹುಡುಕಿದರೂ ಅಯ್ಯನವರು ಇನ್ನುವರೆಗೂ ಸಿಕ್ಕಿಲ್ಲವು. ಆದರೆ ಇಲ್ಲಿ ಇರುವರೆಂಬ ವರ್ತಮಾನ ತಿಳಿದು ನಾನು ಇಲ್ಲಿಗೆ ಬಂದಿರುವೆನು. ದಯಮಾಡಿ ಒಳಕ್ಕೆ ಬಿಡಿರಿ. ಅವರ ಪಾದೋದಕವನ್ನು ಸ್ವೀಕರಿಸಿ ಪ್ರಸಾದವನ್ನು ಕೈಗೊಂಡು ತಮಗೆ ಹೇಳಿ ಕೇಳಿ ಹೋಗುತ್ತೇನೆ. ತಾವು ಬಿಡದಿದ್ದರೆ ಮಾತ್ರ ನನ್ನ ಪ್ರಾಣವನ್ನು ಇಲ್ಲೆ ಜಂಗಮಾರ್ಪಣ ಮಾಡಿಕೊಳ್ಳುತ್ತೇನೆ. ಪ್ರಭುಗಳೇ ತಿಳಿದಿರಬೇಕು.

ವೀರ : ಓಹೋ ಏನ್ ಚಮತ್ಕಾರವು. ಧೀರಾ ದ್ವಾರಪಾಲಕ ಇವನನ್ನು ವಿಚಾರ ಮಾಡಿ ನೋಡಿದರೆ, ಸದ್ಭಕ್ತ ಶಿಖಾಮಣಿ ಜಂಗಮ ಪ್ರಾಣಿಯೇ ಇರುವನೆಂದು ಕಂಡುಬರುತ್ತದೆ. ಆದರೆ ಈಗ ಸದ್ಯಕ್ಕೆ ಇವನಿಗೆ ಜಂಗಮ ಪಾದೋದಕ ದೊರೆಯದಿದ್ದರೆ ಮಾತ್ರ ಇವನ ಪ್ರಾಣ ಉಳಿಯುವಂತಿಲ್ಲ. ಇದು ನಿಶ್ಚಯ ನಿಶ್ಚಯ. ತಮ್ಮಾ ಹೇಗೆ ಮಾಡಬೇಕು.

ಧೀರ : ಅಣ್ಣಾ ಕಲ್ಯಾಣ ನಗರದಲ್ಲಿ ಯಾವತ್ತೂ ಸಕಲರೂ ಅಷ್ಟಾವರಣದ ಭಕ್ತರೇ ಇರುತ್ತಾರೆಂದು ವಾರ್ತೆ ಅದೆ. ಅಂದ ಬಳಿಕ ಇಷ್ಟು ದಿವಸವಾದರೂ ಒಬ್ಬರೂ ಜಂಗಮ ಪಾದೋದಕವನ್ನು ಕೊಡಿರಿ ಅಂತಾ ಬಂದವರನ್ನು ಮಾತ್ರ ಕಾಣಲಿಲ್ಲ. ಅಂದ ಮೇಲೆ ಈ ಮಹಿಮನು ಕಲ್ಯಾಣದವನು. ಹೌದು ಹೌದು ಇವನನ್ನು ನೋಡಿದರೆ ಸತ್ಪುರುಷನೇ ಇರುತ್ತಾನೆಂಬುವಂತೆ ಕಾಣುತ್ತದೆ. ಆಗಲಿ ಇವನನ್ನು ತೂಕ ಮಾಡಿ ಒಳಗೆ ಕಳಸಿದರಾಯಿತು. ಪುನಃ ತೂಕ ಕೊಟ್ಟು ಹೋಗುತ್ತಾನೆ. ಇದರಲ್ಲಿ ತಪ್ಪೇನು? ಇಷ್ಟಕ್ಕೆ ರಾಜನ ಆಜ್ಞೆಯಾದರೂ ಇದೆ. ಚಿಂತೆಯಾಕೆ ಒಳಗೆ ಬಿಡಲಿಕ್ಕೆ ಸಂಶಯವಿಲ್ಲ.

ವೀರ : ಒಳ್ಳೇದು. ಏನಯ್ಯ ಕೋರಿಶೆಟ್ಟರೇ ನಿನಗೆ ಜಂಗಮ ಪಾದೋದಕ ದೊರೆಯುವಂತೆ ಮಾಡುತ್ತೇವೆ. ಆದರೆ ನೀನು ಒಳಗೆ ಹೋಗಬೇಕಾದರೆ ತೂಕ ಕೊಟ್ಟು ಹೋಗಬೇಕು, ಪುನಃ ನೀನು ಹೊರಕ್ಕೆ ಹೋಗಬೇಕಾದರೆ ತೂಕ ಕೊಟ್ಟು ಹೇಳಿ ಕೇಳಿ ಹೋಗಬೇಕು. ಹೇಗೆ ಮಾಡುವಿ?

ಕೋರಿಶೆಟ್ಟಿ: ಮಹಾನಿಯರೇ ಹಾಗೇ ಆಗಲಿ. ತಮ್ಮ ಅಪ್ಪಣೆ ಪ್ರಕಾರ ತೂಕಾಕೊಟ್ಟು ಒಳಗೆ ಹೋಗುತ್ತೇನೆ. ಪುನಃ ತೂಕ ಕೊಟ್ಟು ನನ್ನ ಕಾರ್ಯಗೈಯುತ್ತೇನೆ. ಪುಣ್ಯಾತ್ಮರೇ ದೇವರು ನಿಮಗೆ ಕಲ್ಯಾಣ ಮಾಡಲಿ. ಮಹಾನೀಯರೆ ನನ್ನನ್ನು ಚಿಂತಾಲ ಮಾಡಿಕೊಳ್ಳಿರಿ.

ವೀರ : ಹೌದು ಹೌದು ಚಿಂತಾಲನ್ನು ಹತ್ತು ಹತ್ತು ತೂಕಾ ಓಡಿಯುತ್ತೇವೆ. ಎಲವೋ ಧೀರಾ ದ್ವಾರಪಾಲಕ ಲೆಕ್ಕದ ಬುಕ್ಕಿಗೆ ಆಕಡಾ ದಾಕಲ್ ಮಾಡಿಕೋ. ನಾಲ್ಕು ಮುಕ್ಕಾಲು ಮಣ ಹಚ್ಚು.

ಧೀರ : ಎಲೋ ಕೋರಿ ಶೆಟ್ಟಿಯೇ ತೂಕ ಮಾಡಿದೆವು. ನಿನ್ನ ತೂಕ ನಾಲ್ಕುಮಣಾ ಮೂರು ಧಡೆ ಆಗಿರುವದು ನೋಡಿಕೋ. ನೀನು ಹೋಗುವ ಕಾಲಕ್ಕೆ ಇದೇ ತೂಕ ಕೊಟ್ಟು ಹೋಗಬೇಕು. ಕಮ್ಮಿ ಇದ್ದರೆ ಅಡ್ಡಿಯಿಲ್ಲ. ಹೆಚ್ಚು ಇದ್ದರೆ ಮಾತ್ರ ನಿನಗೆ ಸಂಕೋಲೆಯನ್ನು ಜೋಡಿಸಿ ಕಾರಾಗ್ರಹದಲ್ಲಿಡುತ್ತೇವೆ. ಬಹು ಹುಷಾರಿ. ಈ ಖಾತೆ ಸಹಿ ಮಾಡಿಕೋ.

ಕೋರಿಶೆಟ್ಟಿ: ಮಹಾನಿಯರೇ ಆಗಲಿ ಸಹಿ ಮಾಡುತ್ತೇನೆ.

ದ್ವಾರಪಾಲಕ: ಒಳ್ಳೇದು ಒಳಕ್ಕೆ ದಯಮಾಡಿಸು?

ಕೋರಿಶೆಟ್ಟಿ: ಆಹಾಹಾ ಎನ್ನ ಗುರುಮೂರ್ತಿಯ ಅಂತಃಕರುಣವು ಪೂರ್ಣವಾಯಿತು. ಶಂಭೋ ಸಂಗಮೇಶ್ವರ ಭಕ್ತರ ಮೇಲೆ ನಿನ್ನ ಪ್ರೇಮವು ಎಷ್ಟಿರುವದು. ಗುರುವೆ ನಿನ್ನನ್ನು ಎಷ್ಟು ಕೊಂಡಾಡಿದರೂ ತೀರದು. ಭಕ್ತ ವತ್ಸಲಾ ದಯಾನಿಧೆ ಒಳ್ಳೇದು. ಇನ್ನು ತಡವೇಕೆ ಒಳಕ್ಕೆ ಗಮಿಸುವಾ.

(ಅಯ್ಯನವರು ಶಿವ ಭಜನೆಯನ್ನು ಹಾಡುತ್ತಿರಬೇಕು)

ಕೋರಿಶೆಟ್ಟಿ: ಆಹಾ ಸಂಗಮೇಶ್ವರ ಎನ್ನ ಗುರುಮೂರ್ತಿಗಳ ಮಂಟಪಾಗ್ರಗಳು ಎಷ್ಟು ಶೋಭಾಯಮಾನವಾಗಿ ತೋರುತ್ತದೆ. ಇನ್ನು ತಡವೇಕೆ ಹತ್ತಿರವೇ ಹೋಗಿ ಮಾತಾನಾಡಿಸುತ್ತೇನೆ. ಆಹಾ ಈ ಶಿವಮೂರ್ತಿಗಳನ್ನು ಕಂಡು ನಾಂ ಧನ್ಯನಾದೆ. ಪರಮಾನಂದ ಭರಿತನಾದೆ. ಶಂಭೋ ಗುರುಮೂರ್ತಿಗಳೇ ತಮ್ಮ ಯಾವತ್ತು ಶ್ರೀ

ಪಾದಕಮಲಕ್ಕೆ ಬಾಲಭೃಂಗನ ನಮಸ್ಕಾರ ಬಿನ್ನಹ.

ಶಿವಯ್ಯ: ಎಲೋ ಶಿವಭಕ್ತ ಶಿರೋಮಣಿ ನೀನು ಯಾರು ನಿನ್ನ ಹೆಸರೇನು? ಯಾವ ದೇಶದವನು ಎಲ್ಲಿಂದ ಬಂದಿರುವೆ? ನಿನ್ನನ್ನು ಕಂಡು ನಮಗೆ ಪರಮ ಸಂತೋಷವಾಯಿತು. ತ್ರಿಪುಂಡ್ರದಿಂದಲೂ ಇಷ್ಟಲಿಂಗದಿಂದಲೂ ರುದ್ರಾಕ್ಷಿಯಿಂದಲೂ ಅಲಂಕೃತವಾದ ಪರಮಾನಂದ ಕಂಡು ಪೂರಿತರಾದೆವು. ನೀನು ಇಲ್ಲಿಗೆ ಬಂದ ಕಾರಣವೇನು? ತಡಮಾಡದೇ ತಿಳುಹಿಸು.

ಕೋರಿಶೆಟ್ಟಿ: ಭೋ ಮಹಾಸ್ವಾಮಿಗಳೇ ಕಲ್ಯಾಣಪಟ್ಟಣದಲ್ಲಿ ನನಗೆ ಕೋರಿ ಸಂಗನೆನ್ನುವರು. ನಾನು ವ್ಯವಹಾರಿ ವಾಣಿಜ್ಯನು. ಸಕಲ ದೇಶದಲ್ಲಿ ನನ್ನ ವ್ಯವಹಾರವುಂಟು. ಆದರೆ ಈ ಪಟ್ಟಣಕ್ಕೆ ಬಂದು ಮೂರು ದಿವಸಗಳಾದರೂ ಗುರುಮೂರ್ತಿಗಳನ್ನೇ ಕಾಣಲಿಲ್ಲ. ಲಿಂಗಾರ್ಚನೆಯಂತೂ ಇಲ್ಲವೇ ಇಲ್ಲ. ಜಂಗಮಮೂರ್ತಿಗಳು ಇಲ್ಲದೆ ಪ್ರಸಾದವನ್ನು ತೆಗೆದುಕೊಳ್ಳುವದಿಲ್ಲ. ಆದಕಾರಣ ತಮ್ಮ ಮಹಾಪಾದವನ್ನು ಕಂಡು ಸುಖಸಾಗರದಲ್ಲಿಯೇ ಮುಳುಗಿದೆನು. ಈ ಜಂಗಮ ವಾಡಿಯಲ್ಲಿರುವರೆಂಬ ವಾರ್ತೆಯನ್ನು ಕೇಳಿ ಬಂದಿರುವೆನು. ದಯಮಾಡಿ ಎನ್ನ ಬಿನ್ನಹವನ್ನು ಕೈಕೊಂಡು ಎನ್ನಲ್ಲಿರುವ ಪ್ರಸಾದವನ್ನು ಸ್ವೀಕರಿಸಿ ತಮ್ಮ ಮಿಕ್ಕ ಪ್ರಸಾದವನ್ನು ಕೊಟ್ಟು ನನ್ನನ್ನು ಧನ್ಯನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುವೆನು.

ಶಿವಯ್ಯ : ಓಹೋ ಶಿವಭಕ್ತ ಶಿರೋಮಣಿ ನಿನ್ನ ಅಭಿಪ್ರಾಯವು ಗೊತ್ತಾಯಿತು. ನನ್ನ ಅನುರಾಗವಿದ್ದಂತೆ ಆಗಲಿ ಯಾಕಾಗಲೊಲ್ಲದು.

ಮೃತ್ಯುಂಜಯ: ಓಹೋ ತಿಳಿಯಿತು. ರುಚಿ ನೋಡಿ ಜಂಗಮ ಕೆಟ್ಟ, ರೂಪಕ್ಕಾಗಿ ಭಕ್ತ ಕೆಟ್ಟನು. ಶಿವ ಶಿವ ಲೋಕದಲ್ಲಿ ಹೀಗೆ ಇರಬಹುದು.

ಪಾಲಾಕ್ಷಯ: ಓಹೋ ಅಲ್ಲೆನ್ನುವರ್‍ಯಾರು, ಜಗತ್ತಿನಲ್ಲಿ ಭಕ್ತಿಯು ಹೀಗೆ ನಡೆಯುತ್ತಿರಬಹುದು. ಶಿವ ಶಿವ ಯಾವನಾದರೂ ದೊಡ್ಡ ಮಡಿಯನ್ನುಟ್ಟುಕೊಂಡು ಗಡ್ಡ ಮಂಡಿಯನ್ನು ಬಿಟ್ಟುಕೊಂಡ ಸ್ವಾಮಿಯನ್ನು ಕಂಡು ಲೋಕದಲ್ಲಿ ಪರಾಮರಿಸುವ ಭಕ್ತರೆ ಬಹಳ ಇರುವರು. ನಮ್ಮಂಥ ಅಯ್ಯನವರನ್ನು ಯಾರು ಕೇಳಬೇಕು? ಮುಂದಿದ್ದರೂ ಮಾತಾಡಿಸುವರೇ ಇಲ್ಲವೇ ಇಲ್ಲ.

ಇಂದುದರಯ್ಯಾ: ಸ್ವಾಮಿ ಪಾಲಾಕ್ಷಯ್ಯನವರೇ ಬಾಯಿ ಇದ್ದವರು ಬದುಕಿದರೆಂಬುವ

ನಾಡ ನುಡಿ ನಿಜವೇ ಸರಿ. ನಮ್ಮಂಥ ಮುಗ್ಧರನ್ನು ಯಾರು ಮಾತಾಡಿಸುವರು? ಈಗಿನ ಭಕ್ತರು ಡಾಂಭಿಕರೇ ಇರುತ್ತಾರೆ.

ಕೋರಿಶೆಟ್ಟಿ: ಸ್ವಾಮಿಗಳೇ ಹೀಗೇಕೆ ಮಾತಾಡುವಿರಿ. ಡಾಂಭಿಕದ ಭಕ್ತಿ ಕಡೆಗೆ ನಾನೇನು ಲಕ್ಷ ಕೊಡುವನಲ್ಲಾ ! ಪ್ರಭುಗಳೇ ನನ್ನದು ಯಾವತ್ತು ತಮ್ಮ ಆರು ಸಾವಿರ ಚರಮೂರ್ತಿಗಳೇ ಒಟ್ಟು ಬಿನ್ನಹವಿರುತ್ತದೆ. ಆದ್ದರಿಂದ ಸರ್ವರೂ ಸ್ನಾನವನ್ನು ಮಾಡಿಕೊಳ್ಳಿರಿ.

ಶಿವಯ್ಯ: ಒಳ್ಳೇದು ಹಾಗೇ ಆಗಲಿ ಕೋರಿಶೆಟ್ಟರೆ ಸ್ನಾನವಾಗಿದೆ. ಲಿಂಗಾರ್ಚನೆಯು ಮುಗಿದಿದೆ. ಆದರೆ ಇನ್ನೊಂದು ಮಾತು ಏನೆಂದರೆ ನೀನು ಏಕಾಂಗಿಯಾಗಿ ಒಬ್ಬನೇ ಬಂದಿರುವಿ ಅಂದ ಬಳಿಕ ಈ ಆರು ಸಾವಿರ ಸಮೂಹಕ್ಕೆ ನೀನು ತಂದ ಪದಾರ್ಥವನ್ನು ಹೇಗೆ ಸಲ್ಲಿಸುವಿಯೋ ಇದು ಅಸಂಭವವು. ನೀನು ಕಟ್ಟಿಕೊಂಡು ತಂದಿರುವ ಬೋನದ ಬುತ್ತಿಯು ಒಂದೊಂದು ಅಗಳು ಸಹ ಬರಲಿಕ್ಕಿಲ್ಲವು ತಿಳಿಯಿತೆ. ಇಕೋ ಪಾದೋದಕವನ್ನು ಕೊಡುತ್ತೇವೆ. ನೀನೇ ಊಟ ಮಾಡಿಕೊಂಡು, ಇಲ್ಲೇ ನಿದ್ರಿಯನ್ನು ಗೈದು ಬೆಳಗಾದ ಕೂಡಲೇ ಪ್ರಯಾಣ ಮಾಡು.

ಕೋರಿಶೆಟ್ಟಿ: ಮಹಾಸ್ವಾಮಿ ಗಣಾಧೀಶ್ವರನೇ ತಮ್ಮ ಪಾದ ಮಹಿಮೆಯನ್ನು ತಿಳಿಯಲಸದಳವು. ಆದರೆ ಕಲ್ಪವೃಕ್ಷವನ್ನು ಹೊಂದಿದವನಿಗೆ ದರಿದ್ರವುಂಟೆ? ಭಕ್ತಿ ಇಲ್ಲದ ಮೂರ್ಖ ಜನರಿಗೆ ಆ ಮಾತು. ಸ್ವಾಮಿಗಳೇ ಈ ಆರು ಸಾವಿರ ಗಣಂಗಳೇಕೆ ಆರು ಲಕ್ಷ, ಆರು ಕೋಟಿ ಆರು ಅಬ್ಜ ಇದ್ದರೂ ಅಡ್ಡಿ ಇಲ್ಲ. ಯಾಕೆಂದರೆ ತಮ್ಮ ತಮ್ಮ ಮಹಾಪಾದವೆಂಬ ಕಾಮಧೇನು ಇರಲಾಗಿ ಇದಾವದಕ್ಕೂ ಕೊರತೆಯೇನು? ಪ್ರಭುಗಳೇ ಇನ್ನೊಂದು ಬೇಡಿಕೊಳ್ಳುವದೇನೆಂದರೆ ಸರ್ವರು ಮಾತ್ರ ಶಾಂತಚಿತ್ತರಾಗಿ ಕೂತುಕೊಳ್ಳಬೇಕು. ಎಡೆ ಮಾಡುತ್ತೇನೆ.

ಶಿವಯ್ಯ : ಅಯ್ಯ ಕೋರಿ ಸಂಗನೇ ಹಾಗೇ ಆಗಲಿ. ತಡವೇಕೆ ಲಗು ಉಣಿಸು ಕೂತಿರುವೆವು.

ಮೃತ್ಯುಂಜಯ: ಏನೋ ಕೋರಿಶೆಟ್ಟಿ ಅಡಗಿ ಮಾತ್ರ ಸ್ವಲ್ಪ ತೋರುತ್ತದೆ. ನನಗೆ ಮಾತ್ರ ಮೊದಲೇ ನೋಡಿ ನೀಡಿ ಬಿಡು. ಅನುಮಾನ ಮಾಡಬೇಕಾ.

ಪಾಲಾಕ್ಷಯ್ಯ : ಏನಯ್ಯ ಮೃತ್ಯುಂಜಯ ಸ್ವಾಮಿಗಳೇ ಏನಿದು ಇಷ್ಟೊಂದು ಗದ್ದಲವನ್ನು ಏಕೆ ಹಾಕುತ್ತಿರುವಿರಿ. ಸ್ವಲ್ಪ ತಡೆಯಿರಿ ಸಾವಕಾಶ ನಿಮ್ಮ

ನಿಮ್ಮ ಸ್ಥಳದಲ್ಲಿ ಮಂಡಿಸಿರಿ. ಎಲೋ ಕೋರಿ ಸಂಗನೇ ಇತ್ತ ಬಾ. ಯಾರ ಗೊಡವಿ ಯಾಕೆ ಬೇಕು ? ತಾ ಬಲ ಜಗ ಬಲ. ಮುಂಚೆ ನನಗೆ ಮಾತ್ರ ಮುಟ್ಸುದು ಎಡೆ ಮಾಡಿ ಬಿಡು. ಹೊಟ್ಟೆ ಹರಿಯುವಂತೆ ಸಾವಕಾಶ ಬಿಡುತ್ತೇನೆ.

ಇಂಧುದರಯ್ಯಾ: ಏನ್ರಿ ಪಾಲಾಕ್ಷಯ್ಯನವರೇ ಹೀಗೇಕೆ ಗಡಬಡಿಸುವಿರಿ. ನಿಧಾನವಿಲ್ಲೇನು? ನಿಮ್ಮದೇ ಓರೇತನ ಮಾಡಿಕೊಂಡು ಮನಸ್ಸಿಗೆ ಬಂದಂತೆ ವರ್ತಿಸುತ್ತೀರಿ. ಕೋರಿಶೆಟ್ಟರೆ ಎಲ್ಲರಿಗಿಂತಲೂ ಹೆಚ್ಚು ನನಗೆ ಎಡೆ ಮಾಡಿ ಬಿಡು ನೋಡೇ ಬಿಡುತ್ತೇನೆ.

ಶಿವಯ್ಯ: ಏನಿದು ನಗಿನಗಿ ಯಾವಲ್ಲಿ ನೋಡಿದರೂ ಜಂಗಮರ ಜಾಳಿಯೇ ಹೀಗೆ. ಭಕ್ತರು ಐಗಳು ಮಾಡ್ಯಾನಂದರೆ ಸಾಕು. ಅಲ್ಲಿಗೆ ಹದ್ದು ಎರಗಿದಂತೆ ಎರುಗುತ್ತಾರೆ. ನೋಡ್ರಿ ಹೇಳೋದು ಬೇಕಾಗಿಲ್ಲ. ಕೇಳದು ಬೇಕಾಗಿಲ್ಲ. ಬಂದರಾಯಿತು. ಬಾಳಮಾಡಿ ಶಾರ ನನ್ನಲಿಲ್ಲ. ತುಸಾ ಮಾಡಿ ಶಾರ ನನ್ನಲಿಲ್ಲ. ಮುಟ್ಟಿದ್ದು ಹೊಡೆಯುವದೊಂದೇ ಗೊತ್ತು. ಶಿವಾ ಶಿವಾ ಮಾತಾಡುವ ಹಾಂಗಿಲ್ಲ. ಏನೋ ಕೋರಿಸಂಗ ಯಾರಿದ್ದರೂ ಇರಲಿ ನನಗೆ ಮಾತ್ರ ನೋಡಿ ನೀಡಪ್ಪ ಮಾರಾಯಾ.

ಕೋರಿಶೆಟ್ಟಿ: ಭೋ ಮಹಾಸ್ವಾಮಿಗಳೇ ಸಾಷ್ಟಾಂಗವೆರಗಿ ಬೇಡಿಕೊಳ್ಳುತ್ತೇನೆ. ನೀವೇನು ಹಾಗೆ ಮಾತಾಡಿಕೊಳ್ಳಬೇಡಿರಿ. ಸರ್ವರೂ ಶಾಂತ ಚಿತ್ತರಾಗಿ ಕೂತುಕೊಳ್ಳಿರಿ. ಗದ್ದಲ ಮಾಡಬೇಡಿರಿ. ಎಥೇಷ್ಟವಾಗಿ ಉಣಿಸುತ್ತೇನೆ. ಮಹಾಸ್ವಾಮಿಗಳೇ ಸರ್ವರಿಗೂ ಎಡೆಯಾಗಿರುವದು, ಸಾಷ್ಟಾಂಗ ಹಾಕುತ್ತೇನೆ. ಲಿಂಗಾರ್ಪಣ ಮಾಡಿಕೊಳ್ಳಿರಿ. ಸಾಂಬ ಜಯಮಂಗಲ ಜಯ ನಮಃ ಪಾರ್ವತೀ ಪತಿ ಹರ ಹರ ಮಹಾದೇವ.

(ಅಯ್ಯನವರ ಪದ)

ಏನು ಬೋನವೋ ಏನು ರುಚಿಕರೋ ಸಾನುರಾಗವಾಗಿ ।
ನಮಗೆ ಇಂಪು ತೋರುವದೋ ಕೋರಿಶೆಟ್ಟಿಯೆ ನೀನೆ ।
ಈ ಪರಿ ಸಾರ ಬಸವ ಹ್ಯಾಂಗೆ ನೋಡುವೆವು ॥ ೧ ॥

ಶಿವಯ್ಯ : ಎಲೋ ಶಿವಭಕ್ತ ಶಿರೋಮಣಿ, ನಿನ್ನ ಅಡಿಗಿಯ ಬೋನವನ್ನು ಉಂಡಾಕ್ಷಣವೇ ಆನಂದವಾಯಿತು. ಪರಮಾನಂದವಾಯಿತು. ಶಿವಾ ಶಿವಾ ಏನ್ ಬೋನವೋ

ಮೃತ್ಯುಂಜಯ: ನೋಡ್ರಿ ಶಿವಯ್ಯನವರೇ ನನಗಂತೂ ಹಿಡಿಸಲಾರದಷ್ಟು

ಆನಂದಬ್ಧಿಯೋಳ್ ಮುಳುಗಿದಂತಾಯಿತು. ಏನ್ ರುಚಿಕರವೋ ಇನ್ನೂ ಉಣ್ಣಬೇಕೆಂಬ ಆಶೆಯಿದೆ.

ಪಾಲಾಕ್ಷಯ್ಯ : ಅಯ್ಯನವರೇ ನಿಮ್ಮದು ಒತ್ತಟ್ಟಗಿರಲಿ. ನನಗೆ ಸುಖವಾಯಿತೆಂದು ಹೇಳಲಿಕ್ಕೆ ಆಗದು. ಶಿವ ಶಿವ ದೇವರು ಯಾಕೆ ದೊಡ್ಡ ಹೊಟ್ಟೆಯನ್ನು ಕೊಟ್ಟಿರಲಿಕ್ಕಿಲ್ಲಾ. ದೇವಾ ಇನ್ನಾದರೂ ಏನಾಯಿತು, ನನ್ನ ಹೊಟ್ಟೆಯನ್ನು ಹಿಗ್ಗಿಸಬಾರದೆ.

ಇಂದುಧರಯ್ಯ : ಕೇಳಿರಿ ಅಯ್ಯನವರೇ ನನಗಂತು ಅಳತಿಗೆಟ್ಟು ರುಚಿಯಾಯಿತು. ಇಷ್ಟೇ ಆಯಿತೆಂದು ಹೇಳಲಿಕ್ಕೆ ಆಗುವದಿಲ್ಲ, ಏನು ಹೇಳಬೇಕು? ಎರಡನೆಯವರ ಹೊಟ್ಟೆಯನ್ನು ಕಡಾ ತೆಗೆದುಕೊಳ್ಳಬೇಕೆಂದು ಮನಸ್ಸಿನಲ್ಲಿ ಮಾಡಿದ್ದೆ. ಇರಲಿ ಕೋರಿಶೆಟ್ಟರೆ ಇತ್ತ ಬನ್ನಿ ನಿಮ್ಮ ಪ್ರಸಾದವೇ ಹೀಗಿದ್ದ ಬಳಿಕ ಆ ಸಾಕ್ಷಾತ್ ಕಲ್ಯಾಣದ ಶ್ರೀ ಬಸವದೇವರ ಪ್ರಸಾದವು ಹೇಗಿರಬಹುದು. ಆ ಮಹಿಮನ ದರ್ಶನವಾಗುವದೇ ದುರ್ಲಭ.

ಕೋರಿಶೆಟ್ಟಿ: ಸ್ವಾಮಿಗಳೇ ಕಲ್ಯಾಣ ಪಟ್ಟಣದ ಶ್ರೀ ಬಸವೇಶ್ವರನ ಪ್ರಸಾದವನ್ನು ಹೇಳಲಿಕ್ಕೆ ಯಾರಿಗೆ ತಾನೇ ಸಾಧ್ಯವಾದೀತು? ಸ್ವಾಮಿಗಳೇ, ಆ ಮಹಿಮನ ಪ್ರಸಾದವನ್ನು ಕೈಕೊಂಡವರು ಸಾಮ್ರಾಜ್ಯವನ್ನೇ ಹೊಂದುತ್ತಾರೆ. ಆ ಪ್ರಸಾದವನ್ನು ವರ್ಣಿಸುವುದು ಅಸಾಧ್ಯವು.

ಶಿವಯ್ಯ : ಹಾಗಾದರೆ ಕೋರಿಶೆಟ್ಟರೆ ಬಸವೇಶ್ವರನ ದರ್ಶನವಾಗಬೇಕೆಂದು ನಮ್ಮೆಲ್ಲರ ಬಹುದಿವಸದ ಕೋರಿಕೆಯಿರುತ್ತದೆ. ಹೇಗೆ ಮಾಡಬೇಕು? ಈ ಮಹಾದೇವ ಭೂಪಾಲನಂತೂ ನಮ್ಮನ್ನು ಬಂಧಿಸಿ ಇಟ್ಟಿರುವನು. ನಾವು ಹೊರಗೆ ಹೋಗುವ ಬಗೆ ಹೇಗೆ?

ಕೋರಿಶೆಟ್ಟಿ: ಸ್ವಾಮಿಗಳೇ ಬರುವದಕ್ಕೆ ಆಪೇಕ್ಷೆ ಇರುತ್ತದೇನು?

ಅಯ್ಯನವರು: ಹೌದು ಹೌದು ಇರುತ್ತದೆ.

ಕೋರಿಶೆಟ್ಟಿ: ಹಾಗಾದರೆ ನಾನು ಕರೆದುಕೊಂಡು ಹೋಗುವೆ.

ಅಯ್ಯನವರು: ಓಹೋ ಕೋರಿಶೆಟ್ಟರೆ ಬರುವದಂತೂ ನಿಶ್ಚಯ. ನೀನು ಕರೆದೊಯ್ಯುವದು ಕಠಿಣವೇ. ಯಾಕೆಂದರೆ ದ್ವಾರದಲ್ಲಿ ಕಾವಲಿಗರು ಇರುತ್ತಾರೆ.

ಕೋರಿಶೆಟ್ಟಿ: ಗುರುವರ್ಯರೇ ನಿಮ್ಮನ್ನು ನಾನು ಯಾವ ರೀತಿಯಿಂದಾದರೂ ಕರೆದುಕೊಂಡು ಹೋಗುತ್ತೇನೆ. ತೇವಾಂಶವಾದರೂ

ಭಯುಗೊಳ್ಳಬೇಡಿರಿ. ಆದರೆ ಯಾವತ್ತೂ ನಿಮ್ಮ ಪೂಜಾ ಸಾಮಾನುಗಳನ್ನು ಕಟ್ಟಿಕೊಂಡು ಈ ಹಸುಬಿಯಲ್ಲಿ ಪ್ರವೇಶಿಸಿರಿ. (ಹರಾ ಹರಾ ಕಲ್ಯಾಣ ಕಲ್ಯಾಣ ಬಸವ ಬಸವಾ ಅಂತಾ ಹೋಗುವರು). ಆಹಾಹಾ ಸಂಗಮನಾಥ ಗಣಾಧೀಶ್ವರರಂತೂ ಈ ಹಸುಬಿಯಲ್ಲಿ ಪ್ರವೇಶಿಸಿದರು. ಆದರೆ ಇವರನ್ನು ಎತ್ತುವ ಬಗೆ ಹೇಗೆ? ದರ ಒಬ್ಬರ ತೂಕ ಐದ್ಯೆದು ಮಣದಂತೆ ಲೆಕ್ಕ ಮಾಡಿದರೆ ಮುವ್ವತ್ತು ಸಾವಿರ ಮಣವಾಯಿತಲ್ಲ. ಶಿವಾ ಶಿವಾ ಹೇಗೆ ಮಾಡಲಿ? ಛೇ ಮೂರ್ಖ ಮನಸ್ಸಿನ ವೀರಶೈವರಿಗೆ ಲೆಕ್ಕಗಳಿರುವವೇ ಗುರುನಾಥ, ನಿನ್ನ ಅಂತಃಕರುಣದಿಂದ ಹಸುಬಿಯನ್ನು ಎತ್ತುತ್ತೇನೆ. ಆಹಾಹಾ ಇದೇನು ಚಮತ್ಕಾರವು! ಮೊದಲಿಗಿಂತ ತೀರ ಹಸುಬಿ ಹಗುರಾಗಿರುವದು. ಶಿವಾ ಶಿವಾ ಯಾವತ್ತು ಗಣಾಧೀಶ್ವರರು ಕಲ್ಯಾಣವನ್ನೇ ಪ್ರವೇಶಿಸಿದರು. ಒಳ್ಳೇದು ಇನ್ನು ಹೊರಿಯಕ್ಕೆ ಹೋಗಲಿಕ್ಕೇನು ಸಂಶಯವಿಲ್ಲ. ತಡವೇಕೆ ಬೆಳಗಾಯಿತು. ದ್ವಾರಪಾಲಕರಿಗೆ ಹೇಳಿ ಹೋಗುವಾ. ದ್ವಾರಪಾಲಕರೇ ನಾನು ಹೋಗುತ್ತೇನೆ. ತೂಕ ಮಾಡಿಕೊಳ್ಳಿರಿ.

ದ್ವಾರಪಾಲಕರು : ಕೋರಿಶಟ್ಟರೇ ಚಿಂತಾಲ ಹಚ್ಚುವದೇನು ನಿಮ್ಮ ಹಸುಬಿಯನ್ನು ತನ್ನಿರಿ ವಜ್ಜಾ ನೋಡುತ್ತೇವೆ.

ಕೋರಿಶೆಟ್ಟರು: ಇಕೋ ತೆಗೆದುಕೊಳ್ಳಿರಿ.

ದ್ವಾರಪಾಲಕರು: ಕೋರಿಶೆಟ್ಟರೆ ನಿಮ್ಮ ಹಸುಬಿಯನ್ನು ತೂಕ ಮಾಡಿದೆವು. ಏನೂ ಸಂಶಯವಿಲ್ಲ. ಹೋಗಬಹುದು.

ಕೋರಿಶೆಟ್ಟಿ : ಆಗಲಿ ಅಪ್ಪಣೆ. ಸಂಗಮನಾಥ ನಿನ್ನ ಅಂತಃಕರುಣದಿಂದ ಮಹತ್ತರ ಕಾರ್ಯವಿದ್ದರೂ ಕೂಡಾ ಪೂರ್ಣವಾಯಿತು. ಗುರುನಾಥ ನಿನ್ನನ್ನು ಎಷ್ಟು ಕೊಂಡಾಡಿದರೂ ತೀರದು. ಇನ್ನು ತಡವೇಕೆ? ಕಲ್ಯಾಣನಗರವನ್ನು ಗುರುತು ಮಾಡುತ್ತೇನೆ. ಸಂಗಮೇಶ ಸಂಗಮೇಶಾ.

ಮಹಾದೇವ ಭೂಪಾಲ : ಆಹಾ ಈ ಜಂಗಮಾರ್ಯರ ವಾಡಿಯು ಎಷ್ಟು ಐಶ್ವರ್ಯದಿಂದೊಪ್ಪತ್ತಿರುವದೋ ಶಿವಾ ಶಿವಾ. ಈ ಮಂಗಲ ಸ್ವರೂಪವಾದ ಮಡಿಯನ್ನು ಸಾಕ್ಷಾತ್ ಶಿವನೆ ನಿರ್ಮಿಸಿರಬಹುದು. ವಾಹಾ ಇದು ನರಕ ಶ್ರೇಷ್ಠಿಯಂತೂ ಅಲ್ಲಲ್ಲಾ. ದೇವತಾಶ್ರೇಷ್ಠಿಯೇ ಹೌದು ಹೌದು. ಇನ್ನು ತಡವೇಕೆ? ಒಳಕ್ಕೆ ಹೋಗುವಾ. ಆಹಾ ಇದೇನ್ ಪರಮಾಶ್ಚರ್ಯವು! ಶಿವಾ ಶಿವಾ ಘಾತವಾಯಿತು.

ಘಾತವಾಯಿತು. ಅಯ್ಯಾ ಒಬ್ಬರಾದರೂ ಜಂಗಮ ಮೂರ್ತಿಗಳು ಇಲ್ಲವೇ ಇಲ್ಲ. ಏನಿರಬಹುದು? ಒಳ್ಳೇದು ದ್ವಾರಪಾಲಕನನ್ನು ವಿಚಾರಿಸುವಾ. ಎಲೌ ದ್ವಾರ ರಕ್ಷಕರೇ ವಾಡಿಯಲ್ಲಿ ಜಂಗಮ ಮೂರ್ತಿಗಳು ಒಬ್ಬರಾದರೂ ತೋರುವದಿಲ್ಲ. ಏನ್ ಸಂಗತಿ? ಯಾವದೇಶಕ್ಕೆ ಹೋದರು? ನೀವೇನಾದರೂ ಎಲ್ಲಿಗಾದರೂ ಕಳಿಸಿರುವಿರೇನು? ಅಯ್ಯಾ ಮೂರ್ಖರಿರಾ ಏನ್ ಮೋಸ ಮಾಡದಿರಿ? ನಿಮ್ಮನ್ನು ದಂಡಿಸದೆ ಬಿಡೆನು. ತೀವ್ರವಾಗಿ ನಿಜ ಸಂಗತಿಯನ್ನು ಕಥನ ಮಾಡಿರಿ.

ವೀರ : ಮಹಾರಾಜರೇ ಇದೇ ದ್ವಾರವನ್ನು ಕಾಯ್ದುಕೊಂಡು ಇರುವೆನು. ಜಂಗಮ ಮೂರ್ತಿಯಪರಾದರೂ, ಹೋಗಿಲ್ಲ. ಆದರೆ ನಿನ್ನೆ ದಿನದಲ್ಲಿ ಕಲ್ಯಾಣ ಪಟ್ಟಣದಲ್ಲಿರುವ ಕೋರಿ ಸಂಗನೆಂಬ ಒಬ್ಬ ವರ್ತಕನು ಹಸುಬಿಯ ಹೊತ್ತು ನಮ್ಮನ್ನು ವಿನಯದಿಂದ ಕೇಳಿದನು. ಎಲೌ ದ್ವಾರಪಾಲಕರೇ ನಾನು ನಿತ್ಯದಲ್ಲಿ ಜಂಗಮ ಪ್ರಸಾದವನ್ನು ಸೇವಿಸಿ ಆನಂದವನ್ನು ಹೊಂದುವ ನೇಮವನ್ನು ಕೈಗೊಂಡಿರುವೆನು. ಅದು ತಪ್ಪಿದರೆ ಮಾತ್ರ ಪ್ರಾಣ ತ್ಯಾಗ ಮಾಡಿಕೊಳ್ಳುವೆನೆಂದು ಬೇಡಿಕೊಂಡಿದ್ದರಿಂದ ಅವನನ್ನು ಒಳಕ್ಕೆ ಬಿಟ್ಟೆವು. ಆ ಕೋರಿಶೆಟ್ಟಿಯು ಒಳಕ್ಕೆ ಹೋಗಿ ತನ್ನ ಕ್ರಿಯಾಚಾರವನ್ನು ತೀರಿಸಿಕೊಂಡು ಈ ದಿನ ಉದಯದಲ್ಲಿ ನಮಗೆ ಬೇಟಿಯಾಗಿ ಹೋಗುತ್ತೇನೆಂದು ಹೇಳಿದನು. ನಾವು ಅವನನ್ನು ಅಂಗ ಜಡಿತಿ ಮಾಡಿದೆವು, ಬಿಟ್ಟೆವು. ಇಷ್ಟೆ ಸರಿ. ಜೀಯಾ ವಿಶೇಷ ಸುದ್ದಿಯನ್ನರಿಯವು. ಇದೇ ಒಂದು ತಪ್ಪು ನಮ್ಮಲ್ಲಿ ಉಂಟು ದೇವಾ.

ಧೀರ: ಹೌದು ಹೌದು. ದೇವಾ ಆ ಕಲ್ಯಾಣ ಪಟ್ಟಣದ ಕೋರಿ ಶೆಟ್ಟಿಯೆಂಬ ಅಧಮನು ನಮ್ಮನ್ನು ಬೇಡಿಕೊಂಡಿದ್ದರಿಂದ ಅವನನ್ನು ಮಾತ್ರ ಒಳಗೆ ಬಿಟ್ಟೆವು. ಆದರೆ ಅವನು ಒಳಕ್ಕೆ ಹೋಗುವ ಕಾಲದಲ್ಲಿ ಅವನಂ ಸುಲಿಗೆ ಮಾಡುತ್ತಿರಲಿಕ್ಕಾಗಿ ಅವನಲ್ಲಿ ಯಾವ ಜೀನಸು ಹೊರಡಲಿಲ್ಲ. ತೂಕವಂತೂ ಮೊದಲಿಗಿಂತ ಕಡಿಮೆಯಾಗಿತ್ತು. ಅಂದ ಮೇಲೆ ನಮಗೆ ಸಂಶಯವು ಕಾಣಲಿಲ್ಲ. ಜೀಯಾ ಅವನು ಮೋಸದವನಿರುವನೆಂಬುವದು ಶಿವನೇ ಬಲ್ಲಾ. ಆದರೂ ಕೂಡ ಅವನಂ ಒಳಕ್ಕೆ ಬಿಟ್ಟಿದ್ದು ಮಾತ್ರ ನಮ್ಮದು ತಪ್ಪು ತಪ್ಪು.

ಮಹಾದೇವ ಭೂಪ : ವಾಹವ್ವಾ ಅಯ್ಯೋ? ದ್ವಾರಪಾಲಕರೇ ಜಂಗಮವಾಡಿಯನ್ನು

ಪ್ರವೇಶಿಸಿ ಮಾಯಾಜಾಲವನ್ನೊಡ್ಡಿ, ಶ್ರೀ ಜಂಗಮ ಮೂರ್ತಿಯರನ್ನು ವೈಯ್ಯಬೇಕಾದರೆ ಅದೇ ಕಲ್ಯಾಣನಗರದ ಬಸವನೆಂಬೋ ಮೂಢನಲ್ಲದೇ ಉಳಿದವರಿಂದಾಗದು. ಒಳ್ಳೇದು. ಎಲವೋ ಮೂರ್ಖ ಬಸವ; ನಿನ್ನ ಮಹಿಮೆಯು ಎಷ್ಟರ ಮಟ್ಟಿಗಿದ್ದೀತು ತಡೆ – ತಡೆ ನೋಡೇ ಬಿಡುತ್ತೇನೆ. ಮೂರ್ಖ ಶಿರೋಮಣಿ ಅಧಮಾ ಇಕೋ ಎನ್ನ ಚತುರಂಗ ಮಹಾಬಲವನ್ನು ತೆಗೆದುಕೊಂಡು, ಕಲ್ಯಾಣ ಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿ, ನಿನ್ನ ಸೈನ್ಯವನ್ನು ಚಪ್ಪರಿಸಿ, ನಿನ್ನಂ ಜೈಸಿ ಅಧೋ ಭ್ರಷ್ಟನಂ ಮಾಡಿ ಪಾಶದಿಂದ ಪಿಚ್ಚಂಡಿಯಂ ಬಿಗಿದು ಕರ್ಕಶವಾದ ಮಾರ್ಗದೋಳ್ ಉಳಿಸಿ, ಆನಂತರ ಎಲೌ ಕಳ್ಳಾ ಅಧಮಾ ಜಂಗಮಾರ್ಯರಂ ಕಳ್ಳತನದಿಂದ ತೆಗೆದುಕೊಂಡು ಹೋದಿಯಾ ಮೂರ್ಖಾ. ನಿನಗೆ ಸಂಕೋಲೆಯಂ ಜೋಡಿಸಿ ನಿನ್ನ ಯಾವತ್ತು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಅಸಮ ಗಣಾಧೀಶರನ್ನು ತರದಿದ್ದರೆ ಪ್ರಖ್ಯಾತಿಯಂ ಹೊಂದಿದ ಮಾಂಡವ್ಯ ನಗರದ ಮಹಾದೇವ ಭೂಪಾಲ ಮಹಾರಾಜನೆಂಬ ನಾಮಮಂ ಸುಡಬೇಕೆ. ಅಯ್ಯೊ ನಿನ್ನನ್ನು ಏನು ಮಾಡಲಿ. ನಿನ್ನನ್ನು ಏನು ಮಾಡಿದ್ರು ಕೂಡಾ ನನ್ನ ಸಿಟ್ಟು ಶಾಂತವಾಗಲಾರದು. ಶಿವಾಶಿವಾ ನನಗೆ ಇವತ್ತಿನ ದಿವಸ ಜಂಗಮಾರ್ಯರ ಪಾದದ ತೀರ್ಥಯಿಲ್ಲದಂತಾಯಿತಲ್ಲ. ಹೇಗೆ ಮಾಡಲಿ ಅನ್ನವನ್ನು ಹೇಗೆ ಭಂಜಿಸಲಿ ಅಯ್ಯೋ ಅಕಟಕಟ ಎನ್ನ ಕೋಪಾಗ್ನಿಯು ಅದ್ಭುತವಾಗಿ ಕಾಡ್ಗಿಚ್ಚಿನಂತೆ ಹೆಚ್ಚಾಗುತ್ತದಲ್ಲಾ. ಬಾಳಾಕ್ಷ ರೌದ್ರಾವತಾರಿಯಂತೆಯೇ ಎನ್ನ ಅವತಾರವು ಮೇರೆದಪ್ಪಿ ಮೆರೆಯುತ್ತಿರುವದಲ್ಲ. ಎಲೌ ಭಟ ಸೈನಿಕರೇ ತಡವೇಕೆ ಕಲ್ಯಾಣ ನಗರಕ್ಕೆ ಈಗಿಂದೀಗಲೇ ಮುತ್ತಿಗೆಯನ್ನು ಹಾಕೋಣ ನಡೆಯಿರಿ.

ಮಡಿವಾಳ ಮಾಚಯ್ಯನ ಪದ :

ಯಾರೋ ನೀನು ಏನು ಕೋಪ ತಾಳಿಕೊಂಡಿದಿ ।
ವೀರ ರಾಜನಂತೆ ತೋರುತಿರ್ಪವೀ ನೀನು ನೀನೆಲೊ ॥ ೧ ॥

ಮಾಚಯ್ಯ : ಎಲೋ ಮಹಾತ್ಮನೇ ಯಾವನೋ ನೀನು, ನಿನ್ನ ಹೆಸರೇನು? ನಿನ್ನ ದೇಶ ಯಾವದು? ನಿನ್ನನ್ನು ನೋಡಿದರೆ ಮಾತ್ರ ರಾಜನೇ ಇರುವೆ ಎಂದು ಕಂಡು ಬರುತ್ತದೆ. ಎಲೋ ನಿನ್ನ ಮುಖಕಾಂತಿಯು ಕೋಪಾತಿಶಯದಿಂದ ಕಡು ಜ್ವಾಲೆಯೆಂಬ ಅಗ್ನಿಯ ಕಿಡಿಗಳನ್ನು

ದುರಿಸುತ್ತಿರುವದಲ್ಲ. ಇದೇನು ದಕ್ಷನ ಯಾಗವನ್ನು ನಷ್ಟ ಮಾಡಲಿಕ್ಕೆ ಹೋಗುವ ವೀರಭದ್ರನೋ ಏನ್ ಮದೋನ್ಮತ್ತವಾದ ದೈತ್ಯಪುರವನ್ನು ಹರಣ ಮಾಡಲಿಕ್ಕೆ ಪರಮಾತ್ಮನು ಹೊರಟಂತೆ, ಇಂಥಾ ಕೋಪದಿಂದ ಹೊರಟಿರುವಿಯಲ್ಲಾ ಇದರ ಇಂಗಿತವನ್ನು ತಿಳಿಸುವಂತವನಾಗು.

ಮಹಾದೇವ ಭೂಪಾಲ : ಸ್ವಾಮಿಗಳೇ ಕಾಶ್ಮೀರ ದೇಶವನ್ನು ಪರಿಪಾಲನೆ ಮಾಡುವ ಮಾಂಡವ್ಯ ಪುರದ ಅರಸ ಮಹಾದೇವ ಭೂಪಾಲನು ನಾನು. ನಿತ್ಯ ಆರು ಸಾವಿರ ಜಂಗಮರ ಪಾದಾರ್ಚನೆಯನ್ನು ಮಾಡಿಕೊಂಡು ಸುಖವಾಗಿರಲು ಬಸವೇಶನು ಕೋರಿ ಶೆಟ್ಟಿಯ ವೇಷವನ್ನು ಧಾರಣ ಮಾಡಿಕೊಂಡು ಬಂದು ನನ್ನ ಜಂಗಮ ವಾಡಿಯಲ್ಲಿರುವ ಆರು ಸಾವಿರ ಗುರುಮೂರ್ತಿಗಳನ್ನು ಕದ್ದು ವೈದಿರುವನು. ಆ ಕಾರಣವಾಗಿ ಆ ಕಳ್ಳ ಬಸವನನ್ನು ನನ್ನ ಖಡ್ಗಕ್ಕೆ ಆಹುತಿಯನ್ನು ಮಾಡಿ ಅವನಿಗೆ ಬಲವಾಗಿ ಬಂದ ಮಹಾರಥಿಕರನ್ನು ಸಂಹರಿಸಿ, ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಾಧೀಶ್ವರರನ್ನು ತೆಗೆದುಕೊಂಡು ಬಂದು ನನ್ನ ಪಂಥವನ್ನು ತೀರಿಸಿಕೊಳ್ಳದಿದ್ದರೆ ನಾನು ಮಹಾದೇವ ಭೂಪಾಲನೆಂದು ತಿಳಿಯತೆ, ನನ್ನ ಅಭಿಪ್ರಾಯವು ಇಷ್ಟೇ.

ಮಾಚಯ್ಯ : ಭೂಪಾಲನೇ ಕೇಳು ಬಡವನ ಸಿಟ್ಟು ದವಡೆಗೆ ಮೂಲ. ಬಸವನೆಂದರೆ ಏನೆಂದು ತಿಳಿದಿರುವಿರಿ. ಸಾಕ್ಷಾತ್ ದ್ವಿತೀಯ ಶಂಭುವೆಂದು ತಿಳಿ. ಅವನ ಕರುಣ ಕಟಾಕ್ಷದಿಂದ ಲೋಕವು ಬದುಕುವದು. ಅವನ ನಾಮವನ್ನು ಪಾನ ಮಾಡುವವರೇ ಧನ್ಯರು. ಆ ಮಹಾತ್ಮನ ಮಹಿಮೆಯನ್ನು ತಿಳಿಯಬೇಕಾದರೆ ಯಾರಿಗೆ ಸಾಧ್ಯವಾದೀತು? ನಿನ್ನನ್ನು ಉದ್ಧಾರ ಮಾಡುವ ನಿಮಿತ್ಯವಾಗಿ ನಿನ್ನ ಗಣಾಧೀಶ್ವರರನ್ನು ತಂದನಲ್ಲದೆ ಅನ್ಯಥ ತಿಳಿಯುವದೇನು? ಲೋಕದಲ್ಲಿ ಯಾರಾದರೂ ಅಯ್ಯನವರನ್ನು ಕಳವು ಮಾಡುವದುಂಟೆ? ನೀನೆ ತಿಳಿದು ನೋಡು. ಮಹಾ ಪರ್ವವನ್ನು ಬಂಗಾರಗೈಯುವ ನಾಗಾರ್ಜುನನಂತೆ ಅಲ್ಲ. ಪರುಷ ವೇದಿಯನಿಪ ಬಲಭದ್ರನು ಸಹ ಈ ಬಸವನಿಗೆ ಸರಿಯಲ್ಲವು. ಇಂದ್ರಜಾಲ ಮಹೇಂದ್ರಜಾಲವೆಂಬ ಗಾರುಡಿಗ ವಿದ್ಯೆಯನ್ನು ತೋರಿಸುವವನಲ್ಲಾ. ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹರಿಯಂತೆ ಅಲ್ಲಾ. ಸಾಕ್ಷಾತ್ ಪರಶಿವನಿಂದ ಪಂಚ ಪರುಷವನ್ನು ಪಡೆದು ಜಂಗಮ ಮೂರ್ತಿಗಳಿಗೆ ಬೇಡಿದಿಷ್ಟಾರ್ಥವನ್ನು ತಡೆಯದೇ ಕೊಡುವನು. ಆ ಮಹಾತ್ಮನ ಸಂಗಡ ಯುದ್ಧವನ್ನು ಮಾಡಿ ಜೈಸುವದು ಯಾರಿಂದಲೂ ಅಸಾಧ್ಯವು. ತಿಳಿಯಿತೆ ಭೂಪಾಲನೆ.

ಮಹಾದೇವ ಭೂಪಾಲ : ಬಿಡು ಬಿಡು ಕಡು ಬೆಡಗಿನ ನುಡಿಗಳನ್ನು ಎನ್ನೊಡನೇ ಉಸುರಬೇಡ. ಆ ಕಡು ಮೂರ್ಖನಾದ ಬಸವನಿಗೆ ಮೃಢನೊಲುಮೆ ಇದ್ದರೆ. ಎನ್ನ ಪುರವನ್ನು ಪ್ರವೇಶಿಸಿ ಎನ್ನ ಇಷ್ಟ ಮೂರ್ತಿಗಳಾದ ಜಂಗಮಾರ್ಯರನನ್ನು ಕದ್ದು ಒಯ್ಯುತ್ತಿದ್ದನೇ? ಎನ್ನ ಆತ್ಮ ಸ್ವರೂಪಿಗಳಾದ ಜಂಗಮ ಮೂರ್ತಿಗಳನ್ನು ಬಿಡುವುದುಂಟೆ? ಖಚಿತವಾದ ಹೆಣ್ಣನ್ನು ಕಳಕೊಂಡ ರಾಮನು ಬಹು ಪ್ರಯತ್ನ ಮಾಡಿ ಅವಳ ಕದ್ದೊಯ್ದ ರಾವಣನ ಪಟ್ಟಣವನ್ನು ಮಾರುತಿಯು ಸುಟ್ಟು, ಅವನಂ ಕೊಂದು ತಂದು ಪಾಣಿಗ್ರಹಣವಂ ಮಾಡಿಕೊಳ್ಳಲಿಲ್ಲವೆ. ಭೂಮಿಯನ್ನು ಕಳದುಕೊಂಡ ಧರ್ಮಜನು ಹೊಡೆದಾಡಿ ಸಾಯಲಿಲ್ಲವೆ? ಸರ್ವ ಸಿರಿಯನ್ನು ಹೋಗಲಾಡಿಸಿ ಇಂದ್ರನು ಕಳವಳಿಸಲಿಲ್ಲವೆ. ಹೊನ್ನು ಹೆಣ್ಣು ಮಣ್ಣು ಮೂಲವೆಂದು ತಿಳಿದು, ಅಂಥ ತೃಣ ಸಮಾನವಾದ ತ್ರಿಮಲಕ್ಕೆ ಬಡಿದಾಡಿ ಸಾಯುವ ಹುಲ್ಲು ಮಾನವನು ನಾನಲ್ಲ. ಸಾಕ್ಷಾತ್ ಶಿವ ಸ್ವರೂಪಿಗಳಾದ ಜಂಗಮರೆಂಬ ದ್ರವ್ಯವನ್ನು ಕದ್ದೊಯ್ದು ಕಳ್ಳ ಬಸವನನ್ನು ದಂಡಿಸಿ ಸರ್ವ ಜಂಗಮರನ್ನು ಒಯ್ಯದಿದ್ದರೆ, ನಾನು ಮಾದೇವ ಭೂಪಾಲನೆ? ಬಿಡು ಬಿಡು. ಸುಳ್ಳೇ ಕಳ್ಳನ ನುಡಿಗಳನ್ನು ಹೇಳಬೇಡ.

ಮಾಚಯ್ಯ : ಎಲವೋ ಮಾಂಡವ್ಯ ಪುರದ ಭೂಪಾಲನೇ ನಾನು ಎಷ್ಟು ಹೇಳಿದರೂ ನಿನಗೆ ವಿವೇಕ ಬುದ್ಧಿಯು ಬರಲೊಲ್ಲದಲ್ಲಾ. ಸೈರಿಸು ಸೈರಿಸು. ಆ ಜ್ಞಾನ ನಿಧಿಯಾದ ಬಸವೇಶನ ಮೇಲೆ ನಿನ್ನ ಕೋಪವೆಂಬ ಅಗ್ನಿಯು ನಂದಿ ಹೋಗುವದು. ಆ ಮಹಾತ್ಮನ ಚರಿತ್ರೆಯು ನಿನಗೆ ಹ್ಯಾಗೆ ತಿಳಿದೀತು! ಬಸವೇಶ್ವರನ ಹರಭಕ್ತಿಯೆಂಬ ಸ್ತ್ರೀಯಳಿಗೆ ದರ್ಪಣ ಸ್ವರೂಪಿಯಾದಂಥವನು ಅಜ್ಞಾನವೆಂಬ ಕತ್ತಲೆಯನ್ನು ಓಡಿಸುವದಕ್ಕೆ ಸೂರ್ಯ ಪ್ರಾಯನಾದಂಥವನು ಹರಿಬ್ರಹ್ಮಾದಿಗಳಿಗೆ ಅಗೋಚರನು. ಕೈಲಾಸವಾಸಿಯಾದ ಪರಮಾತ್ಮನನ್ನು ತನ್ನ ಅಂತಃಕರುಣದಲ್ಲಿ ಸ್ಥಿರಗೊಳಿಸಿದವನು ಜಗದ್ವ್ಯಾಪಕನು ಈ ಬಸವೇಶ್ವರನು. ನಿನ್ನ ಆರು ಸಾವಿರ ಜಂಗಮರನ್ನು ಹಸಬಿಯಲ್ಲಿ ತರಬೇಕಾದರೆ ಸಾಮಾನ್ಯನೇ ಮತ್ತು ತೂಕವನ್ನು ಮೊದಲಿಗಿಂತ ಕಮ್ಮಿ ಕೊಟ್ಟಿರುವನು. ಅಂದ ಬಳಿಕ ನಿನಗೆ ಮಹತ್ವವು ಗೊತ್ತಾಗಲಿಲ್ಲವೆ? ಆ ಸಾಕ್ಷಾತ್ ಬಸವೇಶ್ವರನ ಮಹಿಮೆಯನ್ನು ಹೇಳಬೇಕಾದರೆ ಯಾರಿಗೂ ಸಾಧ್ಯವಿಲ್ಲ. ಕಾರಣ ನನ್ನ ಸುಬೋಧೆಯನ್ನು ಕೇಳಿ ಬಸವನಿಗೆ ಶರಣಾಗತನಾಗು, ಮೋಕ್ಷಾಂಗನೆಗೆ ವಲ್ಲಭನಾಗು ತಿಳಿಯಿತೆ.

ಮಹಾದೇವ ಭೂಪಾಲ : ಸ್ವಾಮಿ ನನ್ನ ಅಜ್ಞಾನವೆಂಬುವಂಥ ಗಾಢಾಂಧಕಾರ ತಮ್ಮ ಸದ್ಬೋಧೆಯೆಂಬ ಸೂರ್ಯೋದಯದಿಂದ ನಿವಾರಣವಾಯಿತು. ನಾನು ಅರಿಯದೇ ದಂಡೆತ್ತಿ ಬಂದದ್ದಕ್ಕೆ ಕ್ಷಮೆಯನ್ನು ಬೇಡಿಕೊಳ್ಳುತ್ತೇನೆ. ಮಾಚಿದೇವನೇ ನನ್ನನ್ನು ಉಳಿಸಬೇಕು. ದ್ವಿತೀಯ ಶಂಭುವಾದ ಬಸವೇಶ್ವರನ ದರ್ಶನವು ನನಗೆ ಹೇಗೆ ಆಗುವದೋ ನೀವೇ ಕರುಣಿಸಬೇಕು.

ಮಾಚಯ್ಯ : ಮಹಾರಾಜನೇ ಈಗಲೆ ಬನ್ನಿ. ಆ ಬಸವೇಶ್ವರನ ದರ್ಶನ ಮಾಡಿಸುತ್ತೇನೆ.

(ಕಲ್ಯಾಣ ಪಟ್ಟಣ ಸೀನು)

ಬಸವ: ಶ್ರೀ ಗುರು ಸಂಗಮನಾಥನು ಹೇಳಿದ ಪ್ರಕಾರ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮ ಮೂರ್ತಿಗಳು ಪೂರ್ತಿಯಾದರು. ಆದರೆ ಈ ಆರು ಸಾವಿರ ಮೂರ್ತಿಗಳನ್ನು ಕದ್ದು ತಂದದ್ದಕ್ಕೆ ಮಹಾದೇವ ಭೂಪಾಲ ಮಹಾರಾಜರು ಎಷ್ಟು ಕೋಪಗೊಂಡನೋ ಎಷ್ಟು ಸಂತಾಪಗೊಂಡನೋಎಷ್ಟು ಕಳವಳಗೊಂಡನೋ ಏನೋ. ಎಂಥ ಮಹತ್ವವಾದ ಅನ್ಯಾಯವನ್ನು ಮಾಡಿದೆನು. ಶಂಭೋಶಂಕರ ಶಿವ ಸ್ವರೂಪಿಗಳಾದ ಜಂಗಮಾರ್ಯರನ್ನು ತಂದದ್ದಕ್ಕೆ ಸಂತಾಪವೆಂಬ ಸಮುದ್ರದಲ್ಲಿಯೇ ಮುಳುಗಿರಬಹುದು. ಈ ಕಾರ್ಯವನ್ನು ಹೇಗೆ ಮಾಡುವಿ ಶಂಭೋ ಕರುಣಿಸು ಆಹಾಹಾ ! ಇದೇನಾಶ್ಚರ್ಯವು ಎನ್ನ ಇಷ್ಟಲಿಂಗದಲ್ಲಿ ನೋಡುತ್ತಿರಲಿಕ್ಕಾಗಿ ಮಹಾದೇವ ಭೂಪಾಲನು ಬರುವಂತೆ ಕಾಣುತ್ತದೆ. ಆ ಮಹಾರಾಜರನ್ನು ಬಹು ಮರ್ಯಾದೆ ಪೂರ್ವಕವಾಗಿ ಕರೆದುಕೊಂಡು ಬರುತ್ತೇನೆ.

ಮಹಾದೇವ ಭೂಪಾಲ ಪದ :

ಬಸವನೇ ರಕ್ಷಿಸು ಶಶಿಧರ ಭಕ್ತನೇ ಪಸರಿಸಿನುತಿಸುವೆ ।
ನಿಮ್ಮನು ನಾ ಅಸಮಾಕ್ಷನ ಅವತಾರ ಹಸನಾಗಿ ನಿನ್ನಯ ।
ಭಜನೆಯ ಮಾಡುವೆ ನಾ ಈಗ ॥

ಮಹಾದೇವ ಭೂಪಾಲ : ಭೋ ಮಹಾತ್ಮನೇ ನಮೋ ನಮಃ

ಬಸವ : ಮಹಾರಾಜರೇ ನಮೋ ನಮೋ. ಈ ಸಿಂಹ ಪೀಠಕ್ಕೆ ಅಲಂಕರಿಸಬೇಕು.

ಮಹಾದೇವ ಭೂಪಾಲ : ಬಸವದೇವಾ ನನ್ನಂಥ ಅಧಮನಿಗ್ಯಾಕೆ ಈ ಸಿಂಹಾಸನವು. ನಿಮ್ಮ ಪಾದ ಧೂಳಿಯಲ್ಲಿ ಬಿದ್ದು ಹೊರಳಾಡುತ್ತೇನೆ. ನಿಮ್ಮ ಪಾದವೇ ನನಗೆ ಗತಿಯು ರಕ್ಷಿಸು.

ಬಸವ : ಭೂಪಾಲನೇ ನಾನು ಮಾಡಿದ ಅಪರಾಧವನ್ನು ಕ್ಷಮಾ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ದೇವಾ ರಕ್ಷಿಸು.

ಮಹಾದೇವ ಭೂಪಾಲ : ಭೋ ಬಸವೇಶ್ವರ ನಿನ್ನ ಮೇಲೆ ದಂಡೆತ್ತಿ ಬಂದದ್ದು ನನ್ನದು ಅಪರಾಧವು. ನಿನ್ನ ಅಗಣಿತ ಮಹಿಮೆಯು ಗೊತ್ತಾಗಲಿಲ್ಲವು. ಬುದ್ಧಿ ನನ್ನ ಅಜ್ಞಾನ ವಶದಿಂದ ನಿನ್ನನ್ನು ಬಹು ಪರಿಯಿಂದ ಧಿಕ್ಕಾರ ಮಾಡಿದೆನು. ನನ್ನ ಶತ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಬಸವ : ನಿನ್ನ ಆರು ಸಾವಿರ ಜಂಗಮ ಮೂರ್ತಿಗಳನ್ನು ಕದ್ದು ತಂದದ್ದು ನನ್ನದೇ ಅಪರಾಧವಿರುತ್ತದೆ. ಆದಕಾರಣ ನನ್ನ ಮೇಲೆ ಪೂರ್ಣ ದಯವಿರಬೇಕು. ನೀನು ಧನಿಕನು ನಾನು ಚೋರನು. ಎಂಥಾ ದೊಡ್ಡವನಾದರೂ ಚೋರನೆಂಬ ನಾಮವು ಸಾರ್ಥಕವಾಯಿತು. ಮಹನಿಯರೇ ಎನ್ನ ಅಗಣಿತವಾದ ಅವಗುಣಗಳನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಮಹಾದೇವ ಭೂಪಾಲ: ಭೋ ಬಸವೇಶಾ ಆರು ಸಾವಿರ ಜಂಗಮ ಮೂರ್ತಿಗಳನ್ನು ಪೂಜಿಸಿ ಅಲ್ಪ ಫಲಕ್ಕೆ ಪಾತ್ರನಾಗಿದ್ದೆ, ಈಗ ಪ್ರತ್ಯಕ್ಷ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಾಧೀಶ್ವರರ ಪಾದ ಸೇವೆಯಿಂದೊದಗುವ ಫಲವನ್ನು ಒದಗಿಸಿಕೊಡುವಂಥವನಾದಿ. ಅಂದ ಬಳಿಕ ನಿನ್ನ ಉಪಕಾರವನ್ನು ಇಹ ಲೋಕದಲ್ಲಿಯೂ ಪರಲೋಕದಲ್ಲಿಯೂ ಮರೆಯುವದಿಲ್ಲ. ಆದಕಾರಣ ನನಗೆ ಮೋಳಿಗಿಯ ಕಾಯಕವನ್ನು ಕೊಡಬೇಕೆಂದು ತಮ್ಮನ್ನು ಬೇಡಿಕೊಳ್ಳುತ್ತೇನೆ.

ಬಸವ : ಹಾಗೇ ಆಗಲಿ ಇಕೋ ಮೋಳಿಗೆ ಕಾಯಕವನ್ನು ತೆಗೆದುಕೋ. ಇನ್ನು ಜಂಗಮ ಸೇವೆಯ ನಿಮಿತ್ಯವಾಗಿ ಮಠವನ್ನು ಕುರಿತು ಗಮನ ಹರಿಸುತ್ತೇನೆ. ಹೋಗುವಾ ನಡಿಯಿರಿ.

(ಜಂಗಮ ವಾಡಿ)

ಬಸವ : ಸಂಗಮನಾಥ ನಿನ್ನಿಂದಲೇ ಎನ್ನ ಕಾರ್ಯವು ದಿಗ್ವಿಜಯವಾದವು. ಆಹಾಹಾ. ಇದೇನ್ ಚಮತ್ಕಾರವು. ಎನ್ನ ಇಷ್ಟಲಿಂಗದಲ್ಲಿ ನೋಡುತ್ತಿರಲಿಕ್ಕಾಗಿ ಪೂಡೂರೆಂಬ ಪಟ್ಟಣವನ್ನು ಬಿಟ್ಟು ಕಿನ್ನರ ಬ್ರಹ್ಮಯ್ಯನವರು ಈ ಕಲ್ಯಾಣ ಪಟ್ಟಣಕ್ಕೆ ಬರುವಂತೆ ತೋರುತ್ತದೆ. ಬರಲಿ ಆ ಮಹಾತ್ಮನನ್ನು ಕರೆದುಕೊಂಡು ಬರುತ್ತೇನೆ.

(ಕಿನ್ನರಯ್ಯನ ಪ್ರವೇಶ)

ಕಿನ್ನರಯ್ಯ ಪದ :

ಶಿವಾ ಶಿವಾ ತ್ರಿಪುರಾಂತೇಶಾ ತ್ರಿಪುರಾಂತೇಶ ತ್ರಿಪುರಾಂತೇಶ ।
ಮಾರಮರ್ಧನ ಶಂಭೋ ಪಾಲಗಿರೇಶಾ ಪಾಲಗಿರೇಶಾ ಪಾಲಗಿರೇಶಾ ॥ ೧ ॥

ಕಿನ್ನರಯ್ಯ : ಭೋ ಶ್ರೀ ಗುರು ಕಲ್ಲಿನಾಥನೇ ನಿನ್ನ ಪಾದಾರವಿಂದಕ್ಕೆ ನಮಸ್ಕರಿಸುವೆನು. ಭೋ ಶ್ರೀ ಗುರು ಗುದಿನೇಶ್ವರನೇ ನಿನಗೆ ದೀರ್ಘದಂಡ ನಮಸ್ಕಾರವಿರಲಿ. ಆದರೆ ನಿನ್ನ ನೂರಾ ಒಂದು ಕೂರಿಗೆ ಭೂಮಿಯ ಲಿಂಗ ಮುದ್ರೆಯಲ್ಲಿ ಯಾರು ವಾಸ ಮಾಡುವರೋ ಯಾರು ನಿನ್ನ ಅಂಗಳ ರಜ ಹೊಡೆಯುವರೋ ಅವರ ಪುಣ್ಯಕ್ಕೆ ಕೊನೆಯೆ ಇಲ್ಲ. ಒಳ್ಳೇದು ಇನ್ನು ತಡವೇಕೆ ಈ ಮೂಡೂರೆಂಬ ಪಟ್ಟಣದ ಜನರು ವೀರಶೈವರೇ ಆಗಿರುತ್ತಾರೆ. ಇನ್ನು ಇಲ್ಲಿ ಇರಲಿಕ್ಕೆ ಕಾರಣವೇ ಇಲ್ಲ. ಭೋ ಬಸವ ಪ್ರಭೋ ನಿನ್ನ ಭಕ್ತಿಯ ಶೌರ್ಯಕ್ಕೆ ಬೆಲೆಯೇ ಇಲ್ಲ. ಹರಾಹರಾ ಶಂಕರ ಒಳ್ಳೇದು. ಇನ್ನು ಕಲ್ಯಾಣವನ್ನು ಕುರಿತು ಈಗಿಂದಿಗಲೇ ಹೋಗುತ್ತೇನೆ. ಬಸವ ಬಸವ.

(ಕಲ್ಯಾಣ ಪಟ್ಟಣ)

ಕಿನ್ನರಯ್ಯನ ಪದ :

ಏನು ಕಲ್ಯಾಣದ ಪುರವು ಹ್ಯಾಂಗೆ ಶೋಭಿಸುತ್ತಿಹುದು ॥ ಪಲ್ಲ ॥
ಬಸವನ ನಾಮ ವಸುಧಿಯೋಳ್ ಪ್ರೇಮಾ ಅಚ್ಚುತ ನಾಮ ।
ಬಹಳ ಪ್ರೇಮ ಎತ್ತನೋಡಿದತ್ತ ಶಿವನ ಛತ್ರ ಚಾಮರ ಹೊಳೆಯುತಿಹವು ॥ ೧ ॥

ಕಿನ್ನರ : ಆಹಾಹಾ. ನನ್ನ ಯಾವತ್ತು ಸಂಪತ್ತನ್ನು ಗುರು, ಲಿಂಗ, ಜಂಗಮಕ್ಕೆ ಅರ್ಪಿಸಿದೆನು. ಹಣವಿಲ್ಲೆಂದು ಮನಗುಂದಲೇಕೆ. ಘನವಾದ ಕಲ್ಯಾಣ ಪಟ್ಟಣದಲ್ಲಿ ಚಿನ್ಮಯನಾದ ಬಸವನಿರುವನು. ಆತನು ತನು, ಮನ, ಧನಗಳನ್ನು ಅರ್ಪಿಸಿರುವನು. ಆ ಮಹಾಮಹಿಮನಾದ ಬಸವನ ಕಡೆಯಿಂದ ಉನ್ನತವಾದ ಕಿನ್ನರಿ ಕಾಯಕವನ್ನು ಪಡೆದುಕೊಳ್ಳುವುದಕ್ಕೆ ಬಸವೇಶನ ದರ್ಶನಾರ್ಥವಾಗಿ ಒಳಗೆ ಹೋಗುತ್ತೇನೆ. ಬಸವಾ ಬಸವಾ. ಬಸವ ಮಹಾತ್ಮರೆ ತಮ್ಮ ಸುಂದರ ಪಾದಕಮಲಕ್ಕೆ ದೀರ್ಘದಂಡ ನಮಸ್ಕಾರಗಳು.

ಬಸವ : ಕಿನ್ನರ ಸ್ವಾಮಿಗಳೇ ಈ ಸಿಂಹಾಸನಕ್ಕೆ ಕೂಡಬೇಕೆಂದು ಬೇಡಿಕೊಳ್ಳುತ್ತೇನೆ.

ಕಿನ್ನರಯ್ಯ : ಬಸವ ಪ್ರಭೋ ಈ ವೀರ ಸಿಂಹಾಸನಕ್ಕೆ ತಾವೇ ಮಂಡಿಸಬೇಕು. ನಾನು ಇಲ್ಲೇ ತಮ್ಮ ಮುಂಭಾಗದಲ್ಲಿ ಕೂಡುವೆ ಬಸವ ಮಹಾತ್ಮರೇ ನಿನ್ನ ಕೀರ್ತಿಯೆಂಬ ಚಂದ್ರನು ಇಡೀ ಜಗತ್ತನೇ ಬೆಳಗುತ್ತಿರುವದು. ನಿನ್ನನ್ನು ಕುರಿತು ಬೇಡಿಕೊಳ್ಳುವದೇನೆಂದರೆ, ಎನಗೆ ಚನ್ನವಾದ ಕಿನ್ನರಿ ಕಾಯಕವನ್ನು ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಬಸವ : ಮಹನಿಯರೇ ಈ ಕಿನ್ನರಿ ಕಾಯಕವನ್ನು ತೆಗೆದುಕೊಳ್ಳಿರಿ. ಈ ಕಾಯಕದಿಂದ ಬಂದ ಹಣವನ್ನು ಜಂಗಮಾರ್ಪಿತ ಮಾಡು ನಡೆ.

ಕಿನ್ನರಯ್ಯ : ಇನ್ನು ತಡವೇಕೆ ಬಸವೇಶ್ವರ ನಿನ್ನಿಂದ ಉನ್ನತವಾದ ಕಿನ್ನರಿ ಕಾಯಕವನ್ನು ಪಡೆದುಕೊಂಡೆನು. ಆದರೆ ಇನ್ನು ತಡವೇಕೆ ತ್ರಿಪುರಾಂತಕೇಶ್ವರನ ಗುಡಿಯನ್ನು ಕುರಿತು ಗಮನ ಹರಿಸುತ್ತೇನೆ ಬಸವಾ.

(ವೇಶ್ಯೆ ಮಂದಿರ)

ಪದ

ವೇಷಧಾರಿಯೇ ನಾ ಬಲು ವೇಷಧಾರಿಯೇ ॥ ಪಲ್ಲ ॥
ಕುಂಕುಮ ಕುಂಕುಮ ಕುಂಕುಮ।
ಫಣಿಯ ಚಂದನ ಕುಂಕುಮ ಪಣಿಯೊಳುಧರಿಸುತ ।
ಮಿಂಚುತ ಮಿನಿಮಿನಿ ಹಂಚಿಕಿ ಹಾಕುತ ॥ ೧ ॥

ವೇಶ್ಯೆ : ಆಹಾಹಾ ನನಗೆ ಇವತ್ತಿನ ದಿವಸ ಅಮೂಲ್ಯವಾದ ಶುಭ ಶಕುನಗಳು ಅನುವಾಗಿಯೇ ತೋರುತ್ತವೆ. ಎಡಗಣ್ಣು ಎಡಭುಜವು ಎಡಬಿಡದಲೇ ಹಾರುತ್ತಿವೆ. ಕಾರಣ ಯಾವನೋ ಒಬ್ಬ ವಿಟಪುರಷನು ಧನ ರಾಶಿಯನ್ನು ತೆಗೆದುಕೊಂಡು ಸ್ವಲ್ಪಕಾಲದಲ್ಲಿಯೇ ಇಲ್ಲಿಗೆ ಬರುವಂತೆಯೇ ತೋರುತ್ತದೆ. ಒಳ್ಳೇದು ಅವನು ಬರುವದರೊಳಗಾಗಿ ನಾನು ಅಲಂಕಾರ ಪೂರಿತಳಾಗಿ ವಿಟನ ಮನ ಮೋಹಿಸುವಂತೆ ಮಾಡುವೆನು.

ವಿಟನ ಪದ :

ಏನಿದು ರೂಪವು ಮಾನವತಿಯಳೇ ಏನು ಸೊಗಸಿಹಳು
ತನಯಳ ನೇತ್ರದ ಹೊಡಿತವು ಎನ್ನಯ ಎದೆಯನು ಭೇದಿಸಿತು ॥ ೧ ॥

ವಿಟ : ಆ ಹಾ ಹಾ. ಈ ಗಗನ ಚುಂಬಿತವಾದ ಮಹಲಿನಲ್ಲಿ ಕುಳಿತಿರುವ ಸ್ತ್ರೀಯಳ ವಾರಿ ನೋಟವೆಂಬ ಕೂರ್ಗಣೆಯು ಎನ್ನ ಎದಿಯನ್ನು

ಇಬ್ಭಾಗ ಮಾಡಿತು. ಆ, ಹಾ, ಹಾ ಏನ್ ಕನ್ಯಾಮಣಿಯು ಮನ್ಮಥನ ರಾಜಲಕ್ಷ್ಮಿಯೋ ಮದನ ರಾಜನ ಮಂತ್ರಶಕ್ತಿಯೋ ಕುಸುಮಾಸ್ತ್ರನನ್ನು ಪೂಜಿಸುವ ವನದೇವತೆಯೋ ತಿಳಿಯದು. ಆ.ಹಾಹಾ. ಏನ್ ರೂಪಾತಿಶಯವೋ ದೇವತಾಸ್ತ್ರೀ ದೇವತಾಸ್ತ್ರೀಯರ ಶಿಖಾಮಣಿಯೋ ರಂಭಾದೇವಿಯೋ ರೋಹಿಣಿಯೋ ರೇವತಿಯೋ ತಿಳಿಯದು. ಇವಳು ಏನ್ ಸುಂದರ ಪ್ರತಿಮೆಯೋ. ಇವಳ ಕಣ್ಣ ಕಾಂತಿಯು ನನ್ನ ಮೇಲೆ ಪಸರಿಸಿದ್ದಲ್ಲದೆ ಜಗತ್ತನ್ನೇ ಹಾಳು ಮಾಡಿರಬಹುದು. ಆಹಾಹಾ ಏನ್ ಪ್ರಕಾಶವು ಮನ್ಮಥಾರಿಯ ನೇತ್ರಗಳೋ ಏನೋ ತಿಳಿಯದು. ಒಳ್ಳೇದು ಇವಳ ಮನ್ಮಥನ ಬಾಣದ ಏಟುಗಳು ತಗಲಿ ಎನ್ನ ಧೈರ್ಯವು ಕೆಟ್ಟು ಹೋಯಿತು. ಕಾಮಾಗ್ನಿ ಚಾಪದಲ್ಲಿ ಬಿದ್ದು ಮೈಮರೆತು ಪರವಶನಾದೆನು. ಈ ಪದ್ಮಗಂಧಿಯ ಕುಡಿ ನೋಟವೆಂಬ ಕಾಂತಿಯ ಮಿಂಚು ನನ್ನ ಮನವೆಂಬ ಹಂಸಪಕ್ಷಿಯನ್ನು ಹಾರಿಸಿತಲ್ಲಾ. ನಾನು ಯಾವದಕ್ಕೂ ಮಣಿಯದೆಯಿರುವ ವಜ್ರಶರೀರವನ್ನು ಇವಳ ಕಾಮ ಬಾಣವು ಎದೆ ಇಬ್ಭಾಗ ಮಾಡಿತು. ಈ ಸ್ತ್ರೀಯು ಯಾರಾಗಿರಬಹುದು. ಇವಳನ್ನು ಭೋಗಿಸುವ ಪುರುಷನು ಅವನೇ ಲೋಕದಲ್ಲಿ ದೇವತಾ ಪುರುಷನು ಪೂಜ್ಯನು. ಅವನಿಗೆ ನನ್ನ ಸಾಷ್ಟಾಂಗ ನಮಸ್ಕಾರವಿರಲಿ. ಒಳ್ಳೇದು ಮುಂದಕ್ಕೆ ಹೋಗುವಾ. ಆಹಾಹಾ ಇವಳ ವಾರಿಗಣ್ಣಿನ ನೋಟ ತಾವರೆಯ ಕಮಲ ಪ್ರಕಾಶವು ಚಂದ್ರ ಬಿಂಬವೋ ಏನ್ ಭಕ್ತಿಯ ಬೆಳದಿಂಗಳೋ ತಿಳಿಯದು. ಇವಳ ಭವನವಂತೂ ಇಂದ್ರನ ಮಂದಿರದಂತೆ ತೋರುತ್ತದೆ. ಇವಳ ಮಂದಿರವನ್ನು ಪ್ರವೇಶಿಸಿ ವಿಚಾರಿಸುವಾ. ಹೇ ಕಮಲ ಮುಖಿ ಕಮಲ ಸೀತೆ ನೀನಾರಾಗಿರಬಹುದು.

ವೇಶ್ಯೆ ಪದ :

ಮಾರನಾಟಕೆ ಬಾರೋ ಚಾರುಗಾತ್ರನೇ ನೀನು। ತೋರಿ ।
ಸುವೆನು । ಸುಖ ಧೀರ ನಾರಿಯ ಸುಖವನು ಸೂರೆ ಮಾಡಿಸು ।
ನೀನೆ ಮಾರಸುಂದರ ಬಾರೋ ಮನಿಗೆ ॥ ೧ ॥

ವೇಶ್ಯೆ : ಸುಂದರ ಪುರುಷನೇ ನಾನು ವೇಶಾಂಗಿನಿಯು. ಈ ದಿವ್ಯತರಮಾದಂಥ ಹಂಸತಲ್ಪದ ಹಾಸಿಗೆಯ ಮೇಲೆ ಮಂಡಿಸಿರಿ.

ವಿಟ : ಆಹಾಹಾ. ನಿನ್ನ ಕೋಮಲತರವಾದ ಕರಸ್ಪರ್ಶವನ್ನು ಮಾಡುವವನೇ ಪುರುಷೋತ್ತಮನು. ನಾನು ಧನ್ಯನಾದೆ. ನನ್ನ ಸುಕೃತಕ್ಕೆ ಬೆಲೆಯೆ

ಇಲ್ಲ. ಒಳ್ಳೇದು ನಿನ್ನ ಆಜ್ಞೆಯೇ ಎನಗೆ ಮಾನ್ಯವು. ಎಂದು ಶಿರದೋಳ್ ಹೊತ್ತಿರುವೆನು. ಆಹಾಹಾ. ಏನ್ ಗದ್ದುಗೆಯೋ. ಇಂಥ ರತ್ನ ಖಚಿತವಾದ ಸುಪ್ಪತ್ತಿಗೆಯ ಹಾಸನವು ಇಂದ್ರನಿಗೂ ಚಂದ್ರನಿಗೂ ಮನ್ಮಥನಿಗೂ ಸಹ ದೊರೆತಿರಲಿಕ್ಕಿಲ್ಲ. ಆದರೆ ನಾನೇ ಧನ್ಯನು. ಇವಳ ಮಂದಿರವನ್ನು ಹೊಂದಿ ಪರಮಾನಂದದೋಳ್ ಮುಳುಗಿ ಪರವಶನಾದೆನು. ನೀನೇ ಮೋಕ್ಷಾಂಗನಿ ಮೋಕ್ಷಾಂಗನಿ.

ವೇಶ್ಯೆ : ಆಹಾಹಾ, ತಮ್ಮಂಥ ಮನ್ಮಥ ಸುಂದರರು ಕಲ್ಪವೃಕ್ಷ ಪ್ರಾಯವಾಗಿರಲು ನನಗೇನು ಕೊರತೆ.

ವಿಟ : ಆಹಾಹಾ ಮನ್ಮಥನ ಗೊಂಬೆಯ ಪುಥ್ಥಳಿಯಂತಿರುವ ನಿನ್ನಂಥ ಹೊಸ ಕನ್ಯಾಮಣಿಯು ಕಮಲ ಪೊನ್ನೆಯು ನೀನಿದ್ದ ಬಳಿಕ ವರ್ಣಿಸುವರಾರು. ಕೋಮಲೆ ನೀನು ಎಂಥ ಜಾತಿಯವಳೆಂದರೆ ಕೇವಲ ಪದ್ಮಿನಿ ಜಾತಿಯಳು. ಇದು ಅಲ್ಲದೆ ನಿನ್ನ ವಾಸನೆಯು ಕೇತಕಿ ವಾಸನೆಯುಳ್ಳದ್ದು. ನಿನ್ನ ಶರೀರ ತೂಕವು ಮಲ್ಲಿಗೆ ಹೂವಿನ ತೂಕದ್ದು. ಇಂಥ ನಿನ್ನ ಕೋಮಲವಾದ ಶರೀರ ಬಾಹುಗಳನ್ನು ಅವಚುವವನೇ ಧನ್ಯನು. ನಿನ್ನ ಮೋಹಾನಂದವೆಂಬ ರತಿಸುಖದಲ್ಲಿ ಕಾಮ ಯುದ್ಧವನ್ನು ಜಯಿಸಿ ಕುಚವನ್ನು ಸ್ಪರ್ಶಿಸಿ ಅಧರಾಮೃತಪಾನ ಗೈಯುವವನು ಧನ ಕೊಡುವದೇನಾಶ್ಚರ್ಯ ಸುಂದರಿ.

ವೇಶ್ಯೆ : ಪುರುಷನ ಮನದಿಚ್ಛೆಯಂತೆ ಮುಂಚಿತವಾಗಿ ತನುಮನವನಿತ್ತು, ರತಿಸುಖವನ್ನು ತೋರಿಸಿ ಅಧರಾಮೃತಪಾನ ಮಾಡಿಸಿ, ಸುಖವನ್ನು ತೋರಿಸಿ ಮುಖವನ್ನು ಚುಂಬಿಸಿ ಮೋಹಾನಂದಗೊಳಿಸುವ ನಲ್ಲಿಯರಾದ ಸೂಳಿಯರ ಮನಿ ಮುಂದ ಕಾಮಧೇನಿರುವದೇನಾಶ್ಚರ್ಯ.

ವಿಟ : ಆಹಾಹಾ ಕನ್ಯಾ ರತ್ನೆ ನಿನ್ನ ವಾಕ್ಯವು ನನಗೆ ಎಷ್ಟು ಇಂಪನ್ನು ತೋರಿಸುತ್ತದೆ. ಕೋಕಿಲೇ ನಿನ್ನ ವಾಕ್ಯ ಸ್ಪರ್ಶದಿಂದ ಸಿಡಿಯುವ ಪುಗುಳು ಸೂರ್ಯನ ಕಾಂತಿಯಂತಿರುವ ಮುತ್ತುಗಳೋ ಏನ್ ಚಂದ್ರ ಕಾಂತಿಯಂತಿರುವ ರತ್ನಗಳೋ ಅನ್ನುವ ಹಾಗೆ ತೋರುತ್ತದೆ. ಆಹಾಹಾ. ಏನ್ ಚಂದ್ರನಂತಿರುವ ಮುಖವೋ ಇಂಥ ರೂಪಾತಿಶಯಕ್ಕೆ ಸನ್ಯಾಸಾಶ್ರಮದವರೂ ಸಹ ಸೋಲಬಹುದು. ಒಳ್ಳೇದು ಸ್ತ್ರೀಯೆ ಆಕಾಶ ಮಂಡಲದಲ್ಲಿ ನೀಲರತ್ನದಿಂದಲೂ ಪುಷ್ಯ ರಾಗದಿಂದಲೂ ಹೊಂದಿರುವ ನಿನ್ನ ಪಟುತರವಾದ ಕುಚ ದ್ವಂದ್ವವನ್ನು ಎಸಗಿ ನಿನ್ನ

ಮುಖವೆಂಬೊ ಚಂದ್ರನಲ್ಲಿರುವ ಅಮೃತವನ್ನು ಸ್ವೀಕರಿಸುವ ಪ್ರಾಣಿಗೆ ಧನವೆಂಬುದು ತೃಣ ಸಮಾನವಲ್ಲವೆ ಹಂಸಗಮನಿ.

ವೇಶ್ಯೆ : ಆಹಾಹ. ಇಂಥ ದಿವ್ಯತರವಾದ ಚಂದ್ರ ಮಂಡಲವೆಂಬ ರೂಪವು ಚಂದ್ರನಂತೆಯು ಮನ್ಮಥನಂತೆಯೂ ಅನಿರುದ್ಧನಂತೆಯು ಇರಲೆಂದು ಸದಾವಕಾಲದಲ್ಲಿ ನನ್ನ ಕುಲದೇವತೆಯನ್ನು ಕುರಿತು ಸ್ಮರಿಸುತ್ತೇನೆ.

ವಿಟ : ಆಹಾಹಾ. ಮೋಹನಾಂಗಿ ಸುರತರ ಸುಖವೆಂಬ ಸುಗ್ಗಿಯ ಬೆಳೆಯನ್ನು ಅನುಕೂಲಿಸಿ ಮಧುರವಾದ ತುಟಿಯ ಸಂಪಿಗಿಯ ಇಂಪನ್ನು ಕಂಪಿತಮಾಗಿ ಚುಂಬಿಸಿ ಆ ರಥಿ ಕೇಳಿಯ ಆನಂದ ದೋಳ್ಮುಳುಗುತ್ತೇನೆ.

ವೇಶ್ಯೆ : ಆಹಾಹಾ. ಸುಂದರಾಂಗ ಚುಂಬನಕ್ಕೆ ಹಂಬಲಿಸಿದರೆ ಸಂಭ್ರಮವಿಲ್ಲದೆ ಬರುವದೇ.

ವಿಟ : ಅದಕ್ಕೆ ಬಹು ನೇಮಗಳುಂಟೇನು. ಆದರೆ ಮತ್ತೇನುಬೇಕು. ನೀನು ಬೇಡಿದನ್ನು ತರಸಿ ಕೊಡುತ್ತೇನೆ. ಚಂದ್ರಮುಖಿ ಮುತ್ತಿನ ಸರವೋ ವಜ್ರದ ಸಾಮಾನುಗಳೋ ಬಂಗಾರ ವಸ್ತುಗಳೊ ಜರತಾರಿ ಪೀತಾಂಬರವೋ ಹೇಳಿ ತಡಮಾಡದೇ ತರಿಸಿಕೊಡುತ್ತೇನೆ.

ವೇಶ್ಯೆ : ಪ್ರಿಯಾ ತಮಗೆ ಗೊತ್ತಿಲ್ಲವೇನು? ಕುಶಲಮತಿಗಳಿಗೆ ಹೆಚ್ಚಿಗೆ ಹೇಳುವದೇನು?

ವಿಟ : ನಿನ್ನ ಇಚ್ಛೆಯಂತೆ ಮನಃಪೂರ್ವಕವಾಗಿ ಈ ತನು ಮನಧನವನ್ನು ಅನುಮಾನವಿಲ್ಲದೆ ನಿನಗೆ ಒಪ್ಪಿಸುತ್ತೇನೆ. ಆಲಸ್ಯವೇಕೆ ನಾನು ನಿನ್ನ ಅಧೀನನೇ ಇರುತ್ತೇನೆ. ನನ್ನ ಯಾವತ್ತು ಸ್ಥಾವರ ಆಸ್ತಿಯು ನಿನ್ನದೇ ಇರುತ್ತದೆ. ಆದ್ದರಿಂದ ಮನ ಚಂಚಲವಿಲ್ಲದೆ ಚುಂಬನಕ್ಕೆ ಸಿದ್ಧಳಾಗು.

ವೇಶ್ಯೆ : ಪುರುಷನೇ ಪುರುಷರು ಕುಟಿಲೋಕ್ತಿಯುಳ್ಳವರು, ಚಂಚಲ ಚಿತ್ತದವರು, ಡಾಂಭಿಕರು, ಒಂದು ಕೊಟ್ಟು ಎರಡೆನ್ನುವರು. ಸುಳ್ಳೆ ಸ್ತ್ರೀಯರ ಮುಂದೆ ಒಣ ಪೌರುಷವನೇ ತೋರಿಸುತ್ತಾರೆ. ಇಂಥವರನ್ನು ನಂಬುವದು ಹೇಗೆ. ಆದಕಾರಣ ನನಗೊಂದು ಲೇಖನವನ್ನು ಬರೆದುಕೊಟ್ಟರೇ ಸಂತೋಷವಾಗುವದು. ಪ್ರೀತಿಯು ಹೆಚ್ಚಾಗುವುದು. ತಮ್ಮ ಸೇವಾಸ್ಪದಕ್ಕೆ ಬಾಧ್ಯಳಾಗುತ್ತೇನೆ. ಇಷ್ಟೇ ಎನ್ನ ವಿಜ್ಞಾಪನೇ. ಧನಿಕರೇ ಖರೀದಿ ಪತ್ರವನ್ನು ಬರೆದು ಕೊಡಲಿಕ್ಕೇಬೇಕು.

ವಿಟ : ಏನಾಶ್ಚರ್ಯದ ಸುದ್ದಿಯನ್ನು ಹೇಳಿದೇ. ನಿನ್ನಂಥ ಚಂದ್ರಮುಖಿಕಾಂತಿಗೆ

ಯಾವತ್ತೂ ಇಷ್ಟೊಂದು ಭೂಮಿ ಸೀಮಿ ಧನಧಾನ್ಯವು ತೃಣ ಸಮಾನವು. ಹೊನ್ನು ಗಳಿಸಬಹುದು. ಭೂಮಿಗಳಿಸಬಹುದು. ಆಧರೆ ನಿನ್ನಂಥ ಸ್ತ್ರೀಯಳನ್ನು ಗಳಿಸುವದು ದುರ್ಲಭವು. ಈ ಜಗತ್ತಿನಲ್ಲಿ ಸ್ತ್ರೀಯಂಬುವದು ಎಲ್ಲಾ ಪದಾರ್ಥಕ್ಕಿಂತಲೂ ಹೆಚ್ಚು. ಆದ್ದರಿಂದ ಯಾವತ್ತು ನನ್ನ ಆಸ್ತಿಯನ್ನು ನಿಮಗೆ ದಕ್ಕು ಕೊಡುತ್ತೇನೆ. ಈ ಬಾಳ್ವೆಯ ಮೇಲೆ ನನ್ನ ಹಾಗೂ ನನ್ನ ಹೆಂಡತಿ ವಾರಸ್ಸು ಸಹ ಇರುವದಿಲ್ಲ. ನೀವೇ ಮಾಲಿಕರಿರುತ್ತೀರಿ. ಅಂಥಾ ನನ್ನ ಮನರಾಜಿಯಿಂದ ಅಕಲ್ ಹುಷಾರಿಯಿಂದ ಬರಿಸಿಕೊಟ್ಟ ಖಂಡಿತ ಖರೀದಿ ಪತ್ರ ಸಹಿ. ತಾರೀಖು ೨೩-೧೦-೧೯೫೫ ನೇ ಇಸ್ವಿ. ಸಾಕ್ಷಿ ರಾಮಪ್ಪ ಭೀಮಪ್ಪ ಮೇಲ್ಮನಿಸಾ ಕಲ್ಯಾಣ, ಇಲಾಖಾ ಕಲ್ಯಾಣ ತಿಳಿಯಿತೆ. ಇಕೋ ಈ ಲೇಖನವನ್ನು ತೆಗೆದುಕೊಳ್ಳಿರಿ.

ವೇಶ್ಯೆ ಪದ :

ಮದನ ಮನ್ಮಥ ಬಾರೋ ಮದನ ಕೇಳಿಗೆ ನೀನು ॥ ಪಲ್ಲ ॥
ಅಧರಾಮೃತ ಸವಿಯೋ ಮದನ ಚಂದಿರಚಂದಾ ॥ ೧ ॥

ವಿಟನ ಪದ :

ಸುದತಿ ನಿನ್ನಯ ಸುಖವ ಒದಗಿಸು ನೀ ಬೇಗ ॥ ಪಲ್ಲ ॥
ಚದುರೆ ನಿನ್ನಯs ಕುಚವ ಹದನವಾಗಿಯೇ ಪಿಡಿವೆ ॥ ೧ ॥

ವೇಶ್ಯೆ : ಆಹಾಹಾ. ಸುಂದರ ಎನ್ನ ಕಾಯವೇ ತಮ್ಮದಾಯಿತು. ತಮ್ಮ ಇಚ್ಛಾನುಸಾರವಾಗಿ ವರ್ತಿಸುತ್ತೇನೆ. ಇಗೋ ಈ ಕರಾರ ಪತ್ರದಿಂದ ಯುಕ್ತವಾದ ಕಪೋಲದಲ್ಲಿ ದಂತ ಪಂಕ್ತಿಗಳನ್ನು ರಚಿಸಿರಿ. ಆಹಾ ಒಳ್ಳೇ ಸಮಯ ಒದಗಿರುವದು. ಪ್ರಿಯಾ ಕರ್ಪೂರ ಮಿಶ್ರಿತವಾದ ತಾಂಬೂಲವನ್ನು ಸ್ವೀಕರಿಸಿರಿ. ಸದ್ಗಂಧಮಯವಾದ ತೈಲವನ್ನು ನಿಮ್ಮ ಅಂಗಕ್ಕೆ ಲೇಪಿಸುತ್ತೇನೆ. ಮತ್ತು ಅರಳ್ಬೀರಿದ ಮಲ್ಲಿಗಿ ಮಾಲಿಯನ್ನು ನಿಮ್ಮ ಕೊರಳಲ್ಲಿ ಹಾಕುವೆನು.

ವಿಟ : ಕೋಮಲಾಂಗಿ ಮುಂಚಿತವಾಗಿ ಶೃಂಗಾರಪೂರಿತದಿಂ ರೇಷ್ಮಿ ಸೀರೆಯನ್ನುಟ್ಟು ಭಂಗಾರದ ಮಂಚಮಂ ಏರಿ ನಾಲ್ಕು ಕಡೆಗೂ ರತ್ನ ಜ್ಯೋತಿಯಂ ಹಚ್ಚಿ ತಾಂಬೂಲ ಮಿಶ್ರಿತವಾದ ಅಧರಾಮೃತವನ್ನು ಕೊಡೆ.

ವೇಶ್ಯೆ : ಮಾರ ಸುಂದರಾ ಈ ಭಂಗಾರದ ಮಂಚವನ್ನು ಏರಿರಿ. ವೀಳ್ಯ ಸಿದ್ಧವಾಗಿರುವದು ಕೂತುಕೊಳ್ಳಿರಿ.

ವಿಟ : ಪ್ರಿಯೇ ಕೂತುಕೊಳ್ಳುತ್ತೇನೆ.

ವೇಶ್ಯೆ : ಆಹಾ! ಎನ್ನ ಅಂಗದೊರೆಯೋ ಲವಂಗ ಕರ್ಪೂರ ಪರಿಮಳಯುಕ್ತವಾದ ತಾಂಬೂಲದಿಂದ ಶೋಭಾಯಮಾನವಾಗಿ ಕಾಣುವಂಥ ದಂತ ಪಂಕ್ತಿಗಳಿಂದ ಸ್ತ್ರೀಯರ ತುಟಿಯನ್ನು ಸೇವಿಸದಿರ್ದೊಡೆ ಅವನು ಭೂಲೋಕದಲ್ಲಿ ಇದ್ದರೇನು ಸತ್ತರೇನು? ಕಾರಣ ವ್ಯರ್ಥವಾಗಿ ಯೌವ್ವನವನ್ನು ಕಳೆಯಬಾರದು. ಯಾಕೆಂದರೆ ಧನ ಧಾನ್ಯ ಸಂಪತ್ತು ಮುಂದೆ ಕಾಲಾಂತರ ಸಿಗಬಹುದು. ಯೌವ್ವನವು ಮಾತ್ರ ಸಿಗುವದು ದುರ್ಲಭವು.

ವಿಟ : ಆಹಾಹಾ! ಸ್ತ್ರೀ ರತ್ನವೇ ನಿನ್ನ ತುಟಿಯಲ್ಲಿರುವ ಸುಧಾಮೃತವನ್ನು ಸ್ವೀಕಾರ ಮಾಡಬೇಕಾದರೆ, ನನ್ನದೊಂದು ಮುಖಸಾಲದು. ಆದಿಶೇಷನ ಹಾಗೇ ಸಹಸ್ರ ಮುಖವಾಗಲೆಂದು ನೆನೆಯುತ್ತೇನೆ. ನಿನ್ನನ್ನು ಅಲಂಕರಿಸಬೇಕಾದರೆ, ಎರಡು ಕೈಗಳು ಸಾಲವು. ಬಾಣಾಸುರನ ಹಾಗೇ ಸಹಸ್ರ ತೋಳುಗಳು ಆಗಲೆಂದು ಇಚ್ಛೈಯಿಸುತ್ತೇನೆ. ನಿನ್ನ ಸರ್ವಾಂಗವನ್ನು ನಿರೀಕ್ಷಣ ಮಾಡಬೇಕಾದರೆ ಎರಡು ನೇತ್ರಗಳು ತೃಪ್ತಿಯಾಗಲಾರವು. ದೇವೀಂದ್ರನ ಹಾಗೇ ಸಾವಿರ ಕಣ್ಣುಗಳು ಆಗಲೆಂದು ದೇವರನ್ನು ಧ್ಯಾನಿಸುತ್ತೇನೆ.

ವೇಶ್ಯೆ : ಪ್ರಿಯಾ ಸ್ತ್ರೀಯರನ್ನು ಏನೆಂದು ತಿಳಿದಿರುವಿ. ಸ್ತ್ರೀಯರ ತುರುಬು ಕಾಳಿಂಗ ನದಿಯು. ಕುಚಗಳು ತುಂಗಭದ್ರಾನದಿಯು. ಅಧರಾಮೃತ ಗಂಗಾನದಿಯು. ಮುಗುಳ್ನಗೆಯೇ ಜಾನ್ಹವೀನದಿಯು. ಸವಿನುಡಿಯೇ ಸರಸ್ವತಿ ನದಿಯು. ಮನಸ್ಸಿನ ಗಾಂಭೀರ್ಯವೇ ಸಮುದ್ರವು. ಇಂಥ ಸರ್ವಾಂಗವೆಲ್ಲ ತೀರ್ಥವಾಗಿರುವ ಸ್ತ್ರೀಯರನ್ನು ಬಿಟ್ಟು ಅನೇಕ ಕ್ಷೇತ್ರಯಾತ್ರೆಗಳಿಂದೇನು ಪ್ರಯೋಜನವೋ ಮದನ ಸುಂದರ.

ವಿಟ : ಭ್ರಮರ ಕುಂತಳೇ ಚಂದ್ರನಂತಿರುವ ನಿನ್ನ ಮುಖವು, ಕಮಲದಂತಿರುವ ನಿನ್ನ ನೇತ್ರಗಳು, ಸಂಪಿಗೆಯ ತನೆಯಂತಿರುವ ನಿನ್ನ ನಾಶಿಕವು, ಕನ್ನಡಿಯಂತಿರುವ ನಿನ್ನ ಕಪೋಲವು, ದಾಳಿಂಬ ಬೀಜದಂತಿರುವ ನಿನ್ನ ದಂತಗಳು, ಕೋಗಿಲೆಯಂತಿರುವ ನಿನ್ನ ಸ್ವರವು, ಚಕ್ರವಾಕ ಪಕ್ಷಿಯಂತಿರುವ ನಿನ್ನ ಕುಚವು, ಕೋಮಲವಾದ ಕೈಗಳು, ಸಿಂಹನಂತಿರುವ

ನಿನ್ನ ಬಡನಡುವು, ಬಾಳೇದಿಂಡಿನಂತಿರುವ ನಿನ್ನ ತೊಡೆಗಳು, ತಳಿರೋಪಾದಿಯಲ್ಲಿರುವ ನಿನ್ನ ಪಾದಗಳು. ಮದ್ದಾನೆಯೋಪಾದಿಯಲ್ಲಿರುವ ನಿನ್ನ ನಡುಗೆಯು, ನಿನ್ನನ್ನು ನೋಡಿ ತೀರಾ ಕುಸುಮಾಸ್ತ್ರನ ಬಾಣದಿಂದ ಪೀಡಿತನಾಗಿದ್ದೇನೆ. ಕಾರಣ ದಯಮಾಡಿ ಏಕಾಂತ ಮಂದಿರಕ್ಕೆ ಪೋಗುವಾ ನಡೆ.

(ವೇಶ್ಯೆಯು ಸ್ವಲ್ಪು ಕಿರಿ ಮನಸ್ಸಿನಿಂದ ಕೂಡಬೇಕು)

ವಿಟನ ಪದ :

ಏನು ತಾಪವು ಮಾನುನೀವತಿಯಳೇ ತಿಳಿಸೋ ಬೇಗನೆ ॥ ಪಲ್ಲ ॥
ಮೀನಕೇತನ ಅನಲವು ನಿನ್ನಗೆ ತಾಪವಾಗಿಹುದು ॥ ೧ ॥

ವಿಟ : ಪ್ರಿಯೇ ಪ್ರಿಯೇ ಏನಾಗಿರುವದು. ಮುಖವು ಸಣ್ಣಾಗಿರುವದಲ್ಲೇ ಕಾಮಜ್ವರದ ತಾಪವು ಅಧಿಕವಾಗಿರುವದೇನು. ಜಾಗ್ರತಿ ತಿಳುಹಿಸು ಅದರ ತಾಪವನ್ನು ದೂರ ಮಾಡುತ್ತೇನೆ.

ವೇಶ್ಯೆ : ಪ್ರಿಯಾ ಯಾಕೋ ಎನ್ನ ಮೈಯೊಳಗೆ ನೆಟ್ಟಗಿಲ್ಲ. ತಲೆಯು ಹೊಡೆಯುತ್ತಿದೆ. ಕೈಕಾಲುಗಳು ಹರಿಯುತ್ತಿವೆ. ಮನಸ್ಸು ಶಾಂತಿ ಇಲ್ಲವು. ಏನು ಮಾಡಲಿ?

ವಿಟ : ಸ್ತ್ರೀಯಳೇ ಸರ್ವಾಂಗವೆಲ್ಲ ತೀರ್ಥಮಯವೆಂದು ಶಾಸ್ತ್ರಾಧಾರವುಂಟು. ಇಂಥಾ ವೇಶ್ಯಾಂಗಿಯನ್ನು ಅಲಕ್ಷಿಸುವದುಂಟೆ? ಶ್ಲೋಕ: ವೇಶ್ಯಾಸ್ತ್ರೀ ದರ್ಶನಂ ಪಾಪವಿನಾಶನಂ. ಚುಂಬನಂ ಕಾಶೀತೀರ್ಥನಾಂ. ಮೈಥುನಂ ಮೋಕ್ಷಃ. ಸ್ತ್ರೀರತ್ನವೇ ಸೂಳಿಯರ ದರ್ಶನದಿಂದ ಅನಂತ ಜನ್ಮದಲ್ಲಿ ಮಾಡಿದ ಪಾಪವು ಹೋಗುವದು. ಚುಂಬನವನ್ನು ಮಾಡಿದರೆ ಕಾಶೀ ತೀರ್ಥಕ್ಕಿಂತಲೂ ಅಧಿಕವಾದ ಪುಣ್ಯ ದೊರೆಯುತ್ತದೆ. ಮೈಥುನ ಮಾಡುವದರಿಂದ ಮೋಕ್ಷವೇ ಆಗುವದು. ಕಾರಣ ಇಂಥ ಸ್ತ್ರೀಯನ್ನು ಬಿಡುವದು ದುರ್ಲಭವು. ಆದ್ದರಿಂದ ಸುರಿತ ಸುಖವನ್ನು ಪೊಂದುವ ಉದ್ದಿಶ್ಯವಾಗಿ ಏಕಾಂತ ಮಂದಿರಕ್ಕೆ ಹೊಂದುವಾ ನಡೆ.

ವೇಶ್ಯೆ : ಪ್ರಿಯಾ ನಾನು ಕಾಮ ಜ್ವರದಿಂದ ಪೀಡಿತಳಾಗಿರುವೆನು. ಜಾಗ್ರತಿ ಏಕಾಂತ ಮಂದಿರಕ್ಕೆ ಹೋಗುವಾ ನಡೆ. ಹಾಹಾ ಪ್ರಿಯಾ ನಿಲ್ಲು ನಿಲ್ಲು. ಮತ್ತೊಂದು ಆಲೋಚನೆಯು ಗೊತ್ತಾಯಿತು. ಮೋಹನಾಂಗಾ

ನೀನು ನನ್ನ ಸ್ವಾಧೀನವಿರುವಲ್ಲಿ ನಿನ್ನ ಮೈಮೇಲಿನ ಸಾಮಾನುಗಳು ನನ್ನವೇ ಇರುತ್ತವೆ. ಆದ್ದರಿಂದ ಜಾಗ್ರತಿ ಬಿಚ್ಚಿಟ್ಟು ಮುಂದಕ್ಕೆ ನಡೆ.

ವಿಟ : ಹಾಂ. ಶಿವಾ ಶಿವಾ ಇದೇನು ಚಮತ್ಕಾರವು. ಯಾವತ್ತು ಬಂಗಾರದ ಸಾಮಾನುಗಳನ್ನು ರೇಷ್ಮೆ ಬಟ್ಟೆಗಳನ್ನು ಜರತಾರಿ ರುಮಾಲವನ್ನು ಮುತ್ತನ್ಹೆಣಿಸಿರುವ ಕೋಟು ಜಾಕೀಟನ್ನು ಸುಲಕೊಳ್ಳಬೇಕಾದರೆ ಏನ್ ಸಂಗತಿ ಇರಬಹುದು? ಅವಳ ಅಂತರಂಗವೇ ತಿಳಿಯದು. ಒಳ್ಳೇದು. ಅದಿರಲಿ ಮಾತನಾಡಿಸಿ ನೋಡುತ್ತೇನೆ. ಸಾನಿಯವರೇ ಸಾನಿಯವರೇ ಇನ್ನೂ ಊಟವಾಗಿಲ್ಲವೇನು?

ವೇಶ್ಯೆ : ಎಲೋ ಯಾಕೆ ಬಲು ಜಬುರು ಮಾಡುತ್ತಿ. ಬೇಕೇನು ಕಸಬರಿಗಿ ಹೊಡ್ತಾ. ಅತ್ತ ಸರಿದು ನಿಲ್ಲು ಮೂರ್ಖ.

ವಿಟ : ಹಾ. ಇದೇನಾಶ್ಚರ್ಯವು ನನ್ನ ಮಾತು ಕೇಳಿದ ಕೂಡಲೇ ಆನಂದ ಹೊಂದುತ್ತಿದ್ದವಳು. ಇದೇನು ಎಂಥಾ ಕಠಿಣೋಕ್ತಿಯನ್ನಾಡುತ್ತಾಳೆ. ಏನೋ ಒಂದು ಮೋಸವಿದ್ದಂತೆ ತೋರುತ್ತದೆ. ಏನೇ ಸ್ತ್ರೀಯಳೇ ಯಾತಕ್ಕೆ ಹರಟೆಯನ್ನು ಕೊಚ್ಚುವಿ. ಮುಂಚಿತವಾಗಿ ಮಂಚಕ್ಕೆ ನಡಿಯೇ ಚಂಚಲಾಕ್ಷಿ. ನಿನ್ನ ಹಂಚಿಕೆಯು ಗೊತ್ತಾಯಿತು. ಮಿಂಚಿನಂತೆ ಮಾಯಾ ಜಾಲವನ್ನು ಬೀರುವಿಯೋ. ಮೋಸಗಾರ್ತಿ ಬಿಡು ಬಿಡು ನಿನ್ನ ಡೋಪರತನವನ್ನು. ತಡವೇಕೆ ಕೇಳಿಕಾಲಯಕ್ಕೆ ಹೋಗುವಾ ನಡೆ.

ವೇಶ್ಯೆ: ಎಲಾ ಇನ್ನೂ ನನ್ನ ವ್ರತವಾಗಿಲ್ಲ. ನಾನು ಊಟ ಮಾಡಿ ಬರುವದರೊಳಗಾಗಿ ಕಸವನ್ನು ಗೂಡಿಸಿ ಧೂಳು ಮೊದಲಾದವುಗಳನ್ನು ಜಾಡಿಸಿ ಹಾಸಿಗಿಯನ್ನು ಮಾಡು. ಇದೇ ನಿನ್ನ ಕೆಲಸ.

ವಿಟ : ಅಯ್ಯೋ ನಾನು ನೂತದೆಲ್ಲಾ ಹಂಜಿಯಾಯಿತು. ಹಾಯಿ ಹಾಯಿ ಪರಮೇಶ್ವರ ಅಯ್ಯೋ ಹಣವು ಉಳಿಯಿತೆ? ಉಳಿಯಲಿಲ್ಲ. ಗುಣವಂತನೆನ್ನಬೇಕೆ? ಅನ್ನುವಂತಿಲ್ಲ. ಒಬ್ಬರಾದರೂ ಸೇರಲೊಲ್ಲರು. ಮಂದಿ ಬಳಗಕ್ಕಂತೂ ಹೊರತಾದೆನು. ಒಬ್ಬರೂ ಒಂದು ಪೈಸ ಸಹ ಕೊಡದಂತಾಯಿತು. ಶಿವಾ ಶಿವಾ ಹಣ ಹೋದ ಮೇಲೆ ಗುಣವಂತೂ ಕೆಟ್ಟು ಹೋಗುವದು. ಉಪಾಯವಿಲ್ಲ. ಹೆಣ್ಣು ಮಾಯಿ ಗಂಡು ನಾಯಿ ಎನ್ನುವದು ನಿಶ್ಚಯವಾಯಿತು ಶಿವಾ ಶಿವಾ. ಆಕೆ ಬರುವದರೊಳಗಾಗಿ ಈ ಮಂಚದ ಮೇಲೆ ಸ್ವಲ್ಪ ಕೂಡೋಣ. ಓಂದಿನಿಂದ ಕಸಾ ಹೊಡೆದರಾಯಿತು.

ವೇಶ್ಯೆ : ಛೀ ಅಡ್ನಾಡಿ ಇನ್ನೂ ಕಸವನ್ನು ಹೊಡೆದಿಲ್ಲವೋ? ನಿನ್ನನ್ನು ಒಳತಾಗಿ ಕಸಬರಿಗೆಯಿಂದ ಚನ್ನಾಗಿ ಥಳಿಸುತ್ತೇನೆ. ಮೂರ್ಖಾ ತೀವ್ರ ಕಸಾ ಹುಡುಗಿ ಹಾಸಿಗೆಯನ್ನು ಹಾಸು.

ವಿಟನ ಪದ :

ಅಯ್ಯೋ ವಿಧಿ ಎನ್ನ ಮಾನಭಂಗ ಮಾಡಿದಿಯಾ ॥ ಪಲ್ಲ ॥
ಹಣವು ಕೆಟ್ಟ ಹೋದ ಮೇಲೆ ಗುಣವು ಕೆಟ್ಹೋಗುವದು ।
ಹಣಕಿಂತ ಕಡೆಯಾದೆ ನಾನು ॥ ೧ ॥

ವೇಶ್ಯೆ ಪದ :

ಸೂಳಿ ಮಾಡ್ವನ ಬಾಳ್ವೆ ನೋಡಿರಿ ದೈವದರೇ ಹಾಳೂರು ।
ಶುನಕನಂತೆ ಬಾಳುವೆಯಾಯಿತು ॥ ೧ ॥

ವೇಶ್ಯೆ: ಯಾವತ್ತು ದೈವದವರೇ ಸೂಳಿಯನ್ನು ಮಾಡುವವರ ಬಾಳ್ವೆಯು ಮುಂದೆ ಇದೇ ದೃಷ್ಟಾಂತ ತಿಳಿಯತಕ್ಕದ್ದು.

ವಿಟ : ಸಭಿಕರೇ ಎನ್ನ ಬವಣಿಯನ್ನು ನೋಡಿದಿರಾ. ಸೂಳೆಯಂಬುವರು ಕರುಣವಿಲ್ಲದವರು, ಸುಳ್ಳಿಗೆ ತವರೂರ ಮನಿಯಾದವಳು. ಜಗಳ ಗಂಟಿಯರು, ಮೋಸಗಾರ್ತಿಯರು, ಚಂಚಲ ಮನಸ್ಸುಳ್ಳವರು, ಮಹಾ ಪಾಪಿಯರು. ಇಂಥ ಸೂಳಿಯರು ನೀಚನಾಗಲಿ ಉತ್ತಮನಾಗಲಿ ಗುಣವುಳ್ಳವನನ್ನು ಕೂಡಾ ಹೆಣಕ್ಕಿಂತ ಕಡಿ ಮಾಡಿ ಅವನನ್ನು ಬೈದು ಹೊರೆಯಕ್ಕೆ ನೂಕುವರು. ನನ್ನ ಬಾಳ್ವೆ ಹಣ ಕೊಟ್ಟರೂ ಇವಳ ಅಂಗ ಸ್ಪರ್ಶವಾಗಲಿಲ್ಲ. ನನ್ನಂತೆ ನೀವು ನೀಚ ಕೆಲಸ ಮಾಡಿದರೆ ಮೇಲಿಂದ ಮೇಲೆ ಕಸಬರಿಗೆ ಏಟುಗಳೆ ಬರುತ್ತವೆ. ಆದ್ದರಿಂದ ನಿಮ್ಮೆಲ್ಲರಿಗೂ ಕೈಮುಗಿದು ಬೇಡಿಕೊಳ್ಳುತ್ತೇನೆ. ಸರ್ವಥಾ ಇಂಥ ಕೆಟ್ಟ ಕೆಲಸವನ್ನು ಮಾಡಬೇಡಿರಿ. ಹಾಹಾ, ಇದೇನು ನೀತಿಯನ್ನು ಹೇಳಲಿಕ್ಕೆ ನನಗೆ ಹೊತ್ತು ಇಲ್ಲ. ಜಲ್ದಿ ಕಸಾ ಹೊಡೆದು ಹಾಸಿಗಿ ಮಾಡುತ್ತೇನೆ. ಒಳ್ಳೇದು ತುಸು ಹೊತ್ತು ಈ ಹಾಸಿದ ಮಂಚದ ಮೇಲೆ ಕೂಡ್ರುವಾ. ಅವಳು ಬರುವದು ತಡವಾಗಬಹುದು.

ವೇಶ್ಯೆ ಪದ :

ನಡಿ ನಡಿ ಮೂಢನೇ ನೀಯಿನ್ನೂ ಮಂಚದ ಮೇಲಿರುವಿಯೊ ।
ಮೂರ್ಖ ನಿನ್ನನು ಒಳಿತಾಗಿ ಥಳಿಸುವೇ ಹೊರಕ್ಕೆ ದೂಡುವೆನು॥ ೧

ವಿಟನ ಪದ :

ಮಂದಮತಿ ಛೀ·ಮೂರ್ಖ ಸ್ತ್ರೀಯಳೆ ಯಾತಕ್ಕೆ ದೂಡುವಿಯೇ ॥ ಪಲ್ಲ ॥
ಚಂದಾಗಿ ನಿನ್ನಯ ಸೇವೆಯ ಗೈಯುತ ಅಂದಾಗಿ ನಾನಿರುವೆ ॥ ೧ ॥

ವೇಶ್ಯೆ : ಎಲೋ ಮಾನಗೇಡಿ ಕುರೂಪಿ ಮಂಚದ ಮೇಲೆ ಕುಳಿತು ಜಂಬಾ ಬಡಿಯುತ್ತೀಯೋ. ನಿನ್ನ ಚಂಡಿಕೆ ಹಿಡಿದು ಹೊರಿಯಕ್ಕೆ ನೂಕಿ ಬಿಡುವೆನು ಮೂರ್ಖ.

ವಿಟ : ಶ್ಲೋಕ: ದರ್ಶನಂ ಚಿತ್ತನಾಶಂಚೆ ಸ್ಪರ್ಶನಂ ದ್ರವ್ಯ ನಾಶಂಚೆ ಮೈಥುನಂ ರಕ್ತನಾಶಂಚೆ ವೇಶ್ಯಾ ಸ್ತ್ರೀ ಪ್ರತ್ಯಕ್ಷ ರಾಕ್ಷಸಿ ರಾಕ್ಷಸಿ. ಸೂಳಿಯ ದರ್ಶನದಿಂದ ಮನಸ್ಸು ಪಲ್ಲಟವಾಗಿ ಕೆಟ್ಟು ಹೋಗುವದು. ಸ್ತ್ರೀಯರನ್ನು ಮುಟ್ಟುವದರಿಂದ ಯಾವತ್ತು ದ್ರವ್ಯವು ನಷ್ಟವಾಗಿ ಹೋಗುವದು. ಮೈಥನದಿಂದ ರಕ್ತವು ನಷ್ಟವಾಗಿ ಹೋಗುವದು. ಈ ಸೂಳಿಯರು ರಾಕ್ಷಸಿಯುಂಬುದಕ್ಕೇನು ಸಂಶಯುವಿಲ್ಲ. ಮಾನಹೀನನಾಗಿ ಬಾಳಬೇಕಾಯಿತು. ಈ ರಕ್ಕಸಿಯರ ಕೈಯೊಳಗೆ ಉಳಿಯಲಾರೆ. ಉಳಿಯಲಾರೆ.

ವೇಶ್ಯೆ : ಎಲೋ ಮನಿ ಮೂಳನಾಗಿ ಯಾಕೆ ಕುಳಿತುಕೊಂಡಿರುವಿ. ನಾಳಿನ ದಿವಸ ನನ್ನ ಕುಲದೇವತೆಯ ಹಬ್ಬದೂಟವಿರುವದು. ಕಾರಣ ನೀನು ಹಣವನ್ನು ತೆಗೆದುಕೊಂಡು ಹೋಗಿ ದೊಡ್ಡದಾದ ಒಂದು ಕುರಿಯನ್ನು ತೆಗೆದುಕೊಂಡು ಬರುವಂಥವನಾಗು. ತಡ ಮಾಡಿದರೆ ನನ್ನ ಮನಿ ಅಂಗಳವು ಯರವಾಗುವದು. ಇಕೋ ಕೂಳು ಇಲ್ಲದೆ ತಿರುಗುವ ಹೊತ್ತು ಬರುತ್ತದೆ. ನೋಡಿಕೋ ತೀವ್ರ ಹೋಗು ಕುರಿಯನ್ನು ತೆಗೆದುಕೊಂಡು ಬಾ.

ವಿಟ : **ಶ್ಲೋಕ**

ವೇಶಾನದಹನಂಹಂತಿ ಕುಲಕ್ಷಯಂ ವಿಥ ।
ವಾಯುಃ ಸ್ತ್ರೀ ಹಂತಿ ಸರ್ವಹಂತಿ ಪರಾಂಗನಃ ॥ ೧ ॥

ಅನ್ನುವಂತೆ ಶಿವಾ ಶಿವಾ ಏನೇನು ಅಪಮಾನ ಹೊಂದಬೇಕಾಯಿತು. ಅಯ್ಯೋ ವಿಧಿಯೇ ಈ ನೀಚ ಜಾತಿ ಸೂಳಿಯ ಕೈಯಲ್ಲಿ ಸಿಕ್ಕು ಜೀವ ಹಿಂಸೆ ಮಾಡುವ ಕೆಲಸಕ್ಕೆ ಮನಗೊಡಬೇಕಾಯಿತೆ? ನನ್ನ ಕರ್ಮಕ್ಕೆ ಬೆಲೆಯೇ ಇಲ್ಲ. ಇನ್ನು ಮುಂದೆ ಏನೇನು ಮಾಡಿಸುವಳೋ ನನ್ನಗತಿ–ಏನ್ ಅವಸ್ತೆಗೆ ಬರುತ್ತದೋ ಇನ್ನು ಕಳವು

ಮಾಡುವ ಪ್ರಸಂಗ ಬಂದರೂ ಬರಬಹುದು. ಬಂದದ್ದು ಬರಲಿ. ಅನುಭೋಗಿಸಲಿಕ್ಕೆ ಬೇಕು. ಇನ್ನು ತಡ ಮಾಡದೆ ಕುರಿ ಹಟ್ಟಿಗೆ ಹೋಗಿ ಕುರಿಯನ್ನು ತೆಗೆದುಕೊಂಡು ಬಂದು ಇವಳ ವ್ರತವನ್ನು ಸಾಗಿಸುತ್ತೇನೆ. ಈಗಿಂದೀಗಲೇ ಹೋಗುತ್ತೇನೆ. ಮುಂದೇನಾಗುವದೋ ನೋಡಿಕೊಳ್ಳುವೆನು.

ಕಿನ್ನರಯ್ಯ ಪದ :

ಶಿವಾ ಶಿವಾ ಶಿವಾ ಶಿವಾ ತ್ರಿಪುರಾಂತೇಶಾ ತ್ರಿಪುರಾಂತೇಶಾ ।
ತ್ರಿಪುರಾಂತೇಶ ಮಾರಮರ್ಧನ ಶಂಭೋ
ಪಾಲಿಸೋ ನೀ । ಪುರ ಹರ ಶಂಭೋ ॥ ೧ ॥

ಕಿನ್ನರಯ್ಯ: ಶಿವಾ ಶಿವಾ ತ್ರಿಪುರಾಂತೇಶ ನೀಲಕಂಠ ಭಕ್ತ ವತ್ಸಲಾ ಕರುಣಿಸು.

ವಿಟ : ಎಲೋ ಕುರಿಯೇ ನಿಲ್ಲು ನಿಲ್ಲು ಎಲ್ಲಿಗೆ ಹೋಗುತ್ತಿರುವೆ. ನಿನ್ನನ್ನು ನಾನು ಎಲ್ಲಿ ಹೊಕ್ಕರೂ ಬಿಡುವದಿಲ್ಲ. ದುರಾತ್ಮ ಹಣ ಕೊಟ್ಟು ತಂದಿರುವೆನು. ತಡ ಮಾಡಿದರೆ ನನ್ನ ಸೂಳಿಯು ಬೈದಾಳು. ಹಿಡಿಯುತ್ತೇನೆ. ಗುಡಿಯೊಳಗೆ ಹೊಕ್ಕರೆ ನಿನ್ನ ಪ್ರಾಣ ಉಳಿಸುವದಾತರು ಇರುವರೇ? ಕಲ್ಲು ಈಶ್ವರನು ಬೆನ್ನು ಹಾಕಿಕೊಳ್ಳುತ್ತಾನೆಂದು ಬೆನ್ನು ಬಿದ್ದಿರುವಿಯೋ? ದುರಾತ್ಮ ನಿನ್ನನ್ನು ಬಿಟ್ಟು ಹೋಗುವೆನೇ? ನಿನ್ನನ್ನು ನನ್ನ ಸೂಳಿಯ ಕಾರ್ಯಕ್ಕೆ ಆಹುತಿಯನ್ನು ಮಾಡುವೆ. ಕುರಿಯೇ ನಿನಗೆ ಅವಧಿಯೇ ಇಲ್ಲ.

ಕಿನ್ನರಯ್ಯ: ಎಲೋ ಮೂಢನೇ ಬಿಡು ಬಿಡು ಕುರಿಯನ್ನು ಹಿಡಿಯಬೇಡ ಹಿಡಿಯಬೇಡ. ಸಾಯುವದಕ್ಕೆ ಹೆದರಿ ದೇವರ ಗುಡಿಯನ್ನು ಹೊಕ್ಕಿರುವದು. ಇದರ ಬೆಲೆ ಎಷ್ಟಿರುವದು ಹೇಳು. ಒಂದಕ್ಕೆ ಎರಡರಂತಾದರೂ ಕೊಡುತ್ತೇನೆ. ಲೋಕದಲ್ಲಿ ಮರಣದ ಭಯ ಎಲ್ಲಾ ಪ್ರಾಣಿಗೆ ಒಂದೇ ಸಮವಾಗಿರುವದು. ಆದ್ದರಿಂದ ದೇವಾಲಯವನ್ನು ಹೊಕ್ಕಿತು. ಎಲೋ ಶರಣರು ಮರೆಹೊಕ್ಕ ಪ್ರಾಣಿಯನ್ನು ಕೊಡುವರೇ? ಬಿಡು ಬಿಡು ಕುರಿಯನ್ನು ಹಿಡಿಯಬೇಡ. ದೂರ ನಿಲ್ಲು ದೂರ ನಿಲ್ಲು. ಮತ್ತೊಂದು ಕುರಿಯನ್ನು ತೆಗೆದುಕೊಂಡು ಹೋಗು. ನಡೆ ನಿನ್ನಯ ಗಂಟಲದಲ್ಲಿಯು ನಿನ್ನ ಸೂಳಿಯ ಗಂಟಲದಲ್ಲಿಯೂ ಇಳಿಯುವದಿಲ್ಲವೇ ದುರಾತ್ಮ ಬೇಡಿದಷ್ಟು ಹಣವನ್ನು ಕೊಡುತ್ತೇನೆ. ದೂರಸರಿ.

ವಿಟ : ಆಹಾಹಾ. ನಿನ್ನ ಮಾತಿಗೆ ನಗು ಬರುತ್ತದೆ. ಏನು ಬಲವಂತನು. ನಿನ್ನಂತೆ ದಯಾಶಾಲಿಗಳು ಯಾರಿರುವರು? ಬರೇ ಮಾತಿನಿಂದ ಮಾತಾಡಲಿಕ್ಕೆ ಎಲ್ಲರಿಗೂ ಬರುತ್ತದೆ. ಜಗತ್ತಿನಲ್ಲಿ ಪ್ರಾಣಿಗಳ ಮೇಲೆ ಅಂತಃಕರುಣಾಶಾಲಿಗಳು ನೀವೇ ಇರುತ್ತಿರಬಹುದು. ಆಗಲಿ ಈ ಕುರಿಯನ್ನು ಬಿಡಿಸಿಕೊಳ್ಳಬೇಕೆಂದು ಮಾಡಿರುವಿಯೋ ಇದು ಅಸಾಧ್ಯ ಮಾತು. ಕುರಿಯು ಒಂದು ವೇಳೆ ಅನ್ಯರ ಮನೆಯನ್ನಾಗಲಿ ಅಥವಾ ದೇವಾಲಯುವನ್ನಾಗಲಿ ಹೊಕ್ಕರೂ ಹೊಗಬಹುದು. ಇಷ್ಟಕ್ಕೆ ಓಡಿಯಬೇಡ, ಹಿಡಿಯಬೇಡವೆಂದರೆ ಹಣಕೊಟ್ಟು ತಂದವರು ಬಿಡುವರೇ? ಒಳ್ಳೇದು ವಿಚಾರ ಮಾಡಿ ನೋಡಿದರೆ ಯಾವ ಜನ್ಮವೇ ಆಗಲಿ ಆ ಪ್ರಾಣಿಗೆ ಒಂದು ಸಹಸ್ರ ವರವೆಂದು ಹೇಳುವದು. ನಿಮಗೆ ಪ್ರಾಣಿಗಳ ಮೇಲೆ ಅಂತಃಕರುಣವಿದ್ದರೆ ಈ ಕುರಿಯನ್ನಾದರೂ ಒಂದು ಸಹಸ್ರ ವರವನ್ನು ಕೊಟ್ಟು ಬಿಡಿಸಿಕೊಳ್ಳುತ್ತಿರಲಿಲ್ಲವೆ. ಆಹಾಹಾ. ಏನ್ ದಯಾಪರನೋ ಸಹಸ್ರ ವಡ್ಡಿ ರೂಪಾಯಿಗಳನ್ನು ಕೊಟ್ಟು ಬಿಡಿಸಿಕೊಳ್ಳುವಂತೆ ಕಂಡುಬರುತ್ತದೆ. ಬಿಡು ಬಿಡೋ ಯಾತಕ್ಕೆ ಹರಟೆಯನ್ನು ಕೊಚ್ಚುತ್ತಿ. ಹುಚ್ಚು ಜಂಗಮ ತಡ ಮಾಡಿದರೆ ನನ್ನ ಒಡಿಯಳಾದ ಸೂಳಿಯು ಕೋಪಗೊಂಡಾಳು. ದೇವರಿಗೆ ನೇಮಿಸಿ ತಂದ ಕುರಿಯನ್ನು ಬಿಟ್ಟು ಹೋಗಬಹುದೇ ಯಾತಕ್ಕೆ ಬಿಂಕದ ಮಾತುಗಳನ್ನು ಹೇಳುವಿಯೋ ? ಬಿಡು ಬಿಡು ಕುರಿಯನ್ನು ವೈಯ್ಯುತ್ತೇನೆ.

ಕಿನ್ನರಯ್ಯ: ಎಲಾ ಬಲು ಪಂಟನ್ನು ಹೇಳಬೇಡ. ನೀನು ನುಡಿದಂತೆ ಸಾವಿರ ಹೊನ್ನುಗಳನ್ನು ಕೊಡುತ್ತೇನೆ. ಇಕೋ ತೆಗೆದುಕೋ ಕುರಿಯನ್ನು. ದುರಾಶೆ ಮಾಡಿದರೆ ಬಿಡುವದಿಲ್ಲ. ಇಕೋ ಈ ಕುರಿಗೆ ಶಿವನ ಮುದ್ರೆಯನ್ನು ಒತ್ತುತ್ತೇನೆ ನೋಡು. ಸಾವಿರ ಹೊನ್ನನ್ನು ಎಣಿಸಿಕೊಂಡು ಆಚಗೆ ನಡೆ.

ವಿಟ : ಈ ಕಿನ್ನರಯ್ಯನವರು ಎಷ್ಟೊಂದು ಹುಚ್ಚರಿರಬಹುದು. ಇಂಥ ಮೂರ್ತಿಗಳು ಈ ಲೋಕದಲ್ಲಿ ಯಾರು ಇರಲಿಕ್ಕಿಲ್ಲಾ. ಎರಡನೇ ಜೀವಿಗಳ ಮೇಲೆ ಎಷ್ಟು ಅಂತಃಕರುಣವೋ! ವಿಚಾರ ಮಾಡಿದರೆ ಪರೋಪಕಾರಾರ್ಥಂ ಮಿದಂ ಶರೀರಂ ಎಂದು ಶೃತಿ ವಾಕ್ಯವಿರುವದು. ಇದರಂತೆ ಇವರು ವರ್ತಿಸುವರು. ನಾವು ಈ ಕುರಿಗೆ ಒಂದು ಲಕ್ಷ ವರ ರೂಪಾಯಿಗಳನ್ನು ಬೇಡಿದ್ದರೂ ಕೂಡುತ್ತಿದ್ದರು. ನನ್ನ ನಸೀಬ ತೆರೆಯುತ್ತಿತ್ತು. ನಾನು ಮತ್ತೆ ಸಾಹುಕಾರನಾಗುತ್ತಿದ್ದೆ. ಶಿವ ಶಿವ

ಬೇಡಲಿಲ್ಲ. ಛೇ ಮೂರ್ಖ ಮನಸ್ಸೆ ಎಷ್ಟು ದುರಾಶಯು. ಇಷ್ಟು ಹಣ ಕೊಟ್ಟದ್ದು ಸಾಕಾಗಲಿಲ್ಲವೇ ಇನ್ನು ಒಂದು ವರವನ್ನು ಕೊಟ್ಟು ಮತ್ತೊಂದು ಕುರಿಯನ್ನು ಒಯ್ಯುತ್ತೇನೆ. ಈ ಸಾವಿರ ರೂಪಾಯಿಗಳನ್ನು ನನ್ನ ಸೂಳಿಗೆ ಕೊಟ್ಟರೆ ನನ್ನ ಮೇಲೆ ಬಹಳ ಪ್ರೀತಿಯಾಗುವಳು. ಇದರ ಮೇಲಿಂದ ಕಸಬರಿಗಿ ಏಟುಗಳು ದೂರಾಗಬಹುದು. ಇನ್ನು ತಡವೇಕೆ ಕುರಿ ಹಟ್ಟಿಗೆ ಹೋಗಿ ಕುರಿಯನ್ನು ತರುತ್ತೇನೆ.

ವಿಟನ ಪದ :

ಕುರಿಯನ್ನು ತಂದಿರುವೆ ವರಗಳ ತಂದೆನು । ತ್ವರಿತದಿ
ಪರಿಗ್ರಹಿಸು ನೀನು। ಕಸಬರಿಗಿಲಿಂದ ಮಾತ್ರ । ತರಕಿಸಿ
ಹೊಡಿಬೇಡ ಕರಮುಗಿದು ಬೇಡುವೆನು ನಾನು ॥ ೧ ॥

ವಿಟ : ಇಕೋ ನೋಡು ನೋಡು ಕುರಿಯನ್ನು ತಂದೆ. ಸಾವಿರ ರೂಪಾಯಿ ಹೊನ್ನಿನ ಚೀಲವನ್ನು ತಂದೆ. ತೆಗೆದುಕೋ ಇನ್ನು ಮೇಲೆ ಮಾತ್ರ ಮೊದಲಿನಂತೆ ಕಲಹ ಮಾಡಬೇಡ. ಒಳ್ಳೇ ಪ್ರೀತಿಯಾಗಿರಬೇಕು. ನೋಡು ಮಹಾರಾಯಳೆ ಕಸಬರಗಿಯಿಂದ ಮಾತ್ರ ಹೊಡಿಯ ಬೇಡ, ಕೈ ಮುಗಿದು ಬೇಡಿಕೊಳ್ಳುತ್ತೇನೆ. ಅನ್ನವನ್ನು ಬಟ್ಟೆಯನ್ನು ನಿನ್ನ ರಥಿ ಸುಖವನ್ನು ಪ್ರೀತಿಯಾಗಿ ಮಾಡಬೇಕೆಂದು ದೈವೋಕ್ತಿಯಿಂದ ಬೇಡಿಕೊಳ್ಳುತ್ತೇನೆ. ಮಹಾರಾಯಳೇ ನೀನೇ ಎನ್ನ ದೈವವು.

ವೇಶ್ಯೆ : ಈ ಸಾವಿರ ರೂಪಾಯಿ ಹೊನ್ನಿನ ಚೀಲವೆಲ್ಲಿತ್ತು?

ವಿಟ : ಸುಮ್ಮನಿರು ಸುಮ್ಮನಿರು ಅದನ್ನು ಕೇಳಿ ಏನು ಮಾಡುವಿಯೆ?

ವೇಶ್ಯೆ : ಪ್ರಿಯಾ ಇದನ್ನು ಎಲ್ಲಿಂದ ದೊರಕಿಸಿಕೊಂಡು ಬಂದಿ ಹೇಳು.

ವಿಟ : ಪ್ರಿಯೇ ಆಶ್ಚರ್ಯದ ಸಂಗತಿಯನ್ನು ಎಷ್ಟೆಂದು ವರ್ಣಿಸಲಿ. ತ್ರಿಪುರಾಂತಕೇಶ್ವರನ ಗುಡಿಯಲ್ಲಿ ಒಬ್ಬ ಮುದಿ ಅಯ್ಯನು ಕೂತಿದ್ದನು. ನಾನು ಕುರಿಯನ್ನು ತೆಗೆದುಕೊಂಡು ಬರುವ ಕಾಲದಲ್ಲಿ ಕುರಿಯ ಪಗ್ಗ ಹರಿದು ಗುಡಿಯೊಳಗಿರುವ ತ್ರಿಪುರಾಂತಕೇಶ್ವರ ಹಿಂದೆ ಅಡಗಿ ನಿಂತಿತು. ಅದನ್ನು ನಾನು ಹಿಡಿಯಲಿಕ್ಕೆ ಹೋದ ಕೂಡಲೇ ಆ ಹುಚ್ಚ ಅಯ್ಯನು ಎಲಾ ಪ್ರಾಣಿಗಳನ್ನು ಕೊಲ್ಲಬಾರದು. ಪ್ರಾಣಕ್ಕೆ ಹೆದರಿ ದೇವರ ಮೊರೆ ಬಿದ್ದಿರುವದು. ಇದಕ್ಕೆ ಸಾವಿರ ಹೊನ್ನಾನ್ನಾದರೂ

ಕೊಡುತ್ತೇನೆ. ತೆಗೆದುಕೊಂಡು ಹೋಗೆಂದು ಈ ದ್ರವ್ಯ ರಾಶಿಯನ್ನೇ ಕೊಟ್ಟನು. ಪುನಃ ಒಂದು ವರವನ್ನು ಕೊಟ್ಟು ಈ ಕುರಿಯನ್ನು ತಂದೆನು. ಮೊದಲಿನಂತೆ ಆನಂದ ಹೊಂದಿ ಎನಗೆ ಸುಖವನ್ನು ಗೈಯಬೇಕು ಕಂಡ್ಯಾ ಮೋಹಿನಿ.

ವೇಶ್ಯೆ : ಛೀ ಕಳ್ಳಾ ಹಣದಾಸೆಗಾಗಿ ಮೊದಲಿನ ಕುರಿಯನ್ನು ನೀಗಿದ ಮೂರ್ಖ. ಈ ಹೊನ್ನಿನ ಚೀಲಕ್ಕೆ ಬೆಂಕಿ ಹಚ್ಚಲಿ. ಹೊರಕ್ಕೆ ಬೀಸಾಕಿ ಒದ್ದು ಬಿಡುವೆ. ಇಕೋ ಹೊನ್ನನ್ನು ಈ ಕಲ್ಯಾಣ ಪಟ್ಟಣದ ತುಂಬಾ ಆಳು ಪ್ರಮಾಣ ಬಿತ್ತಿಸಿ ಬಿಡುತ್ತೇನೆ. ಮಾನಗೇಡಿ ವಿಟರ ಹಾಸ್ಯಕ್ಕೆ ಗುರಿಮಾಡಿದಿ. ಥೂ ನೀಚಾತ್ಮ ನನ್ನ ಬಳಿಯಲ್ಲಿ ನಿಲ್ಲಬೇಡ ನಡೆ ಆಚೆಗೆ. ಸರಿ ಸೂಳಿಯರು ನನ್ನನ್ನು ನಿಂದಿಸುವಂತೆ ಮಾಡಿದಿ. ಮೂಳಾ, ಹಣ ಎಂಬುವದು ತೃಣ ಸಮಾನವು. ನನ್ನ ಸ್ಥಿತಿಯನ್ನು ನೋಡಿ ಸೂಳೆಯರೆಲ್ಲರೂ ನಗುತ್ತಾರೆ. ಛೀ ಮಾನಗೇಡಿ ಏನ್ ಕೆಲಸ ಮಾಡಿದಿ. ನನ್ನ ಮನಿ ದೇವರ ಬಲಿಗಾಗಿ ನೇಮಿಸಿ ತಂದ ಕುರಿಯನ್ನು ತೀವ್ರ ಹೋಗಿ ತೆಗೆದುಕೊಂಡು ಬಾ. ಛೀ ಅಡ್ನಾಡಿ ಈ ಹಣದ ಚೀಲವನ್ನು ತೆಗೆದುಕೊಂಡು ಹೋಗಿ ನೇಮಿಸಿದ ಕುರಿಯನ್ನು ತೆಗೆದುಕೊಂಡು ಬಾ. ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ. ತಿಳಿಯಿತೆ ಮೂಳಾ.

ವಿಟ : ಅಯ್ಯೊ ಶಿವಾ ಶಿವಾ ಇನ್ನೇನು ಮಾಡಲಿ. ಸಾವಿರ ಹೊನ್ನಿನ ಚೀಲವನ್ನು ಕಂಡಾಕ್ಷಣದಲ್ಲಿ ನನ್ನ ಸೂಳಿಯು ಆನಂದ ಹೊಂದುತ್ತಾಳೆಂದು ಅಕ್ಕರತೆಯಿಂದ ಬಂದದ್ದು ಕಸಬರಿಗೆ ಏಟಿಗೆ ಒಳಗಾದೆನಲ್ಲ. ಈ ನೀಚಳಾದ ಸೂಳಿಯು ಕೈಯಲ್ಲಿ ಶಿಲ್ಕಿ ಏನೇನೋ ಬವಣಿ ಹೊಂದಬೇಕಾಯಿತು. ಅಯ್ಯೊ ಹಾಳೂರ ಶುನಕನಂತೆ ಬದುಕಬೇಕಾಯಿತೆ. ಹಾಯ್ ನನ್ನ ದೈವವನ್ನು ಸುಡು ಸುಡು. ಸೂಳಿಯರು ಪ್ರತ್ಯಕ್ಷ ರಾಕ್ಷಸಿಯರೇ ಹೊರತು ಮತ್ತೇನು ಅಲ್ಲ. ಯಾಕೆಂದರೆ ನನ್ನ ಗತಿಯನ್ನು ನೀವೆ ನೋಡಿರಿ. ಒಳ್ಳೇದು ಆದದ್ದಾಗಲಿ ನೋಡಿ ಬರುತ್ತೇನೆ. ಅಯ್ಯ ಕುರಿಯನ್ನು ಹಿಡಿಯುತ್ತೇನೆ. ಹಿಡಿಯುತ್ತೇನೆ.

ಕಿನ್ನರ ಪದ :

ಬಿಡು ಬಿಡು ಹಿಡಿಯಬೇಡ ದೃಢವಾದ ಕುರಿಯನ್ನು
ಖಿಡು ಮೂರ್ಖ ನೀ ಬೇಗ ॥ ಪಲ್ಲ ॥
ಹಿಂದೊಡೆ ನಿನ್ನಯ ಹೊಡೆವೆನು ತಲೆಯನು
ನಡಿ ಮೂರ್ಖ ಆಚೆಗೆ ಈಗ ॥ ೧ ॥

ಕಿನ್ನರಯ್ಯ: ಎಲೋ ಬಿಡು ಬಿಡು ದುರುಳುನೇ. ತಡೆಯದೆ ಹಣ ಸಾವಿರ ವ್ಯೆದ ತುಡಗಾ. ಕುರಿಯನ್ನು ಹಿಡಿಯುವಿಯೋ ಶಿವಶರಣರು ನುಡಿದ ಬಳಿಕ ಎಂದೂ ತಪ್ಪುವದಿಲ್ಲ. ನೀನು ಉದ್ಧಟತನದಿಂದ ಬಂದಿದ್ದಾದರೆ. ನಿನ್ನನ್ನು ಸಿದ್ಧವಾಗಿ ಗುದ್ದಿ ಪ್ರಸಿದ್ಧನೆನಿಸಿಕೊಳ್ಳುವೆನು. ಆಡಿದ ನುಡಿಯು ನಿಜವಿಲ್ಲದೆ ಕೋಡಗನಂತೆ ಆಡುವಿಯೋ. ನಿನ್ನ ಪಾಡು ಪಂಥವನ್ನು ಬಿಡು ಬಿಡು. ನಿನ್ನ ಕಪಾಳವನ್ನು ಒಡೆದು ಬಿಡುವೆನೋ ಕಿರಾತನೆ.

ವಿಟ : ಎಲೋ ಕಿನ್ನರಯ್ಯನೇ ಮದೋನ್ಮತ್ತನಾಗಿ ವ್ಯರ್ಥಗರ್ವಿಸಬೇಡ. ಇವತ್ತಿಗೆ ನಿನಗೆ ಮೃತ್ಯು ಒದಗಿತ್ತೆಂದು ತಿಳಿದುಕೋ. ಎನಗೆ ತುಡುಗಾ ತುಡುಗಾನೆಂದು ಆಡುವಿಯೋ ಮೂಢ. ಇಕೋ ಈ ಪೊಡವಿಯೊಳ್ ನಿನ್ನ ಶಿರಶ್ಚಂಡಾಡದಿದ್ದರೆ ವೀರಾಧಿವೀರ ಗಂಭೀರ ವಿಟಗಾರನೆಂಬ ನಾಮಾಂಕಿತವೇಕೆ? ಎಲವೋ ಕಿನ್ನರಯ್ಯ ನೀನು ಪರಾಕ್ರಮಿಯಾದರೆ ಎನ್ನ ಸಂಗಡ ಯುದ್ಧಕ್ಕೆ ನಿಲ್ಲು ನಿಲ್ಲು ಖಿಲ್ಲಾ. ಬಿಡು ಬಿಡು ಕುರಿಯನ್ನು ತಡ ಮಾಡಿದರೆ ನೆಟ್ಟಗಾಗಲಿಕ್ಕಿಲ್ಲ ತಿಳಿಯಿತೆ?

ಕಿನ್ನರಯ್ಯ: ಎಲೋ ಕೆಟ್ಟ ಬ್ರಷ್ಟನಾದ ಖೊಟ್ಟಿ ನೀಚಾತ್ಮನೇ ಕೇಳ್ ಇದಿರಿಟ್ಟು ಘಟ್ಟಿಯಾಗಿ ಕೂಗಬೇಡಾ. ದೃಢತರವಾದ ಶಿವಭಕ್ತರಿಗೆ ಈ ಪೊಡವಿಯೊಳು ಕಡುಯುದ್ಧವನ್ನು ಮಾಡಿ ಜಯಿಸದೇ ಬಿಡೌಜ ಮೊದಲಾದ ದೇವತೆಗಳು ಅಡಿಗೆರಗುವದಲ್ಲದೆ ಶಿವಶರಣರ ಪಾದರಕ್ಷೆಯನ್ನು ಹೊತ್ತ ಸುದ್ದಿಯನ್ನು ನೀನು ಕೇಳಿಲ್ಲವೆ ಮೂರ್ಖ? ಇದನ್ನರಿಯದೆ ಕಡುಪಾಪಿಯಾದ ಸೂಳಿಯ ನುಡಿಯನ್ನು ಕೇಳಿ ಕಾಲನಪುರಿಗೆ ಹೋಗುವದು ಸಿದ್ಧ. ಈ ಪ್ರಸಿದ್ಧವಾದ ಶಿವಮುದ್ರೆಯನ್ನು ಧರಿಸಿದ ಬಸವನು ನಾಮಾಂಕಿತದ ಪಟ್ಟಣದ ಕುರಿಯನ್ನು ನೀನಲ್ಲದೆ ನಿನ್ನ ಮನಿದೇವರು ಬಂದು ಎಳಿದಾಗ್ಯೂ ಒಂದು ಹೆಜ್ಜೆಯನ್ನು ಸಹ ಮುಂದಕ್ಕೆ ಇಡಗೊಡದೆ ನಿಮ್ಮ ದೇವರನ್ನು ನಿನ್ನಂತಿರುವ ಕೋಟ್ಯಾವಧಿ ಜನರನ್ನು ತತ್‌ಕ್ಷಣದಲ್ಲಿ ಶಿರಹರಿದುಬಿಡುತ್ತೇನೆ ಮೂರ್ಖ.

ವಿಟ : ಎಲೋ ತಿರಕೊಳುವ ಗೊರವಾ, ಘೋರ ಸ್ವರದಿಂದ ಮಾರಾಯ ಭಕ್ತನೆಂದು ಕಠಾರಿಯನ್ನು ಝಳಿಪಿಸಿ ಬೆದರಿಸಿಕೊಳ್ಳಬೇಡ. ನಿನ್ನ ಉಗ್ರವಾದ ಉಬ್ಬಸದ ಕೊಬ್ಬನ್ನು ಮುರಿದು ನನ್ನ ಸೂಳಿಯ ಮನಿದೇವರಿಗೆ ಮೀಸಲಾದ ಕುರಿಯಂತಿರುವ ನಿನ್ನ ದೇವರನ್ನು ಕಡಿದು ಅಡಗಿಯ ಮಾಡಿ ದುರ್ಗಾದೇವತೆಗೆ ಎಡೆ ಮಾಡಿ! ಸೊಗಸಿನಿಂದ ಹಬ್ಬವನ್ನು ಉಬ್ಬಿನಿಂದ ಮಾಡಿಸುವೆ. ಯುದ್ಧಕ್ಕೆ ಇದರಾಗುವಂಥವನಾಗೋ ತಿರುಕೊಳ್ಳುವ ತಿರುಕಾ.

ಕಿನ್ನರಯ್ಯ: ಎಲೋ ಆಚಾರವಿಲ್ಲದ ನೀಚನೇ ಕೇಳು. ಈ ಭೂ ಚಕ್ರದಲ್ಲಿ ನಿನ್ನಂಥ ವಿಚಾರವಿಲ್ಲದ ನೀಚಾತ್ಮನನ್ನು ನಾನು ಕಾಣಲಿಲ್ಲ. ಎಲೋ ಅನ್ನ ಕಾಣದ ಶ್ವಾನನಂತೆ ಮನಸ್ಸಿಗೆ ಬಂದ ಹಾಗೆ ಬೊಗಳಬೇಡ ಮೂಢಾ. ನಿನ್ನ ಪರಾಕ್ರಮಿಯಾದರೆ, ಯುದ್ಧಕ್ಕೆ ದಿಟವಾಗಿ ನಿಲ್ಲು ನಿಲ್ಲು ಖುಲ್ಲ. ಇಲ್ಲವೇ ಕುರಿಯನ್ನು ಬಿಟ್ಟು ಆಚಗೆ ನಡೆ. ಇಲ್ಲದಿದ್ದರೆ ನನ್ನ ಕೈ ಕಠಾರಿಯಿಂದ ನಿನ್ನ ಸಿರಸ್ಸನ್ನು ಹರಿದು ಪುರಹರನ ಗುಡಿಯಿಂದ ಹೊರಗೆ ಬೀಸಾಕಿ ಬಿಡುತ್ತೇನೆ. ಮೂರ್ಖ ಯುದ್ಧಕ್ಕೆ ಸಿದ್ಧನಾಗು ಬುದ್ಧಿ ಹೀನನೇ. (ಇಲ್ಲಿ ವಿಟಗಾರನ ವಧಾ)

ಬಿಜ್ಜಳನ ದರ್ಬಾರ ಸೀನು

ಸೇವಕನ ಪದ :

ಪೊಡವಿಪತಿಯೇ ನೀನು ನುಡಿಯನ್ನು ಲಾಲಿಸೋ ।
ತಡಿಯದೇ ಹೇಳುವೇ ನಾನು ಕಡುಮತಿವುಳ್ಳಂಥ ।
ದೃಢ ಭಕ್ತ ಕಿನ್ನರನು ಗುಡಿಯೊಳು ಕೊಲ್ಲಿಹನು ವಿಟನ ॥ ೧ ॥

ಸೇವಕ: ಭೋ ಬಿಜ್ಜಳ ಮಹಾರಾಜರೇ ಓರ್ವ ನರನು ವಿಕ್ರಯಕ್ಕೆ ಕುರಿಯನ್ನು ತೆಗೆದುಕೊಂಡು ಬರುವ ಬೀದಿಯಲ್ಲಿ ಕುರಿಯ ಹಗ್ಗವು ಹರಿದು ತ್ರಿಪುರಾಂತೇಶನ ಗುಡಿಯನ್ನು ಹೊಕ್ಕಿತ್ತು. ಅದನ್ನು ಹಿಡಿದುಕೊಂಡು ಬರಬೇಕೆಂದು ಒಳಕ್ಕೆ ಆ ಮನುಷ್ಯನು ಹೋಗಲಾಗಿ ನಿರಾಪರಾಧಿಯಾದವನು ಕಿನ್ನರಯ್ಯನು ತನ್ನ ಕಠಾರಿಯಿಂದ ಅವನ ಶಿರಹರಿದು, ಗುಡಿಯ ಹೊರಗೆ ಕೆಡವಿರುವನು ಮಹಾನ್.

ಬಿಜ್ಜಳ : ಬಸವೇಶಾ ಶಿವಭಕ್ತರು ದಯಾಶಾಲಿಗಳು ಪರಮಭಕ್ತರು ನೀತಿಯುಳ್ಳವರು ದಯಾಸಮುದ್ರರು ಅಹಿಂಸಕರು ಪಾಪರಹಿತರೆಂದು ಹೇಳುವ ನಿನ್ನ ಮಾತು ನಿಜ ನಿಜ. ಯಾತಕ್ಕೆ ಸುಳ್ಳು ಹೇಳುವದನ್ನು ಕಲಿತಿರುವಿಯೋ

ಬಸವ. ನಿನ್ನ ಮಾತುಕೇಳಿಕೊಂಡು ಹೋದರೆ. ಊರು ಹಾಳುಮಾಡಿಕೊಂಡು ಹೋಗಬೇಕಾದೀತು. ಶಿವಭಕ್ತರೇ ಶ್ರೇಷ್ಠರು. ವೀರಶೈವ ಮತವೇ ಅಧಿಕವು. ಯಾತಕ್ಕೆ ಶರಣರ ಪೌರುಷವನ್ನು ಹೇಳುತ್ತಿರುವೆಯೋ? ನಿಮ್ಮ ಕಿನ್ನರ ಬ್ರಮ್ಹಯ್ಯನೆಂಬ ಜಂಗಮನು ಆ ವಿಟಗಾರನನ್ನು ಕೊಲ್ಲಬಹುದೇ? ಕುರಿಗೂ ಶಿವಭಕ್ತರಿಗೂ ಏನು ಸಂಬಂಧ ಹೇಳು. ರಾಜನ ಹೆದರಿಕೆಯಂತು ಶಿವಶರಣರಿಗೆ ಸ್ವಪ್ನದಲ್ಲಿ ಸಹ ಇಲ್ಲ. ಪರಮತವನ್ನು ಹಾಸ್ಯ ಮಾಡುವದು, ಜಂಗಮರಿಗೆ ಬೇಡಿದನ್ನು ಕೊಡುವದು, ಕೆಟ್ಟ ಜಾತಿಯಲ್ಲಿ ಉಣ್ಣುವದು, ಇದು ಅಲ್ಲದೆ ಇನ್ನು ಅನೇಕ ಕೆಟ್ಟ ಕೆಲಸಗಳಿರುವವು. ಇಂಥ ಅಧಮ ಕಾರ್ಯಗಳನ್ನು ಮಾಡುವದು ಶಿವಭಕ್ತರ ಆಚಾರವೇ? ಇದು ಯಾವ ಶಾಸ್ತ್ರದಲ್ಲಿರುತ್ತದೆ ಹೇಳು. ದೊರೆ ಆಜ್ಞಾ ಭಂಗವಲ್ಲದೆ ಶರಣರು ಎನ್ನಾಜ್ಞೆ ಮೀರಿ ನಡಿಯುತ್ತಾರೆಂದ ಬಳಿಕ ನೀನೆ ದೊರೆಯಾಗಿ ಬಾಳು.

ಬಸವ : ಪೃಥ್ವಿಪತಿಯೇ ನಡೆದ ಸಂಗತಿಯನ್ನು ನಿಜವಾಗಿ ತಿಳಿಯದೇ ಬಾಯಿಗೆ ಬಂದಂತೆ ಮಾತನಾಡಬೇಡ. ಕರ್ಮನಿರತರಾದವರು ಆ ಧರ್ಮಕ್ಕೆ ಪ್ರವೇಶಿಸಬಹುದು. ಶಿವಭಕ್ತರು ಎಂದಿಗೂ ಪ್ರವೇಶಿಸರು. ವಯೋವೃದ್ಧನಾಗಿಯೂ ಜ್ಞಾನಾಧಿಕನಾಗಿಯೂ ಇರುವ ಕಿನ್ನರ ಬ್ರಹ್ಮಯ್ಯ ಶಿವಯೋಗಿಯು. ಮೂಢನಂತೆ ನಿರಾಪರಾಧಿಯಾದ ಮನುಷ್ಯನನ್ನು ಕೊಲ್ಲುವನೇ? ವಾದಿ ಪ್ರತಿವಾದಿಗಳಿಬ್ಬರ ಮಾತುಗಳನ್ನು ಕೇಳಿದ ಮೇಲೆ ನಿರ್ಣಯಿಸಬೇಕಲ್ಲದೆ ಒಬ್ಬನ ಮಾತಿನ ಮೇಲೆ ಹ್ಯಾಗೇ ನಿರ್ಣಯ ಮಾಡಬೇಕು. ಯಾಕೆಂದರೆ ಪ್ರತ್ಯಕ್ಷವಾದರೂ ಪರಾಮರಿಸಿ ನೋಡಬೇಕು. ಆದರೆ ಅವರು ಶಿವಯೋಗಿಗಳು, ಸ್ವತಂತ್ರರು. ಇಲ್ಲಿ ಕರಿಸಿದರೆ ಬರುವಂತಿಲ್ಲ. ಮುದ್ದಾಂ ನಾವೇ ಹೋದರೆ ತಾನೇ ಗೊತ್ತಾಗುತ್ತದೆ. ಹೇಳ್ಕಿ ಮಾತಿನ ಮೇಲೆ ಹೋದರೆ ಮರ್ಯಾದೆ ಉಳಿಯುವಂತಿಲ್ಲ. ಕಾರಣ ನನ್ನ ಮಾತಿನ ಕಡೆ ಲಕ್ಷ ಕೊಡತಕ್ಕದ್ದು.

ಬಿಜ್ಜಳ : ಏನಯ್ಯ ಬಸವೇಶಾ ನಿಮ್ಮ ಕಿನ್ನರಯ್ಯನು ನಿಶಾಚರನೋ ಏನು ಪಿಶಾಚಿಯೋ ಏನನ್ನಬೇಕು. ಮನುಷ್ಯನಾಗಿದ್ದರೆ ಇಂಥ ಉದ್ಧಟ ಪ್ರಸಂಗ ಒದಗುತ್ತಿತ್ತೆ ? ಛೀ ಛೀ ಮೂರ್ಖರಿಗೆ ಶರಣರೆಂಬುವ ಬಗೆ ಹೇಗೆ? ಶರಣರಾದ ಮೇಲೆ ಜೀವ ಹಿಂಸೆ ಮಾಡುವದು, ಕಳವು ಮಾಡುವದು, ಸುಳ್ಳು ಹೇಳುವದು, ಸೂಳಿಯರನ್ನು ಭೋಗಿಸುವದು ಯಾವ ಶಾಸ್ತ್ರದಲ್ಲಿ ಹೇಳುತ್ತದೆ. ಅಹಿಂಸೇ ಪರಮ ಧರ್ಮ ಎನ್ನುವದನ್ನು ಮತ್ತು ಆಚಾರೋ

ಪ್ರಥಮೋಧರ್ಮವೆಂದು ವೇದ ವಚನಕ್ಕೆ ವಿರುದ್ಧವಾಗಿ ನಡೆಯುತ್ತಾರೆಂದ ಬಳಿಕ ಇವರೇನು ಭಕ್ತರಲ್ಲ. ರಾಕ್ಷಸರೇ ಸರಿ. ಅಯ್ಯೊ ಬಸವಾ ಎಲ್ಲ ಭಕ್ತರ ಚಾಳಿಯೇ ಹೀಗಿದ್ದ ಬಳಿಕ ಇವರಿಗೆ ಪ್ರಾಯಶ್ಚಿತ್ತವಾಗಲಿಕ್ಕೇ ಬೇಕು. ಇಲ್ಲದಿದ್ದರೆ ಊರನ್ನೆ ನುಂಗಿ ಬಿಡುವರು. ಬಸವಾ ಇದಕ್ಕೆ ಉಪಾಯವೇನು? ಇಷ್ಟು ಅಭಿಪ್ರಾಯವು ನಿನ್ನ ಹೊರತಲ್ಲದೆ ಇಂಥಾ ಎಕ್ಕಶ್ಚಿತ ತಿರಕೊಳ್ಳುವ ಜಂಗಮರಿಗೆ ಇರುವದೇ? ಬಸವಾ ಇದ್ದರೆ ನಿನ್ನಂಥ ಪ್ರಧಾನಿ ಇರಬೇಕು. ಅಂದರೆ ರಾಜನು ಬದುಕುತ್ತಾನೆ. ಛೀ ಛೀ ಯಾತಕ್ಕೆ ಇಂಥಾ ಉದ್ಯೋಗವನ್ನು ಮಾಡುವಿಯೋ? ಕಿನ್ನರಯ್ಯನ ಕಡೆಗೆ ಎಳ್ಳಷ್ಟು ತಪ್ಪಿಲ್ಲೆಂದು ಅಂದಿರಿ. ಪ್ರತ್ಯಕ್ಷವಾಗಿ ಶರಣನೇ ಅಪರಾಧಿ ಇದ್ದಾನೆಂದು ಕಂಡುಬರುತ್ತದೆ.

ಬಸವ : ಶಿವಭಕ್ತರಿಗೆ ನಿಂದಕರಂತೆ ಧಿಕ್ಕಾರ ಮಾಡುವಿಯೋ. ಇಂಥ ಕೆಟ್ಟ ಕೆಲಸಗಳನ್ನು ಮಾಡುವರ ಮಗ್ಗಲವನ್ನು ಮುರಿದು ಹಾಳು ತಗ್ಗಿನೋಳ್ ನುಗ್ಗಿ ಬಿಡುವರು. ಶಿವಶರಣರೆಂದರೆ ಏನೆಂದು ತಿಳಿದಿರುವಿ? ತ್ರೈ ಮೂರ್ತಿಗಳನ್ನು ಒಂಟಿಗಾಲ್ ನಿಂದ್ರಿಸಿ ಬಿಡುತ್ತಾರೆ. ಶಿವಶರಣರ ಪರಾಕ್ರಮವು ಪಶುಗಳಿಗೆ ಗೊತ್ತಾಗುವದೇ? ನಿಮ್ಮಂಥ ದುರ್ಮತಿಗಳಿಗೆ ಶಿವಶರಣರ ಮಹಿಮೆಯು ಹೇಗೆ ತಿಳಿದೀತು? ಶಿವಶರಣರ ಮಹಿಮೆಯನ್ನು ಶಿವನೇ ಬಲ್ಲನಲ್ಲದೇ ಮದಾಂಧರಿಗೆ ತಿಳಿಯುವದೆ? ಇದನ್ನು ಪರೀಕ್ಷೆ ಮಾಡಬೇಕಾದರೆ, ನೀವೇ ಮುದ್ದಾಂ ಹೊರಡಲಿಕ್ಕೇ ಬೇಕು, ಹ್ಯಾಗೆ ಮಾಡುವಿರಿ?

ಬಿಜ್ಜಳ : ಹಾಗಾದರೆ ತ್ರಿಪುರಾಂತಕೇಶ್ವರ ದೇವಾಲಯಕ್ಕೆ ಹೋಗುವಾ ನಡಿಯಿರಿ.

ದೇವಾಲಯ ದೃಶ್ಯ

ಸ್ವಾಮಿ ಕಿನ್ನರಯ್ಯನವರೆ ಏನಾಶ್ಚರ್ಯವಿದು? ತಾವು ಸತ್ಪುರುಷರೇ ಇದ್ದು ಇಂಥ ಅಹಿತವನ್ನು ಆಚರಿಸುವರೇ? ಸ್ವಾಮಿ ಅಮೃತವೆಲ್ಲಿ? ಕೊಳಚೆ ನೀರಲ್ಲಿ? ಕತ್ತಲೆಲ್ಲಿ? ಬೆಳಕೆಲ್ಲಿ ? ಶಿವಶರಣರೆಲ್ಲಿ? ದುರ್ಜನರೆಲ್ಲಿ? ಅಂದ ಬಳಿಕ ತಾವು ಇಂಥ ಕಾರ್ಯವನ್ನು ಮಾಡಬೇಕೆ? ಚನ್ನಾಗಿ ನಿಜ ಸಂಗತಿಯನ್ನು ಹೇಳಿರಿ.

ಕಿನ್ನರಯ್ಯ : ಬಿಜ್ಜಳ ಭೂಪತಿಯೇ ಕೇಳು. ಬಹುಮಾತಿನಿಂದ ಪ್ರಯೋಜನವೇನು ಸ್ವಲ್ಪದರಲ್ಲಿಯೇ ಹೇಳಿ ಮುಗಿಸುತ್ತೇನೆ. ಕೇಳು ಆ ಪಾಪಿಯು ಕುರಿಯನ್ನು ಓಡಿದುಕೊಂಡು ಬರುವಾಗ ಅದು ಭಯದಿಂದ ಶಿವನ ಗುಡಿಯನ್ನು

ಹೊಕ್ಕಿತು. ಆ ಮೂರ್ಖನು ಬಂದು ಕುರಿಯನ್ನು ಓಡಿಯಲು ನಾನು ಅಂದದ್ದೇನೆಂದರೆ ಶಿವಲಿಂಗವನ್ನು ಮೊರೆ ಹೊಕ್ಕಿರುವದು, ಇದನ್ನು ಕೊಲ್ಲಬಾರದು. ಬಿಡು ಬಿಡು ಕೊಂಡ ಬೆಲೆಯನ್ನು ಹೇಳು. ಒಂದಕ್ಕೆ ಎರಡಷ್ಟಾದರೂ ಹೊನ್ನನ್ನು ಕೊಡುತ್ತೇನೆ. ಈ ಕುರಿಯನ್ನು ಬಿಟ್ಟು ಬಿಡು ಎಂದು ಹೇಳಿದೆನು. ಅದಕ್ಕೆ ಆ ನೀಚನು ನನ್ನನ್ನು ಹಾಸ್ಯಮಾಡಿ ನೀನು ಸತ್ಪುರುಷನು, ಪ್ರಾಣಿ ದಯಾ ಪರನು. ಇದಕ್ಕೆ ಸಾವಿರ ಹೊನ್ನನ್ನು ಕೊಟ್ಟು ಬಿಡಿಸಿಕೊಳ್ಳುತ್ತಾರಲ್ಲ ಎಂದು ಹಾಸ್ಯ ಮಾಡಿದನು. ಆಗ ನಾನು ಸಾವಿರ ಹೊನ್ನು ತಂದುಕೊಟ್ಟೆನು. ನೀನು ಪುನಃ ಬಂದು ಕೇಳಿದರೆ ಬಿಡುವದಿಲ್ಲ. ಈ ಕುರಿಗೆ ಲಿಂಗ ಮುದ್ರೆಯನ್ನೊತ್ತಿ ಬಿಡುತ್ತೇನೆಂದು ಹೇಳಿದೆ. ಆ ಮಾತಿಗೆ ಈ ನೀಚನು ಒಡಂಬಟ್ಟು ಹೋಗಿ ಸ್ವಲ್ಪ ಹೊತ್ತಿನ ಮೇಲೆ ಬಂದು ಕುರಿಯನ್ನು ಹಿಡಿದು ಕೊರಳಿಗೆ ಹಗ್ಗವನ್ನು ಕಟ್ಟಿ ಎಳೆಯ ಹತ್ತಿದನು. ಅದನ್ನು ಕಂಡು ನಾನು ಎಲವೋ ಖಳನೇ ಬಿಡು ಬಿಡು ಬೆಲೆಗೆ ಕುರಿಯನ್ನು ಕೊಟ್ಟು, ಪುನಃ ವೈಯಲಿಕ್ಕೆ ಬಂದಿರುವಿಯೋ ಎಂದು ನುಡಿದ ಕೂಡಲೇ ನನ್ನ ಮೇಲೆ ಖಡ್ಗವನ್ನು ಎತ್ತಿ ಬರಲು ಅವನ ಶಿರವನ್ನು ಹರಿದೆನು. ಇದಕ್ಕೆ ಈ ತ್ರಿಪುರಾಂತೇಶನೇ ಸಾಕ್ಷಿ. ಯಾರಲ್ಲಿ ತಪ್ಪುಂಟು ವಿಚಾರಿಸಿರಿ.

ಬಿಜ್ಜಳ : ಇದೇನು ಎಂಥಾ ಸೋಜಿಗದ ಸುದ್ದಿಯನ್ನು ಮಾತಾನಾಡುತ್ತಿರುವಿರಿ. ಸ್ವಾಮಿಗಳೇ ಈ ತ್ರಿಪುರಾಂತೇಶನೆಂಬೋ ಶಿಲಾಮೂರ್ತಿಯು ಮಾತಾಡುವದುಂಟೆ? ಎಂಥಾ ಮಾತನ್ನಾಡಿಕೊಂಡಿರಿ. ಸ್ವಾಮಿ ನಿಜವಾಗಿ ಈ ಲಿಂಗದ ಕಡೆಯಿಂದ ಸಾಕ್ಷಿಯನ್ನು ಹೇಳಿಸುವಿರೋ? ಹೇಳಿಸಿದರೆ ನೆಟ್ಟಗಾಗುತ್ತದೆ. ಇಲ್ಲದಿದ್ದರೆ ಮಾತ್ರ ನಿಮ್ಮ ಗತಿ ನೆಟ್ಟಗಾಗಲಿಕ್ಕಿಲ್ಲ ನೋಡಿಕೊಳ್ಳಿರಿ, ತಡವೇಕೆ ಸಾಕ್ಷಿಯನ್ನು ನುಡಿಸಿರಿ ನುಡಿಸಿರಿ.

ಕಿನ್ನರಯ್ಯ : ರಾಜನೇ ನಿನ್ನ ಅಜ್ಞಾನಾಂಧಕಾರಕ್ಕೆ ಬೆಲೆಯೇ ಇಲ್ಲ. ಹಾಸ್ಯವನ್ನು ಗೈಯುವಿರೋ ನಾನು ಈ ತ್ರಿಪುರಾಂತೇಶ್ವರನೇ ಸಾಕ್ಷಿಯಂದದ್ದಕ್ಕೆ ಅದನ್ನೇ ಘಟ್ಟಿಯಾಗಿ ಮಾಡುವಿಯೋ? ಎಲವೋ ಬಿಜ್ಜಳ ತಡವೇಕೆ ಸಾಕ್ಷಿಯನ್ನು ಕೇಳುವ ಶಕ್ತಿಯು ನಿನ್ನಲ್ಲಿದ್ದರೆ ಘಟ್ಟಿಯಾಗಿ ನಿಲ್ಲು. ಖಿಲ್ಲಾ ಈಗಿಂದೀಗಲೇ ಈ ಶಿವಲಿಂಗದಿಂದ ಸಾಕ್ಷಿಯನ್ನು ನುಡಿಸುತ್ತೇನೆ. ಇದು ಆಶ್ಚರ್ಯವೆಂದು ತಿಳಿದಿರುವಿಯೇನು ಕೇಳಿಕೋ ಮೂರ್ಖ.

ಕಿನ್ನರಯ್ಯ ಪದ :

ನುಡಿ ನುಡಿ ಸಾಕ್ಷಿಯ ತ್ರಿಪುರಾಂತೇಶ ತ್ರಿಪುರಾಂತೇಶ ತ್ರಿಪುರಾಂತೇಶ ॥ ಪಲ್ಲ ॥
ಸೌಂದರ ನಂಬಿಗೆ ಪರವೆಯ ಕುಚದಲಿ ಜೋಳದರಾಶಿಯ ಬ್ರಹ್ಮಯ್ಯಗೆ
ಮಾತಾಡಿದಿ ॥ ೧ ॥

ಕಿನ್ನರಯ್ಯ : ಭೊ ಶಂಕರ ಸೌಂದರ್ಯನೆಂಬೆಣ್ಣಿನಿಗೆ ಪರವೆನಾಚಿಯ ಕುಚದಲ್ಲಿ ಮಾತಾಡಿದಂತೆ ಜೋಳದ ರಾಶಿಯಲ್ಲಿ ಬ್ರಹ್ಮಯ್ಯನೊಡನೆ ಮಾತಾಡಿದಂತೆ ಈಗ ಸತ್ಯವಾಗಿ ಸಾಕ್ಷಿಯನ್ನು ಹೇಳುವ ಅಪರಾಧವು ನನ್ನಲ್ಲಿರುವದೋ? ಅಥವಾ ಕುರಿಯನ್ನು ವಿಕ್ರಯಕ್ಕೆ ಕೊಟ್ಟವನಲ್ಲಿರುವದೋ? ದಯಮಾಡಿ ಹೇಳು ಶಂಕರ. ಭಕ್ತವತ್ಸಲನೆಂಬ ಬಿರಿದು ನಿನ್ನಲ್ಲಿದ್ದರೆ ನಾನು ನಿರಾಪರಾಧಿಯಾದದ್ದಾದರೆ, ಅಲಸ್ಯ ಮಾಡದೆ ಸಾಕ್ಷಿಯನ್ನು ನುಡಿ ಇಲ್ಲದಿದ್ದರೆ ಈ ನನ್ನ ಶಿರಸ್ಸು ನಿನ್ನ ಚರಣಾರವಿಂದಕ್ಕೆ ಅರ್ಪಿಸುತ್ತೇನೆ. ತಡವೇಕೆ ಇದ್ದ ಸಂಗತಿಯನ್ನು ಹೇಳುವದಕ್ಕೆ ನಿನಗೇನು ಹೆದರಿಕೆ. ತ್ರಿಪುರಾಂತೇಶ ಸಾಕ್ಷಿಯನ್ನು ಹೇಳು ಹೇಳು.

(ದೊಡ್ಡ ಧ್ವನಿಯಿಂದ ಓಂ ಎಂದು ಶಬ್ದಮಾಡಬೇಕು.)

ಬಿಜ್ಜಳ : ಭೋ ಬಸವೇಶ್ವರ ಈ ಕೂಗನ್ನು ನಿಲ್ಲಿಸು ನಿಲ್ಲಿಸು. ಇಲ್ಲದಿದ್ದರೆ ನಮ್ಮ ಪ್ರಾಣವು ಉಳಿಯುವಂತಿಲ್ಲ. ಬಸವರಾಜ ತೀವ್ರ ನಿಲ್ಲಿಸಿರಿ ನಿಲ್ಲಿಸಿರಿ. ತಮ್ಮ ಪಾದಕ್ಕೆ ಬಿದ್ದು ಬೇಡಿಕೊಳ್ಳುತ್ತೇನೆ. ಬಸವೇಂದ್ರ ಬಸವೇಂದ್ರ.

ಬಸವ : ಕಿನ್ನರ ಸ್ವಾಮಿಗಳೇ ನಿಮ್ಮ ಪಾದ ಕಮಲಕ್ಕೆ ಬೇಡಿಕೊಳ್ಳುತ್ತೇನೆ. ದಯಾನಿಧಿ ಸದ್ಭಕ್ತ ಜನಕ್ಕೆ ಶೃಂಗಾರ ಬೆಳೆಯಾದವನೇ ಗಾಂಭಿರ್ಯ ಗುಂದದೆ ಪ್ರಾಕಾಶಿಸುವವನೇ ಕಿನ್ನರಿ ಬ್ರಹ್ಮಯ್ಯ ಶಿವಯೋಗಿಯೇ ರಕ್ಷಿಸು ಸ್ವಾಮಿ. ನಿನ್ನ ಅಗಣಿತವಾದ ಮಹತ್ವವನ್ನು ಈ ಪಾಮರರಾದ ರಾಜ ಮೊದಲಾದವರಿಗೆ ಗೋಚರವಾಗುವದೇ? ಅಹಂಕಾರ ಮದದಿಂದ ವ್ಯರ್ಥ ಸತ್ತು ಹೋಗಿರುವ ಅಜ್ಞಾನಿಗಳಾದ ಮೂರ್ಖರು ಮಾಡಿದ ಅಪರಾಧವನ್ನು ಕ್ಷಮಾ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಕಿನ್ನರಯ್ಯ : ಬಸವ ಶಿವಶರಣರ ಮಹಿಮೆಯನ್ನು ಪರಮಾಧಿಕರಾದ ಅಜ್ಞಾನಿಗಳಿಗೆ ಗೋಚರವಾದೀತೆ, ಜ್ವರದಿಂದ ಪೀಡಿತನಾದವನಿಗೆ ಕ್ಷೀರದ ಸೌಖ್ಯವುಂಟೇ? ಬದೀರನಿಗೆ ಸಂಗೀತದ ಸ್ವರವು ಕೇಳ ಬರುವದುಂಟೆ? ಅಂಧಕನಿಗೆ ದರ್ಪಣದ ಛಾಯವು ತಿಳಿಯುವದೇ? ಭಾಸ್ಕರನ ಪ್ರಕಾಶವು ಗೂಗೆಯು ಬಲ್ಲದು? ಶಿವಶರಣರ ಮಹಿಮೆಯನ್ನು ಪರಮತಿಕರೇನು

ಬಲ್ಲರು. ಆದರೆ ಇನ್ನು ಮೇಲೆ ತ್ರಿಪುರಾಂತೇಶ್ವರನ ಸಾಕ್ಷಿಯನ್ನು ಸಾಕು ಮಾಡಿಸುತ್ತೇನೆ. ಭೋ ಶಂಕರಾ ದಯಾನಿಧೆ ಓಂ ಎಂಬ ಶಬ್ದವನ್ನು ನಿಲ್ಲಿಸು ನಿಲ್ಲಿಸು.

ಬಿಜ್ಜಳನ ಪದ :

ಏನು ಮಹಿಮನೋ ಕಿನ್ನರಿನಾಥನು ।
ನಿನ್ನ ಪಾದಕ್ಕೆ ಸಾನುರಾಗದಿಂ
ಹೊಂದಿಕೆಯಾಗಿರುವೆ ಎನ್ನನು ರಕ್ಷಿಸು ॥ ೧ ॥

ಬಿಜ್ಜಳ : ಭೋ ಕಿನ್ನರ ಸ್ವಾಮಿಗಳೇ ನಿಮ್ಮ ಪಾದಕ್ಕೆ ಶಿರಸಾಷ್ಟಾಂಗ ನಮಸ್ಕಾರವು. ಮಹಾಶಾಲಿಗಳೇ ಶಿವನಾಗಿ ಭೂಮಿಯಲ್ಲಿ ಮೆರೆಯುವವನೆ ನಿಮ್ಮ ಅಗಮ್ಯವು. ನಮ್ಮಂಥ ಪಾಮರರಿಗೆ ತಿಳಿಯದೆ, ಸ್ವಾಮಿ ನಾನು ಕಪಟಿಯು, ಮೂಢನು ಚಾಂಡಾಲನು. ನಾನು ಮಾಡಿದ ಅಪರಾಧವನ್ನು ಕ್ಷಮಾ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಕಿನ್ನರಯ್ಯ : ಬಿಜ್ಜಳ ಭೂಪತಿ ಕಲ್ಯಾಣ ಮಸ್ತು. ಏಳು ಏಳು ನೀನು ಇನ್ನು ಮೇಲೆ ಶಿವಶರಣರ ಮೇಲೆ ದೋಷವನ್ನು ಆರೋಪಿಸ ಕೂಡದು ತಿಳಿಯಿತೆ. ಶಿವಭಕ್ತರಲ್ಲಿ ಮತ್ಸರವನ್ನು ಮಾತ್ರ ಮಾಡಬೇಡ ತಿಳಿಯಿತೆ. ಇಕೋ ಸೂಳಿಯ ಮೋಸಕ್ಕೆ ಒಳಗಾಗಿ ಕುರಿಯಗೋಸ್ಕರ ಪ್ರಾಣ ನೀಗಿದ ವಿಟನ ಪ್ರಾಣವು ಸಂಗಮೇಶ್ವರನ ಕೃಪೆಯಿಂದ ಪಡೆಯುತ್ತೇನೆ. ಎಲೋ ವಿಟಗಾರನೇ ಏಳು ಏಳು ನಿನ್ನ ಆಸ್ಥಾನಮಂ ಕುರಿತು ಗಮನ ಹರಿಸಿ ಇನ್ನು ಮೇಲೆ ಮಾತ್ರ ಇಂಥ ಕೆಟ್ಟ ಕೆಲಸ ಮಾಡಬೇಡ. ನಡೆ ಶಿವಭಕ್ತರ ಬಳಗವನ್ನು ಕೂಡಿಕೋ ನಡೆ.

ವಿಟ : ಸ್ವಾಮಿಗಳೇ ನಿಮ್ಮ ಪಾದದಂತಃಕರುಣದಿಂದ ಧನ್ಯನಾದೆ. ಅಜ್ಞಾನ ಅಂಧಕಾರವು ದೂರಾಯಿತು. ಶಿವಭಕ್ತರನ್ನು ಕೂಡಿಕೊಂಡು ಮೋಕ್ಷವನ್ನು ಪಡೆಯುತ್ತೇನೆ.

ಬಸವ : ರಾಜರೇ ನಿಮ್ಮ ಆಸ್ಥಾನವನ್ನು ಕುರಿತು ಮಾಡು ನಡೆ. ಕಿನ್ನರ ಸ್ವಾಮಿಗಳೇ ಗುರುಲಿಂಗ ಜಂಗಮ ಸೇವಾ ನಿಮಿತ್ಯವಾಗಿ ಹೋಗುವ ನಡೆ.

ಕಿನ್ನರಯ್ಯ : ಬಸವ ಜಂಗಮಾರ್ಯರ ಸೇವಾನಿರುತಕ್ಕೆ ಹೋಗುವ ನಡಿ.

(ಜಗದೇವನ ಪ್ರವೇಶವು)

ಜಗದೇವ : ಸೇವಕ ಬಸವೇಶ್ವರನ ಮಠಕ್ಕೆ ಹೋಗಿ ಯಾವತ್ತು ಪ್ರಮಥ ಗಣಂಗಳಿಗೆ ಬಿನ್ನಹಮಂ ಮಾಡಿ ನನ್ನ ಜನ್ಮ ಸಾರ್ಥಕ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಮಠಕ್ಕೆ ಹೋಗುವಾ ನಡೆ. ಬಸವ ಮಹಾರಾಜರೇ ತಮ್ಮ ಪಾದ ಕಮಲಗಳಿಗೆ ಶಿರಷ್ಟಾಂಗ ನಮಸ್ಕಾರಗಳು. ಬಸವಾ ತಮ್ಮನ್ನು ಕುರಿತು ಬೇಡಿಕೊಳ್ಳುವದೇನೆಂದರೆ ಈ ಬಡವನ ಮನೆಯಲ್ಲಿ ಪ್ರಸ್ತವಿರುವದು. ಬಡವನ ಬಿನ್ನಹಮಂ ಕೈಗೊಂಡು ಪ್ರಸ್ತಮಂ ಸಾಗಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಬಸವ : ಜಗದೇವನೆ ಯಾವತ್ತೂ ನಮ್ಮ ಪ್ರಮಥ ಗಣಂಗಳಿಗೆ ಬಿನ್ನಹವನ್ನು ಮಾಡಿರುವಿಯಾ.

ಜಗದೇವ : ತಮ್ಮ ಯಾವತ್ತೂ ಪ್ರಮಥ ಮಂಡಳಿಗೆ ಒಟ್ಟು ಬಿನ್ನಹವನ್ನು ಮಾಡಿರುತ್ತೇನೆ. ಯಾವತ್ತಾದರೂ ಬರಬೇಕು. (ಸೇವಕನಿಗೆ) ಸೇವಕ ಬಸವ ದೇವನಿಗೆ ಬಿನ್ನಹವನ್ನು ಮಾಡಿ ಬಂದೆ. ಆದರೆ ಯಾಕೋ ಎನ್ನ ಮನಸ್ಸು ಬ್ರಾಹ್ಮಣರ ಮತಾಭಿಮಾನಕ್ಕೆ ಎಳೆಸುತ್ತದೆ. ಹ್ಯಾಗೆ ಮಾಡಬೇಕು? ಒಳ್ಳೇದು ಹೀಗೆ ಮಾಡುವಾ. ಮೊದಲು ನಮ್ಮ ಬ್ರಾಹ್ಮಣರನ್ನು ಕರಿಸಿ ಪಂಕ್ತಿ ಭೋಜನವನ್ನು ಸಾಗಿಸುವಾ. ಹಿಂದಿನಿಂದ ಆ ಶಿವಶರಣರನ್ನು ಕರೆಸಿದರಾಯಿತು. ಅವನೇನು ಸರ್ವಜ್ಞನೇನು? ಅಲ್ಲ. ಇನ್ನು ತಡವೇಕೆ ಬ್ರಾಹ್ಮಣರನ್ನು ಕರೆದುಕೊಂಡು ಬಾ.

ಸೇವಕ : ಆಜ್ಞೆ ಮಹಾನ್. (ನಾಲ್ಕು ಮಂದಿ ಬ್ರಾಹ್ಮಣ ಬಟ್ಟರು)

ಬ್ರಹ್ಮ : ರಾಮಭಟ್ಟರೇ, ಗೋವಿಂದ ಭಟ್ಟರೇ, ಬಾಳಂ ಭಟ್ಟರೇ, ಕೇಶಂ ಭಟ್ಟರೆ, ಜಗದೇವನ ಮನೆಯಲ್ಲಿ ಕಳಿವಿನ ಪ್ರಸ್ತವಿರುವದು. ಕಳವಿನ ಪ್ರಸ್ತ ವಿರುವುದು. ಕಾರಣ ಊಟಕ್ಕೆ ಹೋಗುವ ಬನ್ನಿರಿ.

ಜಗದೇವ : ಬನ್ನಿರಿ ಬನ್ನಿರಿ ಆಚಾರ್ಯರೇ ಪುರೋಹಿತರೆ ಯಾವತ್ತರೂ ಭೋಜನಕ್ಕೆ ಕೂತುಕೊಳ್ಳಿರಿ. ಸರ್ವರಿಗೂ ಎಡಿಯಾಗಿರುವದು. ತೆಗೆದುಕೊಳ್ಳಿರಿ. ಆದರೆ ಈ ದಕ್ಷಿಣೆಯನ್ನು ತೆಗೆದುಕೊಳ್ಳಿರಿ. ಮತ್ತು ತಾಂಬೂಲವನ್ನು ತೆಗೆದುಕೊಳ್ಳಿರಿ. ಇನ್ನು ತಾವು ತಡಮಾಡದೇ ನಡೆಯಿರಿ ನಿಮ್ಮ ನಿಮ್ಮ ಮನೆಗೆ.

ಎಲೋ ಸೇವಕ ಮಲ್ಲೆ ಬಮ್ಮಯ್ಯನನ್ನು ಕರೆದುಕೊಂಡು ಬಾ. ಎಲವೋ ಶಿವಭಕ್ತ ಶಿರೋಮಣಿಯಾದ ಮಲ್ಲೆ ಬೊಮ್ಮಯ್ಯನವರೇ ತೀವ್ರ ಬರುವಂಥವರಾಗಿರಿ.

ಮಲ್ಲೆಬ್ರಹ್ಮಯ್ಯ: ಜಗದೇವನೆ ಬಂದಿರುವೆನು, ಏನಪ್ಪಣೆ ತಡಮಾಡದೇ ಹೇಳಿರಿ ಶಿವನಿಂದಕರೆಂಬ ವೃಕ್ಷಕ್ಕೆ ಪರಶುವೆಂಬೋ ಬಾಣ ಪ್ರಯೋಗ ಮಾಡಿ ಆ ಅಧಮರ ದೇಹವೆಂಬ ಬುಡವನ್ನು ಕತ್ತರಿಸುತ್ತೇನೆ. ಜಾಗ್ರತಿ ಅಪ್ಪಣೆ ಏನು ಹೇಳಿರಿ.

ಜಗದೇವ : ವೀರಶೈವ ಪರಾಕ್ರಮಿಯಾದ ನಿಮಗೆ ನಾನು ಎನು ಹೇಳಲಿ. ನನ್ನಲ್ಲಿ ಒಂದು ದೊಡ್ಡದಾದ ಅಪರಾಧವುಂಟು. ಏನೆಂದರೆ ಜಗದ್ರಕ್ಷಕನಾದ ದ್ವಿತೀಯಶಂಭುವೆನಿಸಿದ ಭವಶರಧಿಗೆ ಸೇತುವಾದ ವೀರಶೈವ ಮತವೆಂಬ ಕ್ಷೀರ ಸಾಗರಕ್ಕೆ ಚಂದ್ರನಾದ ಬಸವ ದೇವರ ಗಣ ಸಮೂಹಕ್ಕೆ ಮೊದಲು ಬಿನ್ನಹವನ್ನು ಮಾಡಿ ಪುನಃ ಅಜ್ಞಾನವಶನಾಗಿ ದ್ವಿಜರೆಂಬ ಹಾರುವರ ಕಾಲುಗಳನ್ನು ತೊಳೆದು ಪ್ರಸಾದವನ್ನು ಸಾಗಿಸಿದ್ದೇನೆ. ಅಯ್ಯೋ ಶಿವಾ ಶಿವಾ ನನ್ನಂಥ ಕೆಟ್ಟ ಪಾಮರರಾರು. ಭೋ ಕಲ್ಪವೃಕ್ಷ ಕಾಮಧೇನು ಚಿಂತಾಮಣಿ ಪ್ರಾಯವಾದ ಸಾಕ್ಷಾತ್ ಜಂಗಮಾರ್ಯ್ಯರ ಪಾದ ಕಮಲಗಳನ್ನು ಬಿಟ್ಟು ಕಾಡುಮುಳ್ಳುಗಳೆಂಬ ಪಾಮರ ಗಿಡಗಳ ಸ್ವರೂಪರಾದ ದ್ವಿಜರ ಪಾದವನ್ನು ತೊಳೆದೆನಲ್ಲ. ಶಿವಾ ಶಿವಾ ಬಸವೇಶ ನಿನಗೆ ಹೇಗೆ ಮುಖವನ್ನು ತೋರಿಸಲಿ. ಏನಂತ ಉತ್ತರ ಕೊಡಲಿ. ಯಾವ ಶಿಕ್ಷೆಯನ್ನು ನಿರ್ಣಯಿಸುವನೋ ಏನೋ ತಿಳಿಯದು. ಇದಕ್ಕೆ ಉಪಾಯವೇನು ನೀವೇ ಹೇಳಿರಿ.

ಮಲ್ಲೆಬೊಮ್ಮ: ಎಲೋ ಜಗದೇವನೇ ನಿನ್ನಂಥ ಮೂರ್ಖರು ನೀಚರು ಜಗತ್ತಿನಲ್ಲಿರುವರೇ ಅಧಮಾ. ಆ ಹಾರುವರ ಕಾಲುಗಳನ್ನು ಹ್ಯಾಗೆ ತೊಳೆದೆ. ಅಯ್ಯೋ ಮದಾಂಧ ಆದದ್ದಾಗಲಿ ನಡೆ ಬಸವೇಶ್ವರನು ಯಾವ ಪ್ರಾಯಶ್ಚಿತ್ತನ್ನು ಮಾಡಿದರು ಅಡ್ಡಿಯಿಲ್ಲ. ಆ ಶಿಕ್ಷಕ್ಕೆ ಗುರಿಯಾಗಲಿಕ್ಕೇ ಬೇಕು. ಜಾಗ್ರತಿ ಬಸವೇಶ್ವರನ ದರ್ಶನಕ್ಕೆ ಹೋಗುವಾ ನಡೆ.

ಸೇವಕ : ಬಸವ ದೇವ ಪ್ರಭೋ ತಮ್ಮ ಪಾದಕಮಲಕ್ಕೆ ದೀರ್ಘದಂಡ ನಮಸ್ಕಾರ. ಮೊದಲು ತಮಗೆ ಯಾವತ್ತೂ ಗಣ ಸಮೂಹಕ್ಕೆ ಬಿನ್ನಹವನ್ನು ಮಾಡಿಸಿ, ಪ್ರಸ್ತವನ್ನು ಜರುಗಿಸಿದ್ದಾನೆ. ಬುದ್ಧಿ ತಮಗೆ ತಿಳಿದಿದ್ದಿರಬೇಕೆಂದು ಬೇಡಿಕೊಳ್ಳುತ್ತೇನೆ. ದಯಾನಿಧೆ.

ಬಸವ : ಆ ಭ್ರಷ್ಟನಾದ ಕೆಟ್ಟ ಜಗದೇವನು ಇಂಥ ಕಾರ್ಯ್ಯವನ್ನು ಮಾಡಿದನೇ? ಅಯ್ಯೋ ಮದಾಂಧ ಬೇಡಿದ ಪದಾರ್ಥವನ್ನು ಕೊಡುವ ಕಲ್ಪವೃಕ್ಷ ಪ್ರಾಯವಾದ ಜಂಗಮಾರ್ಯ್ಯರ ಪಾದ

ಕಪಾಲಗಳಂ ಬಿಟ್ಟು, ಏಕತ್ರಿತ ಪದಾಂಭರ ಕಾಲುಗಳನ್ನು ತೊಳೆದಿಯೋ ಮೂರ್ಖ. ನಿನಗೆ ಯಾವ ಪ್ರಾಯಶ್ಚಿತ್ತನ್ನು ಮಾಡಿದರೂ ನನ್ನ ಸಿಟ್ಟು ಶಾಂತವಾಗಲಾರದು. ಒಳ್ಳೇದು ವಿಚಾರಕ್ಕೆ ತಂದು ನೋಡುವಾ. ಎಲೋ ಸೇವಕ ಆದಷ್ಟು ಬೇಗ ಜಗದೇವನು ಇಲ್ಲಿಗೆ ಬರುವಂತೆ ತೋಗುತ್ತದೆ. ಅವನ ಮುಖಾವಲೋಕನವನ್ನು ಮಾಡಕೂಡದು. ಜಾಗ್ರತಿ ಪರದೆಯನ್ನು ಬಿಡುವನಾಗು.

ಜಗದೇವ : ಭೋ ಬಸವೇಶ ನಿಮ್ಮ ದಿವ್ಯ ಚರಣಾರವಿಂದಕ್ಕೆ ನಮಸ್ಕಾರವು. ಭೋ ಇಷ್ಟಲಿಂಗ ದೇವತಾರ್ಚಿತ ಜಂಗಮಪಾದ ನಿರುತ ಆನಂದಭರಿತ ಶಿವಭಂಗಿತರ ಕೊಯ್ತು, ಮಾಯಾ ರಹಿತ ಅಷ್ಟಾವರಣ ಪೂರಿತ ನಾನು ನಿಮ್ಮನ್ನು ಕುರಿತು ಬೇಡಿಕೊಳ್ಳುವದೇನೆಂದರೆ ಇಷ್ಟಲಿಂಗ ಧಾರಿಯಾಗಿ ಪವಿತ್ರನೆನಿಸಿ ಭವಸಾಗರವನ್ನು ದಾಟಬೇಕೆಂಬ ಆಪೇಕ್ಷೆಯುಳ್ಳವನಾಗಿ ನಿಮ್ಮ ಚರಣಾರವಿಂದಕ್ಕೆ ಇಚ್ಛಿಸಿದ್ದೇನೆ. ಈ ನನ್ನ ಮತವನ್ನೇ ಬಿಟ್ಟು ನಿಮ್ಮ ಮತವನ್ನೆ ಸೇರಿ ಗುರುಲಿಂಗ ಜಂಗಮ ಈ ಅಷ್ಟಾವರಣವನ್ನು ಹೊಂದಿ ಭವ ವಿಮೋಚನ ಮಾಡಿಕೊಂಡು ಮುಕ್ತನಾಗಬೇಕೆಂಬ ಆಕಾಂಕ್ಷೆಯುಂಟು. ಆ ಕಾರಣವಾಗಿ ಶಿವದೀಕ್ಷೆಯನ್ನು ದಯಾಮಾಡಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಮಲ್ಲೆಬೊಮ್ಮ : ವೀರಶೈವ ಮತವೆಂಬ ಶರಧಿಗೆ ಚಂದ್ರನೆ, ಪರಮತವೆಂಬ ವೃಕ್ಷಕ್ಕೆ ಪರಶುವೇ, ಅಜ್ಞಾನವೆಂಬ ಅಂಧಕಾರಕ್ಕೆ ಮಾರ್ತಂಡನೇ, ಶಿವ ದೂಷಿಕರೆಂಬ ಮೇಘಾಸ್ಪದಕ್ಕೆ ಭಾಸ್ಕರನೇ ನಿನ್ನ ದಿವ್ಯತರವಾದ ಚರಣಾರವಿಂದಕ್ಕೆ ನಮಸ್ಕಾರ ಬಿನ್ನಹ ಬಸವೇಶ್ವರರೇ. ಜಗದೇವನಂತೆ ನನ್ನ ಅಭಿಪ್ರಾಯವಿರುವದು. ಆದ್ದರಿಂದ ವೀರಶೈವ ಮತದೋಳ್ ಎನ್ನನ್ನು ಹೊಂದಿಸಿ ಅಷ್ಟಾವರಣದಲ್ಲಿ ಭಕ್ತಿ ಹುಟ್ಟುವಂತೆ ನನಗೆ ಮಂತ್ರೋಪದೇಶವನ್ನಿತ್ತು ಉದ್ಧಾರ ಮಾಡಬೇಕೈ ದಂಡನಾಯಕ.

ಬಸವ : ಮಲ್ಲೆ ಬೊಮ್ಮಯ್ಯನವರೇ ನೀವು ಚನ್ನಬಸವಣ್ಣನವರ ಆಸ್ಥಾನವನ್ನು ಕುರಿತು ಗಮನ ಹರಿಸಿರಿ.

ಬಸವ : ಯಲೋ ಮೂಢನೇ ಭವಿಗಳ ಸಮ್ಮಂಧವುಳ್ಳ ಜಗದೇವನೇ ನಿನಗೆ ಭಕ್ತಿ ಸಬಂಧವೇಕೆ? ಮೂರ್ಖ ದೂರ ನಿಲ್ಲು ದೂರ ನಿಲ್ಲು. ಮುಖಾವಲೋಕನವ ಮಾಡಕೂಡದು. ಅಧಮಾ ಜಗತ್ರೈಯ್ಯಕ್ಕೂ ಸ್ವಾಮಿಯಾದ ಪರಶಿವನು ಕುಲದೈವನಾಗಿರುವಲ್ಲಿ ಭಕ್ತನಾದ ನಿನಗೆ

ಹೀಗೆ ಬಹು ಮಾರ್ಗ ಸಂತಾಪವು ಯುಕ್ತವಾದುದೆ. ಶಿವಾರ್ಚನೆಯಲ್ಲಿ ಆಸಕ್ತಿಯುಳ್ಳ ಕೈಗಳಿಗೆ ಶಿವಭಕ್ತ ದೂಷಣೆಯಲ್ಲಿ ಉದ್ಯುಕ್ತರಾದ ದ್ವಿಜರಪಾದ ಪೂಜೆಯು ಯೋಗ್ಯವಾದದ್ದೆ. ಆ ಕಾರಣ ನಿನ್ನಂಥ ಮೂರ್ಖನಿಗೆ ಶಿವದೀಕ್ಷೆಯನ್ನು ಕೊಡಲಾಗದು. ಈ ವಿಷಯದಲ್ಲಿ ಎಲೇಶ್ವರ ಕ್ಷೇತ್ರ ಪಾಲನೆಂಬುವರು ನಾಚಿ, ದೇವತೆಂಬುವರ ಇತಿಹಾಸವನ್ನು ಕೇಳಿಲ್ಲವೆ? ಭಕ್ತಿಹೀನನೆ ಇಲ್ಲಿ ನಿಲ್ಲಬೇಡ. ಸೇವಕಾ ಇವನ್ನೇನು ನೋಡುತ್ತಿ ಹೊರಕ್ಕೆ ದೂಡು.

ಜಗದೇವ : ಬಸವೇಶ್ವರಾ ನಿನ್ನ ನಾಮವನ್ನು ಸ್ಮರಿಸಿದವರಿಗೆ ಬೇಡಿದ್ದನ್ನು ಕೊಡುವದು. ನಿನ್ನ ನಾಮವು ಸಕಲ ಜೀವಿಗಳಿಗೆ ಆಧಾರವಾಗಿರುವದು. ನಿನ್ನ ನಾಮವನ್ನು ಯಾವನು ಸ್ಮರಿಸುವದಿಲ್ಲವೋ ಅವನು ಪಾಮರ ಜನ್ಮವನ್ನು ಧರಿಸಿದವನು. ಬಸವಾ ಪರಶಿವನಿಗೆ ವಿಷ್ಣು ಬ್ರಹ್ಮೇಂದ್ರಾದಿಗಳನ್ನು ಸಾಟಿ ಮಾಡಿ ಹೇಳುವರು. ಶುನಕನ ಹಾಲು ಕುಡಿಯುವರು ಮತ್ತು ವಿಷ್ಣು ಉಪಮನ್ಯು ಮಹಾಮುನಿಯಿಂದ ಆಗಮೋಕ್ತವಾಗಿ ಶಿವದೀಕ್ಷೆಯನ್ನು ಹೊಂದಿ, ರಾಮಗಿರಿಯಲ್ಲಿ ಶಿವಲಿಂಗವನ್ನು ಪೂಜಿಸಿದನು. ಆದಕಾರಣ ದೇವಾನು ದೇವತೆಗಳೆಲ್ಲ ಶಿವದೀಕ್ಷೆಯನ್ನು ಹೊಂದಿ ಶಿವಲಿಂಗವನ್ನು ಪೂಜಿಸಿ ಧನ್ಯರಾದರು. ಅದರಂತೆ ಎನಗೆ ಭವಮರಣ ದೂರ ಮಾಡುವ ಶಿವದೀಕ್ಷೆಯನ್ನು ಕೊಟ್ಟು ಧನ್ಯನಂ ಮಾಡೈ ಬಸವೇಶ.

ಬಸವ : ಜಗದೇವನೆ ಸನ್ಮಾರ್ಗವಿದ್ದರೂ ನೀಚ ಮಾರ್ಗವನ್ನು ಅನುಸರಿಸುವದರಿಂದ ಫಲವೇನು? ದ್ರೋಹಿಗಳ ಸಹವಾಸ ಯಾವನಿಗೆ ತಾನೇ ಒಳ್ಳೇದನ್ನು ಮಾಡೀತು. ಪಶುಗಳ ಪಾಶವನ್ನು ಛೇದಿಸುವ ಶಕ್ತಿಯು ಸಮರ್ಥನಾಗಿದ್ದರೂ ಯಾವ ಮನುಷ್ಯಾಧಮನು ಪಶುಕೋಟಿಯಲ್ಲಿ ಸೇರಿದ ವಿಷ್ಣುವಾದಿಗಳನ್ನು ಆಶ್ರಯಿಸಿ ಪಶುತ್ವವನ್ನು ತಪ್ಪಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೋ ಅವರ ಕಿವಿ, ಮೂಗನ್ನು ಬುಡದವರೆಗೆ ಕೊಯ್ದು ಶಿವನು ಇಟ್ಟಿಗೆಯಿಂದ ಉಜ್ಜುತ್ತಾನೆ. ಶಿವನು ಕರ್ಮಿಗಳ ಹೃದಯದಲ್ಲಿ ಹ್ಯಾಗೆ ತಾನೇ ವಾಸಿಸುವನು. ಕಾರಣ ಹಾರವರನ್ನು ನಂಬಲಾಗದು. ಅವರಿಗೆ ಉಪಕಾರ ಮಾಡಲಾಗದೆಂದು ಆರ್ಯರ ವಚನವಿರಲಾಗಿ ನಿನಗೆ ಶಿವದೀಕ್ಷೆಯನ್ನು ಕೊಡಲಾಗದು. ಮೂರ್ಖ ಸರಿದು ನಿಲ್ಲು.

ಜಗದೇವನ ಪದ :

ಮನ್ನಿಸು ಬಸವಾ ನಿನ್ನ ಪಾದಕೆ ನಾನು. ಎನ್ನ ಅಪರಾಧವ
ಕ್ಷಮಿಸಿರಿ. ಬಸವ ಬಸವ ಹಸುಳನನು ನಾನು ಹಸನಾಗಿ
ಚರಣಕೆ ಕುಸಿಯಾಗಿ ಬೇಡುವೆ ॥ ೧ ॥

ಜಗದೇವ : ಭೋ ಬಸವೇಶ್ವರ ಲಿಂಗಾಂಗಿಯಾದ ವೀರಶೈವನೇ ನೀೞು ಪೂಜ್ಯನು. ಯಾಕಂದರೆ ಹಿಂದಿನವರು ಶಿವದೀಕ್ಷೆಯಂ ಹೊಂದಿ ಮುಕ್ತರಾದವರು ಬ್ರಾಹ್ಮಣರ ಕುಲಗುರುಗಳಾದ ವೇದವ್ಯಾಸನು ಬೇಡತಿಯಲ್ಲಿ ಹುಟ್ಟಲಿಲ್ಲವೆ? ವಶಿಷ್ಟ ಮುನಿಯು ಸೂಳೆಯಾದ ಓರ್ವಸಿಯ ಮಗನಲ್ಲವೇ? ಇವರೇ ಮೊದಲಾದ ಋಷಿಗಳು ನೀಚ ಕುಲದವರಿದ್ದು, ಶಿವಭಕ್ತಿ ವಿಶೇಷದಿಂದಲೇ ಬ್ರಾಹ್ಮಣರಿಗೆ ಕುಲಗುರುಗಳಾದರು. ನೀಚ ಕುಲದವರೆಂದು ತಿರಸ್ಕರಿಸಿದರೆ ಪರಮಾತ್ಮನೇನು ಉದ್ಧಾರ ಮಾಡಿದನು. ಕಾರಣ ನನ್ನನ್ನು ನೀವು ಉದಾಸೀನ ಮಾಡದೇ ಶಿವದೀಕ್ಷೆಯನ್ನು ಕೊಟ್ಟು ಉದ್ಧಾರ ಮಾಡ್ಯೆ ಬಸವಾ.

ಬಸವ : ಮೂಢ ಭವಿಗಳ ಸಂಗ ತೊಡಕು ಬಿದ್ದಿರುವ ಮೂಢ ಜಗದೇವ ನೀನು ಮಾಡಿದ ಅಪರಾಧವನ್ನು ಎಷ್ಟೆಂದು ಹೇಳಲಿ? ಶಿವನಿಂದಕ ಪಾಪಾತ್ಮ ಮೋಕ್ಷವನ್ನು ಕೊಡುವಂಥ ವೀರಶೈವ ಮಾರ್ಗವಾದ ವಿಭೂತಿ, ರುದ್ರಾಕ್ಷಿ, ಶಿವಲಿಂಗ ಮೊದಲಾದ ಅಷ್ಟಾವರಣವನ್ನಳಿದು ಸುಳ್ಳೇ ವೇದವನ್ನು ಬಲ್ಲ ದ್ವಿಜರ ಮಾತಿಗೆ ಭ್ರಮಿತರಾಗಿ ಪಾಪಕ್ಕೆ ಗುರಿಯಾದಿಯಾ ಮೂರ್ಖ. ನಿನಗೆ ಶಿವ ದ್ರೋಹವಾಗಿರುವದು ನಿನ್ನ ಸಂಗಡ ಮಾತನಾಡ ಕೂಡದು. ಎನ್ನ ಸನ್ನಿಧಿಯಲ್ಲಿ ನಿಲ್ಲಬೇಡ ಅತ್ತ ನಡೆಯೋ ಸ್ವಾನನೇ.

ಜಗದೇವ : ಬಸವೇಶ್ವರ ತಮ್ಮ ಚರಣ ಕಮಲಕ್ಕೆರಗಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಕೈಮುಗಿದು ಬೇಡಿಕೊಳ್ಳುತ್ತೇನೆ. ಈ ಕರ್ಮ ಬದ್ಧರಾದ ದ್ವಿಜರ ಕಾಲುಗಳನ್ನು ತೊಳೆದ ಮೂರ್ಖನು ನಾನು. ದುರ್ಜನರಲ್ಲಿ ಮೊದಲಿನವನು, ದೃಷ್ಟನು. ಜಂಗಮರನ್ನು ಧಿಕ್ಕಾರ ಮಾಡಿ ಭವಿಗಳ ಸೇವೆ ಮಾಡಿದವನು. ದೊಡ್ಡ ಅಪರಾಧಿಯಿದ್ದೇನೆ. ಕಾರಣ ಎನ್ನ ಪ್ರಾಣ ತ್ಯಾಗ ರೂಪವಾದ ಪ್ರಾಯಶ್ಚಿತ ಶಿಕ್ಷೆ ಏನಿರುವದು. ಜಾಗ್ರತಿ ನೇಮಿಸು. ನಿಮ್ಮ ಪಾದಕ್ಕೆ ನಮ್ರನಾಗಿ ಬಿದ್ದಿರುವೆನು ದೇವಾ ರಕ್ಷಿಸು ರಕ್ಷಿಸು.

ಬಸವ : ಹಾಗಾದರೆ ಈ ಕಲ್ಯಾಣ ನಗರದಲ್ಲಿ ಮುಂದೆ ಒಂದು ಶಿವದ್ರೋಹ ನಡೆಯುವದು. ಅಂಥ ಅಪರಾಧ ಮಾಡಿದ ಆ ದುಷ್ಟನನ್ನು ಯಮಪುರಿಗೆ ಕಳುಹಿದವನಿಗೆ ಶಿವನು ಮೆಚ್ಚುವನು. ನೀನು ಮಾಡಿದ ಶಿವ ದ್ರೋಹವು ನಿರ್ಮೂಲವಾಗುವದು. ನಿನ್ನ ಜನ್ಮವು ಸಫಲವಾಗುವದು. ನಿನಗೆ ಇದೇ ಶಿಕ್ಷೆಯು, ತಿಳಿಯಿತೆ ಜಗದೇವನೆ.

ಜಗದೇವ : ಬಸವೇಶಾ ಧನ್ಯನಾದೆ, ಧನ್ಯನಾದೆ. ನನ್ನ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನೇಮಿಸಿದ್ದು ಪರಮ ಲಾಭವಾಯಿತು. ನನ್ನ ಪಾಪವೆಂಬ ದಾರಿದ್ರವು ನಾಶವಾಯಿತು. ಆಜ್ಞೆಯಂಬ ಕೋಶವು ಕೈ ಸೇರಿತು. ಆ ಅಧಮ ಭಂಡ ಚಾಂಡಲ ರಂಡಿಯರ ಶಿಖಾಮಣಿ ಷಂಡಪಾಷಂಡನಾದ ಮುಂಡ ಮೂರ್ಖನೆಂಬೋ ಭಕ್ತದ್ರೋಹಿ ದೃಷ್ಟ ಭ್ರಷ್ಟನನ್ನು ಶ್ರೇಷ್ಠಿಯೋಳ್ಕಟ್ಟಿ ನಟ್ಟ ನಡು ಬಾಜಾರದೋಳ್ ಹೆಡಮುರಿಗೆಯ ಕಟ್ಟಿ ಘಣಿಯೋಳ್ ಪುಟ್ಟಿಯಂ ಸಿಟ್ಟಿನಿಂದ ಘಟ್ಟಿಯಾಗಿಟ್ಟು ಮೈ ಚರ್ಮವನ್ನು ಸುಲಿಸಿ ಆ ನರಾಧಮರ ಶಿರ ಚಂಡಾಡಿಸಿ, ವೈರಿಗಳ ಗಂಡನೆನಿಸಿ, ಅವನ ಕೆಟ್ಟ ಶರೀರವನ್ನು ಯಮ ನಗರಿಗೆ ಕಳಿಸಿ ನಾಯಕ ನರಕದೋಳಿರಿಸಿ ಈ ಪ್ರಕಾರ ಶಿಕ್ಷೆ ಮಾಡಿಸದಿದ್ದರೆ ಭಾಪುರೇ ವೀರಾಧಿವೀರ ಜಗದೇವನೆಂಬ ಹೆಸರ್ಯಾತಕ್ಕೆ. ಭೋ ಬಸವೇಶ ತಡಮಾಡದೇ ತಡಮಾಡದೇ ವೀರ ತಾಂಬೂಲ ಕೊಡು ಕೊಡು. ಬ್ರಹ್ಮಾಂಡವನ್ನು ಒಡೆದು ಆ ಅಧಮರನ್ನು ಚಂಡಾಡುವೆ. ನಿನ್ನ ಕಾರ್ಯವನ್ನು ನೆರವೇರಿಸುವೆನಯ್ಯ ಬಸವ ಪ್ರಭೋ.

ಬಸವ : ಭಾಪುರೇ ಜಗದೇವಾ ನಿನ್ನ ಸಮಾನ ವೀರ ಮಹೇಶ್ವರನನ್ನು ಕಾಣಲಿಲ್ಲವೋ. ಭಾಪುರೇ ಇಕೋ ಈ ವೀರ ತಾಂಬೂಲವನ್ನು ತೆಗೆದುಕೋ. ಇದೇ ನಿನಗೆ ಘನವಾದ ಅಪ್ಪಣೆಯು. ಆ ಶಿವ ದ್ರೋಹಿಗಳನ್ನು ಕೊಲ್ಲಿ ಭೂಮಿಯ ಭಾರವನ್ನು ಇಳಿಸಲಿಕ್ಕೆ ಬೇಕು. ಜಾಗ್ರತಿ ಕಾರ್ಯವನ್ನು ನೆರವೇರಿಸು. ಇನ್ನು ನಮ್ಮ ದಿವಸವು ಸಮೀಪಿಸಿತು. ನನ್ನ ಗುರುಮೂರ್ತಿ ಸಂಗಮೇಶ್ವರನಲ್ಲಿ ಅಮೈಕ್ಯ ಹೊಂದುವೆನು. ನೀನು ನಾನು ಹೇಳಿದ ಕಾರ್ಯವನ್ನು ಬಹು ಎಚ್ಚರದಿಂದ ಮಾಡಬೇಕು. ತಿಳಿಯಿತೆ? ಆ ಸ್ಥಾನವನ್ನು ಕುರಿತು ಗಮನ ಹರಿಸುವೆ ನಡೆ. (ಸ್ವಗತ) ನಾನು ಸಂಗಮೇಶ್ವರನ ಆಜ್ಞೆಯಂ ಧಾರಣ ಮಾಡಿ ಬಂದ ಕಾರ್ಯವು ನೆರವೇರಿತು. ಈ ಕಲ್ಯಾಣಪಟ್ಟಣದ ಜಯಲಕ್ಷ್ಮಿಯು ಕೈಬಿಟ್ಟಳು. ಇನ್ನು ಇಲ್ಲಿ ಇರಲಿಕ್ಕೆ ಸಂಬಂಧವಿಲ್ಲ.

ಸಂಗಮೇಶ್ವರನ ಕ್ಷೇತ್ರವನ್ನು ಕುರಿತು ಗಮನ ಹರಿಸುತ್ತೇನೆ. ಗುಡಿನೇಶಾ ಗುಡಿನೇಶಾ. ಆಹಾಹಾಃ ಈ ಶರಣರ ಸ್ಥಲವನ್ನು ಸೇರುವರೇ ಧನ್ಯರು. ದೇವ ನಿನ್ನ ಸ್ಥಲಕ್ಕೆ ಮುನ್ನೂರ ಅರವತ್ತು ತೀರ್ಥಗಳು ಸಹ ನಿನ್ನ ಮಠದ ಹಿಡಿ ಮಣ್ಣಿಗೆ ಸರಿಯಲ್ಲವು. ಇಂಥ ಶರಣ ಸ್ಥಲವನ್ನು ಬಿಟ್ಟು ಮೂರ್ಖರು ಕಾಶಿ ಮೊದಲಾದ ಕ್ಷೇತ್ರಕ್ಕೆ ವರ್ತಿಸುತ್ತಾರೆ. ಇವರಿಗೆ ಭಕ್ತರೆನ್ನಬೇಕೆ? ಶಿವ ಶಿವ ಗುಡಿನೇಶ್ವರಾ ನಿನ್ನ ಸ್ಥಾನವಾದ ಮಠದ ಅಂಗಳದೊಳಗೆ ಯಾರು ಹೊರಳಾಡುವರೋ ಅವರೇ ಶಿವಭಕ್ತರು. ಅವರೇ ವೀರಶೈವರು. ಗುಡಿನೇಶಾ ನಿನ್ನ ಪಾದಕ್ಕೆ ನನ್ನ ನಮಸ್ಕಾರವಿರಲಿ. ಇನ್ನು ತಡವೇಕೆ ಸಂಗಮೇಶ್ವರ ಕ್ಷೇತ್ರ ಕುರಿತು ಗಮನಮಾಡುತ್ತೇನೆ.

ಜಗದೇವ : ನಾನೇ ಧನ್ಯ ಧನ್ಯನು. ಶಿವದ್ರೋಹಿಗಳನ್ನು ಕೊಲ್ಲುವದಕ್ಕೆ ಬಸವೇಶನ ಕಡೆಯಿಂದ ವೀರತಾಂಬೂಲಮಂ ತೆಗೆದುಕೊಂಡೆ. ತಡವೇಕೆ ಶಿವ ದ್ರೋಹಿಗಳನ್ನು ಹುಡುಕುವದಕ್ಕೆ ಈಗಿಂದೀಗಲೇ ಪ್ರಯಾಣ ಮಾಡುತ್ತೇನೆ.

ಬಿಜ್ಜಳನ ಆಸ್ಥಾನ ಸೀನು

ಸೇವಕ : ಮಹಾರಾಜನೇ ನಿನ್ನ ಪಟ್ಟಣದಲ್ಲಿ ನಡೆದ ಅನ್ಯಾಯ ಅತ್ಯಾಚಾರವನ್ನು ಎಷ್ಟೆಂದು ಹೇಳಲಿ. ನುಡಿಯಲು ನನ್ನ ಹೃದಯ ತಲ್ಲಣಗೊಳಿಸುತ್ತದೆ. ಹೇಳಿದರೆ ಚಾಡಿಯನಿಸುವದು. ಹೇಳುವದು ಬಿಟ್ಟರೆ ಮಹಾ ಫಲ ಲಭಿಸುವದು. ಉಭಯ ಸಂಕಟಕ್ಕೊಳಗಾಗಿರುವೆನೋ ಜೀಯಾ.

ಬಿಜ್ಜಳ : ನಗರ ಶೋಧಕಾ ತಿಲಾಂಶವಾದರೂ ಭಯಗೊಳ್ಳಬೇಡ. ಸದ್ವಿಸ್ತಾರವನ್ನು ಹೇಳು ಹೇಳು ಹೆದರಬೇಡ.

ಸೇವಕ : ಈ ಅನರ್ಥವನ್ನು ವಿಸ್ತರಿಸುವೆ. ಚನ್ನಾಗಿ ಲಾಲಿಸಿರಿ. ನಿಮ್ಮ ಪ್ರಧಾನ ಶಿರೋಮಣಿಯಾದ ಮಧುವರಸನೆಂಬ ಬ್ರಾಹ್ಮಣನು ಆಚಾರ ಬದ್ಧನಾಗಿದ್ದವನು. ಶೀಲ ಶಿರೋಮಣಿಯನಿಸಿಕೊಂಡು ಈಗ ಅಜ್ಞಾನ ವಶದಿಂದ ತನ್ನ ಸುಂದರವಾದ ಮಗಳನ್ನು ಹರಳಯ್ಯನೆಂಬ ಮಾದಿಗನ ಮಗನಿಗೆ ಕೊಟ್ಟು ನಿಮ್ಮ ಭೀತಿಯಿಲ್ಲದೆ ಕನ್ಯಾದಾನವಂ ವಿವಾಹ ಮಾಡಿದನು. ಉತ್ತಮವಾದ ತಮ್ಮ ಬ್ರಾಹ್ಮಣರ ಕುಲವನ್ನು ಹೊಲೆಗಲಿಸಿ ಬಿಟ್ಟಿರುವನು ಇಷ್ಟೇ ಹೇಳತಕ್ಕದ್ದು ಏನೂ ಇಲ್ಲ ಜೀಯಾ.

ಬಿಜ್ಜಳ : ಅಯ್ಯೋ ನಗರ ಶೋಧಕಾ. ಆ ದುರುಳನಾದಂಥ ಮಧುವರಸನು ಅತ್ಯುತ್ತಮವಾದ ಕುಲದಲ್ಲಿ ಜನಿಸಿ ತಮ್ಮ ಶೀಲಾಚ್ಯಾರವನ್ನು ದೂರ ಗೈದು ಬಂದು ಬಾಂಧವ ಗುರು ಹಿರಿಯರಿಗೆ ಹೊರತಾಗಿ ಹೆದರದೆ

ತಮ್ಮ ಕುಲದೇವತಾ ಸ್ಮರಣೆ ಮಾಡದೆ ಮಹಾರಾಜನಾದ ನನ್ನ ಭಯವು ಎಳ್ಳಷ್ಟಾದರೂ ಇಲ್ಲದೆ ಇಂಥ ನೀಚ ಕೃತಿಯನ್ನು ಮಾಡಿದನೆ? ತಾನು ಬ್ರಾಹ್ಮಣನಾಗಿ ತನ್ನ ಮಗಳನ್ನು ಮಾದಾರ ಹರಳಯ್ಯನ ಮಗಳಿಗೆ ಕೊಟ್ಟನೇ? ಅಯ್ಯೋ ಈ ದುರಾತ್ಮನನ್ನು ಈಗಿಂದಿಗಲೇ ಹಿಡತರಿಸಿ ನನ್ನ ಉರುತರ ಕೋಪಾಗ್ನಿಗೆ, ಆಹುತಿಯನ್ನು ಮಾಡುತ್ತೇನೆ. ಅವರನ್ನು ತೀವ್ರ ಹೆಡಗುಡಿಯನ್ನು ಬಿಗಿದು ತೆಗೆದುಕೊಂಡು ಬರುವಂಥವನಾಗು.

ಸೇವಕ : ಮಹಾರಾಜರೇ ತಮ್ಮ ಅಪ್ಪಣೆ ಪ್ರಕಾರ ತಡ ಮಾಡದೆ ಆ ಮೂಢರಾದ ಹರಳಯ್ಯ ಮಧುವರಸರನ್ನು ಹೆಡಮುರಿಗಿಯಂ ಕಟ್ಟಿಕೊಂಡು ಬರುತ್ತೇನೆ. ಈಗಲೇ ಹೋಗುತ್ತೇನೆ.

ಹರಳಯ್ಯ : ಶಿವ ಘೋಂ ಶಿವ ಘೋಂ ಹರ ಹರ ಮೃತ್ಯುಂಜಯ, ಭಕ್ತ ವತ್ಸಲಾ, ದೀನ ಬಂಧು ರಕ್ಷಿಸು ರಕ್ಷಿಸು. ಅಯ್ಯೋ ಮಧುವಯ್ಯನವರೇ ನಾವು ನೀವು ಸವಮಾಗವುದಿಂದ ಬೀಗತನ ಮಾಡಿಕೊಂಡೆವು. ಬಸವಣ್ಣನವರಂತೂ ಶ್ರೀ ಸಂಗಮೇಶ್ವರನಲ್ಲಿ ಐಕ್ಯತ್ವ ಹೊಂದುವದಕ್ಕೆ ದಯಮಾಡಿಸಿದರು. ಆದರೆ ಇನ್ನು ಬಿಜ್ಜಳ ಮಹಾರಾಜನು ನಮ್ಮ ವಾರ್ತೆಯನ್ನು ಕೇಳಿ ಯಾವ ಗತಿಗೆ ಹೊಂದಿಸುವನೋ ಏನೋ ತಿಳಿಯದು.

ಮಧುವಯ್ಯ: ಏನಯ್ಯ ಹರಳಯ್ಯನವರೇ ಶಿವಭಕ್ತರಿಗೆ ಕುಂದು ಕೊರತೆಗಳಿರುವವೇ? ಬಿಜ್ಜಳನು ನಮಗೆ ಶಿಕ್ಷೆಯನ್ನು ನೇಮಿಸುವನೇ? ಅಯ್ಯೋ ದುರಾತ್ಮನನ್ನು ಈಗಿಂದೀಗಲೇ ಸಂಹಾರ ಮಾಡುವ ತ್ರಾಣವಿರುವದು. ಮಹಾತ್ಮರೇ ಚಿಂತಿಯನ್ನು ಬಿಡಿರಿ. ಶಿವಭಕ್ತರನ್ನು ತಡಹಿ ಲೋಕದಲ್ಲಿ ಬದುಕುವರಾರು? ಅಗಸ್ತ್ಯ ಋಷಿಗಳೊಡನೆ ಅಹಂಕಾರ ತೋರಿಸಿದ ಸಮುದ್ರನಾಥನ ಅವಸ್ತೆ ಏನಾಯಿತು. ಬಸವೇಶ್ವರನ ಆಜ್ಞೆಯಂಬ ಪ್ರಸಾದ ಪಾಶುಪತಾಸ್ತ್ರ ಬಾಣವಿರಲಾಗಿ ಮತ್ತಾವ ಭಯವಿರುವದು ಹೇಳಿರೈ ಶಿವಮೂರ್ತಿಗಳೇ.

ಸೇವಕ : ಮಧುವಯ್ಯನವರೇ ಹರಳಯ್ಯನವರೇ ನಿಮ್ಮ ಭೂಪಾಲನಾದ ಬಿಜ್ಜಳ ಮಹಾರಾಜನು ತೀವ್ರ ಕರೆದುಕೊಂಡು ಬಾ ಎಂದು ಅಪ್ಪಣೆಯಂ ಮಾಡಿರುವರು. ಜಾಗ್ರತಿ ಏಳಿರಿ ಅವಧಿಯೇ ಇಲ್ಲ.

ಮಧುವಯ್ಯ: ಎಲೋ ದುರುಳನೇ ನೀನು ಯಾರು? ಸರಿದು ನಿಲ್ಲು ಸರಿದು ನಿಲ್ಲು. ದೊರೆಯು ನಮ್ಮನ್ನು ಯಾಕೆ ಕರೆಸಿದನು? ನಮ್ಮಲ್ಲಿ

ಅಪರಾಧವೇನು? ಶಿವಭಕ್ತರು ಅಲ್ಲಿ ಬರಲಿಕ್ಕೆ ಕಾರಣವೇನು? ಜಗದ್ವ್ಯಾಪಕನಾದ ಪರಮೇಶ್ವರನ ಪಂಚಾಕ್ಷರಿ ಮಹಾಮಂತ್ರವನ್ನು ಜಪಿಸುತ್ತಲೇ ಇರುವೆವು. ಅಲ್ಲಿಗೆ ಬರಲಿಕ್ಕೆ ಸಂಬಂಧವಿಲ್ಲ. ಮೂರ್ಖನೆಡೆ ಆಚಗೆ.

ಸೇವಕ : ಮಧುವರಸ ಮಂತ್ರಿಗಳೇ ನೀವು ಕೇವಲ ಬ್ರಾಹ್ಮಣರಿದ್ದು ಹರಳಯ್ಯನವರ ಸಂಗಡ ಬೀಗತನ ಮಾಡಿಕೊಂಡಿರುವಿರಂತೆ ಅದರ ನಿಮಿತ್ಯ ರಾಜಾಜ್ಞೆಯಾಗಿದೆ. ತೀವ್ರ ಹೊರಡಲಿಕ್ಕೆಬೇಕು.

ಮಧುವಯ್ಯ: ಎಲೋ ಮೂರ್ಖನೇ ಹರಳಯ್ಯನವರ ಚರಿತ್ರೆಯನ್ನು ಹೇಳಲಿಕ್ಕೆ ಯಾರಿಗೆ ಸಾಧ್ಯವಾದೀತು. ಅವರ ಸ್ನಾನ ತೀರ್ಥದಿಂದ ಎನ್ನ ಭವ ರೋಗ ನಿವಾರಣವಾಯಿತು. ನಾನು ಧನ್ಯನಾಗಿರುವೆ. ಅಂದ ಬಳಿಕ ಎನ್ನ ಮಗಳಂ ಈ ಹರಳಯ್ಯನವರ ಮಗನಿಗೆ ಲಗ್ನವನ್ನು ಮಾಡಿಸಿದ್ದೇನೆ. ಎನ್ನ ಕುಲವು ಪವಿತ್ರವಾಯಿತು. ಇಷ್ಟಕ್ಕೆ ಇಲ್ಲಿಗೆ ಬರಲಿಕ್ಕೆ ಸಂಬಂಧವೇನು. ನಮ್ಮಲ್ಲಿ ಯಾವ ತಪ್ಪುಂಟು? ಬರುವದಿಲ್ಲ. ನಡೆ ಮದಾಂಧಾ.

ಹರಳಯ್ಯ : ಮಧುವಯ್ಯನವರೆ ಹೀಗೇಕೆ ಮಾತಾಡುವಿರಿ. ರಾಜಾಜ್ಞೆಯಾದ ಬಳಿಕ ಹೋಗಲಿಕ್ಕೆ ಬೇಕು. ಬೇಕಾದ ಶಿಕ್ಷೆಯನ್ನು ಕೊಡಲಿ ಕಾಯುವವನು ದೇವರಿದ್ದಾನೆ. ಭಕ್ತ ವತ್ಸಲನಾದ ಮೇಲೆ ಕಾಯಲಿಕ್ಕೆ ಬೇಕು. ಕಾರಣ ಯಾವ ಶಿಕ್ಷೆಯನ್ನು ಕೊಡುತ್ತಾನೋ ಕೊಡಲಿ.

ಸೇವಕ : ಮಹಾರಾಜರೇ ಅಪರಾಧಿಗಳನ್ನು ಕರೆದುಕೊಂಡು ಬಂದಿರುವೆನು ಮುಂದೇನಪ್ಪಣೆ ಹೇಳಬೇಕು.

ಬಿಜ್ಜಳ : ಎಲೌ ಹರಳಯ್ಯ ಮಧುವರಸರೇ ಇಂಥ ನೀಚ ಕೃತ್ಯ ಮಾಡಲಿಕ್ಕೆ ನಾಚಿಕೆ ಬರಲಿಲ್ಲವೇ. ಮನ ಹೇಸದೆ ಬೀಗತನವನ್ನು ಹೇಗೆ ಮಾಡಿಕೊಂಡಿರುವಿರಿ. ಬ್ರಾಹ್ಮಣರು ಮಾದಿಗರು ಅಣ್ಣ ತಮ್ಮಂದಿರಲ್ಲವೆ. ಯಾಕೆಂದರೆ ಜಮದಗ್ನಿ ಋಷಿಯ ಗೋತ್ರದವರಲ್ಲವೇ? ಅಣ್ಣ ತಮ್ಮಂದಿರಿದ್ದು ಬೀಗತನವನ್ನು ನೀವು ಮಾಡುವದುಂಟೆ? ಎಲೋ ಭಟರುಗಳಿರಾ ಆಲಸ್ಯ ಮಾಡದೆ ಇವರನ್ನು ಆನೆಯ ಹಿಂಗಾಲಿಗೆ ಎಳೇ ಹೂಟಿಯನ್ನು ಕಟ್ಟಿ ಬಾಜಾರದೊಳಗೆ ಎಳೆಸುವಂಥವರಾಗಿ.

ಸೇವಕ : ಪ್ರಭೋ ತಮ್ಮ ಅಪ್ಪಣೆ ಪ್ರಕಾರ ಮಾಡುತ್ತೇವೆ ಮಹಾನ್.

ಬಿಜ್ಜಳ : ಆಹಾಹಾ. ಇದೇನ್ ಚಮತ್ಕಾರವು. ಇದೆಂಥಾ ಮಹತ್ವವು. ಎಳೆ

ಹೊಟಲಯು ಅಂತರಾಳೇ ಬರುತ್ತಿರುವದಲ್ಲಾ, ಆಹಾಹಾ ಇದೇನಾಶ್ಚರ್ಯವು? ಹಾಂ ಒಳ್ಳೇದು ಈ ಮೂರ್ಖರ ಕಣ್ಣುಗಳನ್ನು ಮೀಟಿಸುವಂತವರಾಗಿರಿ. ತಡ ಮಾಡಬೇಡಿರಿ.

ಸೇವಕ : ದುರುಳರಾದ ಹರಳಯ್ಯ ಮಧುವರಸ ತಡವೇಕೆ ಕೂತುಕೊಳ್ಳಿರಿ ರಾಜಾಜ್ಞೆಯಾಗಿರುವದು. ನಿಮ್ಮ ಕುಲದೇವರನ್ನು ಸ್ಮರಿಸುವರಾಗಿರಿ ಅವಧಿಯೇ ಇಲ್ಲ. ಕಣ್ಣುಗಳನ್ನು ಮೀಟುತ್ತೇವೆ. ಹೂಂ ಕೂತುಕೊಳ್ಳಿರಿ.

ಜಗದೇವ : ಎಲೋ ಚಂಡ ಪ್ರಚಂಡ ವೈರಿಗಳ ಗಂಡ. ಹಿಂಡು ದೈತ್ಯರ ಮುಂಡ. ಭೂಮಂಡಲವ ಅಂಡಲಸಿ, ತಂಡವಾಗಿ ಅಹಂಕಾರವಾಗಿ ಮದೋನ್ಮತ್ತರಾಗಿರುವ ಶಿವದ್ರೋಹಿಗಳೇ ಎಲ್ಲಿರುವಿರೀ ಇಕೋ ನರಕುರಿಗಳನ್ನು ಮೃತ್ಯುದೇವತೆಯು ಯಾವ ಪ್ರಕಾರ ಕಡಿ ಕಡಿದು ಛಿದ್ರ ಛಿದ್ರ ಮಾಡಿ ವಗೆಯುತ್ತಾಳೋ ಅದರಂತೆ ಭಕ್ತ ದ್ರೋಹಿಗಳನ್ನು ಕಡಿಯುವದು ನಿಶ್ಚಯ ನೋಡಿಕೊಳ್ಳಿರಿ. ಒಳ್ಳೇದು ಮುಂದಕ್ಕೆ ಪೋಗುವಾ. ಅಯ್ಯೋ ಖಿಲ್ಲಾ. ನೀಚ ಜೈನನೇ? ನೀನು ಶಿವಭಕ್ತರಿಗೆ ಕೊಲೆಯನ್ನುಂಟು ಮಾಡಿಸುವವನೇ! ಅಯ್ಯೋ ಏನ್ ಮಾಡಲಿ? ಒಳ್ಳೇದು ಈಗಲೇ ಮನಿಗೆ ಹೋಗಿ ತಾಯಿಯಿಂದ ಪ್ರಸಾದ ತಕ್ಕೊಂಡು ಬರೋಣ ಹಿಂದಿನಿಂದ ಇವನನ್ನು ಸಂಹಾರ ಮಾಡುತ್ತೇನೆ.

(ಹರಳಯ್ಯ ಮಧುವಯ್ಯನವರ ಸ್ತುತಿ)

ಹಾಯ್ ಹಾಯ್ ಶಂಕರ ಮೃತ್ಯುಂಜಯ ನೀಲಕಂಠ ಈ ವೇಳೆಯಲ್ಲಿ ನೀನೇ ರಕ್ಷಿಸು ರಕ್ಷಿಸು.

ಮಹಾದೇವ: ಎಲೋ ಶಿವಭಕ್ತ ಶಿಖಾಮಣಿಗಳೇ ಏಳಿರಿ ನಿಮ್ಮ ಕಣ್ಣುಗಳೇ ನನ್ನವಿರುತ್ತವೆ. ಇನ್ನು ತಡಮಾಡಬೇಡಿರಿ. ಈ ವಿಮಾನವನ್ನು ಏರಿರಿ. ಕೈಲಾಸಕ್ಕೆ ಹೋಗುವಾ ನಡೆಯಿರಿ.

ಜಗದೇವನ ಮನೆ

ಸೋಮಲಾದೇವಿ : ಎನ್ನ ಶಿವಭಕ್ತ ಶಿಖಾಮಣಿಯಾದ ನನ್ನ ಜಗದೇವನೆಂಬ ಚಂದ್ರನು ದಿನಂ ಪ್ರತಿ ವ್ಯಾಳಕ್ಕನುಸರಿಸಿ ಪ್ರಸಾದಕ್ಕೆ ಬರತಕ್ಕವನು. ಇವತ್ತು ಬಹಳ ವೇಳೆ ತಡೆದಿರುವ ಕಾರಣವೇನಿರಬಹುದು ತಿಳಿಯದು.

ಜಗದೇವ : ಅಮ್ಮಾ ಮಾತೋಶ್ರೀಯರೆ ನಿಮ್ಮ ಸುಂದರ ಪಾದಕಮಲಕ್ಕೆ ವಂದಿಸುತ್ತೇನೆ.

ಸೋಮಲಾದೇವಿ : ಮಗನೇ ನಿನಗೆ ಕಲ್ಯಾಣವಾಗಲಿ. ಬಾಲಕ ಶಿವಪ್ರಸಾದವನ್ನು ಕೈಕೊಳ್ಳುವಂಥ ವೇಳೆಯನ್ನು ಮೀರಿ ಬಂದ ಕಾರಣವೇನು? ಅಲಸ್ಯ ಮಾಡದೇ ಹೇಳು.

ಜಗದೇವ : ಭೋ ಮಾತಾ ಇವತ್ತಿನ ದಿವಸ ಅದ್ಭುತವಾದ ಕಾರ್ಯದ ಸಂಗತಿಯನ್ನು ನಾನೇನು ಹೇಳಲಿ. ತಾಯಿ ಸ್ಮರಣೆ ಮಾಡಿದರೆ ಭಯ ಬರುತ್ತದೆ. ಜನನಿ ಏನೆಂದರೆ ದುರುಳ ಬಿಜ್ಜಳನು ನಿರಾಪರಾಧಿಗಳಾದ ಶಿವಭಕ್ತ ಶಿರೋಮಣಿಯನಿಸಿ ಮರೆದಂಥ ಹರಳಯ್ಯ ಮಧುವಯ್ಯಗಳ ಕಣ್ಣುಗಳನ್ನು ಮೀಟಿಸುವಂಥವನಾದನು. ಇದನ್ನು ನೋಡಿ ಬರಲು ಆಲಸ್ಯವಾಯಿತು. ತಾಯಿ ಏನು ಹೇಳಲಿ.

ಸೋಮಲಾದೇವಿ : ಛೀ ದುರುಳ ನೀಚಾತ್ಮ ಭ್ರಷ್ಟ ಥೂ ಶಿವನಿಂದಕ. ಶಿವನಿಂದೆಯನ್ನು ನೋಡಿದ ಪಾಮರ ಹೊಲಿಯ, ದೂರ ನಿಲ್ಲು ದುರಾತ್ಮ. ಕೆಟ್ಟ ಪಾಪಿ ನಿನ್ನ ಮುಖಾವಲೋಕನ ಮಾಡಕೂಡದು. ಭೂಮಿಯಲ್ಲಿ ಶಿವದ್ರೋಹವನ್ನು ಮಾಡಿದವನನ್ನು ನೋಡಿದಾಕ್ಷಣವೇ ಸಂಹರಿಸಬೇಕು. ಕೊಲ್ಲುವದಾಗದಿದ್ದರೆ ತನ್ನ ಪ್ರಾಣವನ್ನು ಕೊಡಬೇಕು. ಶಿವಭಕ್ತರ ವಧೆಯನ್ನು ನೋಡಿ ಸುಮ್ಮನೇ ಹ್ಯಾಗೆ ಬಂದಿಯೋ ಪಾಪಾತ್ಮ. ಶಿವದ್ರೋಹವನ್ನು ಸುಮ್ಮನೆ ಕಣ್ಣಿಲೆ ನೋಡಿ ಬಂದವನಿಗೆ ಮಹಾ ರವರವ ನರಕವಿರುವದು ಅಯ್ಯೊ ನೀನು ಶಿವಭಕ್ತನೇ ಅಲ್ಲ. ಶಿವಭಕ್ತರಾದ ಮಹಿಮರು ಕಣ್ಣಿಲೇ ನೋಡಿ ಸುಮ್ಮನೆ ಬರುವರೇ ನರಾಧಮಾ. ಎಂಥಾ ದೊಡ್ಡವನಾದರು ಶಿವನಿಂದೆಯನ್ನು ನೋಡಿ ಸುಮ್ಮನೆ ಬಂದದ್ದಾದರೆ ಅವರ ಸಮಾನ ಚಾಂಡಾಲರು ಭೂಮಿಯಲ್ಲಿರುವರೇ ನೀಚಾ. ಹಿಂದಕ್ಕೆ ತಂದೆಯಾದ ದಕ್ಷನ ಯಜ್ಞದಲ್ಲಿ ಪಾರ್ವತಿಯು ಶಿವನಿಂದೆಯನ್ನು ಕೇಳಿ ಅಗ್ನಿ ಕುಂಡಲದಲ್ಲಿ ಬಿದ್ದು ತನ್ನ ಪ್ರಾಣವನ್ನು ಬಿಟ್ಟಳು. ಉಪಮನ್ಯು ಶಿವ ನಿಂದೆಯನ್ನು ಕೇಳಲಾರದೆ, ಸತ್ತು ಭಸ್ಮವಾಗಲಿಲ್ಲವೇ? ನೀನು ಶಿವ ದ್ರೋಹ ನೋಡಿದರೂ ಆ ದ್ರೋಹಿಯನ್ನು ಸುಮ್ಮನೆ ಬಿಟ್ಟು ಬಂದಿರುವಿ. ಅಂದ ಬಳಿಕ ನಿನ್ನಂಥ ಚಾಂಡಾಲನು ಮತ್ತಾರಿರುವರು? ಮಹಾತ್ಮರಾದ ಬಸವರಾಜರಿಗೆ ಭಾಷೆಯನ್ನು ಕೊಟ್ಟಿರುವಿ. ಆದ್ದರಿಂದ ಈ ಕಾರ್ಯವನ್ನು ವಹಿಸಿ ಹೋಗಿರುವರು. ಅದನ್ನು ಬಿಟ್ಟು ಹೊಟ್ಟೆ ಹರಿಯುವದಕ್ಕಾಗಿ ಮನೆಗೆ ಬಂದಿರುವಿಯೋ. ಶುನಕನೇ. ನೀನು ಶುನಕನಾಗಿ ಜನಿಸುವದೇ ನಿಜವು. ಪ್ರಸಾದದಾಶೆಗಾಗಿ ಬಂದಿರುವಿಯಾ? ನಿನ್ನ ಗಂಟಲದಲ್ಲಿ ಹ್ಯಾಗೆ

ಇಳಿಯುತ್ತದೆ. ಛೀ ನಾಚಿಗ್ಗೇಡಿ. ಆ ಶಿವದ್ರೋಹಿಯನ್ನು ಕೊಲ್ಲುವವರೆಗೂ ಪ್ರಸಾದವನ್ನು ಭೂಮಿಯ ಮೇಲೆ ಹಾಕುತ್ತೇನೆ. ನಾಯಿಯಂತೆ ತಿನ್ನು.

ಜಗದೇವ : ಶ್ವಾನನಾಗಿಯು ಬೋನವ ತಿಂಬುವೆ. ಹೀನ ಜನ್ಮವು ಒದಗೀತು ಮಾನಗೇಡಿಯು ನಾನು ಆಗಿಯೂ ಶುನಕತ್ವವ ಹೊಂದಿದೆನು.

ಸೋಮಲಾದೇವಿ : ಮೂರ್ಖ ನಾಯಿಯೇ ಯಾಕೆ ಚಿಂತಿಸುವಿ. ಸೂಕರ ನೀತಿಯನ್ನು ಜೋಕೆಯಿಂದಲಿ. ಮೂರ್ಖನ ಸಂಹರಿಸು. ಬೇಕಾಗು ಶಿವನಿಗೆ.

ಜಗದೇವ : ಅಯ್ಯೋ ಶಿವ ಶಿವ ಶಿವನಿಂದೆಯನ್ನು ನೋಡಿ ಸುಮ್ಮನೆ ಬಂದೆನಲ್ಲ, ನನ್ನಂಥ ಚಾಂಡಾಲರು ಭೂಮಿಯಲ್ಲಿರುವರೇ? ಆಗಲಿ. ಅಯ್ಯೋ ಶಿವದ್ರೋಹ ಮಾಡಿದ ನೀಚಾ, ಮದಾಂಧ ಬಿಜ್ಜಳ ತಡಿ. ನಿನ್ನ ಕಾಲ ಸಮೀಪಿಸಿತು. ಜನನಿ ಆ ದ್ರೋಹಿಯನ್ನು ಕೊಲ್ಲುವವರೆಗೂ ನಾನು ನಾಯಿಯೇ ಸರಿ. ನೆಲದ ಮೇಲೆ ಹಾಕಿದ ಅನ್ನವನ್ನು ತಿನ್ನುತ್ತೇನೆ.

ಮಲ್ಲೆಬೊಮ್ಮಯ್ಯ : ಎಲವೋ ಶಿವಭಕ್ತನಾದ ಸದ್ಭಕ್ತ ಶಿಖಾಮಣಿಯೇ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ ಮಾಡಿದವರ ಶಿರಶ್ಚೆಂಡಾಡುವ ವೈರಿಗಳ ಗಂಡನೆಂಬು ಬಿರುದಾವಳಿಯಂ ಸಾರುವ ಜಗದೇವನೇ ಇನ್ನೂ ಮನಿಯಲ್ಲಿ ಏನು ಮಾಡುತ್ತಿರುವಿ?

ಜಗದೇವ : ಬನ್ನಿರಿ ಬನ್ನಿರಿ ಮಲ್ಲೆಬೊಮ್ಮಯ್ಯನವರೇ ಬರುವರಾಗಿರಿ.

ಮಲ್ಲೆಬೊಮ್ಮಯ್ಯ : ಜಗದೇವರೇ ಇದೇನು ಭೂಮಿಯ ಮೇಲೆ ಬಿದ್ದಿರುವ ಅನ್ನವನ್ನು ಹೀಗೆ ಏಕೆ ತಿನ್ನುತ್ತೀರಿ.

ಜಗದೇವ : ಎಲವೋ ಬೊಮ್ಮಯ್ಯನವರೇ ಶಿವಭಕ್ತರ ವಧೆಯನ್ನು ಮಾಡಿದ ಬಿಜ್ಜಳನನ್ನು ಕೊಲ್ಲುವವರೆಗೂ ನಾಯಿಯಂತೆ ಅನ್ನವನ್ನು ಭುಂಜಿಸೆಂದು ನನ್ನ ತಾಯಿಯ ಅಪ್ಪಣೆಯಾಗಿದೆ. ಕೇಳಿದಿಯಾ ವೀರನೆ.

ಮಲ್ಲೆಬೊಮ್ಮಯ್ಯ : ಹೌದು ಸತ್ಯ ಸತ್ಯವು. ಆ ಭಂಡ ನೀಚಾತ್ಮ ಶಿವದ್ರೋಹಿ ಬಿಜ್ಜಳನನ್ನು ಕೊಲ್ಲುವವರೆಗೂ ನಾಯಿಯೇ ಸರಿ. ಇಂಥ ದ್ರೋಹವನ್ನು ಕೇಳಿದ ಕೂಡಲೇ ತತ್‌ಕ್ಷಣದಲ್ಲಿಯೇ ಯಮಪುರಿಗೆ ಕಳಿಸಬೇಕು. ಇಲ್ಲದಿದ್ದರೆ ಆಗಿಂದಾಗಲೇ ಪ್ರಾಣತ್ಯಾಗ ಮಾಡಿಕೊಳ್ಳಬೇಕು. ಇದು ವೀರಶೈವರ ಪದ್ಧತಿ. ಅಂದ ಬಳಿಕ ಆ ಶಿವದ್ರೋಹಿ ಚಾಂಡಾಲನನ್ನು

ಕೊಲ್ಲುವವರೆಗೆ ಚಾಂಡಾಲನೇ ಸರಿ. ಎಲೋ ಜಗದೇವ ತಾಯಿ ಅಪ್ಪಣೆಯಂತೆ ನಾನು ಸಹ ನಾಯಿಯಂತೆ ನೆಲದ ಮೇಲೆ ಬಿದ್ದ ಅನ್ನವನ್ನು ತಿನ್ನುತ್ತೇನೆ. ತಿಂದು ಆ ಅಧಮಾಧಮನನ್ನು ಕೊಲ್ಲುತ್ತೇನೆ.

ಜಗದೇವ : ಅವ್ವಾ ನೆಲದ ಮೇಲೆ ಹಾಕಿದ ಅನ್ನವನ್ನು ನಾಯಿಯಂತೆ ತಿಂದೆವು. ಇನ್ನು ತಡವೇಕೆ ಆ ಶಿವ ದ್ರೋಹ ಮಾಡಿದ ದುಷ್ಟ ಭ್ರಷ್ಟನನ್ನು ಸಂಹಾರ ಮಾಡುವದಕ್ಕೆ ಅಪ್ಪಣೆಯನ್ನು ದಯಾಪಾಲಿಸಿರಮ್ಮ ಮಾತಾ.

ಮಲ್ಲೆಬೊಮ್ಮಯ್ಯ: ಅಮ್ಮಾ ತಾಯಿಯವರೇ ಭಕ್ತ ದ್ರೋಹಿಯಾದ ಮದಾಂಧ ದುಷ್ಟ ಭ್ರಷ್ಟ ಕೆಟ್ಟ ಮೂರ್ಖನನ್ನು ಸೃಷ್ಟಿಯೋಳ್ ಇಟ್ಟುಕೊಳ್ಳಬಾರದು. ಜಾಗ್ರತಿ ಅಪ್ಪಣೆಯಂ ದಯಾಪಾಲಿಸಮ್ಮ. ಆ ಖಿಲ್ಲ ಜೈನನನ್ನು ತುಣುಕು ತುಣುಕು ನುಚ್ಚು ನುಚ್ಚು ಮಾಡಿ ಕಡಿಯದಿದ್ದರೆ ಷಟಸ್ಥಲಮೂರ್ತಿ ವೀರಾಧಿವೀರ ಚನ್ನಬಸವಣ್ಣನವರ ಹಗಲಿನ ಪಂಜಿನವರಂತೆಂದು ಶ್ರೇಷ್ಠನಾಮದಿಂದ ಮೆರೆಯಬೇಕೆ? ಹೂಂ ಜಾಗ್ರತಿ ಅಪ್ಪಣೆಯಂ ಕೊಡು ಕೊಡಮ್ಮ ಮಾತಾ.

ಸೋಮಲಾದೇವಿ : ಮಕ್ಕಳಿರಾ ನಿಮಗೆ ಜಯವಾಗಲಿ. ದಿವ್ಯತರವಾದಂತೆ ಶಿವಭಕ್ತಿ ವಹಿಸಿದಂಥ ಶಿವಭಕ್ತರಿಗೆ ಎದುರಾಗುವರಾರು? ತಡಮಾಡದೆ ದುರುಳ ಬಿಜ್ಜಳನ ಶಿರಹರಿದು ಹರುಷದಿಂದ ಬರುವರಾಗಿರಿ ನಡಿಯಿರಿ.

ಮಲ್ಲೆಬೊಮ್ಮಯ್ಯ : ಜಗದೇವನೇ ಇನ್ನು ತಡವೇಕೆ ಶಿವಶರಣರಾದ ಹರಳಯ್ಯ ಮಧುವಯ್ಯನವರನ್ನು ನಾಶಗೊಳಿಸಿದ ಆ ಅಧಮಾಧಮ ನರಾಧಮ ನೀಚನನ್ನು ಕೋಲಾಹಲ ಧ್ವನಿಯಿಂದ ಅಲ್ಲಲ್ಲಿಗೆ ಕೂಗುತ್ತಾ, ಖಿಲ್ಲ ನೀಚನಾದ ಬಿಜ್ಜಳನೆಂಬ ರಾಕ್ಷಸನನ್ನು ಈ ಕ್ಷಣದಲ್ಲಿಯೇ ಇಕ್ಷುವನ್ನು ಕಡಿಯುವಂತೆ ತುಂಡು ತುಂಡು ಬೊಟ್ಟು ಬಟ್ಟಿಗೆ ಸಿಟ್ಟಿಲಿಂ ಕುಟ್ಟಿಕುಟ್ಟಿ ಶಿರವಂ ಹಿಟ್ಟು ಹಿಟ್ಟು ಮಾಡಿ ಕೆಟ್ಟ ಮಲಿನವಾದ ಜಾಗದಲ್ಲಿ ಭ್ರಷ್ಟನ ಕೆಡಹಿ, ವೀರ ಬೊಬ್ಬೆ ಕ್ಯಾಕೆಯಂ ಝೇಂಕರಿಸುತ್ತ ಮೆರೆಯುತ್ತ ಭಕ್ತರಿಗೆ ಹರುಷವನ್ನು ಬೀರುತ್ತಾ ಆ ಅಧಮನ ಕೆಟ್ಟ ದೇಹವನ್ನು ಕುಟ್ಟಿ ಕುಟ್ಟಿ ಮೆಟ್ಟಿ ಮೆಟ್ಟಿ ಯಮಪುರಿಗಟ್ಟಿ ಕರ್ಕಶವಾದ ಉಕ್ಕಿನ ಮಳಿಯನ್ನು ನಡುನೆತ್ತಿಯೋಳ್ ಜಡಿದು, ನಾಯಿ ನರಕದೋಳ್ ದಬ್ಬಿಸಿ, ಶ್ರೇಷ್ಠವಾದ ಗುದಿನೇಶ್ವರನ ಕರುಣದಿಂದ ಬರೋಣ ನಡೆಯಿರಿ.

ಬಿಜ್ಜಳನ ಅರಮನೆ

ಬಿಜ್ಜಳ : ಎಲವೋ ಸೇನಾಧೀಶನೇ ಮಹಾದ್ವಾರದ ಬಹಿರ್ಭಾಗದಲ್ಲಿ ಏನೋ ಅದ್ಭುತವಾದಂಥ ಭೀಕರ ಸ್ವರವು ಕೇಳಿ ಬರುತ್ತದೆ. ತಡವ್ಯಾಕೆ ಶತ್ರುಗಳು ಪ್ರಾಪ್ತವಾದಂತೆ ಕಂಡು ಬರುತ್ತದೆ. ಕಾರಣ ಆಲಸ್ಯ ಮಾಡದೆ ಸೈನ್ಯವನ್ನು ಸಿದ್ಧಪಡಿಸಿಕೊಂಡು ತೆರಳುವನಾಗು ತಿಳಿಯಿತೆ.

ಸೇನಾಧೀನಾ: ಜಗತ್ತನ್ನು ಥರಥರನೇ ನಡುಗಿಸುವಂಥ ಭೀಕರ ರೂಪನಾದ ಬಿಜ್ಜಳ ಮಹಾರಾಜನೇ ಕೇಳು. ರಾಕ್ಷಸರೇ ಇದುರಿಲ್ಲಂದ ಬಳಿಕ ಇಂಥ ಎಕಶ್ಚಿತ ನರಕುರಿಗಳ ಪಾಡೇನು? ಈ ಅದ್ಭುತ ವೀರ ಬೊಬ್ಬೆ, ಕ್ಯಾಕೆಯು ಆ ಅಧಮಾಧಮರಾದ ಕುಲಚಾಂಡಾಲರೆಂಬ ಹರಳಯ್ಯ ಮಧುವಯ್ಯ ಎಂಬುವ ಭಂಡರಿಗೆ ಮಾಡಿದ ಕೊಲೆಯನ್ನು ಕೇಳಿ ಆ ನೀಚರಾದ ಜಗದೇವ ಮಲ್ಲೆಬೊಮ್ಮರೆಂಬೋ ಅಧಮಾಧಮರು ಗಾರ್ಧಪರಂತೆ ಒದರುತ್ತಾ ಬರುವರು. ತಡವ್ಯಾಕೆ ವೀಳ್ಯವನ್ನು ಕೊಡು ಕೊಡು. ಖಡು ಮೂರ್ಖರು ಬೊಗಳುವ ಬಾಯಿಯ ಮೇಲೆ ಚಪ್ಪರಿಸಿ ವಪ್ಪದಿಂ ಹೆಡಮುರಿಗೆಯನ್ನು ಬಿಗಿದು ತರುತ್ತೇನೆ. ಅಪ್ಪಣೆಯಂ ಕೊಡು.

ಬಿಜ್ಜಳ : ಬಾಪ್ಪುರೇ ಶಹಬಾಶ್ ಸೇನಾಧೀಶನೇ ಆ ಅಧಮಾಧಮರೆಂಬ ಜಗದೇವ ಮಲ್ಲೆಬೊಮ್ಮಯ್ಯರನ್ನು ಸಂಹರಿಸಿ ಬರುವಂತವನಾಗು, ತೀವ್ರ ಹೋಗು.

ಸೇನಾಧೀಶಾ ಪದ :

ಯಾರೆಲೋ ಖೂಳನೇ ನೀನು ಘೋರ ಸ್ವರದಿಂದಲಿ ।
ಬರುವೆ ಹಾರಿಸುವೆ ನಿನ್ನನ್ನು ಯಮಪುರಿಗೆ ॥ ೧ ॥

ಸೇನಾಧೀಶಾ: ಎಲೋ ಮೂಢಾತ್ಮನೇ ಉಬ್ಬಿಕೊಬ್ಬಿದ ಹೆಬ್ಬುಲಿಯಂತೆ ಆರ್ಭಟ ಮಾಡುತ್ತಾ ಉಬ್ಬೇರಿ ಅಬ್ಬರಿಸಿ ಮಬ್ಬಿನಿಂದ ಬರುವಿಯಾ. ಮಬ್ಬಿನ ಮದಾಂಧಾ ವ್ಯರ್ಥ ಸಾಯಬೇಡ. ನೀನು ಯಾವ ಜಾತಿಯವನು? ನಿನ್ನ ಹೆಸರೇನು? ನನ್ನಂಥ ವೀರಾಧಿವೀರನ ಸಮ್ಮುಖದೋಳ್ನಿಂತು ಸಮರಗೈಯುವಿಯೋ ಅಧಮಾ ಒಳ್ಳೊಳ್ಳೆ ದೇವ ದಾನವರು ನನ್ನ ಭೀಕರಕ್ಕೆ ನಿಲ್ಲದೆ ಪಲಾಯಾನರಾಗುತ್ತಾರಂದ ಬಳಿಕ ನೀನು ಬಂದಿರುವದು ಹೇಗಾಗುವದೆಂದರೆ ಹುಲಿರಾಜನ ಬಾಯಿಗೆ ಎರಳೆ ಸಿಕ್ಕಂತಾಗಿರುವದು. ಹುಚ್ಚು ಹಿಡಿದಿರುವನಂತೆ ಎಚ್ಚರ ತಪ್ಪಿ ಮಾತಾಡಬೇಡ. ಈ ಶರಾಘಾತದಿಂದ ನಿನ್ನ ಶರೀರವನ್ನು ಕೊಚ್ಚುವೆ, ಚುಚ್ಚುವೆ. ನಿನ್ನ ಕಿಚ್ಚುಗಣ್ಣಿನ ಶಿವನು ಬಂದರೆ ಅವನ ತ್ರಿಶೂಲಮಂ ಮುರಿದು, ಅಗ್ನಿನೇತ್ರವನ್ನಾರಿಸಿ ಹುಚ್ಚು ಹಿಡಿಸಿ ಸ್ಮಶಾನಕ್ಕೆ

ದೂಡಿಸುವೆ. ಮೂರ್ಖ ನಿನ್ನ ಆಸ್ಥಾನಮಂ ಕುರಿತು ತಾಯಿಯನ್ನು ಹೊಂದಿಕೊಂಡಿರುವ ಮೂಢಾ ವ್ಯರ್ಥ ಜೀವವನ್ನು ಕಳೆದುಕೊಳ್ಳಬೇಡ ಹೋಗು.

ಮಲ್ಲೆಬೊಮ್ಮಯ್ಯ : ಎಲೋ ಖೂಳನಾದ ಬಿಜ್ಜಳನ ಆಳಾದ ಸೇನಾಧೀಶನೆ ನೀನು ವೀರಾಧಿವೀರನಾದರೆ, ಯುದ್ಧಕ್ಕೆ ಸರಿಯಾಗಿ ನಿಲ್ಲು. ನಿನ್ನ ಹಲ್ಲುಗಳನ್ನು ಒಂದು ಇಲ್ಲದಂತೆ ಕಿತ್ತು ಬಿಡುತ್ತೇನೆ. ಖಿಲ್ಲಾ ನಿನ್ನಷ್ಟಕ್ಕೆ ನೀನೇ ಯಾತಕ್ಕೆ ಪ್ರತಾಪವನ್ನು ಮಾಡಿಕೊಳ್ಳುತ್ತಿಯೋ ಹುಲ್ಲು ಜೈನನೇ. ಇಕೋ ಎನ್ನ ಪ್ರತಾಪದ ಆಯುಧಗಳನ್ನು ನೋಡಿಕೋ. ಖಡ್ಗ ಕಠಾರಿ ಡಮರುಗ ಢಕ್ಕೆ ತ್ರಿಶೂಲ ಮುಂತಾದ ಬತ್ತಿಸಾಯುಧಗಳನ್ನು ನಿನ್ನ ಸರ್ವಾಂಗದಲ್ಲಿ ಚುಚ್ಚಿ ನಿನ್ನ ಅಧಮ ಶರೀರವನ್ನು ಛೇದಿಸಿ ಪಶುಪತಿ ಪಟ್ಟದಾನೆ ಬೊಮ್ಮಯ್ಯನೆಂಬೋ ಶ್ರೇಷ್ಠನಾಮದಿಂದ ಮೆರೆಯುತ್ತೇನೆ. ಭ್ರಷ್ಟಾ ಯಾತಕ್ಕೆ ವಟಾಸುವಿ. ನಿನ್ನಿಂದೇನಾಗುವದು? ನಿನ್ನ ದೊರೆಯಾದ ಅಧಮನನ್ನು ಕರೆದುಕೊಂಡು ಬಂದು ಯುದ್ಧಕ್ಕೆ ನಿಲ್ಲು. ನಿಲ್ಲಲೈ ಶಿವದ್ರೋಹಿಯೇ.

ಸೇನಾಧೀನ : ಎಲವೋ ದುರುಳಾ ಸಿಡಿಲಿನಂದದಿ ಅರ್ಭಟ ಮಾಡಿಕೊಂಡು ಬಿಂಕದಿ ಹೂಂಕರಿಸಿ ಭೋಂಕನೆ ಬರುವಿಯಾ? ಮೃಢ ಭಕ್ತನೆಂದು ಡುಡುಕು ಮಾಡುತ್ತ ಕಡುಕೋಪದಿಂದ ಬರುವ ಕಡು ಮೂರ್ಖನೇ, ನಿನ್ನ ಜಡತನವು ನನ್ನ ದೃಢತರವಾದ ಕಠಾರಿಗೆ ಆಹುತಿಯಾಗಿರುವದು. ಬೆಡಗಿನ ನುಡಿಗಳನ್ನಾಡಿ ಸಡಗರ ಹೊಂದಬೇಡ. ಎನ್ನ ಕೂರ್ಗಣೆಗಳೆಂಬೋ ಬಾಣವನ್ನು ಪ್ರಯೋಗಿಸಿ ನಿನ್ನ ಹಸುವನ್ನು ನೀಗಿಸುವೆ. ಪಶುವೇ ನಿನ್ನ ಸೊಕ್ಕಿದ ದೇಹವೆಂಬೋ ಆನೆಗೆ ಕಂಠೀರವನೆಂದು ತಿಳಿ. ಎಲೋ ಮೂರ್ಖ ಬಿಡು ನಿನ್ನ ತರ್ಕ.

ಮಲ್ಲೆಬೊಮ್ಮಯ್ಯ : ಎಲವೋ ಮೂಢರ ಶಿಖಾಮಣಿಯೇ ಹರಭಕ್ತರನ್ನು ತಡಹಿ ಪೊಡವಿಯೋಳ್ ಬದುಕುವರಾರು? ಸನ್ನುತವಾದ ಶರವೃಷ್ಟಿಯನ್ನು ಬಿಟ್ಟಿರುವೆನು. ನೋಡು ನೋಡು ಯಾತಕ್ಕೆ ನಿಂತಿರುವಿಯೋ? ಅಧಮಾ ತಡವೇಕೆ ಯುದ್ಧಕ್ಕೆ ನಿಲ್ಲೋ ಖಿಲ್ಲಾ.

ಸೇನಾಧೀಶ : ಎಲೋ ಮೂರ್ಖ ನನ್ನ ಸೈನ್ಯವನ್ನು ಸಂಹರಿಸಿದೆನೆಂದು ಆತುರವನ್ನು ಹೊಂದಬೇಡ. ಮದಾಂಧಾ ಇಂದಿಗೆ ನಿನ್ನ ಹಣೆಬರಹವನ್ನು ಅಳಿಕಿಸಿ ಅಂತಕನ ನಗರಿಗೆ ಕಳಿಸದಿದ್ದರೆ, ಭಾಪ್ಪರೇ ಚಂಡ ಪ್ರಚಂಡ ಮಾರ್ತಂಡನಂತೆ ಮೆರೆಯುವ ಬಿಜ್ಜಳನ ಸೇನಾಧೀಶನೆಂಬ

ನಾಮಾಂಕಿತವೇಕೆ. ವ್ಯರ್ಥವಾಗಿ ಎನ್ನ ಖಡ್ಗಕ್ಕೆ ಆಹುತಿ ಹೊಂದಬೇಡ. ಬಿಡೌಜಾದಿಗಳು ಎನ್ನೊಡನೆ ಯುದ್ಧವನ್ನು ಮಾಡದೇ·ಮೃಡನೆಂಬೋ ಅಧಮನನ್ನು ಬೆನ್ನು ಬಿದ್ದಿರುವರು. ನಿನ್ನಂಥ ಘೋರನ ಪಾಡೇನು? ತಡಮಾಡದೆ ಯುದ್ಧಕ್ಕೆ ಸಿದ್ಧನಾಗೆಲ್ಯೆ ಬುದ್ಧಿಹೀನನೇ.

ಮಲ್ಲೆಬೊಮ್ಮ: ಎಲವೋ ನೀಚ ಜಾತಿಯವನೇ ಭೂತ ಬಡಿದವರಂತೆ ಯಾತಕ್ಕೆ ಬೊಗಳುವಿ. ಆತುರದಿಂದ ಯುದ್ಧಕ್ಕೆ ಸನ್ನದ್ಧನಾಗು. ಎನ್ನ ಯುದ್ಧ ಪ್ರಸಂಗವನ್ನು ನೋಡು. ನಿನ್ನ ಜನನಿ ಜನಕರಿಗೆ ಅತ್ಯಧಿಕವಾದ ದುಃಖವನ್ನುಗೊಳಿಸಿ ಮಂಡಿತವಾದ ನಿನ್ನ ಹೆಂಡತಿಯ ಬಳಿಯನ್ನು ಒಡಿಸಿ ಫಣಿಯಲ್ಲಿ ಧರಿಸಿರುವ ಕುಂಕುಮವನ್ನು ಕಂಡು ಕಾಣದಂತೆ ಮಾಡಿ ಹಿಂಡು ಬಳಗವು ಗೋಳಾಡುವಂತೆ ಎಸಗುವೆನು, ನಿಲ್ಲು ನಿಲ್ಲು ಸಮರಕ್ಕೆ ಮಂದಮತಿಯೇ.

(ಯುದ್ಧದ ಸೀನು)

(ಮಲ್ಲೆಬೊಮ್ಮಯ್ಯ ಹಾಗೂ ಸೇನಾಧೀಶನ ಯುದ್ಧ, ಸೇನಾಧೀಶ ಬೀಳುವನು)

ಮಲ್ಲೆಬೊಮ್ಮಯ್ಯ : ಎಲೋ ಜಗದೇವನೇ ಎಚ್ಚರವಿಲ್ಲದೆ ಕಾಳಗವಂ ಮಾಡಿ ಸರಳುಗಳು ಬಿಚ್ಚಿ ಮೈವುರ್ಚಿನುಚ್ಚು ನೂರ್ಕಡಿಯಾಗಿ ಕಾಡ್ಗಿಚ್ಚಿನೋಳ್ ಬಿದ್ದು ಸತ್ತ ಪತಂಗದಂತಿರುವ ಈ ನರಗುರಿಗಳು ಬಿದ್ದಿರುವ ಆಶ್ಚರ್ಯವನ್ನು ನೋಡಿದಿಯಾ. ಆದಕಾರಣ ಆ ದೃಷ್ಟನಾದ ಬಿಜ್ಜಳನನ್ನು ನಿಟ್ಟೆಲವು ಮುರಿದ ಅಟ್ಟಹಾಸದಿಂದ ಬರೋಣ. ಅವನ ಅರಮನಿಯನ್ನು ತಟ್ಟನೇ ಹೊಕ್ಕು ಅವನನ್ನು ನಾಶ ಪಡಿಸೋಣ, ನಡಿ ನಡಿ.

ಜಗದೇವನ ಪದ :

ಶಿವಭಕ್ತರ ವಧೆಯನ್ನು ತವದಿಗ್ಯೆಸಿದ ।
ಭವಮೂರ್ಖ ನಿನ್ನನ್ನು ಬೇಗ ಜವನಪುರಿಗೆ ಕಳುಹಿ ।
ಭವಹರನ ಒಲಿಸುವೆ ಅವನಿಯೋಳ್ ಸರಿಯಾಗಿ ಮೆರೆಯುವೆ ॥ ೧ ॥

ಜಗದೇವ : ಎಲವೋ ಕಳ್ಳನಾಗಿ ಹರಭಕ್ತರ ವಧೆಯನ್ನು ಮಾಡಿದ ದುರುಳ ಬಿಜ್ಜಳ ಎಲ್ಲಿರುವೆ ಬಾ, ಬಾ, ಬೈಲಿಗೆ ಅಧಮಾ. ಯಾತಕ್ಕೆ ಅಡಗಿರುವಿಯೋ ಸ್ವಾನನೇ. ಹೆಂಗಸರು ಡೊಕ್ಕಿಕೊಂಡು ಕೂತಂತೆ ಎಲ್ಲಿ ಕೂತಿರುವಿ. ಗಂಡ ಬಂದಾನೆಂಬುವದು ಗೊತ್ತಿವೆ. ರಣ ಹೇಡಿಯೇ ಎಲೋ ಭಂಡರ ಶಿಖಾಮಣಿಯಾದ ಚಾಂಡಾಲನೆ ಪುಂಡರೀಕಾಕ್ಷನ ಗಂಡನಾದ

ಮಾರಾರಿಯ ಭಕ್ತರಾದ ಹರಳಯ್ಯ ಮಧುವಯ್ಯ ಎಂಬ ನಿರಪರಾಧಿಗಳನ್ನು ಹಾಗೆ ಕೊಲ್ಲಿದಿಯೋ ಭಂಡಾ. ಇಂಥಾ ಶಿವಕುಲ ಶಿಖಾಮಣಿಗಳನ್ನು ಹ್ಯಾಗೆ ವಧಿಸಿದಿಯೋ ನೀಚಾ. ಶಿವಭಕ್ತರಿಗೆ ಸರಿ ಯಾರಿರುವರು? ಮೂರ್ಖ ಅವರು ಶಿವಲೋಕವನ್ನು ಹೊಂದಿದರು. ಎಲೋ ನೀಚಾ ನಿನ್ನ ಬರುವಿಕೆಯನ್ನು ಯಮಭಟರು ಆಪೇಕ್ಷಿಸುವರು. ಜಾಗ್ರತಿ ಸಮರಕ್ಕೆ ನಿಲ್ಲೋ ಖುಲ್ಲಾ.

ಬಿಜ್ಜಳ ಪದ :

ಖರತಳ ಖಡ್ಗವ ಭರದಿಂ ಝಳಪಿಸಿ ಬರುವ ಶೂರರೇ ।
ಬರ್‍ರಿ ತರುವೆ ದೊರೆಯಾದ ಎನಗೆ ಸರಿಯಾದರಿ ।
ನ್ನುಂಟೆ ಅರಸರ ಕಾಣೆನು ನಾನು ॥ ೧ ॥

ಬಿಜ್ಜಳ : ಎಲೋ ಭ್ರಷ್ಟರಾದ ಶಿವಭಕ್ತರೇ ಕರದಲ್ಲಿ ಕಠಾರಿಯನ್ನು ಝಳಪಿಸುತ್ತ ಅರ್ಭಟಿಸುತ್ತಾ ಅಟ್ಟಹಾಸದಿ ಬರುವಿರೋ ಮೂರ್ಖರೇ. ಈ ಸೃಷ್ಟಿಯೋಳ್ ನಿಮ್ಮಂಥ ಅಧಮ ಘಟವನ್ನು ಕೆಡಹಿ ಪಿಶಾಚಿ ಮಂಡಲಕ್ಕೆ ಔತಣವನ್ನು ಮಾಡಿಸದಿದ್ದರೆ ಭಪ್ಪರೇ ವೀರಾಧಿವೀರ ಜಗದ್ಭೀಕರ ಬಿಜ್ಜಳ ಮಹಾರಾಜನೆಂದು ನಾಮಾಂಕಿತಕ್ಕೆ ಅಧಮರೇ ನಿಮ್ಮ ಅಧಮಾಧಮರಾದ ಹರಳಯ್ಯ ಮಧುವಯ್ಯರೆಂಬುವರ ಕೊಲೆಯನ್ನು ತೀರಿಸಿಕೊಳ್ಳುವಂಥ ಅಧಮ ಭ್ರಷ್ಟರು ನೀವೇಯೋ! ಅಧಮಾ. ಚಾಂಡಾಲರೇ. ಅಯ್ಯೋ ಮಾನ್ಯ ಮಾನ್ಯ ಪರಾಕ್ರಮಶಾಲಿಗಳಾದ ದಿಕ್ಪತಿಗಳು ಎನ್ನ ಪ್ರತಾಪಕ್ಕೆ ಬೆದರಿ ಅಳುತಿರ್ಪರು. ಮೂರ್ಖರೇ ಅಂದ ಬಳಿಕ ನಿಮ್ಮಂಥ ಎಕಶ್ಚಿತ ಹುಲ್ಲು ಜೀವಿಗಳ ಪಾಡೇನು? ಮೂಢರೇ ಶೂರರಾದರೆ ಸಮರದ ಕಾರ್ಯದಲ್ಲಿ ಶೌರ್ಯವನ್ನು ತೋರಿಸಿರಿ. ವ್ಯರ್ಥ ಪೌರುಷ ವೇಕೋ, ನರಾಧಮರೇ.

ಜಗದೇವ : ಎಲೋ ಅಧಮ. ಪ್ರಾಣದ ಭಯದಿಂದ ನುಡಿದರೆ ಕಡುಶಾಲಿಗಳಾದ ಮೃಢನ ಭಕ್ತರು ಬೆದರಬಲ್ಲರೇ? ಕೆಟ್ಟ ಚಾಂಡಾಲ ಗುಹೆಯೊಳಗಿದ್ದ ಕೇಸರಿಯನ್ನು ಕಾಡಾನೆಯು ಸೊಕ್ಕಿನಿಂದ ಬಂದು ಆಹಾರಕ್ಕೆ ಇದುರಾಗಿ ಜೀವಿಸುವದೇ? ಇದರಂತೆ ಈ ಕಲ್ಯಾಣಕ್ಕೆ ದೊರೆಯಾಗಿ ನಿನ್ನ ಬಲಾಢ್ಯತನವನ್ನು ನಮ್ಮಲ್ಲಿ ತೋರಿಸಿದರೆ, ನಿಲ್ಲುವದೇ? ಕಳ್ಳನೇ ನಿನ್ನ ಕೂಳ ದೇಹವನ್ನು ಛಿದ್ರ ಛಿದ್ರ ಮಾಡಿ ಕಡಿದು ನನ್ನ ಪಂಥವನ್ನು ನೆರವೇರಿಸುವೆನು. ಭಯಂಕರವಾದ ಬಲಶಾಲಿಯೆನಿಸಿ ಪರತರ

ಕೀರ್ತಿಯನ್ನು ರಸನಿಯೋಳ್ ಹೊಂದಿ ಅಸಮಾಕ್ಷನನ್ನೊಲಿಸುವೆನು. ಮೂರ್ಖ ಇದು ನಿಜವೆಂದು ತಿಳಿಯಲ್ಕೈ ರಣಹೇಡಿಯೇ.

ಬಿಜ್ಜಳ : ಎಲೋ ಮೂಢರ ಶಿಖಾಮಣಿಯಾದ ಖೋಡಿ ಜಗದೇವನೆ ಗರ್ವಿಸಿ ಆರ್ಭಟಿಸಿ ಕೊಲ್ಲುವೆನೆಂದು ನಿಂತಿರುವಿಯೋ? ಅಧಮಾ ನನ್ನಂಥ ಪರಾಕ್ರಮನನ್ನು ಕೊಲ್ಲುವದು ನಿನ್ನಂಥ ಹುಲ್ಲು ಜೀವಿಯಿಂದ ಆಗುವದೇ ಖಿಲ್ಲಾ? ನಿನ್ನ ಹಲ್ಲನ್ನು ಇಲ್ಲದಂತೆ ಚಲ್ಲಾಡಿಸುವೆ ಮೂರ್ಖ. ಈ ಭುಜಬಲ ಪರಾಕ್ರಮ ನಿರ್ಜರರನ್ನು ಯುದ್ಧದಲ್ಲಿ ಬರ್ಜರಿ ಮಾಡುವ ಬಿಜ್ಜಳನ ಕಂಡು ಬೆದರುತ್ತಿರಲು ನಿಮ್ಮಂಥ ಬಲಹೀನರು ಜೈಸುವದುಂಟೆ? ಪರಮ ಪಾತಕಾ ಬಸವನ ಮನಿಯ ಆಸನ ಘಾತಕಾ.

ಜಗದೇವ : ಎಲೋ ಖಳನೇ ಗರ್ವದಿಂದೊಡಗೂಡಿ ಆಣಕದ ಮಾತುಗಳನ್ನಾಡುತ ಹೋದರೆ ಪ್ರಯೋಜನವೇನು? ಅಸಮಾಕ್ಷ ರೂಪನಾದ ಬಸವೇಶ್ವರನಿಗೂ ನಮಗೂ ಭೇದವೆಂದು ತಿಳಿದಿರುವಿಯೇನು. ಬಸವ ಪ್ರಸಾದವು ನಿಮ್ಮಂಥ ಕೆಟ್ಟ ಜಾತಿಯ ಭ್ರಷ್ಟರಿಗೆ ಸಿಗುವದೇ? ಶಿವಭಕ್ತರ ನಾಯಿಕುನ್ನಿಯು ತಿಂದು ಬಿಟ್ಟ ಅನ್ನವು ನಿಮಗೆ ಸಿಗುವದು ದುರ್ಲಭವು. ಆ ಪ್ರಸಾದದ ಗೊಡವೆ ನಿಮಗ್ಯಾತಕ್ಕೆ? ವಿಸ್ತಾರವಾದ ಶಸ್ತ್ರದಿಂದ ನಿನ್ನ ಮಸ್ತಕವನ್ನು ಪ್ರಶಸ್ತವಾಗಿ ಕತ್ತರಿಸುವೆನು. ಸತ್ಯವಾಗಿ ಮೃತ್ಯುವಿನ ಬಾಯಿಗೆ ತುತ್ತಾಗಬೇಡ ತಿಳಿಯಲೇ ಮೂರ್ಖ ಬಿಡು ನಿನ್ನ ತರ್ಕಾ.

ಬಿಜ್ಜಳ : ಎಲೋ ಕ್ಷಣಕ್ಕೊಮ್ಮೆ ಅಣಕದ ಮಾತುಗಳನ್ನಾಡಿದರೆ ಪ್ರಯೋಜನವೇನು? ಇಕೋ ಘಟ್ಟಿಗನಾದರೆ ತಾಳಿಕೋ. ಮುಷ್ಟಿಯಿಂದ ಗುದ್ದಿ ಸಂಹರಿಸುತ್ತೇನೆ. ನಿನ್ನಲ್ಲಿದ್ದ ಶೌರ್ಯವನ್ನು ಪ್ರಸಿದ್ಧವಾಗಿ ತೋರು. ನಾಚಿಕೆ ಇಲ್ಲದೆ ವಾಚಿಸಬೇಡಾ. ಇದು ಶೂರರ ಪದ್ಧತಿಯಲ್ಲ. ನಿನ್ನನ್ನು ಕೊಂದರೆ ಪರಿರಾಜರು ನನಗೆ ಸಹಾಯ ಕೊಟ್ಟಾರೆಂದು ಬಿಟ್ಟಿರುವೆ. ವ್ಯರ್ಥ ಸಾಂಯುಬೇಡ. ನಿನಗೆ ಜೀವದಾನ ಕೊಡುತ್ತೇನೆ. ಹೋಗುವಂಥವನಾಗೋ ಮೂರ್ಖ.

ಜಗದೇವ : ಎಲೋ ಮದಾಂಧ ದುರುಳ ಬಿಜ್ಜಳನೇ ವೀರಶೈವ ಧರ್ಮವು ನಿನ್ನಂಥ ಅಧಮ ಪ್ರಾಣಿಗೆ ಗೋಚರವಾಗುವದೇ? ಶ್ರೀ ಗುರುವಿನ ಪಾದರೇಣುವಿನಿಂದ ಉದಯವಾದ ಭಸಿತವು ಸಿಗುವದು ಅಸಾಧ್ಯವು. ಈ ಭಸ್ಮವನ್ನು ಧಾರಣ ಮಾಡಿದ ಕೂಡಲೇ ಅನಂತ ಜನ್ಮಂಗಳಲ್ಲಿ ಮಾಡಲ್ಪಟ್ಟ ದೋಷಾದಿಗಳು ನಷ್ಟವಾಗಿ ಶ್ರೇಷ್ಠ ಆಯುಷ್ಯವರ್ಧನಾಗುವನು. ಎಲೋ ಮೂಢಾ ತ್ರಿಪುರ ದಹನ

ಕಾಲದಲ್ಲಿ ಶಿವನ ನೇತ್ರದಿಂದ ಉದ್ಭವಿಸಿದ ರುದ್ರಾಕ್ಷಿಗಳನ್ನು ಧರಿಸಿದವರಿಗೆ ಅನಂತ ಜನ್ಮಗಳಲ್ಲಿ ಮಾಡಿದ ದೋಷವು ಹೋಗಿ ಸಕಲ ಸಾಮ್ರಾಜ್ಯದಿಂದೊಡಕೂಡಿ ಅಂತ್ಯದಲ್ಲಿ ಮುಕ್ತಿಯನ್ನು ಗೈಯುವರು ತಿಳಿಯಿತೇ. ಎಲೋ ಕರ್ಮವಾದಿಯೇ ವೀರಶೈವ ಮಹತ್ವವನ್ನು ತೋರಿಸುತ್ತೇನೆ. ಯುದ್ಧಕ್ಕೆ ಸಿದ್ಧನಾಗೋ ಬುದ್ಧಿಹೀನನೇ.

(ರಣಾಂಗಣ)

(ಜಗದೇವ ಹಾಗೂ ಬಿಜ್ಜಳರ ಯುದ್ಧ. ಬಿಜ್ಜಳ ಬೀಳುವನು)

ಜಗದೇವ : ಆಹಾ. ಕಾರ್ಯವು ನೆರವೇರಿತು. ಅಪರಾಧಕ್ಕೆ ಒಳಗಾದೆ. ಬಸವೇಶ್ವರನು ಶಿವಭಕ್ತರ ವಧೆಯನ್ನು ಮಾಡಿದಂಥ ಪಾಪಾತ್ಮರನ್ನು ಸಂಹಾರ ಮಾಡು ಎಂಬುದಾಗಿ ವೀರ ತಾಂಬೂಲವನ್ನುಕೊಟ್ಟು ಆಶೀರ್ವದಿಸಿದಂತೆ ನಾನು ನಡೆಯಲಿಲ್ಲ. ಶಿವಭಕ್ತರ ಕಣ್ಣು ಮೀಟಿಸುವದನ್ನು ಕಣ್ಣೆತ್ತಿ ಕಂಡು ಪ್ರಸಾದದಾಪೇಕ್ಷೆಯಿಂದ ಮನೆಗೆ ಬಂದೆ. ತತ್‌ಕ್ಷಣದಲ್ಲಿ ಆ ಶಿವ ದ್ರೋಹಿಯನ್ನು ಕೊಲ್ಲದೆ ಅಪರಾಧಿಯಾದೆ. ಈ ಅಪರಾಧವು ವಿಮೋಚನವಾಗಬೇಕಾದರೆ ಪ್ರಾಣ ತ್ಯಾಗವಲ್ಲದೆ ಬೇರೆ ಪ್ರಾಯಶ್ಚಿತವುಂಟೆ? ಆ ಕಾರಣ ಶಿವನ ಚರಣಾರವಿಂದಕ್ಕೆ ನನ್ನ ಶಿರಸ್ಸನ್ನು ಅರ್ಪಣ ಮಾಡುತ್ತೇನೆ. ಶಂಭೋ ಹರಹರ ಮಹಾದೇವ.

(ಶಿವ ಪ್ರತ್ಯಕ್ಷ ಸೀನು)

ಶಿವ : ಜಗದೇವ ನಿನ್ನ ದಿವ್ಯತರವಾದಂಥ ವೀರ ವ್ರತಕ್ಕೆ ನಾನು ಮೆಚ್ಚಿದೆ. ನಿನಗೆ ಗಣ ಪದವಿಯನ್ನು ಕೊಡುತ್ತೇನೆ. ಈ ಪುಷ್ಪಕ ವಿಮಾನದಲ್ಲಿ ಕೂಡುವಂಥವನಾಗು, ಕೈಲಾಸಕ್ಕೆ ಹೋಗುವಾ.

ಜಗದೇವ : ಭೋ ಶಂಭೋ ಈ ಬಿಜ್ಜಳ ಮೊದಲಾದವರನ್ನು ಎಬ್ಬಿಸು, ಕೈಲಾಸಕ್ಕೆ ಹೋಗುವಾ.

ಶಿವ : ಎಲೋ ಬಿಜ್ಜಳ ಮೊದಲಾದವರೇ ಏಳಿರಿ. ಕೈಲಾಸಕ್ಕೆ ಹೋಗುವಾ. ಉಘೇ ಉಘೇ ಶಿವಾಧೋಂ ಶಿವ ಧೋಂ ಶಿವ ಧೋಂ.

(ಮಂಗಲ ಸ್ತುತಿ)

ದೇವ ದೇವ ದೇವ ನಿತ್ಯ ನಿಮ್ಮ ಭಜನೆ । ಪಾಡ್ವೆವು।
ಕಾಯೋ ಎನ್ನ ಕರುಣದಿಂದ ಶರಣು ಮಾಳ್ಪೆವು ॥ ೧ ॥

ಗುರುಗಳನ್ನು ಹಿರಿಯರನ್ನು ಕಂಡು ಪಾದಕ್ಕೆ ಎರಗುವಂಥ
ಮನವ ಕೊಡಲೋ ಮೂಢ ಮನುಜರಿಗೆ ನೀ ಮೂಢ ಮನುಜರಿಗೆ ॥ ೨ ॥

ನಮಗೆ ವಿದ್ಯ ಬುದ್ಧಿ ಕೊಡುವಂಥ ಗುರುವಿಗೆ ಎರಗುವಂಥ
ಮನವ ಕೊಡಲೋ ಮಾರಹರನೇ ನೀ ಮಾರಹರನೇ ನೀ ॥ ೩ ॥

ಇಲ್ಲಿಗೆ ಶ್ರೀ ಬಸವೇಶ್ವರ ಚರಿತೆಯು ಸಂಪೂರ್ಣವಾದುದು. ಮಹಾನಿಯರೆ ಈ ಚರಿತ್ರೆಯನ್ನು ಅಲ್ಪಮತಿಯಾದ ಸೋಮಯ್ಯಾ ಧೂಪದ ಸಾಕಿನ್ ಗುಡ್ನೆಪ್ಪನಮಠ ಈತನು ಬರೆದಿದ್ದಾನೆ. ಹಿಂದೆ ಇದನ್ನು ಶಾಲಿವಾಹನ ಶಕೆ ೧೮೭೭ನೇ ಮನ್ಮಥ ನಾಮ ಸಂವತ್ಸರದ ಕಾರ್ತಿಕ ಶುದ್ಧ ಪ್ರತಿಪದದ ಸೋಮವಾರದಲ್ಲು ಬರೆದು ಮುಗಿದದ್ದು. ಮತ್ತು ಶ್ರೀ ಮನ್ನೃಪ ಶಾಲಿವಾಹನ ಶಕೆ ೧೯೨೦ನೇ ಬಹು ಧ್ಯಾನ ನಾಮ ಸಂವತ್ಸರದ ಕಾರ್ತಿಕ ಬಹುಳ ದಶಮಿ ಶನಿವಾರದಲ್ಲು ಸದ್ರಿ ಸೋಮಯ್ಯ ವೀರಯ್ಯ ಧೂಪದ ಗುಡ್ನೆಪ್ಪನ ಮಠ ಬರೆದಿದ್ದಾರೆ. ಇದರಲ್ಲಿ ಲೋಪ ದೋಷಗಳಿದ್ದರೆ, ಜ್ಞಾನಿಗಳು ತಿದ್ದಬಹುದು. ನನ್ನ ಕೋರಿಕೆ ಅಷ್ಟೆ.

♦♦♦

ಬಸವ ವಿಜಯ

(ದೊಡ್ಡಾಟ)

ಗಣಪತಿ ಸ್ತೋತ್ರ :

ಶ್ರೀ ಗೌರಿಸುತ ಭರದಿ ನಿಮ್ಮನು
ಸ್ಮರಿಸುವೆ ನಾನು ಕರುಣಿಸೆನ್ನನು ॥ಪಲ್ಲವಿ॥

ತಾಗಿ ಬಾಗಿ ಕೂಗಿ ನಿನ್ನಯ ರಾಗದಿಂ ನುತಿಪೆ
ಸಾಗಿ ಬಂದು ರಕ್ಷಿಸು
ಯೋಗ ವಂದಿತ ತ್ರಿಜಗ ಪೂಜ್ಯನೆ ॥ ೧ ॥

ಬುದ್ಧಿಯಿಲ್ಲದವನು ನಾನು ಸದ್ಭಕ್ತಿಯಲಿ
ಬಿದ್ದು ಬೇಡಿಕೊಂಬುವೆನು
ವಿದ್ಯೆ ಕೊಡು ಮುದ್ದುಮುಖನೆ
ದೋಷನಾಶನೆ ಕೂಸ ನಿನ್ನಯ ಆಶಿಸುವೆನು
ಕಾಶಿಗಿಂತ ಲೇಸಾಗಿರ್ಪ
ವಾಸ 'ದೇವನಗರ' ಈಶಮಲ್ಲಿನಾಥ ॥ ೨ ॥

ಪಾರ್ವತೀ ಸ್ತೋತ್ರ :

ಶ್ರೀ ಪಾರ್ವತಿಮಾತೆ ಪರಮಪ್ರಖ್ಯಾತೆ ನೀಪಾಲಿಸು ॥ಪಲ್ಲವಿ॥

ಉರಗಧರನರಾಣಿ ಕರುಣಸಾಗರಜಾಣಿ
ಗೀರ್ವಾಣಿ ಮೃದುಪಾಣಿ ನೀ ಕಾಯೆ ಶರ್ವಾಣಿ ॥ ೧ ॥

ಓಂಕಾರಿ ನಿಮ್ಮ ಪಾದ ಪಂಕಜಕೆರಗುವೆನಮ್ಮ
ಶಂಕರಿ ಪಾಲಿಸೆಮ್ಮ ವಿದ್ಯಾಂಕಿತ ಉಮೆ ॥ ೨ ॥

ಎಲ ಮಾಲೆಧರನ ಹಿತೆ, ಕೈಲಾಸಪತಿ ಪ್ರೀತೆ
ಬಾಲಗಣಪತಿ ಮಾತೆ ಮಲ್ಲಿಕಾರ್ಜುನ ಸತಿ ॥ ೩ ॥

"ಗಣಪತಿ ಪ್ರವೇಶ"

ಗಣಪತಿ : ಎಲೈ ! ಶೃಂಗಾರದಿಂದೊಪ್ಪುವ ಮಂಗಲತರ ಮಂಟಪದಲ್ಲಿ ಭೃಂಗರಹಿತ ಶಿವನಂಗಳದಲ್ಲಿ ಭೃಂಗಯ್ಯನಂತೆ ನಾಟ್ಯವಾಡುತ್ತ ತಿಂಗಳಧರ ಶಿವನಂಗನೆಯಂ ಭಜಿಸುತ್ತ ಸಭಾಂಗಣದ ರಂಗಭೂಮಿಯಲ್ಲಿ ನಮ್ಮ ನಾಮಗಳನ್ನು ಕೇಳುವ ವೀರ ನೀನಾರು? ನಿನ್ನ ನಿಜನಾಮ ಸಾರು.'

ಗಣಪತಿ : ಎಲೈ ! ಸಾರಥಿ, ನಾನು ದಾರೆಂದರೆ-ಎನ್ನಿಷ್ಟದೇವತೆಯಾದ ಪಾರ್ವತಿ ದೇವಿಯ ಮೈಬೆವರಿನಿಂದ ಹುಟ್ಟಿದವನಾಗಿ, ಥಟ್ಟನೆ ಕೊಟ್ಟ ಅಪ್ಪಣೆಯಂತೆ, ಇಷ್ಟ ಮಾತ್ರದಿ ಬಾಗಿಲವನ್ನು ನೆಟ್ಟನೆ ಕಾಯುತ್ತಿರುವ ಸಮಯದೊಳು, ದುಷ್ಟ ಗಜಾಸುರನೊಡನೆ ದುಂದಕಾಳಗವಂ ಮಾಡಿ ಸೃಷ್ಟಿಗೆ ಕೆಡುಹಿ, ಕಟುಗ್ರಹದಲ್ಲಿ ಜಯದೊಡನೆ ಬಂದು ಅಷ್ಟಮೂರ್ತಿಯ ಕೂಡ ಮೆಟ್ಟಿ ಎದೆಯಲ್ಲಿ ನಾಟ್ಯವನ್ನಾಡಿ, ದಿಟ್ಟತನದಿ ಕಟ್ಟಾಡಿದ ಕ್ಷಣಕೆಟ್ಟಿಸಿ ಶಿರಗಡಿದ ಎನ್ನಂ ನೋಡಿ, ಎಷ್ಟೋ ಪರಿಯಿಂದ ದುಃಖಿಸುವ ಮಾತೆಯಂ ಕಂಡು, ಕಡುಪ್ರೀತಿಯಲಿ ದೈತ್ಯನ ತಲೆಕೊಯ್ದು ತಂದು ಹೊಂದಿಸಿ, ಛಂದದಿಂದ ಬದುಕಿದವನಾಗಿ, ಸಕಲ ವಿದ್ಯಕ್ಕೆ ಅಧಿಪತಿಯಾಗೆಂದು ಆಶೀರ್ವದಿಸಿ ಗಣಪದವಿಯನ್ನು ಕೊಟ್ಟ ಶ್ರೇಷ್ಠ ಶಿವಪುತ್ರ ಗಣಪತಿಯೆಂದು ತಿಳಿಯಲಾ ಸಾರಥಿ.

ಪದ

ತಡವು ಮಾಡದೆ ದೂತಾ ಗಡನೆ ಕೇಳೆನ್ನ ಮಾತಾ
ಮಾಡಿದಿ ಭಜನೆ ಕೇಳಿದೆ ಕುಂತಾ ॥ ೧ ॥

ಬಡಭಕ್ತರಿಷ್ಟಾರ್ಥ ಹಿಡಿ ಹಿಡಿ ಕೊಡುವೆನು ತುರ್ತಾ
ಮೃಡ ಮಲ್ಲಿಕಾರ್ಜುನನ ದಯವಂತ ॥ ೨ ॥

ಅಹೇ ! ಸಾರಥಿ ಜಂಬಾರಿ ಸಭೆಯೊಳು ಶಂಭುಶಂಕರ ದೇವತೆಗಳೊಡಗೂಡಿ ರಂಭಾದಿ ಅಪ್ಸರೆಯರ ಗಾಯನ ನರ್ತನ ಹಂಬಲಿಸಿ ಕೇಳುತ್ತ ಇಂಬಾಗಿ ಕುಳಿತ ಸಂಭ್ರಮದಲ್ಲಿ,

ಅಂಬಾಭವಾನಿಯನ್ನೊಳಕೊಂಡು ಲಂಬೋಧರ ಬಾಯೆಂದು, ತಿಲಕ ಕಾಂಬೋಜರಾಗದಿ ನುತಿಸಿದ ಕಾರಣ, ಅಂಬರವಂ ಬಿಟ್ಟು ಈ ಕುಂಭಿನಿಗೆ ಬರುವದಾಯ್ತು. ನಿಮ್ಮ ಹಂಬಲವೇನು? ಬೇಡು ಬೇಡು ದೂತಾ ಆಗುವದು ಹೊತ್ತಾ.

ಭಲ, ಎಲ್ಯೆ ! ಸಾರಥಿ, "ಬಸವ ವಿಜಯ" ಕಥಾಸಾರ ವಸುಧಿಯೊಳು ರುಚಿಕರ, ಕುಶಲಮತಿ ಮಾತೆ ಮಾದಲಾಂಬಿಕೆಯ ಕೂಸಿನ ಚರಿತ್ರೆಯು ಋಷಿಯೋಗಿಗಳಿಗೆ ಖುಷಿಯಾಗಿ ದೇಶ ದೇಶದಲ್ಲಿ ನಶಿಸದಂತೆ ಆಗಲೆಂದು ಕೊಡುವೆ ಆಶೀರ್ವಾದ. ಸರ್ವರು ರಸಿಕತೆಯಿಂದ ನಲಿನಲಿದಾಡಿ ಈಶ ಮಲ್ಲಿಕಾರ್ಜುನನು ನಿಮ್ಮ ಆಸಪಾಸದಲ್ಲೆ ಸುಳಿದಾಡುವನು. ನಾನು ಮಾತ್ರ ನನ್ನ ಸ್ಥಾನಕ್ಕೆ ಪೋಗುವೆನು.

ಪರಶಿವ ಪಾರ್ವತಿದೇವಿಯರ ಸಭಾ

ಪರಶಿವ : ಎಲ್ಯೆ ! ಭೂರಿ ಪ್ರಾರ್ಥನೆಯಿಂದ ನೂರಾರು ಸರತಿ ಮಹಾರಾಯರೆ ತಾವು ದಾರೆಂದು–ಕರಗಳ ಮುಗಿದು ಬಾರಿ ಬಾರಿಗೆ ಚಾರುನುಡಿಗಳಿಂದ ಹಾತೊರೆದು ಶಿರಬಾಗಿ ಧೀರತನದಿಂ ವಿಚಾರಿಸುವ ನೀನು ಯಾರು? ಸೇವಕಾ, ದ್ವಾರಪಾಲಕ.

ಎಲ್ಯೆ ! ಸಾರಥಿ ಆದಿಗನಾದಿಯಾದ ನಾದ ಬಿಂದು ಕಲಾತೀತ ದೇವನಾಗಿ, ಪರವಸ್ತು, ಪರಂಜ್ಯೋತಿ ಪರಮಪುರುಷನಾಗಿ, ನರನಾರಾಯಣಂ ರಕ್ಷಿಸಿ ಪೊರೆಯುವ ಪರಬ್ರಹ್ಮ, ಪರಶಿವ, ಸರ್ವೋತ್ತಮನಾಗಿ ಸಾಂಬಸದಾಶಿವ, ಹರಹರ ಓಂಕಾರನೆಂಬ ಬಿರುದುಳ್ಳ ಭವಳಾಶಂಕರ ಭಕ್ತಿಯ ಕಿಂಕರ, ಶಿಷ್ಟ ರಕ್ಷಕ ದುಷ್ಟ ಶಿಕ್ಷಕನೆಂದೆನಿಸಿ, ಮಹಾರಾಕ್ಷಸರಾದ ಧ್ರುಮಾಕ್ಷ, ಕಮಲಾಕ್ಷ, ವಿರಾಕ್ಷರೆಂಬ ರಾಕ್ಷಸರ ವೃಕ್ಷಸ್ಥಲವಂ ಭೇದಿಸಿ ತ್ರಿಪುರಾಂತಕನೆನಿಸಿ, ಕುಕ್ಷಿಯೊಳೀರೇಳು ಲೋಕವಂ ಇರಿಸಿ. ಫಣಿ ಚಕ್ಷುವಿನೊಳು ಪಾವಕನ ಧರಿಸಿ, ದಕ್ಷಯಜ್ಞ ಧ್ವಂಸಕನ ಜನಕನೆಂದೆನಿಸಿ, ಮೃಡಾಣಿವರ ಮೃತ್ಯುಂಜಯ ಮಾರಹರ, ಮಹೇಶ, ಗಿರಿಜೇಶ, ಗೌರೀಶ, ವಾಗೀಶ, ಗುಣಕೋಶ, ಫಣಿಭೂಷಣ, ಯಮನಾಶ, ಇಂತೀ ಸಾಸಿರನಾಮದ ಲಯಕರ್ತ ಪರಮೇಶ, ಪಂಚಾಕ್ಷರಿ, ಷಡಕ್ಷರಿಂಯೊಳಗಿಡದ ಮೃಡದೇವಾಧಿದೇವ ಮಹಾದೇವನೆಂದು ತಿಳಿಯಲಾ ಸಾರಥಿ.

ಪಾರ್ವತಿದೇವಿ : ಹೇ ! ಕಂದ ಮಂದಹಾಸದಿಂದ ಸುಗಂಧ ಶ್ರೀಗಂಧ ಅಂದವಾದ

ಸೇವಂತಿಕಾ, ಮಲ್ಲಿಗೆ, ಜಾಜಿ, ಬಕುಲ, ಚಂಪಕ, ಪುಷ್ಪಗಳಿಂದ ಮಿಂಚುವ ಹಿಮವತ್ ಪರ್ವತಕ್ಕೆ ಸಾರ್ವಭೌಮನಾದ ಹಿಮವಂತನ ಮಗಳೆನಿಸಿಕೊಂಡು ಉಮೇಶನ ತಪಗೈದು ಉಮೆಯೆನಿಸಿಕೊಂಡು, ಕಾಮಹರನ ವಾಮಭಾಗದೊಳು ಶೋಭಿಸುವ, ಅಂಬುಜವಾಂಡದೊಳು ಎಂಬತ್ತನಾಲ್ಕುಲಕ್ಷ ಜೀವರಾಶಿಗಳು ಸಂಭ್ರಮದಿ ರಕ್ಷಿಸುವ ಶಂಭುಶಂಕರನ ಪದಾಂಭುಜಗಳ ಅಂಕಿತದಲ್ಲಿರ್ಪ, ಶುಂಭ, ನಿಶುಂಭ ದೈತ್ಯಮರ್ಧನಿ ಓಂಕಾರ. ಮಹಾಂಕಾಳಿ, ಜಗದಂಬೆ ಅಂಬಾಭವಾನಿ ಅನಂತ ನಾಮಗಳಿಂದೊಪ್ಪುವ ನನ್ನ ಹೆಸರು ಪಾರ್ವತಿದೇವಿಯೆಂದು ತಿಳಿಯಪ್ಪ ಬಾಲಾ ಅತಿ ಕುಶಲಾ.

ಗಂಗಾದೇವಿ : ಅಪ್ಪ ! ಸಾರಥಿ ಕಾಲಕಂದರನಾದ ಶ್ರೀಶೈಲಪತಿಯ ಅಪ್ಪಣೆಯಂತೆ ಸಪ್ತಸಾಗರಗಳಲ್ಲೊಪ್ಪುವ ಹಾಲ ಸಮುದ್ರವಂ ದೇವದಾನವರು ಕಾಲಕ್ಕೆ ಸರಿಯಾಗಿ ಕೋಲಾಹಲದಿಂ ಮಥನ ಮಾಡಲು ಇಂದಿರೆ, ಚಂದಿರೆ, ಸಾಂದ್ರಕರ,. ಸೊಬಗುಳ್ಳ ಐರಾವತ ಉದಯಿಸಿದವು. ಅತಿಯಾಸೆ ಗತಿಗೆಡಿಸಿತೆಂಬ ಮಾತಿಗೆ ಸರಿಯಾಗಿ ಮತ್ತೆ ಕಡಗೋಲ ಉಲಕಿಸಲು, ಹಾಲಾಹಲ ಪುಟ್ಟಿ ನೆಲವೆಲ್ಲಾ ಸುಡಲುದ್ಯುಕ್ತವಾಯಿತು. ತಡವಿಲ್ಲದೆ ವಿಷಕುಡಿಯಲು ಕಡುಸಂಕಟಪಡುತ್ತ ಜಾಡನೆ ಬಾಯೆಂದು ಎನ್ನಂ ಕರೆದ ಮೃಡನ ಜಡೆಯಲ್ಲಿ ಕಂಗೊಳಿಸುವ ಗಂಗಾದೇವಿಯು ನಾನಲ್ಲವೇನು ತಮ್ಮಾ? ಅತಿ ರಮ್ಮಾ.

ನಾರದ : ನಾರಾಯಣ, ನಾರಾಯಣ, ಗೋವಿಂದ ಹರಿ.

ಪರಶಿವ : ಗಂಗಾ–ಪಾರ್ವತಿಯರೆ, ತಂಬೂರಿ ನಾದವಂ ನುಡಿಸುತ್ತ ತುಂಬರ ನಾರದನು ಅಂಬರದಿಂ ಗಮಿಸುವಂತೆ ಕಾಣುತ್ತೆ.

ಗಂಗಾದೇವಿ: ಅಹುದುಹುದು, ಮಹಾದೇವನಾ ಮೂರ್ತಿಯ ಆರಾಧಿತನಾದ ದೇವ ಋಷಿಯು ಸತ್ಕರಿಸಿ, ಭೂಲೋಕದ ವರ್ತಮಾನ ಅರಿತುಕೊಳ್ಳಬೇಕು, ಕಾಂತಾ ಕೈಲಾಸನಾಥ.

ನಾರದ : ಭಸ್ಮರುದ್ರಾಕ್ಷಿಗಳಿಂದಲಂಕೃತನಾದ ಸಾಧು ಹೃದಯನೆ ! ತಮ್ಮ ಪಾದಂಗಳಿಗೆ ಈ ನಾರದನ ವಂದನೆ ಇರುತ್ತದೆ.

ಪರಶಿವ : ಗರುಡಗಮನನೇ ನಾವು ಸದಾವಕಾಲದಿ ಮೃಡನುಡಿಯತ್ತ ಸರ್ವ ಲೋಕಂಗಳಂ ತಿರುಗುವ ನಾರದನಿಗೆ ಶುಭಾಶೀರ್ವಾದವಾಗಲಿ.ಎಲ್ಲೈ!

ನಾರದ, ಭೂಲೋಕಂಗಳಲ್ಲಿ ಪಾವನನಾದ ದೇವಾಧಿಗಳ ಸಭೆಯಂ ಬಿಟ್ಟು ಆವ ಕಡೆ ಸಂಚಾರಕ್ಕೆ ಹೋಗಿದ್ದಿ?

ನಾರದ : ತಾತಾ ನಾನು ಮರ್ತ್ಯಲೋಕಕ್ಕೆ ಹೋಗಿದ್ದೆನು.

ಪರಶಿವ : ಎಲ್ಯೆ ! ಭಗವಾನನ ಬಗೆಬಗೆಯಿಂದ ಹೊಗಳುವ ನಾರದಾ ಜಗದಲ್ಲಿ ನೀನು ತಿರುಗಿ ಬಂದ ಸಂಗತಿಯನ್ನು ಕೇಳಬೇಕೆಂದು ಈ ಸಾಂಬನ ಹಂಬಲವಾಗಿರುವುದು. ಕಾರಣ ಸಂಭ್ರಮದಿಂದರುಹಬೇಕು ನಾರದ ವಿಶಾರದ.

ನಾರದ : ಹೇ ! ಪೊಡವಿಪಾಲನೆ, ಒಡೆಯನಾಗಿ ಮೂರ್ಜಗವನು ಪಾಲಿಪ ಬಡವರುದ್ಧಾರಕ. ಭಕ್ತರೊಡೆಯ ಪೀತಾಂಬರುಡುವವನ ನಾಮವನ್ನು ಸದಾ ನುಡಿಯುವೆನೆಂದು ಮನದಲ್ಲಿ ಸಿಡಿಮಿಡಿಗೊಳ್ಳದೆ ಕೇಳು ಕೇಳು, ಪಾರ್ವತಿರಮಣಾ ಉರಗಾಭರಣಾ.

ಪರಶಿವ : ಭಲ ಎಲ್ಯೆ ನಾರದಾ, ನರಲೋಕದ ವಾರ್ತೆಯನ್ನು ಸವಿಸ್ತಾರವಾಗೆ ಸಾರು ಸಾರಲಿ. ಆರಾರು ನನ್ನ ನಾಮಸ್ಮರಣೆಯಲ್ಲಿರ್ಪರು ಮತ್ತು ಎನ್ನ ನಿಂದಾಸ್ತುತಿಗಳನ್ನಾರು ಮಾಳ್ಪರು. ಶಾಸ್ತ್ರ ಪುರಾಣ ವೇದಾಗಮಗಳ ವಿರುದ್ಧ ಆರಾಧಿಸುವರಾರು? ಸರಿಯಾಗಿ ಹೇಳು. ಬುದ್ಧಿವಂತ ನಿಜಗುಣವಂತ.

ನಾರದ : **ಪದ**

ಕೇಳು ಚಂದ್ರಮೌಳಿ ನಿತ್ಯ ನಿರ್ಮಲ
ಇಳೆಯೊಳೆಲ್ಲ ತಿರುಗಿ ಬಂದೆ ಜಗಪಾಲಾ. ।ಪಲ್ಲವಿ।

ಧರಣಿಯೊಳು ಮೆರೆಯುವ ವಾರಣಾಸಿ ಕ್ಷೇತ್ರ
ಪರಮ ಪದವೀಧರನು ಬದರಿನಾರಾಯಣ ॥ ೧ ॥

ಪೂಜೆ ಮಾಳ್ಪ ಸಜ್ಜನರ ವ್ಯಾಜ್ಯಮಾಳ್ಪ ಬಿಜ್ಜಳರಸ
ಸದ್ಯೋಜಾತ ನಿನ್ನ ಮರ್ಜಿಗಿದು ಬರುವದೆ ॥ ೨ ॥

ಸಂತಾನಪೇಕ್ಷೆಯೊಳು ಚಿಂತೆಪಡುವ ಮಾದಲಾಂಬಿಕೆ
ಶಾಂತಮೂರ್ತಿ ಮಲ್ಲಿಕಾರ್ಜುನ ತಾ ಕಾಯ್ವು ॥ ೩ ॥

ಹೇ ! ಸೋಮಧರನೆ, ಭೂಮಿಯೊಳು ಸ್ವಾಮಿ ವಿಶ್ವನಾಥನ ವಾಸಸ್ಥಲ ಕಾಶಿಕ್ಷೇತ್ರಕ್ಕೆ ಸಮಾನವಾದ ಕ್ಷೇತ್ರ ಇನ್ನಾವುದಿಲ್ಲ. ಪ್ರೇಮದಿಂ ರಾಮನಾಥನ

ಲಿಂಗವಂ ನೋಡಿ, ಜಗತ್ತಿನಲ್ಲಿ ಅಗಾಧವಾದ ವ್ಯಾಘ್ರಪುರಿಯನ್ನು ಸೇರಿ, ಕರುಣದಿಂದ ಅರುಣಾಚಲೇಶ್ವರನ ಚರಣಕ್ಕೆ ನಮಿಸಿ, ವಂಚನೆ ಇಲ್ಲದೆ ಕಾಂಚಿ ಪಟ್ಟಣದ ವೆಟಾರಣ್ಣೇಶ್ವರ ಸೇವಿಸಿ, ಭೂಲೋಕದಲ್ಲಿ ಭೂಕೈಲಾಸವೆನಿಸುವ ಗೋಕರ್ಣ ಕ್ಷೇತ್ರವಂ ಪೊಕ್ಕು ಮುಂದೆ ಶ್ರೀಶೈಲ ಶಿಖರಕ್ಕೆ ನಮಸ್ಕರಿಸಿ, ಹಂಪಿಯಲ್ಲಿ ಪಂಪಾಪತಿಯ ದರ್ಶನ ತೆಗೆದುಕೊಂಡು, ಕರ್ನಾಟಕ ದೇಶದೋಳಿರ್ಪ ಕಲ್ಯಾಣ ನಗರಕ್ಕೆ ನಿಲ್ಲದೆ ಪೋದೆನು. ಅಲ್ಲಿ ಬಿಜ್ಜಳನೆಂಬುವ ರಾಜಾಧಿಪತಿ ಇರುವನು. ಅವನ ಕ್ಷುಲ್ಲಕತನವು ಎಲ್ಲಿಯವರೆಗು ಹೇಳಿದರೂ ಸಾಲದು? ಬಲವಂತ ನಿನ್ನನೊಲಿಸಬೇಕೆಂಬುವ ಘನವಂತರಂ ಕಂಡರೆ ಖಲತ್ ಖಲಲ್ಲೆಂದು ಅರ್ಭಟಿಸುವನು. ಆ ಖೂಳನೆಸಗುವ ಕೀಳಕೃತಿಗಳು ಕೇಳಿ ಕೇಳಿ ಬಳಲದಿರುವರೇನು? ಮಹಾದೇವ ಭಕ್ತರ ಜೀವ.

ಪರಶಿವ ; ಭಲ ಎಲ್ಯೆ ! ನಾರದ, ಭೂಲೋಕದ ಜನವೆಲ್ಲ ತ್ರಿಕಾಲಜ್ಞಾನ ಸಂಪನ್ನರಾಗಲೆಂದು ದೀನದಯಾಳು ನಾನು ವಿಶ್ವೇಶ್ವರನ ನಾಮದಿ ಜನಿಸಿ ಜ್ಞಾನವಂ ಪೇಳಿದರೆ ಶ್ವಾನ ನರರಿಗೇನು ತಿಳಿಯದೆ ಹೋಯಿತೆ? ಮಂಡಲದಲ್ಲಿರ್ಪ ಭಂಡ ಮಾನವರಿಗೆ ಅಖಂಡ ಮರ್ಮ ಅರುಹಿದರೆ ಮುಂಡೆ ಮಕ್ಕಳ ಮಂಡೆಯಲ್ಲಿರದೆ ಹೋಯಿತೆ? ಮಂದಮತಿ ಬಿಜ್ಜಳಗೆ ಕುಂದುಕೊರತೆ ಒಂದಿಲ್ಲದಂತೆ ಐಶ್ವರ್ಯ ಇತ್ತರೆ ಚಂದದಿಂ ಉಂಬುವದಾಗಲಿಲ್ಲವೇ?

ಶಹಬ್ಬಾಸ ! ಆ ಭೂಪನ ಸಂಪತ್ತು ನಿಷ್ಪಾತ್ರ ಮಾಡಬೇಕೆಂಬ ಕೋಪಾಗ್ನಿಯು ಎನ್ನಲ್ಲಿ ಉಕ್ಕೇರುತ್ತಿರುವದು. ಆ ಪಾಪಾತ್ಮನಂ ಪಾತಾಳಕ್ಕೆ ತುಳಿಯಲಿ. ಒಳ್ಳೆಯದು, ಇನ್ನೇನಿರುವದಯ್ಯ ನಾರದಾ.

ನಾರದ : ಓಹೋ ! ಪರಮ ಪರತರ ಶಾಂತನಿಧಿ ಪರಮೇಶ್ವರ, ಹರಕೆ ಮಾತುಗಳು ಸ್ಮರಣಕ್ಕೆ ಬಂದವು, ಸಾರುವೆನು ಕೇಳು. ಜಗತ್ತಿನೊಳು ವಿಭೂತಿ ಧರಿಸಿದವರನ್ನು ನಾನೆತ್ತ ಹುಡುಕಿದರೂ ಒಬ್ಬಾತನಾದರೂ ಗೊತ್ತಾಗಲಿಲ್ಲಾ. ದಾನಧರ್ಮ ಜಪತಪ ನೇಮಾದಿಗಳಂತೂ ನಿಂತು ಹೋಗಿರುವವು. ಇಂತಹ ವಾರ್ತೆಯು ಶ್ರೀಮಂತ ಮಲ್ಲಿಕಾರ್ಜುನನೆ ನಿನ್ನಂತರಂಗದಲ್ಲಿ ಹೊಳೆದವೇ? ಓಹೋ ಇನ್ನೊಂದು ನೆನಪಾಯಿತು. ಮತ್ತೊಂದು ನೆನಪಾಯಿತು ಮರೆತೆನು, ಮರೆತೆನು ಇರಲಿ. ಇಂತಹ ಸಂಗತಿಗಳಂ ಶಾಂತನಾಗಿ ಸಂತೋಷದಿಂ ಸಂತೈಸು. ದೇಶವಿದೇಶಗಳನ್ನು

ಸೋಸಿ ನೋಡಿದರೆ ಈಶ ಮಹೇಶನೇ ! ನೀನು ವಾಸಿಸುತ್ತಿರುವ ಕೈಲಾಸದಂತೆಸೆವ ಬಾಗೇವಾಡಿಯೆಂಬ ಪುರದಲ್ಲಿ ವೀರಭದ್ರ-ಭದ್ರಕಾಳಿಯರು ಭಾಗ್ಯವಂತರಾದ ಮಾದರಸ-ಮಾದಲಾಂಬಿಕೆ ಶಿವಬ್ರಾಹ್ಮಣ ದಂಪತಿಗಳಾಗಿ, ಸಂತಾನ ದೆಸೆಯಿಂದ ಬಲುಚಿಂತೆ ಮಾಡುತ್ತಿರುವರು. ಸತ್ಯಶಂಕರನ ವ್ರತ ನಿತ್ಯ ಕೈಕೊಂಡಿರುವರು. ಆ ಮಂಗಲಾಂಗಿಯರಿಗೆ ಸುಕುಮಾರನ ದಯಪಾಲಿಸಿ ನಿಶ್ಚಿಂತನಾಗಿರುವದು ಬಿಟ್ಟು ಪಾರ್ವತಿದೇವಿಯರ ಸಂಭ್ರಮದಲ್ಲಿ ಕುಳಿತರೆ ಕುಂಭಿನಿಯಲ್ಲಿರ್ಪ ಶ್ರೀರಂಗನ ದಾಸರ ಗತಿಯೇನು? ಮುಕ್ತಿಮಾಲಾ ಜಗಪಾಲಾ.

ಪರಶಿವ : ಪನ್ನಂಗ ಶಯನ ಲಕ್ಷ್ಮೀಕಾಂತನ ಅನನ್ಯವಾಗಿ ಧ್ಯಾನಿಸುತ್ತ ಮುಕ್ತಿಸ್ಥಾನವನ್ನು ಅರಿಯುವಂಥ ನಾರದ ನಿನ್ನಯ ಮಾತುಗಳಂ ಕೇಳಿ ಎನ್ನ ಹೃದಯಾಬ್ಧಿಗೆ ಸಮಾನ ಆನಂದ ಉದ್ಭವಿಸಿತು. ಆ ಮಾದರಸನ ಸಹಧರ್ಮಿಣಿ ಮಾದಲಾಂಬಿಕೆಯ ಉದರದಿ ಮುದ್ದು ನಂದೀಶನೆ ಚದುರ ಬಸವನಾಗಿ ಉದಯಿಸುವಂತೆ ದೃಷ್ಟಿ ಹಾಕುವೆ. ಆ ಸದಮಲನು ನರಲೋಕಕ್ಕೆ ಹೋಗಿ ದುರಳ, ದುಷ್ಟ ಕೃತ್ಯಗಳನು ನಾಶಗೊಳಿಸಿ ವರವೀರಶೈವ ಧರ್ಮವನ್ನು ಉದ್ಧರಿಸಲಿ.

ಅಲಲಲ ಎಲೈ ! ಸಾರಥಿ. ಬ್ರಹ್ಮಾಂಡಕ್ಕಿಂತಲೂ ಮೇಲ್ಮಟ್ಟದ ಅಪಾಕೃತ ದೇವಲೋಕದಲ್ಲಿರ್ಪ ಇಂದ್ರಲೋಕ, ಚಂದ್ರಲೋಕ, ವೈಕುಂಠ ಲೋಕಂಗಳಲ್ಲಿ ಚರಿಸ್ಯಾಡಲು ಪೋದ ನಂದೀಶನನ್ನು ಕರಿಸುವಂಥವನಾಗು ದೂತಾ ಕೇಳೆನ್ನ ಮಾತಾ.

♦

"ನಂದಿಯ ಪ್ರವೇಶ"

ನಂದೀಶ : ಭಲ ಎಲ್ಲೈ ಪುರುಷನೆ ! ಕರಕಮಲಗಳ ಮುಗಿದು, ಚರಣಕ್ಕೆ ಮಣಿದು, ದೊರೆಗಳೆ ತಾವು ದಾರೆಂದು ಪರಿಪರಿಯಿಂ ಸರಸ ವಚನಗಳನ್ನು ಸುರಿಸುತ್ತ, ಶಿರಬಾಗಿ ಭರದಿಂದ ಎನ್ನ ಪರಿಣಾಮವನ್ನು ನೆರೆದ ಸಭೆಯಲ್ಲಿ ಕೇಳುತ್ತಿರುವ ಪ್ರಾಣಿಯೆ ನೀನು ದಾರು? ಗುಣಾಗ್ರಣಿ ಭಕ್ತ ಚಿಂತಾಮಣಿ.

ಸಾರಥಿ ನಾನು ದಾರೆಂದರೆ–ಬ್ರಹ್ಮಾಂಡ ಮಂಡಲದೊಳಿರ್ದ ಸರ್ವ ಜೀವಾದಿಗಳ ತಂಡ ತಂಡವನ್ನು ಎದ್ರಂಡ ತನದಿಂದ ರಕ್ಷಿಸಿ, ಪುಣ್ಯವಂತರನ್ನು ಪುಷ್ಪಕ ವಿಮಾನದಲ್ಲಿ ಕೂಡ್ರಿಸಿ ದೇವದೂತರಿಂದ ಹಿಡಿತರಿಸಿ, ಘೋರ ಪಾಪಿಗಳನ್ನು ಕ್ರೂರತನದಿಂ ಘೋರಾಡಿಸಲಿಕ್ಕೆ ಯಮಪುರಕ್ಕೆ ಕಳುಹಿಸಿ, ಸಾಧು ಸಿದ್ಧ ಸಾಧ್ಯರು, ಭಸ್ಮವನ್ನು ಧರಿಸಿದ ಭಕ್ತರಿಗೆ, ಕಾನನದೊಳು ಮೌನ ವ್ರತವಂ ಮಾಳ್ಪ ಮನು–ಮುನಿಗಳಿಗೆ ವಿನಯದಿಂ ಸನ್ಮೋಕ್ಷವಂ ತೋರುವ ಚಿನ್ಮಯನನ್ನು ಎನ್ನ ಬೆನ್ನಮೇಲಿರಿಸಿಕೊಂಡು ಸಂಚರಿಸುವ ನಂದೇಶನೆಂದು ತಿಳಿಯಲಾ ಸಾರಥಿ.

ಭಲ ಎಲ್ಲೈ ಸಾರಥಿ! ಝುಗಝುಗಿಸುವ ಈ ಸಭಾಸ್ಥಾನಕ್ಕೆ ಆಗಮಿಸಿದ ಅಭಿಪ್ರಾಯವೇನೆಂದರೆ – ಮೂರು ಲೋಕಕ್ಕೆ ವೀರ ಗಂಭೀರನೆನಿಸಿದ ಚಾರು ಚಂದ್ರ ಮುಖ ಪಾರ್ಥನ ಘೋರತಪಸ್ಸಿಗೆ ಮೆಚ್ಚಿ ವೈರಿಗಳ ಸಂಹಾರಾರ್ಥ ಪಾಶುಪತಾಸ್ತ್ರವನ್ನು ಕೊಟ್ಟ ಮುರಹರ ಮಹಾದೇವನು ಕರಿಯಲಿಕ್ಕೆ ಚಾರನಂ ಕಳಿಸಿದ ಕಾರಣಕ್ಕೆ ಬರೋಣವಾಯಿತು. ಅರಿಯಲ್ಲೈ ! ಸಾರಥಿ, ಇಂದುಧರನ ಅಪ್ಪಣೆಯಂ ಒಪ್ಪಿಕೊಂಡು ದ್ವಂದ್ವ ಪಾದಗಳಿಗಭಿವಂದನೆಗೋಸ್ಕರ ಅಗಜಾಪತಿ ಆಶ್ರಮಕ್ಕೆ ನಡಿಯಲಾ ಸಾರಥಿ.

ಪಾರ್ವತಿದೇವಿ :–

ಪದ

ಕೇಳೊ ಸುಂದರಾ ಕರುಣಾ ಸುವಂದಿರಾ ॥ ಪಲ್ಲವಿ ॥

ಕಂದುಗೊರಳನೆ ಮಂದಭೊ ಭಕ್ತರ
ಬಂಧನ ಹರಿಸಲ್ಕೆ ನಂದೀಶನ ಕಳಿಸು ॥ ೧ ॥

ದಕ್ಷಸಂಜಾತನೇ ರಕ್ಷಿಸು ಮೃತ್ಯುಲೋಕ
ಪಕ್ಷಿವಾಹನ ಸಖಪೇಕ್ಷ ತೀರಿಸೆನ್ನ ॥ ೨ ॥

ಒಡಿಯ ನೀಲಾಲಿಸು ಪೊಡವಿಯೊಳು ದೇವಣಗಾವ
ಮೃಡ ಮಲ್ಲಿಕಾರ್ಜುನನ ಬಿಡದೆ ಪಾದವ ಸ್ಮರಿಸು ॥ ೩ ॥

ಹೇ ! ಕಾಂತಾ, ಆದಿಯಲ್ಲಿ ಬ್ರಹ್ಮನನ್ನು ಪುಟ್ಟಿಸಿ, ವೇದಗಳನ್ನಾತನಿಗಿತ್ತು ಮೇದಿನಿಯಂ ಸೃಷ್ಟಿಸು ಎಂದು ಆಜ್ಞಾಪಿಸಿದಿರಿ. ತ್ರೇತಾಯುಗದಲ್ಲಿ, ದ್ವಾಪಾರಯುಗದಲ್ಲಿ ಕೂಡಾ ಬೇರೆ ಬೇರೆ ನಾಮಗಳಿಂದ ಅವತರಿಸಿ ಸ್ವಧರ್ಮವನ್ನು ನೆಲೆಗೊಳಿಸುವಂತೆ ಮಾಡಿದಿರಿ. ಈಗ ಕಲಿಯುಗದಲ್ಲಿ ಮರುಳ ಕುರಿಯಂತಿರುವ ನರಲೋಕದವರಿಗೆ ಸನ್ಮಾರ್ಗ ಬೋಧಿಸುವ ಗುರುವನ್ನು ಕಳಿಸು. ವರದಭವಭಂಗ ಕರುಣಾ ಸಾಗರನೆ ನಿನ್ನ ಚರಣದ ಸ್ಮರಣೆಯು ಧರಣಿಯಲ್ಲಿಲ್ಲವೆಂದು ನಾರದನು ಅರುಹಿದನು. ಈ ಪರಿಯಾದರೆ ಸುಜ್ಞಾನ ಸದ್ಭಕ್ತರ ಗತಿಯೇನು? ಕಾರಣ ಶೀಲ, ಚಾರಿತ್ರ್ಯಪಾಲನೆಗಾಗಿ ಅತಿ ತೀವ್ರ ನಂದೀಶನನ್ನು ಭೂಲೋಕಕ್ಕೆ ಕಳಿಸು ಕಾಂತಾ ಕೇಳೆನ್ನ ಮಾತಾ.

ಪರಶಿವ : ಹೇ ! ಶಶಿಮುಖಿ ಉಸುರು ಹಾಕದಿರು. ವಸುಧಿಯೊಳಿರ್ಪ ಲಕ್ಷ ಚವರಾಶಿ ಜೀವರಾಶಿಗಳ ಪೊಷಿಸುವುದೆ ಎನ್ನ ಕಾರ್ಯ. ದೊಷವು ಅತಿಯಾಗಿ ಶ್ರೇಯಸ್ಕರವು ನಾಶವಾಗುವ ಕಾಲಕ್ಕೆ ಅವತರಿಸಿ ಸಂರಕ್ಷಿಸುವದೆ ದೇವತೆಗಳ ಕಾರ್ಯ. ಕಾರಣ ಈ ಸಮಯಕ್ಕೆ ವೀರಶೈವ ಧರ್ಮ ಸಂಸ್ಥಾಪಿಸಲಿಕ್ಕೆ ವೃಷಭೇಶನನ್ನು ನಿರೂಪಿಸುವೆನು. ಕಾಂತೆ ಬಿಡು ನಿನ್ನ ಚಿಂತೆ.

ನಂದೀಶ : ಕಂದರ್ಪನಂ ತಿರಸ್ಕರಿಸಿ ವೃಂದಾರಿಕರಿಂದ ಪೂಜೆ ಕೈಗೊಳ್ಳುವ ಸಂದಿರ್ದಸಭೆಯು ಸಿಂಹಾಸನದಿ ಕುಳಿತೊಪ್ಪುವ ಕಂದುಗೊರಳಾ ತಮ್ಮ ಸುಂದರ ಪಾದಗಳಿಗೆ ಈ ನಂದಿಯ ವಂದನೆ ಇರುತ್ತದೆ. ಸ್ವಾಮಿ ದಯಾಗುಣ ಪ್ರೇಮಿ.

ಪರಶಿವ: ಕಾಡುವಂಥ ಕರ್ಮಾದಿಗಳಿಗೆ ಮನಗೊಡದೆ ಖೋಡಿತನ

ಹೊಡಿದೋಡಿಸಿ ನಾಡೊಳು ಎಣಿಯಿಲ್ಲದ ಪುಣ್ಯ ಮಾಡಿ
ಮೃಡ ಸನ್ನಿಧಿಯನ್ನು ಪಡೆದ ಬಾಲಕಾ ಕಲ್ಯಾಣವಾಗಲಿ.

ನಂದೀಶ :

ಪದ

ಚಂದ್ರಧರನೆ ಕಂದನನ್ನು ಕರಸಿದೇತಕೆ
ಬಂದು ನಿಂತೆ ನಾನು ಇಂದು ನಿನ್ನ ಮುಂಬದಿ ॥ ೧ ॥

ಸೃಷ್ಟಿಗಿರ್ಪ ದುಷ್ಟರನ್ನು ನಷ್ಟ ಮಾಡುವೆ
ವಿಷ್ಣುಸಖನೆ ಪಾರ್ವತೀಶನೆಷ್ಟು ಪೊಗಳಲಿ ॥ ೨ ॥

ತ್ರಿಪುರ ನಾಶ ಪಾದಕಂಡು ಸಫಲನಾದೆನು
ಕಪಿಲ ಮಲ್ಲಿಕಾರ್ಜುನನು ವಿಮಲ ಜ್ಞಾನನು ॥ ೩ ॥

ಅಹೋ ! ಶ್ರೀ ಕರುಣಾಂಭುಧಿ ಭೂಪ ಪರಮ ಪ್ರತಾಪ. ಈ ಹೊತ್ತಿನಲ್ಲಿ ಅತಿ ತ್ವರಿತದಿಂದ ಬರಬೇಕೆಂದು ಆಜ್ಞೆಯನ್ನಿತ್ತು ಬರಹೇಳಿದ ಕಾರಣ ಭರದಿಂದ ಬಂದು ನಿಲ್ಲುವದಾಯಿತು. ತಾತಾ ಯಾಕೆನ್ನ ಕರೆಸಿದಿ? ಕಾಕುಧನುಜರ ಭೀತಿಯೇನಾದರೂ ಇರುವದೇನು? ದುರಳ ಭೂಪತಿಗಳಾರಾದರು ನಿನ್ನೊಳು ವರಪಡೆದು ಪರಿಪರಿಗೊಳಿಸುತ್ತಿದ್ದರೆ ಭರದಿಂದ ಸಾರು. ಅವರ ವಂಶವನ್ನು ನಿರ್ಮೂಲಗೊಳಿಸುವೆ ಭಂಡದೈತ್ಯರಾರಾದರೂ ನಿನ್ನೊಳು ಪುಂಡಾಟ ನಡೆಸಿದ್ದರೆ ಹೇಳು. ಹಿಂಡುವೈರಿಗಳ ಶಿರ ಚಂಡಾಡಿ ಅವರ ರುಂಡವನ್ನು ನಿನ್ನ ಕೊರಳೊಳು ಮಾಲೆಮಾಡಿ ಧರಿಸು, ದೇವಾ ಪರಶಿವಾ.

ಪರಶಿವ : ಭಲ ಎಲೈ ! ವೃಷಭೇಶಾ, ನಿನ್ನಲ್ಲಿರ್ಪ ಅಸಮತರ ಸಾಮರ್ಥ್ಯ ಬಲ್ಲೆನು. ಈ ಸಮಯಕ್ಕೆ ಪರಮಾನಂದದಿ ಬರಹೇಳಿದ ಕಾರಣ, ಈ ವಸುಧೀಶನು ಉಸುರುವನು, ಶಾಶ್ವತವಾಗಿ ಧ್ಯಾನದಲ್ಲಿರಲಿ. ಹೇಸಿ ನರಲೋಕದಲ್ಲಿ ಪರದೂಷಣೆ ಅತಿಯಾಗಿ ಪುಣ್ಯನಾಶವಾಗಿ ಜನಕ್ಲೇಶ ಪಡುತ್ತಿರುವರಂತೆ. ಆದ್ದರಿಂದ ಭರದಿ ನೀ ಪೋಗಿ ಶರಣರಂ ಪೊರೆದು, ವರವೀರಶೈವಧರ್ಮ ಸಂಸ್ಥಾಪಿಸು, ಮಾತು ಮನ್ನಿಸು.

ನಂದೀಶ : ಸುರಮುಕುಟಮಣಿಚರಣಘಟಿತಸ್ವಾಮಿ ರಾಮದೇವನ ಕಾಮಿನಿಗೆ ಸಮಾನವಾದ ಮಾನವಂತರು ಭೂಮಿಯೊಳಗೆ ಇನ್ನು ಜನಿಸಿರುವದಿಲ್ಲ. ಪಾಮರನಾದ ರಾವಣನು ಅವಳನ್ನೊತ್ತೊಯ್ದು ತನ್ನ ಅಶೋಕ

ವನದಲ್ಲಿಟ್ಟು ಪ್ರೇಮ ಸಂಗಾತಕ್ಕೆ ಆಗಮಿಸಬೇಕೆಂದು ಅನೇಕ ಪ್ರಯತ್ನ ಪಟ್ಟರು. ಆ ಸರಸಿ ಸೀತಾದೇವಿಯು ಗರತಿಯು. ಪತಿವ್ರತೆಯರೊಡನೆ ರತಿಕಲಹ ಮಾಡಿದರೆ ಮೃತ್ಯುಂಜಯಾ ! ನಿಮ್ಮ ಅತಿ ವೈರಿಯಾದ ಯಮನು ತನ್ನ ಭೃತ್ಯದಿಂದ ದುಸ್ತರ ನರಕ ಕೂಪದಲ್ಲಿ ಮರುಗಿಸುವನೆಂದು ಪರಿಪರಿ ಹೇಳಿ, ಆ ದುರಳನಿಗೆ ಮುಖಯೆತ್ತಿ ಸಹ ನೋಡದ್ದನ್ನು ಧರಣಿಯೆ ಸಾರುತ್ತಿರುವಾಗ, ರಘುಪತಿಯ ಭಗಿನಿ ಸೀತೆಗೆ ಹಗರಾಣ ತಂದೊಡ್ಡಲಿಲ್ಲವೆ? ನೋಡಿ ನೋಡಿ ಆ ಖೋಡಿ ಲೋಕದ ಕಡೆಗೆ ದೃಷ್ಟಿ ಸಹ ಇಡಲಾರೆ ತಂದೆ ಈ ಮಾತು ಅಗದೆನ್ನಿಂದೆ.

ಪರಶಿವ : ಆದಿಗೆ ಅನಾದಿಯಾದ ಮುದ್ದಿನ ನಂದೇಶ್ವರ, ಮೆದಿನಿಯೊಳ್ ಮದೋನ್ಮತ್ತದಿ ರಾವಣನು ಸುದತಿ ಸೀತೆಯಂ ಕದ್ದೊಯ್ದು ಪರಿಣಾಮ ವೇನಾಯಿತೆಂಬುದನ್ನು ಯುದ್ಧಕಾಂಡದೊಳು ನೋಡು. ಎನ್ನ ಮಿತ್ರ ದಶರಥ ಪುತ್ರ ರಘುರಾಮನು ಕಪಿಯ ಸೈನ್ಯವಂ ಕಟ್ಟಿಕೊಂಡು ಮಾರುತಿಯ ಸಹಾಯದಿಂದ ಇಂದ್ರಜಿತ, ಕುಂಭಕರ್ಣ ಅತಿ ಬಲಶಾಲಿಗಳನ್ನು ಒಕ್ಕಲಿಲ್ಲವೆ? ಅದಕ್ಕಾಗಿ ಸಧ್ಯಕ್ಕೆ ನಾನು ಪೇಳುವ ಉದ್ಯೋಗವನ್ನು ಕೈಗೊಂಡು, ಬುದ್ಧಿಗೇಡಿ ಮಾನವರಿಗೆ ತಿದ್ದಿ ತಿದ್ದಿ ಸದ್ಭಕ್ತಿಯಿಂದ ನಡೆಯಲೆಬೇಕೆಂದು ಬುದ್ಧಿಯಂ ಪೇಳಲಿಕ್ಕೆ ಹೋಗು. ನಿನ್ನ ಹೃದಯ ಕಮಲದಲ್ಲಿ ಗುರು ರೂಪದಿಂ ನಾನು ಸಹ ಬರುವೆನು. ನಿಲ್ಲದೆ ಪೋಗು, ಇಲ್ಲಿಂದ ಸಾಗು.

ನಂದೀಶ : ಅಹೇ ! ಎನ್ನ ತಾತ, ಕಾತ್ಯಾಯನಿನಾಥ. ಪ್ರೀತಿಯಿಂದ ಖ್ಯಾತಿಯಂ ಪೊಂದಿ ಆತುರದಿ ನಮ್ಮ ಹತ್ತಿರ ಸುಸ್ತವಾಗಿದ್ದ ಕ್ಷಣ ಹೊತ್ತು ನಿನ್ನನು ಅಗಲಲಾರದ ಯಾತಕ್ಕೀ ಮಾತು ಪೇಳುವದು, ಮತ್ತಾವ ಪ್ರಮಥರನ್ನಾದರೂ ಒತ್ತಿ ಕಳುಹಿಸಿರಿ. ನನ್ನನ್ನು ಶಿವ ಸನ್ನಿಧಿಯಲ್ಲಿ ಇರುವಂತೆ ಕೃಪೆಮಾಡು ಜನಕ ಅನುಮಾನ ಯಾಕ?

ಪರಶಿವ : ಅಹಾ ! ಹೇ ನಂದೀಶನೆ, ಎನ್ನಂದ ನಾಮವನ್ನು ಕಂದಸಮ ಶಿಷ್ಯರು ಒಂದು ಕೋಟಿ ಸಲ ಅಂದು ಶ್ರಮಿಸುವದಕ್ಕಿಂತಲೂ, ನಂದನಾ ನಿನ್ನ ಹೆಸರು 'ಬಸವಾ' ಎಂದು ಒಂದೇ ಬಾರಿ ಅಂದರೆ ಅವರಿಗೆ ಘನಪದವಿ ದೊರಕುವುದು. ನಿನ್ನ ಬೋಧೆಯು ಅಗಾಧವಾದದ್ದು. ಭೂಲೋಕ್ಕೆ ಹೋಗದೆ ಗತ್ಯಂತರವಿಲ್ಲ.

ಎಲ್ಯೆ ! ಸರ್ವಮಂಗಳೆಯಾದ ಗಿರಿರಾಜಪುತ್ರಿ ಕರುಣಾಳು

ಮರುಳತರಳನಿಗೆ ಸರಸವಚನದಿಂದ ಧಾರುಣಿಗೆ ನೀನೆ ಕಳುಹಿಸು ಭಾರ್ಯಾ ನೋಡೋಣ ನಿನ್ನ ಚಾತುರ್ಯ.

ಪಾರ್ವತಿದೇವಿ :

ಪದ

ಕೇಳಪ್ಪ ನಂದೀಶ್ವರ ಹೇಳುವೆ ವಿವರ ॥ ಪಲ್ಲವಿ ॥

ಕಾಮರಹಿತಗೆ ಪ್ರೀತಾ ಉಪಮಾಪತಿಯ ಮಾತಾ
ಪ್ರೇಮದಿ ಮನ್ನಿಸಿ ಭೂಮಿಗೆ ಪೋಗ್ವದು ॥ ೧ ॥

ಸಾಧು ಸಜ್ಜನರಿಗೆ ಆಧಾರವಾಗಲ್ಕೆ
ಮೇಧಿನಿಯೊಳು ಪೋಗಿ ಸಾಧಿಸುವುದು ಕಾರ್ಯ ॥ ೨ ॥

ಅದ್ರಿಕಧಿಕಪುರ ವಿದ್ಯದ ತವರೂರ
ಸದ್ಯದೇವನಗರ ಮುದ್ದು ಮಲ್ಲಿನಾಥ ॥ ೩ ॥

ಇಂದುಧರನ ಭಕ್ತನಾದ ನಂದೀಶನೆ ಕೇಳು, ನಾಗೇಂದ್ರಧರ ಮಂದಗಾಮಿನಿ ಈ ಚಂದ್ರನಿನಿಯ ಮಾತನ್ನು ಅತಿಗಳಿಯದೆ ಮಂದವಾದ ಲೋಕಕ್ಕೆ ಪೋಗಿ, ಮಾನವ ಜನಾಂಗಕ್ಕೆ ಪರಶಿವನನ್ನು ಪೂಜಿಸಿಲಿಕ್ಕೆ ಬೇಕೆಂದು ಬೋಧಿಸಿ ಗುರುಹಿರಿಯರ ಸೇವೆ ಜರಿದು ನಿರಂತರ ಪರನಿಂದೆ ಮಾಡಿ ನಗುತಿರ್ಪನ, ಪರಹೆಣ್ಣು, ಪರಹೊನ್ನು, ಕರಗತವಾಯಿತ್ತೆಂದು ಪರಲೋಕದ ಭಯವಿಲ್ಲದೆ ತಿರುಗುವವನ ಗರ್ವಹರಣ ಮಾಡು. ಕಾರಣ ನಾರಿಮಣಿಯಳ ನುಡಿಗೆ ಲಕ್ಷ್ಯಗೊಟ್ಟು ಪೋಗಬೇಕು. ನಂದೀಶ ಹೇಳುವದೇನದೆ ಮುಂದೆ?

ನಂದೀಶ : ಆಹೇ ! ಭಕ್ತರ ರಕ್ಷಕಳಾದ ಭವಾನಿಯೆ, ಆ ಪಾತಕ ಸ್ಥಾನಕ್ಕೆ ಹೋಗುವ ಸಂಗತಿ ಮತ್ತೇಕೆ ಒತ್ತೊತ್ತಿ ಹೇಳುತ್ತಿ? ಹೇ ! ಅಮ್ಮಾ ಮಾತೆ ತಾವೆಷ್ಟು ಹೇಳಿದರು ಎನ್ನ ಚಿತ್ತವು ಅತ್ತ ಕಡೆಗೆ ಸಾಗದು. ಆಹೇ! ತ್ರಿಪುರಹರನರಾಣಿ ಪರ್ವತಾ ಜನನಿ, ದ್ವಾಪರ ಯುಗದಲ್ಲಿ ದುರ್ಯೋಧನನೆಂಬ ಪಾಪಿಯು ಕಪಾಲಧರನ ಶಿರದಲ್ಲಿರುವ ಗಂಗಾದೇವಿಯು ಸುಪುತ್ರ ಭೀಷ್ಮ, ಕರ್ಣ, ಕೃಪಾದಿಗಳ ಬಲಮಾಡಿಕೊಂಡು ಆಪ್ತರಾದ ಪಾಂಡವರಿಗೆ ಆಪತ್ತೆಡೆ ಮಾಡಿ ಹನ್ನೆರಡು ವರ್ಷ ತಾಪತ್ರಯ ಪಡಿಸಲಿಲ್ಲವೆ? ಆ ಪುಣ್ಯವಂತರೂ ಹಣ್ಣು

ಹಂಪಲ ಮದ್ದು ತಣ್ಣಗಿದ್ದರು ಹುಣ್ಣಿನ ಘಾಯಕ್ಕೆ ಕಾಷ್ಟ ತಡವಿದಂತೆ ಕಾನನದಲ್ಲಿಯೂ ಬೆನ್ನು ಬಿಡದೆ ಅನನ್ಯೆಗೊಳಿಸಲಿಲ್ಲವೆ? ಏನು ಮಾಡಿದರೂ ಮಾನವರ ಮನದೊಳು ಮನೆಮಾಡಿ ಕುಳಿತಿರುವ ಸುನಕ ಬುದ್ಧಿಯು ಅಳುಕುವಂತಿಲ್ಲ. ಅದೇಕೆಂದರೆ–ಸತ್ಯಕ್ಕೆ ಜಯವಿಲ್ಲದ ಕಲಿರಾಮನ ಅವತಾರವೆ ಹಾಗಿರುವದು. ಕಾರಣ ಭೂಮಿಯೊಳು ನಾ ಪೋಗಲಾರೆ, ಅನ್ನಪೂರ್ಣೆ ಜಗಜ್ಜನನಿ.

ಪಾರ್ವತಿದೇವಿ : ಶರೀರ ಪರವೆಂದರಿದು, ಭವ ಮರಣದ ಭಯವಿಲ್ಲದ ಕುಮಾರನೇ ಕೇಳು. ಊರ್ವಿಯೊಳು ಪರಮೇಷ್ಟಿನಿಂದ ನಿರ್ಮಿತವಾದ ದುಷ್ಟ ಶ್ರೇಷ್ಠರು ಕಟ್ಟಳೆಯಿಂದ ಕಾಲಹರಣ ಮಾಡಿ ಕಟ್ಟಕಡೆಗೆ ಘಟ್ಟನೆ ಪ್ರಾಣವಂ ಬಿಟ್ಟು ಕ್ಷಣಕ್ಕೆ ಅವರ ಜೀವವಂ ನೆಟ್ಟನೆ ಸೂಕ್ಷ್ಮ ರೀತಿಯಲ್ಲಿರಿಸಿ ತನ್ನ ಜಟ್ಟಿಗಳಿಂದ ಪಟ್ಟಣಕ್ಕೆ ತರಿಸಿ ಕಟುಗ್ರಹ ಕರ್ಮವಂ ಮಾಡಿದವರಿಗೋಸ್ಕರ ಪ್ರತ್ಯಂತರ ಚಿತ್ರಗುಪ್ತರಿಂದ ಹುಟ್ಟಿದ ಆರಭ್ಯ ಕರ್ಮದ ಕರ್ಮವಂ ಕೇಳಿ, ಕ್ರೂರರನ್ನು ತರತರಹದ ಆಯುಧಗಳಿಂದ ಶಿಕ್ಷೆಗೊಳಿಸಿ, ಆರಾರು ಏನೇನು ದೋಷವಂ ಮಾಡಿರುವರು. ಅವರನ್ನು ತಕ್ಕಬಾಧೆಯಿಂದ ನಿರ್ಣಯಿಸಿ, ನರಕದೊಳಿರಿಸಿ ಪುಣ್ಯವಂತರ ಮನ್ನಣೆಗೊಳಿಸಿ, ಶಿವಸನ್ನಿಧಿಯಲ್ಲಿ ಕಳಿಸುತ್ತಿರುವ ಯಮರಾಜನ ಮಮತೆಯ ಮಗನಾದ ಧರ್ಮನಂದನನಿಗೆ ಕರ್ಮಿಷ್ಟ ಕೌರವರು ವಿಮುಖಿಗೊಳಿಸಿದರೆಂದು ಹೇಳಿದ್ದಿ. ಒಳ್ಳೆ ಮಾತಾಡಿದಿ. ಇಂದ್ರನ ಕಂದನಾದ ಧನಂಜಯನಿಗೆ ಚಂದ್ರಮೌಳಿಯು ಶಬರವೇಷ ತಾಳಿ ಇಂದ್ರಕೀಲ ಬೆಟ್ಟದೊಳು ದುಂದುಕಾಳಗವಂ ಮಾಡಿ, ಪಾಶುಪತಾಸ್ತ್ರವಂ ಕೊಟ್ಟು, ಕುರುಕುಲವನ್ನು ಕುರುಕ್ಷೇತ್ರದಲ್ಲಿ ಧ್ವಂಸಗೊಳಿಸಿ ಪಾಂಡವ ಪಟ್ಟಗಟ್ಟಿ ಏಕಚಕ್ರಾಧಿಪತಿಯೆನಿಸಿಲ್ಲವೆ? ಆದ್ದರಿಂದ ಭೂವಲಯದಿ ಹೋಗಲಿಕ್ಕೆ ಬೇಗನೆ ಸಿದ್ಧನಾಗು. ವ್ಯಸನದಿಂದ ಉಸಿರು ಹಾಕಬೇಡ. ವಿಷಗೊರಳನು ಹುಸಿ ಇಲ್ಲದೆ ಪೋಷಿಸುವನು. ಖುಷಿಯಿಂದ ಸಾಗು ಈಗಿಂದೀಗ ಪೋಗು.

ನಂದೀಶ : ಶುಂಭನಿಶುಂಭರ ಮದನಗೊಳಿಸಿದ ಅಂಬಾಭವನಾಗಿ ಕಂಬುಕಂದರಿ ಶಂಭುಶಂಕರನರ್ಧಾಂಗಿಯೆ ! ಅಂಬುಜಾಕ್ಷನು ರಾಮಾವತಾರವೆತ್ತಿದ – ತ್ರೇತಾಯುಗದಲ್ಲಿ ಅಂಗದನಳಿಪಿಂಗಳರೆಂಬ ಮಂಗಗಳೊಡಿಯನಾದ ಕೊಂದ ವಾಲಿಯು ತಮ್ಮನ ಕೋಮಲಾಂಗೆಯ ಸಂಗಾಟದಾಸೆಯಿಂದ ಒಡಹುಟ್ಟಿದ ಅನುಜನಂ ಅಡವಿಗಟ್ಟಲಿಲ್ಲವೆ? ಅಣ್ಣತಮ್ಮಂದಿರ

ಹೆಂಡರೆಂದರೆ ಹಡೆದಮ್ಮನ ಸಮಾನವೆಂದು ನಾಡೆಲ್ಲ ಹೊಗಳುತ್ತಿರುವಾಗ ಖೋಡಿ ವಾಳಿಯು ಕಿಡಿಗೇಡಿತನದಿಂದ ನಡೆದ ಆ ಪೊಡವಿಗೆ ಅಡಿ ಇಡಲಾರೆ. ಅನ್ಯರನ್ಯಾರನ್ನಾದರೂ ಕಳುಹಿಸಿರಿ. ಜನಕ ಜಗದೀಶನ ಪಾದಂಗಳಲಿ ಅರಗಳಿಗೆ ಇರಲಾರೆನು. ಮಾತೆ ಜಗ ವಿಖ್ಯಾತೆ.

ಪಾರ್ವತಿದೇವಿ

ಪದ

ವೃಷಭೇಶ ಪಾಲಿಸೊ ಶಶಿಮುಖಿವಚನವ
ನಸುನಗುತ ಸಾಗ್ವುದು.......... ॥ ಪಲ್ಲ ॥

ಖುಲ್ಲ ವಾನರ ವಾಲಿಯ ಕ್ಷುಲ್ಲಕ ನೀತಿಗೆ
ಕೊಲ್ಲಿದನು ಮಾಧವ ಸುಲಲಿತೆ ಮಾತಿಗೆ ॥ ೧ ॥

ಛಲವೇಕೊ ಕುವರ ಬಲುತೀವ್ರ ಪೋಗುನೀ
ಶಾಸ್ತ್ರದಿ ದೇವನಗರ ಧಾತ್ರಿಗೆ ಪ್ರಸಿದ್ಧ ಪ್ರೀತ ಮಲ್ಲಿನಾಥ ॥ ೨ ॥

ಕಪಟಂಗಳಂ ಅಳಿದು ಚಪಲತ್ವ ತಿಳಿದು ಅಪರಿಮಿತ ಮಂತ್ರದಿ ಜಪಮಾಡಿ ಸಕಲೇಶ ಮಹೇಶನ ಜಪಮಾಡಿದ ಭಕ್ತ ನಂದೇಶಾ ಅನುಜನ ಅರ್ಧಾಂಗಿಯನ್ನು ಪ್ರೇಮಿಸಿ ಪಾಮರನಾದ ವಾಲಿಯ ಪರಿಣಾಮವನ್ನು ಕೇಳು. ಮುಪ್ಪುರ ಹರನು ಗಪ್ಪಾಗಿ ಕೂಡದೆ ಕೊಬ್ಬೇರಿದ ಕಪಿಯ ಮಬ್ಬು ಇಳಿಸುವದಕ್ಕೋಸ್ಕರ ಸುಗ್ರೀವನಂ ಯುದ್ಧಕ್ಕೆ ಹುರಿದುಂಬಿಸಿ, ರಘುಪತಿಯಿಂದ ಗುದ್ದಿಸಿ ಅಧರ್ಮಿಗಳಿಗೆ ಬುದ್ಧಿ ಭೇಟಿ ಮಾಡಿಸಲಿಲ್ಲವೆ? ಈ ಸುಲಲಿತ ಮಾತಿಗೆ ಛಲವೇಕೆ? ಕಲಿಯುಗವು ಕೆಟ್ಟದಿದ್ದರೆ ಬಲವಂತರಿಗೆ ಮಾಡುವದೇನು? ಸಾಕು ಸಾಕು ಬಲ್ಲೆನೆಂಬ ಕಾಕು ಬುದ್ಧಿಯಂ ಬಿಟ್ಟು ಏಕಕಾಲಕ್ಕೆ ತೆರಳು. ಭೂಲೋಕದವರ ಅವಗುಣಗಳಂ ಕೆಡಿಸಿ ಶಿವಗುಣದ ದಾರಿಯಂ ಹಿಡಿಸು ಮುಕ್ಕಣ್ಣನಂ ನಿಂದಿಪ ಠಕ್ಕು ಮಾನವರನ್ನು ದಿಕ್ಕು ಪಾಲುಮಾಡು, ಥಟ್ಟನೆ ಓಡು.

ನಂದೀಶ : ಪಂಚಮುಖಿ ಪರಮೇಶನ ಅಂಚಗಮನಿಯಾದ ಪಂಕಜಮುಖಿ ಪಾರ್ವತಿ. ಈ ಕಿಂಕರನ ಮಾತನ್ನು ಲಾಲಿಸು. ವಂದನೆ ಮಾಡಿ ಬೇಡಿಕೊಂಬುವದೇನೆಂದರೆ–ಬಲುವಂತಿ ಬಲವಂತರು, ತಲಿಯು ಕೆಳಕ್ಕೆ ಕಾಲು ಮೇಲಕ್ಕೆ ಮಾಡಿ, ಕಾಲಾನುಕಾಲ ಅಡವಿಯೊಳು ತಪಮಾಡಿದ ಕಾಲಕ್ಕೆ ನೀಲಕಂಠನು ತನ್ನ ರೂಪ ತೋರುವದಿಲ್ಲಾ. ಆವ

ಬಲದಿಂದಲೂ ಮೀಸಲವಾದ ಸದಾಶಿವನನ್ನಗಲಲಿಕ್ಕೆ ಈ ಬಾಲಕನ ಮನವು ತಲ್ಲಣಗೊಳ್ಳುವದು. ಪಿತೃ ಮಾತೆಯರ ಮಾತು ಸುತನು ತಿರಸ್ಕರಿಸಿದ ಜನಾಪವಾದ ಎನ್ನ ಮೇಲೆ ಬಂದರೂ ಚಿಂತೆಯಿಲ್ಲ. ಎನ್ನಯ್ಯನ ಸ್ಥಾನವಂ ಬಿಟ್ಟು ಇರುವದು ಎನ್ನಿಂದಾಗದು ದೇವಿ ಮಾಡುವೆನು ನಿಮ್ಮ ಸೇವಿ.

ಪಾರ್ವತಿದೇವಿ : ಪರಮ ಮೋಕ್ಷಾರ್ಥ ಶಿವಪೂಜಾ ವಿಧಾನಂಗಳಂ ಅರಿತು ಸಚ್ಚಿದಾನಂದನನ್ನು ಸ್ವಚ್ಛಮ್ಮನದಿಂದರ್ಚಿಸುವ ಹುಚ್ಚವೃಷಭೇಶಾ ಈಶ ಲೋಕದಿಂದ ನಿನ್ನನ್ನಗಲಿಸಲಿಕ್ಕೆ ರುದ್ರನಿಗೆ ನೀನೇನು ಬೇಸರವಾಗಿಲ್ಲ. ಧರೆಯಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸಿ ಶರಣರನ್ನು ಪೊರೆಯಿರಿ. ಶಿವಧರ್ಮವು ಪರಿಪರಿ ವಿಘ್ನ ಪರಂಪರೆಯಿಂದ ನಿರ್ನಾಮವಾಗುವ ಪ್ರಸಂಗ ಒದಗಿದೆ.

ಅಪ್ಪ ! ಭಕ್ತ ಶಿರೋಮಣಿ ನಂದೇಶ ನರಲೋಕವನ್ನು ಸೇರುವದಕ್ಕೆ ಇಷ್ಟು ಪರಿತಪಿಸುವದೇತಕ್ಕೆ ? ನಿನ್ನ ಸಂಗಡ ವೀರಭದ್ರ ಷಣ್ಮುಖ ಅಲ್ಲದೆ ಅನಂತ ಪ್ರಮಥರನ್ನು ಭೂಮಿಗಿಳಿಸುವೆವು.

ನಂದೀಶ : ಅಹ ! ಇನ್ನೇನು ಮಾಡಲಿ. ಹೇ ! ಶಂಕರ ಹ... ರ... ಹ... ರ ಜಗದೀಶ್ವರ ವೇದಗಳಲ್ಲಿ ಉದ್ಘೋಷಿತನಾಗಿ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣೀಭೂತನಾದ ಮಹೇಶ್ವರಾ. ಮಾಯಾ ಸಹಿತ ಮಹದೇವ ನಿನ್ನ ಅಗಲಿ ಅರಗಳಿಗೆ ಜೀವಿಸಲಾರದ ಪ್ರಾಣಿಗೆ ಏನು ಹೊತ್ತು ತಂದೊಡ್ಡಿದಿ ಆಹೇ ! ಚಂದ್ರಧರನೆ ನಿನ್ನಂ ಹೊತ್ತು ಸಹ್ಯಾದ್ರಿ, ಮಂದಾದ್ರಿ ಒಂದು ಉಳಿಯದೆ ವಿಂಧ್ಯಾಚಲಗಿರಿಗಳಂ ತಿರುಗಾಡಿ ಬರುವ ನಂದಿಯ ಮನವು ಇಂದು ನಿಮ್ಮನ್ನಗಲಲಿಕ್ಕೆ ಹಿಂದೆ ಮುಂದೆ ನೋಡುತ್ತಿರುವದು, ಒಳ್ಳೇದು ಮಾಡತಕ್ಕದ್ದೇನಿದೆ?

ಹೇ ! ಅಮ್ಮಾ ತಾಯಮ್ಮ ತಂದೆ-ತಾಯಿಗಳ ಮನವು ಕಂದಗಳು ನಿಂದಿಸಬಾರದೆಂಬ ಸೃತಿಗೆ ಸಮ್ಮತಿಸಿ ನಿನ್ನಾಜ್ಞೆಗೆ ಸರಿಯಾಗಿ ಮಾನವ ಲೋಕಕ್ಕೆ ಇನ್ನು ಪೋಗುವೆನು. ಅಹೇ ! ತಾಯಿ ಆವೇಶದಲ್ಲಿ ಪ್ರಯಾಣಿಸಲು ಪೇಳು ಪೇಳು ಮಾತೆ ಹೇಳುವದು ರೀತೆ.

ಪಾರ್ವತಿದೇವಿ :

ಪದ

ಕಂದ ಕೇಳೈ ನೀನು ಮುಂದಿನ ಹುನ್ನಾ
ಚಂದದಿಂ ಪೇಳುವೆ ನಾನಾ ‖ ಪಲ್ಲ ‖

ಕಂದನಪೇಕ್ಷದಿ ನಂದಿ ನಿನ್ನಯ ವ್ರತ
ಮಾದಲಾಂಬಿಕೆ ಮಾಳ್ಪಳು ಕಂದನಾಗಿ ಜನಿಸು ॥ ೧ ॥

ಕಲ್ಯಾಣ ನಗರದಿ ಬಲ್ಲ ಬಲದೇವ ಮಂತ್ರಿ
ಯಲ್ಲಿ ಹುಟ್ಟಿದ ಗಂಗಾಂಬಿಕೆ ನಲ್ಲೆಯಾಗ್ವಳು ನಿನಗೆ ॥ ೨ ॥

ಕೂಡಲ ಸಂಗಮನೆಂದು ಮೃಡನಿನ್ಹಿಂದಿರುವ
ಪೊಡವಿಗೆ ದೇವಣಗಾವ ಒಡಿಯ ಮಲ್ಲಿನಾಥ ॥ ೩ ॥

ನಿಗಮಾಗಮಗಳ ನೋಡುತ್ತ ಹಗಲಿರುಳು ಸ್ತುತಿ ಮಾಡುತ್ತ ಸೊಗಸಿನಲಿ ವಚನ ಗೀತಗಳಂ ಹಾಡುತ್ತ ಸುಗುಣಗಳಿಂದೆ ಮಿಗೆ ಶೋಭಿಸುವ ಭಕ್ತ ಕೇಳೆನ್ನ ಮಾತಾ, ಕಂಟಕಾಸುರನೆಂಬ ರಕ್ಕಸನು ನೀಲಕಂಠನ ಕುರಿತು ಒಂಟೆಗಾಲಿನ ಮೇಲೆ ನಿಂತು, ಹತ್ತೆಂಟು ವರುಷ ಸಂಕಟ ಪಡುತ್ತ ತಪವೆಸಗಲು, ಕಂಟಕವನ್ನು ಪರಿಹರಿಸಲು ಶಂಕರನು ಕಿಂಕರನಿಗೆ ಸ್ವಪ್ನದೊಳು ಪ್ರತ್ಯಕ್ಷನಾಗಿ ಇಷ್ಟಾರ್ಥ ಕೇಳೆನಲು, ಸ್ವರ್ಗದ ರಾಜನಾಗಲಿಕ್ಕೆ ಬಯಸಿದ. ಪರಶಿವನು, ಅಧಮಾ ಅನಂತ ಪ್ರಾಣಿಗಳ ನಿಷ್ಕಾರಣವಾಗಿ ಪ್ರಾಣ ಹರಣ ಮಾಡಿದ ಧಾರುಣಿಯಲ್ಲಿ ಪೋಗಿ ರಾಜ್ಯವಾಳು. ಆವ ಕ್ಷಣಕ್ಕೆ ಶಿವ ಭಕ್ತನ ಕೈಖಡ್ಗದಿಂದ ಪ್ರಾಣ ಬಿಡುವಿಯೋ ಆವಾಗ್ಗೆ ನಿನಗೆ ಸ್ವರ್ಗವಾಗುವದೆಂದು ಮರಣ ರಹಿತನ ವರವಿರುವದು. ಆ ಅಸುರನೆ ಕಲ್ಯಾಣ ನಗರಕ್ಕೆ ಬಿಜ್ಜಳನೆಂಬ ಹೆಸರಿನಿಂದ ದೊರೆಯಾಗಿರ್ಪನು. ಭರದಿಂದ ನೀ ಪೋಗಿ ಅವನ ಗರ್ವ ಮುರಿಯುವದು ಮಾಡು, ಒದಗಲಾರದು ಕೇಡು.

ನಂದೀಶ : ಹೇ ! ಎನ್ನ ಮಾತೆ ವಿಖ್ಯಾತೆ ಆವ ಸ್ಥಾನದೊಳು ಪೋಗಿ ಆರ ಉದರದಲ್ಲಿ ಜನಿಸಬೇಕು ಹೇಳು ದೇವಿ, ಮಾಡುವೆ ನಿಮ್ಮ ಸೇವಿ.

ಪಾರ್ವತಿದೇವಿ : ಹಾಲು ತನ್ನಲ್ಲಿದ್ದ ಕಾಲದಲ್ಲಿ ಹಬ್ಬವೆಂದೀ ಲೋಕದೊಳು ಕೇಳದಾರನು, ದಾನ ಧರ್ಮಪಾಲನೆ ಮಾಡಿ ಮೇಲಾದ ಸ್ವರ್ಗ ಸುಖ ಪ್ರಾಪ್ತಿ ಪಡೆದ ನಂದೀಶನೆ ಕೇಳು, ಖುಲ್ಲ ಬಿಜ್ಜಳನ ಪಟ್ಟಣದಲ್ಲಿ ಬಲದೇವನೆಂಬಾತ ಬಲ್ಲಿದ ಮಂತ್ರಿ ಮಲ್ಲಿಕಾರ್ಜುನನಲ್ಲಿ ಮನನಿಲ್ಲಿಸಿರ್ಪನು. ಆತನ ನಲ್ಲೆಯ ಉದರದಲ್ಲಿ ಎಲುಮಾಲೆ ಧರನ ತಲೆಯಲ್ಲಿರುವ ಗಂಗೆಯು ಜನಿಸುವಳು. ಆ ಗಂಗಾಬಿಕೆಯು ನಿನಗೆ ಲಿಂಗಾರ್ಚನಕ್ಕೆ ಸಹಾಯಕವಾಗುವಳು ಹಳಹಳಿಸಬೇಡ. ಮತ್ತು ಬಾಗೇವಾಡಿ ಎಂಬ ಮಿಗಿಲಾದ ಪುರದಲ್ಲಿ ಪತಿವ್ರತಾ ಶಿರೋಮಣಿ ಮಾದಲಾಂಬಿಕೆಯು ಮಗನ ಪಡೆಯಬೇಕೆಂದು ಹಗಲೆಲ್ಲ ಚಿಂತಿಸುವಳು.

ಆಕೆಯ ಸೌಭಾಗ್ಯದಾತ ಮಾದರಸನು ಸೊಗಸಿನಿಂದ ಜಗದೀಶನನ್ನು ಅವಾಗಲೂ ಧ್ಯಾನಿಸುತ್ತಿರ್ಪನು. ಆ ದಂಪತಿಗಳ ಮಧ್ಯ ವೈಶಾಖ ಶುದ್ಧ ತೃತೀಯಾ ದಿವಸದ ಸೋಮವಾರದಂದು ಸು ಮುಹೂರ್ತದಲ್ಲಿ ಚದುರನೆ ನೀನು ಉದಯಿಸು ಭೂಲೋಕದ ಭಾಸ್ಕರನಾಗಿ. ಮನ್ಮಥ ಸಂಹಾರಕನು ಕಪ್ಪಡಿಯಲ್ಲಿ ಸಂಗಮನೆಂಬ ನಾಮದಿಂದ ನೆಲಸಿ ನಿನ್ನನ್ನು ಕಾಯದೆ ಬಿಡನು. ಈ ಮಾತು ಸುಳ್ಳಲ್ಲವೆಂದು ತಿಳಿ ನಂದೀಶ, ಆಗಲಿನ್ನು ಭೂಲೋಕದೊಳು ಪ್ರವೇಶ.

ನಂದೀಶ : ಅಲಲಲ ಎಲೈ ! ಸಾರಥಿ ಅನ್ಯಾಯದ ಹಾದಿಯಲ್ಲಡಿ ಇಡುತ್ತಿರುವ ಕುನ್ನಿ ಮಾನವರಿಗೆ ಸನ್ಮಾರ್ಗವನ್ನು ತೋರುವ ಕಾರ್ಯಾರ್ಥವಾಗಿಯೆ ಎನ್ನೊಡೆಯನಾದ ಚಿನ್ಮಯನ ಆಜ್ಞೆ ಎನಗಾಗಿರುವದು. ಕಾರಣ ಮರಣ, ಜನನಗಳಾಗುವ ಸ್ಥಾನಕ್ಕೆ ಹೋಗೋಣ ನಡಿಯಲಾ ಸಾರಥಿ.

ಬಿಜ್ಜಳನ ಪ್ರವೇಶ

ಬಿಜ್ಜಳ : ಭಲ ಎಲೈ ! ಕೋಲ್ಮಿಂಚಿನಂತೆ ಕಾಲ್ಗಳ ಕಾಲ್ಗೆಜ್ಜೆಯಂ ಗಣಲ್ ಘಣಲೆಂದು ನುಡಿಸುತ್ತ, ನಾಲಿಗೆಯಂ ಬಿಗಿಹಿಡಿದು, ಹೃದಯ ಕಮಲವನು ನಡಿಗಿಸುತ್ತ, ಕೋಗಿಲೋಪಾದಿ ಕಿಲಿಕಿಲಿ ಧ್ವನಿಗೈಯ್ಯುತ್ತ, ಈ ಭೂಪಾಲಕನ ಓಲಗದ ಮೂಲೆಯಲಿ ನಿಂತು, ತಲೆ ಮೊದಲ್ಗೊಂಡು ಒಯ್ಯುವಾಗ ನೆಲಕ್ಹಚ್ಚಿ ಅಭಿಲಾಷೆಯಿಂದ ಝುರ್ ಝುರ್ರನೆ ಜರಿದು ನಮ್ಮನಿಜನಾಮ ಕೇಳುವನಿರ್ಜೀವಿಯೆ ನೀನು ದಾರು? ನಿನಗಿಟ್ಟ ನಾಮ ಸಾರು.

ಭಲ ಎಲೈ ! ಸಾರಥಿ, ನಾನು ದಾರೆಂದರೆ– ಮಂಡಲದಲಿರ್ಪ ಮಂಡಲೇಶ್ವರರ ರುಂಡವಂ ಚಂಡಾಡುತ್ತ ಕೆಂಡವನ್ನು ಉಗುಳುತ್ತ ಭಂಡಾಟ ಮಾಡುವವರ ಗಂಡನೆಂದೆನಿಸಿ, ಹಿಂಡು ವೈರಿಗಳಂ ದಂಡಿಸಿ, ಕಂಡ ಕಡೆಗೆ ಓಡಿಸಿ, ಚಂಡ ವಿಕ್ರಮರ ಕಡೆಯಿಂದ ಕಾಣಿಕೆಯಂ ಪಡೆದು, ಕಲಿಯುಗದೊಳು ಬಲವಂತರೆನಿಸುವ ಖಲಾಗ್ರಣಿಗಳ ತಲೆಗೊದ್ದು, ಛಲದಂಕ ವೀರಾಧಿವೀರರಂ ಘೋರಕಾಳಗದೊಳು ಶರಣುಗೊಳಿಸಿ, ಅಪಾರ ಪರಾಕ್ರಮರ್ಗೆ ರಣಧೀಶ ಶೂರನೆಂದೆನಿಸಿ, ಸದ್ಯೋಜಾತನ ಮತವನ್ನು ಉಜ್ವಲಗೊಳಿಸುವ ದುರ್ಜನರ ಘರ್ಜಿಸಿ, ನಿರ್ಜೀವಗೊಳಿಸಿ, ಅದ್ಭುತ ಶಿಕ್ಷೆಪಡಿಸಿ, ಶುದ್ಧ ಸ್ಫಟಿಕ ರತ್ನಗಳಿಂದ ಕೆತ್ತಲ್ಪಟ್ಟ ಕೋಟೆಗಳು ತೇಜೋಮಯ ಸೋಜಿಗದ ಚಿನ್ನಗಳಿಂದ ನಿರ್ಮಿಸಲ್ಪಟ್ಟ ಬುರುಜುಗಳು ಶೋಭಿಸುವಂಥ ಕಲ್ಯಾಣ ಪಟ್ಟಣಕ್ಕೆ

ಪುಂಡ ಮಣಿಯಾದ ಬಿಜ್ಜಳ ಸಾಮ್ರಾಟನೆಂದು ತಿಳಿಯಲಾ ಸಾರಥಿ.

ಎಲೈ ! ಸಾರಥಿ, ನಮ್ಮ ರಾಜ್ಯಾಲಯವಂ ಬಿಟ್ಟು ಈ ಸಭಾಲಯಕ್ಕೆ ಬಂದ ಬಗೆಯೇನೆಂದರೆ ಎನ್ನ ಬಲಗೈಯಂತಿದ್ದ ಬಲದೇವ ಧೀಮಣಿಯ ಅಕಾಲ ಮರಣವಾಗಿ ಈ ಲೋಕಕ್ಕೆ ಎರವಾದನು. ಕಾರಣ ಆತನ ಸೋದರಳಿಯನಾದ ಮಾದರಸನ ಸುತಗೆ ಮಂತ್ರಿಪಟ್ಟಗಟ್ಟುವ ಉದ್ದೇಶ ಬರೋಣವಾಯಿತು, ಕಂಡಿಯಾ ಸಾರಥಿ.

ಎಲೈ ! ಸಾರಥಿ, ನಗರವನ್ನು ತಳಿರು ತೋರಣಗಳಿಂದ ಶೃಂಗರಿಸು. ರಾಜ್ಯ ಸಿಂಹಾಸನದ ಅಂಗಳದಲ್ಲಿ ಕುಂಕುಮ ರಂಗವಲ್ಲಿ ಸಾರಣಿಗೆ ಹಾಕಿಸು ಮತ್ತು ಪತ್ರವಂ ಲೇಖಿಸಿ ಸಮಸ್ತ ಅರಸರಿಗೆ ಕರೆಯಿಸುವಂಥನಾಗು ದೂತಾ, ಕೇಳೆನ್ನ ಮಾತಾ.

ಬಸವಣ್ಣ, ಮಧುವರಸ, ಮಂಚಣ್ಣನವರ ಸಭಾ

ಬಸವಣ್ಣ : ಎಲೈ ! ಸುಂದರ ಸುಮತಿಯೆ ಇಂದಿನ ದಿವಸ ದ್ವಂದ್ವ ಕರಪದಗಳ ಮುಗಿದು, ಸಂದಿರ್ದ ಸಭೆಯೊಳು ತಂದೆ ತಾವು ದಾರೆಂದು ವಂದಿಸಿ, ಚಂದ ಛಂದದ ನುಡಿಗಳಿಂದ ಕೇಳುವ ಕಂದನಾಗ್ರಣಿ ನೀನು ದಾರು ಬಾಲಾ, ಗುಣಮಣಿ ಲೋಲಾ.

ಎಲೈ ! ಸಾರಥಿ ನಾನು ದಾರೆಂದರೆ– ಹಿಂದೆ ಮಾಡಿದ ಪುಣ್ಯದಿ ಬಂದ ಮಾನವ ಜನ್ಮ ಮುಂದೆಂದಿಗೂ ಸಿಗದೆಂದೂ ದಂದುಗವಳಿದು ತಂದೆ ಸಂಗಮನಾಥನ ಮುಖದಿಂದ ವಂದಿಸಲು ಸತ್ಕರ್ಮ, ನಿಂದಿಸಲು ದುಷ್ಕರ್ಮವೆಂದು ಮುಂದಿಟ್ಟ ವಚನವನ್ನಾಲಿಸಿ, ಸದ್ಭಕ್ತರನ್ನು ಶಿವನ ಸಮವೆಂದು ಭಾವಿಸುವೆ. ಅಲ್ಲದೆ ಮುಂದೆ ಭಾಗ್ಯವನೆಂದು ಅನ್ನಲಾರೆನು. ದಾನ ಧರ್ಮಾಂಬುಧಿಯಲ್ಲಿ ಮನಸೋತು ಹೀನ ವಿಷಯಂಗಳ ದೂಡಿ ಫಣಿಯೊಳು ವೀರಭಸ್ಮವ ತೀಡಿ, ಮಿನಗುವ ಜಗಕ್ಕೆ ಕನಸೆಂದೆಣಿಸಿ ನನ್ನ ಸಂಗಡ ಬರುವ ಜಿನಸುಗಳ ಗೆಳೆತನ ಬೆಳಸಿ, ತನುವನು ದಂಡಿಸಿ, ಅನ್ಯ ಬಾಲೆಯರೊಳು ನಯನ ನಿಲ್ಲದಾಗಿ, ಇನ್ನೊಬ್ಬರ ಧನದಲ್ಲಿ ಆಸೆ ಇಲ್ಲದವನಾಗಿ, ಪರರ ದೂಷಣೆಯಲ್ಲಿ ನಾಲಿಗೆ ಇಲ್ಲದವನಾಗಿ, ಭೂವನದಲ್ಲಿರುವ ಜೀವಿಗಳೆಲ್ಲ ಮಹಾದೇವನೆಂಬ ವಿಶಾಲ ಭಾವನೆ ತಾಳಿ, ಮಾದಿರಾಜನ ಇಷ್ಟಾರ್ಥಕ್ಕೆ ಮಾದಲಾಂಬಿಕೆಯು ಗರ್ಭಸಂಜಾತನಾದ ಚದುರ 'ಬಸವೇಶ'ನೆಂದು ತಿಳಿಯಲಾ ಸಾರಥಿ.

ಕೊಂಡೆಯ ಮಂಚಣ್ಣ : ಎಲೈ ! ಅಂಧಕಾರದಿಂದ ಕಪ್ಪಾಗಿದ್ದ ಅಂತರಿಕ್ಷದಲ್ಲಿ

ಉದಯಿಸಿದ ನಕ್ಷತ್ರಗಳಲ್ಲಿ ಕೆಂಪಾದ ಕಾಂತಿಯಿಂದೊಪ್ಪುವ ಚಂದ್ರನಂತೆ ಕಲ್ಯಾಣ ಮಂದಿರಕ್ಕೆ ಒಡೆಯನಾದ ಬಿಜ್ಜಳನ ಗೂಢ ಪ್ರಚಾರಕ ಕೊಂಡಿ ಮಂಚಣ್ಣನೆಂದು ತಿಳಿಯಲಾ ಸಾರಥಿ.

ಮಧುವರಸ : ಸ್ವಸ್ತಿ ಸಮಸ್ತ ಭೂಮಂಡಲವೆಂಬ ವನಿತೆಯ ಮುಖಕ್ಕೆ ತಿಲಕದಂತೆಸೆವ ಕರ್ನಾಟಕ ದೇಶದೊಳು, ನೋಡುವವರಿಗೆ ಬೆಳಗಿನ ಬಾಲಸೂರ್ಯನಂತೆ ನೇತ್ರ ಪ್ರಜ್ವಲಿಸುತ್ತಿರುವ ಕಲ್ಯಾಣ ಮಂದಿರಕ್ಕೆ ಪಾತಾಳದ ಬಲಿ ಚಕ್ರವರ್ತಿಯಂತೆ ಲಂಕಾಧಿಪತಿ ರಾವಣನಂತೆ ಶೋಭಿಸುವ ಬಿಜ್ಜಳನ ಓಲಗದಲ್ಲಿ ವಿದ್ಯುನ್ಮುಕುಟ ಮಣಿ ಮಧುವರಸನೆಂದು ತಿಳಿಯಲಾ ಸಾರಥಿ.

ಬಸವಣ್ಣ : ಎಲೈ ! ಸಾರಥಿ, ಈ ಸಭಾದತ್ತ ಬಂದ ತಾತ್ಪರ್ಯವೇನೆಂದರೆ – ಈ ಪಟ್ಟಣದಲ್ಲಿ ಹೊಟ್ಟೆ ಬಟ್ಟೆಗಿಲ್ಲದೆ ಯಾರಾದರೂ ಕಷ್ಟಕ್ಕೀಡಾದರೆ ನಿಲ್ಲದೆ ನನಲ್ಲಿಗೆ ಬಂದು ತಿಳಿಸಿದರೆ ಮುಕ್ತ ಹಸ್ತದಿಂದ ಸಹಾಯ, ಸಹಕಾರ ನೀಡುವೆನೆಂದು ಒಡನೆ ಪಸರಿಸು. ದೇಶದಲ್ಲಿರ್ಪ ನಿರಾಶ್ರಿತರಿಗೆ ಈ ನಗರದಲ್ಲಿ ವಾಸಿಸಲಿಕ್ಕೆ ಘೋಷಿಸು. ಭಿಕ್ಷುಕ ಜನರು ತಮ್ಮಾಪೇಕ್ಷೆ ಇಚ್ಛೆಸಿದಲ್ಲಿ ನಾನವರ ದಾಸನ ದಾಸನಾಗಿ ಈಶ ಸಮನೆಂದು ಅಶನವನಿಕ್ಕಿ ಪೋಷಿಸುವೆನು ಪಸರಿಸುವದಕ್ಕೆ ಬೇಸರ ಮಾಡಿಕೊಳ್ಳಬೇಡ. ಬೇಡಿದವರಿಗೆ ಬೇಡಿದ್ದು ಕೊಡುವೆನು ಬೇಡುವವರಿಲ್ಲದಂತಾಗಿರುವದು. ಬೇಕಾದವರು ಬಂದು ತಮಗೆ ಸಾಕಾಗುವಂತೆ ಬಯಸಬೇಕೆಂದು ಡಂಗುರ ಸಾರಿಸು ಮಾತು ಮನ್ನಿಸು.

ಮಂಚಣ್ಣ : ಅಹೇ ! ಬಸವಣ್ಣ ಬೇಡಿದವರಿಗೆ ಬೇಡಿದ್ದು. ಕೊಡಲಿಕ್ಕೆ ನಿಮ್ಮೊಡನೆ ಯಾರಾರಾದರೂ ಕೂಡಿಹಾಕಿರುವ ಧನವಿರುವದೆ? ಅನ್ಯರ ಅರ್ಥವನ್ನು ಇನ್ನೊಬ್ಬರಿಗೆ ದಾನಮಾಡುವ ನೀನೆಂಥ ದೊಡ್ಡವನು? ನಮ್ಮ ಬೊಕ್ಕಸದೊಳಗಿನ ರೊಕ್ಕವೆನ್ನೆಲ್ಲಾ ಸಿಕ್ಕ ಸಿಕ್ಕಂತೆ ದಿಕ್ಕುಪಾಲು ಮಾಡಿ, ನಮಗೂ ರೈತರಿಗೂ ಭಿಕ್ಷೆ ಬೇಡಲಿಕ್ಕೆ ಹಚ್ಚುವಂತೆ ಕಾಣುತ್ತದೆ. ಧರ್ಮವೆಸಗಿ ಕೀರ್ತಿಗಳಿಸಬೇಕಾದರೆ ನಿನಗೆ ಸಿಗತಕ್ಕ ವೇತನದೊಳು ಮಾಡು ಮಂತ್ರಿ ಅತಿ ಕುತಂತ್ರಿ.

ಮಧುವರಸ : ಭಲ ಎಲೈ ! ಬಸವಣ್ಣ, ನೀನು ಸಜ್ಜನನೆಂದು ಬಿಜ್ಜಳನು ತನ್ನ ರಾಜ್ಯಧಿಕಾರವನ್ನು ಒಪ್ಪಿಸಿದ್ದೇ ತಪ್ಪಾಗಿರುವದು. ಆ ಭೂಪಾಲನು ನಿನ್ನನ್ನು ಮಂತ್ರಿ ಸ್ಥಾನದಲ್ಲಿ ಮೂರ್ತಿಸಿದಿಲ್ಲವಾದರೆ ಭಿಕ್ಷುಕರಿಗೆ ಇಷ್ಟಾರ್ಥವಿತ್ತು ಕೀರ್ತಿಗಳಿಸುವ ಮಾತು ತಿಳಿಯುತ್ತಿತ್ತು. ಮಿಂಚಿ

ಹೋದ ಮೇಲೆ ಹಂಚಿಕೆ ಹಾಕಿ ಫಲವೇನು? ವಂಚಕನೆ, ಲಕ್ಷದ ತೊಂಬತ್ತಾರು ಸಾವಿರ ಯಾಚಕರಿಗೆ ಖರ್ಚಿಗೆ ಒದಗುವದು ವಿಚಾರ ಮಾಡಿಕೋ. ಅರಸನು ಬಂದು ಕಚೇರಿಯ ಜಮಾ ಖರ್ಚು ನೋಡಿದರೆ ನಿನ್ನ ಪಾಡೇನಾದೀತು? ಮನ ಬಂದಂತೆ ಕುಣಿಯುವದು ಸರಿಯಲ್ಲ. ಮಹಾ ಮಂತ್ರಿ ಪದಕ್ಕೆ ಯೋಗ್ಯವಲ್ಲ.

ಬಸವಣ್ಣ : "ಆದಿ ಪುರಾಣ ಅಸುರರಿಗೆ ಮಾರಿ, ವೇದ ಪುರಾಣ ಹೋತಿಂಗೆ ಮಾರಿ, ರಾಮ ಪುರಾಣ ರಕ್ಕಸರಿಗೆ ಮಾರಿ, ಭಾರತ ಪುರಾಣ ಗೋತ್ರಕ್ಕೆ ಮಾರಿ" ಎಂಬ ವಚನದಂತೆ ನನ್ನ ಕಾರ್ಯಗಳೆಲ್ಲವು ನಿಮ್ಮ ವಿರುದ್ಧವಾಗಿರುವವು. ಮಧುವರಸ, ಮಂಚಣ್ಣನವರೆ, ಧಾರುಣಿಯಲ್ಲಿ ಪರಿಪರಿ ಪುಣ್ಯ ಮಾಡಿದರೆ ಮಾತ್ರ ನರ ಜನ್ಮ ಬಂದಿರುವದು. ಚೊಕ್ಕಟವಾದ ಜನ್ಮದಲ್ಲಿ ಸಿಕ್ಕಂತೆ ನಡೆಯುದಕ್ಕೆ ಮಾಡಿಕೊಳ್ಳದೆ ಮುಕ್ಕಣ್ಣನಂ ಭಜಿಸುತ್ತ ಲೆಕ್ಕದಲೆ ಇರಬೇಕು. ಹೋದದ್ದು ಪುನಃ ಸಿಗಲಾರದು. ಜಂಗಮರ ಸೇವೆಯಲ್ಲಿ ಮನತಂಗಿಸಿ, ಮುಂದೆ ಶರೀರ ಹೊಂದುವದೆ ನಿಲ್ಲಿಸಿ ಬಿಡಬೇಕು. ಸಾಯುವದಂತೂ ಯಾವನಿಗೂ ತಪ್ಪಿದ್ದಲ್ಲ, ಮರಣವಾಗುವಾಗ ನಿಮ್ಮ ಸರಿ ಯಾರಾರು ಬರುವದಿಲ್ಲ. ಬಿಜ್ಜಳನು ತನ್ನ ನಿಜಮಾತೆಯಿಂದ ಜನಿಸಿ ಬರುವಾಗ ಈ ಸಡಗರವನ್ನು ಸಂಗಡಲೆ ತಂದಿರುವನೊ ಹೇಗೆ? ಸಂಗಮನಾಥ ನೀಡಿದ ಸಂಪತ್ತು ಕೊಡಲಿಕ್ಕೆ ನಿಮ್ಮೊಡಿಯನಿಗೇತಕ್ಕೆ ಕೇಳಬೇಕು? ಕೊಟ್ಟವರಿಗೆ ಕೊಟ್ಟರೆ ನಿಮಗೇತಕ್ಕೆ ಸಿಟ್ಟು? ನಮ್ಮ ನಿಮ್ಮಗಳಿಗೆಲ್ಲ ಅನ್ನವನಿತ್ತು ಸಲಹುವ ಚಿನ್ಮಯನಿರಲಾಗಿ ಖಾಲಿ ಏತಕ್ಕೆ ಚಿಂತೆ, ಇರುವದು ನಿಶ್ಚಿಂತೆ.

೧ನೇ ಜಂಗಮ : ಓಂ ಭವತಿ ಭಿಕ್ಷಾಂದೇಹಿ, ಭವತಿ ಭಿಕ್ಷಾಂದೇಹಿ.

ಬಸವಣ್ಣ : ಹೇ ! ಈಶ ರೂಪನೆ, ಈ ಸಮಯದಲ್ಲಿ ಎನ್ನ ಆಶ್ರಮಕ್ಕೆ ಬಂದು ಭಿಕ್ಷಾಂದೇಹಿಯೆಂದು ಶಬ್ದ ಉಸುರಿದ ಕಾರಣವೇನು ಪೇಳು ? ಇಷ್ಟಾರ್ಥ ಹೇಳು. ಇದ್ದ ಬಗೆ ಹೇಳು.

೧ನೇ ಜಂಗಮ : ಇಲ್ಲೆನಿಸಿದ ಯಾವಾಗಲೂ ಬಯಸಿದ ಅಡಿಗೆಯಂ ಸಲ್ಲಲಿತ ನೀಡಿ ಉಂಡುಣಿಸುವ ಬಸವಣ್ಣ, ನಿನ್ನ ಕೈಯಿಂದ ಮಾಡಿದಡಿಗೆ ತಿಂದು ಡೇಕರಿಸಬೇಕೆಂದು ಆಸೆ ಅತಿಯಾಗಿರುವದು, ಅಲ್ಲದೆ ಮುತ್ತು ರತ್ನ ಇತ್ಯಾದಿ ವಸ್ತುಗಳ ಇತ್ತು ಕಳಿಸು, ಮನ ಸಂತೋಷಗೊಳಿಸು.

ಬಸವಣ್ಣ : ನೂರಾರು ವರ್ಷ ಬಾಳುವೆನೆಂದು ಹಾರೈಸಿ ಸೇರಿರ್ಪ ಆಸೆಯ

ದೂರ ಮಾಡ್ವದಕ್ಕಾಗಿ ಬಂದ ಗುರುದೇವ ನಿಮ್ಮ ಮನಸಾರೆ ಸಾಮಾನು ತೆಗೆದುಕೊಂಡು ಪೋಗಿರಿ ಆಶೀರ್ವಾದ ನೀಡಿರಿ.

೨ನೇ ಜಂಗಮ : ಕ್ಷಮೆಯ ಗುಣಂಗಳತಿ ಪ್ರೇಮಿಯಾದ ಸ್ವಾಮಿಯೇ ವೀರಶೈವಧರ್ಮ ಸಂಸ್ಥಾಪನೆಗೈದ ಆಚಾರ್ಯನೆ, ದಿನಾಲು ನನಗೆ ತಿನ್ನಲಿಕ್ಕೆ ಉಂಡಿ, ಬಾಸುಂದಿ ಅನೇಕ ನಮೂನೆ ನಮೂನೆಯ ತಿನಸುಗಳು ಬೇಕು. ಆ ರಾತ್ರಿ ಸಮಯದಲ್ಲಿ ಪ್ರೇಮ ಸುಖಕ್ಕಾಗಿ ಕಾಮಿನಿಯಳೊಬ್ಬಳು ಬೇಕು. ಆ ಭಾಮಿನಿಯು ಇಂದ್ರಲೋಕದ ರಂಭೆ, ಊರ್ವಶಿಯಂ ನಾಚಿಸುತ್ತಲಿ, ಎಮ್ಮ ಮನೋಬಯಕೆ ಕೈಗೂಡಿಸಿದರೆ ನಿನ್ನಲ್ಲಿರುವದು, ಇಲ್ಲವಾದರೆ ಕಲ್ಯಾಣ ಬಿಡುವೆನು. ಥಟ್ಟನೆ ಪೋಗುವೆವು.

ಬಸವಣ್ಣ : ಕಾಡುವ ಕರ್ಮೇಂದ್ರಿಯಗಳಿಗೆ ಮನಸೋತು ಕ್ಷುಲ್ಲಕ ಆಸೆಪಡುವದು ತರವಲ್ಲ. ಪರವಧುವಿಗೆ ಮಹಾದೇವಿ ಎಂಬುದು ನನ್ನ ಧರ್ಮ. ಪರಿಶುದ್ಧ ಹೃದಯದವರಾಗಿ ಲೋಕಕ್ಕೆ ಉಪದೇಶವಂ ಸಾರುತ್ತ ಕಲ್ಯಾಣದಲ್ಲಿರುವದು ಒಳಿತು ಮಹಾನುಭಾವ.

ಮಂಚಣ್ಣ : ಅಬ್ಬಾಬ್ಬಾ ! ಕಂಡದ್ದನ್ನೆಲ್ಲಾ ಕೊಡಲು ಇವರು ತಂದ ಗಂಟೇನು? ಒಬ್ಬೊಬ್ಬರಿಗೆ ತಿನ್ನಲಿಕ್ಕೆ ಮುಕ್ಕು ಧಾನ್ಯದ ಅನ್ನ ಸಹ ಸಿಗುವದಿಲ್ಲಾ. ಉಂಡಿ, ಬಾಸುಂದಿ, ಉಂಡ ಮೇಲೆ ರಂಡೆಯರು ಬೇಕಂತೆ. ರಂಡೆಯರು ಬಯಸುವಂಥಾ ಇವನೆಂಥಾ ಮಾನವನೋ ತಿಳಿಯದಾಗಿದೆ.

ಬಸವಣ್ಣ : ಲಾಂಛನ ಕಂಡರೆ ನಂಬುವೆ, ತೊತ್ತಿಂಗೆ ತೊತ್ತು ಕೆಲಸವಲ್ಲದೆ, ಅತ್ಯಧಿಕ ಅರಸ ಕೆಲಸ ಬಲ್ಲುದೆ? ಅಹೇ ! ಮಂಚಣ್ಣನವರೇ ಅವನೇ ಇರಲಿ? ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸೋದರ ಭಾವದಿಂದ ಜೀವಿಸುವ ಈ ಬಸವನು ಆವುದನ್ನು ಅರಿಯನು? ಕಾರಣ ಶರಣರ ವಿಷಯಕ್ಕೆ ಅಸಹ್ಯ ಥರವಲ್ಲ, ನಿಮಗದು ಒಳಿತಲ್ಲ.

೩ನೇ ಜಂಗಮ : ಆಶ್ರಯವಿಲ್ಲದಂಥ ನಿರಾಧಾರವುಳ್ಳಂಥ ನಿರಾಶ್ರಿತರಿಗೆ ದಾಸೋಹ ನೆವದಿಂದ ಅನ್ನವಸ್ತ್ರಾದಿ ನೀಡಿದಿ. ಬಸವೇಶ, ಬೊಕ್ಕಸದಲಿ ಲೆಕ್ಕಮಾಡಿ ಮುದ್ರೆ ಹಾಕಿ ಇಕ್ಕಿರುವ ರೊಕ್ಕವನ್ನು ಭಿಕ್ಷಾರ್ಥವಾಗಿ ಪೆಟ್ಟಿಗೆ ಬರಿದಾಗಿ ಮಾಡಿ ಚಕ್ಕನೆ ಕೊಟ್ಟುಬಿಟ್ಟು ನೆಟ್ಟನೆ ಕೀರ್ತಿ ಪಡಿಯೋ ಮಹಾರಾಜ.

ಬಸವಣ್ಣ : ಅಹೇ ಬುದ್ಧಿವಂತ ಜಂಗಮರೆ. ಸದಮಲದಿ ನಿಧಿಯನ್ನು ಒದಗಿಸುವ ಮೊದಲು ತೆಗೆದುಕೊಂಡು ಪೋಗಿರಿ.

ಮಧುವರಸ: ಅಲಲಲಲಾ ! ಬಿಜ್ಜಳನು ನಿನಗೆ ಮಂತ್ರಿಪದವಿ ಇತ್ತಿದ್ದು ಹೇಗಾಯಿತೆಂದರೆ-ಮುಗ್ಗುವ ಐರಾವತ ಮೇಲೆ ದಿಗ್ವಿಜ ಬೆಳೆಸಿದಂತಾಯಿತು. ಧನವನ್ನು ದಾನಾರ್ಥವಾಗಿ ಕೊಟ್ಟು ಭಂಡಾರದೊಳಗೆ ಏನೂ ಇಲ್ಲದಂತೆ ಖಾಲಿ ಮಾಡಿ ಬಿಟ್ಟೆಯಲ್ಲಾ. ಪೃಥ್ವಿಯಲ್ಲಿ ನೀನು ಜನ್ಮವಿತ್ತದ್ದು ಮತ್ತೊಬ್ಬರ ಅರ್ಥವಂ ವ್ಯರ್ಥ ಮಾಡುವುದಕ್ಕೆ ಬಂದಂತೆ ತೋರುತ್ತದೆ. ಸದ್ಯಕ್ಕೆ ನಾವಿದ್ದ ನಗರಕ್ಕೆ ಪರರಾಜರಾರಾದರೂ ಯುದ್ಧಕ್ಕೆ ಸನ್ನದ್ಧರಾಗಿ ಬಂದರೆ ಮದ್ದು ಗುಂಡುಗಳಿಗೆ ಹಣವಿಲ್ಲದ್ದಕ್ಕಾಗಿ ಎದ್ದು ಓಡಿ ಹೋಗುವ ಪ್ರಸಂಗ ಬಂದೀತು. ಈ ಬುದ್ಧಿ ಎಲ್ಲಿ ಕಲಿತು ಬಂದಿ ಮಹಾರಾಯ, ಮಾಡಬಾರದು ಅನ್ಯಾಯ.

ಬಸವಣ್ಣ : ಜಡ ಬುದ್ಧಿ ಜನಸಂಗದೊಡಗೂಡಿ ಕುಟಿಲಾಟವಿಷಯಾದಿ ಬಿಡದೆ ಬಡಜನರ ದುಡಿಮೆ ದೊಡ್ಡವರು ದೂಷಣೆ ಮಾಡಿ ಅಡಿಗಡಿಗೆ ನಾನೆಂಬ ಅಭಿಮಾನವಿಡಿದು ಶರಣರಂ ಪೀಡಿಸಿ ಬಡಬಡಿಸುವ ಮಧುವರಸರೆ, ಭಕ್ತಿಯೆಂಬ ಕ್ಷೀರ ಕಡಲವು ಶಿವ ಭಕ್ತಿಯೆಂಬ ಕಲ್ಪವೃಕ್ಷವು ಈ ಬಸವನಲ್ಲಿರಲು ಅನ್ಯರ ಒಡವೆಗಳಂ ಕೆಡಿಸುವನೆ? ಘೋರ ಸಮುದ್ರವನ್ನು ಹಾರುವ ರಾಜಹಂಸವು ಸರೋವರವನ್ನು ದಾಟುವುದಕ್ಕೆ ಹಿಂಜರಿಯುವುದೆ? ಕೂಡಲಸಂಗಮೇಶನ ಭಕ್ತರ ಮಹಿಮೆ ಮೂಢಮತಿಯರಿಗೆ ಹೊಳೆಯಲಾರದು. ನಿಧಿಯನ್ನು ಯಾವಾತನಿಗೆ ಇತ್ತನೋ ಅದು ಆತನದೆ. ಶಿವಭಕ್ತರು ಪರರ ದ್ರವ್ಯವಂ ತೃಣ ಸಮಾನವೆಂದು ಭಾವಿಸುವರು. ನಾನಿತ್ತ ದಾನಕ್ಕೆ ನಿಮ್ಮ ಸಮ್ಮತವಿಲ್ಲದಿದ್ದಲ್ಲಿ ಪೆಟ್ಟಿಗೆಗಳನ್ನು ತೆಗಿಸಿ ನೋಡು ಮಂತ್ರಿ ನೀ, ಉಳಿಯಲಾರದೀ ರಾಜಧಾನಿ.

ಬಿಜ್ಜಳ : ಭಲ ಎಲೈ ! ಸಾರಥಿ, ಕುರುಸಾರ್ವಭೌಮ ದುರ್ಯೋಧನನಿಗೆ ಮುಂದಣ ಸರ್ವಕಾಲಿಕ ಚತುರೋಪಾಯವನ್ನು ತೋರುತ್ತಿದ್ದ ಶಕುನಿಯಂತಿರುವ ಎನ್ನ ಮತ ಬಂಧು ಕೊಂಡೆಯ ಮಂಚಣನನ್ನು ಅತಿಜಾಗೃತಿಯಿಂ ಕರೆದುಕೊಂಡು ಬರುವಂತನಾಗು.

ಮಂಚಣ್ಣ : ಬ್ರಹ್ಮಾಂಡದಲ್ಲಿರ್ಪ ಕೊಂಡೆಯರ ಗಂಡನೆನಿಸುವ ಬಿಜ್ಜಳ ಮಹಾ ಮಂಡಲೇಶ್ವರ ತಮ್ಮ ಸಮ್ಮುಖದಲ್ಲಿ ಈ ಮಂಚಣ್ಣನು ಮಂಡಿಯಂ ಬಾಗಿಸುವನು. ಆಶೀರ್ವದಿಸಬೇಕು ರಾಜ, ಶ್ರವಣ ಕುಲ ತೇಜ.

ಬಿಜ್ಜಳ : ಸತತ ಹಿತವನ್ನು ಬಯಸುವ ಮತಿವಂತ ಅತಿ ಸಾಹಸಿಗ ಮಂಚಣ್ಣನೆ

ಅತ್ಯಾನಂದಾಶೀರ್ವಾದವಾಗಲಿ. ಅಹೇ ! ಮಂಚಣ್ಣನೆ, ಈ ಸಾರ್ವಭೌಮನ ಅರಸೊತ್ತಿಗೆಯಲ್ಲಿ ಮಂತ್ರಿ, ಪ್ರಧಾನ ಪ್ರಜರು ಶಾಂತತೆಯಲ್ಲಿ ಉತ್ತಮ ಗುಣಸಂಪನ್ನತೆಯಿಂದ ವರ್ತನೆಯಲ್ಲಿರುವರೋ ಹೇಗೆ? ಮುತ್ತು ರತ್ನ ಬೊಕ್ಕಸದ ಮೇಲಿರುವ ಹತ್ತು ಅಧಿಕಾರಿಗಳು ತಮ್ಮ ನಿತ್ಯದ ಲೆಕ್ಕಪತ್ರಗಳು ಚಿತ್ತದೊಳಿಟ್ಟು ನೋಡುತ್ತಿರುವರೋ ಹೇಗೆ? ಇದರೊಳಗೆ ತತ್ತರ ಮಾಡುತ್ತಿದ್ದರೆ ಎನ್ನೆದುರಿನಲ್ಲಿ ಬಿತ್ತರಿಸು. ಅವರಂ ಕೆಲಸದಿಂದ ಕಿತ್ತೊಗೆದು ಬಿಡುವೆನು. ಉತ್ತಮ ಜಾತಿಯ ಸಪ್ತಶತ ಮದ್ದಾನೆಗಳು, ಅತಿ ವೇಗವುಳ್ಳ ಹನ್ನೆರಡು ಸಹಸ್ರ ಅಶ್ವಗಳು, ಹದಿನಾರು ಲಕ್ಷ ಕಾಲ್ದಳವು, ಹನ್ನೊಂದು ಸಾವಿರ ವಜ್ರ ತುಂಬಿದ ಕಣಜಗಳು ಸುವ್ಯವಸ್ಥಾನದಲ್ಲಿರುವವೇನು? ಚನ್ನಾಗಿ ಪೇಳು ಧೀರ ಅತಿ ಚಾತುರ.

ಪದ

ಕ್ಷಿತಿಪತಿ ಕೇಳೈ ನೀನು ಅತಿ ಜಾಗೃತಿ ಇರು ಇನ್ನ .
ಪತ್ತೇನು ಅರಿ ಮಂತ್ರೀಶ ಬಸವೇಶನ ॥ ೧ ॥

ಬಂದ ಜಂಗಮರಿಗೆ ಇಂದು ಬೇಡಿದು ಕೊಡುವ
ಮುಂದೇನುಳಿಯುವದು ಕಲ್ಯಾಣ ॥ ೨ ॥

ಲಕ್ಷದತೊಂಬತ್ತಾರು ಸಾವಿರ ಜಂಗಮರಿಗುಣಿಸುವನು
ಮೋಕ್ಷಕ್ಕೆ ದೇವನಗರದ ಮಲ್ಲಿಕಾರ್ಜುನ ॥ ೩ ॥

ಹೆ ! ರಾಜಾ, ಈ ಕಲ್ಯಾಣಪಟ್ಟಣದಲ್ಲಿ ಸೋಜಿಗದ ಪ್ರಧಾನಮಂತ್ರಿ ಪದವಿಯಲ್ಲಿ ರಾರಾಜಿಸುವ ಬಸವಣ್ಣನು ತಾನೆ ಸ್ವತಂತ್ರನಾಗಿರ್ಪನಂತೆ ಎನ್ನಂತರಗದಲ್ಲಿ ತೋರುತ್ತದೆ. ಬೊಕ್ಕಸದಲ್ಲಿರ್ದ ರೊಕ್ಕವೆಲ್ಲ ಭಿಕ್ಷುಕರಿಗೆ ರಕ್ಷಣಾರ್ಥ ಸಿಕ್ಕ ಸಿಕ್ಕಂತೆ ಲೆಕ್ಕವಿಲ್ಲದೆ ದಿಕ್ಕುಪಾಲು ಮಾಡಿರುವನು. ಮತ್ತು ಲಕ್ಷದ ತೊಂಭತ್ತಾರು ಸಾವಿರ ಜಂಗಮರು ಉಂಬುವ ದೆಸೆಯಿಂದ ಅವರು ಬಯಸಿದ್ದನ್ನು ಇತ್ತೇ ಬಿಡುವನು. ಬಯಸಿದ ಶೃಂಗಾರವಂ ತುಂಬಿ ಕೊಟ್ಟರೆ ಮುಂದೆ ನಮಗೆ ಅಂಬಲಿ ಸಹ ಸಿಗಲಿಕ್ಕಿಲ್ಲ. ಅಹೇ ! ಧರಣಿಪತಿಯೆ, ತ್ವರಿತದಿಂದೆ ಆ ದುರುಳನನ್ನು ಕಾರುಭಾರದಿಂದ ಸರಿಸುವದು ಲೇಸು. ದೊರೆಯೆ ನಿನಗಾರು ಸರಿಯೆ.

ಬಿಜ್ಜಳ : ಭಲ ಎಲೈ ! ಅತಿ ಹಿತ ಬಂಧು ಮತಿವಂತನೆ, ಮೃತನಾದ ಚತುರ ಬಲದೇವನಿಗೆ ಸುತನಿಲ್ಲದ ಕಾರಣ ಆತನ ಮನೆತನಕ್ಕೆ ಅಮಾತ್ಯ ಪದವು ಇರಲೆಂಬ ಕುತೂಹಲದಿಂದ ಬಸವೇಶನಿಗೆ ಇತ್ತಿರುವೆನು.

ಆತನಾದರೂ ಸಾಮಾನ್ಯನಲ್ಲ. ಗತಿಸಿ ಹೋದ ಕೆಲದಿವಸಗಳ ಹಿಂದೆ ಸತ್ಯಲೋಕದಿಂದ ಬಿದ್ದ ದೇವಲಿಪಿಯ ಅರ್ಥವನ್ನು ಗುರ್ತಿಸುವದು ಅವನಿಂದಾಗಿತ್ತು. ಆ ಉತ್ತಮನೆ ಗೊತ್ತುಹಚ್ಚಿ ತರ್ಕಿಸಿ ಹತ್ತು ಸಹಸ್ರ ಅರ್ಥವನ್ನು ನೀಡಿದುದನ್ನು ಸಮಸ್ತರು ಚಿತ್ತೈಸಿದ್ದು ನಿನಗೆ ಗೊತ್ತಿಲ್ಲವೆ? ಕಾರಣ ಮತ್ಯಾವತರದ ತಪ್ಪುಗಳಿದ್ದರೆ ಹೇಳು, ಆಡದಿರು ಸುಳ್ಳು.

ಮಂಚಣ್ಣ : ಅಲಲಲ ಭಲ ಎಲೈ ! ಭೂಪತಿ, ಲಕ್ಷಾಂತರಗಟ್ಟಲೆ ಖರ್ಚಮಾಡಿ ಧರ್ಮ ಪ್ರಚಾರ ಮಾಡಿರುವನು. ಆ ಮೂಢನಿಗೆ ಮಹಾತ್ಮನೆಂದು ಹೊಗಳುತ್ತ ಕುಳಿತರೆ ನಮ್ಮೀರಾಜಧಾನಿಗೆ ಅಸ್ತವ್ಯಸ್ತ ತಪ್ಪಿದ್ದಲ್ಲ. ಆ ಜಾತಿ ಈ ಜಾತಿ ಎನ್ನದೆ ವಿಜಾತಿಯಂ ನೆರೆಸಿ ಒಂದೆ ಪಂಕ್ತಿ ಸಾಗಿಸುವನು. ಡೋಹರ ಕಕ್ಕ್ಯಾ, ಸಮಗಾರ ಹರಳ್ಯಾ, ಹಡಪಿಗನಾದ ಅಪ್ಪ್ಯಾ, ಹಂಪ್ಯಾ, ರೇಚ್ಯಾ ಮಡಿವಾಳ ಮಾಚ್ಯಾ ಈ ಸಮಸ್ತರಿಗೆ ಅಯ್ಯಾ ಅಯ್ಯಾಯೆಂದು ಕರೆದು ಸರಿಸಮಾನ ಆಸನದಲ್ಲಿ ಮುಹೂರ್ತಗೊಳಿಸಿಕೊಳ್ಳುವನು. ದೇವಾ ದಿವ್ಯ ಪ್ರಭಾವ.

ಬಿಜ್ಜಳ : ಅಹ ! ಇದೇನು? ಗಂಗಾಂಬಿಕೆಯ ಪ್ರಾಣದೊಲ್ಲಭನು ಹಿಂಥ ಮಂಗತನ ಕೆಲಸಕ್ಕೆ ಮನ ಸೋತಿರುವನೆ? ಭಂಗ ಬಂದಿತೆಂದು ಭೀತಿ ಸಹ ಇಲ್ಲದೆ ಜಾತಿ ನೀತಿಗಳ ಆಲೋಚನೆ ಮಾಡದೆ ನೀಚಕುಲದವರ ಕಾಲ್ಗಳಂ ಪಿಡಿಯುವ ಅವಿಚಾರಿಯುಂ ಉಚ್ಚನಾಗಬಲ್ಲನೆ? ಈ ಪೊಡವಿ ಪಾಲನ ಭಯವಿಲ್ಲದೆ ತುಡುಗ ಮುಂಡೆ ಮಕ್ಕಳಿಗೆ ಎನ್ನ ಭಾಂಡಾರದೊಳಗಿರ್ಪ ನಿಧಿಯಂ ಕೊಡಿಸುವ ಕಿಡಿಗೇಡಿಯಂ ಜಾಡಿಸಿ ಬಿಡುವೆನು.

ಮಂಡಿತಾಮತಿ ಪ್ರವೇಶ

ಮಂಡಿತಾಮತಿ : ಕಿಂಕರತ್ವದಿ ಟೊಂಕ ಬಾಗಿಸಿ, ಕಂಠದಿಂದ ಮಧುರನಾದ ಝೇಂಕರಿಸಿ, ನಮ್ಮ ಪಾದ ಪಂಕಜಗಳ ಅಂಕಿತನಾಗಿ, ದೊರೆಸಾನಿ ದಾರೆಂದು ಅಕಲಂಕಿತ ಮತಿಯಿಂದ ಆತಂಕಗೊಳ್ಳದೆ ನಾಮಾಂಕಿತ ಕೇಳುವ ತಮ್ಮಾ ನೀನು ದಾರು ಚಂದದಿಂದಲಿ ಸಾರು.

ಅಪ್ಪ ಸಾರಥಿ ಭಪ್ಪನ್ನ ದೇಶದೊಳೊಪ್ಪುವ ಎನ್ನ ಚಪಲಾಕ್ಷತನವನ್ನು ಉಪದೇಶಿಸುವದು ಚಂಡೇಶ್ವರಿಯು ಗಂಡ ಕೆಂಡಗಣ್ಣ ಶಿವನ ರುಂಡಿನಲ್ಲಿರ್ಪ ಕುಂಡಲಿಯಿಂದಾದರು ತೀರದು.

ಆಕಾಶಮಂಡಲದಲ್ಲಿರ್ಪ ಮೊಡವಂ ಕೊಯ್ದು ಅಡಿಗೆ ಮಾಡುವೆ, ಮರಳಲ್ಲಿ ತೈಲವನ್ನು ತೆಗೆಯುವೆ, ಜಲದಲ್ಲಿ ಮೀನಿನ ಹೆಜ್ಜೆಯಂ ಹುಡುಕುವೆ, ಬರ್ಫಿನ ಮಾಲೆಯಂ ಕಟ್ಟುವೆ, ಇಂಥ ಪಾಂಡಿತ್ಯದಲ್ಲಿ ಘನವಂತೆಯೆನಿಸಿ ಪುಂಡ ಬಿಜ್ಜಳನ ಅರವತ್ತೇಳು ಮಂದಿ ಹೆಂಡಂದಿರೊಳು ಪಟ್ಟದ ರಾಣಿಯಾದ ಮಂಡಿತಾಮತಿಯೆಂದು ತಿಳಿಯಪ್ಪ ಸಾರಥಿ.

ಅಹೇ ! ಸುತಾಗ್ರಣಿ ಸಾರಥಿ ಈ ಚತುರ್ದಶ ಭುವನಂಗಳೊಳು ಶ್ರೀಮಂತ ಧೀಮಂತನೆನಿಸಿದ ಎನ್ನ ಕಾಂತ ಬಿಜ್ಜಳನು ಪಂಥದಿಂದ ಬಸವೇಶ ಮಂತ್ರಿ ಸಂಗಡ ಅಶಾಂತತೆಯನ್ನು ನೆಲೆಸಲಿಕ್ಕೆ ನಿಂತಿರುವನಂತೆ. ಕಾರಣ ನಾಥನಂ ತೋರಿಸು, ದರ್ಶನ ಮಾಡಿಸು.

ಹೇ ! ಪ್ರಾಣಕಾಂತ ಗುಣವಂತ ಶುದ್ಧಾಂತಃ ಕರಣದಿಂದ ಕಾಂತೆಯು ನಮನಗೈವಳು. ನಾಥ ಪಾಲಿಸೆನ್ನ ಮಾತಾ.

ಬಿಜ್ಜಳ : ಎನ್ನಂಗ ಸುಖವನ್ನು ಹಿಂಗದೆ ಪಡೆಯುವ ಕಲ್ಯಾಣ ಪಟ್ಟದರಿಸಿಯೇ ನಿನಗೆ ಮಂಗಲವಾಗಲಿ, ಸತಿ ಮಹಾಪತಿವ್ರತಿ.

ಮಂಡಿತಾಮತಿ :

ಪದ

ರೂಢಿಪತಿಯೆ ಕೇಡಬಯಸಲು ಬೇಡ ॥ ಪಲ್ಲವಿ ॥

ಚಾಡಿಹೇಳ್ವುದು ಕೇಳಬೇಡ: ಬಸವನ ಗೊಡವಿಗೆ ಹೋಗಬೇಡ.
ಒಡಿಯ ನಿನಗೆ ಬೇಡಿಕೊಂಬುವೆ ಮಡದಿ ನುಡಿ ಲಾಲಿಸಯ್ಯ ॥ ೧ ॥

ಸೋಮಧರನ ಆಜ್ಞೆಯಿಂದ ಭೂಮಿಗಿಳಿದ ಸ್ವಾಮಿ ಮಂತ್ರಿಗೆ
ಪಾಮರ ಕೃತಿಗೈಯಬೇಡ ರಮಣ ಕೈಯ ಮುಗಿವೆನಯ್ಯ ॥ ೨ ॥

ಕಾಂತ ಕೇಳೈ ಕಾಂತೆ ಮಾತು ನಿಶ್ಚಿಂತನಾಗಿರು ಫಂಥ ಗೆಲುವುದು
ಕಂತುಮರ್ಧ ಮಲ್ಲಿಕಾರ್ಜುನ ಭ್ರಾಂತಿ ಬಿಡಿಸಿ ಶಾಂತಿ ಪಡಿಸ್ಯೆ ॥ ೩ ॥

ಆಹೇ ! ರೂಢಿಪತಿಯಾದ ಎನ್ನೊಡೆಯ ಬಿಜ್ಜಳ ಮಹಾರಾಯನೆ, ಕಿಡಿಗೇಡಿ ಕೊಂಡಿಮಂಚಣ್ಣನ ನುಡಿಗೆ ಕಿವಿಗೊಟ್ಟು ಬಸವಣ್ಣನಿದ್ದೆಡೆಗೆ ಹೋಗಿ ಕಡಿದಾಡಿ ಕದನ ಮಾಡುವಂತೆ ಕಾಣುತ್ತದೆ. ಈ ಕಡುಚೆಲ್ವೆಯಳ

ಮಾತಿಗೆ ಲಕ್ಷ ಕೊಡು. ಆ ವಿಪುಲ ಜ್ಞಾನಿಗೆ ಅಪಮಾನಗೈಯಲಿಕ್ಕೆ ಅಪರಾಧವೇನು? ಹೇ! ಭೂಪಾ ಕೋಪವಂ ತಾಳಿ ಆ ಮಹಿಮನಿಗೆ ಒಪ್ಪದ ವಾಕ್ಯಗಳಿಂದ ತಾಪಪಡಿಸಬೇಡ. ಸ್ವಂತ ದೊರೆಗಳೆ ಕುಂತು ತಮ್ಮ ಮಂತ್ರಿಗಳಿಗೆ ಅತಿ ಹೀಗಳಿಯುವುದು ಕುಂತ ಜನಕ್ಕಾದರೂ ಅಸಂತೋಷವಾಗಿ ತೋರಲಿಕ್ಕಿಲ್ಲವೇ? ಶಾಂತಿನಿಧಿ ಮಲ್ಲಿಕಾರ್ಜುನನು ಮೆಚ್ಚನು. ಕಾರಣ ಈ ಕಾಂತೆಯಳ ಮಾತಿಗೆ ಮನಸೋತು ಮನೆಯಲ್ಲಿರುವದು ನಿಶ್ಚಿಂತ ಕೇಳೆನ್ನ ಮಾತಾ.

ಬಿಜ್ಜಳ : ಹೇ ! ಮುದ್ದು ಪ್ರಿಯಳಾದ ಮಂಡಿತಾಮತಿಯೇ ನೀನು ತಿದ್ದಿ ಹೇಳುವ ಬುದ್ಧಿಯು ಅಬದ್ಧವಲ್ಲದೆ ಶುದ್ಧವಲ್ಲ. ಅದೇಕೆಂದರೆ ಆ ಬುದ್ಧಿಗೇಡಿ ಬಸವನು ಎನ್ನ ಅಮಾತ್ಯ ಪದದ ಗದ್ದುಗೆಯಲ್ಲಿ ಕುಳಿತು, ಕ್ಷುದ್ರ ಕುಲದವರಿಗೆ ಶಿಲೆಯ ಮುದ್ರೆಯನ್ನು ಹೊಡೆದು, ಪಶುಗಳ ಕೊರಳಲ್ಲಿಯ ಗುದ್ದೆಯಂತೆ ಬಿಗಿದು ಮಹಾತ್ಮನಂತೆ ಮೆರೆಯುತ್ತಿದ್ದಾನೆ. ಬೇಡಿದವರಿಗೆ ಬೇಡಿದಷ್ಟು ಕೊಟ್ಟು ಬೊಕ್ಕಸದ ದ್ರವ್ಯವೆಲ್ಲ ಛಿದ್ರಛಿದ್ರ ಮಾಡಿದ್ದಾನೆ. ಮಹಾದೇವಭೂಪಾಲ ಆಳುತ್ತಿರುವ ಮಾಂಡವ್ಯನಗರದ ಹನ್ನೆರಡು ಸಹಸ್ರ ಜಂಗಮರನ್ನು ಕದ್ದು ತಂದಿರುವ ಸುದ್ದಿ ಭದ್ರಾಂಗಳೆ ನಿನಗೆ ಸುದ್ದಿ ಇದ್ದಂತೆ ತೋರುವುದಿಲ್ಲ. ಆದ್ದರಿಂದ ಸದ್ಯಕ್ಕೆ ಮಾಡಬೇಡ, ಅತಿ ನೀನೆಂಥ ರತಿ.

ಮಂಡಿತಾಮತಿ : ಹೇ ! ಭಾಸುರಾಂಗ ಈ ದಾಸಿಯಳು ಉಸುರುವ ಮಾತನ್ನು ಧ್ಯಾನದಿಂ ಲಾಲಿಸು. ಬಸವೇಶನಿಗೆ ಲಕ್ಷದ ತೊಂಬತ್ತಾರು ಸಾವಿರ ಗಣಗಳಿಗೆ ಪ್ರತಿ ದಿವಸದಲ್ಲಿ ಅಶನವೀಯಬೇಕೆಂದು ಸಂಗಮೇಶನ ಭಾಷೆ ಇದೆ. ಗುರುರೂಪ ಧರಿಸಿ ಸರಿಯಾಗಿ ಗರೆಯಲ್ಲಿ ತಿರುಗಾಡಿದರೆ ಹನ್ನೆರಡು ಸಾವಿರ ಮಹೇಶ್ವರರು ಕಡಿಮೆಯಾದರು. ಆವಾಗ ನಮ್ಮ ಬಸವೇಶನು ಕೋರಿಶೆಟ್ಟಿ ವೇಷದಿಂದ ಮಹಾದೇವ ಭೂಪಾಲನ ಪುರವಂ ಸೇರಿ, ಮಾರುತಿ ದೇವಾಲಯದಿ ಮುಹೂರ್ತಗೈದು ಓರ್ವ ಗುರುರೂಪನಿಗೆ ಅರಸನಾಜ್ಞೆಯಿಂದ ಬಿನ್ನವಿಸಲು ಸರಿಯಾದ ಸಾಂಬರದ ಒಗ್ರಾಣಿವಾಸಕ್ಕೆ ಓರ್ವ ಓರ್ವರಾಗಿ ಸರ್ವರೂ ನೆರೆದು ನೀವಿರುವ ಕಲ್ಯಾಣಕ್ಕೆ ಬರುತ್ತೇವೆಂದು ಅಲ್ಪರಿದರು. ಆಗ ಪುರವನ್ನು ತನ್ನ ಹರಕ ಹಡಪಿನಲ್ಲಿ ಸೇರಿಸಿ ಹೊತ್ತುಕೊಂಡು ಬರುವಷ್ಟಕ್ಕೆ ಮಹದೇವ ಭೂಪಾಲನು ಬೆನ್ನಟ್ಟಿ ಬರಲು ದಾರಿಯೊಳು ನುಲಿಯ ಚಂದಯ್ಯನೆಂಬ ಶರಣನು ಹನ್ನೆರಡು ಸಹಸ್ರ ಜಂಗಮರ ಸಹವಾಗಿ ಬಸವಣ್ಣನಂ

ನುಂಗಿದ ವರ್ತಮಾನ ಕೇಳಿಲ್ಲವೆ? ಕಾರಣ ಹರಭಕ್ತರ ಮನ ನೋವಾಗುವಂತೆ ಜರಿಯಬೇಡ, ನಮಗಾಗುವದು ಕೇಡಾ.

ಬಿಜ್ಜಳ : ಭಲ ಎಲ್ಯೆ ! ಕುಂದು ಕೊರತೆಯನ್ನರಿಯದ ಸುಂದರಿ, ಇಂದು ನೀನೇನಂದರೂ ನಿನ್ನ ಮಾತು ಸಂಬಂಧ ಮಾಡಿಕೊಳ್ಳದೇ ಆ ಮಾದಲಾಂಬಿಕೆಯ ಕಂದನನ್ನು ಅಂದಗೆಡಿಸುವುದು ಖಂಡಿತ. ಹಿಂಡು ಜಂಗಮಯ್ಯ ಜೋಗಿಗಳಿಗುಣಬಡಿಸುವ ಅವನಿಗೆ ಪರಶಿವನ ಆಜ್ಞೆಯಿದ್ದರೆ ಉಂಡಿ ಬಾಸುಂಧಿ ಕಂಡ ಪಂಚಾಮೃತ ತಿಂಡಿಗಳನ್ನಿತ್ತು ಉಂಡುಣಿಸಿದಲ್ಲಿ ನನ್ನ ಒಡಂಬಡಿಕೆ ಇತ್ತು. ಜರತಾರಿ ಪೀತಾಂಬರ ಮಡಿಗಳಂ ಖಂಡುಗದ ಪ್ರಮಾಣ ತೊಟ್ಟು ಹರಿದರೂ ಕೇಳಿದ್ದಿಲ್ಲ ಕಂಡಿಯಾ. ಶಹಬ್ಬಾಸ! ನಿನ್ನ ಮಂಡ ಮಂಡ ವೇದಾಂತದ ಗಂಟು ಗಂಡನ ಮುಂದೆ ಬಿಚ್ಚಬೇಡ ಸಖಿ, ಸದನದಲ್ಲಿರು ಸಖಿ.

ಮಂಡಿತಾಮತಿ :

ಪದ

ನ್ಯಾಯವೇನಿದು ಪ್ರಿಯ ಬಯ್ವುದು ಬಸವನಿಗೆ.
ದಯದೋರು ಮಹಾರಾಯ ॥ಪಲ್ಲವಿ॥

ವಲ್ಲಭ ಕೇಳೆನ್ನ ಸಲ್ಲದು ಶರಣರೊಳು ಕದನ
ಬಲ್ಲಿದ ಶಿವಭಕ್ತನಲ್ಲಿ ಇರಲಿ ಕರುಣ ಕ್ಷುಲ್ಲಕತನವು ಬೇಡ ॥ ೧ ॥

ಮಂದಬುದ್ಧಿಯ ಜನ ಕುಂದು ಮಾತಾಡಿದರೆ
ಇಂದಿರೇಶನಿಂದ ಛಂದದಿ ನುಡಿಸಿದರೆ ಬಂಧನಪಡಿಸುವರೆ ॥ ೨ ॥

ಮಂಡಲದೊಳ್ಮೆರೆವುದ್ದಂಡ ದೇವಣಗಾವ
ಪುಂಡ ಮಲ್ಲಿನಾಥನ ಕಂಡು ಭಜಿಪರೊಳು ಚಂಡಿತನವು ಬೇಡಾ ॥ ೩ ॥

ಹೇ ! ಪ್ರಿಯಾ ಸುರಚಿರಕಾಯ, ರಾಜಾಗ್ರಣಿ , ಎನ್ನರಸ, ಶಿಖಾಮಣಿ, ಕರಮುಗಿದು ಸೆರಗೊಡ್ಡಿ ಬೇಡುವೆ. ಮಹಾನುಭಾವರಿಗೆ ಎದುರಾದವರಿಗೆ ನರಕ ತಪ್ಪಿದ್ದಲ್ಲ. ಹರಭಕ್ತ ಸಖನಾದವರಿಗೆ ಆಯುರಾರೊಗ್ಯ ಪ್ರಾಪ್ತಿಸಿ ಉತ್ತರೋತ್ತರವಾಗುವದು.

ಹೇ ! ಚಂದಿರ ಕಿರಣ, ಸುಮ್ಮನೆ ಮಂದಿರದೊಳು ಈ ಸುಂದರಿಯ ಸುಖಾನಂದದೊಳಿರು ನಡಿ. ಹೇ ! ಎನ್ನ ಪ್ರಾಣದೊಲ್ಲಭ ಪುರಾಣ ಶಾಸ್ತ್ರಂಗಳ ತಾಣ ತಿಳಿದು ಷಣ್ಮುಖ ಪಿತನ ಸ್ಥಾನಕ್ಕೆ ಪ್ರಯಾಣ ಬೆಳೆಸಿ

ಗಣಪದವಿ ಹೊಂದಿರುವ ಬಸವಣ್ಣನು ಬಲು ನಿಪುಣನಿರುವನು. ಮಹಾಮಂತ್ರಿ ಕಾರ್ಯದಲ್ಲಿ ಆತನ ಸರಿಗಟ್ಟುವ ಜಾಣರು ಧರುಣಿಯೊಳಗೆ ಕಾಣರು. ಅನ್ಯರ ವಸ್ತುಗಳನ್ನು ತನ್ನ ಕೈಯಿಂದ ಹಿಡಿಯಲಾರನು. ಆ ಗುಣವಂತನಲ್ಲಿ ಅನ್ಯಾಯವಿಲ್ಲದೆ ಬಾಯಿಗೆ ಬಂದ ಹಾಗೆ ಬೈಯ್ಯುವದು ನ್ಯಾಯವಾಗದು. ಕಾರಣ ಆ ಜಗಪೂಜ್ಯ ಮಹಾತ್ಮನಿಗೆ ಹಗೆಯಾಗುವುದು ತರವಲ್ಲ ಕೇಳೆನ್ನ ನಲ್ಲಾ.

ಬಿಜ್ಜಳ : ಜಗದೇಕ ವೀರನೆನಿಸಿ ಮಿಗೆ ಮಿಾರಿದ ಹಗೆಗಳಂ ಸಂಹರಿಸಿ ದಿಗ್ಗನೆ ಏರಿ ಬರುವ ದಿಗ್ಗಜರ ಬಗ್ಗು ಬಡಿಸಿದ ಈ ಜಗದೊಡಿಯನಿಗೆ ನಗೆ ಬರುವುದೆ ದುರ್ಲಭಾ. ಎಲ್ಯೆ ! ನಾರಿಯೆ, ಆ ಚೋರನು ನೂರಾರು ಶಾಸ್ತ್ರಗಳನ್ನೋದಿ ಸಾಹಸ ಶೌರ್ಯ ಕಾರ್ಯಗಳನ್ನೇನಾದರೂ ತೋರಿದನೆ ಹೇಗೆ? ಪೂರ್ವಾದ್ರಿಯಲ್ಲಿ ಉದಿಸುವ ಸೂರ್ಯನಂ ಪಶ್ಚಿಮ ದಿಕ್ಕಿನಲ್ಲಿ ಹೊರಡಿಸಿದನೆ ಹೇಗೆ? ಎಲುವ ತಿಂಬುವ ಹೊಲೆಮಾದಿಗರಂ ಮೇಲಕ್ಕೆ ಕರೆದು ಅವರ ಕಾಲ್ಗಳಂ ಪಿಡಿಯುವ ಕುಲಾಧಮನಿಗೆ ಮೇಲು ಮಾಡಿ ಮಹತ್ವಿಕನೆಂದು ಬೊಗಳುವ ನಿನ್ನ ನಾಲಿಗೆಯಂ ಸೀಳಿಬಿಟ್ಟೇನು. ಆ ಕುನ್ನಿ ಬಸವನಿಗೆ ಚೆನ್ನಿಗನೆನ್ನುವದಾದರೆ ಎನ್ನೆದುರಿನಲ್ಲಿ ನಿಲ್ಲಬೇಡಾ. ಸುದತಿ ಬಿಡು ನಿನ್ನ ರೀತಿ.

ಮಂಡಿತಾಮತಿ: ಹೇ ! ಜಡಜಾಂಬಕನೆ, ಕಡು ಮಂದಮತಿ ಗೂಢಚಾರಕ ಕೊಂಡೆಯ ಮಂಚಣ್ಣನ ಮಾತಿಗೆ ಕರ್ಣಸೋತು, ಯತಿಯೋಗಿಗಳ ವ್ರತನೇಮಗಳ ಕೆಡಿಸಿ ಮತಿಹೀನನಾಗಬೇಡ. ಮನಸಿಜನ ನುತಿಪರಿಗನುದಿನ ಕ್ಷಿತಿಯೊಳಗಿಷ್ಟಾರ್ಥವನ್ನಿತ್ತು ರಕ್ಷಿಪುದೇ ಭೂಪತಿಗಳ ಕರ್ತವ್ಯ. ಒಡಿಯನೆ ಮೃಡಭಕ್ತರು ಕಡಿಮೆಯುವರೆಂದು ತಡವಬೇಡ. ಉಡುರಾಜಮುಖನೆ ಬಸವನು ಹುಡುಗನಿರುವಾಗ ಬಾಗೇವಾಡಿಯಲ್ಲಿ ಒಬ್ಬ ಬಾಲಕನು ಬಾವಿಯಲ್ಲಿ ಬಿದ್ದು ಸತ್ತ. ಅಪಕೀರ್ತಿ ಹರಡಿಕೊಂಡಿತ್ತು. ಕಿಡಿಗೇಡಿಗಳು ಏನೊಂದು ವಿಚಾರಿಸದೆ ಮಾದರಸನ ಸುತನೇ ಘಾತಿಸಬೇಕೆಂದು ಬೆನ್ನಿಕ್ಕಿದರಂತೆ. ಆ ಘನವಂತನು ತನ್ನ ಲೀಲೆಯಂ ಜಗತ್ತಿಗೆ ತೋರಿಸಬೇಕೆಂದು ಓಡುತ್ತಾ ಬರುವಷ್ಟರಲ್ಲಿ ಕೃಷ್ಣೆ ತುಂಬಿ ಹೊಗುತ್ತಿತ್ತಂತೆ. ಆಗ ಮಾರ್ಗಕೊಡುಯೆಂದು ಬೇಡಲು ಪಡುವಣದ ನೀರು ಚಕ್ಕನೆ ಸರಿದು, ನಡು ಮಧ್ಯದಲ್ಲಿ ದಾರಿ ತೋರಿದಳಂತೆ. ಆಗ ನದಿಯ ದಾಟಿ ಕಪ್ಪಡಿ ಸಂಗಮನಾಥನ ಮಂದಿರ ಹೊಕ್ಕು ಸರ್ವ ಜನರ ಸಮ್ಮುಖದಲ್ಲಿ ಕೇಳಲು, ನಿಮ್ಮ ಸುತನ ಕೊಲ್ಲಿದವನು ಈತನಲ್ಲ

ಎಂದು ಮಲ್ಲಿಕಾರ್ಜುನನಿಂದ ನುಡಿಸಿದವನು. ಬಸವ ಮಹಾತ್ಮೆಯ ಪವಾಡವೆಷ್ಟು ಹೇಳಿದರೂ ಕಡಿಮೆ. ಕಾರಣ ಈ ಗೋಜು ಬಿಡು, ಬಿಡು ನಿನ್ನ ಪಂಥ.

ಬಿಜ್ಜಳ : ಭಲ ಎಲೈ ! ಕತ್ತೆ ಮುಂಡಿಯೆ, ಎನ್ನ ಧನವನ್ನೆಲ್ಲಾ ಎತ್ತಿಹಾಕಿದವನನ್ನು ಸಾವಯಾನ್ಯನಲ್ಲವೆಂದು ಅತ್ತತ್ತು ಎತ್ತ ಬೊಗಳುತ್ತಿ? ಜಾತಿನೀತಿಯನ್ನರಿಯದ ಪಾತಕಿಗಳು ಕೂಡ ಕುಲಗೋತ್ರಗಳನ್ನೆಲ್ಲಾ ಕೀಳುತನಕ್ಕಿಳಿಸಿದ ಅಧಮನಿಗೆ ಬೆದರಿಸಬೇಡೆಂದು ಚದುರಿ ನೀನು ಪೇಳಿದರೆ ನಾನು ಬಿಡಲಾರೆನು. ಸದನಕ್ಕೆ ಹೋಗು, ಇಲ್ಲಿಂದ ಸಾಗು.

ಎಲೈ ! ಸಾರಥಿ ಈ ಪ್ರಾಣದೊಲ್ಲಭೆಯನ್ನು ಕ್ಷಣ ನಿಲ್ಲದೆ ಮೇಲಮಂದಿರಕ್ಕೆ ನೂಕುವಂತನಾಗು.

ಬಸವಣ್ಣ: ಎಲೈ ! ಸಾರಥಿ ಧುಷ್ಕರ್ಮದಿಂದ ದೂರಾಗಿದ್ದು ಸತ್ಕರ್ಮದಿಂದ ಮೃತ್ಯುವಂಗೆದ್ದು ಲಿಂಗಾಂಗ ಸಾಮರಸ್ಯ ಹೊಂದಲನುವಾದ ಪತಿವ್ರತಾ ಶಿರೊಮಣಿ ಗಂಗಾಂಬಿಕೆಯನ್ನು ಕರಿಸುವಂತನಾಗು.

ಗಂಗಾಂಬಿಕೆ : ಹೇ ! ಸೋಮಸಮವದನಾ ಈ ಭಾಮಾಮಣಿಯು ನಮಿಸುತ್ತಾಳೆ.

ಬಸವಣ್ಣ : ಹೇ ! ಸತಿಸಿರೋಮಣಿ ಪ್ರೇಮದಿಂ ಮನವೆರಿಸಿ ರಮಿಸುವ ಅಮರಸತಿ ಆಶೀರ್ವಾದವಾಗಲಿ.

ಗಂಗಾಂಬಿಕೆ : ಹೇ ! ರಮಣ, ಇಷ್ಟಲಿಂಗಾರ್ಚನೆಗೆ ಆಣಿಯಾದ ಸಮಯದಿ ಒಮ್ಮಿಂದೊಮ್ಮೆ ತಮ್ಮ ಸಮ್ಮುಖದಲ್ಲಿ ಈ ಕೋಮಲಾಂಗಿಯಳಿಗೆ ಆಗಮಿಸಬೇಕೆಂದು ಅಪ್ಪಣೆಯಿತ್ತ ನಿಮಿತ್ಯ ಪೇಳು ಸ್ವಾಮಿ, ದಯಾಗುಣ ಪ್ರೇಮಿ.

ಬಸವಣ್ಣ : ಅಹೇ ! ಎನ್ನ ಗೃಹಲಕ್ಷ್ಮಿಯಾದ ಭಾಗೀರಥಿ, ಯೋಗ್ಯಸತಿ. ಈಗ ಮನದೊಳಗಿರುವ ಅಭಿಪ್ರಾಯವೇನೆಂದರೆ ಅಡಿಗಡಿಗೆ ಪೊಡವಿಯೊಳು ಒಡಲ ಪೋಷಣೆಗಾಗಿ ಮಿಡುಕಾಡುವ ಬಡಜನಕ್ಕೆ ಆಹಾರವಿತ್ತು ಮಾನವ ಜನ್ಮ ಸಾರ್ಥಕಪಡಿಸಬೇಕೆಂಬ ಬಯಕೆ ಈ ಬಸವನಲ್ಲಿರುವುದು ಮಡದಿಯೆ. ಇದಕ್ಕೆ ನಿನ್ನ ಒಡಂಬಡಿಕೆ ಇರುವದೇನು? ಮಾನಿನಿ ಮದಗಜಗಾಮಿನಿ.

ಗಂಗಾಂಬಿಕೆ :

ಪದ

ಚಿಂತಿಯೇತಕೆ ಕಾಂತನೇ ॥ ಪಲ್ಲವಿ ॥

ಧಾರುಣಿಯೊಳಿರ್ಪ ಗುರುರೂಪ ಪ್ರಮಥರರ್ಗೆ
ಪೊರೆಯಲ್ಕೆ ವಸುಧಿಯೊಳಗಿರ್ದ ಹಸನಾದ ಜಂಗಮರ್ಗೆ ॥ ೧ ॥

ಪೊಸಿಸಲ್ಕೆ ಮಲಮೂತ್ರದ ಕಾಯಕ್ಕೊಲೆಯುವರೆ
ಪ್ರಿಯಾ ಮಲ್ಲಿಕಾರ್ಜುನ........... ॥ ೨ ॥

ಅಹೇ! ಕಾಂತಾ ಶ್ರೀಮಂತ, ಮಲ್ಲಿಕಾರ್ಜುನನು ಅಸಂಖ್ಯಾತ ಶ್ರೀಮಂತಿಕೆಯನ್ನಿತ್ತ ಕಾಲದೊಳು ಭೂತಲದಲ್ಲಿರ್ಪ ಅನಾಥ ಜನರನ್ನು ಸಂಗಮನಾಥನೆಂದು ಭಾವಿಸಿ, ಅವರ ಮನದಿಂಗಿತವಂ ಹಿಂಗಿಸಬೇಕೆಂಬ ಈ ಗಂಗಾಂಬಿಕೆ ಅಂಗದೊಳಿರುವ ಪ್ರಿಯಾ ! ಎಲುವಿನ ಹಂದರದಿ ಮಲಮೂತ್ರ ತುಂಬಿದ ಈ ಹೊಲಸು ದೇಹಕ್ಕೊಲೆಯುವರೇನು? ಶಾಂತಿ ಸದ್ಗುಣ, ಸೌಖ್ಯಸದನ.

ಬಸವಣ್ಣ : ಅಂಗನಿಯರೊಳು ಮಂಗಳಗಾತ್ರಳಾದ ಗಂಗಾಂಬಿಕೆ, ಪ್ರಾಣಸಖಿ, ನಿನ್ನಂತೆ ಸಂಭ್ರಮದ ಮಾತುಗಳಾಡುವ ಬಿಂಬಾಧರಿಯರು ಬಸವನ ಕಂಗಳಿಗೆ ಈ ಕುಂಭಿನಿಯೊಳು ಕಂಗೊಳಿಸುವುದಿಲ್ಲ.

ಗಂಗಾಂಬಿಕೆ : ಹೇ ! ಪ್ರಾಣದೊಲ್ಲಭ, ಪ್ರಮಥ ಗಣಂಗಳಿಗೆ ಮನತಣಿಸುವಂತೆ ನೀಡಿ ಉಣಬಡಿಸುವ ಬಗ್ಗೆ ಇಷ್ಟೊಂದು ಗೊಂದಲವೇಕೆ? ತಮ್ಮನ್ನು ಹೊಂದಿಕೊಂಡಿರ್ದ ಈ ಸುಂದರಿಯಳನ್ನು ಭಾವಿಸುವರೆ?

ಬಸವಣ್ಣ : ಪತಿಪಾದ ಸೇವೆ ಸತಿಗೆ ಗತಿಯೆಂದು ನಾಥನ ಸಮ್ಮುಖದಿ ಆತುರದಿಂ ಮಾತಾಡುವ ಮತಿವಂತಿಯೆ ಸ್ವಲ್ಪ ವಿಶ್ರಮಿತಳಾಗು.

ಬಿಜ್ಜಳ : ಭಲ ಎಲೈ ! ಮಂತ್ರೀಶ್ವರ, ರಾಜದರಬಾರದ ಕಾರ್ಯಗಳು ಸರಿಯಾಗಿ ನೋಡಿಕೊಂಡು ಹೊಗುವಿಯೆಂದು ಕಾರಭಾರ ನಿನಗಿತ್ತರೆ ಖಜಾನೆಯಲ್ಲಿರುವ ವರಹಗಳನ್ನೆಲ್ಲಾ ಸೂರಿಗೈದಿರುವಿಯೆಂದು ಚಾರರ ಮುಖಾಂತರ ವರದಿ ಕೇಳಿರುವೆನು. ಬಲದೇವ ಮಂತ್ರಿಗಳ ಮೇಲಿರುವ ಮಮತೆಯಿಂದ ಸಲಿಗೆ ಕೊಟ್ಟರೆ ತಲಿಗೇರಿದಂತೆ ತೋರುತ್ತದೆ, ಮಳ್ಳ ಕುರಿಗಳಂತಿರುವ ಆ ಪ್ರಮಥಗಣಗಳಿಗೆ ಒಳ್ಳೊಳ್ಳೆ ರತ್ನಾದಿ ಆಭರಣಗಳಂ ಎನಗೆ ಹೇಳದೆ ಕೊಡಲಿಕ್ಕೆ ಮಳ್ಳುತನ ಹಿಡಿದಿರುವುದೇ ಹೇಗೆ?

ಬೇಡಿಕೊಂಡು ತಿಂಬುವ ಖೋಡಿ ಜೋಗಿಗಳಿಗೆ ಬೊಕ್ಕಸ ಒಡಿದು ಇಡಲಿಕ್ಕೆ ನಿನ್ನ ಹಡೆದಪ್ಪನ ಮನೆಯಿಂದೇನಾದರೂ ತಂದಿರುವೆಯಾ? ಈ ಚಕ್ರವರ್ತಿಯ ಆಶ್ರಯದಲ್ಲಿ ಬೇಕಾದದ್ದು ಉಂಡು ಸೊಕ್ಕು ಮಿಕ್ಕಿದಂತೆ ತೋರುತ್ತದೆ.ಶಹಬ್ಬಾಸ ! ನಿನ್ನನ್ನು ದಿಕ್ಕುಗೆಡಿಸಿ ಬಿಡುವೆನು ನೋಡು, ಏನಿದ್ದರೂ ಹಾಡು.

ಬಸವಣ್ಣ : ಹೇಯವಾದ ಕಾಯವ ತೊಟ್ಟು ಮಾಯಾಸಂಸಾರಕ್ಕೆ ಬೆನ್ನುಹತ್ತಿ ನ್ಯಾಯವಂ ಮಾಡದೆ ಬಾಯ್ಬಿಡುವ ಬಿಜ್ಜಳ ಮಹಾರಾಜನೆ, ಈ ಕ್ಷಿತಿಯೊಳು ಮಲ್ಲಿಕಾರ್ಜುನ ಸ್ತುತಿಯಲ್ಲಿರುವರು ಮತ್ತೊಬ್ಬರ ವಸ್ತು ಹಸ್ತಕ್ಕೆ ಹತ್ತಿಸಿಕೊಳ್ಳುವದಿಲ್ಲ. ಶುದ್ಧಾಂತಃಕರಣ ಶಿವಶರಣರಿಗೆ ಬುದ್ಧಿಗೇಡಿಯಂತೆ ಅಶುದ್ಧ ಮಾತಾಡಿದರೆ ಇದ್ದ ನಿನ್ನ ಸಂಪತ್ತೆಲ್ಲಾ ಹದ್ದು ಪಾಲಾದೀತು. ಆವದಾದರೊಂದು ಸಾವಧಾನದಿಂದ ವಿಚಾರಿಸದೆ ನೀಚವೃತ್ತಿಯಲ್ಲಿ ಆಚರಿಸಬಾರದು. ಇಚ್ಛೆಯಿದ್ದರೆ ಕಾಗದ ಪತ್ರಗಳ ನೋಡಿಕೋ, ಗಣಕರಿಗೆ ಕೇಳಿಕೋ?

ಬಿಜ್ಜಳ : ಭಲ ಎಲ್ಲೆ ! ಬಸವೇಶ, ಹದಿನೆಂಟು ಕುಲದವರನ್ನು ಕಲ್ಯಾಣದಲ್ಲಿ ನೆರೆಸಿ ಗದ್ದವಲವೆಬ್ಬಿಸಿರುವಿ. ಸಿಕ್ಕ ಸಿಕ್ಕವರಿಗೆ ತಂದು ಇಷ್ಟಲಿಂಗಧಾರಣ ಮಾಡಿದರೆ ಹಿಂದಿನ ಜಾತಿ ಅಳುಕುವದೆ? ತಿರುಕನಿಗೆ ರಾಜ್ಯವಸ್ತ್ರಾಭರಣಗಳನ್ಹಾಕಿದರೆ ಅರಸನಾಗಬಲ್ಲನೆ? ನಾಡೆಲ್ಲಾ ಮನೆಮನೆ ಬೇಡಿಕೊಂಡು ತಿನ್ನುವ ಮೃಡನಕ್ಕಿಂತ ಶರಣರಧಿಕವೆಂದು ಚೀರಾಡುವ ನಿನ್ನಂಥ ಮೂಢನನ್ನು ಎಲ್ಲೆಲ್ಲಿಯೂ ನಾ ಕಾಣಲಿಲ್ಲ. ಗಡಬಡಿಸದೆ ಒಡನೆ ಪೆಟ್ಟಿಗೆ ತುಂಬಿಟ್ಟು ಹಣಕೊಟ್ಟು ಪಟ್ಟವನ್ನಿಳಿದುಬಿಡು.

ಬಸವಣ್ಣ :ಸಜ್ಜನರ ಸಂಗದಲ್ಲಿಯೇ ಸುಖಸಂತೋಷವಿದೆ. ಕುಲವಂತರಿಗೆ ಹೊಲೆಯರೆನ್ನುವ ಕುಲಕಂಟಕಾ ಕಲಹವನ್ನು ನೆಲೆಸುವಾ ಬಿಜ್ಜಳಾ ಚೆಲುವಾಂಗನೆಯೆಂದು ಮೋಲೆಯಾಟಕೆ ಮೋಹಿಸಿ ಪ್ರತಿಬಾಲೆಯೊಳ್ ರತಿಕಲಹಗೈವನೆ ಹೊಲೆಯ. ಅನ್ನವಿಕ್ಕುವವರ ಮನೆಯ ಕನ್ನ ಹಾಕುವನೊಬ್ಬ ಕುನ್ನಿ ಹೊಲೆಯ. ಸುಂದರಿಯ ಮಾತಿಗೆ ಮನಸೋತು ತಂದೆ ತಾಯಿಗಳನ್ನು ನಿಂದಿಸಿ ಬೈಯುವನೊಬ್ಬ ಹೊಲೆಯ. ವ್ಯರ್ಥ ಹೊತ್ತುಗಳಿದು ಮತ್ತೊಬ್ಬರಿಗೆ ಭಾರವಾಗಿದ್ದವನೊಬ್ಬ ಕತ್ತೆ ಹೊಲೆಯ. ಭಾಷೆಕೊಟ್ಟು ಘಾಸಿ ಮಾಡುವನೊಬ್ಬ ಹೇಸಿ ಹೊಲೆಯ. ಕಾಮಿಸಿ ಭಜಿಸುವ ಮಾನವರಿಗೆ ಕಾಮಧೇನು ಸಮಾನ ಸ್ವಾಮಿ ಸಂಗಮನಾಥನ ನೇಮದಿ ನೆನೆಯದವನೇ ಪಾಮರ ಹೊಲೆಯ. ಖೊಟ್ಟಿ ಗುಣಗಳ

ಹೊಟ್ಟೆಯಲ್ಲಿ ಬಚ್ಚಿಟ್ಟು ಶ್ರೇಷ್ಠತನದಿ ಪಟ್ಟಣದಿ ಮೆರೆಯುವವರೆ ದುಷ್ಟ ಹೊಲೆಯರಲ್ಲದೆ ನಿಷ್ಠಾವಂತರಾಗಿ ಇನ್ನೊಬ್ಬರಿಗೆ ಕೇಡು ಬಯಸದೆ ಹೊರಕೇರಿಯಲ್ಲಿರುವವರು ಹೊಲೆಯರಲ್ಲ. ನಾನು ಕೊಟ್ಟ ದಾನಕ್ಕೆ ನಿನಗೆ ಸಿಟ್ಟು ಬಂದರೆ ಪೆಟ್ಟಿಗೆಗಳನ್ನು ತೆಗೆಸಿ ನೋಡು, ಜಗಳವಾಡುವದು ಬೇಡಾ.

ಬಿಜ್ಜಳ : ಭಲ ಎಲ್ಲೈ ! ಅಮಾತ್ಯನೆ, ನಿನ್ನ ಹತ್ತಿರ ನಾನೇನು ನೀತಿ ಶಾಸ್ತ್ರಗಳನ್ನು ಕೇಳಲಿಕ್ಕೆ ಬಂದಿಲ್ಲಾ. ಉನ್ಮತ್ತನಾಗಿ ಕತ್ತೆಯಂತೆ ಒದರಿದರೆ ಚಿತ್ತಿಡುವರ್ಯಾರು? ಉತ್ತಮನೆಂದು ನಂಬಿ ಎನ್ನ ಅಸ್ತಿತ್ವದ ಅಧಿಕಾರ ನಿನ್ನ ಹಸ್ತಗತವಿತ್ತರೆ ಅತಿಥಿಗಳಿಗೆ ಸಿಕ್ಕಸಿಕ್ಕಂತೆ ಕೊಟ್ಟು ದಿಕ್ಕು ಗೆಡಿಸಿರುವಿಯಾ? ಇಂಥ ಹೊಲೆತನವ ಬಚ್ಚಿಟ್ಟು ಸಭೆಯೊಳಗೆ ನಿಂತು ನಾವು ಆಚಾರವಂತರೆಂದು ಹೇಳುವದು ನಾಚಿಕೆತನವಲ್ಲವೆ?

ಬಸವಣ್ಣ : ಜ್ಞಾನವಿಲ್ಲದ ಶ್ವಾನನಂತೆ ಬೊಗಳುವ ಅಜ್ಞಾನಿ ಅರಸ ನೀನಾಡದಿರು ಬಿರಸಾ. ಹೀನ ಹೊಲತಿಯರಾರೆನ್ನುವದು ಖೂನವಿಲ್ಲವೆ? ಕೇಳು ಲೋಕ ರಕ್ಷಿಪ ಮಹಾಲಕ್ಷ್ಮಿಯು ಸಾಕಾದಷ್ಟು ಸಂಪತ್ತು ಕೊಟ್ಟಾಗ ಭಿಕ್ಷುಕರಿಗೆ ಅನ್ನಹಾಕಲಾರದವಳೆ ಅವಿವೇಕ ಹೊಲತಿ. ಒಡಿಯನು ದುಡಿದು ಬೇಕಾದ್ದು ಕೊಡುವಾಗ ಬೇಕಾದ್ದುಂಡು ಬಡತನ ಬಂದಾಗ ಬಡಬಡಿಸುವವಳೆ ಕಿಡಿಗೇಡಿ ಹೊಲತಿ. ತನ್ನ ಗಂಡನಂ ಬಿಟ್ಟು ಇನ್ನೊಬ್ಬರೊಡನೆ ಚನ್ನಾಟವಾಡುವವಳೆ ಮಾನಗೇಡಿ ಹೊಲತಿ. ಕಂದನಂ ಪಡೆದು ಮದವೇರಿ ಸುಂದರನ ಕೂಡ ದುಂದುಕಾಳಗ ಮಾಡುವಳೆ ಮಂದ ಹೊಲತಿ. ಒಡಿಯನು ಧರ್ಮ ಕೊಡುವಾಗ ಅಡ್ಡಡ್ಡ ಬಂದು ಅಡ್ಡಿ ಮಾಡುವಳೆ ದಡ್ಡ ಹೊಲತಿ. ಚಿನ್ಮಯ ನಮ್ಮ ಕೂಡಲಸಂಗಮನಾಥನನ್ನು ಮನಸ್ಸಿನಿಂದ ಅನುದಿನ ನೆನೆಯದವಳೆ ಮಾನಗೇಡಿ ಹೊಲತಿ. ಅನರ್ಥ ಮಾತಾಡಿದರೆ ತಪ್ಪಲಾರದು ಕೇಡು. ಮಹಾರಾಜ ! ಮೊದಲು ನಿನ್ನ ದ್ರವ್ಯ ನೋಡಿಕೊ. ಲೆಕ್ಕಕ್ಕೆ ಕಡಿಮೆಯಾದರೆ ನಾನು ಶಿವಭಕ್ತನೆ ಅಲ್ಲ. ಕಾರಣ ಪೆಟ್ಟಿಗೆಗಳನ್ನು ತೆರೆಯಿಸು, ಬೀಗವನು ಮುರಿಸು.

ಬಿಜ್ಜಳ : ಭಲ ಎಲ್ಲೈ ! ಸಾರಥಿ ಚತುರಂಗ ಬಲದಿಂದ ಅತಿ ಸಂಭ್ರಮದಿ ಶೋಭಿಸುವ ಈ ಕಲ್ಯಾಣದರಸನ ತಿಜೋರಿಗಳನ್ನು ತೆರೆಯಿಸು, ವಚನ ಪ್ರಯೋಗಿಸು.

ಬಸವಣ್ಣ : ಹೇ ! ಜಗಜ್ಜನಕಾ, ಸಜ್ಜನಪಾಲ ದುರ್ಜನ ನಾಶ, ಈ ದುರುಳ ಬಿಜ್ಜಳ

ಕಾಲಕೆದರಿ ವ್ಯಾಜ್ಯ ಹೂಡಿರುವನು. ಕಾರಣ ಈಗ ನನಗಾವರಿಸಿದ ಆಪತ್ತು ತವಕದಿಂ ಕತ್ತರಿಸು. ಮತ್ತು ನಿನ್ನಲ್ಲಿ ಚಿತ್ತವಿಟ್ಟ ಜೀವಾತ್ಮರಂ ಚಿತ್ತದೊಲ್ಲಭನೆಂದು ನಂಬಿದ್ದು ಸತ್ಯವಿದ್ದರೆ ದಾನಾರ್ಥವಾಗಿ ಇತ್ತ ಸಂಪತ್ತೆಲ್ಲ ಇದ್ದಕ್ಕಿದ್ದಂತೆ ಮಾಡು. ಕೃಪಾ ದೃಷ್ಟಿಯಿಂದ ನೋಡು.

– ದೃಶ್ಯ –

ಬಿಜ್ಜಳ : ಅಹೇ ! ಇದೇನು ! ಮಂಚಣ್ಣನ ಮಾತು ಕೇಳಿ ಪಂಚಮುಖ ಪರಮೇಶ್ವರನ ಸ್ವರೂಪಿ ಬಸವಣ್ಣನ ಕಾರ್ಯಕಲಾಪ ಬಂದು ನೋಡಲಾಗಿ ವಂಚಕತನವೇನು ಇಲ್ಲವೇ ಇಲ್ಲಾ. ಮುಂಚಿನ ಸ್ಥಿತಿಯಂತೆ ಧನ ಕನಕವೆಲ್ಲಾ ಮಿಂಚುತ್ತಿರುವವು. ಪ್ರತ್ಯಕ್ಷ ಕಂಡರೂ ಪ್ರಮಾಣಿಸಬೇಕೆಂಬ ನೀತಿ ಸತ್ಯ.

ಅಲಲಲ ಎಲೈ ! ಸಾರಥಿ, ಇಂದಿನಿಂದ ಬಸವರಾಜನಿಗೆ ಆರಾದರೂ ನಿಂದಾಸ್ತುತಿಗಳನ್ನಾಡಿದರೆ ಅವರನ್ನು ಪಾಶದಿಂ ಬಂಧಿಸಿ ಕಂದಕದಲ್ಲಿ ನೂಕಿಸಿ ಕೊಂದಿಸುವೆನೆಂದು ನಿಂದ್ರದಲೆ ಪ್ರಚಾರಗೊಳಿಸು, ಡಂಗುರ ಸಾರಿಸು.

ಭಲ ಎಲೈ ! ಮೃತ್ಯುಂಜಯ ಸ್ವರೂಪಿ ಬಸವೇಶನೆ ನಿನ್ನ ಚಿತ್ತಕ್ಕೆ ಬಾರದ ಮಾತುಗಳನ್ನಾಡಿದ ಬಿಜ್ಜಳನ ಅನಂತ ಅಪರಾಧ ಸಮ್ಮತಕ್ಕೆ ತಾರದಿರು ಪುಣ್ಯಾತ್ಮಾ ಶರಣ ಹಿತಾತ್ಮಾ.

– ದೃಶ್ಯ –

ಜಂಗಮ : ಕನ್ನಡ ನಾಡಿನೊಳು ಪುಣ್ಯಕೀರ್ತಿಯಂ ಗಳಿಸಿ ಭಕ್ತಾಗ್ರಗಣ್ಯನೆಂಬ ಹೆಸರೆತ್ತಿದ ಬಸವಣ್ಣ, ಎನ್ನ ಅಂಗಸಂಗವೆಸಗುವ ವೇಶ್ಯಾಂಗನಿಗೆ ತಮ್ಮ ಧರ್ಮ ಪತ್ನಿ ಗಂಗಾಂಬಿಕಾದೇವಿಯ ಅಂಗದ ಮರ್ಯಾದಿ ಕಾಪಾಡುವ ರಂಗಿನ ಪೀತಾಂಬರುಡುವ ಬಯಕೆ ಬಹಳವಾಗಿರುವದಂತೆ, ಕಾರಣ ಹಸನ್ಮುಖನಾಗಿ ಮನಖುಷಿಯಿಂದ ಕೊಡಿಸು. ಪೋಗುವೆನು ಬೇಗ.

ಬಸವಣ್ಣ : ಅಹ ಶಿವ..... ಶಿವ...... ಆವಜನ್ಮದ ಫಲವಿದು? ಮಾನಿನಿ ಗಂಗಾಂಬಿಕೆ ಪೀತಾಂಬರ ಕೊಡದಿದ್ದರೆ ಜನತೆಯಲ್ಲಿ ದಾನಹೀನನೆನಿಸಿ ಪ್ರಾಣದಿಂದೆ ತುಳಿಯಲಿ? ಹೇ ! ತಾತಾ ಸಂಗಮನಾಥಾ ನಿನ್ನ ಸತ್ಯ ಈ ಬಸವನಲ್ಲಿ ವಿದ್ದುದಾದರೆ, ಈ ಹೊತ್ತಿನಲ್ಲಿ ಬಂದ ಆಪತ್ತು ದೂರಿಕರಿಸು, ಥಟ್ಟನೆ ಪಾಲಿಸು.

ಗಂಗಾಂಬಿಕೆ : ಹೇ ! ಪ್ರಾಣಪ್ರಿಯ, ನಿರ್ಮಲ ಹೃದಯ ತಮ್ಮ ಪಾದಕ್ಕೆ ಒದಗಿರ್ದ ಈ ಸುದತೆಯ ದೆಸೆಯಿಂದ ಬಾಧೆಪಡುವ ಕಾರಣವಿಲ್ಲ. ಉತ್ತಮ ಕೀರ್ತಿಶಾಲಿ ಬಸವನೆಂಬ ಭಾಸ್ಕರನಿಗೆ ಕಲಂಕ ಹತ್ತಿಸಲಾರೆ. ನಾನು ತೊಡುವ ಪೀತಾಂಬರವನ್ನು ನನ್ನ ಮನಸಾರೆ ಕೊಡುವೆನು. ಕೊಟ್ಟು ಜಂಗಮನ ಮನಾನಂದಗೊಳಿಸು ನಾಥ ಕೇಳೆನ್ನ ಮಾತಾ.

ಬಸವಣ್ಣ : ಭಕ್ತಿಯೆಂಬ ಪರಿಮಳದ ಸವಿಯನ್ನು ಭ್ರಮರನೋಪಾದಿಯಲ್ಲಿ ಪರಮೇಶ್ವರನ ಪರೀಕ್ಷಿಸುವಂತೆ ಎನ್ನ ಸತ್ವ ಪರೀಕ್ಷೆಗಾಗಿ ಬಂದ ಸರ್ವೇಶ್ವರಾ. ನಿಮ್ಮ ಮನಸಾರೆ ವಸ್ತ್ರಗಳಂ ತಕ್ಕೊಂಡು ಸನುಮಂತರಾಗಿರಿ. ನನ್ನ ವಿನಃ ಅನ್ಯರಿಗೆ ಕಾಡದಿರಿ.

ಬಿಜ್ಜಳ : ಅಹ ಹ ! ಇದೇನಾಶ್ಚರ್ಯ ತನ್ನ ಮುದ್ದು ಪ್ರಿಯಳು ಉಡುವ ಸೀರೆಯನ್ನು ಬಸವಣ್ಣನು ಕೊಟ್ಟನು. 'ಮೇಘದಿಂದ ಒಂದೇ ಹನಿಯಂ ಯಾಚಿಸಿದ ಜಾತಕಪಕ್ಷಿಯು ಅನೇಕ ದಾರಿಯಂ ಹೊಂದಿ ಆನಂದಪಡುವಂತೆ ಜಂಗಮನು ಅನಂತ ಮಡಿಗಳನ್ನು ಪಡೆದನು. ಧರೆಯ ಪಾವನ ಮಾಡುವ ಶರಣರ ನಿಂದಿಸುವದು ಮರುಳತನ. ಎಲೈ ! ಸಾರಥಿ ! ನಾವು ನಮ್ಮ ಮೇಲುಮಂದಿರಕ್ಕೆ ಹೋಗವಾ ನಡೆ

ಅಕ್ಕನಾಗಮ್ಮ : ಬಲವಾದ ಸತ್ಯಕ್ಕೆ ಒಲುಮೆ ಇಲ್ಲದ ಕಲಿಯುಗದಲ್ಲಿ ಕಲ್ಪತರು ಬಲಶಾಲಿ ಬಸವಣ್ಣ, ನಿನ್ನ ಲೀಲೆ ವಿಶಾಲವಾದದ್ದು. ಭಗವಂತನು ಸದಾವಕಾಲದಿ ನಿನ್ನ ಕಾರ್ಯಕ್ಕೆ ಅನುಕೂಲವಿರಲೆಂದು ಕಲ್ಲಿನಾಥನಂ ಕೂಡಿಕೊಂಡಿರುವ ದೇವನಗರದ ಮಲ್ಲಿಕಾರ್ಜುನನಲ್ಲಿ ಈ ಶಿವದೇವನ ನಲ್ಲೆ ಪ್ರಾರ್ಥಿಸುತ್ತಾಳೆ.

ಬಸವಣ್ಣ : ಹೇ ! ಅಕ್ಕ, ನನ್ನ ಮೇಲೆ ಅಪವಾದವನ್ನು ಪರಿಹರಿಸಿದ ಇಂದೂಧರ ಕಪ್ಪಡಿ ಸಂಗಮನಾಥದೇವನಿಗೆ ಗಂಧ ಅಕ್ಷತೆಗಳಿಂದ ಚಂದದಿ ಪೂಜಿಸುವ.

ಹೇ ! ದೇವಾ ಸಂಗಮನಾಥ ಮೋಕ್ಷದಾತಾ, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ ಸಕ್ಕರೆ ತುಪ್ಪದಿಂ ಕೈತೊಳಸಿ ಅವರಿಚ್ಚಿಸಿದ ಪಕ್ವಾನ್ನವನ್ನಿಕ್ಕಿ ರಕ್ಷಿಸುವದು ಮುಕ್ಕಣ್ಣ ನಿನ್ನಿಂದ ಶಕ್ಯವಲ್ಲದೆ ಎನ್ನಿಂದ ಶಕ್ಯವೇ? ಇನ್ನು ಮುಂದಾದರೂ ಈ ಬಸವನ ಮಾನಾಪಮಾನ ನಿನಗೆ ಕೂಡಿದೆ. ಜಗಜ್ಜನಕಾ, ಗಂಗಾಧಾರಕಾ.

ಗಂಗಾಂಬಿಕೆ : **ಸ್ತೋತ್ರ ಪದ**

ಈಶ ಜಗದೀಶ ನಮೋ ನಮೋ ನಮಃ ಶಿವಾಯ ‖ ಪಲ್ಲವಿ ‖

ದೋಷ ಹರನಾಶಪುರ ಪೋಷಿಸು ।
ಈಶ್ವರ ಈ ಶರಣರ ಭಾಸುರವರದಾ ‖ ೧ ‖

ಬಿಡಿಸೊ ಭಯ ಮೃಡಸದನಾ ಕೊಡು ಕೊಡು ವರ ಭಯ
ಬಿಡದಿ ಭಜಿಸುವೆವು ನಿನ್ನಡಿಗಳ ಪಿಡಿಯುವೆವು ‖ ೨ ‖

ಗಿರಿಜೇಶ ಸುರಪೂಶಾ ಧರೆಯೊಳಗೆ ದೇವನಗರ
ಗುರು ಮಲ್ಲಿಕಾರ್ಜುನ ಹರನೀ ಕರುಣಿಸು ‖ ೩ ‖

ಧರಣಿಯೊಳು ಪರಮ ಪಾವನ ಶರಣ ಹೃದಯದೊಳು ಸರಸದಿಂದಿರುವ ಗಿರಿಜೆ ಮನೋಹರ ಸುರವರ ಶಂಕರ ನಿನ್ನ ಪಾದಕಮಲಗಳಿಗೆ ಬೇಡಿಕೊಳ್ಳುವದೇನೆಂದರೆ– ಈ ಗಂಗಾಂಬಿಕೆಯ ಶ್ರದ್ಧೆ ನಿಷ್ಠೆ ಎನ್ನ ಸುಂದರ ಬಸವರಸರಿಗೆ ಬಂದೊದಗಿದ ವಿಪತ್ತುಗಳನ್ನು ದೂರೀಕರಿಸುತ್ತಿರು ಉರಗಾಭರಣಾ ಪಾವನಚರಣ.

ಮಂಗಲ ಪದ

ಆರುತಿ ಬೆಳಗುವೆ ಪಾರ್ವತಿ ಅರಸಗೆ
ಕರುಣಸಾಗರನೆಂದು ಕರವನೋಡಿ ಬೇಡುತ ‖ ಪಲ್ಲವಿ ‖

ಕಾಡಿನೊಳು ಮನೆ ಮಾಡಿ ಜೋಡ ಹೆಂಡರನಾಳ್ವ
ರೂಢಿಯೊಳು ತಿರುಗುತ ಬೇಡಿಕೊಂಡುಂಬವಗೆ ‖ ೧ ‖

ಕ್ಷಿತಿಮಾತೆ ದಾಕ್ಷಾಯಣಿ ತಾತ ದಕ್ಷಬ್ರಹ್ಮಗೆ
ಹೋತಿನ ತಲೆಯಿಟ್ಟ ಪಾತಕನಾಶಗೆ ‖ ೨ ‖

ಪಂಚಲಿಂಗಗಳಿಂದ ಮಿಂಚುವ ದೇವಣಗಾಂವ
ಪಂಚಮುಖ ಮಲ್ಲಿನಾಥನಿಗೆ ಕಂಚಿನಾರುತಿ ‖ ೩ ‖

ಬಸವಣ್ಣ : ಗಣನಾಥ ನಿರ್ಗುಣ ನಿರಾಲಂಬ ನಿರ್ವಿಘ್ನ ದುರ್ಗಿ ಕಾಂತನೆ, ಈ ಬಸವೇಶನನ್ನು ರಕ್ಷಿಸು. ಶರಣರಿಗೆ ಕಡು ವಿಪರೀತವೆಸಗಿ ಪರಿಪರಿ ಘೋರ ಪ್ರಸಂಗ ದೋರಿದಲ್ಲಿ ಪರಶಿವನೆ ಪರಮ ದಯಾಳು ಭರದಿಂದ ಪಾಲಿಸು.

[ಹೋಗುವರು]

ಹರಳಯ್ಯನ ಪ್ರವೇಶ (ಗಂಡ ಹೆಂಡತಿ)

ಹರಳಯ್ಯ : ಎಲ್ಲೈ ! ಸುಂದರ ವದನಾ ಕುಂದುಕೊರತೆವಂದಿಲ್ಲದೆ, ಮಂದಸ್ಮಿತನಾಗಿ ಕರಪದಗಳಂ ಮುಗಿದು ಒಂದೊಂದು ಪರಿಯಿಂದ ನಮ್ಮನ್ನು ವಂದಿಸಿ ತಂದೆಗಳೇ ತಾವು ದಾರೆಂದು ಮುಂದೆ ಬಂದು ಸಂದೇಹಕ್ಕೆ ತಂದು ತಡಿಯದೊಂದೊಂದು ಇಡುತ್ತ ನೀನಾಲಿಸಿ, ಒಡಲು ಚಲಿಸದೆ ದೃಢತರದಿ ಒಡಿದು ನೀನಾರೆಂದು ಎಡಬಿಡದೆ ನುಡಿಯುವ ನಿನ್ನ ನಾಮಾಂಕಿತವೇನಯ್ಯಾ? ಉಡುರಾಜ ಭಕ್ತ.

ಎಲ್ಲೈ ! ಸಾರಥಿ, ಪರಮ ಮೋಕ್ಷಾರ್ಥಿ, ಶಿವಪೂಜಾ ವಿಧಾನ ಗುರು ಮುಖದಿಂದು, ಮೆರೆದಿರ್ಪ ಸಚ್ಚಿದಾನಂದ ಶಿವನ ಸ್ಮರಿಸಿ ಮನದಿಂದರ್ಚಿಸಿ, ಪರನಾರಿಯರ ಭೋಗವ ತೊರೆದು, ಭೂರಿವಿಷಯಾದಿ ಸುಖಗಳ ಮೆರೆದು, ಧರೆಯೊಳು ಸತ್ಕರ್ಮವೆಸಗಿ ಮರಳಿನ್ನಾವ ಜನ್ಮಕ್ಕೆ ಬರಬಾರದೆಂಬ ಕುರುಹ ಸಿರಿಸಂಪದಗಳು ಸ್ಥಿರವಲ್ಲವೆಂದು ನಂಬಿ, ಶಿವ ಶರಣರಿಗಷ್ಟೆ ಕೆರವುಗಳನ್ನು ಮಾರಿ ನಿತ್ಯ ಕಾಯಕಗಳಂ ತೀರಿಸಿಕೊಂಡು ಕಾಲ ಹರಣಗೈವ ಸಮಗಾರ ಹರಳಯ್ಯನೆಂದು ಅರಿಯಲಾ ಸಾರಥಿ.

ಎಲ್ಲೈ ! ಸಾರಥಿ ಈ ರಂಗಸ್ಥಲಕ್ಕೆ ಬಂದ ಇಂಗಿತವೇನೆಂದರೆ ಸಂಗಮನನುಗ್ರಹದಿ ನಾನು ಮಾಳ್ಪ ಮಂಗಲಾರ್ಯನ ಸುಮಂಗಲ ಕಾರ್ಯಕ್ಕೆ ಅನುಕೂಲಳಾದ ಶೃಂಗಾರಗೌರಿ ಕಲ್ಯಾಣಿ ಎನ್ನ ರಾಣಿ, ಗುಣವೇಣಿಯನ್ನು ಬರಹೇಳುವಂಥವನಾಗು.

ಕಲ್ಯಾಣಮ್ಮ: ವಿಮಲ ವಿಶುದ್ಧ ಪ್ರಮಥರಿಗೆ ಅಮಿತಾನಂದಮ ಯ ರಮಣಾ ಸುಚರಣಾ ತಮ್ಮ ಅಮೋಘ ದಿವ್ಯ ಚರಣಕ್ಕೆ ಈ ಕಲ್ಯಾಣಿ ನಮಿಸುತ್ತಾಳೆ.

ಹರಳಯ್ಯ: ಶಂಕರ ಶಂಕರಿಯೊಳು ಮನವೆಂಬ ಬೀಜವಂ ಅಂಕುರಿಸಿ ಈ ಶಿವಶಂಕರನಿಗೆ ಕುಂಕುಮಾಂಕಿತೆಯಾದ ಪಂಕಜಲೋಚನಿಯೆ ಶುಭಾಶೀರ್ವಾದವಾಗಲೇಳು ಸಖಿ ಕಮಲಮುಖಿ

ಕಲ್ಯಾಣಮ್ಮ: ದುರಿತ ಕಲ್ಪನೆಗಳ ದೂರಿಸಿ ಪರಮಾತ್ಮನೊಳು ಬೆರೆಯಬೇಕೆಂಬ ಮಾರ್ಗತೋರುವ ಮನೋಹರ, ಶರಣರೊಳು ಸರಸದಿಂದಿರುವ ಈ ನಾರಿ ಮಣಿಯಳಂ ಕರೆಹೇಳಿದ ಕಾರಣವೇನು? ಶುಭ ಗುಣಲೋಲಾ, ಬೀಳುವೆ ನಿಮ್ಮ ಕಾಲ.

ಹರಳಯ್ಯ : ಹೇ ! ಚಿತ್ತಜನ ರಾಣಿಯಂತೊಪ್ಪುವ ಪತ್ತುಳ್ಳ ಸತಿಯೆ ಭಾಗಿರಥಿಯೆ? ಅನಂತ ಜನ್ಮಗಳ ದಾಂಟಿ ಮಾನವ ಜನ್ಮಕ್ಕೆ ಬಂದ ಮೇಲೆ ಅನ್ಯರಿಗೆ ಉಪಕಾರ ಮಾಡದೆ ಇರಬಾರದು. ಅನ್ನಕ್ಕೆ ಅಭಾವವಿದ್ದವರು ಶ್ರೀಮಂತರಿಗೆ ನಮಸ್ಕಾರವಿತ್ತು, ಮುಖವಂ ಬೆನ್ನತ್ತ ತಿರುವಿ, ಎಡಹಸ್ತದಿಂದ ನಮಸ್ಕಾರವೆನ್ನುವರು. ಇಂಥ ಪಾವ ೨ರಿಗೆ ಯಮನು ಎಳಿದು ದಂಡಿಪನು.

ಹೇ ! ಪ್ರಾಣಸಖಿ, ನಿನ್ನಿನ ದಿವಸ ಬಸವರಾಜನಿಗೆ ಶರಣಾರ್ಥಿ ನಾನಿತ್ತರೆ ಪ್ರತಿಯಾಗಿ ಶರಣು ಶರಣಾರ್ಥಿ ಎಂದರು. ಭಕ್ತರಿಗೆ ಗುರುವು ಬಹುವಚನದಿಂ ಮಾತಾಡಿದರೆ ಪಾತಕವು ಭಕ್ತನಿಗೆ ತಟ್ಟುವದೆಂಬ ನೀತಿ ಇರುವದು. ಕಾರಣ ಅಣ್ಣ ಬಸವಣ್ಣನವರು ಶರಣು ಶರಣಾರ್ಥಿ ಎಂದೆನಗೆ ಹೇಳಿದ ಕಾರಣ ದೋಷ ತಟ್ಟಿರುವದು. ಇದರ ನಿವಾರಣೆ ಪೇಳುಕಾಂತೆ ಗುಣವಂತೆ.

ಕಲ್ಯಾಣಮ್ಮ : **ಪದ**

ಸುಂದರ ಸುಗುಣ ಚಂದಿರನೆ
ಸಂದೇಹ ಪಡುವದು ಉಚಿತವೇ
ಇಂದು ತೋರಿದ ಪಾಪ
ಬಂಧನ ಹರಿಸಲ್ಕೇ ಸುಂದರಿ ಸಮರ್ಥಳು ॥ ೧ ॥

ಎನ್ನ ಎಡೆದೊಡೆ ಚರ್ಮ ಕಾಂತಾ
ನಿನ್ನ ಬಲದೊಡೆ ಚರ್ಮ
ಅನುಮಾನಿಸದೆ ಸೀಳಿ
ಎನ್ನಯ ಪಾದರಕ್ಷಿ ಅಣ್ಣ ಬಸವಗರ್ಪಿಸು ॥ ೨ ॥

ಇದ್ದ ಪಾಪ ದೂರ ಸದ್ಭಾವ ರಣಧೀರ
ಮುದ್ದುಮಲ್ಲಿನಾಥ
ಉದ್ಭವಿಸಿದ ದೇವನಗರ
ವಿದ್ಯೆಯೊಳು ದೇಶಕ್ಕೆ ಪ್ರಸಿದ್ಧ ॥ ೩ ॥

ಕಪಟಗುಣ ಅಳಿದು ಅಪರಿಮಿತ ಜಪವನು ಓದುವ ನಾಥ ಕೇಳೆನ್ನ ಮಾತ. ಇಂಥ ಕಾರ್ಯಕ್ಕೆ ಹತಾಶಯರಾಗುವರೆ? ಪತಿಗೊದಗುವ ಆಪತ್ತು ವಿಪತ್ತುಗಳಿಗೆ ಸತಿಯು ಸಹಭಾಗಿನಿ ಇರುವಳು. ಎನ್ನ

ಎಡದೊಡೆ, ನಿಮ್ಮ ಬಲದೊಡಿಯ ಚರ್ಮವಂ ಸೀಳಿ, ಪಾದರಕ್ಷೆಯಂ ಮಾಡಿರಿ. ಎನ್ನ ಚರ್ಮದಿಂದುದಯಿಸಿದ ಚರ್ಮಾವುಗೆಗೆ ಸ್ತ್ರೀ ಛಾಯವಂ ಚಿತ್ರಿಸಿರಿ. ತಮ್ಮ ಚರ್ಮದ ಕಡಾವಿಗೆಗೆ ಪುರುಷರೂಪವಂ ನಾಟಿಸಿ ಶಿವನಾಜ್ಞೆಯಿಂದ ಭುವಿಗೆ ಬಂದ ದೇವ ಮಾನವ ಜಂಗಮ ಗಂಗಾಂಬಿಕೆ–ನೀಲಾಂಬಿಕೆಯರ ಮಂಗಲಾಂಗನಿಗೆ ಸಮರ್ಪಿಸಿದರೆ ದುರಿತ–ದೂರಾಗುವದು ಕಾಂತಾ ಸರ್ವಗುಣ ಸಂಪನ್ನಾ.

ಹರಳಯ್ಯ : ಎಳೆಮುತ್ತಿನಂತೆ ಥಳಥಳ ಹೊಳೆವ ಮುಖವುಳ್ಳ ನಳಿನಾಕ್ಷಿ ಕಲ್ಯಾಣಿಯೆ ಕೇಳು. ಪತಿಯ ಮೇಲಣ ಪ್ರೀತಿಚ್ಛೆಯಿಂದ ನಿನ್ನ ಇಚ್ಛೆಯಂತೆ ಎಚ್ಚರವಿಲ್ಲದ ಕೆಲಸವೆಸಗಿದರೆ ಭಗವಂತನು ಮೆಚ್ಚುವನೆ? ಪತಿಯ ಪಾಪ ಪುಣ್ಯಗಳಿಗೆ ಸತಿಯು ಭಾಗಿನಿಯೆಂದು ಅದಾವ ನೀತಿ ಕೂಗುತ್ತಿರುವದು? ಯತಿಯಾದ ವಾಲ್ಮೀಕ ಮಹಾಮುನಿಗೆ ಗತಿಸಿದ ಪಾತಕದಲ್ಲಿ ಸತಿ ಸುತರು ಅತಿ ಪರುಷದಿ ಒಪ್ಪಿದರೆ ಹೇಗೆ? ತನಗೆ ಬಂದಿದ್ದು ತಾನೇ ಭೋಗಿಸಬೇಕಲ್ಲದೆ ಇನ್ನೊಬ್ಬರಿಗೆ ಘನಪಾತಕ ಮಾಡುವದು ಅನ್ಯಾಯವಾಗುವದು: ಕಾರಣ ನನ್ನ ದೋಷಕ್ಕೆ ನೀನು ಸಂಬಂಧವಿಲ್ಲ ಸತಿ ಮಹಾ ಪತಿವ್ರತಿ.

ಕಲ್ಯಾಣಮ್ಮ : ಹೇ ! ವಲ್ಲಭಾ, ವಾಲ್ಮೀಕ ಋಷಿಯ ನಲ್ಲೆಯಂತೆ ಈ ಫುಲ್ಲಲೋಚನೆ ಬುದ್ಧಿ ಇಲ್ಲದವಳಲ್ಲ. ಎಲ್ಲ ಸಮೂಹವು ಕೂಡಿ ಬಲ್ಲಿದವರನಿರುವನೆಂದು ಮಲ್ಲಿಕಾರ್ಜುನನ ದಯದಿ ಈ ಬಾಲೆಯ ಗರಳಕ್ಕೆ ತಾಳಿಕಟ್ಟಿ, ಎಡಭಾಗಕ್ಕೆ ಕೂಡ್ರಿಸಿ ಇವಳೆ ನಲ್ಲೆಯೆಂದು ಎಂದು ಹೊಂದಿಸಿದರೊ ಅಂದೆ ನಿಮಗೆ ಭಾಗಿನಿಯಾಗಿರುವೆನು. ತಾವು ನ್ಯಾಯದಿಂದಾಗಲಿ ಅನ್ಯಾಯದಿಂದಾಗಲಿ ತಂದ ಗಳಿಕೆ ಉಂಬುವ ಸುಮಂಗಲೆಯು ಪಾಪಪುಣ್ಯಗಳಿಗೇಕೆ ಭಾಗವಹಿಸಬಾರದು. ಮಂಡಲದಲ್ಲಿ ಗಂಡಂದಿರಿಗೊದಗುವ ಸುಖ–ದುಃಖಗಳಲ್ಲಿ ಹೆಂಡಂದಿರೆಲ್ಲರು ಸಮಪಾಲರಾಗುವದೆ ಖಂಡಿತ. ಕಾರಣ ಈ ನಾರಿಯಳ ಚರ್ಮದ ಚಮ್ಮಳಿಗೆಯೊಂದನ್ನು ಭಗವಂತ ಬಸವೇಶನಿಗೆ ಅರ್ಪಿಸು, ವಚನ ನಡಿಸು.

ಹರಳಯ್ಯ : ಎಲೈ ! ಪ್ರಾಣಪ್ರಿಯೆ ನೀನಾಡುವ ನುಡಿಗಳಂ ಕೇಳಿ ಶಿವಸ್ತುತಿಗೈವ ಈ ಹರಳಯ್ಯನ ಹೃದಯ ಚಕ್ರ ಅರಳಿ ಕುಸುಮದಂತೆ ಅಯಿತು. ಮಾತೆಯ ಗರ್ಭದಿಂ ನೂತನ ತನುವನು ತಾಳಿ ಪ್ರೀತಿಗೆ ಬಂದನಂತರ ಒಡಲ ಪೋಷಣೆಗಾಗಿ ದುಡಿಯಲೇಬೇಕು. ದಿವಸ ಪರ್ಯಂತರ

ದುಡಿದು ದಣಿದು ಬಂದ ಒಡೆಯನಿಗೆ ಉಣಲಿಕ್ಕಬೇಕು. ಸತಿ ಪತಿಯೆಂಬ ಜತಿ ಮಾಡದಿದ್ದರೆ ಜಗದುತ್ಪತ್ತಿ ನಿಂತು ಹೋಗುವದಲ್ಲದೆ ಸಮಾಜವು ಅಸ್ತವ್ಯಸ್ತವಾಗುವದೆಂದು ಹತ್ತು ಜನ ಮತಿವಂತರು ಕೂಡಿ ಗಂಡ ಹೆಂಡಿರೆಂಬ ಜೋಡುಗಾಲಿ ಬಂಡಿ ಮಾಡಿಬಿಟ್ಟಿರುವರಲ್ಲದೆ ಪಾಪಪುಣ್ಯಗಳ ಪಾಲಿಗಲ್ಲಾ. ಪುರುಷನ ದೋಷಕ್ಕೆ ಪಾತ್ರಳಲ್ಲ ಸತಿ ಸೌಭಾಗ್ಯವತಿ.

ಕಲ್ಯಾಣಮ್ಮ : ಹೇ ! ರಾರಾಜಿಸುವ ರಾಜೀವ ನೇತ್ರಾ ಸದಮಲಗಾತ್ರ, ಹೀಗೆ ಅನರ್ಥ ತಾವು ಮಾತಾಡುವ ರೀತಿಯೆ? ಪತಿಗೆ ಸತಿಯ ಸಂಬಂಧವಿರದಿದ್ದರೆ ಸೀತಾದೇವಿಯು ರಾಮಚಂದ್ರನ ಬೆನ್ನಹತ್ತಿ ವನಾಂತರದಲ್ಲಿರುತ್ತಿದ್ದಿಲ್ಲ. ಧಾತ್ರಿಯೊಳು ಕ್ಷಾತ್ರಕುಲ ಪಾಂಡವಸುತ ಜೂಜವನ್ನಾಡಿ ರಾಜ್ಯಸೋತು ಕಾಂತಾರಕ್ಕೆ ಕಾಲಿಟ್ಟಾಗ ಪಾಂಚಾಲ ಪುತ್ರಿ ದ್ರೌಪತಿಯು ನಾಥರ ಹಿಂಬಾಲಿಸಿ ತಾಪತ್ರಯಕ್ಕೊಳಗಾಗುತ್ತಿದ್ದಿಲ್ಲ. ಇದು ಅಲ್ಲದೆ ಚಂಡ ಮುಂಡರರ ರುಂಡ ದಂಡಿಸಿದ ಬ್ರಹ್ಮಾಂಡ ಮಾತೆ ದಾಕ್ಷಾಯಣಿ, ಚಾಮುಂಡಿಯು ದಕ್ಷನು ಮಂಡಿಸಿದ ಹೋಮಕುಂಡದಲ್ಲಿ ಬಿದ್ದು ಗಂಡನ ದೆಸೆಯಿಂದ ದಂಡ ದಗ್ಧಹಿಸಿಕೊಳ್ಳುತ್ತಿದ್ದಿಲ್ಲಾ. ನಾಥಾ ಹಸ್ತಗಳ ಮುಗಿದು ಬೇಡಿಕೊಳ್ಳುತ್ತೇನೆ. ಕಾಂತ ಕಾಂತೆಯರ ಭೇಧಾಂತರ ಮಾಡದೆ ನಿಶ್ಚಿಂತನಾಗಿ ಮಾಡೀ ಕಾರ್ಯ, ತಾಳು ಧೈರ್ಯ.

ಹರಳಯ್ಯ : ಹೇ ! ಪತಿವ್ರತಾ ಶಿರೋಮಣಿಯಾದ ಎನ್ನ ಪ್ರಾಣಸಖಿ ನಿನ್ನ ಮನದ ಅಭಿಪ್ರಾಯದಂತೆ ಇನ್ನು ಪಾದರಕ್ಷೆಯಂ ಮಾಡಿ ಆ ಚನ್ನಿಂಗ ಬಸವಲಿಂಗರಿಗೆ ಅರ್ಪಿಸುವೆನು ನೋಡು, ಚಿಂತೆಯಂ ಬಿಡು. [ಹೋಗುವರು]

– ದೃಶ್ಯ –

ಮಧುವರಸ: ಎಲ್ಲೈ ! ಬಸವಣ್ಣ, ಸುವರ್ಣಗಿರಿ ದಕ್ಷಿಣಾದೇಶದೊಳು ಸಂಪೂರ್ಣ ಕಾಂತೆಯಿಂದ ಕೂಡಿದ ಕಲ್ಯಾಣದ್ಯೋಗದಲ್ಲಿ ಮಂತ್ರಿಕಾರ್ಯ ಮಾಡುವದೆಂತೆಂದರೆ ರಣರಂಗದಲ್ಲಿ ಖಣಲ್ ಖಣಲ್ಲೆಂದು ರಣವಂಗೈವ ತರುಣ ಸೈನಿಕರಿಗೆ ಅನ್ನವಸ್ತ್ರಾದಿಗಳು ಚೆನ್ನಾಗಿ ದೊರಕುವದೋ ಇಲ್ಲವೊ ಎಂಬುದರ ಪರಿಣಾಮ ಕಾಣಬೇಕು. ರಾಜ್ಯ ಕಾರ್ಯಕ್ಕಾಗಿ ಖರ್ಚೆಷ್ಟಾಯಿತು ಜಮವೆಷ್ಟಾಯಿತು? ಕಾಗದಪತ್ರ ನೋಡಬೇಕು. ನಾಡಿನಲ್ಲಿರುವ ಜಹಗಿರದಾರ, ನಾಡೊಡೆಯ, ದೇಸಾಯಿ, ದೇಶಪಾಂಡೆ,

ನಾಡಗೌಡರು ಕೊಡುವ ಕಾಣಿಕೆಯಂ ತಂದೊಪ್ಪಿಸಿರುವರೊ ಇಲ್ಲವೋ ಎಂದು ಕಿರ್ದಿಗಳಂ ತಪಾಸಿಸಿ ಸೈ ಮಾಡಬೇಕು. ಇದನ್ನು ಬಿಟ್ಟು ಗುರುಲಿಂಗಜಂಗಮ ಎನ್ನುತ್ತ, ಪೂಜಾ ಮಾಡುತ್ತ ದಿನತನಕ ವ್ಯರ್ಥ ಕಾಲಕಳೆದು ಕೊಟ್ಟದ್ದು ಶಿವಾಯನಮಃ, ತಕ್ಕೊಂಡಿದ್ದು ಶಿವಾಯನಮಃ ಎಂದು ಖಾತೆಯಲ್ಲಿ ಲೇಖಿಸುತ್ತ, ಹಳದಿರಾಜನಪಟ್ಟಣ ಮಾಡಿ ಬಿಟ್ಟಿರುವಿ ನೀನಾ, ಮತಿಹೀನ.

ಬಸವಣ್ಣ : ಮಡದಿ ಮಕ್ಕಳಭಿಮಾನವಿಡಿದು ಅವರೊಡಲ ರಕ್ಷಣೆಗೆ ದುಡಿದು, ದುಡ್ಡನೆ ಕೂಡಿಸಿ ಬಡವರಿಗೆ ದಾನ ಕೊಡದೆ, ಮಡಿದಮೇಲೆ ಯಮನು ಎಳೆಯುವಾಗ ಬಿಡಿಸಿಕೊಳ್ಳಲಾಗದವರ ನೆಚ್ಚಿ ಮೃಡ ಪಾಲ್ಗಡಲೊಡೆಯರು ಎರಡೆಂದೆಣಿಸಿದ ಮರುಳ ಮಧುವರಸನೆ ಕೇಳು, ಹರಮುನಿದಲ್ಲಿ ಗುರುಕಾಯ್ವನು. ಗುರುವೇ ಮುನಿದರೆ ಹರನಿಂದ ಕಾಯದಾಗದು. ಗುರುವಿನ ಕರುಣೆಯುಳ್ಳವನು ಹರಿವ ನೀರಿನಲ್ಲಿದ್ದರಷ್ಟೆ, ಉರಿವ ಬೆಂಕಿಯಲ್ಲಿದ್ದರಷ್ಟೆ. ಧರೆಯಲ್ಲಿ ಸರ್ವದಕ್ಕೂ ಗುರು ಸಂಗಮನಾಥನೆ ಪರಮನು. ತಿಳಿಯಿತೆ ಆಚಾರಹೀನ, ವಿಚಾರ ಶೂನ್ಯ.

ಮಧುವರಸ : ಭಲ ! ಎಲೈ ! ಹೀನ ಮಾನವನಾದ ಬಸವಣ್ಣ, ಕಲ್ಯಾಣದೊಡೆಯನ ಹಣವನ್ನೆಲ್ಲಾ ಸೆಳೆದು ಗಣಂಗಳಿಗೆ ಅಣಿಮಾಡಿದ ಗುಣಗೇಡಿಯೆ, ಗುರುವಿನ ಮಹತ್ವ ಅರಿತವರು ನಿಜವಾಗಿದ್ದರೆ ಸಜೀವಮೂರ್ತಿಯನ್ನು ಪ್ರತ್ಯಕ್ಷ ಪೂಜಿಸತಕ್ಕದ್ದು. ಅದನ್ನು ಬಿಟ್ಟು ಶಿಲೆಯಿಂ ಕೆತ್ತಿಸಿದ ಚಿತ್ರಕ್ಕೆ ದೇವರೆಂದು ತಲೆಬಾಗಿಸಿ ಸಲಾಮು ಹೊಡೆಯುವವರಿಗೆ ಪರಮರೆಂದಾರು ಹೇಳುವರು ಬೊಗಳು, ನೀನಾಡದಿರು ಸುಳ್ಳು.

ಬಸವಣ್ಣ : ಸತ್ಯ ಶರಣರ ಆತ್ಮಶಕ್ತಿಯನ್ನರಿಯದೆ ಮನಬಂದಂತೆ ಮಾತಾಡುವದು ಸರಿಯಲ್ಲ. "ಲಿಂಗಮಧ್ಯೆ ಜಗತ್‌ಸರ್ವಂ" ಎಂಬ ಶಿವನಾಮ ವಾಕ್ಯವಿರುವದು. ಗುರುವನ್ನು ನರನೆಂತಲೂ ಹರನನ್ನು ಕಲ್ಲೆಂತಲೂ ದೇವ ಪ್ರಸಾದವನ್ನು ಎಂಜಲೆಂತಲೂ ಬೊಗಳುವ ನರಮಾನವನು ವರಾಹ ಜನ್ಮದಲ್ಲಿ ಹುಟ್ಟಿ ನರಕ ಭಕ್ಷಣ ಮಾಡುವನೆಂದು ವಾಕ್ಯವಿರುವದು. ಮುಕ್ಕಣ್ಣನು ಹದಿನಾರು ವರ್ಷ ಆಯುಷ್ಯವನ್ನಿತ್ತ ಮಾರ್ಕಂಡೇಯನಿಗೆ ಕಾಲನು ಪಾಶ ತಗಲ್ಹಾಕಿ ಫಾಸಿ ಪಡಿಸುವಾಗ ಜಯಘೋಷ ಮಾಡುತ್ತ ಕೂಸಿನ ಪೋಷಣೆ ಮಾಡಿದ ಈಶನು ಎಲ್ಲಿಂದ ಬಂದನು. ಸಿಕ್ಕ ಸಿಕ್ಕಂತೆ ಮಾತಾಡಿ ಪ್ರಮಥರ ಮನನೋಯಿಸಿ ಯಮಲೋಕಕ್ಕೆ ದುಡುಕಬೇಡಾ ನಿನಗಾವುದು ಪಾಡಾ.

ಹರಳಯ್ಯ : ಜನನ ಮರಣಗಳನ್ನು ಮೀರಿ ಜನಹಿತಕ್ಕಾಗಿ ಜನ್ಮ ತಾಳಿದ ಘನತರ ಮಹಿಮೆಯನ್ನು ತೋರಿದ ಭಗವಂತ ಬಸವರಸನೆ ಹರಳಯ್ಯನ ಶರಣಾರ್ಥಿ.

ಬಸವಣ್ಣ : ತನುಮನಧನಗಳಂ ಶಿವನಿಗೆ ಅರ್ಪಿಸಿ, ಅನಾತ್ಮಕ ಕೆಲಸದಲ್ಲಿ ಮೌನವಂ ತಾಳಿ, ಶರಣಸನ್ಮತದಂತೆ ವರ್ತಿಸುವ ಹರಭಕ್ತ ಹರಳಯ್ಯನವರಿಗೆ ಭಕ್ತವೃಂದಾರಕ ಬಸವಣ್ಣನ ಶರಣು ಶರಣಾರ್ಥಿ

ಹೇ ! ಜಂಗಮ ಸ್ಥಿರ ಭಜನಾತೀತಲೋಲನೆ ನಿಮ್ಮ ಕಂಕುಳದಲ್ಲಿ ಇರುವ ವಸ್ತು ದಾವದು. ಗುರು ಚರ ಭೃತ್ಯ, ಹೇಳು ನೀ ಸತ್ಯ.

ಹರಳಯ್ಯ : ಅಂಗದ ಕೊಂಗ ಗುಣವಳಿದ ಭವಿ ಸಂಗ ದೂರೀಕರಿಸಿದ ವೀರಶೈವ ವಿಶ್ವಧರ್ಮದ ಭಾಸ್ಕರನೆ, ಶರಣರ ಕೇರಿಯೊಳು ಬರಿಗಾಲಿನಿಂದ ತಾವು ತಿರಗುವದ ಕಂಡು ಮನಕರಗಿ, ಪರನಾರಿಯರೊಳು ಮನವೆರಸಿ, ಕರದಿಂದ ದುರಿತ ಕಾರ್ಯವೆಸಗಿ, ಸುರಲೋಕದ ಆಸೆ ಬಿಟ್ಟು ನರಲೊಕಕ್ಕೆ ಹಾತೊರೆಯುವ ಮನುಜರು ಧರಿಸುವ ಪಶು ಚರ್ಮದ ಪಾದುಕೆಗಳು ತಮಗೆ ಸಲ್ಲತಕ್ಕದ್ದಲ್ಲವೆಂದು ಈ ಹರಳಯ್ಯನು ತನ್ನ ತೊಡೆಯ ಚರ್ಮದೊಂದು, ಮಡದಿ ಕಲ್ಯಾಣಿಯ ತೊಡೆಯ ಚರ್ಮದಿಂದ ಮಗುದೊಂದು ಪಾದುಕೆಗಳನ್ನು ಮಾಡಿಕೊಂಡು ತಮಗೆ ಮೆಡಲು ತಂದಿರುವೆನು. ಗಡನೆ ಅಡಿಗಳಿದರೊಳಗಿಟ್ಟು ನಡೆದರೆ ಸಾಕು ಮತ್ತೇನು ಬೇಕು.

ಬಸವಣ್ಣ : ಭೂತಳದಿ ವೀರ ಖ್ಯಾತನೆನಿಸಿದ ಶ್ವೇತನಂ ಪಿಡಿದತಿ ಘಾತಿಸುತ್ತಿರಲು ಆತುರದಿ ಬಂದು ಯಮನ ಕೊಂದಾತನ ಮತಪಕ್ಷಪಾತನೆ ಇದೆಂಥ ಅನಾಹುತ ಕಾರ್ಯ ಕೈಕೊಂಡು ಎನ್ನತ್ತ ಬಂದು ನಿಂತಿರುವಿ ದೀನ ಜನ ದಯಾಳಿ, ಜಗದಾಂಬಿಕೆಯ ಸರಿ ಗಟ್ಟುವ ಸತಿ ಕಲ್ಯಾಣಮ್ಮನ ತೊಡೆ ಸೀಳುವಾಗ ತಳಮಳವಾಗಿ ಬಳಲಿರಬಹುದೆಷ್ಟು? ನಾನಾವ ಪರಮನು ಶರೀರದಾಶೆಯಂ ಮರೆದೀ ಪರಿ ಮಾಡಲಿಕ್ಕೆ? ಶರಣ ಜನ ಪರಿಪಾಲಕನಾದ ಈ ಬಸವಣ್ಣನು ಆ ಘನ ಮಹಿಮರ ಚರ್ಮಕ್ಕೆ ಪಾದಸೋಕಿಸಿ ಅದಾವ ನರಕಕ್ಕೆ ಗುರಿಯಾಗಬೇಕು ಕ್ಷೇಮವ ತಾಳಿರಿ.

ಹರಳಯ್ಯ : ಜಂಗಮ ಮೂರ್ತಿ ಮಂಗಳ ಗುಣಾನ್ವಿತ ಅಂಗದ ಮೇಲೆ ಇಷ್ಟಲಿಂಗವುಳ್ಳ ಸಂಗಮನಾಥನ ಸ್ವರೂಪಿಯೇ ! ಹಿಂಜರಿಯದಿರು. ಪೆಟ್ಟಿಗೆ ಹಣವನ್ನೆಲ್ಲಾ ನೀನು ದುಃಖಿತರಿಗೆ ಕೊಟ್ಟು ಮತ್ತದರಷ್ಟು ನಿಧಿಯನ್ನು ಖೊಟ್ಟಿ ಬಿಜ್ಜಳನಿಗೆ

ತೋರಿದ ಪರಮನಲ್ಲವೇ? ಅನ್ಯಾಯಕ್ಕೆ ಮನ್ನಣೆಯುಳ್ಳ ಈ ಕಲಿಯುಗದಲ್ಲಿ ನಿನಗಿಂತ ಅಧಿಕ ಇನ್ನಾರಿರುವರು? ಕಾರಣ ಈ ಪಾದರಕ್ಷಿಗಳಂ ಮೆಟ್ಟಿಕೊಂಡರೆ ಎಮ್ಮ ಜನ್ಮ ಪಾವನ.

ಬಸವಣ್ಣ : ಘನಶಿವನಲ್ಲಿ ಮನ ಎರಕ ಮಾಡಿದ ಹರಳಯ್ಯನವರೆ ನಿಮ್ಮ ಮನೋ ರಥವನ್ನು ಪೂರ್ಣಗೊಳಿಸುವ ಈ ಕಾರ್ಯವು ಎನ್ನಿಂದ ಆಗದು. ಏನು ಮಾಡಿದರೂ ಶ್ವಾನವು ಆನೆಯ ಸಮಾನವಾಗಬಹುದೆ? "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ, ನಿಮ್ಮ ಪಾದಸಾಕ್ಷಿ, ಕೂಡಲ ಸಂಗಮ ದೇವ". ಗುರುವಿಗೆ ಸಂಬಂಧವಾದ ಹಾಸಿಗೆ, ಆಸನ ಪಾದುಕೆಗಳಿಗೆ ಶಿಷ್ಯನ ಪಾದ ಸೋಂಕಿದರೆ ಅಪಾರ ಪಾಪ ಸಂಗ್ರಹಿಸುವದೆಂದು ಪ್ರಮಾಣ ವಚನವಿರಲಾಗಿ, ಇಂಥ ದುರಿತ ಕಾರ್ಯ ಮಾಡಬೇಕೆ? ಒಂದು ವೇಳೆ ನೀವು ತಂದ ಪಾದುಕೆಗಳಂ ಚರಣಕ್ಕೆ ಹೊಂದಿಸಿದಲ್ಲಿ ಮುಂದೆ ಯಮನು ಈ ಬಸವನ ಕಾಲುಗಳಂ ತುಂಡು ತುಂಡಾಗಿ ಖಂಡಿಸಿ ನರಕ ಕುಂಡದಲ್ಲಿ ಕೆಡುಹಿ ದಂಡಿಸದೆ ಬಿಡನು. ಕಾರಣ ಈ ಚರಣರಕ್ಷೆಗಳನ್ನು ಶಿರದಲ್ಲಿ ಹೊತ್ತುಕೊಂಡು ಪಾವನನಾಗುವೆನು.

ಹರಳಯ್ಯ : ಹಾಯ್ ! ಹಾಯ್ ! ಪರಮೇಶ್ವರ ದುರಿತ ಮಾಡಿ ಪರ್ವತಕ್ಕೆ ಹೋದರೆ ಸತ್ತುಹೋದ ಶ್ವಾನವು ಕೊರಳಿಗೆ ಬಿದ್ದಂತಾಯಿತು. ಶರಣು ಶರಣಾರ್ಥಿ ದೋಷದ ಪರಿಹಾರಾರ್ಥ ಸತಿ ಪತಿಗಳ ದೇಹಭಾಗದಿಂದ ಮಾಡಿದ ಪಾದರಕ್ಷೆಗಳ ಸಮರ್ಪಣೆಗೆ ತಂದರೆ ತಲೆಯ ಮೇಲಿರಿಸಿಕೊಂಡು ಇನ್ನಷ್ಟು ಎನ್ನನ್ನು ನರಕಕ್ಕೆ ಅಣಿ ಮಾಡಿದರು.

ಭಲಾ, ಭಲಾ ! ಬಸವಣ್ಣನವರೆ, ಈ ಹರಳಯ್ಯನ ಛಲವು ಗೆಲ್ಲಲಿಲ್ಲಾ ಹೊತ್ತುಕೊಂಡು ತಲೆಯ ಮೇಲಿನ ಪಾದುಕೆಗಳನ್ನು ಭೂಮಿಯಲ್ಲಿ ಬೀಸ್ಹಾಕಿರಿ, ಥಟ್ಟನೆ ಒಗೆಯಿರಿ. [ಹೋಗುವರು].

ಮಧುವರಸ: ಅಲಲಲ ಭೂಲೋಕ ಜನವೆಲ್ಲಾ ಕಾಲಲ್ಲುಪಯೋಗಿಸಿಕೊಳ್ಳುವ ಪಾದುಕೆಗಳನ್ನು ತಲೆಯಮೇಲಿಟ್ಟುಕೊಳ್ಳುವ ಬಸವಣ್ಣನು ಮಹಾಮಹಿಮ ಪುರುಷನೆಂಬುವದು ಭೂತಲವೆ ತರ್ಕಿಸಲಿ.

ಭಲ್ಯೆ ಎಲ್ಯೆ ! ಹರಳಯ್ಯನೆ, ನೀನು ಹೊತ್ತುಕೊಂಡು ಹೋಗುವ ಪಾದರಕ್ಷೆಗಳನ್ನು ಈ ಸಮರ್ಥನಿಗೆ ಅರ್ಪಿಸು. ಇಲ್ಲವಾದರೆ ಛಲದಿಂದ ಹಾಕಿಕೊಳ್ಳುವೆನು ನೋಡು ತಡ ಮಾಡದೆ ಕೊಡು.

ಹರಳಯ್ಯ: ಭಲೆ ಎಲೈ ! ಮಂದ ಮತಿಯಾದ ಮಧುವರಸನೆ, ಮೃಡರಾಯ ಬಸವೇಶನು ಮೆಡದ ಒಡವೆಗಳನ್ನು ಕಿಡಿಗೇಡಿ ನಿನಗೆ ಸಾಧ್ಯವೆ? ಸುರರು ಮಾಡುವ ಅಮೃತ ಪಾನ ನರರಿಗೆ ದೊರಕುವುದೆ? ಎಲೈ ! ಮಧುವರಸನೆ ಕರಮುಗಿದು ಪರಿಯಾಯದಿಂ ಪೇಳುವೆ ಮರುಳನಂತೆ ಈ ಕಾರ್ಯ ಮಾಡಿದರೆ ಘೋರ ದುಃಖಕ್ಕೆ ಗುರಿಯಾಗಬೇಕಾದೀತು! ಗುಣವಂತರ ಕೂಡ ಹೆಣಗಾಡಬಾರದು. ಇದಕ್ಕೂ ಮೀರಿ ಹಾಕಿ ಕೊಂಡರೆ ದಿಕ್ಕು ತಿಳಿಯದಾಗಿತ್ತು ನಿನ್ನ ಸೊಕ್ಕು ಇಳದೀತು,

ಮಧುವರಸ: ಎಲೈ ! ನೀಚನೆ ಸಮಗಾರನಿಂದ ವಿಚಾರ ಕೇಳಿಕೊಳ್ಳುವಷ್ಟು ಅವಿಚಾರಿ ನಾನಲ್ಲ, ನನಿಚ್ಛೆಯಂತೆ ನೀನು ಮುಚ್ಚಿಕೊಂಡು ತಂದ ಪಾದರಕ್ಷೆಗಳನ್ನು ಹಾಕಿಕೊಳ್ಳುವದು ನಿಶ್ಚಯ, ನಿಶ್ಚಯ [ಮಧುವರಸ ಹಾಕಿಕೊಳ್ಳುವನು].

ಅಹ ! ಇದೇನು ಮೈಗೆ ಕಿಚ್ಚು ಒಮ್ಮಿಂದೊಮ್ಮೆ ಹಚ್ಚಿದಂತಾಗಿ ಉರುಪು ಹೆಚ್ಚಾಯಿತು. ಅಯ್ಯೊ ಅಚ್ಚುತಾ ಅನಂತ ಈ ಬಾಧೆಯಂ ತಾಳಲಾರೆ ಜೀವದಿಂದ ಉಳಿಯಲಾರೆ. [ನೆಲಕ್ಕೆ ಬೀಳುವನು, ಹರಳಯ್ಯ ಹೋಗುವನು].

ಪದ

ತೊಡಕಿನೊಳು ಸಿಲುಕಿದೆನಯ್ಯ ಹರಿಯೆ
ಒಡಲು ಉರಿದು ಮಿಡಕುವದಾಯ್ತು ದೊರೆಯೆ ॥ ಪಲ್ಲ ॥

ದುರುಳ ಪಾಪಿಗೆಷ್ಟು ಬಾಧೆ
ಮರಣವಾಗುವದರ ಘಳಿಗೆ
ಕರುಣಿಸಯ್ಯ ರುಕ್ಮಿಣಿಗರಸಾದೆ ॥ ೧ ॥

ಭಗ ಭಗವೆಂದು ದೇಹ ಉರಿವದು
ರಾಗದಲ್ಲಿ ಕೂಗಿ ನುತಿಪೆ ಬೇಗ ಹರಿಸು ಕಷ್ಟ
ನಗೆಮೊಗ ಮಲ್ಲಿಕಾರ್ಜುನ ॥ ೨ ॥

ಅಯ್ಯಾ ! ಹರಿ ಹರಿ ಮಹಾಘೋರ ಸಮಯ ಬಂದೊದಗಿತು. ಶ್ರೀದೇವಿ ಅರಸಾ ಧಗ ಧಗವೆಂದು ಶರೀರ ಉರಿಯುತ್ತಿರುವದು. ಭೂತಲದೊಳಗೆನ್ನ ಪ್ರಾಣ ಘಾತವಾಗುವದು. ನೀತಿಯನ್ನು ತೋರಿದ ಹರಳಯ್ಯನವರ ಮಾತು ಕೇಳದ್ದಕ್ಕೆ ನನ್ನದೀಗತಿಯಾಯಿತು. ತತ್ತ್ವವಂ ಪರಿಪಾಲಿಸುವರ ಸಂಗಡ ವಾದಿಸಬಾರದೆಂಬ ಹಿರಿಯರ ವಾಕ್ಯವಿದೆ. ಅಹ ! ಶರಣರಿಗೆ ಬಿರುನುಡಿಗಳಾಡಿದರ್ಗೆ ಈ ಪರಿ ತಪ್ಪಿದ್ದಲ್ಲ ಪೇ

ಶಂಖಧಾರಿ ಅಕಳಂಕ ಮಹಿಮ ಲಂಕೆ ಸಂಹಾರ. ಈ ಕಿಂಕರನ ಸಂಕಟ ದೂರೀಕರಿಸಿ, ಸಂಕಟ ವಿದುರನೆಂಬ ಬಿರುದು ಸಾರ್ಥಕ ಮಾಡು. ವೆಂಕಟರಮಣಾ ಪಾಂಡವ ರಕ್ಷಣಾ. ಇರಲಿ ಸುಮ್ಮನೆ ನರಳುತ್ತ ಕುಳಿತರೆ ಏನು ಬರುವದು? "ಪ್ರಯತ್ನಕ್ಕೆ ಪರಮಾತ್ಮ". ನಮ್ಮ ಪರಿಚಾರಿಕೆಯಾದ ನಾರಿ ಲಿಂಗಮ್ಮಳಿಂದ ನೀರನ್ನು ತರಿಸಿ ದೇಹದ ಮೇಲೆ ಸುರವಿಕೊಂಡು ನೋಡುವಾ. ಉರುಪು ಸರಿದು ಆರಾಮವಾದೀತು.

ಎಲ್ಶೈ ! ದಾಸಿಯೇ ಇತ್ತ ಕಡೆ ಬರುವಂಥವಳಾಗು

ಲಿಂಗಮ್ಮ : ಸಾಧು ಸತ್ಪುರುಷರ ತತ್ವೋಪದೇಶವನ್ನು ಆದರಿಸದೆ, ವಾದದಲ್ಲಿ ಜಯ ಸಾಧಿಸದೆ, ಬಾಧೆಗೊಳಗಾದ ಮಧುವರಸರೆ ಈ ದಾಸಿ ಲಿಂಗಮ್ಮಳು ವಂದಿಸುತ್ತಾಳೆ.

ಮಧುವರಸ: ಹಂಗು ಹರಿದು ಅಂಗದ ಪರಿವೆ ಇಲ್ಲದಾಗ ವಂದನೆಯ ಮುಂದೆ ಮಾಡಿ ಬಂದು ನಿಂತರೆ ಆಶೀರ್ವದಿಸಲಿಕ್ಕೆ ಆನಂದವಾಗಿರುವದೆ? ಗುಡ್ಡಕ್ಕೆ ಬೆಂಕಿ ಹತ್ತಿ ಉರಿಯುತ್ತಿದ್ದಾಗ ಅಡ್ಡಾಗಿ ಬಂದು ದೀವಿಗೆ ಹಚ್ಚಿಕೊಳ್ಳುವೆ ಕಡ್ಡಿ ತರುವೆ ತಡಿಯಿರಿ ಎಂಬುವಳಂತೆ ಕಾಣುವಿ. ನನ್ನ ದೇಹಕ್ಕೆ ಅಗ್ನಿ ತಾಕಿದಂತಾಗಿ ತಳಮಳಗೊಳ್ಳುತ್ತಿದೆ. ಗಡನೆ ಬಿಂದಿಗೆ ತಕ್ಕೊಂಡು ಹೊಳೆಯೊಳಗಿನ ಜಲವನ್ನು ತಂದು ಎನ್ನ ಶರೀರದ ಮೇಲೆ ಹಾಕುವಂಥವಳಾಗು ಬೇಗನೆ ಸಾಗು.

ಲಿಂಗಮ್ಮ: ಹೊನ್ನಿನ ಹೊಗೆ ಹಾರುವ ಈ ನಾಡಿನಲ್ಲಿ ಬಂಗಾರ ಹೊಂಗಳಸಗಳಿಂದೊಡಗೂಡಿದ ಕಲ್ಯಾಣ ನಗರದ ಪ್ರಧಾನರಾದ ಮಧುವರಸರೆ ! ಈ ಚದುರೆ ಚಾರುಕೆಯಳು ಉದಕವನ್ನು ತಂದು ದೇಹದ ಉರಿ ಸಮಾಧಾನ ಪಡಿಸುವಳು. ಧೈರ್ಯ ತಾಳಿರಿ ದುಃಖ ಸಹಿಸಿರಿ.

ಮಧುವರಸ : ಅಹಾ ! ಸರ್ವಾಂತರಯಾಮಿಯಾದ ರುಕ್ಮಿಣಿ ಅರಸ ಶರೀರದಲ್ಲಿರ್ಪ ಉರುಪನ್ನು ಆರು ಸಹಿಸರು. ಈ ಪರಿಯಾಗುವದಕ್ಕಿಂತ ಮರಣವೇ ಲೇಸು. ಭಾಗ್ಯರಾಗುವದಕ್ಕೂ ಬಡವರಾಗುವದಕ್ಕೂ ಗುಣವೇ ಕಾರಣವಲ್ಲದೆ ಮತ್ತ್ಯಾವುದಿಲ್ಲ. ಪಾಮರ ಗುಣವಳಿದು ಪರಶಿವನು ಪ್ರೇಮಿಸುವ ಸ್ವಾಮಿ ಹರಳಯ್ಯನವರಿಗೆ ಕ್ರಮ ತಪ್ಪಿ ಮಾತಾಡಿದಕ್ಕಾಗಿ ಯಮಲೋಕ ಸಮೀಪಿಸುವ ಪ್ರಸಂಗ ಒದಗಿತು.

ಲಿಂಗಮ್ಮ : ಹೇ ಒಡೆಯರೆ ತಮ್ಮಡಿಗಳ ಸೇವೆ ಬಿಡದೆ ಮಾಡುವ ಈ ದಾಸಿಯಳು ಆವ ಭಾವದಿ ತಮ್ಮೊಡಲ ಶಾಂತಿಗಾಗಿ ಗಡಿಬಿಡಿಯಿಂದ ನೀರನ್ನು ಮಡಿಕೆಯಲ್ಲಿ ತುಂಬಿಟ್ಟಿರುವೆ ಚಡಪಡಿಸುವ ದೇಹದ ಮೇಲೆ ಚಿಮುಕಿಸಿಕೊಳ್ಳಿರಿ. ಆಹೇ ! ಕಡು ಜಾಣರೆ ಈಗ ಸ್ವಲ್ಪ ಕಡಿಮೆಯಾಗಿರುವದೇನು? ಬಡವರಿಗೆ ಭಾಗ್ಯವಂತರು ಶಿರಸ್ಕರಿಸಿದರೆ ಶ್ರೇಯಸ್ಕರ ಸಿಗಲಾರದು ಮಹರಾಯ ಮಾಡಬಾರದನ್ಯಾಯ.

ಮಧುವರಸ : ದಾಸಿ ಎನ್ನ ದೇಹದಲ್ಲಿ ದಾಹವಾಗಿ ಜೀವ ನಿರ್ಜೀವಕ್ಕೆ ಬಂದಿರುವದು. ಕ್ಲೇಶಪಡುತ್ತ ಈ ಬ್ರಾಹ್ಮಣನ ಪ್ರಾಣನಾಶವಾಗುವದು ಶಾಶ್ವತ. ಹಣೆಯ ಬರಹದಲ್ಲಿದ್ದಂತಾಗಲಿ. ಬೇಸರ ಮಾಡಿಕೊಳ್ಳದೆ ಜಲವನ್ನು ತರಲಿಕ್ಕೆ, ಹೋಗು, ಇಲ್ಲಿಂದ ಸಾಗು.

ಲಿಂಗಮ್ಮ : ಹೇ ! ತಾತ ಸಮ ಮಂತ್ರೇಶಾ, ಏತಕ್ಕೆ ಆತ್ಮಕ್ಕೆ ಆಘಾತ ಕೊಡುತ್ತಿರುವಿರಿ. ನೀತಿವಂತರೆ ಆತುರದಿ ಉದಕವನ್ನು ತರುತ್ತಲಿರುವೆ. ಸಂಕಷ್ಟ ಬಂದ ಹೊತ್ತು ದುಃಖಿಸುತ್ತಿರಬಾರದು. ಪ್ರಯತ್ನ ವೆಸಗಬೇಕು ಪೂಜ್ಯ ಮಧುವರಸರೇ.

ಪದ :

ನೀರಿಗೆ ಬರಲೇನ್ರೇ ನಾರಿಯರೆಲ್ಲ ॥ ಪಲ್ಲವಿ ॥

ಘೋರ ರಾತ್ರಿಯೊಳು ದಾರಿಯ ತೋರದು
ಕಾರ್ಯಗೈವದೆಂತು ದೂರಿರುವದು ಬಾವಿ ॥ ೧ ॥

ಜಲವ ತಂದು ತಂದು ಬಲು ಬೇಸರಾಯಿತು
ಕಾಳಕತ್ತಲೆ ಕವಿದು ಗೋಳಾಡುವದಾಯ್ತು ॥ ೨ ॥

ಸಮಗಾರ ಹರಳಯ್ಯ ಚರ್ಮತೊಳೆಯುವ
ಡೋಣಿಯೊಳಗೆ ತುಂಬುವೆ ಸ್ವಾಮಿ ಮಲ್ಲಿನಾಥ ॥ ೩ ॥

ಅಯ್ಯೊ ! ಹೇಸಿ ದಾಸಿಯ ಜನ್ಮದಲ್ಲಿ ಹುಟ್ಟಿದಾರಭ್ಯದಿಂದ ದೇಹ ನಷ್ಟ ಪರಿಯಂತರ ಕಷ್ಟ ತಪ್ಪಿದಲ್ಲ. ರಾತ್ರಿಯಾಗಿ ಮಾರ್ಗವೆ ತೋರದಾಗ ಕಾರ್ಯ ಗೈಯ್ಯುವದೆಂತು? ಅಯ್ಯೋ ಜಲವ ತಂದು ಬಲು ಬೇಸರವಾಗಿ ಕಾಲುಗಳಂತೂ ಮೇಲಕ್ಕೇಳಲೊಲ್ಲವು. ಕತ್ತಲೆಯು ಮುಸಗಿ ಭಯವು ಪ್ರಾಪ್ತವಾಗಹತ್ತಿತು. ಅಹ ಮತ್ತೇನು ಮಾಡಬೇಕು? ಇಲ್ಲಿ ಹತ್ತಿರದಲ್ಲಿರ್ಪ ಹರಳಯ್ಯನ ಕರಿಬಾನಿಯೊಳಗಿನ ನೀರನ್ನು

ಎತ್ತಿಕೊಂಡು ಹೋಗಿ ಉತ್ತಮವಿರುವವೆಂದು ಹೇಳಿದರಾಯಿತು. ಅವರಿಗೆ ಒಂದು ವೇಳೆ ಗೊತ್ತಾದರೆ ಮತ್ತೊಂದು ಸಲ ಭಾವಿಗೆ ಹೋಗಲಿಕ್ಕೆ ಬಂದೀತು.

ಮಧುವರಸ : ಕರುಣಾಮಯನಾದ ಲಕ್ಷ್ಮೀರಮಣಾ ಹರಿಯೇ ! ನಾರಾಯಣ ಧಗಧಗಯೆಂದು ದಗ್ಧಹಿಸುವ ಈ ಪ್ರಾಣಿಯು ದಂಡವು ಕ್ಷಣಕಾಲವಾದರೂ ತಣ್ಣಗಾಗಬಾರದೆ? ಈ ರೀತಿ ಕ್ಷೀಣವಾಗುವುದಕ್ಕಿಂತಲೂ ಪ್ರಾಣ ಬಿಡುವದೆ ಪಾಡು. ಕೃಪಾ ದೃಷ್ಟಿಯಿಂದ ನೋಡು.

ಲಿಂಗಮ್ಮ : ಮಂತ್ರಿವರ್ಯರೆ, ನಿಮ್ಮಂತರಂಗ ಶಾಂತಿಗಾಗಿ ಬಾವಿಯತನಕ ಪೋಗಿ ಚಿತ್ರದ ಸಂಚಿಯ ಮೇಲೆ ಮೃತ್ತಿಕೆಯ ಬಿಂದಿಗೆ ಹೊತ್ತು ತತ್ ತವಕದಿ ನೀರು ತಂದಿರುವೆ, ಸ್ನಾನ ಮಾಡಿಕೊಂಡು ನಿಶ್ಚಿಂತರಾಗಿರಿ, ಸಂತೋಷಪಡೆಯಿರಿ.

ಮಧುವರಸ: ಗುರುಸ್ವರೂಪಿ ಹರಳಯ್ಯನವರ ಮಾತು ಮೀರಿದ್ದಿಲ್ಲವಾದರೆ ಈ ಘೋರ ಸಂತಾಪದಿ ದೂರಿರುತ್ತಿದ್ದೆ. ಕಳಕೊಂಡು ಹಳಹಳಿ ಮಾಡಿ ಫಲವೇನು? ಅಯ್ಯೋ, ಅಯ್ಯೋ ಮಾರ್ಗಕ್ಕಾಧಾರವಾದ ದ್ವಾರಕಾಧೀಶ ಈ ಉದಕದಿಂದಾದರೂ ಶರೀರ ಸರಿಪಡಿಸು ಅನುಗ್ರಹಿಸು. (ನೀರು ಸುರುವಿಕೊಳ್ಳುವನು)

ಅಹ ! ಇದೇನು? ಲಿಂಗಮ್ಮ ಬಡದಾಸಿಯು ತಂದ ನೀರಿನಿಂದ ಒಡಲು ಉರಿಯುವದು ಕಡಿಮೆಯಾಯಿತು. ಅಹೋ? ಲಿಂಗಮ್ಮ ಮೂರಾರು ದಿನಗಳ ಪರಿಯಂತರ ತರುತ್ತಿರುವ ನೀರಿನಿಂದ ಅಮಂಗಲ ದೇಹ ಸುಮಂಗಲವಾಗಲಿಲ್ಲ. ಸಧ್ಯ ಮಧ್ಯರಾತ್ರಿ ಸಮಯದಿ ತಂದ ನೀರಿನಿಂದ ಶುದ್ಧನಾಗಿದ್ದು ಅಗಾಧವೆ ಸರಿ. ವಿನಯುವತಿ ಆವಸ್ಥಾನದೊಳಗಿಂದ ತಂದಿರುವಿ, ಅನುಮಾನಿಸದೆ ಹೇಳಿಬಿಡು. ನೀನು ದಾಸಿಯುಳಲ್ಲ. ಖಾಸ ನನ್ನ ತಾಯಿಯು ಸಮಾನ. ಹುಸಿಯನ್ನಾಡದೆ ಲೇಸಾಗಿ ಹೇಳು ಎನ್ನ ಪ್ರಾಣ ಉಳಿಸಿದವಳು.

ಲಿಂಗಮ್ಮ : ಜಾಣರಾದ ಪ್ರಧಾನರೇ ಈ ಕ್ಷಣ ಕತ್ತಲೆಯಿದ್ದ ಕಾರಣ ಬಾವಿಗೆ ಹೋಗುವ ಮಾರ್ಗ ಗೊತ್ತೂ ಹತ್ತಲಾರದ್ದಕ್ಕಾಗಿ ಸಮಗಾರ ಹರಳಯ್ಯನ ದೋಣಿಯೊಳಗೆ ಸುಣ್ಣವೆರಸಿದ ತಣ್ಣೀರನ್ನು ತಂದೆನು ಭೂಪಾ ಇದೊಂದು ಮಾತ ಮಾಡು ಮಾಫ.

ಮಧುವರಸ : ಹಾಯ ! ಹಾಯ ! ಯಾರಿವನು? ಗುರುಕರುಣವನ್ನು ಪಡೆದು ಐಶ್ವರ್ಯ ತೃಣ ಸಮಾನವೆಂದೆಣಿಸಿ ನಿರ್ವಾಣ ಸುಖವನ್ನು ಪಡೆಯುವ ಬಸವಣ್ಣನವರೆ ನೀವೆ ಧನ್ಯರೆಂಬುವದು ಮನಗಂಡೆನು. ಇನ್ನು ಗರ್ವವನ್ನು ಅಳಿದು ಶರಣರ ದಾಸನಾಗುವೆ ಹರಳಯ್ಯನಂ ಕಾಣುವೆ.

– ದೃಶ್ಯ –

ಮಧುವರಸ : ಶರಣಕ್ಕೆ – ಶರಣೆಂದರೆ ನರಲೋಕ ಪ್ರಾಪ್ತವಾಗುವದೆಂದು ಚರಣ ರಕ್ಷಿಗಳು ಪರೀಕ್ಷಾರ್ಥತೋರಿದ ಹರಳಯ್ಯನವರೆ ತಮಗೆ ಶರಣು ಬಂದ ಈ ಮಧುವರಸನನ್ನು ಕ್ಷಮಿಸಬೇಕು ದೇವಾ ಮಹಾನುಭಾವ.

ಹರಳಯ್ಯ : ನಾಡೊಡಿಯ ಮಲ್ಲಿಕಾರ್ಜುನನನ್ನು ಸದ್ಭಕ್ತಿಭಾವದಿಂದ ಕೂಡಿ ಅಡಿಗಳಂ ಪೂಜಿಸದೆ ಶರಣರ ಕೂಡ ಬಡಿದಾಡಿ ಕದನವ ಮಾಡುವ ಮಧುವರಸನ ಹೃದಯದೊಳು ಸದ್ಗುಣ ಉದಯಿಸಿದುದು ಅದ್ಭುತವೇ ಸರಿ. ಅಹೇ ! ಪ್ರಧಾನರೆ ಸದಾವಕಾಲದಿ ಪಾದರಕ್ಷೆಯಂ ಮಾಡುವ ಅಧಮ ಕುಲದವರಾದ ನಾವು ಭೂಸುರರೆಂಬ ಕೀರ್ತಿ ಪಡೆದ ನಿಮ್ಮಂಥ ದ್ವಿಜರಿಂದ ಪಾದ ಪಿಡಿಸಿಕೊಂಡು ಅದಾವ ಪಾಪದ ಕೂಪದೊಳು ಬೀಳಬೇಕು? ನಿಮ್ಮ ಶರಣಾರ್ಥಿ ಬಸವೇಶನಿಗೆ ಮುಟ್ಟಲಿ ಈಶನಿಗೆ ತಟ್ಟಲಿ.

ಮಧುವರಸ : ತನುಮನಗಳನ್ನು ಚಿನ್ಮಯನಿಗರ್ಪಿಸಿ ಭಸ್ಮಧೂಳಿತ ದೇಹದವರನ್ನು ಶಶಿಧರನೆಂದು ಭಾವಿಸಿ ಕೈಲಾಸದಲ್ಲಿರ್ಪ ಶಿವಾಸಭಾ ಸೇರುವ ನಿಮ್ಮಂಥವರೆ ಕುಲಜರು. ವೀರಶೈವರಿಗೆ ವೈರಿಯಾಗಿ ಹರಿಹರರು ಬೇರೆಯೆಂದು ಶರಣರ ವಿರುದ್ಧ ವರ್ತಿಸುವ ಎನ್ನಂಥವರು ಕುಲಜರೇ? ಮಹನೀಯ ಪಾದರಕ್ಷೆ ಮೆಟ್ಟಿದ ಕಾರಣ ವೇದನೆಯಾಗಿ ಕಡೆಗೆ ತಮ್ಮ ದೋಣಿಯೊಳಗಿನ ಜಲದಿಂ ಬಾಧೆಯಿಂದ ದೂರಾದೆನು. ಕಾರಣ ಎನ್ನ ಮಗಳನ್ನು ನಿಮ್ಮ ಮಗನಿಗೆ ಕೊಟ್ಟು ಶರೀರ ಸಂಬಂಧ ಮಾಡಬೇಕೆಂದು ಮನಾಕಾಂಕ್ಷೆ ಇರುವದು. ಶರಣ ನೀ ತೋರು ಕರುಣಾ.

ಹರಳಯ್ಯ: ಗಂಗಾಧರನ ಭಕ್ತರು ಲಿಂಗವಿಲ್ಲದ ಭವಿಗಳ ಸಂಗ ಮಾಡಿದರೆ ಅಮಂಗಲವಾಗುವದು. ಒಂದು ಸಮಯದಲ್ಲಿ ಕುಲಸಂಬಂಧ ಮಾಡಿದರೆ ಧರ್ಮ ಮೀರಿ ಕಾರ್ಯಗೈದರೆ ದುರುಳ ಬಿಜ್ಜಳನು ತನ್ನ ಅಧಿಕಾರದ ದೌರ್ಬಲ್ಯದಿಂದ ನಮ್ಮ ನಿಮ್ಮಯ್ಯಗಳಿಗೆ ಶಿಕ್ಷೆ

ಮಾಡಿಬಿಡುವನು. ತಿಳಿ ತಿಳಿದು ಹಗಲು ಕಂಡ ಬಾವಿಗೆ ಇರುಳು ಬೀಳಬಹುದೆ? ಈ ಕಾರ್ಯಕ್ಕೆ ಮನಗೊಡುವದೆ ಬೇಡ, ದೂರಿರುವದೆ ಪಾಡಾ.

ಮಧುವರಸ: ವಾದಿಗಳ ಸೋಲಿಸಿ ಪವಾಡಗಳ ಗೆದ್ದು ಮಹಿಮೆಯ ತೋರಿದ ಬಸವರಾಜನ ಸಮೂಹದಲ್ಲಿ ಸೇರಬೇಕೆಂಬುವ ಈ ಮಧುವರಸನಿಗೆ ರಾಜನಿಂದ ಬೇಕಾದ ವಿಪತ್ತು ಬರಲಿ. ಭೂಪತಿಯಿತ್ತ ಶಿಕ್ಷಗೆ ಪಾತ್ರನಾಗುವದಕ್ಕೆ ಈ ವಿಪ್ರನು ಹಿಂಜರಿಯುವವನಲ್ಲ. ಆದದ್ದಾಗಲಿ ಬಂದದ್ದು ಬರಲಿ. ಇಷ್ಟಲಿಂಗವಂ ಧರಿಸಿ ತಮ್ಮ ಸಂಗದೊಳು ಕೂಡಿಸಿಕೊಂಡು ತನು ಸಂಬಂಧ ಮಾಡಿಕೊಂಡರೆ ಸಾಕು, ಹೆಚ್ಚಿಂದಾರಿಗೆ ಬೇಕು.

ಹರಳಯ್ಯ : ಶರಣ ರಕ್ಷಕನಾದ ಹರ ಮಹದೇವನಲ್ಲಿ ಪ್ರೀತಿಯನ್ನಿಡಲು ಆತುರನಾಗಿ ಭೂಮಿ ಆಕಾಶದಷ್ಟು ಜಾತಿಯಲ್ಲಿ ಅಂತರವಿರಲು ನೆಂಟಸ್ತನ ಮಾಡಲು ಹಾತೊರೆಯುತ್ತಿದ್ದ ಮಧುವರಸರೆ, ತಮ್ಮ ಮನದಭಿಪ್ರಾಯದಂತೆ ಪುತ್ರ ಪುತ್ರಿಯರ ಲಗ್ನದ ಛತ್ರವಂ ರಚಿಸಿ ವಿವಾಹ ಕಾರ್ಯವಂ ನೆರವೇರಿಸೋಣ ನಡೆಯಿರಿ. ಮನಸ್ಸಿನ ಸಂಶಯಂ ಬಿಡಿರಿ. (ಹೋಗುವರು).

– ದೃಶ್ಯ –

ಮಂಚಣ್ಣ : ಪರಮ ಗುಣನಿಧಿ ದೊರೆಗಳ ಶಿರೋಮಣಿ ಪರಮಾಶ್ಚರ್ಯ. ಇನ್ನೇನು ಹೇಳಲಿ? ಕಲ್ಯಾಣದ ಅನುಭವ ಮಂಟಪದಲ್ಲಿ ಕಂಟಕವು ತೊಡಗಿರುವದು ಮಾಡುವದೇನಿದೆ? ಮಂತ್ರಿ ಮಧುವರಸನು ತನ್ನ ಮಗಳನ್ನು ಸಮಗಾರ ಹರಳಯ್ಯನ ಮಗನಿಗೆ ಕೊಟ್ಟು ಲಗ್ನ ಮಾಡಿರುವನು. ನಮ್ಮ ಪಟ್ಟಣದಲ್ಲಿ ದುಷ್ಟಕಾರ್ಯಗಳು ಅನೇಕ ಜರುಗುತ್ತಿರುವವು ರಾಜಾ, ಸಾಂದ್ರ ಗುಣತೇಜಾ.

ಬಿಜ್ಜಳ : ಅಹ ! ಇದೇನು? ಶಾಖಾಹಾರಿಗಳಾದ ಹಾರುವರು. ಮಾಂಸಾಹಾರಿಗಳಾದ ಸಮಗಾರರು ಕೂಡಿ ಅಧರ್ಮ ಕಾರ್ಯ ಕೈಕೊಳ್ಳಲಿಕ್ಕೆ ಈ ಕಲಿರಾಜನ ಭಯವಿದ್ದಂತೆ ತೋರುವದಿಲ್ಲಾ.

ಭಲ ಎಲ್ಹೈ ! ಸಾರಥಿ, ಮಂದಮತಿಯಾದ ಮಧುವರಸನನ್ನು ಮದ್ದಾನೆಯ ಕಾಲ್ಗಳಿಗೆ ಕಟ್ಟಿ ಧರಧರನೆ ಎಳಸುತ್ತ ಎನ್ನೆದುರಿನಲ್ಲಿ ತರುವಂಥವನಾಗು. ಭಲ ಎಲ್ಹೈ ! ಅಧಮಾ ಮಗಳನ್ನು ಮಾದಿಗರಿಗೆ

ಕೊಡಲಿಕ್ಕೆ ನಿನ್ನ ಸುದತಿಯು ಹಾದರಕ್ಕೆ ಹಡೆದಿರುವಳೆ ಹೇಗೆ? ತಿಳಿಗೇಡಿಯೆ ನಿನ್ನ ಅಳಿಗಾಲವು ಸಮೀಪಿಸಿತೆಂದು ತಿಳಿ. ಎನ್ನ ಬಲವಾದ ಶೌರ್ಯದಿಂದ ನಿನ್ನ ಕೊಲೆಯನ್ನು ಮಾಡುವೆ. ಶಹಬ್ಬಾಶ ! ಇಲಿಯೊಡನೆ ಹುಲಿಯು ಮೀಸಿ ತಿದ್ದಿ ಫಲವೇನು? ನಿನ್ನನ್ನು ನಿಲ್ಲದೆ ಗಲ್ಲಿಗೆ ಹಾಕುವೆನು ಮೂಢಾ, ಒದಗಿ ಬಂದಿತು ಕೇಡ.

ಮಧುವರಸ : ಹರಗುರು ಸೇವಕ ಜನರಿಂದ ಸಿರಿ ಸಂಪತ್ತು ತುಂಬಿ ಮೆರೆವ ಕಲ್ಯಾಣಕ್ಕೆ ನಾನೇ ದೊರೆಯೆಂಬ ಗರ್ವದಿಂದ ಅರವು ತಪ್ಪಿ ಒದರಿದರೆ ಹೆದರುವರೆಂದು ತರ್ಕಿಸಿಕೊಂಡಿ. ಲಿಂಗಾಯತ ಸಮಾಜದ ಅಂಗವನ್ನು ಲಿಂಗವಿಲ್ಲದ ಭವಿಯೆ ನೀನೇನು ಬಲ್ಲಿ. ಹರಮತದಲ್ಲಿ ಮನಸ್ಸು ಅರಿಯದ ಎನ್ನನ್ನು ಜರಿದಿದ್ದಾರೆ. ಗೌರಿ ರಮಣನು ತನ್ನ ಉರಿಗಣ್ಣಿನಿಂದ ನಿನ್ನ ಪರಿವಾರ ಸಹಿತ ಸುಟ್ಟು ಸೂರಿ ಮಾಡುವದಲ್ಲದೆ ನಿನ್ನ ಗುದ್ದಿ ಗುದ್ದಿ ಮುದ್ದಿ ಮಾಡಿ ಶರೀರದೊಳಗಿರ್ದ ಕರುಳುಗಳನ್ನು ಹೊರತೆಗೆದು, ನರಕಕ್ಕಿಳಿಸಿ ಕಾಗೆಗೂಗೆಗಳ ಪಾಲು ಮಾಡ್ಯಾನು? ನೋಡು ಎಚ್ಚರದಿ ಮಾತಾಡು.

ಬಿಜ್ಜಳ : ಭಲಾ ಭಲಾ ಭಂಡಾ ನೀನಾವ ದೊಡ್ಡ ಗಂಡಸು. ಹೆಂಡರು ಮಕ್ಕಳು ಮೊದಲ್ಗೊಂಡು ಕಂಡದ್ದನ್ನು ಎನ್ನಲ್ಲುಂಡು ಹಿಂದು ಹಾರುವರೊಡನೆ ಸುಖದಿಂದಿರುವದನ್ನು ಬಿಟ್ಟು ದಂಡವಂ ಖಂಡಿಸಿಕೊಳ್ಳುವದಕ್ಕೆ ಸಿದ್ಧನಾದಿಯಾ? ಮಾದಿಗರ ಮನೆಯನ್ನು ಹೊಕ್ಕು ಪಾದುಕೆಗಳನ್ನು ಮಾರಬೇಕೆಂಬುವದು ಹೃದಯದಿ ಹೊರ ಹೊಮ್ಮುತ್ತದೆಂಬಂತೆ ತೋರುತ್ತದೆ. ಬಲು ಹಮ್ಮಿನಿಂದ ಖಲತ್ ಖಲಲ್ಲೆಂದು ಬೊಗಳಿದರೆ ನಾಲಿಗೆಯಂ ಸೀಳಿಬಿಟ್ಟೇನು. ಎಲೈ ! ಕೋತಿಯೆ ಹಲವು. ಮಾತುಗಳಿಂದೇನು ಪ್ರಯೋಜನ? ನೀನು ಮಾಡಿದ ಕಾರ್ಯ ಸ್ಮರಣಕ್ಕೆ ಕಾಲು ಹಿಡಿದು ತಲೆಯವರೆಗೂ ಉರಿಯುತ್ತಿರುವದು.

ಎಲೈ ! ಸಾರಥಿ ಈ ಕುಲಾಧಮನ ಕಣ್ಣುಗಳಂ ಕೀಳಿಸಲಿಕ್ಕೆ ರಾಜಾಜ್ಞೆಯಾಗಿದೆಯೆಂದು ಚಾಂಡಾಲರಿಗೆ ತಿಳಿಸು ಬೇಗನೆ ಕರಿಸು.

[ಕಣ್ಣು ಕೀಳಿಸುವರು].

ಮಧುವರಸ : ಅಹ ! ಶಿವಾ ಶಿವಾ ದೈವವೆ ನಾನು ಊರ್ವಿಪಾಲ ಸಾರ್ವಭೌಮನ ಪ್ರಧಾನಿಯಾಗಿ ಸರ್ವ ಸುಖವನ್ನನುಭವಿಸಿ ಈ ವೇಳೆಯಲ್ಲಿ ನಯನಗಳ ಕೀಳಿಸಿಕೊಂಡು ಬಳಲಾಡುವದಾಯ್ತು. ಹಾಳು ದೇಗುಲದಂತೆ ಎನ್ನ ಬಾಳ್ವೆಯೇ ಸರಿ. ಅಯ್ಯೋ ! ಸಂಕಟ ಹೇಗೆ ಸಹಿಸಲಿ.

(ಕಲ್ಯಾಣಮ್ಮ ಬರುವಳು)

ಕಲ್ಯಾಣಮ್ಮ: ಅಪ ! ಇದೇನು, ಇಳೆಯೊಳು ಶರಣರ ಗೋಳಾಟವು. ಈ ಕೀಳುತನ ಒದಗಲಿಕ್ಕೆ ಆವ ಕಾರಣ? ಇಂಥ ಕಷ್ಟಕ್ಕೆ ಈಡುಮಾಡಿದ ಪಾಪಿಗಳು ದಾರು? ನೇತ್ರಗಳಿಂದ ರಕ್ತವು ಸುರಿಯುತ್ತಿರುವದು. ಬಲ್ಲಿದ ಮಧುವಣ್ಣ , ಈ ಪರಿ ಮಾಡಲಿಕ್ಕೆ ಆ ಖುಲ್ಲರಿಗೆ ನೀನು ಮಾಡಿದ ಕ್ಷುಲ್ಲಕ ಕಾರ್ಯವಾವದು? ಎನ್ನ ಪುತ್ರನಿಗೆ ನಿನ್ನ ಪುತ್ರಿಯಳಂ ಇತ್ತ ಮೂಲಕ ಈ ಗತಿಯಾಯಿತೊ? ಆರಿಂದ ಈ ದುಃಖ ಪರಿಭವಿಸಿತು ಹೇಳು? ಸಮಾಧಾನ ತಾಳು.

ಮಧುವರಸ: ಕಲ್ಯಾಣಮ್ಮ ಮಾತೆ, ಹರಳಯ್ಯನವರ ಸಹಧರ್ಮಿಣಿ ಇನ್ನೇನು ಗತಿ? ನಿನ್ನ ನಾಥನ ನೀತಿಗೆ ಸೋತು ಬೀಗುತನ ಮಾಡಿದ ವಾರ್ತೆಯಂ, ದುರ್ಗುಣ ದುರ್ಮತಿ ಕಲ್ಯಾಣಪತಿ ಬಿಜ್ಜಳ ಕೇಳಿ ಸೆಣಸ್ಯಾಡಿ ಕಣ್ಣುಗಳ ಕೀಳಿಸಿರುವನು. ತಂಗಿ ಸಂದಿರ್ದ ಸಂಕಟ ಎಂದಿಗೂ ಹೊಂದಬಾರದಂತಾಗಿರುವದು. ಬಂದುದಕ್ಕೆ ಅಂಜಿದರೆ ಆಗತಕ್ಕದ್ದೇನು. ಶರಣಿ–ಮಹಾಕರುಣಿ.

[ಮಧುವರಸ ಹೋಗುವನು, ಬಿಜ್ಜಳ ಬರುವನು]

ಕಲ್ಯಾಣಮ್ಮ : **ಪದ**

ದುಷ್ಟಾತ್ಮ ದುರುಳ ಕುಟಿಲ ಕಪಟ ಕ್ರೂರ ॥ ಪಲ್ಲವಿ ॥

ಭ್ರಷ್ಟ ಬಿಜ್ಜಳ ನಿನಗಿಷ್ಟು ಭ್ರಮೆಯೇಕೆ
ದಿಟ್ಟ ಮಧುವರಸನ ಕಷ್ಟಪಡಿಸಿದ್ಯಾ ॥ ೧ ॥

ಕುಲವಿನಾಶ ನಿನಗೊಲಿದು ಬಂದಿತು
ಕಲಿಯುಗ ಶರಣರ ಬಲು ಘಾಶಿಪಡಿಸಿದ್ಯಾ ॥ ೨ ॥

ಪರರ ಪೀಡನಿಗೆ ನರಕ ತಪ್ಪದು ದುರುಳ ಪಾಪಿ ನೀಚಾ
ಪುರದೇವನಗರದ ಗುರು ಮಲ್ಲಿಕಾರ್ಜುನ ॥ ೩ ॥

ಎಲಾ ! ಪಾಪಿಷ್ಟ ಬಿಜ್ಜಳ, ಮಧುವಣ್ಣನ ಕಣ್ಣುಗಳ ಕೀಳಿಸಲಿಕ್ಕೆ ಅಧಮಾ ನಿನಗಾತ ಮಾಡಿದ ಹದಗೆಟ್ಟ ಕಾರ್ಯವದಾವದು? ಛಲಗೇಡಿಯೆ! ನಿನ್ನ ಕುಲವಿನಾಶ ಕಾಲವು ಒದಗಿ ಬಂತೆಂದು ತಿಳಿ. ದುರುಳಾ ಪರರ ಪೀಡಾತ್ಮರಿಗೆ ನರಕ ತಪ್ಪದು. ಅಜ್ಞಾನಿಯೆ ಪ್ರಜೆಗಳೆಂದರೆ ತನ್ನ

ತನುವಿನಿಂದ ಜನಸಿದ ತನುಜರಿಗಿಂತ ಅಧಿಕರೆಂದು ಮನ್ನಿಸಬೇಕು. ಇದಂ ಬಿಟ್ಟು ಬಲ್ಲಿದವನು ಹುಲ್ಲಿನ ಬಣವಿಗೆ ಅಗ್ನಿ ಸಲ್ಲಿಸುವಂತೆ ಕ್ಷುಲ್ಲಕ ಕಾರ್ಯ ಮಾಡಿದರೆ ಕ್ಲೇಶ ದೋಷಗಳ ನಾಶಕನಾದ ಜಗದೀಶ್ವರನು ನಿನ್ನ ಹಲ್ಲುಗಳನ್ನು ಮುರಿದು ಕಾಲನ ಲೋಕಕ್ಕೆ ಕಳಿಸ್ಯಾನು ಪ್ರಾಣಿ ದುರ್ಗುಣ ಶ್ರೇಣಿ.

ಬಿಜ್ಜಳ : ಅಲಲಲ ಅಗ್ಗದವಳೆ, ವೆಗ್ಗಳ ಕುಲದ ಮಧುವರಸನ ಬೀಗಸ್ತನ ಮಾಡಿರುವೆನೆಂಬ, ಬಲು ಹಿಗ್ಗಿನಿಂದ ಕಿಗ್ಗಳ ನುಡಿಗಳಾಡುವ ನಿನ್ನಂ ಜೊಗ್ಗಿ ಹೊಡಿದರೆ ಮಗ್ಗಲ ಎಲುಬುಗಳು ನುಗ್ಗಾದಾವು. ಅಗಾಧ ಶಬ್ದವನ್ನಾಡಿ ಈ ದಿಗ್ವಿಜನ ಮಸ್ತಕವೆಬ್ಬಿಸಬೇಡ ಕಂಡಿಯಾ. ತುತ್ತು ಅನ್ನವಾದರೂ ಸಿಕ್ಕಿತೋ ಸಿಗದೋ? ಎಂದು ಬಿಕ್ಕೆ ಬೇಡಿ ಹೊಟ್ಟೆ ಹೊರಕೊಳ್ಳುವ ದಿಕ್ಕುಗೇಡಿ ಶರಣರ್ಗೆ ಆಶ್ರಯವಿಕ್ಕಿದ್ದು, ಈ ಚಕ್ರವರ್ತಿಯದೆ ತಪ್ಪಾಗಿರುವದು. ಕತ್ತೆಯಂತೆ ಎತ್ತರ ಒದಗಿದರೆ ಅಸ್ಥಿರ ಶರೀರಕ್ಕೆ ಶಿಸ್ತಾದ ನಿನ್ನ ಮಸ್ತಕವನ್ನು ಕತ್ತರಿಸಿ ಭೂತ–ಪ್ರೇತಾದಿಗಳ ಸಮೂಹಕ್ಕೆ ಚಲ್ಲಿಸುವೆನು ಮುಂಡೆ ಜಗದ್ಬಂಡೆ.

ಕಲ್ಯಾಣಮ್ಮ : ಛೀ ! ಮಂದಮತಿ ಅಂದಹೀನಾ, ನಂದಿ ರೂಢನ ಆನಂದ ಭಕ್ತರಿಗೆ ಕುಂದು ಕೊರತೆಯನ್ನು ತಂದಿದ್ದಾದರೆ ನಿನ್ನ ಚಂದ ಐಶ್ವರ್ಯವು ಒಂದೆ ನಿಮಿಷದಲ್ಲಿ ಬೆಂದು ಹೋದೀತು. ನಾಲಿಗೆಯಂ ಸ್ವಾಧೀನದಲ್ಲಿಟ್ಟುಕೊ, ನಾಯಿಯಂತೆ ಒದರಬೇಡ. ಗಂಡನಿದ್ದು ದಂಡೆ ಅರ್ಪಿತವಾಗುವ ಅಖಂಡ ನಾರಿಯರಿಗೆ ರಂಡೆ ಮುಂಡೆಯೆಂದು ಕಂಡಂತೆ ಮಾತಾಡಿದರೆ ನಿನ್ನ ರುಂಡವು ಮುಂಡವ ಬಿಟ್ಟು ಆಕಾಶ ಮಂಡಲಕ್ಹಾರಿ ಯಮಕುಂಡ ಕಂಡೀತು. ಜಗದ್ಭಕ್ತ ಮಿಗೆ ಶರಣರಿಗೆ ಹಗೆಯಾದವನಿಗೆ ಹರರಾಣಿ ತಪ್ಪದು. ಖೋಡಿ ದೈವಗೇಡಿ.

ಬಿಜ್ಜಳ : ಕೋಣ ಕುರಿಗಳ ಪ್ರಾಣ ಹಿಂಸೆ ಮಾಡಿ. ಅವುಗಳ ಚರ್ಮದ ಪಾದ ರಕ್ಷೆಯಂ ಮಾರಿ ಉದರ ಹೊರಕೊಳ್ಳುವ ಸಮನಾದ ನಾರಿಯೆ. ಭಸ್ಮಾಸುರನಿಗೆ ಹೆದರಿ ಸರೋವರದಲ್ಲಿ ಮರೆಯಾದ ಹರನನ್ನು ಎಷ್ಟು ಪರಿ ಹೊಗಳುತ್ತಿ ಗಯ್ಯಾಳಿಯೆ, ನಿನ್ನ ಹೊಯ್ಮಾಲಿತನವನ್ನು ಬಿಟ್ಟು ಬಿಡು. ಕಾಮಿನಿಯೆಂದು ಕೈಕಾಯಿದರೆ ಹಮ್ಮಿನ ಮಾತುಗಳಿಂದ ದಮ್ಮಾಗಿ ಬಾಯಿ ಬಿಟ್ಟಿರುವಿ. ಕಳ್ಳ ಮುಂಡಿಯೆ ನಿನ್ನ ದಿಮ್ಮು ಇಳಿಸಿಬಿಟ್ಟೇನು. ಮೃತ್ಯಲೋಕದಲ್ಲಿರ್ಪ ರಾಜರುಗಳನ್ನು ಕೀಟಗಳಂತೆ ವರಿಸಿ, ರಸಾತಲಕ್ಕೆ ಮೆಟ್ಟಿದ ಈ ಭೂಪತಿಗೆ ಎತ್ತರೆ ನೀತಿಗೆಟ್ಟು ಮಾತಾಡಿದರೆ ನಿನ್ನ

ಮುತ್ತೈದಿತನವನ್ನು ತತ್ತರಗೆಡುಹಿಸಿ ಮಾತು ಮಾತಿಗೆ ನನ್ನ ಪತಿಯು ಸತ್ತನೆಂದು ಅಳುತ್ತ ಭೂತಲದಲ್ಲಿ ತಿರುಗಿಸುವೆ. ಜಾರಿಣಿ ಮಹಾಕ್ರೂರಿಣಿ.

ಕಲ್ಯಾಣಮ್ಮ : **ಪದ**

ಪಾಪಿಯೆ ಖಲ ಕೋಪಿಯೆ ಕುರೂಪಿಯೆ ಭೂಪ ॥ ಪಲ್ಲ ॥
ಲೋಕದೊಳು ಕಾಕುಮನುಜ ಮೂರ್ಖ ಅವಿವೇಕಿ

ಫಕ್ಕನೆ ಶಿವಭಕ್ತರು ಮಣ್ಣು ಮುಕ್ಕಿಸುವರು ಸೊಕ್ಕಿದರ್ಗೆ ॥ ೧ ॥

ಧೂರ್ತನೆ ಅಪಘಾತನೆ ನಿಂದೇತರವರ್ಗ
ತತ್ಪರದಿ ಮೃತ್ಯುಂಜಯ ನಿನ್ನೆತ್ತ ಬಿಡದೆ ಕತ್ತು ಮುರಿವ ॥ ೨ ॥

ಕರ್ಮಿ ಛೀ ಶರ್ಮಿಯೆ ಬಲು ದುರ್ಮದ ಬೇಡ
ನಿರ್ಮಳಾರ್ಯ ಧರ್ಮ ಹಿತ ಚರ್ಮಧಾರಿ ಮಲ್ಲಿನಾಥ ॥ ೩ ॥

ಹೇ ! ಕಡು ಮೂರ್ಖಾ ಮಹಾ ಅವಿವೇಕಿ, ಮೃಡ ಕೂಡಲಸಂಗಮನ ದೃಢ ಭಕ್ತಿ, ಪತಿವ್ರತಾಂಗನಿಯರ ಮಾಂಗಲ್ಯವನ್ನು ಭಂಗಪಡಿಸುವದು, ಅಂಗದೊಳು ಲಿಂಗ ತೋರಿದ ಜಂಗಮಲಿಂಗ ಸಂಗನ ಬಸವನಿಂದಾಗದಾಗ ಕೊಂಗನೆ ನಿನ್ನಂಥ ದುರ್ಮಾಂಗನಿಂದೇನಾಗುವದು ಕ್ರೂರಾ. ನಿರಪರಾಧಿಯಾದ ಮಧುವಯ್ಯನ ಕಣ್ಣುಗಳನ್ನು ದುರಾಲೋಚನೆಯಿಂದ ಕೀಳಿಸಿದ್ದು ಅಪಾರ ದುರಿತಕರವಲ್ಲವೆ? ಭಿಕ್ಷುಕರೆಂದು ನಿರ್ಲಕ್ಷದಿಂ ಅಲ್ಲದೆ ಶಿಕ್ಷೆ ವಿಧಿಸಿದ ರಾಕ್ಷಸಾ ಸಾಕ್ಷಾತ್ ವಿರೂಪಾಕ್ಷನ ಸೇವಕರು ನಿನ್ನ ಕುಕ್ಷಿಯಂ ಬಗೆದ ಖಗಮೃಗಗಳಪೇಕ್ಷ ತೀರಿಸುವರು. ಧೂರ್ತ ಮಾಡಿದಿ ಅನರ್ಥ.

ಬಿಜ್ಜಳ : ಛೀ ! ಭ್ರಷ್ಟಳೆ, ಧರ್ಮಶಾಸ್ತ್ರದ ಎಳ್ಳಷ್ಟು ಭಯವಿಲ್ಲವೆ ಶಿಷ್ಟ ಕುಲಗಳ ತಾರತಮ್ಯವಂ ಮೀರುವ ಅನಿಷ್ಟಕಾರ್ಯಕ್ಕಿಂತಲೂ ಹೆಚ್ಚಿನ ಅಪರಾಧ ಮತ್ತಾವುದಿರುವದು? ಧರ್ಮ ಭ್ರಷ್ಟರಾಗುವ ಅಂಥವರಿಗೆ ಶಾಸನದ ಭಯದಿಂದ ಸನ್ಮಾರ್ಗ ತೋರುವ ಈ ಬಿಜ್ಜಳನು ದುರ್ಜನನೋ ಅಥವಾ ಮಿಶ್ರಜಾತಿ ವಿವಾಹ ತತ್ಪರರಾದ ನೀವು ದುರ್ಜನರೋ? ತುಡುಗುಣಿಯೆ, ನಿನ್ನ ಮುಡಿ ಹಿಡಿದು ಬೀಸಾಡಿದರೆ ಆಕಾಶದಲ್ಲಿ ಮೋಡದಂತೆ ಚಲಿಸಾಡಿ ಕಡೆಗೆ ಕಡಲಲ್ಲಿ ದುಡುಕಿ ಮಡಿದು ಕಡು ಪಾಪಿಗಳೊಡೆಯನಾದ ಅಂತಕನ ಪುರದೆಡೆಯಲ್ಲಿ ಬಿದ್ದು ಕಡು ದುಃಖ ಪಡಬೇಕಾದೀತು. ಹೀನ ಜಾತಿಯಳೆ, ಎನ್ನೆದುರಿನಲ್ಲಿ ಇನ್ನೊಂದು

ಅಕ್ಷರವನ್ನು ಉಚ್ಚರಿಸಿದ್ದಾದರೆ ನಿನ್ನ ಬೆನ್ನೆಲಬುಗಳು ತನ್ನ ಸ್ಥಾನವನ್ನು ಏನು ಬಿಟ್ಟಾವು ದೂತೆ ಮಹನೀತೆ.

ಕಲ್ಯಾಣಮ್ಮ : ಛೀ ! ದುರ್ಧರಾ ನಿನ್ನ ಧರ್ಮಶಾಸ್ತ್ರವನ್ನು ಮದನಗೊಳಿಸು ದುರ್ಜನ. ಪರರಿಗೆ ಅಪಕಾರ ಮಾಡಿದ ಪಾಪಾತ್ಮಾ, ಕೃತಾಂತಕನು ನಿನ್ನನ್ನು ತಪ್ತಕಾಯ್ದು ಉಕ್ಕಿನ ತಂತಿಯಿಂದ ಪಿಚ್ಚಂಡಿಯಂ ಬಿಗಿದು ಕಾಸಿದ ಕಬ್ಬಿಣ ಗುಂಡನ್ನು ಕೈಯಲ್ಲಿ ಕೊಟ್ಟು ಕಣ್ಣೊಳು ಕಾಡ್ಗಿಚ್ಚನ್ನು ಬರಕದೆ ಬಿಡನು. ತರ್ಕ ತಪ್ಪದು ನಿನಗೆ ರವರವ ನರಕ.

ಬಿಜ್ಜಳ : ಎಲ್ಯೆ ! ಕೀಳುಕುಲದ ಹೆಣ್ಣೆ, ನೀನೇಷ್ಟು ಜ್ಞಾನೋಪದೇಶ ಮಾಡಿದರೂ ಕುನ್ನಿ ಶರಣರ್ಗೆ ಹಾನಿಗೆಡಿಸದೆ ಬಿಡುವದಿಲ್ಲ. ಓನ ಮನುಜಳೆ ಇನ್ನೊಂದಾವರ್ತಿ ನಿನ್ನ ನಾಲಿಗೆಯಂ ಹೊರಗೆಡುವುದಾದರೆ ಕೆನ್ನೆಯ ಮೇಲ್ಹೊಡೆದು ಭಿನ್ನಗೊಳಿಸುವೆ. ಸೂಳೆ ಮಹಾ ಗಯ್ಯಾಳೆ.

ಅಲಲಲಲ ಎಲ್ಯೆ ! ಸಾರಥಿ, ಈ ಕುಂಭಿನಿ ಪತಿಯ ಮುಂಭಾಗದೊಳು ಜಂಜಾಟ ನಡೆಸಿದ ಈ ಮಂಗರಂಡೆಯ ಗಂಡನಾದ ಹರಳಯ್ಯನ ಕುತ್ತಿಗೆ ಚಂಡಿಗೆ ಕೈಯಿಟ್ಟು ದಬ್ಬುತ್ತ ಕಣ್ಣುಲೊಟ್ಟೆಯಂ ಕೀಳಿಸಲಿಕ್ಕೆ ಚಾಂಡಾಲರಿಗೆ ಆಜ್ಞೆ ವಿಧಿಸು. ಈಗಿಂದೀಗ ತಿಳಿಸು.

(ಬಿಜ್ಜಳ ಹೋಗುವನು ಕಲ್ಯಾಣಮ್ಮನ ಪ್ರವೇಶ)

ಕಲ್ಯಾಣಮ್ಮ

ಪದ

ಎಂಥ ವಿಪತ್ತುವಿದು ಕುಂತಂಥ ದೈವರಾ
ಚಿಂತೆಯೊಳು ಮುಳುಗಿದೆ ಬಂತು ಘೋರಾ ॥ ಪಲ್ಲವಿ ॥

ಬಂದಿತು ಅವಸರ ಸುಂದರ ಎನ್ನಯ್ಯಗೆ
ಅಂಧಕನಾಗಬೇಕೆ ಇಂದು ಬಂಧನ ಪಡಬೇಕೆ ॥ ೧ ॥

ಒಂದು ಮಾಡಿರಿ ದೈವ ಉಪಾಯವ ಪೇಳಿರಿ
ಕೈಮುಗಿದು ಬೇಡುವೆ ತಾಯ್ಗಳಿರಾ ನೀವು ॥ ೨ ॥

ಜಗದೊಳಗಿನ್ನು ನಗೆಗೇಡುವದಾಯ್ತು
ಹಗರಾಣ ಬಿಡಿಸಯ್ಯ ನಿಗಮ ಶ್ರೀಮಲ್ಲಿಕಾರ್ಜುನ ॥ ೩ ॥

ಅಯ್ಯೋ ! ಪ್ರಸಂಗವು ಬಿಕ್ಕಟ ಬಂದೊದಗಿತು. ಅಕ್ಕರದ ಕಾಂತನ

ಕಣ್ಣುಗಳನ್ನು ರಕ್ಕಸನಂತಿರ್ಪ ಬಿಜ್ಜಳನು ಕಿತ್ತಿಸದೆ ಬಿಡನು. ದಿಕ್ಕು ಆರಿಗೆ ಹೇಳಲಿ? ಹಿಂದಿನ ಜನ್ಮದೊಳು ನಾನಾವ ಜಾಣೆಯಳ ಪತಿಯ ಪ್ರಾಣಹರಣ ಮಾಡಿರಬಹುದು. ಅಯ್ಯೋ ! ಹರಹರ ಕೆಟ್ಟೆನು. ಹೆಣ್ಣಾಗಿ ಹುಟ್ಟಬಾರದಾಗಿತ್ತು. ಈ ಸಭಾ ಸನ್ನಿಧಿಯಲಿರ್ಪ ಪುಣ್ಯವಂತ ಎನ್ನವ್ವಗಳಿರಾ. ಇನ್ನು ಮುಂದೆ ಸ್ವಾಮಿ ಹರಳಯ್ಯನಿಗಾಗುವ ಗೋಳನ್ನು ಕಣ್ಣಿಲೆ ನೋಡಿ ಸುಮ್ಮನೆ ಕೊಡ್ರುವಿರಾ.

ಶಿವಶಿವಾ ಭೂಮಿಯಲ್ಲಿರ್ಪ ನಿನ್ನ ಪ್ರೇಮದ ಭಕ್ತರಿಗಾಗುವ ಸಂಕಟ ಸಮಯವನ್ನು ಹೊಡೆದೋಡಿಸುವದು ಸ್ವಾಮಿಯೆ ನಿನ್ನಿಂದಾಗದೆ. ಸತ್ಯವಂತರಿಗೆ ಆಪತ್ತು ತಪ್ಪಿದಲ್ಲವೆಂಬ ಸ್ಮೃತಿಯ ನೀತಿಯು ಅಸತ್ಯವಲ್ಲ. ಅಹ ಮಾಡುವದಿನ್ನೇನು ಹೇಳುವದು ಆರಿಗೆ? ಪತಿಯನ್ನು ಕರೆದುಕೊಂಡು ಹೋದರೆ ಶರಣರು ಮೃತ್ಯುಗಂಜಿ ಪಲಾಯನ ಮಾಡಿದರೆಂದು ಅಪಕೀರ್ತಿ ಬರುವದು. ಒಳ್ಳೇದು ಹಳಹಳಿಸುತ್ತ ಕುಳಿತರೆ ಒಳಿತಾಗದು. ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿಯಬೇಕೆಂಬ ನೀತಿಗೆ ಸರಿಯಾ? ಆ ಭೂತಾತ್ಮನ ಸತಿಯಳಾದ ಮಹಾರಾಣಿ ಮಂಡಿತಾಮತಿಯ ಹತ್ತಿರಕ್ಕೆ ಹೋಗಿ ಈ ಕೃತಿಯನ್ನು ನಿಲ್ಲಿಸಲಿಕ್ಕೆ ತಾಕೀತು ಮಾಡೆಂದು ಮೊರೆ ಇಡಬೇಕು. ಕೇಳದಿದ್ದಲ್ಲಿ ಭಾಳಾಕ್ಷನ ಮನದೊಳು ಇದ್ದಂತೆ ಆಗಲಿ.

(ಮಹಾರಾಣಿ ಮಂಡಿತಾಮತಿ ಮುಂದೆ ಕಲ್ಯಾಣಿ ಪದ)

ಬಿನ್ನಪವನು ಮನ್ನಿಸಮ್ಮ ಜನನಿ ॥ ಪಲ್ಲವಿ ॥

ವ್ಯಾಳ್ಯ ಬಂದಿತು ಕೇಳಮ್ಮ ಮೊರೆಯ
ಬಾಳಬಾರದು ಜನ್ಮ ಹೇಳಲಾರಿಗೆ ದುಃಖ ॥ ೧ ॥

ಮಾನವತಿಯೆ ನಿಮ್ಮಯ ಪತಿಯು
ಎನ್ನಯ ನಾಥಗೆ ಹೀನಕೃತಿಗ್ಯೆವ ॥ ೨ ॥

ಪ್ರೀತಿಯಿಂದಾತಗೆ ನೀತಿ ಪೇಳಮ್ಮ
ದಾತ ಮಲ್ಲಿಕಾರ್ಜುನ ಸೋತವರಿಗಿರುವ ॥ ೩ ॥

ಹೇ ! ಸರಸಿಜಾಂಬಕಿ ಪರಮ ಸಂಪ್ರೀತಿ ಕಲ್ಯಾಣ ದೊರೆ ಸತಿ. ತಮಗೆ ಮೊರೆ ಬಂದ ಈ ತರುಣಿಯೊಳಂತಃಕರುಣ ತೋರು. ಕದಳಿ ವೃಕ್ಷವು ಬಿರುಗಾಳಿಯಲ್ಲಿ ಸಿಕ್ಕಂತೆ ಎನ್ನದೀಗ ಬಾಳ್ವೆಯಾಗಿ ವ್ಯಾಳ್ಯ

ಬಂದೊದಗಿರುವದು. ಅರಿಗ್ಗೇಳಲಿ? ಕೇಳು ದೇವಿ ನಿನ್ನಯ ಪತಿಯು ಎನ್ನನಾಥನ ನೇತ್ರಗಳನ್ನು ಕಿತ್ತಿಸಲಿಕ್ಕೆ ಪಂಥ ತೊಟ್ಟು ನಿಂತಿರುವನು. ಕಾರಣ ಕಾರ್ಯ ಬೇಡೆಂದು ಹೇಳಿರಿ ದಯವನ್ನು ತೋರಿರಿ.

ಮಂಡಿತಾಮತಿ : ಸಾಕು ಕಲ್ಯಾಣಿ. ಎನ್ನ ನಾಥನಿಗೆ ನೀತಿ ಹೇಳೆನ್ನುವದಕ್ಕಿಂತ ಮೊದಲು ಅನ್ಯ ಜಾತಿಯವರು ಕೂಡಿ ಬೀಗತನ ಮಾಡುವದು ಧರ್ಮ ಘಾತವಾಗುವದೆಂದು ನಿನ್ನ ಕಾಂತನಿಗೆ ರೀತಿ ಹೇಳಿದ್ದರೆ ಎಲ್ಲಿ ಈ ಗತಿ ಬರುತ್ತಿತ್ತು. ನೆಲ ಆಕಾಶದಲ್ಲಿ ಇರುವ ಕುಲಾಂತರದ ಸಮಗಾರ, ಬ್ರಾಹ್ಮಣರು ತನು ಸಂಬಂಧ ಎಸಗಿರುವದು ಭಯಂಕರ ಅಪಾರ ದುರಿತವಲ್ಲವೇ? ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಭೂಪಾಲರ ಕಾರ್ಯ ಜಾತಿ ಕೆಡಿಸಿದ ನಿಮ್ಮಂಥ ಅನೀತಿ ಮಾನವರಿಗೆ ಘನತರವೀಯದಿದ್ದರೆ ಬಿಜ್ಜಳನು ಸನಾ... ಧರ್ಮಕ್ಕೆ ಘನ ಅಪಕಾರ ಮಾಡಿದನೆಂದು ಜನರು ಜರಿಯಲಿಕ್ಕಿಲ್ಲವೇ? ತನ್ನ ತಪ್ಪು ತನ್ನನ್ನು ತಿನ್ನುವಾಗ ಇನ್ನೊಬ್ಬರಿಂದೇನಾಗುವುದು ಕಳಿತೆ ದುರ್ಮಾತೆ.

ಕಲ್ಯಾಣಮ್ಮ : ಅಷ್ಟೈಶ್ವರ್ಯ ಭೋಗಿಸುವ ಬಿಜ್ಜಳನ ಪಟ್ಟದ ಅರಸಿಯೇ ನೀನೆಷ್ಟು ಪರಿಯಿಂದ ಕೆಟ್ಟ ನುಡಿಗಳನ್ನು ಕಟ್ಟಳೆಯಿಂದಾಡಿದರೂ ಎನಗೇನು ಎಳ್ಳಷ್ಟು ಸಿಟ್ಟಿಲ್ಲ. ಸೃಷ್ಟಿಕರ್ತನ ಶರಣರು ಜಾತಿ ಭ್ರಷ್ಟರಾಗಿರುವರೆಂಬ ಗೋಳು ದಿಟವಲ್ಲ. ಮುಕ್ತಿಯೊಳು ಪ್ರೀತಿ, ಸಂಸಾರದೊಳು ಪ್ರೀತಿ ಇದ್ದವನು, ಯಾವ ಧರ್ಮದವನೆ ಇರಲಿ ಅವನಿಗೆ ದೀಕ್ಷೆ ವಿಧಿಸಿ ಮತದಲ್ಲಿ ಸೇರಿಸಿಕೊಳ್ಳಬೇಕೆಂಬ ವೀರಶೈವ ಸಮಾಜದ ನೀತಿ ಇರುವದು. ಈ ವಿಧಾನ ಮುಗಿದನಂತರ ಬ್ರಾಹ್ಮಣ, ಸಮಗಾರ, ಹೊಲೆ ಮಾದಿಗರೆಂಬ ಭೇದಾಭೇದವು ಅಡಗಿ ಷಟ್‌ಸ್ಥಲದ ಆಧಾರದ ಮೇಲೆ ಲಿಂಗಾಯತವೆಂಬ ಒಂದೆ ಸಮಾಜ ರೂಪುಗೊಂಡು ಶರಣರಾಗಿ ಶರೀರ ಸಂಬಂಧ ಮಾಡಿದರೆ ತಪ್ಪೇನು? ಕಾರಣ ನಿಮ್ಮ ಪ್ರಭುಗಳಿಗೆ ಎಚ್ಚರಗೊಟ್ಟು ತಿಳಿಸು ಜನನಿ, ಬಿಜ್ಜಳ ಕಾಮಿನಿ.

ಮಂಡಿತಾಮತಿ: ಹೇ ! ನಾರಿ ಪರಮ ವೈಯಾರಿ, ನಿನ್ನರಸನು ಕ್ರೂರ ಕೃತಿ ಮಾಡಿದಾಗ್ಯೂ ಗಂಡನ ಅಭಿಮಾನದಿಂದ ಶರಣರು ಮೇಲೆಂದು ಬಲು ಬಣ್ಣಿಸುವಿ? ಕಣ್ಣು ಕೀಳಿಸಿದಲ್ಲಿ ಕಠಿಣವಾಗುತ್ತಿದ್ದರೆ ಥಟ್ಟನೆ ಹೋಗಿ ಆತ್ಮಘಾತ ಮಾಡಿಕೊಂಡರೆ ಉತ್ತಮವಾಗುತ್ತದೆ. ನೀನಿಷ್ಟು ಹೇಳಲಿಕ್ಕೆ ಎನ್ನಲ್ಲಿ ತಿಳಿವಳಿಕೆ ಇಲ್ಲೆಂದು ಕಲ್ಪಿಸಿಕೊಂಡಿರುವಿಯಾ?

ಮೂಢಾತ್ಮರಾದ ನಿಮ್ಮಯ ಗೊಡವೆ ಬಿಟ್ಟರೆ ಕಲ್ಯಾಣದೊಡೆಯನು ನ್ಯಾಯ ಭ್ರಷ್ಟನಾದನೆಂದು ಪರರಾಜರು ಕೈಯಲ್ಲಿ ಕೈ ಇಟ್ಟು ನಕ್ಕಾರು. ನಿನ್ನ ಪ್ರಿಯನ ಅಭಿಮಾನ ನಿನಗಿದ್ದಂತೆ ಇನ್ನೋರ್ವ ಸ್ತ್ರೀಯರಲ್ಲಿ ಇರುವದಿಲ್ಲವೆಂದು ತರ್ಕಿಸಿರುವೆಯಾ? ಪಾಲಿಗೆ ಬಂದದ್ದು ಕಾಲಿನಿಂದೊದೆದರೂ ಹೋಗದು ಸದ್ಯಕ್ಕೆ ಎನ್ನಡಿಯಲ್ಲಿ ಒಂದು ನುಡಿಯನ್ನಾದರೂ ಹೊರಗೆಡಹದಿರು. ನಾರಿ ಮನದ ವೈಯ್ಯಾರಿ.

ಕಲ್ಯಾಣಮ್ಮ :

ಪಾಲಿಸಮ್ಮ ಕಲ್ಯಾಣರಾಣಿ
ಕಲ್ಲು ಮನಸ್ಸು ಮಾಡದಿರು ಜಾಣೆ ॥ ಪಲ್ಲವಿ ॥

ದಿಕ್ಕುಗೇಡಿಯಾಗಿ ಬಂದರ್ಗೆ
ಧಿಕ್ಕರಿಸಿ ನೂಕುವರೀ ಪರಿದು
ಕಕ್ಕುಲತೆ ತೋರಮ್ಮ ಜನನಿ
ಹಕ್ಕಿಯಂತೆ ಬಾಯಿ ಬಿಡುವೆನಾ ॥ ೧ ॥

ಮರಣ ರಹಿತ ಶಿವನ ಶರಣರೋಳ್
ವೈರವ ಬೆಳೆಸುವುದು ತರವೆ–
ಕರ ಮುಗಿದು ಬೇಡುವೆ ತೋರು ದಯವ
ಪಾರು ಮಾಡು ನೀ ಪರಮ ಪಾವನೆ ॥ ೨ ॥

ಸತ್ಯಕ್ಕೆ ಸರಿವಸ್ತು ಇಲ್ಲ
ಭಕ್ತಿಗೆ ಬೆಲೆ ಯಾವುದಿಲ್ಲ
ಹೆತ್ತಮ್ಮ ನಿನಗೆ ಕರುಣಿಲ್ಲೆ
ಮುಕ್ತಿದಾತ ಮಲ್ಲಿಕಾರ್ಜುನ ॥ ೩ ॥

ಹೇ ! ಮಜ್ಜನನಿ ಬಿಜ್ಜಳನ ರಾಣಿ ಸುಗುಣಮಣಿ ಜಾಣಿ. ಕಲ್ಯಾಣ ಪುರವೇಣಿ ಮನಸ್ಸು ಕಲ್ಲು ಮಾಡದಿರು. ಪಕ್ಕವಿಲ್ಲದ ಹಕ್ಕಿಯಂತೆ ಬಾಯಿಬಿಡುವ ದಿಕ್ಕಿಲ್ಲದ ಬಾಲೆಯೊಳು ಕಕ್ಕುಲತೆ ತೋರು. ಧಿಕ್ಕರಿಸಬೇಡ. ಹೆಣ್ಣಿನ ಕರಳು ಬೆಣ್ಣೆಯಂತೆ, ಕರಗಿ ಹೇಳುತ್ತಿರುವನದು ನಿನ್ನಲ್ಲಿ ಕನಿಕರವೆ ತೋರುವದಿಲ್ಲ. ಬ್ರಾಹ್ಮಣನಾಗಲಿ ಅಸ್ಪೃಶ್ಯನಾಗಲಿ ಭಕ್ತಿ ಸ್ಥಿರಗೊಂಡಿದ್ದಾದರೆ ಶಿವನಿಗೆ ತಾನೆ ಪ್ರಿಯನಾಗುವನು. ಪ್ರಿಯವಾಗಿದ್ದವರನ್ನು ಪರಶಿವನು ರಕ್ಷಿಸದೆ ಬಿಡನು. ಶಿವಭಕ್ತರಲ್ಲಿ

ದ್ವೇಷಗೈದಿದ್ದರೆ ಶಿವನ ಮೇಲೆ ಗೈದಂತಾಗುವದು. ಪೂರ್ವದೊಳು ತಾರಾಕಾಸುರನು ಗಜಾಸುರ ಅನೇಕ ದೈತ್ಯರು ಪಾರ್ವತಿಯ ಅರಸನೊಡನೆ ವೈರ ಬೆಳಸಿ ಸುಳಿವಿಲ್ಲದೆ ಹೋದರು. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟರೆ ಕೆಟ್ಟಾಗದೆ? ಕಾರಣ ನಿನ್ನ ರಾಜೇಂದ್ರನಿಗೆ ಕಳಕೊಂಡು ಹಳಹಳಿಸುವದು ಬೇಡೆಂದು ಹೇಳಿರಿ, ಶರಣರ ಗೋಜು ಬಿಡಿಸಿರಿ.

ಮಂಡಿತಾಮತಿ : ಒಳ್ಳೇದು ! ಕಲ್ಯಾಣಮ್ಮ ನಿನ್ನ ಕಣ್ಣಿನ ಅಶ್ರುಗಳು ಪಳ ಪಳನೆ ದಳಗರಿಯುವದ ಕಂಡು ಎನ್ನ ಈ ನುಡಿಯಂ ಗಡಣಕ್ಕೆ ತರುವನೆಂಬ ಭರವಸೆ ಎನಗಿಲ್ಲ. ಆದಷ್ಟು ಪ್ರಯತ್ನ ಪಡುವೆ. ಶರಣರೊಡನೆ ಹೊಡೆದಾಟ ಬೇಡೆಂದು ಸನ್ಮತದಿ ಪೇಳುವೆ. ಕೇಳದಿದ್ದಲ್ಲಿ ನಿಮ್ಮ ದೈವಕ್ಕೆ ಕೈಹಚ್ಚುವರಾರು? ಮಂದಿರಕ್ಕೆ ನಡೆಯುವಂಥವಳಾಗು.

[ಕಲ್ಯಾಣಮ್ಮ ಹೋಗುವಳು]

ಮಂಡಿತಾಮತಿ : ಭೂಪ ಕೋಪನಳಿ ಕೃಪೆದೋರು ಕಾಂತ
ಛಪ್ಪನ್ನ ನಾಡಿಗೆ ಒಪ್ಪುವಂಥ ದೊರೆಯೆ ॥ ಪಲ್ಲವಿ ॥

ಮಂದಹಾಸನೆ ನಿಮ್ಮ ದ್ವಂದ ಚರಣಕ್ಕೆ ನಮೋ
ಕಂದನಂದದಿ ಪ್ರಜರ ಬಂಧನ ಪಡಿಸುವರೆ ॥ ೧ ॥

ಬಲ್ಲಿದ ಬಸವನೊಳು ಛಲವು ಸಾಗದಯ್ಯ
ನಿಲ್ಲದೆ ಶರಣರ ಕಾಯ್ವ ಮಲ್ಲಿಕಾರ್ಜುನದೇವಾ ॥ ೨ ॥

ಹೇ ! ಕಂತು ಸಮರೂಪ ಪ್ರಾಣಕಾಂತ ಬಿಡು ಕೋಪ, ದಿವ್ಯ ಪ್ರತಾಪ. ಶತ್ರು ಮಿತ್ರರುಗಳಲ್ಲಿ ಸಮಭಾವವುಳ್ಳವರಾಗಿ ಶಿವಸ್ವರೂಪಿಗಳಾದ ಶರಣರಲ್ಲಿ ಕಲಹವನ್ನು ನೆಲೆಸುವದರಿಂದ ಏನು ಪ್ರಯೋಜನ? ಜಾಣರ ಸಂಗದಿರ್ಪ ಪ್ರಾಣಿಗಳು ಜ್ಞಾನವಂತರೆಂದು, ಗಣತಾತನ ಹೊರತಾಗಿದ್ದ ಜೀವಿಗಳು ಅಜ್ಞಾನರೆಂದು ಘೋಷಣೆಯೇ ಹೇಳುವದು ಕೇಳಿಲ್ಲವೆ? ಕ್ಷೀಣ ಬುದ್ಧಿಯಿಂದೊಡಗೂಡಿದ ನಾವೆಲ್ಲರೂ ಪುಣ್ಯವಂತರ ವಿಷಯದಲ್ಲಿ ಸಣ್ಣ ಮನಸ್ಸುಳ್ಳವರಾಗಬಾರದು ನಾಥಾ. ಹತ್ತು ತಲೆಯ ರಾವಣನು ತೆತ್ತೀಸಕೋಟಿ ದೇವತೆಯರ ಕೂಡ ವೈರಕಟ್ಟಿ ಮತ್ತೆ ಸೀತಾದೇವಿಯಂ ಬಲಾತ್ಕರಿಸಿದ ಪರಿಣಾಮಕ್ಕಾಗಿ ರಣದೊಳು ದುಶ್ಚರಿತ್ರೆಯಿಂದ ಪ್ರಾಣ ತ್ಯಜಿಸಿಲ್ಲವೆ? ಅಂಥ ಅವಸ್ಥೆಗೆ ಆಣೆಯಾಗಿರುವದಕ್ಕಿಂತಲೂ ಮಂದಿರದಲ್ಲಿರುವದೇ ಲೇಸು. ಪ್ರಿಯಾ ಮುಗಿಯುವೆನು ಕೈಯಾ.

ಬಿಜ್ಜಳ : ಭೀತಿ ಇಲ್ಲದೆ ಪತಿಯ ಸಮ್ಮುಖದಲ್ಲಿ ಪ್ರತಿ ಉತ್ತರವನ್ನೀಯುವ ಪ್ರೀತಿಯ ಸತಿಯೆ ಮಂಡಿತಾಮತಿಯೆ, ಈರ್ಶ್ಯದು ಶಿರದ ಚೋರನಂತೆ ನಾನೇನು ಪರನಾರಿಯರ ಛಾಯದೊಳು ಮನಸ್ಸೂರಿರುವೆನೆ ಹೇಗೆ? ಶರಣರ ಘೋರಪಡಿಸುವದು ಸರಿದೋರುತ್ತಿದ್ದಿಲ್ಲವಾದರೆ ಕೊರಳೊಳು ಇರುವ ಮಂಗಲಸೂತ್ರ ಹರಿದ್ಹಾಕಿ, ಎನ್ನ ಅರಮನೆಯಲ್ಲಿ ಇರುವದಕ್ಕಿಂತ ಆ ಸಮಗಾರ ಗೃಹಕ್ಕೆ ಪೊಕ್ಕು, ಕೆರವುಗಳ ವಿಕ್ರಯ ಮಾಡುತ್ತ ಇರು ಹೋಗು. ಶಿವತತ್ವದ ಕರ್ತೆಗಳು ಉತ್ತಮರೆಂದು ಚಿತ್ತರಿಸುವದು ಹೇಗಾಯಿತೆಂದರೆ ಉರಿಯುತ್ತಿರುವ ಬೆಂಕಿಯಲ್ಲಿ ಮತ್ತಿಷ್ಟು ತುಪ್ಪ ಬರಕಿದಂತಾಯಿತ್ತು. ಚಪಲಾಕ್ಷಿಯಳೆ ನಿನ್ನ ಉಪದೇಶ ಸಾಕುಮಾಡು. ಎನ್ನ ಮುಂದೆ ಒಂದೆ ಶಬ್ದವೆನ್ನದೆ ಮಂದಿರ ಸೇರಿದರೆ ಜೀವಿತಳಾಗಿರುವಿ. ಇಲ್ಲವಾದರೆ ನಿನ್ನ ರಕ್ತ ಮಾಂಸಗಳಿಂದ ಭೂತಗಳಿಗೆ ತಂಗಳೂಟವಂ ಉಣ ಬಡಿಸುವೆ. ಮಂಗ ಸ್ತ್ರೀಯಳೆ ಎನ್ನ ಸಂಗಡ ಎಷ್ಟು ವಾದ ಮಾಡಿ ಬೋಧಿಸಿದರೂ ಆ ಮೂರ್ಖರಿಗೆ ಬಾಧಿಸದೆ ಬಿಡಲಾರೆ ಸಖಿ. ಚಂದ್ರಮುಖಿ.

ಮಂಡಿತಾಮತಿ : ನಾನು ನೀನೆಂಬ ಭಾವವಳಿದು ಮಾನವ ಧರ್ಮ ಒಂದೆಯೆಂದು ತಿಳಿದು, ಜ್ಞಾನ ಸಾಧನೆಯಿಂದ ಶಿವಸಾನ್ನಿಧ್ಯ ಪಡೆದು, ಶರೀರ ಸಾರ್ಥಕ ಪಡಿಸುವ ಮನುಜರ ಹಾನಿಪಡಿಸುವದು ಸಮ್ಮತವಲ್ಲ. ಧನವಂತನಾದರೆ ತನ್ನ ಸಮಾನ ಏರಿ ಬರುವ ವೈರಿಗಳ ಮಾನ್ಯಗೊಳಿಸಿ ವೀರನೆನಿಸಬೇಕು. ಮಕ್ಕಳೋಪಾದಿ ಪ್ರಜರಂ ಧಿಕ್ಕರಿಸಿದರೆ ಮುಕ್ಕಣ್ಣನು ಮೆಚ್ಚನು. ನೂರಾರು ಜನ ರೈತರಲ್ಲಿ ಓರ್ವನಾದರೂ ಒಳ್ಳೆಯವನಿರುತ್ತಾನೆ, ಮತ್ತೋರ್ವನು ಕೆಟ್ಟವನಿರುತ್ತಾನೆ. ಸರ್ವರನ್ನು ಸಹಿಸುವದು ತಂದೆಯ ಸ್ವರೂಪ ದೊರೆಯ ಕರ್ತವ್ಯವಲ್ಲವೇನು? ಜಾಣ ಪಂಚಪ್ರಾಣ.

ಬಿಜ್ಜಳ : ಶಹಬ್ಬಾಶ್ ! ಮಾನಿನೀಮಣಿ ಮನೆಯಲ್ಲಿ ಹೋಗು. ಮಾನಗೇಡಿ ಶರಣರ ಗೋಜು ನಿನಗೇತಕ್ಕೆ ಬೇಕು? ಮೋಜಿನಮಣಿ ಮಾತಿನ ಖಣಿ. ರಾಜಾಜ್ಞೆ ಉಲ್ಲಂಘಿಸಿದ ದುರ್ಜನರನ್ನು ಘರ್ಜಿಸುವದು ರಾಜಲಕ್ಷಣ ಮೃಡಭಕ್ತನಾದರೇನು? ಕಿಡಿಗೇಡಿಯಂತೆ ಕುಲಭ್ರಷ್ಟ ಕಾರ್ಯಗಳು ಮಾಡಬೇಕೆಂದಾವ ರೂಢಿ ಹೇಳುತ್ತಿರುವದು? ಜಡಮತಿ ಪ್ರಮಥರ್ಗೆ ತಡವರ್ಬೇಡೆನ್ನಲಿಕ್ಕೆ ನಾನೇನು ಕಡಿಯುವನೇ? ಮಡದಿಯೆ, ಪೊಡವಿಯಲ್ಲಿ ಒಬ್ಬಾತನಾದರೂ ಎನ್ನ ಹೊಡದಾಡಿ ಯುದ್ಧಮಾಡಿ

ಜಯಪ್ರದ ಪಡೆದದ್ದು ನೋಡಿದ್ದೀಯಾ? ಹೀನಕೃತಿಗೈದ ಮತಿಗೇಡಿಗಳಿಗೆ ನೆತ್ತಿ ಒಡೆಯುವದೆ ಈ ಕ್ಷಿತಿ ಪಾಲಕನ ಕರ್ತವ್ಯ. ಮತಿಹೀನ ಹರಳಯ್ಯನ ಮರ್ಯಾದೆಗೆಡಿಸದೆ ಬಿಡಲಾರೆ. ಪ್ರಾಣಸಖಿ ಸದನದಲ್ಲಿರು ಸುಖಿ.

ಮಂಡಿತಾಮತಿ : ಅಯ್ಯೋ ಎನ್ನಯ ಕಾಂತವಚನ
ಪ್ರಿಯ ಮೀರುವರೇನು ॥ ಪಲ್ಲವಿ ॥

ಮಾತು ಮನ್ನಿಸು ನಾಥಾ ಪ್ರೀತಿ ಯನ್ನೊಳಿಟ್ಟು
ಭೂತನಾಥ ಹರನ ದೂತರು ಸಮರ್ಥರು ॥ ೧ ॥

ಚಂಡ ವಿಕ್ರಮ ಪುಂಡ ಮಾಚರಸರು
ಭಂಡತನ ಮಾಳ್ಪರಿಗೆ ದಂಡಿಸುವ ಚೆನ್ನಬಸವ ॥ ೨ ॥

ಮಾಪ ಮಾಡು ನಾಥ ತಪ್ಪು ಕ್ಷಮಿಸಿಹೊತ್ತ
ಕಾಪಟ್ಯವಳಿಕಾಂತ ತಾಪಹರಮಲ್ಲಿನಾಥ ॥ ೩ ॥

ಅಯ್ಯಾ ! ಉಡುರಾಜನೆ ಎನ್ನೊಡೆಯ ಕಡುವೀರನೆ ಶರಣರಗೊಡವಿಗೆ ಇನ್ನು ಸರ್ವಥಾ ಹೋಗದಿರೆಂದು ಕಡೆನುಡಿ ಆಡುವೆ. ಮಡದಿಯಳ ಮಾತನ್ನು ಮನ್ನಿಸಿ ಸಡಗರದಿಂದ ಗಡನೆ ಮಂಗಲಾಂಗನಿಯ ಕಾಮವಿಲಾಸದೊಳು ಪ್ರೇಮದಿಂದ ಇರು ನಡೆ. ಸ್ವಾಮಿ ವೀರಶೈವ ಧರ್ಮದೊಳು ಬಹುವೀರರು ಇರುವರು. ಮಡಿವಾಳ ಮಾಚರಸನಿಗೆ ಪೊಡವಿಯೊಳು ಯಾರೂ ಈಡಿಲ್ಲಾ. ಚನ್ನಬಸವನ ಪರಾಕ್ರಮ ಇನ್ನೇನು ಹೇಳಲಿ? ಚೆನ್ನಬಸವ ವೈರಿಗಳ ಗಂಡನು ರಕ್ಕಸನ ಮಿಂಡನು. ಕ್ಷಣಕ್ಷಣಕ್ಕೆ ನೀನವರ ಮನದಣಿಸುವದು ಗಣನೆ ಇಲ್ಲ. ಸೆಣಸ್ಯಾಡುವದು ಹಿತಕರವಲ್ಲ. ವಿನಾಕಾರಣ ಕೆಣಕಿ ಬಣ್ಣಗೆಡದೆ ಸುಮ್ಮನಿರು ಪ್ರಿಯಾ ತಪ್ಪರ್ಪೇಡ ನ್ಯಾಯ.

ಬಿಜ್ಜಳ : ಛಲ ಎಲೈ ! ಹೆಣ್ಣೆ ರೂಪಸಂಪನ್ನೆ ಸದ್ಗುಣ ಕನ್ನೆ, ಸಾಕು ಸಾಕಾಗುವಂತೆ ಬೇಕಾದ್ದು ಸೌಖ್ಯವನ್ನಿತ್ತು ಸುಖದಲ್ಲಿಟ್ಟರೂ ಕಟ್ಟಕಡೆಗೆ ಹೆಣ್ಣಿನ ಖೊಟ್ಟಿ ಗುಣಕ್ಕೆ ಹೋದೆಯಾ? 'ಹೆಂಗಳೆಯರ ಬುದ್ಧಿ ಮೊಣಕಾಲ ಕೆಳಗೆ', ಎಂಬಂತೆ ಗಾದೆ ಸಟಿಯಾಗಲಿಲ್ಲ. ಎಲೈ ! ನಾರಿಯೆ. ಪರಿಪರಿ ಶರಣರಿಗೆ ಕಾಡಿದರೆ ದುರಿತ ಬರುವದೆಂದು ಬೊಗಳುತ್ತಿರುವೆಯಲ್ಲ. ನಲ್ಲೆ ಹಲ್ಲುಗಳ ಜೋಪಾನ ಮಾಡಿಕೊ. ಎನ್ನೆದುರಿನಲ್ಲಿ ನಿಲ್ಲದೆ ಹಿಂದಕ್ಕೆ ಜಾರಿ ಮುಖ ತಿರುವಿ ಹೋಗುವಂಥವಳಾಗು. ನೀನೇನು ಹೇಳಿದರೂ ಆ ದುಷ್ಟರ ಖೂನಿ ಮಾಡದೆ ಬಿಡಲಾರೆ. ಅಲಲಲ ಎಲೈ ! ಸಾರಥಿ

ಒಡಿಯನ ಭಯವಿಲ್ಲದೆ ಒಡಬಡಿಸುವ ಈ ತುಡುಗ ಮಡದಿಯಳ ಹೆಡಕಿಗೆ ಕೈಯಿಟ್ಟು ಅಡಗಿ ಮನೆಗೆ ದಬ್ಬುವಂಥವನಾಗು.

ಮಂಡಿತಾಮತಿ : ಹೇ ! ಪ್ರಾಣದೊಲ್ಲಭಾ, ಕ್ಷೋಣಿ ಭೂಪಾಲರ ಜಾಣ ಪ್ರಜರ ವಿಮರ್ಶೆ ಮಾಡುತ್ತಿರಬೇಕು. ಮಾನವನಿಗೆ ಸಂಪತ್ತು ವಿಪತ್ತುಗಳು ಸ್ಥಿರವಾದವುಗಳಲ್ಲ. ವಿನಾಶಕಾಲಕ್ಕೆ ವಿಪರೀತ ಬುದ್ಧಿ. ನಿನ್ನ ಮನಬಂದಂತೆ ಮಾಡುಹೋಗು ರಮಣಾ, ಇದೇ ಕಡೆ ದರ್ಶನ. [ಹೋಗುವರು.]

ಜಗದೇವನ ಪ್ರವೇಶ

ಜಗದೇವ : ಭಪ್ಪರೆ ಬಾಲಕಾ, ಒಪ್ಪುಳ್ಳ ಈ ಸಭೆಯೊಳು ಅಪ್ಪ ನೀನಾರೆಂದು ತಪ್ಪದೆ ಎನ್ನಭಿದಾನವನ್ನು ಚಂದ್ರನುದಯ ಕಂಡು ಚಕೋರ ಪಕ್ಷಿಗಳ ದಂಡು ಛಂದದಿಂದ ನಲಿದಾಡಿ ಅಂದವಾದ ಗಾಯನವಂ ಮಾಡುವಂತೆ ಇಂದಿನ ದಿವಸ ಈ ಸಂದಟ್ಟಣಿ ಸಮೂಹದೊಳು ಬಂಧುರ ಮಾತುಗಳಿಂದ ಬಂದವರು ದಾರೆಂದು ವಂದನೆ ಮಾಡಿ ಕೇಳುವ ನೀನು ದಾರು ಮಾನವ? ಪೇಳು ನಿನ್ನ ನಾಮವಾ.

ಭಲ ಎಲೈ ! ಸಾರಥಿ ನಿನ್ನ ನುಡಿಗಳಿಗೆ ಮೆಚ್ಚಿದೆ. ಹಿಡಿಹಿಡಿ ಕೊಡುವೆ ಈ ಚಿನ್ನದ ಉಡುದಾರವಂ ತಡವಿಲ್ಲದೆ ನಿನ್ನ ನಡುವಿಗೆ ಹಾಕುವೆ. ಎನ್ನ ಭಕ್ತಿಯ ಬಲಾತ್ಕಾರದ ಛಲವನ್ನು ಆದರಿಸಿ ಆಲಿಸು. ವೀರಶೈವ ಧರ್ಮ ಸಂಸ್ಥಾಪನಾಚಾರ್ಯ ಬಸವೇಶನು ದಯಪಾಲಿಸಿದ ಇಷ್ಟಲಿಂಗವಂ ಧಾರಣಗೈದು, ಕೈಲಾಸಪರ್ವತದಲ್ಲಿ ರತ್ನ ಕಂಕಣ ರತ್ನಮಯ ಕಿರೀಟ ಕಾಂತಿಯಿಂದೊಪ್ಪುವ ಚಂದ್ರಕಾಂತ ಶಿಲೆಯ ಸಿಂಹಾಸನದಿ ಮೆರೆಯುವ ಚಂದ್ರಶೇಖರನಲ್ಲಿ ವೈರತ್ವ ಬೆಳೆಸುವ ಖುಲ್ಲ ಜನರ ಅಳಿಗಾಲ ಮಾಡಿ ಯಮಾಲಯಕ್ಕೆ ಕಳಿಸುವೆ. ಮತ್ತು ಇದೂ ಅಲ್ಲದೆ ಇಷ್ಟಲಿಂಗ ದೀಕ್ಷೆರಹಿತ ಕಡುಪಾಪಿಗಳು ತಡವಿದರೆ ಅವರೆದೆಯನ್ನು ಧಡ ಧಡಲ್ಲೆಂದು ಬಿಕ್ಕಿಸಿ ಎಡೆಗೆಡುವ ವೀರ ಜಗದೇವಯ್ಯನೆಂದು ತಿಳಿಯಲಾ ಸಾರಥಿ.

ಎಲೈ ! ಸಾರಥಿ ಶುದ್ಧಾಂತಃಕರಣ ಬುದ್ಧಿವಂತ ಕಲ್ಯಾಣ ಮಹಾಮಂತ್ರಿ ಗದ್ದುಗೆಯಲ್ಲಿ ಒಪ್ಪುವ ಸದ್ಧರ್ಮವೀರ ಬಸವಣ್ಣನವರಿಗೆ ಒಂದು ದಿವಸ ಎನ್ನ ಮಂದಿರಕ್ಕೆ ಭೋಜನಾರ್ಥ ಬಿನ್ನವಿತ್ತೆನು. ಆತನ ಮಹಿಮೆ ಎಷ್ಟು ವರ್ಣಿಸಲಿ.

ಭಲ ಎಲ್ಲೈ ! ಸಾರಥಿ ಕ್ಷೀರವನ್ನು ಮಾರುವ ಗೊಲ್ಲತಿಯು ಜಾರಿ ಬೀಳುತ್ತಿರುವಾಗ ಬಸವ ನಾಮ ನೆನೆಯಲು ಆತ ಬಂದು ಬಾಲೆಯನ್ನು ಸಲಹಿದ. ಅನಂತ ಲೀಲೆಗಳನ್ನು ತೋರಿದ ಲೀಲಾಮೂರ್ತಿ ಬಸವೇಶ್ವರ.

ಎಲ್ಲೈ ! ಸಾರಥಿ ನಮ್ಮ ಚಾಲುಕ್ಯ ಸಿಂಹಾಸನ ಕಸಿದುಕೊಂಡು ಕಲಚೂರ್ಯ ಬಿಜ್ಜಳ ಚಕ್ರವರ್ತಿಯಾಗಿ ಮೆರೆಯುತ್ತಿದ್ದಾನೆ. ಮರಳಿ ನಮ್ಮ ಸಿಂಹಾಸನ ಪಡಿಯಲು ಸಮಯಕ್ಕಾಗಿ ಕಾಯುತ್ತಿದ್ದೇನೆ. ನಾವು ಮತ್ತೆ ಸಿಂಹಾಸನವೇರಿದರೆ ನಿನಗೆ ಇನಾಮುಗಳನ್ನು ಕೊಡುವೆ. [ಹೋಗುವನು].

– ದೃಶ್ಯ –

ಬಿಜ್ಜಳ : ಭಲ ಎಲ್ಲೈ ! ಸಾರಥಿ ನೀತಿವಂತನಾಗದ ದುಗು ಣಗಳಿಗೆ ನಿರತನಾದ ಹರಳಯ್ಯನನ್ನು ತುರ್ತು ಎನ್ನುತ್ತ ಎಳೆತಂದು ಉಕ್ಕಿನ ಮೊಳೆಗಳಿಂದ ತಿವಿದು ನೇತ್ರಗಳನ್ನು ಬಾಧೆಪಡಿಸು. ದೃಷ್ಟಿ ಮಂದಗೊಳಿಸು.

ಹರಳಯ್ಯ : ಹಾಯ್, ಹಾಯ್, ಬಸವ, ಬಸವಣ್ಣ, ಬಸವರಸ, ಬಸವೇಶ್ವರ ಕಸಿಪಿಸಿಯಾಗುವದು, ಸಹಿಸುವದು ಎನ್ನಿಂದಾಗದು. ಅಸಮಮಹಿಮಾ ನಿಧಿಂಬ ನಿನ್ನ ಪೆಸರುಸುರಲು ಸಂಕಟವು ನಶಿಸಿಹೋಗುವದು. ಅಸಾರ ಸಂಸಾರ ಮಾಯಾ ಮುಸುಕಿನೊಳು ಕುಳಿತು ವ್ಯಸನಪಡುವ ಈ ಹರಳಯ್ಯನು ದುಃಖದಲ್ಲಿ ಸಿಲ್ಕಿರುವನು. ಮರಣವೇ ಮಹಾನವಮಿ, ಹರಹರ ಮಹಾದೇವ ಶ್ರೀ ಗುರುಬಸವಲಿಂಗಾಯ ನಮಃ.

ಬಿಜ್ಜಳ : ತಂದೆಯ ಬಿಂದುವಿನಿಂದ ಮಾತೆಯ ಗರ್ಭದಿ ಬಂದು, ನೀತಿಮೀರಿ ಕಾರ್ಯ ಮಾಡಿ, ಯಾತನೆ ಭೋಗಿಸುವ ದತ್ತಗೇಡಿ ಅತ್ತರೆ ಬರುವದೇನು? ನಿನ್ನ ಬೆನ್ನತ್ತಿ ಬರುವ ಘನವಂತರಾರಿದ್ದರೆ ಕರಿಸು. ಎನ್ನ ಕೂಡ ಕಾಳಗ ಮಾಡಿ ನಿನ್ನ ಗೋಳಾಟ ಬಿಡಿಸಲಿ. ಖುಲ್ಲ ಶರಣರೆಲ್ಲರು ಕೂಡಿ ಕಲ್ಯಾಣದಲ್ಲಿ ಹುಡಗಾಟ ನಡೆಸಿರುವಿರಾ? ಲಕ್ಷ್ಯಾನು ಲಕ್ಷ್ಯ ಜಂಗಮರು, ಪಟ್ಟ ಚರಮೂರ್ತಿಗಳನ್ನು ಕರಿಸು, ತಮ್ಮ ಜುಟ್ಟುಗಳನ್ನು ಕಿತ್ತಿಕೊಂಡು, ಲಂಗೋಟಿಯಂ ಹರಿದುಕೊಂಡು ನಿನ್ನನ್ನು ಬಂಧನದಿಂದ ಬಿಡುಗಡೆ ಮಾಡಲಿ.

ಅಲಲಲ ಎಲ್ಲೈ ! ಸಾರಥಿ ಈ ಜಾತಿಹೀನನ ನೇತ್ರಗಳಿಂದ ನೆತ್ತರ ಕಾರಿಸು ಮತ್ತಿಷ್ಟು ನರಳಿಸು.

ಪದ

ಕಲ್ಯಾಣಮ್ಮ : ಪಾಪಾತ್ಮಾ ಪಾಮರಾಧಮ ಮಹಾನೀಚಾ ದುರಾತ್ಮ॥ಪಲ್ಲವಿ॥

ದುರುಳ ಎನ್ನಯ ಕೊರಳ ಕೊಯ್ದಿಯೊ
ಹರಶರಣನು ಹುರಿದು ಬಿಡುವನು
ಮೂರ್ಖಾ ತರ್ಕ ದುಃಖಾ ॥ ೧ ॥

ಭಂಡ ಬಿಜ್ಜಳ ಕೊಂಡೊ ಶಾಪವ
ಮಂಡಿತಾಮತಿ ದುಡಿದು ಕಡಿಯಲಿ
ಮೂಢಾ ಕೇಡಾ ಫಾಡ ॥ ೨ ॥

ದೇವ ಸಂಗನ ಭಾವರ ಜೀವಕಳೆವದು
ಪಾವನೇಂದ್ರ ಮಲ್ಲಿಕಾರ್ಜುನನಿಗಾಗದು
ಅನಾರ್ಯ ಶೌರ್ಯ ಅಧೈರ್ಯ ॥ ೩ ॥

ಎಲಾ ! ಪಾಪಾತ್ಮಕನಾದ ಪಾಮರ ಅಧಮಾ ದುರಾತ್ಮಾ ಮಹಾನೀಚಾತ್ಮಾ, ನಿನ್ನಂಥ ಗಾಂಪರ ಗಾರ್ದಭ ಮಾನವನು ಭಾವಪೂರಿತ ಪಾವನೇಂದ್ರ ದೇವ ಸಂಗನ ಭಜಿಪರ್ಗೆ ಕೇಡ ಬಯಸಿದರೆ ಆಗುವದೇನು? ಭಂಡ ಹೆಂಡಬಡಕಾ, ಹೇಡಿ ಮಹಾ ತಿಳಿಗೇಡಿ, ಮುಕ್ಕಣ್ಣನ ಅಕ್ಕರದ ಭಕ್ತರ್ಗೆ ಕಕ್ಕಸ ಬಡಿಸಿದ ಸೊಕ್ಕಿದ ನಿನಗೆ ಅಂತಕ ನಾಳ್ದಳು ಬಂದು ತಪ್ಪ ಕಾಯ್ದು ಥಳಥಳ ಫಳನೆ ಕುದಿಯುವ ರವರವ ನರಕದಲ್ಲಿ ಚಲ್ಲಿಶ್ಯಾರು. ಚಾಂಡಾಲಾ ಖೊಟ್ಟಿ ಗುಣದ ಕಂಗಾಲಾ.

ಬಿಜ್ಜಳ : ಎಲ್ಯೆ ! ಮತಿಗೇಡಿ ಮಾನುಣಿ, ಮಿತಿಮೀರಿ ಮಾತಾಡಿದರೆ ಕ್ಷಿತಿಯೊಳು ಮಾನ ಗತಿಗೆಟ್ಟು ಹೋದೀತು. ಸಣ್ಣ ಬಾಯಿಂದ ದೊಡ್ಡ ತುತ್ತು ಉಣ್ಣುವದು ಬೇಡ, ಮೈ ಹಣ್ಣಾದೀತು. ತಿಳಿದು ನೋಡು ದುಷ್ಟ ನಾನಾಗಿದ್ದರೆ ಸೃಷ್ಟಿಯೊಳು ಊರ್ವಿಪಾಲಾ ಸಾರ್ವಭೌಮನೆನಿಸುತ್ತಿದ್ದಿಲ್ಲಾ. ನಷ್ಟ ನಾನಾಗಿದ್ದರೆ ನಿಮ್ಮಂಥ ಕಣ್ಣು ಲೊಟ್ಟೆಗಳ ಕಿತ್ತಿಸುವ ಬಲವೆನಗೆ ಪ್ರಾಪ್ತವಾಗುತ್ತಿದ್ದಿಲ್ಲ. ಉತ್ತಮನಾದಲ್ಲಿಯೆ ಕಲ್ಯಾಣ ಪಟ್ಟಣದೊಡೆಯನೆಂದೆನಿಸಿ ಬಲ್ಲಂತೆ ಸುಖ ಭೋಗಿಸುತ್ತಿರುವೆನು. ಕರ್ತೆಯಂತೆ ಮಾಡಿದ ಕರ್ತವ್ಯಕ್ಕೆ ಅತ್ತರೆ ಅಂತಃಕರುಣವ್ಯಾರಿಗೆ ಮೂಳಾ ಭಯಂಕರಗೋಳಾ.

ಕಲ್ಯಾಣಮ್ಮ : ಹೇ ದುಷ್ಟ ಶಿರೋಮಣಿ ಪಾಪಿಷ್ಠ, ಮಹಾಕನಿಷ್ಠ. ನೀನೆಂಥ ಧಿಟ್ಟ.

ನಿಷ್ಠಾವಂತ ಶರಣರು ನಿನ್ನನ್ನು ಸುಡಿಸದೆ ಬಿಡರು. ಸಿರಿ ಸಂಪದ ಸುಖಕೆ ನೀ ಮೆಚ್ಚಿ ಶರೀರ ಸತಿ ಮೋಹ ಭ್ರಾಂತಿಯೊಳು ಪರರ ಮನನೋಯಿಸಿ ಪರಿತಾಪ ಪಡಿಸಿ ಆಯುಷ್ಯಂ ಬಾಳಿ ಮಗುಳ್ದು ಸಾಪಿಗೀಡಾಗಿ ಈ ದೇಹ ಮಾಯವಾಗಿ ಹೋಗುವದು. ಕಡೆಗೆ ಎನಗೆ ಸಿಟ್ಟು ತರಿಸಿ ಕಟುಗ್ರಹ ಶಾಪಕ್ಕೆ ದಿಟ್ಟವಾದಿಯಾ. ನಿನ್ನ ಪಟ್ಟದ ರಾಣಿಯರು ನನ್ನತ್ತ ಪಟ್ಟು ಗೋಳಿಟ್ಟು ಕಣ್ಣೀರು ಭೂಮಿಗಿಟ್ಟು ಮಾಂಗಲ್ಯ ಬೀಸ್ಹಾಕಿ ಅಮಂಗಲವಾಗಿ ತಿರುಗಲಿ. ಖಿಲ್ಲಾ ಈ ಮಾತು ಹುಸಿಯಲ್ಲಾ.

ಬಿಜ್ಜಳ : ಅಲಲ ಎಲ್ಲೈ ! ಸಾರಥಿ, ದೊರೆಯು ಕಟ್ಟೆಯ ಮೇಲೆ ಕುಳಿತು ಬೈದಾಗ ಆಳು ಹೊಟ್ಟೆಯಲ್ಲಿ ಗುಣಗುಟ್ಟಿದರೇನಾಗುವುದು? ಈ ಖಿಲ್ಲ ನಾರಿ ಕಲ್ಯಾಣಿಯು ಕಲ್ಯಾಣದೊಡೆಯನಿಗೆ ಶಾಪವಿತ್ತರೇನಾಗುವದು? ವ್ಯರ್ಥ ಕಾಲ ಕಳಿಯದೆ ಹರಳಯ್ಯ, ಮಧುವಯ್ಯ ಇರ್ವರನ್ನು ತುರ್ತು ಆನೆಗಳ ಕಾಲಿಗೆ ಕಟ್ಟಿ ಕಲ್ಯಾಣ ಪಟ್ಟಣದ ಬೀದಿ ಬೀದಿಗಳಲ್ಲಿ ಎಳಿಸು. ಶರಣರ ಮುಖ ಭ್ರಷ್ಟಗೊಳಿಸು. (ಹೋಗುವನು.)

ಕಲ್ಯಾಣಮ್ಮ :ಮನಮೋಹನ ಹನ್ಯವಾಯಿತು ಕಾರ್ಯವ
ನಿನ್ನನಗಲಿ ಇನ್ನು ಹೇಗೆ ಜೀವಿಸಲಿ ॥ ಪಲ್ಲವಿ ॥

ಅಯ್ಯಯ್ಯೊ ಪ್ರಾಣನಾಥ ಉಪಾಯವೇನು ಪೇಳು
ನ್ಯಾಯವೇನಿದು ಪ್ರಿಯಾ ಬಾಯಿ ಬಿಡುವದು ॥ ೧ ॥

ಅಣಿ ಮಾಡಿ ದುಃಖಕ್ಕೆ ಹಣೆಯಬರಹವು ಎಂಥ
ಕಣ್ಣಿನ ನೋವದಿ ಹಣ್ಣಾಗಿ ಮಲಗಿದ್ಯಾ ॥ ೨ ॥

ಚನ್ನಿಂಗರಾಯನೆ ಬೇನೆ ಬಿಡಿಸುವರಾರು
ಇನ್ನೇನು ಮಾಡಲಿ ಚನ್ನ ಶ್ರೀ ಮಲ್ಲಿನಾಥ ॥ ೩ ॥

ಅಯ್ಯೋ ! ಅಕಟಕಟ, ಮಹಾ ಸಂಕಟ ದಿಟವಾಗಿ ಬಂದೊದಗಿತಲ್ಲ. ನಾವು ಹಿಂದಣ ಜನ್ಮದಲ್ಲಿ ಮಾಡಿದ್ದ ಕರ್ಮಕ್ಕೆ ನಾವೇ ಉಣ್ಣಬೇಕಲ್ಲದೆ ಅನ್ಯರಿಗೆ ಆಡಿ ಫಲವಿಲ್ಲ. ಮುಗಿಲು ಹರಿದು ಮೇಲೆ ಬಿದ್ದಂತಾಯಿತಲ್ಲ. ಹೇ ! ದೇವಾ ಶಂಕರ, ಸುಖಂಕರ, ಅಂಕುಶಧರಾ, ಶಂಕರಿವರ, ಪಂಕಜಾ, ಗರ್ವಸಂಹರ, ನಿನ್ನ ಕಿಂಕರ ಭಯಂಕರ ವಿಪತ್ತು ಪರಿಹರಿಸಿ, ಭಕ್ತ ಜನರಕ್ಷಕನೆಂಬ ಬಿರುದು ಪ್ರಸಿದ್ಧಿಗೆ ಬೆಳಗಿಸುವ ದಯಾಗುಣ ಸಿಂಧುರಾ. ಮಂದ್ರಾದಿಮಂದಿರ.

ಹರಳಯ್ಯ : ಅಹೇ ! ಸಡಗರದ ಮಡದಿಯೇ. ದೃಢಮನದಿ ಬಸವನಡಿದಾವರೆಗಳಂ ಪಿಡಿದು ಉಡಿವೊಡ್ಡಿ ಬೇಡಿಕೊಂಡು ಒಡನೆ ಎನಗಾದ ಕಡುತಾಪವನ್ನು ಬಿಡಿಸು. ಎನ್ನಡಿಯಲ್ಲಿ ಕುಳಿತು ಹುಲಿಮರಿಯಂತೆ ಹಲುಬ್ಯಾಡಿದರೆ ಆಗುವುದೇನು? ಹಾಳು ಚಿಂತೆ ಮಾಡಿದರೆ ವ್ಯಾಳೆ ಸಾಲದು. ಇನ್ನೆರಡು ಗಳಿಗೆಯೊಳು ಕಾಳ ಕರಾಳವೆಂಬ ಯಮನ ಆಳುಗಳು ಬಂದು ಪ್ರಾಣ ಸೆಳೆದುಕೊಂಡೊಯ್ವರು. ಗಡನೆ ಜಗದಣ್ಣ ಬಸವಣ್ಣನನ್ನು ಕಾಣು ಜಾಣೆ ಗುಣವೇಣಿ.

ಕಲ್ಯಾಣಮ್ಮ : ದ್ವಿತೀಯ ಶಂಭೋ ಪಾಲಿಸೆನ್ನ ಮುತ್ತೈದೀತನ ॥ ಪಲ್ಲವಿ ॥

ತಂದೆ ಕೇಳು ನಿಮ್ಮ ಪಾದಕಿಂದು ಬಿದ್ದು ಬೇಡಿಕೊಂಬುವೆ
ಮಂದ ಬಿಜ್ಜಳ ಸುಂದರಾಂಗನ ಅಂದಗೆಡಿಸಿದ ॥ ೧ ॥

ಕೊರೆದ ಕಟ್ಟಿಗೆ ಗೊಂಬೆ ಮಾಡಿ ಚರನು ಸತ್ತನೆಂದು ಬರಲು
ಭರದಿ ಅದಕ್ಕೆ ಪ್ರಾಣವಿತ್ತ ಬಸವೇಶಾ ॥ ೨ ॥

ಖುಲ್ಲ ಮನುಜರು ಗೈದ ಕೃತ್ಯ ಸಲ್ಲುವದೆ ನಿನಗೆ ಶಿವನೆ
ನಿಲ್ಲದೆಮ್ಮನು ಸಲಹು ದೇವಾ ಮಲ್ಲಿಕಾರ್ಜುನಾ ॥ ೩ ॥

ಅಯ್ಯೊ ! ಬಸವೇಶ ಭೂಲೋಕಧೀಶ ಪರದೇಶಿಯಾಗಿ ಕೂಸಿನಂತೆ ಬಳಲುವ ಈ ಹರಳೇಶ್ವರನ ಪ್ರಾಣೇಶ್ವರಿಯನ್ನು ಪೋಷಿಸು. ಹೇ ! ದೇವಾ ಆ ಅಸುರ ಬಿಜ್ಜಳನು ಈ ಭಾಸುರಾಂಗಿಯ ಕಾಂತನ ನೇತ್ರಗಳ ಛಾಯ ನಾಶಗೊಳಿಸಿ ಆನೆಯ ಕಾಲಿಗೆ ಬಂಧಿಸಿ ಘಾಸಿಪಡಿಸುತ್ತಿರುವನು. ಬಿರುಸು ನುಡಿಯಾಡುವ ನರಾಧಮನಿಗೆ ಈ ಕ್ರೂರ ಕಾರ್ಯವೆಸಗದಿರೆಂದು ಸಾದರಪಡಿಸುವರಾರು? ತಮ್ಮ ಪಾವನ ನಾಮ ಸ್ಮರಣೆ ಗೈಯುವೆವು. ಪಾದದಡಿಯಲ್ಲಿ ಬಿದ್ದ ಈ ಒಡವಿಯ ಒಡೆಯನ ತಾಪವಂ ಒಡನೆ ಬಂದು ತಡಮಾಡದೆ ಬಿಡಿಸು. ಶಾಂತಿಪಡಿಸು. ಆ ಜಡ ಮನುಜರು ಒಡೆ ಜಾಂಬಕಿಯರು ಎನ್ನಂತೆ ಚಡಪಡಿಸುತ್ತ ಅಡವಿ ಅರಣ್ಯದಲ್ಲಿರ್ಪ, ಗಿಡ ಗಂಟಿಗಳಿಗೆ ಕಣ್ಣೀರಿಟ್ಟು ಗೋಳಾಡುವಂತೆ ಮಾಡಿದರೆ ತಮ್ಮ ಉಪಕಾರ ಜನ್ಮಾಂತರ ಮರೆಯಲಾರಳೀ ನಾರಿ. ಪರೋಪಕಾರಿ.

(ಬಸವೇಶ್ವರರು ಜಂಗಮ ರೂಪದಲ್ಲಿ ಪ್ರತ್ಯಕ್ಷರಾಗುವರು)

ಬಸವಣ್ಣ : ಕುಂಕುಮದೊಡೆಯನ ಅಭಿಮಾನದಲ್ಲಿ ಶಂಕರನ ಶುಭಾಂಕದೊಳು

ಬಿಂಕದಂಕಿತವಾಗಿ ಶೋಭಿಸುವ ಪಂಕಜವದನಿ. ಪಾರ್ವತೀದೇವಿಯನ್ನು ನಾಚಿಸುವ ಪತಿವ್ರತಾ ಶಿರೋಮಣಿ, ಕಲ್ಯಾಣಮ್ಮ ತಾಯಿ ನಿನ್ನಂತೆ ಪತಿ–ಹಿತ ಬಯಸುವರಂ ಕ್ಷಿತಿಯೊಳು ನಾಕಾಣೆ. ಹೇ ! ಮೃಡಾಣೀಧರ ಕೂಡಲಸಂಗಮೇಶ್ವರ ಅನ್ಯರ ಜೀವ ತನ್ನ ಜೀವವೆಂದು ಪ್ರತಿನಿತ್ಯ ಸಕಲ ಜೀವಾತ್ಮರಿಗೆ ಲೇಸನೆ ಬಯಸಿ ನಿನ್ನನ್ನು ಸ್ತುತಿಸುವ ಸತ್ಯ ಶರಣರಾದ ಹರಳಯ್ಯ ಮಧುವಯ್ಯನವರಿಗೆ ಶಿವನಾಮ ಸ್ಮರಣೆಗೈಯುತ್ತ ಪಾದೋದಕ ಹೊಡೆದರೆ ಕಂಗಳು ಬರುವವು. ಪ್ರಣವ ಪಂಚಾಕ್ಷರಿ ಮಂತ್ರವನ್ನು ಅಂತರಂಗದಿ ಪಠಿಸುತ್ತ ಈ ಪಾದೋದಕವನ್ನು ಇರ್ವರ ನೇತ್ರಗಳಿಗೆ ಸಿಂಪಡಿಸು. ಶರಣ ಧರ್ಮದ ಮಹಿಮೆ ಲೋಕಕ್ಕೆ ತೋರಿಸು.

(ಪಾದೋದಕ ತಂದು ಕಲ್ಯಾಣಮ್ಮ ಸಿಂಪಡಿಸುವಳು.)

ಮಧುವರಸ : ಬಂದೊದಗಿದ ಅಂಧತ್ವವನ್ನು ಇಂದು ಪರಿಹರಿಸಿದ ತಂದೆ ಬಸವೇಶ ವಂದಿಸುವೆನು. ವೀರಶೈವರ ಹೃದಯಾಂಗಣದಲ್ಲಿ ಆನಂದದ ಸರೋವರ ತುಂಬಿಸಿದ ಅಣ್ಣ ಜಗದಣ್ಣ ಬಸವಣ್ಣ.

ಬಸವಣ್ಣ : (ಅಂತರವಾಣಿ) ಶುದ್ಧಮೂರ್ತಿ ಮಧುವಯ್ಯನವರೆ ಅಧಮರಂ ವಧಿಸುವದು ಶರಣ ಧರ್ಮದ ಗುರಿಯಲ್ಲ. ಕಷ್ಟದಲ್ಲಿಯೂ ಸುಖದಲ್ಲಿಯೂ ಸಮತಾಭಾವದಿಂದ ಇರುವದು ಶರಣ ಲಕ್ಷಣ. ಕಟುಕರ ಕೇರಿಯಾಗುವ ಈ ಕಲ್ಯಾಣನಗರದಲ್ಲಿ ನೀವಿರುವದು ಉಚಿತವಲ್ಲ. ನೀವೆಲ್ಲರು ರಮ್ಯವಾದ ಒಂದೊಂದು ಸ್ಥಾನ ಆಶ್ರಯಿಸಿರಿ. ಕೃಷ್ಣ ಮಲಪ್ರಭೆಯರ ಸಂಗದಿಹ ಚಲುವ ಕೂಡಲಸಂಗಯ್ಯನಲ್ಲಿ ಎನ್ನಂಗ ಲಿಂಗಾಂಗ ಸಾಮರಸ್ಯ ಹೊಂದುವದು. ಕಕ್ಕಯ್ಯನವರು ಕಕ್ಕೇರಿಯಲ್ಲಿ, ಮಡಿವಾಳ ಮಾಚರಸರು ದೇವರ ಹಿಪ್ಪರಗಿಯಲ್ಲಿ, ನುಲಿಯ ಚಂದಯ್ಯನವರು ಚೆನ್ನಬಸವರಾದಿಯಾಗಿ ಉಳವಿ ಮಾರ್ಗವಾಗಿ ಪೋಗಿ ಸಿಕ್ಕ ಗವಿ ಪೊಕ್ಕು ನಿಮ್ಮಿಷ್ಟಲಿಂಗದಲ್ಲಿ ಸಮರಸ ಹೊಂದಿರಿ. ತಕ್ಷಣದಿ ಪೋಗಿರಿ. ಇಲ್ಲಿಂದ ಸಾಗಿರಿ.

ಜಗದೇವ : ಶೂನ್ಯಪೀಠವನ್ನು ನಿರ್ಮಿಸಿ ನಿರಂಜನ ಜಗದ್ಗುರು ಅಲ್ಲಮಪ್ರಭುದೇವರಿಗೆ ಪಟ್ಟಗಟ್ಟಿದ ಭುವನದ ಭಾಸ್ಕರ ಬಸವೇಶ್ವರ, ಇನ್ನುಳಿದ ಪ್ರಮಥರು ಕಲ್ಯಾಣ ಬಿಟ್ಟು ಅಗಲಿದ ಮೇಲೆ ಧರ್ಮ ಎಲ್ಲಿ ಉಳಿಯಿತು? ಕಲಚೂರ್ಯ ರಾಜ್ಯ ಹೇಗೆ ಇರುತ್ತದೆ?

ನಮ್ಮ ಗುರಿ ಮುಟ್ಟುವ ಸಮಯ ಹತ್ತಿರವಿದೆ. ಮತ್ತೆ ಚಾಲುಕ್ಯ ಸಾಮ್ರಾಜ್ಯ ತಲೆ ಎತ್ತಿ ಮೆರೆಸುವೆವು. ನಮ್ಮ ರೋಷ ಹೆಡೆಯೆತ್ತಿ

ಕುದಿಯುತ್ತಿರುವದು. ಇನ್ನು ಒಂದು ನೂರು ದಿವಸಕ್ಕೆ ಬಿಜ್ಜಳನ ಮರಣವೆಂದು ಚೆನ್ನಬಸವಣ್ಣ ಕಾಲಜ್ಞಾನ ವಾಣಿ ಇದೆ. ಮಲ್ಲಿಬೊಮ್ಮನೊಡಗೂಡಿ ಬಿಜ್ಜಳನ ಪಲ್ಲಕ್ಕಿ ಉತ್ಸವದಲ್ಲಿ ಪಂಜು ಕಾರ್ಯ ಕೈಗೊಂಡು ಅರಸನ ಪರಿಸಮಾಪ್ತಿ ಮಾಡುವೆವು.

ಬಿಜ್ಜಳ : ಭಲ ಎಲೈ ! ಸಾರಥಿ, ಕಲ್ಯಾಣದೋಲಗವು ಹಾಳು ದೇಗುಲಕ್ಕೆ ಸಮನಾಗಿ ಕಾಂಬುವದು. ಮಧ್ಯಾಹ್ನದಲ್ಲಿ ನಕ್ಷತ್ರಗಳು ಎದ್ದು ತೋರಿದವು. ಧೂಮಕೇತು ಬಾಲಚುಕ್ಕೆಗಳು ಕಂಡವು. ಕೋಲಾಹಲ ಧ್ವನಿ ಎಲ್ಲ ದಿಕ್ಕುಗಳಲ್ಲಿ ಕೇಳಿಸಿತು. ಕನ್ನಡಿಯಲ್ಲಿ ತಲೆ ಇಲ್ಲದ ಬಿಂಬ ನೋಡಿದೆ. ನಾನು ಕುಳಿತ ಸಿಂಹಾಸನ ಘಡಘಡ ನಡುಗಿತು. ಮೇಘಗಳು ರಕ್ತದ ಹನಿಗಳನ್ನು ಸುರಿಸಿದವು. ಕೆಟ್ಟ ಶಕುನ ಎಷ್ಟೆಂದು ಹೇಳಲಿ. ನಿನ್ನಿನ ರಾತ್ರಿ ಸ್ವಪ್ನದೊಳು ಕೆಂಬಣ್ಣದ ವಸ್ತ್ರಧರಿಸಿ ಕೆಂದಗಿರುವ ಪುಷ್ಪದ ಮಾಲೆಯ ಸರದಿಂದಲಂಕೃತನಾಗಿ ದಕ್ಷಿಣ ದಿಕ್ಕಿಗೆ ಕೋಣಗಳು ಹೂಡಿದ ರಥದಲ್ಲಿ ಕುಳಿತು ಪ್ರಯಾಣ ಬೆಳೆಸಿದಂತಾಯಿತು. ಇದೆಂಥ ವಿಚಿತ್ರ.

ಜಗದೇವ : ಭಲಾಭಲಾ ಚತುರಂಗ ಬಲದಿ ಕುತಂತ್ರದಿಂದ ಕಲ್ಯಾಣ ರಾಜ್ಯವನ್ನಾಳುವ ಕುಲಗೇಡಿ, ನಿಲ್ಲು. ಹುಲಿಗಂಜಿ ಹುತ್ತ ಹೊಕ್ಕರೆ ಸರ್ಪ ಕಚ್ಚದೆ ಬಿಡದು. ಈ ಜಗದೇವನ ಬಲೆಯಿಂದ ಇನ್ನೆಲ್ಲಿಗೆ ಹೋಗುವಿ? ಖಿಲ್ಲಾ! ತಡಮಾಡದೆ ನಿನ್ನೆಲುಬುಗಳನ್ನು ಪುಡಿಪುಡಿಮಾಡುವೆ. ಕಳ್ಳಾ ನೀನಾವಲ್ಲಿ ಅಡಗಿ ಕುಳಿತರೂ ಶರೀರ ಹೋಳು ಮಾಡುವೆ.

ಅಲಲಲ ಎನ್ನ ಝಳಪಿಸುವ ಖಡ್ಗದ ಹೊಡೆತವಂ ತಾಳು, ಬಂದೊದಗಿತು ನಿನ್ನ ಜೀವಕ್ಕೆ ಗೋಳಾ.

ಬಿಜ್ಜಳ : ಎಲೈ ! ಪೋರಾ, ಮೀರಿದವನೆಂದು ಬಾರಿಬಾರಿಗೆ ಸಾರುವ ಚೋರ ನೀನಾರು? ಎನ್ನ ಕರದಿ ಧಾರುಣ ಮಾಡಿದ ಕಠಾರಿಯಿಂದ ನಿನ್ನ ದೇಹವಂ ಚರ್ರನೆ ಹರಿದು ನೆತ್ತರವಂ ಕಾರಿಸಿ ಸೂರೆಗೊಂಬುವೆ. ಸೀರನಾಯಿಯ ಮರಿಯಂತೆ ಇರುವ ನಿನ್ನಂ ಮಣ್ಣುಗೂಡಿಸಲಿಕ್ಕೆ ಬಣ್ಣದ ಕೋಲುಗಳ್ಯಾತಕ್ಕೆ ಬೇಕು?

ಬುದ್ಧಿಗೇಡಿಯೇ, ಉದ್ಧಟನದಿಂದ ಬಂದ ನಿನ್ನಂ ಒದ್ದೊದ್ದು ಮುದ್ದಿಗೊಳಿಸಿ ಛಿದ್ರಿಸಿ ಹದ್ದಿನಂತೆ ಹಾರಿಸಿ ನಿದ್ರೆಗೊಳಿಸಿ ಪ್ರಸಿದ್ಧನಾಗಿ ಯುದ್ಧ ಮಾಡದೆ ಗೆದ್ದು ಬಿಡುವೆ. ಮದ್ದಾನೆಯಂತಹ ಈ ಬಹದ್ದೂರನೆದುರಿನಲ್ಲಿ ನಿನ್ನಂಥ ಮುದ್ದು ಮಗುವು ಯುದ್ಧ ಮಾಡಬಹುದೆ? ಸದ್ಯಕ್ಕೆ ಸದನಕ್ಕೆ ಹೋಗು. ದೃಷ್ಟಿಗೆ ಮರೆಯಾಗು.

ಜಗದೇವ : ಭಲಾಭಲಾ ಕೋಣಿನಂಥಪ್ರಾಣಿಯೇ. ಪುಣ್ಯಾ ಪಾಪಗಳ ತೂಕ ಮಾಡುವ ಚಂಡಕಿರಣ ಮಾರ್ತಂಡನ ಮನ್ನಣೆಯ ಮಗನಾದ ಯಮಧರ್ಮನ ಸನ್ನಿಧಾನಕ್ಕೆ ನಿನ್ನ ಪ್ರಾಣವಂ ಅಣಿ ಮಾಡುವ ಕಾರಣ ಬೆನ್ನು ಕೊಟ್ಟು ಓಡಿ ಮನೆಸೇರಲಿಕ್ಕೆ ನಾನೇನು ಬಲಹೀನನಲ್ಲ. ನಿನ್ನಂತೆ ಅಸಮರ್ಥನಲ್ಲ. ಮಹಾನ್ ಘನಶೌರ್ಯವಂತರು ಖೂನವಿಲ್ಲದೆ ಹೋದರು. ಇಂಗು ತಿಂದ ಮಂಗನಂತೆ ಹಂಗು ಹರಿದು ಮಾತಾಡಿದರೆ ನಿನ್ನ ದಂಗುಬಡಿಸಿ ಈ ಬಗ್ಗತ್ತೆಯಿಂದ ಕುತ್ತಿಗೆಯನ್ನು ಕತ್ತರಿಸಿ ನೆತ್ತರವಂ ಚಿಮ್ಮಿಸಿ ಗೊತ್ತು ಗೆಡಿಸುವದು ಸತ್ಯ. ಮೃತ್ಯುದೇವಿಯು ನಿನ್ನ ಹತ್ತಿರ ನಿಂತು ಹೊತ್ತು ಕಾಯುತ್ತಿರುವಳು. ತತ್ತವಕದಿಂ ಹೆತ್ತಾಯಿ ಹೆತ್ತಾತನಂ ನೆನಸು.

ಬಿಜ್ಜಳ : ಭಲ ಎಲ್ಯೆ ! ಕಾರ್ಗಲ್ ಸಿಡಿಲಿನಂತೆ ಭೋರ್ಗರಿದು ದೀರ್ಘಸ್ವರದಿ ಬೊಬ್ಬಿರಿದರೆ ಬೆದರುವರಾರು? ಭೂವಲಯದಿ ಮೆರೆಯುವ ಸಾವಿರಾರು ರಾಜರ ಗರ್ವ ಮುರಿದು ಸೇವೆ ಕೈಗೊಂಡು ವಿಶ್ವದೊಳಿರ್ಪ ಅಸಮ ದೇಶಾಧಿಪರಿಗೆ ಕಾಳಸರ್ಪ ರೂಪನೆನಿಸಿ ಗೋಳಾಡಿಸಿದ ಈ ಬಲವಂತನಿಗೆ ಹಾಳು ಮಾಡುವದು ಯಾರಿಂದಲು ಸಾಧ್ಯವಿಲ್ಲ. ಭಳಿರೆ ! ಶಾಮಲಾವತಿ ಪತಿ ಯಮರಾಜನಿಂದಾಗದಾಗ ಯಃಕಶ್ಚಿತ ಹುಡುಗನಿಂದಾಗುವದೇನು? ಸಿಕ್ಕಸಿಕ್ಕಂತೆ ಮಾತಾಡಿ ಎನ್ನ ತೆಕ್ಕೆಯೊಳು ಸಿಕ್ಕು ದುಃಖಕ್ಕೊಳಗಾಗಬೇಡ. ಹೇ ! ಕಂದಾ ನಿನ್ನೊಡನೆ ದುಂದುಕಾಳಗ ಮಾಡಿದರೆ, ಈ ನೆರೆದ ಮಂದಿಯಲ್ಲಿ ಮನ್ನಣೆ ಸಿಗಲಾರದು. ತಾಳಗೆಟ್ಟ ಶಬ್ದಗಳಾಡಿದರೆ ವ್ಯಾಳ್ಯ ತಪ್ಪಿದ್ದಲ್ಲ ಪೋರಾ, ನೀನಾವ ದೊಡ್ಡ ಶೂರ.

ಜಗದೇವ : ಅಲಲಲ ಮುದಿ ಮಸಣದ ಮೂರ್ಖಾ ನೀನಾವ ಬಹದ್ದೂರ. ಆವ ಯುದ್ಧದೊಳು ಪ್ರಸಿದ್ಧನಾಗಿರುವಿ. ಅಬದ್ಧ ನಿನ್ನಂ ಗುದ್ದಿದರೆ ಎನ್ನ ದಬ್ಬಿಗೆ ಭಯಸ್ತನಾಗಿ ಬಿದ್ದು ಖಬರಿಲ್ಲದೆ ಮುದ್ದಿಕೊಂಡು ಎದ್ದೋಡಿ, ಕದ್ದು ಸದ್ದಿಲ್ಲದೆ ಆದಿಶೇಷನ ದೇಶವಂ ಸೇರುವಿ. ಪರಾಕ್ರಮನಾದರೆ ಯುದ್ಧಕ್ಕೆ ಸಿದ್ಧನಾಗು. ಎನ್ನಂ ಗೆದ್ದು ಸದನದಲ್ಲಿರ್ಪ ನಿನ್ನ ಸುದತಿಯ ಕೂಡ ಮುದ್ದು ಮಾತುಗಳಾಡುವದು ನೇಮದ್ದಲ್ಲಾ. ಶುದ್ಧ ಮೂರ್ಖಾ ಬುದ್ಧಿಗೇಡಿಯಾದ ದಶಕಂಟನು ರುದ್ರದೇವರ ಭದ್ರಮಯವಾದ ಅದ್ರಿಯಂ ಎತ್ತ ಹೋಗಿ ಕೈಗಳ ಸಿಕ್ಕು ಒದ್ದಾಡಿದಂತೆ ಕದನಕ್ಕೆ ಸಿದ್ಧನಾಗು. ಈ ಕರಾಳ ಯುದ್ಧದಿಂ ನಿನ್ನ ಶರೀರ ಧರಿತ್ರಿಗೆ ಕೆಡಹುವೆನು ನೋಡು, ದಿಕ್ಕೆಟ್ಟು ಪಲಾಯನ ಮಾಡು.

ಬಿಜ್ಜಳ : ಭಲ ಎಲ್ಯೈ ! ಮಂದ ಬುದ್ಧಿಮೋರನೇ, ಕಂದನ ಸರಿಯೆಂದು ಇಂದು ಸುಮ್ಮನಿದ್ದರೆ ಕುಂದು ಮಾತನ್ನಾಡುವೆಯಾ? ಅಂಧಹೀನ, ಓಂದಾದ ಸುದ್ದಿಯಂ ತಂದು ತಂದು ಎನ್ನ ಮುಂದೆ ಸಂದೇಶ ಪಡಿಸಬೇಡ. ಭಲದಂಕರಾದ ಕಲಿಗಳು ತಮ್ಮ ಬಲವನ್ನು ತಾವೇ ಹೇಳಲಾರರು. ಹಲವು ಮಾತುಗಳಿಂದ ಏನು ಪ್ರಯೋಜನ? ನಿತ್ಯದಲ್ಲಿ ಹತ್ತಾರು ಕೊಲೆ ಮಾಡಿಸುವ ನನಗೆ ನೀನೇನು ಮಹಾ? ಎನ್ನ ಕೂಡ ಕಾಳಗ ಮಾಡಿ ನಿನ್ನ ಜೀವ ಉಳಿಸಿಕೊ ಕೋತಿ, ಮಿಶ್ರ ಕುಲಜಾತಿ.

ಜಗದೇವ : ಅಲಲಲ ಎಲ್ಯೈ ! ಜಡ ಬುದ್ಧಿ ಮೂಢನೆ, ಈ ಬಲಾಢ್ಯನ ಹೊಡೆತಕ್ಕೆ ಪೊಡವಿಯಲ್ಲಿರ್ಪ ಕಡುಪಾಪಿಗಳೆದೆಯು ಧಡಲ್ ಧಡಲ್ಲೆಂದು ಬಿಡುವಾಗ ನಿನ್ನಂಥ ಧೈರ್ಯಗೇಡಿಯು ಧರಿತ್ರಿಯೊಳು ಬಿದ್ದು ಮಡಿಯುವದೇನು ತಡ. ಹೇಡಿ ನಿನ್ನ ಕಡೆಗಾಲವು ಸಮಿಪಿಸಿತೆಂದು ಆಕಾಶ ಮಂಡಲವೆ ನುಡಿಯುವದು. ಪರರಿಗೆ ಶರಣು ಹೋಗೆನ್ನಲಿಕ್ಕೆ ನಾನೇನು ಅಸಮರ್ಥನಲ್ಲ. ಭಂಡಾ ನಿನ್ನ ಮದೋರ್ದಂಡವಾದ ಖಡ್ಗದಿಂದ ಮಂಡಲಕ್ಕೆ ಕೆಡಹಿ ಮಂಡೆಯೊಳಿರುವ ಮಿದುಳು ಖಂಡವಂ ತೆಗೆದು ಭುಜದ ತಿಂಡಿಯಂ ತೀರಿಸಿಕೊಳ್ಳುವೆ. ನಿನ್ನ ಶರೀರದೊಳಡಗಿರ್ದ ರಕ್ತವಂ ಧಾರುಣಿಗೆ ಕಾರಿಸಿ, ಘೋರ ಘೋರೆಂದು ಘೋರ್ಗರೆವ ನದಿಯಾಗಿ ಹರಿಸುವೆನು. ಕಾಲಭೇದವನ್ನು ಅರಿಯದ ಬಿಜ್ಜಳ ನೀನೆಂಥ ಅವಿವೇಕಿ. ಕಾಲಬಿಟ್ಟ ಕತ್ತೆಯಂತೆ ಕೀಳ ಕೆಲಸಗಳನ್ನೆಸಗಿ ವ್ಯಾಳ್ಯ ತಂದುಕೊಂಡಿಯಾ. ಹೊಂದಗೇಡಿಯೆ ಬಂದದ್ದು ಭೋಗಿಸು. ಜಾಲಗಾರನ ಬಲೆಯಲ್ಲಿ ಸಿಲುಕಿದ ಮಿನಿನಂತೆ ಒದ್ದಾಡಿ ಸಾಯಿ. ದೇಹ ನೀಗು.

ಎಲ್ಯೈ ! ಕಾಗಿಜಟ್ಟಿ, ಗೂಗಿಜಟ್ಟಿ ಕೋಗಿಲಜಟ್ಟಿಗಳಿರಾ, ಪಾತಕ ಬಿಜ್ಜಳನ ವಧೆಯಾಯಿತೆಂದು ಕೂಗುತ್ತಾ ಜಗವೆಲ್ಲಾ ಸಾರಿರಿ.

ಎಲ್ಯೈ ! ವೃಕ್ಷಾದಿ ಕ್ರಿಮಿಕೀಟಕಾದಿಗಳಿರಾ ಕಲಚೂರ್ಯ ಬಿಜ್ಜಳನು ಚಾಲುಕ್ಯರಿಂದ ಕೊಲ್ಲಲ್ಪಟ್ಟನೆಂದು ದೇಶದ ಮೂಲೆ ಮೂಲೆಗೆ ಹರಡಿಸಿರಿ. ಆಹೇ ! ಧರ್ಮ ದೇವತೆ ಪಂಚಮಹಾಭೂತಗಳಿರಾ, ಕರ್ಮ ಧರ್ಮದ ಭೀತಿ ಇಲ್ಲದ ಸ್ವಜನ ದ್ರೋಹಿ, ಸ್ವಾರ್ಥಿ ಬಿಜ್ಜಳನಿಗೆ ಆದ ಶಾಸ್ತಿ ಸಾರಿರಿ.

ಸಮಾಪ್ತ

◆◆◆

ಅಲ್ಲಮ ಪ್ರಭು

ಸಣ್ಣಾಟ

ಪರಿವಿಡಿ

ಗಣಸ್ತುತಿ

ನಾರದನ ಪ್ರವೇಶ

ಕೈಲಾಸ ಪ್ರವೇಶ

ಅಲ್ಲಮನ ಪ್ರವೇಶ

ಮಾಯೆಯ ಪ್ರವೇಶ

ದೇವಾಲಯ ಪ್ರವೇಶ

ಮಾಯಾ ಮಂದಿರ ಪ್ರವೇಶ

ದೇವಾಲಯ ಪ್ರವೇಶ

ಪಾರ್ವತೀ ಮಂದಿರ ಪ್ರವೇಶ

ಭೂಲೋಕ ಪ್ರವೇಶ

ಕೌಶಿಕರಾಜನ ಪ್ರವೇಶ

ಸಾತ್ವಿಕೀ ಮಂದಿರ ಪ್ರವೇಶ

ಅರಮನೆಯ ಪ್ರವೇಶ

ಸಾತ್ವಿಕಿ–ಕೌಶಿಕ ಪ್ರವೇಶ

ದೂತೆ–ಅಲ್ಲಮ ಪ್ರವೇಶ

ಮುಕ್ತಿ ಪ್ರವೇಶ

ಗಣಸ್ತುತಿ

ಪದ್ಯ :

ಭಜಿಸುವೆ ಶ್ರೀಗಜವದನ ಗಿರಿಜಾತನಯ
ಆದಿ ಮೂರುತಿ ಸದಾ ಮಂಗಲ
ಹೂಬೇಹೂಬಾ ನೀ ಬಾ ಶಿವನಲ್ಲೆ
ಮೊದಲಿಗೆ ಸ್ತುತಿಸುವೆವು ನಿಮ್ಮನ್ನು

* * *

ಪದ : ತಾಳ : ಕೇರವಾ ; ರಾಗ : ಅಸ್ಸಾ

ಬಾ ಗಜವದನ, ಬಾ ಗಜವದನ, ಬಾ ಗಜವದನ ॥ ಪಲ್ಲ ॥

ಮೋಕ್ಷಕೆ ಧೀರಾ, ವಾಸುಕಿ ಹಾರಾ
ಪಾಶಾಂಕುಶಧರ, ಈಶಗಣೇಶ್ವರ । ಬಾ ಗಜ..... ॥ ೧ ॥

ದುರಿತ ಸಂಪರಣ, ಸುರನಂತ ಚರಣ
ವರಗುಣಭರಣ, ತರಳರೊಳನುದಿನ । ಬಾ ಗಜ..... ॥ ೨ ॥

ನುತಜನಪಾಲಾ, ಯತಿಜನಲೋಲಾ
ದಶಕರಬಾಲಾ, ಸದ್ಗುಣ ಶೀಲಾ । ಬಾ ಗಜ........ ॥ ೩ ॥

೧

ನಾರದನ ಪ್ರವೇಶ

ನಾರದ – ಪದ : ತಾಳ : ಕೇರವಾ; ರಾಗ : ಮಿಶ್ರಕಾಫಿ

ಶಿವಶಂಕರಾss ಪಾಲಿಸೋ (ದುಗುಣ) ॥ ಪಲ್ಲ ॥

ಭವಬಾಧೆಯನ್ನು ದೂಡಿ, ಧ್ರುವಪದವಿಯನ್ನು ನೀಡಿ
ಬಹು ಪ್ರೀತಿಯಿಂದ ಎನ್ನ । ಶಿವಶಂಕರಾs ಪಾಲಿಸೋ
(ದುಗುಣ) ॥ ೧ ॥

ಕಾಮಕ್ರೋಧಗಳನು ತ್ಯಜಿಸಿ, ಪ್ರೇಮದಿಂದ ನಿನ್ನನು ಭಜಿಸಿ
ಕ್ಷೇಮ ಪೊಂದುವೆನಾಂ ಭವದಿ । ಶಿವಶಂಕರಾs ಪಾಲಿಸೋ
(ದುಗುಣ) ॥ ೨ ॥

ಕರದಲ್ಲಿ ಶೂಲವ ಧರಿಸಿ, ಶಿರದಲ್ಲಿ ಚಂದ್ರನ ಇರಿಸಿ
ಮೆರೆವ ಮನ್ಮಥ ಧ್ವಂಸಿ । ಶಿವಶಂಕರಾs ಪಾಲಿಸೋ
(ದುಗುಣ) ॥ ೩ ॥

ನಾ.– ಶಿವಶಂಕರ ! ಶಿವಶಂಕರ !!

ದೂತೆ–ಏನಿದು? ಮನುಷ್ಯನೋ, ಹೋತೋ? ಕೆಳಗೆ ನೋಡಿದರೆ ಎರಡುಕಾಲು ಇವೆ. ಮೇಲೆ ಹೋತಿನಂತೆ ಗಡ್ಡs ಅವೆ. ಗಡ್ಡs ನೋಡಿ ಹೋತು ಅಂದೇನ. ಕೆಳಗೆ ಎರಡು ಕಾಲು ಇವೆ. (ಸಮಿಪಕ್ಕೆ ಬರುವಳು)

ನಾ.– ಭ್ರಷ್ಟ ಮುಂಡೆ ಮುಟ್ಟಿಗಿಟ್ಟಿ ; ದೂರ ಸರಿದು ನಿಲ್ಲು.

ದೂ.–ಹೋತು ಮಾತಾಡತೈತಿ. ಮಾತಾಡುವ ಹೋತು ಇದು ! ಸ್ವಾಮಿ, ತಾವು ದಾರು? ತಮ್ಮ ಪೂರ್ವಾಪರವೇನು? ವಿಸ್ತಾರವಾಗಿ ಹೇಳಿರಿ.

ನಾ.– ದೂತೆ, ಹೇಳುತ್ತೇನೆ ಕೇಳು.

ದೂ.–ಅದೇನಿರುವುದು ಹೇಳುವಂಥವರಾಗಿರಿ.

ನಾ. ಪದ : ತಾಳ : ಕೇರವಾ; ರಾಗ : ಭೂಪ

ಬ್ರಹ್ಮಪುತ್ರ ನಾರದ, ಕಲಹ ವಿಶಾರದ
ಎಂದು ಇರುವದೋ ಕೀರ್ತಿ ಜಗದಲ್ಲಿ
ಯಾರಿಗೂ ತಿಳಿಯದೋ ಅದರ ನೆಲಿ
ಕರ್ಮವ ಲಯಮಾಡಿ, ಧರ್ಮವ ಸ್ಥಿರಮಾಡಿ
ಜಗದಿ ಕಲಹ ಹೂಡಿ, ಲೋಕ ಉದ್ಧಾರ, ಮಾಡ್ವ ರೂಢಿ ॥ ೧ ॥

ನಿತ್ಯ ಉದಯದಿ ಎದ್ದು, ಶಿವಸ್ತುತಿಯನ್ನು ಗೈದು
ಮೂರು ಲೋಕವನ್ನೆಲ್ಲಾ ಸಂಚರಿಸಿ
ಶಿವಶರಣರ ಕಂಡು ಮಮಕರಿಸಿ
ದುಷ್ಟರ ಶಿಕ್ಷಿಸಿ, ಶಿಷ್ಟರ ರಕ್ಷಿಸಿ
ಲೋಕ ಉದ್ಧರಿಪುದು ನನ್ನ ನೇಮ, ನನ್ನ ನೇಮ ॥ ೨ ॥

ಧರೆಯೊಳು ಫಲಪುರದೊರೆ ಸಿದ್ಧಲಿಂಗನ
ಚರಣವ ಸ್ಮರಿಸುವೆ ನಿಜದಿಂದss ।
ನರ ಜನ್ಮಕೆ ಇದು ಆನಂದ
ಹರಿವುದು ಭವಬಂಧ ಈಶನ ದಯದಿಂದ (ದುಗುಣ)
ಕವಿಕುಲರತ್ನ ಶಿವಾನಂದ ಆನಂದ ॥ ೩ ॥

ದೂತೆ, ನಮಗೆ ಬ್ರಹ್ಮಪುತ್ರ ಅಂತಾರ.

ದೂ.–ನನಗೂ ಅಂತಾರ !

ನಾ.– ನಿನಗೇನು ಅಂತಾರ?

ದೂ.–ನಿಮಗೆ ಬಾರಮ್ಮನ ಪುತ್ರ ಅಂದ್ರ, ನನಗೆ ಬಿರಿಬಿರಿ ಹೋಗಮ್ಮನ ಪುತ್ರಿ ಅಂತಾರ.

ನಾ.– ಛೀ ಮೂರ್ಖಳೆ, ಬಾರಮ್ಮನ ಪುತ್ರ ಅಲ್ಲ; ಬ್ರಹ್ಮಪುತ್ರ ಅಂತಾರ.

ದೂ.–ಯಾರು, ತಾವು ಸಕಲ ಸೃಷ್ಟಿಗೆ ಅಧಿಪತಿಯಾದ ಬ್ರಹ್ಮದೇವರ ಪುತ್ರರೆ? ಹಾಗಾದರೆ ತಮ್ಮ ನಾಮವೇನು?

ನಾ.– ದೂತೆ, ನನಗೆ ನಾಮವೇ? ಹೀಗೆ ಹಚ್ಚಿದರೆ ಅಡ್ಡನಾಮ ! ಹೀಗೆ ಹಚ್ಚಿದರೆ ನೀಟನಾಮ!! ಹೀಗೆ ಹಚ್ಚಿದರೆ ಚಂದ್ರನಾಮ!!!

ದೂ.–ಸ್ವಾಮಿಗಳೇ, ನಾಮವೆಂದರೆ ಹಚ್ಚುವ ನಾಮವಲ್ಲ. ನಾನು ಕೇಳಿದ್ದು ತಮ್ಮ ನಾಮ. ತಮ್ಮ ನಾಮಾಂಕಿತವನ್ನು ಕೇಳಿದೆ.

ನಾ.–ದೂತೆ, ನಮಗೆ ನಾರದರು ಅಂತಾರ;ಮತ್ತು ದೇವರ್ಷಿ ನಾರದರು ಅಂತಾರ.

ದೂ.–ದೇವತೆಗಳಲ್ಲಿ ಶ್ರೇಷ್ಠ ಋಷಿಗಳಾದ ನಾರದರೆಂಬುವದು ಗೊತ್ತಾಯಿತು. ಮತ್ತೆ ತಮ್ಮ ಉದ್ಯೋಗವೇನು?

ನಾ.–ದೂತೆ, ನನ್ನ ಉದ್ಯೋಗವೆಂದರೆ ಹರಿಹರರಲ್ಲಿ ಭೇದವನ್ನು ಮಾಡದೆ ಸರ್ವರೂ ಶಿವರೂಪವೆಂದೇ ಭಾವಿಸಿ, ಶಿವಾಗಮ ಪದ್ಧತಿಯನ್ನು ಅನುಸರಿಸಿ, ನಿತ್ಯ ಶಿವಕೀರ್ತನೆ ಪ್ರಾರ್ಥನೆಗಳನ್ನು ಈಶನಪ್ಪಣೆಯಿಂದ ಮಾಡುತ್ತ, ಮೂರೂ ಲೋಕಗಳಲ್ಲಿ. ಎಲ್ಲೆಲ್ಲಿ ಶಿವಭಕ್ತಿ ಚೆನ್ನಾಗಿ ನಡೆದಿರುವದೋ ಅಲ್ಲಲ್ಲಿ ಸಂಚಾರ ಮಾಡಿ ಆನಂದ ಪಡೆಯುತ್ತ, ಎಲ್ಲೆಲ್ಲಿ ಧರ್ಮವು ಲಯಹೊಂದಿ, ಕರ್ಮವು ಜಯಹೊಂದಿ ಮೆರೆಯುತ್ತಿರುವುದೋ ಅಲ್ಲಲ್ಲಿ ಸಂಚರಿಸುತ್ತ, ಧರ್ಮವು ಲಯಹೊಂದಲಿಕ್ಕೆ ಏನು ಕಾರಣ? ಅದಕ್ಕೆ ಯಾರು ಕಾರಣರು? – ಮುಂತಾದುದನ್ನು ತಿಳಿದು ಹರಿಹರರಿಗೆ ತಿಳಿಸಿ, ಅವರಿಂದ ಕರ್ಮವನ್ನು ಲಯಗೊಳಿಸಿ, ಧರ್ಮವನ್ನು ನೆಲೆಗೊಳಿಸುವ ಮೂಲಕ ಕಲಹವನ್ನು ಬೆಳಸುವುದರಿಂದ ನನಗೆ 'ಕಲಹಪ್ರಿಯ ನಾರದಾ' ಎಂದು ಕರೆಯುತ್ತಿರುವರು.

ದೂ.–ಸ್ವಾಮಿ, ತಮ್ಮ ಉದ್ಯೋಗ ಗೊತ್ತಾಯಿತು. ಆದರೆ ತಮ್ಮ ಪಯಣ ಎಲ್ಲಿಗೆ?

ನಾ.–ನನ್ನ ಕೈಯಲ್ಲಿರುವ ವೀಣೆಯನ್ನು ಬಾರಿಸುತ್ತಲೇ ಅದರ ತಂತಿಯಿಂದ ಹೊರಡುವ 'ಹುಂ' ಎಂಬ ನಾದಕ್ಕೆ ತಲೆದೂಗಿ ಆನಂದಪಡುವ ವೀಣಾ ಪಾಣಿಯೇ ಧನ್ಯಳು! ಪವಿತ್ರಪಾವನವಾದ ಈ ವೀಣೆಯ ಪುಣ್ಯಕ್ಕೆ ಪಾರವೇ ಇಲ್ಲ. ದೂತೆ, ಈ ತಂಬೂರಿಯ ತಂತಿಯಲ್ಲಿ ಯಾವ ನಾದ ಹುಟ್ಟುತ್ತದೆಂಬುದನ್ನು ಸರಿಯಾಗಿ ತಿಳಿದವರು ಕಡಿಮೆ. ಇದೊಂದು ನಿರ್ಜೀವ ವಸ್ತುವಾದರೂ ಸರ್ವಕ್ಕೂ ಆಧಾರವಾದ, ಮೂಲ ಮಂತ್ರವಾದ, ಮಂತ್ರ ರಾಜನಾದ, 'ಓಂ ನಮಃ ಶಿವಾಯ' ಪದದ ಸುನಾದದಿಂದ ಶುಚಿರ್ಭೂತರಾಗಿ ಶಿವಧ್ಯಾನದಲ್ಲಿ ಮಗ್ನರಾಗಿರುವವರು ತೀರ ವಿರಳ. ಅಂದ ಮೇಲೆ, ಜೀವಭಾವವಿದ್ದು ಸರ್ವವನ್ನೂ ಪರೀಕ್ಷಿಸಿ ನೋಡತಕ್ಕಂಥ ಮನಸ್ಸು ಮಾನವರದಾಗಬೇಕು. ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳಲ್ಲಿ ಯಾವ ಪ್ರಾಣಿಗೂ ಇಲ್ಲದಂಥ ಬುದ್ಧಿಶಕ್ತಿ ಮಾನವನಿಗಿದೆ. ತೋರುವಂಥ ಈ ಪ್ರಪಂಚವು ಸತ್ಯವೋ? ಮಿಥ್ಯವೋ? ಇದರಲ್ಲಿ ಸುಖವುಂಟೋ? ದುಃಖವುಂಟೋ? ಎಂಬುದು ತಿಳಿಯದು. ಇಂದು ಇದ್ದುದು ನಾಳೆ ಇರುವುದಿಲ್ಲ; ನಾಳೆ ಇದ್ದದ್ದು ನಾಡದು ಇರುವುದಿಲ್ಲ. ಹೀಗೆ ವಿಚಿತ್ರತರವಾದ ಗಾರುಡಿ ಆಟದಂತೆ ಕ್ಷಣ ಕ್ಷಣಕ್ಕೆ ಬದಲಾಗುತ್ತಿದೆ ಈ ಪ್ರಪಂಚ. ಎಲ್ಲಿಂದ ಬಂದೆನು? ಎಲ್ಲಿಗೆ

ಹೋಗುವೆನು? ಎಂಬುದನ್ನು ಅರಿಯರು ಸಾಮಾನ್ಯ ಜನರು. ತಾನು ಯಾರೆಂದು ಗುರುಮುಖದಿಂದ ತಿಳಿದುನೋಡದೆ, ಈ ಪ್ರಪಂಚವೇನೆಂಬುದನ್ನು ಗೊತ್ತು ಹಚ್ಚದೆ, ಇದರಲ್ಲಿ ಸುಖವುಂಟೋ ದುಃಖವುಂಟೋ ಎಂಬುದನ್ನು ಪರೀಕ್ಷೆ ಮಾಡಿ ನೋಡದೆ, ಶಿವಧ್ಯಾನ ಮಾಡದೆ, ಶಿವಮಂತ್ರ ನುಡಿಯದೆ ಇದ್ದವರು ಹುಟ್ಟಿನ ಮೂಲವನ್ನು ತಿಳಿಯರು. ಸುಮ್ಮನೆ ಹುಟ್ಟಿಬಂದು, ಸುಮ್ಮನೆ ಸತ್ತು ಹೋಗುವುದು ಸುಜ್ಞಾನವೆ? ಇದು ಸರಿಯಾಗಿ ಕಾಣುವುದೆ? ಮೇಲಾಗಿ ಈ ಅಮೂಲ್ಯವಾದ ಮನುಷ್ಯ ಜನ್ಮವು ಸುಲಭವಾಗಿ ಬಂದಿಲ್ಲ. ಜಾತಿಗೊಂದರಂತೆ ಎಲ್ಲಾ ಜಾತಿಯ ಗಿಡ-ಬಳ್ಳಿಗಳಾಗಿ ಹುಟ್ಟಿಬೆಳೆದು, ಜನ್ಮ ನೀಗಿ ಹೇಸಿಗೆಯಲ್ಲಿರುವ ಹುಳು ಮೊದಲಾಗಿ ಎಲ್ಲ ಜಾತಿಯ ಜೀವಿಗಳಾಗಿ ಸತ್ತು ಕೊನೆಗೆ ಮಾನವನಾಗಿ ತನ್ನ ತಾನು ಅರಿತು, ದುಃಖಮಯವಾದ ಈ ಸಂಸಾರದೊಳಗಿಂದ ಪಾರಾಗಿ, ತನ್ನ ಪಾದಾರವಿಂದವನ್ನು ಕಂಡು ಸುಖಿಯಾಗಿರಲೆಂದು ಕರುಣಾಕರನಾದ ಶಿವನು ಮಾನವನಿಗೆ ಅರಿವಿನ ಜನ್ಮವನ್ನು ದಯಪಾಲಿಸಿರುವನು. ಇಂಥ ಜನ್ಮವನ್ನು ವ್ಯಥಾ ಕಳೆದುಕೊಂಡರೆ, ನಾನಾಯೋನಿಗಳಲ್ಲಿ ಹುಟ್ಟಿ ದುಃಖವನ್ನು ಅನುಭವಿಸಬೇಕಾಗುವುದು. ಆದ ಕಾರಣ, ತಿಳಿದವರು ಈ ಮಾಯಾ ಪ್ರಪಂಚಕ್ಕೆ ಒಳಗಾಗದೆ, ಶಿವಪೂಜೆ, ಶಿವಭಜನೆ, ಶಿವಧ್ಯಾನವನ್ನು ಮಾಡಿ ಸದ್ಗತಿಯನ್ನು ಹೊಂದುವರು. ಮೂತೆ, ನಾನು ಈಗಿಂದೀಗಲೆ ಈ ನನ್ನ ವೀಣೆಯಿಂದ ಶಿವನಾಮವನ್ನು ನುಡಿಸುತ್ತ ಶಿವನ ದರ್ಶನಕ್ಕಾಗಿ ತೆರಳುವೆನು.

ದೂ.–ಯಾಕಾಗಬಾರದು ; ಹೋಗುವಂಥವರಾಗಿರಿ.

ನಾ. ಪದ : ತಾಳ : ತ್ರಿತಾಳ; ರಾಗ: ಮಿಶ್ರಕಾಪಿ

ನಮಿಸುವೆ ಶಂಕರಾssss (ದುಗುಣ)

ಏರು : ನಮಿಸುವೆ ಈಶ, ಹಿಮಗಿರಿವಾಸ
ಮನ್ಮಥ ಮದ ವಿನಾಶ ನಾಶ
ಪಾಲಿಸೊ ಎನ್ನ ಪಾರ್ವತೀರಮಣ
ಪಾವನತರ ತ್ರಿನಯನ ನಯನ
ಪಾವನಗಾತ್ರss ಪಾವಕನೇತ್ರss
ಪಾಲಿಸೊ ಎನ್ನನು ಗುರುನಾಥಾ, ನಿರುತ ನಮಿಸುವೆ.

೨

ಕೈಲಾಸ ಪ್ರವೇಶ

(ಪಾರ್ವತೀ ಪರಮೇಶ್ವರರು ಮಂಡಿಸಿದ್ದಾರೆ. ನಾರದನ ಆಗಮನ)

ನಾರದ– ಪತಿತ ಪಾವನ ಶಂಕರಾ. ತಮ್ಮ ಪವಿತ್ರ ಪಾದಕ್ಕೆ ಈ ದೀನ ನಾರದನು ಅಭಿವಂದಿಸುತ್ತಾನೆ.

ಪರಮಾತ್ಮ–ಏಳು ನಾರದಾ, ಎನ್ನ ಪಾದದಲ್ಲಿಟ್ಟ ಉನ್ನತ ಭಕ್ತಿಯಿಂದ ನೀನು ಧನ್ಯನೇ ಸರಿ. ನಿನ್ನ ಸದ್ಭಕ್ತಿಗೆ ಸಂತುಷ್ಟನಾಗಿರುವೆನು. ಈ ಆಸನದಲ್ಲಿ ಕೂಡ್ರುವಂಥವನಾಗು.

ನಾ.– ಯಾಕಾಗಬಾರದು; ಜಗತ್ತಿಗೆ ಮೂಲ ಕಾರಣಳಾದ ಪಾರ್ವತಿ ದೇವಿಯವರೇ, ತಮ್ಮ ಪಾದಕ್ಕೆ ನಮಸ್ಕಾರ ಮಾಡುತ್ತೇನೆ!

ಪಾರ್ವತಿದೇವಿ–ಮಗನೇ ನಾರದಾ, ನಿನಗೆ ಸದಾ ಶುಭವಾಗಲಿ! ಏಳು, ಈ ಆಸನದಲ್ಲಿ ವಿಶ್ರಮಿಸು.

ನಾ.– ಯಾಕಾಗಬಾರದು.

ಪ.– ನಾರದಾ, ಸರ್ವವೂ ಕ್ಷೇಮವಷ್ಟೇ?

ನಾ.– ಸ್ವಾಮಿ, ಕರುಣಾಸಾಗರಾ. ತಮ್ಮ ಚರಣಾಶ್ರಿತರಿಗೆ ಕಷ್ಟದ ಕಲ್ಪನೆ ಕನಸಿನಲ್ಲಿಯೂ ಆಗಲಾರದು. ಎಲ್ಲ ರೀತಿಯಿಂದಲೂ ಕ್ಷೇಮವಿದೆ.

ಪ. ಪದ, ತಾಳ : ತ್ರಿತಾಳ, ರಾಗ : ಮಿಶ್ರಕಾಪಿ

ಎತ್ತಲಿಂದ ಬಂದಿ ನೀ ಮುನಿನಾಥಾ
ಏನು ತಂದಿ ಲೋಕದ ವಿಶೇಷವಾರ್ತಾ ॥ ಪಲ್ಲ ॥

ಮುನಿಕುಲಸ್ತೋಮಾ ಲೋಕವು ಕ್ಷೇಮಾ
ಇರುವರೆ ನುಡಿಯುತ ಶಿವನಾಮಾಃ
ಸರ್ವರು ಧರ್ಮಾಚರಣೆಯ ನೇಮಾ
ಪಾಲಿಸುತಲೀ ಅಂದಿನ ಪ್ರೇಮಾ ॥ ೧ ॥

ಕರ್ಮವು ಅಳಿದು ಧರ್ಮವು ಬೆಳೆದು
ಸರ್ವಜನರು ಭಕ್ತಿಯ ತಳೆದು
ಇರುವರೇ ಸರಸಾ ಫಲಪುರದರಸಾ
ನುಡಿಗಳ ಸ್ಮರಿಸುತಾ ಸುಖವಾಸಾ ೨

ನಾರದಾ, ಇಂದು ಎತ್ತಲಿಂದ ಬಂದೆ? ಯಾವ ಲೋಕದಲ್ಲಿ ಸಂಚರಿಸಿದೆ? ಯಾವ ವಿಶೇಷ ವರ್ತಮಾನವನ್ನು ತಂದೆ? ಭೂಲೋಕ, ಭುವರ್ಲೋಕ, ಸ್ವರ್ಲೋಕಾದಿ ಮೇಲಿನ ಏಳು ಲೋಕಗಳಲ್ಲಿ ಮತ್ತು ಅತಳ–ವಿತಳ–ಸುತಳಾದಿ ಕೆಳಗಿನ ಏಳು ಲೋಕಗಳಲ್ಲಿ ಸದ್ಧರ್ಮವು ಸರಿಯಾಗಿ ಸಾಗಿರುವುದೋ ಹೇಗೆ? ಅಧಮರು ಯಾವ ಲೋಕದಲ್ಲಿಯಾದರೂ ಹುಟ್ಟಿ ಧರ್ಮಕ್ಕೆ ಬಾಧೆಯನ್ನು ತರುತ್ತಿರುವರೋ ಹೇಗೆ? ಬಿತ್ತರಿಸುವಂಥವನಾಗು.

ನಾ.– ಸಚ್ಚಿದಾನಂದ ಮೂರ್ತಿಯೇ, ಸರ್ವಾಂತರ್ಯಾಮಿಯೇ, ಸರ್ವವ್ಯಾಪಕನೂ ಸರ್ವಜ್ಞನೂ ಆದ ನೀನು ಅರಿಯದ ವಿಷಯ ಯಾವುದು? ನೀನು ಇಲ್ಲದ ಸ್ಥಾನ ಯಾವುದು? ನಿನ್ನಿಂದ ಆಗದ ಕಾರ್ಯ ಯಾವುದು? ಎಳ್ಳುಗೊನೆ, ಮುಳ್ಳುಮೊನೆ ಮೊದಲು ಮಾಡಿಕೊಂಡು ಎಲ್ಲದರಲ್ಲಿಯೂ ತುಂಬಿಕೊಂಡಿರುವ ಸ್ವಾಮಿಯೇ, ತಾವೇ ಕೂತು ಎಲ್ಲೆಲ್ಲಿ, ಏನೇನು ನಡೆದಿದೆಯೆಂದು ಕೇಳುವುದು ವಿಚಿತ್ರವಲ್ಲವೆ? ಒಡೆಯರ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡುವುದು ಪಾದಸೇವಕನ ಕರ್ತವ್ಯ. ನಾನು ಸಂಚರಿಸಿದ ಲೋಕಗಳಲ್ಲಿ ಕಂಡ ಕೌತುಕವನ್ನು ಸನ್ನಿಧಿಗೆ ಬಿನ್ನವಿಸುತ್ತೇನೆ; ಕೇಳುವಂಥವರಾಗಿರಿ.

ಪ.– ನಾರದಾ ಅದೇನಿರುವುದು ಹೇಳುವಂಥವನಾಗು.

ನಾ.– ದಯಾಪರ ಮೂರ್ತಿಯೇ, ತ್ರಿಲೋಕ ಸಂಚಾರಿಯಾದ ನಾನು ತಿರುಗುತ್ತಾ ತಿರುಗುತ್ತಾ, ಮುಕ್ತಿಲೋಕಕ್ಕೂ ನಾಗಲೋಕಕ್ಕೂ ಮಧ್ಯಸ್ಥವಾದ ಭೂಲೋಕಕ್ಕೆ ಹೋಗಿದ್ದೆನು. ಕೃತಯುಗದಲ್ಲಿ, ಧರ್ಮವು ಒಂದು ಕಾಲೂ ಕುಂಟಿಲ್ಲದೆ ನಾಲ್ಕು ಕಾಲುಗಳನ್ನೂರಿ ಚೆನ್ನಾಗಿ ನಡೆಯುತ್ತಿತ್ತು. ಮುಂದೆ ತ್ರೇತಾಯುಗದಲ್ಲಿ, ಒಂದು ಕಾಲಿಗೆ ಮೂರ್ಖರ ಸುಳವು ಎಂಬ ಮುಳವು ಸರಿದು ಒಂದು ಕಾಲು ಕುಂಟು ಬಿದ್ದು, ಮೂರೇ ಕಾಲನ್ನೂರಿ ಮುಗ್ಗರಿಸುತ್ತ ನಡೆಯಹತ್ತಿತು. ಮುಂದೆ ದ್ವಾಪರಯುಗದಲ್ಲಿ ಅಧಮರ ಆರ್ಭಟವೆಂಬ ಅರ್ಧಾಂಗವಾಯು ಹತ್ತಲು ಆ ಧರ್ಮದೇವತೆಯ ಅರ್ಧ ಶರೀರವೇ ಒಣಗಿ ಹೋಗಿ, ಎರಡು ಕಾಲುಗಳು ಕುಂಟು ಬಿದ್ದು ಎರಡೇ ಕಾಲುಗಳನ್ನು ಊರುತ್ತ, ಏಳುತ್ತ, ಬೀಳುತ್ತ ನಡೆಯ ಹತ್ತಿತು. ಮುಂದೆ ಕಲಿಯುಗದಲ್ಲಿ,

ಕರ್ಮವೆಂಬ ಕ್ಷಯರೋಗ ಹತ್ತಿ, ಪಾಪ! ಆ ಧರ್ಮದೇವತೆ ಎಳೆದೇ ಟಿ ಹಾಕುವ ಈ ಎರಡು ಕಾಲುಗಳಲ್ಲಿ ಒಂದು ಕಾಲು ಕುಂಟು ಬಿದ್ದು ಒಂದೇ ಕಾಲನ್ನೂರಿ ನಡೆಯುಹತ್ತಿದಳು. ಮುಂದೆ ಕಲಿಯು ಪ್ರಾಬಲ್ಯಹೆಚ್ಚಾಗಲು ಇದ್ದದ್ದೊಂದು ಕಾಲು ಸಹ ಮುರಿದು ಮೂಲಿಗುಂಪಾಗಿ ಬಿದ್ದು, ತುಚ್ಛ ಜನರ ತುಳಿದಾಟದಲ್ಲಿ ಸಿಕ್ಕು 'ಶಿವನೇ, ನೀನೆ ಗತಿ' ಎಂದು ಶಿವನಿಗೆ ಮೊರೆಯಿಡಲು ಆಗ ಅಲ್ಲಮಪ್ರಭುವೆಂಬ ಅವತಾರಿ ಪುರುಷನು ಜನಿಸಿ ಆ ಮುಪ್ಪಿನ ಧರ್ಮದೇವತೆಯನ್ನು ಉದ್ಧಾರ ಮಾಡಲು ಸಿದ್ಧನಾಗಿದ್ದಾನೆ ಮಹಾಪ್ರಭೋ, ಆ ಮಹಾತ್ಮನ ಮಹಿಮೆಯನ್ನು ಎಷ್ಟೆಂದು ಬಣ್ಣಿಸಲಿ!

ಪ.– ನಾರದಾ, ಮತ್ತೇನು ವಿಶೇಷ?

ನಾ – ಸ್ವಾಮಿ, ಹೇಳುತ್ತೇನೆ ಕೇಳಿರಿ :

ಪದ : ತಾಳ : ಕೇರವಾ, ರಾಗ : ಮಿಶ್ರಕಾಪಿ

ಅಲ್ಲಮ ಪ್ರಭು ಎಂಬ ಸದ್ಗುರುನಾಥಾ
ಮೂರು ಲೋಕದಲ್ಲಿ ಪ್ರಖ್ಯಾತಾ
ಅವತರಿಸಿರುವನು ಜಗದ್ಭರಿತಾ
ಅವನಿಂದ ಪಾಪ ಆದಿತೊ ಲೋಪಾ
ದೇವಾ ಪಾಲಿಸೊ ಗುರುಕುಲದೀಪಾ, ನಿರ್ಲೇಪಾ ೧

ಪಾವನಾದಿತು ಗುರು ಶಿವನಿಂದಲಿ
ಜಗನ್ಮಾಯಾ ರಹಿತ ಗುರುವಿನ ಲೀಲಾ
ಹೊಗಳಲು ಯಾರಿಗೂ ವಶವಲ್ಲಾ
ಫಲಪುರನೆಲ್ಲಾ, ಸಿದ್ಧೇಶ ಬಲ್ಲಾ
ಕಂಡ ಕೌತುಕವಿದು ನತಪಾಲಾ, ಸಟೆಯಲ್ಲಾ ೨

ಸ್ವಾಮಿ, ಭೂಮಿಯನ್ನು ಉದ್ಧಾರ ಮಾಡಲಿಕ್ಕೆ ಅವತರಿಸಿದ ಸದ್ಗುರು, ಅಲ್ಲಮನ ಅಗಾಧ ಮಹಿಮೆಯನ್ನು ಬಣ್ಣಿಸುವುದು ಸಾವಿರಾರು ಮುಖವುಳ್ಳ ಆದಿಶೇಷನಿಗೂ ಅಸಾಧ್ಯ. ಹೀಗಿರುವಾಗ, ಒಂದು ಮುಖವುಳ್ಳ ನಾನು ಆತನನ್ನು ಬಣ್ಣಿಸಲಿಕ್ಕೆ ಹೇಗೆ ಸಮರ್ಥನಾದೇನು? ಸೂರ್ಯನು ಉದಯವಾದ ಕೂಡಲೇ ಕಗ್ಗತ್ತಲೆಯು ಸದ್ದಿಲ್ಲದೆ ಅಡಗುವಂತೆ, ಆ ಮಹಾತ್ಮನು ಭೂಲೋಕದಲ್ಲಿ ಅವತರಿಸಿದ ಕೂಡಲೆ ಲೋಕದಲ್ಲಿ ಹಬ್ಬಿದ ಅಜ್ಞಾನವೆಂಬ ಕತ್ತಲೆ ಅಡಗಿತು. ಕಳ್ಳಸುಳ್ಳರ ಸುಳಿದಾಟವೇ ಇಲ್ಲದಂತಾಗಿ ಎಲ್ಲಿ ನೋಡಿದರೂ ಶಿವ ಭಜನೆ, ಶಿವಪೂಜೆ, ಶಿವಧ್ಯಾನ,

ಶಿವಪುರಾಣಶ್ರವಣವೇ ನಡೆದಿರುವುವು. ಕಾಲು ಮುರಿದು ಮೂಲೆಗುಂಪಾಗಿ ಬಿದ್ದ ಧರ್ಮದೇವತೆಯು ಈಗ ತನ್ನ ನಾಲ್ಕೂ ಪಾದಗಳಲ್ಲಿ ಚೈತನ್ಯ ಪಡೆದು ಮತ್ತೆ ಸಂಚಾರ ಮಾಡುತ್ತಿರುವಳು. ಪ್ರಭೋ, ಮಾಯಾರಹಿತನಾದ ಅಲ್ಲಮಪ್ರಭು.....

ಪಾ–ನಾರದಾ, ಏನೆಂದು ನುಡಿವೆ?

ನಾ.–ತಾಯಿ, ಈಗ ಭೂಮಿಯಲ್ಲಿ ಅವತಾರ ಮಾಡಿದ ಅಲ್ಲಮಪ್ರಭು ಮಾಯೆಯನ್ನು ಮೆಟ್ಟಿನಿಂತ ಮಹಾತ್ಮನೆಂದು ನುಡಿವೆನು.

ಪಾ.–ಛೀ ಪಾಪಾತ್ಮ. ಹೇಳುತ್ತೇನೆ ಕೇಳು.

ನಾ.–ತಾಯಿ. ಅದೇನಿರುವುದು ಹೇಳುವಂಥವರಾಗಿರಿ.

ಪದ : ತಾಳ : ಕೇರವಾ, ರಾಗ : ಮಿಶ್ರಕಾಪಿ (ಚಕ್ಕಡ)

ಛೀ ಛೀ ಪಾಪಿ ನಾರದಾ ಏನಂದಿ
ಮಾಯೆಗೆಲಿದ ವೀರನಾದ ಈ ಜಗದಿ ॥ ಪಲ್ಲ ॥

ಕಾಯವ ಅಳಿದು ಮೋಹವ ತುಳಿದು
ನಡೆವ ವೀರರು, ಜಗದೊಳಗಿಂದು
ಇರುವರೆ ಅಧಮ, ಛೀ ಪಾಪಾತ್ಮ
ನುಡಿಯದಿರೆನ್ನೊಳು ಒಣ ಹಮ್ಮಾ ॥ ೧ ॥

ಅವ ಯಾವ ಚದುರ, ಮಾಯೆಗೆ ಇದಿರ
ನಿಲ್ಲುವ ಅಲ್ಲಮ ಗಂಭೀರ
ಬಿಡು ಬಡಿವಾರಾ, ಎನ್ನುವೆ ಇದಿರಾ
ನುಡಿಯಲು ನಾಚಿಕಿಲ್ಲದ ಕ್ಷುದ್ರಾ ॥ ೨ ॥

ಎಲೋ ಬಡಿವಾರದ ನಾರದಾ, ಇದೇ ಈಗ. ಮಾಯೆಗೆ ವಶನಾಗದೆ, ಮಾಯೆಗೆ ಮೀರಿ ನಿಂತವನೆಂದು ಬಡಿವಾರ ಕೊಚ್ಚುತ್ತಿದ್ದೆಯಲ್ಲ ! ಅವನಾರು? ಅವನ ಹೆಸರನ್ನು ಹೇಳು, ನೋಡೋಣ.

ನಾ.–ತಾಯಿ ಮಾಯೆಗೆ ಒಳಗಾಗದೆ, ಮಾಯೆಯ ಎದೆಯನ್ನು ಮೆಟ್ಟತಕ್ಕವನೆಂದು ಆಗಲೇ ನಾನು ಹೇಳಿದ ಆ ಮಹಾಪುರುಷನ ಹೆಸರು, ಅಲ್ಲಮಪ್ರಭುರಾಯ.

ಪಾ.–ಛೀ ನೀಚಾ ಏನು ಮಾತಾಡಿದಿ? ಹೊನ್ನು ಹೆಣ್ಣು ಮಣ್ಣುಗಳ ಮೇಲೆ ಆಸೆ ಇಡದೆ; ಮಾಯೆಗೆ ಒಳಗಾಗದೆ ಮೀರಿ ನಿಂತವರು ಎಲ್ಲಾದರೂ ಇದ್ದದುಂಟೆ? ಹರಿ, ಹರ, ಬ್ರಹ್ಮರು ಸಹ ಹೆಣ್ಣಿನ ಮೋಹದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ.

ಹೋಗಿರಲು. ಅವನಾವನೋ ಅಲ್ಲಮಪ್ರಭು ಮಾಯೆಗೆ ಮೀರಿ ನಿಂತವನು! ಅವನ ಹೆಸರನ್ನು ನನ್ನೆದುರಿಗೆ ಹೇಳಲು ನಿನಗೆ ನಾಚಿಕೆ ಬರುವುದಿಲ್ಲವೆ? ಮಾಯೆಗೆ ಮೀರಿ ನಿಂತವನೆಂದು ನುಡಿದವರಾರು? ಈ ಮಾತನ್ನು ಆಡಿದವನು ಆ ಅಲ್ಲಮನೋ ಅಥವಾ ನೀನೋ? ನಿಜವಾಗಿ ಅಂದವರಾರು?

ನಾ.–ತಾಯಿ, ಅಂದವರ ಹೆಸರು ಹೇಳಿದರೆ ನೀನೇನು ಮಾಡಬಲ್ಲೆ?

ಪಾ.–ನಾನು ಈ ಕ್ಷಣವೆ, ನನ್ನ ತಾಮಸ ಕಳೆಯಾದ ಮಾಯೆಯನ್ನು ಭೂಲೋಕಕ್ಕೆ ಕಳಿಸಿ, ಅಲ್ಲಮನನ್ನು ಬಂಧಿಸಿತರುವಂತೆ ಆಜ್ಞೆ ಮಾಡುತ್ತೇನೆ. ಈ ಮಾತನ್ನು ಅಂದವರಾರು? ಮೊದಲು ಹೇಳು.

ನಾ.–ಜಗದೀಶ್ವರೀ, ಆ ಅಲ್ಲಮಪ್ರಭು ಮಾಯೆಯನ್ನು ಗೆದ್ದವನೆಂದು ಅಂದವರು ಒಬ್ಬಿಬ್ಬರಲ್ಲ. ಜಗತ್ತೇ ಅವನನ್ನು ಕೊಂಡಾಡುತ್ತಿರುವುದು.

ಪಾ.–ಜಗತ್ತೆಲ್ಲಾ ಕೊಂಡಾಡುತ್ತಿರುವದೋ? ಹಾಗಿದ್ದರೆ ಈ ಜಗತ್ತನ್ನೆಲ್ಲಾ ಅರೆಕ್ಷಣದಲ್ಲಿ ಕುಣಿದಾಡಿಸಿ, ಆ ಅಲ್ಲಮನನ್ನು ಪಿಚಂಡಿ ಕಟ್ಟಿ ತರಿಸುತ್ತೇನೆ.

ನಾ.–ತಾಯಿ, ಹಾಗೆ ಮಾಡಬಲ್ಲಿರಾ?

ಪ.– ಪಟ್ಟದರಸಿ ಪಾರ್ವತಿ, ಇತ್ತ ಹೊರಳು.

ಪಾ.–ಅದೇಕೆ ಹೊರಳಬೇಕು?

ಪ.– ಹೆಣ್ಣಿನ ಮಾಯೆಗೆ ಒಳಗಾಗದವರು ಯಾರೂ ಇಲ್ಲವೆಂದು ನಿನಗೆ ನೀನೇ ಜಂಭ ಕೊಚ್ಚಿಕೊಳ್ಳುತ್ತಿರುವಿ. ಮಾಯೆಗೆ ಸೋತವರು ಲೋಕದಲ್ಲಿ ಯಾರೂ ಇಲ್ಲ.

ಪಾ.–ಯಾರೂ ಇಲ್ಲವೆ?

ಪ.– ಕೇಳು.

ಪಾ.–ಅದೇನಿರುವದು ಹೇಳು.

ಪ.– ಪದ : ತಾಳ : ತ್ರಿತಾಳ; ರಾಗ : ಮಿಶ್ರಕಾಪಿ (ಚಕ್ಕಡ)

ಬಿಡು ಬಿಡು ನಿನ್ನ ಒಣ ಭ್ರಾಂತಿ. ಮಮಕಾಂತೆ ॥ ಪಲ್ಲ ॥
ಸುರಮುನಿ ವಾರ್ತೆ ಸಟೆಯಲ್ಲ ಸುಮತಿ
ಸಾಕು ಸಂಸ್ಕೃತಿ ಒಣಭ್ರಾಂತಿ, ಮಮಕಾಂತೆ

ಪಾ.– ಪದ: ತಾಳ; ತ್ರಿತಾಳ; ರಾಗ: ಮಿಶ್ರಕಾಪಿ (ಚಕ್ಕಡ)

ಬಿಡು ಬಲ್ಲೆ ನಿನ್ನ ಪೌರುಷ ಪ್ರಾಣೇಶಾ, ಪೌರುಷ ಪ್ರಾಣೇಶಾ ॥ ಪಲ್ಲ ॥
ಹೆಂಗಸು ಮಾಯಿ, ಗಂಡಸು ನಾಯಿ
ಇಮದು ಲೋಕದ ನಿರ್ಣಯ, ಪೌರುಷ ಪ್ರಾಣೇಶಾ

ಪ.– ಪದ: ತಾಳ: ಕೇರವಾ: ರಾಗ: ಮಿಶ್ರಕಾಫಿ (ಚಕ್ಕಡ)

ಶರಣರ ಲೀಲಾ, ಸರ್ವೇಶ ಬಲ್ಲಾ
ಹಟೆಯಿದು ಸಲ್ಲಾ ಒಣಭ್ರಾಂತಿ, ಮಮಕಾಂತೆ

ಪಾ.– ಪದ: ತಾಳ: ಕೇರವಾ; ರಾಗ: ಮಿಶ್ರಕಾಫಿ (ಚಕ್ಕಡ)

ಬಿಡುಬಿಡೊ ರಮಣಾ, ನಾ ಬಲ್ಲೆ ನಿನ್ನ
ನಿರ್ಮಾಯತನ, ಪೌರುಷ ಪ್ರಾಣೇಶಾ

ಪ.– ಎಲೇ ಪಾರ್ವತಿ, ಸತ್ವಶೀಲನಾದ ದೇವರ್ಷಿನಾರದನ ಕೂಡ ಪಂಥವನ್ನು ತೊಡಬೇಡ. ಅವನು ಆಡುವುದು ಸುಳ್ಳಲ್ಲ. ಮಾಯೆಗೆ ಒಳಗಾಗದವರು ಯಾರಿಲ್ಲೆಂಬ ಅಹಂಕಾರವನ್ನು ಮಾಡಬೇಡ. ಜಗತ್ತೆಲ್ಲ ನಿನ್ನ ಅಧೀನವಾದರೂ ಸತ್ಯ ಶಿವಶರಣರು ನಿನ್ನ ಅಧೀನರಲ್ಲ. ನಿನ್ನಷ್ಟಕ್ಕೆ ನೀನೇ ಹೆಚ್ಚಿನವಳೆಂದು ತಿಳಿಯಬೇಡ. ಅಲ್ಲಮನ ಸುದ್ದಿಯನ್ನು ಕನಸು–ಮನಸಿನಲ್ಲಿಯೂ ತೆಗೆಯಬೇಡ. ಆತನು ಸಾಮಾನ್ಯ ವ್ಯಕ್ತಿಯಲ್ಲ. ಲೋಕೋದ್ಧಾರಕ್ಕಾಗಿ ನನ್ನ ಶುದ್ಧ ಚೇತನಾಂಶವೇ ಅಲ್ಲಮನ ಹೆಸರಿನಲ್ಲಿ ಅವತರಿಸಿರುವುದು. ಆತನೇ ನಾನು. ನಾನೇ ಆತನು. ಆತನನ್ನು ಗೆಲ್ಲುವ ಹವ್ಯಾಸಕ್ಕೆ ಹೋದರೆ ನೀನು ನಿಶ್ಚಯವಾಗಿ ಅಪಮಾನಕ್ಕೆ ಗುರಿಯಾಗುವಿ.

ಪಾ.–ಪ್ರಾಣೇಶ್ವರಾ, ಅಹಂಭಾವಕ್ಕೆ ಬಲಿಬಿದ್ದು, ನನ್ನ ತಾಮಸ ಕಳೆಯಾದ ಮಾಯೆಯನ್ನು ತುಚ್ಛೀಕರಿಸಿ ಮಾತಾಡಬೇಡ. ನೀನಾಗಲಿ, ನಿನ್ನ ಶುದ್ಧ ಅಂಶನಾದ ಅಲ್ಲಮನಾಗಲಿ ನನಗೆ ಮಿಾರಿದವರೆ?

ಪ.– ಹೌದು ನಾನಾಗಲಿ ನನ್ನ ಶರಣರಾಗಲಿ ನಿನ್ನ ತಾಮಸ ಕಳೆಯಾದ ಮಾಯೆಗೆ ಎಂದೂ ವಶರಲ್ಲ.

ಪಾ.–ಮಾಯೆಗೆ ನಿ[illegible]ವೂ ಒಳಗಾಗಿಲ್ಲವೆ?

[illegible].– ಎಂದು [illegible]ಗಿರು[illegible] ಹೇಳು?

[illegible]. – ಪದ : ತಾಳ : ತ್ರಿತಾಳ ; ರಾಗ : ಕಾಫಿ (ಚಕ್ಕಡ)

ಬಲ್ಲೆ ಬಿಡು ನಲ್ಲ ನಿನ್ನ ಬಾಯ ನಿರ್ಮಾಯ

ಭಸ್ಮಾಸುರ ದೈತ್ಯಗಂಜಿ ನೀ ಮೊದಲಾ
ಓಡಿಹೋಗಿ ಆದಿ ಅಡಪಿ ಪಾಲಾ
ಘೋರ ರಕ್ಕಸರಿಂದ ಪಾರಾದಿ ಯಾರಿಂದ
ಮಾರಹರನೇ ಹೇಳೊ ನಮ್ಮಿಂದ ನಮ್ಮಿಂದ ॥ ೧ ॥

ವಿಷ್ಣು ಮಾಯಾಮೋಹಿನೀ ರೂಪ ಧರಿಸಿ
ಭಸ್ಮನ ಹತ್ತಿರ ಬಂದು ಚರಿಸುತsss
ಅವನಿಗೆ ಬಹುಮಾಯಾ ಸುರಿಸುತ
ಕುಟಿಲತನದಿ ಅವನ ಕುಣಿಯ ಹಚ್ಚುತ ಸುಟ್ಟು
ಭಸ್ಮ ಮಾಡಿದಳೊ ಮಾಯಾದೇವಿ ನಿನ್ನ ಸಲಹಿ ॥ ೨ ॥

ಮೋಹಿನಿ ಧರಿಸಿದ ಮಾಯಾರೂಪಕೆ ನೀನು
ಮೋಹಿಸಿ ನಿಂತೆಲ್ಲೊ ಬೆರಗಾಗಿ
ಬೆನ್ನು ಹತ್ತಿ ತಿರುಗಿದ್ಯೊ ಮರುಳಾಗಿ
ಮಾಯೆಗೆ ವಶವಾಗಿ ಮಾರನ ಉರುಪಿಗೆ
ತಿರುಗಿದಿ ನೀ ಎಂಥ ನಿರ್ಮಾಯ ನಿರ್ಮಾಯ ॥ ೩ ॥

"ನಾನಾಗಲಿ ನನ್ನ ಶರಣರಾಗಲಿ ಮಾಯೆಗೆ ಒಳಗಾಗತಕ್ಕವರಲ್ಲ" ಎಂದು ಬಿಂಕವನ್ನು ಕೊಚ್ಚುತ್ತಿರುವ ಮರುಳ ಶಂಕರಾ, ಹಿಂದಕ್ಕೆ ನೀನು ಭಸ್ಮಾಸುರನಿಗೆ ಏನೆಂದು ವರವನ್ನು ಕೊಟ್ಟಿದ್ದಿ?

ಪ.–"ನೀನು ಯಾರ ತಲೆಯ ಮೇಲೆ ಹಸ್ತವನ್ನಿಡುವೆಯೋ ಅವರು ಸುಟ್ಟು ಭಸ್ಮವಾಗುವರೆಂ"ದು ವರವನ್ನು ಕೊಟ್ಟಿದ್ದೆ.

ಪಾ.–ಅಂಥ ವರವನ್ನು ಪಡೆದುಕೊಂಡು ಅವನು ಏನು ಮಾಡಿದನು?

ಪ.– ಪಾರ್ವತಿ, ನಿನ್ನ ರೂಪಕ್ಕೆ ಮನಸೋತ ಭಸ್ಮಾಸುರನು ನನ್ನನ್ನೇ ಸುಟ್ಟು, ನಿನಗೆ ಮೋಸಮಾಡಲು ಯತ್ನಿಸಿದ.

ಪಾ.–ಆಗ ನೀನೇನು ಮಾಡಿದೆ?

ಪ.– ಆಗ ನಾನು ಭಯಪಟ್ಟು ಕಂಡ ಕಡೆಗೆ ಓಡಿ ಹೋದೆನು.

ಪಾ.–ನೀನು ಓಡಿದರೆ ಅವನು ನಿನ್ನನ್ನು ಬಿಟ್ಟನೆ?

ಪ.– ಇಲ್ಲ, ಬಿಡಲಿಲ್ಲ; ನನ್ನನ್ನು ಬೆನ್ನಟ್ಟಿ ಗುಡ್ಡಗಹ್ವರಗಳಲ್ಲಿ ಅರಸುತ್ತ, ತನ್ನ ಉರಿಯ ಹಸ್ತವನ್ನೆತ್ತಿಕೊಂಡು ಬೆನ್ನು ಹತ್ತಿದ.

ಪಾ.–ಆಗ ನೀನೇನು ಮಾಡಿದೆ? ಮತ್ತು ಅವನ ಕೈಯೊಳಗಿಂದ ಹೇಗೆ ಪಾರಾದೆ?

ಪ.– ಪಾರ್ವತಿ, ಆಗ ವಿಷ್ಣುವಿನ ಮಾಯಾಶಕ್ತಿಯು ಸುಂದರವಾದ ಮೋಹಿನೀ ರೂಪವನ್ನು ಧರಿಸಿ ಅವನ ಹತ್ತಿರ ಬಂದಳು. ಅವಳ ಅಪ್ರತಿಮ ರೂಪಕ್ಕೆ ಭಸ್ಮಾಸುರನು ಭ್ರಾಂತನಾಗಿ ಆಕೆಯನ್ನು ವಶಮಾಡಿಕೊಳ್ಳುವ ಉಲ್ಹಾಸದಲ್ಲಿ ನನ್ನನ್ನು ಮರೆತುಬಿಟ್ಟನು. ಆಕೆಯ ಕಪಟತಂತ್ರಕ್ಕೆ ಬಲಿಯಾಗಿ ತಾನೇ ಸುಟ್ಟು ಭಸ್ಮವಾದನು.

ಪಾ.–ಅಂದ ಮೇಲೆ ಯಾರಿಂದ ಉಳಿದೆ?

ಪ.– ವಿಷ್ಣುವಿನ ಮಾಯೆಯಿಂದ ಉಳಿದೆನು.

ಪಾ.–ಮಾಯೆಯಿಂದ ಉಳಿದೆಯಾ?

ಪ.– ಹೌದು, ಮಾಯೆಯಿಂದ ಉಳಿದೆನು.

ಪಾ.–ಆಕೆಯ ಮುಂದೆ ನಿಂತು ಮತ್ತೇನೋ ಅಂಗಲಾಚಿ ಬೇಡಿಕೊಳ್ಳುತ್ತಿದ್ದೆಯಲ್ಲ?

ಪ.– ಆಕೆಗೆ ಅಂಗಲಾಚಿ ನಾನೇನು ಬೇಡಿಕೊಂಡೆ?

ಪಾ.–ಬೇಡಿಕೊಂಡೇ ಇಲ್ಲೇನ್ರಿ?

ಪ.– ಬೇಡಿಕೊಂಡೇ ಇಲ್ಲ,

ಪಾ.– ಹೀಗೋ; ಕೇಳು :

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ (ಚಕ್ಕಡ)

ಜಾಣೆ ಮೋಹಿನಿ ಫಣಿವೇಣಿಗೆ ಮನಸೋತು
ಬೆನ್ನು ಹತ್ತಿ ತಿರುಗಿದಿ ಬೆರಗಾಗಿ
ಮೋಹಿನಿ ರೂಪಕೆ ಮರುಳಾಗಿ
ಕೂಡು ಎನ್ನನು ದಯಮಾಡು–ಎಂದೆನುತ ನೀ
ಬೇಡಿಕೊಂಡೆಲ್ಲೋ ವಿಷ್ಣು ಮಾಯೆಗೆ । ವಶವಾಗಿ ॥ ೧ ॥

ನಾರಿಯ ರೂಪಕೆ ಮಾರನ ತಾಪಕೆ
ಗುರಿಯಾಗದ ಪುರುಷನು ಯಾವ
ನಲ್ಲ ಬಿಡೊ, ನಿನ್ನ ಈ ಒಣ ಹ್ಯಾಂವಾ
ಹೆಂಗಸು ಮಾಯಿ ಗಂಡಸು ನಾಯಿ
ಇರುವದು ಲೋಕದ ನಿರ್ಣಯಾ । ನಿರ್ಣಯಾ ॥ ೨ ॥

'ಮಾಯೆಗೆ ಒಳಗಾಗತಕ್ಕವನಲ್ಲವೆಂದು ಬಿಂಕವನ್ನು ಕೊಚ್ಚುತ್ತಿರುವ ಶಂಕರಾ ಇತ್ತ ಹೊರಳು. ಇದ್ದ ಮಾತು ಇದ್ದಂತೆ ಹೇಳುವದಕ್ಕೆ ನಾಚಿಕೆ ಯಾತಕೆ? ನಿನ್ನನ್ನು ಉಳಿಸಿದ ಮೋಹಿನಿಯ ಚರ್ಮದ ಛಾಯೆಗೆ, ಹೆಣ್ಣಿನ ಮಾಯೆಗೆ 'ಸುಂದರಿ, ನಿನ್ನ ಚನ್ನಿಗ ರೂಪಕ್ಕೆ ನಾನು ಮನಸೋತಿರುವೆನು. ನಿನ್ನ ಕಲಕೀರವಾಣಿಗೆ ಕಿವಿಜೋತಿರುವೆನು. ನನ್ನನ್ನು ಲಗ್ನವಾಗಲು ಒಪ್ಪಿಕೋ. ಕೋಮಲ ಕೈಗಳಿಂದ ಅಪ್ಪಿಕೋ. ನೀನು ಹೇಳಿದಂತೆ ಕೇಳುವೆನು. ನಿನ್ನ ಆಜ್ಞೆಯಂತೆ ನಡೆವೆನು'-ಎಂದು ನೀನು ಬೇಡಿಕೊಳ್ಳುತ್ತ ಅವಳ ಬೆನ್ನುಹತ್ತಿ ತಿರುಗಲಿಲ್ಲವೆ? ಈಗ "ನಾನು ಮಾಯೆಗೆ ಸೋಲುವವನಲ್ಲ. ಕಿವಿ ಜೋಲುವವನಲ್ಲ' ಎಂದು ಹೇಳಲಿಕ್ಕೆ ನಿನ್ನ ನಾಲಿಗೆಗೆ ನಾಚಿಕೆ ಬರುವದಿಲ್ಲವೆ? ಛೀ ಏನು ಮಾತಾಡುತ್ತೀ?

ಪ.– ಎಲೆ ಬಡಿವಾರದ ಬಾಲೆ, ಸುಮ್ಮನೆ ಎನ್ನ ಎದುರಿಗೆ ಹೆಮ್ಮೆಯನ್ನು ಕೊಚ್ಚಬೇಡ. ಭಸ್ಮಾಸುರನಿಗೆ ಅಂಜಿದಂತೆ ನಟಿಸಿ, ನಾನು ಓಡಿ ಹೋದದ್ದು ನಿಜ್ಜಯ. ಆದರೆ ಸಾವಿಗಂಜಿ ಓಡಿದೆನೆಂದು ಭಾವಿಸಬೇಡ. ಮೃತ್ಯುಂಜಯನಾದ ನನಗೆ ಮರಣವೆಂಬುದು ಇಲ್ಲವೇ ಇಲ್ಲ.

ಪಾ.–ಹಾಗಾದರೆ ಯಾಕೆ ಓಡಪತ್ತಿದ್ದಿ?

ಪ.– ಎಲೆ ಬಿನ್ನಾಣದ ಹೆಣ್ಣೆ, ಅರೆ ಕ್ಷಣದಲ್ಲಿ ಈ ಸೃಷ್ಟಿಯನ್ನೇ ಸುಟ್ಟುಬಿಡುವ ಶಕ್ತಿಯುಳ್ಳ ನನಗೆ ಆ ಭ್ರಷ್ಟ ಭಸ್ಮಾಸುರನನ್ನು ನಷ್ಟ ಮಾಡುವದು ಎಷ್ಟರ ಕೆಲಸ?

ಪಾ.–ಹಾಗಾದರೆ, ಯಾಕೆ ಬಿಟ್ಟೆ?

ಪ.– ಎಲೆ ಪಾರ್ವತಿ, ಅವನನ್ನು ನಷ್ಟ ಮಾಡಿದ್ದರೆ, ಕೊಟ್ಟ ವರವನ್ನು ತಪ್ಪಿಸಲು ಶಿವನು ಹೀಗೆ ಮಾಡಿದನೆಂದು ನನ್ನ ಶ್ರೇಷ್ಠಭಕ್ತರು ಚೇಷ್ಟೆಯನ್ನು ಮಾಡಬಹುದಾಗಿತ್ತು. ಅದಕ್ಕಾಗಿ ಆ ವಿನೋದದ ಆಟವನ್ನು ಹೂಡಿದೆ. "ಅಂಜಿ ಹಾಗೆ ಮಾಡಿದೆನೆ"ಂದು ನುಡಿವ ನಿನ್ನ ಬಡಿವಾರದ ಮಾತುಗಳನ್ನು ನನ್ನ ಮುಂದೆ ಬಡಬಡಿಸಬೇಡ. ಮಾಯೆ ನನ್ನಾಧೀನವೇ ಹೊರತು ಮಾಯಾಧೀನ ನಾನಲ್ಲ. ದೀಪವನ್ನು ಆಶ್ರಯಿಸಿಕೊಂಡು ಕತ್ತಲೆ ಇರುವದೇ ಹೊರತು ಕತ್ತಲೆಯನ್ನು ಆಶ್ರಯಿಸಿಕೊಂಡು ದೀಪ ಇರುವದಿಲ್ಲ. ಸಚ್ಚಿದಾನಂದ ಮೂರ್ತಿಯಾದ ನನ್ನನ್ನು ಆಶ್ರಯಿಸಿಕೊಂಡು ನೀನು ಇರುವಿಯೇ ಹೊರತು ನಿನ್ನನ್ನು ಆಶ್ರಯಿಸಿಕೊಂಡು ನಾನು ಇರುವದಿಲ್ಲ. ಪ್ರಯುಕ್ತ ನಾನಾಗಲಿ, ನನ್ನ ಸ್ವರೂಪನಾದ ಅಲ್ಲಮನಾಗಲಿ, ನಿನಗೆ ಎಂದೆಂದೂ ವಶವಾಗಲಾರೆವು.

ಪಾ.–ನೀನು ಹೆಣ್ಣಿನ ಮಾಯಾರೂಪಕ್ಕೆ ಎಂದೂ ಸಿಕ್ಕಿಲ್ಲವೆ?

ಪ.– ಎಂದೂ ಸಿಕ್ಕಿಲ್ಲ.

ಪಾ.–ಹಾಗಾದರೆ ನಾನು ಯಾರು? ಹೆಣ್ಣೋ ಅಥವಾ ಗಂಡೋ?

ಪ.– ನೀನು ಹೆಣ್ಣು!

ಪಾ.–ನನಗೆ ನೀನು ವಶವಾಗಿಲ್ಲವೆ?

ಪಾ.– ಪದ : ತಾಳ : ದಾದರಾ ; ರಾಗ : ಭೀಮಪಲಾಸ

ಜಡೆಯೊಳಿರುವ ಅಂಗನಾ ಮಣಿಯು ಯಾರೋ ಮೋಹನಾ ॥ ಪಲ್ಲ ॥
ಜಡೆಯನೀಗ ಗಂಗೆಗೆ, ತೊಡೆಯನೀಗ ಗೌರಿಗೆ
ನೀಡಿಕೊಟ್ಟು ನಲಿಯಲಿರುವಿ, ನೋಡೋ ಪ್ರಿಯನೆ ಹಾಸಿ ನಿನ್ನ
ಜಡೆಯೊಳಿರುವ ಅಂಗನಾ ಮಣಿಯು ಯಾರೋ ಮೋಹನಾ

ಪ.– ಪದ : ತಾಳ : ದಾದರಾ; ರಾಗ : ಭೀಮಪಲಾಸ

ಮೂಢತನವ ಸುಂದರಿ, ಆಡುದುಚಿತೆ ಮನೋಹರಿ ॥ ಪಲ್ಲ ॥

ಏರು : ನೀನು ಚದುರೆ ಎನ್ನಲಿ, ಕಂಡರೇನು ತೊಡೆಯಲಿ
ಮಾಯಲೇಪವೆನಗೆ ಇಲ್ಲ, ತೋಯಜಾಕ್ಷಿ ನಿಜದಲಿ
ಮೂಢತನವ ಸುಂದರಿ, ಆಡುದುಚಿತೆ ಮನೋಹರಿ

ಪಾ.–ಲೋಕದ ಕಣ್ಣು ಕಂಡದ್ದನ್ನು ಕದ್ದಿಡಲು ಹವಣಿಸುತ್ತಿರುವ ಹಗಲುಗಳ್ಳ ಶಂಕರಾ, ಹೊರಳಿ ನಿಲ್ಲು.

ಪ.– ಎಲೆ ಗೌರಿ, ಲೋಕದ ಕಣ್ಣು ಕಂಡುದನ್ನು ಕದ್ದಿಡಲು ನಾನೆಲ್ಲಿ ಹವಣಿಸುತ್ತಿರುವೆ.

ಪಾ.–"ನಾನಾಗಲಿ, ನನ್ನ ಶರಣರಾಗಲಿ ಹೆಣ್ಣಿನ ಮೋಹಪಾಶಕ್ಕೆ ಒಳಗಾಗತಕ್ಕವರಲ್ಲ"– ಎಂದು ನುಡಿಯಲಿಲ್ಲವೆ?

ಪ.– ಹೌದು; ನುಡಿದದ್ದು ನಿಜ.

ಪಾ.–ನೀನೀಗ ಹೇಳು : ನಾನು ಗಂಡೋ ಅಥವಾ ಹೆಣ್ಣೋ?

ಪ.– ನೀನು ಹೆಣ್ಣು.

ಪಾ.–ಹಾಗಿದ್ದರೆ ನೀನು ನನಗೆ ವಶವಾಗಿಲ್ಲವೆ?

ಪ.– ಎಂದು ವಶವಾಗಿದ್ದೇನೆ ಹೇಳು?

ಪಾ.–ನನಗೆ ವಶವಾಗಿಲ್ಲವೆ? ನಿನ್ನ ತಲೆಯ ಮೇಲೆ ನೋಡಿಕೊ. ಅಲ್ಲಿ ನಾನು

ಗಂಗೆಯಾಗಿ ನಿನ್ನ ಜಡೆಯನ್ನು ಮೆಟ್ಟಿ ಕೂತಿರುವೆನು; ಗೌರಿಯಾಗಿ ನಿನ್ನ ತೊಡೆಯನ್ನೇರಿ ಮಂಡಿಸಿರುವೆನು. ಲಕ್ಷ್ಮಿಯಾಗಿ ವಿಷ್ಣುವಿನ ಎದೆಯನ್ನೂ ಮೆಟ್ಟಿ ನಿಂತಿರುವೆನು. ಇದು ಲೋಕಕ್ಕೆಲ್ಲ ಕಣಗಂಡ ಮಾತಲ್ಲವೆ? ತ್ರಿಮೂರ್ತಿಗಳಾದ ನೀವೆ ನನ್ನ ವಶವಾಗಿರುವಾಗ ಮಿಕ್ಕ ಸಾಧು ಸಂತರ ಪಾಡೇನು? ನಿರಾಕಾರನಾಗಿದ್ದ ಪರಶಿವನು ಚಿತ್‌ಶಕ್ತಿಯಿಂದ ಸಾಕಾರಮೂರ್ತಿಯಾದನೆಂದು ಮಹಾತ್ಮರು ಹೇಳಿಲ್ಲವೆ? ಹೀಗಿರುವಲ್ಲಿ ನೀನು ಹುಟ್ಟಿದ್ದು ಯಾರಿಂದ? ಬೆಳೆದದ್ದು ಯಾರಿಂದ? ಐಶ್ವರ್ಯವನ್ನು ಕಂಡದ್ದು ಯಾರಿಂದ? ಹೊಟ್ಟೆ ಬಟ್ಟೆಗಿಲ್ಲದೆ ತಿರುಗುವ ತಿರುಕನಾದ ನಿನ್ನನ್ನು ತಂದು, ರಾಜಗದ್ದುಗೆಯ ಮೇಲೆ ಕೂಡ್ರಿಸಿದವರಾರು? ಅಲ್ಲದೆ ದಿಗಂಬರನಾಗಿ ದಿಕ್ಕಿಲ್ಲದೆ ತಿರುಗುವ ನಿನ್ನನ್ನು ಬಹಿರಂಗಕ್ಕೆ ತಂದು ಎಲ್ಲರಿಂದ ಪೂಜೆಗೊಳ್ಳುವಂತೆ ಮಾಡಿದವರಾರು? ಸುಮ್ಮ ಸುಮ್ಮನೆ ಇಲ್ಲದ ಹೆಮ್ಮೆಯಿಂದ ನಾನು ಮತ್ತು ನನ್ನ ಶರಣ ಅಲ್ಲಮನು ಮಾಯೆಗೆ ಒಳಗಾಗುವವರಲ್ಲವೆಂದು ಜಂಭಕೊಚ್ಚಬೇಡ. ಇದೋ ನೋಡು. ಈಗಲೇ ಮಾಯೆಯನ್ನು ಭೂಲೋಕಕ್ಕೆ ಕಳಿಸಿ ಹಾ, ಹಾ, ಅನ್ನುವಷ್ಟರಲ್ಲಿಯೇ ಆ ನಿನ್ನ ಶರಣ, ಅಲ್ಲಮನನ್ನು ಹೆಡಮುರಿಗೆ ಬಿಗಿಸಿ ತರುವೆನು.

ಪ.– ಪಾರ್ವತಿ, ಗರ್ವದಿಂದ ವ್ಯರ್ಥನುಡಿಯುವುದು ತರವಲ್ಲ. ಈ ಭೂಮಂಡಲದಲ್ಲಿ ಗರ್ವದಿಂದ ಮೆರೆದವರು ಯಾರೂ ಉಳಿದಿಲ್ಲ. ನನ್ನ ಜಡೆ ತೊಡೆಗಳನ್ನು ವಿಷ್ಣುವಿನ ಎದೆಯನ್ನು, ಬ್ರಹ್ಮನ ನಾಲಿಗೆಯನ್ನು ಮೆಟ್ಟಿ ಕೂತಿರುವೆನೆಂದು ಒಣಹೆಮ್ಮೆಯಿಂದ ಅಂದೆಯಲ್ಲ!

ಪಾ.– ಹೌದು, ಹೌದು; ಹೌದೆಂದು ಹತ್ತು ಸಾರೆ ಕೂಗಿ ಹೇಳುವೆನು. ಇದೇನು ಸುಳ್ಳಲ್ಲ. ಲೋಕವೆಲ್ಲ ಕಣಗಂಡ ಮಾತಿದು. ಕಂಡದ್ದನ್ನಾಡಿದರೆ ಕೆಂಡದಂತಹ ಸಿಟ್ಟು!

ಪ.– ಮಡದಿಮಣಿಯೇ, ನಿನ್ನ ಮರುಳುತನವನ್ನು ಬಿಟ್ಟುಬಿಡು. ಮಂಜು ಸೂರ್ಯನನ್ನು ಮುಸುಕಿದಂತೆ ಕಂಡರೂ ಅದಕ್ಕೂ ಸೂರ್ಯನಿಗೂ ಏನೂ ಸಂಬಂಧವಿಲ್ಲ. ಅದರಂತೆ, ನೀನು ನನ್ನ ಜಡೆತೊಡೆಗಳನ್ನು ವ್ಯಾಪಿಸಿದಂತೆ ಕಂಡರೂ ನನಗೂ ನಿನಗೂ ಯಾವ ಸಂಬಂಧವಿಲ್ಲ. ನೀನು ಇಲ್ಲದ ಅಹಂಕಾರದಿಂದ ಅಲ್ಲಮನನ್ನು ಗೆಲ್ಲಲು ನಿನ್ನ ಮಾಯೆಯನ್ನು ಕಳಿಸಿದರೆ, ನಿಶ್ಚಯವಾಗಿ ಅವಳ ಹಲ್ಲನ್ನು ಅಲ್ಲಮನು ಮುರಿಯದೆ ಬಿಡನು.

ಪಾ.–ವಾಹವ್ವಾ! 'ಮರುಳ ಶಂಕರ' ಎನ್ನುವ ಬಿರುದು ನಿನಗೆ ಈಗ ಸರಿಯಾಯಿತು.

ಪ.– ಅದು ಹ್ಯಾಗೆ?

ಪಾ.–ಆ ಅಲ್ಲಮನು ನನ್ನ ಮಾಯೆಯ ಹಲ್ಲನ್ನು ಮುರಿದು ಕಳಿಸುವನೆಂದು ಅಂದೆಯಲ್ಲ!

ಪ.– ಹೌದು, ನಿಶ್ಚಯವಾಗಿ ಮುರಿದು ಕಳಿಸುವನು.

ಪಾ.–ಯಾತರ ಮೇಲಿಂದ ಹೇಳುತ್ತೀ?

ಪ.– ಅವನು ಸಾಮಾನ್ಯನಲ್ಲ, ನನ್ನ ಪರಮಾವತಾರನು.

ಪಾ.–ನಿನ್ನ ಪರಮಾವತಾರ ಅಂದ ಮೇಲೆ ಅವನು ಬಹಳ ಶಕ್ತಿವಂತನಿರಬೇಕು! ನೀನಂತೂ ಮಹಾ ಸಮರ್ಥ!! ವೈರಿಗಳು ನಿನ್ನನ್ನು ಕೊಲ್ಲಲು ಬೆನ್ನಟ್ಟಿ ಬಂದಾಗ 'ಹ್ಯಾಗಾದರೂ ಮಾಡಿ ನನ್ನನ್ನು ಉಳಿಸಿರಿ'–ಎಂದು ಹೆಣ್ಣಿನ ಬೆನ್ನು ಬಿದ್ದು ಬೇಡಿಕೊಂಡ ಧೀರ ನೀನು !!!

ಪ.– ಎಲೆ ಗೌರಿ, ಹೆಣ್ಣಿನ ಬೆನ್ನು ಬಿದ್ದು, ನಾನೆಂದು ಬೇಡಿಕೊಂಡೆನು?

ಪಾ.–ಹೇಳುತ್ತೇನೆ ಕೇಳು :

ಪ.– ಅದೇನಿರುವದು ಹೇಳು :

ಪಾ.– ಪದ : ತಾಳ : ದೀಪಚಂದ, ರಾಗ : ಕಾಪಿ

ಹೆದರಿ ಶಂಕರಾ, ಸೇರಿದೆ ಕಾಂತಾರಾ
ಅಡಗಿದೆ ಗಹ್ವರ ನೀ ಎಂಥ ಗಂಭೀರಾ ॥ ಪಲ್ಲ ॥

ಏರು : ಶುಂಭ ನಿಶ್ಶುಂಭ ರಕ್ತಬೀಜೆಂಬ
ದೈತ್ಯರಿಗ್ಹೆದರಿ ಓಡಿದ್ಯೋ ಬೆದರಿ
ನನ್ನ ಬೆನ್ನ ಬಿದ್ದಿರಿ ॥ ೧ ॥

ಹರಿ, ಹರ, ಬ್ರಹ್ಮ, ಅಳಿದು ಹಮ್ಮ
ದೇವಿಗೆ ಶರಣ, ಹಾಕಿದ್ರೊ ರಮಣ
ಸಾಮರ್ಥ್ಯಹೀನ ॥ ೨ ॥

ಕಾಂತಾ, ಹೆಣ್ಣಿಗೆ ನಾನೆಂದೂ ವಶವಾಗಿಲ್ಲವೆಂದು ಪಂಥ ತೊಡುತ್ತಿರುವಿಯಲ್ಲ! ಹಿಂದಕ್ಕೆ ಶುಂಭ, ನಿಶ್ಶುಂಭ, ರಕ್ತಬೀಜ, ಮಹಿಷಾಸುರಾದಿ ರಾಕ್ಷಸರು ಹರಿ, ಹರ, ಬ್ರಹ್ಮರೆನಿಸಿದ ನಿಮ್ಮನ್ನು ಹಿಡಿದು ದಂಡಿಸಲು ಹವಣಿಸುತ್ತಿರುವ ಸಮಯದಲ್ಲಿ, ಅದರ ಆರ್ಭಟಕ್ಕೆ ಎದೆಯೊಡೆದು ಸತ್ತೆವೆಂದು ದಿಕ್ಕೆಟ್ಟು ಓಡಿ ಬಂದಿರಿ. ಕಣ್ಣೀರು ಉದುರಿಸುತ್ತ, ಆದಿಶಕ್ತಿಯೆನಿಸಿದ ನನ್ನ ಪಾದದ ಮೇಲೆ ಬಿದ್ದು 'ನಮ್ಮನ್ನು ಆದಷ್ಟು ರಕ್ಕಸರ ಕೈಯೊಳಗೆ ಕೊಡಬೇಡ, ಹ್ಯಾಗಾದರೂ

ಮಾಡಿ ಉಳಿಸಿಕೊ'-ಎಂದು ನೀವ್ಯಾಕೆ ನನ್ನ ಬೆನ್ನು ಬಿದ್ದಿರಿ? 'ನಾನೇ ಸರ್ವಶಕ್ತನು, ಮಾಯೆಗೆ ಮಣಿಯದವನು'-ಎಂಬ ಈ ನಿನ್ನ ನುಡಿ ಆಗೆಲ್ಲಿ ಅಡಗಿತ್ತು?

ಪ.- ಹೇ ನನ್ನ ಮುದ್ದು ಮಡದಿ, ನಿನ್ನ ಹಾಳು ಪುರಾಣವನ್ನು ನನ್ನ ಮುಂದೆ ಬಿಚ್ಚಬೇಡ. ಶುಂಭ, ನಿಶ್ಯುಂಭ ರಾಕ್ಷಸರಿಗೆ ಗಂಡಸರಿಂದ ಮರಣವಾಗಬಾರದೆಂದು ವರವು ಇದ್ದುದರಿಂದ, ಸ್ತ್ರೀಯಳಾದ ನಿನ್ನಿಂದ ಅವರನ್ನು ಕೊಲ್ಲಿಸಬೇಕಾಯಿತೇ ಹೊರತು ನಿನ್ನ ಹೆಚ್ಚಳದಿಂದಲ್ಲ. ನನ್ನ ಮಾತು ಮೀರಿ ಆ ಅಲ್ಲಮನನ್ನು ಗೆಲ್ಲುವದಕ್ಕೆ ನೀನು ಮಾಯೆಯನ್ನು ಕಳಿಸಿದರೆ, ನಿಶ್ಚಯವಾಗಿ ಮೋರೆಯನ್ನು ಒಣಗಿಸಿಕೊಂಡು ಕೂಡ್ರಬೇಕಾಗುವದು.

ಪಾ.-ಬಿಡು, ಬಿಡು, ನಿನ್ನ ಅಲ್ಲಮನ ಪೌರುಷವನ್ನು ನನ್ನ ಮುಂದೆ ಹೇಳಬೇಡ.

ಪ.- ನಿನ್ನ ಮಾಯೆಯ ಪೌರುಷವನ್ನು ನನ್ನ ಮುಂದೆ ಹೇಳಬೇಡ.

ಪಾ.-ನೋಡು, ಈಗಲೇ ಮಾಯೆಯನ್ನು ಕಳಿಸಿ, ಅಲ್ಲಮನನ್ನು ಘಾಸಿಗೊಳಿಸಿ, ನಿನ್ನಲ್ಲಿಗೆ ಹಿಡಿದು ತರಿಸುತ್ತೇನೆ.

ಪ.- ನಿನ್ನಿಂದಾಗದು.

ಪಾ.-ನಾನು ಗೆದೆಯುವದೇ ಗಟ್ಟಿ.

ಪ.- ನೀನು ಸೋಲುವದೇ ಗಟ್ಟಿ.

ಪಾ.-ಮಾಯೆಯು ಅಲ್ಲಮನಿಗೆ ಸೋತರೆ, ನೀನೇ ಶ್ರೇಷ್ಠನು.

ಪ.- ನಿನ್ನ ಮಾಯೆಗೆ ನನ್ನ ಅಲ್ಲಮನು ಸೋತರೆ ನೀನೇ ಶ್ರೇಷ್ಠಳು.

ಪಾ.-ಆಗಲಿ, ಒಂದು ಕೈ ನೋಡುತ್ತೇನೆ.

ಪ.- ನೋಡಬಹುದು.

ಪಾ.- ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಬಾರೆ ಮಾಯಿ, ಜಗದ ಮೋಹಿ, ಸೌಖ್ಯದಾಯಿ, ಬಾ ಸುಗುಣೆss ॥ ಪಲ್ಲ॥

ಏರು : ಚಂದಿರವದನೆ, ಕುಂದರ ಸುರದನೆ, ಮಂಜುಳವಾಣಿ, ಕುಂಜರಗಮನೆ
ನೀರೆ ತೋರೆ ಬಾರೆ, ಬೇಗನೆ ಸರಸದಲಿ, ಹರುಷದಲಿ ಚರಿಸುತಲಿ.

ಮಾಯೆ–(ಬರುತ್ತ) ಪದ : ತಾಳ : ಕೇರವಾ; ರಾಗ : ಮಿಶ್ರಪೀಲು

ಯಾಕೆ ಮಾತೆ, ಲೋಕನಾಥೆ, ಈ ತನುಜಾತೆ, ಸ್ಮರಿಸಿದಿಯೇ
ಕರಿವರ ಗಮನೇ ಸರಸಿಜ ನೀ ನಯನೇ
ತ್ವರದಿ ಭರದಿ, ಹರದಿ ಪೇಳೆ, ಫಣಿವೇಣಿ ಕೀರವಾಣಿ

ಮಾತೋಶ್ರೀ, ತಮ್ಮ ಪಾದಾರವಿಂದಕ್ಕೆ ಈ ಬಾಲಕಿಯ ಅಭಿವಂದನೆ.

ಪಾ.– ಮುದ್ದುಮಗಳೆ, ಇತ್ತ ಬಾ, ವಿಶ್ರಮಿಸು

ಮಾ.– ಪದ : ತಾಳ : ಕೇರವಾ; ರಾಗ : ಮಿಶ್ರಕಾಪಿ

ಸರಸಿಜನೇತ್ರೆ ಪೇಳೆನಗೆಽ । ಕರಸಿದ ಕಾರಣ ಹೇಳೆನಗೆ ಜನನೀ
ಇಂದುಕೋಟಿ ಸಮ, ಅಂದವಾದ ಮುಖ, ಕಂದಿದ್ಯಾಕೆ ಇಂದು ಜನನೀ
ಚಂದ್ರವದನೇ ಸ್ಮರಿಸಿದ ಕಾರಣ ಹೇಳುನನಗೆ.

ಪಾ.– ಅಲ್ಲಮೆಂಬ ಒಬ್ಬ ಶಿವಯೋಗಿ ಗೆಲ್ಲಲಿಕ್ಕೆ ಕರೆಸಿದಿನೆ

ಮಾ.– ಆರ ಕೂಡೆ ಇಂಥ ಘೋರ ಪಂಥವಿದು,
ಗೌರಿ ಪೇಳೆ ನೀಯೆನಗೆ ತನುಜಳಿಗೆ.

ಪಾ.– ಮುದ್ದು ಕಾಂತನೊಳು ಜಿದ್ದುಗೈದಿಹೆನು
ಗೆದ್ದು ತರುವೆನೆಂದು ಮಗಳೆ ಮುದ್ದು ಮಗಳೇ

ಮಾ.– ಸಾಕು ಶೋಕವಿದಕ್ಯಾಕೆ ಚಿಂತಿಸುವೆ
ನೀಗು ನಿನ್ನಯ ಚಿಂತೆ ಗುಣವಂತೆ

ತಾಯೆ, ನನ್ನನ್ನು ತ್ವರಿತದಿಂದ ಕರಿಸಿದ ಕಾರಣವೇನು? ಅಪ್ಪಣೆ ಏನಿರುವದು?

ಶತಕೋಟಿ ಚಂದ್ರಕಳೆಗಳನ್ನು ತಿರಸ್ಕರಿಸಿ ಹೊಳೆವ ನಿನ್ನ ಮುಖವು ಇಂದೇಕೆ ಬಾಡಿದ ಬಕುಳ ವೃಕ್ಷದಂತೆ ಕಳೆಗುಂದಿದೆ? ಚಿಚ್ಛಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಇಚ್ಛಾಶಕ್ತಿ ಮುಂತಾದ ಸರ್ವಶಕ್ತಿಗಳು ನೀನೇ ಆಗಿರುವಾಗ, ನಿನಗೆ ಇಂಥ ಚಿಂತೆ ಹ್ಯಾಗೆ ಬಂತು? ಯಾರಿಂದ ಬಂತು? ಯಾವ ಕಾರಣಕ್ಕಾಗಿ ಬಂತು? ಬೇಗನೆ ತಿಳಿಸಿ ಹೇಳಿ, ನನಗೆ ಅಪ್ಪಣೆ ಕೊಡು. ನಾನೇನು ಮಾಡಲಿ ಹೇಳು? ಮುನಿಗಳು ಧರ್ಮಶಾಸ್ತ್ರವನ್ನು ಒಕ್ಕೊಟ್ಟು, ಕಾಮಶಾಸ್ತ್ರವನ್ನು ಕೊಂಡಾಡುವಂತೆ ಮಾಡಲೆ? ಇಲ್ಲವೆ ತಮ್ಮ ಕೈಯೊಳಗಿನ ಜಪಮಾಲೆಯನ್ನು ಬಿಟ್ಟು ಬೆರಗುಬಟ್ಟು ತಿರುಗುವಂತೆ ಮಾಡಲೆ? ಹರಿಪರಬ್ರಹ್ಮಾದಿಗಳೆಲ್ಲ

ನನ್ನ ಮೋಹ ಜಾಲಕ್ಕೆ ಬಲಿಯಾಗಿರಲು, ಉಳಿದ ನರನಾಯಿಗಳ ಪಾಡೇನು? ನಿನ್ನ ಮನದ ಚಿಂತೆಯನ್ನು ಮರೆಮಾಚದೆ ನನ್ನ ಮುಂದೆ ಹೇಳು, ತಾಯಿ.

ಪಾ.– ಮಗಳೇ ಮಮತೆಯ ಮಾಯೆ, ನಿನ್ನನ್ನು ಕರೆಸಿದ ಕಾರಣವೇನೆಂದರೆ– ಇಂದು ಎನ್ನ ಪ್ರಾಣಕಾಂತನಾದ ಶಿವನು ಹರಿಬ್ರಹ್ಮಾದಿಗಳಿಂದ ಕೂಡಿದ ಮಹಾ ಸಭೆಯಲ್ಲಿ, 'ಅಲ್ಲಮನೆಂಬ ವಿರಕ್ತನು ಮಾಯೆಯ ಎದೆಯನ್ನು ಮೆಟ್ಟಿ ನಡೆಯತಕ್ಕವನೆಂ'ದು ನುಡಿದನು. ಆಗ ನನಗೆ ಕಡುಕೋಪ ಬಂದು "ಅಲ್ಲಮನ ಬಡಿವಾರವನ್ನು ನನ್ನ ಮುಂದೆ ಬಡಬಡಿಸಬೇಡ; ಈ ಕ್ಷಣವೇ ನನ್ನ ಮಾಯೆಯನ್ನು ಕಳಿಸಿ, ಹೆಡಮುರಿಗೆ ಕಟ್ಟಿ ಅವನನ್ನು ಎಳೆದು ತರಿಸುವೆ"ನೆಂದು ಪಂಥ ಮಾಡಿದೆನು. ಪ್ರಯುಕ್ತಾ, ನೀನು ಈ ಕ್ಷಣವೇ ಭೂಲೋಕದಲ್ಲಿ ಅವತರಿಸಿ ಅಲ್ಲಮನನ್ನು ವಶಪಡಿಸಿಕೊಂಡು, ನನ್ನ ಪಂಥವನ್ನು ಗೆಲಿಸಬೇಕು.

ಮಾ.– ತಾಯೀ, ಇದೇನು ಮಹಾಕಾರ್ಯ! ಇದಕ್ಕೇಕೆ ಚಿಂತಿಸುವೆ? ಹೇಳುತ್ತೇನೆ ಕೇಳು.

ಪಾ.– ಅದೇನಿರುವದು ಹೇಳು.

ಮಾ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ (ಚಕ್ಕಡ)

ಮಾಯೆಯ ಮೀರಿದ, ಗಂಭೀರಾ
ಲೋಕದಲ್ಲಿ ಅವರ ಯಾವ, ಸೂರಾ
ಜಗವಿದು ಮಾಯೆಯ ಮಂದಿರಾ
ಒಂದೊಂದು ನಿರಿಗೆ ಹೊಂದಿದ ಸಂಧಿಗೆ
ತೂಗಿ ಬಿದ್ದಿಹರಿಂಥ ಯೋಗಿಗಳು, ಜೋಗಿಗಳು ॥ ೧ ॥

ಮೋಹವೆಂಬ ಮೇಟಿಯ ನಡಿಸಿಹೆನೊ
ಮಾಯಾಪಾಶವೆಂಬು ಕಣ್ಣಿ ಹಚ್ಚಿದೆನೊ
ಮೂವತ್ತುಮೂರು ಕೋಟಿ ದೇವರನು
ಸಾಲಧಾವಣಿಯಾಗಿ, ಕಟ್ಟಿಬಿಟ್ಟೇ ಬಿಗಿ
ಮಾಯೆಗೆ ಮೀರಿದ ಗಂಭೀರಾ, ಅವ ಯಾರಾ ॥ ೨ ॥

ದೇವಿ, ಇದಾವ ಘನ ಕಾರ್ಯ? ದೇವಾನುದೇವತೆಗಳನ್ನು ಸಾಲು ಡಾವಣಿ ದನಗಳ ಹಿಂಡಿನಂತೆ ನನ್ನ ಮಾಯಾಪಾಶವೆಂಬ ಕಣ್ಣಿಂದ ಹೊಡೆದುಕಟ್ಟಿದವಳು ನಾನು. ಅಂಥ ನನಗೆ, ಯಾವನೋ ಒಬ್ಬ ಕ್ಷುಲ್ಲಕ ಅಲ್ಲಮನನ್ನು ವಶಪಡಿಸಿಕೊಂಡು ಬರುವದು ಸಹಾಸದ ಕಾರ್ಯವಲ್ಲ. ಬೆಕ್ಕಿನ ಸುಳಿವಿಲ್ಲದ

ಸ್ಥಳದಲ್ಲಿ ಇಲಿಗಳು ಚೆಲ್ಲಾಟವಾಡುವುದು ಸಹಜ. ಅವು ಬೆಕ್ಕನ್ನು ಕಾಣುತ್ತಲೇ ತಮ್ಮ ಚೆಲ್ಲಾಟವನ್ನು ನಿಲ್ಲಿಸಿ ಚೆಲ್ಲಾಪಿಲ್ಲಿಯಾಗಿ ಸದ್ದಿಲ್ಲದೆ ಗುದ್ದು ಸೇರುತ್ತವೆ. ಹಾಗೆಯೇ ಹೆಣ್ಣಿನ ಸಂಚಾರವಿಲ್ಲದ ಸ್ಥಳದಲ್ಲಿ ಉದ್ದ ಗಡ್ಡದ ಸಾಧುಗಳ ಚೆಲ್ಲಾಟ ನಡೆಯುತ್ತದೆ. ಹೆಣ್ಣಿನ ಸಂಚಾರವಾದೊಡನೆ ಅವರು ತಮ್ಮ ಕಡಾಸವನ್ನು ಬಗಲಲ್ಲಿ ಇಟ್ಟುಕೊಂಡು ಓಡಹತ್ತುವರು. ಅವರ ನೀತಿಶಾಸ್ತ್ರದ ಸುದ್ದಿಗಳೆಲ್ಲ ಸದ್ದಿಲ್ಲದೆ ಗುದ್ದು ಸೇರುವವು. ಈ ಬ್ರಹ್ಮಾಂಡವೆಲ್ಲ ನನ್ನ ಕಣ್ಣ ಸನ್ನೆಯಲ್ಲಿಯೇ ಕುಣಿಯುತ್ತಿರಲು ಯಕಶ್ಚಿತ್ ಅಲ್ಲಮನೊಬ್ಬನನ್ನು ನನ್ನ ಅಧೀನದಲ್ಲಿ ತರುವುದು ಅದಾವ ಘನ ಕಾರ್ಯ? ಈಗಲೇ ಹೋಗಿ ಪಿಶಾಚಿರೂಪದ ಅಲ್ಲಮನನ್ನು ಪಿಚಂಡಿ ಕಟ್ಟಿ ತರುತ್ತೇನೆ. ಇದೇ ನನ್ನ ವೀರ ಪಂಥ!

ಪ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ (ಚಕ್ಕಡ)

ಬಿಡುಬಿಡು ಎನ್ನೊಳು ನುಡಿಯದಿರಿಂಥ ನುಡಿ
ನಡೆಯದು ಅವನಲ್ಲಿ ನಿನ್ನ ಆಟ
ಮಾನಗೇಡಾಗುವಿ ಗಟ್ಟಿಮುಟ್ಟ
ಬಾಗಿಸಿ ನಿನ್ನನು ಮೂಗ ಕೊಯ್ಯುವನು
ಯೋಗಿಯ ತಡೆವುದು ಅಲ್ಲ ಚಂದ, ಮತಿಮಂದ ॥ ೧ ॥

ನುಚ್ಚನು ತಿನ್ನಲು ನಾಯಿ ಹೆಚ್ಚಳದಿ
ಉರಿವ ಕಿಚ್ಚನು ತಿನ್ನಲು ತಾ ಪೋಗಿ
ನಾಶಾಗುವಂತೆ, ಅಲ್ಲಮ ಶಿವಯೋಗಿ
ಸುಂದರಿ ತಡವಿ ನಿಜವಾಗಿ ಕೆಡುವಿ
ಮಾಡುವದದೇ ಬಿಗಿ, ನುಡಿದಂತೆ. ನಡೆದಂತೆ ॥ ೨ ॥

ಎಲೆ ಜೊಳ್ಳು ಮಾಯೆ, ವ್ಯರ್ಥವಾಗಿ ಪಂಥವನ್ನು ತೊಡಬೇಡ. ನುಚ್ಚು ತಿನ್ನುವ ನಾಯಿ ಕಿಚ್ಚು ತಿಂದು ಬದುಕಬಲ್ಲದೆ? ಶಿವಭಕ್ತಿಶೂನ್ಯರಾಗಿ, ಶಿವಧ್ಯಾನ ಹೀನರಾಗಿ, ಬಾಹ್ಯಭ್ರಮೆಯಿಂದ ಬಳಲುವ ಮರುಳು ಮಾನವರ ಮೇಲೆ ನಡೆಸುವ ನಿನ್ನ ದರ್ಪವನ್ನು ಆ ಶಿವಶರಣ ಅಲ್ಲಮನ ಮೇಲೆ ನಡೆಸ ಹೋದರೆ ನಿನಗೆ ಅಪಮಾನವಾಗುವದು ನಿಶ್ಚಯ. ಅವನು ನಿನ್ನನ್ನು ಹಿಡಿದು ಬಗ್ಗಿಸಿ, ಮೂಗು ಕೊಯ್ದು ಮಾನಭಂಗ ಮಾಡದೆ ಬಿಡನು. ಬೇಡ, ವ್ಯರ್ಥ ಪಂಥ ತೊಡಬೇಡ. ಗೂಗಿಗಳ ಚೆಲ್ಲಾಟ ಕತ್ತಲೆಯಲ್ಲಿ ನಡೆವಂತೆ ಸೂರ್ಯನ ಬೆಳಕಿನಲ್ಲಿ ನಡೆಯದು. ಹಾಗೆ ಅಜ್ಞಾನವೆಂಬ

ಕತ್ತಲೆಯಲ್ಲಿ ಕಾಲಾಡಿಸುವ ಮಂದಮತಿಗಳ ಮಧ್ಯದಲ್ಲಿ ನಿನ್ನ ಡೌಲು ನಡೆಯಬಹುದೇ ಹೊರತು, ಶತಕೋಟಿ ಸೂರ್ಯ ಪ್ರಕಾಶವನ್ನು ಮೀರಿದ ಶಿವಭಕ್ತರ ಮುಂದೆ ನಿನ್ನ ಕಣ್ಣುಮುಚ್ಚಾಟ ಸಾಗಲಾರದು. ನನ್ನ ಶರಣರ ಮುಂದೆ ನಿನ್ನ ಬೇಳೆ ಬೇಯಲಾರದು. ಬಾಯಿಂದ ಆಡಿದಂತೆ ಕೈಯಿಂದ ಮಾಡಿ ತೋರಿಸುವದು ಕಠಿಣಕಾರ್ಯ. ರಣಹೇಡಿಯಂತೆ ಮೊದಲು ಬಹಳ ಮಾತಾಡಿ ಹಿಂದಿನಿಂದ ಮರ್ಯಾದೆಗೇಡಾಗುವದು ಚಂದವಲ್ಲ. ನೀನು ಪಾರ್ವತಿಯ ಮುಂದೆ "ನಾನು ಅಂಥಾ ಬಂಟಳು. ಇಂಥಾ ಬಂಟಳು, ಹರನನ್ನು ಕಟ್ಟಿ ತಂದವಳು, ಹರಿಯನ್ನು ಕುಟ್ಟಿ ನಿಂದವಳು. ಬ್ರಹ್ಮನನ್ನು ಮೆಟ್ಟಿ ಬಂದವಳು. ಆ ಅಲ್ಲಮನೆಂದರೆ ಎಷ್ಟರವನು? ಈಗಲೇ ಎಳೆದು ತರುವೆನೆಂದು" ಬಿಂಕದಿಂದ ಉಬ್ಬುಬ್ಬಿ ಮಾತನಾಡಿದಿ. ಈ ಅಬ್ಬರದ ಮಾತು ಆ ಅಲ್ಲಮನನ್ನು ಕಾಣುವವರೆಗೆ ಮಾತ್ರ! ನೀನು ಅವನನ್ನು ಕಂಡೊಡನೆ ಹುಲಿಯನ್ನು ಕಂಡ ಮೊಲದಂತೆ ದಿಕ್ಕೆಟ್ಟು ಓಡಿ ಹೋಗುತ್ತಿ. ಬೇಡ, ಅಲ್ಲಮನನ್ನು ಗೆಲ್ಲುವ ಹವ್ಯಾಸ ನಿನಗೆ ಬೇಡ. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು! ಅಲ್ಲಮನನ್ನು ತಡವಿ ಮಾನಗೇಡಿ ಆಗಬೇಡ.

ಪಾ.–ಎಲೈ ಶಿವನೆ, ನಿನ್ನಂಥ ನಾಚಿಕೆಗೇಡಿಯನ್ನು ನಾನೆಲ್ಲಿಯೂ ಕಾಣಲಿಲ್ಲ. ಮಾಯೆಯ ಕೈಯಲ್ಲಿ ಸಿಕ್ಕು ಅನೇಕ ಸಲ ಮಗ್ಗಲ ಮುರಿಸಿಕೊಂಡರೂ ನಿನಗೆ ಬುದ್ಧಿ ಬರಲಿಲ್ಲ. ಮೀಸೆಗೆ ಮಣ್ಣು ಹತ್ತಿದರೂ ಒರಸಿಕೊಂಡು, ಮೀಸೆಗೆ ಏನಾಗಿಲ್ಲವೆಂದು ಮೀಸೆ ತಿರುವುತ್ತಿರುವ ನಿನ್ನಂಥ ಮೀಸೆಹರಕನ ಕೂಡ ಮಾತಾಡುವದೇ ಕಷ್ಟ.

ಪ.– ಎಲೆ ಬಾಯ ಬಡಕಿ, ಮಾಯೆಗೆ ಮರುಳಾಗಿ ಮಗ್ಗಲು ಮುರಿಯುವ ಹಾಗೆ ನಾನೆಂದು ಬಿದ್ದು ಒದ್ದಾಡಿದೆ?

ಪಾ.–ಅದನ್ನು ಮಾಯೆಯ ಬಾಯಿಯಿಂದಲೇ ಕೇಳು.

ಪ.– ಅವಳೇನು ಹೇಳಬಲ್ಲಳು?

ಮಾ.–ಈಗ ಆ ಮಾಯೆಯೇ ಹೇಳುತ್ತಾಳೆ; ಎಲೆ ಪಾಪಿ, ಹಿಂದೊಮ್ಮೆ ನನ್ನ ಸೌಂದರ್ಯಕ್ಕೆ ಮರುಳಾಗಿ ಭ್ರಮಿಷ್ಟನಂತೆ ಬೆನ್ನು ಹತ್ತಿ ತಿರುಗಿದ್ದನ್ನು ಮರೆತೆಯಾ? ಮೂಗು ಹೋದರೇನಾಯಿತು; ಹೊರಳಿ ಇಲ್ಲವೇನು? ಎಂದು, ಕೊಯ್ದ ಮೂಗನ್ನೇ ಮೇಲೆ ಮಾಡಿಕೊಂಡು ತಿರುಗುತ್ತಿಯಲ್ಲ!

ಪ.– ಎಲೆ ಮಾಯೆ, ನಿನ್ನ ಬೆನ್ನು ಹತ್ತಿ ನಾನೆಂದು ತಿರುಗಿದೆನು?

ಮಾ.–ಎಂದೂ ತಿರುಗಿಲ್ಲವೆ?

ಪ.– ಎಂದೂ ತಿರುಗಿಲ್ಲ.

ಮಾ.–ನೋಡು.

ಪ.– ಉಹೂಂ, ನಾನೆಂದೂ ತಿರುಗಿಲ್ಲ.

ಮಾ.– ಪದ : ತಾಳ : ದೀಪಚಂದ; ರಾಗ : ಕಾಫಿ

ಸುಡು ಸುಡು ನಿನ್ನ ದೊಡ್ಡಿಸ್ತನsss
ತ್ರಿಪುರದಹನ, ಕಾಲದಿ ನೀನಾ ॥ ಪಲ್ಲ ॥

ಮಾಯೆಯ ಸುತ್ತಲೆ ತಿರುಗಿದೆ ಬತ್ತಲೆ
ಮಾಯೆಯ ಸತ್ವ ತಿಳಿಯದೆ ಹ್ಯಾಂವಾ
ತೊಡುವಿಯೊ, ಶಿವಾ
ಮೋಹಿಸಿ ನೀನು, ಋಷಿಪತ್ನಿಯರನು
ಹತ್ತಿದೆ ಬೆನ್ನ, ಬತ್ತಲೆ ನೀನಾ, ನಾಚಿಕಿ ಹೀನಾ

ಮರುಳು ಮಹಾದೇವ. ಇತ್ತ ಹೊರಳು. ಸುಳಿಗೂದಲ ಸುಗುಣಿಯರನ್ನು ಕಂಡು, ಬುದ್ಧಿಭ್ರಮೆಯಾದವರಂತೆ ಲಜ್ಜೆಗೆಟ್ಟು ಬತ್ತಲೆ ತಿರುಗಲಿಲ್ಲವೆ?

ಪ.– ನಾನೆಂದು ತಿರುಗಿದೆ?

ಮಾ.–ಓಂದಕ್ಕೆ ತ್ರಿಪುರಸಂಹಾರ ಕಾಲದಲ್ಲಿ, ತ್ರಿಪುರಗಳ ಮರ್ಮವನ್ನು ಅರಿಯಲು ನೀನು ಯಾವ ವನದಲ್ಲಿ ಹೋದೆ?

ಪ.– ದ್ವಾರಕಾ ವನದಲ್ಲಿ ಹೋದೆನು.

ಮಾ.–ಆ ದ್ವಾರಕಾ ವನದಲ್ಲಿ ಯಾರು ಇದ್ದರು?

ಪ.– ವಾನಪ್ರಸ್ಥಾಶ್ರಮಿಗಳಾದ ಋಷಿಗಳು ಇದ್ದರು.

ಮಾ.–ಆ ಋಷಿಗಳ ಹೆಂಡಿರ ಚಲ್ವಿಕೆಯನ್ನು ಕಂಡು ಚಕಿತನಾಗಿ, ಮಾಯಾರೂಪ ತೊಟ್ಟು, ಮರ್ಯಾದೆಗೆಟ್ಟು, ಮೈಮೇಲಿನ ಅರಿವೆ ಕಳಚಿ, ಬಾಲೆಯರ ಬೆನ್ನು ಹತ್ತಿ ನೀನು ತಿರುಗಾಡಿದಿ. ಹೀಗಿದ್ದು ಈಗ "ನಾನಾಗಲಿ, ನನ್ನ ಭಕ್ತರಾಗಲಿ ಮಾಯೆಗೆ ವಶವಾಗುವವರಲ್ಲವೆಂದು ಹೇಳುವದಕ್ಕೆ ನಿನ್ನ ಮೋರೆಯ ಮೇಲೆ ಮೂಗು ಇದೆಯೆ? ನಂದಿಯನ್ನೇರಿದಂಥ ಅನಂತಕೋಟಿ ರುದ್ರರು, ಗರುಡನನ್ನೇರಿದಂಥ ಅನಂತಕೋಟಿ ವಿಷ್ಣುಗಳು, ಹಂಸನನ್ನೇರಿದಂಥ ಅನಂತಕೋಟಿ ಬ್ರಹ್ಮರು, ಅಂಗಾಲಲ್ಲಿ ಕಣ್ಣುಳ್ಳವರು,

ಮೈಯೆಲ್ಲಾ ಕಣ್ಣಾದವರು–ಎಲ್ಲರೂ ನನ್ನ ಎಡಗಾಲಲ್ಲಿ ಹಾಕಿಕೊಂಡಿರುವ ಹುಲ್ಲುಸರವಿಯಲ್ಲಿ ಗೆಜ್ಜೆಗಳಾಗಿ ಕೂತು ನರ್ತನಕ್ಕೆ ಗಿಲಿಗಿಲಿ ಸಪ್ಪಳ ನೀಡುತ್ತದ್ದಾರೆ. ಓಗಿರಲು, ಆ ನಿನ್ನ ಅಲ್ಲಮ ಅಂದರೆ ಎಷ್ಟರವನು? ಅವನು ಮೈಗೆ ಬೂದಿಯನ್ನೊರಸಿಕೊಂಡು ಅಲ್ಲಲ್ಲಿ ಗೀರಗಂಧವನಿಟ್ಟುಕೊಂಡು, ನನ್ನ ಮೋರೆಯನ್ನೇ ನೋಡುತ್ತ, ನನ್ನ ಬೆನ್ನು ಹತ್ತಿ ಬರುವಂತೆ ಮಾಡದಿದ್ದರೆ ನಾನು ಮಾಯೆಯೇ ಅಲ್ಲ.

ಪ.– ಹೇ ತುಚ್ಛ ಮಾಯೆ, ಅಲ್ಲಮನ ಹೆಚ್ಚಳಿಕೆಯನ್ನು ತಿಳಿಯದೆ, ನಾನೇ ಹೆಚ್ಚಿನವಳೆಂದು ಮನಬಂದಂತೆ ನಿನ್ನ ಪೌರುಷವನ್ನು ಕೊಚ್ಚಬೇಡ. ಶಿವಶರಣರು ಮಾಯೆಯನ್ನು ಹುಳುಬಿದ್ದ ಹುಚ್ಚನಾಯಿಗಿಂತಲೂ ಕಡಿಮೆಯೆಂದು ಭಾವಿಸುವರು.

ಪಾ.– ಪ್ರಾಣನಾಥಾ, ನನ್ನ ತಾಮಸಕಳೆಯಾದ ಮಾಯೆಯನ್ನು ಇಚ್ಛೆಗೆ ಬಂದಂತೆ ತುಚ್ಛೀಕರಿಸಿ ಮಾತನಾಡಬೇಡ. ಮಾಯೆಯ ಘನತೆ ಯಾರಿಗೂ ತಿಳಿಯದು. ಈ ಜಗತ್ತೆಲ್ಲ ಮಾಯೆಯಿಂದಲೇ ಹುಟ್ಟಿ, ಮಾಯೆಯಿಂದಲೇ ಬೆಳೆಯುತ್ತದೆ. ಜಗತ್ತು ಮಾಯಾದೇವಿಯ ನರ್ತನಶಾಲೆಯಾಗಿದೆ. ಈ ಮಾಯೆ ಯಕಃಶ್ಚಿತಳಲ್ಲ. ಹರಿಹರಬ್ರಹ್ಮಾದಿಗಳನ್ನು ನುಂಗಿ ನೀರುಕುಡಿದವಳು ಮಾಯೆ. ಅಂಥ ಅಗಮ್ಯ ಮಾಯೆಯ ಪ್ರತಾಪವನ್ನು ತಿಳಿಯದೆ ವ್ಯರ್ಥವಾಗಿ ಪ್ರಸಂಗಿಸಬೇಡ, ಈ ಕ್ಷಣವೇ ಅವಳನ್ನು ಕಳಿಸಿ, ಅಲ್ಲಮನನ್ನು ಹೆಡಮುರಿಗೆ ಬಿಗಿಸಿ ತರಿಸದಿದ್ದರೆ ನಾನು ಪಾರ್ವತಿಯಲ್ಲ.

ಮಾ.–ಎಲೈ ಮರುಳ ಶಂಕರಾ, ನನ್ನ ಮಹಿಮೆಯನ್ನು ತಿಳಿಯದೆ, ಹುಳುಬಿದ್ದ ಹುಚ್ಚ ನಾಯಿಯೆಂದು ನನ್ನನ್ನು ಜರೆದು ಮಾತಾಡಿದೆಯಲ್ಲ! ಇಗೋ, ಈಗಲೇ ಹೋಗಿ ಮಾಯಾವರಣದಲ್ಲಿ ಅವನನ್ನು ಮುಚ್ಚಿ ನನ್ನ ಬೆನ್ನ ಹಿಂದೆಯೇ ಕರೆದುಕೊಂಡು ಬಂದರೆ, ನನಗೆ "ಹೌದು ಮಾಯಿ"–ಎಂದು ಕರೆ. ಇಲ್ಲದಿದ್ದರೆ ನನ್ನನ್ನು 'ಶಿವಶರಣರ ಮನೆಯ ಬಾಗಿಲ ಕಾಯುವ ನಾಯಿ'–ಎಂದು ಕರೆ. ಇದೋ ಈಗಲೇ ಹೊರಟೆ.

ಪ.– ಅರಗಿನ ಕುದುರೆಯ ಮೇಲೆ ಉರಿಯ ಸವಾರಿ ! ನಡೆಯಲಿ ನಿಮ್ಮ ಹುಚ್ಚಾಟ!!!

◆

೩

ಅಲ್ಲಮನ ಪ್ರವೇಶ

ಅಲ್ಲಮ– ಪದ : ತಾಳ : ಕೇರವಾ, ರಾಗ : ಭೀಮಪಲಾಸ

ನಮೋ ಶಂಕರಾಽಽ ಗುರುವರಾ ॥ ಪಲ್ಲ ॥

ಪಾಲಿಸೋ ಹರನೆ, ಪಾರ್ವತೀ ಹರನೆ,
ಫಾಲಾಕ್ಷಧರನೆ, ನಮೋ ಶಂಕರಾಽ ಗುರುವರಾ ॥ ೧ ॥

ತ್ರಿಶೂಲಧರನೆ, ತ್ರಿನೇತ್ರಹರನೇ,
ತ್ರಿಪುರದಹನೆ, ನಮೋ ಶಂಕರಾಽ ಗುರುವರಾ ॥ ೨ ॥

ಫಲಪುರವಾಸ ಶ್ರೀಸಿದ್ಧೇಶ,
ಕೈಲಾಸವಾಸ, ನಮೋ ಶಂಕರಾಽ ಗುರುವರಾ ॥ ೩ ॥

ವಿಚಿತ್ರ! ಈ ಮಾಯಾಪ್ರಪಂಚದ ಕಾರ್ಯ ವಿಚಿತ್ರ! ಈ ಮಾಯೆ ಜನರ ಮನಸ್ಸನ್ನು ಬಲವತ್ತರವಾಗಿ ಸೆಳೆದುಕೊಂಡು, ಅವರನ್ನು ಮಹಾಕಷ್ಟಕ್ಕೆಗುರಿ ಮಾಡುತ್ತಲಿದೆ! ಮನುಷ್ಯರು ಭೂತ ಬಡೆದವರಂತೆ ತಮ್ಮನ್ನು ತಾವು ಮರೆತು, ಮನಬಂದ ಹಾಗೆ ಬಡಬಡಿಸುತ್ತಾರೆ. ಶಿವ ಶಿವಾ, ಈ ನರರು ಎಷ್ಟೊಂದು ಕಷ್ಟಪಡುತ್ತಿರುವರು! ಮೋಸಗಾರನ ಸುಲಿಗೆಗೆ ತುತ್ತಾಗಿ ಗೋಳಿಡುವ ನಿರಪರಾಧಿಗಳಂತೆ ಮಾನವರು ಆಸೆಯೆಂಬ ಪಾಶಕ್ಕೆ ಸಿಕ್ಕು, ಇಹ–ಪರಗಳ ಪರವೆಯಿಲ್ಲದೆ ನೆಲೆಗೆಟ್ಟು ತೊಳಲಾಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿಯೂ ಈ ಮಾಯಾಪಿಶಾಚಿಯ ಬೆನ್ನು ಬಿಡರು. ಇಂತಹ ಮರುಳ ಮಾನವರ ಗತಿಯೇನು? ಈ ಪಿಶಾಚಿಯ ಬೆನ್ನು ಹತ್ತಿ ಮನೆಮಾರು ಮೂಲೆಗುಂಪಾದವು. ಜನರು ತೊಳಲಿ ಬಳಲಿ ಬೆಂಡಾದರು. ಯಮದೂತರ ಕಾಟ ಮಿತಿ ಮೀರಿತು. ಆ ಭ್ರಷ್ಟ ಆಸೆಯ ಬೆನ್ನು ಹತ್ತಿರುವ ಜನಕ್ಕೆ ಏನೆನ್ನಬೇಕು? ದೀಪ ಬಡಿಯುವ ಹುಳವು ಹಣ್ಣೆಂಬ ಭ್ರಮೆಯಿಂದ ದೀಪಕ್ಕೆರಗಿ ಹುರಪಳಿಸಿ ಬಿದ್ದು ಒದ್ದಾಡುತ್ತದೆ. ಆದರೂ ಆ ಹಣ್ಣಿನ ಭ್ರಮೆ ಹೋಗದೆ ಪುನಃ ಎರಗಿ ಅನರ್ಥಕ್ಕೆ ಗುರಿಯಾಗುವದು. ಅದರಂತೆ ಈ

ಮಾಯಾ ಪ್ರಪಂಚವು ಜೀವಿಗಳನ್ನು ಹುರಪಳಿಸಿ ಬಿಡುವ ದೀಪವಾಗಿದೆ. ಅದನ್ನು ತಿಳಿದರೂ ಮಾನವರು ಮಾಯಾ ಭ್ರಮೆಯಿಂದ ದೀಪವೆಂಬ ಸಂಸಾರಕ್ಕೆ ಸಿಲುಕಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ, ಗತಿಗಾಣದೆ ಹೋಗುವರು. ಇಂತಹ ಜೀವಿಗಳ ಕಷ್ಟ ಪರಂಪರೆಯನ್ನು ಕಂಡು ಕನಿಕರಗೊಂಡು, ಅವರ ಉದ್ಧಾರಕ್ಕಾಗಿ ವಚನ ಶಾಸ್ತ್ರವನ್ನು ನಿರ್ಮಿಸಿದ್ದೇವೆ. ಆದರೆ ಕುರುಡರ ಮುಂದೆ ಕಂದೀಲು ಇಟ್ಟಂತೆ ಆ ಶಾಸ್ತ್ರದ ಗತಿಯಾಗಿದೆ. ಅಂತೆಯೇ ನಾನು ಶಿವನಾಜ್ಞೆಯಿಂದ ಜಂಗಮ ರೂಪ ಧರಿಸಿ, ಮುಂದುಗಾಣದ ಭಕ್ತರನ್ನು ಕಂಡು ಗುರೂಪದೇಶ ಮಾಡಿ, ಪ್ರಸಾದ ಕೊಟ್ಟು ಪವಿತ್ರ ಮಾಡಲಿಕ್ಕೆ ಸಂಚಾರ ಕೈಕೊಂಡಿದ್ದೇನೆ. ಮಾನವರನ್ನು ಮುಸುಕಿದ ಈ "ಮಾಯಾಜಾಲ"ವನ್ನು ಕಿತ್ತೊಗೆದು. ಅವರನ್ನು ಸಂಸಾರದಿಂದ ಮುಕ್ತಗೊಳಿಸುವದೇ ನನ್ನ ಅವತಾರದ ಉದ್ದೇಶವಾಗಿದೆ. ಹೀಗಿರಲು ಆ ಮಾಯೆಯು ಪರಮೇಶ್ವರನ ಸಭೆಯಲ್ಲಿ ನನ್ನನ್ನು ಗೆಲ್ಲುವೆನೆಂದು ಪಂಥ ಹೂಡಿ ಭೂಮಿಗೆ ಬಂದು ಜನಿಸಿ, ಬನವಾಸಿ ಪಟ್ಟಣದಲ್ಲಿ ಬೆಳೆಯುತ್ತಿರುವಳಂತೆ. ಒಳ್ಳೆಯದು. ಈ ಕ್ಷಣವೇ ನಾನು ಅಲ್ಲಿಗೆ ಹೋಗಿ, ನನ್ನನ್ನು ತಿರಸ್ಕರಿಸಿ ಮಾತಾಡಿದ ಆ ಮಾಯೆಯ ಮುಂದಲೆಯನ್ನು ಹಿಡಿದು ಬಗ್ಗಿಸಿ, ಮೂಗು ಕೊಯ್ದು ಮಾನಭಂಗ ಮಾಡದಿದ್ದರೆ ನಾನು ಅಲ್ಲಮನಲ್ಲ.

ದೂತಿ–ಈತ ಯಾರು? ಹೇಳವರಿಲ್ಲ, ಕೇಳವರಿಲ್ಲ; ತನ್ನಷ್ಟಕ್ಕೆ ತಾನೇ ವಟ ವಟ, ಪಿಟಿಪಿಟಿ ಹಚ್ಯಾನ! ಸ್ವಾಮಿಾ, ತಾವು ದಾರು?

ಅ.– ಸತ್ಪುರುಷರ ನಿಲುಮೆಯನ್ನು ತಿಳಿಯದೆ, ಇಚ್ಛೆಗೆ ಬಂದಂತೆ, ಬಡಬಡಿಸುವ ತುಚ್ಛ ಸ್ತ್ರೀ ನೀ ಯಾರು?

ದೂ.– ನಾನು ಯಾರಿss!

ಅ.– ನೀನು ಯಾರಿಯೇ?

ದೂ.– ನಾನು ಯಾರಿ, ಕೇಳಿದರೆ ಕಾರಿ ; ಸತ್ತಗಳಿಗ್ಗೆ ಒಯ್ಯದಿದ್ದರೆ ಹೊಲಸ ನಾರಿss

ಅ.– ನೀನು ಯಾರಿಯೇ?

ದೂ.–ಹೌದು ನಾನು ಯಾರಿ! ಕರೆದಲ್ಲೇ ವಯ್ಯಾರಿ!! ಒಲ್ಲೆನೆಂದರೂ ಬಿಡದ ಛೀಮಾರಿ!!!

ಅ.– ನೀನೇನು ಹೆಸರು ಹೇಳುವಿಯೋ? ಇಲ್ಲದ ಕುಚೇಷ್ಟೆ ಮಾಡುವಿಯೋ?

(ಕೃಷ್ಣಾಜಿನದಿಂದ ಹೊಡೆಯ ಹೋಗುವನು)

ದೂ.–ಬಡಿಬ್ಯಾಡ್ರಿಯಪ್ಪ ಹೇಳತೀನಿ; ಅಯ್ಯಯ್ಯ ಮೈಮೇಲೆ ಬಾಸಾಳs ಎದ್ದವು. ನನ್ನಂಥ ಕತ್ತೆಗುಣದವರು ಲತ್ತೆಗೆ ಮೆತ್ತಗಾಗತಾರ. ಸ್ವಾಮಿ, ನನಗೆ ದೂತಿ ಅಂತಾರ. ತಮ್ಮ ಹೆಸರೇನು ಹೇಳಿರಿ?

ಅ.– ದೂತೆ, ನಾನು ಸತ್‌ಪುರುಷನಿದ್ದೇನೆ.

ದೂ.– ಸತ್ತ ಪುರುಷ! ಸತ್ತವರು ಮಾತಾಡತಾರೇನ್ರೀss......?

ಅ.– ನಾನು ಅವತಾರಿಕ ಪುರುಷನಿದ್ದೇನೆ.

ದೂ.–ತಾರಕ ಪುರುಷ! ಹಳ್ಳೀತಾರಕವೋ? ದಿಳ್ಳೀ ತಾರಕವೋ?

ಅ.– ಛೀ ಮೂರ್ಖಳೇ, ನಿನಗೆ ಇಷ್ಟೂ ತಿಳಿಯದೆ? ಅವತಾರಿಕನೆಂದರೆ– ಭೂಲೋಕವನ್ನು ಉದ್ಧಾರ ಮಾಡಲು ಶಿವಲೋಕದಿಂದ ಇಳಿದು ಬಂದ ಸಚ್ಚಿದಾನಂದ ಸ್ವರೂಪನಾದ ಶಿವಯೋಗಿ ಇದ್ದೇನೆ.

ದೂ.–ಶಿವಲೋಕದಿಂದ ಇಳಿದು ಬಂದ್ರ್ಯಾ? ಅಲ್ಲಿಂದ ಇಲ್ಲಿಗೆ ಇಳಿದು ಬರಬೇಕಾದ್ರ ಅಷ್ಟುದ್ದ ನಿಚ್ಚಣಿಕೆ ಎಲ್ಲಿಂದ ಬಂತ್ರಿ?

ಅ.– ಮೂಢಳೇ, ಇಚ್ಛಾಮಾತ್ರದಿಂದ, ಬ್ರಹ್ಮಾಂಡವನ್ನೆಲ್ಲ ಸಂಚರಿಸುವ ನನಗೆ ಇಳಿದು ಬರಲು ನಿಚ್ಚಣಿಕೆ ಯಾಕೆ ಬೇಕು? ನಾನೇ ಸಾಕ್ಷಾತ್ ಶಿವನಿದ್ದೇನೆ.

ದೂ.–ಹೈ, ನೀನೇ ಸಾಕ್ಷಾತ್ ಶಿವಾ?

ಅ.– ಹೌದು ನಾನೇ ಸಾಕ್ಷಾತ್ ಶಿವ.

ದೂ.–ತಾವು ಸಾಕ್ಷಾತ್ ಶಿವನಾದರೆ, ಕೈಲಾಸವನ್ನು ಬಿಟ್ಟು ಇಲ್ಲಿಗೆ ಬಂದ ಕಾರಣವೇನು?

ಅ.– ದೂತೆ, ಹೇಳುತ್ತೇನೆ ಕೇಳು :

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಹೇಳುವೆ ಕೇಳ ದೂತೆ, ಸುಗುಣವಿಖ್ಯಾತೆ
ಅವತರಿಸಿ ಬಂದ ರೀತಿ (ದುಗುಣ) ॥ ಪಲ್ಲ ॥

ಏರು : ಗಾರುಡಿ ಆಟದ, ಕಣ್ಣಿಗೆ ಮಾಟದ
ಮಾಯೆ ಎಂಬುವ ನಾರಿ. ನನಗೆ ಇರುವಳೋ ವೈರಿ ॥ ೧ ॥

ಜಗವು ಎಂಬುವ ಬಲಿ, ರಚಿಸಿ ತಾನದರಲಿ
ಇರಿಸಿ ಬಿಟ್ಟಿಹಳೊ ಚಂದ, ರೂಪವು ರಸಗಂಧ ॥ ೨ ॥

ಆಸೆಪಾಶವನಿಕ್ಕಿ, ಮನುಷ್ಯರೆಂಬುವ ಹಕ್ಕಿ
ಘಾಸಿಗೈವಳೊ ಈಕಿ, ಅದಕೆ ಬಂದೆನೆ ಸಖಿ ॥ ೩ ॥

ದೂತೆ. ಸಾಕ್ಷಾತ್ ಶಿವನಾದ ನಾನು ಕೈಲಾಸವನ್ನು ಬಿಟ್ಟು ಈ ಭೂಲೋಕಕ್ಕೆ ಅವತರಿಸಿ ಬಂದ ಕಾರಣವನ್ನು ನಿನಗೆ ಹೇಳಬೇಕಲ್ಲವೆ? ಕತ್ತಲ ತತ್ತಿಂಯಂತಿರುವ ಬಂಗಾಲಿ ಆಟದ ಹೆಂಗಸೊಬ್ಬಳು ನನಗೆ ವಿರೋಧಿಯಾಗಿದ್ದಾಳೆ; ಅವಳ ಹೆಸರು ಮಾಯೆ. ಅವಳಿಗೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ಜನ ಮಕ್ಕಳಿದ್ದಾರೆ. ಆಕೆಯು ಅವರನ್ನು ಕೂಡಿಕೊಂಡು ಜಗತ್ತಿಗೆ ಗಾರುಡಿ ಬಲೆ ಬೀಸಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಚಿತ್ರವಿಚಿತ್ರವಾದ ನೋಟಗಳನ್ನು ಇರಿಸಿ; ಆಸೆಯೆಂಬ ಪಾಶವನ್ನು ಧರಿಸಿ, ಮನುಷ್ಯರೆಂಬ ಹಕ್ಕಿಗಳನ್ನು ಹಿಡಿದು ಕನಿಕರವಿಲ್ಲದೆ. ಕಷ್ಟಪಡಿಸುತ್ತಿದ್ದಾಳೆ. ಅದನ್ನು ಕಂಡು, ಕನಿಕರಗೊಂಡು ಮಾನವರನ್ನು ಮಾಯಾಜಾಲದಿಂದ ಬಿಡುಗಡೆ ಮಾಡಿ, ಸತ್ಯ ಸುಖವನ್ನು ನೀಡಿ ಉದ್ಧರಿಸುವದಕ್ಕಾಗಿ, ನಾನು ನಿರ್ಗುಣನಾದರೂ ಲೋಕೋದ್ಧಾರಕ್ಕಾಗಿ ಸಗುಣರೂಪವನ್ನು ಧರಿಸಿ, ಮೇಲಿಂದ ಮೇಲೆ ಅವತಾರ ಮಾಡುವದು ನನ್ನ ಗುರಿಯಾಗಿದೆ.

ದೂ.–ತಾವು ಮೇಲಿಂದ ಮೇಲೆ ಅವತಾರ ಮಾಡುತ್ತಿದ್ದರೆ, ಇದಕ್ಕೂ ಮೊದಲು ತಾವು ಅವತಾರ ಮಾಡಿರಬೇಕಲ್ಲವೆ?

ಅ.– ಹೌದು, ಮಾಡಿದ್ದೇನೆ.

ದೂ.–ಯಾವ ಯಾವ ಯುಗದಲ್ಲಿ, ಯಾವ ಯಾವ ಅವತಾರವನ್ನು ಮಾಡಿದಿರಿ?

ಅ.– ದೂತೆ, ನಾನು ಈ ಮೊದಲು ಕೃತಯುಗದಲ್ಲಿ ಸ್ಥೂಲಕಾಯನೆಂಬ ಗಣೇಶ್ವರನಾಗಿ, ತ್ರೇತಾಯುಗದಲ್ಲಿ ಶೂನ್ಯಕಾಯನೆಂಬ ಗಣೇಶ್ವರನಾಗಿ, ದ್ವಾಪರದಲ್ಲಿ ಅನಿಮಿಷನೆಂಬ ಗಣೇಶ್ವರನಾಗಿ ಅವತರಿಸಿ, ಲೋಕವನ್ನು ಉದ್ಧರಿಸುತ್ತ ಬಂದಿದ್ದೇನೆ. ಕಲಿಯುಗದಲ್ಲಿ ಅಲ್ಲಮಪ್ರಭುವೆಂಬ ಹೆಸರಿನ ಗಣೇಶ್ವರನಾಗಿ ಅವತರಿಸಿ ಬಂದಿರುವೆನು.

ದೂ.–ಈಗ ತಮಗಿರುವ ಹೆಸರು ಏನ್ರಿ?

ಅ.– ಈಗಿನ ಹೆಸರು ಅಲ್ಲಮ!

ದೂ.–ಎಲ್ಲಮ್ಮ! ತಾವು ಎಲ್ಲಮ್ಮ ಆಗಿದ್ದರೆ, ಕೊರಳಲ್ಲಿ ಕವಡಿಯ ಸರ, ತಲೆಯ ಮೇಲೆ ಜಗ ಇಲ್ಲವಲ್ಲ?

ಅ.– ಛೀ ಮೂರ್ಖಳೇ, ಎಲ್ಲಮ್ಮ ಅಲ್ಲ; ಅಲ್ಲಮ.

ದೂ.–ಗೊತ್ತಾತು ಬಿಡ್ರಿ, ತಮ್ಮ ಹೆಸರು ಅಲ್ಲಮ ಎಂಬುದು. ತಮಗೆ 'ಅಲ್ಲಮ' ಎಂದು ಕರೆಯಲು ಕಾರಣವೇನ್ರಿ?

ಅ.– ದೂತೆ, ಹೇಳುತ್ತೇನೆ ಕೇಳು.

ದೂ.–ಅದೇನಿರುವದು ಹೇಳಿರಿ.

ಅ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ವನಜಾ ಮುಖಿಯೇ ಕೇಳೆ ಎನಗಲ್ಲಮ ಅನ್ನು
ರೀತಿ ಪೇಳುವೆ ಶಿವನಾಮ ॥ ಪಲ್ಲ ॥

ಆರು ಗುಣಕೆ ವಶ, ನಾನಲ್ಲಾ
ನಾಲ್ಕು ವೇದಶಾಸ್ತ್ರಕೆ ನಿಲುಕುವನಲ್ಲಾ

ಏರು : ಸದ್ಗುಣನಲ್ಲಾ, ದುರ್ಗುಣನಲ್ಲಾ
ಮೋಹಪಾಶಕೆ ಬೀಳುವನಲ್ಲಾ ॥ ೧ ॥
ಆಕಾರ ಉಳ್ಳವ ನಾನಲ್ಲ, ದೂತೆ
ವಿಕಾರ ಉಳ್ಳವ ನಾನಲ್ಲಾ

ಏರು : ಮಾರನ ಮಂಚಕೆ, ಮಾಯಾಪ್ರಪಂಚಕೆ
ಸಂಬಂಧ ಉಳ್ಳವ ನಾನಲ್ಲಾ ॥ ೨ ॥
ಯಾವದೂ ನಾನಲ್ಲ, ನಾನಲ್ಲಾ ಇರಲು
ಅಲ್ಲಮನೆಂಬುದು, ಜಗವೆಲ್ಲಾ

ಏರು : ಕೇಳೆನ್ನ ಸೊಲ್ಲಾ, ಅನ್ನಿರಿ ಅಲ್ಲಾ
ತಿಳಿಯಿರಿ ಇದರ ನಿಜಮೂಲಾ ॥ ೩ ॥

ದೂತೆ, ನನಗೆ ಅಲ್ಲಮನೆಂದು ಕರೆಯಲಿಕ್ಕೆ ಕಾರಣವೇನೆಂದರೆ ನಾನು ಮಾಯೆಗೆ ಒಳಗಾದವನಲ್ಲ, ಕಾಮ–ಕ್ರೋಧಾದಿಗಳಿಗೆ ಬಲಿಯಾದವನಲ್ಲ; ವೇದ ಶಾಸ್ತ್ರ ವಿಚಾರಕ್ಕೆ ಹೊಳೆದವನಲ್ಲ. ಆಕಾರ ಉಳ್ಳವನೂ ಅಲ್ಲ. ಮಾಯಾ ಪ್ರಪಂಚಕ್ಕೆ ಯಾವ ರೀತಿಯಿಂದಲೂ ಸಂಬಂಧಪಟ್ಟವನಲ್ಲ. ಆದ್ದರಿಂದ ತಿಳಿದವರು ನನ್ನನ್ನು ಅಲ್ಲಮನೆಂದು ಕರೆಯುವರು.

ದೂ.–ತಮ್ಮನ್ನು ಅಲ್ಲಮನೆಂದು ಕರೆಯುವದರ ಇಂಗಿತಾರ್ಥ ಸ್ಪಷ್ಟವಾಯಿತು. ಆದರೆ, ತಾವೀಗ ಎಲ್ಲಿಗೆ ಹೊರಟಿರುವಿರಿ?

ಅ.– ದೂತೆ, ನಾನೀಗ ಹೊರಟಿರುವದು ಮಾಯಾದೇವಿ ಹುಟ್ಟಿ ಬೆಳೆಯುತ್ತಿರುವ ಬನವಾಸಿ ಪಟ್ಟಣಕ್ಕೆ. ನಾನು ಈಗಲೇ ಅಲ್ಲಿಗೆ ಹೋಗುತ್ತೇನೆ.

ದೂ.–ಯಾಕಾಗಲೊಲ್ಲದು, ಹೋಗುವಂಥವರಾಗಿರಿ.

◆

೪

ಮಾಯೆಯ ಪ್ರವೇಶ

ಮಾಯೆ–ಪದ : ತಾಳ : ದೀಪಚಂದ ; ರಾಗ : ಕಾಪಿ

ರಂಜಕ ಸಂಸಾರಾ, ಇದು ಏನು ಮನೋಹರಾಽಽ
ಇರುವದು ಹಿತಕರಾ, ಸುಖದ ಆಸರಾ ॥ ಪಲ್ಲ ॥

ಏರು : ಭೂತಳ ಸ್ವರ್ಗ, ಪಾತಾಳವೆನಿಪ
ಮೂರು ಮಾಟದ, ಗೊಂಬೆಗಳಾಟದ
ಮಾಯೆಯ ಸೂತ್ರದ । ರಂಜಕ ಸಂಸಾರಾ..... ॥ ೧ ॥

ಸಂಸಾರ ಮುಖವು, ಇದು ಏನು ಸುಖವು
ಸ್ತ್ರೀ ಪುರುಷರಿವರು, ಅಕ್ಕರತೆ ಪಡೆವರು
ಅದ್ಭುತ ಸರ್ವರು । ರಂಜಕ ಸಂಸಾರಾ.... ॥ ೨ ॥

ಸಂಸಾರ ಸುಖಕೆ, ಕಲ್ಪಿಸಿ ದುಃಖವ
ಎರವಾಗುತಿಹರು, ಅಜ್ಞಾನಿ ನರರು
ಸುಖಕ್ಕೆ ಇರುವರು । ರಂಜಕ ಸಂಸಾರಾ.... ॥ ೩ ॥

ಈ ಮಾಯಾ ಪ್ರಪಂಚವು ಎಷ್ಟು ಮನೋಹರವಾಗಿ ಕಾಣುತ್ತಿರುವದು! ಸ್ವರ್ಗ–ಮರ್ತ್ಯ–ಪಾತಾಳಗಳೆಂಬ ಮಾಟದ ಮೂರು ಗೊಂಬೆಗಳು ಮಾಯೆಯ ತಂತ್ರದಿಂದ ಹೇಗೆ ಕುಣಿಯುತ್ತಿರುವವು!! ಹರಿಹರ ಬ್ರಹ್ಮಾದಿ ಮೊದಲ್ಗೊಂಡು ಪಶುಪಕ್ಷಿಗಳವರೆಗೂ ಸಕಲ ಜೀವಿಗಳು ಹಾಲು ಸಕ್ಕರೆ ಬೆರತಂತೆ ತಮ್ಮ ದಾಂಪತ್ಯ ಜೀವನವನ್ನು ಎಷ್ಟೊಂದು ಅಕ್ಕರತೆಯಿಂದ ಸಾಗಿಸುತ್ತವೆ!! ಇಂಥ ಮನೋಹರವೂ ಸುಖದ ಸಾಗರವೂ ಆದ ಮಾಯಾಪ್ರಪಂಚವನ್ನು ಅಜ್ಞಾನಿಗಳು ಕಷ್ಟದಾಯಕವೆಂದು ಭಾವಿಸುವರು. ಮುನಿಗಳಂತೂ ಬುದ್ಧಿಯಿಲ್ಲದೆ ಬೂದಿ ಬಡಕೊಂಡು ಚಿನ್ನದಂಥ ಮಾನವ ಜನ್ಮವನ್ನು ಮಣ್ಣುಗೂಡಿಸುವರು. ಯಾವ ಸ್ವಾದವನ್ನು ಅರಿಯದ ಈ ಮರುಳು ಮುನಿಗಳು ಪೊಳ್ಳು ಭ್ರಮೆಯಿಂದ ಸುಖಕ್ಕೆ ಎರವಾಗುತ್ತಿರುವರು.

ಯಾರೇನು ಮಾಡುವರು? ಅವರನ್ನು ದೈವ ಕಾಡುತ್ತಲಿದೆ. ಇರಲಿ; ನಾನಂತೂ ಪಾರ್ವತಿಯ ಅಪ್ಪಣೆಯ ಮೇರೆಗೆ ಅಲ್ಲಮಪ್ರಭುವೆಂಬ ವಿರಕ್ತನನ್ನು ಗೆಲ್ಲಲಿಕ್ಕೆ ಈ ಬನವಾಸಿ ಪಟ್ಟಣದ ಅರಸನಾದ ಮಮಕಾರ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿ ಬೆಳೆದು ದೊಡ್ಡವಳಾದೆನು. ನನಗೀಗ ಚಿಗುರು ಪ್ರಾಯವು ಚಿಮ್ಮುತ್ತಿರುವದು. ನನ್ನ ಸೌಂದರ್ಯದ ತೇಜಕ್ಕೆ ಭ್ರಾಂತರಾದ ಸಾಧುಸಂತರೆಲ್ಲ ಜಪಮಾಲೆಯನ್ನು ಜರೆದು ಶಿವನಾಮವನ್ನು ತೊರೆದು ನನ್ನನ್ನೇ ಕೊಂಡಾಡುತ್ತ, ನನಗಾಗಿ ಆಸೆಪಟ್ಟು ಹುಡುಕುತ್ತಿರುವರು. ಇಂತಹ ನನಗೆ ವಶವಾಗದ ಅಲ್ಲಮನು ಅದಾವನು? ಅವನನ್ನು ಶೋಧಿಸಿ ಮಾಯಾಜಾಲವನ್ನು ಬೀಸಿ, ಅವನನ್ನು ವಶಮಾಡಿಕೊಂಡು ಕೈಲಾಸಕ್ಕೆ ಹೋಗುತ್ತೇನೆ.

ದೂ.– ಟೀಕಿ ಕಟ್ಟಿಕೊಂಡು ಠೀಕಾದ ಈಕಿ ಯಾವಾಕಿ?

ಮಾ.– ಏನೆ, ಚಾಷ್ಟಿ ಚಾವನಗಿತ್ತಿ, ನೀನು ಯಾರು?

ದೂ.– ನನಗೆ ದೂತಿ ಅಂತಾರ ತಾಯಿ. ನನ್ನ ಹೆಸರು ಕೇಳಿದಿರಲ್ಲಾ? ತಮ್ಮ ಹೆಸರೊಂದೀಟು ಹೇಳಿದರೆ ಒಳ್ಳೆಯದಾಗುವದು.

ಮಾ.– ದೂತಿ, ನನಗೆ ಮಾಯೆ ಅನ್ನುವರು.

ದೂ.– ತಮಗೆ ನಾಯಿ ಅಂತಾರ! ಎಂಥಾ ನಾಯಿ? ಏನ ಜೂಲ ನಾಯೋ? ಏನ ಜಾಲ ನಾಯೋ?

ಮಾ.– ಅವೇನ ಕಿವಿಗಳೋ ತೂತಿನ ಪರಟಿಗಳೋ? ನಾಯಿಯಲ್ಲ; ನಾನು ಈ ಜಗತ್ತಿಗೆ ಮೂಲ ಕಾರಣಳಾದ ಮಾಯೆ.

ದೂ.– ತಮ್ಮ ಹೆಸರು ಮಾಯಾದೇವಿಯಾದರೆ, ತಮ್ಮನ್ನು ಹಡೆದ ತಂದೆತಾಯಿಗಳು ಯಾರು?

ಮಾ.– ದೂತಿ, ಹೇಳುತ್ತೇನೆ ಕೇಳು.

ದೂ.– ಅದೇನಿರುವದು ಹೇಳುವಂಥವರಾಗಿರಿ.

ಮಾ.– ಪದ : ತಾಳ : ಕೆರವಾ ; ರಾಗ : ಮಿಶ್ರಕಾಫಿ

ಸ್ವಯಂಜ್ಯೋತಿ ನಾ ಮಾನಿನಿಯೆ ॥ ಪಲ್ಲ ॥

ನನಗಿಲ್ಲ ತಂದೆ ತಾಯಿ, ಜಗಕೆಲ್ಲ ನಾನೇ ತಾಯಿ
ಸರ್ವ ಜಗಕೆ ಸುಖದಾಯಿ, (ಚಲತಿ) ಮಾನಿನಿಯೇ... ॥ ೧ ॥

ತೋರುವಂಥ ಈ ಜಗವೆಲ್ಲಾ, ಇರುವದು ಮಾಯೆಯ ಲೀಲಾ
ಸರ್ವಕ್ಕೂ ನಾನೇ ಮೂಲ, (ಚಲತಿ)ಮಾನಿನಿಯೇ ॥ ೨ ॥

ಕಾರಣೊಂದು ಇರಲದ ಕಳಿಸಿ, ಭೂಮಿಯೊಳು ನಾ ಅವತರಿಸಿ
ಬಂದೆ ಮೋಹದಲ್ಲಿ ಜನಿಸಿ, (ಚಲತಿ) ಮಾನಿನಿಯೇ... ॥ ೩ ॥

ದೂತಿ, ನನಗೆ ತಂದೆ ತಾಯಿಗಳಿಲ್ಲ. ಇಂಥವರಿಗೆ ಹುಟ್ಟಿದವಳೆಂದು ಯಾರೂ ಹೇಳುವರಿಲ್ಲ. ತೋರುವಂಥ ಈ ಪ್ರಪಂಚವೆಲ್ಲ ನಾನೇ ಆಗಿರುವೆನು. ಮಾಯಾ ರೂಪವೆಂದರೆ ನನ್ನ ರೂಪವೇ ಆಗಿದೆ. ನನ್ನ ಪುಣ್ಯಶಕ್ತಿಯಾದ ಪಾರ್ವತಿ ಇರುವದು ಕೈಲಾಸದಲ್ಲಿ, ನಾನೀಗ ಒಂದು ಉದ್ದೇಶಕ್ಕಾಗಿ ಈ ಬನವಾಸಿ ಪಟ್ಟಣದ ಮಮಕಾರ ರಾಜನ ಹೊಟ್ಟೆಯಲ್ಲಿ ಹುಟ್ಟಿರುವೆನು. ಆದ್ದರಿಂದ ನನಗೆ ಮಮಕಾರ ಮಹಾರಾಜನೇ ತಂದೆ. ಅವನ ಪಟ್ಟದ ರಾಣಿಯಾದ ಮೋಹಿನಿದೇವಿಯೇ ನನ್ನ ತಾಯಿ. ತಿಳಿಯಿತೇ ದೂತಿ?

ದೂ.–ಈ ಬನವಾಸಿ ಪಟ್ಟಣದ ಮಮಕಾರ ಮಹಾರಾಜನ ಮಗಳು ಮಾಯಾದೇವಿ ಎಂಬುದು ಗೊತ್ತಾಯಿತು. ಆದರೆ ತಾವು ಸಿಂಗಾರ ಮಾಡಿಕೊಂಡು ಈ ಸಭಾ ಸ್ಥಾನಕ್ಕೆ ಬಂದ ಕಾರಣವೇನು?

ಮಾ.–ದೂತೆ, ನನ್ನ ತಂದೆ–ತಾಯಿಗಳನ್ನು ನನ್ನ ಹುಟ್ಟಿನ ಉದ್ದೇಶವನ್ನು ಅರಿಯದೆ ಪ್ರಾಯಕ್ಕೆ ಬಂದ ನನಗೆ ಲಗ್ನ ಮಾಡಬೇಕೆಂದು ಯೋಗ್ಯ ವರನನ್ನು ಹುಡುಕುತ್ತಿದ್ದರು. ಆಗ ನಾನು ಅವರಿಗೆ ಹೇಳಿದ್ದೇನೆಂದರೆ–"ತಾವು ನನಗಾಗಿ ಪತಿಯನ್ನು ಹುಡುಕುವ ಪ್ರಯಾಸಕ್ಕೆ ಬೀಳಬೇಡಿರಿ. ನನ್ನ ಪತಿಯನ್ನು ನಾನೇ ಹುಡುಕಿಕೊಳ್ಳುತ್ತೇನೆ–" ಎಂದು ಗಟ್ಟಿಯಾಗಿ ಹೇಳಿದೆ. ಅದರಂತೆ ನಾನು ಪತಿಯ ಶೋಧದಲ್ಲಿಯೇ ಇದ್ದೇನೆ. ಅವನಿಂದು ಇದೇ ಊರಿಗೆ ಬಂದಿರುವನೆಂದು ದಾಸಿಯೊಬ್ಬಳು ಹೇಳಿದಳು. ಅವನನ್ನು ಹ್ಯಾಗಾದರೂ ಮಾಡಿ ಅರಮನೆಗೆ ಕರೆದು ತರಬೇಕೆಂದು ಬಂದಿದ್ದೇನೆ.

ದೂ.–ಅವನು ಇದೇ ಊರಿಗೆ ಬಂದಿದ್ದರೆ, ಎಲ್ಲಿ ಇರುವನಂತೆ?

ಮಾ.–ಮಧುಕೇಶ್ವರನ ಗುಡಿಯಲ್ಲಿ ಇಳಿದಿರುವನಂತೆ!

ದೂ.–ಬಿಡೆ, ಗುಡಿಯಲ್ಲಿ ಯಾರೂ ಇಲ್ಲ, ಯಾವನೋ ಒಬ್ಬ ಮದ್ದಳೆಯ ಸಂನ್ಯಾಸಿ ಬಂದಿರುವನಂತೆ!

ಮಾ.–ದೂತೆ. ನಾನು ಆ ಸಂನ್ಯಾಸಿಯನ್ನೇ ಲಗ್ನವಾಗತಕ್ಕವಳು.

ದೂ.–ತಾವು ಸಂನ್ಯಾಸಿಯನ್ನು ಲಗ್ನವಾಗುವಿರಾ? ತಮಗೆ ಹುಚ್ಚು ಹಿಡಿದಂತೆ

ಕಾಣುತ್ತದೆ. ಸನ್ಯಾಸಿಯನ್ನು ಲಗ್ನವಾಗಿ ಯಾವ ಸೌಭಾಗ್ಯವನ್ನು ಗಳಿಸುವಿರಿ?

ಮಾ.–ದೂತೆ, ನೀನು ಆ ಸಂನ್ಯಾಸಿಯನ್ನು ಸರಿಯಾಗಿ ನೋಡಿಲ್ಲ. ಅವನಂಥ ಸುಂದರನು ಎಲ್ಲಿಯೂ ಇಲ್ಲ. ಆ ಸಂನ್ಯಾಸಿಯನ್ನು ನನಗೆ ಅನುಕೂಲ ಮಾಡಿಕೊಟ್ಟರೆ ನಿನಗೆ ಯೋಗ್ಯ ಬಹುಮಾನ ಕೊಡುವೆನು.

ದೂ.–ಬಿಡೆ, ಬಾವಾನ್ನ ಆಗಿ ಏನ ಬಳಕೊಂತಿ?

ಮಾ.–ದೂತೆ, ಅವನು ಬಾವಾ ಅಲ್ಲ; ಅವನೊಬ್ಬ ಮಹಾಶರಣ. ಅವನಿಗೆ ಸರಿ ಸಮಾನರಾದ ಸುಂದರ ಪುರುಷರು ಜಗತ್ತಿನಲ್ಲಿ ಯಾರೂ ಇಲ್ಲ. ಕಾಮನನ್ನು ಅವನ ಮುಂದೆ ನಿವಾಳಿಸಿ ಚೆಲ್ಲಬೇಕು.

ದೂ.–ಅಷ್ಟು ಸುಂದರನೇ ಅವನು! ನಾನು ಹೇಳುವಷ್ಟು ಹೇಳಿದೆ. ನಂದೇನು ಹೋಗುವದು. ನನಗೆ ಬಹುಮಾನ?

ಮಾ.–ದೂತೆ, ನಿನಗೆ ಬಹುಮಾನ ಮುಕ್ಕಟ್ಟಿ ಕೊಡಬೇಕೇನೇ?

ದೂ.–ಮುಕ್ಕಟ್ಟ ಕೊಡದಿದ್ರ, ಕೆಲಸ ಪುಕ್ಕಟ್ಟ ಮಾಡಬೇಕೇನು?

ಮಾ.–ದೂತೆ, ಹಿಡಿ ಈ ಬಹುಮಾನ! ಇದಲ್ಲದೆ ಈ ಭರ್ಜರಿ ಪಟಕಾ, ಬನಾತಿನ ಅಂಗಿ, ಈ ಕರವತ್ತಕಾಟ ಧೋತರ–ಇವನ್ನು ತೆಗೆದುಕೊಂಡು ಮಧುಕೇಶ್ವರ ದೇವಾಲಯಕ್ಕೆ ಹೋಗಿ, ಈ ಪಟ್ಟಣದ ದೊರೆಯಾದ ಮಮಕಾರ ಮಹಾರಾಜನ ಮಗಳು. ಮಾಯಾದೇವಿಯು ತಮಗೆ ಕಾಣಿಕೆಯಾಗಿ ಕೊಟ್ಟಿರುವಳೆಂದು ಹೇಳು. ಕಾವಿಯ ಡಗಲಿಗಳನ್ನು ಕಳೆದೊಗೆದು, ಇವುಗಳನ್ನು ಧರಿಸಿಕೊಂಡು ರಾಜಮಂದಿರಕ್ಕೆ ಬರಬೇಕೆಂದು ತಿಳಿಸು. ಅವನನ್ನು ಒಡಂಬಡಿಸಿ ಕರೆದುಕೊಂಡು ಬಾ, ಮಾಯಾದೇವಿಯು ತಮ್ಮ ಬರುವಿಕೆಗಾಗಿ ಹಾತೊರೆಯುವಳೆಂದು ಹೇಳು; ತಿಳಿಯಿತೇ?

ದೂ.–ಯಾಕಾಗಬಾರದು. ಹೋಗುತ್ತೇನೆ.

◆

೫

ದೇವಾಲಯ ಪ್ರವೇಶ

ಪದ : ತಾಳ : ಕೇರವಾ; ರಾಗ : ಜಯಜಯವಂತಿ

ಅಲ್ಲಮ– ಭ್ರಮೆಯಿಂದ ತೋರ್ವ ಸಂಸಾರಾ
ಕಾಣುವದು ಎಂಥ ಮನೋಹರಾ, ಹರಾಪರಾ ಶಂಕರಾ ॥ ಪಲ್ಲ ॥

ಏರು : ಜ್ಞಾನಹೀನರು ಕಾಣದಾದರು ಹೀನ ಸಂಸ್ಕೃತಿಯ ನೆಲೆಯಾ
ಘೋರ ಬಲೆಯಾ, ಪ್ರಾಬಲ್ಯವೆನಿತು ಈ ಕಲಿಯಾ ॥ ೧ ॥

ಆರು ಹಿತವರು ಈ ಮೂರು ಮಂದಿಯೊಳು
ಭೂರಿ ನಂಬಿಹರು ನರರು, ಪಾಮರರು ತ್ರಿತಾಪದಲ್ಲಿ ಬೇಯುವರು ॥ ೨ ॥

ವಿಚಿತ್ರ ಜಾಲದ ಈ ಮಾಯಾ ಪ್ರಪಂಚವು ಅಜ್ಞಾನಿಗಳ ಕಣ್ಣಿಗೆ ಎಷ್ಟು ಮನೋಹರವಾಗಿ ಕಾಣುತ್ತಿದೆ! ಎಳ್ಳಷ್ಟಾದರೂ ಸುಖವಿಲ್ಲದ ಈ ಕಷ್ಟ ಮೂಲ ಸಂಸಾರವು ಅಜ್ಞಾನವಶದಿಂದ ಎಷ್ಟು ಮಹತ್ವದ್ದಾಗಿ ಕಾಣುತ್ತದೆ! ತನ್ನ ಹಿಂದಿನ ಹಿಂಗಾಲವನ್ನು ಹಿಡಿದು ನುಂಗುತ್ತಿರುವ ಹಾವಿನ ಎಚ್ಚರವಿಲ್ಲದೆ ತನ್ನ ಮುಂದಿರುವ ನೊಣಗಳಿಗಾಗಿ ಜಪ್ಪಿಸಿಕೊಂಡು ಕೂತಿರುವ ಕಪ್ಪೆಯಂತೆ, ಮತಿಹೀನರಾದ ಮನುಷ್ಯರು ತಮ್ಮ ಹಿಂದೆ ಆಯುಷ್ಯವೆಂಬ ಸರ್ಪವು ಸಾವಕಾಶವಾಗಿ ತಮ್ಮನ್ನೇ ನುಂಗುತ್ತಿರುವದೆಂಬ ಎಚ್ಚರವಿಲ್ಲದೆ ಶಿವಶಿವಾ! ಹೊನ್ನು–ಹೆಣ್ಣು–ಮಣ್ಣೆಂಬ ನೊಣಗಳಿಗೆ ಜಪ್ಪಿಸಿಕೊಂಡು ಕೂತು, ಎಂಥ ಅನರ್ಥಕ್ಕೆ ಗುರಿಯಾಗುತ್ತಿರುವರು!

ದೂತೆ– (ಬಂದು) ಸಾಧುಗಳಾದ ತಾವು ದಾರು? ತಮ್ಮ ದೇಶವಾವುದು?

ಅ.– ನಾವು ಯಾರಿದ್ದರೇನು; ಆ ಭಾಗ್ಯ ನಿನಗೇಕೆ ಬೇಕು?

ದೂ.– ಆ ಭಾಗ್ಯ ಬೇಕಾದ್ದರಿಂದಲೇ ಬಂದಿರುವೆನು.

ಅ.– ಅದೇಕೆ ಬೇಕಾಗಿದೆ? ನಿನಗೆ ನನ್ನ ಹೆಸರು ಬೇಕೆ? ನನ್ನ ಹೆಸರು ಅಲ್ಲಮ ಶಿವಯೋಗಿ.

ದೂ.– ತಮ್ಮಾ, ನಿನಗೆ ಎಂಥಾ ಚಲೋ ಹೆಸರು ಇರುವದೊ? ನಿನಗೆ ತಾಯಿ–ತಂದೆಗಳು ಇರಬೇಕಲ್ಲವೆ?

ಅ.– ದೂತೆ, ನನಗೆ ತಂದೆಯೂ ಇಲ್ಲ, ತಾಯಿಯೂ ಇಲ್ಲ.

ದೂ.– ತಾಯಿ–ತಂದೆಗಳಿಲ್ಲದೆ ನೀ ಹ್ಯಾಗೆ ಹುಟ್ಟಿದಿ? ಆಕಾಶದಿಂದ ಕಪ್ಪೆ ಬಿದ್ದ ಹಾಗೆ ಧೊಪ್ಪನೆ ಬಿದ್ದೇನು? ಇರಲಿ, ನಿನಗೆ ಹೆಂಡತಿಯಾದರೂ ಇರುವಳೋ ಇಲ್ಲವೋ?

ಅ.– ದೂತೆ, ನನಗೆ ಹೆಂಡತಿ ಇಲ್ಲ; ಸಾಧುಗಳಿಗೆ ಹೆಂಡಿರ ಅವಶ್ಯಕತೆ ಇರುವದಿಲ್ಲ. ಇರಲಿ, ಈಗ ನನ್ನಲ್ಲಿ ನಿನ್ನ ಕೆಲಸವೇನು?

ದೂ.– ತಮ್ಮಾ, ನಿನಗೊಂದು ಉತ್ತಮ ಸುದ್ದಿ ತಂದಿದ್ದೇನೆ.

ಅ.– ಉತ್ತಮ ಸುದ್ದಿ ಅಂದರೆ ಎಂಥಾದ್ದು?

ದೂ.– ಮೈನೆರೆದದ್ದು. ಗಂಡು ಹುಟ್ಟಿದ್ದು ಇಂಥ ಉತ್ತಮ ಸುದ್ದಿ ತಂದವರಿಗೆ ಏನು ಕೊಡುತ್ತಾರೆ?

ಅ.– ಯೋಗ್ಯ ಬಹುಮಾನ ಕೊಡುತ್ತಾರೆ. ಸುದ್ದಿ ತಂದವ ಗಂಡಸು ಇದ್ದರೆ ದೋತರ ಪಾವಡ ಕೊಡುತ್ತಾರೆ. ಹೆಂಗಸು ಇದ್ದರೆ ಸೀರೆ ಕುಪ್ಪಸಗಳನ್ನು ಕೊಡುತ್ತಾರೆ.

ದೂ.– ಅದರಂತೆ ನೀನಾದರೂ ನನಗೆ ಒಳ್ಳೆಯ ಸಂಭಾವನೆಯನ್ನು ಕೊಡಬೇಕು; ಅಂಥಿಂಥ ಬಹುಮಾನ ಕೊಟ್ಟರೆ ನಡೆಯದು. ನಾನು ತಂದ ಸುದ್ದಿ ಬಹಳ ಒಳ್ಳೆಯದಿದೆ.

ಅ.– ಅಂಥ ಸುದ್ದಿ ಏನಿರುವದು?

ದೂ.– ತಮ್ಮಾ, ಆ ಸುದ್ದಿ.....

ಅ.– ಏನಿರುವದು ಬೇಗನೆ ಹೇಳು.

ದೂ.– ಈ ಪಟ್ಟಣದ ಮಮಕಾರ ಮಹಾರಾಜನ ಮಗಳು ತಮಗೆ ಕಾಣಿಕೆಯಾಗಿ ಈ ವಸ್ತ್ರಾಭರಣಗಳನ್ನು ಕೊಟ್ಟಿರುವಳು. ತಾವು ಇವುಗಳನ್ನು ಧರಿಸಿಕೊಂಡು ರಾಜ ಮಂದಿರಕ್ಕೆ ಬರಬೇಕೆಂದು ಹೇಳಿಕಳಿಸಿರುವಳು.

ಅ.– ಛೀ, ಇದೇ ಏನು ನಿನ್ನ ಶುಭ ಸುದ್ದಿ? ಹೇಳುತ್ತೇನೆ ಕೇಳು :

ದೂ.– ಅದೇನಿರುವದು ಹೇಳಿರಿ :

ಪದ : ತಾಳ : ಕೇರವಾ; ರಾಗ : ಅಸ್ಸಾ

ಅ.– ಛೀ ಛೀ ಭ್ರಷ್ಟಳೆ, ಅತಿ ಪಾಪಿಷ್ಟಳೆ
ಎಂಥಾ ಅಪದ್ಧ ನುಡಿ ಆಡಿದಿಯೇ ॥ ಪಲ್ಲ ॥
ಜಾರನ ಸರಿಯೆನ್ನ ಮಾಡಿದಿಯೇ
ಛೀ ಹೊಯಿಮಾಲಿ, ವಿಷಯದ ಮಾಲಿ
ಹಾಕಬೇಕೆನ್ನುವಿ ನನ್ನ ಮ್ಯಾಲಿ, ಬಲ್ಲೆ ಬಲಿ ॥ ೧ ॥

ಮಾಯೆಯ ಕರಹಿಡಿ, ಮಾರನ ಸುಖಪಡಿ
ಎಂಬುವ ಈ ನುಡಿ ಬೋಧಿಸುವಿ
ಯೋಗಿಯ ಕೋಪಕೆ ಈಡಾಗಿ, ನೀ ಕೆಡುವಿ ॥ ೨ ॥

ಎಲೆ ಮೂಢ ಸ್ತ್ರೀಯಳೇ, ಇದೇ ಹೌದಲ್ಲೋ ನಿನ್ನ ಶುಭವಾರ್ತೆ? ನಿನ್ನ ಅರಸನೆಂದರೆ ಯಾರು? ಅವನ ಮಗಳಾದ ಮಾಯೆ ಎಂದರೆ ಯಾರು? ಆಕೆ ನನ್ನನ್ನು ಕರೆಸಲಿಕ್ಕೆ ಕಾರಣವೇನು? ನಾರಿ ಎಂದರೆ ಹೊಲಸೆದ್ದು ನಾರುವ ಬಚ್ಚಲ ಮೋರಿ! ಹೀಗಿರಲು, ನೀನು ನನ್ನ ಮುಂದೆ ಈ ರೀತಿ ಮಾತಾಡಲು ನಾಚಿಕೆ ಬರುವದಿಲ್ಲವೆ? (ಹೊಡೆಯುವನು)

ದೂ– ಸ್ವಾಮಿ, ಸಂಭಾವನೆ ಸಾಕು ! ಹೋಗುತ್ತೇನೆ.

◆

೬

ಮಾಯಾ ಮಂದಿರ ಪ್ರವೇಶ

ಮಾಯೆ– ದೂತಿಯು ಇನ್ನೂ ಯಾಕೆ ಬಂದಿರಲಿಕ್ಕಿಲ್ಲ? ಅವಳು ಅಲ್ಲಮನನ್ನು ಕರೆದು ತರುವಳೋ ಇಲ್ಲವೋ ನೋಡಬೇಕು.....ಇದೇನು ಆಕೆಯೇ ಬಂದಳಲ್ಲ! ದೂತೆ, ಬಂದೆಯಾ? ಅವರೆಲ್ಲಿ?

ದೂ.– ಬಂದೆ ನಮ್ಮವ್ವಾ ನಾನೊಬ್ಬಾಕೆ.

ಮಾ.– ಬಾರಽ ನಿನ್ನ ದಾರೀನ ನೋಡತಿದ್ದೆ. ಹೋದ ಕೆಲಸ ನೆಟ್ಟಗ...?

ದೂ.– ನೆಟ್ಟಗಽ, ಪಸಂದ ಆತು! ಕಸರೇನೂ ಉಳಿಯಲಿಲ್ಲ.

ಮಾ.– ಹೇಳಽ, ಆದದ್ದಾದರೂ ಏನು?

ದೂ.– ಹೋದ ಕೂಡಲೇ ಉಪಚಾರ ಆತು! ಹಾಂಗೆ ಎಳಿ ತಗದು ತಮ್ಮ ಹೆಸರು ಹೇಳಿದೆ, "ಎಂಥಾ ಒಳ್ಳೇ ಸುದ್ದಿ ತಂದೀದಿ; ನಿನಗೆ ಏನಾದರೂ ಇನಾಮ ಕೊಡುತ್ತೇನೆ–ನಿಲ್ಲು"–ಅಂದ, ಬಿಡಲೇ ಇಲ್ಲಽಽ.

ಮಾ.– ದೂತೆ, ಏನ ಇನಾಮ ಕೊಟ್ಟ?

ದೂ.– ಅದೇನೋ ಕೈಯಾಗೊಂದು ಸುಳ್ಳಿ ಇತ್ತು. ಕೊಟ್ಟ ನನಗೊಂದು ಸುಳ್ಳಿ ಹೋಳಿಗಿ! ಸುಳ್ಳಿಹೋಳಿಗಿ ತಿಂದು ಸುಳ್ಳ್ಯಾಗಿ ಬಿದ್ದೆ.

ಮಾ.– ದೂತೆ, ಅಷ್ಟು ಪ್ರೀತಿ ಆದನೇನು ನಿನ್ನ ಮ್ಯಾಲ!

ದೂ.– ಆ ಪ್ರೀತಿ ಎಷ್ಟಂತ ಹೇಳ್ಲೆ ನಮ್ಮವ್ವಾ! ನೀನಲ್ಲಿಗೆ ಹೋದ ಮೇಲೆ ಎಲ್ಲಾ ಗೊತ್ತಾಗತೈತಿ.

ಮಾ.– ಯಾಕೆ, ಅವ ನನ್ನನ್ನೇ ಅಲ್ಲಿಗೆ ಕರೆದನೇ? ನನ್ನ ಮೇಲೆ ಅವನ ಪ್ರೀತಿ...?

ದೂ.– ನಿನ್ನ ಸುದ್ದಿ ಅವನ ಮುಂದೆ ತೆಗೆದರೆ ಸಾಕು; ಹಿರಿಹಿರಿ ಹಿಗ್ಗಿ, ಬರ್‍ರ್ರಿ, ಕೂಡ್ರಿಅಂತ ಇಲ್ಲದ ಉಪಚಾರ ಮಾಡತಾನ.

ಮಾ.– ದೂತೆ. ಹಾಗಾದರೆ ಅಲ್ಲಿಗೆ ಹೋಗಿ ಅವನನ್ನು ಕರೆದುಕೊಂಡು ಬರೋಣ ನಡೆ.

ದೂ.– ನಾ ಒಲ್ಲೆ ನಮ್ಮವ್ವಾSS.

ಮಾ.– ಯಾಕೆ?

ದೂ.– ಯಾಕಂದ್ರ, ಏನ ಹೇಳಲಿ? ಹೋದ ಗಳಿಗ್ಗೆ, ಸುಳ್ಳಿಹೋಳಿಗಿ ನೀಡಾಕs ಸುರುವು ಮಾಡತಾನ. ಯಾರು ಉಂಡಾರು ಸುಮ್ಮಕ? ಎಷ್ಟ ಹಸ, ಅಷ್ಟ ಹಸ! ಉಣ್ಣೂದಿಲ್ಲ ಅಂದ್ರ ಕಣ್ಣ ಕಿಸಿತಾನ ನೋಡೆವ್ವಾ.

ಮಾ.– ಹ್ಯಾಗಾದರೂ ಮಾಡಿ, ಅವನು ನನ್ನೆಡೆಗೆ ಸಾಗಿ ಬರುವಂತೆ ಮಾಡಲಿಕ್ಕೇ ಬೇಕು. ಇದಕ್ಕೆ ನಿನ್ನ ಸಹಾಯ ಬೇಕೇಬೇಕು.

ದೂ.– ಯಾಕಾಗಬಾರದು; ಹೋಗೋಣ ನಡೀರೆವ್ವಾ.

◆

೭

ದೇವಾಲಯ ಪ್ರವೇಶ

ಮಾಯೆ– ಪದ : ತಾಳ ಕೇರವಾ ; ರಾಗ : ಮಿಶ್ರಪೀಲು

ಚಾರು ವದನ, ಮಾರಮದನ
ಆರು ನೀನು ಪೇಳೆನಗೆ ॥ ಪಲ್ಲ ॥

ರತಿವರ ಕಾಮಾ, ಹುಣ್ಣಿವೆ ಸೋಮಾ
ಸದ್ಗುಣ ಧಾಮಾ, ನಿನ್ನಯ ನಾಮಾ
ತ್ವರದಿ ಭರದಿ ಹರದಿಗೆ ಪೇಳೊ
ಕ್ಷೇಮವನು, ಪ್ರೇಮವನು, ಪೊಂದುವೆನು ॥ ೧ ॥

ರತಿಸಮ ಸತಿಯಾ, ಅತಿಗುಣವತಿಯಾ
ಹಿತದಿಂದಲಿ ಕೂಡುವದನು ನೀ ತೊರೆದು
ದೊರೆಯೇ ಸರಿಯೇ, ಹರೆಯದ ಜೀವ
ಮರುಗಿಸುವಾ, ಸೊರಗಿಸುವಾ, ಈ ಪರಿಯಾ ॥ ೨ ॥

ಸತಿಯಳನಾಗಿ, ಅತಿಸುಖಭೋಗಿ–
ಸುವಂಥ ಕಾಲದಿ, ಈ ಶಿವಯೋಗಿ
ರೂಪಾ ಭೂಪಾ, ಏತಕೆ ಧರಿಸಿದಿ
ಕಾರಣವ, ಪೇಳೆನಗೆ, ಪ್ರೇಮದೊಳು ॥ ೩ ॥

ಸುಂದರಾಂಗ ನೀನು ಯಾರು? ನಿನ್ನ ಹೆಸರೇನು? ನಿನ್ನ ದೇಶವಾವುದು? ಮೊಗ ಮಿಸೆ ಒತ್ತಿಬರುತ್ತಿರುವ ಈ ಹೊಸ ಪ್ರಾಯದಲ್ಲಿ ಕುಸುಮಗಂಧಿಯರಕೂಡ ವಿಲಾಸಸುಖವನ್ನು ಭೋಗಿಸದೆ, ಈ ಸನ್ಯಾಸಿ ವೇಷವನ್ನು ಏಕೆ ಧರಿಸಿರುವಿ? ಮದುವೆಯಾಗೆಂದು ಒತ್ತಾಯಪಡಿಸುವ ತಂದೆ–ತಾಯಿಗಳು ನಿನಗಿಲ್ಲವೆ? ಈ ಹರೆಯದ ಜೀವವನ್ನು ಏನು ಕಾರಣ ಸೊರಗಿಸುತ್ತಿರುವಿ? ಎನ್ನ ಮುಂದೆ ಹೇಳಬಾರದೆ?

ಅ.– ವಿಚಿತ್ರಪ್ರಾಣಿ! ವಿಲಾಸವತಿ!! ನೀನು ಯಾರು? ನಿನ್ನ ಹೆಸರೇನು?

ಮಾ.–ನನ್ನ ಹೆಸರು ಮಾಯೆ. ತಮ್ಮ ಹೆಸರು?

ಅ.– ನನಗೆ ಅಲ್ಲಮಶಿವಯೋಗಿ ಅನ್ನುವರು. ಲೋಕವೇ ನನ್ನ ಮನೆ. ಲೋಕ ಸಂಚಾರವೇ ನನ್ನ ಕಾರ್ಯ. ನನ್ನ ವಾಸಸ್ಥಾನವು ಇಲ್ಲಿಯೇ ಎಂದು ಹೇಳಲಿಕ್ಕೆ ಬಾರದು. ನಾನೊಬ್ಬ ಶಿವಯೋಗಿ ! ಮದುವೆಯ ವಿಷಯಕ್ಕೂ ನನಗೂ ಬಹುದೂರ. ಸತಿಯೇ ಸರ್ವ ದುಃಖಕ್ಕೆ ಮೂಲಕಾರಣ ! ಅಂತೆಯೇ ನಾನು ಮದುವೆಯ ವಿಚಾರವನ್ನೇ ಬಿಟ್ಟುಕೊಟ್ಟಿದ್ದೇನೆ.

ಮಾ.–ಸುಂದರಾಂಗಾ, ಈ ಮರುಳತನ ನಿನಗೆ ಹೇಗೆ ಬಂತು? ಚೆನ್ನೆಯರ ಕೂಡ ಚಿನ್ನಾಟವಾಡಲಿರುವ ಈ ಚಿನ್ನದಂಥ ಪ್ರಾಯವನ್ನು ಮಣ್ಣುಗೂಡಿಸುವ ದುರ್ಬುದ್ಧಿಯನ್ನು ನಿನಗೆ ಯಾರು ಕಲಿಸಿದರು, ಹೇಳು? ಎಳೆಯ ಬಾಳೆಯ ಸುಳಿಯಂತಿರುವ ಸುಕುಮಾರಾ. ದೇಹಕ್ಕೆ ಸುಗಂಧ ದ್ರವ್ಯವನ್ನು ಲೇಪಿಸಿಕೊಂಡು ಸುಖಬಡುವದನ್ನು ಬಿಟ್ಟು, ಈ ಅಮಂಗಲ ಬೂದಿಯನ್ನು ಬಡಿದುಕೊಳ್ಳುವ ಬುದ್ಧಿಯನ್ನು ನಿನಗಾರು ಬೋಧಿಸಿದರು? ಎಣ್ಣೆ ಹಚ್ಚಿ ನುಣ್ಣಗೆ ತೀಡಿದರೆ ಜಂಬು ನೇರಿಲ ಹಣ್ಣಿಗಿಂತಲೂ ನುಣುಪಾಗಿ ಕಾಣುವ ನಿನ್ನ ಕೂದಲು ಜಡೆಗಟ್ಟಿ ಅಂದಗೆಟ್ಟಿರುವವು! ಅದಲ್ಲದೆ ನೀ ತೊಟ್ಟ ಈ ಕಾವಿಯ ಬಟ್ಟೆ ಚಂದ್ರನಿಗೆ ಮೋಡ ಮುಸುಕಿದಂತಾಗಿ ನಿನ್ನ ಸುಂದರ ರೂಪವನ್ನೇ ಮರೆ ಮಾಡಿದೆ. ಚೆಲ್ಲು; ತೊಟ್ಟ ಬಟ್ಟೆ ಬರೆಗಳನ್ನು ಆ ಕಡೆಗೆ ಚೆಲ್ಲು. ಓಡಿ, ಈ ಬನಾತಿನ ಅಂಗಿ; ಜರತಾರೀ ಪಟಕಾ. ಇವನ್ನು ತೊಟ್ಟುಕೊಂಡು ಅಂಚಿನ ದೋತರವನ್ನುಟ್ಟುಕೊಂಡು ರಾಜಮಂದಿರಕ್ಕೆ ನಡೆ; ಅಲ್ಲಿ ನಿನಗೆ ರಾಜ ಮರ್ಯಾದೆ ಕಾದು ನಿಂತಿದೆ. ಸ್ವರ್ಗಸುಖವೇ ನಿನ್ನ ಬಳಿಗೆ ಸುಳಿಯಲಿದೆ! ಬಾ ರಮಣಾ.

ಅ.– ನಾರೀಮಣಿಯೇ ಹೇಳುತ್ತೇನೆ ಕೇಳು.

ಮಾ.–ಅದೇನಿರುವದು ಹೇಳು.

ಪದ : ತಾಳ : ಕೇರವಾ; ರಾಗ : ಅಸ್ಸಾ

ಅ.– ಸರಿ ಸರಿಯಲೆ ನಾರಿ, ವಯ್ಯಾರಿ ಬರುವರೆ
ಶಿವಯೋಗಿ ಮ್ಯಾಲೇರಿ ॥ ಪಲ್ಲ ॥

ಏರು : ಸಂಸಾರ ಸುಖವಿದು ಸುಳ್ಳೆಂದು
ವಿಷಯದ ವಾಸನೆಯನೆಲ್ಲ ಅತಿಗಳೆದು
ನಡೆವಂಥ ಸಾಧು ವೈರಾಗ್ಯ ಬಂಧು
ಭಂದವೇ ಸುರತಕೆ ಕರೆವುದು (ಚಲತಿ) ವಯ್ಯಾರಿ... ॥ ೧ ॥

ಆರು ನೀ ಪೇಳಲೆ ಹೊಯಿಮಾಲಿ
ತಲೆಗೇರಿ ದಹಿಸುವೆ ಕಾಮನ ಜ್ವಾಲಿ
ಎಲೆ ನೀನಿಂದು ಕಾಡುವಿ ಬಂದು
ಮೂಢಳೆ ಪೋಗಿನ್ನು ನೀ ತೊರೆದು (ಚಲತಿ) ವಯ್ಯಾರಿ... ॥ ೨ ॥

ಛೀ ಮೂಢಳೆ, ದೂರ ಸರಿದು ನಿಲ್ಲು ! ಸತ್ಯ ಶರಣರ ಮೇಲೆ ಇಂಥ ಹುಡುಗಾಟಿಕೆಯನ್ನು ನಡೆಸಲು ನಿನಗೆ ನಾಚಿಕೆ ಬರುವದಿಲ್ಲವೆ? ಈ ಸಂಸಾರ ಸುಖ ಹೇಯವೆಂದು ತಿಳಿದು, ಅದನ್ನು ಸಮೂಲವಾಗಿ ಅಳಿದು, ಸಹಜಾನಂದ ಸುಖದಲ್ಲಿ ಲೋಲಾಡುವ ಶಿವಯೋಗಿಗಳಿಗೆ ಇಂಥ ಪೊಳ್ಳು ವೈಭವಗಳು ಸರಿದೋ ರ ಬಲ್ಲವೇ? ಹೆಣ್ಣಿಗೆ ಒಪ್ಪುವ ಮರ್ಯಾದೆಯನ್ನು ಮೂಲೆಗೊತ್ತಿ. ಉಟ್ಟಿರುವದನ್ನು ಕಳಚಿಟ್ಟು ಉಧೋ ಎಂದು ಕೂಗುತ್ತಿರುವ ಹೊಯಮಾಲಗಿತ್ತಿ ನೀನ್ಯಾರು? ಸರಿದು ನಿಂತು ಮಾತನಾಡು.

ದೂ.–ಅಯ್ಯಯ್ಯ! ಇದೆಂಥ ಗಂಡಸು!! ದುಂಡು ಲಿಂಬೀ ಹಣ್ಣಿನಂಥ, ತುಂಬು ಹರೆಯದ ಹೆಣ್ಣು ದುಂಬಾಲ ಬಿದ್ದರೆ ಹೆಣವೆದ್ದು ಕ್ಯಾಕರಿಸಬಲ್ಲದು. ಇದು ಹುಟ್ಟಾ ಹೆಂಗಸರ ಮಾರಿ ನೋಡಿದ್ಹಾಂಗ ಕಾಣುವದಿಲ್ಲ; ಕಸೂತಿ ಸಾಲ್ಯಾಗ ಮಲಗಂದ್ರ ಮಸೂತಿ ಮೂಲ್ಯಾಗ ಬೀಳೂದು!

ಅ.– ಛೀ ಛೀ ಮೂರ್ಖಳೆ, ಎಂಥ ಅಸಹ್ಯ ಮಾತುಗಳನ್ನಾಡುತ್ತಿ? ನಿನ್ನ ನಾಲಿಗೆಯೇ ನಿನ್ನ ಕುಲವನ್ನು ನಿರ್ಧರಿಸುತ್ತದೆ.

ಮಾ.–ಕೋಮಲಾಂಗ, ತಿಳಿಯದೆ ಪರರ ಮೇಲೆ ಯಾಕೆ ಸಿಟ್ಟಿಗೇಳುವಿ? ನಾನು ಯಾರೆಂಬುದು ಗೊತ್ತಿಲ್ಲವೇ? ಸಾಮಾನ್ಯ ಹೆಂಗಸು ನಾನಲ್ಲ! ಕಣ್ಣಿಗೆ ತೋರುವ ಪ್ರಪಂಚವೆಲ್ಲ ನಾನೇ ಆಗಿರುವೆನು; ನನ್ನ ಹೆಸರು ಮಾಯಾದೇವಿ. ನಿನ್ನನ್ನೇ ಬಯಸಿ, ಈ ಪಟ್ಟಣದ ಮಮಕಾರ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿ ಬಂದಿರುವೆನು. ಈ ನಿನ್ನ ಸುಂದರ ಶರೀರವನ್ನು ಏಕೆ ಬಳಲಿಸುವಿ? ಮೃಷ್ಟಾನ್ನವನ್ನುಂಡು ಪುಷ್ಟವಾಗಿ ಬೆಳೆದು ಅಷ್ಟ ಭೋಗದಲ್ಲಿರುವುದನ್ನು ಬಿಟ್ಟು, ಗಡ್ಡೆಗೆಣಸುಗಳನ್ನು ತಿನ್ನುತ್ತ, ಶರೀರವನ್ನು ಕಂದಿಸಿ, ವೃಥಾ ನೊಂದುಕೊಳ್ಳುವಿಯೇಕೆ? ಕಟೆದ ಗೊಂಬೆಯಂತಿರುವ ಹೆಣ್ಣಿನೊಡನೆ ಸರಸ ಸಲ್ಲಾಪದಲ್ಲಿರುವುದನ್ನು ಬಿಟ್ಟು. ಬೂದಿಯನ್ನು ಬಡೆದುಕೊಂಡು ಏಕಾಕಿಯಾಗಿ ತಿರುಗುವದು ಮರುಳತನವಲ್ಲವೇ? ನನ್ನ ಮಾತು ನಡಿಸಿ ಕೊಡು. ಮದುವೆಯಾಗುವೆನೆಂದು ವಚನನೀಡು. ಆಗ ನಮ್ಮ ಜೀವನ ಸುಖದ ಸುಪ್ಪತ್ತಿಗೆಯಾಗುವದು.

(ಸಮೀಪಕ್ಕೆ ಹೋಗುವಳು)

ಅ.– ಎಲೆ ಹೆಣ್ಣೆ, ತೊಲಗಾಚೆಗೆ; ನಿನ್ನ ಮುಖದರ್ಶನವೇ ನನಗೆ ಬೇಡವೆಂದು ಪದೇ ಪದೇ ಹೇಳಿದರೂ ಬಣ್ಣದ ಮಾತುಗಳನ್ನು ಸುರಿಸುತ್ತ ಮೈಮೇಲೆ ಬರುತ್ತಿರುವಿ. ಶಿವ ಶಿವಾ, ಇದೆಂಥ ಮಾಯಾಮೋಹ!! ಮಾಯಾಪಾಶದಲ್ಲಿ ಸಿಕ್ಕು ಘಾಸಿಯಾಗುತ್ತಿರುವ ಮರುಳು ಮಾನವರನ್ನು ಎಚ್ಚರಿಸಿ, ಶಿವರಹಸ್ಯವನ್ನು ಬಿತ್ತರಿಸಿ, ಮುಕ್ತಗೊಳಿಸಬೇಕೆಂದು ಅವತರಿಸಿ ಬಂದಿರುವ ನನ್ನನ್ನು ಈಕೆ ತನ್ನ ಮಾಯಾಜಾಲದಲ್ಲಿ ಎಳೆಯಲಿಕ್ಕೆ ಹವಣಿಸುತ್ತಿರುವಳು. ಎಲೆ ಮಾಯೆ, ನಾನು ನಿನ್ನ ಮಾಯಾಜಾಲಕ್ಕೆ ಬೀಳತಕ್ಕವನಲ್ಲ. ಸುಜ್ಞಾನಿಗಳು ಹೆಣ್ಣನ್ನು ಹೇಸಿಗೆಗಿಂತಲೂ ಕಡಿಮೆಯೆಂದು ತಿಳಿಯುವರು.

ಮಾ.–ಹೇ ಮರುಳು ಅಲ್ಲಮಾ, ಏನೆಂದು ನುಡಿದೆ?

ಅ.– ಹೆಣ್ಣು ಹೇಸಿಗೆಗಿಂತಲೂ ಕಡಿಮೆ ಅಂದೆ.

ಮಾ.–ಸುಳ್ಳು ! ಹೆಣ್ಣು ಹೆಜ್ಜೇನಿಗಿಂತಲೂ ಸಿಹಿ!! ಅದರ ಸಿಹಿಯನ್ನು ನೀನೇನು ಬಲ್ಲೆ?

ಅ.– ಏನು, ಹೆಣ್ಣಿನಲ್ಲಿ ಅಷ್ಟೊಂದು ಸವಿ ಇದೆಯೇ?

ಮಾ.– ಆ ಸವಿ ಅಷ್ಟು ಇಷ್ಟು ಎನ್ನಲಾರೆ, ಅದು ತುಂಬಿ ತುಳುಕುವ ಹೆಜ್ಜೇನಿಗಿಂತಲೂ ಹೆಚ್ಚು ಸವಿ ಇರುವದು. ಸೂಕ್ಷ್ಮ ವಿಚಾರ ಮಾಡಿ ನೋಡಿದರೆ, ಹೆಣ್ಣು ಬರಿ ಹೆಣ್ಣಲ್ಲ. ಕಲ್ಪವೃಕ್ಷದ ಹಣ್ಣು! ಸಕ್ಕರೆಯನ್ನು ಬಿಟ್ಟು ಸವಿಯನ್ನು ಹುಡುಕುವ ಮರುಳರಂತೆ, ಸುಖದ ಸುಗ್ಗಿಯಂತಿರುವ ಹೆಣ್ಣನ್ನು ಬಿಟ್ಟು ಮತ್ತೇತರಲ್ಲಿ ಹೆಚ್ಚಿನ ಸುಖವನ್ನು ಹುಡುಕುವಿ? ತಿಳಿದು ನೋಡಿದರೆ ಈ ಜಗತ್ತಿನಲ್ಲಿ ಹೆಣ್ಣೊಂದೇ ಆನಂದದಾಯಕ ವಸ್ತು. ಇಂಥ ಪವಿತ್ರತಮವಾದ ಹೆಣ್ಣನ್ನು ಹೇಸಿಗೆಗಿಂತಲೂ ಕಡಿಮೆಂದು ನುಡಿಯುವ ನಿನ್ನ ಮೂರ್ಖತನಕ್ಕೆ ಮೇರೆಯೇ ಇಲ್ಲ.

ಅ.– ಎಲೆ ನೀಚಳೆ, ದುಃಖದಾಯಕ ಹೆಣ್ಣನ್ನು ಆನಂದ ಸ್ವರೂಪವೆಂದು ಬಣ್ಣಿಸುವ ನಿನ್ನ ಬಾಯ್ಬಡಕ ಮಾತಿಗೆ ಬೆಲೆಯೇ ಇಲ್ಲ.

ಮಾ.–ಅಲ್ಲೇ ಅಲ್ಲಮಾ, ಬರಿ ಬಾಯಿಂದ ಬಣ್ಣಿಸುವವಳು ನಾನಲ್ಲ. ಹೆಣ್ಣಿನಿಂದ ದೊರೆಯುವ ಆನಂದವೇ ಮಿಗಿಲೆಂದು ಸಿದ್ಧಮಾಡಿ ಹೇಳಬಲ್ಲೆ. ಆ ಹೇಳಿಕೆ ಸರ್ವಜನ ಸಮ್ಮತವಾದರೆ ನನ್ನನ್ನು ಲಗ್ನವಾಗಲು ಒಪ್ಪಿಕೊ; ಇಲ್ಲವಾದರೆ ಬಿಡು, ಹೇಳುತ್ತೇನೆ ಕೇಳು.

ಅ.– ಅದೇನಿರುವದು ಹೇಳಬೇಕು.

ಮಾ.– ತಾಳ : ಕೇರವಾ ; ರಾಗ : ಭೈರವಿ

ಜಗದಿ ಆನಂದಽ ನಿಜದಿಂದಽ ನಾರಿವೃಂದ
ನಿಜದಿಂದ ನಾರಿವೃಂದ ॥ ಪಲ್ಲ ॥

ಸುದತಿ ಸಹವಾಸ ಅದು ಬಲು ಸೊಗಸ
ನಿಜದಿ ಕೈಲಾಸ । ನಿಜದಿಂದ ನಾರಿವೃಂದ ॥ ೧ ॥

ಕಂಡರೆ ಹರುಷ, ಕಣ್ಣಿಗೆ ಸರಸ
ಸುಖದ ಪೌರುಷ । ನಿಜದಿಂದ ನಾರಿ ವೃಂದ ॥ ೨ ॥

ಸುಲಿದಿಟ್ಟ ಹಣ್ಣಾ, ನಲವಿನ ಹೆಣ್ಣಾ
ತಿಳಿಯೊ ಸುಗುಣಾ । ನಿಜದಿಂದ ನಾರಿವೃಂದ ॥ ೩ ॥

ಹೇ ಅಲ್ಲಮಾ, ಹೆಣ್ಣಿನಿಂದಾಗುವ ಆನಂದವನ್ನು ಬಣ್ಣಿಸಲು ಯಾರಿಗೂ ಸಾಧ್ಯವಿಲ್ಲ. ಸುಂದರಿಯಾದ ಹೆಣ್ಣನ್ನು ನೋಡಿದ ಕೂಡಲೇ ಕಣ್ಣಿಗೆ ಆನಂದ; ಆವಳನ್ನು ಮುಟ್ಟಿದ ಕೂಡಲೇ ಮೈಗೆ ಆನಂದ. ಕೂಡಿದ ಕೂಡಲೇ ಮನಸ್ಸಿಗೆ ಆನಂದ. ಹೀಗೆ, ಯಾವ ರೀತಿಯಿಂದ ನೋಡಿದರೂ ಆನಂದವೇ ಆನಂದ ! ಸೊಗಸಾದ ಹೆಣ್ಣು ನಿಜದ ಕೈಲಾಸ ! ಇಂಥ ರಸಿಕ ಹೆಣ್ಣನ್ನು ಹೇಸಿಗೆಗಿಂತ ಕಡಿಮೆಯೆಂದು ನಿನ್ನಂಥ ಬುದ್ಧಿಯಿಲ್ಲದ ಬೂದಿಬಡಕ ದಾಸಯ್ಯಗಳು ಹೇಳುವರೇ ಹೊರತು, ಸಂಸಾರ ಸಾರವನ್ನರಿತ ಸವಿಗಾರರು ಹೇಳಲಾರರು. ಸುಂದರಾ, ನಿನ್ನ ಮರುಳತನವನ್ನು ಬಿಟ್ಟು ನನ್ನ ಸುಂದರಾಂಗವನ್ನು ಸ್ಪರ್ಶ ಮಾಡಿ ನೋಡು. ನಿನಗೆ ಆನಂದವಾಗದಿದ್ದರೆ ನನ್ನ ಮಾತು ಸುಳ್ಳೆಂದು ತಿಳಿ.

ಅ.– ಎಲೆ ಬಲಿಗಾರತಿ, ಎಂತಹ ಬಣ್ಣದ ಮಾತುಗಳನ್ನು ಸುರಿಸುತ್ತಿರುವಿ. ಈ ಪ್ರಪಂಚದಲ್ಲಿ ಹೆಣ್ಣು ಪ್ರತ್ಯಕ್ಷ ರಾಕ್ಷಸಿ! ಹೀಗಿದ್ದೂ ಅದನ್ನು ಸಕ್ಕರೆಗಿಂತಲೂ ಸವಿಯೆಂದು, ಅಮೃತಕ್ಕಿಂತಲೂ ಮಿಗಿಲೆಂದು ಹೇಳುವ ನಿನ್ನ ಹೊಯ್ಮಾಲಿ ತನ ನಾ ಬಲ್ಲೆ.

ಮಾ.–ಏನು? ಹೆಣ್ಣು ಪ್ರತ್ಯಕ್ಷ ರಾಕ್ಷಸಿಯೆ?

ಅ.– ಹೌದು ಪ್ರತ್ಯಕ್ಷ ರಾಕ್ಷಸಿ. ರಾಕ್ಷಸರಲ್ಲಿರುವ ದುರ್ಗುಣಗಳೆಲ್ಲ ಕೆಟ್ಟ ಹೆಣ್ಣಿನಲ್ಲಿ ಮನೆಮಾಡಿಕೊಂಡಿರುತ್ತವೆ; ತಿಳಿಯಿತೇ?

ಮಾ.–ಅಲ್ಲಮಾ, ತಿಳಿಯುವದು ಅದರಲ್ಲೇನಿದೆ? ರಾಕ್ಷಸರು ಕೈಗೆ ಸಿಕ್ಕ ಪ್ರಾಣಿಗಳನ್ನು

ಓಡಿದೆಳೆದು ನುಂಗಿ ನೀರು ಕುಡಿಯುವರು. ಅಂಥ ಅನರ್ಥ ಹೆಣ್ಣಿನಿಂದ ಆಗಬಲ್ಲದೆ?

ಅ.– ಅದಕ್ಕಿಂತಲೂ ಮಿಗಿಲಾದ ಅನರ್ಥ ಹೆಣ್ಣಿನಿಂದ ಆಗುತ್ತದೆ. ರಾಕ್ಷಸಿಯು ಕೈಗೆ ಸಿಕ್ಕ ಪ್ರಾಣಿಗಳನ್ನಷ್ಟೇ ಎಳೆದು ನುಂಗುತ್ತದೆ. ಆದರೆ ಹೆಣ್ಣು ಕೈಗೆ ಸಿಕ್ಕದ್ದನ್ನೂ ಕಣ್ಣಿಗೆ ಕಂಡದ್ದನ್ನೂ ಬಿಡದೆ ಎಳೆದುಕೊಂಡು ನುಚ್ಚುನುರಿ ಮಾಡುತ್ತದೆ.

ಮಾ.–ಎಂಥ ಸೋಜಿಗದ ಮಾತಿದು! ಅವಳು ಕಣ್ಣಿಗೆ ಕಂಡದ್ದನ್ನು ಹೇಗೆ ಎಳೆಯ ಬಲ್ಲಳು?

ಅ.– ಅವಳು ತನ್ನನ್ನು ನೋಡಿದ ಪುರುಷರ ಮನಸ್ಸನ್ನೇ ಅಪಹರಿಸುತ್ತಾಳೆ. ಅಂಥ ಅದ್ಭುತವಾದ ಶಕ್ತಿ ಹೆಣ್ಣಿನಲ್ಲಿ ಮನೆ ಮಾಡಿಕೊಂಡಿದೆ.

ಮಾ.–ಒಳ್ಳೇದು, ಮುಂದೇನು!

ಅ.– ಮಾತಾಡಿದರೆ ಹಣವನ್ನೇ ಸೆಳೆದುಕೊಳ್ಳುತ್ತಾಳೆ.

ಮಾ.– ಅವಳು ಮಾತಾಡಿದಾಕ್ಷಣವೇ ಹಣವನ್ನು ಹೇಗೆ ಸೆಳೆಯಬಲ್ಲಳು? ನೀನಾಡುವ ಮಾತು ವಿಚಿತ್ರ!

ಅ.– ವಿಚಿತ್ರದ ಮಾತಲ್ಲ; ಬಣ್ಣದ ಬೆಡಗಿನ ಹುಡುಗಿ ನಸುನಗೆ ಬೀರಿ ನಾಲ್ಕು ಮಾತನ್ನು ಆಡಿದರೆ ಸಾಕು; ತನ್ನ ಮೇಲೆ ಅವಳ ಪ್ರೀತಿ ಇದೆಯೆಂದು ಬಗೆದು ಕಾಮಿಗಳಾದವರು ಅವಳು ಬೇಡಿದಷ್ಟು ಹಣ ಕೊಡಲಿಕ್ಕೆ ಸಿದ್ಧರಾಗುತ್ತಾರೆ. ಕೂಡಿದರಂತೂ ಮುಗಿದೇಹೋಯಿತು; ಆಕೆಯ ಸಲುವಾಗಿ ಪ್ರಾಣ ಕೊಡಲಿಕ್ಕೂ ಸಿದ್ಧರಾಗುತ್ತಾರೆ. ಇದಕ್ಕೆಲ್ಲಾ ಆ ಬೇಟಗಾರ್ತಿಯ ಬೆಡಗಿನ ನೋಟವೇ ಕಾರಣವಲ್ಲವೆ? ಹೀಗೆ ಮನುಷ್ಯರ ಪ್ರಾಣವನ್ನೇ ಹೀರಿ, ಕೈಗೆ ಸಿಕ್ಕವರನ್ನು ಅನರ್ಥದ ಕಂದಕಕ್ಕೆ ಚೆಲ್ಲುವ ಹೆಣ್ಣು ಪ್ರತ್ಯಕ್ಷ ರಾಕ್ಷಸಿಯಲ್ಲದೆ ಮತ್ತೇನು?

ಮಾ.–ಬಿಡು ಬಿಡು ಒಣತರ್ಕದ ಮಾತುಗಳನ್ನು ಏಕೆ ಹೇಳುತ್ತಿ? ಹೆಣ್ಣಿನಿಂದ ವ್ಯರ್ಥ ಅನರ್ಥವೇ ಆಗುತ್ತಿದ್ದರೆ, ಜನರೇಕೆ ತಮ್ಮ ತನಮನಧನಗಳನ್ನು ಆಕೆಗೆ ಅರ್ಪಿಸುತ್ತಿದ್ದರು?

ಅ.– ಎಲೆ ಮಾಯೆ, ಹೆಣ್ಣು ಮನುಷ್ಯರನ್ನು ಹಿಡಿಯುವ ಮಾಯದ ಬಲೆಯಾಗಿದೆ, ಹೊರನೋಟಕ್ಕೆ ಸುಂದರವಾಗಿ ಕಾಣುವ ಬಲೆಯಲ್ಲಿ ಕರುಳ ಕತ್ತರಿ ಇದೆ–ಎಂಬುದು ಸಾಮಾನ್ಯ ಜನರಿಗೆ ಹೇಗೆ ಹೊಳೆಯಬೇಕು? ಆದ್ದರಿಂದಲೇ

ಅವರು ಮೋಸ ಹೋಗುವರು. ಅದನ್ನು ಬಲ್ಲವರು ತಮ್ಮ ತನು-ಮನ-ಧನಗಳನ್ನೇಕೆ ಅವಳಿಗೆ ಅರ್ಪಿಸಬಲ್ಲರು? ಹೆಣ್ಣಿನಿಂದ ಆನಂದ ಉಂಟೋ? ಅನರ್ಥ ಉಂಟೋ?-ಎಂಬುದನ್ನು ಬಿಚ್ಚಿಹೇಳುತ್ತೇನೆ ಕೇಳು.

ಮಾ.-ಅದೇನಿರುವದು ಹೇಳುವಂಥವರಾಗಿರಿ.

ಅ.- ಪದ : ತಾಳ : ದೀಪಚಂದ; ರಾಗ : ಕಾಫಿ

ಕಷ್ಟದ ನೆಲೆಯು ನೀನಲ್ಲ
ಬಾಲೆಯು ನರರಿಗೆ ಬೀಸಿದ ಮಾಯದ ಬಲೆಯು ॥ ಪಲ್ಲ ॥
ದುರ್ಗಂಧ ಹೊಲೆಯು, ತುಂಬಿದ ನೆಲೆಯು

ಏರು : ಹಲ್ಲಿಲ್ಲದ ಹುಲಿಯು, ಮಾಡ್ವುದು ಕೊಲೆಯ
ಶಿವ ಶಿವಾ ಬಲೆಯು । ಕಷ್ಟದ ನೆಲೆಯು... ॥ ೧ ॥

ಏನಿಲ್ಲ ಹುರುಳ, ತೊಗಲಿಗೆ ಮರುಳ
ಆಗುತ ನರರು, ಬಲೆಯೊಳು ಬೀಳ್ವರು
ದುಃಖ ಹೊಂದುವರು । ಕಷ್ಟದ ನೆಲೆಯು... ॥ ೨ ॥

ಹೆಣ್ಣಿನ ಸೆಳವು, ಕಣ್ಣಿಗೆ ಹೊಳವು
ಮಾಯದ ಹುಳವು, ಮುಕ್ತಿಗೆ ಮುಳುವು
ಸರ್ವೆಲ್ಲ ಪ್ರಳಯವು । ಕಷ್ಟದೆ ನೆಲೆಯು... ॥ ೩ ॥

ಎಲೆ ನಾರಿ, ಹೆಣ್ಣಿನಿಂದ ಆನಂದವಾಗುವದರ ಬದಲು ಅನರ್ಥವೇ ಆಗುತ್ತದೆ. ಈ ಮಾತಿನ ಅರ್ಥವನ್ನು ಬಿಚ್ಚಿ ಹೇಳುತ್ತೇನೆ ಕೇಳು : ಪಕ್ಷಿಗಳನ್ನು ಹಿಡಿಯುವ ಬೇಡನು ಮೊದಲು ಏನು ಒಡ್ಡಿರುತ್ತಾನೆ?

ಮಾ.-ಬಲೆಯನ್ನು ಒಡ್ಡಿರುತ್ತಾನೆ.

ಅ.- ಆ ಬಲೆಯೊಳಗೆ ಏನು ಇಟ್ಟಿರುತ್ತಾನೆ?

ಮಾ.-ಹಣ್ಣು ಹಂಪಲ ಮೊದಲಾದ ತಿನಸನ್ನು ಇಟ್ಟಿರುತ್ತಾನೆ.

ಅ.- ಅವುಗಳನ್ನು ಏತಕ್ಕೆ ಇಟ್ಟಿರುತ್ತಾನೆ?

ಮಾ.-ಅವುಗಳನ್ನು ಕಂಡಕೂಡಲೆ ಪಕ್ಷಿಗಳೆಲ್ಲ ಬಂದು, ಬಲೆಗೆ ಬೀಳಲೆಂದು ಇಟ್ಟಿರುತ್ತಾನೆ.

ಅ.– ಆಗ ಪಕ್ಷಿಗಳು ಏನು ಮಾಡುತ್ತವೆ?

ಮಾ.–ತಮ್ಮನ್ನು ಹಿಡಿದು ಗೋಣು ಮುರಿಯಲಿಕ್ಕೆ ಮಾಡಿದ ಮೋಸವೆಂದು ತಿಳಿಯದೆ, ಅಲ್ಲಿ ತೋರಿಕೆಗೆ ಇಟ್ಟಿರುವ ಹಣ್ಣಿನ ಛಾಯೆಗೆ ಮರುಳಾಗಿ, ಅವು ಒಂದೊಂದೇ ಒಳಗೆ ಹೋಗಿ, ಹಿಂದು ಮುಂದಿನ ವಿಚಾರವಿಲ್ಲದೆ ನಲಿದಾಡಿ ತಿನ್ನುಹತ್ತುತ್ತವೆ.

ಅ.– ಮುಂದೆ ಆ ಪಕ್ಷಿಗಳ ಗತಿ ಏನು?

ಮಾ.–ಮುಂದೆ ಕೇಳುವದೇನು? ಅವು ಹಿಗ್ಗಿ ಹಿಗ್ಗಿ ತಿನ್ನುತ್ತ ಕೂತಿರುವದನ್ನು ಕಂಡು, ಬಲೆಗಾರನು ಬಲೆಯನ್ನು ಭರ್‍ರನೆ ಎಳೆದು, ಅವುಗಳನ್ನು ಬಂಧಿಸಿ ಬಿಡುತ್ತಾನೆ.

ಅ.– ಮುಂದೆ ಆ ಪಕ್ಷಿಗಳ ಗತಿ ಏನು?

ಮಾ.–ಅವುಗಳ ಗತಿ ದುರ್ಗತಿ! ಪಾಪ!! ಆ ಬಡಪಕ್ಷಿಗಳು ಭ್ರಾಂತವಾಗಿ, ಆದ ಆನಂದವೆಲ್ಲ ಮಣ್ಣುಗೂಡಿ ಬಂಧನಕ್ಕೊಳಗಾಗಿ ಮರಮರನೆ ಮರುಗಿ, ಪಾರಾಗಿ ಹೋಗಲು ದಾರಿ ಸಿಗದೆ ವಿಲಿವಿಲಿ ಒದ್ದಾಡುತ್ತ, ಕಟುಕನ ಕೈಯಲ್ಲಿ ಸಿಕ್ಕು, ಕಳ–ಕಳ ಗೋಣು ಮುರಿಸಿಕೊಳ್ಳುತ್ತವೆ.

ಅ.– ಎಲೆ ಮೂಢಳೇ, ಅದರಂತೆ ಹಣ್ಣಿನ ಮೋಹಜಾಲದಲ್ಲಿ ಸಿಕ್ಕ ಅಜ್ಞಾನಿಗಳು ಚರ್ಮದ ಚಲುವಿಕೆಗೆ ಚಕಿತರಾಗಿ, ನೀನು ಈಗಾಗಲೇ ಹೇಳಿದಂತೆ "ನೋಡಿದ ಕೂಡಲೇ ಕಣ್ಣಿಗೆ ಆನಂದ; ಮುಟ್ಟಿದ ಕೂಡಲೇ ಮೈಗೆ ಆನಂದ; ಕೂಡಿದ ಕೂಡಲೆ ಮನಸ್ಸಿಗೆ ಆನಂದ; ಒಟ್ಟಿನಲ್ಲಿ ಆನಂದವೇ ಆನಂದ"ವೆಂದು ಹಿಂದು ಮುಂದನ್ನರಿಯದೆ ಉರುಳಾಡುತ್ತಿರಲು, ಯಮಧರ್ಮನು ಅವಸಾನ ಸೂತ್ರವನ್ನು ಸರ್‍ರನೆ ಎಳೆದು ಪ್ರಾಣವನ್ನು ಹೀರಿ ಘೋರ ನರಕದಲ್ಲಿ ಚೆಲ್ಲುವನು. ಆಗ ಆ ಪ್ರಾಣಿಯ ಆನಂದ ಮಾಯವಾಗುತ್ತದೆ. ಇಂತಹ ಅನಾಹುತಕ್ಕೆ ಕಾರಣಳಾದ ಸ್ತ್ರೀ ಪ್ರತ್ಯಕ್ಷ ರಾಕ್ಷಸಿಯಲ್ಲದೆ ಮತ್ತೇನು? ಅವಳನ್ನು ಕಂಡರೆ ನನಗೆ ಭಯ ಬರುತ್ತದೆ. ಸಾಕು ಸಾಕು ಅವಳ ನೆರಳು.

ಮಾ.–ಅಲ್ಲಮಾ, ನಿನ್ನ ಪೊಳ್ಳು ಬೆದರಿಕೆಗೆ ಮರಳಿ ಹೋಗುವ ಸಾಮಾನ್ಯ ಹೆಣ್ಣು ನಾನಲ್ಲ! ನಾನು ಮೂಲೋಕದ ಮಹಾಮಾಯೆ!! ಎಚ್ಚರದಿಂದ ಮಾತಾಡು. ನೀನು ಹೆಣ್ಣಿಗೆ ಏನೆಂದು ನುಡಿದೆ?

ಅ.– ಹೆಣ್ಣು ಸಂಸಾರಿಕರನ್ನು ಯಮಶೂಲಕ್ಕೆ ಇಕ್ಕುವ ಮಾಯದ ಬಲೆಯೆಂದು ನುಡಿದೆ.

ಮಾ.–ಡಾಂಭಿಕ ಅಲ್ಲಮಾ, ಹೆಣ್ಣು ಮಾಯದ ಬಲೆಯಲ್ಲ; ಸೌಖ್ಯದ ನೆಲೆ. ಅವಳ ಇಂಗಿತವನ್ನು ಬೈರಾಗಿಯಾದ ನೀನೇನು ಬಲ್ಲೆ? ಶಾಸ್ತ್ರ ಸಂತೆಯ ಸುದ್ದಿ! ಪುರಾಣ ಪುಂಡರ ಗೋಷ್ಠಿ!! ಅವುಗಳನ್ನು ನಂಬಿ ಬೋಧಿಸುವವರು ಶುದ್ಧ ಮೋಸಗಾರರು!!!

ಅ.– ಅವರೆಂತು ಮೋಸಗಾರರು?

ಮಾ.–ಅವರು ನುಡಿದಂತೆ ನಡೆಯದ ಎಬಡರು. ಹೇಳುವದೊಂದು ಮಾಡುವದು ಮತ್ತೊಂದು. ಇಂಥವರು ಮಾಡುವದು ಮೋಸವಲ್ಲವೆ?

ಅ.– ಅವರೇನು ಮೋಸ ಮಾಡಿದ್ದಾರೆ? ಸುಮ್ಮನೆ ಸುಳ್ಳು ಸುರಿಸಬೇಡ?

ಮಾ.–ಸುಳ್ಳಾಡುವವಳು ನಾನಲ್ಲ. ಸತ್ಯಪುರುಷಾ, ಆ ಆರು ಶಾಸ್ತ್ರಗಳನ್ನು ರಚಿಸಿದ ಪುಣ್ಯಾತ್ಮರು ಯಾರು?

ಅ.– ಕಪಿಲ, ಪತಂಜಲಿ, ಗೌತಮ, ಕಣಾದ, ಜೈಮಿನಿ, ಬಾದರಾಯಣ–ಈ ಋಷಿಗಳೇ ಆ ಆರು ಶಾಸ್ತ್ರಗಳನ್ನು ರಚಿಸಿದ ರಸಋಷಿಗಳು.

ಮಾ.–ಆ ಆರು ಋಷಿಗಳು ಬರೆದ ಆ ಆರು ಶಾಸ್ತ್ರಗಳು ಯಾವವು?

ಅ.– ಕಪಿಲ ಋಷಿಯಿಂದ ಸಾಂಖ್ಯಶಾಸ್ತ್ರ, ಪತಂಜಲಿಯಿಂದ ಯೋಗಶಾಸ್ತ್ರ, ಗೌತಮನಿಂದ ನ್ಯಾಯಶಾಸ್ತ್ರ, ಕಣಾದನಿಂದ ವೈಶೇಷಿಕಶಾಸ್ತ್ರ, ಜೈಮಿನಿಯಿಂದ ಪೂರ್ವಮೀಮಾಂಸೆಯೆಂಬ–ಕರ್ಮಕಾಂಡ ಬಾದರಾಯಣನಿಂದ ಉತ್ತರ ಮೀಮಾಂಸೆಯೆಂಬ ಜ್ಞಾನಕಾಂಡ ರಚಿಸಲ್ಪಟ್ಟವು.

ಮಾ.–ಛೀ, ಆ ಆರು ಶಾಸ್ತ್ರಗಳನ್ನು ಬರೆದ ಛೀಮಾರಿಗಳ ಜನ್ಮಕ್ಕೆ ಧಿಕ್ಕಾರವಿರಲಿ !

ಅ.– ಅವರನ್ನೇಕೆ ಧಿಕ್ಕರಿಸುವಿ?

ಮಾ.–ಹೇಳುತ್ತೇನೆ ಕೇಳು.

ಅ.– ಅದೇನಿರುವದು ಹೇಳು.

ಮಾ.– ಪದ : ತಾಳ : ದೀಪಚಂದ ; ರಾಗ : ಕಾಫಿ

ಸುಳ್ಳಿನ ಶಾಸ್ತ್ರಾ, ಕಪಟ ಕಪಟ ತಂತ್ರಾ
ಹೆಣ್ಣಿನ ಗಾತ್ರಾ, ಸುಖದ ಸೂತ್ರಾ ॥ ಪಲ್ಲ ॥

ನಾರಿಯ ಶರೀರಾ, ನರಕದ ದ್ವಾರಾ
ಅಂಬುವ ಶಾಸ್ತ್ರಿಕರು ತಾವ್ಯಾಕೆ, ಹೆಂಡರ, ಆಗಿಹರೊ ಧೀರಾ ॥ ೧ ॥

ಹರಿಹರ ನಿತ್ಯರು, ವರಮಾಯೆ ಭೃತ್ಯರು
ತಾವ್ಯಾಕೆ ಆಗಿಹರೊ, ನರಕದ ದ್ವಾರಾ, ಆಗಿಹರೊ ಸ್ತ್ರೀಯರ ॥ ೨ ॥

ಹೆಣ್ಣಲ್ಲೊ ರಾಕ್ಷಸಿ ನೋಡಿಕೊ ಸೋಸಿ
ಏರು : ಸೌಖ್ಯದ ರಾಶಿ, ಎನ್ನನು ಅರಸಿ, ಮಾಡಿಕೊ ಅರ್ಪಿತ ॥ ೩ ॥

ಅಲ್ಲಮಾ, ನೀನು ಹೇಳಿದಂತೆ ಆ ಶಾಸ್ತ್ರಕಾರರು "ಹೆಣ್ಣು ಪ್ರತ್ಯಕ್ಷ ರಾಕ್ಷಸಿ, ಅದನ್ನು ಕೈಯಿಂದ ಮುಟ್ಟಬೇಡಿರಿ. ಕಣ್ಣಿನಿಂದ ಕಾಣಬೇಡಿರಿ, ಅದು ನಿಮಗೆ ಕಷ್ಟಕೊಟ್ಟು ಯಮಶೂಲಕ್ಕೆ ಹಾಕಿಸುವ ಮಾಯದ ಬಲೆ"ಯೆಂದು ಶಾಸ್ತ್ರಗಳಲ್ಲಿ ಬರೆದು, ಜನರನ್ನು ಕರೆದು, ಮುಂದಿನ ಹದಿನಾರು ಹಲ್ಲು ತೆರೆದು ಉಪದೇಶ ಮಾಡುವರಲ್ಲವೆ? ಹೀಗೆ ಹೇಳಿದ ಆ ಶಾಸ್ತ್ರಕಾರರು ತಾವೇಕೆ ಹೆಂಡಿರನ್ನು ಮಾಡಿಕೊಂಡು ಅವರ ಮಂಡೆಗೆ ಹೂ ಮುಡಿಸಿದರು? ಹೆಂಡಿರ ದಾಸಾನುದಾಸರಾಗಿ ಮೆರೆದ ಈ ಗೊಡ್ಡು ಶಾಸ್ತ್ರಜ್ಞರು ಮಂದಿಯನ್ನು ಕರೆದು, 'ಹೆಣ್ಣಿನ ಬಲೆಯಲ್ಲಿ ಬೀಳಬೇಡಿರೆಂ'ದು ಉಪದೇಶ ಕೊಡುವರೆ? ಮೂಢರು ರೂಢಿಯೊಳಗೆ ಉತ್ತಮರೆ? ನೀನೇ ಹೇಳು. ಇದು ಅಲ್ಲದೆ, ಇನ್ನೊಂದು ಮಾತು ಅಂದೆಯಲ್ಲ?

ಅ.– ಅದಾವ ಮಾತು?

ಮಾ.–ಹೆಣ್ಣಿನ ಬಲೆಗೆ ಬಿದ್ದವರನ್ನು ಯಮನು ರೌರವ ನರಕದಲ್ಲಿ ನೂಕುವನೆಂದು ಹೇಳಿದಿಯಲ್ಲವೆ?

ಅ.– ಹೌದು. ಹೇಳಿದೆ.

ಮಾ.–ನಿಶ್ಚಯವಾಗಿ ನರಕಕ್ಕೆ ನೂಕುವನೆ?

ಅ.– ಹೌದು, ನಿಶ್ಚಯವಾಗಿ ನೂಕುವನು.

ಮಾ.–ಮೂಢಮತಿಯಾದ ಅಲ್ಲಮಾ, ಇನ್ನೊಮ್ಮೆ ವಿಚಾರಮಾಡಿ ಹೇಳು. ಹೆಣ್ಣಿನ ಬಲೆಯಲ್ಲಿ ಬಿದ್ದವರಿಗೆ ಶಿಕ್ಷೆ ಕೊಡುವವನು ಯಾವನು?

ಅ.– ಯಮನು!

ಮಾ.–ಮೋಕ್ಷ ನೀಡುವವನು ಯಾವನು?

ಅ.– ಶಿವನು!

ಮಾ.–ಅಂದಮೇಲೆ, ಶಿಕ್ಷೆ ಕೊಡತಕ್ಕಂಥ ಯಮನಿಗೆ ಮಾಲಿನಿ–ಶಾಮಲಾವತಿ ಎಂಬ ಇಬ್ಬರು ಹೆಂಡರುಂಟು. ಮೋಕ್ಷ ನೀಡತಕ್ಕ ಶಿವನಿಗೆ ಗೌರಿ–ಗಂಗಿ

ಎಂಬ ಇಬ್ಬರು ಹೆಂಡರುಂಟು. ಮೋಕ್ಷ ನೀಡತಕ್ಕ ಶಿವನಿಗೂ, ಶಿಕ್ಷೆಕೊಡತಕ್ಕ ಯಮನಿಗೂ ಜೋಡು ಜೋಡು ಹೆಂಡಿರು ಇರುವರೆಂಬುದನ್ನು ಮರೆಯಬೇಡ. ಹೀಗೆ ಇಬ್ಬಿಬ್ಬರು ಹೆಂಡರೊಡನೆ ಸಂಸಾರ ಮಾಡುತ್ತಿರುವ ಇವರು ಶಿಕ್ಷೆ, ಮೋಕ್ಷ ಅನ್ಯರಿಗೆ ನೀಡುತ್ತಿದ್ದರೆ, ಇವರಿಗೆ ಶಿಕ್ಷೆ ಮೋಕ್ಷ ನೀಡುವವರಾರು? ವಿಚಾರ ಮಾಡಿ ಮಾತಾಡು. ಅಲ್ಲಮಾ, ಇವೆಲ್ಲ ಅಜ್ಜೀ ಕಥೆಗಳು. ಹೆಣ್ಣು ಪ್ರತ್ಯಕ್ಷ ಮಹಾದೇವಿ! ನಾರಿ ಸ್ವರ್ಗದ ದಾರಿ!! ಇದನ್ನು ತಿಳಿದು ನನ್ನನ್ನು ಮದುವೆಯಾಗಲು ಒಪ್ಪಿಕೊ.

ಅ.– ಎಲೆ ನಾರಿ, ನಿನ್ನನ್ನು ಲಗ್ನವಾಗುವದು ಸಾಧ್ಯವಿಲ್ಲ.

ಮಾ.– ಪದ : ತಾಳ : ತ್ರಿತಾಳ; ರಾಗ : ಮಿಶ್ರಕಾಪಿ (ಚಕ್ಕಡ)

ಯಾರು ಕಾಣುವರೇನು, ಹಾರಿ ಹೋಗಲು ಪ್ರಾಣ
ಮೂರು ದಿನದ ಸಂತಿ, ತೀರಿಸಬೇಕೊ ಮನದಕ್ಕರತಿ
ಬಾ ನನ್ನ ಸಂಗತಿ, ಮಣಿಮಂಚಕೆ ಹತ್ತಿ
ರತಿಸುಖ–ಪಡೆಯುವ ಅತಿ ಪ್ರೀತಿ ಹೊಂದುತ ॥ ೧ ॥

ಹರದಿಮಣಿ ಬಂದು ಬಾಯಿ ತೆರೆದು ಕೇಳಿದರೆ
ಜರೆದು ಪೋಗುವದಿದು ತರವಲ್ಲಾ, ಪುರುಷಧರ್ಮಕಿದು ಸರಿಯಲ್ಲಾ
ಕಳೆಯುವ ಕಾಲಾ, ಕಾಮನ ಲೀಲಾ
ಆಡುತ ಇಬ್ಬರು ಕುಶಿಯಲಾ ಗುಣಶೀಲಾ ॥ ೨ ॥

ಪ್ರಭುವರಾ, ನಿನ್ನ ಮರುಳತನವನ್ನು ಬಿಟ್ಟುಬಿಡು. ಸತ್ತ ಮೇಲೆ ಕಾಣುವದೇನು? ಇರುವವರೆಗೆ ಮೂರು ದಿನ ಸುಖಪಟ್ಟದ್ದೇ ಬಂತು! ಇನ್ನೂ ನಿನಗೆ ಹೆಣ್ಣಿನ ಸುಖ ತಿಳಿದಂತಿಲ್ಲ.

ಅ.– ಹೆಣ್ಣಿನಲ್ಲಿ ಅಷ್ಟು ಸುಖ ಇರುವದಲ್ಲವೆ?

ಮಾ.–ಅಷ್ಟು ಸುಖ ಇದೆಯೆಂಬುದು ನಿನಗೆ ಗೊತ್ತಿದ್ದರೆ ಪುಂಡಾ, ನೀನೆಂದೂ ಬಿಡುತ್ತಿದ್ದಿಲ್ಲ.

ಅ.– ಅಷ್ಟೊಂದು ಮೋಹಕಾರಕವೇ?

ಮಾ.–ಮೋಹಕಾರಕವೇ–ಎಂದು ಕೇಳುವಿಯಾ? ಅದರ ಮರ್ಮವನ್ನು ತಿಳಿಯಲು ಈಗ ನನ್ನೊಡನೆ ರಾಜಮಂದಿರಕ್ಕೆ ನಡೆ; ಅಲ್ಲಿರುವ ಮಣಿ ಮಂಚದ ಮೇಲೆ, ರೇಶಿಮೆಯ ಸುಪ್ಪತ್ತಿಗೆ ಸಿದ್ಧವಿದೆ. ನಾವಿಬ್ಬರೂ ಹಾಲು–ಸಕ್ಕರೆಯಂತೆ ಒಂದಾಗಿ ಬೆರೆತು ಅಪ್ಪಿಕೊಂಡು ಸ್ವರ್ಗ ಸುಖದಲ್ಲಿ ಇರೋಣ. ಆಗ

ನೀನು ಮೂರು ಲೋಕದಲ್ಲಿ ಕಾಣಬಾರದ ಸುಖವನ್ನು ಕಾಣುತ್ತಿ. ನಾನು ಹೇಳುವದು ಸುಳ್ಳಾದರೆ, ಛೀಮಾರಿಯೆಂದು ನನ್ನನ್ನು ಜರೆ. ಬಾ ಹೋಗೋಣ. ನಿನ್ನದು ಲಿಂಗಪೂಜಾ ಸುಖ! ನನ್ನದು ಅಂಗರತಿ ಸುಖ! ಅವೆರಡರಲ್ಲಿ ಎಷ್ಟು ಅಂತರವಿದೆ-ಎಂಬುದನ್ನು ಒರೆಗೆ ಹಚ್ಚಿ ನೋಡುವಿಯಂತೆ.

ಅ.– ಏನೇ ಲಿಂಗಸುಖಕ್ಕಿಂತಲೂ ನಿನ್ನ ಅಂಗಸುಖ ಶ್ರೇಷ್ಠವೆಂದು ಹೇಳುವೆಯಾ? ಕೇಳು.

ಮಾ.–ಅದೇನಿರುವದು ಹೇಳು.

ಅ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಫಿ

ಛೀ ನೀಚೆ ಸುಡು ನಿನ್ನಂಗ, ನಾರಿಸಂಗ
ನಿನ್ನಂಗ ನಾರಿಸಂಗ, ನಿನ್ನಂಗ ನಾರಿಸಂಗ ॥ ಪಲ್ಲ ॥

ಏರು : ಹೆಣ್ಣೆಂಬ ಹೊಲದಿ, ಪಾಪದ ಜಲದಿ
ಜಗದಿ, ನಿಜದಿ, ನಿನ್ನಂಗ ನಾರಿಸಂಗ ॥ ೧ ॥

ಮಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಫಿ

ಹಳಿದು ನುಡಿವರೆ, ನನ್ನ ಅಂಗ ಕೋಮಲಾಂಗ
ನನ್ನ ಅಂಗ ಕೋಮಲಾಂಗ, ನಿನ್ನಂಗ ನಾರಿಸಂಗ
ಹೊಲಸೆಂಬ ಸೊಲ್ಲು ಸಲ್ಲದು ನಲ್ಲ, ಸುಖದ ಮೂಲೆಲ್ಲ ॥ ೨ ॥

ನನ್ನ ಅಂಗ ಕೋಮಲಾಂಗ ನಿನ್ನಂಗ ನಾರಿಸಂಗ

ಅ.– ಎಲೆ ಮೂಢ ಮಾಯೆ, ಛೀ ಅಂದವರಿಗೆ ಬಾ ಎನ್ನುವಿ. ನಿನ್ನಂಥ ಛೀಮಾರಿಯನ್ನು ನಾನೆಲ್ಲಿಯೂ ಕಾಣಲಿಲ್ಲ.

ಮಾ.–ಅದೇಕೆ?

ಅ.– ಲಿಂಗಸುಖಕ್ಕಿಂತಲೂ ನಿನ್ನ ದೇಹಸುಖವೇ ಹೆಚ್ಚಿನದೆಂದು ಹೇಳುತ್ತೀಯಲ್ಲ! ಮೂಢಳೇ, ನಿನ್ನ ಹೇಸಿ ಅಂಗವನ್ನು ಎಷ್ಟು ಬಣ್ಣಿಸುತ್ತಿರುವಿ?

ಮಾ.–ನಿನ್ನ ಲಿಂಗದೇವನಲ್ಲಿ ಯಾವ ಸುಖವುಂಟು? ಕೈಯಲ್ಲಿ ಹಿಡಿದು ನನ್ನ ಅಂಗವನ್ನು ಅಪ್ಪಿಕೊಂಡು ನೋಡು, ನಿನ್ನ ಲಿಂಗವನ್ನೂ ಅಪ್ಪಿಕೊಂಡು ನೋಡು.

ಅ.– ಎಲೆ ಬಲೆಗಾರತಿ, ಲಿಂಗವನ್ನು ಅಪ್ಪಿಕೊಳ್ಳುವದರಿಂದ ಆಗುವ ಬ್ರಹ್ಮಾನಂದವು ನಿನ್ನ ಅಂಗವನ್ನು ಅಪ್ಪಿಕೊಂಡರೆ ಆಗುವದೇ?

ಮಾ.–ಜೊಳ್ಳು ಮಾತಾಡುವವಳು ನಾನಲ್ಲ; ಖಾತ್ರಿ ಮಾಡಿಕೊಂಡು ನೋಡು. ಅಂಗೈಯಲ್ಲಿ ಲಿಂಗವನ್ನು ಹಿಡಿದುಕೊಂಡು, ಅನಂತಕಾಲ ಪ್ರಯಾಸಪಟ್ಟು ತಿರುಗಿದರೂ ಬಾರದಂಥ ಬ್ರಹ್ಮಸುಖ, ಇದೋ ನನ್ನ ಅಂಗವನ್ನು ಆಲಿಂಗಿಸಿದಾಗಲೇ ದೊರೆಯುವದು. ಒಮ್ಮೆ ಅಪ್ಪಿಕೊಂಡು ನೋಡು. ನಿನ್ನ ಅಂಗುಷ್ಟದಿಂದ ನೆತ್ತಿಯವರೆಗೆ ಒಮ್ಮೆಲೇ ಜುಮ್ಮೆಂದು, ಬ್ರಹ್ಮಾನಂದದ ಅನುಭವ ನಿನಗೆ ಉಂಟಾಗದಿದ್ದರೆ ಪುನಃ ನನ್ನ ಮುಖ ನೋಡಬೇಡ. ಸೌಂದರ್ಯದ ಬೀಡಾಗಿ, ಅಮೃತದ ಮಡುವಾಗಿ ಕಂಗೊಳಿಸುತ್ತಿರುವ ನನ್ನ ದೇಹವನ್ನು ಮುಟ್ಟಿ ಮನದಟ್ಟುಮಾಡಿಕೊ.

ಅ.– ಎಲೆ ತುಚ್ಛ ಮಾಯೆ. ಗೊಮ್ಮೆಂದು ನಾರುವ ನಿನ್ನ ಮಲದ ಭಾಂಡವನ್ನು ಬ್ರಹ್ಮಾನಂದವೆಂದು ಬಣ್ಣಿಸುವೆಯಲ್ಲ! ತೊಗಲನ್ನು ಮುದ್ದಾಡುವದು, ತೊಗಲಿನಲ್ಲಿ ಬಿದ್ದಾಡುವದು ಅದೆಂಥ ಸುಖ? ಅದರಿಂದ ಒಂದೇ ಸವನೆ ಸುರಿಯುತ್ತಿದೆ ಹೊಲೆ! ಅದರ ಸ್ವರೂಪವನ್ನೆಲ್ಲ ನಾನು ಬಲ್ಲೆ!! ಸೀರೆಯುಟ್ಟು ಮರೆಮಾಡಿಕೊಂಡ ನಿನ್ನ ದೇಹ ಮೂತ್ರದ ಕುಡಿಕೆ; ಮಾಂಸದ ಹಡಿಕೆ. ಕೀವು ಬಸಿಯುವ ಮಡಕೆ. ನಿನ್ನ ಹುರುಳನ್ನೆಲ್ಲ ಹೊರಗೆಡವಿ, ತೀರ ಹುಳಿಮಾಡುವದು ಸರಿಯಲ್ಲವೆಂದು ನಾನು ಸುಮ್ಮನಿದ್ದರೆ, ನೀನು ತುಳಿಯುತ್ತ ಮೈಮೇಲೆ ಬರುವಿ. ಮೊದಲೇ ನೀನು ಮಾಯೆ! ನಿನ್ನನ್ನು ಕಣ್ಣೆತ್ತಿ ಸಹ ನೋಡಬಾರದೆಂದು ಸತ್ಯ ಶರಣರು ಹೇಳುವರು; ನಿನ್ನನ್ನು ಕೊರವರ ಕತ್ತೆಗಿಂತಲೂ ಕಡೆ ಮಾಡಿ ನೋಡುವರು. ಲಿಂಗ ಪೂಜೆ ಮಾಡಿ ಲಿಂಗವೇ ಆಗುವ ಶರಣನ ದಿವ್ಯಾನಂದಕ್ಕಿಂತಲೂ ಭ್ರಷ್ಟ ಅಂಗದ ಸುಖ ಹೆಚ್ಚೆಂದು ಬಡಬಡಿಸುವೆಯಲ್ಲ! ನೀನಾಡುವ ಮಾತು ಕೇಳಿದರೆ, ಕತ್ತೆಗೆ ಜ್ವರ ಬರಬಹುದಾಗಿದೆ! ಶರಣರು ಕಾಳನ್ನು ಬಿಟ್ಟು ಜೊಳ್ಳಿಗೆ ಆಸೆ ಮಾಡುವರೆ? ಈ ಮಳ್ಳತನದ ಮಾತು ಆಡಬೇಡ. ನಿತ್ಯ ಸುಖ ನೀಡುವ ಶಿವಲಿಂಗವನ್ನು ಮರೆತು ಜೊಳ್ಳು ಮಾಯೆಯ ಮೋಹಕ್ಕೆ ಒಳಗಾದವರು ಈ ಸಂಸಾರವೆಂಬ ತಿರುಗಣಿಯ ಮಡುವಿನಲ್ಲಿ ಬಿದ್ದು ಘಾಸಿಯಾಗದೆ ಹೋಗರು!

ಮಾ.– ಅಲ್ಲಮಾ. ಅಂಗನೆಯರ ಬಂಗಾರದಂತಿರುವ ಅಂಗವನ್ನು ಮನಬಂದಂತೆ ಹೇಯಮಾಡಿ ನುಡಿಯುವದು ಛಂದವಲ್ಲ. ರಕ್ತದಲ್ಲಿಯೇ ಹುಟ್ಟಿ, ರಕ್ತದಲ್ಲಿಯೇ ಬೆಳೆದು, ಮರಳಿ ಆ ರಕ್ತಕ್ಕೇ–ಸೋರುವರಕ್ತ, ನಾರುವರಕ್ತ–ಎಂದು ಬಾಯಿ ಹಿಡಿಸದ ಹಾಗೆ ಧಿಕ್ಕರಿಸಿ ನುಡಿಯುವಿ, ಇದೆಂಥಾ ಲಜ್ಜೆಗೆಟ್ಟ ಮಾತು. ಈ

ಲೋಕದಲ್ಲಿ ಪ್ರತಿಯೊಂದು ಪ್ರಾಣಿ ಹೆಣ್ಣಿನಲ್ಲಿಯೇ ಜನಿಸಿ. ಹೆಣ್ಣಿನಿಂದಲೇ ಬೆಳೆದು. ಸುಖಪಟ್ಟು ಮರಳಿ ಹೆಣ್ಣನ್ನೇ ತಿರಸ್ಕರಿಸುವದೆಂದರೆ ಉಂಡಮನೆಯ ಗಳ ಎಣಿಸಿದಂತಲ್ಲವೆ? ಇಂಥ ಹೆಣ್ಣನ್ನು ಹೀಯಾಳಿಸುವ ಮೂಢರು ಉಪಕಾರಗೇಡಿಗಳಲ್ಲದೆ ಮತ್ತೇನು?

ಅ.– ಎಲೆ ಮೂಢಮಾಯೆ, ಈ ಲೋಕದ ಜೀವಿಗಳಿಗೆ ಸಿಗುವ ಸುಖವು ಹೆಣ್ಣನ್ನೇ ಅವಲಂಬಿಸಿದೆಯೆಂದು ಜಂಭಕೊಚ್ಚುವಿಯಲ್ಲ? ಇದೆಂಥ ಸೋಜಿಗದ ಮಾತು?

ಮಾ.–ಸೋಜಿಗದ ಮಾತು ಇದಲ್ಲ. ಮೂಜಗ ಮನಗಂಡ ಮಾತು ! ಹೇಳುತ್ತೇನೆ ಕೇಳು.

ಅ.– ಅದೇನಿರುವದು ಹೇಳು.

ಮಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಹೆಣ್ಣಿನ ಸುಖವ, ಬಣ್ಣಿಪನ್ಯಾವಽಽ
ಜಗದಿ ಜೀವ, ಪೇಳುವೆ ಅನುಭಾವ ॥ ಪಲ್ಲ ॥

ಏರು : ತಾಯಿಯು ಎನಿಸಿ, ಮೊಲೆಯನು ಉಣಿಸಿ
ಸವಿ ಸವಿ ಕ್ಷೀರಾ, ಅಮೃತದ ಸಾರಾ,
ಕುಡಿಸಿದೆ ಪೂರಾ ॥ ೧ ॥

ಲಿಂಗ ನೀ ಎನಿಸಿ, ಸಂಗದಿ ಜನಿಸಿ
ಸ್ವರ್ಗವ ಇಳಿಸಿ ಬಿಟ್ಟೆನೋ ಸನ್ಯಾಸಿ
ನೋಡಿಕೊ ಸೋಸಿ ॥ ೨ ॥

ಇರದಿರೆ ಹೆಣ್ಣು ಹುಟ್ಟದೊ ಜನ
ಲೋಕೆಲ್ಲಾ ಸ್ಮಶಾನ, ನಿರ್ಜನ ವಿಪಿನ
ತಿಳಿಯೋ ಸುಗುಣಾ ॥ ೩ ॥

ಅಲ್ಲಮಾ, ಈ ಪ್ರಪಂಚದಲ್ಲಿ ಪ್ರತಿಯೊಂದು ಪ್ರಾಣಿ ಸುಖವನ್ನು ಕಾಣುವದು ಹೆಣ್ಣಿನಿಂದ. ಅದನ್ನು ಪೂರ್ಣ ವಿಚಾರಮಾಡಿ ನೋಡದೆ ಮನಬಂದಂತೆ ಹೇಯಮಾಡಿ ನುಡಿಯುವುದು ಎಂಥ ಮರುಳತನ?

ಅ.– ಹೆಣ್ಣಿನಿಂದಲೇ ಲೋಕದ ಜೀವಿಗಳಿಗೆ ಸುಖವೇ? ಎಂಥ ಸೋಜಿಗದ ಮಾತಿದು?

ಮಾ.–ಸುಂದರಿಯರ ಸುಖ ಗೊತ್ತಿರದ ಅಲ್ಲಮಾ, ನಾ ಹೇಳುವದು ಸುಳ್ಳಲ್ಲ. ವಿಚಾರಮಾಡಿ ನೋಡಿದರೆ ಹೆಣ್ಣು ಕಲ್ಪವೃಕ್ಷದ ಹಣ್ಣು ! ಸಕ್ಕರೆಯ ಕರಣಿಯನ್ನು ಯಾವ ಮಗ್ಗಲು ಕಡಿದರೂ ಸವಿಯೇ ಇರುವಂತೆ, ಹೆಣ್ಣನ್ನು ಹೇಗೆ ಸವಿದರೂ ರುಚಿಯೇ ಸುರಿಯುತ್ತಿರುವದು. ಆ ಸುಖದ ಸುಗ್ಗಿಯನ್ನು ಏನೆಂದು ಬಣ್ಣಿಸಲಿ? ನೀನೀಗ ನನ್ನನ್ನು ತಿರಸ್ಕರಿಸುವದು ಹೆಣ್ಣೆಂದು ಅಲ್ಲವೆ? ಆ ಹೆಣ್ಣಿನ ಮಹಿಮೆಯನ್ನೇ ಹೇಳುತ್ತೇನೆ ಕೇಳು ; ಮೊದಲು ತಾಯಿಯಾಗಿ ಅಮೃತಕ್ಕಿಂತಲೂ ಹೆಚ್ಚು ರುಚಿಕರವಾದ ಮೊಲೆಹಾಲನ್ನು ಕುಡಿಸಿ, ದೊಡ್ಡವನನ್ನಾಗಿ ಮಾಡುವವಳು ಹೆಣ್ಣಲ್ಲವೆ? ಹಿಂದಿನಿಂದ ಹೆಂಡತಿಯೆಂಬ ಸಕ್ಕರೆಗಿಂತಲೂ ಸವಿಯಾದ ಸಂಗಸುಖವನ್ನು ನೀಡಿ ಸಂತೈಸುವವಳು ಹೆಣ್ಣಲ್ಲವೆ? ಆಮೇಲೆ ಮಗಳೆಂಬ ಹೆಸರಿನಿಂದ, ಹುಟ್ಟಿದ ಮನೆಗೂ ಕೊಟ್ಟಮನೆಗೂ ಮಹಾಲಕ್ಷ್ಮಿಯಾಗಿ ಮೆರೆಯುವವಳು ಹೆಣ್ಣಲ್ಲವೆ? ಅಲ್ಲಮಾ, ಹೆಣ್ಣಿನ ಘನತೆಯನ್ನು ಎಷ್ಟೆಂದು ಬಣ್ಣಿಸಲಿ? ಹೆಣ್ಣಿನಿಂದಲೇ ಲೋಕದ ಕಲ್ಯಾಣ! ಹೆಣ್ಣೊಂದು ಇಲ್ಲದಿದ್ದರೆ ಈ ಲೋಕ ಎಂದೋ ಇಲ್ಲದಾಗುತ್ತಿತ್ತು. ಆಗ ನಾನು ಇಲ್ಲ; ನೀನು ಇಲ್ಲ; ಯಾವುದೂ ಇಲ್ಲ. ಹೆಣ್ಣೆಂಬುದು ಜಗದ ತಾಯಿ! ಅದು ಹೆರೆತ ತುಪ್ಪಕ್ಕಿಂತಲೂ ಸವಿ; ಇಲ್ಲದಿದ್ದರೆ ದೇವಾನುದೇವತೆಗಳು ಅದನ್ನೇ ನಂಬಿ ಅದರ ಹೇಳಿಕೆಯಂತೆ ಯಾಕೆ ನಡೆಯುತ್ತಿದ್ದರು. ಆದ್ದರಿಂದಲೇ ಹೆಣ್ಣು ಮಹಾದೇವಿಯೆಂದೂ ಸುಖದಾಯಿನಿಯೆಂದೂ ಸರ್ವಕ್ಕೂ ಕಾರಣೀಭೂತಳೆಂದೂ ಪೂರ್ವದ ಮಹಾಕವಿಗಳು ಕೊಂಡಾಡಿರುವರು. 'ಸವಿಯನ್ನು ಕುಡಿದವರು ಸತ್ತರು, ವಿಷವನ್ನು ಕುಡಿದವರು ಬದುಕಿದರು'–ಎಂಬ ಗಾದೆಯ ಮಾತಿನಂತೆ ಹೆಣ್ಣನ್ನು ಕಂಡೊಡನೆ ಇದೊಂದು ಘಾತಕ ಭೂತವೆಂದು ಸುಳ್ಳೇ ಭೀತಿಗೊಂಡು ಸುಖಕ್ಕೆ ಎರವಾಗಿ ನಿಲ್ಲುವದೇ? ಸುಂದರಾ, ಬುದ್ಧಿಯನ್ನು ಎಲ್ಲಿ ಇಟ್ಟಿರುವಿ? ಮೊದಲು ನನ್ನನ್ನು ಲಗ್ನವಾಗು. ಹಿಂದುಗಡೆ ನನ್ನಿಂದ ಸಿಗುವ ಸುಖವನ್ನು ನೋಡುವಿಯಂತೆ.

ಅ.– ಎಲೆ ಜೊಳ್ಳು ಮಾಯೆ, ಕಾರ್ಯಸಾಧನೆಗಾಗಿ ಸಿಕ್ಕದ್ದನ್ನು ಹೇಳಬೇಡ.

ಮಾ.–ನುಡಿಯದಿರು ಅಲ್ಲಮಾ, ನುಡಿಯದಿರು; ಜೊಳ್ಳುಮಾಯೆ ಅನ್ನದಿರು. ನಾನು ಜೊಳ್ಳಲ್ಲ; ನೀನು ಜೊಳ್ಳು! ನಿನ್ನಂತೆ ಮಾತಾಡಿದ ಅನೇಕ ಜೋಗಿಗಳು ಮಾಯೆಯ ಕೈಯಲ್ಲಿ ಕುಣಿದಾಡುವರು.

ಅ.– ಛೀ ಪಾಪಿಷ್ಠಳೇ, ವೃಥಾ ಸುಳ್ಳನ್ನೇಕೆ ನುಡಿಯುವಿ? ಮಾಯೆಗೆ ಶರಣು ಹೋದ ಯೋಗಿಗಳು ಒಬ್ಬರಾದರೂ ಉಂಟೆ?

ಮಾ.–ಒಬ್ಬರೇ ಇಬ್ಬರೇ–ಅನೇಕರುಂಟು.

ಅ.– ಅಂಥವರು ಯಾರೂ ಇಲ್ಲ.

ಮಾ.–ವಿಚಾರ ಮಾಡಿ ನೋಡು.

ಅ.– ಯಾರಿದ್ದಾರೆ ಹೇಳು?

ಮಾ.–ಅಯ್ಯೋಧ್ಯಾಪಟ್ಟಣದ ದಶರಥರಾಜನ ಮಗನಾದ ರಾಮಚಂದ್ರನು ಈ ಜಗತ್ತಿಗೆಲ್ಲಾ ಜಾಹೀರ ಆಗಿರುವನಲ್ಲ!

ಅ.– ಹೌದು ಆಗಿರುವನು.

ಮಾ.–ಅವನು ಸಾಮಾನ್ಯ ಪುರುಷನೇ ಹೇಗೆ?

ಅ.– ಅವನೇನೂ ಸಾಮಾನ್ಯ ಪುರುಷನಲ್ಲ. ಈ ಭೂಮಿಯನ್ನು ಉದ್ಧಾರ ಮಾಡಲು ಅವತಾರ ಮಾಡಿದ ಸಾಕ್ಷಾತ್ ಆದಿನಾರಾಯಣನು.

ಮಾ.–ಆ ರಾಮಚಂದ್ರನು ಒಂದು ದಿನ, ಸಭೆಯಲ್ಲಿ ಕುಳಿತಾಗ ತನ್ನ ಕುಲಗುರುಗಳಾದ ವಶಿಷ್ಠರನ್ನು–"ಗುರುಗಳೇ, ಮಾಯೆ ಸುಳ್ಳೋ ಸತ್ಯವೋ?" ಎಂದು ಕೇಳಿದನು. ಆಗ ಮಾಯೆಯ ಮಹಿಮೆಯನ್ನರಿತ ವಶಿಷ್ಠನು ಗರ್ವದಿಂದ "ಶ್ರೀ ರಾಮಾ, ಮಾಯೆ ಸುಳ್ಳು"–ಎಂದು ಸಭೆಯಲ್ಲಿ ಕೂಗಿ ಹೇಳಿದನು. ಅಲ್ಲಮಾ, ಆಗ ಅವನಿಗೆ ಆದ ಫಜೀತಿಯನ್ನು ಎಷ್ಟೆಂದು ವರ್ಣಿಸಲಿ?

ಅ.– ಏನಾಯಿತು ಹೇಳುವಂಥವಳಾಗು.

ಮಾ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಹೋಯಿತೋ ಅವನ ಮನವು, ಸೇರಿತೋ ಒಂದು ವನವು
ಮಾಯೆಯ ಲೀಲಾ ಘನವು ॥ ಪಲ್ಲ ॥

ಏರು : ಕಾಡಿನಲ್ಲಿಯೇ ಹೋಗಿ, ಬೇಡಿತಿಯನ್ನು ಆಗಿ
ಹನ್ನೆರಡು ವರ್ಷ ಸುಖವಾಗಿ,
ಬಾಳ್ವೆ ಮಾಡಿದ ವಶಿಷ್ಠಯೋಗಿ,
ಮರಳಿ ಸ್ಮೃತಿಯು, ಬಂದು ನೋಡಲು
ಸರ್ವಲಯವಾಗಿ, ಹೋಯಿತೋ ಬಯಲಾಗಿ ॥ ೧ ॥

ಮರಳಿ ಮಾಯೆಯ ಸ್ಮರಿಸೆ ಅನ್ನುತಿರಲು ಋಷಿ
ಪ್ರತ್ಯಕ್ಷ ಬರಲು ಹೌಹಾರಿ,

ಯೋಗಿ ವಶಿಷ್ಠ ಸಿರಬಾಗಿ ಬಾಗಿ
ಮಾಯೆಯ ಘನ, ಕ್ಷಮಾ ಬೇಡಿದನೋ
ಹಾಡಿದನೊ ಕನಸಿನಲ್ಲಿ ಕಂಡಂಥ ಬೇಡನಾರಿ. ॥ ೨ ॥

ನಲುಮೆಯ ಅಲ್ಲಮಾ ಕೇಳು, ವಶಿಷ್ಠನು ಮಾಯೆ ಸುಳ್ಳೆಂದು ಹೇಳುವಷ್ಟರಲ್ಲಿಯೇ ಆತನಿಗೆ ಎಚ್ಚರದಪ್ಪಿ ಅಡವಿಗೆ ಹೋದಂತಾಯಿತು. ಅಲ್ಲಿ ಬೇಡತಿಯನ್ನು ಲಗ್ನವಾಗಿ ಹತ್ತೆಂಟು ಮಕ್ಕಳನ್ನು ಹಡೆದು, ಹನ್ನೆರಡು ವರ್ಷ ಪ್ರಪಂಚ ಮಾಡಿದಂತೆ ಅನಿಸಿತು. ಪುನಃ ಎಚ್ಚರವಾದಾಗ ಗಾಬರಿಯಾಗಿ ಸುತ್ತೆಲ್ಲ ನೋಡುತ್ತಾನೆ: ತಾನು ಮೊದಲಿನಂತೆ ರಾಮ ಸಭೆಯಲ್ಲಿಯೇ ಕುಳಿತಿದ್ದಾನೆ. ಆಗ ಅವನು ಆಶ್ಚರ್ಯಚಕಿತನಾಗಿ "ತಾನು ಕಂಡುದು ಕನಸೋ ಕೌತುಕವೋ" ಎಂದು ಸೋಜಿಗ ಪಡುತ್ತಿರಲು, ಶ್ರೀರಾಮಚಂದ್ರನು "ಗುರುಗಳೇ ಮಾಯೆ ಹೇಗಿದೆ?" ಎಂದು ಕೇಳಿದನು. ಆಗ ವಶಿಷ್ಠನು 'ಮಾಯೆ ಸುಳ್ಳೆಂ'ದು ಪುನಃ ಹೇಳಿದನು. ಅಲ್ಲಮಾ, ಆಗ ಆ ಬೇಡಿತಿಯ ಹನ್ನೆರಡು ಜನ ಮಕ್ಕಳು ಹೇಗೆ ಬಂದಿದ್ದರೋ ಎಲ್ಲಿ ಅಡಗಿದ್ದರೋ ಅವರೆಲ್ಲ ಒಮ್ಮೆಲೆ ಸಭೆಯೊಳಗೆನುಗ್ಗಿ "ಹೆಂಡಿರು ಮಕ್ಕಳನ್ನು ಸಲಹಲಾರದೆ ಓಡಿ ಬಂದ ಆ ಕಳ್ಳ ವಶಿಷ್ಠ ಎಲ್ಲಿ ಅಡಗಿರುವನು?"–ಎಂದು ಆರ್ಭಟಿಸಿದರು. ಆಗ ವಶಿಷ್ಠನು ಅಂಜಿ ಥರ ಥರನೆ ನಡುಗುತ್ತ ರಾಮನ ಹಿಂಬದಿಗೆ ಸರಿಯತೊಡಗಿದನು. ಆಗ ಶ್ರೀರಾಮನು "ವಶಿಷ್ಠರೇ, ಮಾಯೆ ಸುಳ್ಳೋ ಸತ್ಯವೋ" ಎಂದು ಕೇಳಿದ. ಆಗ ವಶಿಷ್ಠನು ಮಾಯೆಯನ್ನು ನೆನೆದು, 'ಅಗಾಧ ಮಹಿಮೆಯುಳ್ಳ ಮಾಯೆಯೆ, ನಿನ್ನ ಮಹಿಮೆಯನ್ನು ತಿಳಿಯದೆ ನುಡಿದ ನನಗೆ ಯೋಗ್ಯ ಬುದ್ಧಿಯನ್ನು ಕಲಿಸಿದೆ; ತಾಯಿ ತಪ್ಪಾಯಿತು"– ಎನಲು, ಬೇಡಿತಿಯ ಮಕ್ಕಳು ಆ ಕ್ಷಣವೇ ಮಾಯವಾದರು. ಬೇಡ ಅಲ್ಲಮಾ ಮಾಯೆ ಸುಳ್ಳೆಂದು ತಿರಸ್ಕರಿಸಿ ನುಡಿಯಬೇಡ. ಹೆಣ್ಣು ಸುಖದ ಸುಗ್ಗಿ. ಅಂಥ ಹೆಣ್ಣನ್ನು ತಿರಸ್ಕರಿಸಿ, ನುಡಿಯುವುದೆಂದರೆ ಹೆಗ್ಗಣ ಮಣ್ಣು ತೋಡಿದಂತೆ! ಇದರಿಂದ ನೀನು ಯಾವ ಸುಖವನ್ನು ಹೊಂದುವಿ? ಜಾಣೆಯನ್ನು ಮದುವೆಯಾಗಿ ಬೆಚ್ಚಗೆ ಮಲಗುವದನ್ನು ಬಿಟ್ಟು, ಶ್ವಾನನಂತೆ ಬೂದಿಯನ್ನು ಬಳಿದುಕೊಂಡು ಓಣಿಯಲ್ಲಿ ಹೊರಳಾಡುವದು ಅದಾವ ಚೆಂದ! ಛೀ ನೀನೆಲ್ಲಿ ಇಟ್ಟಿರುವೆ ಬುದ್ಧಿ? ಬಾ ಮುಗುಳು ನಗೆ ಬೀರುತ್ತ ಮುಂದೆ ಬಾ; ಕೈಯಲ್ಲಿ ಕೈಹಿಡಿದುಕೊಂಡು ರಾಜಮಂದಿರಕ್ಕೆ ಹೋಗೋಣ, ಬಾ.

ಅ.– ಛೀ ಅಗ್ಗದ ಹೆಂಗಸೇ, ದೂರ ಸರಿದುನಿಲ್ಲು ; ಈಗ ಇನ್ನೊಮ್ಮೆ ಸ್ಪಷ್ಟ

ಹೇಳು; "ಮಾಯೆ ಸುಳ್ಳಲ್ಲವೆ?"

ಮಾ.–ಸುಳ್ಳಲ್ಲ, ಸತ್ಯ! ಸುಳ್ಳಾಗಿದ್ದರೆ ತೋರಿಕೆ ಎಲ್ಲಿ ಇರುತ್ತಿತ್ತು?

ಅ.– ನೀನು ಸತ್ಯವಂತಳಾದರೆ, ತೋರಿ ಅಡಗುವಿಯೇಕೆ? ಕಡು ದುರಾತ್ಮಳೇ, ನಿನ್ನ ಬಂಗಾಲಿ ಆಟದ ರಚನೆಗೆ ಮರುಳಾಗತಕ್ಕವನು ನಾನಲ್ಲ. ನೀನು ಕೆಲಕಾಲ ಸತ್ಯದಂತೆ ತೋರಿದರೂ ಕೊನೆಗೆ ಸುಳ್ಳೇ ಆಗುವಿ. ನೀನೊಂದು ಬರೀ ಭ್ರಮೆ! ಮೋಡಿಕಾರ ಆಟದಲ್ಲಿ ಅಸಂಖ್ಯ ನಗನಾಣ್ಯ ತೋರುವದಿಲ್ಲವೆ?

ಮಾ.– ಹೌದು, ತೋರುವವು.

ಅ.– ಅವುಗಳನ್ನು ಕಂಡಾಕ್ಷಣವೇ ಜನರು ಅವನ್ನು ತೆಗೆದುಕೊಳ್ಳಲು ಏಕೆ ಹಾತೊರೆಯುವುದಿಲ್ಲ.

ಮಾ.– ಅವು ಕಣ್ಣಿಗೆ ನಿಜ ನಾಣ್ಯದಂತೆ ತೋರಿದರೂ ಅವು ನಿಜ್ಜಯವಾಗಿ ಮೋಸದ ನಾಣ್ಯಗಳು. ಆದ್ದರಿಂದಲೇ ಅವಕ್ಕೆ ಜನರು ಆಸೆ ಪಡುವದಿಲ್ಲ.

ಅ.– ಮಾಯೆಯೂ ಅದರಂತೆಯೇ ಇದೆ. ಹೇಳುತ್ತೇನೆ ಕೇಳು :

ಮಾ.– ಅದೇನಿರುವದು ಹೇಳು :

ಅ.– ತಾಳ : ಕೇರವಾ ; ರಾಗ : ಭೈರವಿ

ಗಾರುಡಿ ಆಟ ತೋರುವಂಥ ಸರ್ವನೋಟ
ತೋರುವಂಥ ಸರ್ವನೋಟ (ದುಗುಣ)
ಪ್ರಪಂಚ ಮಾಯೆ, ಇದು ಒಣ ಛಾಯೆ
ಸುದತಿ ಮಣಿಯೆ । ತೋರುವಂಥ ಸರ್ವನೋಟ ॥ ೧ ॥

ಏರು : ಮಾಯೆಯ ಲೀಲಾ, ಮಹೇಂದ್ರ ಜಾಲಾ
ಸುದತಿ ರನ್ನೆಯೆ । ತೋರುವಂಥ ಸರ್ವನೋಟ ॥ ೨ ॥

ಮಾಯೆಯ ಪೇಟೆ. ಈ ಜಗಸೃಷ್ಟಿ
ಸುದತಿ ಮಣಿಯೆ । ತೋರುವಂಥ ಸರ್ವನೋಟ ॥ ೩ ॥

ಎಲೆ ಮಾಯೆ, ಮೋಡಿಕಾರ ಆಟದಲ್ಲಿ ತೋರುವ ಸುಳ್ಳು ನಾಣ್ಯದಂತೆ ಹೆಣ್ಣು–ಹೊನ್ನು–ಮಣ್ಣುಗಳಿಂದ ಕೂಡಿಕೊಂಡ ಈ ಮಾಯಾಪ್ರಪಂಚವು ಕೆಲಕಾಲ ನಿಜವೆಂದು ತೋರಿಬಂದರೂ ಕೊನೆಗೆ, ಏನೂ ಉಳಿಯದಂತೆ ಮಾಯವಾಗುತ್ತದೆ. ಮಾಯವಾಗುವದೇ ಮಾಯೆಯಸ್ವಭಾವ! ಈ ಸಂಸಾರವೊಂದು ಮಾಯೆಯ ಸಂತೆ ! ಅಲ್ಲಿ ಹೆಂಡಿರು–ಮಕ್ಕಳು, ಧನ–

ಧಾನ್ಯ-ಮುಂತಾದ ಸಕಲ ಸಾಮಾನುಗಳು ಕಣ್ಣಿಗೆ ಬಲು ಚೆಂದವಾಗಿ ಕಂಡರೂ ಕಟ್ಟಕಡೆಯಲ್ಲಿ ಕೈಬಿಟ್ಟು ಮಾಯವಾಗುವವು. ಈ ಸಂಸಾರವೆಂಬ ಮಾಯದ ಸಂತೆಯಲ್ಲಿ ತೋರುವ ಸುಳ್ಳು ರಚನೆಗೆ ಹುಚ್ಚರು ಮಾತ್ರ ಮನಸೋಲುವರು. ಬಲ್ಲವರು ಈ ಬಂಗಾಲೀ ಆಟದ ರಂಜನೆಗೆ ಎಂದೂ ಮರುಳಾಗುವದಿಲ್ಲ. ಭಕ್ತಿಯಿಂದ ಅಪ್ಪಿಕೊಂಡರೆ ಅಖಂಡ ಸುಖವನ್ನು ಕೊಡುವಂಥ ಶಿವಲಿಂಗವನ್ನು ಬಿಟ್ಟು, ನಿನ್ನ ಹೇಸಿ ಅಂಗವನ್ನು ಅಪ್ಪಿಕೊಂಡರೆ ಆಗುವ ಲಾಭವೇನು? ಕ್ಷಣಿಕ ಸುಖ ಮಹಾಸುಖವೆನಿಸಲಾರದು. ಅಜ್ಞಾನಿಗಳಿಗೆ ಮೊದಲು ಸುಖವೆನಿಸಿದರೂ ಕೊನೆಗೆ ಅದು ದುಃಖದಾಯಕವಾಗಿಯೇ ಪರಿಣಮಿಸುವದು. ಒಂದುಗಳಿಗೆಯ ಸುಖಕ್ಕಾಗಿ ಮಳಿಗೆಯನ್ನು ಸುಟ್ಟಂತೆ ಈ ಸಂಸಾರ ಸುಖ! ಇಂಥ ಸುಖವನ್ನು ನೆಚ್ಚಿ, ಮುಕ್ತಿ ಸಾಮ್ರಾಜ್ಯದ ಅಖಂಡ ಸುಖವನ್ನು ಬಿಡುವದು ಒಳ್ಳೆಯದಲ್ಲ. ಸಂಸಾರವೊಂದು ಪಾಪದ ಕೂಪ! ಅದರಲ್ಲಿ ಬೀಳುವದು ಚಂದವಲ್ಲ.

ಮಾ.–ಅಲ್ಲಮಾ, ಯಾವುದರಲ್ಲಿ ಬೀಳುವದು ಚಂದವಲ್ಲ?

ಅ.– ಪಾಪಕೂಪದಲ್ಲಿ ಬೀಳುವದು ಚಂದವಲ್ಲ.

ಮಾ.–ಎಂಥಾ ವಿಚಿತ್ರ ಮಾತಿದು! ಪ್ರಪಂಚ ಮಾಡದವರಿಗೆ ಪಾಪ ಬರುವದೆಂದು ಸಿದ್ಧಾಂತವಿರುವಾಗ, ಪ್ರಪಂಚ ಮಾಡಿದರೆ ಪಾಪ ಬರುತ್ತದೆಂದು ಹೇಳುವಿಯಲ್ಲ? ಈ ನಿನ್ನ ಹುಚ್ಚು ಮಾತಿಗೆ ಹುಚ್ಚರು ಸಹ ನಗಲಿಕ್ಕಿಲ್ಲವೆ?

ಅ.– ಎಂಥ ವಿಲಕ್ಷಣದ ಮಾತಿದು? ಪ್ರಪಂಚ ಮಾಡದವರಿಗೆ ಪಾಪ ಬರುವುದುಂಟೆ?

ಮಾ.–ಬರುವದುಂಟು. ಆದ್ದರಿಂದಲೇ ನಾನು ಹಾಗೆ ಹೇಳುವದು.

ಅ.– ಹೇಗೆ ಬರುವದು?

ಮಾ.–ಚೆನ್ನಿಗರಾಯಾ, ಹೇಳುತ್ತೇನೆ ಚಿತ್ತವಿಟ್ಟು ಕೇಳು: ಪರಮಾತ್ಮನು ಪ್ರಾಣಿಗಳಿಗೆ ಇಂದ್ರಿಯಗಳನ್ನು ಕೊಟ್ಟಿರುವದು ಸುಖವನ್ನು ಪಡೆಯುವದಕ್ಕಾಗಿ. ಅವುಗಳ ಉಪಯೋಗ ಮಾಡಿಕೊಳ್ಳದಿದ್ದರೆ ದೇವರ ಕಟ್ಟಳೆಯನ್ನು ಮುರಿದಂತಾಗುವದಿಲ್ಲವೆ? ದೇವರ ಇಚ್ಛೆಯ ವಿರುದ್ಧ ವರ್ತಿಸುವದು ಪಾಪಕಾರ್ಯವಲ್ಲವೆ? ಏಕೆ, ಸುಮ್ಮನೆ ನಿಂತೆ ದೆವ್ವ ಬಡಿದಂತೆ!

ಅ.– ಎಲೆ ತುಚ್ಛ ಮಾಯೆ, ಇಚ್ಛೆಗೆ ಬಂದಂತೆ ಮಾತಾಡಬೇಡ. ಇಂದ್ರಿಯಗಳೆಂದರೆ ಯಾವವು?

ಮಾ.–ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ–ಇವು ಐದು ಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಪಾಯು, ಉಪಸ್ಥಾ–ಇವು ಐದು ಕರ್ಮೇಂದ್ರಿಯಗಳು, ಒಟ್ಟಿನಲ್ಲಿ ಇಂದ್ರಿಯಗಳು ಹತ್ತಾಗಿರುತ್ತವೆ.

ಅ.– ಇವುಗಳನ್ನು ಯಾವ ಕಾರ್ಯಕ್ಕಾಗಿ ಉಪಯೋಗಿಸಿಕೊಂಡು ಸುಖಪಡೆಯಲೆಂದು ಸ್ವಾಮಿ ಕೊಟ್ಟಿರುವನು.?

ಮಾ.–ಹೇಳುತ್ತೇನೆ ಕೇಳು.

ಅ.– ಅದೇನಿರುವದು ಹೇಳು.

ಮಾ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಬಿಡು ಬಿಡು ನಿನ್ನ । ನ್ಯಾಯಾ, ಹೇ ಪ್ರಿಯಾ
ಅಪ್ಪಿಕೊಂಡು ಮುದ್ದಾಡೆನ್ನ ವರಕಾಯಾ । ಬಿಡು..... ॥ ಪಲ್ಲ ॥

ಏರು : ಪಾಲಿಸಿರುವನೊ ಪಾರ್ವತಿ ವರನುs
ಹತ್ತು ಇಂದ್ರಿಯಗಳನು ನವಸುಧೆಯ
ಇಂದ್ರಿಯ ಮುಖದಿ, ಸಂಸಾರ ಸುಖದಿ
ಅನುಭವಿಸಲೆಂದು, ಆ ಹರನು । ಬಿಡು .... ॥ ೧ ॥

ನೋಡಲು ನಯನಾ, ಆಡಲು ರಸನಾ
ಕೂಡಿ ಸುಖಿಸಲು ಗುಹ್ಯವನಾ
ಸತ್ಸುಖ ಭೋಗಿಸುತ ಸುಖಿಯಾಗಿ
ಸಂಸಾರ ಸಾಗಿಸಲೆಂದು, ತಾ ದಯದಿ । ಬಿಡು.... ॥ ೨ ॥

ಸುಂದರಾಂಗಾ, ಕಣ್ಣು ಕಿವಿ ಮೊದಲಾದ ಈ ಹತ್ತು ಇಂದ್ರಿಯಗಳನ್ನು ದೇವರು ಯಾವ ಉಪಯೋಗಕ್ಕೆ ಕೊಟ್ಟಿರುವನೆಂದರೆ ಸ್ಪಷ್ಟವಾಗಿ ಹೇಳುತ್ತೇನೆ ಕೇಳು : ಕೈಗಳನ್ನು ದುಡಿಯಲಿಕ್ಕೆ, ಕಾಲುಗಳನ್ನು ನಡೆಯಲಿಕ್ಕೆ, ಕಿವಿಗಳನ್ನು ಕೇಳಲಿಕ್ಕೆ, ನಾಲಿಗೆಯನ್ನು ರುಚಿ ನೋಡಲಿಕ್ಕೆ, ಪಾಯುವನ್ನು ಮಲವನ್ನು ಹೊರಹಾಕಲಿಕ್ಕೆ, ಉಪಸ್ಥಾವನ್ನು ಮೂತ್ರ ವಿಸರ್ಜನೆ ಮತ್ತು ಸೃಷ್ಟಿ ನಿರ್ಮಾಣಕ್ಕೆಂದು–ಈ ಇಂದ್ರಿಯಗಳನ್ನು ದೇವರು ಕೊಟ್ಟಿರುವನು. ದೇವರು ಕೊಟ್ಟದ್ದನ್ನು ಮಾನವರು ಉಪಯೋಗಿಸದಿದ್ದರೆ ಅದು ಕೊಟ್ಟ ದೇವನಿಗೇ ಅಪಮಾನವಲ್ಲವೆ? ದೇವರ ಅಪ್ಪಣೆಯನ್ನು ಮೀರಿದವರು ಪಾಪಕ್ಕೆ ಗುರಿಯಾಗುವದಿಲ್ಲವೆ?

ಅ.– ಛೀ ಮೂರ್ಖಳೆ, ಬಾಯಿ ಇರುವದೆಂದು ಬಲ್ಲವರಂತೆ ಮಾತನಾಡಿದರೆ

ತೀರಿತೇನು? ಪರಮಾತ್ಮನು ನೋಡಲಿಕ್ಕೆ ಕಣ್ಣು, ಕೇಳಲಿಕ್ಕೆ ಕಿವಿ, ಆಡಲಿಕ್ಕೆ ನಾಲಿಗೆ, ನಡೆಯಲಿಕ್ಕೆ ಕಾಲು, ದುಡಿಯಲಿಕ್ಕೆ ಕೈ, ಈ ರೀತಿ ಕೊಟ್ಟಿರುವನೆಂದು ಹೇಳಿದೆಯಲ್ಲ! ಇದೇನು ಸುಳ್ಳಲ್ಲ, ಆದರೆ ಸೃಷ್ಟಿ ನಿರ್ಮಾಣಕ್ಕಾಗಿ ಇಂದ್ರಿಯ ಕೊಟ್ಟಿರುವನೆಂದು ಹೇಳಿದೆಯಲ್ಲ ಅದು ಮಾತ್ರ ಸುಳ್ಳು.

ಮಾ.–ಹಾಗಾದರೆ, ಅದನ್ನು ಯಾತಕ್ಕೆ ಕೊಟ್ಟಿರುವನು?

ಅ.– ಕೇವಲ ಮೂತ್ರ ವಿಸರ್ಜನೆಗೆ ಮಾತ್ರ ಕೊಟ್ಟಿರುವನು.

ಮಾ.–ನೀನು ಹೇಳುವದು ಶುದ್ಧುಸಳ್ಳು, ಸೃಷ್ಟಿ ನಿರ್ಮಾಣ ಕಾರ್ಯಕ್ಕಾಗಿ ಕೊಟ್ಟಿರುವದೇ ಸತ್ಯ.

ಅ.– ನಿನ್ನ ಹೇಳಿಕೆಯನ್ನು ಆಧಾರಕೊಟ್ಟು ಸಿದ್ಧಮಾಡಬಲ್ಲೆಯಾ?

ಮಾ.–ಸಿದ್ಧ ಮಾಡಿಕೊಟ್ಟರೆ ನನ್ನನ್ನು ಲಗ್ನವಾಗಬಲ್ಲೆಯಾ?

ಅ.– ನಿನ್ನ ಹೇಳಿಕೆಯನ್ನು ಆಧಾರ ಕೊಟ್ಟು ಸಿದ್ಧಮಾಡು ಮೊದಲು, ನಂತರ ಮುಂದಿನ ಮಾತು.

ಮಾ.–ಸಿದ್ಧಮಾಡಿಕೊಟ್ಟರೆ ನನ್ನನ್ನು ಲಗ್ನವಾಗಲು ನೀ ಸಿದ್ಧನಿರಬೇಕು.

ಅ.– ಮೊದಲು ಸಿದ್ಧಮಾಡಿ ತೋರಿಸು.

ಮಾ.–ಇದು ಸರ್ವಸಾಮಾನ್ಯ ವಿಷಯವಲ್ಲ; ಮಹತ್ವಪೂರ್ಣ ವಿಷಯವಾಗಿದೆ. ಅಲ್ಲಮಾ, ಇತ್ತ ಹೊರಳು; ಚಿತ್ತವಿಟ್ಟು ಕೇಳು : ಈ ಇಂದ್ರಿಯಗಳನ್ನು ಹೆಣ್ಣಿಗೂ ಗಂಡಿಗೂ ಒಂದೇ ತರಹ ಕೊಟ್ಟಿರುವನೋ ಅಥವಾ ಹೆಣ್ಣಿಗೊಂದು ತರಹ ಗಂಡಿಗೊಂದು ತರಹ, ಕೊಟ್ಟಿರುವನೋ?

ಅ.– ಇಬ್ಬರಿಗೂ ಒಂದೇ ತರಹ ಕೊಟ್ಟಿರುವನು.

ಮಾ.–ಅದೇ ನಿನ್ನ ತಪ್ಪು ತಿಳುವಳಿಕೆ. 'ಹತ್ತರಲ್ಲಿ ಒಂಭತ್ತು ಅಧಿಕ, ಒಂದು ಅಧಮ' ಎನ್ನಬಹುದೇ? ಹಾಗಿದ್ದಲ್ಲಿ ಮೂತ್ರದ್ವಾರ ಹೆಣ್ಣು ಗಂಡಿಗೆ ಬೇರೆ ಬೇರೆ ತರಹ ಇರಲು ಕಾರಣವೇನು? ಕೇವಲ ಮೂತ್ರವಿಸರ್ಜನೆಯೇ ಮುಖ್ಯವಾಗಿದ್ದರೆ ಉಳಿದ ಇಂದ್ರಯಗಳಂತೆ ಹೆಣ್ಣಿಗೂ ಗಂಡಿಗೂ ಹತ್ತನೆಯ ಇಂದ್ರಿಯ ಒಂದೇ ತೆರನಾಗಿ ಇರಬಹುದಾಗಿತ್ತಲ್ಲ? ಅದು ಹಾಗಿಲ್ಲ; ಅಲ್ಲಮಾ, ಈ ಜಗತ್ತಿನ ಜನರೆಲ್ಲ ಸಂಸಾರ ಹೂಡಿ ಮಕ್ಕಳನ್ನು ಪಡೆದು ಮುಕ್ತರಾಗಲೆಂದು ಬ್ರಹ್ಮನು ಹೆಣ್ಣು–ಗಂಡಿನ ಇಂದ್ರಿಯ ರಚನೆಯಲ್ಲಿ ವ್ಯತ್ಯಾಸ ಮಾಡಿದ್ದಾನೆ. ಹೆಣ್ಣಿನ ಸಂಸಾರವನ್ನು ಭೂಮಿಯ ರೂಪವಾಗಿಯೂ, ಗಂಡಿನ

ಸಂಸಾರವನ್ನು ಬೀಜದ ರೂಪವಾಗಿಯೂ ಹುಟ್ಟಿಸಿರುವನು. ಇದನ್ನೆಲ್ಲ ಸೋಸಿ ನೋಡದೆ, ಯೋಗಿಯ ವೇಷವನ್ನು ಹೊತ್ತು, ಗೂಗೆಯಂತೆ ಒಂಟಿಗನಾಗಿ ಏಕೆ ತಿರುಗುತ್ತಿರುವಿ? ಒಂದೇ ಮನಸ್ಸಿನಿಂದ ಬಂದು, ನನ್ನೊಡನೆ ಒಂದಾಗಿ ಚೆಂದಾಗಿ ಬಾಳು. ಸಂಸಾರದ ಸುಧೆಯುಂಡು ಆನಂದ ಸಾಗರದಲ್ಲಿ ಲೋಲಾಡು. ಆಗ ಗೊತ್ತಾಗುತ್ತದೆ ಸಂಸಾರದ ಸವಿಯೂಟ! ಬ್ರಹ್ಮ ಸುಖಕ್ಕಿಂತಲೂ ಈ ಲೌಕಿಕ ಸುಖವು ನಿನಗೆ ಅಧಿಕವೆನಿಸದಿದ್ದರೆ 'ಹುಚ್ಚ ಮುಂಡೆ' ಎಂದು ನನ್ನನ್ನು ಕರೆ. ನೋಡದೆ ಯಾವುದಕ್ಕೂ ಹೆಸರಿಡಬಾರದು. ಸುಂದರಾ, ಇದಕ್ಕೆ ಏನನ್ನುವಿ?

ಅ.– ಮಾಯೆ, ನೀನಿಂಥ ಹೊಯಮಾಲಿ ಇದ್ದುದರಿಂದಲೇ ಈ ಜಗತ್ತು ನಿನ್ನ ಕಣ್ಸನ್ನೆಯಲ್ಲಿಯೇ ಕುಣಿಯತೊಡಗಿದೆ. ಅಜ್ಞಾನಿಗೆ ಜ್ಞಾನ ಬಾರದು; ಹೇಳುತ್ತೇನೆ ಕೇಳು.

ಮಾ.–ಅದೇನಿರುವದು ಹೇಳು.

ಅ.– ಪದ : ತಾಳ : ಕೇರವಾ ; ರಾಗ : ಜಯಜಯವಂತಿ

ಬಿಡು ಬಲ್ಲೆ ನಿನ್ನ ಈ ಕವನಾ (ದುಗುಣ)
ಜ್ಞಾನಿಗಿಲ್ಲ ದೇಹದಭಿಮಾನಾ, ಮೂಢೇ ॥ ಪಲ್ಲ ॥

ಖಂಡಿಸದೆ ತ್ರಿಕರಣ, ಇಂದ್ರಿಯ ನಿಗ್ರಹ ಮಾಡದೆ
ಸಹಜ ಮುಕ್ತಿ ದೊರಕುವದೇ ಭಕ್ತಿಯ ರೀತಿ ॥ ೧ ॥

ಸಾಕು ದೇವ ಈ ಜನ್ಮವೆಂಬುದು, ಧರ್ಮ ಶರಣರ ನೇಮ
ತಿಳಿ ಮರ್ಮ ಅವರಿಗಿಲ್ಲೋ ಕಾಯದ ಹಮ್ಮು ॥ ೨ ॥

ಎಲೆ ಮಾಯೆ, ಅಜ್ಞಾನಿಗಳ ಕಣ್ಣಿಗೆ ನಿಜವೆಂದು ತೋರುವಂತೆ ಕವನಕಟ್ಟಿ ಬಣ್ಣಿಸುತ್ತಿರುವ ನೀನು ಲೋಕವನ್ನೆಲ್ಲ ಬಂಧಿಸಿಬಿಟ್ಟಿರುವಿ.

ಮಾ.–ಏನು? ನಾನು ಹೇಳುವದು ಕವನವೇ?

ಅ.– ಅಂತಿಂತಹ ಕವನವಲ್ಲ. ಕಾಳಿದಾಸನಂಥ ಮಹಾಕವಿಗೂ ಬಣ್ಣಿಸಲಿಕ್ಕೆ ಬಾರದಂತಹ ಕವನ ನಿನ್ನ ಕವನ! ಇಂದ್ರಿಯಗಳೆಂದರೇನು? ಅವುಗಳ ವ್ಯಾಪಾರ ಎಂತಹುದು? ಅವುಗಳನ್ನು ಯಾವ ಕಾರ್ಯಕ್ಕಾಗಿ ಹೇಗೆ ಬಳಸಬೇಕೆಂಬುದೇ ಮುಖ್ಯ ವಿಚಾರ. ನಾನು ಇಂದ್ರಿಯಗಳನ್ನು ಖಂಡಿಸಿ ಮಾತನಾಡುವದಿಲ್ಲ. ಅವುಗಳ ವ್ಯಾಪಾರವನ್ನು ಖಂಡಿಸಿ ಹೇಳುತ್ತಿದ್ದೇನೆ. ಇಂದ್ರಿಯ ವ್ಯಾಪಾರ ಬಹಿರಂಗದ ವಾಸನೆಯ ಕಡೆಗೆ ಹರಿಯದೆ, ಅಂತರಂಗದ

ಲಿಂಗತೃಪ್ತಿಗಾಗಿ ಉಪಯೋಗವಾಗಬೇಕೆಂದು ಹೇಳುತ್ತಿದ್ದೇನೆ. ದಶೇಂದ್ರಿಯ ವ್ಯಾಪಾರವನ್ನೆಲ್ಲ ಲಿಂಗ ಪೂಜೆಗಾಗಿ ಉಪಯೋಗಿಸುತ್ತ, ಇಂದ್ರಿಯಗಳನ್ನು ಅರಿವು ಎಂಬ ಹುರಿಯಾದ ಹಗ್ಗದಿಂದ ಕಟ್ಟದೆ ಹೋದರೆ ಮುಕ್ತಿ ಹೇಗೆ ದೊರೆಯಬಲ್ಲದು ಮಾಯೆ?

ಮಾ.–ಅಲ್ಲಮಾ, ನಿಲ್ಲು ನಿಲ್ಲು ; 'ಮುಕ್ತಿ ಮುಕ್ತಿ' ಎಂದು ನೀನು ಬಡಬಡಿಸಹತ್ತಿ ಬಹಳ ಹೊತ್ತಾಯಿತು. ಮುಕ್ತಿಯೆಂಬ ಶಬ್ದದ ಅರ್ಥವೇನು?

ಅ.– ನಾರಿ, ಮುಕ್ತಿ ಎಂದರೆ ಬಿಡುಗಡೆ.

ಮಾ.–ಯಾತರಿಂದ ಬಿಡುಗಡೆಯಾಗಬೇಕು?

ಅ.– ಈ ಶರೀರ ಬಂಧನದಿಂದ ಬಿಡುಗಡೆಯಾಗಬೇಕು.

ಮಾ.–ಪ್ರಾಣಪಕ್ಷಿ ಹಾರಿದೊಡನೆ, ಆತ್ಮನನ್ನು ಬಂಧಿಸಿದ ಈ ಶರೀರ ತಾನೇ ಬಿಡುವದಲ್ಲ?

ಅ.– ಛೇ, ಎಲ್ಲಿ ಬಿಡುವದು? ಅದು ಮತ್ತೊಂದು ಶರೀರವನ್ನು ತೊಟ್ಟು ಹುಟ್ಟಿ ಬರುವದು. ಹೀಗೆ ಹುಟ್ಟಿಗೊಮ್ಮೆ ಹೊಸ ಶರೀರವನ್ನು ತೊಟ್ಟು, ಅದೆಷ್ಟು ದೇಹಗಳನ್ನು ಧರಿಸಿ ಬಂದಿರುವದೋ ಎಣಿಸಿ ಹೇಳುವವರಾರು? ಆತ್ಮನಿಗೆ ಶರೀರದಿಂದ ಬಿಡುಗಡೆಯೆಂಬುದು ಇಲ್ಲವೇ ಇಲ್ಲ. ಹುಟ್ಟು ಸಾವುಗಳಿಲ್ಲದ ಸ್ಥಿತಿಗೆ ಮೋಕ್ಷವೆನ್ನುವರು. ಅಂದೇ ಆತ್ಮಕ್ಕೆ ಈ ಶರೀರದಿಂದ ಬಿಡುಗಡೆ!

ಮಾ.–ಚೆನ್ನದಂತಹ ಈ ಶರೀರವನ್ನು ಆತ್ಮನು ಏಕೆ ಬಿಟ್ಟು ಕೊಡಬೇಕು?

ಅ.– ಈ ಶರೀರವೆಂಬುದು ಆತ್ಮನನ್ನು ಬಂಧಿಸಿಟ್ಟ ಸೆರೆಮನೆಯಾಗಿದೆ.

ಮಾ.–ಅಲ್ಲಮಾ, ಹಾಗೆನ್ನಬೇಡ, ಮುತ್ತಿನಂತಹ ಶರೀರಕ್ಕೆ ಸೆರೆಮನೆ ಅನ್ನಬೇಡ. ಇದು ಆತ್ಮನಿಗೆ ಅನಂತ ಸುಖವನ್ನು ನೀಡುವ ಅರಮನೆ! ಸುಖಸದನವೆನಿಸಿದ ಈ ಶರೀರವನ್ನು ಬಿಡಬೇಕೆನ್ನುವವರು ಮರುಳರೇ ಸರಿ.

ಅ.– ಮರುಳ ಮಾಯೆ, ಇದು ನಿಶ್ಚಯವಾಗಿ ಅರಮನೆಯಲ್ಲ, ಸೆರೆಮನೆ!

ಮಾ.–ನೀನು ಶರೀರಕ್ಕೆ ಸೆರೆಮನೆಯೆಂದು ಕರೆದರೆ ಈ ಸೆರೆಮನೆಯಲ್ಲಿ ದುರ್ಗುಣಗಳು ಇರಬೇಕಾಯಿತಲ್ಲ?

ಅ.–ಇವೆ; ಶರೀರ ದುಗುರ್ಣಗಳ ಆಗರವಾಗಿದೆ. ಆ ದುರ್ಗುಣಗಳ ಮಧ್ಯದಲ್ಲಿ ಇರುವ ಆತ್ಮನಿಗೆ ಬರುವ ಕಷ್ಟನಷ್ಟಗಳನ್ನು ನೆನೆದರೆ ಮೈಗೆ ಮುಳ್ಳು ಬರುತ್ತದೆ. ಮಾಯೆ, ಹೇಳುತ್ತೇನೆ ಚಿತ್ತಗೊಟ್ಟು ಕೇಳು.

ಹೀಗೆ ಅಂತರಾತ್ಮನಿಗೆ ನಿರಂತರ ಕಷ್ಟಕೊಡುವ ಈ ಶರೀರವು ನಿಜವಾದ ಸರೆಮನೆಯಲ್ಲದೆ ಮತ್ತೇನು? ಒಂದು ಸೆರೆಮನೆಯಿಂದ ಇನ್ನೊಂದು ಸೆರೆಮನೆಗೆ ಕೈದಿಯನ್ನು ಒಯ್ಯುವಾಗ ಆ ಕೈದಿಗೆ ಅಲ್ಪಬಿಡುಗಡೆಯೇ ಮಹಾ ದುಃಖವಾಗಿ ಪರಿಣಮಿಸುವಂತೆ ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೊರಟಿರುವ ಆತ್ಮನಿಗೆ ಅತ್ಯಂತ ದುಃಖವಾಗದಿರ ಗು, ಇಂತಹ ಶರೀರಬಂಧನದಿಂದ ಚಿರಂತನ ಬಿಡುಗಡೆ ಹೊಂದಬೇಕೆಂಬುದೇ ಶಿವಶರಣರ ಧರ್ಮ.

ಮಾ.– ಬಿಡು ಬಿಡು ಅಲ್ಲಮಾ, ಇವೆಲ್ಲ ಅಜ್ಜಿಯ ಕಥೆಗಳು. ಗೊತ್ತುಗೇಡಿಗಳು ಬರೆದ ಹೊತ್ತಿಗೆಗಳನ್ನು ನನ್ನ ಮುಂದೆ ಬಿತ್ತರಿಸಬೇಡ. ಸುಖದ ಜನ್ಮವನ್ನು ಕಷ್ಟದ ಹೊರೆಯೆಂದು ಕಲ್ಪಿಸಿಕೊಂಡು, ಕಾಲಿಗೆ ಸುತ್ತಿರುವ ಸಂಜೀವಿನೀ ಲತೆಯನ್ನು ಕಿತ್ತೊಗೆದು ನಸುಗುನ್ನಿ ಗಿಡಕ್ಕೆ ತೆಕ್ಕೆ ಹಾಕಬೇಕೆಂದು ಬೋಧಿಸುವ ನಿನ್ನಂಥ ತೊನಸಿಬಡಕನ ಕೂಡ ಮಾತಾಡುವದೇ ಕಷ್ಟ.

ಅ.– ಏನು, ಕಷ್ಟಮೂಲವಾದ ಈ ಶರೀರವನ್ನು ನೀನು ಸುಖದ ಸೆಲೆಯೆಂದು ಹೇಳುವಿಯಾ? ನಿನ್ನಂಥ ಬಲಭದ್ರಿಯನ್ನು ಕಾಣುವದು ಅಪರೂಪ.

ಮಾ.–ನಿನ್ನಂಥ ಬಲಭದ್ರನನ್ನು ಕಾಣುವದೂ ಅಪರೂಪ.

ಅ.– ನಾನು ಹೇಗೆ ಬಲಭದ್ರನು?

ಮಾ.–ನಾನು ಹೇಗೆ ಬಲಭದ್ರಿಯು?

ಅ.– ಈ ಶರೀರವು ಕಷ್ಟದ ಸೆರೆಮನೆಯೆಂದು ನಾನು ಹೇಳಿದರೆ, ನೀನು ಸುಖದ ಅರಮನೆಯೆಂದು ಬಣ್ಣಿಸುತ್ತಿರುವಿ. ಅಂದ ಮೇಲೆ ನೀನು ಬಲಭದ್ರಿಯಲ್ಲವೆ?

ಮಾ.–ಮರುಳು ಅಲ್ಲಮಾ, ನಾನು ಬಣ್ಣಿಸುವುದು ಬಲಭದ್ರಿತನವೆ? ಆತ್ಮನು ಪರಿಪರಿಯಿಂದ ಭೋಗಿಸುವ ಸುಖದ ಸುಗ್ಗಿಯನ್ನು ನೋಡಬೇಕೆಂದರೆ ಈ ಶರೀರವನ್ನು ಅವಲೋಕಿಸಬೇಕು. ಈ ಶರೀರದಂಥ ಸುಖದ ಅರಮನೆ ಈ ಸತ್ವವುಳ್ಳ ಲೋಕದಲ್ಲಿದೆಯೇ ಹೊರತು ಮತ್ತೆಲ್ಲಿಯೂ ಇಲ್ಲ. ತಾಯಿಯ ಹೊಟ್ಟೆಯಲ್ಲಿ ಮೂಡುವದೊಂದೇ ತಡ; ಸುಖದ ಮಳೆ ಸುರಿಯಲು ಆರಂಭವಾಗುವದು.

ಅ.– ಅದು ಹೇಗೆ? ಆಧಾರ ಕೊಟ್ಟು ಹೇಳು :

ಮಾ.–ಕೇಳುವಂಥವನಾಗು :

ಮಾ.–ಅದೇನಿರುವದು ಹೇಳು.

ಅ.– ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಶರೀರ ಎಂಬುವದಿದು ಸೆರೆಮನೆಯು
ಆತ್ಮ ಕೈದಿ ಇರುವನು ಅದರೊಳು ಧನಿಯು ॥ ಪಲ್ಲ ॥

ಏರು : ದುಃಖದ ನೆಲೆಯು ದುರ್ಗಂಧ ಹೊಲೆಯು
ತುಂಬಿದ ದೇಹದಲಿ ಕೊಳೆಯು–
ತ್ತಿರುವಂಥ ಕೂಸ, ಬಳಲುವ ನಾಶ
ಬಲ್ಲನು ಶಿವಶಿವಾ ಸರ್ವೇಶಾ ॥ ೧ ॥

ತನ್ನ ಮಲಮೂತ್ರದಿ ಹೊರಳುತ
ಪರತಂತ್ರ ಸ್ಥಿತಿಯಲಿ ಒರಲುತ
ಬಾಲ್ಯವ ನೀಗಿ ಬಳಲುವ ಭೋಗಿ
ಆರುಗುಣಕೆ ಪ್ರಾಯವಶನಾಗಿ ॥ ೨ ॥

ರೋಗದ ಮೂಲಾ, ಮುಪ್ಪಿನ ಕಾಲಾ
ಸಾಯುವದಂತೂ ಸಂಕಟ ಮೂಲಾ
ಸಂಕಟಜಾಲಾ ನರಜನ್ಮಕೆಲ್ಲಾ
ಸರ್ವೇಶ ಬಲ್ಲಾ ಸಂಸ್ಕೃತಿ ಲೀಲಾ ॥ ೩ ॥

ಎಲೆ ಮಾಯೆ, ಶರೀರವೆಂಬುವ ಸೆರೆಮನೆಯಲ್ಲಿ ಆತ್ಮನು ಅನುಭವಿಸುತ್ತಿರುವ ಕಷ್ಟಗಳನ್ನು ಹೇಳುತ್ತೇನೆ ಕೇಳು: ಆತ್ಮನ ತಾಯಿಯ ಗರ್ಭದಲ್ಲಿ ಒಂಬತ್ತು ತಿಂಗಳವರೆಗೆ ಮಲಮೂತ್ರದ ಸುಳಿಯಲ್ಲಿ ಸಿಕ್ಕು ಘಾಸಿವೀಸಿಯಾಗಿ ಬಳಲುವದು ಮೊದಲನೆಯ ಕಷ್ಟ. ನಂತರ ತಾಯಿಯ ಹೊಟ್ಟೆಯಿಂದ 'ಅಯ್ಯೋ' ಎಂದು ಕಿರಿಚುತ್ತ ಭೂಮಿಗೆ ಬೀಳುವದು ಹೆಚ್ಚಿನ ಕಷ್ಟ. ಬಾಲ್ಯಾವಸ್ಥೆಯಲ್ಲಿ ತನ್ನ ಮಲಮೂತ್ರದಲ್ಲಿ ತಾನೇ ಉರುಳಾಡುವದು ಕಣ್ಣಿನಿಂದೆ ನೋಡಲಾಗದ ಕಷ್ಟ. ಪ್ರಾಯಕ್ಕೆ ಬಂದಮೇಲೆ ಈ ಮಾಯಾಪ್ರಪಂಚಕ್ಕೆ ಮರುಳಾಗಿ ಕಾದು ಕ್ರೋಧಾದಿಗಳ ಸೆಳವಿಗೆ ಸಿಕ್ಕು ತೊಳಲಾಡುವದು ಬಲು ಕಷ್ಟ. ಮುಂದೆ ಮುಪ್ಪಿನಕಾಲದಲ್ಲಿ ನಾನಾರೋಗಗಳಿಗೆ ತುತ್ತಾಗಿ ನೆರಳುವದು ಕಾಣಬಾರದ ಕಷ್ಟ. ಅವಸಾನ ಕಾಲದಲ್ಲಿ ಇದ್ದುದನ್ನೆಲ್ಲ ಬಿಟ್ಟು ಅಗಲಿ ಹೋಗುವದು ಬಂತೆಂದು ಕೊರಗುವದು ಕರಕಷ್ಟ. ಸತ್ತಮೇಲೆ ಯಮಲೋಕದಲ್ಲಿ ಶಿಕ್ಷೆಗೆ ಗುರಿಯಾಗಿ ಗೋಳಾಡುವದು ಘೋರಕರ ಕಷ್ಟ.

ಮೇಲೆ ಕೇಳುವುದೇನು? ಚೆನ್ನೆಯರ ಕೂಡ ಚೆನ್ನಾಟ ! ಆಮೇಲೆ ಮಕ್ಕಳೊಡನೆ ಮುದ್ದಾಟ!! ಅಲ್ಲಮಾ, ಏನು ಹೇಳಲಿ? ಈ ಸುಖದ ಸುಗ್ಗಿಯನ್ನು ಸವಿಗಾರನೇ ಬಲ್ಲ. ಮುಂದೆ ಮುಪ್ಪಿನಲ್ಲಿ, ಹಿರಿಯರಿಗೆ ಹಿರಿಯನೆಂದು ಸರ್ವರಿಂದಲೂ ಸನ್ಮಾನ!

ಅ.– ಏಕೆ ಅಲ್ಲಿಗೆ ನಿಂತೆ? ಮುಂದೆ ಸಾಯುವ ಆಟದ ಸುಖವನ್ನು ಹೇಳಲಿಲ್ಲವೇಕೆ?

ಮಾ.–ಏಕೆ ಅದರಲ್ಲಿ ಸುಖವಿಲ್ಲವೆಂದು ಹೇಳುತ್ತೀಯಾ? ಮರಣವೇ ಮಹಾನವಮಿ! ತೊಟ್ಟಿರುವ ಅಂಗಿಯನ್ನು ಹಳೆಯದಾದ ಕೂಡಲೆ ಆಕಡೆಗೆ ಬೀಸಾಡಿ ಮತ್ತೊಂದನ್ನು ತೊಟ್ಟು ನೀಟಾಗಿ ನಿಲ್ಲುವಂತೆ, ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಧರಿಸುವದು ಹೆಚ್ಚಿನ ಸುಖವಲ್ಲವೆ?

ಅ.– ಭಪ್ಪರೆ ಹೆಣ್ಣೆ, ನಿನ್ನ ಬಾಯಿಬಡಕ ಮಾತಿಗೆ ಬೆಲೆಯೇ ಇಲ್ಲ. ಇರಲಿ : ಸತ್ತ ಮೇಲೆ ಯಮದೂತರಿಂದ ಆಗುವ ಕಷ್ಟವನ್ನು ಹೇಳದೆ ಬಿಟ್ಟಿಯಲ್ಲ?

ಮಾ.–ಅಲ್ಲಮಾ ಅದನ್ನೂ ಹೇಳುತ್ತೇನೆ ಕೇಳು : ತಮ್ಮ ಹೆಂಡಿರ ಕೂಡ ತಾವು ಬಾಳ್ವೆ ಮಾಡಿದರೆ ತಮ್ಮ ಮಕ್ಕಳನ್ನು ತಾವು ಮುದ್ದಾಡಿದರೆ ಯಮನ ಅಪ್ಪನದೇನು ಖರ್ಚಾಗುವದು? ಯಮದೂತರಿಗೆ ಸಿಟ್ಟು ಬರಲಿಕ್ಕೆ ಕಾರಣವೇನು? ಸ್ವತಃ ಅವರೇ ತಮ್ಮ ಹೆಂಡಿರ ಕೂಡ ಬಾಳ್ವೆ ಮಾಡುವದಿಲ್ಲವೆ? ಪ್ರಾಪಂಚಿಕರ ನೋವು ಪ್ರಾಪಂಚಿಕರಿಗೆ ತಿಳಿಯದೇ ಅಲ್ಲಮಾ? ಸುಳ್ಳು ಭ್ರಮೆಯಿಂದ ಏಕೆ ವಾದಿಸುತ್ತಿ? ಮುಂದಿದ್ದ ಎಡೆಯನ್ನು ಒದ್ದು ನಡೆಯುವದು ಬುದ್ಧಿವಂತರ ನೀತಿಯಲ್ಲ. ಬಂಗಾರದಂಥ ಬಾಯಿ ತೆಗೆದು ಕೇಳಿಕೊಂಡರೆ ಒಲ್ಲೆನೆಂದು ಬಾಲ ತಿರುಗಿಸಿ ಓಡುವದು ಎಂತಹ ಹುಚ್ಚತನ! ನಡೆ, ನನ್ನೊಡನೆ ನಡೆ; ಕರೆಯ ಹಾವುಗಳು ಜೋರಿಟ್ಟು ಒಂದನ್ನೊಂದು ಸೆಳೆ ಸೆಳೆದು ತಳುಕುಬೀಳುವಂತೆ ಹಂಸ ತೂಲಿಕಾತಲ್ಪದ ಮೇಲೆ ನಾವಿಬ್ಬರೂ ಕಾಲ ಕಳೆಯೋಣ. ಆಗ ಆ ನಿನ್ನ ಮುಕ್ತಿಸುಖವೆಲ್ಲ ನಿನ್ನ ಕಣ್ಣಮುಂದೆ ಕುಣಿಯಹತ್ತುವದೋ ಇಲ್ಲವೋ ನೋಡುವಿಯಂತೆ! ಇದಕ್ಕೆ ತಡವೇಕೆ? ಬೇಗ ನಡೆ.

ಅ.– ಛೀ ನೀಚಳೆ. ಬಾಯಿ ಬಿಗಿಹಿಡಿದು ಮಾತಾಡು. ಬಾಯಿ ನಿನ್ನದೆಂದು ಬಲ್ಲವರ ಹಾಗೆ ಮಾತಾಡಿದರೆ ಮುಗಿಯಿತೇನು? ಭೀತಿಯಿಲ್ಲದ ಭೂತ ನೀನು! ಜಗದ ಜನರನ್ನು ನೀನು ಹೀಗೆಯೆ ಅಂಜಿಸಿ ವಂಚಿಸಿ ಬಿಗಿದು ಚೆಲ್ಲಿರುವಿ. ಮೋಹಪಾಶವೆಂಬ ಕಣ್ಣಿಯಿಂದ ಅವರನ್ನೆಲ್ಲ ಡಾವಣಿಗೆ ಕಟ್ಟಿಬಿಟ್ಟಿರುವಿ. ನಿನ್ನ ಕೈಯಲ್ಲಿ ಸಿಕ್ಕವರಿಗೆ ಸ್ವಾತಂತ್ರ್ಯವಿಲ್ಲ. ಪಾರತಂತ್ರವೇ

ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಈ ಶರೀರಾ, ಸುಖದ ಸಾರಾss
ಕೇಳೋ ಧೀರಾ, ಪೇಳುವೆ ವಿವರಾ ॥ ಪಲ್ಲ ॥

ತಾಯಿಯ ಉದರ, ಸೌಖ್ಯದ ಸದರ
ಮೂಡಿದ ಕೂಡಲೆ, ಎಲ್ಲರ ನೆದರಾ
ಬಾಲಾ, ಕಾಲಾ, ಲೀಲೆಯನಾಡುತ
ನಲಿಯುತಲಿ, ಬೆಳೆಯುತಲಿ, ಕಳೆಯುತಲಿ ॥ ೧ ॥

ಪ್ರಾಯದ ಕಾಲಾ, ಸೌಖ್ಯದ ಮೂಲಾ
ಸವಿಗಾರನೆ ಬಲ್ಲಾ, ಇದರದು ಕೀಲಾ
ಸುತರು ಹಿತರು, ಸತಿಯರು ಸಂಭ್ರಮ
ಮನವೂಲಿದು, ನಲಿನಲಿದು, ಸುಖಿಸುವರು ॥ ೨ ॥

ಮುಪ್ಪಿನ ಹಿರಿಯ, ಶಿವನಿಗೆ ಸರಿಯೊ
ಎಂದೆನುತೆಲ್ಲರು ಮಾಡುವ, ಮನ್ನಣೆಯ
ಪಡೆದು ಮಡಿದು, ಕಡುಸೌಖ್ಯದಿ ತಾ
ಶರೀರೆನಿಪಾ, ಅರಮನೆಯೊಳು ಸುಖಿಸುವರು ॥ ೩ ॥

ಅಲ್ಲಮಾ, ಆತ್ಮನು ಈ ಶರೀರವೆಂಬ ಅರಮನೆಯಲ್ಲಿ ಭೋಗಿಸುವ ಸುಖದ ಸುಗ್ಗಿಯನ್ನು ಹೇಳುತ್ತೇನೆ ಕೇಳು : ಆತ್ಮನು ತಾಯಿಯ ಹೊಟ್ಟೆಯಲ್ಲಿ ಮೂಡುವದೊಂದೇ ತಡ ; ಬಂಧು ಬಳಗದವರು ಮೃಷ್ಟಾನ್ನವನ್ನು ತಂದು ಉಣಿಸತೊಡಗುವರು. ಆಗಲೇ ಬಯಕೆಯ ಊಟಕ್ಕೆ ಆರಂಭವಾಗುವದು.

ಅ.– ವಾಹವ್ವಾ, ವೈಯಾರಿ. ಮುಂದೆ ಹೇಳು.

ಮಾ.– ತಾಯಿಯ ಗರ್ಭದಿಂದ ಹುಟ್ಟಿದ ಕೂಡಲೆ, ಎಣ್ಣೆ–ಬೆಣ್ಣೆ ಹಚ್ಚಿ ಎರೆದು ಅಮೃತಕ್ಕಿಂತಲೂ ಹೆಚ್ಚು ರುಚಿಕರವಾದ ಮೊಲೆ ಹಾಲನ್ನು ಕೊಟ್ಟು ಪೋಷಿಸುವರು. ಕೂಸು ಕುಲುಕುಲು ನಗುತ್ತ ಕುಣಿದಾಡುವಾಗ "ನನ್ನ ಕೈಯೊಳಗೆ ತಾ, ನನ್ನ ಕೈಯೊಳಗೆ ತಾ" ಎಂದು ಚಲುವೆಯರು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಬರಮಾಡಿಕೊಂಡು ಮುದ್ದಿಡುವರು. ಸುಖದ ಮೇಲೆ ಸುಖ! ಮುಂದೆ ಆ ಬಾಲಕನು ಶಾಲೆಗೆ ಹೋಗಿ, ಅಕ್ಕರೆಯಿಂದ ಅಭ್ಯಾಸ ಮಾಡಿ, ಓರಗೆಯ ಗೆಳೆಯರೊಡನೆ ಚೆಂಡು–ಚಿಣಿ–ಕೋಲು ಆಡುವಾಗಿನ ಸುಖವು ಸ್ವರ್ಗಕ್ಕಿಂತಲೂ ಮೇಲು. ಪ್ರಾಯಕ್ಕೆ ಬಂದ

ತುಟಿಯು ತುಂಗಾನದಿ, ಮೊಲೆಯು ಗಂಗಾನದಿ
ತುರುಬಿನಲ್ಲೆ ಇರುವದೊ ಕಾಳಿಂದಿ.
ಎನ್ನ ಹೊಂದುವದರಿಂದ ಸರ್ವ ಸಿದ್ಧಿ
ಪಡೆಯುವಿ ಸುಳ್ಳಲ್ಲೊ ಶಾಸ್ತ್ರ ಓದಿ
ಪಂಚ ತತ್ವದ ಗ್ರಂಥ, ಓದಿ ನೋಡಿಕೊ ಕಾಂತಾ
ಗುಣವಂತಾ ಯಾತಕೆ ಪಂಥಾ
ಹೆಣ್ಣಿನ ಗಾತ್ರವು, ಸೌಖ್ಯದ ಸೂತ್ರವು
ಯಾಕೆ ಪೊಂದಿ ನೀ ನಿಂತಿ, ಭಯಭ್ರಾಂತಿ
ಕರೆಯುವೆ ನಾ ಬಂದು, ದಿವ್ಯ ಕಾಂತಿ
ಪಡೆಯುವಿ ಸುಳ್ಳಲ್ಲೊ ಶಾಸ್ತ್ರ ಓದಿ.

ಪ್ರಭುದೇವಾ, ಹೆಣ್ಣಿನಲ್ಲಿರುವ ತೀರ್ಥಗಳನ್ನು ಎಣಿಸಿ ಹೇಳುತ್ತೇನೆ; ಲೆಕ್ಕ ಮಾಡಿ ನೋಡಿಕೊ. ಹೆಣ್ಣಿನ ತುರುಬಿನಲ್ಲಿರುವದೇ ಕಾಳಿಂದಿನದಿಯು; ತುಟಿಯಲ್ಲಿರುವದೇ ಗಂಡಕಾನದಿಯು, ಎರಡೂ ಮೊಲೆಗಳಲ್ಲಿರುವದೇ ತುಂಗಭದ್ರಾ ನದಿಯು. ಸವಿಮಾತೇ ಸರಸ್ವತೀ ನದಿಯು, ಮುಗುಳು ನಗೆಯೇ ಭಾಗೀರಥೀ ನದಿಯು, ಮನಸ್ಸಿನ ಗಾಂಭೀರ್ಯದಲ್ಲಿ ಇದ್ದವುಗಳೇ ಸಪ್ತ ಸಮುದ್ರಗಳು. ಈ ಪ್ರಕಾರ ಹೆಣ್ಣಿನ ಶರೀರವೆಲ್ಲ ಪುಣ್ಯತೀರ್ಥಗಳಿಂದ ತುಂಬಿ ತುಳುಕುವದೆಂದು ಪಂಚತತ್ವ ಗ್ರಂಥಗಳಲ್ಲಿ ಹೇಳಲಾಗಿದೆ. ಒಂದು ಹೆಣ್ಣಿನ ಸಹವಾಸ ಮಾಡಿದಾಗಲೇ ಸರ್ವತೀರ್ಥಗಳಲ್ಲಿ ಸ್ನಾನ ಮಾಡಿದ ಪುಣ್ಯ ಬರುವದೆಂದು ಹಿರಿಯರು ಹೇಳುತ್ತಾರೆ. ಹೀಗಿರಲು ನೀನು ಹೆಣ್ಣನ್ನು ಹೇಯಮಾಡಿ ಇನ್ನೆಲ್ಲಿ ತೀರ್ಥಗಳನ್ನು ಕಾಣುವಿ? ನನ್ನೊಡನೆ ವಿಲಾಸಮಂದಿರಕ್ಕೆ–ನಡೆ. ಹತ್ತು ವರ್ಷ ತೀರ್ಥಯಾತ್ರೆ ಮಾಡಿದ ಫಲವು ಹತ್ತು ನಿಮಿಷದಲ್ಲಿಯೇ ಸಿಗುವದು; ಇದು ಶಾಸ್ತ್ರಸಮ್ಮತವಾದ ಮಾತು. ಅರಿತುಕೋ.

ಅ.– ಛೀ ಮೋಸಗಾರಳೆ, ಇಂಥ ಹುಚ್ಚು ಶಾಸ್ತ್ರಗಳನ್ನು ನಿನಗಾರು ಕಲಿಸಿದರು? ಪಿಚ್ಚಿಡುವ ಕಣ್ಣು, ಸುಂಬಳ ಸುರಿಯುವ ಮೂಗು, ಜೊಲ್ಲು ಸೋರುವ ತುಟಿ, ಮಾಂಸದ ಮುದ್ದೆಯಂತಿರುವ ಮೊಲೆ–ಮೊದಲಾದವುಗಳನ್ನು ಶ್ರೇಷ್ಠ ತೀರ್ಥಗಳೆಂದು ಬಣ್ಣಿಸಿದ ಆ ಶಾಸ್ತ್ರಕಾರರು ಹುಚ್ಚುನಾಯಿಯ ಹೊಟ್ಟೆಯಿಂದ ಹುಟ್ಟಿರಬೇಕು. ಹೆಣ್ಣಿನ ಸಹವಾಸ ನರಕವಾಸ! ಬಚ್ಚಲ ನೀರು ಎಷ್ಟು ತಿಳಿಯಾಗಿದ್ದರೂ ಸ್ನಾನಕ್ಕೆ ಯೋಗ್ಯವಲ್ಲ. ನಿನ್ನ ಸಹವಾಸಕ್ಕೆ ಬಲಿ ಬಿದ್ದವರು ಇದ್ದುದನ್ನೆಲ್ಲ ಹಾಳು ಮಾಡಿಕೊಂಡು ಬಿಕಾರಿಗಳಾಗುವದು ನಿಶ್ಚಿತ.

ಸ್ವಾತಂತ್ರ್ಯವೆಂದು ಬಣ್ಣಿಸುವ ನಿನ್ನ ಬಣ್ಣನೆಗೆ ನಾನಂತೂ ಮರುಳಾಗಲಾರೆ. ಶಿವಶಿವಾ! ತಾವು ಹುಟ್ಟಿದ ತಾಣವನ್ನು ತಾವೇ ಮೋಹಿಸುವದೇ? ಇದೆಂಥ ಕರ್ಮ! ಹೆಣ್ಣಿನ ಹೊಟ್ಟೆಯಲ್ಲಿ ಬಂದವರು ಕಾಮಾಂಧರಾಗಿ ಅದೇ ಹೆಣ್ಣನ್ನು ಭೋಗಿಸುವದೇ? ಹಾಗೆ ಮಾಡಿದವರನ್ನು ತಾಯ್ಗಂಡರೆಂದು ಲೋಕ ಕರೆಯಲಾರದೇ? ಮಾಯೆ, ವಿಚಾರ ಮಾಡಿ ನೋಡು, ನಿನ್ನಾಟ ಹುಚ್ಚರಾಟ! ನೀನು ಹೇಳುವದೇನು? ಮಾಡುವದೇನು? ತಾಯಿಯಾಗಿ ಮೊಲೆಕುಡಿಸಿದ ಸ್ತ್ರೀಯಳ ಮೊಲೆಹಿಡಿಸುವ ಕಾರ್ಯ ನಿನ್ನದಾಗಿದೆ. ನಿನ್ನ ಸುಖ ಸುಟ್ಟಿತು. ಸಾಕು, ನಿನ್ನ ನೆರೆ ಸಾಕು. ಮಲಗಿದವರನ್ನು ಎಚ್ಚರಿಸುವದು ಸುಲಭ; ಎಚ್ಚರಿದ್ದೂ ಮಲಗಿದವರನ್ನು ಎಚ್ಚರಿಸುವದು ಕಠಿಣ! ಸುಮ್ಮನೆ ಅಡ್ಡ ಹಾದಿ ಹಿಡಿದು ವಾದಿಸುವ ನಿನ್ನೊಡನೆ ವಾದಿಸುವದೇ ತಪ್ಪು ! ಹುಚ್ಚಿಗೆ ಎಚ್ಚರಕಡಿಮೆ. ಇದೋ ನಾನು ಹೊರಟೆ.

ಮಾ.– ಅಲ್ಲಮಾ, ಎಲ್ಲಿಗೆ ಹೋಗುವಿ?

ಅ.– ಭಕ್ತರಿಗೆ ಉಪದೇಶ ನೀಡಿ ಉದ್ಧಾರಮಾಡಲು ತೀರ್ಥಕ್ಷೇತ್ರಗಳ ಸಂಚಾರ ಕೈಕೊಳ್ಳುತ್ತೇನೆ.

ಮಾ.–ಮರುಳ ಅಲ್ಲಮಾ, ಎಲ್ಲಾ ತೀರ್ಥಗಳು ಹೆಣ್ಣಿನಲ್ಲಿಯೇ ಇವೆ. ಹೆಣ್ಣನ್ನು ಬಿಟ್ಟು ನೀನೆಲ್ಲಿ ತೀರ್ಥಯಾತ್ರೆ ಮಾಡುತ್ತಿ? ನನ್ನೊಡನೆ ಹಿತದಿಂದ ಕೂಡಿದರೆ ಕಾಶಿ, ರಾಮೇಶ್ವರ, ಗೋಕರ್ಣ ಮುಂತಾದ ತೀರ್ಥಗಳಲ್ಲಿ ಸ್ನಾನ ಮಾಡಿದಷ್ಟು ಪುಣ್ಯ ನಿನಗೊದಗುವದು.

ಅ.– ಏನು, ಎಲ್ಲಾ ತೀರ್ಥಗಳು ನಿನ್ನಲ್ಲಿಯೇ ಇರುವವೇ? ವಾಹವ್ವಾ ಕವನಗಿತ್ತಿ ! ನೀನು ಇಂಥ ಮಾತಿನಲ್ಲಿಯೇ ಜಗತ್ತನ್ನು ಜೋಲಿ ಹೊಡಿಸುತ್ತಿರುವಿ!

ಮಾ.–ಸುಳ್ಳಲ್ಲ; ಎಲ್ಲ ತೀರ್ಥಗಳು ಹೆಣ್ಣಿನಲ್ಲಿಯೇ ನೆಲೆಸಿವೆ.

ಅ.– ಎಲ್ಲಿವೆ ಹೇಳು, ನೋಡೋಣ.

ಮಾ.–ಹೇಳುತ್ತೇನೆ ಕೇಳು.

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ನೋಡಿಕೋ ಪ್ರಭುರಾಯಾ ನಾರಿಯಾ ದಿವ್ಯಕಾಯಾ
ಇರುವದೋ ತೀರ್ಥ ಮಾಯಾ ॥ ಪಲ್ಲ ॥

ಕಪ್ಪು ಹೋಗದು ; ದುರ್ಗುಣದ ಮುದ್ದಿಯಂತೆ ಇದ್ದ ನಿನಗೆ ಎಷ್ಟು ಹೇಳಿದರೂ ಬುದ್ಧಿಬಾರದು. ನಿನ್ನ ಕೊಬ್ಬೇರಿದ ಕಾಮ ಕಡಿಮೆಯಾಗಲೊಲ್ಲದು. ದುಷ್ಟ ಕಾಮವು ನಷ್ಟವಾಗಿ ಶುದ್ಧ ಪ್ರೇಮವು ಮೂಡದವರ ಕೂಡ ಮಾತಾಡಿ ಫಲವಿಲ್ಲ. ನಾನೀಗ ಹೊರಟೆ.

ಮಾ.–ಅಲ್ಲಮಾ, ಎಲ್ಲಿಗೆ ಹೋಗುವಿ? ನಿನ್ನನ್ನು ಬಿಡುವವರಾರು?

ಅ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಛೀ ದುಷ್ಟೇ ಭ್ರಷ್ಟೇ ಸರಿ. ಮುಟ್ಟುದಿರೆನ್ನನು ನಿಲ್ಲುವದಿಲ್ಲ ಇಲ್ಲೆ ನಾನು
ಸರಿ ಪೋಗುವೆ ಬಿಡು ಮಾರ್ಗವನು. ॥ ಪಲ್ಲ ॥

ಅಲ್ಲಮ.–ಛೀ ನೀಚೇ; ಬರುವರೆ ಮೈಮೇಲೆ.

ಮಾ.–ಬಿಡು ಬಲ್ಲೆನೆಂಬುದೀ ಸೊಲ್ಲಾ.

ಅ.– ನಿನ್ನ ಬಲೆಯೊಳು ಬೀಳುವನಲ್ಲಾ.

ಮಾ.–ಪ್ರಿಯಾ ಮಾಯೆ ಮರೆತವರಿಲ್ಲಾ.

ಅ.– ತೊಲಗಾಚೆ, ಮರುಳು ಮಾಯೆ; ನಿನ್ನ ಬಲೆಗೆ ಬೀಳುವವ ನಾನಲ್ಲ.

ಮಾ.–ಹೇಳುತ್ತೇನೆ ಕೇಳು :

ಪದ ; ತಾಳ : ಕೇರವಾ ; ರಾಗ : ಮಿಶ್ರಕಾಪಿ
ಎನ್ನ ಹೊಂದಲು ಯಾಕೆ ಇಂಥ ಭಯವು.

ಅ.– ವೀರರಾಗಿಹರು ನಿನ್ನಿಂದ ಲಯವು.

ಮಾ.–ನನ್ನಿಂದ ಲೋಕದ ಹಿತವು.

ಅ.– ನಿನ್ನಿಂದ ಲೋಕದನಹುತವು.

ಮಾ.–ಪ್ರಿಯ ಅಲ್ಲಮಾ. ಮಾಯೆಗೆ ಮರೆತು ನಿಂತು ಪಾರಾದವರು ಯಾರೂ ಇಲ್ಲ. ನಾನು ನಿನ್ನನ್ನು ವಶಮಾಡಿಕೊಳ್ಳದೆ ಬಿಡುವವಳಲ್ಲ. ನನ್ನ ಕೂಡ ಹಟ ಹಿಡಿದು ಮಹಾದೇವನು ಸಹ ಜಯ ಹೊಂದಿಲ್ಲ. ನನ್ನ ಮಾಯೆಯಿಂದಲೇ ಶಿವನು ಬಾಲೆಯರ ಸುತ್ತ ಬಾಲ ಗುಂಡಾಡಿಸುತ್ತಿರುವನು; ಜಡವಾಗಿರುವ ಗಂಗೆಯನ್ನು ಜಡೆಯಲ್ಲಿ ಕೂಡ್ರಿಸಿಕೊಂಡಿರುವನು. ಮಾಯಾಮೋಹಕ್ಕೆ ವಶನಾದ ಶಿವನು ನಿನ್ನನ್ನಗಲಿ ಅರಗಳಿಗೆಯಾದರೂ ಇರಲಾರೆನೆಂದು ತನ್ನ ಅರ್ಧ ಶರೀರವನ್ನೇ ಗೌರಿಗೆ ಕೊಟ್ಟು

ಮಾ.–ಹಾಗೆ ಭಾವಿಸಬೇಡ ; ನನ್ನ ಸಂಗದಿಂದ ನಿನಗೆ ರಾಜವೈಭವ ದೊರಕದೆ ಇರದು. ಹೇಳುತ್ತೇನೆ ಕೇಳು.

ಅ.– ಅದೇನಿರುವದು ಹೇಳು.

ಮಾ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಸುಮ್ಮನ್ಯಾತಕೆ ಹಿಡಿವಿ, ನೀ ಪಂಥ, ಕರವ
ಮುಗಿವೆ ಬಾ, ಸುರತಕೆ ಗುಣವಂತಾ ॥ ಪಲ್ಲ ॥

ಏರು : ಮಾಡದೆ ವಿಘ್ನ, ನನ್ನನ್ನು ಲಗ್ನ
ಆಗಲು ಈ ಭೂಮಿಗೆ ರಮಣಾ
ಆಗುವಿ ಜಾಣಾ, ಸೌಖ್ಯದ ಸದನಾ
ಏರುವಿ ಬಾ ಚಂದ್ರ ಸಮವದನಾ ॥ ೧ ॥

ಸರ್ವ ಸುಖಕೆ ನೀ ಎರವಾಗಿ ಪ್ರಿಯಾ
ಮಂದಿ ಮಕ್ಕಳನೆಲ್ಲ ನೀ ನೀಗಿ
ಒಂಟಿಗನಾಗಿ, ಹಾಳೂರ ಗೂಗಿ
ತರ ಇರುವದು ಚಂದೆ, ಬಾ, ಯೋಗಿ ೨

ಅಲ್ಲಮಾ, ಹಟವನ್ನು ಹಿಡಿಯಬೇಡ; ಕೈಮುಗಿದು ಸೆರಗೊಡ್ಡಿ ಬೇಡುವೆ; ನನ್ನ ಮಾತು ಕೇಳು : ನನ್ನ ತಂದೆಯಾದ ಮಮಕಾರ ರಾಜನಿಗೆ ನಾನೊಬ್ಬಳೇ ಮಗಳು. ನನ್ನನ್ನು ನೀನು ಲಗ್ನವಾದರೆ ಈ ಬನವಾಸಿ ಪಟ್ಟಣಕ್ಕೆ ನೀನೇ ಅರಸನಾಗುವಿ. ಸಂಪತ್ತಿನ ಸುಪ್ಪತ್ತಿಗೆ ನಿನ್ನದಾಗುವದು. ಮಾಂಡಲೀಕ ದೊರೆಗಳು ಬಂದು ನಿನಗೆ ನಮಸ್ಕಾರ ಮಾಡುವರು. ಭಟ್ಟಂಗಿಗಳು ನಿನ್ನನ್ನೇ ಹೊಗಳುವರು. ಸರದಾರ ಸುಭೇದಾರರು 'ಜೀಯಾ, ಏನಪ್ಪಣೆ' ಎಂದು ನಿನ್ನೆದುರಿಗೆ ಕೈಕಟ್ಟಿಕೊಂಡು ನಿಲ್ಲುವರು. ನಗಾರಿ, ನೌಬತ್ತು, ಜಯಭೇರಿ ಯಾವಾಗಲೂ ಮೊಳಗುವವು. ನಾನು ಪಟ್ಟಧರಿಸಿಯಾಗಿ ನಿನ್ನ ವಾಮಭಾಗವನ್ನು ಅಲಂಕರಿಸುವೆನು. ಅಂತಹ ರಾಜವೈಭವದಲ್ಲಿ ಮೆರೆಯುವದು ನಿನಗೆ ಚಂದವೋ? ಅಥವಾ ಹಾಳೂರು ಸೇರಿದ ಗೂಗೆಯಂತೆ ಏಕಾಕಿಯಾಗಿ ಅರಣ್ಯವನ್ನು ಸೇರುವದು ಚಂದವೋ? ವಿಚಾರ ಮಾಡಿ 'ವಿಚಾರವಂತ' ಎನಿಸಿಕೊ.

ಅ.– ಭಲೇ ಬುದ್ಧಿವಂತ ಹೆಣ್ಣೇ, ಸೆಗಣಿಯ ಬೆನಕನಿಗೆ ಎಷ್ಟು ನೀರೆರೆದರೂ ದುರ್ಗಂಧ ಹೋಗದು; ಇದ್ದಲಿಯನ್ನು ಇಪ್ಪತ್ತು ಸಾರೆ ತೊಳೆದರೂ ಅದರ

ಅ.– ನೀನು ದೇಹಿಯನ್ನು ಹಿಡಿಯಬಹುದು; ನಾನು ನಿರ್ದೇಹಿ!

(ಹಿಡಿಯ ಹೋಗುವಳು ; ಅಲ್ಲಮನು ಕಂಡರೂ ಕೈಗೆ ಸಿಗದಂತಾಗುತ್ತಾನೆ).

ಮಾ.–ಇದೇನು? ನಾನು ಬರಿಯ ಬಯಲಿಗೆ ತೆಕ್ಕೆ ಹಾಕುತ್ತಿರುವೆನಲ್ಲ! ಇದೆಂತಹ ಮಂಗಮಾಯೆ!! ಅಲ್ಲಮ ಕಾಣುತ್ತಾನೆ; ಅಪ್ಪಲು ಹೋದರೆ ಇವನ ಶರೀರವೇ ಕೈಗೆ ಹತ್ತಲೊಲ್ಲದು. ಬಯಲಿಗೆ ತಕ್ಕೆ ಹಾಕಿದಂತೆ ಅನಿಸುತ್ತದೆ. ಎಂಥ ಸೋಜಿಗವಿದು! ಇವನನ್ನು ವಶಮಾಡಿಕೊಳ್ಳುವ ಬಗೆ ಹೇಗೆ? ಕಣ್ಣಿಗೆಕಂಡದ್ದು ಕೈಗೆ ಸಿಗದಿದ್ದರೆ ನಾನು ಮಾಡುವದೇನು? ಇದೆಂತಹ ಅಪಮಾನ.

ಮಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಫಿ

ಮಾಡಲೇನು ಗತಿಯ ಮಾನವು ಹೋಯಿತೆ?
ಅಪಹಾಸ್ಯವಾಯಿತೆ ॥ ಪಲ್ಲ ॥

ಏರು : ಶರಣರ ಮಹಿಮಾ, ನಾ ತಿಳಿಯದೆ ಹಮ್ಮಾ
ತಾಳಿ ಹೊಂದಿದೆ ಜಗದೊಳು ಗೋಮಾ
ಸುಡು ನನ್ನ ಜಲ್ಮಾ, ಪ್ರಭು ಅಲ್ಲಮಾ ವಶನಾಗಲಿಲ್ಲಮ್ಮಾ । ಅಪ... ॥ ೧ ॥

ಆಯಿತನರ್ಥ ಗೌರಿಯ ನಾಥ. ನಗುವನು ಕೇಳುತ ಈ ಅಪವಾತಾ
ಯಾತಕೆ ಪಂಥ ಗೈದೆನೊ, ವ್ಯರ್ಥ ದೊರೆಯನು ಗುರುನಾರ್ತಾ । ಅಪ...॥ ೨ ॥

ಶಿವಶಿವಾ, ನಾನು ಎಂಥ ಅಪಮಾನಕ್ಕೆ ಗುರಿಯಾದೆನಲ್ಲಾ ! ಅಲ್ಲಮನನ್ನು ಗುಲಾಮನನ್ನಾಗಿ ಮಾಡಿತಂದರೆ ನನಗೆ "ಹೌದು ಮಾಯೆ," ಎಂದು ಕರೆ. ಇಲ್ಲದಿದ್ದರೆ "ಶಿವಶರಣರ ಮನೆಯ ಮುಂದಿನ ನಾಯಿ" ಎಂದು ಕರೆ– ಎಂದು ಪರಮೇಶ್ವರ ಪಾರ್ವತಿಯರ ಮುಂದೆ ಪಂಥ ಮಾಡಿ ಇಲ್ಲಿಗೆ ಬಂದೆ. ನನ್ನ ಪಂಥವೀಗ ಸುಳ್ಳಾಯಿತು. ನಗುವವರ ಮುಂದೆ ನಗೆಪಾಟಲ ಆಯಿತು ನನ್ನ ಸ್ಥಿತಿ! ನನ್ನ ತಾಯಿಯಾದ ಪಾರ್ವತೀದೇವಿ ನನ್ನ ಆಗಮನವನ್ನೇ ನೋಡುತ್ತಿರಬಹುದಲ್ಲವೇ? ಆಕೆಯ ಬಳಿಗೆ ಹೇಗೆ ಹೋಗಲಿ? ಮಾನವನ್ನು ಕಳೆದುಕೊಂಡು ಮರ್ತ್ಯಲೋಕದಲ್ಲಿ ಇರುವುದಕ್ಕಿಂತಲೂ ಕೈಲಾಸಕ್ಕೆ ತೆರಳುವದೇ ಲೇಸು. ನಾನೀಗಲೇ ಹೋಗಿ ನಡೆದ ಸಂಗತಿಯನ್ನು ಅವಳಿಗೆ ತಿಳಿಸುತ್ತೇನೆ.

◆

ಅರ್ಧನಾರೀಶ್ವರನಾದನು. ವಿಷ್ಣುವು ಲಕ್ಷ್ಮಿಯನ್ನು ಬಿಟ್ಟಿರಲಾರದೆ ಅವಳನ್ನು ತನ್ನ ಎದೆಯ ಮೇಲೆ ಇರಿಸಿಕೊಂಡನು. 'ನಾನು ನಿನ್ನ ಪ್ರೀತಿಯ ಮಗಳು ಮುಟ್ಟಬೇಡವೆಂದು ಹೇಳಿದರೂ ಕೇಳದೆ, ಬ್ರಹ್ಮನು ಮರ್ಯಾದೆಯನ್ನು ಬಿಟ್ಟು ಮಗಳಾದ ಸರಸ್ವತಿಯನ್ನು ಲಗ್ನವಾಗಿ ನಾಲಿಗೆಯ ಮೇಲೆ ಕೂಡ್ರಿಸಿಕೊಂಡನು. ವಿಶ್ವಾಮಿತ್ರನು ಮೇನಕೆಯನ್ನು ಕಂಡು ಮೋಹಗೊಂಡು ಸಾವಿರ ವರ್ಷ ಮಾಡಿದ ತಪಸ್ಸನ್ನು ಹಾಳುಮಾಡಿಕೊಂಡು ಆಕೆಯೊಡನೆ ಚಕ್ಕಂದವಾಡಿದನು. ಸೀತೆಯನ್ನು ರಾವಣನು ಕದ್ದೊಯ್ಯಲು, 'ಹಾ! ಸೀತೆ' ಎಂದು ಹಲಬುತ್ತ ಶ್ರೀರಾಮನು ಆಕಾಶಕ್ಕೆ ಬಾಯಿ ತೆರೆದು ಅತ್ತನು. ಹನುಮಂತನು ಹಗ್ಗ-ತಿನ್ನುವಾಗ ಪೂಜಾರಿಯು ಹುಗ್ಗಿ ಬೇಡಿದನಂತೆ! ಎಂಥೆಂಥವರೆ ನಾಯಿಯಾಗಿ ಮಾಯೆಯ ಬೆನ್ನು ಹತ್ತಿರಲು, ಚಂಚಲ ಮನಸ್ಸಿನ ನಿಮ್ಮಂಥ ಮರುಳು ಸಾಧುಗಳು ಮಾಯೆಯನ್ನು ಮೂಲಿಗೊತ್ತ ಬಲ್ಲರೇ? ಸುಮ್ಮನೆ ಸಮ್ಮತಿಸಿದರೆ ಒಳಿತಾಯಿತು; ಇಲ್ಲವಾದರೆ ನೀನು ಯೋಗಿ ಹೋಗಿ ಎಲ್ಲಮ್ಮನ ಜೋಗಿಯಾಗುವಿ; ತಿಳಿದುನೋಡು.

ಅ.– ಎಲೆ ಹುಚ್ಚಳೇ, ಇಚ್ಛೆಗೆ ಬಂದಂತೆ ಒದರಬೇಡ; ನಿನ್ನಿಂದ ಯಾರು ಸದ್ಗತಿಯನ್ನು ಹೊಂದಿರುವರು? ರೇಣುಕೆಯಾಗಿ ಜನಿಸಿ ಜಮದಗ್ನಿಯ ಗೋಣುಕೊರಿಸಿ, ಕಾರ್ತವೀರ್ಯಾರ್ಜುನನ ಸಾವಿರ ತೋಳುಗಳನ್ನು ಕತ್ತರಿಸಿ, ಕ್ಷತ್ರಿಯ ವಂಶವನ್ನು ನಿರ್ಮೂಲ ಮಾಡಿದೆ. ಸೀತೆಯಾಗಿ ಬಂದು ಶ್ರೀರಾಮನನ್ನು ಅಡವಿಗೇಡು ಮಾಡಿ, ರಾವಣನ ಕುಲಕೋಟಿಯನ್ನು ನಿರ್ಮೂಲಗೊಳಿಸಿದೆ. ದ್ರೌಪದಿ ಎಂಬ ಹೆಸರಿನಿಂದ ಹುಟ್ಟಿ, ಕೌರವ-ಪಾಂಡವರಲ್ಲಿ ಜಗಳ ಹಚ್ಚಿ ಕುಲಕೋಟಿಯನ್ನು ನಾಶಮಾಡಿದೆ. ಹೆಣ್ಣಿನಿಂದ ಹೆಚ್ಚಳವನ್ನು ಕಂಡವರಾರು? ಪರಮಾತ್ಮನಲ್ಲಿ ಭಕ್ತಿ ಇಟ್ಟ ಸಾಧು ಸಜ್ಜನರನ್ನು ಅಂಜಿಸಿ ಅಧೋಗತಿಗೆ ಇಳಿಸುತ್ತಿರುವೆ. ಎಲೆ ಮಾಯೆ, ನಿನ್ನ ಮಾರನಾಟ ನನ್ನ ಮುಂದೆ ನಡೆಯದು. ಮಾರ್ಗವನ್ನು ಬಿಡು, ಹೊರಟು ಹೋಗುತ್ತೇನೆ.

ಮಾ.–ಅಲ್ಲಮಾ, ಎಲ್ಲಿಗೆ ಹೋಗುವಿ? ನಿನ್ನನ್ನು ಬಿಡಲಾರೆ.

ಅ.– ಏನು ಮಾಡುವೆ?

ಮಾ.–ನಿನ್ನನ್ನು ಬಂಧಿಸುತ್ತೇನೆ.

ಅ.– ನಾನು ನಿನ್ನ ಕೈಯಲ್ಲಿ ಸಿಕ್ಕರಲ್ಲವೆ ಬಂಧಿಸುವದು?

ಮಾ.–ನಿನ್ನನ್ನು ಬಂಧಿಸದೆ ಇದ್ದರೆ ನಾನು ಮಾಯೆಯಲ್ಲ.

ಚಿಂತೆಯು ಮನಸಿನ ಭ್ರಾಂತಿಯು ಏತಕೆ
ಬಾಡಿದ ಕಮಲದಂತೆ ನಿನ್ನ (ಚಲತಿ)
ಮುಖವ್ಯಾಕೆ ಆಗಿರುವದು ಸಣ್ಣ
ದೇಹದ ಸ್ಥಿತಿಯೇಕೆ ಆಗಿರುವದು ಸುಣ್ಣ
ಪೇಳೆ ನಿನ್ನ ಮನಸ್ಸಿನ ಹದನಾ
ಅರಗಳಿಗೆನ್ನನು ಅಗಲಿರದ ನೀನು
ನನ್ನನು ನೋಡದೆ ಮಮಕರಿಸೆ (ಚಲತಿ)
ಯಾತಕ್ಕೆ ಕುಳಿತೆ ಪಟ್ಟದರಸಿ
ಫಲಪುರದೀಶನ ಮರೆಯುವದುಚಿತ
ಪೇಳೆ ನಿನ್ನ ಮನಸ್ಸಿನ ಹದನಾ ೨

ಎಲೆ ಪಾರ್ವತಿ, ಇಂದಿಗೆ ಮೂರು ದಿನಗಳಾದರೂ ನೀನು ನನ್ನ ದರ್ಶನಕ್ಕೆ ಬಂದಿಲ್ಲವೇಕೆ? ಈಕೆ ಯಾರು? ಮಾಯೆಯೇನು? ಭೂಲೋಕದಿಂದ ಯಾವಾಗ ಬಂದಳು? ಅವಳು ಅಲ್ಲಮನನ್ನು ಗೆದ್ದು ತಂದಿರಲೇಬೇಕು!! ಮಾಯೆ ಹೀಗೇಕೆ ಮುಖ ಹೊರಳಿಸುತ್ತಿ? ತಿರುಗಿ ನೋಡು. ಅಲ್ಲಮನನ್ನು ಎಲ್ಲಿ ಮುಚ್ಚಿರುವೆ? ಅವನನ್ನು ನನಗೆ ತೋರಿಸಬಾರದೆ? ಈಕೆ ಅಲ್ಲಮನನ್ನು ಗೆಲ್ಲದೆ ಹಿಂದಿರುಗಿ ಬರುವವಳೇ ಅಲ್ಲ! ಎಂಥೆಂಥವರೋ ಈಕೆಯ ನಿರಿಗೆಯಲ್ಲಿ ಜೋತಾಡುತ್ತಿರುವರು! ಆ ಅಲ್ಲಮನು ಇವಳ ಮುಂದೆ ಎಷ್ಟರವನು?

ಪ್ರಾ.–ಪ್ರಾಣನಾಥಾ, ನಿನ್ನ ಮಾತು ಗೆದ್ದಿತೆಂದು ಬಿದ್ದವರನ್ನು ತಿರಬೋಕಿ ಮಾಡಿ ಮಾತನಾಡುವದು ಸರಿಯಲ್ಲ. ಸೋಲು ಗೆಲವುಗಳು ಎಲ್ಲರಿಗೂ ಉಂಟು? ನನ್ನ ಮಾಯೆಯಂತೂ ಅಲ್ಲಮನಿಗೆ ಸೋತು ಬಂದದ್ದು ನಿಜ. ನನ್ನ ಪಂಥ ವ್ಯರ್ಥವಾಯಿತು. ನಾನು ಮುಖವೆತ್ತಿ ನೋಡದಂತಾಯಿತು. ಅದಕ್ಕೆ ಗತಿಯೇನು ಕಾಂತಾ? ಹೇಳುತ್ತೇನೆ ಕೇಳು :

ಪದ : ತಾಳ: ದೀಪಚಂದ; ರಾಗ ; ಮಿಶ್ರಕಾಪಿ

ಮುಂದಿನ ಗತಿಯಾ, ಪೇಳ್ಳೆ ರಾಯಾ
ಎನ್ನಯ ಮಾಯಾ, ಹೊಂದಿತೊ ಅಪಜಯಾ
ಎನ್ನಯ ಮಾತು ಹೋಯಿತೊ ನಾಥಾ
ಕೇಳುತ ಈ ವಾರ್ತಾ ಸರ್ವದೇವತಾ
ನಗುವರೊ ಕಾಂತಾ
ಸಕಲ ಪ್ರಮಥರು ಹಾಸ್ಯ ಗೈವರೋ ಕಾಂತಾ
ಅಲ್ಲಮ ಕೈವಶ ಆಗುವಂಥ ಸಹಾಸ ಪೇಳ್ಳೆ ಅರಸಾ

೮

ಪಾರ್ವತೀ ಮಂದಿರ ಪ್ರವೇಶ

ಪಾವರ್ತಿ–(ತನ್ನಷ್ಟಕ್ಕೆ) ಭೂಲೋಕಕ್ಕೆ ಹೋದ ನನ್ನ ಮಗಳು, ಮಾಯೆ ಇನ್ನೂ ಏಕೆ ಬಂದಿರಲಿಕ್ಕಿಲ್ಲ! ಅಲ್ಲಮನು ಆಕೆಗೆ ವಶವಾದನೋ ಇಲ್ಲವೋ ತಿಳಿಯಲಿಲ್ಲ. ಆಕೆ ಹಾಗೇ ತಿರುಗಿ ಬರುವವಳಲ್ಲ! ಮಾಯೆಗೆ ಮಿಾರಿದ್ದು ಜಗದಲ್ಲಿ ಯಾವದಿದೆ? ಇದೇನು ಆಕೆಯೇ ಬಂದಳಲ್ಲ! ...ಯಾಕೆ ಮಾಯೆ? ಅಲ್ಲಮನನ್ನು ಗೆದ್ದು ತಂದೆಯಾ?

ಮಾಯೆ– ತಾಯಿ, ನಾನು ಗೆದ್ದು ತರಲಿಲ್ಲ.

ಪಾ.– ಅಂದರೆ ಸೋತು ಬಂದೆಯಾ?

ಮಾ.– ಹೋದ ಕಾರ್ಯ ಸಫಲವಾಗಲಿಲ್ಲ. (ಅಳುವಳು)

ಪಾ.– ಅಳಬೇಡ ನನ್ನ ಕಂದ, ಅಳಬೇಡ. ಆ ಅಲ್ಲಸಲ್ಲದ ಅಲ್ಲಮನು ನನ್ನ ಮಾಯೆಗೆ ಅಪಮಾನ ಮಾಡಿದನೆ! ಇರಲಿ ; ಈಗೇನು ಮಾಡಲಿ? ಘಾತವಾಯಿತು! ಪತಿಯ ಮುಂದೆ ಮಾಡಿದ ಪಂಥ ಮಣ್ಣು ಪಾಲಾಯಿತು. ನಾನು ಅವನಿಗೆ ಹೇಗೆ ಮೋರೆಯನ್ನು ತೋರಿಸಲಿ!! ಅಪಮಾನದ ದಳ್ಳುರಿ ನನ್ನ ದೇಹವನ್ನೇ ದಹಿಸತೊಡಗಿದೆ. ನನ್ನ ಪತಿದೇವನಿಗೆ ಏನೆಂದು ಹೇಳಲಿ?

ಪರಮಾತ್ಮ–(ಪ್ರವೇಶಿಸಿ) ಇಂದಿಗೆ ಮೂರು ದಿನಗಳಾದವು. ಪಾರ್ವತಿಯು ನನಗೆ ಮುಖವನ್ನೇ ತೋರಿಸಿಲ್ಲ; ತಿಳಿಯಿತು. ಆ ಮಾಯೆ ಅಲ್ಲಮನಿಗೆ ಸೋತು ಬಂದಿರಬೇಕು. ಏನೇ ಆಗಲಿ; ಒಳಗೆ ಹೋಗಿ ಅವಳನ್ನು ಮಾತಾಡಿಸುತ್ತೇನೆ. ಪ್ರಾಣವಲ್ಲಭೆ, ಪಾರ್ವತಿ, ಏನು ಮಾಡುತ್ತಿರುವೆ? ಏಕೆ? ಮಾತಾಡಿಸಿದರೂ ಸುಮ್ಮನೆ ಇರುವೆಯಲ್ಲ? ಹೇಳುತ್ತೇನೆ ಕೇಳು :

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಎಲ್ಲಿಹೆ ಕಾಂತೆ ಗೌರಿ ಮೂರು ದಿನ ನಿನ್ನ ಮಾರಿSS
ಇಲ್ಯಾಕೆ ಹೇಳೆ ನಾರಿ ಪಲ್ಲ

ಪ.– ಪಾರ್ವತಿ, ಅವರಿಗೆ ಅಂಜಲು ಕಾರಣವೊಂದಿದೆ. ಭಕ್ತರು ತಪಸ್ಸು ಮಾಡಿ ನನ್ನನ್ನು ಭಕ್ತಿಯಿಂದ ಬಂಧಿಸುತ್ತಾರೆ. ಅವರು ಬೇಡಿದುದನ್ನು ಕೊಡುವದು ನನ್ನ ಧರ್ಮ! ನೀನು ಮಾತ್ರ ಅಂಥ ಶರಣರ ಗೊಡವೆಗೆ ಹೋಗಬೇಡ.

ಪಾ.–ಪ್ರಾಣನಾಥಾ, ನೀನು ಹೇಳುವದೆಲ್ಲ ಸರಿ. ಆದರೆ ಅಲ್ಲಮನನ್ನು ಗೆಲ್ಲದ ನನ್ನ ಮನಸ್ಸಿಗೆ ಸೊಗಸಿಲ್ಲ, ಅವನನ್ನು ಗೆಲ್ಲುವ ಉತ್ತಮ ಉಪಾಯವನ್ನಾದರೂ ಹೇಳಬಲ್ಲೆಯಾ?

ಪ.– ಚಿಂತಿಸಬೇಡ; ಹೇಳುತ್ತೇನೆ ಕೇಳು ;

ಪದ : ತಾಳ ಕೇರವಾ ರಾಗ : ಮಿಶ್ರಕಾಪಿ

ಚಿಂತೆ ಯಾತಕೆSSS ಕಾಂತೆಯೆ (ದುಗುಣ) ॥ ಪಲ್ಲ ॥

ಚಿಂತೆ ಯಾಕೆ ಕಾಂತೆಯೆ ನಿನ್ನ
ಸ್ವಂಥ ಸತ್ವಕಳೆಯನು ಕಳಿಸು
ಅಂಥ ಕಾರ್ಯ ಗುರುವರವೊಲಿವಾ ॥ ೧ ॥

ಸತ್ವ ಗುಣಕೆ ಸದಾಶಿವನುS
ನಿತ್ಯ ತಾನು ವಶವಾಗಿಹನು
ಸತ್ಯದೇವ ನುಡಿವನು ತಾನು ॥ ೨ ॥

ಕಳಿಸು ಕಾಂತೆ, ನಿನ್ನಯ, ಸತ್ವ
ಕಳೆಯ, ನೀಗಿ ಚಿಂತೆಯ, ಸರ್ವ
ಪ್ರಳಯ ರುದ್ರರೂಪನು ಒಲಿವ (ದುಗುಣ) (ಚಲತಿ)!
ಕಾಂತೆಯೇ.. ॥ ೩ ॥

ಎಲೆ ಪಾರ್ವತಿ, ಅಲ್ಲಮಪ್ರಭುವನ್ನು ಗೆಲ್ಲಲಿಲ್ಲವೆಂದು ಚಿಂತೆ ಮಾಡಬೇಡ. ನೀನು ಕೇವಲ ಮಾಯಾ ಗುಣದವಳಲ್ಲ, ತ್ರಿಗುಣಾತ್ಮಕಳಿರುವಿ. ಸತ್ವಗುಣ, ರಜೋಗುಣ ಮತ್ತು ತಾಮಸ ಗುಣಗಳು ನಿನ್ನಲ್ಲಿಯೆ ಅಡಕವಾಗಿವೆ. ಸತ್ಯಶರಣರು ತ್ರಯೋಗುಣಗಳನ್ನು ಮೀರಿನಿಂತವರು. ಆದರೂ ಅವರು ಸತ್ವಗುಣಕ್ಕೆ ವಶರಾಗಬಲ್ಲರು. ಈಗಲೇ ನೀನು ನಿನ್ನ ಸಾತ್ವಿಕ ಕಳೆಯನ್ನು ಭೂಲೋಕಕ್ಕೆ ಕಳಿಸು; ಅಂದರೆ ಈ ಗುರುನಾಥನು ನಿನ್ನ ವಶವಾಗುವನು. ಹೀಗೆ ಮಾಡಿನೋಡುವದು ಒಳಿತು.

ಪಾ.–ಪ್ರಾಣಕಾಂತಾ. ಹಾಗೆಯೇ ಮಾಡುತ್ತೇನೆ. ದೂತೆ, ನನ್ನ ಮಗಳಾದ ಸಾತ್ವಿಕಿಯನ್ನು ಕರೆದುಕೊಂಡು ಬಾ.

ಪ್ರಾಣನಾಥಾ ಅಲ್ಲಮಪ್ರಭುವನ್ನು ಗೆಲ್ಲಲು ಹೋದ ಮಾಯೆಯು ಸೋತು ಬಂದಳು. ಜಗದ ಜನರೆದುರು ನನಗೆ ಅಪಮಾನವಾಯಿತು. ಇಂದಿನವರೆಗೆ, ನನಗೆ ಮೀರಿ ನಿಂತವರು ಯಾರೂ ಇದ್ದಿಲ್ಲ. ನಿನ್ನ ಮಾತು ಮೀರಿ ಮಾಯೆಯನ್ನು ಕಳಿಸಿ ಅಪಹಾಸ್ಯಕ್ಕೆ ಗುರಿಯಾದೆ. ಅಲ್ಲಮನನ್ನು ಗೆಲ್ಲದ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ಇದಕ್ಕೆ ಗತಿಯೇನು ದೇವಾ?

ಪ.– ಪಾರ್ವತೀ, ನೀನೆಂಥ ಹುಚ್ಚಿ! ಸತ್ಯ ಶಿವಶರಣರು ಮಾಯೆಗೆ ಮರುಳಾಗುವವರಲ್ಲ. ಅಂಥ ಶಿವಶರಣರನ್ನು ನಿಂದಿಸುವದು ಒಳಿತಲ್ಲ. ಬತ್ತಿ–ಎಣ್ಣಿಗಳ ಸಂಗಮದಿಂದಲೇ ಬೆಳಕು ಬೀಳುತ್ತದೆ. ಅದರಂತೆಯೇ ಸತಿ–ಪತಿಗಳಾದ ನಾವಿಬ್ಬರೂ ಒಂದಾಗಿದ್ದರೆ ಈ ಜಗತ್ತು ಬೆಳಗುವದು; ಇದನ್ನರಿತು ಆಚರಿಸುವದು ಒಳಿತು. ನೀನು ಇನ್ನು ಮುಂದೆ ಶಿವಶರಣರ ಗೊಡವೆಗೆ ಹೋಗಬೇಡ. ಹಿಂದೊಮ್ಮೆ ಹೀಗೆಯೇ ಮಾಡಿ ಮೋರೆಯನ್ನು ಒಣಗಿಸಿಕೊಂಡು ಕುಳಿತಿದ್ದೆ.

ಪಾ.–ಪ್ರಾಣಕಾಂತಾ, ನಾನು ಯಾವಾಗ ಮೋರೆಯನ್ನು ಒಣಗಿಸಿಕೊಂಡು ಕೂತಿದ್ದೆ?

ಪ.– ಯಾಕೆ, ಪಾರ್ವತಿ, ನಿನಗೆ ನೆನಪಿಲ್ಲವೆ? ತೊಂಬತ್ತಾರುನೂರು ಗಣಾಧೀಶ್ವರರಿಗೆ ಉಣಬಡಿಸುವೆನೆಂದು ಉಬ್ಬುಬ್ಬಿ ಮಾತನಾಡಿ ಸರ್ವರಿಗೂ ಆಮಂತ್ರಣ ನೀಡಿದೆ. ಅಡಿಗೆ ಮಾಡಲು ದೇವತೆಗಳನ್ನು ಕೂಡಿಸಿ ಪರ್ವತಪ್ರಾಯದ ಅನ್ನದ ರಾಶಿಯನ್ನೇ ಸಿದ್ಧಪಡಿಸಿದಿ. ಆ ಅಡಿಗೆ ಒಬ್ಬ ಗಣೇಶ್ವರನಿಗೇ ಸಾಲದಾಯಿತು. ಆಗ ಮಿಕ್ಕ ಗಣಾಧೀಶ್ವರರು ಬರಲು, ದಿಕ್ಕು ತೋರದೆ ನೀನು ಅಡಕಲ ಗಡಿಗೆಯಲ್ಲಿ ಅಡಗಿಕೊಂಡು ಕೂತುದು ನೆನಪಿಲ್ಲವೇ? ಪಾರ್ವತೀ, ಇಂಥ ಶಿವಭಕ್ತರೊಡನೆ ಸರಸ ಮಾಡುವದು ತರವಲ್ಲ. ಶಿವನಿಗಿಂತಲೂ ಶಿವಶರಣರು ದೊಡ್ಡವರು ! ನಿನ್ನ ದೊಡ್ಡಸ್ತನ ನಡೆದರೆ ನನ್ನ ಮುಂದೆ ನಡೆದೀತು. ಶಿವಶರಣರ ಮುಂದೆ ಅದೆಂದೂ ನಡೆಯಲಾರದು. ಭಕ್ತರ ಕಾಯವೇ ನನ್ನ ಕಾಯ! ಅವರ ಭಕ್ತಿಗೆ ನಾನೇ ತತ್ತರಿಸುತ್ತೇನೆ. ಅವರ ಬಯಕೆಯನ್ನು ಈಡೇರಿಸುವದೇ ನನ್ನ ಕರ್ತವ್ಯ. ನಿಜವಾಗಿಯೂ ನಾನು ಭಕ್ತಿ ಕಂಪಿತ.

ಪಾ.–ಶರಣರಿಗೆ ಇಂಥ ಮಹಿಮೆ ಬಂದಿರುವದು ಯಾರಿಂದ?

ಪ.– ನಮ್ಮಿಂದ.

ಪಾ.–ಆ ಶರಣರಿಗೆ ಇಂಥ ಮಹಿಮೆ ನಮ್ಮಿಂದ ಬರುವದಾದರೆ, ನಾವೇಕೆ ಅವರಿಗೆ ಅಂಜಿ ನಡೆಯಬೇಕು.

ವಶವಾಗುವದುಂಟೇ? ಅವರು ಒಲಿದರೆ ಸತ್ವಗುಣಕ್ಕೆ ಒಲಿಯಬಲ್ಲರು.

ಪಾ.– ಮಗಳೇ, ನೀನು ಹೇಳುವದೆಲ್ಲಾ ಸರಿ. ಅದಕ್ಕೆಂದೇ ಸತ್ವಗುಣದ ಮೂರ್ತಿಯೆಂದೆನಿಸಿದ ನಿನ್ನನ್ನು ಕರೆಸಿದ್ದೇನೆ. ನೀನೀಗ ಹೋಗಿ ಆ ಅಲ್ಲಮನನ್ನು ಒಲಿಸಿಕೊಂಡು ಬಾ.

ಸಾ.– ತಾಯಿ, ಆ ಗುರುನಾಥನು ನನಗೆ ವಶವಾಗದೆ ಇರುವನೆ? ಜಪತಪಾದಿ ಸದ್ಭಕ್ತಿ ಸಾಧನೆ ಮಾಡಿ, ಅವನನ್ನು ಒಲಿಸಿಕೊಂಡು ಬರುವೆನು, ಅಪ್ಪಣೆಯಾಗಬೇಕು.

ಪಾ.– ಮಗಳೇ, ಹೋಗು. ನಿನ್ನ ಸತ್ವಗುಣವೇ ನಿನಗೆ ಸತ್ಯದ ಮಾರ್ಗವನ್ನು ತೋರಿಸುವದು ಹೋಗಿ ಬರುವಂಥವಳಾಗು!

ಸಾ.– ತಾಯೀ, ನಾನಿನ್ನು ಬರುತ್ತೇನೆ.

◆

ದೂತೆ.–ಯಾಕಾಗಬಾರದು. (ಸಾತ್ವಿಕಿ ಪ್ರವೇಶಿಸುತ್ತಾಳೆ.)

ದೂ.– ತಾಯಿ ಸಾತ್ವಿಕಿಯವರೇ, ತಮ್ಮ ತಾಯಿಯಾದ ಪಾರ್ವತಿದೇವಿಯು ತಮ್ಮನ್ನು ಕರೆದುಕೊಂಡು ಬರಲು ಅಪ್ಪಣೆ ಮಾಡಿರುವರು.

ಸಾತ್ವಿಕಿ–ಹಾಗಾದರೆ ನಡೆ, ಬರುತ್ತೇನೆ (ಮುಂದೆಬಂದು) ತಾಯಿಯ ಪಾದಾರವಿಂದಗಳಲ್ಲಿ ಈ ಸಾತ್ವಿಕಿಯ ನಮಸ್ಕಾರ. (ನಮಸ್ಕರಿಸುವಳು)

ಪಾ.– ಏಳು ಮಗಳೇ, ಇತ್ತ ಕಡೆಗೆ ಬಾ.

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಬಾ ಬಾರೆ, ಬಾಲೆ ಗುಣಶೀಲೆ ನನ್ನ
ಮೋಹದ ಕೂಸೆ ತ್ವರಿತದಿ ॥ ಪಲ್ಲ ॥

ಏರು : ಸರಸಿಜನೇತ್ರೆ ನೀ ಬಾರೆ, ನಿನ್ನ ಮುದ್ದುಮೊಗವನೀಗಲೆ ತೋರೆ
ಸನ್ನುತವಾಣಿ, ಸದ್ಗುಣಭರಣೀs, ಸತ್ವರದಲಿ ನೀ ಬಾ ಸುಗುಣಿ ॥ ೧ ॥

ಸಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಏರು : ಯಾತಕ್ಕೆ ಸ್ಮರಿಸಿದೆ, ಶಿವನರಸಿ ನೀ ಮನದೊಳತಿ ವ್ಯಾಕುಲವೆರಸಿ
ಪರ್ವತಜಾತೆ ಪಾರ್ವತಾಮಾತೆ, ಆಜ್ಞೆಯ ಕೊಡುಯೆನಗೆ ಹರಿಸುತೆ ॥ ೨ ॥
ತಾಯಿ, ನನ್ನನ್ನು ಕರೆಸಿದ ಕಾರಣವೇನು? ಹೇಳುವಂಥವರಾಗಿರಿ.

ಪಾ.– ಮಗಳೇ, ನಿನ್ನನ್ನು ಕರಸಿದ ಕಾರಣವೇನೆಂದರೆ–ಈಗ ಕೆಲವು ದಿವಸಗಳ ಓಂದೆ ನಾರದಮುನಿಗಳು ಶಿವಸಭೆಗೆ ಬಂದು, ಭೂಲೋಕದಲ್ಲಿ ಅವತರಿಸಿದ ಅಲ್ಲಮ ಪ್ರಭುದೇವನು ಮಾಯಾರಹಿತನೆಂದೂ ಸತ್ಯಶರಣನೆಂದೂ ಕೊಂಡಾಡಿದನು. ಅದು ನನಗೆ ಸಹನವಾಗಲಿಲ್ಲ. ಮಾಯೆಗೆ ವಶವಾಗದವರು ಈ ಜಗತ್ತಿನಲ್ಲಿ ಯಾರೂ ಇಲ್ಲವೆಂದು ಹೇಳಿ, ನಾನು ಪರಮೇಶ್ವರನೊಡನೆ ವಾದಹೂಡಿ ಪಂಥ ಮಾಡಿದೆ. ಮಾಯೆಯನ್ನು ಕಳಿಸಿ ಅಲ್ಲಮನನ್ನು ಪಿಚಂಡಿ ಕಟ್ಟಿ ತರಿಸುತ್ತೇನೆಂದು ಹಟ ತೊಟ್ಟೆನು. ಆಗ ಪರಶಿವನು ಎಷ್ಟು ಹೇಳಿದರೂ ಕೇಳದೆ ಮಾಯೆಯನ್ನು ಕಳಿಸಿ, ಈಗ ಅಪಮಾನಕ್ಕೆ ಗುರಿಯಾಗಿರುವೆನು. ನೀನು ಈ ಕ್ಷಣವೇ ಭೂಲೋಕಕ್ಕೆ ಹೋಗಿ ಅಲ್ಲಮನನ್ನು ವಶಮಾಡಿಕೊಂಡು ಬಂದು ನನ್ನ ಪಂಥವನ್ನು ಗೆಲಿಸಬೇಕಮ್ಮಾ ಮಗಳೆ.

ಸಾ.– ತಾಯಿ ನೀನೆಂಥಾ ಹುಚ್ಚಿ ! ಶಿವಶರಣರು ಎಂದಾದರೂ ಮಾಯೆಗೆ

ದೂ.– ನನ್ನ ಹೆಸರು ಹೇಳಬೇಕೆ? ನನ್ನ ಹೆಸರಿಗೆ ಹೆಗ್ಗಣ ಹತ್ತಿ ಗುದ್ದು ಬಿದ್ದಾವು ನೋಡೆವ್ವಾ!

ಸಾ.– ಹಾಗೆಲ್ಲಾ ಚೇಷ್ಟೆ ಮಾಡಬೇಡ. ನಿನ್ನ ಹೆಸರೇನು ಹೇಳು?

ದೂ.– ಯೆವ್ವಾ, ನನಗೆ ದೂತಿ ಅಂತಾರ; ಬಣ್ಣದ ಮಾತಿ ಅಂತಾರ; ಪಿಂಜಾರ ಪಾತಿ ಅಂತಾರ; ತಮ್ಮ ಹೆಸರೇನು? ಹೇಳಬೇಕು.

ಸಾ.– ಅಮ್ಮಾ, ನನ್ನ ಹೆಸರನ್ನು ಕೇಳುವಿಯಾ? ಸಕಲ ವೇದಾಂತ, ಪುರಾಣ ಮೊದಲು ಮಾಡಿಕೊಂಡು ಈ ಜಗತ್ತಿನವರೆಲ್ಲ ನನಗೆ ಸಾತ್ವಿಕಿಯೆಂದು ಕರೆಯುವರು.

ದೂ.– ತಮಗೆ ಸಾತ್ವಿಕಿ ಅನ್ನುವರೆ! ಹಾಗೆಂದು ಕರೆಯಲು ಕಾರಣವೇನು?

ಸಾ.– ನನಗೆ ಸಾತ್ವಿಕಿ ಎಂದು ಕರೆಯಲು ಕಾರಣವೇನೆಂದರೆ,–ಈ ಜಗತ್ತಿನಲ್ಲಿ ಸತ್ವಗುಣದ ಮೂರ್ತಿಯಾಗಿ ನಾನಿರುವುದರಿಂದ ನನಗೆ "ಸಾತ್ವಿಕಿ, ಸಾತ್ವಿಕಿ" ಎನ್ನುತ್ತಾರೆ.

ದೂ.– ಈ ಲೋಕದಲ್ಲಿರುವ ಗುಣಗಳಿಗೆಲ್ಲ ನೀನೇ ಸಾತ್ವಿಕಿಯೇ?

ಸಾ.– ಹೌದು ನಾನೆ!

ದೂ.– ಒಳ್ಳೆಯದು; ತಾವು ಇರುವ ಸ್ಥಾನವಾವುದು?

ಸಾ.– ದೂತೆ, ಸತ್ವಗುಣ ಇರುವ ಸ್ಥಾನ ನಿನಗೆ ಗೊತ್ತಿಲ್ಲವೆ? ನಾನು ಸಾಧುಸತ್ಪುರುಷರಲ್ಲಿ ಇರುತ್ತೇನೆ. ಪುರಾಣ ಪುಣ್ಯಕಥೆ ಕೇಳಿ ನಡೆವ ಸದ್ಭಕ್ತರಲ್ಲಿ ಇರುತ್ತೇನೆ. ಜಗತ್ತಿನ ಕಲ್ಯಾಣಕ್ಕಾಗಿ ನಡೆಯುವ ಸತ್ಕಾರ್ಯದಲ್ಲಿ ಇರುತ್ತೇನೆ. ಒಳ್ಳೆಯವರಲ್ಲಿಯೇ ನನ್ನ ವಾಸ; ಪಾಪಿಗಳ ಸಮೀಪಕ್ಕೂ ನಾನು ಸುಳಿಯಲಾರೆ ನನ್ನನ್ನು ಕಂಡರೆ ದುಷ್ಟರಿಗೆ ಆಗುವದಿಲ್ಲ.

ದೂ.– ಹೌದು ಸತ್ವಗುಣವಿರುವ ಮೆಟ್ಟು ಸ್ಪಷ್ಟವಾಯಿತು. ತಂಗಿ ಸಾತ್ವಿಕಿ, ನೀನು ಇರತಕ್ಕ ಸ್ಥಾನವೂ ತಿಳಿಯಿತು. ಆದರೆ ತಮ್ಮ ಕರ್ತವ್ಯವೇನು?

ಸಾ.– ದೂತೆ, ಸತ್ವಗುಣದ ಕರ್ತವ್ಯ ಏನೆಂಬುದು ನಿನಗೆ ಗೊತ್ತಿಲ್ಲವೆ? ನನ್ನನ್ನು ನಂಬಿ ಸದ್ಗುಣ ಸಂಪನ್ನರಾಗಿ ಸನ್ಮಾರ್ಗದಲ್ಲಿ ನಡೆಯುವವರಿಗೆ ಅನಂತ ಸುಖವನ್ನು ನೀಡುವದೇ ನನ್ನ ಕರ್ತವ್ಯ. ನನ್ನನ್ನು ಭಕ್ತಿಯಿಂದ ಪೂಜಿಸಿದವರು ಉದ್ಧಾರ ಹೊಂದದೆ ಇರರು.

ದೂ.– ತಮ್ಮನ್ನು ನಂಬಿದವರೆಲ್ಲರೂ ಉದ್ಧಾರವಾಗುವರೇ?

೯

ಭೂಲೋಕ ಪ್ರವೇಶ

ಪದ : ತಾಳ : ಕೇರವಾ ; ರಾಗ : ಭೈರವಿ

ಸಾತ್ವಿಕಿ– ಜನ್ಮ ತಾಳಿದೆ, ಭುವನದಿ಼ ಶಿವದಯದಿ
ಭುವನದಿ ಶಿವದಯದಿ ॥ ಪಲ್ಲ ॥

ಏರು : ತಾಯಿಯಾಜ್ಞೆಯ ಧರಿಸಿ಼, ನಾ ಬಂದೆ ಜನಸಿ
ಶಿವನಾಮ ಭಜಿಸಿ಼, ಭುವನದಿ, ಶಿವದಯದಿ
ಭುವನದಿ ಶಿವದಯದಿ ॥ ೧ ॥

ನಾ ಪೊಂದಿ ಶರಣ, ಸದ್ಗುರು ವರನ
ಪಡೆವೆ ಕರುಣ, ಭುವನದಿ ಶಿವದಯದಿ
ಭುವನದಿ ಶಿವದಯದಿ ॥ ೨ ॥

ಫಲಪುರನಾಥಾ, ಗೌರಿಯ ಕಾಂತಾ
ಕಾಯೋ ಸತತಾ, ಭುವನದಿ ಶಿವದಯದಿ
ಭುವನದಿ ಶಿವದಯದಿ ॥ ೩ ॥

(ತನ್ನಷ್ಟಕ್ಕೆ ತಾನೇ) ಪಾರ್ವತೀದೇವಿಯ ಅಪ್ಪಣೆಯ ಪ್ರಕಾರ, ಈ ಉಡುತಡಿ ಗ್ರಾಮದಲ್ಲಿ ನಿರ್ಮಲ ಮತ್ತು ಸಮತಿಯರೆಂಬ ಶಿವಭಕ್ತಿ ಸಂಪನ್ನರಾದ ಸತಿ–ಪತಿಗಳ ಹೊಟ್ಟೆಯಲ್ಲಿ ಹುಟ್ಟಿ ಬೆಳೆದು ದೊಡ್ಡವಳಾದೆನು. ಈಗ ನಾನು ನನ್ನ ಕರ್ತವ್ಯದಲ್ಲಿ ತೊಡಗಬೇಕು. ಅಲ್ಲಮ ಸದ್ಗುರುವಿದ್ದ ಸ್ಥಾನಕ್ಕೆ ಹೋಗಿ ಭಕ್ತಿ–ಜ್ಞಾನ–ವೈರಾಗ್ಯಗಳಿಂದ ಕೂಡಿದ ಸನ್ಮಾರ್ಗದಲ್ಲಿ ನಡೆದು ಅವನನ್ನು ಒಲಿಸಿಕೊಳ್ಳಲು ಯತ್ನಿಸುವೆ.

ದೂತೆ.– **ಈಕಿ** ಯಾವಾಕಿ ಬಂದಾಕಿ! ಮೆತ್ತನ್ನ ಅತ್ತಿಹಣ್ಣಿನಂಥಾಕಿ!!

ಸಾ.– ಅಮ್ಮಾ, ನೀನಂದಂತೆ ನಾನು ಮೆತ್ತನ್ನ ಅತ್ತೀಹಣ್ಣಿನಂಥವಳೇ ಹೌದು.ಹೊರಗೆ ನಾನು ಕೋಮಲೆಯಾಗಿ ಕಂಡರೂ ಒಳಗೊಳಗೆ ಕಠೋರಳಾಗಿದ್ದೇನೆ. ತಾಯಿ, ನನ್ನನ್ನು ವಿಚಾರಿಸುವ ನೀನು ಯಾರು?

ಸಾ.– ದೂತೆ ನೀ ಎಂಥಾ ಹುಚ್ಚಿ ! ಪರಶಿವನಾದ ಅಲ್ಲಮನು ಜಗದ್ವ್ಯಾಪಕನೆಂದು ನೀನೇ ಹೇಳುತ್ತಿ. ಅವನನ್ನು ಹುಡುಕಿ ಕಾಣಲು ನೀನೇ ತಿಳಿಸುತ್ತಿ ! ಇದೆಂತಹ ವಿಪರೀತ ಮಾತು? ಜಗತ್ತನ್ನೇ ವ್ಯಾಪಿಸಿದವನು ಎಲ್ಲದರಲ್ಲಿಯೂ ಇರುವನು.

ದೂ.–ಹಾಗಾದರೆ, ಆ ಪರಮಾತ್ಮನು ಇಲ್ಲಿಯೇ ಇರಬೇಕಾಯಿತಲ್ಲ !

ಸಾ.– ಇದ್ದಾನೆ ! ಆ ಪರಮಾತ್ಮಸ್ವರೂಪಿಯಾದ ಅಲ್ಲಮನು ಇಲ್ಲಿಯೂ ಇದ್ದಾನೆ.

ದೂ.–ಇದ್ದರೆ ಅವನೇಕೆ ನಮಗೆ ಕಾಣಿಸಲೊಲ್ಲ?

ಸಾ.– ದೂತೆ, ಹಾಲಿನಲ್ಲಿ ತುಪ್ಪ ಇದೆಯೋ ಇಲ್ಲವೋ!

ದೂ.–ಇದೆ.

ಸಾ.– ಇದ್ದರೆ ಕಣ್ಣಿಗೆ ಯಾಕೆ ಕಾಣಿಸುವುದಿಲ್ಲ.

ದೂ.–ಯವ್ವಾ, ತಮಗೆ ಇಷ್ಟೂ ತಿಳಿಯುವದಿಲ್ಲವೆ? ಹಾಲಿನಿಂದ ತುಪ್ಪ ದೊರೆಯಬೇಕಾದರೆ, ಕಾಸಿದ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಬೇಕು. ಆ ಮೇಲೆ ಅದನ್ನು ಸರಿಯಾಗಿ ಕಡೆದರೆ ಬೆಣ್ಣೆ ಬರುವದು. ಅದನ್ನು ಕಾಸಿದರೆ ತುಪ್ಪ ಕಾಣಿಸುವದು. ಇಷ್ಟೆಲ್ಲಾ ಮಾಡಿದಾಗಲೇ ಹಾಲಿನಲ್ಲಿ ತುಪ್ಪ ತೋರುವದು.

ಸಾ.–ಅದರಂತೆಯೇ ಸಾಧನೆ ಮಾಡಿ ಮಾಡಿ ಪರಮಾತ್ಮನನ್ನು ಕಾಣಬೇಕು. ಹೇಳುತ್ತೇನೆ ಕೇಳು :

ದೂ.–ಅದೇನಿರುವದು ಹೇಳು.

ಸಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ತೋರುವದೆ ಶಿವನ ರೂಪಾऽ, ಪಡೆಯದೆ ಗುರುಕೃಪಾऽ
ಆಗದು ಕರ್ಮಲೋಪಾऽ ॥ ಪಲ್ಲ ॥

ಏರು : ಶ್ರವಣವೆಂಬುವ ಕ್ಷೀರಾ, ಪಡೆದು ಅದಕೆ ತ್ವರಾ
ಮನನವೆಂಬ ಹೆಪ್ಪನ್ನು ಹಾಕದೆ, ಸರ್ವ ಆಸೆಯೆಂಬುದ
ನೂಕದೆ ॥ ೧ ॥

ಸದಾಶಿವನೆಂಬ ಸಾಕ್ಷಾತ್ಕಾರ (ಚಲತಿ)
ಸದಾಶಿವನೆಂಬುವ ಸಾಕ್ಷಾತ್ಕಾರ ತುಪ್ಪ, ತೋರುವದೇ
ದೂತೆ ತೋರುವದೇ ॥ ೨ ॥

ಸಾ.– ಹೌದು ತಪ್ಪದೆ ಉದ್ಧಾರ ಆಗುವರು. ಸತ್ವಗುಣವುಳ್ಳವರಿಗೆ ಸಂಕಟವೆಲ್ಲಿಂದ ಬರಬೇಕು? ಎಲ್ಲರೂ ಉದ್ಧಾರಾಗುವರು.

ದೂ.– ಈಗ ತಮ್ಮಿಂದ ಯಾರ್‍ಯಾರು ಉದ್ಧಾರ ಆಗಿದ್ದಾರೆ?

ಸಾ.– ಅಮ್ಮಾ, ಸತ್ವಗುಣ ಸಂಪನ್ನೆಯಾದ ನನ್ನಿಂದ ಉದ್ಧಾರ ಪಡೆದವರ ಹೆಸರನ್ನು ಹೇಳುತ್ತೇನೆ, ಕೇಳು.

ದೂ.– ಅದೇನಿರುವದು ಹೇಳಬೇಕು.

ಸಾ.– ಪದ : ತಾಳ : ದೀಪಚಂದ ; ರಾಗ : ಮಿಶ್ರಕಾಪಿ

ಸತ್ವದ ಗುಣವು, ಸೌಖ್ಯದ ಘನವು
ಹೇಳುವೆ ಕೇಳಿರಿ, ಲಾಲಿಸಿ ಜನರು ॥ ಪಲ್ಲ ॥

ಏರು : ಜಗದಾದಿ ಹಿಡಿದು, ಭಕ್ತಿಯ ಪಿಡಿದು
ಶರಣರೆಲ್ಲರು ಮುಕ್ತಿಯ ಹೊಂದಿದರು, ನನ್ನಿಂದಲವರು ॥ ೧ ॥

ಸುಸ್ಥಿರ ಕೀರ್ತಿ ಚಿನ್ಮಯ ಮೂರ್ತಿ
ಸತ್ವದಿ ಪಡೆದ ಹರಿಶ್ಚಂದ್ರ, ಭೂಚಕ್ರವರ್ತಿ ॥ ೨ ॥

ತಾಯಿ, ನನ್ನಿಂದ ಯಾರು ಯಾರು ಉದ್ಧಾರ ಆಗಿರುವರೆಂದು ಕೇಳಿದೆಯಲ್ಲ ! ಚಿತ್ತವಿಟ್ಟು ಲಾಲಿಸು. ಅಮ್ಮಾ ಉದ್ಧಾರ ಹೊಂದಿದವರನ್ನು ಲೆಕ್ಕ ಮಾಡಿ ಹೇಳುವದು ಯಾರಿಂದಲೂ ಸಾಧ್ಯವಿಲ್ಲ. ಈ ಜಗತ್ತು ಹುಟ್ಟಿದಂದಿನಿಂದ ಇಲ್ಲಿಯವರೆಗೆ ಅಗಣಿತ ಸಾಧುಸಂತರು ಸತ್ವಗುಣದಿಂದಲೇ ಶಿವ ಸಾಯುಜ್ಯ ಪಡೆದರು. ಶಿವಶರಣರು ನನ್ನನ್ನೇ ನಂಬಿ ಲಿಂಗದೊಳಗಾದರು. ಭೂಚಕ್ರವರ್ತಿ ಹರಿಶ್ಚಂದ್ರನು ಸತ್ಯ ಪರಿಪಾಲನೆ ಮಾಡಿ ಅಮರನಾದನು. ಹಾಗೆ ಹೇಳುತ್ತ ಹೋದರೆ ಅಂಥವರ ಸಂಖ್ಯೆ ಎಂದೆಂದಿಗೂ ಮುಗಿಯದು.

ಸಾ.– ದೂತೆ, ಅಲ್ಲಮಪ್ರಭುವೆಂಬ ಸದ್ಗುರೋತ್ತಮನನ್ನು ಒಲಿಸಿಕೊಳ್ಳಲು ನನ್ನ ತಾಯಿಯಾದ ಪಾರ್ವತಿದೇವಿಯ ಅಪ್ಪಣೆಯ ಪ್ರಕಾರ ಭೂಲೋಕಕ್ಕೆ ಬಂದಿದ್ದೇನೆ. ಉಡುತಡಿ ಗ್ರಾಮದ ಶಿವಭಕ್ತರಾದ ನಿರ್ಮಳ–ಸುಮತಿಯರ ಉದರದಲ್ಲಿ ಹುಟ್ಟಿ ಬೆಳೆದು ದೊಡ್ಡವಳಾಗಿದ್ದೇನೆ. ಇನ್ನು ಮೇಲೆ ಆ ಸದ್ಗುರುವಿನ ಸೇವೆಮಾಡಿ ಅವನ ಅಂತಃಕರುಣವನ್ನು ಪಡೆದು, ಜನ್ಮವನ್ನು ಸಾರ್ಥಕ ಮಾಡಿಕೊಳ್ಳಲು ಯತ್ನಿಸುವೆ.

ದೂ.– ಅಡ್ಡಿಯಿಲ್ಲ; ಜಗದ್ವ್ಯಾಪಕನಾದ ಆ ಗುರುಮೂರ್ತಿಯನ್ನು ಹುಡುಕಿ ನೋಡಬಹುದು.

ನಿತ್ಯ ಭವಪಿದನು ಹಳಿದು, ಚಿತ್ತವೆಂಬುದೆನ್ನಲಿ ಬಲಿದು
ನಿತ್ಯ ನಲಿಯುವಽ ನಾರಿ । ಏನು...... ॥ ೧ ॥

ಸದಮಲಾಂಗಿಯು ತನ್ನ, ಹೃದಯಪೀಠದಿ ಎನ್ನ
ಕದಲದಂತಿರಿಸಿಹಳೊ । (ಚಲತಿ) ಏನು...... ॥ ೨ ॥

ಭಕ್ತಪ್ರಾಣಿ ಮಹೇಶ್ವರಾ, ಭಕ್ತಾಧೀನನಾ ಶಂಕರಾ
ಭಕ್ತ ಹೃದಯ ಶಿವಮಂದಿರಾ । ಏನು....... ॥ ೩ ॥

ಆಹಾ, ಸತ್ವಗುಣವೆ ಮೂರ್ತಿಮತ್ತಾಗಿ ನಿಂತ ಈ ಸಾತ್ವಿಕಿಯ ಧರ್ಮ ಕೀರ್ತಿಯನ್ನು ನಾನೆಂತು ಬಣ್ಣಿಸಲಿ? ಭಕ್ತರ ಇಷ್ಟಾರ್ಥವನ್ನು ಪೂರೈಸಲು ಅತ್ತಿತ್ತ ಸಂಚಾರ ಮಾಡಬೇಕೆಂದರೆ, ಈ ಸಾಧ್ವಿಯು ನನ್ನನ್ನು ತನ್ನ ಹೃದಯ ಪೀಠದಲ್ಲಿ ನಿಷ್ಠೆಯಿಂದ ಕಟ್ಟಿಬಿಟ್ಟಿರುವಳು. ಮಾಡುವದೇನು? ನಾನು ಶಿವಶರಣರ ಆಳು! ಯಾರು ನನ್ನನ್ನು ಭಕ್ತಿಯಿಂದ ಸೇವಿಸುವರೋ ಅವರ ಸೇವೆಯನ್ನು ಮಾಡುವದು ನನ್ನ ಧರ್ಮ. ಸಂಸಾರ ವ್ಯಾಮೋಹವನ್ನು ತೊರೆದು, ಬಂಧು-ಬಾಂಧವರ ಸಹವಾಸದಿಂದ ಸರಿದು, ಆಶಾಪಾಶವನ್ನು ಹರಿದು, ನನ್ನನ್ನೇ ಮೊರೆಹೊಕ್ಕ ಭಕ್ತರನ್ನು ಬಿಡಲಿಕ್ಕೆ ಹ್ಯಾಗೆ ಬಂದೀತು? ಭಕ್ತರ ಕಷ್ಟವೇ ನನ್ನ ಕಷ್ಟ; ಭಕ್ತರ ಸುಖವೇ ನನ್ನ ಸುಖ ; ಭಕ್ತರ ಚಿಂತೆಯೇ ನನ್ನ ಚಿಂತೆ. ನನ್ನ ಪ್ರಾಣದಂತಿರುವ ಸದ್ಭಕ್ತರನ್ನು ಅಗಲಿ ಅರೆಕ್ಷಣವಾದರೂ ನಾನಿರಲಾರೆ; ಅವರು ಕೂತಲ್ಲಿ ಕೂಡ್ರುತ್ತೇನೆ; ನಿಂತಲ್ಲಿ ನಿಲ್ಲುತ್ತೇನೆ; ನಾನು ಚಿಂತಿಸಿದವರ ಚಿಂತಾಮಣಿ; ಕಲ್ಪಿಸಿದವರ ಕಲ್ಪತರು; ಕಾಮಿಸಿದವರ ಕಾಮಧೇನು!

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ (ಚಕ್ಕಡ)

ಧನ್ಯಧನ್ಯಳೀಸತಿ, ರನ್ನೆ ಎನ್ನೊಳು ತಾ
ಭಿನ್ನವಿಲ್ಲದೆ ಮನವೇಕಾಗಿ
ಶಿವಯೋಗದಲ್ಲಿ ಮನ ಲಯವಾಗಿ
ಕರ್ಪೂರ ಜ್ಯೋತಿ ಏಕಾಗುವ ರೀತಿ
ಶಿವನೇ ತಾನಾಗಿಹಳೋ ಗುಣವಂತಿ, ಸತ್ಯವತೀ ॥ ೧ ॥

ಸತ್ವಗುಣದಲ್ಲಿ ಸದಾಶಿವನಿರುವನು
ಸತ್ವಗುಣದಲ್ಲಿಯೇ ಸದ್ಭಕ್ತಿ

ಭವಗುಣ ಅಳಿದು, ಶಿವಗುಣ ಸುಳಿದು
ಅಷ್ಟಮದಗಳನೆಲ್ಲ ತುಳಿಯದೆ, ಮೂರು ತಾಪಗಳನ್ನು
ಕಳೆಯದೆ ॥ ೩ ॥

ಶಿವರೂಪವೆಂಬುದು ಬಯಲ ಭ್ರಮೆ (ಚಲತಿ)
ಶಿವರೂಪವೆಂಬುದು ಬಯಲಭ್ರಮೆಯಲ್ಲಿ ನಿಂತು
ಹೊಳೆಯುವುದು ಮುಂದೆ ಇಳಿಯುವುದು ॥ ೪ ॥

ಅಮ್ಮಾ, ಮಾಡಬೇಕಾದ ಕ್ರಿಯೆಗಳನ್ನೆಲ್ಲಾ ಮಾಡದೆ ಹಾಲಿನಲ್ಲಿ ತುಪ್ಪ ಹೇಗೆ ತೋರುವದಿಲ್ಲವೋ ಹಾಗೆ ಈ ಶರೀರವೆಂಬ ಗಡಿಗೆಯನ್ನು ತೊಳೆಯದೆ, ಅದರಲ್ಲಿ ಗುರುಬೋಧೆಯೆಂಬ ಪವಿತ್ರವಾದ ಹಾಲನ್ನು ತುಂಬದೆ, ಮನವೆಂಬ ಹೆಪ್ಪನ್ನು ಹಚ್ಚದೆ, ಅರಿವೆಂಬ ಕಡಗೋಲಿನಿಂದ ಕಡೆಯದೆ, ಚಿನ್ಮಯವೆಂಬ ಬೆಣ್ಣೆಯನ್ನು ಪಡೆಯದೆ, ಅದನ್ನು ಶಿವಯೋಗವೆಂಬ ಅಗ್ನಿಯಿಂದ ಕಾಸದೆ, ಸದಾಶಿವನೆಂಬ ಸಾಕ್ಷಾತ್ ತುಪ್ಪವು ಹೇಗೆ ದೊರೆತೀತು? ದೂತೆ, ನಾನೀಗ ಶಿವಯೋಗ ಸಾಧನೆಯಲ್ಲಿ ಮಗ್ನಳಾಗುವೆನು.

ದೂ.– ಶಿವಯೋಗ ಸಾಧನೆ ಮಾಡಿದರೆ ಶಿವನು ಒಲಿಯುವನೆ?

ಸಾ.– ಅಮ್ಮಾ, ಅಗತ್ಯವಾಗಿ ಒಲಿಯುವನು. 'ಅಂಬಾ' ಎಂದು ಕರೆಯುವ ಕರುವಿನ ಧ್ವನಿಯನ್ನು ಕೇಳಿದ ಆಕಳು, ತನ್ನ ಕರು ಇದ್ದಲ್ಲಿಗೆ ಓಡಿ ಬರುವಂತೆ, 'ಸಾಂಬಾ' ಎಂದು ಕರೆಯುವ ಧ್ವನಿ ಕಿವಿಗೆ ಬಿದ್ದಾಕ್ಷಣವೇ ಅಂತಃಕರುಣಿಯಾದ ಸಾಂಬನು ಭಕ್ತನ ಬಾಗಿಲಿಗೆ ಬಂದು, ಅವನ ಮನದ ಬಯಕೆಯನ್ನು ಪೂರೈಸುವನು. ಅವನಿಗೆ ಬಂದ ವಿಪತ್ತನ್ನು ಬಯಲು ಮಾಡುವನು. ಆದ್ದರಿಂದ ಮಾಯಾ ಪ್ರಪಂಚಕ್ಕೆ ಮರುಳಾದ ಮಾನವರು ಮಾಯೆಯನ್ನು ತೊರೆದು ಸತ್ವಗುಣಯುತರಾಗಿ ಬಾಳಿದರೆ ಮುಕ್ತಿಯನ್ನು ಹೊಂದಬಲ್ಲರು. ಸತ್ವಗುಣವೇ ಸೌಖ್ಯದ ಬೀಜ! ಸತ್ವಗುಣದಲ್ಲಿಯೇ ಸದಾಶಿವನಿರುವನು!! ಸದಾಶಿವ ಎನ್ನುವವರಿಗೆ ಸದಾಸುಖ ಇದ್ದೇ ಇದೆ. ಕೂತಲ್ಲಿ ನಿಂತಲ್ಲಿ ಸದಾ "ಶಿವ ಶಿವಾ" ಅಂದವರಿಗೆ ಮುಕ್ತಿ ಸಿಕ್ಕೇ ಸಿಗುತ್ತದೆ. ದೂತೆ, ನೀನಿನ್ನು ಹೊರಡಬಹುದು. ನಾನು ಶಿವಯೋಗದಲ್ಲಿ ಮಗ್ನಳಾಗುವೆನು. (ಸಾತ್ವಿಕಿ ಶಿವಯೋಗದಲ್ಲಿ ಮೈಮರೆತು ಕೂಡ್ರುತ್ತಾಳೆ; ಅಲ್ಲಮನು ಪ್ರವೇಶಿಸುವನು.)

ಅಲ್ಲಮ.– ಪದ : ತಾಳ : ತೀವ್ರ ದಿತಾಳ ; ರಾಗ : ಮಿಶ್ರಕಾಪಿ (ಚಕ್ಕಡ)

ಏನು ಧನ್ಯಳೇSSS ಮಾನಿನಿSS ॥ ಪಲ್ಲ ॥

ಏನಾದರೂ ಕೊರತೆಯನ್ನು ಕಂಡನೇ? "ಸದ್ಗುರುವೇ ಗತಿ, ಮತಿ ಎಂದು ನಂಬಿದ ನನ್ನನ್ನು ಬೇಕಾದರೆ ಪೊರೆಯಲಿ! ಸಾಕಾದರೆ ಇರಿಯಲಿ! ಸಾಕು-ಬೇಕು ಎನ್ನುವ ಚಿಂತೆ ನನಗೇಕೆ? ಅವನ ಚಿಂತೆಯಲ್ಲಿರುವದು ಮಾತ್ರ ನನ್ನ ಧರ್ಮ. ಪರಮಾತ್ಮನು ಒಲಿವನೋ, ಒಲಿಯನೋ ಎನ್ನುವ ಚಿಂತೆ ನನಗೇಕೆ? ನಾನಂತೂ ಸರ್ವ ಕಾಲದಲ್ಲಿಯೂ ಸರ್ವಾಂಶದಿಂದಲೂ 'ಸದ್ಗುರುವೆ ಸದ್ಗತಿ' ಎಂದು ಶಿವಧ್ಯಾನ ಮಾಡುತ್ತ ಇದ್ದು ಬಿಡುವೆನು."

ಅ.- ಆಹಾ! ಲೋಕದಲ್ಲಿ ಸತ್ವ ಗುಣದ ಕೀರ್ತಿ ಪ್ರಕಟವಾಗಲೆಂದು ಸಾತ್ವಿಕರನ್ನೇ ಪರೀಕ್ಷೆ ಮಾಡುವದು ನನಗೆ ರೂಢಿಯಾಗಿದೆ. ಈ ಊರ ದೊರೆಯಾದ ಕೌಶಿಕರಾಜನ ಮುಖಾಂತರ ಈಕೆಯ ಸತ್ವವನ್ನು ಪರೀಕ್ಷಿಸಿ ನೋಡುತ್ತೇನೆ. ಇವಳು ಈ ಸತ್ವ ಪರೀಕ್ಷೆಯಲ್ಲಿ ಗೆದ್ದುದಾದರೆ, ಇವಳನ್ನು ಕಲ್ಯಾಣಕ್ಕೆ ಬರಮಾಡಿಕೊಂಡು ಬಸವಾದಿ ಪ್ರಮಥರ ಸಮ್ಮುಖದಲ್ಲಿಯೇ ಸನ್ಮಾನಿಸುತ್ತೇನೆ. ಇರಲಿ, ನಾನೀಗ ಲೋಕೋದ್ಧಾರ ಮಾಡುತ್ತ ಕಲ್ಯಾಣದ ಕಡೆಗೆ ಸಾಗುವೆನು. (ಹೋಗುವನು.)

ಸಾ.- ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಸದ್ಗುರುದೇವ ತನ್ನನ್ನು ತಾ ತೋರಿದ
ಲಿಂಗದಲ್ಲಿ ಗೋಚರವಾಗಿ ತಾ ಸರಿದ ॥ ಪಲ್ಲ ॥

ಎನ್ನೊಳು ದೋಷ ಇಲ್ಲವೋ ಲೇಶ
ಶ್ರೀ ಸರ್ವೇಶ ತಾ ಮೋಸ
ಯಾತಕೆ ಗೈದ ತನ್ನಯ ಪಾದ
ತೋರದಾದನು ಯಾಕೆ ತಾ ಇಂದ ॥ ೧ ॥

ಭಕ್ತರ ಪ್ರಾಣ ಭಕ್ತಾಧೀನ
ಅಂಬುವ ನಿನ್ನ ಸುರುಚಿರ ವಚನ
ಮರೆಯಲಿ ನನ್ನ ತೊರೆಯಲಿ ಅವನ
ಚರಣವೆ ಗತಿ ಎನಗನುದಿನ ॥ ೨ ॥

ಸದ್ಗುರೋತ್ತಮನ ಪಾದದರ್ಶನವು ಮೇಲಿಂದ ಮೇಲೆ ನನ್ನ ಇಷ್ಟಲಿಂಗದಲ್ಲಿ ಹೊಳೆದರೂ ಪ್ರತ್ಯಕ್ಷವಾಗಿ ನನ್ನ ಮುಂದೆ ನಿಲ್ಲದಾಯಿತು. ನಾನು ಸತ್ವಗುಣಕ್ಕೆ ಅಧೀನನೆಂದು ಸಾರಿ ಹೇಳುತ್ತಿರುವ ಪರಂಜ್ಯೋತಿ ಸ್ವರೂಪದ ಆ ಸದ್ಗುರುವು ತನ್ನ ವಚನವನ್ನು ಮರೆತನೋ ಇಲ್ಲವೆ ನನ್ನ ಸತ್ವದಲ್ಲಿ ಏನಾದರೂ

ಸದ್ಭಕ್ತಿ ಎಂಬುದೆ ತಾ ಸನ್ಮುಕ್ತಿ
ಎಂಬ ಶಾಸ್ತ್ರದ ರೀತಿ ತಿಳಿದ ಈ ಗುಣವಂತಿ
ಲೇಪವೇನಿಲ್ಲದೆ ಸಂಸ್ಕೃತಿ ಶಿವರತಿ ॥ ೨ ॥

ಧನ್ಯಳು ! ಈ ಸಾತ್ವಿಕಿಯೇ ಧನ್ಯಳು !! ಇವಳ ಅಂತರಂಗ ಪೂಜೆ ಅಗಾಧವಾದುದು. ತದೇಕ ಚಿತ್ತದಿಂದ ನನ್ನನ್ನೇ ಧ್ಯಾನಿಸುತ್ತ ತಾನೇ ತಾನಾಗಿರುವ ಇವಳ ಇಷ್ಟಲಿಂಗದಲ್ಲಿ ನಾನೇ ಪರಂಜ್ಯೋತಿಯಾಗಿ ತೊಳಗಿ ಬೆಳಗುತ್ತೇನೆ.

(ಸಾತ್ವಿಕಿಯ ಸಮೀಪಕ್ಕೆ ಸುಳಿಯುವನು)

ಸಾ.– ಆಹಾ, ಇದೇನು ನನ್ನ ಸದ್ಗುರುವಿನ ಸುಳಿವು ಇಷ್ಟಲಿಂಗದಲ್ಲಿ ತೋರಿ, ತೋರಿದಲ್ಲಿಯೇ ಮಾಯವಾಯಿತು!

ಪದ : ತಾಳ : ಕೇರವಾ ; ರಾಗ : ಭೈರವಿ

ತೋರಿ ಅಡಗಿದ ಗುರುವರ ಭವದೂರ
ಗುರುವರ ಭವದೂರ.............. ॥ ಪಲ್ಲ ॥

ಇಷ್ಟಲಿಂಗದಲಿ ಸಂಚಾರ ತಾ ಗೈದ ಸದ್ಗುರುವರ
ಮಾಯಾವಾದನೊ ಗುರುವರ, ಭವದೂರ
ಗುರುವರ ಭವದೂರ............... ॥ ೧ ॥

ಮನೋವಾಸಿ ಅಲ್ಲಮರಾಯ, ಕಂಡನೆನ್ನೊಳು ನ್ಯಾಯ
ಅಗಲಿಂತು ಮಾಯಾ ಗುರುವರ, ಭವದೂರ
ಗುರುವರ ಭವದೂರ........... ॥ ೨ ॥

ದೇಶದೊಳು ಫಲಪುರವಾಸ, ದೋಷರಹಿತ ಶ್ರೀ ಸಿದ್ಧೇಶ
ಗೈವದುಚಿತೆ ಮೋಸ ಗುರುವರ, ಭವದೂರ
ಗುರುವರ ಭವದೂರ............... ॥ ೩ ॥

ಆಹಾ! ಆ ನನ್ನ ಸದ್ಗುರುವಿನ ಪಾದ ದರ್ಶನವು ಮೇಲಿಂದ ಮೇಲೆ, ನನ್ನ ಇಷ್ಟ ಲಿಂಗದಲ್ಲಿ ಹೊಳೆದರೂ ಪ್ರತ್ಯಕ್ಷವಾಗಿ ನನ್ನೆದುರಿಗೆ ನಿಲ್ಲದಾಯಿತು. ಸತ್ವಗುಣದವಳೆಂದು ನನ್ನನ್ನು ಹೊಗಳುತ್ತಿರುವ ಪರಂಜ್ಯೋತಿ ಸ್ವರೂಪನಾದ ಸದ್ಗುರುವು ತಾನು ಕೊಟ್ಟ ವಚನವನ್ನು ಮರೆತನೆ? ಇಲ್ಲದೆ ನನ್ನಲ್ಲಿ

೧೦

ಕೌಶಿಕರಾಜನ ಪ್ರವೇಶ

ಕೌಶಿಕ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ.

ಇಂದ್ರಲೋಕಕ್ಕೊಪ್ಪುವಂಥ ಚಂದ್ರಮುಖಿಯಾದ ಒಬ್ಬ
ಸುಂದರಿಯನ್ನು ನಾ ಕಂಡೆ ಈ ದಿನಾ
ಬಣ್ಣಿಸಲೇನವಳ ಚೆಲ್ವಿಕಿನಾ
ದೇಹದ ವರ್ಣಾ ಚಂದ್ರನ ಕಿರಣಾ
ಕಂಡು ಹಾರಿತೊ ಮಂತ್ರಿ ನನ್ನ ಸ್ಮರಣಾ, ದಿವ್ಯ ರತ್ನಾ ॥ ೧ ॥

ಸುದ್ದ ಕಮಲಪತ್ರನೇತ್ರ, ಮುದ್ದು ನಾರಿಯ ಗಾತ್ರ
ತಿದ್ದಿ ಮಾಡಿದ ಚಿನ್ನದ ಗೊಂಬೆ
ಭೂಮಿಗಿಳಿದು ಬಂದ ಭಾಸುರ ರಂಭೆ
ಮೋಹದ ಕಾಂತೆ, ಕಾಣುತ ಭ್ರಾಂತೆ
ಪೊಂದಿ ನಿಂತಿಹೆ ಮನಕಿಲ್ಲ ಶಾಂತಿ, ತಿಳಿ ಮಂತ್ರಿ ॥ ೨ ॥

ಎಲೈ ಮಂತ್ರೀಶನೆ, ಇಂದು ನಾನು ಸೈನ್ಯಸಮೇತನಾಗಿ ಕುದುರೆಯನ್ನೇರಿಕೊಂಡು ಉಡುತಡಿಯ ರಾಜಬೀದಿಯಲ್ಲಿ ಅತಿ ವೈಭವದಿಂದ ಬರುವ ಸಮಯದಲ್ಲಿ, ನಾನೆಂದೂ ನೋಡದಂಥ ಅಪ್ರತಿಮ ರತ್ನವೊಂದು ನನ್ನ ಕಣ್ಣಿಗೆ ಬಿತ್ತು. ಆ ತೇಜೋವತಿಯ ಸೌಂದರ್ಯವನ್ನು ನೋಡಿದ ಪುರುಷನೇ ಜಗದಲ್ಲಿ ಧನ್ಯನು! ಮಂತ್ರಿಯೇ, ಏನು ಹೇಳಲಿ? ಇಂಥ ಸುಕುಮಾರ ರತ್ನವನ್ನು ಹೆತ್ತ ತಂದೆ ತಾಯಿಗಳು ಅದೆಂಥ ಪುಣ್ಯಾತ್ಮರೋ ನಾ ಕಾಣೆ!! ಮಂತ್ರಿವರ್ಯ, ಮೇಲು ಮಾಳಿಗೆಯ ಮೇಲೆ ನಿಂತು ನೋಡುತ್ತಿದ್ದ ಆ ತರುಣಿಯ ಕಡೆಗೆ ನಾನು ಮುಖ ತಿರುಗಿಸಿದೊಡನೆ ಅವಳ ಎರಳೆಗಂಗಳ ನೋಟ ನನ್ನತ್ತ ಹೊರಳಿತು. ತತ್‌ಕ್ಷಣವೇ ನೋಟಗಳೆರಡೂ ಒಂದಕ್ಕೊಂದು ಕೀಲಿಸಿದವು. ಕಾಮನ ಬಾಣ ನನ್ನ ಹೃದಯದಲ್ಲಿ ನಾಟಿತು. ಆ ಚೆನ್ನಿಗ ನಾರಿಯ ಚೆಲ್ವಿಕೆಗೆ ನಾನು ಚಕಿತನಾದೆ. ಆಕೆಯನ್ನು ಇನ್ನೊಮ್ಮೆ ನೋಡಬೇಕೆಂದರೆ ವಿಧಿ ಅದಕ್ಕೂ ಅಡ್ಡ ಬಂದಿತು. ಕಣ್ಣಿಗೆ ಕತ್ತಲು ಕವಿಯಿತು. ಬುದ್ಧಿಗೆ ಭ್ರಮೆಯಾಯಿತು.

ಕೊರತೆಯನ್ನು ಕಂಡನೋ? ಇರಲಿ ; ಸರ್ವ ಆಸೆಯನ್ನು ಹರಿದು ಸದ್ಗುರುವೇ ಗತಿಯೆಂದು ನಂಬಿರುವ ನನ್ನನ್ನು ಮರೆಯಲಿ; ಇಲ್ಲವೆ ಅರಿಯಲಿ, ಅದರ ಚಿಂತೆ ನನಗೇಕೆ? ಅವನ ಚಿಂತನೆಯನ್ನು ಮಾಡುವದೇ ನನ್ನ ಕೆಲಸವಲ್ಲದೆ, ಪರಂಚಿಂತೆಯನ್ನು ಅವನು ಮಾಡುವುದಿಲ್ಲವೇಕೆಂಬುದು ನನ್ನ ಕೆಲಸವಲ್ಲ. ಸರ್ವಕಾಲವೂ ಸರ್ವಾಂಶದಿಂದಲೂ "ಸದ್ಗುರುವೇ, ನೀನೆ ಗತಿ" ಯೆಂದು ಅವನ ಧ್ಯಾನವನ್ನು ಮಾಡುತ್ತ ಕೂಡ್ರುವೆನು.

♦

ಮಂತ್ರಿಯೆ ಏಳೊ, ಪಯಣವ ತಾಳೊ
ಆಕೆಯ ಅಭಿಮತವನು ಕೇಳೊ
ಎನ್ನಯ ಪಟ್ಟದ ರಾಣಿ ಸ್ಪಷ್ಟವಾಗಿ
ಮಾಡುವೆನೆಂದು ಆಕೆಗೆ ಹೇಳೊ ೨

ಮಂತ್ರೀಶನೆ, ಆ ಸೊಬಗಿನ ಸುಂದರಿಯನ್ನು ಹೊಂದುವವರೆಗೆ ಎನ್ನಮನಸ್ಸಿಗೆ ಶಾಂತಿ ಇಲ್ಲ. ನನ್ನನ್ನು ಲಗ್ನವಾಗಲು ಒಪ್ಪಿದರೆ, ಅವಳೇ ನನ್ನ ಪಟ್ಟದರಸಿ ಆಗುವಳೆಂದು ಸ್ಪಷ್ಟವಾಗಿ ತಿಳಿಸು. ನೀನೀಗಲೇ ಹೋಗಿ ಆ ರತ್ನವು ನನ್ನ ಕೈಸೇರುವಂತೆ ಯತ್ನ ಮಾಡಬೇಕು.

ಮಂ.– ದೊರೆಗಳೆ, ತಾವು 'ಸಿಟ್ಟಾಗುವುದಿಲ್ಲ' ಎಂದರೆ ಒಂದು ಮಾತು ಹೇಳಬೇಕೆಂದಿದ್ದೇನೆ.

ಕೌ.– ಯಾವ ಮಾತು?

ಮಂ.– ಪ್ರಭುಗಳಾದ ತಾವು ಪರಸ್ತ್ರೀ ವ್ಯಾಮೋಹಕ್ಕೆ ಬೀಳುವದು ಒಳಿತಲ್ಲ.

ಕೌ.– ಮಂತ್ರೀಶನೆ, ನಿನ್ನಿಂದ ನೀತಿಬೋಧೆ ಕೇಳುವದಕ್ಕೆ ನಾನು ನಿನ್ನನ್ನು ಕರೆಸಿಲ್ಲ. ಅರಸನ ಅಪ್ಪಣೆ ಪಾಲಿಸಲು ನಿನ್ನನ್ನು ಬರಮಾಡಿಕೊಂಡಿದ್ದೇನೆ.

ಮಂ.– ಪ್ರಭುಗಳೇ, ಆಗಲಿ; ಒಡೆಯನ ಹೇಳಿಕೆ ಬಡಿಗನ ಮಾಟ! ಈ ದೊಡ್ಡ ಪಟ್ಟಣದಲ್ಲಿ ಆ ಸ್ತ್ರೀಯಳ ಮನೆಯನ್ನು ಎಲ್ಲಿದೆಯೋ ಹುಡುಕಿ ನೋಡಬೇಕು.

ಕೌ.– ಮಂತ್ರಿವರ್ಯಾ, ನೀನು ಆಕೆಯ ಮಂದಿರವನ್ನು ಹುಡುಕಬೇಕಾಗಿಲ್ಲ. ನಾನು ಆ ಮೊದಲೇ ದಾಸಿಯರ ಮುಖಾಂತರ ಅವಳಿರುವ ಸ್ಥಳ, ಕುಲ, ಗೋತ್ರ, ಮೊದಲಾದವನ್ನು ತಿಳಿದುಕೊಂಡಿದ್ದೇನೆ. ನಮ್ಮ ರಾಜವಾಡೆಯ ಹಿಂದಿರುವುದೇ ಅವಳ ಮನೆ! ನಿರ್ಮಲ–ಸುಮತಿಯರೆಂಬ ಶಿವಶರಣರು ಅವಳ ತಾಯಿ–ತಂದೆಗಳು. ಅವಳಿಗೆ ಹದಿನಾರು ವರ್ಷ ವಯಸ್ಸಾಗಿದ್ದರೂ ಇನ್ನೂ ಮದುವೆ ಯಾಗಿಲ್ಲವಂತೆ!

ಮಂ.–ಇರಬೇಕು ಪ್ರಭುಗಳೇ; ಆದರೆ ಆ ಶಿವಶರಣರು ಸಾಮಾನ್ಯರಲ್ಲ. ಪರಧರ್ಮದವರೊಡನೆ ಶರೀರ ಸಂಬಂಧ ಬೆಳೆಸಲು ಅವರು ಒಪ್ಪಲಿಕ್ಕಿಲ್ಲ.

ಕೌ.– ಅದೇಕೆ ಒಪ್ಪುವದಿಲ್ಲ? ರಾಜನಾದವನು ಯಾವಧರ್ಮದ ಸ್ತ್ರೀಯನ್ನಾದರೂ ಮದುವೆಯಾಗಬಹುದೆಂದು ಧರ್ಮಶಾಸ್ತ್ರವೇ ಹೇಳುತ್ತದೆ.

ಮಂ.– ದೊರೆಗಳೇ ತಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ಆದರೆ ಈ ಕೆಲಸಕ್ಕೆ

ನಾನೆಂತೋ ಸೈರಿಸಿಕೊಂಡು ಅರಮನೆಗೆ ಬಂದುಮುಟ್ಟಿದೆನು. ನಾನು ಈಗ ಇಲ್ಲಿದ್ದರೂ ನನ್ನ ಮನ ಅವಳ ಸೌಂದರ್ಯದ ಸುತ್ತಲು ಸುಳಿದಾಡುತ್ತಲಿದೆ. ಆ ಸುಂದರಿಯನ್ನು ತಿದ್ದಿತೀಡಿ ಸೃಷ್ಟಿಸಲಿಕ್ಕೆ ಬ್ರಹ್ಮನ ಬುದ್ಧಿ ಎಷ್ಟು ವ್ಯಯವಾಯಿತೋ ಏನೋ! ಎಂಥ ಸೊಬಗಿನ ಸುಂದರಿ ಅವಳು! ಬ್ರಹ್ಮಸೃಷ್ಟಿಯಲ್ಲಿ ಅಂಥವಳೇ ಇನ್ನೊಬ್ಬಳಿರುವದು ಸಾಧ್ಯವೇ ಇಲ್ಲ.

ಮಂತ್ರಿ– ರಾಜೇಂದ್ರಾ, ತಾವು ಹಾಗೆ ಭಾವಿಸಿದ್ದು ತಪ್ಪು. ಬ್ರಹ್ಮನಿರ್ಮಿತವಾದ ಈ ಸೃಷ್ಟಿಯಲ್ಲಿ ಒಂದರಕಿಂತ ಇನ್ನೊಂದು ಮಿಗಿಲಾಗಿದೆ. ಚೆಲುವೆಗಿಂತ ಚೆಲುವೆಯರು ಬೇಕಾದಷ್ಟು ಇದ್ದಾರೆ, 'ಒಬ್ಬರ ತಲೆಯ ಮೇಲೆ ಇನ್ನೊಬ್ಬರ ಕೈ' ಎನ್ನುವದು ಗಾದೆಯ ಮಾತಾಗಿಲ್ಲವೆ ! ವಿಚಾರ ಮಾಡಿ ನೋಡಿರಿ. ತಮ್ಮ ಪಟ್ಟದರಸಿಯಾದ ಪದ್ಮಿನಿ ಸಾಮಾನ್ಯ ಸುಂದರಿಯೆ? ಆಕೆಯ ಚೆಲ್ವಿಕೆಯೇ ಮಿಗಿಲೆಂದು ಇಡೀ ಲೋಕವೇ ಡಂಗುರ ಸಾರುತ್ತಲಿದೆ.

ಕೌಶಿಕ– ಛೇ ಎಲ್ಲಿ ನನ್ನ ಪಟ್ಟದರಸಿ! ಎಲ್ಲಿ ಆ ನನ್ನ ಸುದತಿ!! ನನ್ನವಳು ಅವಳ ಪಾದದ ತುದಿಬೆರಳಿಗೂ ಸರಿಯಾಗಲಾರಳು. ಎಷ್ಟು ಹೊಗಳಿದರೇನು? ನೀರಗೋಳಿ ರಾಜಹಂಸಕ್ಕೆ ಸಮವಾದೀತೇ? ದುಂಡುದೋಳಿನ ಲಿಂಬೀ ವರ್ಣದ ಆ ನಳಿನಮುಖಿ ಸ್ವರ್ಗದಿಂದಲೇ ಇಳಿದು ಬಂದಿರಬೇಕು. ಇಲ್ಲದಿದ್ದರೆ ಮಾನವರಿಗೆ ಅಂಥ ಮನೋಹರ ರೂಪ ಎಲ್ಲಿಂದ ಬರಬೇಕು?

ಮಂ.– ಪ್ರಭುಗಳೇ, ತಾವು ಕಂಡ ಸುಂದರಿ ಲೋಕ ವಿಖ್ಯಾತಳಿರಬಹುದು; ನಾನೂ ಒಪ್ಪುತ್ತೇನೆ. ಆದರೆ ತಮ್ಮ ಮನದಲ್ಲಿ ಮೂಡಿದ ವಿಚಾರವನ್ನು ತಿಳಿಸಿದರೆ ಸರಿಯಲ್ಲವೆ?

ಕೌ.– ಹೇಳುತ್ತೇನೆ ಕೇಳು.

ಮಂ.– ಅದೇನಿರುವದು ಹೇಳಿರಿ.

ಕೌ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಲಗ್ನವಾಗುವೆ ನಾನು ಆ ಹರದಿ
ಹೋಗಿ ಕೇಳಿ ಬಾರೊ ಮಂತ್ರಿ ನೀ ತ್ವರದಿ ॥ ಪಲ್ಲ ॥

ಏರು : ಸುಂದರಿ ಸರಸ, ರೂಪಕೆ ಮನಸ
ಆಗಿ ನಿಂತಿಹೆ ನನಗಿಲ್ಲೊ ಸೊಗಸ
ಮಾಡೋ ನೀ ಸಾಹಸ, ಕೂಡಿಸೊ ಹಂಸ
ಯೋಗಿಣಿಯ ಬೇಗನೆ ಮಂತ್ರೀಶಾ ॥ ೧ ॥

ಮಂ.– ಏನೇ ಹುಚ್ಚಿ, ನಾನು ಮಂತ್ರಿಸುವವನಲ್ಲ; ಮಂತ್ರೀಶ್ವರ. ಅಂದರ ಈ ಪಟ್ಟಣದ ಅರಸನ ಮಂತ್ರಿ!

ದೂ.– ಹೀಂಗ! ನಾ ಯಾರೋ ಅಂತ ಮಾಡಿದ್ದೆ. ನಂದs ತಪ್ಪಾತು. ಇದೊಂದು ತಪ್ಪs ತುಪ್ಪದಾಗ ಹಾಕಿಕೊಂಡು ಗಪ್ಪನ ನುಂಗಿ ಬಿಡು; ನಮಸ್ಕಾರ ಮಾಡತೀನಿ. ಬರ್ರಿ ಯಾಕ ಬಂದಿದ್ರಿ?

ಮಂ.– ನಿನ್ನನ್ನು ಕರೆದುಕೊಂಡು ಬಾ–ಎಂದು ಕೌಶಿಕಮಹಾರಾಜರ ಅಪ್ಪಣೆಯಾಗಿದೆ.

ದೂ.– ಆಗಲಿ; ನಿಮ್ಮ ಬೆನ್ನ ಓಂದ ಬರತೀನಿ ನಡೀರಿ.

ಮಂ.– ಆದಷ್ಟು ತೀವ್ರ ಬಾ, ನಾ ಮುಂದ ಹೋಗತೀನಿ. (ಹೋಗುವನು)

ದೂ.– (ಪ್ರವೇಶಿಸಿ) ದೊರೆಗಳೇ, ನಮಸ್ಕಾರ! ತಾವು ನನ್ನನ್ನು ಯಾಕೆ ಕರೆಸಿದ್ದೀರಿ?

ಕೌ.– ಮಾಳಮ್ಮ ಇತ್ತ ಬಾ; ಹೆದರಬೇಡ, ಸಮೀಪಕ್ಕೆ ಬಾ, ನಿನ್ನಿಂದ ಒಂದು ಮಹತ್ವದ ಕೆಲಸ ಆಗಬೇಕಾಗಿದೆ. ಈ ಊರಲ್ಲಿ ನಿರ್ಮಲ–ಸುಮತಿಯರೆಂಬ ಶಿವಶರಣರಿದ್ದಾರೆ.

ದೂ.– ಹೌದು ಇದ್ದಾರೆ.

ಕೌ.– ಸರಸಮತಿಯಾದ ಸಾತ್ವಿಕಿಯೆಂಬ ಒಬ್ಬ ಮಗಳು ಅವರಿಗಿದ್ದಾಳೆ.

ದೂ.– ಹೂಂ, ಗೊತ್ತಾಯಿತು, ಮುಂದೆ?

ಕೌ.– ನೀನು ಅವಳಲ್ಲಿಗೆ ಹೋಗಿ, ನನ್ನೊಡನೆ ಲಗ್ನವಾಗಲು ಅವಳನ್ನು ಒಡಂಬಡಿಸಿಕೊಂಡು ಬಾ ಹೋಗು, ತೀವ್ರ ಹೋಗು. ಇಷ್ಟು ಕೆಲಸವನ್ನು ಮಾಡಿಕೊಂಡು ಬಂದರೆ, ನಿನಗೆ ಬೇಡಿದ್ದನ್ನು ಕೊಡುತ್ತೇನೆ.

ದೂ.– ರಾಜೇಂದ್ರಾ, ನೀನು ಆ ಸುಶೀಲೆಯಾದ ಸಾತ್ವಿಕಿಯನ್ನು ಬಯಸುವೆಯಾ? ಹೇಳುತ್ತೇನೆ ಕೇಳು.

ಕೌ.– ಅದೇನಿರುವದು ಹೇಳು :

ದೂ.– ಪದ : ತಾಳ : ಕೇರವಾ ; ರಾಗ : ಭೈರವಿ

ಬಿಡು ಬಿಡು ನಿನ್ನ ಈ ಮಾಯಾ, ಕೇಳೋ ರಾಯಾ
ನಿನ್ನ ಮಾಯಾ ಕೇಳೋ ರಾಯಾ (ದುಗುಣ) ॥ ಪಲ್ಲ ॥

ಏರು : ಅವಳಲ್ಲೊ ಭೋಗಿನಿ, ಶುದ್ಧ ಶಿವಯೋಗಿನಿ
ಶಿವಲಿಂಗ ಪ್ರಾಣಿ ! ನಿನ್ನ...... ॥ ೧ ॥

ನನ್ನನ್ನು ಕಳಿಸುವದಕ್ಕಿಂತಲೂ ಬೇರೆ ದೂತಿಯೊಬ್ಬಳನ್ನು ಕಳಿಸುವದು ಒಳಿತು.

ಕೌ.– ಅಂಥವಳು ಯಾರಿದ್ದಾಳೆ?

ಮಂ.– ರಾಜರತ್ನ ಶಿಖಾಮಣಿ, ಮಾಳಿ ಎಂಬ ಒಬ್ಬ ಮಾಟಗಾರ್ತಿ–ದೂತಿ ಇದ್ದಾಳೆ. ಹೆಂಗಸರ ಮನಸ್ಸನ್ನು ಒಡೆಸುವದರಲ್ಲಿ ಅವಳಿಗೆ ಸರಿಯಾದವರು ಯಾರೂ ಇಲ್ಲ. ಅವಳು ಇಂಥ ವಿಷಯದಲ್ಲಿ ಬಹು ಕುಶಲಗಾರ್ತಿ. ಅವಳನ್ನು ಕರೆಸಿ ಕೇಳುವದು ಬಹಳ ಹಿತಕರ.

ಕೌ.– ಹಾಗಾದರೆ, ನೀನೇ ಹೋಗಿ ಅವಳನ್ನು ಕರೆದುಕೊಂಡು ಬಾ.

ಮಂ.– ಯಾಕಾಗಬಾರದು. (ತನ್ನಷ್ಟಕ್ಕೆ ತಾನೇ)–ರಾಜರ ಬಿಟ್ಟೀ ಕೆಲಸವೇ ಇಂಥಾದ್ದು. ಮಾಳವ್ವ ಮನೆಯಲ್ಲಿ ಇದ್ದಾಳೋ ಇಲ್ಲವೋ? ಕೇಳಿನೋಡುತ್ತೇನೆ. (ಮುಂದೆ ಹೋಗಿ) ಮಾಳಮ್ಮಾ, ಏ ದೂತೆ?

ದೂತಿ– ಯಾರಲಾ ಅವ, ಕರೆಯಾಂವಾ! ನಾನು ನಿದ್ದಿ ಹತ್ತಿ ಒದ್ದಾಡಲಾಕ ಹತ್ತೀನಿ, ಮ್ಯಾಗ ಇವಂದೊಂದು ಉಪದ್ರ!

ಮಂ.– ಅಲ್ಲ ಬೇSS!

ದೂ.– ಅಲ್ಲ ಬೇಕಾದರೆ ಅಂಗಡಿಗೆ ಹೋಗು.

ಮಂ.– ಹಾಂಗಲ್ಲಬೇSS!!

ದೂ.– ಹಾಂಗರ ಆಗಲಿ, ಹ್ಯಾಂಗರ ಆಗಲಿ; ನಾ ಏನ ಮಾಡ್ಲಿ?

ಮಂ.– ಕೋಪಿಸಬೇಡಮ್ಮಾ.

ದೂ.– ಏನಂದಿ? ನನಗೆ ಅಮ್ಮಾ ಅಂತೀಯಾ? ಯಾವೊಂದು ಬರತಾವು; ಅಮ್ಮಾ ಅಂತ ಕರೀತಾವು. ಲೋಕದಾಗ ನಾನೇ ಮುದುಕಿ ಆಗೀನೇನು?

ಮಂ.– ಬಾಯಿ ನಿಂದೋ, ಬಾಡಗೀದೋ? ಒಂದೇ ಸವನೆ ಬಡಬಡಿಸಲಿಕ್ಕೆ ಹತ್ತಿಯಲ್ಲ; ಸುಮ್ನ ಬರತೀಯೋ? ಆಳ ಹಚ್ಚಬೇಕೋSS?

ದೂ.– ಯಾರಪಾ, ಅವ ಆಳ ಹಚ್ಚಾಂವಾ?

ಮಂ.– ನಾನು ಮಂತ್ರೀಶಾ.

ದೂ.– ಮಂತರಸವಾ? ಮಂತರಸವಾ ಆದರ ಬಾಳ ಚಲೋ ಆತು, ಬಾ ನನ್ನ ಗಂಡಗ ಕುಂದು ಆಗಿ ಮೂರು ದಿನಾ ಆಗೇತಿ. ಮಂತರಸಪ್ಪಾ.

ಇರುವನೆಂದು ಅವಳು ಹೇಳುವಳಲ್ಲವೆ? ಆ ಪತಿ ಯಾರೆಂದು ತಿಳಿದಿರುವಿ?

ದೂ.–ದೊರೆಗಳೇ ಅವನಾರು?

ಕೌ.– ಅವನೇ ನಾನು.

ದೂ.–ಯಾತರ ಮೇಲಿಂದ?

ಕೌ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಧನ್ಯ ಭೂಪತಿಯಾದ ನನ್ನನ್ನೆ ಲಗ್ನವಾಗಬೇಕೆನ್ನುವ ಆಕೆಯ
ಮನಃಪ್ರೀತಿಅರಿತಿರುವೆ ಅಂತರಂಗದ ರೀತಿ,
ಎನ್ನಯ ಅರಸಿ ಆಗಲು ಬಯಸಿ
ನುಡಿವಳೊ ಸರ್ವರನು ಧಿಃಕರಿಸಿ, ಧಿಃಕರಿಸಿ ॥ ೧ ॥

ಏರು :ಏರಿ ಕುದರಿ ನಾ ಸ್ವಾರಿಗ್ಹೈಯುವಾಗ ನಾರಿ ನಿಂತು ತನ್ನ ಮೇಲ್ಮಾಲಿನಲಿ
ನನ್ನನು ನೋಡಿ ನೋಡಿ ನಲಿಯುತಲಿ, ನನ್ನಲ್ಲಿ ಪ್ರೀತಿ ಇರುವಂಥ ರೀತಿ
ತೋರಿಸಿದಳೋ ಜಾಣಿ, ನಸುನಗುತಾ, ಪ್ರೀತಿಗುರ್ತಾ ॥ ೨ ॥

ದೂತೆ, ಆಕೆಯ ಮನಸ್ಸಿನಲ್ಲಿ ನನ್ನನ್ನೇ ಲಗ್ನವಾಗಬೇಕೆಂಬುದು ಇದ್ದುದರಿಂದಲೇ ಎಲ್ಲರನ್ನು ಧಿಕ್ಕರಿಸಿ ಹಾಗೆ ನುಡಿದಿರುವಳು.

ದೂ.–ಹಾಗೆ ಅನ್ನುವದು ಯಾತರ ಮೇಲಿಂದ?

ಕೌ.– ದೂತೆ, ಇಂದು ನಾನು ಬೇಟೆಯನ್ನಾಡಿ ಅರಮನೆಗೆ ಕುದುರೆಯನ್ನೇರಿ ಬರುವಾಗ, ಆಕೆ ಮೇಲುಮಾಳಿಗೆಯ ಮೇಲೆ ನಿಂತು ನನ್ನನ್ನೇ ಎವೆಯಿಕ್ಕದೆ ನೋಡುತ್ತಿದ್ದಳು.

ದೂ.–ನೋಡಿದರೇನಾಯಿತು? ನೋಡಿದರೆ ನಿನ್ನನ್ನು ಪ್ರೀತಿಸಿದಂತಾಯಿತೇ?

ಕೌ.– ಏನೇ ಅದು ಬರಿಯ ನೋಟವಲ್ಲ. ಕಾಮನ ಬೇಟ! ಆಗ ಅವಳ ಮುಖದಲ್ಲಿ ಮುಗುಳುನಗೆ ಮೂಡಿತ್ತು. ಅದರ ಅರ್ಥ ನಿನಗೇನು ಗೊತ್ತು? ಆದರೆ ಈ ಪಟ್ಟಣದ ಅರಸನನ್ನೇ ಲಗ್ನವಾಗಬೇಕು, ಇಲ್ಲದಿದ್ದರೆ ವೀರ–ವಿರಕ್ತಳಾಗಬೇಕು–ಎನ್ನುವದೇ ಅವಳ ಮನದ ನಿಶ್ಚಯವೇ ಹೊರತು ಮತ್ತೇನೂ ಇಲ್ಲ. ನೀನು ಈಗಿಂದೀಗಲೇ ಹೋಗಿ ಅವಳನ್ನು ವಿಚಾರಿಸಿನೋಡು. ಆಗ ನಿನಗೆ ಗೊತ್ತಾಗುತ್ತದೆ ನನ್ನ ಹೇಳಿಕೆಯ ಇಂಗಿತ.

ದೂ.–ಆಯಿತು; ತಾವು ಹೇಳಿದಂತೆ ವಿಚಾರಿಸಿ ನೋಡುತ್ತೇನೆ. ಮಹಾರಾಜರೇ,

ವಿಷಯದ ಸುಖದಾಶಾ, ಆಕಿಗಿಲ್ಲೊ ಲವಲೇಶಾ
ಬಿಡು ಅವಳ ಆಶಾ । ನಿನ್ನ... ... ॥ ೨ ॥

ಶರಣರ ಲೀಲಾ, ಸರ್ವೇಶ ಬಲ್ಲಾ
ಹಟಯಿದು ಸಲ್ಲಾ । ನಿನ್ನ... ... ॥ ೩ ॥

ರಾಜೇಂದ್ರಾ, ನೀನು ಆ ಸುಶೀಲೆಯಾದ ಸಾತ್ವಿಕಿಯನ್ನು ಬಯಸುವೆಯಾ? ಅವಳು ಭೋಗವನ್ನು ಬದಿಗಿಟ್ಟ ಮಹಾಯೋಗಿನಿ! ಅವಳ ಸತ್ವಗುಣದ ಸಾಧುವರ್ತನದ ಕೀರ್ತಿ ಈಗಾಗಲೇ ದಶದಿಕ್ಕುಗಳಲ್ಲಿ ಹಬ್ಬಿಕೊಂಡಿದೆ. ಸಾಕ್ಷಾತ್ ಧರ್ಮಸ್ವರೂಪಿಯಾದ ಆ ಸಾತ್ವಿಕಿಯನ್ನು ಬಯಸುವದು ಕುಂಟದಾಸನು ವೈಕುಂಠಕ್ಕೆ ಆಸೆ ಮಾಡಿದಂತೆ! ಹೆಳವನು ಹೆಮ್ಮರದ ತುದಿಯಲ್ಲಿರುವ ಹಣ್ಣಿಗೆ ಕೈ ಮಾಡಿದಂತೆ!! ಅಂಥವಳಿಗಾಗಿ ಆಸೆ ಮಾಡುವದು ತರವಲ್ಲ. ತಿಳಿದು ನೋಡು.

ಕೌ.– ಏನೇ ದೂತಿ, ಈ ಭೂಮಿಯಲ್ಲಿ ಅರಸನ ಆಸೆಗೆ ಅಂತಕವುಂಟೆ? ಸಾಮಾನ್ಯವಾಗಿ ವೈರಾಗ್ಯ ಬರುವದು ಇಲ್ಲದ್ದಕ್ಕಾಗಿ, ನೀನು ಅವಳಲ್ಲಿಗೆ ಹೋಗಿ ನಾನು ಹೇಳಿದ ವಾರ್ತೆಯನ್ನು ಆಕೆಗೆ ತಿಳಿಸು; ಆಗ ಆಕೆಗೆ ಆಗುವ ಆನಂದವನ್ನು ನೀನೇ ನೋಡುವಿಯಂತೆ! ಬಡವನನ್ನು ಭಾಗ್ಯದ ರಾಶಿಯ ಮೇಲೆ ಕೂಡ್ರಿಸಿದಂತೆ ಆಗುತ್ತದೆ ಅವಳ ಸ್ಥಿತಿ! ಮಲಗಲಿಕ್ಕೆ ಹುಲ್ಲಿನ ಚಾಪೆ, ತಿನ್ನಲಿಕ್ಕೆ ಕಮ್ಮನ್ನ ಕಜ್ಜಾಯ ಕಾಣದ ಆ ಸಾತ್ವಿಕಿ ಏಕಛತ್ರಾಧಿಪತಿಯಾದ ನನ್ನ ಕೈ ಹಿಡಿಯದೇ ಬಿಟ್ಟಾಳೆ? ನನ್ನ ಅರಮನೆಯ ವಾಸ ಅವಳಿಗೆ ಸ್ವರ್ಗದ ಕಲ್ಪನೆ ತಂದುಕೊಡುವದು. ಅವಳು ಇಂಥ ಸೌಖ್ಯವನ್ನು ಹೊಂದಲು ಹಿಂಜರಿಯುವಳೇನೆ ಹುಚ್ಚಿ? ಹೆಚ್ಚಿನ ಮಾತು ನಿನಗೇಕೆ? ಸುಮ್ಮನೆ ಹೋಗಿ, ಅವಳನ್ನು ಒಡಂಬಡಿಸಿಕೊಂಡು ಬಾ.

ದೂ.–ಪ್ರಭುಗಳೆ, ನಾನು ಹುಚ್ಚಿಯಲ್ಲ; ನಿನಗೆ ಮಾತ್ರ ಹಿಡಿದಿದೆ ಹೆಣ್ಣಿನ ಹುಚ್ಚು! ಆ ಹುಚ್ಚು ನೆತ್ತಿಗೇರಿ ಹೀಗೆ ಮಾತಾಡುತ್ತಿರುವಿರಿ. ಅವಳು ನಾಡಾಡಿಹೆಂಗಸಲ್ಲ. ಶಿವಪೂಜೆ, ಶಿವಧ್ಯಾನ, ಶಿವಭಜನೆಯಲ್ಲಿ ತೊಡಗಿರುವ ಶಿವಯೋಗಿನಿ ಆಗಿದ್ದಾಳೆ. ಅವಳನ್ನು ಕೇಳಿದರೆ ತಕ್ಕ ಉತ್ತರ ಕೊಡೆದೆ ಇರಲಾರಳು.

ಕೌ.– ಏನೆಂದು ಉತ್ತರ ಕೊಡುವಳು?

ದೂ.–ಅವಳು ಕೊಡುವ ಉತ್ತರ ಇಷ್ಟೆ–'ನನಗೊಬ್ಬ ಪತಿ ಇದ್ದಾನೆ; ನನಗೆ ಮದುವೆ ಆಗಿದೆ'–ಎಂದು.

ಕೌ.– ದೂತೆ, ಆಕೆಯ ಮನೋಗತವೇ ನಿನಗೆ ತಿಳಿದಿಲ್ಲ. ನನಗೊಬ್ಬ ಪತಿ

೧೧
ಸಾತ್ವಿಕಿ ಮಂದಿರ ಪ್ರವೇಶ

ದೂ.– ಅಮ್ಮಾ ಧರ್ಮದೇವಿಯವರೇ,

ಸಾತ್ವಿಕಿ– ತಾಯಿ ನೀನಾರು?

ದೂತೆ.– ಅಮ್ಮಾ, ನಾನು ರಾಜದೂತಿ.

ಸಾ.– ನೀನೇಕೆ ಬಂದೆ?

ದೂ.– ಅಮ್ಮಾ, ಕೆಲಸವಿರುವದು.

ಸಾ.– ಅದೇನಿರುವದು?

ದೂ.– ಅಮೃತಕ್ಕಿಂತಲೂ ರುಚಿಕರವಾದ ಒಂದು ವಾರ್ತೆಯನ್ನು ತಂದಿರುವೆನು. ಅದನ್ನು ಹೇಳಿದರೆ ಬಹುಮಾನ ಏನು ಕೊಡುವಿರಿ?

ಸಾ.– ಅದು ಶುಭವಾರ್ತೆ ಇದ್ದರೆ, ಬೇಡಿದ ಬಹುಮಾನ ಕೊಡುವೆ. ಅದೇನು ಹೇಳು?

ದೂ.– ತಾಯಿ, ಹೇಳುವದೇನು; ನಿನ್ನ ಪೂರ್ವಜನ್ಮದ ಪುಣ್ಯ ದೊಡ್ಡದಿರಬೇಕು! ಈ ಊರ ದೊರೆಯಾದ ಕೌಶಿಕ ಮಹಾರಾಜನು ಇರುವನಲ್ಲವೆ?

ಸಾ.– ಹೌದು ಇದ್ದಾರೆss....

ದೂ.– ಪದ : ತಾಳ : ಕೇರವಾ ; ಮಿಶ್ರಕಾಪಿ

ತೆರೆಯಿತು ನಿನ್ನ ದೈವ ಕೌಶಿಕ ಮಾನುಭಾವss
ಇಟ್ಟಾನು ತಾನು ಮೋಹ ॥ ಪಲ್ಲ ॥

ಅವನ ಪಟ್ಟದ ರಾಣಿ, ಆಗುವಿ ನೀ ಜಾಣಿ
ಅವನಂಥ ಭೂಪತಿವಲ್ಲಭ, ನಿನಗಾಗಬೇಕಾದ್ರ ನಶೀಬ
ಉಡುತೊಡುವಿ ಮುತ್ತಿನ ದಿವ್ಯ ಡಾಬ
ಸುಂದರಿ ತಿಳಿಸೆ ಮನಸಿನ ಹದನ
ತಿಳಿಸಲು ಕಳಿಸಿಹ ಅವ ತಾನ ॥ ೧ ॥

ತಾವು ನನ್ನನ್ನೇ ಅವಳ ಬಳಿಗೆ ಕಳಿಸಿರುವಿರೆಂದು ಹೇಗೆ ಗೊತ್ತಾಗಬೇಕು? ಏನಾದರೊಂದು ಗುರುತು ಕೊಟ್ಟರೆ ಒಳ್ಳೇದು.

ಕೌ.– ಹಾಗೆ ಆಗಲಿ, ತೆಗೆದುಕೊ ಈ ಮುತ್ತಿನ ಹಾರವನ್ನು. ಹೋದ ಕಾರ್ಯ ಪೂರೈಸಿಕೊಂಡು ಬಂದೆಯಾದರೆ ನಿನಗೆ ಬೇಡಿದ್ದನ್ನು ಕೊಡುತ್ತೇನೆ.

◆

ಸಾ.– ಪದ : ತಾಳ : ದಾದರಾ, ರಾಗ : ಭೀಮಪಲಾಸ

ಛೀ ಛೀ ಪಾಪಿ, ಅಸುರ ರೂಪಿ
ತಂದಿ ಎಂಥ ವಾರ್ತೆಯ, ನಿನಗೆ ಕಲಿಪೆ ನೀತಿಯ ॥ ಪಲ್ಲ ॥

ಛೀ ಛೀ ಘನ್ನಘಾತಕಿ, ನಿಜದಿ ಪರಮಪಾತಕಿ
ಸತ್ಯ ಶೀಲೆ ನನ್ನ ಮೇಲೆ (ದುಗುಣ)
ಹಾಕಲಿಂಥ ಹಂಚಿಕಿ, ಬರದೆ ನಿನಗೆ ನಾಚಿಕಿ ॥ ೧ ॥

ನಾನು ಅಲ್ಲ ಭೋಗಿನಿ, ಶುದ್ಧ ಶಿವಯೋಗಿನಿ
ನಿನ್ನ ಭೂಪ ಮದನ ರೂಪ
ಎನಗೆ ಕೊಟ್ಟ ತಾಪವಾ, ಯಾಕೆ ಹೊಂದುವಿ ಶಾಪವಾ ॥ ೨ ॥

ಏನೇ ನೀಚಸ್ತ್ರಿಯಳೆ, ಈ ಸಂಸಾರ ಸುಖವೆಲ್ಲ ಸುಳ್ಳೆಂದು ತಿಳಿದು, ಅದರ ಆಸೆಯನ್ನು ಸಮೂಲವಾಗಿ ಅಳಿದು, ಸತ್ಯ ಶಿವನೇ ಗತಿಯೆಂದು ಶಿವನಿಗೆ ಶರಣು ಹೋದ ಶಿವಶರಣರೆಲ್ಲಾ ಇಂಥ ಮಿಥ್ಯಾ ವೈಭವಗಳಿಗೆ ಮನಸ್ಸು ಮಾಡುವರೇ? ಶರಣ ಪಥದಲ್ಲಿ ಮುನ್ನಡೆವ ನನಗೆ 'ಯಕಶ್ಚಿತ್' ರಾಜನೊಬ್ಬನೊಡನೆ ಮದುವೆಯಾಗೆಂದು ಬೋಧಿಸಲು ನಿನಗೆ ನಾಚಿಕೆ ಬರುವದಿಲ್ಲವೆ? ಏಳು, ಇಲ್ಲಿಂದ ಏಳು. ನಾನು ನರಕಾಯದ ಪತಿಯನ್ನು ಮದುವೆಯಾಗತಕ್ಕವಳಲ್ಲ; ಸ್ಥಿರಕಾಯದ ಪತಿಯನ್ನು ಹೊಂದತಕ್ಕವಳು. ಹುಟ್ಟಿಸಾಯುವ ಗಂಡನನ್ನೊಯ್ದು ಬೆಂಕಿಯಲ್ಲಿ ಚೆಲ್ಲಿ ಸುಡಬೇಕು. ಆ ಪರಮಾತ್ಮನನ್ನೇ ನಂಬಿ, ಅವನನ್ನೇ ಮದುವೆಯಾಗಬೇಕೆಂದಿದ್ದೇನೆ. ರಾಜನೊಡನೆ ಮದುವೆಯಾಗುವದು ನನ್ನಿಂದ ಸಾಧ್ಯವಿಲ್ಲವೆಂದು ನಿಮ್ಮ ರಾಜನಿಗೆ ತಿಳಿಸು, ನಡೆ ಇಲ್ಲಿಂದ. (ದೂತೆಯ ಕಿವಿ ಹಿಂಡುವಳು.)

ದೂ.– ಅಯ್ಯಯ್ಯ! ತುಸಾನ ಜಗ್ಗ ನಮ್ಮವ್ವಾ! ಎಲ್ಲ್ಯಾರ ಕಿವಿ ಕಿತ್ತಾವು.

ಸಾ.– ತುಸು ಆದರೆ ಬುದ್ಧಿ ಬರುವದಿಲ್ಲ. ಅದಕ್ಕೆಂದೇ ಸರಿಯಾಗಿ ಜಗ್ಗಿದೆ ಹೋಗು,

ದೂ.– ಹೋಗತೀನಿ ಬಿಡು ನಮ್ಮವ್ವಾ, ಚಲೋ ಇನಾಮ ಸಿಕ್ಕಿತು. (ಹೋಗುವಳು)

♦

ಅರಸನ ಕರಹಿಡಿ, ಹರುಷದಿಂದಿರು ನಡಿ
ಚಿನ್ನದ ಅರಮನೆ ಮಾಲಿನಲ್ಲಿ
ಸ್ವರ್ಗ ಲೋಕದ ರಂಭೆ ತೆರದಲ್ಲಿ
ನೀನಿರುವೆ ॥ ೨ ॥

ಕೌಶಿಕ ಮಹಾರಾಜನ ಸೌಭಾಗ್ಯದ ಸಂಗತಿಯನ್ನು ನೀನು ತಿಳಿದು ಬಲ್ಲೆ. ಈ ಭರತ ಖಂಡಕ್ಕೆ ಅವನೇ ಬಲಿಷ್ಠ ; ಅವನೇ ಭಾಗ್ಯಶಾಲಿ. ಅವನ ದೌಲತ್ತನ್ನು ಹೊಗಳುವದು ಕಾಳಿದಾಸನಂಥ ಮಹಾ ಕವಿಗೂ ಅಸಾಧ್ಯ. ಹೀಗಿದ್ದಾಗ ನನ್ನಂಥವಳ ಪಾಡೇನು? ಅವನಂತಹ ರಾಜನು ಹಿಂದೆಂದೂ ಹುಟ್ಟಿಲ್ಲ. ಮುಂದೆಂದೂ ಹುಟ್ಟಲಾರ. ಅವನ ಸೌಂದರ್ಯದ ಮುಂದೆ ಕಾಮನ ಸೌಂದರ್ಯವನ್ನು ನಿವಾಳಿಸಿ ಚೆಲ್ಲಬೇಕು.

ಸಾ.– ಸಾಕುಮಾಡು ನಿನ್ನ ಬಣ್ಣನೆಯನ್ನು. ಅದೇ ಏನು ನಿನ್ನ ಶುಭವಾರ್ತೆ? ಅವನು ಮೆರೆದು ಉಣ್ಣುವ ಅರಸನಿದ್ದರೇನು? ತಿರಿದು ಉಣ್ಣುವ ತಿರುಕನಿದ್ದರೇನು? ಪರರ ಸುದ್ದಿ ನಮಗ್ಯಾಕೆ ಬೇಕು?

ದೂ.– ಪರರ ಸುದ್ದಿ ಆಗಿದ್ದರೆ ನಿನ್ನ ಮುಂದೆ ಹೇಳುತ್ತಿದ್ದಿಲ್ಲ.

ಸಾ.– ಪರರ ಸುದ್ದಿ ಆಗದಿದ್ದರೆ, ನಿನ್ನ ಸುದ್ದಿಯೆ?

ದೂ.– ನನ್ನ ಸುದ್ದಿಯಂತೂ ಅಲ್ಲ.

ಸಾ.– ಹಾಗಾದರೆ ಯಾರದು?

ದೂ.– ಅದು ನಿನ್ನ ಸುದ್ದಿ.

ಸಾ.– ನನ್ನ ಸುದ್ದಿ ಹೇಗೆ? ಅರಸನ ಸುದ್ದಿ ನನ್ನ ಸುದ್ದಿ ಆಗದು.

ದೂ.– ಅರಸನದಲ್ಲ; ನೀನು ಅರಸನ ಅರಸಿಯಾಗತಕ್ಕವಳು. (ಮುತ್ತಿನ ಹಾರವನ್ನು ಕೊಡಲು ಹೋಗುವಳು.)

ಸಾ.– ನಾನಾವ ಅರಸನ ಹೆಂಡತಿ? ಯಾರ ಹಾರವೆಂದು ನಾನಿದನ್ನು ಹಿಡಿಯಬೇಕು?

ದೂ.– (ನಗುತ್ತ) ಇದು ಕೌಶಿಕ ಮಹಾರಾಜನದು.

ಸಾ.– ಇದನ್ನೇಕೆ ತಂದೆ? ನೀ ಇಲ್ಲಿಗೇತಕ್ಕೆ ಬಂದೆ?

ದೂ.– ಇದನ್ನು ತಮಗೆ ತೋರಿಸಲಿಕ್ಕೆ ತಂದೆ ತಾಯಿ. ಮತ್ತು ಅವನ ಮಡದಿಯಾದರೆ ಒಳಿತೆಂದು ತಮಗೆ ಹೇಳಲಿಕ್ಕೆ ಬಂದೆ.

ಮಂತ್ರಿ–(ಪ್ರವೇಶಿಸಿ) ರಾಜೇಂದ್ರಾ, ನಮಸ್ಕರಿಸುತ್ತೇನೆ.

ಕೌ.– ಮಂತ್ರಿವರ್ಯಾ, ಉಪಚಾರಕ್ಕೆ ಈಗ ಸಮಯವಿಲ್ಲ. ಅಪಮಾನದ ಬೆಂಕಿ ಹತ್ತಿ ಉರಿಯುತ್ತಿದೆ. ಈಗ ನಿನ್ನಿಂದ ಮಹತ್ವದ ಕಾರ್ಯವೊಂದು ಆಗಬೇಕಾಗಿದೆ.

ಮಂ.– ಜೀಯಾ, ಅಂಥ ಮಹತ್ವದ ಕಾರ್ಯ ಯಾವುದಿರುವದು?

ಕೌ.– ಹೇಳುತ್ತೇನೆ ಕೇಳು :

ಪದ : ತಾಳ : ದಾದರಾ ; ರಾಗ : ಭೀಮಪಲಾಸ

ಶೆಟ್ಟಿ ನಿರ್ಮಲ ನೀಚನ, ಕಟ್ಟಿ ತರುವದೀಕ್ಷಣ ॥ ಪಲ್ಲ ॥

ಎನ್ನ ಆಜ್ಞೆ ಪಾಲನ ಮಾಡದ ಮದಾಂಧನ
ತಹುದು ಶೀಘ್ರ, ತಡೆಯೆ ಉಗ್ರ
ಕೋಪಜ್ವಾಲೆ ಎನ್ನನಾ । ಕಟ್ಟಿ ತರುವದೀಕ್ಷಣ ॥ ೧ ॥

ಆಜ್ಞೆ ಭಂಗದಾ ಫಲ, ಭೋಗಿಸಲು ಆ ಕಲಾ
ಇಳೆಯಪಾಲನೆನ್ನ ಹಳಿವ (ದುಗುಣ)
ನೋಡುದೀಗ ಅವನ ಚಲ। ಕಟ್ಟಿ ತರುವದೀಕ್ಷಣ ॥ ೨ ॥

ಹೊನ್ನಿಕೇರಿವಾಸನ, ಪನ್ನಗೇಂದ್ರಭೂಷನ
ಸನ್ನುತಾಂಘ್ರಿಯನ್ನು ಭಜಿಸಿ (ದುಗುಣ)
ಪಯಣ ತಾಳೊ ಪ್ರಧಾನ ! ಕಟ್ಟಿ ತರುವದೀಕ್ಷಣ ೩

ಮಂತ್ರಿವರ್ಯಾ, ಆಜ್ಞಾಭಂಗವು ಅರಸನಿಗೆ ಮರಣಪ್ರಾಯವೆಂಬುದು ನಿನಗೆ ಗೊತ್ತಿದ್ದ ಮಾತು. ರಾಜಾಧಿರಾಜನೆನಿಸಿಕೊಂಡು ನನ್ನ ಅಪ್ಪಣೆಯನ್ನು ಮೀರಲು ಮಾಂಡಲಿಕ ದೊರೆಗಳು, ಸಾಮಂತರು, ಸುಭೇದಾರರು ಗಡಗಡನೆ ನಡುಗುತ್ತಿದ್ದಾರೆ. ನನ್ನ ಸಾಹಸಕಾರ್ಯಕ್ಕೆ ಮೆಚ್ಚಿದ ಛಪ್ಪನ್ನ ದೇಶದ ದೊರೆಗಳು ನಮ್ಮೊಡನೆ ಶರೀರಸಂಬಂಧ ಬೆಳೆಸಲು ಹಾತೊರೆಯುವಾಗ ಆ ಬಡಿವಾರದ ಬಾಲಿ ಸಾತ್ವಿಕಿ ನನ್ನನ್ನು ಧಿಕ್ಕರಿಸಿ ನುಡಿದಳಂತೆ. ಅವಳ ಸೊಕ್ಕುನೆತ್ತಿಗೇರಿರಬೇಕು! ನೀನು ಈ ಕ್ಷಣವೆ ಹೋಗಿ ಅವಳನ್ನು ಬಂಧಿಸಿಕೊಂಡು ಬಾ. ಮುಂದಿನ ವ್ಯವಸ್ಥೆಯನ್ನು ನಾನು ನೋಡಿಕೊಳ್ಳುತ್ತೇನೆ. (ಹೋಗುವನು)

ಮಂ.–(ತನ್ನಷ್ಟಕ್ಕೆ ತಾನೇ) ಆಗಲಿ; ರಾಜನ ಅಪ್ಪಣೆಯಂತೆ ನಾನೀಗ ನಿರ್ಮಲನ ಮನೆಗೆ ಹೋಗಲೇಬೇಕು. ಬಿಟ್ಟರೆ ನಡೆಯುವಂತಿಲ್ಲ. ನ್ಯಾಯದ ಮುಂದೆ ಅನ್ಯಾಯ ಎಂದೆಂದೂ ನಡೆಯದು. ಕಾಮಿಯಾದ ಕೌಶಿಕನು ಅನ್ಯಾಯಕ್ಕೆ

೧೨
ಅರಮನೆಯ ಪ್ರವೇಶ

ಕೌಶಿಕ.–(ತನ್ನಷ್ಟಕ್ಕೆ) ದೂತಿ ಇನ್ನೂ ಏಕೆ ಬಂದಿರಲಿಕ್ಕಿಲ್ಲ. ಹೀಗಿರಬೇಕು; ಸುವಾರ್ತೆಯನ್ನು ಒಯ್ದ ದೂತಿಗೆ ಸತ್ಕಾರ ಮಾಡದೆ ಬಿಟ್ಟಿರಲಿಕ್ಕಿಲ್ಲ. ಆ ಸಾತ್ವಿಕಿಯು ನನ್ನ ಪಟ್ಟದರಸಿಯಾಗುವೆನೆಂಬ ಉತ್ಸಾಹದಲ್ಲಿ ಆನಂದ ಭರಿತಳಾಗಿ ದೂತಿಯನ್ನು ಸ್ವಲ್ಪಹೊತ್ತು ನಿಲ್ಲಿಸಿಕೊಂಡಿರಬೇಕು... ಇದೇನು! ದೂತಿ ಇಲ್ಲಿಯೆ ಬಂದಳಲ್ಲ!!

ದೂತಿ.–(ಪ್ರವೇಸಿಸಿ) ರಾಜೇಂದ್ರಾ, ತಮ್ಮ ಪಾದಕಮಲಕ್ಕೆ ನಮಸ್ಕಾರ.

ಕೌ.– ದೂತೆ, ಬಂದೆಯಾ?

ದೂ.– ನನ್ನ ಗಂಡನ ಹೊಟ್ಟಿ ತಣ್ಣಗಿರಬೇಕು; ಅದಕ್ಕs ಉಳಿದು ಬಂದೆ.

ಕೌ.– ಏಕೆ ಏನಾಯಿತು? ನೀನು ಹೋದ ಕೆಲಸ ಆಯಿತೆ?

ದೂ.– ನೆಟ್ಟಗೆs ಪಸಂದ ಆತು. ಕಸುರು ಏನೇನೂ ಉಳಿಯಲಿಲ್ಲ. ನಾ ಹೋಗಿ ಸಾವಕಾಶ ಮಾತು ತೆಗೆದೆ. ತಮ್ಮ ಹೆಸರನ್ನು ಹೇಳಿದ ಕೂಡಲೇ ಆಕೆಗೆ ಎಷ್ಟು ಅಕ್ಕರತಿ ಆತು ಅಂದ್ರ, ಬಂದಾಕೀನ ಕಿವಿಗೇ ಗಂಟ ಬಿದ್ಲು.

ಕೌ.– ಕಿವಿಗೆ ಯಾಕೆ?

ದೂ.– ಸವಿಸವಿ ಮಾತು ಕಿವ್ಯಾಗ ಹೇಳಾಕ ಹತ್ತಿದಳು. ತಿಳಿತು ತಿಳಿತು–ಅಂತ ನಾ ಎಷ್ಟು ಹೇಳಿದರೂ ಬಿಡಲಿಲ್ಲ. ನಾ ಏನ ಹೇಳಲಿ! ಅವಳು ತಮ್ಮ ಘನತೆಯನ್ನು ಕೊಂಡಾಡುತ್ತ ನನ್ನನ್ನು ತಿರಿವ್ಯಾಡಿ ಬಿಟ್ಟಳು.

ಕೌ.– ಆ ಬಡಿವಾರಿ ನನ್ನನ್ನು ಧಿಕ್ಕರಿಸಿ ನುಡಿದಳೆ? ಅರಸನಿಗೆ ಬಿರುಸಾಗಿ ನುಡಿದ ಆ ಸೆಡವಿನ ಹಣ್ಣನ್ನು ಮುಡಿಹಿಡಿದು ಎಳೆದು ತರಿಸುತ್ತೇನೆ; ಬಡವಿಯ ಸಿಟ್ಟು ದವಡೆಗೆ ಮೂಲ! ಅವಳು ಮಾಡಿದ್ದು ಮಹಾ ಅಪಮಾನ! ಯಕಶ್ಚಿತ್ ಹೆಣ್ಣೊಂದು ಮಹಾರಾಜನ ಅಪ್ಪಣೆ ಮೀರುವದೆಂದರೆ, ಎಂತಹ ಸೊಕ್ಕು ಅವಳಲ್ಲಿ ಇರಬೇಕು!! ದೂತೆ, ನೀನೀಗ ಹೋಗು; ಮಂತ್ರಿಗಳು ಬರಲಿ.

ಮಂತ್ರಿವರ್ಯರೆ, ನೀವೇಂಥ ಅಪದ್ಧ ಮಾತುಗಳನ್ನು ಆಡುವಿರಿ? ನಿಮ್ಮ ರಾಜರು ಭವಿಗಳು, ನಾವು ಶಿವಭಕ್ತರು. ಅವರಿಗೂ ನಮಗೂ ಶರೀರ ಸಂಬಂಧ ಆಗುವ ಬಗೆ ಹೇಗೆ? 'ನಿತ್ಯ ಭವ, ಸತ್ಯ ಶಿವ'–ಎಂಬ ವಚನಾಮೃತವನ್ನು ಉಂಡು ಸತ್ವಶಾಲಿಯಾದ ನನ್ನ ಮಗಳು ಭವಿಗಳ ಶರೀರ ಸಂಬಂಧಕ್ಕೆ ಸಮ್ಮತಿಸುವವಳಲ್ಲ, ಕಾಮಕ್ರೋಧಾದಿಗಳನ್ನು ಈಡಾಡಿ, ಪರಶಿವನೇ ತನ್ನ ಪತಿಯೆಂದು ಭಾವಿಸಿರುವವಳು ರಾಜಭೋಗಕ್ಕೆ ಮರುಳಾಗಬಲ್ಲಳೆ? ಸತ್ಯಶರಣೆಯಾದ ನನ್ನ ಮಗಳು ಹರಪೂಜೆಯನ್ನು ಬಿಟ್ಟು ನರಪೂಜೆಯನ್ನು ಮಾಡುವದಿಲ್ಲ. ಹೀಗಿರಲು ನಿಮ್ಮ ರಾಜನೊಡನೆ ಮದುವೆಯಾಗಲು ಅವಳೆಂತು ಒಪ್ಪಿಗೆ ಕೊಡಬಲ್ಲಳು.

ಮಂ.–ನಿರ್ಮಲ, ನಿನ್ನ ನೀತಿಶಾಸ್ತ್ರದ ಗಂಟನ್ನು ಕಟ್ಟಿಡು. ನಾನು ಹೇಳಿದಂತೆ ಕೇಳು. ರಾಜಾಜ್ಞೆಯನ್ನು ಮೀರುವದು ಹಿತಕರವಲ್ಲ. ರಾಜಾಜ್ಞೆಯಂತೆ ನಡೆದರೆ ನೀನು ಸರ್ವರ ಮನ್ನಣೆಗೆ ಪಾತ್ರನಾಗುವಿ. ಇಲ್ಲದಿದ್ದರೆ ಬಂಧಿತನಾಗುವಿ. ಅವನ ಇಚ್ಛೆಯಂತೆ ವರ್ತಿಸಿದರೆ ನೀನು ಅರಮನೆಯಲ್ಲಿರುವಿ. ಮೀರಿ ನಡೆದರೆ ಸೆರೆಮನೆಯಲ್ಲಿರುವಿ. ತಿಳಿದು ನೋಡಿ ನನಗೆ ಉತ್ತರ ಕೊಡು. ಮಹಾರಾಜರನ್ನು ಎದುರು ಹಾಕಿಕೊಂಡು ನಡೆಯುವುದು ತರವಲ್ಲ. ಮಗಳನ್ನು ಮಹಾರಾಜರಿಗೆ ಕೊಟ್ಟು ಅವರ ಪ್ರೀತಿಗೆ ಪಾತ್ರನಾಗುವದು ಉತ್ತಮ. ಈ ಎರಡರಲ್ಲಿ ಒಂದನ್ನು ಆರಿಸಿಕೋ, ನೀನು ಮಹಾರಾಜರ ಇಚ್ಛೆಗೆ ಒಪ್ಪದಿದ್ದರೆ ನಿನ್ನ ಜೀವನವನ್ನೇ ಹಾಳು ಮಾಡಿಕೊಳ್ಳುವಿ. ವಿಚಾರಿಸಿ ನೋಡು. ಮಗಳನ್ನು ಮಹಾರಾಜರಿಗೆ ಒಪ್ಪಿಸಲು ಒಪ್ಪದಿದ್ದರೆ ನಿನ್ನನ್ನು ಹೆಡಮುರಿಗೆ ಕಟ್ಟಿ ಒಯ್ಯಬೇಕಾಗುವದು; ಎಚ್ಚರವಿರಲಿ!

ನಿ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ನೀಚ ಆಡದಿರಿಂಥ ಬಿರುನುಡಿ
ಕಟ್ಟೊ ಕಟ್ಟೊ ಎನ್ನನೀಗಲೇ ಹೆಡಮುಡಿ ॥ ಪಲ್ಲ ॥

ಭೂಪರ ಭೀತಿ ಇನಿತಿಲ್ಲೊ ನೀತಿ–
ವಂತ ಶಿವಶರಣರ ಜಾತಿ
ಪಾಪಕ್ಕೆ ಭೀತಿಗೊಳ್ಳುವದು ನೀತಿ
ಇರುವದು ಜಗದೊಳು ಪ್ರಖ್ಯಾತಿ ॥ ೧ ॥

ಕೈ ಹಾಕಿದ್ದಾನೆ, ಇರಲಿ; ಆಹಾ! ಇಲ್ಲಿಯೇ ಬಂದಿತಲ್ಲ ನಿರ್ಮಲನ ಮನೆ! ನಿರ್ಮಲ, ನಿರ್ಮಲ....

ನಿರ್ಮಲ–(ಹೊರಗೆ ಬಂದು) ಯಾರವರು?

ಮಂ.– ನಾನು ರಾಜಮಂತ್ರಿ!

ನಿ.– ಓಹೋ, ರಾಜಮಂತ್ರಿಗಳೇ ! ತಾವು ಒಳಗೆ ಬರಬೇಕು. ಬಡವರ ಮನೆಗೆ ಒಡೆಯರ ಆಗಮನವೆಂದರೆ ಅದೊಂದು ಭಾಗ್ಯವೇ ಸರಿ! ಬಂದು ಈ ಆಸನವನ್ನು ಅಲಂಕರಿಸಬೇಕು; ಬಂದ ಕಾರಣವನ್ನು ನಿರೂಪಿಸಬೇಕು.

ಮಂ.– ನಿರ್ಮಲ, ಮೊದಲು ನನ್ನ ಮಾತನ್ನು ಕೇಳಿರಿ. ಭೂಮಂಡಲಕ್ಕೆ ಒಡೆಯರಾದ ನಮ್ಮ ಕೌಶಿಕ ಮಹಾರಾಜರು ನಿಮ್ಮ ಬಳಿಗೆ ಕಳಿಸಿದ್ದಾರೆ.

ನಿ.– ಕೌಶಿಕ ಮಹಾರಾಜರು ಕಳಿಸಿರುವರೆ! ಏಕೆ ಕಳಿಸಿರುವರು? ಕಾರಣವೇನು?

ಮಂ.– ಶರಣರೇ, ತಮ್ಮ ಭಾಗ್ಯದ ಬಾಗಿಲು ತೆರೆದು ನಿಂತಂತೆ ಕಾಣುತ್ತದೆ. ನಮ್ಮ ದೊರೆಗಳು ನಿಮ್ಮ ಮಗಳ ಸದ್ಗುಣಕ್ಕೆ ಮೆಚ್ಚಿ ಅವಳನ್ನು ಮದುವೆಯಾಗಲು ಬಯಸಿದ್ದಾರೆ. ಅದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ಹೇಳಿ ಕಳಿಸಿದ್ದಾರೆ.

ನಿ.– ಮಂತ್ರಿವರ್ಯಾ, ಹೇಳುತ್ತೇನೆ ಕೇಳು :

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಭ್ರಾಂತಿಯುತ ಮಂತ್ರಿ ನೀ, ಎಂಥ ಅಪದ್ಧ ನುಡಿ
ನಿಂತು ಎನ್ನಿದಿರೊಳು ಆಡಿದಿಯೋ
ಭವಿಗೆ ನೀನೆನ್ನ ಮಗಳ ಬೇಡಿದಿಯೋ
ಶಿವಭಕ್ತರಿಗೀ ಭವಿಯೆನಿಪರಿಗೀ
ಶರೀರ ಸಂಬಂಧ ಆಗು ಬಗೆಯಲ್ಲೋ ತಗೆ ೧

ಭವ ಭೋಗಿನಿಯಲ್ಲ, ಶುದ್ಧ ಶಿವಯೋಗಿನಿ
ನನ್ನ ಮುದ್ದು ಮಗಳ ಲೀಲಾ, ಶಿವ ಬಲ್ಲಾ
ಕಾಯದ ಸುಖದಾಸೆ ಆಕಿಗಿಲ್ಲಾ
ಕಾಮನ ಗೆಲಿದು, ವೈರಾಗ್ಯ ಬಲಿದು
ನಲಿವ ಸಾತ್ವಿಕಿ ಕೇಳ್ವುದು ಸಲ್ಲಾ, ಪೃಥ್ವೀಪಾಲಾ ೨

ಸಾ.– ಏನೆಂದು?

ಮಂ.– 'ನೀನು ಹೋಗಿ, ಸಾತ್ವಿಕಿಯನ್ನು ಲಗ್ನಮಾಡಿಕೊಡಬೇಕೆಂದು ಅವಳ ತಂದೆಯನ್ನು ಕೇಳು. ಆತ ಒಪ್ಪಿದರೆ ಒಳ್ಳೆಯದು. ಇಲ್ಲದಿದ್ದರೆ ಹೆಡಮುರಿಗೆಕಟ್ಟಿ ಎಳೆದುಕೊಂಡು ಬಾ'–ಎಂದು

ಸಾ.– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಅಭವಾಽ, ಗಿರಿಜಾಧವಾಽಽ, ಸುಡುಸುಡು ಎನ್ನ ಜನ್ಮವ ॥ ಪಲ್ಲ ॥

ತಂದೆತಾಯಿಗಳಿಗೆ ಕಷ್ಟಾ
ತಂದು ಇಡುವಂಥಾ ಭ್ರಷ್ಟಾ
ಕಂದನುದಿಸಿದೆನೊ ಪಾಪಿಷ್ಟಾ । ಸುಡು ಸುಡು.......... ॥ ೧ ॥

ಬಿಡು ಎನ್ನ ತಂದೆಯ ಮೂಢ
ನಡೆ ಬರುವೆ ನಿನ್ನ ಕೂಡ
ಪರಪೀಡೆಯಲ್ಲೊ ಹಿತವು । ಸುಡು ಸುಡು...... ॥ ೨ ॥

ಘೋರ ಕರ್ಮಕ್ಕೆ ಗುರಿ
ಆಗುವ ನಿಮ್ಮ ದೊರಿ
ಪರರ ಪೀಡಿಸಲೀ ಪರಿ । ಸುಡು ಸುಡು....... ॥ ೩ ॥

ಶಿವಶಿವಾ, ಎನ್ನ ಮುದ್ದು ತಂದೆಯ ಬಂಧನಕ್ಕೆ ನಾನೇ ಕಾರಣಳಾದೆ. ಮಂತ್ರಿಗಳೇ, ನನ್ನ ತಂದೆಯನ್ನು ಬಂಧಿಸಬೇಡಿರಿ. ನಿರಪರಾಧಿಯನ್ನು ಬಂಧಿಸುವದು ಸರಿಯಲ್ಲ. ಮದುವೆಯ ವಿಷಯ ನನಗೆ ಸಂಬಂಧಪಟ್ಟುದು; ಅದಕ್ಕೆ ಪರರು ಹೊಣೆಗಾರರಲ್ಲ. ನಿಮ್ಮ ಅರಸರು ಒಪ್ಪಿದರೆ, ನಾನು ಅವರಿಗೆ ಭೆಟ್ಟಿಯಾಗುತ್ತೇನೆ. ಈ ವಿಚಾರವನ್ನು ನಿಮ್ಮ ಅರಸರಿಗೆ ತಿಳಿಸಿರಿ.

ಮಂ.– ಯಾಕಾಗಲೊಲ್ಲದು. (ತನ್ನಷ್ಟಕ್ಕೆ) ರಾಜರ ಸೇವೆ ಗೊಂದಲಮಯವಾದುದು. ಮಾಡಿದರೂ ಕಷ್ಟ! ಬಿಟ್ಟರೂ ಕಷ್ಟ! ನಾನೀಗ ಹೋಗಿ ರಾಜಸನ್ನಿಧಿಯಲ್ಲಿ ಇದ್ದುದನ್ನು ಇದ್ದಂತೆ ಹೇಳಿದರಾಯಿತು. ಮಹಾರಾಜರು ಇಲ್ಲಿಯೇ ವಿಶ್ರಮಿಸಿದ್ದಾರೆ. ರಾಜೇಂದ್ರಾ, ನಮಸ್ಕರಿಸುತ್ತೇನೆ.

ಕೌಶಿಕ– ಮಂತ್ರಿ, ಹೋದ ಕಾರ್ಯ ಏನಾಯಿತು?

ಮಂ.– ಹೋದ ಕಾರ್ಯ ಸರಿಯಾಯಿತು.

ಕೌ.– ಏನು, ನಿರ್ಮಲನು ತನ್ನ ಮಗಳನ್ನು ಕೊಡಲು ಒಪ್ಪಿದನೆ? ಅದಕ್ಕೆ ಸಾತ್ವಿಕಿ ಸಮ್ಮತಿಸಿದಳೆ?

ಮಿಡುಕುವನಲ್ಲ ನಿನ್ನ ಬಂಧನಕ್ಕೆ
ನಾ ಹುಡುಕುವನಲ್ಲೊ ಹಂಚಿಕೆ ಇದಕೆ
ನುತ ಜನಪಾಲಾ, ಗೌರಿಯ ಲೋಲಾ
ಆತನಗೆ ಗತಿ ಎನಗನುಗಾಲಾ ॥ ೨ ॥

ಎಲೋ ಮಂತ್ರಿ, ವ್ಯರ್ಥವಾಗಿ ಬೊಗಳಬೇಡ. ಸತ್ಯ ಶಿವಶರಣರು ಪಾಪಕ್ಕೆ ಅಂಜುವರೇ ಹೊರತು, ಭೂಪರಿಗೆ ಅಂಜುವವರಲ್ಲ. ಅವರಿಗೆ ವಂದನೆ–ಬಂಧನೆ. ಅರಮನೆ–ಸೆರೆಮನೆ ಸರಿಸಮಾನ. ಅವರು ಸುಖಕ್ಕೆ ಹಿಗ್ಗುವದಿಲ್ಲ; ದುಃಖಕ್ಕೆ ಕುಗ್ಗುವದಿಲ್ಲ. ಸತ್ವಗುಣ ಸಂಪನ್ನರಿಗೆ ಸತ್ವಗುಣ ಕಾಯ್ದುಕೊಳ್ಳುವದೇ ಧರ್ಮ. ಪ್ರಪಂಚದ ಸುಖ–ದುಃಖಗಳಿಗೆ ಅವರು ಮಿಡುಕುವದಿಲ್ಲ. ಸನ್ಮಾರ್ಗವನ್ನು ಬಿಟ್ಟು ನಡೆಯುವುದು ಅವರ ಗುರಿಯಲ್ಲ. ಇಂತಹ ಶಿವಶರಣರನ್ನು ವಂದಿಸುವಿಯೋ ಬಂಧಿಸುವಿಯೋ, ಏನು ಮಾಡುವಿಯೋ ನೋಡು. ನಿನ್ನ ದೊರೆ ನನ್ನ ಶಿರವನ್ನು ಕೊರೆಯಲು ಇಚ್ಛಿಸಿದರೆ ಕೊರೆಯಲಿ; ಸೆರೆಮನೆಯಲ್ಲಿ ಇರಿಸುವದಾದರೆ ಇರಿಸಲಿ. ಇದಕಾರು ಅಂಜುವರು? ಇದಕಾರು ಅಳುಕುವರು? ನಡೆ ಬರುತ್ತೇನೆ.

ಮಂ.– ನಡೆ, ನಡೆ; ನಿನ್ನ ಸೊಕ್ಕು ಮಿತಿಮೀರಿದೆ; ಹೆಡಮುರಿಗೆ ಬಿಗಿದು ಎಳೆದೊಯ್ಯುತ್ತೇನೆ. (ಬಂಧಿಸತೊಡಗುವನು.)

ಸಾತ್ವಿಕಿ.–(ಪ್ರವೇಶಿಸಿ) ಮಂತ್ರಿವರ್ಯಾ, ನನ್ನ ಮುಪ್ಪಿನ ತಂದೆಯನ್ನು ಬಂಧಿಸಲು ಕಾರಣವೇನು?

ಮ.– ರಾಜಾಜ್ಞೆಯನ್ನು ಮೀರಿ ನಡೆದ ಕಾರಣ.

ಸಾ.– ರಾಜಾಜ್ಞೆಯನ್ನು ಮೀರಿದ್ದು ಹೇಗೆ?

ಮ.– ನಮ್ಮ ಮಹಾರಾಜರು ತಮ್ಮನ್ನು ಬಯಸಿ ದೂತೆಯನ್ನು ಕಳಿಸಿದ್ದು ಗೊತ್ತಿಲ್ಲವೆ?

ಸಾ.– ಗೊತ್ತಿದೆ.

ಮಂ.– ದೂತೆಯ ಮುಂದೆ ಮಹಾರಾಜರನ್ನು ಧಿಕ್ಕರಿಸಿ ನುಡಿದುದು ಸುಳ್ಳೆ?

ಸಾ.– ನಿಜವೆಂದೇ ಇಟ್ಟುಕೊಳ್ಳಿ. ಮುಂದೆ?

ಮಂ.– ಮಹಾರಾಜರು ಈಗ ನನ್ನನ್ನು ತಮ್ಮ ತಂದೆಯ ಬಳಿಗೆ ಕಳಿಸಿ, ಈ ರೀತಿ ಅಪ್ಪಣೆ ಮಾಡಿದ್ದಾರೆ.

೧೩.

ಸಾತ್ವಿಕಿ–ಕೌಶಿಕ ಪ್ರವೇಶ

ಕೌಶಿಕ– ಇನ್ನೂ ಏಕೆ ಬರಲಿಲ್ಲ ಈ ಸಾತ್ವಿಕಿ. ಕ್ಷಣವೊಂದು ಯುಗವಾಗತೊಡಗಿದೆ. ಅವಳನ್ನೇ ಹಾರೈಸಿ ನಿಂತ ಮನಸ್ಸು ತಲ್ಲಣಿಸುತ್ತಿದೆ. ಎಲೆ ಮನವೆ, ತಾಳು, ತಾಳು ; ಬೇಡಿದ್ದು, ಬಯಸಿದ್ದು ಬಯಲಾಗಲಾರದು. ಓಹೋ ಬಂದೇ ಬಿಟ್ಟಳಲ್ಲ ನನ್ನ ಹೃದಯ ಸಾಮ್ರಾಜ್ಞಿ!

ಸಾತ್ವಿಕಿ–(ಪ್ರವೇಶಿಸಿ) ಮಹಾರಾಜರೆ ಕುಶಲವಷ್ಟೇ?

ಕೌ.– ಕುಶಲ ಅಷ್ಟೇ ಏಕೆ, ನಿನ್ನ ಬರುವಿಕೆಯೇ ಎನಗೆ ಸ್ವರ್ಗಸುಖ! ಬಾ, ಸಾತ್ವಿಕಿ, ಸಮೀಪಕ್ಕೆ ಬಾ. ನನ್ನವಳಾಗಿ ನನ್ನ ಮನದ ಬಯಕೆಯನ್ನು ಈಡೇರಿಸು. ನಿನಗಾಗಿ ಸಾರ ಸರ್ವಸ್ವವನ್ನೂ ತ್ಯಾಗ ಮಾಡಲು ಈ ಕೌಶಿಕ ಸಿದ್ಧನಿದ್ದಾನೆ.

ಸಾ.– ಸುಡು ನಿನ್ನ ಸಾರ ಸರ್ವಸ್ವ! ನಿನ್ನ ಕಣ್ಣು ಕಾಮದ ಕಣ್ಣು; ಅರಿವಿನ ಕಣ್ಣಲ್ಲ. ಕಾಮನ ಬಲೆಯಲ್ಲಿ ಬಿದ್ದು ಒದ್ದಾಡುವ ಬದ್ಧ ಪಶುವೆ, ಕಾಮವೊಂದು ಹೊಲೆ. ಚಿತ್ತವಿಟ್ಟು ಕೇಳು :

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಕ್ಷೇಮ ಎಂಬುವದುಂಟೆ ಜಗದೊಳಗೆ
ಕಾಮನನ್ನು ನಂಬಿದ ಮರುಳ ಮನುಜರಿಗೆ ॥ ಪಲ್ಲ ॥

ಹೊಲೆಯಲ್ಲಿ ಜನಿಸಿ, ಹೊಲೆಯನ್ನು ನೆನಿಸಿ
ಹೊಲೆಯನು ಕಾಣುತ ಮಮಕರಿಸಿ
ಈ ಜಗ ಹೊಲೆಯ ನಿಜದಲಿ ಹೊಲೆಯ
ಆತನ ನಂಬಿಗಿಲ್ಲದ ನೆಲೆಯ ॥ ೧ ॥

ಮುಕ್ತಿರಾಜ್ಯಕ್ಕೆ ಮುಳ್ಳಿನ ಬೇಲಿ ಅವನ
ಪ್ರೀತಿ ಇರುವದು ಮೂತ್ರದ ಕುಣಿಯಲಿ
ನಿನ್ನಯ ಕೂಡಿ ಇರುವೆನು ಖೋಡಿ
ಕಾಮನ ಕಡಿ, ಶಿವಮಂತ್ರವ ನುಡಿ ॥ ೨ ॥

ಮಂ.– ಅಹುದು ದೊರೆಯೆ, ಅವಳು ಸಮ್ಮತಿಸಿದ್ದರಿಂದಲೇ ಸಾತ್ವಿಕಿಯನ್ನೂ ಅವಳ ತಂದೆಯನ್ನೂ ಬಿಟ್ಟು ಬಂದೆನು.

ಕೌ.– ಬಿಟ್ಟೇಕೆ ಬಂದೆ? ಸಮ್ಮತಿ ದೊರೆತ ಮೇಲೆ ಅವಳನ್ನು ಕರೆದುಕೊಂಡು ಬರಬಹುದಾಗಿತ್ತಲ್ಲ!

ಮಂ.– ರಾಜೇಂದ್ರಾ, ತಾವು ಅವಳ ಇಚ್ಛಾನುಸಾರವಾಗಿ ವರ್ತಿಸಲು ಒಪ್ಪಿದರೆ ಅವಳು ಸಂತೋಷದಿಂದ ನಿಮ್ಮೆಡೆಗೆ ಬರುವಳಂತೆ. ತಮ್ಮ ಅಭಿಪ್ರಾಯಕ್ಕೆ ಕಾಯುತ್ತಿದ್ದಾಳೆ.

ಕೌ.– ಮಂತ್ರೀ, ಆತ್ಮಸಾಕ್ಷಿಯಾಗಿ ಪ್ರತ್ಯುತ್ತರವನ್ನು ಕೊಡದೆ ಆಕೆಯ ಇಚ್ಛಾನುಸಾರವಾಗಿ ನಡೆಯುವೆನು. ನೀನು ಈ ರೀತಿಯಾಗಿ ಅವಳಿಗೆ ತಿಳಿಸುವಂಥವನಾಗು.

ಮಂ.–ಅಪ್ಪಣೆ. (ಹೋಗುವನು)

◆

ಪ್ರೀತಿಯ ಸೆಲೆ ಒಡೆಯುತ್ತಿದೆ. ಅದಕ್ಕಾಗಿ ಪತಿಯನ್ನು ಪಡೆಯುವದು ಸತಿಯ ಕಾರ್ಯ. ನೀನು ಒಣ ವಾದಕ್ಕೆ ಇಳಿಯಬೇಡ, ಸುಮ್ಮನೆ ನನ್ನನ್ನು ಪತಿಯೆಂದು ಒಪ್ಪಿಕೊ, ಪ್ರೀತಿಯಿಂದ ಅಪ್ಪಿಕೊ; ಅದರಿಂದಲೇ ನೀನು ಸದ್ಗತಿಯನ್ನು ಕಾಣುವಿ.

ಸಾ.–ಛೀ, ನೀಚಾ, ಇಚ್ಛೆಗೆ ಬಂದಂತೆ ಏಕೆ ಒದರುವಿ? ಪತಿಯಿಲ್ಲದವಳು ಪತಿಯನ್ನು ಪಡೆಯಬೇಕು ಆದರೆ ಈಗಾಗಲೇ ಮದುವೆಯಾದವಳಿಗೆ ಮತ್ತೇಕೆ ಪತಿ ಬೇಕು. ನನ್ನ ಮದುವೆಯಾಗಿದೆ; ನನಗೆ ಪತಿ ಇದ್ದಾನೆ. ಅಂತಿಂತಹ ಪತಿಯಲ್ಲ ಅವನು! ಪತಿತರನ್ನು ಪಾವನ ಮಾಡುವ ಪತಿಯಾಗಿದ್ದಾನೆ.

ಕೌ.–ಎಲೆ ಮೂಢ ಹೆಂಗಸೆ, ನಿನ್ನ ಆ ಪೌರುಷದ ಪುರುಷ ಎಲ್ಲಿದ್ದಾನೆ ತೋರಿಸು? ಹುಚ್ಚೆದ್ದು ಇಚ್ಛೆಗೆ ಬಂದಂತೆ ಒದರಿದರೆ ನುಚ್ಚುನೂರಾಗುವಿ. ನಿನ್ನ ಮದುವೆಯಾಗಿಲ್ಲ; ನಿನಗೆ ಮಂಗಳಸೂತ್ರ ಕಟ್ಟಿಲ್ಲ. ಆದರೂ ಪತಿ ಇರುವನೆಂದು ಸುಳ್ಳು ಹೇಳುತ್ತಿ. ಹೇಳು–ಅವನಾರು? ಅವನ ಯೋಗ್ಯತೆಯೇನು?

ಸಾ.–ಮೂಢಾ, ನೀನು ಹತ್ತು ವರುಷ, ತಲೆಕೆಳಗೆ ಮಾಡಿ ತಪಸ್ಸನ್ನಾಚರಿಸಿದರೂ ಪಾಪಿಯಾದ ನಿನಗೆ ನನ್ನ ಪತಿಯ ಇರವು ತಿಳಿಯಲಾರದು. ಆತನು ಕೇವಲ ನನಗೊಬ್ಬಳಿಗೇ ಪತಿಯಲ್ಲ.. ನಿನಗೂ ಪತಿ : ನಿನ್ನ ಹೆಂಡತಿಗೂ ಪತಿ: ಈ ಲೋಕಕ್ಕೂ ಪತಿ; ಅವನೇ ನಿಜವಾದ ಜಗತ್ಪತಿ! ಇಂಥ ಪತಿಯನ್ನು ಪಡೆಯದವರಿಗೆ ಮಾತ್ರ ಗತಿಯಿಲ್ಲ. ನನ್ನ ಪತಿ ನಿನ್ನಂತೆ ಮೂರುದಿನ ಮೆರೆದಾಡಿ ಮಣ್ಣುಪಾಲಾಗುವ ಪತಿಯಲ್ಲ. ಆತನು ಮಾಯೆಗೆ ಒಳಗಾದವನಲ್ಲ; ಮದವನ್ನು ಮೆಟ್ಟಿನಿಂತವನು. 'ನೀನೇ ಪತಿ'ಯೆಂದು ನಂಬಿದ ಭಕ್ತರಿಗೆ ಮಾತ್ರ ಅಮರ ಸುಖವನ್ನು ಕೊಡತಕ್ಕವನು.

ಕೌ.–ಎಲೆ ನಾರಿ, ಈ ನಿನ್ನ ಬಿಂಕದ ಪತಿಯಾರು? ಅವನ ಹೆಸರೇನು?

ಸಾ.–ಮೂಢ ದೊರೆಯೇ, ನನ್ನ ಮುದ್ದು ಪತಿಯ ಹೆಸರನ್ನು ಹೇಳಬೇಕೆ? ಸಿಟ್ಟಿನಿಂದಾಗಲಿ, ಪ್ರೇಮದಿಂದಾಗಲಿ ಅವನ ಹೆಸರನ್ನು ನೀನೊಮ್ಮೆ ಕಿವಿಗೊಟ್ಟು ಕೇಳಬೇಕೆಂದು ಬಯಸುತ್ತಿರುವಿ. ಅದೇ ನಿನ್ನ ಭಾಗ್ಯ!

ಕೌ.–ಎಲೆ ಮೂಢ ಸ್ತ್ರೀಯೆ, ಅವನ ಹೆಸರನ್ನು ಕೇಳುವದರಿಂದ ನನಗೆ ಬಂದ ಭಾಗ್ಯವೇನು?

ಸಾ.–ಅವನ ಹೆಸರನ್ನು ಕೇಳಿದರೆ 'ನನಗೇನು ಭಾಗ್ಯ ಬರುವದೆ'ಂದು ಕೇಳುವಿಯಾ? ಅವನ ಹೆಸರಿನ ಭಾಗ್ಯವನ್ನು ಏನೆಂದು ಬಣ್ಣಿಸಲಿ? ಆ ಮಹಾರಾಯನ

ಮರುಳಮತಿಯೇ, ಹುರುಳಿಲ್ಲದ ಕಾಮನ ಕೈಯಲ್ಲಿ ಸಿಕ್ಕು ವಿಲಿವಿಲಿ ಒದ್ದಾಡುವ ನಿನ್ನನ್ನು ಕಂಡು ನನಗೆ ಮರುಕವೆನಿಸುತ್ತದೆ. ಕಾಮನನ್ನು ನಂಬಿದವರಿಗೆ ಕ್ಷೇಮವಿಲ್ಲ. ಆ ಕಾಮವೇ ನಿಜವಾದ ಹೊಲೆ, ಹೊಲೆಯಲ್ಲಿ ಹುಟ್ಟಿ, ಹೊಲೆಯಲ್ಲಿ ಬೆಳೆದು, ಹೊಲೆಯಲ್ಲಿ ಮುಳುಗಿ, ಹೊಲೆಯಲ್ಲಿ ಏಳುವ ಭ್ರಷ್ಟ ಕಾಮನಿಗೆ ಬೆಂಕಿಹಚ್ಚಲಿ! ಕೌಶಿಕಾ, ಕಾಮನು ಮುಕ್ತಿಮಂದಿರದ ಬಾಗಿಲಿಗೆ ಇಕ್ಕಿದ ಮುಳ್ಳುಬೇಲಿ; ಭ್ರಮೆಯನ್ನು ಅಳಿ, ಚೆನ್ನಾಗಿ ತಿಳಿ; ಅವನಿಂದ ದೂರ ಉಳಿ, ಕಾಮವನ್ನು ಕಡಿ; ಶಿವಪಾದವನ್ನು ಹಿಡಿ, ಶಿವ ಮಂತ್ರವನ್ನು ನುಡಿ; ಅದರಿಂದಲೇ ನಿನಗೆ ಅಕ್ಷಯ ಸುಖ, ನಾನು ಹೇಳಿದಂತೆ ಕೇಳು, ಅಂದರೆ ಮಾತ್ರ ನಿನಗೆ ಒಳಿತು.

ಕೌ.–ಕೋಮಲಾಂಗಿ ಇದೇನು ವಿಚಿತ್ರ! ಮದ್ದುಗುಣಿಕೆ ಮೆದ್ದವರ ಹಾಗೆ ಎಂಥ ಮರುಳತನದ ಮಾತು ಆಡುತ್ತಿರುವಿ!

ಸಾ.–ಅವಿವೇಕಿ ಅರಸಾ, ನಾನು ಆಡಿದುದು ಮರುಳುತನದ ಮಾತೆ?

ಕೌ.–ಅಂತಿಂಥ ಮರುಳ ಮಾತಲ್ಲ! ಮರುಳರಿಗೆ ಸಹ ಮರುಳತನ ಹುಟ್ಟಿಸುವ ಮಾತು.

ಸಾ.–ಅದು ಹೇಗೆ?

ಕೌ.–ಸಾತ್ವಿಕಿ, ಕಾಮನೇ ಮುಕ್ತಿಗೆ ಮೂಲ. ಮುಕ್ತಿಗೆ ಮಕ್ಕಳು ಬೇಕು; ಮಕ್ಕಳಾಗಲು ಕಾಮ ಬೇಕೇಬೇಕು. ಹೀಗಿದ್ದರೂ ಕಾಮನು ಮುಕ್ತಿಮಂದಿರದ ಹೊರಬಾಗಿಲಿಗೆ ಇಕ್ಕಿದ ಮುಳ್ಳುಬೇಲಿಯೆಂದು ವಾದಿಸುತ್ತಿರುವಿ. ಇದು ಮರುಳ ಮಾತಲ್ಲವೆ?

ಸಾ.–ಅದು ಮರುಳ ಮಾತಲ್ಲ; ಹುರುಳು ತುಂಬಿದ ಮಾತು. ತಿಳಿದು ನೋಡಿದರೆ ನಿನ್ನ ಮಾತೇ ಕೌತುಕ ಹುಟ್ಟಿಸುವಂತಿದೆ. ಅಪುತ್ರಸ್ಯ ಗತಿರ್ನಾಸ್ತಿ! ಮಕ್ಕಳಿಲ್ಲದವರಿಗೆ ಮುಕ್ತಿಯಿಲ್ಲವೆಂಬುದನ್ನು ಕೇಳಿಲ್ಲವೇ ನೀನು? ನಿನ್ನ ಮಾತಿನಂತೆ ಮೋಕ್ಷಕ್ಕೆ ಸತಿಪತಿಗಳು ಒಂದಾಗಬೇಕು. ಹೀಗಿರಲು ಆ ಕಳ್ಳಕಾಮನು ಯಾತಕ್ಕೆ ಬೇಕು?

ಕೌ.–ಸುಂದರೀ, ನಿನ್ನ ಮಾತು ತಿಳಿಯದಾಗಿದೆ. ಕಾಮನ ಸಹಾಯ ಪಡೆಯದ ಸತಿ–ಪತಿಗಳು ಸಂಯೋಗ ಪಡೆಯುವದು ಹೇಗೆ? ಕಾಮವಿಲ್ಲದ ಸತಿ–ಪತಿಗಳು ಮಕ್ಕಳನ್ನು ಹೇಗೆ ಹಡೆಯಬಲ್ಲರು? ನೀನು ಮಾತ್ರ ಅವನೇಕೆ ಬೇಕೆಂದು ಕೇಳುತ್ತಿರುವಿ. ಮೊದಲಿದ್ದ ಕಾಮ ಕೊನೆಯಲ್ಲಿ ಪ್ರೇಮವಾಗಿ ನಿಲ್ಲುವದು ಸಹಜ. ಆದರೆ ಸತಿಪತಿ ಕಾಮದಾಸೆಯಿಂದಲೇ ಕೂಡಿದಾಗ

ಎಚ್ಚರದಿಂದ ನಡೆದುಕೋ. ನನ್ನ ಹೇಳಿಕೆಯಂತೆ ನಡೆಯುವೆನೆಂದು ಮೊದಲು ವಚನ ಕೊಟ್ಟು, ಈಗ ವಿಚಾರಹೀನನಾಗಿ ನನ್ನನ್ನು ಮುಟ್ಟಲು ಬರುತ್ತಿರುವಿಯಾ? ನೀಚಾ, ತೊಲಗಾಚೆ! ದುಷ್ಟ ಬುದ್ಧಿಯಿಂದ ನನ್ನನ್ನು ಮುಟ್ಟಿದರೆ, ನೀನು ಸುಟ್ಟು ಭಸ್ಮನಾಗುವಿ!

ಕೌ.–ಎಲೆ ನಾರೀಮಣಿಯೆ, ಹಿಂದಕ್ಕೇಕೆ ಸರಿಯುತ್ತಿರುವಿ? ಸಿಟ್ಟಿನಿಂದ ನನ್ನನ್ನೇಕೆ ಜರಿಯುತ್ತಿರುವಿ? ಹೇಳು, ನಾನು ಕೊಟ್ಟ ವಚನವಾವುದು? ಅದನ್ನು ಬೇಗನೆ ಪೂರೈಸಿ ನಿನ್ನ ಅಂಗಸುಖವನ್ನು ಪಡೆಯುವೆನು. ವಯ್ಯಾರಿ, ನೀ ಎನಗೆ ಒಲಿದರೆ, ನಿನ್ನನ್ನು ಬಂಗಾರದ ರಾಶಿಯ ಮೇಲೆ ಕುಳ್ಳಿರಿಸುವೆ. ಸಿಂಗಾರದ ಸಿರಿಯಲ್ಲಿ ಉಳ್ಳಾಡಿಸುವೆ, ಮುತ್ತು ರತ್ನಗಳಲ್ಲಿ ಮುಚ್ಚುವೆ. ನಾನು ಪಾಲಿಸತಕ್ಕ ವಚನವಾವುದು? ಬೇಗನೆ ಹೇಳು. ಅದನ್ನು ಪೂರೈಸಿ, ನೀನು ಸಂತೋಷ ಚಿತ್ತಳಾಗುವಂತೆ ಮಾಡುತ್ತೇನೆ.

ಸಾ.–ನನಗೆ ನಿನ್ನ ಬಂಗಾರವೂ ಬೇಕಾಗಿಲ್ಲ; ನಿನ್ನ ಸಿಂಗಾರವೂ ಬೇಕಾಗಿಲ್ಲ. ನಾನು ಭೋಗಿನಿಯಲ್ಲ. ಶಿವಯೋಗಿನಿ! ನನ್ನನ್ನು ಪಡೆಯುವ ಶಕ್ತಿ ನಿನಗೆಲ್ಲಿದೆ?

ಕೌ.– ಪದ : ತಾಳ : ಕೇರವಾ ; ರಾಗ : ಆಸ್ವಾ

ಬಾರ ಬಾರೇ ನೀರೆ ಮನೋಹರೆ
ಬಾ ನಿನ್ನನ್ನು ಹೊಂದುವದ್ಯಾವ ಘನ ಕಾರ್ಯ
ಬೇಕಾಗಿಹುದ್ಯಾತಕೆ ಶೌರ್ಯ ॥ ಪಲ್ಲ ॥

ಕೌ.–ನಾನಿರುವೆ ಪುರುಷ ಪ್ರಬಲಾ.

ಸಾ.–ನನ್ನ ಹೊಂದುವದು ಸುಲಭದ ಮಾತಲ್ಲ.

ಕೌ.–ಕೂಡಿ ನೋಡೆನ್ನ ಕಾಮದ ಲೀಲಾ.

ಸಾ.–ಕಾಮವೆಂಬುವದೆನ್ನೊಳಗಿಲ್ಲ (ಚಲತಿ) ಬಾರ ಬಾರೇ.... ॥ ೧ ॥

ಕೌ.–ಕೂಡೆನ್ನ ಸುಂದರಿ ದಯವಿಟ್ಟು.

ಸಾ.–ಕಾಮನ್ನ ಸುಟ್ಟು ನನ್ನ ಮುಟ್ಟು.

ಕೌ.–ಯಾತಕ್ಕೆ ನಿಂತೆ ಪಂಥ ತೊಟ್ಟು.

ಸಾ.–ಹುರಿ ನಿನ್ನ ದುರ್ಗುಣದ ಹುಟ್ಟು (ಚಲತಿ) ಬಾರ ಬಾರೇ...॥ ೨ ॥

ಹೆಸರು ಯಾವನ ಕಿವಿಗೆ ಬೀಳುವದೋ ಅವನೇ ಲೋಕದಲ್ಲಿ ಧನ್ಯ. ಹೆಸರು ಹೇಳಿದಾಕ್ಷಣವೇ ಕೇಳಿದವನ ಪಾಪವೆಲ್ಲ ಪರಿಹಾರವಾಗುವದು. ಬಡತನವೆಲ್ಲ ಬಯಲಾಗುವದು. ಅವನ ನಾಮಸ್ಮರಣೆ ಬೇಡಿದ್ದನ್ನು ನೀಡುತ್ತದೆ. ಅಂತಹ ನನ್ನ ಪೂಜ್ಯ ಪತಿಯ ಹೆಸರನ್ನು ಹೇಳುತ್ತೇನೆ. ನಿನ್ನ ಪಾಪವೆಲ್ಲ ಪರಿಹಾರವಾಗುವಂತೆ! ಶುದ್ಧ ಮನಸ್ಸಿನಿಂದ ಕಿವಿಗೊಟ್ಟು ಕೇಳು. ಲೋಕಕ್ಕೆಲ್ಲ ಮೃತ್ಯುಂಜಯನಾಗಿ ಮೆರೆಯುವ ಚೆನ್ನಮಲ್ಲಿಕಾರ್ಜುನನೇ ನನ್ನ ಪತಿ. "ಶಿವ ಶಿವಾ" ಎಂದು ಸ್ಮರಿಸಿ ಪುನೀತನಾಗು.

ಕೌ.–ಸುಲಿಪಲ್ಲ ಸುಂದರಿ, ನಿನ್ನ ಕಟ್ಟು ಕಥೆಗೆ ನಾನು ಮರುಳಾಗಲಾರೆ; "ಶಿವಶಿವಾ" ಅನ್ನಲಾರೆ ಬೇಕಾದರೆ 'ನೀನೇ ಶಿವಾ' ಎನ್ನುತ್ತೇನೆ. ನನಗೊಲಿದು ತೃಪ್ತಿ ನೀಡು; ತಡವೇಕೆ? ಬಾ, ಎನ್ನ ತೋಳ ತೆಕ್ಕೆಯಲ್ಲಿ!

(ಅವಳ ಮೇಲೇರಿ ಮುಟ್ಟ ಹೋಗುವನು).

ಸಾ.– ಪದ : ತಾಳ : ದಾದರಾ ; ರಾಗ : ಭೀಮಪಲಾಸ

ಛೀ ಛೀ ಭ್ರಷ್ಟ, ಸರಿ ಪಾಪಿಷ್ಟ, ಏತಕೆನ್ನನು ಮುಟ್ಟುವಿ
ಸುಟ್ಟು ಭಸ್ಮವಾಗುವಿ. ॥ ಪಲ್ಲ ॥

ಕೌ.– ಪದ : ತಾಳ : ದಾದರಾ ; ರಾಗ : ಭೀಮಪಲಾಸ

ಏರು : ಯಾಕೆ ಚದುರಿ, ನಿಂತೆ ಬೆದರಿ

ನಾನು ಪದರ ಪಿಡಿಯಲು
ಜಾಣೆ ಉರಗವೇಣಿ ಸ್ಮರನ
ರಾಣಿ ಯಾಕೆ ಕೋಪವು
ತಾಳೆ ಕಾಮತಾಪವ ॥ ೧ ॥

ಸಾ. ಪದ : ತಾಳ : ದಾದರಾ ; ರಾಗ : ಭೀಮಪಲಾಸ

ಕೆಡುವೆ ಭೂಪ, ಕೊಡುವೆ ಶಾಪ
ಕೊಡಲು ನೀನು ನನಗೆ ತಾಪ
ಬ್ಯಾಡೊ ರಾಯಾ ನನ್ನ ಕೈಯ
ಪಿಡಿಯಲಿಕ್ಕೆ ಬರುವದು
ಮಂಚಕೆನ್ನ ಕರೆವುದು ॥ ೨ ॥

ಕಾಮಿಯರಸಾ, ದೂರ ಸರಿದು ನಿಲ್ಲು; ಮೈಮೇಲೆ ಬಂದರೆ ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ.

ಸಾ.–ಛೀ ಭ್ರಷ್ಟಾ, ಹಿಂದಕ್ಕೆ ಸರಿ. ನೀನು ಭ್ರಷ್ಟಕಾಮನನ್ನು ಕೊಂಡಾಡುವ, ಮುಂಡಾಡುವ, ಪರಮ ಚಾಂಡಾಲ! ನಡೆ, ನನ್ನೆದುರಿಗೆ ನಿಲ್ಲಬೇಡ,

ಪದ : ತಾಳ : ಕೇರವಾ ; ರಾಗ : ಭೈರವಿ

ಜನಪ ಕೇಳೆನ್ನ, ಪತಿದೇವS ಸದಾಶಿವSS
ಪತಿದೇವ ಸದಾಶಿವ (ದುಗುಣ) ॥ ಪಲ್ಲ ॥

ಆ ಪತಿನಾಮ, ಕೇಳಿದವಗೆ ಕ್ಷೇಮ
ಮುಂದಿಲ್ಲೊ ಜನ್ಮ । ಪತಿದೇವ........ ॥ ೧ ॥

ಆ ನನ್ನ ಸ್ವಾಮಿ, ಸರ್ವಾಂತರ್ಯಾಮಿ
ಭಕ್ತರ ಕ್ಷೇಮಿ । ಪತಿದೇವ....... ॥ ೨ ॥

ಆ ಪತಿಯಿಂದ, ಗತಿ ನಿಜವೆಂದ
ಕಲಿ ಶಿವಾನಂದ । ಪತಿದೇವ............ ॥ ೩ ॥

ಮಹಾರಾಜನೆ, ನನ್ನ ಪೂಜ್ಯಪತಿಯ ಹೆಸರನ್ನು ಹೇಳುತ್ತೇನೆ ಕೇಳು : ಅವನ ಹೆಸರು ಒಮ್ಮೆಯಾದರೂ ನಿನ್ನ ಕಿವಿಯ ಮೇಲೆ ಬೀಳಲಿ. ಆ ಮಹಾಮಹಿಮನ ನಾಮವನ್ನು ಭಕ್ತಿಯಿಂದ ಕೇಳಿದವನು ಒಂದು ದಿವಸದ ಮಟ್ಟಿಗಾದರೂ ಸ್ವರ್ಗಭೋಗವನ್ನು ಹೊಂದದೆ ಇರನು. ಚಿತ್ತವಿಟ್ಟು ಲಾಲಿಸು. ತನ್ನ ಪುಣ್ಯ ಪತಿಯ ಹೆಸರು, ಸದಾ ಅಂತಃಕರುಣಿಯಾದ ಸದಾಶಿವನೆಂಬುದು; ಅವನೊಡನೆ ನನ್ನ ಮದುವೆಯಾಗಿದೆ. ನಾಮೋಚ್ಚಾರಣ ಮಾತ್ರದಿಂದಲೇ ಸದ್ಗತಿಯನ್ನುಂಟು ಮಾಡುವ ಆ ಕೈಲಾಸಪತಿಯು ನನಗೆ ಪತಿಯಾಗಿರಲು ದುರ್ಮತಿಯಾದ ನಿನ್ನನ್ನು ಪತಿಯನ್ನಾಗಿ ಸ್ವೀಕರಿಸುವ ಬಗೆ ಹೇಗೆ? ಪರಮ ಪತಿವ್ರತೆಗೆ ಗಂಡನೊಬ್ಬನಲ್ಲದೆ ಇನ್ನೊಬ್ಬನಿರಬಹುದೆ? ನಿನ್ನನ್ನು ಮಾಡಿಕೊಂಡರೆ ಗತಿಯೇನು? ತನ್ನ ಹೊಟ್ಟೆಗೆ ಅನ್ನವಿಲ್ಲದೆ ಅನ್ಯರ ಹೊಟ್ಟೆಯನ್ನು ತುಂಬಿಸಲು ಹವಣಿಸುವವನಂತೆ ನಿನಗೇ ಗತಿಯಿಲ್ಲದ ನೀನು ಅನ್ಯರಿಗೆ ಯಾವ ಗತಿಯನ್ನು ಕೊಡಬಲ್ಲೆ? ದೊರೆಯೆ, ತಿಳಿದು ನೋಡು, ನಿನ್ನನ್ನು ದುರ್ಗತಿಗೆ ಎಳೆಯಲು ಡುಬ್ಬವನ್ನು ಚಪ್ಪರಿಸುತ್ತಿರುವ ಆ ದುಷ್ಟ ಕಾಮನ ಬೆನ್ನು ಬಿಡು, ದೀಕ್ಷೆ ಪಡೆದು ಶಿವಭಕ್ತನಾಗು, ದುರ್ಗುಣವನ್ನು ನೀಗು. ಆ ಮೇಲೆ ಮುಂದಿನ ವಿಚಾರ.

ಕೌ.–ಸುಂದರಿ, ಏನೂ ತಿಳಿಯದೆ ಸುಳಿಬಾಳೆಯಂಥ ನಿನ್ನ ಶರೀರವನ್ನು ಏಕೆ ನಂದಿಸುತ್ತಿರುವಿ? ಜಗತ್ತಿಗೊಬ್ಬ ಮಹಾದೇವನಿರುವದು ಸತ್ಯ.

ಎಲೆ ನಾರಿ, ಗುಡ್ಡವನ್ನು ಹೊರುವ ಬಂಟನಿಗೆ ಗುದ್ದಲಿಯನ್ನು ಹೊರುವದಾಗುವದಿಲ್ಲವೇ? ನಿನ್ನಂತಹ ನೂರಾರು ಮಂದಿ ಜಾಣೆಯರು ನನ್ನ ಮಂದಿರದಲ್ಲಿ ಜೋಕು ಹೊಡೆಯುತ್ತಿರಲು, ನಿನ್ನನ್ನು ಹೊಂದಲು ಮತ್ತಾವ ಧೈರ್ಯ ಬೇಕು? ಗಂಡನ ಗಂಡನೆನಿಸಿದ ಕಡುಗಲಿಗೆ ಷಂಡನನ್ನು ಒಗೆಯುವದೇನು ಮಹಾ ಕಾರ್ಯ? ತಿಳಿದು ನೋಡು. ನನ್ನನ್ನು ಕೂಡು. ಆಗ ಸ್ವರ್ಗವೇ ಇಳಿದು ಬಂದು ನಿನ್ನೆದುರಿಗೆ ನಿಲ್ಲುತ್ತದೆ. ಹುಚ್ಚಿ, ನಾನು ಸಾಮಾನ್ಯನೆಂದು ಬಗೆದು ಹೀಗೆ ಮಾತಾಡುವಿಯಾ? ರೂಪದಲ್ಲಿ ಕಾಮನನ್ನು, ಬಲದಲ್ಲಿ ಭೀಮನನ್ನು, ಕಾರ್ಯದಲ್ಲಿ ಷಣ್ಮುಖನನ್ನು ಸೋಲಿಸುವ ಸಾಮರ್ಥ್ಯ ನನ್ನಲ್ಲಿದೆ. ಇಂಥವನನ್ನು ಬಿಟ್ಟು ಮತ್ತೇನು ಮಾಡುತ್ತಿ? ಕೈಗೆ ಬಂದ ಅಮೃತವನ್ನು ಚೆಲ್ಲಿ ಹಳಹಳಿಸಬೇಡ.

ಸಾ.– ಎಲೈ ಅರಸಾ, ನಾನು ನಾಡಾಡಿ ಹೆಂಗಸಲ್ಲ. ನನ್ನನ್ನು ಹೊಂದುವದು ಸಾಮಾನ್ಯರಿಗೆ ಸಾಧ್ಯವಿಲ್ಲ. ನಾನು ಸಾತ್ವಿಕಿ; ಅಂದರೆ ಸತ್ವಗುಣ ಉಳ್ಳವಳು, ಸತ್ತರೂ ಸತ್ವಗುಣವನ್ನು ಬಿಡದ ಅಚಲ ಮೂರ್ತಿ ನಾನು! ನೀನೋ, ಕಾಮುಕ! ತಾಮಸಿ!! ತಾಮಸಗುಣಗಳು ನಿನ್ನಲ್ಲಿ ತುಂಬಿವೆ. ನಿನ್ನನ್ನು ಸುಟ್ಟರೂ ಆ ತಾಮಸಗುಣ ಹೋಗುವದಿಲ್ಲ. ನನ್ನಲ್ಲಿ ಕಾಮವಿಲ್ಲ, ಕ್ರೋಧವಿಲ್ಲ ಲೋಭವಿಲ್ಲ, ಮೋಹವಿಲ್ಲ, ಮದವಿಲ್ಲ, ಮತ್ಸರವಿಲ್ಲ. ನಿನ್ನಲ್ಲಿ ಕಾಮವಿದೆ, ಕ್ರೋಧವಿದೆ, ಲೋಭವಿದೆ, ಮೋಹವಿದೆ, ಮದವಿದೆ, ಮತ್ಸರವಿದೆ. ಆದ್ದರಿಂದಲೇ ನಾನು ಹೇಳುವದು–ನಾನು ಸಾತ್ವಿಕಿ; ನೀನು ತಾಮಸಿ–ಎಂದು. ವಿರುದ್ಧಗುಣಗಳು ಎಂದೆಂದೂ ಒಂದಾಗುವದಿಲ್ಲ. ನಿನಗೆ ನಾನೇ ಬೇಕಿದ್ದರೆ, ಮೊದಲು ನಿನ್ನ ತಾಮಸೀ ಗುಣವನ್ನು ಬಿಟ್ಟು, ಕಾಮಮೋಹಾದಿಗಳನ್ನು ಸುಟ್ಟು ನಂತರ ನನ್ನನ್ನು ಮುಟ್ಟು, ಅಂದರೆ ನಾನು ನಿನಗೆ ಪಟ್ಟದರಸಿಯಾಗಿ ನಿನ್ನೊಡನೇ ಇದ್ದು ಕೊನೆಗೆ, ಕೈವಲ್ಯಪದದಲ್ಲಿ ಇರಿಸುವೆನು.

ಕೌ.– ಬಟ್ಟ ಕುಚದ ಬಾಲೆ, ಎಂಥ ವಿಚಿತ್ರ ಮಾತುಗಳನ್ನು ಆಡುತ್ತಿರುವಿ? ಕಾಮವನ್ನು ಸುಟ್ಟಮೇಲೆ ನಿನ್ನನ್ನೇಕೆ ಮುಟ್ಟಬೇಕು? ಆ ಕಾಮವನ್ನು ಶಾಂತ ಮಾಡುವದಕ್ಕಾಗಿಯೇ ನಿನ್ನನ್ನು ನಾನು ಬಯಸುತ್ತಿರುವದು. ಕಾಮನೇ ನಿನ್ನನ್ನು ಪ್ರೇಮಿಸುವಂತೆ ಹುರಿದುಂಬಿಸಿದ್ದಾನೆ. ಅವನು ಮಹಾತೇಜಸ್ವಿ. ಒಮ್ಮೆ ಅವನ ದರ್ಶನ ನಿನಗಾದರೆ ಅವನನ್ನು ಬಿಟ್ಟು ಅರಗಳಿಗೆಯಾದರೂ ನೀನಿರಲಾರೆ. ಅವನಿಂದಲೇ ಈ ಜಗತ್ತಿನ ಸೃಷ್ಟಿ. ಅವನು ಇರದಿದ್ದರೆ ಈ ಲೋಕವು ಹುಟ್ಟದೇ ಹುರಿದುಹೋಗಿ, ನಿಶ್ಯಬ್ದವಾದ ಅರಣ್ಯದಂತೆ ಕಾಣುತ್ತಿತ್ತು. ಸುಮ್ಮನೆ ಸಮ್ಮತಿಸಿ, ಒಮ್ಮೆ ಕಾಮನ ಕೌತುಕವನ್ನು ನೋಡು.

ಸುಲಭವಾದಂತಾಯಿತು! ಪಾಪಿ ಇರಲಿ, ಕೋಪಿ ಇರಲಿ, ಪಾತಕಿ ಇರಲಿ, ಶಿವದ್ರೋಹಿ ಇರಲಿ, ಯಾರೇ ಇರಲಿ; ಅವರಿಗೆ ಮನೆತುಂಬ ಮಕ್ಕಳು ಹುಟ್ಟಿದರೆ ಸಾಕು, ಮುಕ್ತಿ ನಿಶ್ಚಿತ! ಹೀಗಿದ್ದರೆ ಸಾಧುಸಂತರು ಎಂಥ ಹುಚ್ಚರು!! ಮಕ್ಕಳಾದರೆ ಮುಕ್ತಿ ನಿಶ್ಚಿತವೆಂಬ ನಿನ್ನ ತತ್ವವನ್ನು ಮರೆತು ಜಪ, ತಪ, ವ್ರತೋಪವಾಸ, ದಾನ, ಧರ್ಮ; ಕ್ಷೇತ್ರ ಯಾತ್ರೆ; ತ್ಯಾಗ, ಯೋಗ; ಭಕ್ತಿ, ಜ್ಞಾನ; ಮೊದಲಾದ ಸಾಧನೆಗಳ ಬೆನ್ನು ಹತ್ತಿ ಸುಟ್ಟು ಸುಣ್ಣವಾಗುತ್ತಿರುವರಲ್ಲ! ನಿನ್ನ ತತ್ವವೇ ಸತ್ಯವಾದರೆ ಮಕ್ಕಳನ್ನು ಹಡೆಯುವ ಕಾಗೆ-ಗೂಗೆಗಳಿಗೂ ಮುಕ್ತಿಯಾಗಬೇಕಲ್ಲವೆ? ಛಿ ಮದಾಂಧಾ, ಕರಿಕೆಯನ್ನು ನೆಕ್ಕುವ ಕತ್ತೆಯ ಮುಂದೆ ಕರಿಗಡಬನ್ನು ಇಟ್ಟಂತೆ ಆಯಿತು ನಿನಗೆ ಹೇಳಿದ ತತ್ವಶಾಸ್ತ್ರ! ನಿಮ್ಮಂಥವರಿಗೆ ತತ್ವಬೋಧೆ ಮಾಡುವದೆಂದರೆ ಬೋರ್ಗಲ್ಲ ಮೇಲೆ ನೀರೆರೆದಂತೆಯೆ ಸರಿ.

ಕೌ.–ಹಾಗಾದರೆ 'ಅಪುತ್ರಸ್ಯ ಗತಿರ್ನಾಸ್ತಿ'–ಎಂಬ ವಾಕ್ಯ ಸುಳ್ಳಾಯಿತೆ?

ಸಾ.–ಆ ವಾಕ್ಯ ಸುಳ್ಳಲ್ಲ, ನೀನು ಮಾಡಿಕೊಂಡ ಅರ್ಥ ಸುಳ್ಳು.

ಕೌ.–ಹಾಗಾದರೆ ಅದರ ನಿಜವಾದ ಅರ್ಥವಾವುದು?

ಸೌ.–ಕೌಶಿಕಾ, 'ಅಪುತ್ರಸ್ಯ ಗತಿರ್ನಾಸ್ತಿ' ಎನ್ನುವ ಮಾತಿನ ಅರ್ಥವನ್ನು ತಿಳಿಯುವಂತೆ ಹೇಳುತ್ತೇನೆ ಕೇಳು :

ಪದ : ತಾಳ : ಕೇರವಾ ; ರಾಗ : ಭೂಪ

ಅಪುತ್ರಸ್ಯ ಗತಿರ್ನಾಸ್ತಿ, ಎಂಬ ಶಾಸ್ತ್ರದ ರೀತಿ ॥ ಪಲ್ಲ ॥

ಅರ್ಥ ಹೇಳುವೆ ಕೇಳೋ ಭೂಪಾಲಾSSS
ಮುಕ್ತಿ ಮಕ್ಕಳಿಗೆ ಸಂಬಂಧವಿಲ್ಲ
ಗುರುವಿನ ಮಕ್ಕಳು ಅಲ್ಲವಾದವರ ಕೇಳು
ಮುಕ್ತಿಯೆಂಬುವದಿಲ್ಲೊ ಜನಪಾಲಾ ॥ ೧ ॥

ಗುರುವಿನ ಮಗನಾಗು, ಹರನಿಗೆ ಶಿರಬಾಗು
ಇರುವೆನು ನಿನ್ನಲ್ಲಿ ತಾಯಿಯಾಗಿ
ಮುಕ್ತಿ ತೊಟ್ಟಿಲದಲ್ಲಿ ನಿನ್ನ ತೂಗಿ ॥ ೨ ॥

ಸತ್ವದ ಹಾಲಾ, ಕುಡಿಸುತ ಬಾಲಾ
ನಂದದಿ ಪೊರೆವೆನು ಅನುಗಾಲಾ ಭೂಪಾಲಾ
ಜನಪಾಲಾ ಖರೇಮೂಲಾ ॥ ೩ ॥

ಅದೆಂದೂ ಸುಳ್ಳಲ್ಲ. ಈ ಲೋಕದಲ್ಲಿ ಕುಲೀನತೆಯಿಂದಲೂ ಚೆಲ್ವಿಕೆಯಿಂದಲೂ ಚಾತುರ್ಯದಿಂದಲೂ ತನಗೆ ಅನುರೂಪನಾದ ಪತಿಯನ್ನು ಮಾಡಿಕೊಳ್ಳದೆ ಕೇವಲ ಮಹಾದೇವನೇ ಪತಿ ಎಂದರೆ ಎಂದೆಂದೂ ಮುಕ್ತಿಯಾಗಲಾರದು.

ಸಾ.–ಎಂಥ ವಿಚಿತ್ರ ಮಾತಿದು! ಕಾಮಾಂಧನಿಗೆ ತತ್ವ ಶಾಸ್ತ್ರವು ತಿಳಿಯದು!!

ಕೌ.–ರಮಣೀ ಹೇಳುತ್ತೇನೆ ಕೇಳು :

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ.

ವಿಚಿತ್ರದ ಮಾತಲ್ಲ ಸಾರ್ವುದು ಜಗವೆಲ್ಲ
ಮಕ್ಕಳಿಲ್ಲದವರಿಗೆ ಮುಕ್ತಿ ಮೊದಲಿಲ್ಲ
ಎಂಬ ಶಾಸ್ತ್ರದ ಮಾತು ಸುಳ್ಳಲ್ಲ
ಪತಿಯನ್ನು ಆಗದೆ, ಸಂತತಿ ಆಗ್ವುದೆ
ಸಹಜ ಮುಕ್ತಿಯದು ದೊರಕುವದೆ, ಬಾ ಮುಗ್ಧೆ, ॥ ೧ ॥

ಬಿತ್ತುವ ತಿಥಿಯು ತಾ, ಒತ್ತಿ ಬಂದ ಕಾಲಕ್ಕೆ
ಕತ್ತೆಯಂತೆ ತಿರುಗಿ ಹೊಲವ ಪಡಗೆಡವಿ
ಕೂತಂತೆ ನಿನ್ನ ಪ್ರಾಯ, ಪಡಗೆಡವಿ
ಮಕ್ಕಳ ಫಲಕಟ್ಟಿ ಪಾಪದೊರಳ್ಕಟ್ಟ
ಕೊಳ್ಳುವದಲ್ಲ ಪಡೆಸಂತತಿ, ಆಗಿ ಸತಿ. ॥ ೨ ॥

ಮೋಹನಾಂಗಿ, ಅಪುತ್ರಸ್ಯ ಗತಿರ್ನಾಸ್ತಿ! ಮಕ್ಕಳಿಲ್ಲದವರಿಗೆ ಮುಕ್ತಿಯೇ ಇಲ್ಲ!! ಹೀಗೆಂದು ಶಾಸ್ತ್ರ ಸಾರಿಹೇಳುತ್ತಿದೆ. ಜಗತ್ತಿನಲ್ಲಿ ಮದುವೆಯಾಗದೆ ಮೋಕ್ಷಕ್ಕೆ ಕಾರಣವಾದ ಮಕ್ಕಳು ಹುಟ್ಟಲಾರವು. ಲೋಕದ ಪದ್ಧತಿಗೆ ಅನುಸರಿಸಿ ಪತಿಯನ್ನು ಮಾಡಿಕೊಳ್ಳದೆ, ಆ ಶಿವನೇ ಪತಿಯೆಂದು ನಂಬಿ ಕೂತರೆ, ಆ ಶಿವನು ಕೂಸುಗಳನ್ನು ಹಡೆದು ತಂದು ಮುಂದೆ ಇಳಿಸಿ ಹೋಗುವನೇನು? ಸುಂದರಿ, ಬಿತ್ತುವ ತಿಥಿ ಒತ್ತಿ ಬಂದ ಕಾಲಕ್ಕೆ ಹೊಲವನ್ನು ಕಣ್ಣೆತ್ತಿ ನೋಡದೆ, ಕತ್ತೆಯಂತೆ ತಿರುಗಿ, ಹೊಲವನ್ನು ಪಡಗೆಡವಿ, ಪರರಿಗೆ ಕೈಯೊಡ್ಡುವ ಹೆಡ್ಡರ ಹಾಗೆ; ಹರೆಯದ ಹಂಗಾಮ ಒತ್ತಿ ಬಂದು ನಿಂತಿರಲು, ಪ್ರಾಯವನ್ನೇ ಪಡಗೆಡವಿ ಮುಕ್ತಿಯನ್ನು ಕೊಡುವ ಮಕ್ಕಳ ಫಲವನ್ನು ಕಟ್ಟಿದರೆ ಪಾಪಕ್ಕೆ ಗುರಿಯಾಗಿ, ಮುಕ್ತಿಗೆ ದೂರಾಗುವದಿಲ್ಲವೆ? ಇದೆಂತಹ ಮೂಢತನ! ಸುಮ್ಮನೆ ನನ್ನ ಕೈ ಹಿಡಿದು ಮಕ್ಕಳನ್ನು ಹಡೆ, ಅಂದಾಗಲೇ ಮುಕ್ತಿ ಸಾಧ್ಯ.

ಸಾ.–ಏನು? ಮಕ್ಕಳಿಂದಲೇ ಮುಕ್ತಿ ಸಿಗುವದೇ? ಹಾಗಾದರೆ ಮುಕ್ತಿ ಎಷ್ಟು

ಸಾ.– ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಮಧುವರಸನೆಂಬುವಂಥ ಬ್ರಾಹ್ಮಣ
ಅರಸ ಇದ್ದ ಬಿಜ್ಜಳನಲ್ಲಿ ಪ್ರಧಾನ ॥ ಪಲ್ಲ ॥

ಏರು : ಹರಳಯ್ಯನೆನಿಪ ವರಶಿವಯೋಗಿ
ಬಸವನಿಗಾಗಿ ಒಯ್ದ, ಚಮ್ಮಾವುಗಿ
ಮೆಟ್ಟಲು ಬೇಡ, ತಟ್ಟುದು ಕೇಡು
ಎಂದರೂ ಕೇಳದೆ, ಆ ಮೂಢ ! ಮಧುವ್ವರಸ.... ॥ ೧ ॥

ಮುಟ್ಟಿಸಲವ ಪಾದ, ಚಮ್ಮಾವುಗಿ
ಅವನ ಸುತ್ತಿ ಸುಡಹತ್ತಿತೊ ಕಡುಬ್ಯಾಗಿ
ಶರಣರ ಮಹಿಮಾ, ತಿಳಿಯದೆ ಹಮ್ಮಾ
ಸಲ್ಲದು ಬಿಡು ನಿರಿಗಿ, ಅಧಮಾ । ಮಧುವರಸ..... ॥ ೨ ॥

ಅರಸಾ ಶಿವಶರಣರು ಮೆಟ್ಟುವ ಜೋಡನ್ನು ಮುಟ್ಟಿ ಕಷ್ಟಕ್ಕೆ ಗುರಿಯಾದ ಕರ್ಮಿಯ ಸುದ್ದಿಯನ್ನು ಹೇಳುತ್ತೇನೆ ಕೇಳು : ಕಲ್ಯಾಣ ಪಟ್ಟಣದಲ್ಲಿ ಹರಳಯ್ಯನೆಂಬ ಶಿವಶರಣನಿದ್ದ.

ಕೌ.–ಅವನು ಯಾವ ಜಾತಿಯವನು?

ಸಾ.–ಅವನು ಜಾತಿಯಿಂದ ಹೊಲೆಯನಾದರೂ ಶಿವದೀಕ್ಷೆಯಿಂದ ಶಿವಭಕ್ತನಾಗಿದ್ದ. ಅವನನ್ನು ಸರಿಗಟ್ಟುವವರು ಯಾರೂ ಇರಲಿಲ್ಲ. ಸಾತ್ವಿಕ ಶಿರೋಮಣಿಯಾದ ಹರಳಯ್ಯನು ಒಂದು ದಿವಸ, ಕಲ್ಯಾಣ ಪಟ್ಟಣದಲ್ಲಿ ಹಾಯ್ದುಹೋಗುವಾಗ, ಬಸವಣ್ಣನವರ ದರ್ಶನವಾಯಿತು. ಕೂಡಲೇ ಹರಳಯ್ಯನು ಶಿರಬಾಗಿ ಕರಮುಗಿದು–'ಶರಣು ಶರಣಾರ್ಥಿ–ಎಂದನು. ಅದಕ್ಕೆ ಪ್ರತಿಯಾಗಿ ಬಸವಣ್ಣನವರು ಆ ಶರಣನಿಗೆ 'ಶರಣು ಶರಣು ಶರಣಾರ್ಥಿ–ಎಂದು ನುಡಿಯಲು, ಹರಳಯ್ಯನು– "ಇದೇನು, ಬಸವಣ್ಣ ನನ್ನ ಶರಣು ಮುಟ್ಟಿಸಿದ್ದಲ್ಲದೆ, ಮೇಲೊಂದು ಹೆಚ್ಚಿನ ಶರಣಾರ್ಥಿಯ ಭಾರವನ್ನು ಹೊರಿಸಿದನು"–ಎಂದು ಮರಮರನೆ ಮರುಗಿ, "ಈ ಭಾರವನ್ನು ಹೇಗೆ ಇಳುಹಲೆಂದು ಚಿಂತಿಸಿ, ತನ್ನ ತೊಡೆಯ ಚರ್ಮವನ್ನು ಕತ್ತರಿಸಿ ಪವಿತ್ರವಾದ ಜೋಡನ್ನು ತಯಾರಿಸಿ ಬಸವಣ್ಣನಿದ್ದಲ್ಲಿಗೆ ನಡೆದನು. ಅವುಗಳನ್ನು ಕಂಡ ಬಸವಣ್ಣನವರು ಭಯಭಕ್ತಿಯಿಂದ"– ಸತ್ಯಶರಣರಾದ ಹರಳಯ್ಯನವರೇ, ತಮ್ಮ ಪರುಷ ಹಸ್ತದಿಂದ ಹುಟ್ಟಿದ ಈ ಚಮ್ಮಾವುಗೆಗಳನ್ನು ಮೆಟ್ಟುವ ಯೋಗ್ಯತೆ ನನಗಿಲ್ಲ. ನಾನು ಶರಣರ ಮನೆಯ ಕಿಂಕಿರ"–ಎಂದು ಹೇಳಿ ಹಿಂದಕ್ಕೆ ಕಳಿಸಿದನು.

ಅರಸಾ ಕೌಶಿಕಾ, 'ಅಪುತ್ರಸ್ಯ ಗತಿರ್ನಾಸ್ತಿ' ಈ ವಾಕ್ಯದ ಅರ್ಥವನ್ನು ಆಗಲೇ ನೀ ಹೇಗೆ ಹೇಳಿದೆ?

ಕೌ.–'ಮಕ್ಕಳಿಲ್ಲದವರಿಗೆ ಮುಕ್ತಿಯಿಲ್ಲ'–ಎಂದು ಹೇಳಿದೆ.

ಸಾ.–ಅದು ತಪ್ಪು. 'ಮಕ್ಕಳಾಗದವರಿಗೆ ಮುಕ್ತಿಯಿಲ್ಲ'–ಎಂಬುದು ಅದರ ಇಂಗಿತ ಅರ್ಥ.

ಕೌ.–ಮಕ್ಕಳಾಗದವರು ಯಾರು? ಹುಟ್ಟಿದವರೆಲ್ಲರೂ ತಂದೆಗೆ ಮಕ್ಕಳಲ್ಲವೇ?

ಸಾ.–ತಂದೆಗೆ ಮಕ್ಕಳು ಹೌದಾದರೂ ಅವರು ಗುರುವಿನ ಮಕ್ಕಳಾಗದೆ ಮುಕ್ತಿ ಇಲ್ಲ; ನೀನು ನನ್ನನ್ನು ಹೊಂದಲಿಚ್ಛಿಸಿದರೆ ಮೊದಲು ನೀನು ಗುರುವಿನ ಮಗನಾಗಬೇಕು. ಆದ್ದರಿಂದ ನೀನು ಗುರುವಿಗೆ ಶಿರಬಾಗಿ ಗುರುಪುತ್ರನಾಗು. ಅಂದರೆ ನಾನು ನಿನ್ನ ತಾಯಿಯಾಗಿ ನಿನ್ನಲ್ಲಿದ್ದು ನಿನ್ನನ್ನು ಮುಕ್ತಿಯೆಂಬ ಮುತ್ತಿನ ತೊಟ್ಟಿಲಲ್ಲಿ ಹಾಕಿ, ತೂಗುತ್ತ ಕುಳಿತುಕೊಳ್ಳವೆನು.

ಕೌ.–ಬಡನಡುವಿನ ಬಾಲೆ, ನಿನ್ನ ಹಾಳು ಪುರಾಣವನ್ನು ಕೇಳಲಿಕ್ಕೆ ನಿನ್ನನ್ನು ಕರಿಸಿಲ್ಲ. ಸತ್ತಮೇಲೆ ಹೀಗಾಗುವುದು; ಹೊತ್ತಮೇಲೆ ಹೀಗಾಗುವುದು–ಎಂಬ ಮೋಕ್ಷ ಶಾಸ್ತ್ರದ ಗಂಟು ನಿನ್ನಲ್ಲಿಯೇ ಇರಲಿ! ಅದು ನನಗೆ ಬೇಕಾಗಿಲ್ಲ. ನೀನಿಗ ನನ್ನ ಮಾತುಕೇಳಿ ಮದುವೆ ಆಗುವಿಯೋ ಇಲ್ಲವೋ ಹೇಳು? ಇಲ್ಲದಿದ್ದರೆ ಈಗಲೇ ನಿನ್ನ ಮಾನಭಂಗ ಆದೀತು! (ಸೀರೆಯ ಸೆರಗು ಹಿಡಿಯ ಹೋಗುವನು).

ಸಾ.–ಛೀ ಭ್ರಷ್ಟಾ, ನನ್ನನ್ನು ಮುಟ್ಟಬೇಡ, ನನ್ನನ್ನು ಮುಟ್ಟಿದರೆ, ನೀನು ಸುಟ್ಟು ಭಸ್ಮವಾಗುವಿ.

ಕೌ.–ಮುಟ್ಟಿದರೆ ಸುಡಲಿಕ್ಕೆ ನೀನೇನು ಬೆಂಕಿಯೆ? ಇಲ್ಲದ ಬಿಂಕವನ್ನು ನನ್ನ ಮುಂದೆ ಬಿಚ್ಚಬೇಡ.

ಸಾ.–ಕೌಶಿಕಾ, ನಾನು ಅಂತಿಂತಹ ಬೆಂಕಿಯಲ್ಲ! ಹರನ ಉರಿಗಣ್ಣಿನಲ್ಲಿರುವ ಪ್ರಳಯಾಗ್ನಿಗಿಂತಲೂ ಹೆಚ್ಚಿನ ಬೆಂಕಿಯಾಗಿರುವೆನು. ಸತ್ವಗುಣಕ್ಕೆ ಸದಾಶಿವನು ಸಹ ಹೆದರುತ್ತಾನೆ. ಪಾಪಿಷ್ಟರು, ಸತ್ವಶಾಲಿಗಳು ಮೆಟ್ಟುವ ಜೋಡನ್ನು ಮುಟ್ಟಲಿಕ್ಕೂ ಅಯೋಗ್ಯರು. ಹೇಳಿದರೂ ಕೇಳದೆ ದುಷ್ಟತನದಿಂದ ನೀನು ನನ್ನನ್ನು ಮುಟ್ಟಿದರೆ ಮಧುವರಸನಂತೆ ಮಹಾದುಃಖಕ್ಕೆ ಗುರಿಯಾಗುವಿ!

ಕೌ.–ಎಲೆ ಬಾಯಬಡಕಿ, ಎಷ್ಟುಬಾಯಿ ಬಿಡುತ್ತಿ! ಸತ್ಪುರುಷರು ಮೆಟ್ಟುವ ಜೋಡನ್ನು ಮೆಟ್ಟಿ ಕಷ್ಟಕ್ಕೆ ಗುರಿಯಾದವನು ಯಾರು? ಅವನು ಕಷ್ಟಕ್ಕೆ ಹೇಗೆ ಗುರಿಯಾದ?

ಸಾ.–ನೀನು ಪರಮಾತ್ಮನ ಸಂಗಸುಖವನ್ನು ಹೊಂದು; ಅಂದರೆ ಸಂಪೂರ್ಣ ಸುಖಿಯಾಗುವಿ.

ಕೌ.–ಥೂ, ನೀನು ಮೊದಲಿನ ಮೆಟ್ಟಿಗೇ ಬಂದೆ, ತಿರುಗಿ ಶಾಸ್ತ್ರದ ಸಂತೆಯನ್ನೇ ಬಿಚ್ಚಿದೆ. ನಿನ್ನ ಅಂಗಸುಖವನ್ನು ಬಯಸಿದ ನನಗೆ ದೈವೀಸುಖವನ್ನು ಪಡೆಯೆಂದು ಬೋಧ ಮಾಡುತ್ತಿರುವಿಯಲ್ಲ!

ಸಾ.–ಕೌಶಿಕಾ, ನೀನು ಬಯಸುವದು ಸುಖವೇ ಅಲ್ಲವೆ? ಈ ಲೋಕದ ಮಾನವರೆಲ್ಲಾ ಸುಖವನ್ನೇ ಬಯಸುತ್ತಾರೆ. ಆದರೆ ಆ ಸುಖವು ಇರತಕ್ಕ ಸ್ಥಾನವು ಗೊತ್ತಿಲ್ಲವೆ. ಬೇವಿನ ಗಿಡದಲ್ಲಿ ಮಾವಿನ ಹಣ್ಣನ್ನು ಹುಡುಕಿದಂತೆ, ದುಃಖಮಯವಾದ ಈ ಸಂಸಾರದಲ್ಲಿ ಸುಖವನ್ನು ಹುಡುಕಿದರೆ ಅದು ಸಿಗುವ ಬಗೆ ಹೇಗೆ?

ಕೌ.–ಏನು? ಈ ಸಂಸಾರದಲ್ಲಿ ಸುಖವಿಲ್ಲವೆ? ತಂದೆ–ತಾಯಿಗಳ ಸುಖ, ಮಡದಿ–ಮಕ್ಕಳ ಸುಖ, ಬಂಧು–ಬಾಂಧವರ ಸುಖ–ಹೀಗೆ ಸುಖದ ಬುಗ್ಗೆಯಾಗಿರುವ ಈ ಪ್ರಪಂಚ ದುಃಖದ ಮಡುವೆಂದು ಹೇಳುವ ಈ ನಿನ್ನ ಮಾತು ಸೋಜಿಗವಲ್ಲವೆ?

ಸಾ.–ಕೌಶಿಕಾ, ಹಾದಿಯಲ್ಲಿ ಹೋಗುವವನಿಗೆ 'ಅಪ್ಪಾ' ಎಂದು ಕರೆದರೆ ಅವನು ಅಪ್ಪನಾಗಬಲ್ಲನೆ? ಅದರಂತೆ ಹಾದಿ ಸೋಬತಿಯರಾದ ಈ ಮಡದಿ–ಮಕ್ಕಳು ನಿಜವಾದ ಬಂಧುಗಳು ಆಗಬಲ್ಲರೆ? ಅವರಿಂದ ದೊರೆಯುವ ಸುಖ ಶಾಶ್ವತವೆಂದು ನಂಬಬಹುದೆ? ಬಿಸಿಲಿನಿಂದ ಬಾಯಾರಿ, ಬಳಲಿ, ಬೆಂಡಾಗಿ, ವಿಶ್ರಾಂತಿಯನ್ನು ಹುಡುಕುವ ಮನುಷ್ಯನು ನಿಶ್ಚಿತ ನೆರಳುಳ್ಳ ಮರವನ್ನು ಬಿಟ್ಟು, ಚಲಿಸುವ ಮೋಡದ ನೆರಳಿಗೆ ನಿಂತು ವಿಶ್ರಾಂತಿಯನ್ನು ಹೊಂದಬೇಕೆಂಬುದು ತಿಳಿಗೇಡಿತನವಲ್ಲವೆ? ಅದರಂತೆ ನಿಶ್ಚಿತ ಸುಖವೆಲ್ಲಿದೆ ಎಂಬುದನ್ನು ತಿಳಿಯದೆ, ಗಾಳಿ ಮೋಡದಂತೆ ಓಡಿ ಹೋಗುವ ಮಡದಿ–ಮಕ್ಕಳಲ್ಲಿ ಸುಖವನ್ನು ಪಡೆಯಲು ಯತ್ನಿಸುವದು ಎಂಥ ಮರುಳತನವು?

ಪದ : ತಾಳ : ಕೇರವಾ ; ರಾಗ : ಭೈರವಿ

ಹಿಡಿಯೋ ಶಾಶ್ವತಾ, ಸುಖಪಥಾ ಭೂನಾಥಾ
ಭೂನಾಥಾ, ಭೂನಾಥಾ, ಸುಖಪಥಾ ॥ ಪಲ್ಲ ॥

ಅಸ್ಥಿರ ಕಾಯಾ, ಬಿಡು ಇದರ ಮಾಯಾ
ಕೌಶಿಕರಾಯಾ । ಸುಖಪಥಾ... ॥ ೧ ॥

ಹರಳಯ್ಯನು ಜೋಡನ್ನು ಭಕ್ತಿಯಿಂದ ತಲೆಯ ಮೇಲಿಟ್ಟುಕೊಂಡು ಮರಳಿ ನಡೆದಾಗ ಮಾರ್ಗದಲ್ಲಿ, ಬಿಜ್ಜಳನ ಮಂತ್ರಿ, ಮಧುವರಸನೆಂಬ ಬ್ರಾಹ್ಮಣ ಭೆಟ್ಟಿಯಾದನು. ಸುಂದರವಾದ ಜೋಡನ್ನು ಕಂಡು ಮೆಟ್ಟಲು ಮನಸ್ಸು ಮಾಡಿದ. ಆಗ ಹರಳಯ್ಯನು "ಕೆಟ್ಟಗುಣದ ಮಟ್ಟಿಯಾದ ನಿಮ್ಮಂಥ ಭ್ರಷ್ಟರು ಇವುಗಳನ್ನು ಮೆಟ್ಟಲಾಗದು; ಮೆಟ್ಟಿದರೆ ಸುಟ್ಟುಕೊಂಡು ಸಾಯುವಿ"–ಎಂದು ಸ್ಪಷ್ಟವಾಗಿ ಹೇಳಿದರೂ ಕೇಳದೆ, ಆವುಗೆಯನ್ನು ಕಸಿದುಕೊಂಡು ಮೆಟ್ಟಲು ಯತ್ನಿಸಿದ. ಕೂಡಲೇ ಅಂಗಾಲಿನಿಂದ ನೆತ್ತಿಯವರೆಗೆ ಅವನ ದೇಹವೆಲ್ಲ ಉರಿಯುತೊಡಗಿತು. ತಿಳಿಯಿತೇ ಕೌಶಿಕ? ಸತ್ಪುರುಷರೊಡನೆ ಸರಸವಾಡುವದು–ಸಂಕಟಕ್ಕೆ ಮೂಲ! ಆದ್ದರಿಂದ ಎಚ್ಚತ್ತು ನೋಡು; ಅಷ್ಟೂ ಮೀರಿ ನನ್ನನ್ನು ಮುಟ್ಟ ಬಂದರೆ, ಸುಣ್ಣ–ಸುಟ್ಟಂತೆ ಸುಟ್ಟು ಹೋಗುವಿ!

ಕೌ.–ಎಲೆ ನಾರಿ, ಶಿವಶರಣರ ಶೀಲವನ್ನು ನಾ ಬಲ್ಲೆ, ನಿನ್ನ ಬಡಿವಾರದ ಮಾತು ನನಗೆ ಬೇಕಾಗಿಲ್ಲ. ನನ್ನ ಮಾತಿಗೆ ಸಮ್ಮತಿಸದೆ. ಹೆಮ್ಮೆಯಿಂದ ನುಡಿದರೆ ನೆಟ್ಟಗಾಗಲಿಕ್ಕಿಲ್ಲ.

ಸಾ.–ಸಾತ್ವಿಕಿಗೆ ಹೆಮ್ಮೆಯ ಹೆಸರೂ ಸಹ ಗೊತ್ತಾಗದು. ಸತ್ವಗುಣದಲ್ಲಿ ಹೆಮ್ಮೆ ಇರುವದೇ ಇಲ್ಲ.

ಕೌ.– ಹೆಮ್ಮೆ ಇಲ್ಲದಿದ್ದರೆ ಸುಮ್ಮನೆ ಏಕೆ ಸಮ್ಮತಿಸಲೊಲ್ಲೆ? ಬಡತನದಲ್ಲಿ ಹುಟ್ಟಿ ಬಳಲುವ ನಿನ್ನನ್ನು ಸುಖಸಾಗರದಲ್ಲಿ ತೇಲಿಸಬೇಕೆಂದು ಬಯಸಿ ನಿನ್ನನ್ನು ಬರಮಾಡಿಕೊಂಡರೆ, ನೀನು ನಿನ್ನ ಹಾಳ ಪುರಾಣವನ್ನೇ ಹೇಳುತ್ತಿರುವಿಯಲ್ಲ!

ಸಾ.–ಅರಸಾ, ನಾನು ಯಾವಾಗಲೂ ಸುಖಸಾಗರದಲ್ಲಿಯೇ ಇರುವೆನು. ನಿನಗೂ ಆ ಸುಖದ ಸವಿ ದೊರೆಯಲೆಂದೇ ಹೇಳುತ್ತಿರುವೆನು.

ಕೌ.–ನನಗೆ ಸುಖವಾಗಲೆಂದು ನಿನ್ನ ಇಚ್ಛೆ ಇದ್ದರೆ ನನ್ನನ್ನು ಮದುವೆಯಾಗಿ ಸುಖ ನೀಡಲು ಏಕೆ ಹಿಂಜರಿಯುವಿ?

ಸಾ.–ನೀನು ಬಯಸುವ ಸುಖವಾದರೂ ಯಾವದು?

ಕೌ.– ನನಗೆ ಬೇಕಾದುದು ನಿನ್ನ ಅಂಗಸಂಗ.

ಸಾ.–ಮೂಢಾ, ಹೆಣ್ಣಿನ ಅಂಗಸಂಗದಿಂದ ನಿಜವಾದ ಸುಖ ದೊರೆಯುವದೇ?

ಕೌ.– ಹಾಗಾದರೆ, ಆ ಸುಖ ಮತ್ತೇತರಿಂದ ದೊರೆಯುತ್ತದೆ?

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ

ಹರದಿಮಣಿ ನೀ ಎನ್ನ ಜರೆದು ಹೋಗುವದೆಲ್ಲಿ !
ಭರದಿ ಕಳೆಯುವೆ ನೀನುಟ್ಟ ಶಾಲಿ
ಮಾನಹಾನಿಯ ಗೈವೆ ಜನದಲ್ಲಿ
ನಿನ್ನ ಚಿತ್ರದ ನೆಲಿ, ಸರ್ವರು ನೋಡಲಿ
ಪಂಥವೆನಿತು ನಿನ್ನ ಮನದಲ್ಲಿ ಭೂಪನಲ್ಲಿ ॥ ೧ ॥

ಸಾ.– ಕ್ಷಿತಿಯೊಳು ಫಲಪುರ ಮೃತಜಿತ ಸಿದ್ಧೇಶ
ಗತಿಯೆಂದು ನಿಲ್ಲುವೆ ನಾ ಇನ್ನು
ಕಾಯ್ವನೋ ನನ್ನ ಅಭಿಮಾನ

ಕೌ. ಅವ ಯಾವ ದೇವಾ ನಿನ್ನನು ಕಾಯ್ವನು
ಸುಂದರಿ ತೀರಿತೆ ನಿನ್ನ ಹ್ಯಾವಾ ॥ ೨ ॥

(ಸೀರೆಯನ್ನು ಸೆಳೆಯುತ್ತ) ಎಲಾ ಇದೇನು! ನಾನು ಎಷ್ಟು ಸೆಳೆದರೂ ಉಟ್ಟ ಸೀರೆ ಮುಗಿಯಲೊಲ್ಲದು. ನನ್ನ ಕಣ್ಣಿಗೇಕೋ ಕತ್ತಲೆ ಕವಿಯತೊಡಗಿದೆ... ಇವಳ್ಯಾರು? ಇವಳು ಸಾತ್ವಿಕಿಯೇ? ಅಲ್ಲಲ್ಲ ; ಶುದ್ಧ ಶಿವಯೋಗಿನಿ! ಇಂಥವಳನ್ನು ಮುಟ್ಟಿದರೆ ನನ್ನಗತಿ ಏನಾದೀತು?

ಪದ : ತಾಳ ; ಕೇರವಾ ; ರಾಗ : ಜಯಜಯವಂತಿ

ಶಿಶುವಾಗಿ ಮುನ್ನ ಬಳಲಿದರು
ಅನಸೂಯೆಗಾಗಿ ಹರಿಹರರು ಜಗದಿ, ನಿಜದಿ ॥ ಪಲ್ಲ ॥

ಮಾನಿನಿಯ ವ್ರತಹಾನಿಗೈಯಲು,
ಜ್ಞಾನಮೂರ್ತಿಗಳು, ಪೋಗಿ
ದ್ವಿಜರಾಗಿ ಬಳಲಿದರೊ, ತಾವು ಕೂಸಾಗಿ । ಜಗದಿ.... ॥ ೧ ॥

ಜಾಣೆ ಮುದ್ದು ಶಿವಪ್ರಾಣಿ ಮುನಿಪಾ
ನನಗೆಂದಿಗಾಗದೊ ಕ್ಷೇಮ ಶರಣರ ಮಹಿಮಾ
ತಿಳಿಯದೆ ಹೋದೆ ಸುಡು ಜನ್ಮ । ಜಗದಿ......... ॥ ೨ ॥

ಶರಣೆ ಪೊಂದಿಹೆನು ಕರುಣಿಸೆನ್ನನು
ಮರಣರಹಿತ ಮಾದೇವಿ ಭಕ್ತಾನುಭಾವಿ
ಉದ್ಧರಿಸಿ ಸಲಹು, ದುರ್ದೈವಿ ಜಗದಿ......... ॥ ೩ ॥

ಹರನಲ್ಲಿ ಭಕ್ತಿ ಇರಿಸಿ ಸದ್ಗತಿ
ಪಡೆಯೋ ಭೂಪತಿ । ಸುಖಪಥಾ.... ॥ ೨ ॥

ಈಶನ ದಾಸಾ, ನೀನಾಗೋ ಅರಸಾ
ಪಡೆಯುವಿ ಮೋಕ್ಷಾ । ಸುಖಪಥಾ... ॥ ೩ ॥

ಸುಖದ ಸುಳಿವೇ ಇಲ್ಲದ ಈ ಪ್ರಪಂಚದಲ್ಲಿ ಸುಖವುಂಟೆಂಬ ಸುಳ್ಳಿನ ಶೂಲಕ್ಕೆ ಬೀಳಬೇಡ. ಗೊತ್ತುಗುರಿಯಿಲ್ಲದೆ ಸತ್ತ ಹುಳಗಳನ್ನು ಕುಕ್ಕಿ ತಿನ್ನುವ ಸಮಯದಲ್ಲಿ, ಹದ್ದು ಬಂದು ಎರಗೀತೆಂಬ ಎಚ್ಚರವಿಲ್ಲದ ಪಾರಿವಾಳದಂತೆ ಹೊನ್ನು ಹೆಣ್ಣು, ಮಣ್ಣು–ಎಂಬ ಹುಳಗಳನ್ನು ತಿನ್ನುವ ಮಾನವನಿಗೆ ಮೃತ್ಯು ಎಂಬ ಮುದಿಹದ್ದು ಯಾವಾಗ ಬಂದು ಮುತ್ತೀತೆಂಬ ಅರಿವು ಇರಲಾರದು. ಆದ್ದರಿಂದ ಮೃತ್ಯು ಒಯ್ಯದ ಮುನ್ನ ನಿತ್ಯ ಶಿವಧ್ಯಾನದಲ್ಲಿದ್ದು, ಶಾಶ್ವತ ಸುಖವನ್ನು ಪಡೆಯುವುದು ಒಳ್ಳೆಯದು. ಇದನ್ನು ಸರಿಯಾಗಿ ತಿಳಿದುಕೊಂಡು ಸಂಸಾರ ಸುಖಕ್ಕೆ ಬಲಿಬೀಳದೆ ಪಾರಮಾರ್ಥ ಚಿಂತೆಯಲ್ಲಿ ಉಳಿ ; ಅದು ನಿಜವಾದ ಸುಖವನ್ನು ನೀಡಬಲ್ಲುದು.

ಕೌ.–ಎಲೆ ನಾರಿ, ಇನ್ನು ಮೇಲೆ ನಿನ್ನ ಶಾಸ್ತ್ರದ ಗಂಟನ್ನು ನನ್ನ ಮುಂದೆ ಬಿಚ್ಚಬೇಡ. ಮುಂದೆ ಸಿಗಬಹುದಾದ ಶಾಶ್ವತ ಸುಖವನ್ನು ನೆನೆದು, ಇಂದಿನ ಸುಖಕ್ಕೆ ನೀರು ಬಿಡುವದು ಮೂಢತನವಲ್ಲವೆ? ಬಾಲೆಯರ ಮೇಲೆ ಬಲಾತ್ಕಾರ ಮಾಡುವದು ಬಲಶಾಲಿಗಳಿಗೆ ಒಪ್ಪುವ ಮಾತಲ್ಲವೆಂದು ನಾನು ಇಲ್ಲಿಯವರೆಗೆ ತಾಳುತ್ತ ಬಂದರೆ, ನೀನು ನನ್ನ ಮೋರೆಯ ಮೇಲೆ ಕೈಯೆಳೆದು ಇಲ್ಲಿಂದ ಜಾರಿ ಹೋಗಲಿಕ್ಕೆ ಪ್ರಯತ್ನ ಮಾಡುತ್ತಿರುವಿ. ಈ ನಿನ್ನ ಸಾಹಸವು ಎನ್ನ ಮುಂದೆ ನಡೆಯದು. ನೀನು ನನಗೆ ಅನುಕೂಲಳಾಗಿ ನಡೆದರೆ ಉತ್ತಮ; ಇಲ್ಲದಿದ್ದರೆ ನಿನ್ನ ಸೀರೆಯನ್ನು ಕಳಚಿ ಮಾನಭಂಗ ಮಾಡದೆ ಇರಲಾರೆ.

ಸಾ.–ಛೀ ಭ್ರಷ್ಟಾ, ದೂರ ಸರಿ. ನನ್ನನ್ನು ಮುಟ್ಟಿದರೆ ನಿನಗೆ ಸೃಷ್ಟೀಶನ ಆಣೆ! ಈ ಮೊದಲು ನನ್ನ ಹೇಳಿಕೆಯಂತೆ ನಡೆಯುವೆನೆಂದು ವಚನ ಕೊಟ್ಟು, ಆದನ್ನೀಗ ಲಕ್ಷ್ಯಕ್ಕೆ ತಾರದೆ ನನ್ನ ಮೈಮೇಲೆ ಏರಿ ಬರುತ್ತಿರುವಿ. ಮಾನಭಂಗದ ಭಯವನ್ನು ತೋರಿಸುತ್ತಿರುವಿ. ಏರಿಬರುವ ಪತಂಗದಂತಿದ್ದ ನಿನಗೆ ನಾನೊಂದು ಅಗ್ನಿಯ ಜ್ವಾಲೆಯೆಂದು ತಿಳಿ. ಮೂರ್ಖಾ, ನಿನ್ನೊಡನೆ ವಾದ ವಾಡಿ ಫಲವೇನು? ನಾನೀಗಲೇ ಹೊರಟೆ.

ಕೌ.–ಎಲ್ಲಿಗೆ ಹೋಗುವಿ? ನಿನ್ನನ್ನು ಬಿಡುವವರಾರು? ನಿನ್ನ ಅಧರಾಮೃತವನ್ನು ಸವಿಯದೆ ಬಿಡಲಾರೆ. ಈಗಲೇ ನಿನ್ನ ಅಂದವಾದ ಅಂಗವನ್ನು ಅಪ್ಪಿಕೊಂಡು ಆಲಿಂಗನ ಸುಖವನ್ನು ಹೊಂದುತ್ತೇನೆ.

ನೀನು ಬಿಟ್ಟು ಹೋಗೆಂದರೂ ಹೋಗದೆ ನಿನ್ನಲ್ಲಿಯೇ ಗುಪ್ತಳಾಗಿದ್ದು ತಾಯಿಯು ಮಗನನ್ನು ಸಲುಹುವಂತೆ ಸಲುಹುತ್ತೇನೆ. ನೀನು ಆಶೆಯೆಂಬ ಪಿಶಾಚಿಯನ್ನು ಬಿಟ್ಟು, ಕಾಮ ಕ್ರೋಧಾದಿಗಳನ್ನು ಸುಟ್ಟು, ಸದ್ಗುರುವಿನಲ್ಲಿ ನಂಬಿಗೆಯನ್ನಿಟ್ಟು, ನೀನಾರೆಂಬುದನ್ನು ತಿಳಿದುಕೊ.

ಕೌ.–ತಾಯಿ, ನಾನು ಯಾರೆಂಬುದು ನಿನಗೆ ಗೊತ್ತಿಲ್ಲವೆ? ಎಂಥ ವಿಚಿತ್ರ ಮಾತಿದು!

ಸಾ.–ಮಗು, ನೀನು ಯಾರು ಹೇಳು?

ಕೌ.–ನಾನು ಕೌಶಿಕ.

ಸಾ.–ನೀನು ಎಂದಿನಿಂದ ಕೌಶಿಕನಾದೆ?

ಕೌ.–ನಾನು ಹುಟ್ಟಿದ ಹನ್ನೆರಡನೆಯ ದಿನದಲ್ಲಿ ನನ್ನನ್ನು ತೊಟ್ಟಿಲದಲ್ಲಿರಿಸಿ ಹೆಸರಿಟ್ಟಾಗಿನಿಂದ ಕೌಶಿಕನೆನಿಸಿದೆ.

ಸಾ.–ಅದಕ್ಕಿಂತ ಮೊದಲು ನೀನೆಲ್ಲಿದ್ದೆ?

ಕೌ.–ಪ್ರತಿನಿತ್ಯ ಹುಟ್ಟುವವರನ್ನು ನೋಡಿ, ನಾನಾದರೂ ತಾಯಿಯ ಹೊಟ್ಟೆಯಲ್ಲಿ ಒಂಬತ್ತು ತಿಂಗಳವರೆಗೆ ಇದ್ದೆನೆಂದು ಹೇಳಬಲ್ಲೆ.

ಸಾ.–ತಾಯಿಯ ಹೊಟ್ಟೆಯೊಳಗೆ ಮೂಡುವ ಮೊದಲು, ನೀನು ಏನಾಗಿದ್ದಿ ಗೊತ್ತಿದೆಯೆ?

ಕೌ.–ತಾಯಿ ಅದು ನನಗೆ ತಿಳಿಯದು.

ಸಾ.–ಈಗ ನೀನು ಎಂತು ಇರುವೆ?

ಕೌ.–ಸ್ನಾಯು ಮಾಂಸದಿಂದ ಮೆತ್ತಿದ ಎಲುಬಿನ ಹಂದರವಾಗಿದ್ದೇನೆ.

ಸಾ.–ಒಳ್ಳೆಯದು. ಈಗ ನೀನಿರುವ ಈ ಎಲುಬಿನ ಹಂದರ ಸ್ಥಿರವಾದುದೆ?

ಕೌ.–ಇಲ್ಲ. ಪ್ರತಿನಿತ್ಯ ಸಾಯುವವರನ್ನು ನೋಡಿ ಈ ನನ್ನ ದೇಹದ ಹಂದರ ಒಂದಿಲ್ಲೊಂದು ದಿನ ಮುರಿದು ಬಿದ್ದು, ಮಣ್ಣುಪಾಲಾಗುವದೆಂದು ಹೇಳಬಲ್ಲೆ.

ಸಾ.–ಈ ನಿನ್ನ ದೇಹ ಸುಟ್ಟು ತಟ್ಟಾದ ಮೇಲೆ ನೀನೆಲ್ಲಿಗೆ ಹೋಗುವಿ? ಯಾವ ಗಿಡದ ತಪ್ಪಲಾಗುವಿ? ನಿನಗೆ ಗೊತ್ತಿದೆಯೆ?

ಕೌ.–ತಾಯಿ ಅದು ನನಗೆ ತಿಳಿದಿಲ್ಲ.

ಸಾ.–ಶಿವ ಶಿವಾ, ತಮ್ಮ ಗುರುತು ತಮಗೆ ತಿಳಿಯದ. ಈ ನರರಿಗೆ ಮಾಯೆಯ ಮುಸುಕು ಬಿದ್ದಿರುವದು.

ಶಿವಶಿವಾ, ಸತ್ಯಶರಣರ ಅಗಾಧ ಮಹಿಮೆಯನ್ನು ಎಷ್ಟೆಂದು ಬಣ್ಣಿಸಲಿ? ನಾನು ಕಳೆಯ ಹೋದ ಸೀರೆ ಅಕ್ಷಯವಾದುದಲ್ಲದೆ ಶುದ್ಧ ಶಿವಯೋಗಿನಿಯ ರೂಪ ಅವಳಲ್ಲಿ ಪ್ರಕಟವಾಯಿತು. ಹಿಂದಕ್ಕೆ ಅತ್ರಿ ಮಹರ್ಷಿಯ ಹೆಂಡತಿಯಾದ ಅನಸೂಯಾದೇವಿಯ ಪಾತಿವ್ರತ್ಯದ ಪರೀಕ್ಷೆಗಾಗಿ ತ್ರಿಮೂರ್ತಿಗಳು ಅವಳಲ್ಲಿಗೆ ಹೋಗಿ, ದಿಗಂಬರೆಯಾಗಿ ತಮಗೆ ಉಣಬಡಿಸಬೇಕೆಂದು ಕೇಳಿಕೊಂಡರು. ಆಗ ಅವಳು ತನ್ನ ಪತಿವ್ರತಾ ಸಾಮರ್ಥ್ಯದಿಂದ ಅವರನ್ನು ಶಿಶುಗಳನ್ನಾಗಿ ಮಾಡಿದ್ದು ಸರ್ವರಿಗೂ ತಿಳಿದ ಮಾತಾಗಿದೆ. ಅವರು ಕೊನೆಗೆ, ಅವಳಿಂದಲೇ ತಮ್ಮ ನಿಜ ಸ್ವರೂಪವನ್ನು ಧರಿಸಿದರು. ಅದರಂತೆ ನಾನಾದರೂ ಈ ಶಿವಯೋಗಿನಿ ಸಾತ್ವಿಕಿಯಿಂದಲೇ ಉದ್ಧಾರ ಹೊಂದಿ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುತ್ತೇನೆ.

ಸಾ.–ಮಹಾರಾಜನೇ, ಹೀಗೇಕೆ ಯೋಚಿಸುತ್ತ ನಿಂತಿರುವಿರಿ?

ಕೌ.–ತಾಯೀ, ನನ್ನಿಂದ ಮಹಾ ಅಪರಾಧವಾಯಿತು. ಧರ್ಮದೇವತೆಯಂತಿರುವ ನೀನು ನನ್ನ ಅಪರಾಧವನ್ನು ಕ್ಷಮಿಸಿ ಉದ್ಧರಿಸಬೇಕೆಂದು, ನಿನ್ನ ಪವಿತ್ರಪಾದವನ್ನು ಹಿಡಿದು ಬೇಡಿಕೊಳ್ಳುತ್ತೇನೆ. ತಾಯಿ, ಮಹಾದೇವಿ, ಕಾಪಾಡು.

(ಪಾದವನ್ನು ಮುಟ್ಟಿ ನಮಸ್ಕರಿಸುವನು.)

ಸಾ.– ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಏಳು ಮಗನೆ, ತಾಳೊ ಸುಗುಣ
ಬಾಳುವಿಯೊ ನೀ ಸೌಖ್ಯದಲಿ ॥ ಪಲ್ಲ ॥

ದುಗುರ್ಣ ದಹಿಸೊ, ಸದ್ಗುಣ ವಹಿಸೊ
ಉರಿವ ಸಂಸಾರದ ಬಾಧೆಯ ಸಹಿಸೊ
ಸ್ಮರಿಸೊ, ಇರಿಸೊ, ಹರನಲ್ಲಿ ಪ್ರೇಮವ
ಸದ್ಗತಿಯ ನೀ ತನಯಾ, ಹೊಂದುವಿಯೊ ॥ ೧ ॥

ದುರ್ಗಣಕನುವ, ಕೊಡದಿರು ಮನವ
ಶಿವಸೇವೆಯಲಿ, ನಿನ್ನಯ ತನುವ
ಸವೆಸು ಸ್ಥವಿಸು ಶಿವನನ್ನು ಅನುದಿನ
ಭವನೀಗೊ, ಸುಖಿಯಾಗೊ, ಮುಕ್ತನಾಗೊ ॥ ೨ ॥

ಮಗನೇ ಕೌಶಿಕಾ, ಭಯಪಡಬೇಡ, ಪಶ್ಚಾತ್ತಾಪದಿಂದ ನೀನೀಗ ಶುದ್ಧನಾಗಿರುವಿ, ದುಗುರ್ಣಗಳು ನಿನ್ನನ್ನು ಬಿಟ್ಟೋಡಿದವು. ಇದು ನಿನ್ನ ಭಾಗ್ಯ. ನಾನೀಗ,

ಇರಿಸಿ ದಯ ಉದ್ದರಿಸಿ, ಎನ್ನ ಭವ
ಹರಿಸಿ ರಕ್ಷಿಸೆ ಮಾತೆ ಗುರುಮೂರ್ತೆ
ಫಲಪುರಧೀಶನ ಸ್ಮರಿಸುತೆ । ಕರುಣಿ, ಕರುಣಿ ॥ ೨ ॥

ಮಾತೆ, ಧರ್ಮಾತ್ಮಳೂ ದಯಾಭರಿತಳೂ ಆದ ನಿನ್ನಂಥ ಶಿವಶರಣೆಯನ್ನು ಬಿಟ್ಟು ಇನ್ನೆಲ್ಲಿ ಸದ್ಗುರುವನ್ನು ಹುಡುಕಲಿ? ನಿಜವಾಗಿ ನೀನೇ ತಾಯಿ; ನೀನೆ ಗುರು. ನನಗೆ ನೀನಲ್ಲದೆ ಮತ್ತಾವ ಗುರುವೂ ಇಲ್ಲ. ಈ ಸಂಸಾರಬಾಧೆಯನ್ನು ತೊಲಗಿಸಿ; ಸತ್ಯ ಸುಖವನ್ನು ಅನುಗ್ರಹಿಸಿ, ಉದ್ಧಾರ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಸಾ.–ಮಗನೆ, ನೀನು ಮಹಾಸುಖವನ್ನು ಬಯಸುತ್ತಿರುವಿಯಾದರೆ ಸದ್ಗುಣಿಯಾಗಿ ಶಿವಮಂತ್ರವನ್ನು ನುಡಿ; ನುಡಿದಂತೆ ನಡಿ; ಶಿವಪೂಜೆ, ಶಿವಭಜನೆ, ಶಿವಧ್ಯಾನ ನಿನ್ನ ಅಂತರಂಗದಲ್ಲಿ ಸದಾ ನಡೆಯುತ್ತಿರಲಿ! ಅಂದರೆ ಆ ಕರುಣಾ ಸಾಗರನಾದ ಪರಶಿವನು ನಿನಗೆ ಸದ್ಗತಿಯನ್ನು ಕೊಟ್ಟು ಉದ್ಧರಿಸುವನು. ಇನ್ನು ನಾನು ನನ್ನ ಗುರುವಿನ ಬಳಿಗೆ ಹೋಗುತ್ತೇನೆ. ನಿನಗೆ ಮಂಗಳವಾಗಲಿ!

◆

ಪದ : ತಾಳ : ಕೇರವಾ ; ರಾಗ : ಜಯಜಯವಂತಿ

ಶಿವ ಶಿವಾ ಎಂಥ ಅಜ್ಞಾನಾ (ದುಗುಣ)
ಮುಸುಕಿಹುದು ಲೋಕಕ್ಕೆ ತಾ ಘೋರ ತಿಮಿರಾ ॥ ಪಲ್ಲ ॥
ಆರು ತಾವು ಎಂಬ ಮರ್ಮವರಿಯದೆ
ಭೂರಿ ಬಳಲುವರು ನರರು ಪಾಮರರು
ತ್ರಿತಾಪದಲ್ಲಿ ಬೇಯುವರು, ಘೋರ ತಿಮಿರಾ ॥ ೧ ॥

ಮರವು ಎಂಬುವ ಪರಿಯು ಮುಚ್ಚಿತು
ನೆರವು ತೋರದೆ ನರರು ಬಳಲುವರು
ಭ್ರಮಿಷ್ಠರಂತೆ ಈ ನರರು! ಘೋರ ತಿಮಿರಾ ॥ ೨ ॥

ಶಿವ ಶಿವಾ, ಮದುಗುಣಿಕೆಯನ್ನು ತಿಂದು, ನಾನಾರೆಂಬ ಅರಿವುದಪ್ಪಿ, ಮೈಮೇಲಿನ ಅರಿವೆಗಳನ್ನು ಹರಿಯುತ್ತ, ಮನಬಂದಂತೆ ಕೂಗಾಡಿ, ಕುಣಿದಾಡಿ, ಬೇಲಿ–ಕೋಲಿಗಳೆಂಬುದು ಗೊತ್ತಾಗದೆ, ಕಂಡಲ್ಲಿ ಬಿದ್ದು ಕಾಲು ಮುರಿದುಕೊಂಡು ಕಷ್ಟಪಡುವ ಮನುಷ್ಯನ ಹಾಗೆ ದುರ್ವ್ಯವಿಗಳು ಹೊನ್ನು–ಹೆಣ್ಣು ಮಣ್ಣೆಂಬ ಮದುಗುಣಿಕೆಯ ಮಬ್ಬು ತಲೆಗೇರಿ, ತಾವು ಯಾರೆಂಬ ಅರಿವುದಪ್ಪಿ, ಕಂಡಂತೆ ಕುಣಿದಾಡಿ ಎಷ್ಟು ಕಷ್ಟ ಪಡುತ್ತಿರುವರು! ಅವರಿಗೆ ಬರುವ ಕಷ್ಟಗಳಿಗೆ ಲೆಕ್ಕವೇ ಇಲ್ಲ. ಕೌಶಿಕಾ, ಜನನ–ಮರಣ ಚಕ್ರದಲ್ಲಿ ಸಿಕ್ಕ ನಿನಗೆ ಕೊನೆಗೊಮ್ಮೆ, ಈ ಅರಿವಿನ ಮಾನವ ಜನ್ಮ ಬಂದಿದೆ. ಇದನ್ನು ಅನರ್ಥಗೊಳಿಸಬೇಡ. ನಿತ್ಯದಲ್ಲಿ ಬರುವ ಕಷ್ಟನಷ್ಟಗಳನ್ನು ಕಳೆದುಕೊಳ್ಳಲು ಶಿವಮಂತ್ರವೊಂದೇ ಸಾಕು. ನೀನು ಯಾವಾಗಲೂ ಪಂಚಾಕ್ಷರಮಂತ್ರವನ್ನು ಜಪಿಸುತ್ತ ಸತ್ವಗುಣ ಪಡೆದು ನಿತ್ಯನಾಗು; ಸದ್ಗುರುವಿನ ಸನ್ನಿಧಿ ಪಡೆದು ಮುಕ್ತನಾಗು.

ಕೌ.– ತಾಯಿ, ಧರ್ಮದೇವಿಯಾದ ನಿನ್ನನ್ನು ಬಿಟ್ಟು ಇನ್ನೆಲ್ಲಿ ಸದ್ಗುರುವನ್ನು ಹುಡಕಲಿ?

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ (ಚಕ್ಕಡ)

ಪರಿಪಾಲಿಸೆನ್ನನು ಜನನಿ
ಗುರು, ಎನಗೆ ನೀನು, ಸಂಪನ್ನೆ ಕರುಣೆ, ಕರುಣಿ (ದುಗುಣ) ॥ ಪಲ್ಲ ॥

ಪಾಲಿಸೆನ್ನ ಗುಣಶೀಲೆ ನಿನ್ನಯ
ಬಾಲನಂದದಿ ನಿನ್ನ ಪೊಂದಿ, ಶರಣೇ ನೀ ಉಪದೇಶ ಮಾಡಿ
ಪೊಂದಿ ಶರಣ ಉಪದೇಶವಿತ್ತು ಉದ್ಧರಣ ! ಕರುಣಿ, ಕರುಣಿ ॥ ೧ ॥

ಅ.– ಹುಚ್ಚ, ಅದು ಕುಂಟ ಶಾಸ್ತ್ರವಲ್ಲ! ಕೈಯೆತ್ತಿ ಕೂಗಿ ಹೇಳುವ ಆಗಮ ಶಾಸ್ತ್ರ!! ಮಾನವರನ್ನು ಹಿಡಿದು ಹಿಪ್ಪೆ ಮಾಡುತ್ತಿವೆ ಪಂಚಭೂತಗಳು.

ದೂ.–ಹಾಗದರೆ, ಆ ಭೂತಗಳು ಯಾವ್ಯಾವು? ಅವುಗಳ ಹೆಸರೇನು?

ಅ.– ದೂತೇ, ಪೃಥ್ವಿ, ಅಪ್, ತೇಜ, ವಾಯು, ಆಕಾಶ–ಅಂದರೆ, ಮಣ್ಣು, ನೀರು, ಬೆಂಕಿ, ಗಾಳಿ, ಆಕಾಶ–ಇವೇ ಆ ಐದು ಮಹಾಭೂತಗಳು. ಇವು ಸರ್ವರನ್ನು ಹಿಡಿದು ಹಿಪ್ಪೆ ಮಾಡುತ್ತಿವೆ. ಈ ಪ್ರಪಂಚವು ಈ ಪಂಚಭೂತಗಳ ಚೇಷ್ಟೆಯಾಗಿರುವದು.

ದೂ.–ಸ್ವಾಮಿ, ಭೂತಚೇಷ್ಟೆ ಅಂದರೇನು?

ಅ.– ದೂತೆ, ಭೂತ ಚೇಷ್ಟೆಯನ್ನು ವಿವರಿಸಿ ಹೇಳುತ್ತೇನೆ; ಚಿತ್ತವಿಟ್ಟು ಕೇಳು; ಕಗ್ಗತ್ತಲೆಯಲ್ಲಿ ಹಾಯ್ದುಹೋಗುವ ಮನುಷ್ಯನಿಗೆ ಒಂದು ಭೂತ ಕಾಣಿಸುವದು. ಅದು ಒಮ್ಮೆ ಎಮ್ಮೆಯಾಗಿ, ಮತ್ತೊಮ್ಮೆ ನಾಯಿಯಾಗಿ, ಇನ್ನೊಮ್ಮೆ ಬೆಕ್ಕಾಗಿ–ಹೀಗೆ ಬಗೆ ಬಗೆಯ ರೂಪ ಧರಿಸಿ ಅವನಿಗೆ ತೋರಿ, ತೋರಿದಲ್ಲಿಯೇ ಮಾಯವಾಗುವದು. ಭೂಮಿಗೂ ಆಕಾಶಕ್ಕೂ ಏಕಾಕಾರವಾಗಿ ನಿಂತು ಹೆದರಿಕೆಯನ್ನು ಹುಟ್ಟಿಸುವದು, ಅದರಂತೆ ಈ ಪಂಚಭೂತಗಳು ನಾನಾ ನಾಮರೂಪಗಳನ್ನು ಧರಿಸಿ ಜೀವಾತ್ಮನನ್ನು ಪೀಡಿಸುತ್ತವೆ.

ದೂ.–ಪಂಚಭೂತಗಳಿಂದ ಜೀವಾತ್ಮನು ಬಿಡುಗಡೆಯಾಗುವ ಬಗೆ ಹೇಗೆ?

ಅ.– ದೂತೆ, ಭೂತ ಪೀಡಿಸುವ ರೀತಿ ನಿನಗೆ ಗೊತ್ತಿರಬೇಕಲ್ಲವೆ?

ದೂ.–ಭೂತ ಬಡಿದರೆ, ಮಂತ್ರಹಾಕಿ ಬಿಡಿಸುತ್ತಾರೆ.

ಅ.– ಅದರಂತೆಯೇ, ಪಂಚಭೂತಗಳು ಮಾನವನ ಸ್ವಾಧೀನವಾಗಬೇಕಾದರೆ, ಪಂಚಾಕ್ಷರ ಮಂತ್ರವನ್ನು ನಿತ್ಯದಲ್ಲಿ ಪಠಿಸಬೇಕು, ಈ ಶಿವಮಂತ್ರವನ್ನು ಪಠಿಸಿದವರಿಗೆ ಶಿವನು ಸದಾಸುಖವನ್ನು ಕೊಡುತ್ತಾನೆ. ಮುಕ್ತಿಯನ್ನು ಅಪೇಕ್ಷಿಸುವ ಮಾನವನು ಸದಾಚಾರ ಸಂಪನ್ನನಾಗಿ ಅಷ್ಟಾವರಣ, ಪಂಚಾಚಾರಗಳನ್ನು ಪಾಲಿಸುತ್ತ, ಶಿವಯೋಗ ಮಾರ್ಗವನ್ನು ಹಿಡಿದು ನಡೆಯಬೇಕು, ಅದೇ ಸದ್ಗತಿಯ ಸಾರ!

ದೂ.–ಮಹಾಸ್ವಾಮಿ, ಇದೆಲ್ಲ ನಮಗೆ ಹೇಗೆ ತಿಳಿಯಬೇಕು? ಭಕ್ತಿಯೇ ನಮಗೆ ಮುಕ್ತಿ. ನಿಮ್ಮಂಥ ಮಹಾತ್ಮರನ್ನು ನೆನೆದು ನಾವು ಪುನೀತರಾಗುತ್ತೇವೆ.

ದೂತೆ–ಅಲ್ಲಮ ಪ್ರವೇಶ

ಅಲ್ಲಮ– ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಗತಿಯೇಂ ಶಿವಾಽ ನರರಿಗೆ (ದುಗುಣ) ॥ ಪಲ್ಲ ॥

ಆರು ತಾವೆಂಬುವಂಥ ಸಾರವರಿಯದೆ ನರರು
ಗಾರುಗೊಳ್ವರು, ಭವದಿ । ಗತಿಯೇಂ... ॥ ೧ ॥

ಮರುಳತನದಿ ಬಹು ದುರುಳಮಾಯೆಗೆ ತಮ್ಮ
ಕೊರಳವಿತ್ತಿಹರಕಟಾ । ಗತಿಯೇಂ... ॥ ೨ ॥

ಭೂತಪಂಚಕವಿಡಿದು, ಪ್ರೇತನಂದದಿ ನಡೆದು
ಯಾತನೆಗೊಳ್ವರಕಟಾ । ಗತಿಯೇಂ... ॥ ೩ ॥

ಶಿವ ಶಿವಾ, ಮಂಗನಾಡಿಸುವವನ ಕೈಯಲ್ಲಿ ತಮ್ಮ ಕೊರಳ ಹಗ್ಗವನ್ನು ಕೊಟ್ಟು ಅವನ ಹೇಳಿಕೆಯಂತೆ ಕುಣಿಯುತ್ತಿರುವ ಮಂಗಗಳಂತೆ ಈ ಮರುಳ ಮನುಷ್ಯರು ತಾವು ಯಾರೆಂಬುದನ್ನು ಅರಿಯದೆ ಮಾಯೆಯ ಕೈಗೆ ಸಿಕ್ಕು ಅವಳು ಕುಣಿಸಿದಂತೆ ಕುಣಿದಾಡಿ, ಎಷ್ಟೊಂದು ಕಷ್ಟ ಪಡುತ್ತಿರುವರು? ಕೇವಲ ಒಂದು ಭೂತ ಬಡಿದರೆ ಮೈ ಮೇಲೆ ಎಚ್ಚರವಿಲ್ಲದೆ ಇಚ್ಛೆಗೆ ಬಂದಂತೆ ಕುಣಿಯುತ್ತಾನೆ ಮಾನವ. ಅಂದ ಮೇಲೆ ಒಂದಲ್ಲ, ಎರಡಲ್ಲ– ಐದು ಭೂತಗಳು ಹಿಡಿದು ಹಿಂಡಿ ಹಿಪ್ಪಿಮಾಡುತ್ತಿರುವಾಗ ಅವನ ಗತಿಯೇನಾಗಬೇಕು? ಅವುಗಳ ಹಿಡಿತದಿಂದ ಪಾರಾಗುವದೇ ಮಾನವನ ಪರಮ ಧರ್ಮ. ಸುಮ್ಮನೆ ಬಿಟ್ಟರೆ ಅವುಗಳಿಂದಲೇ ನರನ ನಾಶ ಖಂಡಿತ.

ದೂತೆ–ಹೆಚ್ಚಿನ ಸಾಧುಗಳು ! ಸಾಧುಗಳೆಂದರೆ ಸಾಕು; ಕಂಡದ್ದಕ್ಕೆಲ್ಲ ಶಾಸ್ತ್ರ ಹೇಳಿಕೋತ ನಿಲ್ಲತಾವು !! ಸ್ವಾಮಿ, ಏನೇನೋ ಶಾಸ್ತ್ರ ಉಗಳಲು ಹೊರಟಿರುವಿರಲ್ಲ?

ಅ.– ಏನೋ ಮೂಢಳೆ, ಈಗ ನಾನು ಯಾವ ಶಾಸ್ತ್ರ ಹೇಳಿದೆನು?

ದೂ.–ಈ ಜಗತ್ತಿನ ಜನರಿಗೆ ಐದು ಭೂತಗಳು ಹಿಡಿದಿರುವವೆಂದು ಏನೇನೋ ಒಟಗುಟ್ಟಿದಿರಲ್ಲ? ಅದು ಯಾವ ಕುಂಟ ಶಾಸ್ತ್ರ?

ಮುಕ್ತಿ ಪ್ರವೇಶ

(ಅಲ್ಲಮಪ್ರಭು ಚಾರ್ವಾಕ ವೇಷದಲ್ಲಿ ಪ್ರವೇಶಿಸುವನು)

ಅಲ್ಲಮ–ಲೋಕೋದ್ಧಾರಕ್ಕಾಗಿ ಅಲ್ಲಲ್ಲಿ ಸಂಚರಿಸಿ, ಅನೇಕ ಸಾಧುಸಂತರಿಗೆ ಮುಕ್ತಿ ಮಾರ್ಗವನ್ನು ತೋರಿಸಿದಂತಾಯಿತು. ಇನ್ನೊಂದು ಕಾರ್ಯ ಶೀಘ್ರವಾಗಿ ನೆರವೇರಬೇಕಾಗಿದೆ. ನನ್ನ ದರ್ಶನಕ್ಕಾಗಿ ಹಗಲಿರುಳು ಹಂಬಲಿಸುತ್ತ ಸಾತ್ವಿಕಿ ಈ ಕಡೆಗೆ ಬರುವಂತಿದೆ. ಆಹಾ! ಆ ಮುದ್ದು ಮಗಳ ಮಹಿಮೆಯನ್ನು ಎಷ್ಟೆಂದು ಕೊಂಡಾಡಲಿ! ಅವಳನ್ನು ಪರೀಕ್ಷಿಸಿ ಮುಕ್ತಿ ಮಾರ್ಗ ತೋರಿಸಲೆಂದೇ ಈ ಚಾರ್ವಾಕ ವೇಷವನ್ನು ಧರಿಸಿದ್ದೇನೆ, ನಾನೀಗ ಅವಳು ಬರುತ್ತಿರುವ ದಾರಿಯಲ್ಲಿಯೇ ಸುಳಿದು, ದರ್ಶನ ಕೊಟ್ಟು ಆಕೆಯ ಸತ್ವವನ್ನು ಪ್ರಕಟಗೊಳಿಸಿ ಉದ್ಧರಿಸುತ್ತೇನೆ. (ಸಾತ್ವಿಕಿ ಪ್ರವೇಶಿಸುವಳು)

ಅಲ್ಲಮ– ಪದ : ತಾಳ : ಕೇರವ ; ರಾಗ : ಜಯಜಯವಂತಿ

ಜಲಜಾಯತಾಕ್ಷಿ ಸುಕುಮಾರಿ
ನೀನಾರು ಪೇಳೆ ಸುಂದರಿ, ಚದುರಿ, ಚದುರಿ ॥ ಪಲ್ಲ ॥

ಕುಸುಮಾಕ್ಷಿ, ನಲ್ಲೆ, ಹೊಸ ಪ್ರಾಯದಲ್ಲೆ
ಸನ್ಯಾಸಿವೇಷವ್ಯಾಕೆ ಬಾಲೆ, ಗುಣಶೀಲೆ
ಹೆಸರೇನು ನಿನ್ನ ಪಯಣೆಲ್ಲೆ ॥ ೧ ॥

ಸಾತ್ವಿಕಿ.– ಪದ : ತಾಳ : ಕೇರವಾ ; ರಾಗ : ಜಯಜಯವಂತಿ

ಧರ್ಮದೇವಿ ನಾ ಕರ್ಮಘಾಸಿ ಶಿ–
ವಾನುಭಾವಿ ತಿಳಿ ನಾನು, ನಿಜದಿ ನಾನು
ಗುರುದರ್ಶನಾರ್ಥ ಪೋಗುವೆನು ॥ ೨ ॥

ಅ.– ವಿಚಿತ್ರ ವೇಷತೊಟ್ಟ ನಾರೀಮಣೀ ನೀನಾರು?

ಸಾ.– ಪರನಾರಿಯನ್ನು ಮಾತನಾಡಿಸುವ ನೀನು ಯಾರು?

ಅ.– ದೂತೆ, ಭೂಮಿಯಲ್ಲಿ ಕರ್ಮಮಾರ್ಗವು ಪ್ರಬಲವಾಗಿ ಭಕ್ತಿಮಾರ್ಗವು ಲೋಪವಾಗತೊಡಗಿದೆ, ಅದನ್ನು ಕಂಡು ನಂದೀಶ್ವರನು ಬಸವಣ್ಣನಾಗಿ ಅವತರಿಸಿ, ಕಲ್ಯಾಣಪಟ್ಟಣದಲ್ಲಿ ಸರ್ವರ ಕಲ್ಯಾಣಕ್ಕಾಗಿ ಅನುಭವ ಮಂಟಪವನ್ನು ಸ್ಥಾಪಿಸಿ, ಶಿವಶರಣರ ಬರುವಿಕೆಗೆ ಹಾತೊರೆದು ಕೂತಿದ್ದಾನೆ. ನಾನು ಈಗಲೇ ಅಲ್ಲಿಗೆ ಹೋಗಿ, ದರ್ಶನ ಕೊಟ್ಟು, ಅಲ್ಲಿ ನೆರೆದ ಸಾತ್ವಿಕ ಶರಣರಿಗೆ ಮುಂದಿನ ಮಾರ್ಗ ತೋರಿಸಬೇಕಾಗಿದೆ ನಾನಿನ್ನು ಬರುವೆ.

♦

ಸತ್ವಗುಣವೇ ಸದಾಗತಿ'ಯೆಂದು ನಂಬಿದ ಹರಿಶ್ಚಂದ್ರನನ್ನು ದೇಶಭ್ರಷ್ಟನನ್ನಾಗಿ ಮಾಡಿ, ಹೊಲೆಯನ ಆಳಾಗುವಂತೆ ಮಾಡಿ, ಸುಡುಗಾಡ ಕಾಯಲಿಕ್ಕೆ ಹಚ್ಚಿದೆ. 'ಧರ್ಮ ದೇವಿಯಾದ ನನ್ನನ್ನು ಬಿಡಬೇಡ, ಧರ್ಮವೇ ಜಯ'ವೆಂದು ಹೇಳಿ ಉಬ್ಬಿಸಿ, ಆ ಪಾಂಡವರನ್ನು ಅನ್ನಕ್ಕೆ ಹೊರತು ಮಾಡಿ ಹನ್ನೆರಡು ವರುಷ ವನವಾಸಕ್ಕೆ ಅಟ್ಟಿದೆ. 'ಪರಹಿತವೇ ಪರಮ ಪುರುಷಾರ್ಥ; ಅದನ್ನೇ ನೀನು ಮಾಡುತ್ತಿರು'–ಎಂದು ವಿಕ್ರಮರಾಜನಿಗೆ ಬೋಧಿಸಿ, ನಿರಪರಾಧಿಯಾದ ಅವನ ಕೈಕಾಲುಗಳನ್ನು ಕಡಿಸಿ, ಮೋಟನನ್ನಾಗಿ ಮಾಡಿ ಕೂಡ್ರಿಸಿ ಬಿಟ್ಟೆ. ಸತ್ವಗುಣ ಸಂಕಟಕ್ಕೆ ಮೂಲ! 'ಸಾಧು ಎತ್ತಿಗೆ ಎರಡು ಹೇರು' ಎಂಬಂತೆ, ಮೆತ್ತನ್ನ ಸತ್ವಗುಣಿಗಳಿಗೆ ಭಾರ ಹೇರುವವರೇ ಹೆಚ್ಚಲ್ಲವೆ?

ಸಾ.–ತಮ್ಮಾ, ನೀನು ನನ್ನನ್ನು ತಿರಸ್ಕರಿಸಿ ಮಾತನಾಡಬೇಡ. ಸತ್ವಗುಣಕ್ಕೆ ಮೊದಲು ಅಲ್ಪಸ್ವಲ್ಪ ತೊಂದರೆ ಬಂದರೂ ಕೊನೆಗೆ, ಅದಕ್ಕೇ ಜಯವುಂಟು. ಸತ್ವಗುಣವನ್ನು ನಂಬಿದ ಹರಿಶ್ಚಂದ್ರನು ಸ್ಮಶಾನವನ್ನು ಕಾಯ್ದರೂ, ಧರ್ಮವೇ ಜಯವೆಂದು ಧರ್ಮರಾಜನು ವನವಾಸ ಸೋಸಿದರೂ ಪರಹಿತವೇ ಪರಮಾತ್ಮನ ಸೇವೆಯೆಂದು ನಂಬಿದ ವಿಕ್ರಮರಾಜನು ಕೈಕಾಲು ಕಡಿಸಿಕೊಂಡು ಮೋಟನಾದರೂ ಕೊನೆಗೆ ಸವೆಯದಂಥ ಸುಖವನ್ನು ಪಡೆದರಲ್ಲದೆ, ಅಳಿಯದ ಕೀರ್ತಿಯನ್ನು ಗಳಿಸಿದರು. ಕಿಚ್ಚಿಗೆ ಎರಗುವ ಇರುವೆಗಳು ತಾವೇ ಸುಟ್ಟುಕೊಂಡು ಸಂಕಟಪಡುವಂತೆ ಸಜ್ಜನರಿಗೆ ದುಃಖಕೊಟ್ಟ ದುಷ್ಟರು ಕೊನೆಗೆ, ತಾವೇ ದುಃಖವನ್ನು ಹೊಂದುವರು. ಕಾಸಿ ಬಡೆದರೆ ಬಂಗಾರಕ್ಕೆ ಬಣ್ಣ ಬರುವಂತೆ, ಕಾಡಿ ನೋಡಿದಷ್ಟು ಸಜ್ಜನರ ಸಾತ್ವಿಕಗುಣ ಕಳೆಯೇರುವದು. ಅದು ಶಿವನ ಮೆಚ್ಚುಗೆಗೆ ಪಾತ್ರವಾಗುವದು. ಹುಚ್ಚಾ, ಸತ್ಪುರುಷರ ದರ್ಶನದಿಂದ ಸೆಗಣಿಯೊಳಗಿನ ಹುಳವು ಸಹ ಕೈವಲ್ಯ ಹೊಂದಿದ್ದು ನಿನಗೆ ಗೊತ್ತಿಲ್ಲವೆ?

ಅ.– ಏನು? ಸತ್ಪುರುಷರ ದರ್ಶನದಿಂದ ಸೆಗಣಿಯ ಹುಳಕ್ಕೆ ಸದ್ಗತಿಯಾಗಿರುವದೇ? ಎಂಥ ಸೋಜಿಗದ ಮಾತಿದು!

ಸಾ.–ಸೋಜಿಗದ ಮಾತಲ್ಲ, ಮೂಜಗವು ಬಲ್ಲ ಮಾತು.

ಅ.– ಅದು ಸಂಭವಿಸಿದ ಬಗೆ ಹೇಗೆ?

ಸಾ.– ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಸಾಧುರ ದರ್ಶನದಿಂದ, ಫಲವೇನು ಬರುವದೆಂದು,
ಪೂರ್ವದಿ ನಾರದs ॥ ಪಲ್ಲ ॥

ಅ.– ನಾನು ಚಪಲನೆಂಬ ಚಾರ್ವಾಕನು. ಹೊಸ ಪ್ರಾಯದ ಕುಸುಮಾಕ್ಷಿ, ನೀನಾರು? ಎಲ್ಲಿಗೆ ಹೋಗುತ್ತಿರುವಿ?

ಸಾ.–ತಮ್ಮಾ, ನಾನು ಶಿವಶರಣರ ಸೇವಕಳು. ಪರಮ ಶಿವಭಕ್ತಳು; ನನ್ನ ಹೆಸರು ಸಾತ್ವಿಕಿ. ಸದ್ಗುರುವಿನ ದರ್ಶನಕ್ಕಾಗಿ ಹೋಗುತ್ತಿರುವೆನು.

ಅ.– ಹೀಗೋ? ಹಾಗಿದ್ದರೆ ಬಹು ವಿಚಿತ್ರ! ನೀನು ಸಾತ್ವಿಕಿಯೇ ಆಗಿದ್ದರೆ ನಿನ್ನಂತಹ ಪರಮಭ್ರಷ್ಟಳು ಮತ್ತೊಬ್ಬಳಿಲ್ಲ. ನೀನು ನಂಬಿದ ಮನುಜರನ್ನು ಮಹಾ ಕಷ್ಟಕ್ಕೆ ಗುರಿ ಮಾಡುವಿ, ಗೋಳಾಡಿಸುವಿ. ನಾನು ಈ ಮುಂಜಾವಿನಲ್ಲಿ ಏಕೆ ನಿನ್ನ ಮುಖವನ್ನು ನೋಡಿದೆನೊ, ಏನೋ? ಅದರ ಫಲವಾಗಿ ನಾನು ಯಾವ್ಯಾವ ಕಷ್ಟಗಳನ್ನು ಅನುಭವಿಸುವೆನೋ ತಿಳಿಯದು.

ಸಾ.–ತಮ್ಮಾ, ಧರ್ಮದೇವತೆಯಂತಿರುವ ನನ್ನನ್ನು ಕಂಡು ಎಲ್ಲರೂ ಧನ್ಯವಾಗುತ್ತಿದ್ದಾರೆ. ಆದರೆ ನೀನು ಮಾತ್ರ ನನ್ನ ದರ್ಶನ ಮಾತ್ರದಲ್ಲಿಯೇ ಕಷ್ಟಕ್ಕೆ ಗುರಿಯಾದೆನೆಂದು ಹೇಳುತ್ತಿರುವಿಯಲ್ಲ? ಇದೆಂಥ ವಿಚಿತ್ರ! ನಾನು ಯಾರಿಗೂ ಕಷ್ಟ ಕೊಡುವವಳಲ್ಲ. ಮೇಲಾಗಿ ಸತ್ವಗುಣಸಂಪನ್ನರ ಕಷ್ಟವನ್ನು ಕಳೆಯತಕ್ಕವಳು. ನನ್ನನ್ನು ನಂಬಿದವರು ಎಂದೂ ಕೆಟ್ಟಿಲ್ಲ; ಯಾವ ಕಷ್ಟಕ್ಕೂ ಗುರಿಯಾಗಿಲ್ಲ.

ಅ.– ಯಾರೂ ಕಷ್ಟಕ್ಕೆ ಗುರಿಯಾಗಿಲ್ಲವೇ? ಹೇಳುತ್ತೇನೆ ಕೇಳು :

ಪದ : ತಾಳ : ತ್ರಿತಾಳ ; ರಾಗ : ಮಿಶ್ರಕಾಪಿ (ಚಿಕ್ಕಡ)

ಸತ್ವಗುಣವನ್ನು ನಂಬಿ ಸತ್ಯ ಹರಿಶ್ಚಂದ್ರ ತಾ
ಭೃತ್ಯ ಹೊಲೆಯನಿಗಾಗಿ ಸಂತಾಪ–
ಹೊಂದಿದಾ ಆ ನರಕುಲದೀಪ
ಸುಡಗಾಡ ಕಾಯ್ದು, ಕಷ್ಟ ಸೋಸಿದ
ಸತ್ವಗುಣಕ್ಕೆ ಸುಖವೆಲ್ಲಿಯದು, ಜಗಸಿದ್ಧಾ ॥ ೧ ॥

ಧರ್ಮವೇ ಜಯವೆಂದು ಧರ್ಮಭೂಪತಿ ತಾ
ದುರ್ಧರ ವನವಾಸ ಸೋಸಿದಽಽ
ಬಹು ಬಗೆಯಿಂದ ತಾ ನಾಶ್ಯಾದ
ಪರಹಿತದಿಂದ ಮೋಟಾಗಿ ನಿಂದ
ವಿಕ್ರಮಭೂಪತಿ ತಾ ಹಿಂದೆ, ನಿನ್ನಿಂದಾ ॥ ೨ ॥

ಛೀ ಮೂಢಳೇ, 'ಸತ್ವಗುಣ ಸಂಪನ್ನೆಯಾದ ನನ್ನನ್ನು ನಂಬಿ ಯಾರೂ ಕೆಟ್ಟಿಲ್ಲ. ಯಾರೂ ಕಷ್ಟಕ್ಕೆ ಗುರಿಯಾಗಿಲ್ಲ' ಎಂದು ಯಾಕೆ ಬೊಗಳುತ್ತಿ?

ನಾರದನ ಮುಖವನ್ನು "ಹುಳು ಹಳು" ನೋಡಿ ಸತ್ತುಬಿತ್ತು. ಪುನಃ ನಾರದನು ಶ್ರೀಕೃಷ್ಣನ ಬಳಿಗೆ ಬಂದು, ಆ ಹಂಸಪಕ್ಷಿಯು ಏನೂ ಹೇಳದೆ ಸತ್ತುಹೋದ ಸುದ್ದಿಯನ್ನು ತಿಳಿಸಲು, ಕೃಷ್ಣನು ನಾರದನಿಗೆ "ಹಾಗಾದರೆ ನೀನಿನ್ನು ಒಂದುವರ್ಷದ ತರುವಾಯ ಬಾ; ಆಗ ಸಾಧುಗಳ ದರ್ಶನದಿಂದಾಗುವ ಶ್ರೇಯಸ್ಸನ್ನು ಹೇಳುತ್ತೇನೆ"ಂದು ತಿಳಿಸಿದನು. ಒಂದು ವರ್ಷದ ನಂತರ, ನಾರದ ಋಷಿಯು ಶ್ರೀಕೃಷ್ಣನಲ್ಲಿಗೆ ಬಂದು "ಸಾಧುಗಳ ದರ್ಶನದಿಂದ ಏನಾಗುವದೆ"ಂದು ಕೇಳಿದನು. ಆಗ ಕೃಷ್ಣಪರಮಾತ್ಮನು, "ಇಂಥ ಊರಲ್ಲಿ ಒಬ್ಬ ಅರಸನಿಗೆ ಒಂದು ಗಂಡು ಕೂಸು ಹುಟ್ಟಿ ಮೂರು ದಿವಸವಾಯಿತು. ಆ ಕೂಸನ್ನು ಕೇಳು" ಎಂದನು, ಆಗ ನಾರದನು ಶ್ರೀಕೃಷ್ಣಮೂರ್ತಿಗೆ, "ಸ್ವಾಮಿ ಒಳ್ಳೆಯದನ್ನೇ ಹೇಳಿದಿರಿ; ಆ ಹುಳವೂ ಆ ಹಂಸವೂ ಸತ್ತಂತೆ ಆ ಅರಸನ ಮಗನು ಸಾಯಬೇಕು; ಅವರು ನನ್ನ ಡುಬ್ಬಾ ಬೆಳಗಬೇಕು. ಉತ್ತಮ ಹಂಚಿಕೆ ಹಾಕಿದಿರಿ ನಾನು ಆ ಕೂಸನ್ನು ಕೇಳಲು ಹೋಗಲಾರೆ'–ಎಂದನು. ಆಗ ಶ್ರೀಕೃಷ್ಣನು, 'ಆ ಕೂಸು ಸಾಯುವದಿಲ್ಲ' ಎಂದು ಅಭಯವಿತ್ತನು. ನಾರದನು ಆ ಮೂರು ದಿನದ ರಾಜಕುಮಾರನ ಮುಂದೆ ನಿಂತು, 'ಕಂದಾ, ಸಾಧುಗಳ ದರ್ಶನದಿಂದ ಏನಾಗುತ್ತದೆ? ನನಗೆ ಹೇಳು, – ಎಂದು ಕೇಳಿದೊಡನೆಯೇ ಆ ಕೂಸು ಹಾಡಿದ ರೀತಿಯನ್ನು ಕೇಳು :

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಸಾಕ್ಷಾತ್ ಮುಕುಂದರೂಪಾಗಿ ಆ ಕಂದ
ನಿಂತಿತೋ ಮುನಿಮುಂದಽ ॥ ಪದ ॥

ನೋಡಿಕೋ ನಾರದಾ, ಬುದ್ಧಿವಿಶಾರದಾ
ಹುಳದ ರೂಪಾಗಿ ಇದ್ದೆ ನಾ ಹಿಂದ
ಸಾಧುವಾದ ನಿನ್ನಯ ದರ್ಶನದಿಂದ,
ಆಗಿ ನಿಂತೆ, ಸಾಕ್ಷಾತ್ ಗೋವಿಂದ (ಚಲತಿ)
'ನೋಡಿಕೋ ಮುನಿಲೋಲಾಽ
ಮುಕ್ತಿಗೆ ಅದು ಮೇಲಾ, ಸದ್ಗುಣಶೀಲಾ ॥ ೧ ॥

ಗುರುವೆ ಸರ್ವೇಶ್ವರಾ, ದೀನದಯಾಕರಾ
ಆಡಲಾಗದೊ, ಸಾಧುರ ನಿಂದಾ
ಅದರಿಂದ ತಪ್ಪದೋ ನರಕ ಮುಂದ

ಸೆಗಣಿ ಹುಳವನು ತೋರಿ, ಕೇಳು ಅಂದನೊ ಹರಿ
ಪರಮ ಸಾಧು ನಾರದನ ದರ್ಶನದಿಂದ
ಹುಳದ ಜನ್ಮವ ನೀಗಿs, ಅದೇ ಮುಂದ
ಹಂಸನಾಗಿ ಹುಟ್ಟಿತೋ ನಿಜದಿಂದ (ಚಲತಿ)
ಸಾಧುರ ದರ್ಶನದಿಂದ, ಫಲವೇನು ಬರುವದೆಂದು
ಹಂಸನ ಮರಿಯ ಕೇಳೋ ನಾರದಾ ॥ ೧ ॥

ಹಂಸ ನಾರದನ, ದರ್ಶನದಿಂದ ತಾನಾ
ಪಕ್ಷಿಜನ್ಮ ನೀಗುತ ಭೂಮಿ ಮೇಲಾ
ಅರಸಪಿಂಡ ಆಗಿ ಹುಟ್ಟಿತೋ ಆಗ ಬಾಲಾ
ಪುನಃ ಬಂದು ಕೇಳಿದ ಮುನಿಲೋಲಾ, (ಚಲತಿ)
ಪೇಳ್ಯೆ ರಾಜಕಂದ, ಸಾಧುರ ದರ್ಶನದಿಂದ
ಫಲವೇನು ನೀನೀಗ ತಿಳಿದ್ಯಾ ॥ ೨ ॥

ಚಾರ್ವಾಕ ಸಾಧುಗಳ ದರ್ಶನದಿಂದ ಸೆಗಣಿಯ ಹುಳಕ್ಕೆ ಸದ್ಗತಿಯಾದ ಸಂಗತಿಯನ್ನು ಹೇಳುತ್ತೇನೆ ಕೇಳು : ಪೂರ್ವದಲ್ಲಿ ನಾರದ ಋಷಿಯು ಶ್ರೀಕೃಷ್ಣನ ಹತ್ತಿರ ಹೋಗಿ, 'ಸ್ವಾಮಿ, ಸತ್ಪುರುಷರ ದರ್ಶನದಿಂದ ಏನಾಗುತ್ತದೆ'? ಎಂದು ಕೇಳಿದನು, ಅದಕ್ಕೆ ಶ್ರೀಕೃಷ್ಣನು, 'ನಾರದಾ, ಸತ್ಪುರುಷರ ದರ್ಶನದಿಂದ ಏನಾಗುವದೆಂಬುವದನ್ನು ಅದೋ ಸೆಗಣಿಯ ಉಂಡೆಯನ್ನು ಉರುಳಿಸಿಕೊಂಡು ಹೋಗುತ್ತಿರುವ ಆ ಹುಳವನ್ನು ಕೇಳು. ಅದು ಹೇಳುತ್ತದೆ'– ಎಂದನು. ಆಗ ನಾರದನು ಆ ಹುಳದ ಹತ್ತಿರ ಹೋಗಿ 'ಹುಳವೇ, ಸಾಧುಗಳ ದರ್ಶನದಿಂದ ಏನಾಗುತ್ತದೆ? ಎಂಬುದನ್ನು ನನಗೆ ಹೇಳು' ಎಂದನು. ಆಗ ಆ ಹುಳವು ನಾರದನ ಮುಖವನ್ನು 'ಹುಳುಹುಳು' ನೋಡಿ ಸತ್ತುಬಿತ್ತು. ಪುನಃ ನಾರದನು ಕೃಷ್ಣನ ಹತ್ತಿರಬಂದು,–'ಸ್ವಾಮಿ, ನಾನು ಕೇಳಿದಾಕ್ಷಣವೇ ಆ ಹುಳುವು ಸತ್ತು ಬಿತ್ತು; ಅದು ನನಗೆ ಏನನ್ನೂ ಹೇಳಲಿಲ್ಲ' ಎಂದನು. ಆಗ ಕೃಷ್ಣನು–'ಹಾಗಾದರೆ ಇನ್ನು ಹತ್ತು ತಿಂಗಳ ನಂತರ ನನ್ನಲ್ಲಿಗೆ ಬಾ, ಆಗ ನಿನಗೆ ಹೇಳುತ್ತೇನೆ' ಎಂದು ಹೇಳಿದನು. ಹತ್ತು ತಿಂಗಳಾದ ಮೇಲೆ ಪುನಃ ನಾರದನು ಬಂದು 'ಕೃಷ್ಣ ಪರಮಾತ್ಮಾ, ಸತ್ಪುರುಷರ ದರ್ಶನದಿಂದ ಏನಾಗುತ್ತದೆಂದು' ಕೇಳಿದನು. ಆಗ ಕೃಷ್ಣನು, "ಅಗೋ ಅಲ್ಲಿ ಹಾರಿ ಹೋಗುವ ಹಂಸವನ್ನು ಕೇಳು ; ಅದು ಹೇಳುತ್ತದೆ" ಅಂದನು. ಕೂಡಲೇ ನಾರದನು ಆ ಹಂಸ ಪಕ್ಷಿಯ ಬಳಿಗೆ ಹೋಗಿ "ಹಂಸ ಪಕ್ಷಿಯೆ, ಸಾಧುಗಳ ದರ್ಶನದಿಂದ ಏನಾಗುತ್ತದೆ"ಂದು ಕೇಳಿದನು. ಕೂಡಲೇ ಆ ಹಂಸ ಪಕ್ಷಿಯು

ಬೇಡುವ ಭಕ್ತರಿಲ್ಲದೆ ಬಡವ
ನಾದೆನೆಂದು ಬಸವನು ತಾ
ನುಡಿಯೆ ಗಡನೆ, ಕಡುಕೋಪದಿ ತಾ
ಖತಿಗೊಳುತಾ, ಮಾಚಿಯು ತಾ ॥ ೧ ॥

ಚಾರ್ವಾಕಾ, ಒಮ್ಮೆ ಮಾಚಿದೇವನಿಗೆ ಬಸವಣ್ಣನವರ ದರ್ಶನವಾಯಿತು. ಆಗ ಮಾಚಿದೇವನು, 'ಬಸವಾ, ನಿನ್ನ ಬಾಳ್ವೆಯು ಹ್ಯಾಗೆ ಸಾಗಿದೆ?' ಎಂದು ಕೇಳಿದನು, ಆಗ ಬಸವಣ್ಣನು, 'ಮಾಚಿದೇವಾ, ಬೇಡುವ ಭಕ್ತರಿಲ್ಲದೆ ಬಡವನಾಗಿದ್ದೇನೆ'–ಎಂದನು. ಆಗ ಮಾಚಿದೇವನು ಬಸವಣ್ಣನ ಸೊಕ್ಕು ಇಳಿಸಬೇಕೆಂದು ತಾನು ಮೈಲಿಗೆಯ ಅರಿವೆಗಳನ್ನು ಒಗೆಯುವ ಮಡುವಿನ ಹತ್ತಿರ ಕರೆದುಕೊಂಡು ಹೋದನು.

ಅ.– ಮುಂದೇನಾಯಿತು?

ಸಾ.–ಹೇಳುತ್ತೇನೆ ಕೇಳು :

ಪದ : ತಾಳ : ಕೇರವಾ ; ರಾಗ : ಮಿಶ್ರಕಾಪಿ

ಚಿಮ್ಮುವ ನೀರು ಹನಿಯ, ಕೊಟ್ಟಂತೆ ರತ್ನದ ಚಳೆಯು
ಸುರಿಯಿತು ಹೊನ್ನಿನ ಮಳೆಯು ॥ ಪಲ್ಲ ॥

ಈ ಭವ ಕಳಚಿದ, ಮಡಿವಳ ಮಾಚಿಯು
ಪರುಷಹಸ್ತ ಮುಟ್ಟಿದ ನೀರೆಲ್ಲ
ರತ್ನದ ರಾಶಿಯಾಯಿತೋ ಭೂಮಿಮ್ಯಾಲ
ಶಿವಶಿವ ಭಕ್ತರ ಘನ ಮೇಲಾ
ಭಕ್ತರ ಮಹಿಮಾ, ತಿಳಿಯದ ಅಧಮಾ
ಮನ್ನಿಸೆಂದೆನುತ, ಬೇಡಿದ ಕ್ಷಮಾ ॥ ೧ ॥

ಕನ್ನದ ಬೊಮ್ಮನು, ಗೋಡೆಯ ಮಣ್ಣನು
ತೋಡಿ ತೋಡಿ ಒಗೆದಂತೆ ಆ ಮಣ್ಣಾ
ಆಗಿ ಬೀಳಹತ್ತಿತೊ ಚಿನ್ನರತ್ನಾ
ಶಿವಶಿವ ಭಕ್ತರ ಮಹಿಮೆಯನ್ನಾ, (ಚಲತಿ)
ಭಕ್ತರ ಮಹಿಮಾ, ತಿಳಿಯದೆ ನೀನಾ
ಹಳಿಯಲು ಬೇಡೊ ನೀ ಇನ್ನಾ ॥ ೨ ॥

ಪೇಳಿದ ಕವಿವರ ಶಿವಾನಂದ (ಚಲತಿ)
ಫಲಪುರಧೀಶನ ನೆನೆಯುತೆ ಅನುದಿನಾ,
ಓಡಿಯೋ ನೀನು ಮುಕ್ತಿಮಾರ್ಗವನಾ ॥ ೨ ॥

ತಮ್ಮ, 'ಸಾಧುಗಳ ದರ್ಶನದಿಂದ ಏನಾಗುತ್ತದೆ?'-ಎಂದು ಆ ಅರಸನ ಮಗುವನ್ನು ನಾರದ ಋಷಿ ಕೇಳಲು, ಆ ಮೂರು ದಿವಸದ ಕಳಲು ಮನುಷ್ಯ ಜನ್ಮವನ್ನು ನೀಗಿ, ಸಾಕ್ಷಾತ್ ಮುಕುಂದನ ರೂಪವನ್ನು ಧರಿಸಿ ನಾರದನ ಮುಂದೆ ನಿಂತು, 'ಸಾಧು ಶ್ರೇಷ್ಠನಾದ ನಾರದ ಋಷಿಯೆ, ಸಾಧುಗಳ ದರ್ಶನದಿಂದ ಏನಾಗುತ್ತದೆ'-ಎಂಬುದನ್ನು ಹೇಳುತ್ತೇನೆ ಕೇಳು : 'ನಾನು ಎರಡು ವರ್ಷಗಳ ಹಿಂದೆ ಹುಳದ ಜನ್ಮದಲ್ಲಿದ್ದು ಸೆಗಣಿಯ ಉಂಡೆಯನ್ನು ಉರುಳಿಸಿಕೊಂಡು ಹೋಗುತ್ತಿದ್ದೆ. ಆಗ ಪರಮ ಸಾಧುವಾದ ನಿನ್ನ ದರ್ಶನ ನನಗಾಗಲು ಆ ಹುಳದ ಜನ್ಮ ಹೋಗಿ ರಾಜಹಂಸವಾಗಿ ಹುಟ್ಟಿದೆ. ಮುಂದೆ ಪುಣ್ಯವಶದಿಂದ ನಿನ್ನ ದರ್ಶನ ನನಗೆ ಪುನಃ ದೊರೆಯಲು, ಹಂಸ ಜನ್ಮವನ್ನು ನೀಗಿ ರಾಜಪುತ್ರನಾಗಿ ಜನಿಸಿದೆ. ಇಂದು ಸಾಧುಶ್ರೇಷ್ಠನಾದ ನಿನ್ನ ದರ್ಶನವಾಯಿತು. ಆದ್ದರಿಂದ ಈ ನರಶರೀರವು ಹೋಗಿ ಇಗೋ ಸಾಕ್ಷಾತ್ ಮುಕುಂದನೇ ಅಗಿ ನಿನ್ನ ಮುಂದೆ ನಿಂತಿರುವೆನು-ನೋಡು! ಎಂದು ಹೇಳಿ, 'ಕೃಷ್ಣಾ ಕೃಷ್ಣಾ' ಎನ್ನುತ್ತ ಕೈ ಚಪ್ಪಾಳೆ ಬಡೆಯುತ್ತ ವೈಕುಂಠಕ್ಕೆ ಹೋಯಿತು. ನೋಡು ಚಾರ್ವಾಕಾ, ಸತ್ಪುರುಷರ ದರ್ಶನದಿಂದ ಸಗಣಿಯ ಹುಳವು ಸಹ ಕೈವಲ್ಯವನ್ನು ಪಡೆಯಿತು. ಪರುಷ ಮುಟ್ಟಿದ ಕಬ್ಬಿಣ ಹೊನ್ನಾಗುವಂತೆ ಶಿವಶರಣರು ಮುಟ್ಟಿದ ಮಣ್ಣು ಚಿನ್ನವಾಗುವದು. ಹಿಂದೆ ಆಗಿ ಹೋದ ಶಿವಶರಣರೆಲ್ಲರೂ ಸತ್ವಗುಣದಿಂದಲೇ ಸದ್ಗತಿಯನ್ನು ಹೊಂದಿದರು.

ಅ.-ಬಿಡು ಬಿಡು, ಏನು ಹೇಳುವಿ ನಿನ್ನ ಶರಣರ ಶೀಲವನ್ನು? ಮಡಿವಾಳ ಮಾಚಿದೇವನಿಗೆ ಮೈಲಿಗೆಯ ಅರಿವೆಗಳನ್ನು ಒಗೆದು ಹೊಟ್ಟೆ ಹೊರೆದುಕೊಳ್ಳುವದೇ ಕೆಲಸ! ಬೇಡರ ಕನ್ನಯ್ಯನಿಗೆ ಕಳವು ಮಾಡಿ ಸಂಸಾರ ಸಾಗಿಸುವದೇ ಕೆಲಸ!! ಮಾದಿಗರ ಚನ್ನಯ್ಯನಿಗೆ ಪಾದರಕ್ಷೆಗಳನ್ನು ತಯಾರಿಸಿ ಉಪಜೀವನ ಮಾಡಿಕೊಳ್ಳುವದೇ ಕೆಲಸ!!! ನೋಡು, ನಿನ್ನ ಶರಣರು ದುಡಿದುಡಿದು ಸತ್ತು ಹೋಗುವರು. ಅವರು ಯಾವ ಗತಿಯನ್ನು ಹೊಂದಿದರು, ಹೇಳು?

ಸಾ.- ಪದ : ತಾಳ : ಕೇರವಾ ; ರಾಗ : ಮಿಶ್ರಪೀಲು

ಶರಣ ಬಸವ ಮಹಾನುಭಾವ
ಮಾಚಿದೇವನೆದುರಿನಲಿ ॥ ಪಲ್ಲ ॥

ಜಗತ್ತಿಗೆ ಕಾಣುವಂತೆ ಅನುಗ್ರಹಿಸು. ಇದೋ ನನ್ನ ದೇಹ ಇಬ್ಭಾಗವಾಗುತ್ತಿದೆ. (ಎದೆ ಸೀಳಿಕೊಳ್ಳಲು ಸಿದ್ಧಳಾಗುವಳು).

ಅ.– ಆಹಾ! ನನ್ನ ಸದ್ಭಕ್ತಳಾದ ಸಾತ್ವಿಕಿಗೆ ಎಷ್ಟೊಂದು ತೊಂದರೆಯಾಗುತ್ತಿದೆ. ಅದನ್ನು ನೋಡಲಾರೆ. ಇವಳಿಗೆ ಈಗಲೇ ನನ್ನ ನಿಜರೂಪ ತೋರಿ ಧನ್ಯಳನ್ನಾಗಿ ಮಾಡುತ್ತೇನೆ.

(ಅಲ್ಲಮ ಪ್ರಭುದೇವನು ತನ್ನ ನಿಜರೂಪವನ್ನು ತೋರುವನು.)

ಮಂಗಳಾರತಿ : ತಾಳ : ಕೇರವಾ ; ರಾಗ : ಅಸ್ಸಾ

ಶಿವಶಿವ ಶಿವಶಿವ ಮಂಗಲಂ ದೇಹಿ
ಭವಹರ ಸ್ಮರಹರ ಪುರಹರ ಪಾಹಿ ‖ ಪಲ್ಲ ‖

ಭವಭಯದೊಳು ಎನ್ನ ಬರಿಸಿದೆ ಏಕೊ
ಭವಹರ ಸಾಕಿನ್ನು ದಯಮಾಡಬೇಕೊ ‖ ೧ ‖

ಕಷ್ಟದೇಹವ ನೆಚ್ಚಿ ಹುಟ್ಟಿತೊ ಜೀವ
ಅಷ್ಟಮದಗಳ ಕಚ್ಚಿ ಕೆಟ್ಟೆನೊ ದೇವಾ ‖ ೨ ‖

ಮಾನಾಪಮಾನಕ್ಕೆ ನೀನೆ ಹೊಣೆಯೇಳು
ದಯಮಾಡೊ ಸಿದ್ಧಲಿಂಗ ನೀನೆ ಕೃಪಾಳು ‖ ೩ ‖

ಮುಕ್ತಾಯ

◆◆◆

ಚಾರ್ವಾಕಾ, ಆಗಿ ಮಾಚಿದೇವನು ಬಸವಣ್ಣನವರ ಎದುರಿಗೆ ಮೈಲಿಗೆ ಅರಿವೆಗಳನ್ನು ನೀರಿನಲ್ಲಿ ಎದ್ದಿಎದ್ದಿ ಒಗೆಯಲು, ಸಿಡಿದ ಹನಿಗಳೆಲ್ಲ ರತ್ನದ ರಾಶಿಯಾಗಿ ಬೀಳಹತ್ತಿದವು – ಆಗ ಬಸವನು ನಾಚಿ ತಿರುಗಿ ಹೋದನು. ಚಾರ್ವಾಕಾ, ಶಿವಶರಣ ಮಹಿಮ ಎಂತಹ ಆಗಾಧವೆಂಬುದನ್ನೂ ತಿಳಿದುಕೊ

ಅ.–ಸಾತ್ವಿಕಿ ಮಾತೆಯೇ, ಕಣ್ಣಪ್ಪನು ಬೇಡನಲ್ಲವೆ?

ಸಾ.–ಚಾರ್ವಾಕಾ, ಅವನು ಬೇಡನಲ್ಲ.

ಅ.–ಹಾಗಾದರೆ ಬೇಡರೆಂದರೆ ಯಾರು?

ಸಾ.–ಚಾರ್ವಾಕಾ, ಊರಿಗೆ ಕೇರಿಗೆ ಬೇಡ, ನಾಡಿಗೆ ಬೇಡ, ಎಲ್ಲರಿಗೂ ಬೇಡಾದವನೇ ಬೇಡನು. ಹಿಂದೆ ಕನ್ನದ ಬೊಮ್ಮನು ಕನ್ನದ ಮಣ್ಣನ್ನು ತೋಡುವಾಗ ಆ ಮಣ್ಣೆಲ್ಲಾ ಚಿನ್ನವಾಗಿ ಬೀಳುತ್ತಿತ್ತು. ಆತನು ಅದಕ್ಕೆ ಆಶೆ ಮಾಡಲಿಲ್ಲ. ಅವನು ಮಾಡುತ್ತಿದ್ದುದು ಕಾಯಕ! ತನ್ನ ದುಡಿಮೆಗೆ ಸಿಗಬಹುದಾದ ಕೂಲಿಯನ್ನೇ ಸ್ವೀಕರಿಸಿ, ಇದ್ದುದರಲ್ಲಿಯೇ ಶರಣರಿಗೆ ದಾಸೋಹ ಮಾಡಿ, ಪ್ರಸಾದವನ್ನು ಸ್ವೀಕರಿಸುತ್ತಿದ್ದ.

ಅ.–ಅದು ಏನೇ ಇರಲಿ! ಮಾದಿಗರ ಹರಳಯ್ಯನು ಹೊಲೆಯನಲ್ಲವೇ?

ಸಾ.–ಪುಣ್ಯಾತ್ಮಾ, ಅವನು ಹೊಲೆಯನಲ್ಲ.

ಅ.–ಹಾಗಾದರೆ ಹೊಲೆಯ ಅಂದರೆ ಯಾರು?

ಸಾ.–ಚಾರ್ವಾಕಾ, ಊರ ಹೊರಗೆ ಇರುವವರೆಲ್ಲರೂ ಹೊಲೆಯರಲ್ಲ. ನೀತಿಯಲ್ಲಿ ಹೊಲೆಯ, ಮಾತಿನಲ್ಲಿ ಹೊಲೆಯ, "ಹೊಲಸು ತಿಂಬುವವನೆ ಹೊಲೆಯ"– ಹೀಗೆಂದು ಬಸವಣ್ಣನವರ ವಾಕ್ಯವಿದೆ. ಯಾವನ ಮನದಲ್ಲಿ, ಮೈಯಲ್ಲಿ ಹೊಲೆಯಿರುವದೋ ಅವನು ನಿಜವಾಗಿ ಹೊಲೆಯ, ಚಾರ್ವಾಕಾ, ಶಿವಶರಣರ ಮೈಮನದಲ್ಲಿ ಎಂದೂ ಹೊಲೆಯಿರುವದಿಲ್ಲ.

ಅ.–ಹಾಗಾದರೆ, ನಿನ್ನ ಮೈಯಲ್ಲಿ, ಹೊಲೆ ಇಲ್ಲವೇ?

ಸಾ.–ಇಲ್ಲ.

ಅ.–ಹಾಗಾದರೆ, ನಿನ್ನ ಶರೀರವನ್ನು ಸೀಳಿ ತೋರಿಸು, ಹೊಲೆ ಇದೆಯೋ ಇಲ್ಲವೋ ನೋಡುತ್ತೇನೆ.

ಸಾ.–ಚಾರ್ವಾಕಾ, ನೋಡು, ಈಗಲೇ ಸೀಳಿ ತೋರಿಸುತ್ತೇನೆ. ಪ್ರಭುವರಾ ಅಲ್ಲಮಗುರುವರಾ! ಇದೋ ನನ್ನಲ್ಲಿ ಸತ್ವಗುಣ ಇದ್ದುದು ಸತ್ಯವೆಂಬುದನ್ನು

ಪ್ರಭುದೇವರ ಯಕ್ಷಗಾನ

ಪ್ರಭುದೇವರ ಯಕ್ಷಗಾನ

ಶ್ರೀಗುರು ಬಸವಲಿಂಗಾಯನಮಃ ॥
ಶ್ರೀ ಗಣಾಧಿಪತಯೇ ನಮಃ ॥
ಶ್ರೀ ಶಾರದಾಯೈ ನಮಃ ॥
ಶ್ರೀಮನ್ನಿರಂಜನ ಪ್ರಭುವೇ ನಮಃ ॥

ಪ್ರಭುದೇವರ ಯಕ್ಷಗಾನವಂ ಬರಿವುದಕ್ಕೆ ಶುಭಮಸ್ತು

॥ **ಭಾಮಿನಿ.** ರಜತ ನಗವರ ಸದ್ಮಕೊಂದಿನ ।
ತ್ರಿಜಗವಂದಿತ ಪ್ರಭುವರೇಣ್ಯಂ ।
ಬಿಜಯಂಗೈವುತೆ ಪಾರ್ವತಿಯ ಪಂಥದೊಳು ಧರೆಗಿಳಿದು ॥
ಸುಜನರಂ ಪೋಷಿಸುತೆ ಮಾಯಿಯ ।
ನಿಜ ವಿರತಿಯಿಂ ಜೈಸಿ ಪ್ರಮಥ ।
ವಜ್ರಕೆ ಮೋಕ್ಷವನಿತ್ತ ಕಥೆಯಂ ಪೇಳ್ವೆನೊಲವಿಂದ ॥ ೧ ॥

"ಸತ್ತವರ ಕಥೆಯಲ್ಲ ಜನನದ ।
ಕುತ್ತದಲಿ ಕುದಿಕುದಿದು ಕರ್ಮದ ।
ಕತ್ತಲೆಗೆ ಸಿಲ್ಕುವರ ಸೀಮೆಯ ಹೊಲಬು ತಾನಲ್ಲ ॥
ಹೊತ್ತು ಹೋಗದೆ ಪುಂಡರಾಲಿಪ ।
ಮತ್ತಮತಿಗಳ ಗೋಷ್ಠಿಯಲ್ಲಿದು ।
ಸತ್ಯ ಶರಣರು ತಿಳಿವುದೀ ಪ್ರಭುಲಿಂಗ ಲೀಲೆಯನು"॥ ೨ ॥

ಒಂದು ದಿನ ಕೈಲಾಸದೊಳು ಕುಂ ।
ದೇಂದು ಧವಳಿತ ವಿಗ್ರಹಂ ಪೌ ।
ರ್ಣೇಂದು ಮುಖಿ ಶಾಂಭವಿಯಂ ಸಹಿತಂ ಸಿಂಪವಿಷ್ಟರದಿ ॥
ಅಂದದಿಂ ರಂಜಿಸಲು ಎಡಬಲ ।
ನಂದಿ ಭೃಂಗಿಯು ವೀರ ವೃಷಭ ।
ಸ್ಕಂದ ಮಂದುರವಾಹ ಸನಕ ಸನಂದರಿಂದನ್ನಂ ॥ ೩ ॥

॥ **ಚೂಲಿಕಾ** ॥ ಇಂತಾಗ ದೇವಗಣ ರುದ್ರಗಣ ಪ್ರಮಥಗಣ ।
ರೆಂತೆಂಬ ರುಷಿಗಣಂ ದಟ್ಟೈಸುತೆ ॥
ಕಂತುಪರನೋಲಗ ಚತುರ್ಭಾಗದಲ್ಲಿರಲು ।
ಸಂತೋಷ ಸಂಪ್ರಾಪ್ತ ಹೃದಯರಾಗಿ ॥ ೧ ॥

ಅಂತವರೊಳಾಗ ಭೃಂಗೀಶ ತಾಂಡವನೆಸಗೆ
ಸಂತಸದಿ ನಂದಿ ಮರ್ದಳಿಯ ಧ್ವನಿಯನೆಸಗೆ
ತುಂಬುರಾದಿಗಳು ಗೀತಾರಸಂಪೂರ್ಣವಿಸ
ಲಿಂಬಿನಿಂ ನಂದಿ ಮಹಾಂಕಾಳರಾಗೆ
ಅಂಬಿಕಾಧವಳಿಕಲೋಚನನುಜ್ಞೆಯಿಂ
ತಂಬಿಸದೆ ಸಭೆಯಂ ಭರಾಭರಿಯನೆಸಗೆ ॥ ೨ ॥

ಯಾಕೆ ಗುಜಿಗುಜಿ ಗದ್ದಲ್ಯಾಕೆ ಬೊಬ್ಬಾಟ್ಯಾಕಿ
ದ್ಯಾಕೆ ವುಚ್ಚೈರ್ಧ್ವಾನಮಖಿಳ ವಾಕ್ಯಗಳೂ ।
ಕಾಕಗುಣ ಸಂಗಿಗರಿದ್ಯಾಕಿಲ್ಲಿ ಕೆಲಸಾರಿ
ಲೋಕನಾಥನ ಶೀಕ್ಷೆಯಾಗದಿಹುದೇ ॥ ೩ ॥

ಇಂತು ದೊರೆವಡೆದ ಸರ್ವೇಶ್ವರನ ಸಭೆಗೆ ಸಮ
ನಂತರದಿ ನಿರ್ಗುಣ ನಿರಾಭಾರನು
ಎಂತೆಂಬ ಚಿನ್ಮಯಂ ಚಿತ್ಸುಖಾಂಬುಧಿ ಚಿದಾ
ಕಾಂತ ಗುರುವರ್ಯ ಪ್ರಭುರಾಜನೊಲಿದು ॥ ೪ ॥

ಹರಿಣಾಂಕ ಜೂಟ ಹವಿನೇತ್ರನೋಲಗಕೆ ಬರೆ
ಕರವೆತ್ತಿ ಕೀರ್ತಿಸಿದರಾವೇತ್ರಧರರು
ಧರಣಿ ಪಾವನಮೂರ್ತಿ ದಯಪೂರ್ಣ ಹೃದಯನಿದೆ
ಪರಿತಂದ ಪಂಚತ್ವದೂರನಿದಕೋ ॥ ೫ ॥

ಇದೆ ಮಾಯಗಿರಿ ವಜ್ರನಿದೆ ಮಾಯಘನಮರುತ
ನಿದೆ ಪರಾತ್ಪರ ವಸ್ತು ಬಂದುದು ಪರಾಕು
ಇದೆ ಚಿದಾತ್ಮ ಚಿದ್ರೂಪ ಚಿತ್ತಜಲೋಪ
ನಿದೆ ಬಂದ ಹರನ ಸಭೆಗೆ ॥ ೬ ॥

ಭಾಪುರೆ ಸರ್ವ ಚೈತನ್ಯ ಸರ್ವಾತ್ಮಕನೇ
ಭಾಪುರೆ ಸರ್ವಸಾಕ್ಷೀ ಭೂತನೇ
ಭಾಪುರೆ ವೇದ ವೇದಾತೀತ ನಿರ್ಭೀತ
ಭಾಪುರೆ ಭಳಿರೇ ನಿರಘ ನಿರ್ದ್ವಂದ್ವನೇ ॥ ೭ ॥

ಭಾಪುರೆ ನಿರ್ಮೋಹ ನಿಷ್ಕಾಮ ನಿಸ್ಸೀಮ
ಭಾಪುರೆ ನಿನ್ನ ಮುಂದಧಟರುಂಟೆ
ಈ ಪೃಥ್ವಿ ಮುಖ್ಯ ಭುವನತ್ರಯಂಗಳೊಳೆಂದು
ಆ ಪರಂಜ್ಯೋತಿಯಂ ಕೀರ್ತಿಸಿದರು ॥ ೮ ॥

(ಈ ಪ್ರಕಾರದಿಂದಲಾಚಿತ್ರ ಮಾಗಧರು)

ಶ್ಲೋಕ ॥ ತ್ವಂ ವಿಶ್ವಕರ್ತಾ ತವನಾಸ್ತಿ ಕರ್ತಾ ।
ತ್ವಂ ವಿಶ್ವಭರ್ತಾ ತವನಾಸ್ತಿ ಭರ್ತಾ ॥
ತ್ವಂ ವಿಶ್ವವಂದ್ಯಸ್ತವನಾಸ್ತಿ ವಂದ್ಯಃ ।
ತ್ವಂ ವಿಶ್ವನಾಥಸ್ತವನಾಸ್ತಿ ನಾಥಃ ॥ ೧ ॥

ಈ ಪ್ರಕಾರದಿಂದಲಾ ಚಿತ್ತ ಮಾಗಧರು ನಿರ್ಮಾಯ ಪ್ರಭುವರೇಣ್ಯನ ಸ್ವೇಚ್ಛಾಕಿತಾಪ ಪ್ರತಾಪಂಗಳಂ ಕರವೆತ್ತಿ ಕೀರ್ತಿಸುತಿರಲ್ಕೆ ಮೃಡನಂಕ ಪೀಠಾಗ್ರದಲ್ಲಿರ್ಪ ಶಾಂಭವಿಯಿದಂ ಕೇಳಿ ಅತ್ಯಾಶ್ಚರ್ಯಮಂ ತಾಳಿ ಶಿರಪದ್ಮವನು ತೂಗಿ ಶಂಕರನಿಗಿಂತೆಂದಳು :

ಆರ್ಯಂ ॥ ಹರನೆ ಕೇಳುರೆ ಸ್ವತಂತ್ರ ಶೀಲನಾ
ರಿರದೆ ಪೇಳುಯಿವನಿರವೆನಗೆ
ಪರಿ ಬಣ್ಣಿಸಲ್ಯಾಕಿವರು ಬರಿದೆ
ಯೀ ಪರಿಪೂರಿತ ಸಭೆಯೊಳಗೆ ॥ ೧ ॥

ಆದೊಡಾಲಿಸೆನ್ನರಸಿ ಯೀತನುಮ
ನಾದಿಮೂರ್ತಿಸಾಕಾರವನು ॥
ಮೇದಿನಿಯಂ ಪಾವನವನೆಸಗಲುರೆ ।
ಸಾದರದಿಂದಿರದಾಂತಿಹನು ॥ ೨ ॥

ಘನ ಸುರಗಣ ರುದ್ರಗಣ ಪ್ರಮಥಗಣ
ಗಣರುಷಿ ಮುಖ್ಯರು ಅನವರತಂ ।
ಮನದೊಳ್ ಸ್ಮರಿಸಲು ಪಾವನರಪ್ಪರು
ಅನುಪಮನೆಂದರಿದಿಹುದುಚಿತಂ ॥ ೩ ॥

॥**ಮಾತು**॥ ಮತ್ತೆ ಈತನ ನೆನಹ ಮಾತ್ರದಿಂದ ಸಚರಾಚರ ಪ್ರಾಣಿಗಳು ಪುನೀತರಾಗುವರು.

'ಆಗುವರು'

ಕರ್ಮಕಾಠಿಣ್ಯಗಳನ್ನೆಲ್ಲಾ ನೀಗುವರು.

'ನೀಗುವರು',

ಇದರ ಮ್ಯಾಗವರು ಮೃತ್ಯುಂಜಯನ ಚರಣ ಸನ್ನಿಧಿಗೇ ಪೋಗುವರು ॥ ತಸ್ಮಾತ್ ॥ ಈತನಿಗೆ ನಿರಂಜನ ಪ್ರಭು, ನಿರಾಭಾರ ಪ್ರಭು, ನಿರ್ಗುಣ ಪ್ರಭು, ನಿಷ್ಕಳಂಕ ಪ್ರಭು, ನಿರ್ಮಾಯ ಪ್ರಭು ಎಂದು ಕರೆಯುವದೆಲೆ ದೇವಿಯೆಂದಾಕ್ಷಣಕ್ಕೆ ॥ ಪಾರ್ವತಿ ಅಂಥಾಳೆ ॥

॥ ಮಾತಿ ಮಾತಾಲಿಸಿಘನ ॥

॥ **ಪದ** ॥ ಮೆಚ್ಚದೆನ್ನ ಮನವು ಇಂಥ
ಹುಚ್ಚ ನುಡಿಗಳ ಕೇಳಿ
ಇಚ್ಛೆಯನಾಡುವರೆಯಿಂಗಳ ನೇತ್ರಾ ।
ಎಚ್ಚರದಪ್ಪೆನ್ನ ಮುಂದೆ
ಬಿಚ್ಚದಿರಿವನ ಬಿಂಕಂ
ರಚ್ಚೆಗೆಬ್ಬಿಸುವರೆ ರಂಜಿತ ವದನಾ ॥
ತುಚ್ಛ ಮಾನವಗೆ ನೀ
ನಿಶ್ಚಿಂತ ನಿರ್ಮಾಯನೆಂದು
ಉಚ್ಚರಿಸುವರೆ ಉರಗೇಂದ್ರ ವಿಭೂಷಾ ॥ ೧ ॥

ಅಸಮ ಮಹಿಮನಿವನ ಸಮನಾರಿಲ್ಲವೆಂದು
ವುಸುರಲುಚಿತವೆಯನ್ನ ಸಮಕ್ಷಾ ॥
ವಿಷಮ ಬುದ್ಧಿಯನಿಂತು ಪಸರಿಸುವರೆ ಪಂಚ
ಕುಸುಮಾಸ್ತ್ರನ ಸುಟ್ಟ ಕುಧರವಾಸಾ ॥ ೨ ॥

ಅಂದು ಮಂದಪೌರುಷ ಭೃಂಗೇಂದ್ರಗೆ ನಿರ್ಮಾಯನೆಂದು
ಅಂದವರಿಯದೆ ನೀ ಮತ್ತೊಂದು ಪದವಂ ॥
ಅಂದದಿಂದವನಿಗಿತ್ತು ಮುಂದೆ ಮತ್ತವನ ಕರ
ವಂದರಿಂದಿರದೆ ಶರಣೆಂದೆನಿಸಿದಿ ॥ ೩ ॥

ಈ ಪ್ರಕಾರದಿಂದಲಾ ಶಾಂಭವಿಯೆನಿಪ್ಪ ಸರ್ವಮಂಗಳೆಯು ಪರಮ ಕೋಪೋದ್ರೇಕದಿಂದ ಕರಾಳಮುಖಿಳಾಗಿ ಪ್ರಳಯಕಾಲದ ಕೋಲಾಪಲ ದುರ್ಗಿಯಂತೆ ಘರ್ಜಿಸಿ ಭೀಕರಧ್ವಾನದಿಂದಿಂತೆಂದಳು :

॥**ಚೂಲಿಕಾ** ॥ ಇಂದು ಎನ್ನಂಶ ಸಂಬಂಧದೇಹಂದೊಟ್ಟ
ಮಂದಪೌರುಷನಿವನು ಮಾಯ ವಿರಹಿತನೆ ।

ಅಂದಿಗೋರ್ವನು ಬಂದನಿಂದಿಗಿವನೋರ್ವನುರೆ
ಮುಂದಖಿಳರ್ಗೆ ತಂದಡೆಂತು ಸೈರಿಸುವೆ ॥ ೧ ॥

ಅರರೇ ಇವನೋರ್ವ ನಿರ್ಮಾಯನಂತೆಯು ಗಡಾ
ಧರೆಯಲ್ಲಿ ನಿಶ್ಯಕ್ತಿಯುಳ್ಳಾನಂತೆ ।
ಸರಕುಗೊಂಬೆನೆ ಶಕ್ತಿಯಾನಾಗಿರಲು ಮತ್ತೆ
ನೆರೆ ನಿರಂಜನನು ನಿರ್ಮಾಯನೆಂಬಾ ॥ ೨ ॥

ಈ ಕಿತಾಪ ಪ್ರತಾಪಗಳನಾರ್ಕೊಟ್ಟಿಹರೊ
ಈ ಕೀಳ ಪುರುಷನೆನ್ನ ಜೈಸಿದನಂತೆ ॥
ಈ ಪರಾಕ್ರಮತನವನಾರ್ಯೆಯ್ಯದಿರ್ಪನೆ
ಈ ಪರಮ ಹೂಣೆಯೊಡ್ಡಿ ಮುಂದೆ ಬಾಳ್ದಪನೆ ॥ ೩ ॥

॥**ಮಾತು**॥ ಪಾರ್ವತಿ : ಭಲರೆ ನಾ ಕಾಡಬೇಕಂದರೆ ಇವನ ತಲ್ಯಾನ ದಿಮ್ಮೆಲ್ಲಾ ಬಿಟ್ಟೀತು.

'ಬಿಟ್ಟೀತು',

ಮತ್ತೆ ಇಲ್ಲದ ಘೋಳೀಗ ಬಂದಿಟ್ಟೀತು, ಇವನಾಪಾದ ಮಸ್ತಕದ ವರೆಗೂ ನಡಗ್ಹುಟ್ಟೀತು, ಇವನಾಪ್ತಮಂಡಳಿಯೆಲ್ಲಾ ಕೀಸರಿಟ್ಟೀತು, ನನ್ನ ಜೈಸಬೇಕೆಂಬ ಮಾತು ಎಂದಿಗೆ ಮೊದಲಿಗೇ ಮುಟ್ಟೀತು, ಇವನೆನಗೆ ಸಮರ್ಥನೆ? ಇವನೂ ಮಾಯಾತೀತನೆಂದೆನಗೆ ತೋರದು;

'ತೋರದು'

ಇವಗೆ ಬುದ್ಧಿಗಲಿಸದೆ ಎನಗೆ ನಿದ್ರಿ ಬಾರದು;

'ಬಾರದು'

ನಾ ಮುನಿದರೆ ಇವನಿಗೆ ಪುಷ್ಟಿ ಇನ್ನಾರದು?

॥**ಚೂಲಿಕಾ**॥ ಬ್ರಹ್ಮಾದಿ ಸುರರೆನಗೆ ತೃಣತುಲ್ಯರಾಗಿಹರು
ಹಮ್ಮದ್ಯಾಕಿವನಿಗೀ ಹರನ ಸಭೆಯೊಳಗೆ ।
ಬರಿಯ ಮಾತಲ್ಲಿವನ ಪರಿಕಿಸದೆ ನಾ ಬಿಡೆನು
ಹರಗಣರು ಸಾಕ್ಷಿ ನಾನೊರಿವ ಪಂಥಕ್ಕೆ ॥ ೪ ॥

ಕಿರುಕುಳರೊಳಿವನೋರ್ವನೆಂದು ನಾ ಕಾಣದಲೆ
ಶರೀರದೊಳ್ಕಾಂತಿಯೆನಗೆಂತಹುದು ।

ಎನ್ನೊಳಗೆ ಹೂಣೆಯೊಡ್ಡಿ ಮುನ್ನಾವ ಜೈಸಿದನು
ಚನ್ನಾಗಿ ಪೇಳೆನಗೆ ಚಂದ್ರಾರ್ಧಚೂಡಾ ॥ ೫ ॥

ಹುತ್ತವನು ಬಡಿದಡೇನುರಗಳಿಯ ಬಲ್ಲುದೆ
ಮಿಥ್ಯ ಮಾತುಗಳಾಡಲೇನು ಫಲವು ।
ಚಿತ್ತಜಾಂತಕ ಕಳುಹು ಭೂತಳಕ್ಕೆ ಇವನಧಟ
ವಿಸ್ತರಿಪೆನೆನ್ನಂಶ ಶಕ್ತಿಯಿಂದ ॥ ೬ ॥

ನೀ ಕೊಟ್ಟ ಪುಷ್ಠಿಯಿಂದಿವರು ಕುಣಿದಾಡುವರು
ನೀ ಕಪಟಿ ಮೊದಲೆ ಧರ್ಮವದುಂಟೇ ನಿನಗೆ ।
ನಿನ್ನ ಕೌಟಿಲ್ಯ ಗುಣವನ್ಯರಿಗೆ ಗೋಚರಮೆ
ಮುನ್ನಾರ ಪ್ರಾಂತಗಾಣಿಸಿದಿ ಮುನಿವಂದ್ಯಾ ॥ ೭ ॥

ತರಳಾಕ್ಷಿಕಮಳಾಯಿ ಲಿಂಗ ಕಳವಿಂದೊಯಿದ
ಪರಮನಲ್ಲವೆ ನೀನು ಫಣಿ ಭೂಷಣಾ ।
ಧೋರಿ ಗಣಪತಿಯ ಮನೆಯ ಕೊರೆದು ಕನ್ನವನಿಕ್ಕಿ
ಮರಿ ಮಾಂಜಿಕೊಂಡಿ ಮಹದೈಶ್ವರ್ಯವಂ ॥ ೮ ॥

ಶಿರಿಯಾಳನಣುಗನೆಳೆಗೊರಳಗೊಯ್ಸಿದಿ ಮತ್ತೆ
ತರುಣಿ ನಿಂಬಿಯ ಸುತನ ಮುಸುಲದಿಂದಳಿದೀ ।
ಧರಿಯಲ್ಲಿ ಮಹನಂದಿಯೆಂಬ ಹರದಿಗೆ ನಿನ್ನ
ಕರ ಕಂಕಣಂ ಲಿಂಗವೆಂದವಳಿಗಿತ್ತು ॥ ೯ ॥

ಉರಿಯಲ್ಲಿ ಬೀಳಿಸಿದ ಉತ್ತಮನದಲ್ಲೆ ನಾ
ಗುರುತಿಟ್ಟು ನಿನ್ನ ಗುಣವೇನುಸುರಲಿ
ಅರಸ್ವಾದರಾಡಿದರೆ ಅಲ್ಲೆಂಬುವರದಾರು
ಕರುಣ ನಿನಗೆಲ್ಲಿಹುದು ಕಾಮದಹನಾ ॥ ೧೦ ॥

ಬರಿದೆ ಬ್ರಹ್ಮನ ಶಿರವ ತಂದು ನಿನ್ನಯ ಕರದೊ
ಳಿರಿಸಿಕೊಂಡವನಲ್ಲೆ ವಿಶ್ವನಾಥಾ ।
ಕುಂಟಲಿಗನಾಗಿ ಕುಣಿದಾಡಿದಿಯಾ ಸೌಂದರನ
ಕಂಟಲಿಯ ಹೊತ್ತು ಮತ್ತಾಬಾಣನಾ ॥ ೧೧ ॥

ಭಂಟನೆಂದೆನಿಸಿದಿ ಮಹಾದ್ವಾರದೊಳೀನೀಲ ।
ಕಂಠ ಈ ಪಂಟುತನವ್ಯಾಕೆನ್ನ ಮುಂದೆ ॥

ನೆರೆ ಕಪೋಲವನಲುಗಿ ತಲೆದಡವುತ್ತೆ ನಂದಿಯೊಳು ॥
ಪರಮ ಹರುಷದೊಳೆರೆವುತೀತನ
ನೆರೆ ಪ್ರತಾಪವನೆಲ್ಲನನಿತಕೆ
ವರಣಿ ವರನಾರದನು ವಲಿದೈತಂದನಘ ಸಭೆಗೆ ॥ ೩ ॥

॥ **ಆರ್ಯ೦** ॥ ನಾರದ ಮುನಿ ಹರನಾಮವ ಸ್ಮರಿಸುತೆ
ಧಾರುಣೀ ಪಾವನ ಮಾಡುತ್ತೆ ।
ಚಾರು ಭಸ್ಮರುದ್ರಾಕ್ಷಿ ಚಿನ್ಹಿತ ಶ ।
ರೀರದಿಂದ ಲೋಲಾಡುತ್ತೆ ॥ ೧ ॥

ಕರದಿಂ ವೀಣಾ ಮೀಟುತೆ ನಾದಕೆ
ಭರದಿಂ ಶರೀರವನೊಡ್ಡುತ್ತೆ ।
ನೆರೆ ಮೈಮರದೆಚ್ಚರುತೆ ನರ್ತಿಸುತೆ
ಪರಮಾನಂದದಿ ಬರಲಿತ್ತೆ ॥ ೨ ॥

ಈ ಪ್ರಕಾರದಿಂದಲಾ ಸುರಮುನಿವರ ನಾರದರು ಕಾಷಾಂಬರ ಕಮಂಡಲ ದಂಡಾಗ್ರ ಯಜ್ಞೋಪವೀತ ಜಪಮಾಲಿಕಾಲಂಕಾರದಿಂದೆ ವೀಣಾವಿಜಾತಿ ಸ್ವರ ಸೌಖ್ಯದಿಂದೆ ತಾಳ ಮಾತ್ರಾದಿ ಲಯಂಗಳಿಗೆ ಸರಿಯಿಟ್ಟೆಸೆವ ನಾಟ್ಯ ರಚನೆಯಿಂದೆ ನೂತನ ವಾರ್ತೆಯನು ಬೆಸಸಲೆಂದು ಪರಮಾನಂದ ಹೃದಯನಾಗಿ ಪುರಹರನೆಡೆಗೆ ಬೆಮರುಕ್ಕುತ್ತೆ ಬಂದು ಸಾಷ್ಟಾಂಗ ಪ್ರಣೀತನಾಗಿ ಮರಳೆದ್ದು ಕರಪದ್ಮಂಗಳಂ ಮುಗಿದು ಚರಣ ಸನ್ನಿಧಿಯಲ್ಲಿ ನಿಂತಿರ್ದ ನಾರದನ ನೋಡಿ ನಸು ನಗುತೆ ತ್ರಿಪುರಹರನಿಂತೆಂದನು.

॥**ಮಾತು**॥ **ಶಿವ** :– ಬನ್ನಿರಯ್ಯಾ ನಾರದರೆ

ನಾರದ :– ಮಹಾಸ್ವಾಮಿ ಬಂದೆವಲ್ಲಾ ; ಬಂದಿವಿ,

'ಬಂದಿವಿ.'

ತಮ್ಮ ಚರಣ ಸನ್ನಿಧಿಯಲ್ಲಿ ನಿಂದಿವಿ,

'ನಿಂದಿವಿ'

ನಮಸ್ಕಾರಂತ ತಮ್ಮಡಿಗೆ ಶರಣಂದಿವಿ,

'ಅಂದಿವಿ'

ಈ ಪ್ರಕಾರದಿಂದಲಾ ಶಾಂಭವಿಯು ಕೋಪ ಸಂವ್ಯಾಪ್ತ ಹೃದಯಳಾಗಿ ಪರಶಿವನ ಜರಿದು ಝೆಂಕಿಸಿ ನುಡಿಯುತಿರಲದಕ್ಕೆ ನಸುನಗುತೆ ತ್ರಿಪುರಹರ ನಿಂತೆಂದನು:

॥ಮಾತು॥ ಶಿವ : ಹೇ ಪಾರ್ವತೀ ಇಷ್ಟ್ಯಾಕೆ ನಿನಗೆ ಸಿಟ್ಟು

'ಸಿಟ್ಟು'

ನಿನಗೆ ನಾ ಹೇಳಲಿನ್ನೆಷ್ಟು, ಇದರಿಂದ ನಿನ್ನ ಪಾಲಿಗೆ ರಟ್ಟು ಬಾರದೇ ಹೋಗದು ನೋಡು ಸ್ಪಷ್ಟು.

॥ಚೂಲಿಕಾ॥ ಮಳಲ ಹುರಿಯನು ಹೊಸೆದು ಹಗ್ಗ ಮಾಡಲ್ಬಹುದೆ
ಸಲೆ ಮೇರುಗಿರಿ ತ್ರಾಸಿನೊಳು ತೂಗಲಹುದೆ ।
ಎಲೆಗೌರಿ ಅಂಬರಕೆ ಮಾರನಿಕ್ಕಲ್ಬಹುದೆ
ಕಲುಷಯುತ ಜಡ ಪಂಚಭೂತಾತ್ಮರು ॥ ೧೨ ॥

ಮಲಪಾಶ ಮಾಯಾವಿವರ್ಜಿತನ ದುಷ್ಕಾಮ
ಕಲಿಗಳಿಂ ಸೋಲಿಸಲ್ಬಲ್ಲರೇನೆ ।
ಎಲೆದೇವಿ ಪುಚ್ಚಳಿಯಿತೊನಕಿತಾ ಸುತ್ತುವೆನು
ತಲಿಗೆಂಬ ಗಾದಿಗೀಡಾಗಬಹುದೆ ॥ ೧೩ ॥

ಭಾಮಿನಿ. ಸಾರಿ ಪೇಳುವೆನಾಲಿಸೆಲೆ ಶ್ರೀ ।
ಗೌರಿ ನೀ ಮನದಂದು ಮತ್ತಂ ।
ಚೂರಿ ಹರಿತಾದಡೆಯು ಪೆರ್ಮರ ಬೀಳುವುದೆ ಧರೆಗೆ ॥
ಆರೈಯ್ಯಲದರಂತೆ ಅಲ್ಪ ಶ ।
ರೀರಿಗಳಿಗತಿ ಕಿನಿಸು ಬಂದಡೆ ।
ಕಾರ್ಯ ಶೇಖರ ಮಾದಪುದೆ ಕಲ್ಯಾಣಿ ಕಲುಷಹರೆ ॥ ೧ ॥

ಕುಂಭಸಂಭವನೊಡನೆ ಮತ್ಸರಿ ।
ಸೆಂಬುನಿಧಿ ವಕ್ಕುಡುತಿಯಾಗದೆ ।
ಕುಂಭಿನೀಧರಜಾತೆ ವಿಲಸತ್ಕುಂಭಿಗಾಮಿನಿಯೆ ॥
ನಂಬೆ ನೀ ಮಾತಿಗೆ ಮಹೇಶ್ವರ ।
ತಂಬಿಸದೆ ಕಳುಪೆನೆ ಧರಿತ್ರಿಗೆ ।
ಸಾಂಭ ಕಳುಪುವೆನೆನಲಿಕನಂ ಬಂದ ಪ್ರಭುವರನು ॥ ೨ ॥

ಬರಲು ಶಂಕರ ಕಂಡು ಕರುಣದಿ ।
ಕರೆದು ಬಿಗಿಯಪ್ಪುತ್ತೆ ಮುದ್ದಿಸಿ ।

ಶೃತಿಮತಕೊಡಂಬಡುವರಾರು ಸ್ಮೃತಿ ಪೌರಾಣ ।
ಇತಿಹಾಸದೊಳ್ನೈಷ್ಠಪರದಾರು ಮುನಿಪಾ ।
ಕ್ಷಿತಿಯಲ್ಲಿ ದಾತೃತ್ವವಿಷಯಕತ್ಯಧಿಕರಾ ।
ರತಿ ಸರ್ವಜೀವ ಸುದಯಾಪರರದಾರೈ ॥ ೨ ॥

ಅರುವಿನಕುರುವಿಡಿದು ಆಚರಿಸುವರದಾರು ।
ಮರವಿಯೊಳೆ ಲೋಲುಪ್ತರಾರು ಮುನಿಪಾ ।
ಧರಿಯೊಳಗೆ ಭಕ್ತಿ ಸುಜ್ಞಾನ ವೈರಾಗ್ಯತ ।
ತ್ಪರರಾರು ಭವಿಗಳಾರ್ಭಕ್ತರಾರೈ ॥ ೩ ॥

ಕರ್ಮಪೊಲೆಗಲಸಿ ಅತಿಗಳಿದು ಬಿಟ್ಟಿಹರಾರು ।
ಕರ್ಮವಿಡಿದಾಚರಣೆಗೊಂಬರಾರು
ಧರ್ಮಜೀವಿಗಳಾರು ಕರ್ಮದೇಹಿಗಳಾರು ।
ಪೆರ್ಮೆಯಿಂದುಸುರು ನಾರದ ಮೌನಿ ಮುಖ್ಯಾ ॥ ೪ ॥

ಪತಿಭಕ್ತಿಯುಳ್ಳವರದಾರು ಭೂಮಂಡಲದಿ ।
ಪತಿಯನುಳಿದುಪಪತಿಗಳೊಡನಿರ್ಪರಾರೈ ।
ಕ್ಷಿತಿಯಲ್ಲಿ ಪತಿಯ ಸಹಗಮನ ನೆರೆಗೊಂಬ ಕುಲ
ಸತಿಯಿಗಳದಾರು ಪೇಳ್ಳೈ ಸದಮಲಾಂಗಾ ॥ ೫ ॥

ಇಂತು ಪರಶಿವ ಮೌನಿಕಾಂತನಂಬೆಸಗೊಳ ।
ಲ್ಕಂತಾಗ ಕರಪಲ್ಲವಂಗಳಂ ಮುಗಿದು ।
ಸಂತೋಷದಿಂದಾಗ ಸದಮಲಾತ್ಮನಿಗುಸುರ ।
ಲೆಂತೆಂಬೆನುದ್ಯುಕ್ತನಾಗಿ ನಿರವಿಸಿದ ॥ ೬ ॥

ಅನಘನವಧಾರು ದ್ವಾಪರದಲ್ಲವತರಿಸಿ ।
ಅನಿಮಿಷಗಣಾಧೀಶ್ವರಂ ಬಂದು ಧರಿಗೆ ।
ಎನಿತೆಂಬೆ ಭಕ್ತಿ ಸುಜ್ಞಾನ ವೈರಾಗ್ಯಗಳ ।
ನನುವಿನಿಂ ಬೋಧಿಸಿ ವಿಚಾರಪರರೆನಿಸಿ ॥ ೭ ॥

ಭೂತಳಂ ಪಾವನವನೆಸಗಿದನು ಮತ್ತಿತ್ತೆ ।
ಭೂತನಾಥನೆ ಕಲಿ ಪ್ರಬಲಮಾಗಿ ।
ಧರ್ಮ ಕರ್ಮಾದಿಗಳು ಕೆಟ್ಟುಹೋದವು ದೇವ ।
ಕರ್ಮನಿಷ್ಠಾನ್ವಿತರು ಭ್ರಷ್ಟರಾದರು ॥ ೮ ॥

ತಮಗೊಂದು ನೂತನ ವಾರ್ತೆಯನು ತಂದಿವಿ.

'ತಂದಿವಿ'

ಶಿವ :– ತಮ್ಮ ವಿನಃ ನಮಗೆ ಕಂದಿವೀದಾರದದ ಇವರ ಸ್ವಭಾವಂತೂ ಭಂಗಾರನ್ನಿ, ಯಾಕೆಂದರೆ ಒಂದು ಜಾಗದಲ್ಲಿ ಸ್ಥಿರಗೊಟ್ಟಿರಲಿಕ್ಕಿಲ್ಲ,

'ಯಿರಲಿಕ್ಕಿಲ್ಲಾ'

ಹೊಕ್ಕ ಮನಿಯಲ್ಲಿ ಬಡದಾಟ ಹಚ್ಚದಲೇ ಬರಲಿಕ್ಕಿಲ್ಲಾ,

'ಬರಲಿಕ್ಕಿಲ್ಲಾ'

ಸುಳ್ಳಾಡುವದು ಎಂದೆಂದಿಗೂ ಮರಿಲಿಕ್ಕಿಲ್ಲಾ. ಇವರ ಖಟ್ಲೆದಾರಿಂದೂ ಹರಿಲಿಕ್ಕಿಲ್ಲಾ

'ಎಲ್ಲರಿಗ್ಯೂ ಅಪನವರು ಬೆಲ್ಲದ್ಹೇರನ್ನಿ.'

ಈ ಪ್ರಕಾರದಿಂದಲಾ ನಾರದರು ನಡೆತಂದಾಕ್ಷಣಕ್ಕೆ ನಸು ನಗುತೆ ತ್ರಿಪುರ ಹರನಿಂತೆಂದನು.

॥ ಮಾತಮಾತಾಲಿಸಿ ಘನ ॥

॥ **ಪದ** ॥ ವ್ರತಿಪತಿ ನಿರವಿಸೈಯೀ
ಕ್ಷಿತಿ ಮುಖ ಭುವನಂಗಳ
ಸ್ಥಿತಿ ಸ್ಥಿರಾನಂದ ನೀ ತೀವ್ರತೆಯಿಂದಾ ।
ಕೃತ ಸುಕೃತಿಗಳಾರುನ್ಮತದೊಳಿರುವರಾರು
ಅತಿಕ್ರಮಿಸುವರಾರತುಳಧರ್ಮಂ ॥ ೧ ॥

ಅರುವಿನ ಕುರುವಿಡಿ ।
ದಾಚರಿಸುವರಾರು ।
ಮರವಿನಿರವನಾಂತ ನರರಾರು ।
ಕರುಣಿಗಳಾರು ಕಾಠಿಣ್ಯ ಹೃದಯಿಗಳಾರು ।
ಪರಮ ಪಾವನರು ಪಾತಕರಾರು ॥ ೨ ॥

॥ **ಚೂಲಿಕಾ** ॥ ಏನು ನಾರದ ಮರ್ತ್ಯಲೋಕಧಂತಸ್ಥಿತಿಯು
ಧ್ಯಾನ ಧಾರಣ ಸಮಾಧಿಯೊಳಿರ್ಪರಾರ್‍ಯ್ಯೆ ।
ಕೇಣಮಿಲ್ಲದ ಸದಾಚಾರ ಸಾಧುಗಳಾರು
ಮೌನಿ ವರಲಿಂಗ ಪೂಜಾ ನಿರತರಾರ್‍ಯ್ಯೆ ॥ ೧ ॥

ಸಹಜ ವಿದ್ಯೆಗಳಿಲ್ಲ ಸಹಜ ಬುದ್ಧಿಗಳಿಲ್ಲ
ಸಹಜ ಮಾತೊಂದಿಲ್ಲ ಸಕಳರಲ್ಲಿ ॥

ಮತ್ತಂ–

ನಿಸ್ಸಾರಃ ಪೃಥ್ವೀನಿಕಾಷದರಸೋನೀಚಾ ಮಹತ್ವಂಗತಾ ।
ರಾಜಾ ಅರ್ಥ ಪರಾಯಣೋ ಪ್ರತಿದಿನೆ ವಿಪ್ರೋವಿಕರ್ಮಸ್ಥಿತಃ ॥
ಭಾರ್ಯಾ ಭರ್ತವಿಬದ್ಧವೈರಿ ಹೃದಯಾ ಪುತ್ರೋಪಿತ್ರುದೂಷಕಃ ।
ಇತ್ಯೇತೆಭವನಸ್ಥಿತೆ ಕಲಿಯುಗೆ ಧರ್ಮಾವನಾಂತರ್ಗತಾ ॥

ಅಶಕ್ತಃ ಸರ್ವದಾ ಸಾಧುಃ ಬ್ರಹ್ಮಚಾರಿ ಚ ನಿರ್ಧನಃ ।
ವ್ಯಾಧಿತೊ ದೇವಭಕ್ತಶ್ಚವೃದ್ಧ ನಾರೀ ಪತಿವ್ರತಾ ॥

ದಾತಾ ದರಿದ್ರಂ ಕೃಪಣಂ ಧನಾಢ್ಯಂ ಪಾಪೀಚಿರಾಯುಃ ಸುಕೃತಿಗತಾಯುಃ ।
ಅಕುಲೇನರಾಜ್ಯಂ ಸುಕುಲೇನಸ್ತ್ರೀವಾ ಕಾಲೇಕತಾಷಡ್ಗುಣಮಾಶ್ರಯಂತೇ ॥

ಆಹಾರದ್ವಿಗುಣಂಚೈವ ನಿದ್ರಾಮೈಥುನ ಪುಷ್ಕಳಂ ।
ಮಾನಾಮಾನನಜಾನಾತಿ ಕಲಿಯುಗೇತಿ ಪ್ರವರ್ತಕಂ ॥

ಭರ್ತಾಯದ್ಯಪಿ ನೀತಿಶಾಸ್ತ್ರನಿಪುಣೊವಿದ್ವಾನ್ಕುಲೇನೋಯಿವ ।
ದಾತಾಕರ್ನಸಮ ಪ್ರಸಿದ್ಧ ವಿಭವೇ ಶೃಂಗಾರ ದೀಕ್ಷಾಗುರುಃ ॥
ಸ್ವಪ್ರಾಣಾಧಿಕ ಕಲ್ಪಿತಾ ಸ್ವವನಿತಾ ಸ್ನೇಹೋ ಸದಾಲಾಲಿತಾ
ತಂ ಕಾಂತಂ ಪರಿಹಾಯಸೇ ಚ ಯುವತೀ ಜಾರಂ ಪತೀಂ ವಾಂಛತೀ ॥

॥ **ವೃತ್ತಂ** ॥ ನೆರೆದೈವಂಗಳ ಸತ್ವಮೆಲ್ಲವಡಗೀಪೂಜಾನಮಸ್ಕಾರಗಳ್
ನಿರುತೊಂಮ್ಯಾದಡು ಕಾಣದಾದವಕಟಾ ಮಂತ್ರಾಳಿಗಳ್ಸಾಹಸಂ
ಇರದಡಗಿತ್ತು ಘನೇಷಧಂಗಳು ಮಹಾಜಾಡ್ಯತ್ವವನು ತಾಳ್ದವಂ
ಹರದಿಯರೇಮನಿದೈವ ಕಲಿಯುಗದೊಳುಂ ಶ್ರೀಚೆನ್ನಸೋಮೇಶ್ವರಾ ॥

ಕೊಡಬಲ್ಲಂಗೆದರಿದ್ರಮುಂ ಪ್ರೌಢಗಂ ಮುಗ್ಧಾಂಗನಾಸಂಗಮಂ
ಮೂಢಂಗುತ್ತಮಜಾತಿ ನಾಯಕಿಯ ಪಾಪಾತ್ಮಂಗೆ ನಿತ್ಯತ್ವಮಂ
ಕಡುಲೋಭಂಗತಿದ್ರವ್ಯಮಂ ಧರ್ಮಿಕರಿಗಲ್ಪಾಯುಷ್ಯಮಂ ಮಾಳ್ಪಂ
ಸುಡುಪಾಪಿಷ್ಠನು ಬ್ರಹ್ಮನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

ಧರ್ಮ ಪ್ರಸಂಗಾದಪಿ ನಾ ಚರಂತಿ ।
ಯತ್ನೇನ ಪಾಪಂ ಹಿ ಸಮಾಚರಂತಿ ॥
ಆಶ್ಚರ್ಯಮೇತದ್ಧೀ ಮನುಷ್ಯಲೋಕೆ ।
ಕ್ಷೀರಂ ಪರಿತ್ಯಾಜ್ಯ ವಿಷಂಪಿಬಂತಿ ॥

ಕಳವು ಪುಸಿ ಪಾದರನ್ಯಾಯ ಕಾಪಟ್ಯದ ।
ಗ್ಗಳಿಕೆವೆಗ್ಗಳಮಲ್ಲಿ ಕಲಿಯಗುಣದಿಂ ।
ಇಳೆಯು ಪೆರ್ಗಾವೇರಿ ಮಳೆ ಬೆಳೆಗಳಡಗಿದವು ।
ಬಳಸಿಕೊಂಡಿಹುದು ದುರ್ಮರಣದಲ್ಲಿ ॥ ೯ ॥

ಶೀಗಿ ಮೆಳೆಯೊಳಗೆ ಬಾಳಿಯು ಸಿಕ್ಕ ಪರಿಯಂತೆ ।
ಯೋಗಿಗಳು ಕಾಣದಡಗಿಹರು ದುಷ್ಟರಿಗೆ ।
ಬ್ಯಾಗದಿಂ ಬಿಟ್ಟ ಬಸವಿಯ ಗೂಳಿಗಳನ್ನೂಡಿ ।
ಸಾಗಿಸುವರಾದರ್ಶೆ ಸದಮಲಾತ್ಮಾ ॥ ೧೦ ॥

ಗಂಡರಿಗೆ ಮಿಂಡರಿಗೆ ಕೂಡ ಉಣಬಡಿಸುವರು
ತುಂಡಮಿಂಡಿಯರು ಭೂಮಂಡಲದೊಳು ।
ಉಂಡನೆಂಬುವರು ಉಣ್ಣದಲೆ ಉಂಬುವರಿರಲು
ಚಂಡಿಯರು ಅರವೂಟನಿಕ್ಕಿಯಟ್ಟುವರು ॥ ೧೧ ॥

ಕಡೆಗಾಲ ಬಂತು ಧರ್ಮಕ್ಕೆ ದಯಾಸಾಗರ
ನುಡಿಯಲಾರೆನು ದೇವ ಕಲಿಯ ಕೌಟಿಲವಂ ।
ಪಡದಿರ್ದ ಜನನಿ ಜನಕರನುಪೇಕ್ಷಿಸಿ ತಮಗೆ
ನಡುವೆ ಬಂದಿರ್ದ ನಾರಿಯರಿಗೊಲಿದಿಹರು ॥ ೧೨ ॥

ಪೊಡವಿಯೊಳು ಗುರುಹಿರಿಯರೋಕ್ತಿಗಳನಾಲಿಸದೆ
ಮಡದಿಯರ ಮಾತ ಮನ್ನಿಸುವರನಘಾ ।
ಅಗಲರೈ ಸೂಳಿಯರನಾಳರು ಸ್ವಪತ್ನಿಯರ
ಬಗಿಯಲನವರತ ದುರ್ಗೋಷ್ಠಿಯಲ್ಲಿಹರು ॥ ೧೩ ॥

ಯುಗಧರ್ಮವೇನೆಂಬೆ ಜಗದಾರ್ಯನೆ ಮತ್ತೆ
ಸೊಗಸುವಡೆದಿರ್ಪರೈ ಸಪ್ತ ವ್ಯಸನದೊಳು ।
ಧರ್ಮಕೊಂದರ ಕಾಣಿಯಂ ಕೊಡದೆ ಜನರು ದು
ಷ್ಕರ್ಮಕ್ಕೆ ಸಂಚಿತಾರ್ಥಂಗಳೀವರು ॥ ೧೪ ॥

ಧರ್ಮವಿನ್ನೆಲ್ಲಿಹುದು ಧಾತ್ರಿಯೊಳು ಧವಳಾಂಗ
ಕರ್ಮ ಹೆಚ್ಚಿತು ಕಲಿಯ ಕುಟಿಲದಿಂದ ।
ಸಹಜ ಯೋಗಿಗಳಿಲ್ಲ ಸಹಜ ಭಕ್ತಿಗಳಿಲ್ಲ
ಸಹಜ ಕ್ರಿಯೆಗಳಿಲ್ಲ ಶೋಧಿಸಲ್ಕೊಂದೂ ॥

ಗಿರಿಜಾತೆ ನಿನ್ನ ನಿಷ್ಕಾಮಾತಿಶಯವನುರೆ
ತ್ವರಿತದಿಂ ನೋಡಿದಪಳಂತೆ ತನ್ನಾ ॥ ೧ ॥

ದುರುಳ ಮಾಯೆಯನಟ್ಟಿ ಧರಣಿ ತಳದೊಳು ನಿನ್ನ
ಸ್ಮರಬಾಧಿಯಲ್ಲಿ ಮರುಗಿಸುವಳಂತೆ ।
ಥರಥರ ಹಾವಭಾವಾದಿಗಳ ಬೀರುತ್ತೆ
ಮರುಳುಗೊಳಿಸುವಳಂತೆ ನಿನ್ನ ಮಾನಸವಂ ॥ ೨ ॥

ಭ್ರಾಂತಿ ನಿಂ ಬೆಂಬತ್ತಲಡಗಿದಪಳಂತೆ ಆ
ಕಾಂತಿ ಕೇಳೆಲೆ ಕಾಲಮದಭಂಜನಾ ।
ಎಂತೆಂಬೆ ವಿರಹಾಗ್ನಿಯಲ್ಲಿ ಬೆಂಗುದಿಗೊಂಡು
ಗೊಂತಳಿದ ಮರುಳಿನೊಲು ತಿರುಗಿಸುವಳಂತೆ ॥ ೩ ॥

ಪಾರ್ವತಿಯ ಪಂಥುಳ್ಳ ಮಾಯಿಯಂ ಮರುಳ್ಗೊಳಿಸು
ಊರ್ವಿತಳಕ್ಕೈದಿ ಉಜ್ವಲಾಂಗಾ ।
ಪೂರ್ವದೆಚ್ಚರವಿಡಿದು ಹೊರಳ್ಯಾಡಿಸ್ಯೆಯವಳ
ಗರ್ವಾದ್ರಿಕುಲಿಶ ಮತ್ತವಳನಾಣ್ಗೆಡಿಸೀ ॥ ೪ ॥

ನಚ್ಚಿರ್ದ ಶುನಕ ಬೆನ್ಹತ್ತಿ ತಿರಗುವ ಮಾಳ್ಕಿ
ಹುಚ್ಚುಗೊಂಡವಳು ನಿನ್ನೊಡನೆ ಬರ್ಪಂತೆ ।
ಮತ್ಸ್ಯಗಂಗಳಿಯ ಕಲ್ಮನವ ಬೆಣ್ಣೆಯ ತೆರದಿ
ಸ್ವಚ್ಛದಿಂ ಕರಗಿಸ್ಯೆಕವಿಕಲ್ಪಭೂಜಾ ॥ ೫ ॥

॥ **ಮಾತು** ॥ ಮತ್ತೆ ವಿಸ್ಮೃತಿಯಿಂದಾ ಅವಳ ಲಾವಣ್ಯಕೆ ನೀ ನದರಿಟ್ಟೀ, ಚುಂಬನವ ಕೊಟ್ಟೀ, ಕುಚಕೆ ಕೈಯಿಟ್ಟೀ, ಪಂಥದೆಚ್ಚರವ ಬಿಟ್ಟೀ;

ಬಿಟ್ಟೀ,

ಅಪಹಾಸ್ಯಕ್ಕೆ ನಮ್ಮನಂ ತಂದಿಟ್ಟೀ;

ಇಟ್ಟೀ,

ಅವಳನಂ ಸೋಲಿಸದೆ ಮತ್ತೆ ಹಿಮ್ಮೆಟ್ಟೀ, ಅವಳ ಮುಲಾಜ ನೀನಿಟ್ಟೀ, ಮತ್ತೆ ಅವಳನಂ ಒಂದು ಕವಡಿಗೆ ಸಲ್ಲದಂತೆ ಮಾಡಿ ನೀನವಳ ಕೈಯೊಳಗೆ ಸಿಗದೆ ಅವಳನಂ ತಂದು ಗುದ್ದವನು ಹೊಗಿಸಿ ಮೂರು ಬೊಗಸಿ ನೀರು ಬಿಟ್ಟು ಬಂದು ನನ್ನ ನಗಿಸಿಬಿಡು ಗಡಾ ಪಂಥಗಾರ ಪ್ರಭುವೆ–ಎಂದು ನಿರೂಪಿಸಿ ಮತ್ತೆ ಅಂಥಾನೆ :

॥ **ಚೂಲಿಕಾ** ॥ ಕಾಲಾಂತಕನೆ ಇಳೆಯ ಪಾವನವೆಸಗುವಡೆ
ಕಾಲಮೀಗಲ್ಲವೇ ತಮಗೆ ಭಾವಿಸಲು
ಕಾಲಗಳೆಯಲದ್ಯಾಕೆ ಕಾಮಕಲ್ಪದ್ರುಮಾ
ಪೇಳಲಾರೆನು ಪ್ರೇಮಾಂತರಂಗಾ ॥ ೧ ॥

ಸರ್ವಗತ ನೀನರಿಯದಿಹ ರಹಸ್ಯಮದುಂಟೈ
ಸರ್ವೇಶ ಸರ್ವತೋಮುಖ ಮಸ್ತಕೇ
ಊರ್ವಿ ಭಾರವನಿಳುಹುದು ಮಾರ್ಗವಳಿದು ಎಲೆ
ಸರ್ವರಕ್ಷಾಮಣಿಯೆ ಸಾದರದೊಳು ॥ ೨ ॥

ಈ ಪ್ರಕಾರದಿಂದಲಾ ಸುರಮುನಿವರ ನಾರದರು ಪಂಚವದನ ಪನ್ನಗವಿಭೂಷಣ ಪಂಚತ್ವದೂರ ಪಂಚಬಾಣ ಪ್ರಹರ ಪ್ರಮಥಗಣವಂದ್ಯನಾದ ಪರಮೇಶ್ವರಂಗೆ ಈ ಪ್ರಕಾರ ಬಿನ್ನವಿಸಿದಾಕ್ಷಣಕ್ಕೆ ಆ ಮೃತ್ಯುಂಜಯನು ಆ ಪ್ರಭುವಿನ ಮುಖಪದ್ಮವಂ ನಿರೀಕ್ಷಿಸಿ ಮಂದಹಾಸ ಮುಖಾರವಿಂದದಿಂದಲಾ ಪ್ರಭುವಿಗಿಂತೆಂದನು–

। ಸಿದ್ಧಗಣಪತೆ ಅಥಾದೇಹಿಸನ್ಮತೆ ।

॥ **ಪದ** ॥ ಕೇಳು ಪ್ರಭುವರಾ । ಪಾಲಿಸೈವ ಸುಂದರಾ ॥ ಪಲ್ಲ ॥
ಮೂರು ಯುಗಾಂತರದಿ ಪಿಂತೆ ।
ಸಾರಿ ಮರ್ತ್ಯರನ್ನು ಪೊರಿದಿ ।
ಕಾರಣಾತ್ಮಕಲಿಯುಗಕ್ಕೆ ।
ಸಾರು ಸಾರಲೈ ಕೃಪಾರಸವ ಬೀರಲೈ ॥ ೧ ॥

ಮತ್ತೆ ಕೇಳು ಗೌರಿ ನಿನ್ನು
ದಾತ್ತ ನಿಷ್ಕಾಮನಿಯುತ
ಚಿತ್ತವ ಪರಿಕಿಸುವಳಂತೆ ಮತ್ತೆ ತನ್ನಯಾ
ಮಾಯಿಯಿಂದೆ ಸುವಿನಯಾ ॥ ೨ ॥

ಕ್ರೂರ ಮಾಯೆ ಬಂದು ನಿನ್ನ
ಗಾರ ಮಾಳ್ಪಳಂತೆ ಮರ್ತ್ಯ
ಸಾರಿ ಕೌಟಲವನು ಬೀರಿ
ಬರ್ಪಳಂತರಿ ಜೈಸು ಸುಗುಣ ಮಂಜರಿ ॥ ೩ ॥

॥ **ಚೂಲಿಕಾ** ॥ ಹರಿಸುರಬ್ರಹ್ಮರುದ್ರಾದಿ ಪ್ರಮಥರಲ್ಲಿ
ವರಪದಸ್ತನು ನೀನೆನುತ್ತುಸುರಲು ।

ಕಳವು ಪುಸಿಯು ಪಾದರಮನ್ಯಾಯಗ । ಳಿರವಲ್ಲೆಗ್ಗಳಕಿ ।
ತಳುಹಿಲ್ಲದೆ ಪರದಾರಾಸಕ್ತಕೆಯಳಿವಾಕಳಕಳಿಕಿ ।
ಇಳೆಯೊಳಿನ್ನಾವದು ಲೇಸೆಂಬೆನು ಭ್ರಷ್ಟತ್ವದ ಮೊಳಿಕಿ ।
ಕಳಿಯಿಸಲಾಗದು ಇಳೆಯ ನರರು ಮ। ತ್ತುಳಿದರೇನು ಮುಸುಗಳಿದ
ರದೇಸ್ಯೆ ॥ ೩ ॥

ಶ್ಲೋಕ : ಸ್ಫುಟತು ಮಹಾಪತತುನಭಶ್ಚಲಂತು ಗಿರಯೋಬಿಲಂತು ವಾರಿಧಯೊ ॥
ಅಧರೋತ್ತರಮಸ್ತುವಾಜಗತೀ ಕ ನಿರ್ವಿೀತರಾಗಸ್ಯ ॥

॥ **ಚೂಲಿಕಾ** ॥ ಇಂತು ಪ್ರಭುವರ ನಿರಾಸಕ್ತಿಯುಳ್ಳವನಾಗಿ ।
ಅಂತಕಾಂತಕನಿಗಿಂತೆಂಬುತಿರಲು ॥
ಸಂತೋಷ ಸಂವ್ಯಾಪ್ತ ಮಾನಸದಿ ಮೃಡನೆಂದ ।
ನೀಂ ತವಕದಿಂದಾಲಿಸ್ಯೆ ಪ್ರಭುವರೇಣ್ಯಾ ॥ ೧ ॥

ಫಲರುಚಿಗಳಂತೆ ಸದ್ಗಂಧ ಕುಸುಮಗಳಂತೆ
ಸಲೆ ಬೀಜ ವೃಕ್ಷಂಗಳಂತೆ ಭಾವಿಸಲು ।
ನಲುವಿನಿಂ ಚಂದ್ರ ಜ್ಯೋತ್ಸ್ನಗಳಂತೆ ನಿನಗೆನಗೆ
ಎಲೆ ಪ್ರಭುವೆ ದ್ವೈತಮುಂಟೆ ಬಗಿಯಲು ॥ ೨ ॥

ಶರ್ಕರಿಯ ಖಂಡೆರಡರೊಳಗೆ ರುಚಿ ಬ್ಯಾರೆಂದು
ತರ್ಕಿಸಲು ಬಹುದೆ ತಂಬಿಸದಾಲಿಸ್ಯೆ ।
ನಿನ್ನೊಳಗೆ ನಾನಭಿನ್ನತೆಯೊಳಿರ್ಪೆನು ನಂಬು
ಭಿನ್ನಭಾವಿಲ್ಲ ಶ್ರೀ ಚನ್ನಪ್ರಭುವೇ ॥ ೩ ॥

ಜಲಜ ಪತ್ರವು ಜಲವನುಳಿದು ಜೀವಿಸುವುದೆ
ನೆಲವನ್ನೊದ್ದದೆ ವೃಕ್ಷ ಫಲವಾಹುದೆ
ಸೆಲೆಯಂತೆ ನಿನ್ನಗಲಿ ಜೀವಿಸಲದಾರ್ಪೆನೆ
ತಿಳಿ ಕಳೆವರವನುರೆಪ್ರಾಣವೆಂತು ॥ ೪ ॥

ತಾನಿರದೆ ಆಶ್ರೈಸಿಕೊಂಡಿರ್ಪುದದರಂತೆ
ನಾ ನಿನ್ನನಾಶ್ರೈಸಿಕೊಂಡಿರ್ಪೆನು ।
ನೀನ್ಯೆದಿ ಜನನ ಮರಣಾಶ್ರಯದ ದೇಹಿಗಳ
ಏನೆಂಬೆ ಕುಕ್ಷಿಯೊಳ್ ನವಮಾನವರಿಗೂ ॥ ೫ ॥

ಮತ್ತೆ ಜಠರಾಗ್ನಿಯೊಳ್ ಬೇಯದಾಲ್ಪರಿಯದೆ
ಚಿತ್ತೈಸು ನೀನಯೋನಿಜನಾಗಿಯೂ ।

॥ **ಚೂಲಿಕಾ** ॥ ಯಿತ್ತಾಲಿಸ್ಯೆ ಮಹತ್ತ್ವಭುವೆ ನಿನ್ನಾರೈಸಿ
ಮತ್ತೆ ಸುಜ್ಞಾನಿ ನಿರಹಂಕಾರರೂ
ಯತ್ಯಾಶ್ರಮವನಾಂತು ಯತ್ನಪೂರ್ವಕದಿಂದೆ
ನಿತ್ಯಸುಖನತಿಗಳೆದು ನಿಲಯ ಪೊರಮಟ್ಟು ॥ ೬ ॥

ಸರ್ವಸಂಗವ ಬಿಟ್ಟು ವಲ್ಕಲೊಸ್ತ್ರವನುಟ್ಟು
ಸರ್ವೇಶ್ವರನ ಧ್ಯಾನ ಮನದೊಳಿಂಬಿಟ್ಟು ।
ಸರ್ವಮಂಗಳಮೂರ್ತಿ ನಿನ್ನಪೇಕ್ಷದೊಳವರು
ಸರ್ವಸಂಪದವ ತೃಣಕರಿಸಿ ಬಂದು ॥ ೭ ॥

ಅರಣ್ಯದೊಳು ನಿರಾಹಾರದಿಂ ಚಿರಕಾಲ
ಮಾರರಿಯದಂತೆ ಯೋಗದೊಳಿರ್ಪರು ।
ಮನದ ಮಹದಾನಂದದಿಂದೆ ಅವರಿಷ್ಟಾರ್ಥ
ವನು ಸಲ್ಲಿಸ್ಯೆ ಸದಮಲಾಂಗಪ್ರಭುವೆ ॥ ೮ ॥

ಎಂದು ಕುಂದೇಂದು ಸನ್ನಿಭ ಗೌರಗಾತ್ರ ಶಿವ ।
ನಂದದಿಂ ಪೇಳಲಿಂತೆಂದ ಪ್ರಭುವರನು ॥

॥ ಬಸವಲಿಂಗ ಮಹರಾಜ ರಾಜಾ ಬಸವೇಶಾ ಬಸವೇಶಾ ॥

॥ **ಪದ** ॥ ವ್ಯರ್ಥವ್ಯಾಕೆಯೀ ಮರ್ತ್ಯಲೋಕ ಸಾರೆ ನಾ ಸಾರೆ
ಕರ್ತೃ ನಿನ್ನ ಪದ ಕೀರ್ತನೆಯುಳಿದಿರಲಾರೆಯಿರಲಾರೆ ॥ ಪದ ॥

ಸುರಮಣಿಯಂ ಪರಿಭವಿಸಿ ಗಾಜವಣಿ ಭರದಿಂ ಕೊಂಡವನೊಲ್ ।
ಪರಮಾನ್ನವ ಪರಿಗಳಿದು ಪಿಶಿತಕುರೆ ಪರಿಣಾಮಿಸಿದವನೊಲ್ ॥
ನೆರೆಪೀಯೂಷವನತಿಗಳಿಯುತೆ ಸುರೆ ತರಿಸಿ ಕೊಂಬುವನೊಲ್ ।
ಹರಹರ ಪುರಹರ ಎನ್ನಿಂದಾಗದು ಮರವಿ ಲೋಕದೊಳಿರುವ
ವಿಚಾರಂ ॥ ೧ ॥

ನೆರೆ ಇರುಳರಿದಿಹ ಕೂಪಂಗೆಡುವರೆ ಕಡು ಮೂರ್ಖತನದಿಂ ।
ಕರ ಸಂಗತ ಕಂಕಣಕೆ ದರ್ಪಣಂ ತಹರೆ ದುರ್ಮನದಿಂ ।
ಶಿರ ಬಲ್ಲಿತ್ತೆಂದಿರುದುರೆ ಪಾದಿಯ ಕರಿಗಲ್ಹಾಯ್ತನದಿಂ ।
ಪರಿಣಾಮವೆಪಾಮರಲೋಕದನಡಿ । ಪುರಹರ ಮತ್ತುಳಿ–
ದವರಟ್ಟೈಸಲೆ ॥ ೨ ॥

ಈ ಪ್ರಕಾರದಿಂದಲಾ ನಿರಾಭಾರ ನಿರ್ವಿಕಾರ ಪ್ರಭುರಾಜ ಮಾಶ್ಯೈಶವ ಲೀಲೆಯಂ ತಳೆದು ದಂಪತಿಗಳ ಯೋಗ ಮಧ್ಯದಲ್ಲಿ ಕೋಟಿ ಸೂರ್ಯ ಪ್ರಭೆಯನತಿಗಳೆದು ಚಿನ್ಮಯ ಭಸ್ಮ ರುದ್ರಾಕ್ಷಿಗಳ ತಳೆದು ಪರಮ ತೇಜಃಪುಂಜದಿಂದ ಮಂಜುಲ ಧ್ವನಿಯಿಟ್ಟು ಅಳುತಿರಲು ನಿರಂಹಕಾರ ಸುಜ್ಞಾನಿಯರು ಕಂಡು ಸಂತೋಷಮಾರ್ಜಿತ ಹೃದಯರಾಗಿ ತತ್ಸಿಸುಸಮಾನ್ವಿತರಾಗಿ ಮನಿಗ್ಯೆತಂದು ಅಲ್ಲಮಪ್ರಭುವೆಂದು ನಾಮಕರಣವನಿಟ್ಟು ಬಹು ವಿಧದಿಂದೆ ಪರಿಪಾಲಿಸುತ್ತಿರಲ್ಕನ್ನಂ ॥ ೧ ॥

॥ **ಆರ್ಯಂ** ॥ ಕಡಿದೊಣಗಿದ ತರು ಕೊನರೆ ಬರಡಗಳ್
ಬಿಡದೆ ಕರಿಯ ತೊಡಗಿದವಾಲಂ ।
ಪಡಿಗಳೊಸರ್ದವಾಗಿಡಫಲಗೊಯ್ಯಲ್
ವಡನೆ ಮತ್ತೆ ಫಲವಾಗೆ ಖಲೂ ॥ ೧ ॥

ಸಡಗರದಿಂ ಮೃಡಗುಡಿಯೊಳಿಪ್ಪಶಿಲ
ವಡೆದ ಬೊಂಬಿಗಳ್ ಶೀಘ್ರದೊಳು ।
ನಡೆದು ನಟಿಸುತಿರೆ ಪೊಡವಿಯ ಸಜ್ಜನ
ಕ್ಷಿಡಿಯೆ ಮೋದದ್ವೆಚ್ಚಿಗಿಯು ಬಲು ॥ ೨ ॥

ಮಳಿಬೆಳಿಯಿಗಳಭಿವೃದ್ಧಿಕರಾಯಿತು
ಇಳೆಯ ತಾಪಮಡಗಿತ್ತಾಗೆ ।
ಪೊಳೆಯು ಪಳ್ಳಕಾಸಾರ ಕೂಪಗಳ್
ತಿಳಿವರಲಿಕ್ಕಿಪರಿದವಾಗೆ ॥ ೩ ॥

॥ **ಚೂಲಿಕಾ** ॥ ಇತ್ತ ಶಾಂಭವಿ ತನ್ನ ಮಾಯಾಸಾರಂದೆಗಿದು
ಪುತ್ಥಳಿಯ ಮಾಡಿ ಕಾರುಣ್ಯದಿಂ ನೋಡಿ ।
ಪೃಥ್ವಿಯೊಳು ನಿನ್ನ ಪೊರೆಯಲ್ಯಾರು ಸುಳಿಂಡೆಯು
ಮತ್ತೆ ನೋಡಿದಡೆ ಮಾತಾಡಿದಡೆಯೂ ॥ ೧ ॥

ಹರಿಸುರಬ್ರಹ್ಮದೇವೇಂದ್ರ ದಾನವ ಮುಖ್ಯ
ಪರಮರಾದಡೆಯು ನಿನ್ನಯ ಪ್ರತಾಪಕ್ಕೆ ।
ಕರಗಿ ಮನಸೋಲಲೆಂದ್ದರಸಿ ಮಾಯಾಕ್ಷತಿಯ
ಕರುಣದಿಂದಿಟ್ಟು ತಾಂಬೂಲಗೊಟ್ಟು ॥ ೨ ॥

ಶಿರಸಾಗ್ರದಲ್ಲಭಯಕರನಿರಿಸುತೆಂದಳೆಲೆ
ತರುಣಿಮಣಿ ಕೇಳು ಜೆಡಿಬನವಸಿಯಪುರದಾ ।
ದೊರಿಯು ದೋರ್ದಂಡ ಪ್ರತಾಪಯುತ ಮಮಕಾರ
ನರಸಿ ಮೋಹಿನಿಯ ಗರ್ಭದೊಳು ಸಂಭವಿಸೀ ॥ ೩ ॥

ಸುಳಿದೊಡಂ ಸುಳುಹುದೋರದೆ ನಡಿಯೆ ಹೆಜ್ಜೆಗಳ
ನಿಲವುಗಾಣದೆ ಸಂಚರಿಸು ಪೋಗಲ್ಕೆ ॥ ೬ ॥

ಸಲೆ ನಿನ್ನ ಬೆಂಬಳಿಯೊಳಾನಿರ್ಪೆನ್ನೈ ನಂಬು
ಚಲುವ ಚಿನ್ಮಯಮೂರ್ತಿ ಚಿರಕಾಯ ಪ್ರಭುವೆ ।
ಎಂದು ಮಕುಟಾಗ್ರದಲ್ಲಭಯಕರವಂ ಮಡಗಿ
ಕಂಧರ ಸ್ಥಿತ ಸುಮಂದಾರ ಮಾಲೆಯನು ॥ ೭ ॥

ಚಂದದಿಂ ತೆಗೆದವನ ಕಂಠದೊಳಲಂಕರಿಸಿ
ಪೆಂದದಿಂ ತಾಂಬೂಲ ಸುಪ್ರಸಾದವನು ।
ಕರದು ಕರದೊಳ್ಕೊಟ್ಟು ಪ್ರಭುವೆ ಚಿತ್ತೈಸೆನಲು
ಹರನಿಗಭಿನಮಿಸಿ ಹರುಷದೊಳು ಪೊರಮಟ್ಟು ॥ ೮ ॥

॥ ನಿನ್ನ ಸುಂದರ ವದನವದೋರೆ ॥

॥ **ಪದ** ॥ ನಡಿ ತಂದನಾಗೆ ಮಾಯಾತೀತಂ ॥ ಪಲ್ಲಂ ॥
ನಾನಾ ದೇಶಂಗಳ ಮಧ್ಯದೊಳುನ
ವೀನ ದೇಶ ಕರ್ನಾಟಾಂತರದೊಳೀ
ಭೂನುತ ಸತ್ಪುರಿ ಬಳ್ಳಿಗಾವಿಯೊಳೀ
ಮಾನಿತಿಯಹ ಸುಜ್ಞಾನಿಯೆಂದೆನಿಪ
ಮಾನಿನಿಯೊಡನುರೆ ನಿರಹಂಕಾರನು
ಧ್ಯಾನಾರೂಢದಿ ತಪನೆಸಗುತ್ತಿರೆ
ಜ್ಞಾನಾಂಬುಧಿ ಪ್ರಭುವವರ ಮಧ್ಯದೊಳ್
ಸೂನು ಸುರೂಪವನಾಂತು ಮಂಜುಲ
ಧ್ವಾನದಿಂದಲಳುತಿರಲು ಕಂದೆರದು
ಭಾನುಕೋಟಿಸತ್ಪ್ರಭೆಯೊಬ್ಬುಳಿಯೊ
ಯೇನೆಂಬೆನು ಪುಣ್ಯದ ಘಟ್ಟಿಯೊಮೇಣ್
ತಾನೆ ಕೈವಲ್ಯವಾದದರಸುಪುತ್ಥಳಿ

ಏನಿವರೆಡೆಯೊಳ್ ಸಂಜನಿಯಿಸಿತೊ
ಕೂನುಗೊಳ್ಳಲಶಕ್ಯವೆ ಸಿರಿಯನು
ಮಾನವೇನು ಚಿಲ್ಲಿಂಗ ಭಸ್ಮ ಸಲೆ
ನ್ಯೂನ ರಹಿತ ರುದ್ರಾಕ್ಷಿ ಮಣಿಗಳಿಂ
ತಾನೊಲಿದಾಡುತ್ತಳುತೆ ನಿಟ್ಟಿಸುತ
ಲೀನಿರ್ಜಡ ನರವರಿಸದಲಾಗೆ॥ ಮಾಯಾತೀತಂ ॥ ॥ ೧ ॥

ಹುತ್ತ ಬೆಳೆದಿರುವ ಲತೆಯ
ಮೊತ್ತಾ ಹೊದರಿಕ್ಕಿ ಮೆರೆವ ।
ಸತ್ಯ ವ್ರತಿಯಿಗಳ ಸಂಚಲಾಗೆ ಮನಂ ॥ ೧ ॥

ಊರಂ ತೊರೆದಟವಿಯನುರೆ
ಸೇರೆನ್ನಾದಿಗಳನುಳಿದು ।
ತೀರದಿ ಗಂಗಾಸುಗುಣಿಯ
ಸಾರಿದ ಸಾಧುಗಳ ಸಂಚಲಾಗೆ ಮನಂ ॥ ೨ ॥

ಶಿದ್ಧರ ಅಷ್ಟಾಂಗಯೋಗ
ಬದ್ಧರ ಕರಣಾದಿ ಸೂಪರಿ
ಶುದ್ಧರ ಪುಲಿಪುಲ್ಲೆಚರ್ಮ
ಪೊದ್ದಿರು ಮೌನಿಗಳ ಸಂಚಲಾಗೆ ಮನಂ ॥ ೩ ॥

ಶಿರಸಾಗ್ರವನೂರಿ ಗಿರಿಯ
ಮೆರೆವ ಶಿಖರಾಗ್ರದಿ ಪದ ।
ವೆರಡಂಬರಕೆತ್ತಿಯೋಗ
ವೆರದಿಹರುಷಿವರರ ಸಂಚಲಾಗೆ ಮನಂ ॥ ೪ ॥

ಹರಶಾಂಕರಿಗರ್ಧನಿತ್ತ
ಹರಿಯಿಂದಿರಿಗುರವನಿತ್ತ ।
ಪರಮೇಷ್ಠಿಯು ರಸನನಿತ್ತ
ನರರೆ ಶಾಂಭವಿಗೆಸಂಚಲಾಗಿ ಮನಂ ॥ ೫ ॥

॥ **ಮೇಲಣ ಪದವು** ॥

ಸಂಜೆನಿಯಿಸಲವಳಂ ನೋಡಿ ಮುದವದಾಳಿ ।
ರಂಜಿಪ ಸುಮುಹೂರ್ತವ ದೈವಜ್ಞರ ಕೇಳಿ ॥ ೩ ॥

ಸರ್ವೇಶ್ವರ ಕೃಪೆಯಿಂ ಮಹಾಮ್ಮಾಯಿಯಂದು ।
ಸರ್ವೇಜನರು ಕರಿದರು ತಾವ್ ನಡೆತಂದು ॥ ೪ ॥

ತಡವರಿಸದಲುಡುವರನಂತೆ ಬಳೆವುತಿರೆ ನಾರಿ ।
ಮೃಡನರಸಿಯ ಬಲದಿಂ ನವ ವರ್ಷವು ಮೀರಿ ॥ ೫ ॥

ದಶವರ್ಷದಲ್ಲಿ ಸಂಗೀತ ನೃತ್ಯ ವೀಣಾ ।
ಸಸಿನದಿಂ ಭರತನಾಟಕವು ಕಲಾತ್ರಾಣಾ ॥ ೬ ॥

ಪರಮ ವೈಯಾರದಿಂ ಪಂಥಗಾರ ಪ್ರಭುವಿ
ನುರುಕಾಮಕಲೆ ತಂತ್ರದೆಳೆಯಿಂದೊಲಿಸಿ ॥

॥ **ಮಾತು** ॥ ಪಾರ್ವತಿ ಒಲಿಸಿ, ಇಲ್ಲದ ಬ್ಯಾಟವನವಗೆ, ಕಲಿಸಿ :

'ಕಲಿಸಿ',

ಅವನ ಕಲ್ಲೆದೆಯಲ್ಲಿ ನೀ ಸಂಚಲಿಸಿ;

'ಚಲಿಸಿ'

ಮತ್ತವನ ಕುಟಿಲಾಟವಂ ನಿಲಿಸಿ;

'ನಿಲಿಸಿ',

ಅವನ ಬಿರಿದು ಬಾವುಲಿಗಳಂ ಸುಲಿಸಿ ಎನ್ನ ಪಂಥವನು ಗೆಲಿಸಿ :

॥ **ಚೂಲಿಕಾ** ॥ ಭರದೊಳವನಂ ಪಿಡಿದು ತಂದೆನಗೆ ವಪ್ಪಿಸೆಂ
ದಿರದೆ ಸದ್ಬುದ್ಧಿವಾದವನವಳಿಗಿತ್ತು ॥ ೪ ॥

ಕರದು ಬಿಗಿಯಪ್ಪಿ ಕಾರುಣ್ಯದಿಂ ಕದಪಗಳ
ನಿರದಲುಗಿಸುತ್ತೆ ನೀರಜನೇತ್ರೆಯಳಂ ।
ಭರದಿಂದೆ ಮರ್ತ್ಯಲೋಕಕ್ಕೆ ಬೀಳ್ಕೊಟ್ಟಳಾ
ಪರಮೇಶ್ವರಿಯಳೆನಿಪ ಪಂಚಮುಖನರಸಿ ॥ ೫ ॥

ಈ ಪ್ರಕಾರದಿಂದಲಾ ಶಾಂಭವಿಯು ಮರ್ತ್ಯ ಲೋಕಕ್ಕೆ ನಿರೂಪವಂ ಕೊಟ್ಟಾಕ್ಷಣಕ್ಕೆ

॥ ಕೇಳ್ ಹೆಣ್ಣಜಾತಿ ಬೆಮಾನ ॥

॥ **ಪದ** ॥ ಭೂಲೋಕಕಿರದೆ ನಡೆತಂದಳಾಗ ಮಾಯಿ ।
ತ್ರೈಲೋಕ ಜನನಿ ಗೌರಿಯ ಪ್ರತಿಚ್ಛಾಯಿ ॥ ಪಲ್ಲ ॥

ಜೆಡಿ ಬನವಸಿಯಾಳ್ವಾ ಮೋಹಿನಿ ಮಮಕಾರಗಳ ।
ನಿಡುಮೊಡಿಯೊಳುದಯಿಸಿದಳು ಮಾಯಾಸುಕಳಾ ॥ ೧ ॥

ಪುಟ್ಟಲ್ಕೆ ಯೋಗಿ ಜೋಗಿಗಳ ಬಲ್ಲಿತಹ ಮನವು ।
ಕೆಟ್ಟಾಗ ಭ್ರಷ್ಟತನಮೊಂದಿದವ್ವೈ ಘನವು ॥ ೨ ॥

॥ ಶ್ರೀ ರಾಮ ವಿಭೋ ॥

॥ **ಪದ** ॥ ಸಂಚಲಾಗೆ ಮನಂ ॥ ಪಲ್ಲಂ ॥
ಬೆತ್ತ ಬಿದರಡವಿ ಸುತರು ।

ಶಿರಬಾಗಿ ಬೆರಗಾಗಿ ಧ್ಯಾನಿಸುವ ಬಗಿಯೇನು
ಮರಿಮಾಂಜದುಸುರೆನಗೆ ಮಂಜುಳಾಂಗ ।
ಕೊರತೆ ನಿನಗಾವುದರೊಳುಂಟೆಂದು ಬೆಸಗೊಳಲ್
ವರನಾವ ಮಾಯಿಗೆಂದೆಂಬ ಚಿಂತಾ ॥ ೪ ॥

ಪರಮ ವ್ಯಥೆಯೆನ್ನೆದಿಯೊಳಿರ್ಪುದೆಂದೆರಗಲ್ಕೆ ।
ಧರಣೇಂದ್ರಗಿಂತೆಂದನಾ ಸುರೋತ್ತಮನು ॥

॥ ದೇವ ಪಾಹಿ ತು ನಿತ್ಯನಾಥಬಂಧು ॥

॥ಪದ॥ ಕೇಳು ರಾಜಾ ದಾತೃತ್ವ ಕಲ್ಪಭೂಜಾ
ಭಾಳವಿಲೋಚನ ಮಾಯಿಗೊಲ್ಲಭಾಗುವ ನೈಜಾ ॥ ಪ ॥

ಆದಿಶಕ್ತಿಯವತಾರ ಬಂದು ನಿನಗೆ ।
ಸಾದರದಿಂ ಪುಟ್ಟಿದಳು ಗರ್ಭದೊಳಗೆ ।
ಬೋಧಿಸುವೆ ಪರಮಾತ್ಮ ಬರ್ಪ ನಿನ್ನಲ್ಲಿಗೆ ॥ ೧ ॥

ನರಗುರಿಗಳಿವಳಿಂಗೆ ಪತಿಗಳಲ್ಲಾ
ತರುಣಿ ಮಾಯಿ ಸೌಂದರ್ಯಕೆ ಸಾಟಿಯಿಲ್ಲ
ಪರಿಭಾವಿಸಲಿವಳಿರವ ಪರಶಿವನೆ ಬಲ್ಲ ॥ ೨ ॥

ಒಂದು ಕಾರಣಿಕವತಾರ ತೊಟ್ಟಳೆಂದೆ
ಮುಂದುಗಾಣರು ನಾವರಿವುದೆಂತುಯಿಂದೆ
ನಂದಿ ವಾಹನ ವೃಷಭೇಂದ್ರ ಪಾಲಿಸುವನುರೆ ಮುಂದೆ॥ ೩ ॥

॥ಚೂಲಿಕಾ॥ ಇಂತು ಗುರುವರ ನಿರಹಂಕಾರ ಮಮಕಾರನಿಗೆ
ಸಂತೋಷದಿಂದೊರಿದ ಕಂತುಹರನು ।
ಭ್ರಾಂತಬುದ್ಧಿ ಅದ್ಯಾಕೆ ತವ ತನುಜೆಗೆ ಪ್ರಾಣ
ಕಾಂತನಲ್ಲದೆ ಮಿಕ್ಕ ನರಸುರಾಸುರರು ॥ ೧ ॥

ತರುಣಿಯಳ ಚರಣರೇಣು ಸ್ಪರಿಸನಕೆ ಪಾ
ತ್ರರುಮಲ್ಲದೊಲ್ಲಭರದಾಗುವುದು ಮಿಥ್ಯಂ ।
ಬರಿದೆ ವ್ಯಾಕುಲವ್ಯಾಕೆ ತೊರಿಯನಲ್ಮಮಕಾರ
ನೊರಿದಹಂಕಾರ ಗುರುವರ್ಯಗೊಲವಿಂ ॥ ೨ ॥

ಎಲೆ ಮತ್ತುಲೋದ್ಧಾರ ಗುರು ವರನಹಂಕಾರ
ಕಲುಷಹರ ತ್ರಿಪುರ ಸಂಹಾರನೊಲಿದು ।

ವ್ಯಾಕರಣ ತರ್ಕ ಗಣಿತಂ ಶಿಕ್ಷಿಸಲು ಜೆವದಿಂ ।
ನಾಕಿಗರಿಗರಿದೆನಲ್ ಬಂದುದವಳಿಗ್ಯೊಭವದಿಂ ॥ ೭ ॥

ಇತ್ತಾಗ ಪ್ರಾಯ ಸಾಹಸಿಯಳಾಗಲುರೆ ನೋಡಿ
ಬಿತ್ತರಿಸಲರಿದು ಇವಳಂಗ ಸೊಬಗವೆಂದಾಡಿ ॥ ೮ ॥

ದಂಪತಿಗಳಾಗ ಸ್ಯೆವೆರಗಿನಿಂದೆ ನಿಟ್ಟಿಸುತೆ
ಸಂಪದಕೆ ಸಫಲಮಾಯ್ತೆಂದರಾಗ ಬಣ್ಣಿಸುತೆ ॥ ೯ ॥

॥ ಅಣ್ಣ ಕೇಳಯ್ಯಾ ಎನ್ನ ಬಿನ್ನಪಾ ॥ ॥ ಪ ॥

॥ **ಪದ** ॥ ಶಚಿಯು ಸಾಟಿಯೇಭಗಾಂಕಿತನ ಪತ್ನಿಯು ।
ಪ್ರಚುರ ಭಾರತಿ ನಾಸಾವಿಹೀನೆಯೂ ॥ ೧ ॥

ನಾಡೆ ಲಕ್ಷ್ಮಿಯು ಪಡಿಯೆ ಚಾಂಚಲ್ಯಳು
ನೋಡೆ ರೋಹಿಣಿ ಕ್ಷಯಾಂಗಿಗನ ಭಾರ್ಯಳುಂ ॥ ೨ ॥

ನಳಿನಲೋಚನೆ ರತಿ ಬಾಳ ಮುಂಡಿಯು ।
ತಿಳಿಯೆ ಗೌರಿಯಂ ಶಿಲಾತ್ಮಜೆಯು ಭಾವಿಸೆ ॥ ೩ ॥

ಇವರ ಸಾಟಿಯೆಂದೆಂಬ ಕವಿಯು ಪಾತಕಿ
ಭುವಿಯೊಳಿವಳಿಗೆಯಿವಳದೃಷ್ಟಮಲ್ಲದೆ ॥ ೪ ॥

॥ **ಚೂಲಿಕಾ** ॥ ಇಂತೆಂದು ಮಮಕಾರ ಮೋಹಿನಿಯರಾಗ ಕಡು ।
ಸಂತಸದಿ ಮಮತೆಯಿಂ ಪಾಲಿಸುತಿರಲ್ಕೆ ।
ಎಂತೆಂಬನನಿತರೊಳ್ ಯವ್ವನೋದಯಮಾಗೆ
ಕಾಂತಾ ಶಿರೋರತ್ನಳಹ ಮಾಯಿಗೆ ॥ ೧ ॥

ವರನು ತಕ್ಕವನಿವಳಿಗಿನ್ನಾವನೆಂದೆನುತೆ
ಪರಿಪರಿಯೊಳಾಲೋಚನೆಯ ಮಾಡಲು ।
ಗುರುವರನಹಂಕಾರನನಿತಕ್ಕೈತರಲಾಗ
ಭರದೊಳಿದಿರೇಳುತಭಿವಂದಿಸುತ್ತೆ ॥ ೨ ॥

ಬರಿಸಿ ಹರಿ ಪೀಠದೊಳು ಕುಳ್ಳಿರಿಸಿ ಮೌನದಿಂ
ದಿರಲು ನೃಪಕುಲನಾಥನಾಸ್ಯಲಕ್ಷಣವ ।
ನರಿದುಬೆಸಗೊಂಡಿದೇನ್ಯೆಭೂಪ ಮುಖಚಂದ್ರ
ಕರಗಿ ಕೊರಗಿದುದ್ಯಾಕೆ ಕಂಜದಳ ನಯನಾ ॥ ೩ ॥

ಸಿದ್ಧಯೋಗೇ ಚ ಬ್ರಹ್ಮಾಂಡೇ।
ಪಾತಾಳೇ ಚ ಮಹೀತಳೇ ॥
ಅಪ್ರಾಪ್ತಂ ಲಭತೇ ಯಸ್ಯ
ಶಿವಪೂಜಾ ವಿಧೇಃ ಫಲಂ ॥ ೩ ॥

ದ್ವಾರೇಷು ಮತ್ತಮಾತಂಗಾಃ ।
ವಾಯುವೇಗಸ್ತುರಂಗಮಃ ॥
ಪೂರ್ಣೇಂದು ವದನಾ ಭಾರ್ಯಾ ।
ಶಿವಪೂಜಾ ವಿಧೇಃ ಫಲಂ ॥ ೪ ॥

ಬ್ರಹ್ಮಣಃ ಸೃಷ್ಟಿಕರ್ತತ್ವಂ
ವಿಷ್ಣೋರ್ದಾನವ ಮರ್ದನಂ
ಸ್ವರ್ಗಾಧಿಪತ್ಯಮಿಂದ್ರಸ್ಯ
ಶಿವಪೂಜಾ ವಿಧೇಃ ಫಲಂ ॥ ೫ ॥

॥ **ಚೂಲಿಕಾ** ॥ ಇಂತಿರದೆ ಶಿವಲಿಂಗ ಪೂಜಾಫಲಾಧಿಕವ
ನಂತರಿಸದುಸುರಿಯಿಂತಿರಲು ಪರಶಿವನು ।
ಸಂತೋಷದಿಂ ಪ್ರಾಣಕಾಂತನಾಗುವದರಿದೆ
ಯಂತರೇನೈ ಕೇಳು ಭೂವಲ್ಲಭಾ ॥ ೧ ॥

ಎಂದಹಂಕಾರ ಗುರುವರ್ಯ ನೊರಿಯಲ್ಕೆ ಮನ
ದಂದು ಮಮಕಾರ ಪೃಥ್ವಾಧೀಶನು ।
ಸೌಂದರ್ಯಳಪ್ಪ ಮಾಯಾಂಗನೆಗೆ ನಿಜರಾಜ
ಮಂದಿರದೊಳಿಪ್ಪ ಸೇವಾಧಿನಾಯಕರು ವಿನಿಯೋಗದವರ॥ ೨ ॥

ಬೆತ್ತ ಬೀಸಣಿಕೆ ಕಾಳಂಜಿ ಕನ್ನಡಿಗಳ
ಮತ್ತೆ ಚಾಮರ ಕುಂಚ ಪನ್ನೀರ ಮುಖ್ಯ ।
ಕಸ್ತುರಿಜವಾದಿ ಪುನಗಗರು ಚಂದನ ಘುಸೃ
ನಿತ್ಯಾದಿಗಳ ಪಿಡಿದ ನಿಯೋಗದವರ ॥ ೩ ॥

ಮಮತೆಯಿಂ ಮಮಕಾರ ಮಾಯಾಂಗನೆಗೆ ಕೊಟ್ಟು
ವಿಮಲತರ ವೀಣಾ ಮೃದಂಗ ಚಂಗು ।
ರಮಣೀಯ ಶೃತಿಗಾಯಿ ತಾಳ ಮೇಳಿತ್ಯಾದಿ
ಗಮಕದಿ ಬಾಜಿಸುವ ಪಾಡುತಿರ್ಪ ॥ ೪ ॥

ಸಲೆ ಇವಳಿಗೊಲ್ಲಭಾಗದೆಂತು ಮಮರಾಜ
ನಿಲಯ ಕನ್ಯಾ ತಗೊಂಬುವದೆಂತಲ್ಯೆ ॥ ೩ ॥

॥ **ಮಾತು** ॥ ಮಮಕಾರರಾಜ ಅಂತಾನೆ ಗುರುವಿಗೆ ॥

ಸ್ವಾಮಿ ಬಿನ್ನಹ, ನಮ್ಮ ಗೃಹಕನ್ಯಾ ಪರಶಿವ ಬಂದು ತಗೊಂಬುವದೆಂತು?

'ಎಂತು'?

ಏತದ್ವಿಷಯಕ್ಕೆನಗೆ ಸಂಕೋಚ ಬಂತು;

'ಬಂತು',

ನೀವೆನಗೊಡಂಬಡಿಸಿ ಕಳಿಯಿರ್ಯೆ ಎನ್ನ ಮನದ ಕಿಂತು. ಎನಲಹಂಕಾರ ಗುರುವರ್ಯನಿಂತೆಂದವಿತ್ತ ಕೇಳಯಾ ರಾಜೋತ್ತಮಾ ಈ ಗ್ರಾಮ ಪಾವನ ಮಧುಕೇಶ್ವರಲಿಂಗವಿರ್ದಾನಲ್ಲಾ ಅವನಾಲಯಕ್ಕೆ ನಿನ್ನಣುಗಿ ಮಾಯಿಯು ಹೋಗಿ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದೆ ಅರ್ಚಿಸಿ ನರ್ತನವ ಪಾಡಿ ದೃಷ್ಟಿಪೂರ್ವಕದಿಂ ನೋಡಿ ಪತಿವರವನುಂ ಬೇಡಿ ಇಂತು ನಿತ್ಯ ಕೃತ್ಯ ನಡೆದಿರೆ, ತಾನೆ ಕರೆತಂದು ಕೊಡುವನು ಯಾಕೆಂದರೆ :

॥ **ಚೂಲಿಕಾ** ॥ ಸೌಂದರಗೆ ಕುಂಟಣಿಯದಾಗನೆ ಭಕ್ತಿಗೆ ಮ
ದಾಂಧ ಬಾಣನ ಬಾಗಿಲವ ಕಾಯನೆ
ಇಂದ್ರ ಸಂಭವನ ಶರವೃಂದ ತಾಳನೆ ಶಿವಂ
ಅಂದು ಷಿಷ್ಟಾಂಬಿ ಮೃತ್ತಿಕಿ ಶಿಲಿಗಳ್ಹೊರನೆ ॥ ೧ ॥

ಭಕ್ತಿಸುಪ್ರಿಯನು ಪರಶಿವನು ಹರಿಸುವನುದೋ
ಯುಕ್ತಿ ಚಿಂತನಮ್ಯಾಕೆ ಭೂವಲ್ಲಭಾ ॥

॥**ಶ್ಲೋಕ**॥ ಸೌಭಾಗ್ಯ ಕಾಂತಿ ಮದ್ರೂಪಂ ।
ಸತ್ಯಂ ತ್ಯಾಗಂ ॥ ಪ ॥
ಶೌರ್ಯಂ ಚ ಜಗ ವಿಖ್ಯಾತಂ
ಶಿವಪೂಜಾ ವಿಧೇಃ ಫಲಂ ॥ ೧ ॥

ವಿದ್ಯಾ ಲೋಭ ಧನಂ ಸೌಖ್ಯಂ ।
ತುಪಿನತ್ವಂ ಮನೋಗತಂ ॥
ರಾಜ್ಯಂ ಸ್ವರ್ಗಂಗ ಮೋಕ್ಷಂ ಚ
ಶಿವಪೂಜಾ ವಿಧೇಃ ಫಲಂ ॥ ೨ ॥

ನೆರೆಯವರ ಭಕ್ತಿ ಸುಜ್ಞಾನ ವೈರಾಗ್ಯಗಳ
ಪರಮಶಿವಸುಖದಾನಂದ ಸಾಮ್ರಾಜ್ಯಗಳ
ಪರಿಕಿಸೆತ್ಯಧಿಕ ಕೈವಲ್ಯ ಸಂಪದ ಮಾರ್ಗ ತೋರಿಸುವೆ ॥ ೨ ॥

ಈ ಪ್ರಕಾರದಿಂದಲಾ ಪ್ರಭುರಾಜ ನುಡಿಯುತಿರೆ ಮಾತೃ ಪಿತೃಗಳು ತಾವಿಂತೆಂದರು

॥ **ಪದ** ॥ ನಿನ್ನ ಕಂಠೀರವಾ । ಇರಲಾರೆವಹ । ಪರಮಮುನೀತ ॥ಪ॥

ಇರಲಾರೆವು ಕೇಳ್ ಪರಮ ಪುರುಷ ತವ ।
ಕರುಣಿಲ್ಲವೆ ನಿನ್ನಗಲಿ ನಾವು ಯಿರಲಾರೆವಹ ॥ ೧ ॥

ವಡಲೆಡಿಯೊಳು ಕಿಡಿಗಡಣದುಂಬಿ ಕರ ।
ಬಿಡುವರೆ ಮೃಡಸಮ ಪುಡಗೆನ್ನಯಯಿರಲಾರೆವಹ ॥ ೨ ॥

ಮುಂದಾವುದು ಗತಿಯೆಂದೆವೆನ್ನಯ ಸು ।
ಕಂದ ಪ್ರಭುವರೆಮ್ಕೊಂದ್ಹಾಕದಲಿರಲಾರೆವಹ ॥ ೩ ॥

ವೃದ್ಧರೆಮ್ಮನುದ್ಧರಿಸದೆ ಪೋಗುವ ।
ಬುದ್ಧಿಯಲ್ಲವೈ ಮುದ್ದುಗುವರಯಿರಲಾರೆವಹ । ॥ ೪ ॥

ಅಂತರವೇನೆಮ್ಮಂತೊರೆವರೇನಿ ।
ರಂತರ ಪಾಲಿಸಿ ನಿನ್ನ ಕಾಣದಿರಲಾರೆವಹ ॥ ೫ ॥

॥ **ಚೂಲಿಕಾ** ॥ ಇಂತಾಗ ಜನನಿ ಜನಕರು ಬಂಧು ಬಾಂಧವರು
ಮಂತ್ರಿಗಳು ಮಕುಟವರ್ಧನ ಮಂಡಲಿಕರು ।
ಚಿಂತಿಯಿಂ ದುಃಖಿಸುತಿರಲ್ಕೆ ಪ್ರಭುಯಿಂತೆಂದ
ನಿಂತ್ಯಾಕೆ ಚಿಂತಿಯು ಮನೋಭ್ರಾಂತಿಯೂ ॥ ೧ ॥

ಯಾಕೆ ರೋಧನ ವೇಧನ್ಯಾಕೆ ನೀ ವಾಲ್ಪರಿವು
ದ್ಯಾಕೆ ಬ್ಯಾಡೆಂಬ ಮೂರ್ಖತ್ವಮ್ಯಾಕೈ ।
ಈ ಕನಕ ಗರ್ಭಾಂಡದತುಳ ಸಚರಾಚರದ
ನೇಕಾತ್ಮರೊಳು ಬಿಂಬಿಸುತ್ತಿರ್ಪೆನು ॥ ೨ ॥

ಅಲ್ಲಿರ್ದಡಿಲ್ಲಿಹೆನು ಇಲ್ಲಿರ್ದಡಲ್ಲಿಹೆನು
ಎಲ್ಲೀಕ್ಷಿಸಲಲ್ಲಿಯಾನಿರ್ಪೆನು ।
ಬಲ್ಲರಿರಬಲು ಚಿಂತಿಸುವದ್ಯಾಕೆ ಭಕ್ತಿ ನಿ
ಮ್ಮಲ್ಲಿರಲು ತೊಳಗಿ ಬೆಳಗುತ್ತಿರ್ಪೆನ್ನೈ ॥ ೩ ॥

ಕಾಂತಿಯರ ಕಾಂತಾಶಿರೋರತ್ನ ಮಾಯಿಂಗೆ
ಸ್ವಾಂತಲರಿ ಸಂತೋಷದಿಂದವಳ ಕೈವಶಕಿತ್ತು ।
ಅಂತಃಪುರವನೊಂದು ರಚಿಸೆ ಅವಳನಲ್ಲಿರಿಸಿ
ಸಂತತಂ ಮಧುಕೇಶ್ವರನ ಭಜಿಸು ಮತ್ತೆ ॥ ೫ ॥

ನಿನ್ನಯ ಮನೋಭಿಷ್ಟಮೀವ ಪೂರ್ಣದೊಳೆಂದು
ಚನ್ನದಿಂದುಸುರಿ ಮಮಕಾರ ಪೋಗಲ್ ॥

॥ **ಆರ್ಯಂ** ॥ ಇತ್ತಲವಳು ಮುದವೆತ್ತು ನಿತ್ಯದೊಳ್
ಚಿತ್ತಜಾರಿ ಮದುಕೇಶ್ವರನಾ
ನೃತ್ಯಗೀತವಾದ್ಯಾದಿ ಪೂಜೆಯಿಂ
ಸತ್ಯದಿಂದಲೆಸಗಲ್ ಹರನಾ ॥ ೧ ॥

ಅರವರಿಸದೆ ಗೆಳತಿಯರ ಸಪ್ತಶತ
ಪರಿಗಣನೆಯಳ್ಳರಗೂಡಿ
ತರುಣಿಯರೋಳ್ ಸೀಮಂತ ಮಣಿ ಮಾಯಿ
ನೆರೆತನ್ಪತಿ ವರವನು ಬೇಡಿ ॥ ೨ ॥

ಇಂತು ನಿರಂತರ ಮಂತರಿಸದೆ ಕಾ
ಲಾಂತಕ ಮಧುಕೇಶ್ವರ ಶಿವನಾ ।
ಸಂತಸದಿಂದರ್ಚಿಸುವಳತ್ತಲಿ
ತ್ತಂತವಕದಿಯಾಲಿಸಿ ಕಥನ ॥ ೩ ॥

॥ **ವಾಧಕ. ಷ** ॥ ಇತ್ತ ಪ್ರಭುರಾಜೆನಿಪ್ಪೆರಡನೆಯ ಪರಶಿವಂ
ಉತ್ತರೋತ್ತರ ಸೌಖ್ಯಸಾರದಿಂದಿರುತೊಂದು
ಹೊತ್ತಿನೊಳು ಈ ರಾಜಯೋಗ ವೈಭವ ಸಾಕು–
ವ್ಯರ್ಥ ಕಾಲಹರಣಮೇಕೆ ।
ನುತ್ತೆ ನಾವ್ಯೈದಿ ಚಿರಕಾಲಾಯಿತೆನು ತಲಾ
ಮಾತ್ಯ ಮಿತ್ರರ ಜನನಿ ಜನಕ ಬಾಂಧವರ ನೆರ
ವುತ್ತ ಪೋಗುವೆವೆನಲ್ ಪೋಪಿಕಿಲ್ಲಿಗೆನಲ್ಕೆ ಪ್ರಭುರಾಜ
ನಿಂತೆಂದ ॥ ೧ ॥

ಪರಶಿವನ ಸಮ್ಮುಖದೊಳಿಪ್ಪ ಪ್ರಮಥಾಳಿ ನೆರೆ
ನರಲೋಕಕಿಳಿದೆನ್ನ ಹಾರೈಸಿ ಕೊಂಡಿರ್ಪ
ರುರುತರ ಸ್ನಾನಾದಿ ಜಪತಪಾನುಷ್ಠಾನ ನೆರವಿಂದಲ್ಲಿಗೈದಿ ।

ಗಂಧಾನುಲೇಪನವು ಕುಸುಮ ನಸು
ವೃಂದ ಮಾಲೆಯು ಕಂಠದೊಳೊ
ಪ್ಪಿಂದ ಬಜ್ಜರ ಪದಕಮೆಸಿಯಲ್ ಪ್ರಭು ಶುಭಾಂಗನಿಗೆ ।
ಬಂಧುರದ ಕಿರುಗ್ಯಾದಿಗಿಯನಿ
ಟ್ಟಂದ ವಹ ಕಾಲ್ಪೆಂಡಿ ಚೌರವ
ನಿಂದು ನಿಲ್ಲದೆ ತಳಿದು ಮೆರೆದನು ಪ್ರಭು ಭುಜಂಗವರಂ ॥ ೨ ॥

॥ **ಚೂಲಿಕಾ** ॥ ಇಂತಾಗ ಭಾಳಾಕ್ಷನವತಾರ ಪ್ರಭುವರಂ
ಕಂತು ನಿಭವಿಟರಾಜ ಚಿನ್ಹಿತವನಾಂತು ।
ನಿಂತು ನಿಲ್ಲದೆ ಮರ್ದಳಿಯ ಕೊಂಡು ಬಾಜಿಸಲು
ಸಂತಸದಿ ಪುರಜನಂ ಪರಿಜನಂ ಮತ್ತೆ ॥ ೧ ॥

ಧೊರಿಜನಂ ವೇದ ಶಾಸ್ತ್ರಾಗಮಜ್ಞರು ಪರಮ
ಭರತ ಶಾಸ್ತ್ರಜ್ಞರು ಸುತಾಳಜ್ಞರೂ ।
ನೆರೆಗಾನ ನರ್ತನ ಪ್ರೌಢರಿತ್ಯಾದಿಗಳು
ವಿರಚಿಸಿದ ಸ್ವರ್ಣ ಪುತ್ಥಳಿಗಳಂತೆ ॥ ೨ ॥

ನಸುಮಿಸುಕದಾಗ ಪರವಶರಾಗಿ ತಮ್ಮಗೃಹ
ವೆಸನಾದಿಗಳ ಯಚ್ಚರಿನಿತಿಲ್ಲದೆ ।
ಎಸೆವಕಣ್ಣೆವೆಗಳಿಕ್ಕದೆ ನಿಂದಿರಲುವತ್ತ
ಭೃಶದಿ ಮರ್ದಳಿ ಸ್ವನಂ ಮಾಯಿಗೇಳಿ ॥ ೩ ॥

॥ **ಗದ್ಯ** ॥ ಕೇಳಿ, ಅತ್ಯಾಶ್ಚರ್ಯವಂ ತಾಳಿ;

'ತಾಳಿ',

ಮನ್ಮಥನ ದಾಳಿ ವೆಗ್ಗಳಿಸಿ ಸುಳಿಗಾಳಿಯಂತೆ ಮನವು ಸಂಚಲಿಸುತ್ತೆ ಅಂಥಾಳೆ:

॥ **ಚೂಲಿಕಾ** ॥ ಮಧುಕೇಶ್ವರಾಲಯದ ಮುಂಗಡಿಯೊಳೀಗ ಬಹು
ವಿಧದಿಂದೆ ನಾನಾ ವಿಜಾತಿ ಕಲ್ಪಣದಿಂ
ಚದುರನಾವನೊ ಮೃದಂಗದ ಮ್ಯಾಲೆ ನುಡಿಯಿಸುವ
ಬುಧರಿಗರಿದೆನಿಸಿ ನಾನಾ ಪ್ರಬಂಧಗಳಂ ॥ ೪ ॥

ಚನ್ನಿಗನದಾರು ನೋಡೆಂದು ಸಕಳಿಯುಳೆನಿಪ
ಚನ್ನಚಂದನ ಚಾರು ಗಂಧಿದೂತಿಯಳಂ ।
ಕನ್ನೆ ಮಾಯಾಂಗನಿಯ ಕಳುಹಲ್ಯೆತಂದವನ
ಧನ್ಯಳಾದಳು ಕಂಡು ದಂಬೊಳಿರದನೆ ॥ ೫ ॥

॥ **ಶ್ಲೋಕ** ॥ ಮಂತ್ರೇ ತೀರ್ಥೇ ದ್ವಿಜೇದೈವೇ ।
ಬ್ರಹ್ಮಜ್ಞೇ ಭೇಷಜೇಗುರೌ ॥
ಯಾದೃಶೀ ಭಾವನಾ ಯತ್ರ ।
ಸಿದ್ಧಿರ್ಭವತಿ ತಾದೃಶೀ ॥ ೧ ॥

ನಾಹಂ ವಸಾಮಿ ಕೈಲಾಸೇ ।
ನಮೇಕಾನಚ ಮಂದಿರೇ ॥
ಮದ್ಭಕ್ತಾಯತ್ರತಿಷ್ಠಂತಿ ।
ತತ್ರತಿಷ್ಠಾಮಿ ಪಾರ್ವತೀ ॥ ೨ ॥

ಗುಹಾಯಾಂ ಗೇಹೇವ ಬಹಿರಪಿ ವನೇವದ್ರಿಶಿಖರೇ ।
ಜಲೇವವನ್ಹೌವ ವಸತು ವಸತೇಃಕಿವದ ಫಲಂ ॥
ಯದಿಯ್ಯಂ ಸ್ವೇಚ್ಛಾಂತಃಕರಣಮಪಿ ಶಂಭೋ ತವ ಪದೇ ।
ಸ್ಥಿತಂ ಚೇದ್ಯೋಗೊ ಸಾಸಚ ಪರಮಯೋಗೀಸಚ ಸುಖೀ ॥ ೩ ॥

ಇಂತೆಂದುಸುರಿ ಅಲ್ಲಮ ಪ್ರಭುವರನು ಅಂತರ್ಧಾನನಾಗಲಲ್ಲಿ

॥**ಆರ್ಯಂ**॥ ನೆರೆದ ಜನರು ನೆರೆ ಬೆರಗುವಟ್ಟುಕರು
ವೆರದ ಕನಕ ಪುತ್ಥಳಿಯಂತೆ ।
ಹರ ಹರ ಧರಿಯೊಳೀಕರ ಮಚ್ಚರಿಯಂ
ದುರೆ ಮೇಣಿಂತೆಂದರು ನಿಂತೆ ॥ ೧ ॥

॥ **ಮಾತು** ॥ ಜನರು : ಅಲ್ಲಮ ಪ್ರಭುವರನು ಎಲ್ಲರೋಪಾದಿಯಲ್ಲಿ ಲಲ್ಲೆ ಮಾತುಗಳ ನಮಗ್ಹೇಳುತೇಳುತಲೀಗೆ ಉಲ್ಲಾಸದಿಂದೆ ಬೈಲಾದನಮಮಾ ಇವರೆಲ್ಲಿ ತಪವೆಸಗಿ ಪಡದಿರ್ದರೋ ಅವನು ಗದ್ಯ :- ಎಂದು ಅಲ್ಲಲ್ಲಿ ಕೀರ್ತಿಸುತೆ ನರ್ತಿಸುತೆ ಹರುಷದೊಳು ವರ್ತಿಸುತೆ ಪ್ರಾರ್ಥಿಸುತೆ ತಮ್ತಮ್ಮ ನಿಜ ಮಂದಿರಂ ಸಾರ್ದರು. ಅಲ್ಲಮನು ಬನವಸಿಗೆ ಬಂದು ಮಧುಕೇಶ್ವರ ದೇವಾಲಯದ ಮುಂಭಾಗದೊಳ್ನಿಂದು ಪದಿನಂಟು ವರ್ಷದ ಹರೆಯವಂತಾಳಿದನದೇನಂಬೆನೊ.

॥**ಭಾಮಿನಿ ಷ.**॥ ಅಷ್ಟಾದಶ ವತ್ಸರ ಸುವಯದಿಂ
ತೊಟ್ಟು ಮನ್ಮಥ ಕೋಟಿ ರೂಪವ
ನಿಟ್ಟು ಮೌಕ್ತಿಕ ರತ್ನ ಭೂಷಣ ಚಿಂದಿ ಚಿಮ್ಮುರಿಮಂ ।
ನೆಟ್ಟಿನೆ ಶಿರಸಾಗ್ರದೊಳು ಸು
ತ್ತಿಟ್ಟು ಚಲ್ಲಣದೊಟ್ಟು ಕವಚಂ
ಕಟ್ಟಿಸಕದಿಂತಾಂತು ಮೆರಿದನು ಪ್ರಭು ಭುಜಂಗವರಂ ॥ ೧ ॥

॥ **ಚೂಲಿಕಾ** ॥ ಗುರು ನಿರಂಜನನ ಸೌಂದರ್ಯ ಶುಭಗತ್ವವನು
ಕುರುಹಿಡಲ್ಕರಿದಾಗಿ ಶಿರದೂಗಿಯವಳು
ತಿರಿಗ್ಹೋಗಿ ಬೆರಗಾಗಿ ಹರದಿಗಿಂತೆಂದಳೆಲೆ
ತರುಣಿ ತಾರೇಂದ್ರ ಮುಖಿ ಮಾಯಿಯೆ ಪರಾಕೌ ॥ ೧ ॥

ಬಂದಿಹನು ರಾಯ ಮರ್ದಳಿಗನೋರ್ವನದೀಗ
ಲಿಂದ್ರನೊ ಚಂದ್ರನೊ ದಿನೇಂದ್ರನೊ ಮತ್ತೆ
ಇಂದಿರೆಯ ಕಂದನೋ ಚಲ್ವಗೋವಿಂದನೋ
ಚಂದ್ರಮುಖಿ ಪೇಳಲೆನ್ನಿಂದಸದಳೌ ॥ ೨ ॥

ಹರದಿ ರತ್ನಳೆ ಕೇಳು ಹಗರಣೋಕ್ತಿಗಳ ನಾ
ಬೆರಸಿ ಹೇಳುವಳಲ್ಲ ಬೆದರ್ದೆರಳಿನದರೆ
ಧರಿಯೊಳೀ ಅಲ್ಲಮನ ಸರಿಗಂಡ ಪುರುಷರಂ
ನೆರೆ ಕಾಣೆನಮ್ಮನಾ ತ್ರಿಭುವನದೊಳು ॥ ೩ ॥

ನೆರೆ ಮಹಾ ಗಾಯಕರು ಶಿಕ್ಷವರದಾಯಕರು
ಭರತನಾಟಕ ಪ್ರವಿದ್ಯಾಧಿನಾಯಕರು ।
ಬೆರಗಾಂತು ಮುತ್ತಿ ಮೋಹಿಸಿ ನೋಡುತಿಹರವನ
ಶರೀರ ಕಾಂತಿಯನೀಗ ಶಫರ ನೇತ್ರೆ ॥ ೪ ॥

ಗದ್ಯ :– ಈ ಪ್ರಕಾರದಿಂದಲಾ ನಿರಂಜನ ಪ್ರಭುವರನ ದೇಹದ ಸೌಂದರ್ಯ ಪ್ರತಾಪವನು ಮಾಯಾಂಗನೆಯ ಮುಂದುಸುರಿದಾಕ್ಷಣಕ್ಕೆ ಮಹಮ್ಮಾಯಿಯಿಂತೆಂದಳು.

॥ **ಮಾತು** ॥ **ಮಾಯೆ** :– ಅಮ್ಮಾ ತಾಯಿ ;

'ತಾಯಿ,'
ಮುಂದಾವುದೆನಗುಪಾಯ, ಆ ಶಿಪಾಯಿ ಮರ್ದಳಿಗನಂ

॥ ವುಂದರತೆ ಧ್ಯಾನ ಉಭಯಿಟೀವರಿ ॥

॥ **ಪದ** ॥ ಯಾಕೆ ಬಂದಿಯು ಕರತಾರದಿಲ್ಲಿಗೆ ಬರಿದೆ
ಕೋಕಿಲ ಸದ್ಗಾನೆ ನಿನ್ನನ್ಯಾಕಾನಟ್ಟಿರ್ದನೌ ॥ ಪಲ್ಲ ॥

ತುಂಬಿಸದೆ ಕಂಬುಕಂಧರಿಯೆ ಮರಳೆ ವನಕರಿಯೆ
ಅಂಬರಮುಡುಗೊರಿಯ ವಸುಕ
ದಂಬವ ನಿತ್ತಪೆನು ಬರಿಯ ಡಂಬಕ ನುಡಿಯಾಕೆ
ಶಂಬರಾರಿಯ ಸೌಂದರ್ಯ ಧೊರಿಯ ನ್ಯಾಕೆ ಬಂದಿಯು ॥ ೧ ॥

ಅವನ ಪ್ರವೀಣತಿಯ ಸೌಂದರ್ಯದುನ್ನತಿಯ
ನವನ ಧರ್ಮವಿಚಾರ ಮತುಳ ಗಂಭೀರಂ ।
ಅವನ ಸದ್ವಿನಯ ನುಡಿಯವನ ಭ್ರೂಲತೆಯ ಕುಡಿ
ಯವನ ಮುರಿದೀಕ್ಷಿಸುವ ನೋಟ ಬ್ಯಾಟಂ ॥ ೬ ॥

ಅವನ ದೇಹದ ಘಾಟ ಶೃಂಗಾರದಾ ಠಾಟ
ಮನವ ನಟಣಿಯ ಭಜಾವಣಿಗಳೆಂಬಾ ।
ಈ ಸುಕಳಿಯಂ ಆ ಸಕಳಿನೋಡಿ ಮುದಗೂಡಿ
ವಾಸರಿಸದಾಶ್ಚರ್ಯ ಹೃದಯಗಳಾಗಿ ॥ ೭ ॥

ಮನದೊಳಿಂತೆಂದಳಾಗೆ
ಬೆರಗಾಂತಳು ಬಾಲಿ । ಸದ್ಗುಣ ವಿಶಾಲಿ ॥ ಪಲ್ಲ ॥

ಅರಿದಾಯ್ತು ಇವನ ಸೌಂದರವ ಬಣ್ಣಿಸಲ್
ಹರನೆಂಬೆನೆ ಉರಿನೇತ್ರಗಾಣೆನಾ
ಸುರಪತಿ ಬಂದಿಹನೆಂಬೆನೆ ತನು ಭಗ
ಕುರುಹಂ ಕಾಣೆನು ಸ್ಮರನೆಂಬೆನೆ ವಪು
ಉರಿನೇತ್ರದಿ ದಹಿಸಲ್ಕೆ ವುಗ್ರ ನುರೆ
ಶರೀರ ನಿರ್ಗತನುಮಾದ ನಂದೀಕೇ
ಶ್ವರನೆಂಬೆನೆ ವೃಷಭಾಂಕ ಮುಖಲ್ಲವು
ನೆರೆಗುಹನೆಂಬೆನೆ ಷಣ್ಮುಖಗಾಣೆನು
ಧರಿಯೊಳಿರುವ ಶ್ರೀ ವೀರಭದ್ರನೆನೆ
ಪರಿಕಿಸಿ ರೌದ್ರಾನನಗಾಣೆನು ಮೇ
ಣರವರಿಸದೆ ಮಾಧವನೆಂಬೆನೆ ತನು
ವಿರದೆ ಕೃಷ್ಣಚಿನ್ಹಿತಮದಿಲ್ಲ ಭಾ
ಸ್ಕರನೆಂಬೆನೆ ತೀಕ್ಷ್ಣಮದಿಲ್ಲ ಉಡು
ವರನೆಂಬೆನೆ ಕ್ಷಯರೋಗಿಯಲ್ಲನಿವ
ಸುರನೊ ನರನೊ ಪುರಹರನೊ ಅಸುರನೊ
ಉರಗವರನೊ ಮೇಣಿವರೊಳಾವನೊ
ನೆರೆಯದೆನಗೆ ಬುದ್ಧಿಯು ಯಂದಾಗೆ
ಬೆರಗಾಂತಳುಬಾಲಿ । ಸದ್ಗುಣ ವಿಶಾಲಿ ॥ ೧ ॥

ಕವಿವರಕುಲನಗವಿಭೇದ । ಪವಿ ವಿಭುಧನಳಿನಕೆ ।
ತವೆ ಪ್ರಬಲ ಮತಂಗ ಜನರೀ ಭುವಿಯೊಳ್ ಪ್ರೇಮಸಖೆ ॥ ೪ ॥

ಹೋಮಗಳ ಪುರೇಂದ್ರ ಶಿವವ್ಯ । ಕ್ಷಿಂದ್ರನ ಸ್ತವನಗಳಂ ।
ಈ ಮುರಜ ಮುಖಾಗ್ರದಿ ನುಡಿಯಿಸುವೆ ಪ್ರಬಂಧಗಳಂ ॥ ೫ ॥

"ಇವು ವಿರೋಧ ಭಾವವೆನ್ನಿ, ಇಲಿಗೆ ಬೆಕ್ಕಿಗೆ ಬದ್ಧ ವಿರೋಧವು ಹರಿಗೆ ಕರಿಗೆ ಬದ್ಧ ವಿರೋಧಂ"

॥ **ಚೂಲಿಕಾ** ॥ ಇಂತು ಪ್ರಭುವರನು ಸಕಳಿಗೆ ಪೇಳಲಾಗಿಯವ ।
ಳಿಂತೆಂದಳಾದಡೊಳ್ಳಿತು ರಾಯಕುವರಿ ॥
ಕಾಂತೆ ಮಾಯಾಂಗನೆಯಳಿಂದು ನಿನ್ನಯ ವಾರ್ತೆ
ಯಂ ತವಕದಿಂ ಕೇಳಿ ಹರುಷದಾಳಿ ॥ ೧ ॥

ಕರದು ತಾರೆಂದು ಯನ್ನಂ ಕಳುಪಿದಳು ಬಂದ
ಡಿರದೆ ಲೇಸಪ್ಪುದೈ ನಿನಗೆ ಮುಂದೆ ।
ಅರಿಯಲ್ ನಿರಾಶ್ರಯ ನಶೋಭಂತೆ ಪಂಡಿತಾ
ಧರಿಯರಿಯ ಲೊನಿತಾಲತಾ ಮಂದಿರಲ್ ॥ ೨ ॥

ಸೂರಿಜನ ಶೋಭಿಸಲುದಾರಾಶ್ರಯಂವಂದು
ಸಾರುತಿಹ ನೀತಿಶಾಸ್ತ್ರವನರಿದು ಭರದಿಂ ।
ನಾರಿ ಮಾಯಾಂಗನೆಯ ಹೊರಿಗೆ ಬರ್ಪದು ಶ್ಲಾಘ್ಯ
ಮಾರ್ಶ್ಯೆದು ಬರುವೆನೆಂದೆನ್ನ ಕೈ ಮುಟ್ಟು ॥ ೩ ॥

॥ **ಮಾತು** ॥ **ಸಕಳೆ** : ಮುಟ್ಟು ; ನಂಬುಗಿಯನೊಂದೆನಗೆ ಕೊಟ್ಟು;

'ಕೊಟ್ಟು',

ನಿನ್ನ ಮನದ ಸಂದೇಹವಂ ಬಿಟ್ಟು ಬಾ. ಗದ್ಯ : ಯೆಂದೆನಲ್ಕೆ; ಅದಕ್ಕೆ ಮನಸ್ಸಿನಲ್ಲಿ ಅಲ್ಲಮನಂಥಾನೆ :

॥ **ಚೂಲಿಕಾ** ॥ ನಾರಿಯಿವಳೆನ್ನಿಂಗಿತವ ನರಿಯದೈತಂದು
ಹಾರ್ಶ್ಯೆಸಿ ಕರಿವಳೆಲ್ಲರ್ಗೆಯನ್ನಾ ।
ಸಾರ ನಿಷ್ಕಾಮತ್ವದೋರುವಡಿದೆ ವ್ಯಾಳ್ಯೆ
ಸಾರಬೇಕವಳೆಡಿಗದೇಂ ಮಾಳ್ಪಳೋ ॥ ೪ ॥

ನಾನೋಡಿಯವಳ ನಾಣ್ಗೆಡಿಸಿ ವಿರಹಾಗ್ನಿಯೊ
ಳೇನಂಬೆನೊರಗಿಸುತ್ತಾನ್ಯೆದೆಕಾಡಿ ।

॥**ಚೂಲಿಕಾ** ॥ ಇಂತು ಆತುರವಿಟ್ಟು ಆಜ್ಞೆಯನು ನೇಮಿಸೊಲ
ವಾಂತು ನಾಯಕದೂತಿ ಸಕಳಿಯಂ ಕಳುಹಿ
ಕಾಂತಿಮಯ ನಾಂಟ್ಯಶಾಲೆಯೊಳೈದಿ ಮಂಡಿಸಲ್
ಅಂತಾಗಲಿತ್ತ ಸಕಳಿಯು ವಿಕಳತಿಯನು ॥ ೧ ॥

ತಾನೊಹಿಸೆತೀವ ಚಿಂತಿಸುತೆ ನಿಟ್ಟುಸುರಗಳಿ
ದಾ ನೇವೆನಾರಾಯ ಮರ್ದಳಿಗನು
ಬರುವನೊ ನಾ ಬಾರೆನೆಂದು ಮೂರ್ಖತ್ವವಂ
ತರುವನೋ ನಾ ಕರೆಯಲಾ ಮಾತಿಗೆ ॥ ೨ ॥

ಜೆರಿವನೊ ಮಾನ್ಯದಿಂ ಕರಿವನೊ ನಾನೀಗೆ
ಬರುವೆನೆಂದವಳೆ(ನೆ) ಹಾತೊರಿವನೊ ಯನಗೆ
ಥರವಲ್ಲವಮ್ಮ ಈ ಗುಣವೆನುತ್ತತ್ತತ್ತ
ಸರಿವನೊ ಎಂದು ವಿಕಳತಿಗೊಂಡು ಸಕಳಿ ॥ ೩ ॥

ಆಕಳಂಕನೆಡೆಗೆ ತಾನೈತಂದು ತನ್ನ ಕರ
ಮುಕುಳಿತಳದಾಗಿ ವೈಶಿಕದೊಳಿಂತೆಂದಳ್
ಯಲೆಯಣ್ಣ ನೀನಿರ್ಪುದಾವರಾಷ್ಟ್ರವು ನಿನ್ನ
ಸ್ಥಲಮಾವುದೈ ನಾಮಧೇಯ ಮೇನೆಂದು ॥ ೪ ॥

ಈ ಪ್ರಕಾರದಿಂದಲಾ ನಾಯಕದೂತಿ ಬಂದು ಅಲ್ಲಮನ ವೈಯಾರ ಭಾವದಿಂದ ಕೇಳಲದಕ್ಕೆ ಪ್ರಭುರಾಜನಿಂತೆಂದನು :

॥ ಪಾಲಿಸೈಯ್ಯ ಪರಮಗುರು ಪಕೀರಸ್ವಾಮಿ ॥

॥ **ಪದ** ॥ ತರುಣಿ ಕಲಾಭರಣಿ ಕೇಳು । ವರಣಿಸಿ ನಾ ನಿನಗೆ
ನಿರವಿಸಿದಪೆ ನಾಮದೇಶ ಸ್ಥಾನಂಗಳನು ಮಿಗೆ ॥ ಪ ॥

ನಾರಿ ಮಹೋದಾರಿ ವೈಯ್ಯಾರಿ ಕೇಳು ನಿನಗೆ ।
ಸಾರುವೆ ನಿಜನಾಮನಲ್ಲಮೆಂದು ಕರೆವರೆನಗೆ ॥ ೧ ॥

ನಿಖಿಳ ಜನಪದಂಗಳು ನಿಜ । ಜನಪದಂಗಳಬಲೆ ।
ಪ್ರಕಟ ನಿಜಸ್ಥಾನವು ನಿರ್ಗಣಿತಂ ಪೆರೆನೊಸಲೆ ॥ ೨ ॥

ಕಂಜ ಮಂಜುಳಾಕ್ಷಿ ಲಸತ್ಕುಂಜರನಿಭಯಾನೆ ।
ರಂಜಿಪಕವಿದರ್ಪತೃಣ ಧನಂಜಯನು ವಿಮಾನೆ ॥ ೩ ॥

ಬಂದ ಭರವೇನೆನ್ನ ಕಂದಳೆ ರತ್ನಮಯ
ದಂದಳವನುಳಿದು ಕಾಲ್ನಡೆಯೊಳೈತಪರೆ ।
ಎಂದೆನಲ್ಕಿವನೋರ್ವ ರಾಯಮರ್ದಳಿಗ ತಾಂ
ಬಂದಿರ್ದಪನು ಮೃದಂಗದ ಕೌಶಲಕ್ಕೆ ॥ ೨ ॥

ಎರಡನೆಯ ನಂದಿಕೇಶ್ವರನಲ್ಲದಿವಗೆ ಈ
ಧರಿಯೊಳಿಹ ನರಗುರಿಗಳೇನುಪಾಸಟಿಯೆ ।
ನೆರೆ ಸಕಳ ವಿದ್ಯಾಕಳಾ ವಿಶಾರದ ನಿಮ್ಮ
ವರಸಂಸ್ಥಾನದಲ್ಲಿರತಕ್ಕನೂ ॥ ೩ ॥

ಉಡುಗೊರುನ್ನತ ಮಾನ್ಯಗಳ ಕೊಡುವುದೆನಲಾಗ
ಪೊಡವಿಪತಿಯಂತಾಗಲೆಂದು ತರಿಸಿ
ಕಡಗ ಕರಸರ್ಪಳಿಯ ಕಾಲ ಪೆಂಡಿಯ ಕಂಠಿ
ನಡುವಿಗುಡುದಾರ ಮೇಣ್ಕೀರ್ತಿ ಮುಖಘಿಲ್ಲೀ ॥ ೪ ॥

ಇಂತಖಿಳ ಬಿರಿದುಡುಗೊರಿಯನಿತ್ತು ಅಲ್ಲಮಾ
ಸಂತೋಷದಿಂದೆ ಸುಖಮಿರು ನಿನಗೆ ಮುಂದ ।
ತ್ಯಂತ ಭಾಗ್ಯವನೀವೆನೆಂದು ಹೊಂಬಟ್ಟಲೋಳ್
ಎಂತೆಂಬೆ ವೀಟಿಕಿಯನಿತ್ತು ಕಳುಪೆ ॥ ೫ ॥

ಇತ್ತ ಮಾಯಾಂಗನೆಯಳಲ್ಲಮನ ಕರತಂದು
ನೃತ್ಯ ಶಾಲೆಯೊಳು ಮಂಡಿಸಿ ಮತ್ತೆ ತನ್ನ ।
ಹತ್ತಿರಿಯೊಳಿರ್ದಂಗನಿಯರ ಲಾಸ್ಯಕೆ ನಿಲಿಸ ।
ಲತ್ತದನು ಕಂಡು ಪ್ರಭುಯಿಂತೆಂದನು ॥೬॥

॥ ಕೊಬರಾಜ ಮನಾಜಾಪಾನಿ ॥

॥ **ಪದ** ॥ ಈಗೆನಗೆ ಸಮಯಿದೆ ಸರಿ । ರಾಗ ಭಜಾವಣಿಯನು ತೋರ್ಪ
ಪೂಗೊಲನಗಣಿಗಿವಳನಿಕ್ಕುಸಮಯಿದೆಸರಿ ॥ ಪಲ್ಲ ॥

ಕಾಮಿನಿಯನ್ನಾ । ಕಾಮಪಾಶದೊಳ್
ನೇಮಿಸಿವಳನಳಲಿಸುವದೆನಗೆ ಸಮಯಿದೆ ಸರಿ ॥ ೧ ॥

ಕಾಸಿಗೆ ಸಲ್ಲದಂತೋಸರಿಸದೆ ಸುವಿ
ಲಾಸದಿಂದೆ ಬಹುಭಾಸಿ ಮಾಳ್ಪ ಸಮಯಿದೆ ಸರಿ ॥ ೨ ॥

ಸ್ನಾನ ಬೆಂಬಂತ್ತಿದೊಲ್ಲಿರಗಿಸುವೆನೆಂದು ನಿಜ
ಮಾನಸದೊಳರಿದು ಮತ್ತಾಸಕಳಿಗೆಂದಂ ॥ ೫ ॥

ಮಾಯೆ ಮಮತೆಯೊಳೆನ್ನನಾಯತದಿ ಕರಿಸಲಿದ
ಕಾಯಸವೆ ಬರ್ಪುದೆನಗೆಂದೆನುತ್ತ ।
ಕಾಯಜಾಂತಕರೂಪನೊಲಿವಿನಿಂನಡಿತಂದ
ನಾಯಕನಬೆಂಗೊಂಡ ವೈಯಾರದಿಂ ॥ ೬ ॥

ಈ ಪ್ರಕಾರದಿಂದಲಾ ಮಾರಾರಿಯವತಾರನಾದ ಪ್ರಭು ನಿರಂಜನನು ವೈಯಾರ ಭಾವದಿಂ ನಡೆತಂದಾಕ್ಷಣಕ್ಕೆ :

॥ **ವಾರ್ಧಕ** ॥ ಕಾರಮೊಳಗಂ ಕೇಳ್ದನವಿಲಂತೆ ನಲಿದು ಶಶಿ
ಸೂರ್ಯರುದಯಂಗಂಡಕುಮುದಕಮಲಂಗಳಂ
ತೋರಡಿಸಿಪೆಚ್ಚಿಗುರುವಂಕಂಡ ಶಿಷ್ಯನಂತಧಿಕ ಭಕ್ತಿಯನು-
ತಾಳ್ದಾ ।
ಬಾರದರ್ಥಂ ಗಂಡ ಕವಿಯಂತೆ ಮೇಣು ಕ
ಣ್ಣಾರ ನಿಧಿಯಂ ಕಂಡ ಕಡು ಬಡವನಂತೆ ಸುವಿ
ಚಾರಿಸಲ್ಕಮೃತಗುಪ್ಪಿಯ ಕಂಡ ಸುರರಂತೆ ನಲಿದು ನಿಟ್ಟಿ-
ಸಿದಳಾಗೆ ॥ ೧ ॥

ಈ ಪ್ರಕಾರದೊಳುಬ್ಬಿ ಕೊಬ್ಬಿಯಿಂತೆಂದಳುರೆ
ಕ್ಷಿಪ್ರದೊಳ್ಫಲಿತಮಾದುದು ಪೂರ್ವಸುಕೃತಲತೆ
ಅಪ್ರತಿಮದೊಳ್ವೆನ್ನ ಸುಖವೆ ರೂಪವನಾಂತು ನಡಿತಂದು-
ದಿಂದಿಗೆನುತೆ ।
ಸುಪ್ರೇಮದಿಂದೆ ಬಹುಜನ್ಮ ಸಫಲಾದುದುರೆ
ಸುಪ್ರೌಢ ಚನ್ನಿಗನು ಬಂದನಿಂದೆಗೆಯಿವನ
ಸುಪ್ರಭಾರೂಪವಂಕಂಡೆಧನ್ಯಳುಯೆಂದು ಮನದೊಳಗೆ
ಹಾರೈಸುತೆ ॥ ೨ ॥

॥ **ಚೂಲಿಕಾ** ॥ ಅಂದು ಸಂತೋಷಊರ್ಜಿತ ಹೃದಯಳಾಗಿ ನಿಜ
ತಂದಿ ಮಮಕಾರನೆಡೆಗಾತನೊಡಗೊಂಡು ।
ಅಂದದಿಂ ಬರಲು ನಿಜ ನಂದನೆಯ ಕಂಡು ಆ
ನಂದದಿಂ ಮುಂಡಾಡಿ ಮುದ್ದಿಸುತ್ತೆ ॥ ೧ ॥

ಆದಿಜನ್ಮದ ಕರ್ಮವ್ಯಾಧಿರೂಪವಾಹುದು
ವೇಧನೌಷಧಸುಕರ್ಮವು । ದಾನಧರ್ಮವು ।
ಭೇದಮಿಲ್ಲದೆ ಹರಕಿ ಹೊರುವೆವು ನಾಯಕಿಗೆ ಬಂದ
ಖೇದಂ ಕಡಿಗಾಣಲಮ್ಮ ನಮ್ಮ । ನಾಯಕಳಿಗಮ್ಮ ॥ ೨ ॥

॥ **ಶ್ಲೋಕ** ॥ ಪೂರ್ವಜನ್ಮೆ ಕೃತಂ ಪಾಪಂ । ವ್ಯಾಧಿ ರೂಪೇಣ ತಿಷ್ಠತಿ ।
ತಚ್ಛಾಂತಿಕೌಷಧೈರ್ದಾನೈರ್ಜಪಹೋಮ ಸುರಾರ್ಚನೈಃ ॥ ೧ ॥

॥**ಚೂಲಿಕಾ**॥ ಇಂತೆನುತ್ತಖಿಳ ಕಾಂತೆಯರು ಕಳವಳಿಸುತ್ತೆ
ಭ್ರಾಂತ ಮಾನಸರಾಗಿ ಸಂತೋಷಗುಂದಿ ।
ಪ್ರಾಂತಗಾಣದಯಣಿಕಿಯಿಂದ ಬಾಯ್ಬಿಡುತಲತಿ
ಚಿಂತಿಯಿಂ ಕಂಡ ದೈವಕೆ ಬೇಡಿಕೊಳುತಂ ॥ ೧ ॥

ಹರಕಿಮುಡಪಂಗಳಂತೆಗೆದಿಡುತ್ತಾಗತಾವ್
ನೆರೆಶಕುನ ಸೂಚನೆಗಳಂ ಕೇಳಿ ಬರುತೆ ।
ವರಹಂಸತುಪ್ಪಳಸುತೂಲಪಾಸಿಕಿಯೊಳಾ
ತರುಣಿ ಮಾಯಾಂಗನೆಯನೊರಗಿಸಲ್ಕೆ ॥ ೨ ॥

ತಾಪವೆಗ್ಗಳಿಸಿ ಸುಯಿಗರಿವುತ್ತೆ ಕಂಪಿಸುತೆ
ತಾಪಾತಿಶಯದಿ ಕಂಬನಿಗರಿಪುತೆ ।
ಆಪದುಮಗಂಧಿ ಕಾಮಜ್ವರದಿ ತನುಗಾಯ್ದು
ದೀಪಿಸುವ ತೊಟ್ಟಿರ್ದ ಮುಕ್ತಾಫಳಂ ॥ ೩ ॥

ಅರಳಾಗಿ ಚಟಪಟನೆ ಸಿಡಿವುತಿರೆಮತ್ತೆ ಸ
ತ್ವರದಿ ಕನಕಾಭರಣ ಕಾವಿನುನ್ನತಿಗೆ ।
ಕರಗಿ ರಸಮಾಗಿಳಿವುತಿರೆ ಧರಿಗೆ ನೆರದಿರ್ದ
ಹರದಿಯರು ಕಂಡು ಮಲಮಲನೆ ಮರುಗಿ ॥ ೪ ॥

ಕುಳಿರ್ವನಕೆ ಕರತಂದು ನಳಿನದಳದ್ಹಾಸಿಕೆಯ
ಕೆಳದಿಯರು ಪಾಸೆವಳನೊರಗಿಸುತ್ತೆ ।
ಬಳಿಕೆತದ್ದಳಗಳಂ ಪೊದಿಸಿ ಮತ್ತಾಗೆ ನೆರೆ
ಸಲೆ ಪಶ್ಚಕರ್ಪೂರ ತಂದುಯದಿಗೂಡಿ ॥ ೫ ॥

ತಳಿರ ನಿರ್ಮಿತ ತಾಲವೃಂತದಿಂ ಬೀಸಲುರೆ
ಘಳಿಲನೆ ಶಿಖಿಸ್ಫುಟಮದಾಗಿಯವಳೆ ।

ತಾನಾರೆಂಬುವ ಕೂನರಿಯಳುನ
ವೀನಪಂಥಮಂ ಹಾನಿಮಾಳ್ಪ ಸಮಯಿದೆ ಸರಿ ॥ ೩ ॥

॥ **ಶ್ಲೋಕ** ॥ ಜಾತ್ಯಾಂಧೊ ನಹಿವೇತ್ತಿರತ್ನ ವಿಷಯಂ ಷಂಡೋವರಸ್ತ್ರೀ ಸುಖಂ।
ಕನ್ಯಾ ಸತ್ಪುರುಷೇಣ ಸೌಖ್ಯ ಪದವೀಂ ವಂದ್ಯಾಪ್ರಸೂತಿ ಕ್ರಿಯಾಂ॥
ಕಾಕೋಕೋಕಗತಿಂ ಖರೋ ಮೃದುಗಿಂ ಸೌಖ್ಯಾಂದರಿದ್ರೋಯಥಾ।
ಶ್ವಾನಃಶಿಂಹಪರಾಕ್ರಮಂಭುವಿ ತಥಾ ಮೂಢೋಮಹಾಜ್ಞಾನಿನಾಂ॥ ೧ ॥

॥ **ಚೂಲಿಕಾ** ॥ ಇಂತು ಸ್ವತಂತ್ರರೂಪಲ್ಲಮನೆನುತ್ತಲ
ತ್ಯಂತ ಮಂಜುಲನಾದಯುಕ್ತಮರ್ದಳಿಯ ।
ಸಂತಸದಿ ಕೊಂಡು ಚಾಪುರುಪುಗತಿಗಮಕದೊಳ
ನಂತ ಪ್ರಬಂಧಗಳನುಡಿಸುತಿರಲು ॥ ೧ ॥

ಆ ಮಾಯಿ ಕುಳಿತವನ ರೂಪು ಲಕ್ಷಣಗಳಂ
ತಾ ಮ ಶಿರದಾಪಾದ ಮಸ್ತಕಾದಿಗಳಂ ।
ಆ ಮೋಹದಿಂದೀಕ್ಷಿಸಿರದೆ ನಿಜನೇತ್ರಯುಗ
ವಾ ಮಾಯಿಕೀಳಲಾರದೆ ನಟ್ಟುದಂ ॥ ೨ ॥

ಕರಯುಗದಿ ತಿರಿದಿಟ್ಟ ನೀಲೊತ್ಪದಂತೆ ಮೇ
ಣಿರದೆ ಪಗಲಲ್ಲಿರ್ದ ಸೋಮಕಳಿಯಂತೆ ।
ನೆರೆ ಮುಖಾಂಬುಜಕಾಂತಿ ಕರಗಿ ತನುಬಾಡಿ ನಿಲ
ಲರಿದಾಗಿ ಧಡಧಡಿಸಿ ಬೀಳಲಾಗೆ ॥ ೩ ॥

ಗದ್ಯ : ನೆರೆದಿರ್ದ ನೀರೆಯರು ಬೆರಗುವಟ್ಟಾಗ
ಮರಮರಮರುಗಿ ಮುತ್ತಿಕೊಂಡಿಂತೆಂದರೂ

॥ ನೀರೆ ನೀನಿಲ್ಲಿಗೆದಾರಿವಿಡಿದು ಬಂದಿ ॥

॥ **ಪದ** ॥ ಏನಿದಚ್ಚರಿಯಮ್ಮ । ಕಾಮಿನಿಯಳಿಂಗಿತ
ವ್ಯೋಮಕುಂತಳ ಬಲ್ಲನಮ್ಮ । ನಮಗರಿಯದಮ್ಮ ॥ ಪ ॥

ಮದನಗ್ರಹಸೋಂಕಿತೋ । ಚದುರ ಭೂತದಂಕಿತೊ ।
ನದರ ಬಂದಿಯೊ ತಿಳಿಯದಮ್ಮ । ನಾಯಕಿಗೆ ನಮ್ಮ ॥
ವದವಿಂದಹಿತರು ಕೃತ್ರಿ । ಮದ ಗುಣಮೆಸಗಿದರೊ ಮೇಣ್
ಮಧುಕೇಶ್ವರ ಮುಳಿಸನೆಸಗಿದನೊ । ರೋಗದ್ಹಾದನೊ ॥ ೧ ॥

॥ **ಚೂಲಿಕಾ** ॥ ಇಂತು ತಾಪಾತಿಶಯದಿಂ ಮಹಮ್ಮಾಯಿಸ್ಮ
ರಂ ತಿಳಿಯದಾಗೆ ಬೆದ ಬೆದನೆ ಬೇಯುವದಂ ।
ಕಾಂತಿಯರು ಕಂಡು ಕಡು ಮರುಗುತ್ತೆ ಕೊರಗುತ್ತೆ
ತಾಂ ತಡಿಯದವಳ ನಿಜ ಮಂದಿರಕ್ಕೆ ॥ ೧ ॥

ಕರತರಲ್ಕಳಿಸಿ ಪರಿಕಿಸುತಲವಳಿಂಗಿತವ
ನಿರದಾಗಲಿಂತೆಂದಳಹಹ ಮನ್ಮಥನಂ ।
ನೆರೆಗೆಲ್ವನಾವನ್ಯೆಹರಹರಾ ಶ್ರೀಚನ್ನ
ಪರಮ ಸೋಮೇಶ್ವರಾಯಂದಿರಲ್ನೀತಿ ॥ ೨ ॥

ಎಮ್ಮ ನಾಯಕಿಗೆ ಕಾಮಭ್ರಾಂತಿ ನಿರ್ಧರಂ
ಮಮ್ಮಲಂ ಮರುಗಿದಳದಕ್ಕೆನುತ್ತೆ ।
ಗಮ್ಮನೆ ರಹಸ್ಯ ಸುಸ್ಥಾನಕ್ಕೆ ಕರಿತಂದು
ಮ್ಮಯದೊಳೆಂದಳಾ ಉಡುರಾಜ ಮುಖಿಗೆ ॥ ೩ ॥

॥ **ಮಾತು** ॥ ಸಕಳೆ : ಅಮ್ಮಾ, ಮಹಮ್ಮಾಯಿಯೆ ನಿನಗೆ ನನ್ನಾಣಿ ಆ ಮಧುಕೇಶ್ವರನ ಆಣಿ, ಮತ್ತಾ ಮಮಕಾರ ಮೋಹಿನಿಯರಾಣಿಯಾಗದೆ :

॥ **ಪದ** ॥ ॥ ಮೆರೆ ಮನಲೀತಾಹೊ ॥

ಮಾಯಿ ಮಾಜದುಸುರು । ನೈಜದಿಂದುರೆ ॥ ಪಲ್ಲ ॥

ನಾರಿ ಸುದ್ರೌಪದಿ । ಕರ್ಣನಿಗಳುಪಳೆ
ಸೂರಗೆ ಕುಂತಿ ವಿಹರಿಸಳೆ ಮನಂ ॥ ೧ ॥

ಮಾರಾತ್ಮಜನುರೆ । ಬಾಣಾತ್ಮಜೆನೆರೆ
ಹಾರೈಸಳೆ ತನುಸೌಖ್ಯಮಮ್ಮಹಂ ॥ ೨ ॥

ಆರ್ಯೆಯಲುಕಾ । ದಂಬಿನಿಯಳುಮ
ರೂರವನಿಗೆ ಮನಸೋಲಳೆ ಮಹಂ ॥ ೩ ॥

॥ **ಚೂಲಿಕಾ** ॥ ವರಗೌತುಮಾಂಗನಿಗೆ ಪುರುಹೂತಮನವೆಳಸಿ
ನೆರೆಯಲೆಂದೈದನೆ ನಿಯತದಿಂದೆ ।
ಹರಿ ನಾರದನ ಪತ್ನಿಗೆಳಸೈದನೆ ಮತ್ತೆ
ಗುರುಪತ್ನಿಗೆಳಸಿ ಚಂದ್ರಮ ಸಾರನೆ ॥ ೧ ॥

ದಶಕಂಠ ಜಾನ್ಹಕಿಗೆ ವಸೆದ್ಯೆದನೆ ಮತ್ತೆ
ಎಸೆವ ದ್ರುಪದಾತ್ಮಜೆಗೆ ಕೀಚಕಾಥ್ವಯನು

ತಳುವಿಸದೆ ತತ್ತಾಳವೃಂತ ಶಯ್ಯಂ ಬೆಂದು
ಉಲಿಯಲೇಂ ಭಸ್ಮವಾಗಲ್‌ಸಕಳೆಗಂಡೂ ॥ ೬ ॥

ಮರುಗಿ ಇಂತೆಂದಳಹಹಾ ನಾವೇ ಕೆಡಿಸಿದೆವೀ
ತರುಣಿಯಳನಾದ್ಯರಗ್ನಿಂಗೆನಿಲಸಖನು ।
ನಿರುತಮೆಂಬುವರಿಗೆ ತಥ್ಯಮಾದುದುಯಂದು
ಭರದಿ ನಿರ್ಮಲನಿಯುತ ಕಾಸಾರಕೆ ॥ ೭ ॥

ಎತ್ತಿಕೊಂಡೈತಂದು ಸರಸಿಯೊಳ್ಕುಳ್ಳಿರಿ
ಸುತ್ತಖಿಳನಾರಿಯರದಾರೈವುತಿರಲು ।
ತತ್ಸರೋವರಜಲಂ ತಪ್ತತೈಲದೊಲಾಗೆ
ಅತ್ಯಧಿಕದಿಂದೆ ತಕಪಕನೆ ಕುದಿದು ॥ ೮ ॥

ಡಿಂಡೀರಬುದ್ಬುದ ಸುತಂಡದಿಂ ತಾಯಿ ಮಳಲು
ಥಂಡಥಂಡೆದ್ದು ಬೀಳುತ್ತಿರಲ್ದಡಿಗೆ ।
ಕಂಡು ಚಿರಗಂಗೊಂಡು ಸಕಳಿ ಇತ್ಯಾದಿ ಸ
ತ್ಪುಂಡರೀಕಾಕ್ಷಿಯರದಿಂತೆಂದರು ॥ ೯ ॥

॥ ನಿನ್ನ ಸುಂದರ ವದನವದೋರೆ ॥

॥ ಪದ ॥ ದಳ್ಳುರಿಯಿಂಥದೆಂದು ತಾಳುವಳಾಹ ॥ ಪಲ್ಲ ॥

ಸುಣ್ಣದರಳಿನೋಲ್ ಸುಟ್ಟು ಸುಟ್ಟುತನು
ಬಣ್ಣಗುಂದಿ ಬಾಯ್ಬಿಟ್ಟಳು ಬಾಲಿಯು
ಬಣ್ಣಿಸಲರಿದೀ ತಾಪದೇಳ್ಗಿಮು । ಕ್ಕಣ್ಣ ಮಹೇಶ್ವರ ಮುಳಿದ ನೀಗಲೀ
ಹೆಣ್ಣ ಶಿರೋಮಣಿಯುಳಿಯಳೀಗ್ಯೆನೆರೆ
ತಣ್ಣಸಗಾಣೆವು ತನುವಿನೊಳಿನಿತುಂ ॥ ೧ ॥

ನೋಡಲರಿದುಯೀಸಂತಾಪವನುರೆ
ಮಾಡರಿಸದಿವಳಿಂಗೆ ಚಿಕಿತ್ಸವ
ನೀಡಾದಳು ಘನರೋಗತಾಪಕುರೆ ।
ಪಾಡಳಿದಳು ಕೇಡಡಸಿನಾಯಕಿಯು
ಆಡಿದೊಡೇನಾಹುದು ನಾವರಿಯದೆ
ನಾಡೆರೂಢಿಗೀಶ್ವರನೆ ಬಲ್ಲಾ ॥ ೨ ॥

'ಕಂಡು',

ನಿಲ್ಲುವುದುಚಿತವೆ? ಹೊಂಡು ಮತ್ತವನಂ ವಡಗೊಂಡು ಬಾರಮ್ಮಾ ಬಾಯಿ ವಿಷಗೊಂಡು ಹೋದುದು ; ಹೋದುದು, ದಶಾವಸ್ಥೆಯೆನಗಾದುದು :

ಇಂತೆಂದು ಆಲ್ಪರಿಯುತ್ತಿರಲು ಅದಕ್ಕೆ ಸಕಳಿ ಅಂಥಾಳೆ.

॥ **ಶ್ಲೋಕ** ॥ ಸೌಂದರ್ಯ ಪುರುಷಂ ದೃಷ್ಟ್ವಾ ।
ಭ್ರಾತರಂ ಪಿತರಂ ಸುತಂ ॥
ಯೋನಿದ್ರವತಿ ನಾರೀಣಾಂ ।
ತಥ್ಯವಕ್ಷಾಮಿ ಕೇಶವಾ ॥ ೧ ॥

ಗದ್ಯ :– ಎಂಬ ನೀತಿಯುಂಟಾಗಿ ಈ ಧಾತ್ರಿಯಲ್ಲಿ ಸ್ತ್ರೀಯರೆಂಬುವರೆಲ್ಲ ಪಾಪರೂಪಿಗಳಲ್ಲವೆ ; ಯಾಕೆಂದಡೆ

॥ **ಚೂಲಿಕಾ** ॥ ಹೊಲಿಯನಾಗಲಿಯನುಜನಾಗಲಿ ಅಣ್ಣಾಗಲಿ
ಸಲೆಗರ್ಭಸಂಜಾತನಾಗಲುರೆ ಮತ್ತೆ ॥
ಕಲೆಹೀನ ಕುಷ್ಠನಾಗಲಿ ಕುಂಟನಾಗಲುರೆ
ಬಲಹೀನನಾಗೆ ಬಲುವೃದ್ಧನಾಗೆ ॥ ೧ ॥

ಸಲೆ ತಂದೆಯಾಗಲತಿಮೂರ್ಖನಾಗಲಿ ಮತ್ತೆ
ನಲುವಿನಿಂ ಮಧುಪಾನಿಯಾಗಲವನು ।
ಬಲು ಹುಚ್ಚನಾಗಿರಲಿ ಜಾತ್ಯಾಂಧನಾಗಿರಲಿ
ಮಲಮೂತ್ರದೊಳಗೆ ಹೊರಳ್ಯಾಡುವನದಾಗೆ ॥ ೨ ॥

ಹೆಳವನಾಗಲಿಯಾಗಲಳಿವನಾಗಲಿ ಬಿಡದೆ
ಇಳೆಯೊಳೊಂದರಕಾಸ ಸಲ್ಲದವನಾಗೆ ।
ಚಲುವನಾಗಿರಲವನ ಬಂದು ನೆರೆಯುವರಲ್ದೆ ।
ಬಲು ಪಾಪಕಂಜುವರೆ ಧರ್ಮಗುಣದಿಂ ॥ ೩ ॥

ಹೊಲೆಗಲಸಲಾಗದೆಂದಳ್ಕುವರೆ ಹೇಸುವಕಿ
ಲಲನಿಯರು ಪಾಪರೂಪಿಗಳಲ್ಲವೆ ॥ ೪ ॥

॥ **ಮಾತು** ॥ ಇಂತೆಂದು ತನ್ನ ಮನದೊಳ್ ಧಿಕ್ಕರಿಸಿ ಮತ್ತಂಥಾಳೆ,

ಸಕಳೆ :– ಒಳ್ಳೇಯದಮ್ಮಾ, ಇನ್ನು ಮರಣವನು ಸಾರದಿರು, ಬಾಯಾರದಿರು, ಕೆಂಡವನು ಕಾರದಿರು. ಎಂಥಾ ಅನುಚಿತ ಕೃತ್ಯವನು ಯೋಚಿಸಿದಿ ಒಳ್ಳೇದಮ್ಮಾ ಅಂಜದಿರು.

ರಸೆಯರಿಯಲ್ಯೆದನೆ ಸುರಜೇಷ್ಠ ನಿಜಸುತೆಗೆ
ಭೃಶದಿಂದಲಳುಪನೆ ಮಹಮ್ಮಾಯಿ ಕೇಳೌ ॥ ೨ ॥

ಸ್ತ್ರೀಪುಂಸರೊಳಗಿಂತು ಮನ್ಮಥವಿಕಾರುಂಟು
ನೀ ಪದುಳದಿಂದುಸುರು ನಿನ್ನ ಮನದಿರವಾ ।
ಯಾ ಪರಿಯೊಳಾದಡನುಕೂಲಸ್ತಳಮ್ಮನಾ
ನೌಪದುಮಗಂಧಿ ಚಿರಕಾಲವರಿಗೆಂದೂ ॥ ೩ ॥

ಹರದಿಯ ರಮಣಿ ಮಾಯಿಗಿಂತು ಸಕಳಿಯಳು ಬಹು
ತರದಿಂದೆ ಸನ್ಮತೋಕ್ತಿಗಳ ಪೇಳಿ ।
ಭಯವ್ಯಾಕೆ ಭಾವಜನ ಭಂಡಾರವೆ ನಿನ್ನ
ರಯದಿಂ ಮನೋಗ್ರಂಥಿಯಂ ಪೇಳ್ವುದೌ ॥ ೪ ॥

ಭುವಿಯರಿಯದೊಲಾನು ನಡಿಸಿ ಕೊಟ್ಟಪೆ ನಿನಗೆ
ಸಯ ಬಂದ ಗೆಳತಿಯನ್ನೊಡನೆ ಮಾಂಜುವರೆ ॥ ೪ ॥

ತವೆ ಇಂತು ಪೇಳಲ್ಕೆಯವಳು ನಸುಲಜ್ಜೆಯಿಂ
ತವಕದಿಂ ನಮ್ರಶಿರಳಾಗೆಂದಳು ।
ಜವದಿಂ ಮನೋಧರ್ಮವರಿದರೆಡೆಯೊಳು ಮತ್ತೆ
ಕವಲ ಗುಣದಿಂ ತಸುವನೊಂಚಿಸುವದ್ಯಾಕೆ ॥ ೫ ॥

ಎನುತೆ ಹೀಂಗಂಥಾಳೆ :

ಪುಂಡರೀಕಾಕ್ಷಿ ಕೇಳಲ್ಲಮಯ್ಯನಾ
ಕಂಡು ಮನ್ಮನ ಮರುಳುಗೊಂಡು ಮತ್ತೆ ।
ಮಂಡಲದಿಯನಗಾದುದೀ ಭಂಡುತೀಕ್ಷಣದಿ
ಹೊಂಡು ಮತ್ತವನ ಕರಕೊಂಡು ಬರದಿರಲು ॥ ೬ ॥

ನಾ ದಶಾವಸ್ಥೆಯೊಳ್ಸಾಯ್ವೆನಲ್ಲಾಯೀಗೆ
ಲೇದಯಾನ್ವಿತಿಯಂದು ಬಾಯ್ಬಿಡುತ್ತಿರಲು ॥ ೭ ॥

॥ **ಮಾತು** ॥ ಮಾಯೆ : ಮತ್ತಾ ಅಲ್ಲಮಯ್ಯನಂ ಕಂಡು;

'ಕಂಡು',

ಯನ್ನಯ ಮನಂ ಪರಿಭ್ರಾಂತಿಗೊಂಡು, ಯನಗಾಯಿತೀ ಭಂಡು, ವಿರಹಾಗ್ನಿ ಉರಿಗೊಂಡು ನಾ ಹೊರಳುವುದು ನೀ ಕಂಡು;

ಎಂಬುದರಿಂದೆ, ಮತ್ತಂತುಮಲ್ಲದೆ

॥ ವಾರ್ಧಕ ಷಟ್ಪದಿ ॥ ಕುಲಜಾತಿ ರೂಪು ಯವ್ವನ ಗಾಡಿ ಗರುವತನಂ ।
ಬಲು ಪರಾಕ್ರಮ ಬಂಧು ಜನರೊಲುಮೆ ನಿಪುಣತ್ವ ।
ಛಲ ನೀತಿ ವಿದ್ಯ ವಿನಯಾಲಾಪ ಶಾಸ್ತ್ರ ಕವಿತಾರಚನಿ
ಕುಶಲಂಗಳು ॥
ಕಲೆ ಶೌಚ ಕೃಷಿ ಸೇವೆ ಯಾಚನೆಯಲಂಕಾರ ।
ಗೆಲುವುಮಲಗುಣವಾದ ವಸ್ಯಮಣಿ ಮಂತ್ರತತಿ ।
ಫಲಿಸಲರಿಯವು ಪುಣ್ಯದನುಕೂಲಮಿಲ್ಲದಿರೆ ತನಗೆ ಮನ–
ವೆಳಸಿದಂತೆ ॥ ೧ ॥

॥ ಚೂಲಿಕಾ ॥ ಪಿಂದಸಂಖ್ಯಾತ ಪುಣ್ಯವನು ನೀನೆಸಗಿದು
ರಿಂದಲೀ ವಿದ್ಯಯವ್ವನ ಸೌಂದರತ್ವಂ ।
ಶೌರ್ಯತ್ವ ಧೈರ್ಯತ್ವ ವಚನ ಮಾಧೂರ್ಯತ್ವ–
ಸ್ಥೈರ್ಯ ಗಾಂಭೀರ್ಯತ್ವ ಸೌಕುಮಾರತ್ವಂ ॥ ೨ ॥

ಪರಿವಿಡಿಯೊಳೈತಂದು ನಿನ್ನ ಸಾರಿದವಲ್ಲ
ದಿರಲುಂಟಿಹೇಪರಮ ಚಾತುರ್ಯವಂತಾ ॥

॥ ಶ್ಲೋಕ ॥ ವಿದ್ಯೆಯಾ ವ ಪುಷಾವಾಚ । ವ ಸ್ತ್ರೀಣ ವಿಭವೇನಚ ॥
ವಕಾರ ಪಂಚಕೇನೈವ । ನರಃ ಪೂಜ್ಯತ್ವ ನಾಪ್ನುಯಾತ್ ॥ ೧ ॥

ನೆರೆ ನಿನ್ನ ಶ್ರೇಯಸವಶಾತ್ತದಿಂ ಮಹರಾಜ
ತರುಣಿಯಳ ಮರುಳ್ಗೊಳಿಸಿದ್ಯೆಯ ಜಾವಳನೆ ॥ ೩ ॥
ಮಹದಾಶ್ರಯಕೆ ಕಾರಣನಾದಿಯಲ್ಲಮ್ಮಾ ।
ಮಹಿವಲ್ಲಭನ ಪಟ್ಟದಳಿಯನಾದಿ ॥

॥ ವೃತ್ತ ॥ ಆಶ್ರಯ ವಸೇನ ಮಹತಾ ಗುರುತಾ ಲಘು ತಾ ಚ ಜಾಯತೇಜಂತುನಾಂ
॥ ೧ ॥
ನೀಚಾಶ್ರಯ ನ ಕರ್ತವ್ಯಂ । ಕರ್ತವ್ಯಂ ಮಹದಾಶ್ರಯಂ ॥
ಈಶಾಶ್ರಯೋ ಮಹಾನಾಗಃ। ಪ್ರಪ್ರುಚ್ಛ ಗರುಡಾತ್ಸುಖಂ ॥ ೨ ॥

ರಾಮಮಾಶ್ರಿತ್ಯಲಂಕಾಯಾಂ । ರಾಜಾಜಾತೋ ವಿಭೀಷಣಃ ॥
ಸುಗ್ರೀವೋರಾಮ ಸಖ್ಯೇನ । ಪ್ರಾಪ್ತವಾನ್ ವಾಲಿಸಂಪದಂ ॥ ೩ ॥

ಅಜಃ ಶಿಷ್ಟಃ ಪ್ರಸಾದೇನ । ಗಜ ಸ್ಕಂದೇನ ಗಚ್ಛತಿ ॥ ೪ ॥

॥ **ಚೂಲಿಕಾ** ॥ ಗೌಪ್ಯದಿಂದಲ್ಲಮನ ಕರತರುವೆ ನಿನ್ನಾಣೆ
ನೀ ಪದುಳದಿಂದಾಚರಿಸುವುದವನೊಳೆ ।
ಆರರಿಯದಂತರಸಿಯರಸರರಿಯದಲೆಸುವಿ
ಚಾರತ್ವದಿಂದೆ ಸುಖಮಿರುವುದೌಲಲನಿ ॥ ೧ ॥

ಎಂದು ಸಂತೈಸಿ ತಾನೆಂದಳು ಪ್ರಯತ್ನದ
ಕಿಂದಲುರೆ ಪ್ರಾರಬ್ಧದೊಡ್ಡದಲೆಂದು ।
ಅಂದು ತೀಕ್ಷಣ ವೇಗದಿಂದಲಲ್ಲಮನೆಡಿಗೆ
ಬಂದು ಪೆಣ್ದುಂಬಿ ಝೇಂಕರಿಸುವಂತೆ ॥ ೨ ॥

ಅರಳ ಮಲ್ಲಿಗಿರಾಸಿ ಸುರಿವಂತೆ ಮಾಧುರ್ಯ ।
ತರವಾದ ವಾಕ್ಯದಿಂದಿಂತೆಂದಳು ॥

ಆರ್ಯಂ ॥ ಭಾವ ದೇವಲೋಕದ ಲಲನಿಯು ಸಂ
ಜೀವರತ್ನ ದಿಗ್ಗಜದ ನೆರೆ ।
ಕೋವಿದ ಕುಂಭಸ್ಥಾನಸುಮೌಕ್ತಿಕ
ಮೇವೇಳ್ವೆನು ದೊರಕಲ್ಕೆಯುರೆ ॥ ೧ ॥

ನಿನಗೆ ದೊರಕಿದೆಡೆ ನನಗೇನಿತ್ತಪೆ
ಯನುವಿಂ ಪೇಳ್ವೈ ವಿಟರಾಜಾ ॥
ಅನುಮಾನವದೇನಿಲ್ಲ ಸತ್ಯನುಡಿ
ನಿನಗರಿಸಲು ಬಂದೆನು ನೈಜಾ ॥ ೨ ॥

ಇಂತೆಂದೊರಿಯಲ್ ಕಾಂತಿಗೆ ಪ್ರಭುವರ
ಭ್ರಾಂತಿಗೊಂಡ ನೊಲಿಂತೆಂದಂ ।
ಅಂತರಿಸದೆ ಕೈಸಾರಲವುಂ ಆ
ದ್ಯಂತಮೆಲ್ಲ ನಿನ್ನವು ಎಂದಂ ॥ ೩ ॥

॥ **ಚೂಲಿಕಾ** ॥ ಇನ್ನು ಮರಿಮಾಂಜಲ್ಯಾಕಲ್ಲ ಮಾ ಕೇಳು ನೀ
ಮುನ್ನಾವ ಪುಣ್ಯ ಮೆಸಗಿದಿಯೊ ನಿನಗೆ
ಚನ್ನೆ ಮಮಕಾರ ಮೋಹದ ಕನ್ಯೆ ಮರುಳಾಗಿ
ನಿನ್ನ ಬಳಿಗಟ್ಟಿದಳು ಕರೆಯಲಿಂದು ॥ ೧ ॥

॥ **ಸರ್ವಜ್ಞವಚನ** ॥ ಅಂಗನೆಯರೊಲಿಯುವುದು ಭಂಗಾರದೊರಿವುದು
ಸಂಗ್ರಾಮದೊಳಗೆ ಗೆಲಿವುದು ಇವು ಮೂರು
ಸಂಗಯ್ಯನೊಲುಮೆ ಸರ್ವಜ್ಞ ॥ ೨ ॥

ಇಲ್ಲೈದಲಲ್ಲಿರ್ಪನಲ್ಲೈದಲಿಲ್ಲಿರ್ಪ ।
ಮೆಲ್ಲ ಮೆಲ್ಲನೆ ಹತ್ತಿರಿಗೆ ಸಾರುವಾ ॥
ಅಲ್ಲಮನೆ ಕುಟಿಲಗುಣಸಲ್ಲೆನುತಲಪ್ಪಿಕರ ।
ಪಲ್ಲವಗಳೆರಡು ಕುಚದಲ್ಲಿರಲ್ಕೆ ॥ ೩ ॥

॥ ಅದನು ಕಂಡು ಮಾಯಿ ಅಂಥಾಳೆ :

॥ **ಶ್ಲೋಕ** ॥ ಸ್ವಕೀಯ ಹೃದಯಂ ಭಿತ್ವಾ । ನಿರ್ಗತೌಯೌಪಯೋಧಕಾ ॥
ಅನ್ಯದೀ ಯಸ್ಯ ಹೃದಯಂ । ಭೇದನೆಕಾಕೃಪಾತಯೋಃ ॥ ೧ ॥

ಗದ್ಯ : ಬಹು ಜೋಡಾಗಿ ಪಾಡಾಗಿ ಹಿಡಿಯಲಿಕ್ಕೀಡಾಗಿ, ತಮ್ಮೆದಿಯ ತಾವು ವಡದು ಬರುವವು ಈ ಸ್ತನಂಗಳು, ಇನ್ನೊಬ್ಬರೆದಿಯ ವಡಿಸದಲೆ ಬಿಟ್ಟಾವೆ, ಹೇಡಿಗುಣವನಾಕಾಲಕ್ಕೆ ತೊಟ್ಟಾವೆ, ಎದಿಗೆ ಹೋಗಿ ನಟ್ಟಾವೆ ಸರಿ ಎಂಬುವ ವಾಕ್ಯ ಸುಳ್ಳಾದುದಲ್ಲ.

॥ ಮತ್ತಂ ॥

ನಾರೀತಿ ನಾಮ ಮಾತ್ರೇಣ । ಕಾಷ್ಠಂ ನಮತಿ ನಿಷ್ಠುರಂ ॥
ಅತ್ಯೋನ್ನುತ ಕುಚಾನಾರಿ । ಕಸ್ಯನೋರಮತೆ ಮನಃ ॥ ೧ ॥

ಎಂಬುವದು ಬರಿದಾದುಲ್ಲ :

॥ ಮತ್ತಂ ॥

ಉಡುರಾಜ ಮುಖೀ ಮೃಗರಾಜ ಕಟೀ
ಗಜರಾಜ ವಿರಾಜಿತ ಮಂದಗತಿ ।
ಯದಿ ಸಾ ವನಿತಾ ಹೃದಯೆ ನಿಹಿತಃ
ಕ್ವ ಜಪಃ ಕ್ವ ತಪಃ ಕ್ವ ಸುಮಾಧಿ ವಿಧಿಃ ॥ ೧ ॥

ಇದು ನಿಷ್ಪಲಮಾದುದಲ್ಲ.

॥ **ಕಂದ** ॥ ಮುದ್ದು ಮುಖದವಳ ಕಂಡಡೆ
ಎದ್ದೋಽಗದ ವೃದ್ಧರೆಲ್ಲ ಕೆಮ್ಮುತೆ ಮೀಸಿಯ ।
ತಿದ್ದುತೆ ಹಾತೊರಿ ಬಿದ್ದುತೆ
ಕದ್ದಲ್ಲಿಗೆ ಹೋಗಿ ಹದ್ದುಗ್ಯೆ ಹುಚ್ಚುವರ್‍ಯೆ ॥ ೧ ॥

ಸುದತಿಯು ಸೌಂದರಿಯಾಗಲ್
ಮುದುಕರು ಮುಖಹೀನ್ರು ಮೂಲಿಗುಂಪರು ಮುನಿಗಳ್ ।

ಪಾವಕೋಪಿಹೇಮ ಸಂಬಂಧಾ । ದೇವ ಮುದ್ಗರತಾಡನಂ ॥ ೫ ॥

ಲೋಹಃ ಪರುಷ ಸಂಬಂಧಾ । ದ್ಯಾತಿ ಹೇಮಂ ಮನಸ್ತಥಾ ॥ ೬ ॥

ಎಂಬುದರಿಂದೆ ಮಹದಾಶ್ರಯಕ್ಕೆ ಕಾರಣನಾಗಿ ಇನ್ನು ತಾಮಸವ್ಯಾಕೆ ಬಾ ಬಾ

॥ **ಚೂಲಿಕಾ** ॥ ಯಂದು ಪರಿಪರಿಯಿಂದೊಡಂಬಡಿಸಲಾಗನಡಿ
ಯೆಂದೆನುತೆ ನಿರ್ಮಾಯ ಪ್ರಭುವರೇಣ್ಯಂ ॥

॥ **ಲಾವಣಿ** ॥ ನಡೆ ತಂದನಾಗೆ ಮಾಯಾತೀತಂ ॥ ಪಲ್ಲ ॥

ಮಡದಿ ಕರೆಯಲಾ ಮೃಡಸಮರೂಪನು
ನಡೆದು ಬಂದನೆಡೆವಿಡದೆ ಮಂದಿರಕೆ
ಸಡಗರದಿಂದಡಿಯಿಡುತಲಾಗಿ ಸವಿ
ನುಡಿಯಾಡುತಲಡಿಗಡಿಗೆ ನಿಲ್ಲುತಂ
ಹೊಡಕರಿಸುತೆ ಮೆಣ್ನಡಿವುತೆ ಬರಲುರೆ
ಜಡಜಾಂಬಕಿ ಕರತಂದು ಖೋಲಿಯೊಳ್
ಬಿಡದೀರ್ವರ ಪೋಗಿಸುತ್ತೆ ಮಂಚದೊಳ್
ದೃಢದಿಂ ಕುಳ್ಳಿರಿಸುತ್ತೆ ನಾಗದಳ
ವಡಕಿ ಮುಖ್ಯ ಭೋಗದ್ರವ್ಯಗಳಂ
ಮಡಗಿ ಠಾಣದೀವಿಗೆಯನಿಟ್ಟುನೆರೆ
ಷಡುರಸಾನ್ನದ್ಧರಿವಾಣವಿರಿಸಿನೀ
ರ್ಗೊಡವನಿಟ್ಟು ಪರಿಪರಿಯ ಪರಿಮಳದ
ಪುಡಿದುಂಬಿದ ಕರಡಿಗಿಯನಿರಿಸಿಮುದ
ವಡೆದ ಮನದಿ ಕದವಿಕ್ಕಿ ಸಕಳಿಯುಂ
ನಡೆದಳಾಕೇನಂಬೆನುರಂಭೆ ಮಾಯಾತೀತಂ ॥ ೧ ॥

॥ **ಚೂಲಿಕಾ** ॥ ಇಂತು ಸಕಳಿಯಂ ಕವಾಟಂ ಬಲಿದು ಬೀಗವಂ
ಸಂತಸದೊಳಿಕ್ಕಿ ಪೊರಬಿರ್ದಳಿತ್ತಂ
ಎಂತೆಂಬೆನತ್ತ ಮಾಯಾಂಗನೆಯಳಲ್ಲಮನ
ಕಾಂತಿಸುವ ಮುಖಪದ್ಮನೋಡಿರಯದಿ ॥ ೧ ॥

ಚಿತ್ತದೊಳ್ತರಹರಿಸದ್ವೈತಂದು ತರ್ಕಿಸಲು
ಮತ್ತವಳ ತಕ್ಕಿಯೊಳ್ಸಿಗದೆ ಕಡಿಗೆ ।
ಅತ್ತತ್ತ ನಿಲಲು ಮತ್ತಪ್ಪುವಳು ಸಿಲ್ಕದಲೆ
ಚಿತ್ತಜಾಂತಕರೂಪ ಕೆಲಸಾರ್ವನು ॥ ೨ ॥

॥ ಹೇವಿಟರಾಜೋತ್ತಮಾ ॥

॥ **ಚೂಲಿಕಾ** ॥ ಸುಂದರಿಯಳಲ್ಲವೊ ಸುನೀತಿಯಲ್ಲವೊ ಸುಗುಣ
ಮಂದಿರಿಯಳಲ್ಲೊ ಸತ್ಕುಲಜೆಯಲ್ಲೋ ।
ಚಂದ್ರಮುಖಿಯಲ್ಲೊ ಮೇಣ್ರಾಜಪುತ್ರಿಯಳಲ್ಲೊ
ಅಂದದಿಂ ಧನಪೂರ್ಣೆಯಲ್ಲವೊ ಮತ್ತೆ ॥ ೧ ॥

ಅನುಕೂಲಿಯಲ್ಲೊ ಮೇಣ್ಕೋಮಲಾಂಗಿಯಳಲ್ಲೊ
ಎನಿತೆಂಬೆ ಚಿತ್ತವೃತ್ತಿಯನರಿವಳಲ್ಲೊ ।
ಮನವು ನಿನ್ನದು ಕಲ್ಲೊ ಪುರುಷತ್ವ ನಿನಗಿಲ್ಲೊ
ಮನ್ಮಥನ ಬಾಣ ನಿನಗೆರಗಲಿಲ್ಲೊ ॥ ೨ ॥

ಸುಗಂಧೈಃ ಸು ಪುಷ್ಪೈಃ ಸುಶಯ್ಯಃ ಸುಕನ್ಯಾ ।
ವಸಂತರುತೌ ಪೂರ್ಣಿಮ ಪೂರ್ಣಚಂದ್ರಾ ॥
ತದಾನಾಸ್ತಿಕಿಂಚಿದ್ವಘುತ್ವಂ ನರಾಣಾಂ ।
ತತಃಕಿಂ ತತಃಕಿಂ ತತಃಕಿಂ ತತಃಕಿಂ ॥ ೧ ॥

॥ **ಮಾತು** ॥ ಮಾಯೆ : ಕೂಡಲಾಗದೆ.

'ಕೂಡಲೊಲ್ಲದಡ,'

ಒಂದು ಮಾತಾಡಲಾಗದೆ,

'ಮಾತಾಡದಡೆ,'

ಕೈಸನ್ನಿ ಮಾಡಲಾಗದೆ,

'ಸನ್ನಿ ಮಾಡದೊಡೆ,'

ಅಕಟಕಟಾ ನಿನ್ನ ಕಣ್ಣೋರಿಯಿಂದೆ ನೋಡಲಾಗದೆ,

'ನೋಡಲೊಲ್ಲದಡೆ,'

ಎನ್ನ ಮುಂದೆ ಎಡೆಯಾಡಲಾಗದೆ,

'ಎಡೆಯಾಡದೊಡೆ,'

ಆಶೋತ್ತರಕಿಂತುವೇನಾದಡೂ ಇರ್ದಡೆ ಬೇಡಲಾಗದೆ,

'ಸಮಕ್ಷಮದಲ್ಲಿ ಬೇಡದಿರ್ದಡೆ,'

ಸಕಳಿಯ ಮುಂದಾಡಲಾಗದೆ :

ಬೆದೆಗೊಂಡು ಬೇಟಕೆಳಿವರು
ಚದುರರು ಚನ್ನಿಗರು ಮಾಳ್ಪುದದು ತಾನರಿದೆ ॥ ೨ ॥

ಗದ್ಯ :– ಇಂತಿಷ್ಟು ಅಪ್ರಯೋಜನವಾದವಲ್ಲಾ ಎಂದು, ಮತ್ತವನು ದೂರ ನಿಂತಿರುವುದಂ ಕಂಡು ಹೀಂಗಂಥಾಳೆ :

॥ **ಮಾತು** ॥ ಹೇ ಭುಜಂಗಾ,

'ಭುಜಂಗಾ,'

ಇಷ್ಟ್ಯಾಕೆ ನಿನ್ನ ಹಡಂಗಾ, ತಿಳಿಯದೆನಗೆ ನಿನ್ನಂಗಾ, ನಿನ್ನಂಗ ಸಂಗ ನಾನಪೇಕ್ಷಿಸಿ ಬಂದಡೆ ಹಾರುವರೆ ಟಂಗ ಟುಂಗಾ :

॥ **ಪದ** ॥ ಯನ್ನ ನೋಡು ಬಾ । ಯನ್ನ ನೋಡು ಬಾ । ॥ ಪಲ್ಲ ॥

ನೋಡು ಬಾ ಒಂದು ಮಾತಾಡ ಬಾ ಕೂಡು ಬಾ
ಬೇಡಿಕೊಂಬೆ ನಿನಗೆ ಛಲವು ಮಾಡಬ್ಯಾಡೆಂದು ॥ ೧ ॥

ಮುದ್ದಿಸುವೆ ಬಾ ನಿನ್ನ । ಮುದ್ದಿಸುವೆ ಸೌಖ್ಯರಸದೊ ।
ಳದ್ದಿಸುವೆ ಹೊದ್ದಿಸುವೆ । ಬದ್ಧತೆಕ್ಕಿಯಿಂದ ಸುಪ್ರ
ಸಿದ್ಧರತಿಕಲಾಪಸುಗುಣ ॥ ೨ ॥

ಕಾಡಲ್ಯಾಕೆ ಬಾ ಯನ್ನ । ಕಾಡಲ್ಯಾಕೆ ಎನಗೆ ಸಿಗದೆ ।
ಓಡಲ್ಯಾಕೆ ಮಾಡಲ್ಯಾಕೆ । ಗಾಢತರದಮುಳಿಸುಕೇಡ
ಬ್ಯಾಡವೆಂದು ಬೇಡಿಕೊಂಬೆ ॥ ೩ ॥

ಮಚ್ಚಿದವಳು ಬಾ । ಮಚ್ಚಿದವಳು ನಿನಗೆಯನ್ನ ।
ಪೆಚ್ಚಿನ ಕುಚವೆರಡು ನಿನ್ನ । ಸ್ವಚ್ಛಕರಕೆ ಬಿಚ್ಚಿ ಕೊಡುವೆ
ಮಚ್ಚುಮರಿಯಿದಲ್ಲವೆನ್ನ ॥ ೪ ॥

ಇಂದ್ರ ರಾಜೇಂದ್ರ ಸುಗುಣ । ಸಾಂದ್ರ ಶಿವ ವೃಷೇಂದ್ರರುಂದ್ರ ।
ಚಂದ್ರಮುಖಿಯಳೆನ್ನನಪ್ಪಿ । ಚಂದ್ರಶಾಲೆಯೊಳಗೆಯನ್ನ ನೋಡು ॥ ೫ ॥

ಈ ಪ್ರಕಾರದೊಳು ಆ ಮಹಾಮ್ಮಾಯಿಯು, ಕಾಮಾತುರಣಾಂ ನ ಭಯಂ ನ ಲಜ್ಜಾ' ಎಂಬುದರಿಂದೆ ಕಾಮ ಭ್ರಾಂತಿಯಿಂದೆ ಲಜ್ಜಾಹೀನಳಾಗಿ ಹೀಂಗಂಥಾಳೆ ಆ ಪ್ರಭುವಿಗೆ :

ಪರಮ ಸತ್ಕಾಂತಿಯಡಗಿರ್ದ ಈ ವಿಧವೇನು
ಪರವಶವಿದೇನಮ್ಮನಾಕಳುಪಿದ ॥ ೧ ॥

ಅಲ್ಲಮನದೆಲ್ಲಿ ತಾಪೋದ ನಿನಗೆ ಪ್ರಮಾದ ।
ವೆಲ್ಲಿಯದು ತಿಳಿಯದೌ ಇದರ ಭೇದಾ ॥

॥ **ಗದ್ಯ** ॥ ಅಂಬುವಣ, ಆಕಿ ಮತ್ತಷ್ಟು ಭ್ರಾಂತಿಗೊಂಬುವಣ, ಈಕಿ ಅಲ್ಲಮನಂತೆ ಠೆಕ್ಕಿಹಾಯಿದಳು. ಸಕಳಿ–'ನಾನಲ್ಲಮ್ಮಾ ನಾನಲ್ಲಮ್ಮಾ' ಅಂಥಾಳೆ. ಈಕಿ 'ಅಲ್ಲಮಾ' ಅಂದ ಅಂದ್ಹಾಗೆ ಮತ್ತಷ್ಟು ಪೂರ್ಣಾಲಿಂಗನವ ಮಾಡತಾಳೆ, ಸಿಕ್ಕ ಬಿಡು ಅಂಥಾಳೆ. ಈಕಿ ಕೇಳತಾಳೆ 'ಅಲ್ಲಮಾ' ಅಂದ್ರೆ, ಅಮ್ಮಾ ಅಲ್ಲ ಅಂದ್ರ ಕೇಳ್ಯಾಳು. ನೋಡ್ರಿ ಅಕ್ಷರಗಳು ಲೋಮಾಲೋಮವಾದಲ್ಲಿ ಇಷ್ಟಾಯಿತು. ಎಂತೆಂದರೆ :

॥ಸಾಕ್ಷರಾ ವಿಪರೀತಂ ಚೇದ್ರಾಕ್ಷಸಾ ಏವ ಕೇವಲಂ॥

'ಸಾಕ್ಷರಾ' ಎಂಬ ಮೂರು ಅಕ್ಷರಗಳ ತಿರಿಗೋದಿದಡೆ 'ರಾಕ್ಷಸಾ' ಎಂದಾಗುವದು. ಅಂತೆ ಆಯಿತು. ಸಾಕ್ಷರಸ್ತರು ಅಂಬುವದು ಉಪರಾಟಿ ಆಗಲಾಗಿ ರಾಕ್ಷಸಸ್ತರು ಅಂತಾಯಿತು.

॥ **ಮಾತು** ॥ ಸಕಳೆ:– ಸಕಳಿ ಅಂಥಾಳೆ ಆ ರೀತಿಗೆ ಯೇ, ಖೂನ[?] ಬಂದವರನೆ ಬೆದಿಗೆಬ್ಬಿಸುವಾಕಿ ಬಿಡಂಥಾಳೆ. ಇಂಥಾ ಕಚ್ಚೂರಿಕೆಂತೆ ಅವ ಬಿಟ್ಟು ಹೋಗ್ಯಾನ. ಯಾಕ; 'ಸ್ತ್ರೀಯಃ ಪ್ರತ್ಯಕ್ಷ ರಾಕ್ಷಸಾ' ಎಂಬುದರಿಂ. ಈ ರಾಕ್ಷಸಿಯ ಕೈಯಲ್ಲಿ ಯಾಕೆ ಸಿಲ್ಕ್ಯಾನು, ಹೆಂಗಸರಂದರೂ ನೋಡದೆ ಠೆಕ್ಕಿ ಹಾಯಿವಾಕಿಗೆ ಗಂಡಸರೇನು ಈಡಾಗತಾರೆ, ಸೊಟ್ಟಿಗಳು ಸಾಲದಂಥವರಿಗೆ ಕೊಬ್ರಿ ಮೊಟ್ಟಿಗಳೇನೀಡಾಗತಾವೆ ನೋಡ್ರಿ. ಈಕಿ ವರ್ತೂಕವೆಲ್ಲಾ ನೋಡಿದ್ದಾನು ದಾವಲ್ಯಾರ ಹಾದು ಓಡಿದ್ದಾನು. ಈಕಿ ಉಪದ್ರವನ್ನೆಲ್ಲಾ ನೀಗಿ ಪಾಡಿದ್ದಾನು, ಮಾಯಿಯ ಅಂಗಸಂಗಕ್ಕೊಯಿದು ಕಲ್ಲಾಕೆನುತ್ತೆ ಆಡಿದ್ದಾನು, ನನ್ನನಂದರು ಬಿಡದಾಕಿ. ಇನ್ನೊಬ್ಬರ ಬಲ್ಲಳೆ ಈಕಿ. ಮಹಾ ಕುತ್ತಿಗ್ಗೊಯಾಕಿ ಇವಳ ಸ್ನೇಹವನು ವೈದತ್ತನೂಕಿ.

ಗದ್ಯ :– ಹಿಂಗಂಬುತಿರಲು ಅಷ್ಟೊತ್ತಿಗೆ ಮಾಯಿಗೆಚ್ಚರೋದಯಮಾಗಿ ಕಣ್ಣೀರ್ಗಳಂ ಸುರಿಸುತ್ತೆ ಸಕಳಿಗಂಥಾಳೆ :

॥**ಚೂಲಿಕಾ**॥ ಏನಂಬೆನವನುರು ಮಹೇಂದ್ರ ಜಾಲವನಮಾ
ಭಾನುಕರದಂತೆ ಸೋಂಕಿಯು ಸೋಂಕದೆ ।
ತಾನ್ಯೆದೆ ಹೋದನೌ ಚುಂಬನಾಲಿಂಗನಕೆ
ನಾನಾ ಪ್ರಯತ್ನಬಡಲು ಸಿಲ್ಕದೆ ॥ ೧ ॥

॥ **ಚೂಲಿಕಾ** ॥ ಪುರುಷಸಂಗವನರಿಯದವಳೆನ್ನದಿರುಯನ್ನ
ನೆರಿದಿಯಾದಡೆ ರಾಜನಳಿಯನೆನಿಸುವಿ
ಭರದಿಂದೆ ರಾಜಾಧಿಪಟ್ಟಗಟ್ಟಿಸುವೆನೆಂ
ದ್ಧರದಿ ಹಂಬಲಿಸಲಲ್ಲಮನೆಂದನು ॥ ೧ ॥

ಮದನನಿಗೆಯಂಬುವನದೊಗಿಯೆಯೆಂದಿರಲು
ಸುದತಿಎನಗಾಲ್ಪರಿವರೇನೆ ಭ್ರಾಂತಿಯೊಳು ।
ಚದುರ ನೀ ಯೋಗಿಯೇನಲ್ಲ ವಿಟವರನೆಂದು
ಮುದದಿ ತರ್ಕೈಸಿ ಮರಳೆವಳುರತಿಯಿಂ ॥ ೨ ॥

ಸಿಕ್ಕದವಳಂ ಭ್ರಾಂತಿಗೊಳಿಸಿ ತಿರಿ ತಿರಿಗಿಸುತೆ
ಮಿಕ್ಕ ಮಾತೇನು ಬಹು ವಿಧದಿ ಕಾಡಲ್ ।
ಅಕ್ಕರಂಗುಂದಿ ಓಡಾಡಿ ಬ್ಯಾಸತ್ತವಳು
ಜಕ್ಕನುರೆ ಪರವಶಂಗೊಂಡಳಾಗೆ ॥ ೩ ॥

ಇತ್ತುಷಃಕಾಲವರಿತಲ್ಲಮಪ್ರಭುವರಂ
ಮತ್ತೆ ತಾಂಡವಶಾಲೆಯಲ್ಲೆಸೆದನು ॥ ೪ ॥

॥ **ಭಾಮಿನಿ. ಷ** ॥ ಇತ್ತಲುದಯದಲೆದ್ದು ಸಕಳಿಯು
ಮತ್ತೆ ಮುಖವಂ ತೊಳೆವುತಲ್ಲಮ
ಮತ್ತಗಾಮಿನಿತಾಪಗಳಿದಿರ್ದಪನೊ ಮೇಣಿಲ್ಲೊ ।
ಗೊತ್ತರಿವೆನೆಂದೆನುತೆ ಮೆಲ್ಲನೆ
ವೃತ್ತಗುಚಿಯಹ ಮಾಯಿಯಂ ಕರಿ
ವೃತ್ತಕೀಲಿಯದೆಗದು ಕದವಂ ನೂಕಿ ನೋಡಲ್ಕೆ ॥ ೧ ॥

ಅಲ್ಲಮನ ಕಾಣದತಿ ತನ್ನೆದಿ
ಝುಲ್ಲವೆಂಬುತೆ ಮಾಯಿ ಬಿದ್ದಿಹ
ದೆಲ್ಲವರಿತುಂ ಕಲ್ಲಬೊಂಬಿಯೊಳಲ್ಲಿಮಿಸುಕದಲೆ ।
ನಿಲ್ಲುತವನೆಲ್ಲಿಂದೆ ಪೋದನೊ
ಖುಲ್ಲನಲ್ಲಮನೆಂದು ಬೈವುತೆ
ಮೆಲ್ಲನೆಚ್ಚರಿಸಲ್ಕೆ ಪೆರ್ಮುಚ್ಚೆನೊಲು ಎದ್ದಳುರೆ ॥ ೨ ॥

ಗದ್ಯ : ॥ ಆಗ್ಗೆ ಸಕಳಿ ಅಂಥಾಳೆ ಮಾಯಿಗೆ ॥

॥ **ಚೂಲಿಕಾ** ॥ ಪರಿದ ಕುಂತಳಿದೇನು ಜರಿದ ಉಡಗಿಯಿದೇನು
ಪರಿದ ಹಾರವಿದೇನು ನಿನ್ನ ಮುಖದಾ ।

ತೇಷಾಂ ಇಂದ್ರಿಯನಿಗ್ರಹೊ ಯದಿ ಭವೇತ್ವಿಂಧ್ಯತ್ಪ್ಲ ವೇತ್ಸಾಗರೆ ॥

॥ **ಗದ್ಯ** ॥ ಹೀಂಗೆಂಬ ಆದ್ಯರ ವಚನಮಿರಲಾಗಿ, ಈ ವಚನಕ್ಕೆ ಅನುಸರಿಸದೆ ಹೋದ.

॥ ಅಣ್ಣ ಕೇಳಯ್ಯಾ ಎನ್ನ ಬಿನ್ನಪ ॥

ಏನಿದಚ್ಚರಿ ನಾನರಿಯೆನು ।
ಮಾನಿನಿಯರ ಮೋಹನಾಸ್ತ್ರೀ ಬಾಧೆಯಾ ॥
ಹಾನಿಗಾಣದಾದಾನವಾನರಾದ್ಯರಾ ।
ಏನನಂಬೆನು ಕಾಣೆ ನೀ ಮಹಿಯೊಳು ॥ ೧ ॥

ಬೆಣ್ಣೆ ಬೆಂಕಿಯೊಳ್ । ತಣ್ಣಗಿರ್ಪುದೆ ।
ಪೆಣ್ಣಿನೊಲವಿಗೆ ಸೋಲದಣ್ಣರಿರ್ಪರೆ ॥ ೨ ॥

॥ **ಗ್ರಂಥ** ॥ ಅಂಗಾರ ಸಾದೃಶಂ ನಾರೀ । ಘೃತಕುಂಭಸಮಃ ಪುಮಾನ್ ।
ತಸ್ಮೇನ್ನಾರ್ಯೇಷು ಸಂಸರ್ಗಾ । ದೂರತಃ ಪರಿವರ್ಜಯೇತ್॥ ೧ ॥

ಇವಳ ರೂಪಿಗೆ ಇವಳ ಚಾತುರ್ಯಕೆ
ಇವಳ ಮಾಟಕೆ ಇವಳು ಮಾಳ್ಪ ಬ್ಯಾಟಕೆ ।
ಇವಳಕೈವಶ ತ್ರೈಲೋಕವೆಲ್ಲವು
ಇವನದಾವನೊಯನಗರಿಸದೆಂದಳು

॥ **ಆರ್ಯಂ** ॥ ವೇದ ಶಾಸ್ತ್ರ ಪದಿನೆಂಟು ಪುರಾಣವು
ಸಾಧಿಸಿದವು ಸ್ತ್ರೀ ಮೋಹಕ್ಕೆ ।
ಆದರೀಡ ಹರಿಹರಬ್ರಹ್ಮಾದ್ಯರು
ಗಾದೀಜನರ ಪಾಡೇನಕ್ಕೆ ॥ ೧ ॥

॥ ಮತ್ತೆ ॥

॥ **ಗದ್ಯ** ॥ 'ಸತಿಯಗರ್ಾವನು ಸಿಲ್ಕನ್ಶೈ ಹರಹರಾ ಶ್ರೀಚನ್ನಸೋಮೇಶ್ವರಾ' ಎಂದಿರಲು, ಇದಕ್ಕೆ ಅನುಸರಿಸನಿವನು ಎಂದು ವಿಸ್ಮಯಂ ಬಡುತೆ ಒಳ್ಳೇದಮ್ಮಾ

ಉದ್ಯೋಗಂ ಸಾಹಸಂ ಧೈರ್ಯಂ ।
ಬುದ್ಧಿರ್ಬಲಂ ಪರಾಕ್ರಮಂ ॥
ಷಢ್ಭಿರ್ಮಾನುಷಚಿಂತಾಸ್ಯಾತ್ ।
ಸಪ್ತಮದ್ಯೆವಚಿಂತನಂ ॥

ಮಾರ ಬಾಣಕ್ಕೆನ್ನ ಗುರಿಮಾಡಿ ಸ್ವಪ್ನದ ವಿ
ಚಾರವಿಟ್ಟಗಲೆನ್ನ ಹೋದನಬಲೆ ।
ಗಾರುಡಿಗತನದ ವಿಗಡವ ವರ್ಣಿಸಲು ನಿಖಿಳ
ಸಾರಜಿಹ್ವೆಗಳಿಂದೆಸಾಲದಮ್ಮಾ ॥ ೨ ॥

॥ **ಮಾತು** ॥ ಮಾಯೆ :- ಅಮ್ಮಾ ನೀನಲ್ಲದಿನ್ನಾರಿಗೆ ನಾ ಬಾಯ್ತೆರಿಲಿ,

'ತೆರಿಲಿ',

ಅವನಂ ಕಾಣದ್ದ್ಯಾಂಗಿರಲಿ;

'ಇರಲಿ',

ಈ ಜನ್ಮದಲ್ಲಿ ಪರಲೀ ಬಂದರೂ ಬರಲಿ; ದುರ್ನಿಮಿತ್ಯವೆನ್ನ ಪಾಲಿಗಿರಲಿ, ನಾನೊರಲಿ ವರಲೀ ಸಾಯ್ವೆನು. ನಿನಗೆ ಕರುಣಂ ಬರಲಿ.

ಏನ ಮಾಡಲಿಯಾನು ಸಾಯ್ವೆನೆನೆ ಮೊದಲೆನ್ನ
ನೀನ್ಹಿಚಿಕಿ ಸಾಯಗೊಂದಿರ್ದಿ ಬಡವಿಯನು
ನೀನಲ್ಲಮೆನಲೆನಗೆ ಅಂತಾಯಿತೌ ಮನದೊ
ಳೇನೆಣಿಸದಿರು ನಿನ್ನ ಸತಿಯಳಾನೌ ॥ ೩ ॥

॥ **ಗದ್ಯ** ॥ ॥ ಆಗ್ಗೆ ಸಕಳಿಗೆ ಕರುಣೋದಯಮಾಗಿ ಹೀಂಗಂಥಾಳೆ ॥

॥ **ಷಟ್ಪದಿ** ॥ ಗಡ್ಡ ಬಿಟ್ಟವರ ಕಂಡೆ ಗುಡ್ಡನೇರಿದವರ ಕಂಡೆ ।
ಹೆಡ್ಡರಾರ ಕಾಣೆ ಸ್ತ್ರೀಯರಿಗೆ ಸೋಲದಾ ॥
ಅನ್ನ ಬಿಟ್ಟವರ ಕಂಡೆ ಕಣ್ಣುಕಾಲಿನವರ ಕಂಡೆ ।
ಚನ್ನಿಯರಿಗೆ ಸೋಲದವರನಾರ ಕಾಣೆನೂ ॥
ಜಪವನೆಣಿಸುವವರ ಕಂಡೆ ತಪವನೆಸಗುವವರ ಕಂಡೆ ।
ಚಪಲನೇತ್ರಿಯರನು ಬಿಟ್ಟರಾರ ಕಾಣೆನು ॥

॥ ಮತ್ತೆ ॥

॥ **ವೃತ್ತ** ॥ ವಿಶ್ವಾಮಿತ್ರ ಪರಾಶರ ಪ್ರಭೃತಯೋ ವಾತಾಂಬು ಪರ್ನಾಶನಾ ।
ತೇಪಿ ಸ್ತ್ರೀ ಮುಖ ಪಂಕಜಂ ಸುಲಲಿತಂ ದೃಷ್ಟ್ವಾಪಿ ಮೋಹಂ-
ಗತಾಃ ॥

ಶಾಲ್ಯಾನ್ನಂ ಸಘ್ರುತಂ ಪಯೋದಧಿಯುತಂ ಯೇ ಭುಂಜತೆ
ಮಾನವಾಃ ।

ಇವಳ ಭೋಗಕ್ಕೆಳಸಿ ನಾನಾ ಸಮುದ್ರಾಂತ
ದವನಿಪಾಲರು ತಮ್ಮ ಬಹು ಜನ್ಮದಾ ।
ತವೆ ಸುಕೃತ ಮುಖದಿಂದೆ ನಡಿತಂದು ಪಡುಗವಿಡಿ
ಯುವ ದಾಸಿಯರೊಳೊಂದುವದುಮಘಟಿತಂ ॥ ೩ ॥

ನೀ ಸೊಬಗನಾದುದಕೆ ನಿನ್ನ ಸೌಂದರಕವಳು
ತಾ ಸೋಲ್ತು ಬರಲವಳನತಿಗಳಿವರೆ ।
ಕರದ್ಧೆಣ್ಣ ಕೊಡಬರಲು ಅಳಿಯಗಲ್ವಾಯುಷ್ಯ
ಮಿರುವದೆಂಬಂತೊಲ್ಲೆನೆಂಬುದುಚಿತವೆ ॥ ೪ ॥

ಸ್ತ್ರೀ ಸೌಖ್ಯವೆಗ್ಗಳೆಂದರಿದು ಸರ್ವೇಶ ಬಹು
ಲೇಸಿನಿಂ ತನ್ನರ್ಧದೇಹಮಿತ್ತಂ ।
ಆಸರಮದ್ಯಾಕೆ ನೀತಿಯದುಂಟು ಇಂತು ನಾ
ರೀಸಮಂ ನಾಸ್ತಿ ಶರೀರ ತೋಷಣಂ ॥ ೫ ॥

॥ ಎಂಬುದರಿಂ ॥

ನಾರಿಯರನತಿಗಳಿದು ಸಾರಸೌಖ್ಯಮದುಂಟಿ
ಧಾರುಣಿಯೊಳೆಂದು ನುಡಿಸಾರುತಿರಲು ।
ಆರ್ಯೆಯ್ಯಲದರಂತೆ ಮಾನಸಕೆ ಘನಸೌಖ್ಯ
ತೋರುತಿರಲುರೆ ವಲ್ಲೆನೆಂಬುವದದ್ಯಾಕೈ ॥ ೬ ॥

ಅಲ್ಲಮಾ ನಿನಗೆ ನಾ ಸೌಖ್ಯಮಾಗಲಿಯಂದು
ಸಲ್ಲಲಿತ ಪುರುಷಾರ್ಥಕಾಗಿ ಬಂದೆ ॥ ೭ ॥

ಸಿಟ್ಟು ಮಾಡದಿರು ನಾ ಸ್ಪಷ್ಟ ಪೇಳುವೆನು ಕೈ
ಮುಟ್ಟು ನಾನವಳೆಡಿಗೆ ಬರ್ಪೆನೆಂದು ।
ಅಟ್ಟುಳಿಯದ್ಯಾಕೆ ನಿನ್ನುಗ್ಗಟ್ಟು ತಿಳಿಯದು ಯನಗೆ
ಬಿಟ್ಟು ಬಾಹುವದೊಳಿತೆ ರಾತ್ರಿಯಲ್ಲಿ ॥ ೮ ॥

ನಟ್ಟು ಮಾರನ ಬಾಣಮವಳ ಹೃದಯದೊಳು ಮೊರಿ
ಯಿಟ್ಟು ಧೃತಿಗೆಟ್ಟಾಲಿಪರಿರುತಿಹಳು ।
ಇಷ್ಟೇಕೆ ಪಂಥ ನಾನೆಷ್ಟು ಪೇಳಲಿ ನಿನಗೆ
ಸೃಷ್ಟಿಯೊಳು ಮನ್ಮಥನ ಪೋಲ್ವರೂಪಾ ॥ ೯ ॥

ಪನ್ನೀರ ಪುಷ್ಪಮಾಲಿಯ ಚಂದ್ರಮನ ಜೋತ್ಸ್ನಿ
ಚನ್ನೆ ಕಂಡಂಜುವಳು ಚಲುವರರಸಾ

ಎಂಬುದರಿಂದೆ ಯತ್ನ ಮಾಡುವೆನು; ಮ್ಯಾಲೆ–

ಯಸ್ಮಿನ್‌ದೇಶೇಯದಾಕಾಲೇ ।
ಯನ್ಮುಹೂರ್ತೇಚಯದ್ದಿ ನೇ ॥
ಹಾನಿವೃದ್ಧಿ ಶೋ ಭಾತಿ ।
ತತ್ತತ್ಕಾಲೆ ಭವಿಷ್ಯತೀ ॥

ಗದ್ಯ :– ಎಂಬುದರಿಂದೆ, ದಾವದುದಾವಕಾಲಕ್ಕಾಗುವದು ಅದು ಆಗುವದು ಚಿಂತಿಯಂ ಬಿಡು, ನಾಹೋಗಿ ಬುದ್ಧಿಯನು ವೆಚ್ಚಿಸಿ, ಅವನ ಮಚ್ಚಿಸಿ ನಾ ಕರತಂದು ಕೊಡುವೆನೆನೆ ಈಕಿ ಅಂಥಾಳೆ :–

॥ಮಾತು ॥ ಮಾಯೆ ॥ ಅಮ್ಮಾ ಅವನ ಮುಖವನು ನಾ ನೋಡದೆ ಎನ್ನ ಶರೀರದೊಳ್ ಜೀವವಿರದು, ತೀಕ್ಷ್ಣದಿಂದೆ ಆ ಅಲ್ಲಮನ

॥ ತಂಗಿ ನಗಾರಿ ಕಟಿಗೆ ನಾ ॥

ತಂದು ನೀ ತೋರೆ । ಇಂದು ಜೀವಿಸಲಾರೆ ॥
ಸುಂದರಾಂಗಿ ಪೌರ್ಣೇಂದು ವದನೆ ಕರ ॥ ಪಲ್ಲ ॥

ಕುಂದ ಮುಗುಳ ಜಾಜಿ । ವೃಂದಾದವು ಸೂಜಿ ।
ಚಂದನದ ಪುಡಿ । ಆದವೆನಗೆಕಿಡಿ । ತಂದು ನೀ ತೋರೆ ॥ ೧ ॥

ಸುದತಿ ಚಂದ್ರಮಕಿರಣ ಸೋಂಕಲೆನಗೆ ಮರಣ
ಮಧುರಾನ್ನಕೂಟವೆನಗೆ ಕಾಳದೂಟ । ತಂದು ನೀ ತೋರೆ ॥ ೨ ॥

ಬಂದು ಸೋಂಕಲು ಘಾಳಿ । ಯದೆ ಮನ್ಮಥದಾಳಿ
ಕಂದಿದೆ ಶಿವ ವೃಷಭೇಂದ್ರ ಪ್ರಭುವರನ । ತಂದು ನೀ ತೋರೆ ॥ ೩ ॥

॥ ಚೂಲಿಕಾ ॥ ಇಂತು ಹಂಬಲಿಸುವಳ ಸಂತೈಸಿ ಸಕಳಿ ಮಗು
ಳುಂತಡಿಯದಲ್ಲಮಪ್ರಭುವಿನೆಡಿಗೆ ।
ಚಿಂತಿಸುತೆ ಬಂದು ತಾನಿಂತೆಂದಳೆಲೆ ರಾಜ
ಎಂತೆಂಬೆ ಪೇರ್ಮರಳುಗೊಂಡುದೊ ನಿನಗೆ ॥ ೧ ॥

ಪಲವನರಿದಡದೇನು ಬಲು ಚಲ್ವನಾಗೇನು
ಕುಲವಂತನಾಗಿ ನೀ ನಿರಲೇನಲ್ಕೈ ।
ಚಲುವ ಲಲನಿಯರ ವಲುಮಿಲ್ಲದಿರಲುವನರ್ಥ
ನೆಲದಲ್ಲಿ ಇಂತಿಷ್ಟು ಕಳೆಗಳೆಂದಿರಲು ॥ ೨ ॥

ಒಳ್ಳೆವರ ಕಾಡುವದು ಒಳಿತಲ್ಲವನುಮಾನ
ವಿಲ್ಲ ನೀ ಬಾರದಿರೆ ಮರಣ ನಿಶ್ಚಯವು ॥ ೧೭ ॥

ಹರದಿಯಳ ಬಳಿಗೆ ಹರುಷದಿ ಬಂದು ಕುಚಗಳಂ
ತೆರಿದು ನಖದಿಂದಿರಿದು ತುಟಿಯ ಚಿಪ್ಪಿರಿದು
ಇರದೆ ಹಾತೊರಿದು ಕಲಿಗಳನೊರಿದು ಮುದ್ದಿಸುತೆ
ನೆರಿದು ಸೌಖ್ಯದಿ ಬೆರಿದು ಸೊಗಸಿಪ್ಪುದು ॥ ೧೮ ॥

ಎಂದು ಬಹುತರದಿಂದೊಡಂಬಡಿಸಿ ಮಗುಳಿತಾ
ಬಂದು ಸೌಂದರಿ ಮಾಯಿಗಿಂತೆಂದಳು ।
ಚಂದದಿಂ ಪದುಳಮಿರು ರಾತ್ರಿ ನಿನ್ನೆಡಿಗೆ ತಾ
ಬಂದಪೆನವಶ್ಯಮೆಂದೆನಗೊರಿದನು ॥ ೧೯ ॥

॥ **ಗದ್ಯ** ॥ ಈ ಪ್ರಕಾರದಿಂದೆ ಸಕಳಿಯು ಮಾಯಿಯ ಮನ ನಿರ್ಧರವಾಗುವಂತೆ ಪೇಳಿ ಸಂತೈಸಿ ಬಂದಳಿತ್ತಲತ್ತೇನಾಯ್ತೆಂದರೆ.

॥ **ವಾರ್ಧಕ.ಷ** ॥ ಇತ್ತ ಕೈಲಾಸದೊಳು ಶಾಂಭವಿಯು ವಿಮಳಿಯೆನಿ
ಪುತ್ತಮ ಸುರುದ್ರಕರ್ನಿಕಿಯ ಕರಿವುತ್ತಾಗ
ಮರ್ತ್ಯಲೋಕಕ್ಕೆ ಪ್ರಭುವಿನ ಪೈಜೆಗೆ ಮಾಯಿಯಂ ಕಳುಹಿ ಕೊಟ್ಟಿರ್ದೆವಿ ।
ಮತ್ತವಳು ತಳುಹಿದಳು ನೀ ಪೋಗಿ ಈರ್ವರನು
ದಾತ್ತ ಕಲ್ಪಣದಿಂದೆ ಕೂಡಿಸಿವರುಭಯತರ
ಸತ್ಯನಿಧಿ ಕರದು ತಾಯಿಲ್ಲಿಗೆಂದಟ್ಟಿದಳು ವಿಮಳಿಯಂ ಭೂತಳಕ್ಕೆ ॥ ೧॥

ಬಳಿಕೆ ಶೃಂಗಾರ ಸಂಯುತಳಾಗುತಾ ವಿಮಳಿ
ಥಳಥಳಿಪ ಪುಷ್ಪಕದಿ ಮಂಡಿಸುತೆ ಭೂತಳ
ಕ್ಕಿಳಿದಳಾ ಕೈಲಾಸವತ್ತಣಿಂ ಬನವಸಿಗೆ ಬಂದಳತಿ ವೇಗದಿಂದಾ ।
ವಳ ಪೊಕ್ಕು ಅರಮನೆಯ ಬರುತಿರಲ್ ಕಾಣುತ್ತೆ
ಗಳಿಲದಿಂ ಮಾಯಿ ತಾನೆರ್ದು ಅರ್ಧಾಸನದೊ
ಳೊಳವಿನಿಂ ಕುಳ್ಳರಿಸಿ ಮತ್ತೆ ಕಾಲೋಪಚಾರರಿತು ಸತ್ಕರಿಸಿ ಬಳಿಕಾ ॥ ೨ ॥

ಎಲ್ಲಿಂದ ಬಂದಿಯೌ ನಿನ್ನ ಪೆಸರೇನಕ್ಕ
ಗೆಲ್ಲವೆತ್ತಿಹದಾವಸ್ಥಾನ ನೀನೀಗಮ
ತ್ತಿಲ್ಲಿ ಬಂದಿಹ ಕೃತ್ಯಮೇನೆಂದು ಪ್ರೀತಿಯಿಂ ಮಾಯಿ ಬೇಸಗೊಳಲಾಗಳು।
ಪಲ್ಲವಾಧರೆ ಕೇಳು ತ್ರೈಜಗನ್ಮಾತೆ ನಿ

ಕಣ್ಣುಮರಿಯಲಿ ಇರ್ದಡೇನು ಕಾಣಿಸಬಹುದು
ಅನ್ನೋದಕವ ಮರಿದು ನಿನ್ನ ಸ್ಮರಿಸುವಳು ॥ ೧೦ ॥

ಅರಘಳಿಗಿ ತಡದರವಳ್ಹರಣಮುಳಿಯದು ನಿನ್ನ
ಚರಣಕೆರಗುವೆನೇಳೊ ಅಭಯವ್ಹೇಳೊ ।
ಕರಗುತದೆ ಕಂಡವರ ಕಠಿಣ ಮನಸಾದರು
ಕರುಣವೆಳ್ಳಿನಿತಿಲ್ಲ ಕಲ್ಲಕಲ್ಲ ಮನಸಲ್ಲಾ ॥ ೧೧ ॥

ಮತ್ತೆ ನೀನಿಲ್ಲದೀ ಹೆಣ್ಣು ಜನ್ಮವ ಸುಡಲೆ
ನುತ್ತೆ ಧಿಃಕರಿಸುವಳು ಧೈರ್ಯಮಳಿದು ।
ಹುತ್ತಿನೆಡಿಗೈದಿ ಸರ್ಪವನ್ಹಿಡಿವೆನೆಂಬುವಳು
ಕತ್ತಲಿಯ ಕಂಡು ಕಮ್ಮಡುವ ಧುಮುಕುವಳು ॥ ೧೨ ॥

ವ್ಯಾಕುಳತ್ವದಿ ವ್ಯಾಘ್ರನಿದಿರ್ನಡಿವೆನೆಂಬುವಳ
ನೇಕ ಸಂತಾಪದಿಂ ವಜ್ರಸೋಸೀ ।
ತಾಕುಡಿವೆನೆಂಬುವಳು ಅಗ್ನಿಕುಂಡದೊಳಗಿ
ನ್ವ್ಯಾಕೆ ಬೀಳುವೆನೆಂಬಳೆಲೆಯಲ್ಲಮಾ ॥ ೧೩ ॥

ಅಲಗನ್ಹಾಯಲ್ಯೊ ಮತ್ತೆ ಅಡವಿ ಸೇರಲ್ಯೊಯನ್ನ
ಚಲುವ ಕಂಠಕ್ಕೆ ಉರಲ್ಹಾಕಿಕೊಳ್ಳಲ್ಯೊ ।
ಘಳಿಗಿ ಸೈರಿಸಲಾರೆ ಗಂಧಪರಿಮಳವ್ಯಾಕೆ
ಚಲುವನಲ್ಲಮ ಬಾರನೆಂದು ಚದುರಿ ॥ ೧೪ ॥

ಭೋರ್ಗರಿದು ನಿಟ್ಟುಸುರ್ಗಳಿವಳಾತಾಪಮಿ
ನ್ನಾರ್ಗೆ ಪೇಳಲಿಯಾನು ನಿನಗಲ್ಲದೆ ।
ಅಡವಿ ಕಿಚ್ಚಿಡಿಗೊಂಡಯರಳಿ ಮರಿಯಂತೆ ನೀ
ರ್ಮಡುವಿನಿಂ ಹೊರಗಿಟ್ಟ ಮೀನ ಮರಿಯಂತೆ ॥ ೧೫ ॥

ಅಲಮಲನೆ ಮರುಗುವಳುಯಲೆಲೆಕೇಳಲ್ಲಮಾ
ಪಳಿದು ಪರಿಹಾಸ್ಯದಿಂ ಪದರದಿರು ಯನ್ನ ।
ನೀ ಕಂಡರಿನ್ನೆಷ್ಟು ಮರುಗುವಿಯೊ ಕಂಡಜನ
ರೀಕಿ ಉಳಿಯುವದು ದುರ್ಲಭವೆಂಬರು ॥ ೧೬ ॥

ಸುಳ್ಳಾಡಿ ಹೊಟ್ಟಿ ಹೊರಕೊಂಬುವಳು ನಾನಲ್ಲ
ಸುಳ್ಳಿಗೆಂದಡೆ ಜೀವ ಝುಲ್ಲೆಂಬುದು ।

ಅರಿಸಿದಡಂಗೀಕರಿಸಳಿವಳಿಗಾವ್
ತೆರವೆಸಗಲಿಯಂದಳುವಾಗೆ ॥ ೨ ॥

ವಚನ :–

'ಮೂರ್ಖರಿಗೆ ಬುದ್ಧಿಯನು ನೂರ್ಕಾಲ ಪೇಳಿದಡೆ ।
ಗೋರ್ಕಲ್ಲಮ್ಯಾಲೆ ಮಳಿಗರಿಯಲಾಕಲ್ಲು ।
ನೀರ್ಕೊಳ್ಳುದಲ್ಲ ಸರ್ವಜ್ಞ ॥ ೧ ॥

॥ **ವೃತ್ತ** ॥ ಅಜ್ಞಃ ಸುಖಮಾರಾಧ್ಯಃ । ಸುಖತರಮಾರಾಧ್ಯತೇವಿಶೇಷಜ್ಞಃ ॥
ಜ್ಞಾನಲವ ದುರ್ವಿದಗ್ಧಃ । ಬ್ರಹ್ಮಾಪಿ ನರಂ ನರಂಜಯತಿ ॥ ೧ ॥

ಎಂಬುದರಿಂದ ಮೂರ್ಖಜನರ ಬ್ರಹ್ಮನಪ್ಪನಿಂದಾದಡೂ ವಡಂಬಡಿಸಲಾಗದೆಂದಿರಲು ಇವಳನಾವ ಪ್ರಯತ್ನದಿಂದೊಡಂಬಡಿಸಲಿ.

॥ **ಆರ್ಯಂ** ॥ ಮರಳ್ಯಾ ಶಿವಿಗೇನಾಡಲಿಯೀಕಿಯ
ಮರುವಿಗೌಷುಧೇನುಂಟು ಬಲು ।
ಕರುಕಷ್ಟಾಯಿತ್ತೆನ್ನಕಾರ್ಯಶೇ
ಖರಮಾಗದು ನಾನರಿದೆ ಖಲೂ ॥ ೩ ॥

॥ ಯಾಕೆಂದಡೆ ॥

॥**ಶ್ಲೋಕ**॥ ಯವ್ವನಂ ಧನ ಸಂಪತ್ತಿ । ಪ್ರಭುತ್ವಮವಿವೇಕತಾ ॥
ಏಕೈವಮಪ್ಯನರ್ಥಾಯ । ಕಿಮುಯುಕ್ತಂಚತುಷ್ಟಯಂ ॥ ೧ ॥

॥ ಮರ್ಕಟಸ್ಯ ಮಧುರಾಪಾನಂ ॥

॥ **ಮಾತು** ॥ ಎಲೆ ಮಾಯಿಯೆ, ರಣಾಂಗಣದಲ್ಲಿ ವೀರ ಕೈಮುರಿದಡೆ, ಕೆಲದಲ್ಲಿರ್ದ ಓರ್ವ ಸುಭಟನಿರಿಯಂದು ಸೂಚಿಸಲು ಕಾದಬೇಕಲ್ಲದೆ ಅವಗೆ ಕನಲಬಹುದೇ. ಅಂತೆ ಚನ್ನಾಗಿ ಪ್ರತಿಜ್ಞೆಯೊಳು ಚಂಡಿಕಿ ನಿನ್ನ ಕಳುಹಿದ ಹೊಲಬನರಿಯದೆ ಭ್ಯಾಸತ್ತು ಬೈದಡೆ ಪಾರ್ವತಿಗೆ ದೂರಾಗುವಿಯೌ ನೋಡು ಸಾರಿದೆನೆನಲು

ಅದಕ್ಕೆ ಮಾಯಿ ಅಂಥಾಳೆ.

॥ **ಚೂಲಿಕಾ** ॥ ಆದಡಿರದಾಲಿಸಾ ವಿಮಳಿ ನಾ ಸಂಜೆನಿಸಿ
ಈಧರಿಯೊಳಾಯ್ತು ಷೋಡಶಮಹಾವರ್ಷಂ
ವೇದಿಸಲ್ಕಿಲ್ಲಿವರಿಗಾನು ಮಧುಕೇಶ್ವರಮ
ಹಾದೇವಿಯರ ಶ್ರದ್ಧಿಯಿಂ ಭಜಿಸುವೆ ॥ ೧ ॥

ನ್ನಿಲ್ಲಿ ನೋಡಲ್ಕೆನ್ನನಟ್ಟಿದಳು ಮದಕೆ ನಾ
ಮಲ್ಲೆಗಂಗಳೆ ಬಂದೆ ನಿನ್ನ ಕಾರ್ಯ ವಿಚಾರನರಿವ ಘನ ತವಕದಿಂದ ॥ ೩॥

॥ ಆ ಮಾತಿಗೆ ಮಾಯಿ ಅಂಥಾಳೆ ॥

॥**ಚೂಲಿಕಾ**॥ ಬದುಕಿದೆನಮ್ಮಾ ನಾನೇನು ಕೃತಪುಣ್ಯಳೊ
ಮುದದಿಂದಲೀಗ ತ್ರೈಜಗದಾಂಬಿಯು
ಸುದತಿಬಡದೇಹಿಗಳಮ್ಯಾಲದೇಂ ಕಾರಣಂ
ವದವಿದಾನಂದದಿಂ ಕೃಪೆಯಾದಳೌ ॥ ೧ ॥

ಎಂದು ಅಶ್ಚರ್ಯ ಹೃದಯಾಭ್ಯುದಯಳಾಗಲಾ
ನಂದದಿಂ ವಿಮಳಿ ಮಾಯಿಯೊಳೆಂದಳು ।
ಹರನ ವಾಲಗದಲ್ಲಿ ಪ್ರಭುವೆಂಬ ಗಣನಾಥ
ತ್ವರಿತ ಗತಿಯಿಂ ಬರಲು ದಂಡಧರರೂ ॥ ೨ ॥

ದುರುಳ ಮಾಯಾಕೋಳಾಹಳನೆಂದುಲಿವುತಿರೆ
ಪರಮೇಶ್ವರಿಯಳದಕೆ ಕುಪಿತಳಾಗಿ ।
ಧರಿಗೆ ಕಳುಹಿರಿ ಇವನಿಗಿಷ್ಟೊಂದು ಹಿರಿದಿನ
ಬಿರಿದು ಬಿಂಕಗಳ್ಯಾಕೆಯಂದು ಜರೆದು ॥ ೩ ॥

ಪರಮೇಶ್ವರಿಯಳವನ ನಿನ್ನಿಂದೆ ಸೋಲಿಸಲು
ಧರಿಗೀರ್ವರಂ ಕಳುಪಿದಳು ಮರದಿಯಾ ।
ತರುಣಿ ಮಾಯಾಂಗನಿಯೆ ಅರುವಿನುರು ಕುರುವಡಗಿ
ಇರುವರೆ ನೀ ಹೆಗ್ಗ ನರರಂತೆಯೂ ॥ ೪ ॥

॥ ಅದಕ್ಕೆ ಈಕಿ ಅಂಥಾಳೆ ॥

॥ **ಆರ್ಯ** ॥ ಎತ್ತಣಂಬಿಕಿಯು ನಾನೆತ್ತಲು ಪ್ರಭು
ವೆತ್ತ ಮೇಣು ನೀನೆತ್ತಲುರೆ ।
ಮಿಥ್ಯ ಮಾತುಗಳನಾಡುವರೇ ನೌ
ಗೊತ್ತರಿಯದೆ ಬಂದೀಗಲುರೆ ॥ ೧ ॥

॥ ಅದಕ್ಕೆ ವಿಮಳಿ ಅಂಥಾಳೆ ॥

ಹರ ಹರ ಮರ್ತ್ಯದ ಮರವಿಯಂತುಟೊ
ಸ್ಮರಣಿಗಾಣಳೀ ತರುಣಿಗೆ ।

॥ ಪತ್ರಂ ನೈವ ಯದಾ ಕರೀರವಿ ಪೆ ದೋಷೋ ವಸಂತಸ್ಯಕಿಂ ॥

॥ **ಚೂಲಿಕಾ** ॥ ಎಂಬಂತೆ ನಿನ್ನ ಮರವಿಯು ನಿನ್ನ ಕಾಡುತಿರೆ
ಶಾಂಭವಿಗೆ ಶಂಕರಗೆ ಕುಂದಿಡುವರೆ ।
ರೋಗದ ಚಿಕಿತ್ಸಮರಿಯದ ವೈದ್ಯನಿಗೆ ರೋಗ
ಪೋಗದಿರಲದಕೆ ಮರ್ದೇನು ಮಾಡುವದು ॥ ೨ ॥

ತಿಗದುಪರಿಯೊಳ್ಪೊಯ್ಯೆ ಮೊಗಪಲ್ಗಳುದುರುವವೆ
ಬಗಿಯೆ ಪುತ್ತವನ್ಹೊಯ್ಯೆಲುರಗಳಿವುದೆ ।
ಜಗಮರಿಯಲಂತೆ ನೀ ಭೋಗದಿಚ್ಚೆಗೆ ಮಚ್ಚಿ
ಅಗಜೆ ಶಂಕರರ ತಾಮಸದಿ ಜರೆಯುವರೆ ॥ ३ ॥

॥ **ಮಾತು** ॥ ವಿಮಳೆ :– ಅಮ್ಮಾ ನೀ ಭೋಗದಿಚ್ಚೆಗೆ ಮೆಚ್ಚಿ ಮರವಿಯಂಬುದು ಹೆಚ್ಚಿ ಮರುಳಾಟವನು ಬಿಚ್ಚಿ ಕೂತಿಯಲ್ಲಾ ನೀಬಲು ಹುಚ್ಚಿ. ಇನ್ನಾರೆ ಎನ್ನ ಮಾತವನು ನಚ್ಚಿ ; ಪಥಕೆ ಹಚ್ಚಿ, ಹರಭವಾನಿಯರ ಜರಿವರೆ

ಪದ :– ॥ ಮಾಸೋದಿ ತಮ ॥

ನಂಬುನಂಬಲೆ ನಾರಿ । ಸಾಂಬನು ಸರ್ವಾಧಾರಿ ॥ ಪಲ್ಲ ॥

ವರಮೃಕಂಡುಸುತ । ಹರನ ಚರಣ ಸ್ಮರಿಸಿ
ಪರಮ ಜೀವಿತತ್ವ । ವೆಂದನೆನಲ್ ಸ್ಮೃತಿಯು ॥ ೧ ॥

॥ **ಭಾಮಿನಿ** ॥ ಪಿಂದೆ ವಹಿಲೊದ್ಭಟ ಚಾಮರರಿಗೆ
ಅಂದದಿಂದುರೆ ಮಲಯರಾಜಗೆ
ನಂದಿವಾಹನ ನೊಲಿಯನೇವನಜಾಕ್ಷಿ ಪಿಟ್ಟಾಂಬಿ ।
ಸಂದಭಕ್ತಿಗೆ ಮಚ್ಚಿ ಮಣ್ಣವ
ತಂದು ಹಾಯ್ಕನೆ ಚೋಳರಾಯಗೆ
ಬಂದು ಕನಕ ವೃಷ್ಟಿಗರಿಯನೆ ಸರ್ವರಕ್ಷಕನು ॥ ೧ ॥

ಪರಿಭವಿಸಿ ಷಡ್ರುಚಿ ಪದಾರ್ಥವ
ಭರದೊಳಂಬಕಳವಳನು ಸುರಿಯಿಸಿ
ಪುರಹರನು ಚನ್ನಯ್ಯನೊಡನೆಯಖಿಳರರಿಯಲ್ಕೆ ।
ತರುಣಿಕೇಳ್ಬಾಣಾಸುರನಿಗೊಲಿ
ದಿರನೆ ಬಾಗಿಲ ಕಾಯ್ದುತಂ ಮೇಣ್
ಕರಸುನೇತ್ರಗಳೀಯನೇಕವಿಬಾಣದಾಸರ್ಗೆ ॥ ೨ ॥

ಎನ್ನಯ ಮನೋಭಿಷ್ಟಮಾಗೌರಿ ಶಂಕರರು
ಚನ್ನೆ ಕೇಳೌ ಸಲ್ಲಿಸಿದುದರಿಯೆನು ।
ಇನ್ನುರೆ ಲಲಾಟ ಲಿಖಿತೆರೇಖಾ ಪರಿಮಾಣೊ
ನನ್ನಿಯುನಶಕ್ಯತೆ ಎಂಬ ವಾಕ್ಯಂ ॥ ೨ ॥

ಷಡದಷ್ಟಲ್ಲದೇಂ ಬರ್ಪುದೇಹರಹರಾ
ಮೃಡಚನ್ನಸೋಮೇಶ್ವರಾಯಂದಿರಲ್ ।
ಮಡದಿ ತತ್ಕರ್ಮವೆ ಅಧಿಕವೆಂಬುದು ನಿತ್ಯ
ಯಡೆವಿಡದೆ ತಸ್ಮೈನಮಃ ಕರ್ಮಣೇ ॥ ೩ ॥

॥ **ಶ್ಲೋಕ** ॥ ಬ್ರಹ್ಮಾಯೇನ ಕುಲಾಲವನ್ನಿಯಮಿತ್ತೋ ಬ್ರಹ್ಮಾಂಡಭಾಂಡೋದರೆ ।
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋಮಹಾಸಂಕಟೇ ॥
ರುದ್ರೋಯೇನ ಕಪಾಲಪಾಣಿ ಮಟಕೇಬಿಕ್ಷಾಟಣಂ ಕಾರಿತಃ ।
ಸೂರ್ಯೋಬ್ರಾಹ್ಮ್ಯತಿ ನಿತ್ಯಮೇವ ಗಗನೆ ತಸ್ಮೈ ನಮಃ ಕರ್ಮಣೇ॥ ೧॥

॥ **ವಾರ್ಧಕ** ॥ ಗಾಲಿಯೊಂದೇರಥಕೆ ಜೋಡಾಗಿ ಪೂಡುವಡೆ
ಸಾಲದೇಳೆ ಹಯಂ ನಡಿಸುವಡೆ ಸಾರಥಿಗೆ
ಕಾಲಿಲ್ಲ ಲೋಕಯಾತ್ರಿಯನೊಲ್ಲೆನೆಂದಡಾಗದೆ ತನಗೆ ತಿರುಗಲ್ಯಾಕೆ ।
ಕಾಲಗತಿಯಂಮಿರಬಾರದೆಂಬುದಂ
ಮೂಲೋಕಕೆಚ್ಚರಿಸುವಂತೆ ಪೂರ್ವಾಚಲದ
ಮ್ಯಾಲೆ ಮೂಡಿದನೆಂದಿನವೊಲಬ್ಜಬಾಂಧವಂ ನಯನಾಂ ।–
ಧವಂದಗೆಡಲು ॥ ೧ ॥

॥ **ಮಾಯೆ** ॥ ಹೀಂಗೆಂದಿರಲಾಗಿ ಎನ್ನ ದೈವದಲ್ಲಿರ್ದುದಾಗುವದು ಆ
ಲೋಕಾಧೀಶ್ವರರ ಭಜಿಸಿ ಫಲವೇನಮ್ಮಾ ಎನಲು
ಮಿಮಳಿ ಅಂಥಾಳೆ.

॥ **ಚೂಲಿಕಾ** ॥ ಮಧುಮಾಸಸಮಿನಸಲ್ಕಖಿಳ ತರುಲತೆಗುಲ್ಮ
ಮುದವಡೆದು ಸುದಳಸುಮಫಲಗಳಾಂತು ।
ಅಧಿಕತ್ವದಿಂದಿರಲು ಕರವೀರತರುಪತ್ರ
ಮುದರಲೇಂದೋಷಮಾ ಮಧುಮಾಸಕೆ ॥ ೧ ॥

॥ ಶ್ಲೋಕ ॥ ವೇದಾದ್ವೇಧಾಭ್ರಮಂಚಕ್ರೇ । ಕಾಂತಾಸುಕನಕೇಷು ಚ ॥
ತಾ ಸುತೇಷ್ವಪ್ಯನಾಸಕ್ತೋಃ । ದ್ವಿತೀಯ್ಯ ಪರಮೇಶ್ವರಃ ॥
॥ ಸಾಕ್ಷಾದ್ಭರ್ಗೋಃನರಾಕೃತಿಃ ॥ ॥ ೧ ॥

ಈ ಗುಣಂ ದ್ವಿತೀಯ ಪರಶಿವನಿಗಲ್ಲದೆ ಮತ್ತೆ
ಬ್ಯಾಗದಿಂ ನರದೇಹಿಗಳಿಗಾಹುದೆ
ಸೋಗಿಗಂಗಳೆ ಕೇಳು ಪ್ರಭುವಲ್ಲದಡಿಯುಮ
ತ್ತೀಗ ನಿನ್ನೆರ್ದಿಯ ಗೆಲ್ಲುವರೊಳರೆ ಭುವಿಯೊಳ್ ॥ ೪ ॥

ಕಾಲಹರ ಪ್ರಭುವಲ್ಲದಡೆಯು ನಿನ್ನಯ ಚಿತ್ತ
ಸೋಲದೌ ಮಾಯಿಯವನಂ ತೋರಿಸು ।
ಶಾಲದಿಂದವನಾರು ನಾಂಪರೀಕ್ಷಿಸುವೆ ನಿದ
ಕಾಲಸ್ಯಮಾಕೆಲೆ ಮಹಮ್ಮಾಯಿಯೆ ॥ ೫ ॥

॥ ಶ್ಲೋಕ ॥ ಯಥಾ ಚತುರ್ಭಿಃ ಕನಕಂ ಪರೀಕ್ಷತೇ ।
ನಿಘರ್ಷಣಚ್ಛೇದನ ತಾಪ ತಾಡನ್ಯೈಃ ॥
ತಥಾ ಚತುರ್ಭಿಃ ಪುರುಷಂ ಪರೀಕ್ಷತೇ ।
ಕುಲೇದಶೀಲೇನಗುಣೇನಕರ್ಮಣಾ ॥ ೧ ॥

॥ ಚೂಲಿಕಾ ॥ ಎಂಬ ನೀತಿಂದಲವನಂತಸ್ತಮರಿವೆನೆಲೆ
ರಂಭಿಯೆನಲಂತಾಗಲೆಂದು ಮಾಯಿ ।
ತುಂಬಿಸದೆ ಮಧುಕೇಶ್ವರಾಲಯಕೆ ಬಂದು ತಾ
ಸಂಭ್ರಮದಿ ನೃತ್ಯಕ್ಕೆ ನಿಲ್ಲುತಾಗೆ ॥ ೬ ॥

ಅಲ್ಲಮನ ಕರಿಯಿಸಲನಂತ ಮನ್ಮಥರಮಹ
ಸಲ್ಲಲಿತ ಸುಸ್ವರೂಪವನ್ನಳಿವುತೆ ।
ನಿಲ್ಲದ್ಯೆತರಲು ತೇಜಃಪುಂಜದಿಂದೆಯಾ
ಪಲ್ಲವಾಧರೆ ವಿಮಳೆ ಕಂಡೆಂದಳು ॥ ೭ ॥

॥ಅಹಹಾ॥

ಮುನ್ನ ಗಿರಿಜಾ ಸುಕಲ್ಯಾಣಕ್ಕೆ ಪರಶಿವಂ
ಚನ್ನಮಂಗಳವೇಷಧರಿಸಿರ್ದನೂ ।
ಎನ್ನುದೇನಾವೇಷಮಲ್ಲ ಮೇಣುದ್ವಾರಕಿಗೆ
ನನ್ನಿಯಂ ಸೌಂದರ್ಯ ವಿಗ್ರಹಂದಾಳ್ದು ॥ ೮ ॥

ಪೊಗಿರ್ದನಾ ವೇಷಮಲ್ಲ ನಾ ಬಲ್ಲೆನಿದ
ಭೋಗಿಭೂಷಣ ಮತ್ತೆದಾರುಕವನಕ್ಕೆ ।

॥ ಮದನನ ಕದನಕೆ ॥

ಮಾನಿನಿಮಣಿ ಮಹದಾನಿ ಸರ್ವೇಶ್ವರ
ತಾನೊಲಿಯನೆ ಒಮ್ಮನದಿ ಭಜಿಸಲು ॥ ಪ ॥

ಶಿವನಾಣೆಯ ನಿಟ್ಟ ಸತಿಯ ಮುಟ್ಟದಿಹ
ಶಿವಭಕ್ತ ತಿರುನೀಲಕಂಠನಿಗೆ ।
ಶಿವನೊಲಿದಿಯ್ಯನೆ ಪದಿನಾರೊತ್ತರವಂ
ನವನಿಧಿಯಕ್ಷವರನಿಗಿಯ್ಯನೆ ಕೇಳ್ ॥ ೧ ॥

॥ **ಆರ್ಯ** ॥ ದೇವಿ ಮನ್ಮಥನ ರಕ್ಷಿಸಳೆ ಮಹ
ದೇವಿ ಬಾಣನಾತ್ಮಜೆ ಉಷೆಗೆ
ಭಾವಿಸಲುರೆಯನಿರುದ್ಧನನಿಯ್ಯಳೆ
ಸೇವಿಸಲುರೆವಮ್ಮನದಿ ಮಿಗೆ ॥ ೧ ॥

॥ ಭಾವಗ್ರಾಹಿ ಮಹೇಶ್ವರಃ ॥

॥ **ವಾಗ್ಮಾಲಾ** ॥ ಮಾಯೆ ಇಂತಪ್ಪ ಸರ್ವೇಶ್ವರ ಸರ್ವಮಂಗಲಿಯರಿಗೆ ಮನೋಭ್ರಾಂತಿನಿಂದೆ ಜೆರಿವರೆ ಮುಂಗಾಣದೆ.

॥ ಈಕಿ ಅಂಥಾಳೆ ॥

ಚೂಲಿಕಾ : ಅಂತರಂಗವನರಿದಳೊಡನೆ ಮರಿಮಾಂಜಲ್ಯಾ
ಕೆಂತೆನುತ್ತಿಂತೆಂದಳಾ ವಿಮಳಿಯೊಳ್ ।
ಕಂತು ಸಮರೂಪನಲ್ಲಮನ ಕಾಣುತ್ತೆನಗೆ
ಭ್ರಾಂತಿಗೊಂಡೆನು ನಾನು ಪ್ರಾಂತಗಾಣದೆಲೆ ॥ ೧ ॥

ಎನ್ನಸುವು ಕಡಿಯವಸ್ಥಿಯೊಳಿರ್ಪುದೌ ವಿಮಳಿ
ಇನ್ನೇವೆನೆನ್ನ ಪರಿಪಾಲಿಸೆನಲು ।
ತನ್ನ ಮಾನಸದೊಳಿಂತೆಂದಳೀಧಾತ್ರಿಯೊಳು
ಮುನ್ನುರೆಪಿತಾಮಹಂ ನಿರ್ಮಿಸಿದನೆರಡಂ ॥ ೨ ॥

ಕನಕ ಕಾಂತಿಯರೆಂಬ ಘನವಸ್ತುಗಳನವಕೆ
ಮನವೆಳಸಿದರು ತ್ರಿಲೋಕದೊಳಿಲ್ಲವೆಂದು ।
ಎನಿತೆಂಬೆನವಗಳ್ಗನಾಶಕ್ತಿಯುಳ್ಳವಂ
ಘನತಿಯಿಂದೆರಡನೆಯ ಪರಮೇಶ್ವರಲ್ತೆ ॥ ೩ ॥

॥ ಯನ್ನ ನೋಡು ಬಾ ॥

ನಿರಂಜನನಾದ ॥ ಪಲ್ಲ ॥

ಮಂಜು ನಂಜುಗೊರಳರೂಪ
ಗಂಜಳಗುಂಜಾಟಗಂಡು ।
ಕಂಜಸುಮುಖಿಗರ್ವವನಾ
ಭಂಜಿಸುವೆನೆನುತ್ತೆ ನಿರಂಜನನಾದ ॥ ೧ ॥

ಶಕ್ತಿಬಂದು ಯನ್ನ ನಿ
ಶಕ್ತಿಯನ್ನು ಕಂಡು ಮರಳಿ ।
ಭಕ್ತಿಯುಕ್ತಿಯುಕ್ತವಹ ಪ್ರ
ಸಕ್ತಿಗಾಣೆನೆನುತೆ ನಿರಂಜನನಾದ ॥ ೨ ॥

ಕಾಲಗಳಿಯಲ್ಯಾಕೆ ಪ್ರಮಥ
ಜಾಲವನಾ ಹೋಗಿ ಪೊರಿವ।
ಕಾಲವಲ್ಲವೆಯನುತ್ತೆ
ಫಾಲನೇತ್ರರೂಪ ನಿರಂಜನನಾದ ॥ ೩ ॥

ವಿರಹ ತಾಪದಲಿಯವಳ
ವರಗಿಸುತ್ತೆ ಕೊರಗಿಸುತ್ತೆ ।
ಪರಮ ಪುರುಷ ಪ್ರಭುವರೇಣ್ಯ
ಕರಮರ್ದಳಿಯುಳಿದು ನಿರಂಜನನಾದ ॥ ೪ ॥

ಕನಕಗಳ ಪುರೇಂದ್ರ ರುಂದ್ರ
ಚಿನುಮಯ ಶ್ರೀ ಶಿವ ವೃಷೇಂದ್ರ ।
ಮನಕತಿ ತಾಪವನು ಮಾಯಿ
ಗನುವಿಂಬೆಳಯಿಸುತೆ ನಿರಂಜನನಾದ ॥ ೫ ॥

॥ **ಚೂಲಿಕಾ** ॥ ಇಂತು ಪ್ರಭುರಾಜ ನಿರ್ವಯಲಾಗೆ ನೆರದ ಜನ
ರಿಂತೆಂದರೇನಿದೇನಿರ್ದಿರ್ದು ಮತ್ತಂ ।
ತಾಂ ತವಕದಿಂ ಮೃದಂಗ ವಿಮುಕ್ತ ನಾಗೆತ್ತ
ಲುಂ ತಳರಿದನೊ ಅಲ್ಲಮಾಂಕರಯದಿ ॥ ೧ ॥

ಸುರಚಾಪದಂತವನ ವಿಗ್ರಹಂ ನಿರ್ವಯಲ
ಮಿರದಾದುದಿದು ಕಲಿಯುಗಕ್ಕೆ ಕೌತುಕವು ।

ಸಾಗಿರ್ದ ಶೌರ್ಯರೂಪಂಬಲ್ಲೆನದುಮಲ್ಲ
ವೀಗಹರನಾವಯುಗದೊಳಗೆ ಈ ರೂಪಂ ॥ ೯ ॥

ತೊಟ್ಟಿರ್ದನೊ ಯನಗೆ ಸಂಕೋಚ ಮಾಯ್ತರಿಯ
ಲೆಷ್ಟೆಂಬೆನಿವನ ಚಾರಿತ್ರ ವೈಚಿತ್ರಂ ।
ಈ ಧಾತ್ರಿಯೊಳೆಂದು ಬೆರಗಾಗಿ ಶಿರದೂಗಿ
ಸಾದರದಿಲಾಸ್ಯಮೆಸಗೆನೆ ಮಾಯಿಗೆ ॥ ೧೦ ॥

ಸುಂದರಿಯು ನೃತ್ಯಕ್ಕೆ ನಿಲ್ಲಲಲ್ಲಮನು ವನ
ಪಿಂದೆ ಮರ್ದಳಿಗೊಂಡು ಕೌಶಲ್ಯದಾ
ಅಂದದಿಂ ಗೀತಪ್ರಬಂಧಗಳ ವೃಂದವಂ
ತಂದು ತಂದೊಂದೊಂದು ನುಡಿಸುತಿರಲು ॥ ೧೧ ॥

ನಿಂದಜನ ಭಿತ್ತಿಯೊಳು ಬಂಧಿಸಿದ ಪ್ರತಿಮೆಗಳ
ಚಂದದಿಂ ಕಣ್ಣೆವೆಗಳಂ ಹಳಚದೆ ।
ಸುಂದಾಗಿ ಮರವಿಯೊಳು ದುಂದಾಗಿ ಹರ್ಷರಸ
ವಂದುಕೊಂದಾಗಿ ಬಲು ಹೆಚ್ಚಿ ಮನಮಚ್ಚಿ ॥ ೧೨ ॥

ಕಡುಜಾಣೆಗೆ ನಿಜಾಂಗುಲ ಕದಪಿಗೊಯಿದ್ದಚ್ಚಿ
ಬಿಡದೆ ಬರು ಹೋಗುಮಾರ್ಗವನು ಮುಚ್ಚಿ ।
ಯಿಡಿದು ಒರ್ಬರಕಿಂದಲೊರ್ಬರುರೆ ಮುಂದಾಗಿ
ನಡಿದು ಬಂದಾಲಿಸುತ್ತಿರಲಾಗಳೂ ॥ ೧೩ ॥

ನೆರೆ ಇವನ ಮರ್ದಳಿ ಬಜಾವಣಿಗೆ ಮಾಯಿ ಸೂ
ತ್ರರಿದ ಬೊಂಬಿಯ ತೆರದಿ ಬೀಳುತೇಳುತ್ತೆ ।
ವರಗತಿಗೆ ಸರಿಬೀಳದಾಡುತಿರೆ ವಿಮಳಿ
ತ್ವರದಿಂದಲಿಂತೆಂದಳೇನ ಬಣ್ಣಿಸುವೆ ॥ ೧೪ ॥

ಪರಮಾತ್ಮರೂಪ ಪ್ರಭುವೀತನಹುದೆಂದು ತಾ
ನರಿದಲ್ಲಮನೆ ವೈಯ್ಯನ್ನಿಡಿಯನುತ್ತ ।
ಭರದಿಂದೆ ನೇತ್ರ ಸೌಜ್ಞೆಯ ಮಾಡಲಿವಳೊಯ್ಯ
ನಿರದಾಡುತ್ತಾಡುತ್ತಲವನಮ್ಯಾಲೆ ॥ ೧೫ ॥

ಬರುವಳಂ ಕಂಡು ಪ್ರಭುವಿಂತೆಂದನೆನ್ನೊಲವ
ಧರಿಸಲತಿ ಪಂಥದಿಂ ನೆರೆಯಿರುತ್ತಿರ್ಪಾ।
ಕುರಿಮಾನವರೊಳಾನು ಸಿಲ್ಕುವೆನೆ ಸಾಕು ಯಿ
ನ್ನಿರಲು ನಾ ಬಾರದೆಂದಾಗೆ ಚಿನ್ಮಯನು ॥ ೧೬ ॥

ನಿಟ್ಟುಸುರಗಳಿಯುತ್ತೆ ನಿಬಿಡ ಸಂತಾಪದಿಂ
ಕಟ್ಟಳಿದು ಕಳವಳಿಸಿ ಕಂದಿಕುಂದಿ ॥ ೬ ॥

ಸುಣ್ಣದ ಮಹಾದ್ರಿ ಶರಧಿಯೊಳು ಮುಳುಗಿದಂತೆ
ಬಣ್ಣಳಿದು ಬಾಯಾರಿ ಕಂಪಿಸುತ್ತೆ ।
ಚನ್ನೆಯು ಕಪೋಲಕೆ ಕರಾಂಬುಜವನೊಂದಿಸುತೆ
ದೈನ್ಯದಿಂ ಮಾಯಿ ವಿಮಳಿಯೊಳೆಂದಳು ॥ ೭ ॥

ಎನ್ನ ಕೊಲ್ಲದಿರಮ್ಮಾ ವಿಮಳೆ ಕೈಜೋಡಿಸುವೆ
ಇನ್ನೊರ್ಮೆನಾವಖಿಳವರವನನೋಡೀ ।
ಯನ್ನುದೇನೌ ಬರ್ಪುದೊಳ್ಳಿತವು ಎಂದು ತಾ
ದೈನ್ಯೋಕ್ತಿಯಿಂದೆ ನೆರೆ ಬೇಡಿಕೊಳಲು ॥ ೮ ॥

॥ ಈಕಿ ಅಂಥಾಳೆ ಅದಕೆ ॥

ನಿನಗೆಯು ದುರಾಶತ್ವ ಕಾರಣಲ್ಲವು ಮಾಯಿ
ನೆನದ ಮನದೆಣಿಕಿಕೈಗೂಡದಿನ್ನು ।
ಕನಕರಿಯಿಸುವರೆ ಬಾರದ ಪದಾರ್ಥಕೆ ನೆರದ
ಜನರು ಪರಿಹಾಸ್ಯದಿಂ ಕೈಕುಟ್ಟಿ ನಗರೆ ॥ ೯ ॥

॥ **ಶ್ಲೋಕ** ॥ ಅತಿ ರೂಪಹತಾ ಸೀತಾ । ಅತಿಗರ್ವಾದ್ದಶಾ ನನಃ
ಅತಿದಾನದ್ ಬಲಿಚಕ್ರೀ । ಅತಿ ಸರ್ವತ್ರ ವರ್ಜಯೇತ್

ಕಂಡು ನಗುವರ ಮುಂದೆ ಕಾಲೆಡಹಿ ಬಿರ್ದಂತೆ
ಭಂಡಳಾಗುವರೇನೇ ಪುಂಡರೀಕಾಕ್ಷ ।
ಪುಂಡ ಪ್ರಭುರಾಜ ತಾನೆಲ್ಲಿ ಹೋದನೊ ನಾವು
ಕಂಡ ಕಂಡಲ್ಲ್ಯರಸಲವನು ಸಿಗಲುಂಟೆ ॥ ೧೦ ॥

ಎಂದೆನಲದೇನಾದಡೊಳ್ಳಿತೊಂದಾವರ್ತೆ
ಯೊಂದುಳಿಯದಂತೆ ಶೋಧಿಸಿ ಬಾಹುವೆ ।
ಇಂದೆನ್ನ ಮಾತಾಲಿಸಾ ವಿಮಳಿಯಂದು ಬಹು
ವಂದದಿಂ ದೈನ್ಯವಡಲೊಳ್ಳಿತೆಂದು ॥ ೧೧ ॥

ನಿಖಿಳ ನಾರಿಯರನೊಡಗೊಂಡು ಮಾಯಿಯು ವಿಮಳಿ
ಸಕಳಿಯರರಣ್ಯತರುಲತೆಗುಲ್ಮ ಗುಹೆಯ ।

ಅರರೆಯನುತತ್ತ ಗಜಿಬಜಿಸಿಯಿದ್ದರಿತ್ತಲಾ
ತರುಣಿ ಮಾಯಿಯ ಮುಖಂ ವಿಮಳಿ ನೋಡಿ ॥ ೨ ॥

ತಾನೆಂದಳೆಲೆ ಮಾಯಿ ನಿನ್ನಯ ಮಹಾಪಂಥ
ಹೀನಮಾಯ್ತಿನ್ನದೆಲ್ಲಿರುವ ನೌ ನೀನು ।
ಮತ್ತತ್ವದಿಂದಿರ್ದಿಯಲ್ಲದೆ ಮಹಜ್ಞಾನ
ಚಿತ್ತದಿಂ ಪ್ರಭುವೆಂದು ತಿಳಿಯದಾದಿ ॥ ೩ ॥

ಬಹುಕಾಲಮಿರ್ದು ತಾ ಪೋದೆನಿನ್ನೇನಿರ್ಪು
ದಹಿವೇಣಿ ಕೈಲಾಸ ಕೋಹಿಲದಿಂ ನಡಿಯ
ಕಾನನಕೆ ಕಾತ ಬೆಳದಿಂಗಳಂತಾಯಿತೀ
ಗೇನಂಚಿನ ಜಗಳಸ್ತನಯುಗ್ಮದಂತೆ ॥ ೪ ॥

ಮಾನಿನಿಯೆ ನಿನ್ನ ಯವ್ವನ ನಿರರ್ಥಕಮಾಯಿ
ತ್ತೇನೇವೆ ಚಿಂತಿಸದಿರಮ್ಮ ಮನದೊಳ್ ।
ತಾನದಾವುದು ಆಗಲುಳ್ಳದದು ಘಟಿಸುವದು
ಹಾನಿವೃದ್ಧಿಗಳು ತತ್ತತ್ಕಾಲದಿ ॥ ೫ ॥

॥ **ಶ್ಲೋಕ** ॥ ಯಸ್ಮಿನ್ ದೇಶೇಯದಾ ಕಾಲೇ । ಯಸ್ಮುಹೂರ್ತೇಚಯದ್ದಿನೇ ॥
ಹಾನಿವೃದ್ಧಿ ಯಶೋಭಾತಿ । ತತ್ತತ್ಕಾಲೇ ಭವಿಷ್ಯತೀ ॥ ೧ ॥

ಆಯಾತಮಾಯಾತಮಪೇಕ್ಷಣೀಯಂ ।
ಗತಂಗತಂ ಸರ್ವಮುಪೇಕ್ಷಣೀಯ್ಯಂ ॥

ಅಲಂ ವೃಥಾಖೇದನ ಮೋದನಾಭ್ಯಾಂ ।
ನಲಂಘನೀಯಾನಲಿನಾಸನಾಜ್ಞಾ ॥ ೨ ॥

ಗತ ಶೋಕನ ಕರ್ತವ್ಯಂ । ಭವಿಷ್ಯಂ ನೈವ ಚಿಂತಯೇತ್ ॥
ವರ್ತಮಾನೇಷು ಕಾಲೇಷು । ವರ್ತಯಂತಿ ವಿಚಕ್ಷಣಾಃ ॥ ೩ ॥

॥ **ಕಂದ** ॥ ಅಹುದಹುದಾಗದ್ದಾಗದು
ಬಹುದುಃಖಂಗೊಳಲಿಬ್ಯಾಡ ಬಪ್ಪುದು ತಪ್ಪದು ।
ವಿಹಿತ ವಿಧಿಕಲ್ಪಜಗಕಂ
ವಹಿಸುವದೇ ಸತ್ಯ ನಿತ್ಯ ಬುದ್ಧಿ ವಿಶಾಲರ್ ॥ ೪ ॥

॥ **ಚೂಲಿಕಾ** ॥ ಇಂತೆನಲ್ ಗ್ರಹಣ ಸಂಘಟಿಸಿರ್ದ ಚಂದ್ರನೋಲ್
ಕಾಂತಿಮಯಮುಖಪದ್ಮ ಶೋಷಣಮದಾಗಿ ।

॥ **ಗದ್ಯ** ॥ ॥ ಆಮ್ಯಾಲೆ ಹೀಂಗಂಥಾಳೆ ತನ್ನ ಕಾರ್ಯಗೋಸ್ಕರವಾಗಿ ಪ್ರಭುವಿಗೇ ॥

॥ ಮಂಗಲವತುಲ ಪ್ರಕಾಶಾ ॥

ಬಾರೊ ಮನಿಗೆ ಯೇ ಕಾಂತಾ । ನಿನ್ನ ಸಾರಿದವಳು–
ಗುಣವಂತಾ ॥ ಪಲ್ಲ॥

ಕರಿಯ ಬಂದೆ ನಡಿ ಮನಿಗೆ । ಯಿದುಥರವಲ್ಲವು ಛಲ ನಿನಗೆ ॥
ಬರುವದುಚಿತ ಈ ವನಕೆ । ನಡಿಪರಿಹಾಸ್ಯವು ಸ್ತ್ರೀ ಜನಕೆ ॥ ೧ ॥

ನಾರಿಯರುಸುರೊಳಿತಲ್ಲಾ । ಈ ಚೋರ ಬುದ್ದಿ ಬಿಡು ಸಲ್ಲಾ ॥
ಮಾರನಾಟವಂಬಲ್ಲಾ । ಬಗಿಗಾರ ನಿನ್ನೊಳೆರವಿಲ್ಲಾ ॥ ೨ ॥

ಅಲ್ಲಮ ನಿನಗೇನಂದೇ । ತಪ್ಪಿಲ್ಲದ್ಯಾಕೆ ನೀ ಬಂದೆ ॥
ನಿಲ್ಲದೆ ನಡಿ ಮುದದಿಂದ । ಥರವಲ್ಲ ತಡವು ಬ್ಯಾಡೆಂದೆ ॥ ೩ ॥

ಬೇಡಿಕೊಂಬೆ ಪ್ರಭು ನಿನಗೆ । ಈಡ ಮಾಡುವರೆ ಮದನನಿಗೆ ॥
ಕಾಡುವದೊಳಿತವೆ ನಿನಗೆ । ಇದು ಪಾಡಲ್ಲವು ಬಾ ಮನಿಗೆ ॥ ೪ ॥

॥ ಈ ಪ್ರಕಾರದಿಂದೆ ॥

॥ **ಆರ್ಯಂ** ॥ ಮಡದಿಯಾಗ ಸವಿನುಡಿಯಿಂ ಬಳಲಿದಿ
ನಡಿಯಡವಿಯೊಳಿರ್ಪದುವಿಹಿತೆ ।
ಕಡುಬಾಡಿದ ಮುಖ ಮಂಡಲವೆನುತಂ
ಬಿಡದೆ ಕರಿಯಲಾ ಪ್ರಭು ನಗುತೆ ॥ ೧ ॥

॥ ಹೀಂಗಂಥಾನೆ ॥

॥ **ಭಾಮಿನಿ ಷ**॥ ಬಿಡು ಮರುಳೆ ಮನಿಯೇನು ಮಠವೇ
ನಡವಿಯೇನೂರೇನು ಬ್ಯಾರೊಂ
ದೆಡಿಗಳುಂಟೇ ಸರ್ವಗತನಾಗಿಹ ಮಹಾತ್ಮಂಗೆ ।
ನುಡಿವುದೇ ಶಿವತತ್ವದಾಗಮ
ನಡಿವುದೇ ಸನ್ಮಾರ್ಗ ಶರಣರ
ತೊಡಕುತಾನೀ ಪರಿಕಣ ಎಲೆ ಮಾಯಿಕೇಳೊಲಿದು ॥ ೧ ॥

॥**ಚೂಲಿಕಾ**॥ ಕಾಲಾಗ್ನಿ ರುದ್ರನತಿಪ್ರೀತಿಯಕಳ್ಳುವನೆ
ಕಾಳಕೂಟವನುಂಡು ಬದುಕುವನಿಗೆ ।

ಪ್ರಕಟಮಲ್ಲದ ಸ್ಥಾನ ಪುರದುರ್ಗ ಪಳ್ಳಕೊ
ಳ್ಳಖಿಳ ಸ್ಥಲಗಳ ಬಿಡದಲರಸುತಿರಲು ॥ ೧೨ ॥

ಪಾದಂಗಳೊಡಿದು ರೋಹಿತ ಚಿಮ್ಮುತಿರೆಯದರ
ವೇದನೆಯ ಮರಿದು ಪಸಿವು ತೃಷೆಯು ನಿದ್ರಾ।
ವೇದಿಸದೆ ಬಿಸಲು ನೆಳಲೆಲೆಂಬುದಾಗರಸುತ್ತೆ
ಶೋಧಿಸುತೆ ಬರುತಿರಲ್ಚಿರಕಾಲವರಿಗ್ಯೂ ॥ ೧೩ ॥

ತಪಕೆ ತಾವ್ ಕೂತಿಹ ತಪೋಧನರು ಪಂಚಾಸ್ತ್ರ
ನ ಪರಿಮಿತ ಸೈನ್ಯ ನಡಿತಂದುದೆಂದೆನುತೆ।
ಜಪಹೋಮಹವನಾದಿಗಳ ಬಿಟ್ಟು ಧೃತಿಗೆಟ್ಟು
ವಿಫುಲತರ ಮತಿಗೆಟ್ಟು ಓಡುತಿರಲೂ ॥ ೧೪ ॥

ಗುರುವರ ಪ್ರಭುರಾಜ ವರ್ಣಿಗಳ ಶ್ರಮಗಂಡು
ಕರುಣರಸಮುಕ್ಕಿ ಓಡದಿರೆನ್ನುತಾಗೆ।
ನೆರೆಯಭಯಮಿತ್ತುವಾವ್ರತಿಗಳೊದ್ಯುಸ್ಯದಿಂ
ತರುಣಿಯರ ಮುಂದೆ ಕಂಗೊಳಿಸಿದಾಗೆ ॥ ೧೫ ॥

॥ **ಗದ್ಯ** ॥ ॥ ಆಗ್ಗೆ ಸ್ತ್ರೀಯರು ಕಂಡು ಬಂದು ವಿಮಳಿ ಮಾಯಿಯರಿಗೆ ಅರುಹಲಾಗಿ ॥

॥ **ಆರ್ಯ** ॥ ವಿಮಳಿ ಸಕಳಿ ಮಾಯಾಂಗನಿಯರು ಅ
ಲ್ಲಮಸ ಸುತ್ತೊರಿದು ನಿಲ್ಲಲುರೆ।
ಕಮಲನೇತ್ರೆ ಸದ್ವಿಮಲಗಾತ್ರೆ ಮಾಯ್
ಶಮನಿಸದಾಗಿಂತೆಂದಳುರೆ ॥ ೧ ॥

ಪನ್ನೀರವ ನೀಯರೆ ಘನಸಾರಸು
ಚನ್ನವೀಟಕಿಯಗೊಡರಿವಗೆ।
ಕನ್ನೆಯರೀಯರೆ ಕಟ್ಟು ಬುತ್ತಿಯೀ
ತುಣ್ಣಲಿಕ್ಕೆ ಯಂದಳುವಾಗೆ ॥ ೨ ॥

ಯನ್ನುದೇನು ಈ ಪುಣ್ಯ ಪುರುಷನಿಂ
ದುನ್ನತಟವಿ ಕಂಡೆನುತೆ।
ತನ್ನ ಪರಿಶ್ರಮ ಮರಿದಲ್ಲಮನಂ
ನನ್ನಿಯಿಂದಲುಪಚರಿಸುತ್ತೆ ॥ ೩ ॥

ಬಾಲೆ ವೈದ್ಯದ ಹಂಗವನಿಗುಂಟೆ ನಿನ್ನ ಮಹ
ಕೀಳು ಮೋಹಕ್ಕಾನು ಸಿಲ್ಕಿದಪನೆ ॥ ೧ ॥

ಎನ್ನ ನರನೆಂದು ನೀ ಕಂಡ ಬಳಿಕಂ ನಿನಗೆ
ಇನ್ನು ಸಿಲ್ಕುವೆನೆ ಮಾಗಿಯೊಳು ಕೋಕಿಲವು ।
ನನ್ನಿಯಿಂ ಸ್ವರವ ಬಯಸಿದರುಂಟೆಯಾ ವಿಧದಿಂ
ಬನ್ನ ಬಟ್ಟಾಲ್ಪರಿಯನು ಬಂದಪೆನೆ ॥ ೨ ॥

ನೆರೆಯನ್ನಮನಬಂದ ಪರಿಯೊಳು ವಿಲಾಸದಿಂ
ಚರಿಸಿದಪೆ ನೀನೆನ್ನ ಸೋಲಿಸುವೆನೆಂದು
ಬರಿದೆ ಪಲ್ಲಿರಿದಡೆ ಮರಳಿ ಬಂದಪುದುಂಟೆ
ಮರದಿಯಾ ಪಿಂದಣ ಮಹಾ ಪಂಥಮಂ ॥ ೩ ॥

॥ **ಗದ್ಯ** ॥ ಹೀಗೆಂದು ಪ್ರಭುವರನು ನುಡಿಯಲದಕ್ಕೆ ಮಾಯಿಯು ಕರಾಳ ಕೋಪವನು ತಾಳಿ ಘರ್ಜಿಸುತ್ತೆ ಹೀಂಗಂಥಾಳೆ :

॥ **ಶ್ಲೋಕ** ॥ ಬ್ರಹ್ಮ ವಿಷ್ಣುಶ್ಚ ರುದ್ರಶ್ಚ । ಈಶ್ವರಶ್ಚ ಸದಾಶಿವಾಃ ॥
ಸ್ತುವಂ ತು ಸತತಂ ದೇವಿ । ಮಾಯಾ ಚರಣ ಸನ್ನಿಧೌ ॥ ೧ ॥

ಎಂಬುದು ಪ್ರಸಿದ್ಧಮಾಗಿರಲು.

॥ **ಲಾವಣಿ** ॥ ನೀ ಯೇನನಾಡುವಿಯೊ ಧೂರ್ತಯತಿವರರ
ಧ್ಯಾನಗೆಡಿಸಿ ಧೃತಿಗಳಿದೆ ನಿನ್ನ ಪಾ
ಡೇನು ವೇದನಾಲ್ಕೆನ್ನ ಪಾದದನ
ವೀನಗೆಜ್ಜೆಯಾಗುಲಿವುತಿಹವು ಕೇಳ್
ಸಾನುರಾಗದೆಲ್ಲಸ್ಮಾಸುರನಂ
ನಾನಳಿದೆನು ನಾರಾಯಣಿ ಪೆಸರಿಂ
ಮೌನಿ ಪರಾಶರನನ್ನು ಗೆಲ್ದೆನಾ
ಮಾನಿನಿ ಮತ್ಸ್ಯ ವಿಗಂಧಿಯಳಿಂ ಮ
ತ್ತೇನಂಬೆನು ಹರ ತನು ತಲಿಯಿಗಳಂ
ನಾನುರೆ ಶೆಳದಾಶಿವನಂ ಗೆಲ್ದೆನು
ಆನಂದದಿ ಹರಿಯುರವ ಸೆಳದೆನುರೆ
ಮಾಣದ ಜನ ಜಿಹ್ವೆಯ ಸೆಳದೇಂಭಗ
ಕೂನಿಟ್ಟೆನು ಸುರವರನಂಗ ದೊಳುರೆ
ಕ್ಷೀಣ ರೋಗಿ ಮಾಡ್ದೆನು ಚಂದ್ರಮನಂ
ಧ್ಯಾನಿಸಿ ಗುರುವಿನ ಪತ್ನಿಗೆಳಸಿ ನೆರೆ
ಕ್ಷೋಣಿಯೊಳುರೆ ಸುಗ್ರೀವನಸತಿಯಿಂ

ಜಾಣ ವಾಲಿ ಸಾಹಸವಂ ಗೆಲ್ದೆನು
ನೀನೆನಗೆ ತೃಣವೆಂದೆ ನಾ ಮುಂದೆ
ಮತಿಹೀನ ಕೀಚಕನ ಕೊಂದೆದುಸ್ವಾಸ
ಮಾನವನುಗಳಿದೆ ಛಲದಿಂದೆ ಭರದಿಂದೆ
ದಾನವರಾವಣನ ಕೊಂದೆ ಒಂದೊಂದೇ
ಕೂನಿಟ್ಟು ಪೇಳುವಡೆ ಜ್ಞಾನಿಗಳಿಗೆಯನು
ಮಾನ ಜೈಸಿನಾ ಬಂದೆ ನಾ ನಿನ್ನ ॥

॥ **ಪ್ರಾಸಿನ ಮಾತು** ॥ ಯಲೆಲೆ ಅಸಮ ಅಲ್ಲಮಾ, ನಿನ್ನ ನಿರ್ಮಾಯನೆಂಬ ಹೆಸರ ನಾನಳಿಯದಿರ್ದಡೆ, ಈ ವಸುಧಿಯೊಳು ನಾ ಹೆಸರಾದ ಮಾಯಿಯೆ? ದೇವದಾನವರ ಕಸವೆಂದು ಕಂಡವಳು ನಿನ್ನ ವಶ ಮಾಡದುಳಿದರೆ ಎನ್ನ ಕುಪ್ಪಸದೊಳಗಿಹವು ಸ್ತನವೇ? ಅಲ್ಲಲ್ಲ. ನೀನೆನಗೆ ಘನವೇ? ಅಲ್ಲಲ್ಲ.

॥ **ಶ್ಲೋಕ** ॥ ಬ್ರಹ್ಮ ವಿಷ್ಣು ರುದ್ರಶ್ಚ । ಈಶ್ವರಶ್ಚ ಸದಾ ಶಿವಶ್ಚ ॥
ಸ್ತುವಂತು ಸತತಂ ದೇವೀ । ಮಾಯಾ ಚರಣಸನ್ನಿಧೌ ॥ ೧ ॥

ಎಂಬದಿರಲು–

॥ **ಚೂಲಿಕಾ** ॥ ನಿನ್ನ ಕಾಠಿಣ್ಯಮನ ಬೆಣ್ಣೆ ಸರಿಮಾಡಿ ನಾ
ನಿನ್ನು ಕರಗಿಸಿಗೆದ್ದು ಗಿರಿಜಾತೆಯಡಿಗೆ ।
ಭಿನ್ನ ಮಿಲ್ಲದೆ ನಿನ್ನ ಕೊಂಡೊಯ್ಯದಿರ್ದೊಡಾಂ
ಹೆಣ್ಣೆನಾನಲ್ಲಮಿವುಸ್ತನಗಳಲ್ಲಾ ॥ ೧ ॥

॥ ಅದಕ್ಕೆ ಪ್ರಭುವರ ಅಂಥಾನೆ ॥

ಮಝುರೆ ಪೂತುರೆ ಮಾಯಿ ನಿನ್ನಯ ಸ್ತನವೆರಡು
ರುಜ ವಡೆದ ಕೀತಕುರುಗಳ ಗ್ರಂಥಿಯೊ
ನಿಜದಿ ನೀನಲ್ಲಲ್ಲವೆನಲಿಲ್ಲ ಶುಂಠಿಯೊ
ತಚಿವಿಜಿಯ ನುಡಿ ವಿಮಳಿಯೊಳು ಪೇಳೆನುತ್ತೆ ॥ ೨ ॥

ಜೋತಿರ್ಮಯಾಂಗನಂತರ್ಧಾನನಾಗೆ ಬಳಿ
ಕಾ ತರುಣಿಮಾಯಿ ಭ್ರಾಂತಿಯಳಾಗಿ ವಿಮಳಿ
ಓತು ಮುಖವಂ ನೋಡಲಿಂತೆಂದಳೆಲೆ ಮಾಯಿ
ಈತನೊಳಪೇಕ್ಷಮಿನ್ನ್ಯಾತಕಮ್ಮಾ ॥ ೩ ॥

॥ **ವಚನ** ॥ ಕುಂಡಲಿಯನರಿದಾತ ಮಿಂಡಿಯರಿಗೊಲಿವನೆ ।
ಖಂಡಶರ್ಕರಿಯ ಮೆಲುವಾತ ಮುಗ್ಗಿ ದೊಣ ।
ಹಿಂಡಿಗೆಳಸುವನೆ ಸರ್ವಜ್ಞ ॥ ೧ ॥

॥ **ಗದ್ಯ** ॥ ಯಂಬುದರಿಂದೆ, ಇನ್ನ ನಡಿ ನಡಿ ಮಾಯಿ ಆದುದು ನಿನಗಪಾಯಿ, ಸುಡು ಸುಡು ನಿನ್ನ ಬಾಯಿ

ಯಾಕೆಂದರೆ :–

॥ **ಚೂಲಿಕಾ** ॥ ಮೇರುಗಿರಿಯಂ ತ್ರಾಸಿನೊಳು ತೂಗಲಹುದೆ ಮೇ
ಣ್ಮಾರನಿಕ್ಕಲ್ಬಹುದೆ ಸುರಪಥಕ್ಕೆ ।
ನೀರಧಿಗೆ ಪೆಂಟಿಯೊಂದಿಕ್ಕಿ ಮುಚ್ಚಲ್ಬಹುದೇ
ಆರ್ಯೆಯ್ಯಲದರಂತೆ ನಿರ್ವಿಷಯನಾ ॥ ೪ ॥

ನಿಲವನರಿಯುತ್ತೆ ನಿನ್ನೊಶ ಮಾಡಿಕೊಲಳಹುದೆ
ಸತಿ ದೇಹಿಯಲ್ಲದೆ ವಿದೇಹಿಯನಿಪಾ ।
ಚಲುವ ಪ್ರಭುರಾಜನ ವಿಲಾಸ ವಿಭ್ರಮದಿಂದೆ
ವಲಸಿಕೊಳ್ಳಲ್ವಸೆಮೆ ವೈಶಿಕದೊಳು ॥ ೫ ॥

ಯಾಕೆಂದರೆ–

॥ ಅನುಭವ ಮುದ್ರೆ ॥

ಶಿಂಬಿಯು ರಂಬಿಯು ಅಂಬಲಿ ಅಮೃತ
ಕಂಬಳಿದುಕೂಲವು ರೋಧನವು ।
ತುಂಬುರ ಗಾನಗಳೆಂಬವು ಸದೃಶಗ ।
ಳೆಂಬಿರುವನೇ ನಿಜ ವಿರತನೂ ॥ ೧ ॥

॥ **ಭೋಗ.ಷ** ॥ ಸಮವು ಭೋಗ ರೋಗ ಯುಗವು
ಸಮವು ಗೀತ ಶೋಕ ಯುಗವು
ಸಮವು ನೃತ್ಯಮರ್ಕಟಾಟ ಸುಖವುದುಃಖವು ।
ಸಮವು ರಜ್ಜು ಫಣಿಗಳುಭಯ
ಸಮವುಲೋಷ್ಟ ಕನಕ ಮುಭಯ
ಸಮವು ಹಗೆಯು ಕೆಳೆಗಳೆಂಬ ಪ್ರಭು ವಿರಕ್ತನೂ ॥ ೨ ॥

॥ **ಚೂಲಿಕಾ** ॥ ನಿನಗೆ ಸಿಲ್ಕದೆ ಪೋದ ನಿನ್ನರಲನರ್ಥಮೆಂ
ದನುವಿನಿಂ ಮಾಯಿಯ ನೊಡಂಬಡಿಸಿ ವಿಮಳಿ
ವನಿತೆಯೊಡಗೊಂಡು ಪುಷ್ಪಕವನಾರೋಹಿಸುತೆ
ಘನತವಕದಿಂದೆ ಸಾಂಬಲೋಕಕೈತಂದರ್ ॥ ೧ ॥

॥ **ವಾರ್ಧಕ. ಷ** ॥ ಬಂದು ಕಿಕ್ಕಿರಿಗಿರಿದ ಒಡ್ಡೋಲಗದ ನಡುವೆ
ನಿಂದು ಬೆಮರುಕ್ಕುತ್ತೆಯಂದಳಾಪ್ರಭುವರನು

ಬಂದೆನಗೆ ಸಿಲ್ಕದಲೆ ಪೋದನೆಂದಳುಮಾಯಿ ಗೌರಿಯೊಳು ರೋಧಿಸುತ್ತೆ
ನಂದಿವಾಹನನು ನಸುನಗುತೆ ಗಿರಿಜಾತೆಯೊಳ
ಗೆಂದ ಮುಖ ಕಂದಿ ಕುಂದಿದುದ್ಯಾಕೆ ದೇವಿಯನೆ
ಬಂದುದೇಪಂಥ ನೀ ಮಾಡಿದಾಟವದಲ್ಲೆ ನಿನ್ನ ಮುಸ್ತಿಯೊಳವನುರೆ ॥ ೧ ॥

ಯನ್ನ ಭಂಗಿಸಿ ಪೋದ ನಿನಗೆ ಮಾನೆಲ್ಲಿಯದು
ನಿನ್ನ ಸತಿಯಳ ಮಾನವನ್ಯರಿಂಕೊಳ್ಳಿಸಿದಿ ।
ಯನ್ನುದೇನುಂಟಿನ್ನು ಚಾರಚೋರರ ಗುಣವುನನ್ನಿಯಂಬುವರದಾರು ॥ ೨ ॥

॥ ನಿನ್ನ ಗುಣ ನೆಟ್ಟಗಿರ್ದರಲ್ಲವೆ ॥

॥ **ಚೂಲಿಕಾ** ॥ ಮರುಳ ಸಂಗಡಿಗ ಶಿಸುವಧಿಗ ಜಾತಿವಿಹೀನ
ನೆರೆ ನಿನ್ನ ನಂಬಿರ್ದ ಬ್ರಾಹ್ಮಣನ ತಲಿಯ ।
ತರಿದಿಕ್ಕಲಿಲ್ಲವೇಪರೋಪಕಾರಿಯನಿಪ
ಹರಿಮಗನ ಸುಡಲಿಲ್ಲವೇಮತ್ತೆಯಾ ॥ ೧ ॥

ಯಮನ ಶೂಲದೊಳಿರಿದು ಕೆಡಿಹಾಯ್ಕಲಿಲ್ಲವೆ
ಮಮಜನಕದಕ್ಷಪ್ರಜೇಶ್ವರನ ತಲಿಯಾ ।
ಮಮತೆಯಿಲ್ಲದೆ ಹೊಡಿಸಲಿಲ್ಲೆರುಕ್ಷಿಪತ್ನಿಯರ
ಕ್ರಮವಳಿದು ಲಜ್ಜೆಗೆಡಶಿದನಲ್ಲವೆ ॥ ೨ ॥

ಅಖಿಳ ಪರಿಮಳವನತಿಗಳಿದು ಮೂರ್ಖತ್ವದೊಳ
ಧಿಕಮೆಂದು ದೇಹದಿ ಸ್ಮಶಾನ ಬೂದಿಯನು ।
ಧರಿಯಿಸಿದಿ ಮಾಡಿರ್ದಲಂಕಾರನತಿಗಳಿದು
ಶರೀರದೊಳ್ ಸರ್ಪಗಳ ತೊಡಿದೊಟ್ಟಿ ॥ ೩ ॥

ಮಣಿ ಮುಕುಟನತಿಗಳಿದು ಮುಡಿಯೊಳು ನೀರ್ಹೊತ್ತಿ
ಯನಿತೆಂಬೆನ್ನೈ ನಿನ್ನ ಮಾಟಸುಡಲೀ ।
ಮಂಗಳದುಕೂಲವನು ಬಿಟ್ಟು ಮೂರ್ಖತ್ವದಿಮ
ತಂಗಪಸಿಚರ್ಮವನು ಪೊದ್ದುಕೊಂಡೀ ॥ ೪ ॥

ಉತ್ತುಮಶ್ವಾದಿವಾಹನವನತಿಗಳಿದು ಮುದಿ
ಯತ್ತನೇರಿದಿಯು ಕಿಡಿಗೇಡಿತನದಿ ।
ಚಂದುಳ್ಳ ವೃಂದಾರಕರನೊಂದುಗೂಡಿರದೆ
ಮಂದಮತಿಭೂತಗಳ ವಡನಾಡಿದಿ ॥ ೫ ॥

ಹೇಮಗಿರಿ ಮಂದಿರವನತಿಗಳಿದು ನೀಪ್ರೇತ
ಭೂಮಿಯೊಳು ಮನಿಮಾಡಿಕೊಂಡಿರ್ಪುಪಾ ।
ಕಾಳಕೂಟವನುಂಡು ಡಗೆಹತ್ತಿ ನೀ ಪೋಗಿ
ಕೀಳು ಕುಲದವನೊಳಂಬಲಿಯನುಂಡೀ ॥ ೬ ॥

ಸಾಲದಲೆ ಸೂಳಿ ಬಿಟ್ಟುದ ಸವಿದು ಸತ್ಪುರುಷ
ನೊಲು ಸಿಂಹಾಸನದಿ ಕುಳಿತುಕೊಂಡು ।
ಬಾಳುವರ ಮೂರೂರ್ಗೆ ಬೆಂಕಿಯಿಕ್ಕಿದಿ ಯನಿತು
ಪೇಳಲ್ಕೆ ನಿನಗುತ್ತುಮೆಂಬುವರದಾರು ॥ ೭ ॥

ಜಾಳಿಗ್ಹೊನ್ನವನೊಬ್ಬನಿಗೆ ಕೊಟ್ಟು ಬಡತನದಿ
ಜೋಳಿಗಿಯ ಪಿಡಿದು ಭಿಕ್ಷವ ಬೇಡಿಕೊಂಡೀ ।
ನೀ ಕದ್ದು ಸಜ್ಜ್ಯನರ ಶೂಲಕ್ಕೆ ಹಾಯ್ಕಿಸಿದಿ
ಪೋಕಜಂಗಮನಾಗಿ ಮುಗೊಯ್ಸಿದಿ ॥ ೮ ॥

ನಂಬಿಯೊಡನಾಡಿ ಕುಂಟಲತನವ ಕಲಿತಿ ನೀ
ನಿಂಬಿಯ ಮಗನ ಮುಸುಲದಿಂದ್ಹೊಯಿಸಿದಿ ।
ಕಿಡಿಗೇಡಿತನವು ನಿನ್ನಲ್ಲಿರ್ದ ಪಾಪದಿಂ
ಸುಡುಗಾಡ ಮನಿಯಾಗದಿರ್ದಪುದೆ ನಿನಗೆ ॥ ೯ ॥

ನಗಿಗೇಡಮಾಡಿದೆಲವೋ ನಾಲ್ವರೊಳಗೆನ್ನ
ಮಗನ ತಲಿಗಡಿದವಗೆ ಮಹಿಮನೆಂಬುವರೆ ।
ಯನ್ನ ರಾವಣಗೆ ಕೊಡುತಿರಲು ಶ್ರೀಹರಿ ಬಂದು
ನಿನ್ನಿಂದೆ ಮಂಡೂಕಸತಿಮಾಡಿಗೊಡನೆ ॥ ೧೦ ॥

ಗನ್ನ ಘಾತಕತನದಿ ಸವತಿಯನು ಬೆಳಸಿಟ್ಟು
ನಿನ್ನ ತಲೆಯೊಳಗೆ ಕುಳ್ಳಿರಿಸಿಕೊಂಡೀ ।
ಇಬ್ಬರ್ಹೆಂಡರನು ಪಾಲಿಸಲಾರಿ ಮತ್ತೆ ನೀ
ಕೊಬ್ಬಿನಿಂ ಬಲ್ಲಳನ ಸತಿಯ ಬೇಡ್ದಿ ॥ ೧೧ ॥

ಜಾಡಬ್ಯಾಡರು ಕುಲಾಲರು ರಜಕರೆನ್ನದೆ
ಕೂಡ್ಹೊಲೆಗಲಸಿ ಕಲುಷಹರನೆನಿಸಿದಿ ।
ಕಡುದುರ್ಗಣವನಿಟ್ಟುಕೊಂಡು ನೀನೆಲ್ಲರಿಗೆ
ಶೆಡಹಬಿಡಿಸೀ ಬಡವನೆಂಬರೆ ಬುಧರೂ ॥ ೧೨ ॥

ನನ್ನಿಂದೆ ಪರಿಪೂಜ್ಯನಾಗಿ ಮತ್ತೀಗ ನೀ
ನೆನ್ನೊಳಗೆ ಹದಿರ ಚದುರಾಡಬಹುದೆ ।
ಯೆಂದು ಪಾರ್ವತಿಯು ಬಹುತರದಿ ಜೆರಿವುತ್ತೆ ಬಾ
ಲೇಂದುಧರ ಶಿವವೃಷೇಂದ್ರನಿಗೆ ಕೋಪಿಸಲೂ ॥ ೧೩ ॥

ಅದಕ್ಕೆ ಈಶ್ವರಂಥಾನೆ :–

॥ ಪದುಮನಾಭಾ ಪರಮಪುರುಷಾ ॥

ಪದುಮ ವದನಿಯೆ ಪರಮಪ್ರೀಯಳೆ
ಹದಿರ ಚದುರ್‍ಯಾಕೆನ್ನೊಳು ।
ಸುದತೆ ನಾ ಕಂಡಿಹುದ ನೊರಿಯಲ್
ಕದನಕಿದಿರಾಂ ಪರೆ ಬಲೂ ॥ ಪಲ್ಲ ॥

ಮೃಡ ನಿರಂಜನ ಪ್ರಭುವರನ ನೀಡು ।
ಜಡರು ಕಾಮಾಸಕ್ತರೂ ॥
ಬಿಡದೆ ಸೋಲಿಸಬಲ್ಲರೆ ಕೇ ।
ಳ್ಮಡದಿ ಭ್ರಾಂತಾಯುಕ್ತರೂ ॥
ನಡುಗಡಲೊಳ್ಹಡಗಡಗಿದಂದದಿ ।
ಕೆಡುವಿ ನೀ ಬಿಡು ಕೋಪವಾ ॥
ಯಡೆವಿಡದೆ ಪಡಿಯವನ ಕೃಪೆಯಂ ।
ನುಡಿದು ಸ್ತುತಿಯಾಲಾಪವಾ ॥ ೧ ॥

ಸರ್ವವ್ಯಾಪಕ ಸರ್ವತೋಮುಖ
ಸರ್ವಲೋಕಾಧೀಶನೂ ॥
ಶರ್ವಸರ್ವರ ಹೃದಯದೋಳ್ ಸರ್ವಜ್ಞ ತಾನೆ ಭಾಸನೂ ।
ಪಾರ್ವತಿ ತಿಳಿಯನಲು ವಿಸ್ಮಯ
ಕೊರ್ವಿಯಾಗಿಂತೆಂದಳು ।
ಸರ್ವಗತನೆನೆಯನ್ನ ಹೃದಯದೊಳಿರ್ವನೆಯಿರುತಿರ್ಪನೂ ॥ ॥ ೨ ॥

॥ ಚೂಲಿಕಾ ॥ ಇಂತು ಶಾಂಭವಿ ಪ್ರಶ್ನಿಮಾಡಲ್‌ಮಹೇಶತಾ
ನಿಂತೆಂದ ಸೂಕ್ಷ್ಮಜಂತುಗಳೊಳಾದಡೂ ।
ಅಂತರಾತ್ಮನು ಮುದದೊಳಿರ್ಪನೆಂದೆನುತಾಗ
ಸಂತೋಷದಿಂ ನಿರೂಪಿಸಲಾಗಳೂ ॥ ೧ ॥

ಮುದದಿಂದೊಡಂಬಡುತ್ತಾಗ ಶಾಂಭವಿ ತನ್ನ ।
ಹೃದಯವಂ ಕೂರುಗುರ್ಗೊನಿಯಿಂದೆ ಬಿಗಿಯಲ್ ॥

॥ ಯನ್ನ ನೋಡು ಬಾ ॥

॥ ತೋರಿದಲ್ಲಿ ॥

ತೋರಿದ ಸುಜ್ಞಾನ ತೇಜ ।
ಸಾರ ಮೂರ್ತಿ ಪೊಳಿವುತಾಗ ।
ಚಾರು ಕೋಟಿ ಸೂರ್ಯ ಪ್ರಭೆಯು ।
ದಾರವನತಿಗಳಿದು, ತೋರಿದಲ್ಲಿ ॥ ಪಲ್ಲ ॥

ಹೃದಯ ಪೀಠದಲ್ಲಿ ಪ್ರಭಾ ।
ನಿಧಿಯು ಮಂಡಿಸುತ್ತೆ ಕೃಪಾ
ಸದಮಲ ರಸಗರಿವು ತಾಗ
ಸುದತಿಯುರವ ಬಗಿಯೆ, ತೋರಿದಲ್ಲಿ ॥ ೧ ॥

॥ **ಚೂಲಿಕಾ** ॥ ಇಂತು ಶಾಂಭವಿಯರಸ್ಥಲವ ಬಗಿದಾಕ್ಷಣಕೆ
ಯಂತೆಂಬೆ ಜ್ಞಾನತೇಜೋಮೂರ್ತಿಯೂ ।
ಶಾಂತಿ ಕಳಿಯಿಂದೆ ಮಹದಾನಂದ ರೂಪ ತಾ
ನಾಂತಾಗ ನಿಷ್ಕಳಂಕತ್ವದಿಂದೆ ॥ ೧ ॥

ನೆರೆ ಕೋಟಿ ಮಾರ್ತಂಡ ಪ್ರಭೆಯ ಕೀಳ್ಪಡಿಸುತ್ತ
ಲಿರದೆ ಹೃತ್ಕಮಲ ಮಂಟಪದಲ್ಲಿಯೂ ।
ಪರಿರಾಜಿಸುತ್ತಿರಲು ಕಂಡು ವಿಸ್ಮಯಳಾಗಿ
ಪುರಹರನಿಗಿಂತೆಂದಳಾಗ ಶಂಕರಿಯೂ ॥ ೨ ॥

ಯಲೆ ದೇವ ಚಿನ್ಮಯ ಚಿದಾನಂದ ಪ್ರಭುವರಂ
ಸತಿ ನಿನ್ನ ಹೃದಯಾಗ್ರದಲ್ಲಿರ್ಪನೆ ।
ಕಲುಷಹರನುಂಟೆಂದುರುಸ್ಥಲವನುರೆ ಬಿಗಿಯೆ
ಚಲುವ ತನ್ಮೂರ್ತಿ ತವೆ ಮೂರ್ತಗೊಂಡಿರಲೂ ॥ ೩ ॥

ಅದಗಂಡವಳ ಪರಿಜ್ಞಾನೋದಯಾಗಿ ಗದ
ಗದನಡುಗಿ ಭೋರೆಂದು ಬೆಮರ್ದುಭಯದಿಂ ।
ವಿದಿತ ಪರವಶಗೊಂಡು ಶಿವನಂಕವಂ ಬಿಟ್ಟಿ
ಳಿದು ಮತ್ತೆ ಪ್ರಭುನಾಮಮಂತ್ರ ಸ್ಮರಿಸಿದಳು ॥ ೪ ॥

ರಾಗ:– ಅಸಾವೇರಿ ॥ ಧೃಪದ ॥

॥ ಗೋಕುಲ ಅಂಬುದರ ವರ್ಜಿ ॥ ತಾಳ :– ತ್ರಿವಿಡಿ ॥

ಪಾಹಿ ಪ್ರಭು ನಿತ್ಯಂ । ಮಾಮತುಲ ಸುಕೃಪಾ ಪೂರಿತ ।
ಪಾವನ ತ್ರಿಭುವನ ಮಾನಸ । ವಿಮಲ ಶುಭಾಂಗ ॥ ಧೃ ॥

ಅನಂತ ಬ್ರಹ್ಮಾಂಡ । ನಾಯಕ ವಿರಾಡ್ರೂಪ ।
ಶರಣಾಗತ ಪರಿಪಾಲನ ಚಿನ್ಮಯ ॥ ೧ ॥

॥ **ಶ್ಲೋಕ** ॥ ಪ್ರಭುರ್ಬ್ರಹ್ಮಾ ಪ್ರಭುರ್ವಿಷ್ಣು ।
ಪ್ರಭುರ್ದೇವೋ ಮಹೇಶ್ವರಃ ॥
ಪ್ರಭುರೇವ ಪರಬ್ರಹ್ಮಾ ।
ತಸ್ಮೈ ಶ್ರೀ ಪ್ರಭುವೇನಮಃ

ಮನ್ನಾಥಃ ಶ್ರೀ ಜಗನ್ನಾಥೋ । ಮದ್ಗುರು : ಶ್ರೀ ಜXXXXXತ್ಮಾ
ಸರ್ವ ಭೂತಾತ್ಮಾ ತಸ್ಮೈ ಶ್ರೀ ಪ್ರಭುವೇ ನಮಃ

॥ **ವಾಗ್ಮಾಲಾ** ॥ ಯಂದು ಆ ಪ್ರಭುವಿನಭವ X X X X X
ಸ್ಮರಿಸಿ, ನಮಸ್ಕರಿಸಿ ಭಕ್ತಿಯಾವರಿಸಿ ಆ ಶಂಕರನರಸಿ ಪುನಃ ಈಶ್ವರನಿಗಂಥಾಳೆ–

॥ **ಚೂಲಿಕಾ** ॥ ಯನ್ನಾಳ್ದ ಯನ್ನ ಜೀವನಕೆ ಸಂಜೀವನಕೆ
ಯನ್ನಬಿನ್ನಹವನವಧರಿಯಿಸುವುದೂ ।
ಚನ್ನಿಗ ಪ್ರಭುವಿನಿನ್ನೆಂದುನಾ ಕಾಂಬುವೆನೊ
ಯನ್ನುದೇಂ ಭಕ್ತಿ ಪೂರ್ವಕದಿಂದೆ ಭಜಿಸೀ ॥ ೧ ॥

ಅವನ ಕರುಣಾರಸಮಯದೆಂದು ನಾಂ ಪಡಿವೆ. ೩
ಭವನಾಶ ಮಾಯ ಕೋಳಾಹಳನಾ ।
ಸುವಿನಯದಿ ನಾಂ ಕಂಡದಲ್ಲದೆಯು ನಿನ್ನ ತೊಡಿ
ಯವ ಬಂದು ನಾನೇಕಿನಿದು ನಿರ್ಧರಂ ॥ ೨ ॥

ಅಲ್ಲಿವರಿಯಿಗೆ ನಿನ್ನಲ್ಲಿಯಿಗೆ ನಾ ಬಾರೆ
ವಲ್ಲಭನೆ ತವದೇಹವನು ಸಾರೆನೂ ।
ಸಲ್ಲಲಿತ ತತ್ಪದಾಂಬುಜ ಕಾಣದಿರಲಾರೆ
ಇಲ್ಲಿರದೆ ಮರ್ತ್ಯಲೋಕಂ ಸಾರುವೆ ॥ ೩ ॥

ಗುರುವೃಷಭರಾಜನಂ ಯನ್ನೊಡನೆ ಕಳುಪುವದು
ನೆರೆ ಪೋಗಿ ಬರ್ಪನಂದಾಗ ಶಂಕರಿಯಾ ॥

ಧರಿಯೊಳಿಹ ಬಾಗವಾಡಿ ಮಾದರಸ ಮಾದಾಂಬೆ
ಯರ ಪುಣ್ಯ ಗರ್ಭದೊಳ್ ಸಂಜನಿಯಿಸೀ ॥ ೪ ॥

ಅಕ್ಕ ನಾಗಾಂಬೆಯಂದೆನಿಪ ನಾಮವನಾಂತ
ಳಕ್ಕರಿಂ ಮುಂದಾಲಿಯಿಸುವದೀ ಕಥನಂ ॥ ೫ ॥

॥ **ಭಾಮಿನಿ.ಷ.** ॥ ಇತ್ತಲಾ ಸರ್ವೇಶನಿರದುರೆ
ಮತ್ತೆ ಕರಿವುತೆ ಮಾಯಿಗೆಂದನು
ಮರ್ತ್ಯಲೋಕಕೆ ಪೋಗಿ ಉಡುತಡಿಯಲ್ಲಿ ಸಂಜನಿಸಿ
ಗೊತ್ತರಿದು ಮಹದೇವಿಯಕ್ಕಾ
ಗುತ್ತೆ ನಿಷ್ಕಾಮತ್ವದಿಂ ಪ್ರಭು
ಚಿತ್ತವೃತ್ತಿಯನರಿದು ಕರುಣಾರಸವ ಪಡಿಯಂದಂ ॥ ೧ ॥

ಅಂತು ಬಂದುದಿಸಿದಳು ಮಾಯಿಯು
ಅಂತಕಾಂತಕನಾಜ್ಞೆಯಿಂದಂ
ಯಂತೊರಿವೆ ನಂದೀಶ ಮುಖ್ಯ ಪ್ರಮಥನಾಯಕರೂ ।
ಅಂತರಿಸದ್ವೈತಂದು ಪ್ರಭುವಿನ
ಸ್ವಾಂತದೊಳರಿವುತ್ತೆ ಭಜಿಸುತೆ
ನಿಂತು ನಿಲ್ಲದೆ ಮುಕ್ತರಾದರು ಪ್ರಭುವನುಗ್ರಹದಿಂ ॥ ೨ ॥

॥ **ವಾರ್ಧಿಕ ಷ.** ॥ ಇಂತೆಸೆವ ಪ್ರಭುವಿನಿತಿಹಾಸವಂಬಿಡದಲಾ
ದ್ಯಾಂತಮಂ ಪೇಳ್ವರ್ಗೆ ಕೇಳ್ದ ಸದ್ಭಕ್ತರ್ಗೆ
ಸಂತತಂ ಪರಿಸುತಿಹ ಸಂತರ್ಗೆ ಭಕ್ತಿಸುಜ್ಞಾನ ವೈರಾಗ್ಯಗಳನೂ ।
ಶಾಂತಶಾಶ್ವತ ಪ್ರಭುವನಾದಿ ಪರಶಿವನಿತ್ತು
ಕಂತುಕಾಲರ ಬಾಧಿಗಳಿದು ಕೈವಲ್ಯವಂ
ಸಂತಸದೊಳೀವನವರವರವಾಂಛಾ ಫಲಂ ಸತ್ಯಮಿದು ಭೂತಳಕ್ಕೆ ॥ ೧ ॥

॥ **ಭಾಮಿನಿ.ಷ.** ॥ ಕನಕಕಂತಸುನಗರ ಸಂಸ್ಥಿತ
ವಿನುತ ಮಠ ಪೌರಾಣಿ ಶಿವಬಸ
ವೆನಿಪ ಶಿವಯೋಗೀಶ್ವರನ ತನುಜಾತನೆಂದೆನಿಪಾ ।
ಅನಘದುರದುಂಡೀಶ ಕವಿತಾ
ನನುವಿನಿಂದೀ ಯಕ್ಷಗಾನೆಂ
ದೆನಿಪ ಸತ್ಕಥಾಮೃತವನೊಲವಿಂದೆ ನಿರ್ಮಿಸಿದಂ ॥ ೧ ॥

ಇತಿ ಪ್ರಭುದೇವರ ಯಕ್ಷಗಾಯನ ಸಂಪೂರ್ಣ ಮಂಗಳ ಮಹಾ ಶ್ರೀ.

ಅನುಬಂಧ – ೧

'ಪ್ರಭುದೇವರ ಯಕ್ಷಗಾನದಲ್ಲಿ' ಬರುವ ಸಂಸ್ಕೃತ ಶ್ಲೋಕಗಳು ಹಾಗೂ ಉದ್ಧರಣೆಗಳು.

ತ್ವಂ ವಿಶ್ವಕರ್ತಾ ತವನಾಸ್ತಿ ಕರ್ತಾ
ತ್ವಂ ವಿಶ್ವಭರ್ತಾ ತವನಾಸ್ತಿಭರ್ತಾ
ತ್ವಂ ವಿಶ್ವವಂದ್ಯಸ್ತವನಾಸ್ತಿ ವದ್ಯಃ
ತ್ವಂ ವಿಶ್ವನಾಥಃಸ್ತವನಾಸ್ತಿನಾಥಃ

ಅರ್ಥ:– ನೀನು ವಿಶ್ವಕರ್ತನಾಗಿರುತ್ತೀ, ನಿನಗೆ ಬೇರೆ ಯಾವ ಕರ್ತನೂ ಇಲ್ಲ. ನೀನೇ ವಿಶ್ವದ ಒಡೆಯನಾಗಿರುತ್ತೀ, ನಿನಗೆ ಯಾವನೂ ಒಡೆಯನಾಗಿಲ್ಲ. ನೀನೇ ವಿಶ್ವವಂದ್ಯನಾಗಿರುತ್ತೀ ನಿನ್ನ ವಂದನೆಗೆ ಯೋಗ್ಯವಾದವನು ಯಾವನೂ ಇಲ್ಲ. ನೀನೇ ವಿಶ್ವನಾಥನಾಗಿದ್ದು ನಿನಗೆ ಯಾವ ನಾಥನೂ ಇಲ್ಲ.

೨) ಧರ್ಮಂ ಪ್ರಸಂಗಾದಪಿ ನಾಚರಂತಿ
ಯತ್ನೇನ ಪಾಪಂ ಹಿ ಸಮಾಚರಂತಿ
ಆಶ್ಚರ್ಯಮೇತದ್ಧಿ ಮನುಷ್ಯ ಲೋಕೇ
ಕ್ಷೀರಂ ಪರಿತ್ಯಜ್ಯ ವಿಷಂ ಪಿಬಂತಿ ।

ಅರ್ಥ : ಧರ್ಮವನ್ನು ಪ್ರಸಂಗ ಬಂದಾಗಲೂ ದೆಸೆಯಿಂದಲೂ ಒಳ್ಳೆಯ ರೀತಿ ಆಚರಿಸುವುದಿಲ್ಲ, ನಡೆಯುವದಿಲ್ಲ; ಯತ್ನದಿಂದಾದರೂ ಪಾಪವನ್ನೇ ಆಚರಿಸುತ್ತಾರೆ. ಇದೇ ಮನುಷ್ಯ ಲೋಕದಲ್ಲಿ ಆಶ್ಚರ್ಯವಾಗಿ. ಹಾಲನ್ನು ಬಿಟ್ಟು ವಿಷವನ್ನೇ ಸೇವಿಸುತ್ತಾರೆ.

೩) "ಮಂತ್ರೇ ತೀರ್ಥೆ ದ್ವಿಜೇದೆವೇ ಬ್ರಹ್ಮಜ್ಞೇ ಭೆಷಜೇಗುಕಾ
ಯಾದೃತೀ ಭಾವನಾಯತ್ರ ಸಿದ್ಧಿರ್ಭವತಿ ತಾದೃಶೀ" ॥

ಅರ್ಥ : ಮಂತ್ರ, ತೀರ್ಥ, ಬ್ರಾಹ್ಮಣ, ದೈವ, ಬ್ರಹ್ಮಜ್ಞಾನಿ, ವೈದ್ಯ ಮತ್ತು ಗುರು ಇವರಲ್ಲಿ ನಮ್ಮ ಭಾವನೆ ಯಾವ ರೀತಿ ಇರೂವದೋ ಅದೇ ರೀತಿಯ ಸಿದ್ಧಿಯಾಗುವದು.

೪)	ಜಾತ್ಯಾಂಧೋನಹಿವೇತ್ತಿರತ್ನ ವಿಷಯಂ ಷಂಢೋವರ ಸ್ತ್ರೀಸುಖಂ
ಕನ್ಯಾ ಸತ್ಪುರುಷೇಣ ಸಖ್ಯಪದವೀಂ ವಂಧ್ಯಾ ಪ್ರಸೂತಿ ಕ್ರಿಯಾಂ ।
ಕಾಕೋ ಕೋಕಗತಿಂ ಖರೋಮೃದುಗಿರಂ ಸೌಖ್ಯಂ ದರಿದ್ರೋಯಥಾ
ಶ್ವಾನಃ ಸಿಂಹ ಪರಾಕ್ರಮಂ ಭುವಿ ತಥಾಃ ಮೂಢೋ ಮಹಾ
ಜ್ಞಾನಿನಮ್ ॥

ಅರ್ಥ : ಈ ಭೂಮಿಯಲ್ಲಿ ಹುಟ್ಟು ಕುರುಡನು ರತ್ನ ವಿಷಯವನ್ನು, ಷಂಡನು ಸುಂದರ ಸ್ತ್ರೀಯರ ಸುಖವನ್ನು, ಕನ್ಯೆ ಸತ್ಪುರುಷರ ಜೊತೆ ಗೆಳೆತನವನ್ನು, ಬಂಜೆ ಪ್ರಸವ ವೇದನೆಯನ್ನು, ಕಾಗೆ ಕೋಗಿಲೆಯ ಗತಿಯನ್ನು, ಕಠೋರನು ಮೃದು ಮಾತನ್ನು, ದರಿದ್ರನು ಸುಖವನ್ನು, ನಾಯಿ ಸಿಂಹದ ಪರಾಕ್ರಮವನ್ನು ಮತ್ತೆ ಮೂಢನು ಮಹಾಜ್ಞಾನಿಯನ್ನು ಅರಿಯಲಾರನು.

೫)	ಪೂರ್ವಜನ್ಮ ಕೃತಂ ಪಾಪಂ ವ್ಯಾಧಿರೂಪೇಣ ತಿಷ್ಠತಿ ।
ತಚ್ಛಾಂತಿಕಾಷಧೈರ್ಧಾನೈರ್ಜಪ ಹೋಮ ಸುರಾರ್ಚನೈ

ಅರ್ಥ : ಪೂರ್ವ ಜನ್ಮದಲ್ಲಿ ಮಾಡಿದ ಪಾಪ ವ್ಯಾಧಿರೂಪದಲ್ಲಿ ಉಳಿಯುವದು. ಅದನ್ನು ಹೋಗಲಾಡಿಸುವದು ದಾನ, ಜಪ, ಹೋಮ, ದೇವತಾರ್ಚನೆ ಔಷಧಿಗಳಿಂದ ಸಾಧ್ಯ.

೬)	ಸುಂದರಂ ಪುರುಷಂ ದೃಷ್ಟ್ವಾ । ಭ್ರಾತರಂ ಪಿತರಂ ಸುತಂ ।
ಯೋನಿರ್ದ್ರವತಿ ನಾರೀಣಾಂ । ತಥ್ಯವಕ್ಷಾಮಿಕೇಶವ ॥

ಅರ್ಥ : ಸುಂದರವಾದ ಪುರುಷ, ಸಹೋದರನಾಗಿರಲಿ ತಂದೆಯಾಗಿರಲಿ ಮಗನಾಗಿರಲಿ, ಅವನನ್ನು ಕಂಡಾಗ ಸ್ತ್ರೀಯರ ಯೋನಿಯು ದ್ರವಿಸುತ್ತದೆ. ಎಲೈ ಕೇಶವ ನಾನು ಸತ್ಯವನ್ನೇ ನುಡಿಯುತ್ತಿದ್ದೇನೆ.

೭)	ವಿದ್ಯಯಾವ ಪುಷಾವಾಚಾವಸ್ತ್ರೇಣ ವಿಭವೇನಚ ।
ವಕಾರ ಪಂಚಕೇನೈವ ನರಃ ಪೂಜ್ಯತ್ವಮಾಪ್ನುತೇ ॥

ಅರ್ಥ : ವಿದ್ಯೆ, ವಪು (ದೇಹ), ವಾಕ್, ವಸ್ತ್ರ ಮತ್ತು ವಿಭವ (ಸಂಪತ್ತು) ಈ ಐದು ವಕಾರಗಳಿಂದಲೇ ಮನುಷ್ಯನು ಪೂಜ್ಯನಾಗುತ್ತಾನೆ.

೮)	ಆಶ್ರಯವಶೇನ ಮಹತಾ ಗುರುತಾ ಲಘುತಾ
ಚ ಜಾಯತೇ ಜಂತು ನಾಮ್ ॥

ಅರ್ಥ : ಆಶ್ರಯ ಸ್ಥಾನದಿಂದಲೇ ಜಂತುಗಳಿಗೆ ಮಹತ್ವವಾಗಲೀ ಗುರುತ್ವವಾಗಲೀ ಅಥವಾ ಲಘುತ್ವವಾಗಲೀ ಪ್ರಾಪ್ತವಾಗುತ್ತದೆ.

೯) ನೀಚಶ್ರಯಂ ನ ಕರ್ತವ್ಯಂ ಕರ್ತವ್ಯ ಮಹದಾಶ್ರಯಂ ।
ಈಶಾಶ್ರಯೋ ಮಹಾನಾಗಃ ಪ್ರಮುಚ್ಛ ಗರುಡಂ ಸುಖ ॥

ಅರ್ಥ : ನೀಚರ ಆಶ್ರಯವನ್ನೇ ಮಾಡಬಾರದು. ದೊಡ್ಡವರನ್ನೇ ಆಶ್ರಯಿಸಬೇಕು. ಏಕೆಂದರೆ ಈಶ್ವರನ ಆಶ್ರಯದಿಂದ ಮಹಾ ಸರ್ಪವು ಗರುಡನಿಂದ ರಕ್ಷಿತವಾಗಿ ಸುಖ ಹೊಂದಿತು.

೧೦) ರಾಮಮಾಶ್ರಿತ್ಯ ಲಂಕಾಯಾಂ ರಾಜಾಜಾತೋ ವಿಭೀಷಣಃ ।
ಸುಗ್ರೀವೋ ರಾಮಸಖ್ಯೇನ ಪ್ರಾಪ್ತವಾನ್‌ವಾಲಿ ಸಂಪದಂ ॥

ಅರ್ಥ : ರಾಮನನ್ನಾಶ್ರಯಿಸಿ ವಿಭೀಷಣನು ಲಂಕೆಯಲ್ಲಿ ರಾಜನಾದನು ಮತ್ತು ಸುಗ್ರೀವನು ರಾಮನ ಗೆಳತನದಿಂದ ವಾಲಿಯ ಸಂಪತ್ತನ್ನು ಪಡೆದನು.

೧೧) ಅಜ ಶಿಷ್ಟ ಪ್ರಸಾದೇನ ಗಜಸ್ಕಂಧೇನ ಗಚ್ಛತೀ

ಅರ್ಥ : ಆಡು ಸತ್ಪುರುಷರ ಪ್ರಸಾದದಿಂದ ಆನೆಯ ತಲೆಯ ಮೇಲೆ ಹೋಗಿ ಕೂಡ್ರುವದೆ !

೧೨) ಪಾವಕೊಲೊಹ ಸಂಬಂಧಾಲ್ಲಭಾ ಮುದ್ಗರತಾಡನಂ

ಅರ್ಥ : ಬೆಂಕಿಯೂ ಲೋಹದ ಸಂಬಂಧದಿಂದ ಮುಗ್ಗರದಿಂದ ಹೊಡೆಸಿಕೊಳ್ಳುತ್ತದೆ.

೧೩) ಲೋಹಃ ಪರುಷ ಸಂಬಂಧಾಧ್ಯಾತಿ ಹೇಮನು ಪ್ರನಸ್ತಥಾ ।

ಅರ್ಥ : ಲೋಹವು ಪರುಷಮಣಿಯ ಸಂಬಂಧದಿಂದ ಬಂಗಾರೇ ಆಗುವುದು.

೧೪) ಸ್ವಕೀಯ ಹೃದಯಂ ಭಿತ್ವಾ ನಿರ್ಗತೌ ಯೌಪಯೋಧಕಾ ।
ಅನ್ಯದೀಯಸ್ಯ ಹೃದಯಭೇದನೇ ಕಾಕೃಪಾಯೋಃ ॥

ಅರ್ಥ : ತನ್ನ ಹೃದಯವನ್ನೇ ಭೇದಿಸಿ ಹೊರಗೆ ಬಂದಂಥ ಈ ಕುಚಗಳು, ಅನ್ಯರ ಹೃದಯವನ್ನು ಭೇದಿಸುವಲ್ಲಿ ಅವುಗಳಿಗೆ ಎಲ್ಲಿ ದಯ?

೧೫) ನಾರೀತಿ ನಾಮ ಮಾತ್ರೇಣ ಕಾಷ್ಟಂ ನಮತಿ ನಿಷ್ಠುರಂ ।
ಅತ್ಯುನ್ನತ ಕುಚಾನಾರೀ ಕಸ್ಯ ನೋರುಮತೆ ನಮಃ ॥

ಅರ್ಥ : ಸ್ತ್ರೀಯ ಹೆಸರು ಮಾತ್ರದಿಂದ ನಿಷ್ಠುರರೂ ನಮಿಸುತ್ತಾರೆ. ಉನ್ನತವಾದ ಕುಚವುಳ್ಳಂಥ ಸ್ತ್ರೀಯಳು ಯಾರ ಮನಸ್ಸನ್ನು ರಮಿಸುವುದಿಲ್ಲ?

೧೭) ಉಡುರಾಜ ಮುಖೀ ಮೃಗರಾಜ ಕಟೀ ಗಜರಾಜ ವಿರಾಜಿತ ಮಂದಗತೀ।

ಯದಿ ಸಾವನಿತಾ ಹೃದಯೇನಿಹಿತಾ ಕ್ವಜಪಃ ಕ್ವತಪಃ ಕ್ವ ಸಮಾಧಿ ವಿಧಿಃ ॥

ಅರ್ಥ : ಚಂದ್ರಮುಖಿಯು, ಸಿಂಹಕಟಿಯು, ಗಜೇಂದ್ರನಂತೆ ಶೋಭಿಸುವ ಗತಿಯುಳ್ಳವಳೂ, ಆದ ಸ್ತ್ರೀ ಹೃದಯದಲ್ಲಿದ್ದಾಗ (ಮನಸ್ಸಿನಲ್ಲಿದ್ದಾಗ) ಜಪವೆಲ್ಲಿ? ತಪವೆಲ್ಲಿ? ಸಮಾಧಿ ಎಲ್ಲಿ?

ಸುಗಂಧೈಃ ಸುಪುಷ್ಪೈಃ । ಸುಶಯ್ಯಾ ಸುಕನ್ಯಾಃ
ವಸಂತೇ ಋತೌ ಪೌರ್ಣಿಮಾ ಪೂರ್ಣ ಚಂದ್ರೆ ।
ತದಾನಾಸ್ತಿ ಕಿಂಚಿದದಪಿಪುಸ್ತ್ಯೈ ನರಾಣಾಂ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಂ ॥

ಅರ್ಥ : ವಸಂತಕಾಲದಲ್ಲಿ ಸುಗಂಧ ಕುಸುಮಗಳಿರುತ್ತವೆ. ಬಹು ಬೆಲೆಯ ಸುಂದರಿಯಾದ ತರುಣಿಯು ಇದ್ದರೆ ಷೋಡಶಕಗಳಿರುವ ಹುಣ್ಣಿಮೆಯ ಚಂದ್ರನು ಬೆಳಗುತ್ತಿರುವನು ಆದರೆ ಆ ಸಮಯದಲ್ಲಿ ಮನುಷ್ಯರಿಗೆ ಗೌರವವು ಸ್ವಲ್ಪಾದರೂ ಇರುವದಿಲ್ಲವಾದರೆ ಅದರಿಂದ ಏನು ಅದರಿಂದ ಏನು ಅದರಿಂದ ಏನು ಅದರಿಂದ ಏನು?

೧೮) ವಿಶ್ವಾಮಿತ್ರಪರಾಶರ ಪ್ರಭತಯೋವಾತಾಂಬುಪರ್ಣಾಶನಾಃ

ತೇಪಿ ಸ್ತ್ರೀ ಮುಖಪಂಕಜಂ ಸುಲಲಿತಂ ದೃಷ್ಟೇವ ಮೋಹಂ–

ಗತಾಃ ॥

ಅರ್ಥ : ವಿಶ್ವಾಮಿತ್ರ ಪರಾಶರ......ಮುಂತಾದ ಮುನಿಗಳು ವಾಯು ಜಲ ಎಲೆಗಳನ್ನು ತಿಂದು ಬದುಕಿದ್ದರು ಅಂಥವರು ಸಹ ಸುಂದರವಾದ ಸ್ತ್ರೀಮುಖ ಕಮಲವನ್ನು ಕಂಡು ಮೋಹಿತರಾದವರು.

೧೯) ಶಾಲ್ಯನ್ನಂ ಸಘೃತಂ ಪಯೋದಧಿಯುತಂಭುಂಜಂತಿಯೇ ಮಾನವಾಃ ।
ತೇಷಾಮಿಂದ್ರಿಯನಿಗ್ರಹೋಯದಿ ಭವೇದ್ವಿಂಧ್ಯಃಪ್ಲವೇತ್ಸಾಗರೇ ॥

ಅರ್ಥ : ತುಪ್ಪ ಹಾಲು ಮೊಸರು .... ಮುಂತಾದವುಗಳಿಂದ ಕೂಡಿದ ಅನ್ನವನ್ನು (ಪಕ್ವಾನ್ನವನ್ನು) ಯಾವ ಮನುಷ್ಯರು ಭೋಗಿಸುವರೋ ಅವರಿಗೆ ಇಂದ್ರಿಯನಿಗ್ರಹ ಸಾಧ್ಯವಾಗುವದಾದರೆ ವಿಂದ್ಯ ಪರ್ವತವು ಸಾಗರದಲ್ಲಿ ತೇಲಬಹುದು.

೨೦) ಅಂಗಾರಸಾದೃಶೀ ನಾರೀ ಘೃತಕುಂಭಸಮಃ ಪ್ರಮಾನ್ ॥

ತಸ್ಮಾನ್ನಾರೀಕ್ಷು ಸಂಸರ್ಗಂ ದೂರತಃ ಪರಿವರ್ಜಯೇತ್ ॥

ಅರ್ಥ : ಸ್ತ್ರೀ ಬೆಂಕಿಗೆ ಸಮಾನಳು ಪುರುಷನು ತುಪ್ಪದ ಕೊಡದಂತೆ ಇದ್ದಾನೆ. ಆದ್ದರಿಂದ ಸ್ತ್ರೀಯರ ಜೊತೆ ಸಹವಾಸವನ್ನು ದೂರ ಮಾಡಬೇಕು.

೨೧) ಉದ್ಯೋಗಂ ಸಾಹಸೋ ಧೈರ್ಯಂ ಬುದ್ಧಿರ್ಬಲ ಪರಾಕ್ರಮೊ ।
ಷಟ್ಸುಮಾನುಷಚಿಂತಾಸ್ಯಾತ್ ಸಪ್ತಮಂ ದೈವ ಚಿಂತನಮ್ಂ

ಅರ್ಥ : ಉದ್ಯೋಗ, ಸಾಹಸ, ಧೈರ್ಯ, ಬುದ್ಧಿ, ಬಲ, ಪರಾಕ್ರಮ ಈ ಆರನ್ನು ಮನುಷ್ಯ (ಚಿಂತಿಸಬೇಕು) ಆಶ್ರಯಿಸಬೇಕು. ಏಳನೆಯದು ದೈವ ಚಿಂತನೆ.

೨೨) ಯಸ್ಮಿನ್ ದೇಶೇಯದಾಕಾಲೆಯನ್ಮುಹೂರ್ತೇಚ ಯದ್ದಿನೇ ।
ಹಾನಿರ್ವೃದ್ಧಿರ್ಯಶೋಭಾತಿ ತತ್ತತ್ಕಾಲೇ ಭವಿಷ್ಯತಿ ॥

ಅರ್ಥ : ಯಾವ ಯಾವ ದೇಶದಲ್ಲಿ, ಯಾವ್ಯಾವ ಕಾಲದಲ್ಲಿ, ಮುಹೂರ್ತದಲ್ಲಿ, ದಿನದಲ್ಲಿ, ಹಾನಿ, ವೃದ್ಧಿ, ಯಶಸ್ಸು ಆಗಬೇಕಾಗಿದೆಯೋ ಆಯಾ ಕಾಲಕ್ಕೆ ಆಗಿ ಬಿಡುತ್ತದೆ.

೨೩) ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಕ್ಷಜ್ಞಃ
ಜ್ಞಾನಲವದುರ್ವಿಧಗ್ಧಂ ಬ್ರಹ್ಮಾಪಿ ನರಂ ನರಂಜಯತಿ ॥

ಅರ್ಥ : ತಿಳಿಗೇಡಿಯನ್ನೇ ಸುಲಭವಾಗಿ ಸಮಾಧಾನ ಪಡಿಸಬಹುದು ವಿಶೇಷ ಜ್ಞಾನಿಯನ್ನು ಇನ್ನೂ ಸುಲಭವಾಗಿ ಸಮಾಧಾನ ಪಡಿಸಬಹುದು. ಆದರೆ ಜ್ಞಾನದ ಒಂದು ತುಂಡಿನಿಂದ ಸೊಕ್ಕಿಗಟ್ಟ ಮನುಷ್ಯನನ್ನು ರಂಜಿಸುವದು ಬ್ರಹ್ಮನಿಗೂ ಸಾಧ್ಯವಿಲ್ಲ.

೨೪) ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ ।
ಏಕೈಕಮಪ್ಯನರ್ಥಾಯ ಕಿಮು ಯುತ್ರ ಚತುಷ್ಟಯಂ ॥

ಅರ್ಥ : ಯೌವನ, ಧನ ಸಂಪತ್ತು, ಪ್ರಭುತ್ವ ಮತ್ತು ಅವಿವೇಕ ಇವುಗಳಲ್ಲಿ ಒಂದೊಂದೇ ಅನರ್ಥವನ್ನುಂಟು ಮಾಡುತ್ತವೆ. ಎಂದ ಮೇಲೆ ನಾಲ್ಕು ಒಂದೇ ಕಡೆ ಇದ್ದರೆ ಕೇಳಬೇಕೇನು?

೨೫) ಬಹ್ಮಾಯೇನ ಕುಲಾಲವನ್ನಿಯ ಮಿತೋ ಬ್ರಹ್ಮಾಂಡ ಭಾಂಡೋದಕೇ
ವಿಷ್ಣುರ್ಯೇನ ದಶಾವತಾರ ಗಹನೇಕ್ಷಿಪ್ತೋ ಮಹಾ ಸಂಕಟೇ ॥
ದುದ್ರೋಯೇನ ಕಪಾಲಪಾಣಿ ಪುಟಕೇ ಭಿಕ್ಷಾಟಣಂ ಕಾರಿತಃ
ಸೂರ್ಯೋಭ್ರಾಮ್ಯಾತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ ॥

(– ಬರ್ತೃ ಪರಿ)

ಅರ್ಥ : ಯಾವ ಕರ್ಮ ಬ್ರಹ್ಮನಿಗೆ ಬ್ರಹ್ಮಾಂಡವೆಂಬ ಹಂಡೆಯನ್ನು ನಿರ್ಮಿಸಲು ಕುಂಬಾರನನ್ನಾಗಿ ನೇಮಿಸಿತೋ, ವಿಷ್ಣುವನ್ನು ದಶಾವತಾರ ತಾಳುವ ಘೋರ ಸಂಕಟದಲ್ಲಿ ಬೀಳಿಸಿತೋ, ಕೈಯಲ್ಲಿ ತಲೆಬುರುಡೆಯನ್ನು ಹಿಡಿದು ಭಿಕ್ಷೆ ಬೇಡಲು ರುದ್ರನನ್ನು ಹಚ್ಚಿತೋ ಮತ್ತು ಸೂರ್ಯನನ್ನು ಯಾವಾಗಲೂ ಯಾರ ಅಣತಿಯಿಂದ ಭ್ರಮಿಸುವಂತೆ ಮಾಡಿತೋ ಅಂತಹ ಆ ಕರ್ಮಕ್ಕೆ ನಮಸ್ಕಾರ.

೨೬) ವೇಧಾದ್ದೇಭ್ರಮಂ ಚಕ್ರೇ ಕಾಂತಾಸು ಕನಕೇಘಚ ।
ತಾಸು ತೇಷ್ವಪ್ಯನಾಸಕ್ತೋ ದ್ವಿತಿಯಃ ಪರಮೇಶ್ವರಃ ॥

ಅರ್ಥ : ಬ್ರಹ್ಮನು ಸ್ತ್ರೀಯರಲ್ಲಿ ಮತ್ತು ಕನಕಗಳಲ್ಲಿ ಎರಡು ರೀತಿಯ ಭ್ರಮೆಯನ್ನು ನಿರ್ಮಿಸಿದ್ದಾನೆ, ಆದರೆ ಈ ದ್ವಿತೀಯ ಪರಮೇಶ್ವರನು ಅವರಲ್ಲಿ ಮತ್ತು ಅವುಗಳಲ್ಲಿ ಅನಾಸಕ್ತನಾಗಿದ್ದಾನೆ.

೨೭) ಯಥಾ ಚತುರ್ಭಿಃ ಕನಕರ್ ಪರೀಕ್ಷ್ಯತೇ
ನಿರ್ಘನಾ ಚ್ಛೇದನ ತಾಪತಾಡ ನೈಃ ।
ತಥಾ ಚತುರ್ಭಿಃ ಪುರುಷಃ ಪರೀಕ್ಷತೇ
ಕುಲೇನ ಶೀಲೇನ ಗುಣೇನ ಕರ್ಮಣಾ ॥

(–ಬರ್ತೃ ಹರಿ)

ಅರ್ಥ : ಯಾವ ರೀತಿ ಸುವರ್ಣವು, ಘರ್ಷಣೆ, ಛೇದನೆ, ತಾಪ ಮತ್ತು ತಾಡನ ಈ ನಾಲ್ಕರಿಂದ ಪರೀಕ್ಷಿಸಲ್ಪಡೂವದೋ ಅದೇ ರೀತಿ ಪುರುಷನು ಕುಲ, ಶೀಲ, ಗುಣ ಮತ್ತು ಕರ್ಮ ಈ ನಾಲ್ಕರಿಂದ ಪರೀಕ್ಷಿಸಲ್ಪಡುತ್ತಾನೆ.

೨೮) ಆಯಾತ ಮಾಯಾತಮಪೇಕ್ಷಣೀಯಂ
ಗತಂಗತಂ ಸರ್ವಮುಪ್ರೇಕ್ಷಣೀಯಂ
ಅಲಂ ವೃಥಾಖೇದನ ಮೋದನಾಭ್ಯಾಂ
ನ ಲಂಘನೀಯಾನಲಿನಾಸನಾಜ್ಞಾ ॥

ಅರ್ಥ : ಯಾವುದು ಬರುವುದೋ ಅದನ್ನು ಅಪೇಕ್ಷಿಸಬೇಕು. ಹೋದದ್ದು ಹೋಯಿತು ಬರುವುದಿಲ್ಲ ಅದನ್ನು ಉಪೇಕ್ಷಿಸಬೇಕು. ವ್ಯರ್ಥ ಖೇದ ಮೋದಗಳನ್ನು ಬಿಟ್ಟುಬಿಡಬೇಕು. ಆಜ್ಞೆಯನ್ನು ಮೀರಲಿಕ್ಕೆ ಆಗುವುದಿಲ್ಲ.

೨೯) ಗತ ಶೋಕಂ ನ ಕರ್ತವ್ಯಂ ಭವಿಷ್ಯಂ ನೈವ ಚಿಂತಯೇತ್ ।
ವರ್ತಮಾನೇಷು ಕಾಲೇಷು ವರ್ತಯಂತಿ ವಿಚಕ್ಷಣಾಃ ॥

ಅರ್ಥ : ಕಳೆದು ಹೋದುದಕ್ಕೆ ಶೋಕಿಸಬಾರದು. ಭವಿಷ್ಯವನ್ನು ಚಿಂತಿಸಬಾರದು. ಬುದ್ಧಿವಂತರಾದವರು ವರ್ತಮಾನ ಕಾಲದಲ್ಲಿ ಮಾತ್ರ ಕಾರ್ಯ ಪ್ರವೃತ್ತರಾಗುತ್ತಾರೆ.

೩೦) ಅತಿರೂಪ ಹತಾ ಸೀತಾ । ಅತಿ ಗರ್ವಾದ್ದಶಾನನಃ ।
ಅತಿದಾನಾದ್ ಬಲಿ ಚಕ್ರೀ । ಅತಿ ಸರ್ವತ್ರ ವರ್ಜಯೇತ್ ॥

ಅರ್ಥ : ಅತಿ ಕೋಪದಿಂದ ಸೀತೆ ಹಾಳಾದಳು, ಅತಿ ಗರ್ವದಿಂದ ರಾವಣನು ಮತ್ತು ಅತಿ ದಾನದಿಂದ ಬಲಿಚಕ್ರವರ್ತಿಯು ನಾಶವಾದರು. ಆದ್ದರಿಂದ ಅತಿಯಾದುದನ್ನು ಎಲ್ಲ ಕಡೆಗೂ ಬಿಡಬೇಕು.

೩೧) ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಶ್ಚ ।
ಸ್ತುವಂತು ಸತತಂ ದೇವೀ ಮಾಯಾ ಚರಣ ಸನ್ನಿಧೌ ॥

ಅರ್ಥ : ಮಾಯಾದೇವಿಯ ಚರಣ ಸನ್ನಿಧಿಯಲ್ಲಿದ್ದರೂ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವರನ್ನು ಸ್ತುತಿಸಬೇಕು.

೩೨) ಪ್ರಭು ಬ್ರಹ್ಮಾ, ಪ್ರಭು ವಿಷ್ಣುಃ ಪ್ರಭುರ್ದೇವೋ ಮಹೇಶ್ವರಃ
ಪ್ರಭುದೇವ ಪರಬ್ರಹ್ಮಾ, ತಸ್ಮೈ ಶ್ರೀ ಪ್ರಭುವೇ ನಮಃ

ಅರ್ಥ : ಪ್ರಭುವೇ ಬ್ರಹ್ಮನು, ಪ್ರಭುವೇ ವಿಷ್ಣು, ಪ್ರಭುವೇ ಸಾಕ್ಷಾತ್ ಸದಾಶಿವನು. ಪ್ರಭು ಪರಬ್ರಹ್ಮನು ಅಂಥ ಪ್ರಭುವಿಗೆ ನಮಸ್ಕಾರವು.

೩೩) ಅಶಕ್ತಃ ಸರ್ವದಾ ಸಾಧುಃ
ಬ್ರಹ್ಮಚಾರೀ ಚ ನಿರ್ಧನಃ ।
ವ್ಯಾಧಿತೋದೇವ ಭಕ್ತಃಸ್ಯಾತ್
ವೃದ್ಧನಾರೀ ಪತಿವ್ರತಾ

ಅರ್ಥ : ಶಕ್ತಿ ಹೀನ ಮನುಷ್ಯನು ಯಾವಾಗಲೂ ಸಾಧುವಾಗಿರುತ್ತಾನೆ. ಬಡವ ಮನುಷ್ಯನು ಬ್ರಹ್ಮಚಾರಿಯಾಗಿ ಉಳಿಯುವನು. ರೋ. ಯು ದೇವರ ಮೇಲೆ ಭಕ್ತಿ ಇಟ್ಟಿರುವನು. ಮುದಿ ಹೆಂಗಸು ಪ್ರತಿವ್ರತೆಯಾಗಿರುವಳು.

೩೪) ದಾತಾ ದರಿದ್ರಃ ಕೃಪಣೋ ಧನ್ಯಾಢ್ಯಃ
ಪಾಪೀ ಚಿರಾಯುಃ ಸುಕೃತೀಗತಾಯುಃ
ಅಕೃತೇನ ರಾಜ್ಯಂ ಸುಕೃತೇನ ಸೇವಾ
ಕಾಲೇ ಕಾಲೌ ಷಡ್ಗುಣಮಾಶ್ರಯಂತಿ ॥

ಅರ್ಥ : ದಾನ ಮಾಡಬೇಕೆಂಬುವನು ಬಡವನಾಗಿರುತ್ತಾನೆ. ಧನವಂತನು ಜೀನನಾಗಿರುತ್ತಾನೆ. ಪಾಪ ಮಾಡಿದವನು ಬಹುಕಾಲ ಬದುಕುವನು. ಪುಣ್ಯವಂತನಿಗೆ ಆಯುಷ್ಯ ಕಡಿಮೆ ರಾಜ್ಯವಾಳುವವನು ಶರೀರ ಶ್ರಮ

ಮಾಡಬೇಕಾಗಿಲ್ಲ. ಸೇವಕನು ಮೈಮುರಿದು ದುಡಿಯಬೇಕು. ಕಲಿಕಾಲದಲ್ಲಿ ಈ ತಿರುಗಳು ಮನುಷ್ಯನಲ್ಲಿರುತ್ತವೆ.

೩೫) ಆಹಾರದ್ವಿಗುಣಂ ಚೈವ ನಿದ್ರಾಮೈಥುನಮುಷ್ಕಳಂ ॥
ಮಾನಾ ಮಾನೇನ ಜಾನಾತಿ ಕಲಿಯುಗೆ ಪ್ರವರ್ತಕಂ ॥

ಅರ್ಥ : ಆಹಾರವನ್ನು ಹೆಚ್ಚು ತಿನ್ನುವದೂ ನಿದ್ರೆಯನ್ನಾಗಲಿ ಮೈಥುನವನ್ನಾಗಲಿ ಅತಿಯಾಗಿ ಮಾಡುವದೂ ಮಾನ ಅವಮಾನಗಳ ಕಡೆಗೆ ಲಕ್ಷ್ಯವನ್ನು ಕೊಡದಿರುವದೂ ಇವೆಲ್ಲ ಕಲಿಕಾಲದ ಮಹಿಮೆಗಳು.

೩೬) ಭರ್ತಾಯದ್ಯಪಿ ನೀತಿಶಾಸ್ತ್ರನಿಪುಣೋ ವಿದ್ವಾನ್ಸುಲೀನೋ ಯದಿ
ದಾತಾಕರ್ನಸಮಪ್ರಸಿದ್ಧ ವಿಭವೋ ಶೃಂಗಾರ ದೀಕ್ಷಾಗುರುಃ
ಸ್ವಪ್ರಾಣಾಧಿಕ ಕಲ್ಪಿತಾಸ್ವ ವನಿತಾ ಸ್ನೇಹೇ ಸದಾ ಲಾಲಿತಾ
ತಂ ಕಾಂತ ಪರಿಹಾಸಯಾಚ ಯುವತೀ ಜಾರಂ ಪತೀಂ ವಾಂಛತಿ,

ಅರ್ಥ : ನಯ ಭಯವುಳ್ಳವನೂ ಶಾಸ್ತ್ರ ಕಲಿತು ವಿದ್ಯಾವಂತನೂ ಕುಲವಂತನೂ ಕರ್ಣನಂತೆ ಸುಪ್ರಸಿದ್ಧ ದಾನಿಯು ಶೃಂಗಾರ ಸಂಗತಿಗಳನ್ನು ಬಲ್ಲವನೂ ಹೆಂಡತಿಯನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಎಂದು ತಿಳಿದು ಯಾವಾಗಲೂ ಅವಳೊಡನೆ ಸ್ನೇಹದಿಂದಿರುವವನೂ ಆದ ಗಂಡನನ್ನು ಪರಿಹಾಸಮಾಡುತ್ತ ಹಂಡತಿಯು ಜಾರನನ್ನು ಬಯಸುತ್ತಿರುತ್ತಾಳೆ.

೩೭) ಸ್ಫುಟತು ಮಹಾಪತತು ನಭಶ್ಚಲಂತು ಗಿರಯದಿಲಂತು ವಾರಿಧಯಃ ।
ಅಧರೋತ್ತರಮಸ್ತುವಾಜಗತೀಂ ತತಃ ಕಿಂ ನಿರ್ಮಿತರಾಗಸ್ಯ ॥

ಅರ್ಥ : ಭೂಮಿಯು ಸೀಳಿ ಹೋಗಲಿ ಆಕಾಶವು ಕೆಳಗೆ ಬೀಳಲಿ ಗುಡ್ಡಗಳು ಅಲುಗಾಡಲಿ ಸಾಗರಗಳು ರಾಡಿಯಾಗಲಿ ಈ ಜಗತ್ತಿನಲ್ಲಿ ಅನೇಕ ಬಗೆಯ ಏರಿಳಿತಗಳು ನಡೆಯಲಿ ಇವಾವೂ ವಿರಕ್ತನಿಗೆ ಏನೂ ಮಾಡಲಾರವು.

೩೮) ಸೌಭಾಗ್ಯಂ ಕಾಂತಿಮದ್ರೂಪಂ ಸತ್ಯಂ ತ್ಯಾಗಂ ಪರೇಹಿತಂ
ಶೌರ್ಯಂ ಜಗವಿಖ್ಯಾತಂ ಶಿವಪೂಜಾ ವಿಧೇಃಫಲಂ

ಅರ್ಥ : ಭಾಗ್ಯವಂತಿಕೆಯೂ ಸುಂದರವಾದ ರೂಪವೂ ಸತ್ಯವೂ ತ್ಯಾಗ ಗುಣವೂ ಪರೋಪಕಾರವೂ ಜಗತ್ಪ್ರಸಿದ್ಧವಾದ ವೀರತನವೂ ಇವೆಲ್ಲ ಶಿವನನ್ನು ಪೂಜಿಸಿದ ಫಲದಿಂದ ಸಾಧ್ಯವಾಗುವವು.

೩೯) ವಿದ್ಯಾಲೋಭೊ ಧನಂ ಸೌಖ್ಯಂ ವಿನಮಂತ್ರಂ ಮನೋಗತಂ
ರಾಜ್ಯಂ ಸ್ವರ್ಗಂ ಮೋಕ್ಷಂ ಚ ಶಿವಪೂಜಾ ವಿಧೇಃ ಫಲಂ

ಅರ್ಥ : ವಿದ್ಯೆಯೂ ಆಶೆಯೂ ಹಣವೂ ಸುಖವಾಗಿರುವದೂ ಸಮಶೀಲನಾಗಿರುವದೂ ರಾಜ್ಯವೂ ಸ್ವರ್ಗವೂ ಮೋಕ್ಷವೂ ಇವೆಲ್ಲವೂ ಶಿವನನ್ನು ಪೂಜಿಸಿದ ಫಲದಿಂದ ಸಾಧ್ಯವಾಗುವವು.

೪೦) ಸಿದ್ಧಯೋಗೇಚ ಬ್ರಹ್ಮಾಂಡೇ ಪಾತಾಳೇ ಚ ಮಹೀತಳೇ
ಅಪ್ರಾಪ್ತಂ ಲಭತೇ ಯಸ್ಯ ಶಿವಪೂಜಾ ವಿಧೇಃ ಫಲಂ

ಅರ್ಥ : ಯೋಗಸಿದ್ಧಿಯಲ್ಲಿಯೂ ದೇವಲೋಕದಲ್ಲಿಯೂ ಪಾತಾಳದಲ್ಲಿಯೂ ಈ ಭೂಲೋಕದಲ್ಲಿಯೂ ದೊರೆಯದ ವಸ್ತುವನ್ನು ಯಾರಾದರೂ ದೊರಕಿಸಿದರೆ ಅದು ಶಿವಪೂಜಾ ಮಾಡಿದ ಫಲವು.

೪೧) ದ್ವಾರೇಷು ಮತ್ತ ಮಾತಂಗಾಃ ವಾಯುವೇಗಾಸ್ತುರಂಗಮಾಃ
ಪೂರ್ಣೇಂದ್ರುವದನಾ ಭಾರ್ಯಾ ಶಿವಪೂಜಾವಿಧೇಃ ಫಲಂ

ಅರ್ಥ : ಬಾಗಿಲಗಳಲ್ಲಿ ಮದಿಸಿದ ಆನೆಗಳೂ ಗಾಳಿಯಂತೆ ಓಡುವ ಕುದುರೆಗಳೂ ಚಂದ್ರಮುಖಿಯಾದ ಹೆಂಡತಿಯೂ ದೊರೆಯುವದು ಶಿವಪೂಜೆ ಮಾಡಿದ ಫಲದಿಂದ ಸಾಧ್ಯವು.

೪೨) ಬ್ರಹ್ಮಣಃ ಸೃಷ್ಟಿಕರ್ತೃತ್ವಂ ವಿಷ್ಣೋರ್ದಾನವ ಮರ್ದನಂ
ಸ್ವರ್ಗಾಧಿಪತ್ಯಮಿಂದ್ರಸ್ಯ ಶಿವಪೂಜಾ ವಿಧೇಃ ಫಲಂ

ಅರ್ಥ : ಬ್ರಹ್ಮನು ಜಗತ್ತನ್ನು ಹುಟ್ಟಿಸುವದೂ ವಿಷ್ಣುವು ರಾಕ್ಷಸರನ್ನೂ ನಾಶಮಾಡುವದೂ ಇಂದ್ರನು ಸ್ವರ್ಗಲೋಕದ ರಾಜನಾಗಿರುವದೂ ಇವೆಲ್ಲವೂ ಶಿವಪೂಜಾಮಾಡಿದ ಫಲದಿಂದ ಸಾಧ್ಯವಾಗುವವು.

೪೩) ನಾಹಂ ವಸಾಮಿ ಕೈಲಾಸೇ ನಮೇಕಾನಚ ಮಂದರೇ
ಮದ್ಭಕ್ತಾಯತ್ರ ತಿಷ್ಟಂತಿ ತತ್ರ ತಿಷ್ಟಾಮಿ ಪಾರ್ವತಿ

ಅರ್ಥ : ಪಾರ್ವತಿಯೇ ನಾನು ಕೈಲಾಸದಲ್ಲಿ ಮೇರು ಅಥವಾ ಮಂದರ ಪರ್ವತಗಳಲ್ಲಿಯೂ ಇಲ್ಲ. ನನ್ನ ಭಕ್ತರು ಇರುವಲ್ಲಿ ಮಾತ್ರ ನಾನು ಇರುತ್ತೇನೆ.

೪೪) ಗುಹಾಯಾಂ ಗೇಹೇವಾ ಬಹಿರಪಿ ವನೇವಾದ್ರಿಶಿಖರೇ
ಜಲೇವಾವಸ್ಥೆವಾ ವಸತು ವಸತೇಃ ಕಿಂ ವದ ಫಲಂ
ಯದೀಯಂ ಸ್ವೇಚ್ಛಾಂತಃಕರಣಮಪಿ ಶಂಭೋ–ತವ ಪದೇ
ಸ್ಥಿತಂ ಚೇದ್ಯೋಗೊ ಸೌಸಚ ಪರಮಯೋಗೀ ಸಚ ಸುಖೀ

ಅರ್ಥ : ಗವಿಯಲ್ಲಾಗಲಿ ಮನೆಯಲ್ಲಾಗಲಿ ಹೊರಗೆ ಕಾಡಿನಲ್ಲಾಗಲಿ ಗುಡ್ಡಗಳ

ತುದಿಯಲ್ಲಾಗಲಿ ನೀರಲ್ಲಾಗಲಿ ಬೆಂಕಿಯಲ್ಲಾಗಲಿ ಎಲ್ಲಿ ಬೇಕಾದಲ್ಲಿ ಇದ್ದರೂ ಆ ವಾಸದ ಫಲವು ಏನು ಆಗುವದು? ಎಲೈ ಶಿವನೇ ದೂರ ನಿನ್ನ ಪಾದಗಳಲ್ಲಿ ನನ್ನ ಮನಸ್ಸು ನಿನ್ನಲ್ಲಿ ಇದ್ದುದಾದರೆ ಈ ಅವನೇ ಶ್ರೇಷ್ಠ ಯೋಗಿಯೆನಿಸುವನು ಅಲ್ಲದೆ ಅವನೇ ಸುಖಿಯಾಗಿರುವನು.

♦♦♦

ಶಬ್ದಾರ್ಥ

ಶಬ್ದ	ಅರ್ಥ
ಆಲ್ಪ	ರೋಧಿಸು
ಅರವರಿಸು	ವಿಚಾರಿಸು
ಆಂತು	ಹೊಂದು
ಕಡಗ	ಒಂದು ಬಗೆಯ ಆಭರಣ
ಕರಸರ್ಪಳೆ	ಒಂದು ಬಗೆಯ ಆಭರಣ
ಕಚ್ಚ್ಯೊರಕ	ವ್ಯಭಿಚಾರಿ
ಕರ್ನಿಕೆ	ಕನ್ನಿಕೆ
ಕಾಲ್ಪೆಂಡಿ	ಒಂದು ಬಗೆಯ ಆಭರಣ
ಕಾಳಂಜಿ	ಉಗುಳು ಬಟ್ಟಲು (ಪೀಚಕಾನಿ)
ಕಾಲಪೆಂಡಿ	ಒಂದು ಬಗೆಯ ಆಭರಣ
ಕಾಸಾರ	ಸರೋವರ
ಕ್ಯಾದಿಗಿ	ಒಂದು ಬಗೆಯ ಆಭರಣ
ಕಿಲಾಪ	ಪ್ರತಾಪ–ಬಿರುದು ಬಾವಲಿ
ಕೀರ್ತಿ	ಒಂದು ಬಗೆಯ ಆಭರಣ
ಕುತ್ಯಿ	ಹೊಟ್ಟೆ
ಕೂನುಗೊಳ್ಳು	ಕುಂದು

ಕಂಠಿ	ಹಾರ
ಗಡಣ	ಸಮೂಹ
ಗೊನಿ	ತುದಿ
ಗೊಂತು	ತಿಳುವಳಿಕೆ
ಘುಸ್ರು	ಒಂದು ತರಹ ಸುವಾಸ-ನೆಯುಕ್ತ ವಸ್ತು
ಚಿತ್ರ ಮಾಗಧ	ಹೊಗಳು ಭಟ್ಟರು
ಚಿಮ್ಮುರಿ	ರುಮಾಲು
ಚೌರವ	ಒಂದು ಬಗೆಯ ಆಭರಣ
ಚಂಗು	ಒಂದು ಬಗೆಯ ವಾದ್ಯ
ಜಾವಳ	ನಾಡಾಡಿ
ತಾಲವೃಂತ	ಬೀಸಣಿಕೆ
ತ್ರಾಸು	ತಕ್ಕಡಿ
ದಟ್ಟೈಸು	ಸಂದಣಿಸು
ಪಲ್ಲರಿ	ಹಲ್ಲುಕಿರಿ
ಪಾಸಟಿ	ಸಮ
ಪುನುಗು	ಸುಗಂಧ
ಪೈಜೆ	ಸೋಲ
ಪಂಚಾಸ್ತ್ರ	ಕಾಮ
ಬಜಾವಣಿ	ಬಾರಿಸು
ಬಜ್ಜರ ಪದಕ	ವಜ್ರ ಪದಕ
ಬಾಪುವೆ	ಬರುವೆ
ಮರೆಮಾಯ	ಮರೆಮಾಚು
ಮತ್ತಗಾಮಿನಿ	ಮದೋನ್ಮತ್ತೆ

ಮುಖಝುಲ್ಲಿ	ಒಂದು ಬಗೆಯ ಆಭರಣ
ಮುಲಾಜ	ಭಿಡೆ
ರಯ	ತೀವ್ರ
ವರ್ತ್ನೂಕ	ನಡತೆ
ವ್ರಸುರ	ಉಸುರ
ವಾಲಗ	ಜಲಗ
ವಿಸ್ಮೃತಿ	ಮರೆವು
ವೀಟಿಕೆ	ವೀಳ್ಯೆ
ವೇತ್ರಧರರು	ದ್ವಾರಪಾಲಕ
ಶಫರ ನೇತ್ರೆ	ಮೀನಾಕ್ಷಿ
ಶಿವಿ	ಶಿವೆ
ಶಿಕ್ಷಿಸು	ಕಲಿಸು
ಸೊಟ್ಟಿ	ಪರಬ
ಸಂವ್ಯಾಪ್ತ	ತುಂಬಿದ
ಹೆಗ್ಗ	ಪೆದ್ದ

♦♦♦

ಮಾಯಾಕೋಲಾಹಲ

ಪಾತ್ರಗಳು

ಈಶ್ವರ	
ಪಾರ್ವತಿ	
ಪ್ರಮಥರು	
ಮಾಯೆ	(ತಾಮಸೀ ಕಳೆ)
ಮಮಕಾರ ರಾಜ	(ಬನವಸೆಯ ಅರಸು)
ಮೋಹಿನೀದೇವಿ	(ರಾಜಪತ್ನಿ)
ಮಾಯೆ	(ರಾಜಕುಮಾರಿ)
ಮದನಿಕೆ	
ಕಲಾವತಿ	(ಸಖಿಯರು)
ಅಲ್ಲಮಪ್ರಭು	(ಅನುಭಾವಿ)
ಅಲ್ಲಮ	(ಮದ್ದಳಿಗ)
ವಿಮಲೆ	(ಪಾರ್ವತಿಯ ಸಖಿ)
ಪುರಜನರು	

ಮಾಯಾ ಕೋಲಾಹಲ
ಯಕ್ಷಗಾನ ಪ್ರಸಂಗ

ನಾಂದಿ : ಭಾಮಿನಿ

ಶ್ರೀಮದಮಲಜ್ಞಾನ ಭಕ್ತಿ ।
ಪ್ರೇಮ ವೇದಪುರಾಣ ಶಾಸ್ತ್ರ ।
ಸ್ತೋಮನುತ ನತ ಚಾರು ಚರಣಾಂಭೋಜ ಘನಮಹಿಮ ॥
ನಾಮರೂಪ ಕ್ರೀಕಳಾಪ ವಿ ।
ರಾಮನನುಪಮ ದಿವ್ಯತೇಜೋ ।
ವ್ಯೋಮ ಮೂರುತಿ ಗುರು ಗುಹೇಶ್ವರಲಿಂಗ ಶರಣಾರ್ಥಿ॥ ೧ ॥

ಸತ್ತವರ ಕತೆಯಲ್ಲ ಜನನದ ।
ಕುತ್ತದಲಿ ಕುದಿಕುದಿದು ಕರ್ಮದ ।
ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ ॥
ಹೊತ್ತುಹೋಗದ ಪುಂಡರಾಲಿಪ ।
ಮತ್ತಮತಿಗಳ ಗೋಷ್ಠಿಯಲ್ಲಿದು ।
ಸತ್ಯ ಶರಣರು ತಿಳಿವುದೀ ಪ್ರಭುಲಿಂಗಲೀಲೆಯನು ॥ ೨ ॥

ಶಿವನು ಶುಭಕರನವನ ಸತ್ವಕೆ ।
ಕವಿಯಲಾರಳು ಮಾಯೆತಾನೇ ।
ಸವೆಯುವಳು ಮಾಯಾಪರಾಭವದಾ ಪ್ರಸಂಗವಿದು ॥
ವಿವರಿಸುವೆನಿದ ಯಕ್ಷಗಾನದ ।
ಕವನ ಸಂಭಾಷಣೆಯ ಕ್ರಮದಲಿ ।
ಶಿವಮನದಿ ಈಕ್ಷಿಸಿರಿ ಅಲ್ಲಮಪ್ರಭು ಮಹಾತ್ಮೆಯನು ॥ ೩ ॥

ದೃಶ್ಯ – ೧

(ಶಿವನ ಒಡ್ಡೋಲಗ– ಈಶ್ವರ– ಪಾರ್ವತಿ– ಪ್ರಮಥರು)

ರಾಗ : ಭೈರವಿ **ತಾಳ : ಝಂಪೆ**

ಕಾಂತಿಶಾಂತಿಯೊಳೆಸೆವ ಕೈಲಾಸಶಿಖರದಲಿ ।
ಅಂತಕಾಂತಕಮಹೇಶ್ವರನು ॥
ಸಂತೈಸುತಿರೆ ಪ್ರಮಥಗಣವನೀಕ್ಷಿಸಿ ಉಮಾ ।
ಕಾಂತೆ ಕೈಮುಗಿದು ಪೇಳಿದಳು ॥ ೧ ॥

ಪ್ರಮಥರು : ಪಾರ್ವತೀಪತೇ ಹರಹರ ಮಾಹಾದೇವ ಶಂಭೋ ಶಂಕರ

ಈಶ್ವರ : ಶುಭವಾಗಲಿ. ಪ್ರಮಥರೇ ಸಿದ್ಧರೇ ಸಾಧ್ಯರೇ ಶಿವಲೋಕವೆಂದರೆ ಈ ಕೈಲಾಸ. ಎತ್ತರವಾದ ಶಿಖರವಿದು, ಎತ್ತರದಲ್ಲಿರುವವರು ಎಚ್ಚರಿಕೆಯಲ್ಲಿ ಇರಬೇಕು. ಕೈಲಾಸ ಶಿಖರದಲ್ಲಿ ಕಾಲೂರಿ ಅಲೆದಾಡುವುದು ಸುಲಭ ವಿಹಾರವಲ್ಲ. ಬಯಕೆಯ ಬಳ್ಳಿಗೆ ಬೇರೂರಲು ನೆಲೆಸಿಗದ ಬೆಳ್ಳಿಯ ಬೆಟ್ಟವಿದು. ಬಯಲಗಾಳಿಗೆ ಮೈಯ್ಯೊಡ್ಡಿ ವಿಶಾಲ ಗಗನವನ್ನು ನೋಡುತ್ತಾ ನಿಂತ ಈ ರಜತಾದ್ರಿಯಲ್ಲಿ ವೈರಾಗ್ಯದಲ್ಲಿ ಬೆರೆತು ಬಾಳುತ್ತಿದ್ದೇವೆ. ತಾತ್ವಿಕ ಚಿಂತನೆಯಲ್ಲಿ ಧ್ಯಾನಮಗ್ನರಾಗುತ್ತೇವೆ. ಉಗ್ರತಪಸ್ಸಿನಲ್ಲಿ ಮೈಮರೆಯುತ್ತೇವೆ. ಭಕ್ತಿಯಲ್ಲಿ ಮೈದಾಳಿಬಂದ ಭಜನೆ ಕುಣಿತಗಳು ನಮಗೆ ಮನೋರಂಜನೆಯ ಮುದವನ್ನು ನೀಡುತ್ತವೆ. ತಾಂಡವ ನಾಟ್ಯದಲ್ಲಿ ತಲ್ಲೀನನಾದ ನನ್ನನ್ನು ನಟರಾಜನೆಂದು ಕೊಂಡಾಡಿದ್ದಾರೆ. ಪಾರ್ವತಿ ಲಾಸ್ಯದ ಅಧಿದೇವತೆಯಾಗಿದ್ದಾಳೆ. ಭೃಂಗಿಯ ತಾಳ, ನಂದಿಕೇಶ್ವರನ ಮದ್ದಳೆ ಯಕ್ಷಕಿನ್ನರರ ಗಾನಗಳು ಹಿನ್ನೆಲೆ ಒದಗಿಸುತ್ತವೆ. ವೈವಿಧ್ಯಕ್ಕೆ ಎಡೆಯಿರುವ ಈ ಎಡೆಯನ್ನು ರುದ್ರ ಭೂಮಿಯೆಂದೂ ಸುಡುಗಾಡೆಂದೂ ತರ್ಕಿಸುವವರೂ ಇದ್ದಾರೆ. ಈಶ್ವರ ತಮೋಗುಣಕ್ಕೆ ಸಂಕೇತ ಎಂಬ ವಾದವೂ ಇದೆ. ಆರೋಪವನ್ನು ಆರೋಹಣದ ಮೆಟ್ಟಲೆಂದೇ ಭಾವಿಸುವ ನನಗೆ ವಿಷದ ಬಟ್ಟಲೂ

ಅಮೃತದ ಅನುಭವ ನೀಡಿದೆ. ಕೈಲಾಸವಾಸಿಗಳಾದವರು ತಾತ್ವಿಕ ಸಮಾಧಾನದಲ್ಲಿರಬೇಕು. ಸಂಶಯದ ಸುಳಿಯಲ್ಲಿ ಸಿಲುಕಬಾರದು. ಹಾಗಾಗಿ ಅಂಗ–ಲಿಂಗಗಳ ಬಗೆಗೋ, ಭಕ್ತಿ–ಮುಕ್ತಿಗಳ ಬಗೆಗೋ, ಬಂಧ–ಮುಕ್ತಿಗಳ ಕುರಿತೋ ನಾವು ಆಗಾಗ ಚರ್ಚಿಸುತ್ತಿರುತ್ತೇವೆ, ಇಂದೂ ಅಂತಹ ಸಮಾಲೋಚನೆ ನಡೆಸೋಣ.

ಪಾರ್ವತಿ : ಜಗದೀಶ್ವರಾ, ಭಕ್ತಿಯಿಂದ ನಿನ್ನನ್ನು ಧ್ಯಾನಿಸುವ ಭಕ್ತರು ಭವಭಯವನ್ನು ಪರಿಹರಿಸಿಕೊಳ್ಳುತ್ತಾರೆ. ಕೈವಲ್ಯವನ್ನು ಗಳಿಸುತ್ತಾರೆ. ಕೈಲಾಸ ವಾಸಿಗಳಾಗುತ್ತಾರೆ. ನಿನ್ನ ಸಾನ್ನಿಧ್ಯ ಸಾಮೀಪ್ಯಗಳು ಸದಾಸಂತೋಷದಾಯಕ, ಸುತ್ತುವರಿದಿರುವ ಈ ಪ್ರಮಥಗಣವನ್ನು ನೋಡಿ ನನಗೂ ಆನಂದವಾಗಿದೆ. ಈ ಸಂದರ್ಭದ ಸಂದೇಹ ಪರಿಹಾರಕ್ಕೆ ಶಿವಾನುಭವ ಗೋಷ್ಠಿಯಲ್ಲಿ ನನ್ನದೊಂದು ಪ್ರಶ್ನೆ – ಶಂಕರಾ.

ರಾಗ : ಸುರುಟಿ **ತಾಳ :** ಏಕ

ಶಂಕರ ಅವಧರಿಸು ಚಿತ್ತದ ।
ಶಂಕೆಯ ಪರಿಹರಿಸು ॥
ಕಿಂಕರರಾಗಿಹ ನಿನ್ನೀ ಪ್ರಮಥರು ।
ಬೆಂಕಿಯುಂಡ ಕಪ್ಪುರದೊಲು ಮುಕ್ತರೊ ॥ ೧ ॥

ಪಾರ್ವತಿ : ಸ್ವಾಮೀ, ಸಾಮೀಪ್ಯಕ್ಕೂ ಸಾಯುಜ್ಯಕ್ಕೂ ಇರುವ ಅಂತರವೇನು? ಸದಾ ನಿನ್ನನ್ನು ಸುತ್ತುವರಿದು ಕೀರ್ತಿಸಿ ಮಣಿದು ಕುಣಿದು ಧನ್ಯತೆ ಪಡೆಯುತ್ತಿರುವ ಈ ಪ್ರಮಥಶ್ರೇಷ್ಠರು ಮಹಾಭಕ್ತರು. ಇವರು ಭಕ್ತಿಯಲ್ಲಿ ಮೈಮರೆತರೆ ಮುಕ್ತಿಯಲ್ಲಿ ಪಾಲುಗೊಂಡಂತೆ ಆಯಿತೇ? ಉರಿಯುಂಡ ಕರ್ಪೂರದಂತೆ ಶೇಷರಹಿತರಾಗಿ ಶಿವತತ್ವದಲ್ಲಿ ಬೆರೆತಿದ್ದಾರೆಯೇ? ಮಹಾಭಕ್ತರಿಗೂ ನಿತ್ಯ ಮುಕ್ತರಿಗೂ ಇರುವ ವ್ಯತ್ಯಾಸವೇನು? ಸದಾಶಿವನ ಸನ್ನಿಧಿಯಲ್ಲಿ ಪ್ರಮಥಗಣರಲ್ಲಿ ಒಂದಾಗುವುದು ಪುಣ್ಯವಿಶೇಷವೇನೋ ಸರಿ. ಆದರೆ ಇದೇ ಪರಮಗುರಿಯೇ? ಇನ್ನೂ ವಿಚಾರಿಸುವುದಿದೆಯೇ? ಪರಮೇಶ್ವರಾ ಪ್ರಪಂಚವನ್ನು ಪ್ರಳಯಗೊಳಿಸುವ ನೀನು ಭೂತನಾಥ. ಪಂಚವದನ. ವಿಶ್ವಂಭರನೂ ಸಂಕಟಹರನೂ ಆದ ನೀನು ನನ್ನ ಸಂಶಯವನ್ನು ಪರಿಹರಿಸು.

ಈಶ್ವರ : ಮಹಾದೇವೀ ನೀನು ಅಗಜೆ. ತರಗೆಲೆಯನ್ನೂ ಮುಟ್ಟದೆ ತಪಸ್ಸು ಮಾಡಿದ ಅಪರ್ಣೆ. ಅನ್ನಪೂರ್ಣೆಯಾದ ನೀನು ಮುಂದಿಟ್ಟ ಪ್ರಶ್ನೆ

ಜ್ಞಾನದ ಹಸಿವಿನ ಉಪಶಮನಕ್ಕೆ ಸಾತ್ವಿಕ ಆಹಾರವಾಗಲಿ. ಕರ್ಮ ಧರ್ಮ ಸಂಯೋಗದ ಬಗ್ಗೆ ತಿಳಿಸುತ್ತೇನೆ.

ರಾಗ : ತೋಡಿ **ತಾಳ :** ರೂಪಕ (ಸಾಂಗತ್ಯ)

ಕರ್ಮಭೂಮಿಯೊಳು ಸದ್ಧರ್ಮಸಾಂಗತ್ಯದಿ ।
ನಿರ್ಮಲ ಜ್ಞಾನವ ಗಳಿಸಿ ॥
ಮರ್ಮವರಿತು ಮುಕ್ತಿಪಡೆಯಬೇಕಮರತ್ವ ।
ಸಮ್ಮುದ ಕೈವಲ್ಯವಲ್ಲ ॥

ಈಶ್ವರ: ಪಾರ್ವತೀ ಸ್ಥೂಲ-ಸೂಕ್ಷ್ಮ-ಕಾರಣಗಳೆಂದು ಪ್ರಕೃತಿಯಲ್ಲಿ ಮೂರುಭೇದಗಳಿವೆ. ಭೂಲೋಕವು ಸ್ಥೂಲಮಾನಸದ ಕರ್ಮಭೂಮಿ. ಕೈಲಾಸವು ಸೂಕ್ಷ್ಮ ಮಾನಸಿಕ ಕರ್ಮಭೂಮಿ. ಕಾರಣವು ಬಯಲು, ಅಲ್ಲಿ ಕರ್ಮವೇ ಇರುವದಿಲ್ಲ. ಮುಕ್ತಿ ಎಂದರೆ ಕಾರಣವಸ್ತುವಿನಲ್ಲಿ ಐಕ್ಯತೆ. ಆಚಾರ-ವಿಚಾರಗಳನ್ನು ಸಮನ್ವಯಗೊಳಿಸಿ ವಿವೇಕವನ್ನು ಗಳಿಸುವ ಸಾಧನೆಗೆ ಮರ್ತ್ಯಲೋಕವೇ ಕಾರ್ಯಕ್ಷೇತ್ರ. ಮರ್ತ್ಯಲೋಕವನ್ನು ಕರ್ತಾರನ ಕಮ್ಮಟವೆಂದೇ ತೀರ್ಮಾನಿಸಿದ್ದಾರೆ. ಇಲ್ಲಿ ಎಲ್ಲವೂ ಹುಟ್ಟಿ ಉಳಿದು ಬೆಳೆದು ಅಳಿಯುತ್ತದೆ. ಆದ್ದರಿಂದ ಫಲವತ್ತಾದ ಈ ನೆಲದಲ್ಲಿಯೇ ಶ್ರೇಷ್ಠವಾದದ್ದನ್ನು ಬೆಳೆಯಬೇಕು. ಸತ್ಕರ್ಮದ ಮೂಲಕ ಸದ್ಧರ್ಮದ ಸಾಕ್ಷಾತ್ಕಾರ ಪಡೆಯಬೇಕು. ವಾಸ್ತವಿಕ ಅರಿವನ್ನು ಬೆಳೆಸಿಕೊಳ್ಳಬೇಕು. ಪ್ರಮಥತ್ವ ಅಮರತ್ವಗಳು ಪುಣ್ಯವಿಶೇಷದ ಪದವಿಗಳು. ಪುಣ್ಯಲೋಕಗಳು ಆನಂದದ ನಿಲ್ದಾಣಗಳು. ಜೀವಜಗತ್ತಿನಲ್ಲಿ ಬದುಕು ಮನಸ್ಸಿನ ಮೂಲಕವೇ ಆರಂಭವಾಗುತ್ತದೆ. ಸ್ವಾರ್ಥವನ್ನು ಬದಿಗಿಟ್ಟು ಪಾರಮಾರ್ಥಿಕ ಧೋರಣೆಯಿಂದ ಕಾಯವನ್ನು ಕರ್ಮದಲ್ಲಿ ತೊಡಗಿಸುವದು ಶ್ರೇಷ್ಠ ಕಾಯಕ. ಕಾಯಕವೇ ಕೈಲಾಸವಾಗುವದು ವಿವೇಕದಿಂದ. ಆನಂದವನ್ನು ಮನಸ್ಸಿನ ಮೂಲಕ ಅನುಭವಿಸುತ್ತೇವೆ. ಆನಂದ ಕಾರಣವಾಗುತ್ತದೆ; ಮನಸ್ಸು ಕರ್ತೃವಾಗುತ್ತದೆ. ಮನಸ್ಸನ್ನು ಲಯಗೊಳಿಸಿ ಕರ್ತೃತ್ವವನ್ನು ಕಳೆದುಕೊಳ್ಳುವದೇ ನಿತ್ಯಮುಕ್ತಿ. ಸಂಗ-ಸಂಗತಿಗಳು ಪ್ರತ್ಯೇಕವಾಗಿರುವವರೆಗೆ ಕರ್ಮದಿಂದ ಬಿಡುಗಡೆಯಾಗುವದಿಲ್ಲ. ಜ್ಞಾನ-ಜ್ಞೇಯ ಒಂದಾಗದಿದ್ದರೆ ವಿಚಾರಕ್ಕೆ ಮೋಕ್ಷವಿಲ್ಲ. ಮನಸ್ಸು ಲಯವಾಗದೆ ಬಯಕೆ ಬಯಲಾಗುವದಿಲ್ಲ. ಬಯಕೆ ಬಯಲಾಗದೆ ಪ್ರತ್ಯೇಕತೆ ಅಳಿಯುವುದಿಲ್ಲ. ಈ ಸಮನ್ವಯ ಸಾಧನೆಗೆ ಭೂಲೋಕವೇ ಕರ್ಮಭೂಮಿ. ಪ್ರಮಥರು ನಿತ್ಯತೃಪ್ತರು ನಿತ್ಯಮುಕ್ತರಲ್ಲ, ಕಾರಣ-

ಕಾರಣವೇ ಆಗಿ ಕಾರ್ಯದ ಸಂಬಂಧ ಕಡಿದುಕೊಳ್ಳುವುದೇ ನಿತ್ಯಮುಕ್ತಿ. ಆ ದಿಸೆಯಲ್ಲಿ ಮನಸ್ಸನ್ನು ಪ್ರವೃತ್ತಗೊಳಿಸುವ ಪ್ರವೃತ್ತಿ ಭಕ್ತಿ. ಈ ಪ್ರವೃತ್ತಿಗೂ ನಿವೃತ್ತಿ ಸಿಗುವದು ಕರ್ಮ ಭೂಮಿಯಲ್ಲಿ.

ಪಾರ್ವತಿ : ಮುಕ್ತಿ ಸಾಧನೆಯ ಕ್ಷೇತ್ರ ಕೈಲಾಸವಲ್ಲ, ಭೂಲೋಕ ಎಂಬುದನ್ನು ಒಪ್ಪಿಕೊಳ್ಳೋಣ. ಇಷ್ಟಕ್ಕೇ ಮುಕ್ತಿಯ ಸಂಬಂಧದ ಸಮಸ್ಯೆ ಬಗೆ ಹರಿಯುವದಿಲ್ಲ. ಇನ್ನಷ್ಟು ಜಟಿಲವಾಗುತ್ತದೆ.

ಈಶ್ವರ : ಉತ್ತರದಲ್ಲಿ ಸ್ಪಷ್ಟೀಕರಣ ಬಯಸುವುದು ಪ್ರಶ್ನಿಸಿದವರ ಹೊಣೆ. ಶಿಖರದತ್ತರದಲ್ಲಿ ಇರುವ ಶಿವ ಭೂಮಿಗೆ ಕಣ್ಣು ಹಾಯಿಸಿದ್ದೇಕೆ? ಒಂದು ಹಂತಕ್ಕೆ ತಲುಪಿದವರು ಮೇಲೇರುವ ಸಲುವಾಗಿ ಕೆಳಗಿಳಿಯುವ ಅಗತ್ಯ ಏನು? ಈ ಶಂಕೆಯೋ?

ಪಾರ್ವತಿ : ಹೌದು ಹೌದು. ಪುಣ್ಯಲೋಕದಲ್ಲಿದ್ದೂ ಸೇರಲಾಗದ ಗುರಿಯನ್ನು ಕರ್ಮಭೂಮಿಯಲ್ಲಿ ಕಂಡುಕೊಳ್ಳುವದು ಹೇಗೆ? ಜಡೆಯ ಜಂಗಮನೆಂದು ಸ್ತುತಿಸಲ್ಪಡುವ ನಿನ್ನ ನಿರೂಪಣೆಯೂ ಜಟಿಲವಾಗಿದೆ; ಓ ನಂಜುಗೊರಳಾ.

ರಾಗ : ಪೀಲು **ತಾಳ** : ಅಷ್ಟ

ನಂಜುಗೊರಳ ನಿನ್ನ ನುಡಿಯು ವಿಚಿತ್ರ ।
ಜಂಜಡದೊಡಲು ಭೂತಲ ಕುರುಕ್ಷೇತ್ರ ॥
ಭಂಜಿಸಿ ಮದವ ಮುಕ್ತಿಯ ಗುರುತಿಸಲು ।
ಅಂಜನವೀವ ಸದ್ಗುರುವಾರು ಪೇಳು ॥

ಪಾರ್ವತಿ : ವಿಷವನ್ನು ಹೀರಿ ಕಂಠದಲ್ಲಿ ನಿಲಿಸಿಕೊಂಡ ನಿನ್ನನ್ನು ನೀಲಕಂಠನೆಂದೂ ನಂಜುಗೊರಳನೆಂದೂ ಕರೆಯುತ್ತಾರೆ. ಮಹಾದೇವಾ ನೀನೀಗ ವಿವರಿಸಿದ ವಿಷಯಗಳಲ್ಲಿ ನಂಜಿಲ್ಲವಷ್ಟೇ? ಏಕೆಂದರೆ ದಿವ್ಯತೆಯ ದರ್ಶನ ಪಡೆದವರು ಭೂಮಿಯನ್ನು ತಾಮಸದ ನೆಲೆಯೆಂದು ಗುರುತಿಸಿದ್ದಾರೆ. ಇದು ಹೀಗೆ ಎಂದು ಗುರುತಿಸುವುದಿರಲಿ, ಯಾವುದು ಹೇಗೆ ಎಂದು ತಿಳಿಯದೆ ಪರದಾಡುವ ಪರಿಸ್ಥಿತಿ ಭೂಮಿಯಲ್ಲಿದೆ. ಅಲ್ಲಿಯ ಕರ್ಮಕ್ಷೇತ್ರವೂ ಗೊಂಡಾರಣ್ಯವೇ ಆಗಿದೆ. ಧರ್ಮದ ದಾರಿಯನ್ನು ಹುಡುಕುವುದೇ ಕಷ್ಟ. ಆ ಜಂಜಾಟದ ನೆಲೆಯಲ್ಲಿ ಗುರಿಯನ್ನು ಗುರುತಿಸುವುದು ಕಷ್ಟ. ನಿತ್ಯಭುಕ್ತಿಗೆ ಹೋರಾಡುವ ವ್ಯಕ್ತಿಗಳಿಗೆ ನಿತ್ಯಮುಕ್ತಿಯ ಮಹತ್ವ ಗೊತ್ತಾಗುವದು ಹೇಗೆ? ನಿಜದ ನೆಲೆಯನ್ನು ತಿಳಿದು ಬೋಧಿಸುವವರು ಯಾರು? ಸಾಧು ಮಾರ್ಗದಲ್ಲಿ ಸತ್ಯ

ತತ್ವವನ್ನು ಗುರುತಿಸಿ ಸ್ಥಾವರ-ಜಂಗಮಗಳ ತಾರತಮ್ಯವನ್ನು ಸೈದ್ಧಾಂತಿಕವಾಗಿ ತಿಳಿಸುವ ಸಾಮರ್ಥ್ಯ ಪಡೆದ ಸದ್ಗುರುಗಳು ಯಾರಿದ್ದಾರೆ?

ಈಶ್ವರ : ಹೈಮವತೀ, 'ರತ್ನಗರ್ಭಾ ವಸುಂಧರಾ', ಭೂಮಿ ಬಂಜೆಯಲ್ಲ. ಮಹಾನ್ ಸಾಧಕರೂ-ಬೋಧಕರೂ-ಭಕ್ತರೂ-ಮುಕ್ತರೂ-ಜಂಗಮರೂ-ಲಿಂಗಾಂಗಿಗಳೂ ಇದ್ದೇ ಇರುತ್ತಾರೆ.

ಪಾರ್ವತಿ : ಭೂಗರ್ಭದಲ್ಲಿ ಇರುವ ನಿಧಿನಿಕ್ಷೇಪಗಳನ್ನು ಅಂಜನದ ಮೂಲಕ ಕಂಡು ಹಿಡಿದು ಅಗೆದು ತೆಗೆಯುವ ಸಾಹಸಿಗಳು ಇರಬಹುದು. ಮನದ ಮೂಲೆಯನ್ನು ಕೆದಕಿ ಬಯಕೆಯ ಬೀಜವನ್ನು ಕಿತ್ತುಕಾಣಿಸುವ ಮಹಾನ್ ಗುರುಗಳು ಯಾರಿದ್ದಾರೆ?

ಈಶ್ವರ : ಸದ್ಯಕ್ಕೆ ಸದ್ಯೋಜಾತ ಮಹಾಪುರುಷನೊಬ್ಬ ಇದ್ದಾನೆ.

ಪಾರ್ವತಿ : ಹೇಳು, ಅವನ ಹೆಸರನ್ನು ಕೇಳೋಣ.

ಈಶ್ವರ : ಕೇಳುವ ತವಕ ನಿನಗಿದ್ದರೆ ಹೇಳೋಣ, ಗಿರಿಜೇ.

ರಾಗ : ನವರೋಜ **ತಾಳ :** ಏಕ

ಪ್ರಕೃತದೊಳಲ್ಲಮ ಪ್ರಭುವು ಶುಭ ।
ಸುಕೃತವ ಬೋಧಿಪ ಗುರುವು ॥
ಪ್ರಕೃತಿಯ ತತ್ವವ ಚಿಂತಿಸಿ ತಿಳಿದವ ।
ವಿಕೃತ ವಿಕಾರವ ತಿದ್ದುವ ಜಂಗಮ ॥

ಈಶ್ವರ : ಪ್ರಕೃತಿಯ ಮಡಿಲಿನಲ್ಲಿ ಮೈದೋರಿದ ಮಾನವರಲ್ಲಿ ಮಾಯಾ ಮೋಹಗಳಿಗೆ ವಶರಾಗುವವರೇ ಹೆಚ್ಚು. ಈ ಸಂಗತಿಗೆ ಅಪವಾದವಾಗಿ ಜಂಗಮನೊಬ್ಬ ಅವತರಿಸಿದ್ದಾನೆ. ಸದ್ಬೋಧೆ ನೀಡುವ ಸಮರ್ಥ. ಬದುಕು ಶಾಶ್ವತವಲ್ಲ ಎಂದು ತಿಳಿದು ಬಾಳಿದರೆ, ಭವವು ಬಂಧನವಲ್ಲ. ಅಂಗವೇ ಆಕಾರವಲ್ಲ, ಸಂಗವೇ ಸೌಖ್ಯವಲ್ಲ. ಬಯಕೆ ಬಯಲಾದರೆ ಭೋಗ ತ್ಯಾಗವಾಗುತ್ತದೆ ಎಂದು ತಿಳಿದು ವ್ಯವಹರಿಸುತ್ತಿದ್ದಾನೆ. ಅಹುದಾದದ್ದೇನು? ಅಲ್ಲವಾದುದು ಯಾವುದು? ಈ ವಾಸ್ತವಿಕ ಅರಿವನ್ನು ಪಡೆದ ಅನುಭಾವಿ. ತಾನೂ ಮುಕ್ತನಾಗಿ ತನ್ನ ಒಡನಾಡಿಗಳಿಗೂ ಮುಕ್ತಿಯ ದಾರಿಯನ್ನು ಕಾಣಿಸುವ ಸದ್ಗುರು ಆತನೇ. ಈಗ ಭೂಮಿಗೆ ಬಹಿರಂಗದ ಬೆಳಕು ಸೂರ್ಯನಿಂದ, ಅಂತರಂಗದ ಬೆಳಕು ಅಲ್ಲಮನಿಂದ. ಅವನಿಂದ ಅವನಿಗೇ ಧನ್ಯತೆ.

ಪಾರ್ವತಿ : ಇಷ್ಟೆಲ್ಲ ಅತಿಶಯೋಕ್ತಿ ಯಾಕೆ? ಭೂಮಿಯಲ್ಲಿ ಅಲೆದಾಡುವ ಆ ಹುಲುಮನುಜ.

ರಾಗ : ಕೇದಾರಗೌಳ **ತಾಳ :** ಝಂಪೆ

ಹುಲುಮನುಜನವನು ಘನವೆ । ಅರೆಕ್ಷಣದೊ ।
ಳಳಿದವನ ಬಲುಹ ತಿಳಿವೆ ॥
ಇಳೆಗೆ ಗುರುವಪ್ಪುದಿರಲಿ । ಬಲುಮೋಹ ।
ದೊಳು ಸಿಲುಕಿ ಬೆಂಡಾಗಲಿ ॥

ಪಾರ್ವತಿ : ಸರ್ವಜ್ಞನೂ ಸರ್ವೇಶ್ವರನೂ ಆದ ನಿನಗಿಂತಲೂ ಹೆಚ್ಚಿನವನೇ ಆ ಅಲ್ಲಮ? ಪ್ರಶ್ನೆ ಕೇಳಿದ ನನ್ನನ್ನು ಪೆಚ್ಚಾಗಿಸುವ ಬಗ್ಗೆ ಬಡ ಜಂಗಮನೊಬ್ಬನನ್ನು ಜಗದ್ಗುರು ಎಂದು ಬಣ್ಣಿಸುತ್ತಿದ್ದೀರಿ. ಆ ಹುಲುಮಾನವ ಮಹಾ ಪುರುಷನೇ? ಮಾಯಾ ಮೋಹಗಳಿಗೆ ಸಿಲುಕುವವನಲ್ಲ, ಎಂದು ಬಣ್ಣಿಸಿದ್ದೀರಿ. ಎಂತೆಂತಹ ಮಹಾತ್ಮರು ಮಾಯೆಗೆ ವಶರಾಗಿದ್ದಾರೆ. ಏನವನ ಶಕ್ತಿ? ಎಷ್ಟು ಅವನ ಭಕ್ತಿ? ಎಂಬುದನ್ನು ಅಳೆಯುತ್ತೇನೆ ತಿಳಿಯುತ್ತೇನೆ.

ಈಶ್ವರ : ನಿತ್ಯಮುಕ್ತರ ಬಗೆಗೆ ತಿಳಿದುಕೊಳ್ಳುವಾಗ ತಾಮಸಕ್ಕೆ ಒಳಗಾಗಬಾರದು.

ಪಾರ್ವತಿ : ಅಲ್ಲಮನ ಅರಿವನ್ನು ಕಾಡಿ ಅವನನ್ನು ಅಧಃಪತನಕ್ಕಿಳಿಸುತ್ತೇನೆ.

ಈಶ್ವರ : ಮಾಯಾ ಪಾಶಕ್ಕೆ ತಗ್ಗದ-ಜಗ್ಗದ ಧೃತಿ ಅವನದು ಎಂದು ನಾನು ಹೇಳುತ್ತೇನೆ.

ಪಾರ್ವತಿ : ನನ್ನ ಕುತೂಹಲವೀಗ ಪಂಥವಾಗಿದೆ. ಪರೀಕ್ಷಿಸಿಯೇ ಒಪ್ಪುತ್ತೇನೆ.

ಈಶ್ವರ : ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ದುಡುಕಬೇಡ.

ಪಾರ್ವತಿ: ದುಡುಕುತ್ತೇನೋ ಹುಡುಕುತ್ತೇನೋ ಆಮೇಲೆ ಗೊತ್ತಾದೀತು ಮಾಯೇ.

(ಘೋರಾಕಾರದಲ್ಲಿ ಪ್ರವೇಶಿಸಿ)

ಘೋರಮಾಯೆ : ತಾಯೇ ನನ್ನನ್ನು ಸ್ಮರಿಸಿ ಸೃಜಿಸಿ ಕರೆದೆ !

ರಾಗ : ಘಂಟಾರವ **ತಾಳ :** ಅಷ್ಟ

ಎನ್ನನೇತಕೆ ಬರಿಸಿದೆ ತ್ರೈಜಗ ।
ವೆನ್ನ ಮುಷ್ಟಿಯೊಳಿಹುದು ವಾರಿಧಿ ।
ಯನ್ನು ಹೀರಲೆ ಸೂಚಿಸು ॥

ಘೋರಮಾಯೆ : ಮಹಾದೇವೀ ನಿನ್ನ ತಾಮಸಕಳೆಯಿಂದ ಮೈದಾಳಿ ಬಂದೆ. ಏನಾಗಬೇಕು ನನ್ನಿಂದ ? ಹದಿನಾಲ್ಕು ಲೋಕಗಳನ್ನು ಹಿಸುಕಿ ಹಿಂಡಬೇಕೇ? ಸಪ್ತಸಮುದ್ರಗಳನ್ನು ಕುಡಿಯಬೇಕೆ? ನವಗ್ರಹಗಳನ್ನು ಚಂಡಾಡಬೇಕೇ? ಬೇಗ ಹೇಳು.

ಪಾರ್ವತಿ : ಈಗಲೇ ಭೂಲೋಕಕ್ಕೆ ಹೋಗು. ಅಲ್ಲಿ

ರಾಗ : ತೋಡಿ **ತಾಳ :** ಏಕ

ಜಗದೊಳಗಲ್ಲಮನೆನ್ನುವ ಜಂಗಮ ।
ಮಿಗಿಲಾಗಿಹನಂತೆ ॥
ಬಗೆಬಗೆಯಿಂದವನನು ಕಾಡಿಸು ನೀ ।
ನಗೆಗೇಡಪ್ಪಂತೆ ॥

ಪಾರ್ವತಿ : ಭೂಲೋಕದಲ್ಲಿ ಬಳ್ಳಿಗಾವಿಯ ಬಳಿಯಲ್ಲಿ ಅಲ್ಲಮನೆಂಬ ಜಂಗಮನೊಬ್ಬ ಇದ್ದಾನಂತೆ. ನೀನು ಸುಂದರ ಹೆಣ್ಣಾಗಿ ಹುಟ್ಟಿ ಅವನನ್ನು ಆಕರ್ಷಿಸು. ಮೋಹಪಾಶದಲ್ಲಿ ಕಟ್ಟಿ–ಕಾಡಿಸಿ ಪೀಡಿಸು. ಲೋಕದ ಜನ ಕೈತಟ್ಟಿ ನಗುವಂತೆ ಮಾಡು. ನಿತ್ಯಮುಕ್ತನಾಗಲು ಬಯಸಿದ ಆತ ನಿನ್ನ ಮುಷ್ಠಿಯಲ್ಲಿ ಸಿಲುಕಿ ನರಳುವಂತೆ ಮಾಡು. ಪ್ರಮಥರಿಗಿಂತ ಪ್ರಥಮಸ್ಥಾನ ಅವನದೋ? ಅಥವಾ ಪ್ರಮಥರಲ್ಲಿ ಮೊದಲಿಗನೋ? ಎಂದು ಗೊತ್ತಾಗಲಿ, ನಿನ್ನ ಸೌಂದರ್ಯದ ಬಂದಿಯಾಗಲಿ ಆತ. ಮಾಯಾಪಾಶದಲ್ಲಿ ಕಟ್ಟಿ ಎಳೆದುಕೊಂಡು ಬಾ.

ಘೋರಮಾಯೆ : ಇಷ್ಟಕ್ಕಾಗಿಯೋ ನನ್ನ ಉದ್ಭವ ! ಹಃ ಹಃ ಹಃ ಹಃ

ರಾಗ : ಮೋಹನ **ತಾಳ :** ಏಕ

ನರಲೋಕದಿ ನಾ ಜನಿಸಿ । ಸುರ ।
ತರುಣಿಯರಂದವ ಮರೆಸಿ ॥
ಸೆರೆಹಿಡಿಯುವೆನಲ್ಲಮನ । ಎಳ್ಳೆ ।
ತರುವೆನು ಪರಿಕಿಸು ಹದನ ॥

ಘೋರಮಾಯೆ : ಭೂಲೋಕದಲ್ಲಿ ಹೆಣ್ಣಾಗಿ ಹುಟ್ಟುತ್ತೇನೆ. ನನ್ನನ್ನು ನೋಡಿದ ಮನುಷ್ಯರು ಸುರಸುಂದರಿಯನ್ನು ಮರತೇ ಬಿಡಬೇಕು. ನನ್ನನ್ನೇ ಸ್ಮರಿಸಬೇಕು. ಆ ಅಲ್ಲಮ ನನ್ನನ್ನು ನೋಡಿ ಮರುಳಾಗಿ ಪರಿತಪಿಸಿ ಶರಣಾಗಬೇಕು. ಕಿರುಬೆರಳ ಸನ್ನೆಯಲ್ಲಿ ಅವನನ್ನು ಕುಣಿಸುತ್ತೇನೆ,

ದಣಿಸುತ್ತೇನೆ, ಕಾಡಿಸಿ ಪೀಡಿಸಿ ಕಟ್ಟಿ ಎಳೆದುತಂದು ಕಾಣಿಸುತ್ತೇನೆ. ಹರಿಯು ಸಿರಿಗೆ ಹೃದಯವನ್ನು ಕೊಟ್ಟ. ಬ್ರಹ್ಮ ಮುಖದಲ್ಲಿ ವಾಣಿಯನ್ನು ಹೊತ್ತ. ಹರನು ಶಿರದಲ್ಲಿ ಗಂಗೆಯನ್ನು ಧರಿಸಿದ. ಈ ಮಾಯೆಯನ್ನು ಗೆಲ್ಲುವವರೇ ಇಲ್ಲ. ಆ ಅಲ್ಲಮನು ನನಗೆ ಪ್ರತಿಸ್ಪರ್ಧಿಯಲ್ಲ.

(ಹೋಗುವಳು)

ಪಾರ್ವತಿ : ಇನ್ನು ಆ ಅಲ್ಲಮನ ಕತೆ ಏನಾಗುತ್ತದೆ, ಎಂದು ಎಲ್ಲರೂ ನೋಡಲಿ.

ಈಶ್ವರ : ಸಾತ್ವಿಕ ತೇಜಸ್ಸನ್ನು ತಾಮಸೀ ಕಳೆಯಿಂದ ಕಳೆಗುಂದಿಸುವ ಯೋಜನೆ ನಿನ್ನದು.

ಪಾರ್ವತಿ : ಈ ಪರೀಕ್ಷೆಯ ಪರಿಣಾಮ ವಿಶ್ವಕ್ಕೆ ದೃಶ್ಯವಾಗಲಿ, ದೃಷ್ಟಾಂತವಾಗಲಿ.

ಪ್ರಮಥರು : ಪಾರ್ವತೀಪತಯೇ ಹರಹರ ಮಹಾದೇವ.

(ಮಮಕಾರ ಮಹಾರಾಜನ ಒಡ್ಡೋಲಗ)

ರಾಗ : ಶಂಕರಾಭರಣ **ತಾಳ :** ತ್ರಿವುಡೆ

ಸಿರಿಯು ಸೊಬಗಿನೊಳಿರುವ ಬನವಸೆ ।
ಪುರವರವ ನಾಳುತ್ತಲಿ ।
ಹರುಷದಿಂ ಮಮಕಾರ ನೃಪನಿರೆ ।
ಅರಸಿ ಮೋಹಿನಿ ಸಹಿತಲಿ ॥

ದೃಶ್ಯ – ೨

ಮಮಕಾರ : ಮೋಹಿನೀ, ಯುಕ್ತಕಾಲದಲ್ಲಿ ನಿನ್ನ ಕೈಹಿಡಿದೆ. ಈ ವೈಜಯಂತೀಪುರದ ಆಡಳಿತವನ್ನು ಕೈಗೆತ್ತಿಕೊಂಡೆ. ಈ ನಾಡಿಗೆ ಬನವಸೆಯೆಂಬ ಅನ್ವರ್ಥಕ ನಾಮವಿದೆ. ಸುಂದರ ಅಡವಿಗಳಿಂದ ಸುತ್ತುವರಿದ ನೆಲೆ ಇದು. ಕಳಿತ ಮಾವಿನ ಹಣ್ಣು, ಅರಳಿದ ಮಲ್ಲಿಗೆ, ಕೂಗುವ ಕೋಗಿಲೆ, ಹಾರುವ ದುಂಬಿ, ಬೀಸುವ ತಂಗಾಳಿಗಳ ಜತೆಗೆ ಈ ಪ್ರದೇಶದ ನೆನಪನ್ನು ಜೋಡಿಸಿಕೊಂಡು ಕವಿಗಳು ಕೊಂಡಾಡಿದ್ದಾರೆ. ಮನದ ಕಲ್ಪನೆಗೆ ಮಣ್ಣಿನ ವಾಸನೆಯನ್ನು ಅಂಟಿಸಿಕೊಂಡ ಅಂತಹ ಕವಿಗಳಿಂದ ಈ ನಾಡಿಗೂ ಧನ್ಯತೆ. ಸುಧಾಪುರ ನಿನ್ನ ತವರು. ಅರಸು ಮನೆತನದ ಸಂಬಂಧ ನಮ್ಮನ್ನು ಒಂದಾಗಿಸಿದೆ. ಪ್ರಿಯತಮೇ, ಕದಂಬ ಕುಲದ

ಕೀರ್ತಿವೃಕ್ಷ ನಮ್ಮ ನೆರಳಿಗಿದೆ. ಸಂಪತ್ತಿಗೆ ಕೊರತೆಯಿಲ್ಲ. ಸಂಸಾರದಲ್ಲಿ ತೊಡಕಿಲ್ಲ. ಸುಖ-ಸಂತೋಷಗಳಿಂದ ಕಾಲ ಕಳೆಯುತ್ತಿದ್ದೇವೆ.

ಮೋಹಿನಿ: ನೀವು ಹೇಳುವುದು ನಿಜ. ಈ ನಾಡಿನ ಬಗ್ಗೆ ನೀವು ತೋರಿದ ಆದರಾಭಿಮಾನಗಳು ಹೆಮ್ಮೆಪಡುವ ಸಂಗತಿ. ಆದರೆ ನನ್ನ ಬಗ್ಗೆ ನೀವು ಇರಿಸಿಕೊಂಡ ಮಮಕಾರಕ್ಕೆ ನಾನು ಪಾತ್ರಳೇ? ಎಂದು ಯೋಚಿಸುತ್ತಿದ್ದೇನೆ, ಸುಖದ ಸುಪ್ಪತ್ತಿಗೆಯಲ್ಲಿ ಕಾಲ ಕಳೆಯುತ್ತಿದ್ದೇವೆ. ಆನಂದದ ಕ್ಷಣಗಳನ್ನು ಅನುಭವಿಸುವ ಯೋಗ ಮಾತ್ರ ಇಲ್ಲ.

ಮಮಕಾರ: ಬೆಣ್ಣೆಯಲ್ಲಿ ಕೂದಲು ಎಳೆದ ಹಾಗೆ ಮೃದುವಾಗಿ ಮಾತಾಡಿದೆ. ಸಂಗೀತದ ಸ್ವರಗಳ ಮಧ್ಯೆ ಸಾಹಿತ್ಯದ ಅರ್ಥ ಗೌಣವಾಗುತ್ತದೆ. ಅದೇ ರೀತಿ ನಿನ್ನ ಮೆಲುದನಿಯ ಮಾತಿನಲ್ಲಿ ಮನದ ಇಂಗಿತವಿದೆ. ನನಗದು ಅರ್ಥವಾಗಲೇ ಇಲ್ಲ.

ಮೋಹಿನಿ: ಹೃದಯೇಶ್ವರಾ ನನ್ನ ಅಂತರಂಗದ ವೇದನೆಗೆ ಕಾರಣ ಸಂತಾನ.

ರಾಗ : ಭೈರವಿ **ತಾಳ :** ರೂಪಕ

ಸಂತಾನ ಭಾಗ್ಯವು ಈವರೆಗಿಲ್ಲ ।
ಚಿಂತಿಸುತಿಹೆನಿದ ಹಗಲಿರುಳೆಲ್ಲ ॥
ಎಂತುಟೊ ವಿಧಿಯ ಸಂಕಲ್ಪ ಗೊತ್ತಿಲ್ಲ ।
ಭ್ರಾಂತಿ ಕವಿದಿದೆ ಮನಕೆ । ಶಾಂತಿ ಎಲ್ಲಿದೆ ॥

ಮೋಹಿನಿ : ಆ ದೇವರು ನಮಗೆ ಎಲ್ಲಾ ಭಾಗ್ಯಗಳನ್ನೂ ಕೊಟ್ಟಿದ್ದಾನೆ. ಸಂತಾನ ಸೌಭಾಗ್ಯವನ್ನು ಕರುಣಿಸಲೇ ಇಲ್ಲ. ನಮ್ಮ ದಾಂಪತ್ಯ ಆರಂಭವಾಗಿ ಆರು ವಸಂತಗಳು ಕಳೆದಿವೆ. ನಾನು ಗರ್ಭಿಣಿಯಾಗಲಿಲ್ಲ. ನನ್ನ ಹಣೆಯಲ್ಲಿ ಏನು ಬರೆದಿದೆಯೋ? ಬಂಜೆತನದ ಬವಣೆಯಲ್ಲಿಯೇ ಬೆಂದು ಬಾಳನ್ನು ಸಾಗಿಸಬೇಕೇ? ಶಿಶು ಮಕ್ಕಳ ಅಳುವಿನ ಧ್ವನಿ ಕೇಳಿದರೆ ನನಗೂ ದುಃಖವಾಗುತ್ತದೆ. ತೂಗುಮಂಚದ ಮೇಲೆ ಕುಳಿತರೆ ತೊಟ್ಟಿಲಿನ ನೆನಪಾಗುತ್ತದೆ. ತವರಿಗೆ ಹೋಗಲು ನಾಚಿಕೆ. ನಿಮಗೆ ಮುಖ ತೋರಿಸಲು ಭಯ. ರಾಜ ವೈದ್ಯರನ್ನು ಕೇಳಬೇಕಿತ್ತು ಎಂದು ದಾಸಿಯರು ಎಚ್ಚರಿಸುತ್ತಿರುತ್ತಾರೆ. ವ್ರತ ಮಾಡಿದೆ. ಯಾವ ಮಾಟ ಮಂತ್ರ ಮದ್ದುಗಳಿಂದಾದರೂ ಆದೀತು, ನಾನು ತಾಯಿಯಾಗಲೇಬೇಕೆಂದು ಪ್ರಯತ್ನ ಮಾಡಿದೆ. ಪ್ರಯೋಜನ ಸಿಗಲಿಲ್ಲ. ಕೈ ತೋರಿಸಿದೆ, ಕಣಿ ಕೇಳಿದೆ. ಕೊರವಂಜಿಯರ ಉಡಿ ತುಂಬಿತೇ

ವಿನಹ ನನ್ನ ಒಡಲು ತಣಿಯಲಿಲ್ಲ. ಎಲ್ಲರೂ ನಗುತ್ತಾರೆ ಎಂದು ನಾನೂ ನಗುತ್ತಿದ್ದೇನೆ. ಈ ಬಗ್ಗೆ ನಿಮಗೇನೂ ಅನಿಸುವುದಿಲ್ಲವೇ?

ಮಮಕಾರ : ಮೋಹಿನೀ, ನಿನ್ನ ಎಡಗೈಯ್ಯಲ್ಲಿ ಸಂತಾನ ರೇಖೆ ಇದೆ. ಜಾತಕದ ಗೋಚರ ಫಲದಲ್ಲಿ ಮಕ್ಕಳ ಯೋಗವಿದೆ. ಹೀಗಿದ್ದೂ ಕಾಣದ ಅದೃಷ್ಟದ ಬಗೆಗೂ ಓದಲಾಗದ ಹಣೆಬರೆಹದ ಬಗೆಗೂ ಯೋಚಿಸಿ ತಲೆ ಕೆಡಿಸಿಕೊಳ್ಳುತ್ತಿದ್ದೀಯೆ. ನಮ್ಮ ಇಷ್ಟಾರ್ಥವನ್ನು ಸಲ್ಲಿಸುವ ದೇವರು ನಮ್ಮ ಪಾಲಿಗೆ ಕಾಮಧೇನುವಾಗಿದ್ದಾನೆ. ಕಾಂತೇ ಚಿಂತೆ ಯಾಕೆ? ನಮ್ಮ ಕುಲದೈವ.

ರಾಗ : ಸಾರಂಗ **ತಾಳ : ಅಷ್ಟ**

ಕುಲದೈವ ಮಧುಕೇಶ್ವರ । ನಮ್ಮಿಷ್ಟವ ।
ಸಲಿಸುವ ಅಭಯಂಕರ ॥
ಹಲವು ಹಂಬಲವಾಂತು ಬಳಲಲೇತಕೆ ಕಾಂತೆ ।
ಚಲುವಿನ ಪುತ್ಥಳಿಯ । ನೀ ಪಡೆಯುವೆ ॥

ಮಮಕಾರ : ಸಂಕಟಹರನಾದ ಮಧುಕೇಶ್ವರನು ನಮ್ಮ ಕೈ ಬಿಡುವದಿಲ್ಲ. ಅನುಗ್ರಹ ಕಾಣಿಸಿ ನಮ್ಮನ್ನು ರಕ್ಷಿಸುತ್ತಾನೆ. ನೀನೇಕೆ ಚಾಲುವರಿದು ಚಿಂತಿಸುತ್ತಿದ್ದೀಯೆ. ನಂಬಿ ಕರೆದೊಡೆ ಓ ಎನ್ನನೇ ಶಿವನು? ಅವನೊಲಿದರೆ ಕೊರಡು ಕೊನರುತ್ತದೆ. ಬರಡು ಹಯನಾಗುತ್ತದೆ. ಇಲ್ಲಿಯ ಕ್ಷೇತ್ರದಲ್ಲಿ ಪ್ರತಿಷ್ಠಿತನಾಗಿ ಪ್ರಸಿದ್ಧನಾದ ಆ ಮಹಾಮಹಿಮನು ನಮ್ಮನ್ನು ರಕ್ಷಿಸುತ್ತಾನೆ. ನಿನ್ನ ನಡೆನುಡಿಗಳು ವಿಚಿತ್ರವಾಗಿವೆ. ಮಕ್ಕಳ ನೆನಪಿನಲ್ಲಿ ಭ್ರಾಂತಳಾಗಬೇಡ. ಮೋಹವೇ ಮಾಯೆಯಾಗಿ ಕಾಡುತ್ತಿದೆಯೇನೇ. ಮೋಹಿನೀ ಕನವರಿಸಬೇಡ. ಹಲುಬಿ ಹಲವರಿಯಬೇಡ. ನಿನ್ನಿಷ್ಟ ನೆರವೇರುತ್ತದೆ; ಸಮಾಧಾನದಿಂದ ಇರು.

ಮೋಹಿನಿ : ಮಧುಕೇಶ್ವರಾ, ತಂದೆ, ನಮ್ಮನ್ನು ಕಾಪಾಡು. ಜಗದಂಬೇ ಅನುಗ್ರಹಿಸು.

ಭಾಮಿನಿ : **ಆರಭಿರಾಗ**

ಇಂತು ಕಾಲವು ಸರಿಯೆ ಮೋಹಿನಿ ।
ಯಾಂತುಗರ್ಭವ ಬಳಿಕ ನವಮಾ ।
ಸಾಂತರದಿ ಪ್ರಸವಿಸಲು ಸುಂದರ ಬಾಲೆ ಧರೆಗಿಳಿಯೆ ॥
ಸಂತಸದಿ ದಿನವೆಣಿಸಿಮಣಿಮಯ ।

ಕಾಂತತೊಟ್ಟಿಲೊಳಿರಿಸಿಭಾಸುರ ।
ಕಾಂತಿಗುರೆ ಬೆರಗಾಗಿ ಕರೆದರು ಮಾಯೆಯೆಂದೆನುತಾ ॥

ಮಮಕಾರ : ಮಧುಕೇಶ್ವರನ ಅನುಗ್ರಹದಿಂದ ಮುದ್ದಾದ ಮಗಳಿಗೆ ತಂದೆಯಾಗಿದ್ದೇನೆ. ಶಿಶುವಿನ ಸೌಂದರ್ಯದ ಮೋಡಿಗೆ ಮರುಳಾಗಿ ಮಾಯೆ ಎಂದು ಕರೆದಿದ್ದೇವೆ. ಅಂಬೆಗಾಲಿಕ್ಕುವ ರಂಭೆ ನನ್ನ ಮಗಳು. ಅವಳ ಆಟ ನೋಡುತ್ತಾ ಅರಮನೆಯಲ್ಲೇ ಇರೋಣ ಅನಿಸುತ್ತದೆ. ಆದರೆ ನಿತ್ಯ ನಿಯಮವನ್ನು ಮೀರಬಾರದು. ಸಭೆಗೆ ಹೋದೆ, ತಿರುಗಿ ಬಂದೆ. ಮೋಹಿನೀ.

ಮೋಹಿನಿ : ಹಂ ಹಂ ಸ್ವಲ್ಪ ನಿಧಾನವಾಗಿ ಮಾತಾಡಿ.

ಮಮಕಾರ : ಏನ್ ಮಾಡ್ತಾ ಇದ್ದಾಳೆ ಮಗಳು.

ಮೋಹಿನಿ : ನಿದ್ದೆಯ ಜೊಂಪಿನಲ್ಲಿದ್ದಾಳೆ.

ಮಮಕಾರ : ನಿನಗೂ ತೊಟ್ಟಿಲು ತೂಗುವುದೇ ಅಭ್ಯಾಸ ಆಗಿದೆ. ಬಾ ಇಲ್ಲಿ.

ಮೋಹಿನಿ : ಸ್ವಲ್ಪ ನಿಲ್ಲಿ, ಬಂದೆ, ಏನವಸರ ಮಹಾರಾಜರಿಗೆ.

ಮಮಕಾರ : ಈಗ ಮಿಂಚಿನ ಚಲನೆ ಆರಂಭವಾಗಿದೆ. ಮುಂಚಿನ ದುಗುಡ ಮಾಯವಾಗಿದೆ. ಎಲ್ಲಾ ಆ ಮಾಯೆಯ ಅನುಗ್ರಹ.

ಮೋಹಿನಿ : ನೀವೂ ಹಗಲೆಲ್ಲಾ ಇಲ್ಲೇ ಸುತ್ತಾಡ್ತಾ ಇರ್ತೀರಿ. ಯಾಕೆ ಕರೆದದ್ದು?

ಮಮಕಾರ : ರಮಣೀ

ರಾಗ : ಕೇತಾರಗೌಳ **ತಾಳ :** ಅಷ್ಟ

ರಮಣಿ ಕೇಳೀ ಬಾಲೆ ನಿನ್ನ ತಪಕೆ ಮನೋ ।
ರಮೆಯಾಗಿ ಮೈದೋರ್ದಳು ॥
ಅಮಮ ಲೋಕಕೆ ಭ್ರಾಂತಿ ಕವಿಸುವ ಸುಂದರಿ ।
ಸುಮಶರನರಗಿಣಿಯು ॥

ಮಮಕಾರ : ಮೋಹಿನೀ ನಿನ್ನ ವ್ರತಕ್ಕೂ ತಪಕ್ಕೂ ಹರಕೆ ಹಗರಣಗಳಿಗೂ ಫಲ ಸಿಕ್ಕಿದೆ. ದೇವಾಸುರರು ಕೂಡಿ, ಮಂದರ ಪರ್ವತವನ್ನು ಕಡೆಗೋಲನ್ನಾಗಿ ಮಾಡಿ, ವಾಸುಕಿಯನ್ನು ನೇಣನ್ನಾಗಿ ಹೂಡಿ ಸಮುದ್ರವನ್ನು ಕಡೆದಾಗ ರಮೆ ಹುಟ್ಟಿದಳಂತೆ ! ಸಿರಿಯಾಗಿ ಲೋಕವನ್ನು ಆಕ್ರಮಿಸಿದ ಅವಳ ಜನನ ಕಥನ ಸಮುದ್ರ ಮಥನದಲ್ಲಿದೆ. ಅದೇ ರೀತಿ ಬಹು ದಿನಗಳ

ಬಯಕೆಯ ನಿನ್ನೊಡಲ ಕಡೆತಕ್ಕೆ, ನಾಡಿಯ ಮಿಡಿತಕ್ಕೆ, ಮನದ ತುಡಿತಕ್ಕೆ ಈ ಮನೋರಮೆ ಹುಟ್ಟಿದ್ದಾಳೆ.

ಮೋಹಿನಿ : ಮುಂಧೋರಣೆಯುಳ್ಳ ಮುತ್ಸದ್ದಿಗಳು ನೀವು. ಕಥೆ ಹೇಳುವುದಕ್ಕೆ ಆರಂಭಿಸಿದ್ದೀರಿ. ತೊದಲು ಮಾತು ಬಂದೊಡನೆ ಅಮ್ಮಾ ಕತೆ ಹೇಳು? ಎಂದು ಮಕ್ಕಳು ಒತ್ತಾಯಿಸುತ್ತಾರೆ. ಆಗ ಎಷ್ಟೇ ಕಥಾಸಂಗ್ರಹ ಇದ್ದರೂ ಸಾಲುವದಿಲ್ಲ.

ಮಮಕಾರ : ಇಷ್ಟೇ ಅಲ್ಲ. ಊರಿನ ಜನ ಏನಾಡಿಕೊಳ್ತಾ ಇದ್ದಾರೆ ಎಂಬುದನ್ನೂ ಹೇಳ್ತೇನೆ. ಈ ಸುಂದರಿಯ ಜನ್ಮವೃತ್ತಾಂತ ಕೇಳಿ ಸಾಯುಜ್ಯದ ಸಾಧಕರೆಲ್ಲಾ ಕಾಡಿನ ಗುಹೆ ಸೇರಿದ್ದಾರಂತೆ. ಸುರಸುಂದರಿಯರಲ್ಲಿ ಅಸೂಯೆ ಮೂಡಿದೆಯಂತೆ. ಈ ಲೋಕದ ಚಲುವೆಯರು ನೆಲನೋಡಿ ನಡೆಯುವುದಕ್ಕೆ ಆರಂಭಿಸಿದ್ದಾರಂತೆ. ವೃದ್ಧರಿಗೂ ಯೌವನ ಬರಲಿಕ್ಕೆ ಆರಂಭವಾಗಿದೆಯಂತೆ. ಇವನ್ನೆಲ್ಲಾ ಅತಿಶಯೋಕ್ತಿ ಎಂದು ತಳ್ಳಿಹಾಕುವಂತಿಲ್ಲ. ಮಗುವಿನ ಮುಖ ನೋಡಿದರೆ ನಮಗೂ ಹಾಗೇ ಅನಿಸುತ್ತದೆ. ಈ ಕುಸುಮ ಕೋಮಲೆ ಮನ್ಮಥನ ಮುಂಗೈ ಅರಗಿಣಿಯಾಗುತ್ತಾಳೋ ಅಥವಾ ಹೂವಿನ ಬಾಣವೇ ಆಗುತ್ತಾಳೋ ಗೊತ್ತಿಲ್ಲ. ಮಾಯೆ ಎಂದು ಹೆಸರು ಇಟ್ಟದ್ದು ಯಥಾ ಯೋಗ್ಯ.

ಮೋಹಿನಿ : ನೀವು ಈಗೀಗ ಅರಮನೆಯಿಂದ ಕದಲುವದೇ ಇಲ್ಲ. ಹಗಲೆಲ್ಲಾ ಮಗಳನ್ನು ಹೊಗಳುತ್ತಾ ಕುಳಿತಿರುತ್ತೀರಿ. ಕುಲೋದ್ಧಾರಕನಾದ ಮಗ ಹುಟ್ಟಲಿಲ್ಲ ಅಂತ ಮೂಗು ಮುರಿಯುತ್ತೀರಿ ಅಂತ ಭಾವಿಸಿದ್ದೆ.

ಮಮಕಾರ: ಈ ಸುಂದರ ಬಾಲೆಯ ಮೂಗು ಮುರಿದು ಶೂರ್ಪ ಣಖಿಯಾಗಿಸುವುದಕ್ಕೆ ನನಗೆ ತಲೆ ಹಾಳಾಗಿದೆ ಅಂತ ತಿಳಿದೆಯೋ ಹೇಗೆ?

ಮೋಹಿನಿ : ಮೂಗು ಮುರಿಯುವದು ಎಂದರೆ ಮೂಗನ್ನೇ ಇಲ್ಲದಂತೆ ಮಾಡುವದು ಎಂತಲ್ಲ. ಗಂಡು ಮಗುವಾಗಲಿಲ್ಲ-ಹೆಣ್ಣು ಮಗುವಾಯಿತು ಎಂದು ಬೇಸರವಾಗಿರಬಹುದು ಅಂತ ಭಾವಿಸಿದ್ದೆ.

ಮಮಕಾರ : ಹೆಣ್ಣಾಗಲಿ, ಗಂಡಾಗಲಿ ಮಕ್ಕಳು ಮಕ್ಕಳೇ. ಕುವರನಾದೊಡೆ ಬಂದ ಘನವೇನದರಿಂದ, ಕುವರಿಯಾದೊಡೆ ಕುಂದೇನು? ಗುಣ-ರೂಪ-ನಡತೆಗಳಿಂದ ಹೆತ್ತವರ ಹೆಸರು ಹೇಳಿಸುವಲ್ಲಿ ಲಿಂಗ ಭೇದ ಇರುವದಿಲ್ಲ. ವಿಶ್ವಸುಂದರಿಯಾಗಿ ವರ್ಧಿಸುವ ಈ ಮಗಳಿಗೆ

ತೊಟ್ಟಿಲಲ್ಲಿಯೂ ಎಡೆಯಿದೆ. ಪಟ್ಟದಲ್ಲಿಯೂ ಪಾಲಿದೆ. ಮಗನಿಗಿಂತ ಮಮಕಾರ ತೋರಿ ಬೆಳೆಸುತ್ತೇನೆ.

ಮೋಹಿನಿ : ತಿಳಿದವರು ಹೆಣ್ಣನ್ನು ಕೀಳಾಗಿ ಪರಿಗಣಿಸುವದಿಲ್ಲ. ಪ್ರಕೃತಿಯೂ ಹೆಣ್ಣು. ಮಗು ಹೆಣ್ಣಿರಲಿ ಗಂಡಿರಲಿ, ಪ್ರಕೃತಿಯ ಪ್ರಸಾದ ಎಂದು ಸ್ವೀಕರಿಸಿ ಸಂತೋಷಪಡುತ್ತಾರೆ. ಈಗೀಗ ನಿಮ್ಮ ಮಗಳ ತುಂಟಾಟ ಹೆಚ್ಚಾಗಿದೆ.

ಮಮಕಾರ : ಅಂಬೆಗಾಲಿಕ್ಕಿ ಸರಿದಾಡುವ ಬೊಂಬೆ, ಅವಳು ಏನು ಮಾಡಿದಳು?

ಮೋಹಿನಿ : ಕೇಳಿ ಅವಳ ಬಾಲಲೀಲೆ.

ರಾಗ : ಬಿಲಹರಿ **ತಾಳ :** ಏಕ

ಮಣಿಮಯ ದರ್ಪಣದೊಳು ಪ್ರತಿಬಿಂಬವ ।
ನಣಕಿಸಿ ಕೊರಳನು ಕೊಂಕಿಸುತ ।
ಅನುವಿನಿಂ ಪಿಡಿಯಲು ಬಯಸುತ ಸಿಗದಿರೆ ।
ತೊನೆದುರುಳುತ ಹರಳೊದೆವುತ್ತ ॥
ಘಿಣಿರೆನ್ನುವ ಕಿರುಗಜ್ಜೆಗೆ ತೊದಲ್ದನಿಯಲಿ ।
ಗುನುಗಿ ಕಾಣಿಪಳು ಲೀಲೆಯನು । ಬಾಲ । ಲೀಲೆಯನು ॥

ಮೋಹಿನಿ : ಇವಳನ್ನ ಒಯ್ದು ಆ ತೂಗುಯ್ಯಾಲೆಯಲ್ಲಿ ಮಲಗಿಸಬೇಕು. ಆಗ ನೋಡಬೇಕು ಇವಳ ಆಟ. ಆ ಉಯ್ಯಾಲೆಯ ಅಂದಕ್ಕೆಂದು ಮಣಿಮಯ ದರ್ಪಣವನ್ನು ಜೋಡಿಸಿದ್ದೇವಲ್ಲ. ಅದನ್ನೇ ಹೀಗೆ ನೋಡುತ್ತಾಳೆ. ನೋಡಿ ಕೊರಳನ್ನು ಅಲುಗಿಸುತ್ತಾಳೆ. ತೊನೆಯುತ್ತಾ ಕೊರಳಲುಗಿಸುತ್ತಾ ಮಂಡಿಯೂರಿ ಮುಂದೆ ಹೋಗುತ್ತಾಳೆ. ಹೋಗಿ ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬವನ್ನು ಹಿಡಿಯಲು ಕೈಚಾಚುತ್ತಾಳೆ. ಕೈ ಹರಳಿಗೆ ತಾಗಿ ಗೆಜ್ಜೆಯ ಸದ್ದಾದಾಗ ಅವಡುಗಚ್ಚಿ ನೋಡುತ್ತಾಳೆ. ಮುಷ್ಟಿಬಿಗಿದು ಹುಬ್ಬೇರಿಸುತ್ತಾಳೆ. ಪ್ರತಿಬಿಂಬವನ್ನು ಅಣಿಕಿಸಿ ಹೊಡೆಯಲು ಹೋಗುತ್ತಾಳೆ. ಜಾರಿ ಬೀಳುತ್ತಾಳೆ. ಜಂಪಿಸಿ ಕಾಲಿನಿಂದ ಕನ್ನಡಿಯನ್ನು ಒದೆಯುತ್ತಾಳೆ. ಕಿಣಿ ಕಿಣಿ ಎಂದು ಕಾಲ್ಗೆಜ್ಜೆಯ ಸದ್ದಾದಾಗ ತಾನೂ ಕಿಲಿಕಿಲಿ ನಗುತ್ತಾಳೆ. ಮಗುವಿನ ಈ ಹುಡುಗಾಟದ ಎದುರು ಭರತ ನಾಟ್ಯವೂ ಅಲ್ಲ, ಮಯೂರ ನೃತ್ಯವೂ ಅಲ್ಲ.

ಮಮಕಾರ : ಮಗುವಿನ ಆಟದ ಬಗ್ಗೆ ಹೇಳುತ್ತಾ ನೀನೂ ಮಗುವಾಗಿ ಬಿಟ್ಟೆ. ಮಕ್ಕಳ ಮುಗ್ಧ ಚಲನವಲನ ಅಂದ ಚೆಂದ. ಅದನ್ನು ದೊಡ್ಡವರು ಅನುಕರಿಸಿ ತೋರಿಸಿದರೆ ನೋಡಲಿಕ್ಕಾಗುವದಿಲ್ಲ.

ಮೋಹಿನಿ : ಉತ್ಸಾಹದಿಂದ ವರ್ಣಿಸುವಾಗ ಕೆಲವು ಅಭಿನಯ ಆಗಿ ಹೋಗುತ್ತದೆ. ತನ್ಮಯತೆಯಲ್ಲಿ ತಪ್ಪಿನ ಅರಿವಾಗುವದಿಲ್ಲ. ಕ್ಷಮಿಸಿ.

ಮಮಕಾರ : ಮಗುವಿನ ಜತೆಯಲ್ಲಿ ಬೆರೆತು ವರ್ತಿಸುವ ತಾಯಿಯ ನಡೆನುಡಿಗಳು ನಯನ ಮನೋಹರ. ಅದನ್ನು ವಿಮರ್ಶಿಸಿ ಕುಂದು ಹುಡುಕುವವರು ಅವಿವೇಕಿಗಳು ಎಂದು ತಿಳಿಯಬೇಕು. ಮೋಹಿನೀ ನಮ್ಮ ಮಗಳು, ವಿದ್ಯಾವತಿಯಾಗಿ ಕಲಾವತಿಯಾಗಿ ಬೆಳೆಯಬೇಕು.

ಮೋಹಿನಿ : ಎಚ್ಚರಾಯಿತು ಅಂತ ಕಾಣುತ್ತದೆ. ರಂಪಾಟ ಆರಂಭಿಸುವ ಮೊದಲೇ ಹೋಗಿ ಎತ್ತಿಕೊಳ್ಳಬೇಕು. ಏಳಿ ಹೋಗೋಣ.

ದೃಶ್ಯ – ೩

ಭಾಮಿನಿ : ಹಿಂದೋಳ

ನಡೆಯ ಕಲಿಸಿದಳಂಚೆ ವಿಂಡಿಗೆ ।
ನುಡಿಯ ಕಲಿಸಿದಳರಗಿಳಿಗೆ ಸರ ।
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ ॥

ರಾಗ : ಹಿಂದೋಳ **ತಾಳ :** ತ್ರಿವುಡೆ

ಮಾಯೆಗಿಂತು ವಸಂತ ಷೋಡಶ ।
ಪ್ರಾಯವೆಸೆಯೆ ಸುರಮ್ಯ ಸಖಿಯರ ।
ಕಾಯಕದಿ ಜತೆಗೊಳುತಲಾನಳಿ ।
ನಾಯತಾಂಬಕಿ ನಲಿಯುತ । ನುಡಿದಳೊಲಿದು ॥

ಮಾಯೆ : ಮದನಿಕೇ, ಕಲಾವತೀ ಇಲ್ಲಿ ಬನ್ನಿ ನೀವೇ ಅಲಂಕಾರ ಮಾಡುತ್ತೀರಲ್ಲಾ, ನನಗೂ ಆ ವಿಧಾನ ಹೇಳಿಕೊಡಿ.

ಮದನಿಕೆ : ನೀನೇ ನಿನ್ನ ಅಲಂಕಾರ ಮಾಡಿಕೊಂಡರೆ ಆಗ ನಮಗೆ ಕೆಲಸ ಇರುವದಿಲ್ಲ. ನಮ್ಮ ಜೀವನಕ್ಕೆ ಆಧಾರವೇ ಅಲಂಕಾರ.

ಕಲಾವತಿ : ನೀನು ರಾಜನ ಮಗಳು. ಪರಿಚಾರಕ ವೃತ್ತಿಯ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿಲ್ಲ. ಅಡ್ಡಾಡಿಕೊಂಡಿದ್ದರೆ ಸಾಕು.

ಮಾಯೆ : ಯಾಕೆ ಹೀಗೆ ಹೇಳುತ್ತೀರಿ. ನಾನು ನಿಮ್ಮನ್ನು ಕೆಲಸದಾಳುಗಳಂತೆ ನಡೆಸಿಕೊಳ್ಳಲಿಲ್ಲ. ಆಪ್ತ ಸಖಿಯರು ಎಂದೇ ಭಾವಿಸಿದ್ದೇನೆ.

ಮದನಿಕೆ : ಅದು ನಿನ್ನ ಔದಾರ್ಯ, ದೊಡ್ಡಸ್ತಿಕೆಗೆ ಒಪ್ಪುವ ಗುಣ. ನಾವು ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು.

ಕಲಾವತಿ : ನೀನು ಹದಿನಾರನೇ ವಸಂತಕ್ಕೆ ಕಾಲಿಟ್ಟಿದ್ದೀಯೆ. ಷೋಡಶಿಯಾದ ನಿನಗೆ ಮಹಾರಾಜರು ಯಾವ ರಾಜಕುಮಾರನನ್ನು ನೋಡಿಟ್ಟಿದ್ದಾರೋ ಗೊತ್ತಿಲ್ಲ.

ಮಾಯೆ : ನೀವು ನನಗಿಂತ ಹೆಚ್ಚು ವಸಂತ ಕಳೆದಿದ್ದೀರಿ. ಕಲಾವತೀ, ಇಂದು ಸೋಮವಾರ. ಪೂರ್ಣಿಮೆಯೂ ಕೂಡಿದೆ. ಹಾಗಾಗಿ

ರಾಗ : ಆರಭಿ **ತಾಳ :** ರೂಪಕ

ಮಧುಕೇಶ್ವರನರ್ಚನೆಗೆ ಮುದದಿ ಪೋಗುವ ।
ವಿಧಿಯುಕ್ತದಿ ಪೂಜಾದ್ರವ್ಯ ಒದಗಿಸಿರಹಹ ॥
ಮದನಿಕೆ ಬಾ ರದನಿಕೆ ಬಾ ಚದುರೆ ಕಲಾವತಿ ಬಾ ಬಾ ।
ಸುದತಿಯರೊದಗಿನೊಳೇಳಿರಿ ತುದಿಗಾಲಲಿ ಜತೆಗೊಳ್ಳಿರಿ ॥

ಮಾಯೆ : ಮಧುಕೇಶ್ವರ ದೇವಾಲಯಕ್ಕೆ ಪೂಜೆಗೆ ಹೋಗಬೇಕು. ಇಂದು ದೇವಾಲಯದಲ್ಲಿ ಮಹಾಪೂಜೆ ಮಂಗಳಾರತಿ ಇದೆ. ನಮ್ಮ ಬರವನ್ನು ನಿರೀಕ್ಷಿಸುತ್ತಿರುತ್ತಾರೆ. ಎಲ್ಲಿ ಪೂಜಾದ್ರವ್ಯ ಹೂವು–ಹಣ್ಣು–ಕಾಯಿ–ಪತ್ರಿ–ಕಡ್ಡಿ–ಕರ್ಪೂರ–ಕುಂಕುಮ–ಅರಿಷಿಣ–ಹಾಲು–ತುಪ್ಪ–ಪಂಚಾಮೃತದ ಪಾತ್ರೆ, ಆರತಿ ತಟ್ಟೆ! ಎಲ್ಲಾ ಅಣಿಯಾಗಿದೆಯೋ, ಮಹಾರಾಣಿಯವರನ್ನು ಕರೆದುಕೊಂಡು ಬನ್ನಿ ಹೋಗೋಣ.

ಮದನಿಕೆ : ಇಂದು ನೀವೇ ಹೋಗಿ ಬನ್ನಿ ಎಂದು ಮಹಾರಾಣಿಯವರು ಆಗಲೇ ಹೇಳಿದ್ದಾರೆ. ನನಗೆ ಮರೆತೇ ಹೋಗಿತ್ತು. ನೀನು ನೆನಪಿಸಿದ್ದು ಒಳ್ಳೇದಾಯ್ತು.

ಕಲಾವತಿ : ನೀನು ಮಡಿ ಪೀತಾಂಬರ ಉಟ್ಟೇ ನಿಂತಿದ್ದೀಯೆ. ಈ ಝರಿ ಕುಪ್ಪಸದಲ್ಲಿ ನೀನು ರಂಭೆಯಂತೆ ಕಾಣುತ್ತೀಯೆ. ಬಲಗಾಲು ಮುಂದಿಟ್ಟು ಹೊರಡು.

ಮಾಯೆ : ನಮ್ಮಿಂದ ತಡ ಆಗಬಾರದು. ಆ ಮೇಲೆ ಅವಸರಪಡುವದಕ್ಕಿಂತ ಈಗಲೇ ನಿಧಾನವಾಗಿ ಮಾತಾಡುತ್ತ ಸಾಗೋಣ.

ಮದನಿಕೆ : ಮಧುಕೇಶ್ವರಾ, ಮಹಾಬಲಾ, ಶಂಭೋ-ಶಂಕರಾ. ಸಾಗಲಿ ಯಾತ್ರೆ

ಭಾಮಿನಿ

ಪರಮನಂತರಾಮಿ ಕರುಣಾ ।
ಕರನುಸದಮಲ ಸಗುಣ ನಿರ್ಗುಣ ।
ಭರಿತನಲ್ಲಮಲಿಂಗನರಿದಿಂತೆಂದ ತನ್ನೊಳಗೆ ॥

(ತೆರೆ, ಅಲ್ಲಮಪ್ರಭುವಿನ ಪ್ರವೇಶ)

ದ್ವಿಪದಿ **ರಾಗ :** ಮಧ್ಯಮಾವತಿ

ಪರಮಶಿವತತ್ವಸಂಯೋಗಕಾಂತಿಯಲಿ ।
ಪರಿಶೋಭಿಸಿದನಲ್ಲಮನು ಪ್ರಶಾಂತಿಯಲಿ ॥

(ತೆರೆ ಸರಿದು ಧ್ಯಾನಮಗ್ನ ಅಲ್ಲಮನ ದರ್ಶನ)

ಅಲ್ಲಮಪ್ರಭು : ಶಿವೋಹಂ. ಸತ್ಯಂ ಶಿವಂ ಸುಂದರಂ, ಶಿವತತ್ವ ಚಿಂತನೆಯಲ್ಲಿ ಮನಸ್ಸು ಕರಗಿದಾಗ ಸರಸ ಸಮಾಧಿಯ ಸುಖ ದೊರೆಯುತ್ತದೆ. ಭಾವವು ಬಯಲಾದರೆ ಸುಜ್ಞಾನದ ಬೆಳಕು ಹೃದಯವನ್ನು ಬೆಳಗುತ್ತದೆ. ಶಿವನೂ ಭವನೇ ! ಆ ಅರಿವಿನಿಂದ ಬಾಳಿ ಅನುಭವ ಗಳಿಸುವುದೇ ಬಾಳಿನ ಗುರಿಯಾಗಬೇಕು. ಈ ಜಗತ್ತು ಜಂಜಡವೆನಿಸುವದು ಚಾಂಚಲ್ಯದಿಂದ. ಬದುಕಿನ ಭೂಮಿಯಲ್ಲಿ ಬಯಕೆಯ ಬೀಜವನ್ನು ಬಿತ್ತಿ ಅನುಭವದ ಬೆಳೆಯನ್ನು ಪಡೆಯುವ ಫಲಾನುಭವಿಗಳು ನಾವು. ಸತ್ಯವನ್ನು ಗುರುತಿಸುವ ಸತ್ಕರ್ಮದಲ್ಲಿ ತೊಡಗಬೇಕು. ನಿಷ್ಠೆಯ ನೆರವಿನಲ್ಲಿ ದುಡಿದು ವಿವೇಕದ ನೆರಳಿನಲ್ಲಿ ವಿಶ್ರಮಿಸಬೇಕು. ಆ ಶುಭವಿರಾಮದಲ್ಲಿ ಸತ್ಯಸೌಂದರ್ಯವನ್ನು ಕಾಣಬೇಕು. ಮನವು ಘನವಾಗಬೇಕು. ಹಾಗಾದಾಗ ಬದುಕು ವ್ರತ. ಇದಕ್ಕೆ ವ್ಯತಿರಿಕ್ತವಾದರೆ ಬದುಕು ವ್ಯರ್ಥ. ತಾರತಮ್ಯ ಜ್ಞಾನಗಳಿಸುವದಕ್ಕೆ ಪ್ರಾಪಂಚಿಕ ಮೋಹ ಪಾಶಗಳು ಅಡ್ಡಿಯಾಗುತ್ತವೆ. ಮಾಯಾ ಭ್ರಾಂತಿಯ ಆಶಾಪಾಶಗಳಿಗೆ ವಶವಾದವರು ವಶಿಗಳು. ಶುಭಚಿಂತನೆಯ ಸಾತ್ವಿಕಭಾವ ಶಿವತ್ವವನ್ನು ಕಾಣುತ್ತದೆ. ಶಿವ-ಶಿವ ಈ ತಿರುವನ್ನು ಕಂಡುಕೊಳ್ಳಬೇಕು. ತಿರುಳನ್ನು ತಿಳಿದು ವ್ಯವಹರಿಸಬೇಕು. ಆಚಾರಕ್ಕೂ ವಿಚಾರಕ್ಕೂ ಸಮನ್ವಯವಿರಬೇಕು.

ಪರಮಶಿವತತ್ವ ಸಂಯೋಗವೇ ಜ್ಞಾನವಾಗಿ ಧ್ಯಾನವಾಗಿ ಅಸ್ತಿತ್ವವೇ ಶೂನ್ಯವಾಗಬೇಕು. ವಿಚಾರದಿಂದ ಇದನ್ನು ಅಂಗೀಕರಿಸಿದರೂ ಆಚಾರದಲ್ಲಿ ಅಳವಡಿಸಿಕೊಳ್ಳುವುದು ಸುಲಭವಲ್ಲ. ಅನೇಕ ಅಡೆ-ತಡೆಗಳನ್ನು ಎದುರಿಸಬೇಕಾಗುತ್ತದೆ. ಓಹೋ, ನಾನು ಪರೀಕ್ಷೆಗೆ ಒಳಪಡಬೇಕೇ? ಜಗದಂಬೇ, ನಿನ್ನ ಇಚ್ಛೆಯಿದ್ದಂತಾಗಲಿ. ಓಂ-ತತ್-ಸತ್.

(ಮದ್ದಳಿಗ ಅಲ್ಲಮನ ಪ್ರವೇಶ)

ರಾಗ : ಮಧುಮಾಧವಿ **ತಾಳ :** ಏಕ

ಅಲ್ಲಮನನು ಗೆಲ್ಲೆ ಪುಟ್ಟಿಹ ಮಾಯೆ ।
ತಲ್ಲಣಗೊಳುವಂತೆ ಮಾಡುವ ಬಗೆಗೆ ॥
ಸುಲ್ಲಲಿತಾಕಾರವಾಂತು ನಾ ಬಂದೆ ।
ಮೆಲ್ಲನೆ ಮದ್ದಳೆ ನಾದ ಮೊಳಗಿಸುವೆ ॥

ಅಲ್ಲಮ : ಲೋಕವೇ ಭ್ರಮಾಧೀನ. ಎಲ್ಲರೂ ಮಾಯೆಗೆ ವಶರಾಗುತ್ತಾರೆ. ಕಾಮಮೋಹಗಳಿಲ್ಲದ ಜೀವಿಗಳೇ ಇಲ್ಲ. ಮಾಯೆಯನ್ನು ಮುಂದೊಡ್ಡಿ ಅಲ್ಲಮನನ್ನು ಮರುಳುಗೊಳಿಸುವ ಸಂಕಲ್ಪ ಆದಿಶಕ್ತಿಯದು. ಜಗನ್ಮಾತೆಯ ಇಚ್ಛೆಗೆ ಮಣಿದು ಮಾಯೆ ಮಮಕಾರ ರಾಜನ ಮಗಳಾಗಿ ಬೆಳೆಯುತ್ತಿದ್ದಾಳೆ. ಆ ಮಾಯೆ ಜನಿಸಿದ ಕೂಡಲೇ ತಪಸ್ವಿಗಳು ದಿಗ್ಭ್ರಮೆಗೆ ಒಳಗಾದರಂತೆ. ಮಾಯೆ ಎಲ್ಲಿರಲಿ, ಹೇಗಿರಲಿ, ಬಲ್ಲವರು ಗುರುತಿಸುತ್ತಾರೆ. ನಾನೀಗ ಯುವಕನಾಗಿದ್ದೇನೆ, ಮದ್ದಳಿಗನಾಗಿದ್ದೇನೆ. ಈ ವೇಷ ಪರಿವೇಷಗಳಿಂದ ಮಾಯೆಯನ್ನೇ ಮರುಳುಗೊಳಿಸುವ ಉದ್ದೇಶ ನನ್ನದು. ಬಯಲಾಟದಲ್ಲಿ ಪಾತ್ರಗಳನ್ನು ಕುಣಿಸಲು ಮದ್ದಳೆಯನ್ನು ಹಿನ್ನೆಲೆಯ ಪ್ರಮುಖ ಪಕ್ಕವಾದ್ಯವಾಗಿ ಬಳಸುತ್ತಾರೆ. ಮಾಯೆ ಮಧುಕೇಶ್ವರನ ಪೂಜೆಗೆ ಬಂದಿದ್ದಾಳೆ. ನಾನೂ ಆ ದೇವಸ್ಥಾನದ ಮುಖಮಂಟಪದ ಬಳಿಗೆ ಹೋಗುತ್ತೇನೆ. ಢಮರುಗಧರನಾದ ಶಿವನ ನೆನಪಿನಿಂದ ಮದ್ದಳಿಯನ್ನು ನುಡಿಸುತ್ತೇನೆ. ತೋಂ ತಕ ತೋಂ ಕಿಟ ತಕತೋಂ.

(ಮಂದಿರದ ಒಳಗೆ ಪೂಜೆ ಮುಗಿಸಿ ಪ್ರಸಾದ ಸ್ವೀಕರಿಸಿದ ನಂತರ ಮದ್ದಳೆಯ ನುಡಿಯನ್ನು ಕೇಳಿದ-ಮಾಯೆ)

ಮಾಯೆ : ಆಹಾ– ತೋಂ ತಕತೋಂ ಕಿಟತಕ ತೋಂ. ಏನಿದು?

ರಾಗ : ಶಂಕರಾಭರಣ **ತಾಳ :** ಅಷ್ಟ

ಏನಿದು । ನಾದ । ಏನಿದು ॥ ಪ ॥
ಗಾನಕು ಮಿಗಿಲು ಮದ್ದಳೆಯ ನುಡಿತವಿದು ॥ ಅ.ಪ ॥
ಭರತನಾಟ್ಯವ ಅರಿತಿರುವೆ । ತಾಳ ।
ಪರಿಭೇದ ತಿಳಿದುಕೊಂಡಿರುವೆ । ನೃತ್ತಾ ।
ಚರಣೆಯೊಳಡಿಯನಿಟ್ಟಿರುವೆ । ಆಹಾ ।
ತುರೀಯಾವಸ್ಥೆಯ ಮುದ ನೀಡಿತೀ ವಾದನ ॥

ಮಾಯೆ : ಮಧುಕೇಶ್ವರನ ಪ್ರಸಾದವನ್ನು ಸ್ವೀಕರಿಸಿ ಅರಮನೆಗೆ ಮರಳಬೇಕೆಂದು ಯೋಚಿಸುತ್ತಿರುವಾಗ ಮಧುರ ಮದ್ದಳೆಯ ವಾದನ ಕೇಳುತ್ತಾ ಇದೆ. ನಾನು ಭರತನಾಟ್ಯವನ್ನು ಅಭ್ಯಾಸ ಮಾಡಿದ್ದೇನೆ. ತಾಳಜ್ಞಾನ ಸಂಪಾದಿಸಿದ್ದೇನೆ. ಮೃದಂಗದ ಯತಿಗೆ ಪಾದದ ಗತಿಯನ್ನು ಹೊಂದಿಸಿದ್ದಿದೆ. ಆದರೂ ಈಗ ನಾನು ಕೇಳುತ್ತಿರುವ ಮದ್ದಳೆಯ ನುಡಿತ ವಿಶೇಷ ವಿಶೇಷ. ವಿವಿಧ ಗತಿಯಲ್ಲಿ ಮಿಡಿದು, ಸ್ಫುಟುತ್ವ ಪಡೆದು, ಕೈಚಳಕದ ಕೌಶಲ್ಯದ ಅರಿವು ಮೂಡಿಸುವ ಬಿಡಿತೆಯ ನುಡಿತಗಳು ಮನಸ್ಸನ್ನು ಸೂರೆಗೊಳ್ಳುತ್ತಾ ಇವೆ. ತಲ್ಲೀನತೆಯಲ್ಲಿ ತುರೀಯಾವಸ್ಥೆಗೆ ತಲುಪುತ್ತಿದ್ದೇನೆ. ಇಂತಹ ನಾದ ಸಾಧನೆ ಮಾಡಿದ ಮದ್ದಳಿಗ ಯಾರಿರಬಹುದು? ಆ ಮಹಾನುಭಾವನ ಪರಿಚಯ ಮಾಡಿಕೊಳ್ಳಬೇಕು. ಮದನಿಕೇ, ಕಲಾವತೀ ಬನ್ನಿ ಇಲ್ಲಿ. ಅಲ್ಲಿ ಹೋಗಿ ಮದ್ದಳೆ ನುಡಿಸುವವರು ಯಾರು ಅಂತ ನೋಡಿಕೊಂಡು ಬನ್ನಿ.

ಕಲಾವತಿ : ಹೋಗುವುದು ಬರುವುದು ಹೇಳುವುದು ಕೇಳುವುದು ಇದೆಲ್ಲಾ ಯಾಕೆ? ನಾವು ಹೊರಟು ನಿಂತಿದ್ದೇವೆ. ಹೋಗುವಾಗ ಆ ಮುಖ ಮಂಟಪದ ಬಳಿ ನಿಂತು ಆ ಮದ್ದಳೆಯವನ ಮುಖ ಹೇಗಿದೆ? ಅಂತ ನೋಡಿಕೊಂಡು ಹೋದರಾಯಿತು.

ಮಾಯೆ : ಆಯ್ತು ಹಾಗೇ ಮಾಡೋಣ, ಏಳಿ–ಕೇಳಿದಿರೇನೇ, ಏನು ಲಯ–ತಾಳ–ತಂತ್ರ.

ಭಾಮಿನಿ **ರಾಗ :** ಹಂಸಧ್ವನಿ

ತಾಳದಲಿ ತರಹರಿಸಿ ಮೆಲ್ಲನೆ ।
ಮೇಳದಲಿ ಮೈನಿಗುರಿ ಕರಸಂ ।

ಚಾಳಿಯಲಿ ಚಳಬಳಿಸಿ ತಿರುಪಿನ ಮಡುಪಿನಲಿ ಕುಣಿದು ॥
ತೋಳ ಮೈಯಲಿ ತೊನೆದು ನೋಟದ ।
ಥಾಳದಲಿ ಧವಳಿಸಿಯೆ ವಿನುತಮ ।
ರಾಳಗತಿಯಲಿ ಗಮಕಿಸುತ ನಡೆತಂದಳಾ ಮಾಯೆ ॥

ವಾರ್ಧಕ **ರಾಗ : ಹಿಂದೋಳ**

ದೂರದಲಿ ನಿಂತು ನೋಡಿದಳಲ್ಲಮನ ಚಲುವ ।
ಮಾರನೇ ಪ್ರಣಯದೆದೆಬಡಿತಕುರೆ ಬೇಸರಿಸಿ ।
ಈ ರೀತಿ ಮದ್ದಳೆಯ ನುಡಿಸುತ್ತೈ ತಂದನೇ ಮಧುಕೇಶ್ವರನ ಸೇವೆಗೆ ॥
ಭೂರಿಸುಂದರನಿವನ ಸಾನ್ನಿಧ್ಯಕಾಗಿ ಮನ ।
ಜಾರಿಸೇರಿದುದಹಹ ಸೋಲಿದನು ಮರೆಮಾಚಿ ।
ಯಾರಿವನು ಎಂದರಿತು ವಶಗೈವುದೆಂತೆಂಬ ದಾರಿಯನು
ನಾ ಹುಡುಕುವೆ ॥

ಮದನಿಕೆ : ಅದೋ, ಆ ಮದ್ದಳಿಗ ಅಲ್ಲಿದ್ದಾನೆ. ಅಬ್ಬಾ ! ಏನು ಅವನ ಕೈಚಳಕ.

ಮಾಯೆ : ನಾನೂ ನೋಡುತ್ತಾ ಇದ್ದೇನೆ. ಇಲ್ಲಿಗೆ ಬರುವವರೆಗೆ ಕಿವಿಗೆ ಹಬ್ಬವಾಗಿತ್ತು. ಈಗ ಕಣ್ಣಿಗೆ ಹಬ್ಬ. ಕಲೆಯೂ ಇದೆ, ರೂಪವೂ ಇದೆ.

ಕಲಾವತಿ : ತಲೆಯಲ್ಲಿ ಶಿಖೆಯಿದೆ. ಕೊರಳಲ್ಲಿ ಸರ ಇದೆ. ಹೆಗಲಲ್ಲಿ ಮದ್ದಳೆಯ ಹಗ್ಗ ಇದೆ. ಕಟಿಯಲ್ಲಿ ಮದ್ದಳೆಯಿದೆ–ಕೈಗೆ ಕಡಗವಿದೆ. ಪ್ರಾಯವೂ ಇದೆ. ರೂಪವೂ ಇದೆ. ಇರಬೇಕಾದದ್ದೆಲ್ಲಾ ಇದೆ. ನೋಡಿ ಆಯ್ತಲ್ಲ. ಏಳಿ ಹೋಗೋಣ.

ಮಾಯೆ : ನೋಡುವದು ಎಂದರೆ ಕೇವಲ ಕಣ್ಣು ಹಾಯಿಸುವದಲ್ಲ.

ಮದನಿಕೆ : ಕಣ್ಣಿನಿಂದಲೇ ಮಾತಾಡಿಸಬಹುದಿತ್ತು. ಅವ ಈ ಕಡೆಗೆ ನೋಡುವುದಿಲ್ಲ.

ಕಲಾವತಿ : ಮನ್ಮಥನೇ ಮದ್ದಳಿಗನಾಗಿ ಬಂದನೋ ಹೇಗೆ? ಯುವಕ ಯುವತಿಯರ ಎದೆಯ ಬಡಿತ ಕೇಳಿ ಮದ್ದಳೆಯ ಬಡಿತ ರೂಪಿಸಿಕೊಂಡಿರಬೇಕು.

ಮಾಯೆ : ಮದನನೇಕೆ ಮಧುಕೇಶ್ವರನ ಬಳಿಗೆ ಬರುತ್ತಾನೆ. ಮಧುವನಕ್ಕೆ ಬಂದಾನು.

ಮದನಿಕೆ : ಯಾಕೆ ಬರಬಾರದು? ರತಿಯಂತಿರುವ ನೀನು ಬಂದಿದ್ದೀಯಲ್ಲ.

ಕಲಾವತಿ : ಒಂದು ವ್ಯತ್ಯಾಸ ಏನು ಅಂದರೆ, ಅವ ಮಧುಕೇಶ್ವರನನ್ನು ನೋಡುತ್ತಿದ್ದಾನೆ. ನಾವು ಅವನನ್ನು ನೋಡುತ್ತಿದ್ದೇವೆ.

ಮಾಯೆ : ಹೀಗೆ ನೋಡುತ್ತಾ ನಿಂತಿರುವುದು ಸರಿಯಲ್ಲ. ನೀವು ಆತನನ್ನು ಮಾತಾಡಿಸಿ ಪರಿಚಯ ಮಾಡಿಕೊಂಡು, ಅರಮನೆಗೆ ಕರೆದುಕೊಂಡು ಬನ್ನಿ. ನಾನು ದಾರಿ ನೋಡ್ತಾ ಇರ್ತೇನೆ.

ಮದನಿಕೆ : ಅವನಿಗೆ ಮಾತು ಬರುತ್ತದೋ ಇಲ್ಲವೋ, ಯಾವ ಭಾಷೆಯೋ ಏನೋ

ಕಲಾವತಿ : ಮಾತು ಬರೆದಿದ್ದರೆ ಸನ್ನೆಯಿಂದ ವಿಷಯ ತಿಳಿಸೋಣ.

ಮಾಯೆ : ನೀವು ಆತನನ್ನು ಕರೆದುಕೊಂಡು ಬನ್ನಿ. ನಾನು ಮುಂದಾಗುತ್ತೇನೆ. ಬೇಗ ಬನ್ನಿ–

ಕಲಾವತಿ : ಹಿಂದೆ ಹೊರಳಿ ನೋಡ್ತಾ ಮುಂದುವರಿಯಬೇಡ. ತಿರುಗಿ ನೋಡಿ ನೋಡಿ ಕೊರಳು ಉಳುಕೀತು. ದಾರಿ ನೋಡ್ತಾ ಹೋಗಿ, ದಾರಿ ನೋಡ್ತಾ ಇರು. ನಾವು ಬರುತ್ತೇವೆ. ಮದನಿಕೇ ಆ ಮದ್ದಳೆಯವನಿಗೆ ಶುಕ್ರದಸೆ ಆರಂಭವಾಗಿರಬೇಕು.

ಮದನಿಕೆ : ನಮಗೆ ಶನೀಕಾಟ ಆರಂಭ ಆಯ್ತು. ಅವ ಯಾವ ದೇಶದವನೋ? ಯಾವ ಜಾತಿ ಜನವೋ? ಸ್ವಭಾವ ಹೇಗೋ? ನಮ್ಮ ಹತ್ತಿರ ಮಾತಾಡದೇ ಇದ್ರೆ.

ಕಲಾವತಿ : ಮಾತಾಡಿಸ ಬೇಕು. ನಮ್ಮ ಊರಲ್ಲಿ ನಾವೇ ಹೆದರೋದ್ಯಾಕೆ. ಹತ್ತಿರ ಹೋಗಿ ಪರಿಚಯ ಕೇಳಿಯೇ ಬಿಡುವಾ. ಊಂ–ಹೂಂ–ಹೊಯ್ ನಿಲ್ಲು ಮಾರಾಯ. ನಿನ್ನನ್ನೇ ಮಾತಾಡಿಸಿದ್ದು. ಏ ಚಲುವಾ ಯಾರು ನೀ?

ರಾಗ : ಕೇದಾರಗೌಳ **ತಾಳ :** ಆದಿ.

ಯಾಽರು ನೀ ಸುಂದರ । ಎಲ್ಲಿದೆ ನಿನ್ನ ।
ಊಽರು ನುಡಿ ವಿವರ ॥
ಈ ರೀತಿಯಲಿ ಬಂದು ಮದ್ದಳೆ ನುಡಿಸಿದೆ ।
ಚಾರುಸೇವೆಯೊ ನಿನಗಿದೆ ವ್ಯವಸಾಯವೊ ॥

ಕಲಾವತಿ : ಓ ಮಹಾಮಹಿಮಾ, ನಿನಗೆ ಅನೇಕಾನೇಕ ನಮಸ್ಕಾರಗಳು ನಿನ್ನಂತಹ ಸುಂದರ ತರುಣರನ್ನು ನಾವು ಕಂಡಿರಲೇ ಇಲ್ಲ. ನೀನು ಇದೇ ಊರಿನವನೋ? ಪರಸ್ಥಳದವನೋ? ನಿನ್ನ ಹೆಸರೇನು? ತಂದೆ ತಾಯಿಯರು ಯಾರು? ದಯಮಾಡಿ ತಿಳಿಸಬೇಕು.

ಮದನಿಕೆ : ದೇವಾಲಯದ ಆವಾರದಲ್ಲಿ ನಿಂತು ಚನ್ನಾಗಿ ಮದ್ದಳೆ ನುಡಿಸಿದ್ದೀಯೆ. ಈ ಕಸುಬನ್ನು ನೀನು ಎಲ್ಲಿ ಕಲಿತೆ? ಮದ್ದಳೆ ಬಾರಿಸುವುದು ನಿನ್ನ ಹವ್ಯಾಸವೋ ಅಥವಾ ವೃತ್ತಿಯೋ? ದೇವರ ಸೇವೆಗೆಂದು ಬಂದವನೋ ಊರೆಲ್ಲಾ ಅಡ್ಡಾಡಿ ನಾಲ್ಕು ಕಾಸು ಸಂಪಾದನೆ ಮಾಡುವ ಉದ್ದೇಶದಿಂದ ಬಂದದ್ದೋ? ನೀನು ಒಬ್ಬನೇ ಇದ್ದೀಯೋ ಜತೆಗೆ ಯಾರಾದರೂ ಇದ್ದಾರೋ? ಎಲ್ಲಿ ಉಳಿದುಕೊಂಡಿದ್ದೀಯೆ? ಎಷ್ಟು ದಿವಸ ಇರ್ತೀಯೆ? ನಿನಗೆ ಕನ್ನಡ ಭಾಷೆ ಗೊತ್ತುಂಟೋ ಇಲ್ಲವೋ?

ಅಲ್ಲಮ : ಈ ಪ್ರಶ್ನೆ ಮೊದಲು ಕೇಳಿ ಉತ್ತರ ಪಡೆದು, ಆಮೇಲೆ ಹೀಗೆ ಪುಂಖಾನು ಪುಂಖವಾಗಿ ಪ್ರಶ್ನೆಗಳನ್ನು ಕೇಳಬೇಕಿತ್ತು. ಭಾಷೆಯೇ ಗೊತ್ತಿಲ್ಲದೇ ಇದ್ದರೆ ನಿಮ್ಮ ಈವರೆಗಿನ ಶ್ರಮ ವ್ಯರ್ಥ ಆಗುತ್ತಿತ್ತು. ನನ್ನ ಪರಿಚಯ ತಿಳಿಸಬೇಕೋ? ಆಗಲಿ. ನನ್ನ ಹೆಸರು

ರಾಗ : ಖಮಾಚ್ **ತಾಳ :** ಅಷ್ಟ

ಅಲ್ಲಮನೆಂಬ ನಾಮ । ಪೂರ್ವಾಪರ । ವೆಲ್ಲವನರಿಯೆನಮ್ಮ ॥
ಅಲ್ಲಲ್ಲಿ ಅಲೆಯುತ ದಿನಗಳೆಯುತಲಿಹೆ ।
ಉಲ್ಲಾಸಕೆಂದೀ ಮದ್ದಳೆಯನ್ನು ನುಡಿಸುವೆ ॥

ಅಲ್ಲಮ : ಹೇಳಿಕೊಂಡು ಹೆಮ್ಮೆಪಡುವ ಹಿನ್ನೆಲೆ ನನಗಿಲ್ಲ. ಜನ್ಮ ಕೊಟ್ಟವರು ಯಾರೋ ಗೊತ್ತಿಲ್ಲ. ಕುಲ–ಪಂಗಡಗಳ ಬಗ್ಗೆ ನಾನು ಯೋಚಿಸಲೇ ಇಲ್ಲ. ನಾನೊಬ್ಬ ಮನುಷ್ಯ ಎಂದಿಷ್ಟೇ ನನಗೆ ಗೊತ್ತು. ವ್ಯವಹಾರಕ್ಕೊಂದು ಹೆಸರು ಬೇಕು ಅಲ್ಲವೇನಮ್ಮ? ಅಲ್ಲಮ ಅಂತ ಕರೆಯುತ್ತಾರೆ.

ಕಲಾವತಿ : ಅಲ್ಲಮಾ– ಮದ್ದಳೆಯ ಬಗ್ಗೆ ನಿನಗೇಕೆ ಅಭಿಮಾನ?

ಅಲ್ಲಮ : ಗಾನಗೋಷ್ಠಿಗಳಲ್ಲಿ, ಬಯಲಾಟಗಳಲ್ಲಿ– ತಾಳ ಮೇಳಗಳಲ್ಲಿ ಪಾಲುಗೊಳ್ಳುವ ಮಧುರ ಮದ್ದಳೆಗೆ ನಾನು ಮಾರು ಹೋಗಿದ್ದೇನೆ. ಬಿಗಿತದ ಮೂಲಕ ನಾದಕೊಡುವ ಈ ವಾದ್ಯ ಕಟ್ಟುನಿಟ್ಟಿನ ಬದುಕಿನ ಬಗೆ ತಿಳಿಸುತ್ತದೆ. ಪೆಟ್ಟುಕೊಟ್ಟರೂ ತಿರುಗಿ ಮೋಹಕ ನುಡಿಗಳನ್ನೇ ಕೊಡುವ ಮದ್ದಳೆಯ ಸಹನೆ ಸದ್ಗುಣಗಳು ಲೋಕಕ್ಕೇ ಮಾದರಿ. ಎತ್ತಿದವರ ಕೈಗೂಸಾಗಿ, ತಿಳಿದು ಬಳಿಸಿದವರ ಬಾಳಿಗೆ ಕರಕುಶಲ ಕಲೆಯಾಗಿ ಪರಿಣಮಿಸುವ ಮದ್ದಳೆ ನನ್ನ ನೆರವಿನ ಬಂಟನಾಗಿದೆ.

ಮಧುಕೇಶ್ವರನ ಎದುರು ಮದ್ದಳೆ ಸೇವೆ ಸಲ್ಲಿಸೋಣ ಎಂದು ಇಲ್ಲಿಗೆ ಬಂದೆ.

ಮದನಿಕೆ : ಈ ಊರಲ್ಲಿ ನೀನು ಎಲ್ಲಿ ಉಳಿದಿದ್ದೀಯೆ?

ಅಲ್ಲಮ : ಅಲ್ಲಿ– ಇಲ್ಲಿ ಅಂತ ನಿರ್ದಿಷ್ಟ ಇಲ್ಲ. ಅನುಕೂಲ ದೊರೆತ ಸ್ಥಳದಲ್ಲಿ ಇರುತ್ತೇನೆ. ತಿರುಗಾಡಿ ತಿರುಪೆ ಎತ್ತುವುದಕ್ಕೂ ನಾಚುವದಿಲ್ಲ. ಜಂಗಮನೂ ಹೌದು. ನೀವು ಬಂದು ನನ್ನನ್ನು ಮಾತಾಡಿಸಿದ್ದೀರಿ. ನಿಮ್ಮ ಪರಿಚಯ?

ಕಲಾವತಿ : ನೀನು ಕೇಳದೆ ಇದ್ದರೂ ಹೇಳುತ್ತೇವೆ. ನಾವು ಇದೇ ಊರಿನವರು. ಅರಮನೆಯ ಪರಿಚಾರಿಕೆಯರು. ಮಧುಕೇಶ್ವರನ ಪೂಜೆಗೆ ಬಂದಿದ್ದೆವು. ನೀನು ಮದ್ದಳೆ ಬಾರಿಸಿದ್ದನ್ನು ಕೇಳಿದೆವು. ಆ ಮೇಲೆ ನಿನ್ನ ಪರಿಚಯದ ಅಗತ್ಯ ಬಂತು.

ಅಲ್ಲಮ : ನಿಮಗೂ ಲಯ– ತಾಳಗಳ ಅರಿವಿರಬೇಕು. ಅದಕ್ಕೆ ಕುತೂಹಲ ಅಲ್ಲವೇ?

ಮದನಿಕೆ : ನಮ್ಮ ಬಗ್ಗೆ ನಾವು ಆಲೋಚಿಸುವುದೇ ಇಲ್ಲ. ಆದರೆ ನಿನ್ನ ಕೈಚಳಕ......

ರಾಗ : ಹಂಸಧ್ವನಿ **ತಾಳ :** ಏಕ

ನಿನ್ನಯ ಕೈಚಳಕದ ಮೋಡಿಗೆ ನೃಪ ।
ಕನ್ಯೆಯು ಮರುಳಾಗಿ ॥
ತನ್ನೆಡೆ ಕರೆತರೆ ಪೇಳಿರ್ಪಳು ಸಂ ।
ಪನ್ನ ಬಾರೋ ಜವದಿ ॥

ಮದನಿಕೆ : ಮದ್ದಳೆಯ ನುಡಿಕೆಯಲ್ಲಿ ನೀನು ಕಾಣಿಸಿದ ಚಳಕ ಅದ್ಭುತವಾಗಿತ್ತು. ಆ ಮೋಡಿಗೆ ಎಲ್ಲರೂ ಮರುಳಾಗಿದ್ದಾರೆ. ಈ ಊರಿಗೆ ಹಿಂದೆ ವೈಜಯಂತೀಪುರ ಎಂದು ಹೆಸರಿತ್ತಂತೆ. ಈಗ ಬನವಸೆ ಎಂದು ಕರೆಯುತ್ತಾರೆ. ಮಮಕಾರ ಮಹಾರಾಜರು ಈ ನೆಲೆಯನ್ನು ಆಳುತ್ತಿದ್ದಾರೆ. ಮೋಹಿನಿದೇವಿ ಅವರ ಪತ್ನಿ. ಒಬ್ಬಳೇ ಮಗಳು, ಮಾಯೆ ಎಂದು ಆಕೆಯ ಹೆಸರು. ನಾವು ಅವಳ ಆಪ್ತಸಖಿಯರು. ನಾನು ಮದನಿಕೆ.

ಕಲಾವತಿ : ನಾನು ಹೆಸರಿಗೆ ಕಲಾವತಿ. ರಾಜಕುಮಾರಿ ನಿಜವಾಗಿಯೂ ಕಲಾವತಿ. ನಿನ್ನ ಮದ್ದಳೆಯ ಮೋಡಿಗೆ ಬೆರಗಾದ ಅವಳು ನಿನ್ನನ್ನು ಅರಮನೆಗೆ

ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿ ಹೋಗಿದ್ದಾಳೆ. ಹಾಗಾಗಿ ನೀನು ದಯಮಾಡಿ ಅಲ್ಲಿಯವರೆಗೆ ಬರಬೇಕು. ಏಳು ಹೋಗೋಣ.

ಅಲ್ಲಮ : ನೀವು ರಾಜಕುಮಾರಿಯ ಅಪ್ಪಣೆಗಾಗಿ ನನ್ನನ್ನು ಸಂಪರ್ಕಿಸಿದ್ದೀರಿ. ಪಾಪ– ಈ ಮಧುಕೇಶ್ವರನ ಸನ್ನಿಧಿಯಲ್ಲಿ ಕೆಲವು ದಿಃ ಇರಬೇಕೆಂದು ನಾನು ಬಯಸಿದ್ದೆ. ಈ ಬಗ್ಗೆ ಇದೂ ಒಂದು ಅವಕಾಶ. ಆಗಲಿ ಬರುತ್ತೇನೆ. (ಪ್ರಯಾಣ)

ದೃಶ್ಯ – ೪

(ಮಾಯೆ–ಮದನಿಕೆ–ಕಲಾವತಿಯರು, –ಅಲ್ಲಮ)

ರಾಗ : ಕಾನಡಾ **ತಾಳ :** ರೂಪಕ

ನಿಪುಣ ಕಲಾವಿದನೆ ನಿನ್ನನು । ಸ್ವಾಗತಿಸುವೆ ।
ವಿಪುಲ ಕೈಚಳಕವ ಕಂಡೆನು ॥
ಗುಪಿತವಿಲ್ಲ ವೈಸೆನಾಟ್ಯಚಪಲೆ ನಾನು ಚುರುಕುಗತಿಯ ।
ಸಫಲಯತ್ನಕೊದಗಿನಿಂತು । ಉಪಕರಿಸಿ ಸಹಾಯನೀಡು ॥

ಮಾಯೆ : ಮಧುಕೇಶ್ವರನ ಮಂದಿರದಲ್ಲಿ ಮದ್ದಳೆಯ ಅಲೆಯನ್ನು ಮೊಳಗಿಸಿದ ನಿನ್ನನ್ನು ಇಲ್ಲಿ ಸ್ವಾಗತಿಸುತ್ತಿದ್ದೇನೆ. ನಾಟ್ಯಕಲೆಯನ್ನು ಒಲಿಸಿಕೊಳ್ಳುವ ಹಂಬಲ ನನ್ನದು. ಪ್ರಾರಂಭಿಕ ಅಭ್ಯಾಸ ಆಗಿದೆ. ಸಾಧನೆಯಲ್ಲಿ ತೊಡಗಿದ್ದೇನೆ. ಆದರೆ ಪಕ್ಕವಾದ್ಯದವರ ಕೊರತೆ. ನೃತ್ಯದ ಗತ್ತಿಗೆ ಹೆಜ್ಜೆಯ ಒತ್ತಿಗೆ ಒತ್ತು ಗೊತ್ತುಗಳನ್ನು ಅರಿತು ಬಾರಿಸುವ ನಿಪುಣ ಮದ್ದಳಿಗರ ನೆರವು ದೊರೆತರೆ ನಾನು ಕೃತಕೃತ್ಯಳಾಗುತ್ತೇನೆ. ಆ ಉದ್ದೇಶದಿಂದಲೇ ನಿನ್ನ ಸಂದರ್ಶನ ಬಯಸಿದ್ದೇನೆ. ಅನ್ಯಥಾ ಭಾವಿಸಬಾರದು. ಚರ್ಮವಾದ್ಯ ವಾದನಕಲೆ ಎಲ್ಲರಿಗೂ ಸಿದ್ಧಸುವದಿಲ್ಲ. ಬಡಿದು ತಟ್ಟಿ ವಾದ್ಯಕ್ಕೆ ಪೆಟ್ಟುಕೊಟ್ಟು ಗದ್ದಲ ಎಬ್ಬಿಸಿದರಾಗಲಿಲ್ಲ, ನಾದಶುದ್ಧಿ ತನಿನುಡಿಗಳ ನಿರ್ಮಾಣ ಕೌಶಲ್ಯ ಇರಬೇಕು. ನೀನು ಆ ನೈಪುಣ್ಯ ಪಡೆದದ್ದು ನನ್ನ ಪುಣ್ಯ. ಈ ಅರಮನೆ ನಿನ್ನದೇ ಎಂದು ಭಾವಿಸು. ನಿನಗೆ ಏನೇನು ಅನುಕೂಲ ಬೇಕೋ ತಿಳಿಸು. ನನ್ನ ಅಭ್ಯಾಸಕ್ಕೆ ಸಹಕಾರ ನೀಡು.

ಅಲ್ಲಮ : ನಾಟ್ಯದ ಬಗ್ಗೆ ನಿನಗಿರುವ ಆಸಕ್ತಿ ತಿಳಿದು ನನಗೂ ಸಂತೋಷವಾಯ್ತು. ಮದ್ದಳೆಯಲ್ಲಿ ಕೈಚಳಕಕ್ಕೆ ಪ್ರೇರಣೆ ಸಿಗುವದು ಕುಣಿತದಿಂದಲೇ. ವೈಯಕ್ತಿಕ ಸಾಧನೆಗೂ ಸಮ್ಮೇಳ ಕ್ರಮಕ್ಕೂ ವ್ಯತ್ಯಾಸವಿದೆ. ಸ್ವಕಪೋಲ ಕಲ್ಪಿತ ಲಯ ವಿನ್ಯಾಸದ ಮೂಲಕ ಸಂತೋಷ ಪಡುತ್ತಿದ್ದೆ. ಇನ್ನಿತರರಿಗೂ ಅದು ಪ್ರೇರಕವಾಗುವಂತೆ ಪೂರಕವಾಗುವಂತೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ನಾನೂ ಕಲಿಯಬೇಕಾಗಿದೆ. ನಿನಗೆ ನೆರವಾಗುವುದರ ಮೂಲಕ ಆ ಉದ್ದೇಶ ಈಡೇರುತ್ತದೆ. ಈ ವಿನಿಮಯ ವಿಧಾನ ಕಲೆಯ ಬೆಳವಣಿಗೆಗೂ ಕಾರಣವಾಗುತ್ತದೆ. ನಿನ್ನ ಅಭ್ಯಾಸ ಸಾಗಲಿ. ಅದು ನಾನು ಬಯಸಿಬಂದ ಸೇವೆಗೆ ಅಡ್ಡಿಯಾಗದಿರಲಿ.

ಕಲಾವತಿ : ಶುಭಸ್ಯಂ ಶೀಘ್ರಂ. ಈಗಲೇ ಅಭ್ಯಾಸ ಆರಂಭಿಸಿ. ನಮಗೂ ನೋಡುವ ಅಭ್ಯಾಸವಾಗುತ್ತದೆ. ಮಾಯೇ ನೀನು ಗೆಜ್ಜೆಕಟ್ಟು. ಅಲ್ಲಮಾ ನೀನು ಮದ್ದಳೆ ಮಾಡು. ಮದನಿಕೆ ನೀನು ರಂಗಸ್ಥಲ ಅಣಿಗೊಳಿಸು.

ರಾಗ : ಕಲ್ಯಾಣಿ **ತಾಳ :** ಆದಿ

ಚಕಿತಗೊಳಿಸಿ ರಂಜಿಸು ಈ ಲೋಕವನು । ನಟರಾಜ ಮಹೇಶ ।
ಪ್ರಕಟಪಡಿಸು ತಾಂಡವ ವೈಚಿತ್ರ್ಯವನು ॥ ಪ ॥
ತಕತಕಿಟ ತರಿಕಿಟ ದಿಕಿಟತಕ ಗಣಿ ।
ತಕೆ ನಡೆ ಬದಲಿಸಿ ತಾಳ ಪ್ರಬೇಧದಿ ॥ ಅ.ಪ ॥
ಶಶಿನಕ್ಷತ್ರ ವಿಭೂಷಣ ವೇಷದಲಿ । ಭುವನಾಂಗಿಕಾಭಿನಯ ।
ಕುಶಲ ಸಕಲ ವಾಙ್ಮಯ ವಾಚಿಕವಿರಲಿ ॥
ಎಸೆಯಲಿ ಸಾತ್ವಿಕ ಶಿವಸಾಂಗತ್ಯದಿ । ಸುಷಿರ ಘನಾಹತ
ವಾದ್ಯಮೇಳದಲಿ ॥ ೧ ॥

ಲಾಸ್ಯತಾಂಡವ ವಿಶೇಷವ ಕಾಣಿಸುತ । ಶೃಂಗಾರವೀರಾದ್ಭುತ ।
ಹಾಸ್ಯಕರುಣಾದಿರಸಗಳ ಪೋಷಿಸುತ ॥
ನಶ್ವರಭ್ರಾಂತಿಯ ಬಣ್ಣಿಸಿ ಕಾಣಿಸು ।
ಶಾಶ್ವತ ತತ್ವದ ಹಿರಿಮೆಯ ಸೂಚಿಸು ॥ ೨ ॥

ಮಾಯೆ : ಸಖಿಯರೇ, ಈ ಅಲ್ಲಮನಿಗೆ ಉಳಿಯಲು ಅರಮನೆಯ ದ್ವಾರದಲ್ಲಿ ಅನುಕೂಲ ಕಲ್ಪಿಸಿಕೊಡಿ. ಅದನ್ನೇ ದೊಡ್ಡ ಗದ್ದಲ ಮಾಡಬೇಡಿ (ನಿರ್ಗಮನ)

ರಾಗ : ಕೇದಾರಗೌಳ **ತಾಳ :** ಝಂಪೆ

ಮುಗಿಲು ಗುಡುಗಿಗೆ ನವಿಲು ಗರಿಗೆದರಿ ಕುಣಿದಂತೆ ।
ದಿಗಿಣ ನುಡಿತಕೆ ಬಯಕೆಯರಳಿ ನರ್ತಿಸಲು ॥
ಸೊಗಸುಗಾರನ ಸಂಗಸುಖಕೆ ತವಕಿಸಿ ಮಾಯೆ ।
ಹಗಲಿರುಳು ಮನದಿ ಕೊರಗಿದಳು ॥

ಮಾಯೆ : ಅಲ್ಲಮನ ಮದ್ದಳೆಯ ದಿಗಿಣ ನುಡಿತಕ್ಕೆ ನನ್ನ ಅಂತರಂಗದಲ್ಲಿ ಹುದುಗಿಕೊಂಡಿರುವ ಭೋಗದ ಬಯಕೆ ಗರಿಗೆದರಿ ಕುಣಿಯುತ್ತಾ ಇದೆ. ಆ ಸೊಗಸುಗಾರನ ಸಂಗಕ್ಕೆ ಮನ ಹಾತೊರೆಯುತ್ತಾ ಇದೆ. ಭರತ ನಾಟ್ಯ ಬರದೇ ಇದ್ದರೂ ಚಿಂತೆಯಿಲ್ಲ. ಸುರತ ಕಾಮನೆಯನ್ನು ಪೂರೈಸಿಕೊಳ್ಳುವ ದಾರಿ ಹುಡುಕಬೇಕು. ಏನು ಮಾಡಲಿ? ಹೇಗೆ ಕೂಡಲಿ? ಹಗಲೂ ಇರುಳೂ ಇದೇ ಆಲೋಚನೆ ಕಾಡುತ್ತಾ ಇದೆ. ಈ ವಿಚಾರವನ್ನು ಮನಸ್ಸಿನಿಂದ ದೂರ ಮಾಡಬೇಕು. ಅವನ್ಯಾರು, ನಾನ್ಯಾರು?

ರಾಗ : ನಾಟಿ **ತಾಳ :** ತ್ರಿವುಡೆ

ಅರಸು ಕುವರಿಯು ನಾನು ನೆಲೆಯ ।
ನ್ನರಸಿ ತಿರುಗುವನವನು ಹೊಂದಿಕೆ ॥
ಸರಿಬರದು ಕನಕವನು ತಿಪ್ಪೆಯೊ । ಳಿರಿಸಬಹುದೆ ॥

ಮಾಯೆ : ನನ್ನ ಯೋಗ್ಯತೆಯೇನು, ಅವನ ಯೋಗ್ಯತೆಯೇನು? ನಾನು ರಾಜ ಕುಮಾರಿ ಅವನು ಅಲೆಮಾರಿ. ಸಿರಿವಂತಿಕೆಯ ಘನತೆ ನನಗಿದೆ. ತಿರುಪೆ ಎತ್ತುವ ದಾರಿದ್ರ್ಯ ಅವನಿಗಿದೆ. ಮುತ್ತು ಕೆಟ್ಟರೂ ಭತ್ತಕ್ಕಿಂತ ಬೆಲೆ ಹೆಚ್ಚೇ ಇರುತ್ತದೆ. ನನ್ನ ಹಿತಕ್ಕಾಗಿ ಅವನ ಎದುರು ಭಿಕ್ಷುಕಿಯಂತೆ ತಲೆ ತಗ್ಗಿಸಿ ಕೈಯೊಡ್ಡಿ ನಿಲ್ಲಬೇಕೇ? "ಬನವಾಸಿಯ ಅರಸನ ಮಗಳು ವನವಾಸಿಯಾದ ಯಾವನನ್ನೋ ಕಟ್ಟಿಕೊಂಡಳು" ಎಂದು ಜನ ಚಪ್ಪಾಳೆ ತಟ್ಟಿ ನಗುತ್ತಾರೆ. ಛೇ ಏನಾಗಿದೆ ನನಗೆ, ಯಾಕೆ ಹೀಗೆ ವಿಚಾರಿಸುತ್ತಿದ್ದೇನೆ. ಮಣ್ಣಿನಿಂದಲೇ ಬಂಗಾರ ತೆಗೆಯುತ್ತಾರೆ. ಅಷ್ಟೇ ಅಲ್ಲ, ಬಂಗಾರದ ಒಡವೆ ಮಾಡುವಾಗ ಅರಗನ್ನು ಸೇರಿಸುತ್ತಾರೆ. ಗಿರಿರಾಜನ ಮಗಳು ಸ್ಮಶಾನವಾಸಿ ಶಿವನನ್ನು ವರಿಸಿದ್ದಾಳೆ. ಸಿರಿವಂತಿಕೆಗೂ ಶರೀರ ಸುಖಕ್ಕೂ ಸಂಬಂಧ ಇಲ್ಲ. ಅರ್ಥದಲ್ಲಿ ಕಾಮ ಇರುತ್ತದೆ. ಕಾಮದಲ್ಲಿ ಅರ್ಥ ಇರುವದಿಲ್ಲ. ತಲೆ ಸಿಡಿಯುತ್ತದೆ. ಕೆಡುತ್ತದೆ ಏನು ಮಾಡಲಿ?

ಮದನಿಕೆ : ಓ ನೀನು ಇಲ್ಲಿ ಇದ್ದೀಯೇ ! ನಾವು ಅಲಂಕಾರ ಗೃಹದಲ್ಲಿ ನಿನಗಾಗಿ ಕಾದಿದ್ದೆವು.

ಕಲಾವತಿ : ನೀನು ಶಯನಗೃಹದಲ್ಲಿ ತಲೆಗೆ ಕೈಕೊಟ್ಟು ಕುಳಿತಿದ್ದೀಯೆ. ಮಾಯೇ ಏನೇ ಇದು?

ರಾಗ : ನಾದನಾಮಕ್ರಿಯೆ **ತಾಳ :** ಅಷ್ಟ

ಬಿಸಿಲ ಝಳಕೆ ಕುಸುಮ ಬಾಡಿದಂsದದಿ । ಮದನಿ ।
ವ್ಯಸನವಿಡಿದು ಬಳಲುತಿರುವೆ ಸುಂದರಿ ॥
ಹೊಸ ಹರಯದ ಸಂಗಸುಖದ ಬಯಕೆಯೇsನೆ । ನಿನ್ನ ।
ಕುಶಲಕಾಗಿ ಯತ್ನಿಸುವೆವು ಪೇಳೆ ಜಾsಣೆ ॥

ಕಲಾವತಿ : ಅಲ್ಲಮನನ್ನು ಇಲ್ಲಿ ಕರೆದುತಂದ ಮೇಲೆ ನೀನು ಕುಣಿದದ್ದನ್ನು ಕಂಡು ಸಂತೋಷವಾಗಿತ್ತು.

ಮದನಿಕೆ : ಆದರೆ ರಂಗದ ನಟನೆಗೂ ಅಂತರಂಗದ ಯೋಚನೆಗೂ ಅಂತರವಿದೆ ಅಂತ ಈಗ ಗೊತ್ತಾಯ್ತು.

ಕಲಾವತಿ : ಹೊಸದಾಗಿ ಅರಳುವ ಹೂವು ಬಿಸಿಲಿನ ಝಳಕ್ಕೆ ಸಿಲುಕಿ ಬಾಡಿದರೆ ಅದನ್ನು ನೋಡಲಿಕ್ಕಾಗುವದಿಲ್ಲ. ಹೊಸ ಹರಯದಲ್ಲಿ ನೀನು ಬಾಡಿ ಕೃಶಳಾಗುತ್ತಿದ್ದೀಯೇ ಮಾಯೆ.

ಮದನಿಕೆ : ಭರತ ನಾಟ್ಯದಲ್ಲಿ ಕುಣಿದು ದಣಿದಿದ್ದೀಯೋ ಅಥವಾ ಸುರತ ಸುಖದ ಬಯಕೆಯಿಂದ ಬಳಲಿ ಬೆಂಡಾಗಿದ್ದೀಯೋ? ಇಚ್ಛೆಯನ್ನು ಮುಚ್ಚಿಡುವುದಕ್ಕೆ ಪ್ರಯತ್ನಪಡಬೇಡ. ಮುಖ ಮನಸ್ಸಿನ ಕನ್ನಡಿ. ಯಾಕೆ ಹೀಗೆ ವರ್ತಿಸುತ್ತಿದ್ದೀಯೇ ಹೇಳು.

ಮಾಯೆ : ನನ್ನ ಹೃದಯದ ಹೊಯ್ದಾಟದ ಹದನವನ್ನು ನಿಮ್ಮಲ್ಲಿ ಹೇಳದೆ ಇನ್ನಾರಲ್ಲಿ ಹೇಳಲಿ? ಸಖಿಯರೇ, ನಾನು ಆ ಅಲ್ಲಮನ ಬಗ್ಗೆಯೇ ಯೋಚಿಸುತ್ತಿದ್ದೇನೆ.

ರಾಗ : ಯರಕಲ ಕಾಂಭೋಜ **ತಾಳ :** ಆದಿ

ನೋಟಕ್ಕೆ ಸಿಗುವ ಕೈಗೆಟುಕನಲ್ಲ । ಒಡ ।
ನಾಟದೊಳಿರ್ದರು ಸುಖವಿಲ್ಲ ॥
ಪಾಠವಿನ್ನೇಕೆ ಸುಮ್ಮನೆ ಸಾಕು । ಒ ।
ಕ್ಕೂಟದ ಸುರತಕೆತ್ನಿಸಬೇಕು ॥

ಮಾಯೆ : ಕನ್ನಡಿಯ ಗಂಟು ಕೈಗೆ ಸಿಗುವದಿಲ್ಲ. ಕನಸಿನಲ್ಲಿ ಉಂಡರೆ ಹಸಿವು ಹಿಂಗುವದಿಲ್ಲ. ಆ ಅಲ್ಲಮನನ್ನು ಕಂಡ ಕ್ಷಣದಿಂದ ನನ್ನ ಮನಸ್ಸು ಅವನ ಕೂಟಕ್ಕಾಗಿ ಹಾತೊರೆಯುತ್ತಾ ಇದೆ. ಪಾತದ ನೆವದಲ್ಲಿ ಹತ್ತಿರ ಇರಿಸಿಕೊಂಡಿದ್ದೇನೆ. ಭರತ ನಾಟ್ಯದ ತಾಳ – ಮೇಳಗಳಲ್ಲಿ ಹೊಂದಿಕೊಳ್ಳಲು ಯತ್ನಿಸುತ್ತೇನೆ. ನಿದ್ದೆಯಿಲ್ಲದೆ ಹಾಸುಗೆಯಲ್ಲಿ ಹೊರಳುತ್ತೇನೆ. ಏನು ಸುಖ ಸಿಕ್ಕಹಾಗಾಯ್ತು. ಮದನಿಕೇ, ಕಲಾವತಿ ನಾನವನನ್ನು ಕೂಡಲೇ ಬೇಕು. ಕೂಡಲೇಬೇಕು ಎಂದರೆ ಒದಗಿಸುವವರು ಯಾರು?

ಮದನಿಕೆ : ಗೊತ್ತಾಯ್ತು ಗೊತ್ತಾಯ್ತು. ಅಲ್ಲಮನನ್ನು ನಿನ್ನ ಅಂತಃಪುರಕ್ಕೆ ಸೇರಿಸುವ ಪ್ರಯತ್ನ ಮಾಡುತ್ತೇವೆ. ನಿನ್ನ ಬಳಿಗೆ ಕಳುಹಿಸುತ್ತೇವೆ. ಸುರತಕ್ಕಾಗಿ ಕೊರಗಿ ಕರಗಿ ಸೊರಗಿದ ನೀನು ಮನಸ್ಸನ್ನು ಸಂತವಿಸಿಕೋ. ಕಲಾವತೀ ಏಳು ಹೋಗೋಣ. ಮಾಯೇ ನೀನು ಮರುಗಬೇಡ.

(ಅಲ್ಲಮನ ಬಳಿಗೆ ಬಂದು)

ಮದನಿಕೆ : ಅತಿಥಿಯಾಗಿ ನೀನು ಇಲ್ಲಿ ಉಳಿದಿದ್ದೀಯೇ.

ಕಲಾವತಿ : ಪರಿಸ್ಥಿತಿಯನ್ನು ನಿನಗೆ ತಿಳಿಸಲೇಬೇಕು.

ಅಲ್ಲಮ : ಏನು ಅನಾಹುತ ಆಯ್ತು, ಯಾಕೆ ಅವಸರ?

ಮದನಿಕೆ ಕಲಾವತಿ : ಅಲ್ಲಮಾ–

ರಾಗ : ಧನ್ಯಾಸಿ **ತಾಳ :** ಕೋರೆ

ಅಲ್ಲಮ ನಿನ್ನಂಗ ಸಂಗಕೆ । ಕಾತರಿಸಿ ಕೊರಗಿ ।
ತಲ್ಲಣಿಸುವಳಲ್ಲೊ ನೃಪಸುತೆ ॥
ಮೆಲ್ಲನವಳ ಬಯಕೆ ಸಲಿಸು ।
ಉಲ್ಲಾಸದಲಿ ರಮಿಸಿ ಸುಖಿಸು ॥

ಮದನಿಕೆ : ರಾಜಕುಮಾರಿಯ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಾ ಇದೆ.

ಅಲ್ಲಮ : ರಾಜವೈದ್ಯರ ಬಳಿಗೆ ಕಳುಹಿಸಬೇಕಿತ್ತು.

ಕಲಾವತಿ : ಮನೋರೋಗಕ್ಕೆ ಮದ್ದಿಲ್ಲ ಎನ್ನುತ್ತಾರೆ. ನೀನೇ ಇಲ್ಲಿರುವಾಗ ಬೇರೆ ವೈದ್ಯರ ಅಗತ್ಯ ಇಲ್ಲ. ರೋಗಕ್ಕೆ ಕಾರಣವೂ ನೀನೇ, ಪರಿಹಾರಕ್ಕೆ ಔಷಧವೂ ನೀನೇ !

ಅಲ್ಲಮ : ಜಡಕಿನ ಜಡೆಯನ್ನು ಮುಂದೆ ಮುಸುಕಿದರೆ ಸನ್ನಿವೇಶದ ಮುಖ ಕಾಣಿಸುವದಿಲ್ಲ.

ಮದನಿಕೆ : ರಾಜಕುಮಾರಿ ತಲ್ಲಣಿಸುತ್ತಾ ಇದ್ದಾಳೆ. ಮಂಚದಲ್ಲಿ ಮಲಗಿದ್ದಾಳೆ. ಅವಳನ್ನು ಸಂತೈಸಬೇಕಾದದ್ದು ನಮ್ಮ ಕರ್ತವ್ಯ. ಪ್ರೀತಿಯಿಂದ ನಮ್ಮನ್ನು ನೋಡುತ್ತಿರುವ ಅವಳ ಭೀತಿಯನ್ನು ನಿವಾರಿಸುವ ಹೊಣೆ ನಮ್ಮದು. ಈ ನೀತಿಯನ್ನು ನೀ ತಿಳಿದವನೇ.

ಕಲಾವತಿ : ಅವಳು ನಿನ್ನಲ್ಲಿ ಅನುರಕ್ತಳಾಗಿದ್ದಾಳೆ. ನೀನು ಸಮಾಧಾನ ಪಡಿಸಿದರೆ ಸುಖ ಕಾಣುತ್ತಾಳೆ. ನಿನ್ನ ಅಂಗಸಂಗ ಬಯಸಿ ಪಲ್ಲಂಗದಲ್ಲಿ ಕಾದಿರುವ ಮಾಯೆಯನ್ನು ಸಂತೈಸು.

ಅಲ್ಲಮ : ನಿಮ್ಮ ಮಾತಿನ ಜಾಡನ್ನು ನೋಡಿದರೆ ನನ್ನನ್ನು ದಾರಿ ತಪ್ಪಿಸುತ್ತಾ ಇದ್ದೀರಿ.

ಮದನಿಕೆ : ಹಾಗೆ ತಿಳಿಯಬೇಡ. ಅಂತಃಪುರದ ದಾರಿ ತೋರಿಸ್ತಾ ಇದ್ದೇವೆ.

ಅಲ್ಲಮ : ರಾಜಕುಮಾರಿಯ ಅಂತಃಪುರಕ್ಕೆ ನಾನು ಹೋಗಬೇಕೋ? ಸೇವಕರಲ್ಲಿ ಒಡೆಯರು ಪ್ರೀತಿ ಕಾಣಿಸುವದು ಅಪರೂಪವಾದರೂ ಅಪರಾಧ ಅಲ್ಲ. ಆದರೆ ಆ ಪ್ರೀತಿಯನ್ನು ಸಲಿಗೆಯಾಗಿ ಬಳಸುವದು ಊಳಿಗದವರಿಗೆ ಉಚಿತವಲ್ಲ.

ಕಲಾವತಿ : ನಿನ್ನನ್ನು ಅತಿಥಿಯಂತೆ ಸತ್ಕರಿಸಿದ್ದಾಳೆ. ಕಲಾವಿದನೆಂದು ಗೌರವಿಸಿದ್ದಾಳೆ. ಆಳಿನಂತೆ ಕಂಡಿಲ್ಲ. ಅರಸನ ಮಗಳೇ ನಿನ್ನ ಮೇಲೆ ಮನಸ್ಸಿಟ್ಟು ಕರೆದಿದ್ದಾಳೆ. ನೀನೇಕೆ ಅಳುಕುತ್ತಾ ಇದ್ದೀಯೆ?

ಅಲ್ಲಮ : ನೀವು ನನ್ನನ್ನು ಹುರಿದುಂಬಿಸುತ್ತಿದ್ದೀರಿ. ಆದರೆ ಲೋಕರೂಢಿಗೆ ಹೊಂದಿ ಆಲೋಚಿಸಿದರೆ–

ರಾಗ : ಶಂಕರಾಭರಣ **ತಾಳ :** ತ್ರಿವುಡೆ

ಪಟ್ಟೆಪೀತಾಂಬರಕೆ ಗೋಣಿಯ ।
ಬಟ್ಟೆ ಸಾಟಿಯೆ ಯೋಚಿಸಿ ॥
ಪಟ್ಟಪಾಲಕಿ ತಿರುಕಗೇತಕೆ ।
ಕಟ್ಟಳೆಯ ಸಂಮಾನಿಸಿ ॥

ಅಲ್ಲಮ : ನೀವು ಏನೇನೋ ಹೇಳ್ತಾ ಇದ್ದೀರಿ. ಪಟ್ಟೆ ಪೀತಾಂಬರದ ಬೆಲೆ ಎಷ್ಟು? ಗೋಣೀ ನಾರಿಗೆ ಯಾವ ಬೆಲೆಯಿದೆ? ಅರಸರು ಏರುವ ಪಟ್ಟವನ್ನೋ ಪಾಲಕಿಯನ್ನೋ ತಿರುಕ ಏರಲಿಕ್ಕೆ ಹೋದರೆ ಜನ ಏನಂದಾರು. ಮಾಯೆ ಯಾರು? ನಾನು ಯಾರು? ಅವಳಿಗೆ ಎಲ್ಲವೂ ಇದೆ. ನನಗೆ ಏನೂ ಇಲ್ಲ. ಅವಳ ಆಸೆ ಆಕಾಶದಷ್ಟಿರಬಹುದು. ನನಗೆ ಬಯಕೆ ಎಳ್ಳಷ್ಟೂ ಇಲ್ಲ. ಹಾಗಾಗಿ ನಾನವಳ ಅಂತಃಪುರಕ್ಕೆ ಕಾಲಿಡುವುದಿಲ್ಲ. ನಾಳೆ ಈ ವಿಷಯ ಬಯಲಾದರೆ ನಮ್ಮ ಮಾನ ಉಳಿಯುವುದಿಲ್ಲ. ನಿಮ್ಮ ಮೇಲೆ ವಿಶ್ವಾಸವಿಟ್ಟು ಇಲ್ಲಿಗೆ ಬಂದ ನನ್ನನ್ನು ಅಂತಃಪುರಕ್ಕೆ ದೂಡುವ ಹವಣಿಕೆಯಲ್ಲಿದ್ದೀರಿ. ನನ್ನ ಪಾಲಿಗೆ ಅದು ಕಾರಾಗೃಹ. ನಿಮ್ಮ ಸಹವಾಸ ಸಾಕು. ನನ್ನ ದಾರಿ ನನಗೆ.

ಕಲಾವತಿ : ಮಾನವೀಯತೆಯನ್ನು ಮರೆತು, ತಳವಿಲ್ಲದ ತರ್ಕಕ್ಕಿಳಿಯಬೇಡ. ಪ್ರೇಮಕ್ಕೂ-ಕಾಮಕ್ಕೂ ಸ್ಥಾನ-ಮಾನಗಳ ಅಂತರವಿರುವುದಿಲ್ಲ. ಪಾರ್ವತಿ ಶಿವನನ್ನು ವರಿಸಿದ್ದಾಳೆ. ರೇಣುಕೆ ಜಮದಗ್ನಿಗೆ ಮಾಲೆಯಿಕ್ಕಿದ್ದಾಳೆ. ಮಹಾರಾಜರು ಮಗಳ ಮನೋಗತವನ್ನು ಅರಿತು ವರ್ತಿಸುತ್ತಾರೆ. ಮಹಾರಾಣಿಯವರು ಮಗಳನ್ನೇ ಪ್ರಾಣ ಎಂದು ತಿಳಿದಿದ್ದಾರೆ. ಮಾಯೆ ನಿನ್ನನ್ನು ಒಪ್ಪಿದ್ದರಿಂದ ನಿಮ್ಮಿಬ್ಬರಿಗೂ ಮದುವೆ ಮಾಡುತ್ತಾರೆ. ಮುಂದೆ ಮಂಗಳವೇ ಆಗುತ್ತದೆ. ಈಗ ನಿನಗಾಗಿ ಚಡಪಡಿಸಿ ಜೀವ ಕಳೆದುಕೊಳ್ಳುತ್ತಿರುವ ಮಾಯೆಯನ್ನು ಸಂತೈಸಿ ಉಳಿಸು. ನಿನ್ನ ಕಾಲಿಗೆ ಬೀಳ್ತೇವೆ.

ಅಲ್ಲಮ : ಯಾರೇ ಸಾಯಲಿ, ಏನೇ ಆಗಲಿ, ನಾನು ಬದುಕಬೇಕು. ಎಂದು ವಿಚಾರಿಸುವ ಸ್ವಾರ್ಥಿ ನಾನಲ್ಲ. ಮಾಯೆಯ ರೋಗಕ್ಕೆ ಮದ್ದು ನಾನಾದೇನು. ಆದರೆ ರೋಗೋಪಶಮನಕ್ಕೆ ಬೇಕಾದ ಅನುಪಾನ, ಪಥ್ಯ ಅವಳೇ ಮಾಡಿಕೊಳ್ಳಬೇಕು. ಅಲ್ಲಿ ಏನಾದರೂ ಹೆಚ್ಚು-ಕಡಿಮೆ ಆದರೆ ನನ್ನನ್ನು ದೂರಬೇಡಿ.

ಮದನಿಕೆ : ಅಂತೂ ಒಪ್ಪಿದೆಯಲ್ಲಾ. ಬಾ, ಅಂತಃಪುರದ ದಾರಿಯನ್ನು ನಾವು ತೋರಿಸುತ್ತೇವೆ.

ಕಲಾವತಿ : ಅಂತರಂಗದ ಆಳವನ್ನು ನೀನು ನೋಡು.

(ನಿರ್ಗಮನ)

ದೃಶ್ಯ –೫

ಭಾಮಿನಿ ರಾಗ : ಹಮೀರ ಕಲ್ಯಾಣಿ

ಮಿಂಚಿನಂತೊಳ ಪೊಗಲು ಕಾಣುತ ।
ಚಂಚಲಿಸುತಾ ಮಾಯೆ ಕಾಮನ ।
ಸಂಚಿನಿಂದಾಲಿಂಗಿಸಲು ಬರಲಡಗಿ ಬಯಲಾದ ॥
ಹೊಂಚಿ ಕಾಣಿಸಿಕೊಳಲು ಚುಂಬನ ।
ಸಿಂಚನಕೆ ಬಯಸಿದೊಡೆ ವಂಚಿಸಿ ।
ಮಂಚದೊಳು ಮೈದೋರಿ ಸುರತಕೆ ಸಿಗದೆ ಮರೆಯಾದ. ॥

(**ಮಾಯೆ** – ವಿಭ್ರಮೆಗೆ ಒಳಗಾಗಿ)

ರಾಗ : ಪೂರ್ವಿ ತಾಳ : ರೂಪಕ

ಸುರತಕೆ ಕರೆದರೆ ಬಂದೀ ಪರಿಯಲಿ ಮೋಡಿಯ ಕಾಣಿಸಿ ।
ಹೊರಳಿಸಿ ಕೆರಳಿಸಿ ವಂಚಿಸಿ ಮರೆಯಾದನು ಅಕಟ ॥

ಮಾಯೆ : ಸಖಿಯರೇನೋ ಅಲ್ಲಮನನ್ನು ಶಯ್ಯಾಗಾರಕ್ಕೆ ಕಳುಹಿಸಿದರು. ಆದರೆ ಇಲ್ಲಿ ಬಂದ ಆ ವಂಚಕ ಮಿಂಚಿನಂತೆ ಸುಳಿದ. ಗಾಳಿಯಂತೆ ಅಲೆದ. ಕೈಯ್ಯಿಂದ ತಡವಿದರೆ ನಿಲುಕಿ ಮೈಗೊಟ್ಟು ಆಲಿಂಗಿಸಲು ಹೋದಾಗ ಬಯಲಾಗಿಬಿಟ್ಟ. ಮಾತಾಡುವಾಗ ತುಟಿ ಕಾಣಿಸಿದ. ಚುಂಬಿಸಲು ಯತ್ನಿಸಿದಾಗ ಕಾಣೆಯಾದ. ಮಂಚದಲ್ಲಿ ಮಲಗಿದ. ಸುರತಕ್ಕೊದಗುವನೆಂದು ಭಾವಿಸಿ ಹತ್ತಿರ ಹೋದರೆ ಮಾಯವಾದ. ನನ್ನ ಅಂಗ ಸಂಗದ ಬಯಕೆ ಮಂಗಾಟವಾಗಿ ಹೋಯ್ತು. ಸುರತ ಕೂಟದ ಬಯಕೆ ಬೆಂಕಿಯಾಗಿತ್ತು. ಕಾಮದ ಹೋಮಕ್ಕೆ ತುಪ್ಪ ಸುರಿದು ಪೂರ್ಣಾಹುತಿ ಮಾಡದೆ ಮರೆಯಾಗಿದ್ದಾನೆ. ನಾನು ಈ ಉರಿಯಲ್ಲಿ ಬೇಯುತ್ತಿದ್ದೇನೆ. ಅಲ್ಲಮಾ, ಎಲ್ಲಿ ಹೋದೆ, ಬಾ.

ಮೋಹಿನಿ : (ಪ್ರವೇಶಿಸಿ) ಮಾಯೇ ಇದೇನು ಹುಡುಗಾಟ, ಹುಡುಕಾಟ. ಮಮತೆಯಿಂದ ನಿನ್ನನ್ನು ಬೆಳೆಸಿದ ನಮ್ಮ ನೆನಪು ನಿನಗಿಲ್ಲ. ಮನಬಂದಂತೆ ವರ್ತಿಸುತ್ತಿದ್ದೀಯೆ. ನಿನಗೆ ನಾನು ಹೇಳಿದ್ದೇನು– ನೀನು ಮಾಡಿದ್ದೇನು?

ರಾಗ : ಮೆಚ್‌ಗೌಳ ತಾಳ : ಅಷ್ಟ

ಹರನ ಪೂಜಿಸು ಎಂದು ಕಳುಹಿದೆ । ನೀನು ।
ಸ್ಮರನ ಧ್ಯಾನಿಸುತಾಟವಾಡಿದೆ ॥

ಕರ ತಂದು ಆ ಮದ್ದಳಿಗನನ್ನು । ಅಂತಃ ।
ಪುರದೊಳು ಸೇರಿಸಿರುವೆಯೇನು ॥

ಮೋಹಿನಿ : ಮದುವೆಯ ವಯಸ್ಸಿನ ಹುಡುಗಿ ಮಧುಕೇಶ್ವರನನ್ನು ಆರಾಧಿಸಿ ಶುಭಕಲ್ಯಾಣವನ್ನು ಕಾಣಲಿ ಎಂದು ನಾವು ಹಾರೈಸಿದ್ದೆವು. ದೇವರ ಮಂದಿರಕ್ಕೆ ಹೋದ ನೀನು ಆ ಮದ್ದಳಿಗನನ್ನು ಕರೆದುಕೊಂಡು ಬಂದೆ. ಭರತ ನಾಟ್ಯ ಕಲಿಯುತ್ತೇನೆ ಎಂದು ಸುರತ ಕೇಳಿಯಲ್ಲಿ ಆಸಕ್ತಳಾಗಿದ್ದೀಯೆ. ಮಾಯೆ, ನೀನು ರಾಜಕುಮಾರಿಯೋ– ಬೀದಿಯ ಬಜಾರಿಯೋ? ಹರನನ್ನು ಮರೆತು ಸ್ಮರನನ್ನು ಪೂಜಿಸುತ್ತಿದ್ದೀಯಾ– ಮಾನಗೆಟ್ಟವಳೇ. ಆ ಮೋಸಗಾರ ಮದ್ದಳಿಗ ಎಲ್ಲಿ ಹೋದ ಹೇಳು. ಯಾಕೆ ಮಾತಾಡುವದಿಲ್ಲ. ಮೂಕ ವೇದನೆ ನಿನಗೆ. ಛೀ ಕುಲಟೆ. ಎಲ್ಲಿ ಆ ಕುಂಟಲಗಿತ್ತಿಯರು. ಮದನಿಕೇ–

ರಾಗ : ಮೋಹನ **ತಾಳ** : ಏಕ

ಮದನಿಕೆ ನೀ ಜತೆಗಿರಲು । ಈ । ವಿಧವಾಯ್ತೇಕದ ಬೊಗುಳು ॥
ಚದುರೆ ಕಲಾವತಿ ಖುಲ್ಲೆ । ಅ । ಭ್ಯುದಯವ ಕೆಡಿಸಿದೆಯಲ್ಲೆ ॥

ಮೋಹಿನಿ : ಮದನಿಕೇ, ನೀನು ಒಳ್ಳೆಯವಳೆಂದು ಭಾವಿಸಿ ರಾಜಕುಮಾರಿಯನ್ನು ನಿನ್ನ ವಶಕ್ಕೆ ಕೊಟ್ಟೆ. ಈ ರೀತಿಯ ಅನಾಚಾರಕ್ಕೆ ನೀನೇ ಅವಕಾಶ ಒದಗಿಸಿ ಕೊಟ್ಟೆ. ಯಾಕೆ ಸುಮ್ಮನೇ ನಿಂತೆ. ಕಲಾವತೀ, ನೀನು ಚತುರೆ ಎಂದು ಮಾಯೆಯ ಪರಿಚರ್ಯೆಗೆ ಬಿಟ್ಟೆ. ನೀನು ಆ ಅಲ್ಲಮನನ್ನು ಇಲ್ಲಿ ಕರೆತಂದು ಬಿಟ್ಟೆ. ಮಹಾರಾಜರ ಮನೆತನದ ಮರ್ಯಾದೆಯನ್ನು ಬೀದಿಪಾಲು ಮಾಡಬೇಕೆಂದು ಸಂಚು ಮಾಡಿದ್ದೀರೇನೆ? ಗಯ್ಯಾಳಿಯರೇ? ಎಲ್ಲಿ ಹೋದ ಆ ಖುಲ್ಲ, ಬೊಗುಳಿ. ಹಾಲು ಕುಡಿದು ವಿಷಕಾರಿದ ನಾಗಿಣಿಯರೇ, ನಿಮ್ಮ ಮೈ ಚರ್ಮ ಸುಲಿಸಬೇಕು. ನಿಮ್ಮ ಮುಖಕ್ಕೆ ಬೆಂಕಿ ಬೀಳಲಿ. ನಿಮ್ಮನ್ನು ಕಾರಾಗೃಹಕ್ಕೆ ತಳ್ಳಿ ಕಠೋರ ಶಿಕ್ಷೆಗೆ ಒಳಪಡಿಸುತ್ತೇನೆ.

ಕಲಾವತಿ : ಅಮ್ಮಾ ಆಶ್ರಯವಿತ್ತ ಮರವನ್ನು ಕೊರೆದು ತಿರುಳಿಗೆ ಇಂಗನ್ನು ಸೇರಿಸುವ ದುಷ್ಟರು ನಾವಲ್ಲ. ದೇವೀ ಅರಮನೆಯಲ್ಲಿ ನಡೆದ ಈ ಅವಾಂತರಕ್ಕೆ ಹಿನ್ನೆಲೆ ಏನು ಎಂಬುದನ್ನು ತಿಳಿಸುತ್ತೇವೆ. ನಮ್ಮ ತಪ್ಪಿದ್ದರೆ ಶಿಕ್ಷೆಗೆ ಗುರಿಪಡಿಸು. ಸಹಿಸಿಕೋ ತಾಯಿ.

ರಾಗ : ಪುನ್ನಾಗ ತಾಳ : ಏಕ

ಮುಳಿಯ ಬೇಡಮ್ಮ । ಹದನವ । ತಿಳಿದು ನೋಡಮ್ಮ ॥ ಪ ॥
ಚಲುವ ಮಗಳು ನಿಮ್ಮ ಕುಲವ ಬೆಳಗುವವಳು ಎಂದು ತಿಳಿದು ।
ಗೆಲುವಿನಿಂದಿರಿಸಲ್ಕೆ ಬಗೆದು ಹಲವು ಯತ್ನ ಗೈದುದಹುದು ॥
ಬಲು ಸುಂದರ ಅಲ್ಲಮನಿವಳಿದಿರೊಳು । ಸುಳಿದನು ಮನ ಸೆಳೆದನು ಬಂ ।
ದುಳಿದನು ಪರಿ ತಿಳಿದನು ಇಂ । ತಳಲಿಸಿ ಬಳಲಿಸಿ ಮರೆಯಾಗಿರುವನು ॥

ಮದನಿಕೆ : ಮಧುಕೇಶ್ವರನ ಗುಡಿಗೆ ಪೂಜೆಗೆಂದು ಹೋದಾಗ ಮಾಯೆ ಮದ್ದಳಿಗ ಅಲ್ಲಮನನ್ನು ನೋಡಿದಳು. ಅವನ ಚೆಲುವನ್ನು ಕಂಡು ಮೋಹಿಸಿದಳು. ನಾವು ಅರಮನೆಗೆ ಕರೆತಂದು ಪರಿಚಯ ಮಾಡಿಸಿದ್ದು ಹೌದು.

ಮೋಹಿನಿ : ನನಗೇಕೆ ವಿಷಯ ತಿಳಿಸಲಿಲ್ಲ.

ಕಲಾವತಿ : ತಿಳಿಸಲು ಮಾಯೆ ಬಿಡಲಿಲ್ಲ. ನಾವು ಆಪ್ತರಾಗಿ ಸಹಕರಿಸುವದು ಅನಿವಾರ್ಯ ಆಯಿತು. ಭರತನಾಟ್ಯದ ಅಭ್ಯಾಸ ಆರಂಭವಾಯಿತು. ಇತ್ತೀಚೆ ಅವಳು ಮನೋಜನಿಗೆ ಮನಸ್ಸು ಕೊಟ್ಟು ಮನೋರೋಗಕ್ಕೆ ತುತ್ತಾದದ್ದನ್ನು ಕಂಡು ಅಲ್ಲಮನನ್ನು ಅವಳ ಅಂತಃಪುರಕ್ಕೆ ಕಳುಹಿಸಬೇಕಾಯ್ತು.

ಮೋಹಿನಿ : ಆ ಹಾದಿಹೋಕ ಬೀದಿ ಭಿಕಾರಿಯ ಮೇಲೆ ಮನಸ್ಸು ಮಾಡಬೇಡ ಎಂದು ನೀವು ಬುದ್ಧಿ ಹೇಳಬೇಕಿತ್ತು.

ಮದನಿಕೆ : ಅಮ್ಮಾ. ಆ ಅಲ್ಲಮನನ್ನು ನೀವು ಒಮ್ಮೆ ನೋಡಿದರೆ ಈ ಮಾತು ಹೇಳುತ್ತಿರಲಿಲ್ಲ. ಆತ ರೂಪದಲ್ಲಿ ಸುಂದರ, ಬುದ್ಧಿಯಲ್ಲಿ ಚತುರ. ಆ ತೇಜಸ್ಸು ಓಜಸ್ಸು ರಾಜಕಳೆ ನೋಡಿ ಮಾಯಾಮೋಹನನಾಗಿ ಈ ರಾಜ್ಯದ ಉತ್ತರಾಧಿಕಾರಿಯಾಗುತ್ತಾನೆ ಎಂದು ಭಾವಿಸಿದ್ದೆವು.

ಕಲಾವತಿ : ಈಗ ಅವನು ಇಲ್ಲಿಂದ ಕಣ್ಮರೆಯಾಗಿದ್ದಾನೆ. ಹಾಗಾಗಿ ಸಮಸ್ಯೆ.

ಮೋಹಿನಿ : ನಾನೇನೋ ಹೆಣ್ಣಾಗಿ ನಿಮ್ಮ ಮಾತನ್ನು ಸಮ್ಮತಿಸಿದ್ದೇನೆ. ಮಹಾರಾಜರ ಕಿವಿಗೆ ಈ ಸುದ್ದಿ ಬಿದ್ದರೆ ನಿಮ್ಮನ್ನು ಸುಮ್ಮನೆ ಬಿಡುವದಿಲ್ಲ. ನೀವೀಗ ಹಾವು ಏಣೀ ಆಟ ಆಡಿದ್ದೀರಿ. ಮುಂದೇನು ಮಾಡುತ್ತೀರಿ. ಮಾಯೆ ಅಲ್ಲಮನಿಗಾಗಿ ಕನವರಿಸುತ್ತಿದ್ದಾಳೆ. ಆತ ಇಲ್ಲಿಂದ ತಪ್ಪಿಸಿಕೊಂಡು ಹೋಗಿದ್ದಾನೆ. ಈ ವ್ಯವಹಾರ ಬಗೆ ಹರಿಯುವದು ಹೇಗೆ?

ಮದನಿಕೆ : ಆ ಅಲ್ಲಮನ ಪರಿಚಯ ನಮಗಿದೆ. ಆಕಾಶ–ಪಾತಾಳ ಒಂದು

ಮಾಡಿಯಾದರೂ ಅವನನ್ನು ಹುಡುಕದೆ ಬಿಡುವದಿಲ್ಲ. ಅವನಿಗೆ ಸರಿಯಾಗಿ ಮದುವೆ ಮಾಡಲೇಬೇಕು.

ಮೋಹಿನಿ : ಮುಳ್ಳಿನ ಮೇಲೆ ಸೆರಗು ಬಿದ್ದಹಾಗೆ ಆಗಿದೆ. ಮಾಯೆಯೇ ತಪ್ಪಿ ಬಿದ್ದಿದ್ದಾಳೆ. ಈ ಕೋಲಾಹಲ ಊರಲ್ಲಿ ಗದ್ದಲವಾಗುವಂತೆ ಮಾಡಬಾರದು. ನಿಧಾನವಾಗಿ ಯೋಚಿಸಿ ಕಾರ್ಯಮಾಡಿ.

ಕಲಾವತಿ : ನಾವು ಇದೇ ಧೋರಣೆಯಿಂದಲೇ ವ್ಯವಹರಿಸಿದೆವು. ಬಿಸಿ ತುಪ್ಪ ನುಂಗಿದರೆ ಎದೆ ಸುಡುತ್ತದೆ; ಉಗುಳಿದರೆ ತುಪ್ಪ ಕೆಡುತ್ತದೆ. ನಾವು ಅಲ್ಲಮನನ್ನು ಹುಡುಕುವುದಕ್ಕೆ ಹೊರಡುತ್ತೇವೆ. ನೀವು ಈ ವಿಚಾರವನ್ನು ಯಾರಿಗೂ ಹೇಳಬೇಡಿ. ಏಳೇ ಮದನಿಕೇ. (ಪ್ರಯಾಣ).

ದೃಶ್ಯ – ೬

(ಅಂತಃಪುರಕ್ಕೆ ಪ್ರವೇಶಿಸಿದ ವಿಮಲೆಯನ್ನು ಕಂಡು–ಮಾಯೆ)

ರಾಗ : ಘಂಟಾರವ **ತಾಳ** : ಅಷ್ಟ

ಯಾರು ನೀನೆಂತಿಲ್ಲಿ ಸೆರಿದೆ ಬಂದಿರ್ಪ ।
ಕಾರಣಂಗಳದೇನು ದಿವ್ಯಾಕಾರದಲ್ಲಿ ನೀ ಶೋಭಿಪೆ ॥

ಮಾಯೆ : ಬೆಳಕಿನಂತೆ ಸುಳಿದು ಒಳಗೆ ಪ್ರವೇಶಿಸಿದ್ದೀಯೆ. ಅರಮನೆಯ ಪರಿಚಾರಿಕೆಯರ ಬಳಗದವಳು ನೀನಲ್ಲ. ನಿನ್ನ ಆಕಾರ ನೋಡಿದರೆ ನೀನು ದೇವತೆ ಎಂದು ಭಾಸವಾಗುತ್ತಿದೆ. ಮಾನವ ಸಹಜ ಭಯ–ಸಂಕೋಚಗಳಿಗೆ ಆಸ್ಪದಕೊಡದೆ ನಿಚ್ಚಳ ಭಾವದಿಂದ ನಿಂತಿರುವ ನೀನು ಯಾರು? ಇಲ್ಲಿಗೇಕೆ ಬಂದೆ? ನನ್ನಿಂದೇನಾಗಬೇಕು?

ವಿಮಲೆ : ನನ್ನ ಪರಿಚಯ ನಿನಗಾಗಲಿಲ್ಲ. ನಿನ್ನ ಪರಿಚಯವಾದರೂ ನಿನಗಿದೆಯೇನೆ ಮಾಯೆ.

ರಾಗ : ಮೋಹನ **ತಾಳ** : ತ್ರಿವುಡೆ

ಮಾಯೆ ನೀ ಪಾರ್ವತಿಯ ತಾಮಸ ।
ಛಾಯೆ ಧರೆಗಿಳಿದಿಂತು ಮೂಲದ ।
ಧ್ಯೇಯವನು ಮರೆತಳುವೆಯೇಕೆ ಅ । ಪಾಯಕಳುಕಿ ॥

ವಿಮಲೆ : ನಾನು ಪಾರ್ವತಿಯ ವಿನಮ್ರ ಸೇವಕಿ ವಿಮಲೆ. ನಿನ್ನನ್ನು ಇಲ್ಲಿಗೆ

ಕಳುಹಿಸಿದ ಆ ಮಹಾದೇವಿ ನಿನಗೇನಾಗಿದೆ ಎಂದು ನೋಡಿಬರಲು ನನ್ನನ್ನು ಕಳುಹಿಸಿದ್ದಾಳೆ. ಅಲ್ಲಮನ ಗುರುತ್ವವನ್ನು ಲಘುತ್ವವಾಗಿಸುವ ಬಗ್ಗೆ ಧರೆಗಿಳಿದ ನೀನು, ಅಂತಃಪುರದಲ್ಲಿ ಮಲಗಿ ಅಳುತ್ತಿದ್ದೀಯೆ. ಏನೇ ಇದು, ಅರಸನ ಮಗಳಾಗಿ ಅಲಂಕಾರ ಆಲಸ್ಯ ಕಾಣಿಸುವದು ತಪ್ಪಲ್ಲ. ಆದರೆ ದೇವಿಯ ದೂತೆಯಾಗಿ ಕರ್ತವ್ಯ ಮರೆತಿದ್ದೀಯೆ. ಆ ಬಗ್ಗೆ ನಿನ್ನನ್ನು ಎಚ್ಚರಿಸಲು ಬಂದಿದ್ದೇನೆ. ಎಚ್ಚರ ತಂಗೀ.

ಮಾಯೆ : ಕೈಲಾಸದಿಂದ ಇಳಿದವಳೋ ನೀನು. ನಾನು ವಿರಹದಿಂದ ತಪಿಸುತ್ತಿದ್ದೇನೆ.

ವಿಮಲೆ : ಇದು ವಿನೋದಕ್ಕೆ ವೇಳೆಯಲ್ಲ. ಕಾಲಹರಣ ಮಾಡದೇ ಆ ಅಲ್ಲಮ ಪ್ರಭುವನ್ನು ಹುಡುಕು.

ಮಾಯೆ : ನಾನೂ ಅಲ್ಲಮನ ಬಗ್ಗೆ ಯೋಚಿಸುತ್ತಿದ್ದೇನೆ. ನೀನು ಪ್ರಭು ಎಂದು ಹೇಳಿದೆ. ಅವ ಯಾರು?

ವಿಮಲೆ : ನಿನಗೆ ಜಗದ್ಗುರುವಾದ ಅಲ್ಲಮನ ಮೂಲವೇ ಗೊತ್ತಿಲ್ಲ. ತಿಳಿಸುತ್ತೇನೆ ಕೇಳು.

ರಾಗ : ಬೇಗಡೆ **ತಾಳ : ಅಷ್ಟ**

ಬಳ್ಳಿಗಾವಿಯ ಶೈವ ನಿರಹಂಕಾರ ಎಂಬವನು । ಆತನ ।
ವಲ್ಲಭೆಯು ಸುಜ್ಞಾನಿ ತಪದೊಳು ಪಡೆಯೆ ಬಾಲನನು । ಶೈಶವ ।
ದಲ್ಲಿ ಬಹುಲೀಲೆಗಳ ಕಾಣಿಸಿ ಬೆಳೆದನಲ್ಲಮನು । ತತ್ವವ ।
ನೆಲ್ಲ ಬೋಧಿಸಿ ತಂದೆತಾಯ್ಗಳ ತೃಪ್ತಿಬಡಿಸಿದನು । ಜಂಗಮ ।
ದಲ್ಲಿ ಶೈವಾಗಮದ ಬಗೆಯನು । ಸೊಲ್ಲಿನೊಳು ಸೂಚಿಸುತ ಸಾಧನೆ ।
ಯಲ್ಲಿ ಶೂನ್ಯವ ಧ್ಯಾನಿಸುತ್ತ । ಲ್ಲಲ್ಲಿ ತಿರುಗುವ ಮಹಿಮನಾತನು ॥

ವಿಮಲೆ : ಸುಂದರ ಊರೂ ಶಿಲ್ಪಕಲೆಯ ಬೀಡೂ ಆದ ಬಳ್ಳಿಗಾವಿಯಲ್ಲಿ ನಿರಹಂಕಾರ ಸುಜ್ಞಾನಿಯರೆಂಬ ದಂಪತಿಗಳು ಶೈವಾಚಾರ ಸಂಪನ್ನರಾಗಿ ಬಾಳುವೆ ನಡೆಸುತ್ತಿದ್ದರು. ಬಹುಕಾಲ ಸಂದರೂ ಮಕ್ಕಳಾಗಲಿಲ್ಲ. ಈಶ್ವರೇಚ್ಛೆಯೆಂದು ಭಾವಿಸಿ ಸರ್ವೇಶ್ವರನನ್ನು ಪ್ರಾರ್ಥಿಸಿ ಏಕೈಕ ಪುತ್ರನನ್ನು ಪಡೆದರು. ಅಲ್ಲವಾದದ್ದನ್ನು ಅಲ್ಲಗಳೆದು ಅಹುದಾದದ್ದನ್ನು ಗುರುತಿಸಲಿ ಎಂದು ಅಲ್ಲಮನೆಂದು ನಾಮಕರಣ ಮಾಡಿದರು. ಅಲೌಕಿಕವಾದ ಆ ಶಿಶು ಹತ್ತಿಗಿಂತ ಹಗುರವಾಗಿ, ಕಲ್ಲಿಗಿಂತ ಭಾರವಾಗಿ ಬಾಲಲೀಲೆಯನ್ನು ಪ್ರಕಟಿಸಿ ಬೆಳೆದು, ತಂದೆತಾಯಿಯರನ್ನು ತತ್ವೋಪದೇಶದ ಮೂಲಕ ಸಮಾಧಾನ ಪಡಿಸಿ, ಶಿವತತ್ವವನ್ನು ಸಾಮಾನ್ಯರಿಗೂ ಮನವರಿಕೆ

ಮಾಡಿಕೊಡುವ ಸಲುವಾಗಿ ನಿರ್ಧರಿಸಿತು. ಇಂದ್ರಿಯವನ್ನು ನಿಗ್ರಹಿಸಿ ಅಲ್ಲಮಪ್ರಭುವಾಗಿ ಶಿವೋಹಂ ಧ್ಯಾನದಲ್ಲಿ ಶಿವನೇ ಆಗಿ ಸಂಚರಿಸುತ್ತಿರುವ ಆ ಅಲ್ಲಮ ಲಿಂಗವನ್ನು ಅರ್ಥ ಮಾಡಿಕೊಳ್ಳುವದು ಕಷ್ಟ. ಎಲ್ಲಿರುತ್ತಾನೆ, ಹೇಗಿರುತ್ತಾನೆ ಎಂಬುದನ್ನು ಅಳೆದು ತಿಳಿದು ನಿನ್ನ ಪಂಥವನ್ನು ಗೆಲ್ಲಬೇಕು. ಏಳು, ಪಾರ್ವತಿಯ ಸೇವೆಗೆ ಹೊರಡು.

ಮಾಯೆ : ಓಹೋ, ಈಗ ಗೊತ್ತಾಯ್ತು. ನಾನು ಮೈಮರೆತಿದ್ದೆ. ಅವನೇ ಇವನು, ಇವನೇ ಅವನು. ಕಣ್ಣುಕಟ್ಟಿನ ಆಟ ಆಡಿದ್ದಾನೆ. ಮದ್ದಳಿಗನಾಗಿ ಬಂದು ನನ್ನ ಮನಸ್ಸನ್ನು ಸೆಳೆದಿದ್ದಾನೆ. ನನ್ನ ಅಂತರಂಗದಲ್ಲಿ ಕೋಲಾಹಲ ಎಬ್ಬಿಸಿದ್ದಾನೆ. ಮಹಾ ಮೋಸಗಾರ ವಂಚಕ ಆ ಅಲ್ಲಮ.

ವಿಮಲೆ : ನೀನು ಕಾಮುಕಿಯಂತೆ ವರ್ತಿಸಿ ಆ ಅಲ್ಲಮನನ್ನು ದೂರುತ್ತಿದ್ದೀಯೆ. ಭಕ್ತಿಯಿಂದ ಆರಾಧಿಸಿ ಸ್ವಾಧೀನಪಡಿಸಿಕೊಳ್ಳಬೇಕಿತ್ತು. ಶುದ್ಧಹೃದಯದಿಂದ ಶಿವಾಚಾರದ ಮಹತ್ವವನ್ನು ಗುರುತಿಸದೆ ಮಹಾತ್ಮರನ್ನೂ ಪೂಜೆಯನ್ನೂ ಹಳಿದು ಹಾಳಾಗಬೇಡ. ಈವರೆಗೆ ಆದದ್ದಾಯಿತು. ಕೀಳು ಕಾಮನೆಯನ್ನು ಬಿಟ್ಟು ಪರಿಶುದ್ಧಳಾಗಿ ಪ್ರಯತ್ನಿಸಿ ಅಲ್ಲಮನನ್ನು ಗೆಲ್ಲಲು ಸಜ್ಜಾಗು.

ಮಾಯೆ : ವಿಮಲೇ, ನೀನು ತಿಳಿಸಿದ ಬಗೆಯೇ ನನಗೆ ಗೊತ್ತಿಲ್ಲ. ಮಧುಕೇಶ್ವರನ ಪೂಜೆಯನ್ನೂ ಮನೋರಂಜನೆ ಎಂದೇ ನಾನು ತಿಳಿದಿದ್ದೇನೆ. ಮನಃಶುದ್ಧಿಯ ಬಗ್ಗೆ ನಾನು ಎಂದೂ ಆಲೋಚಿಸಲಿಲ್ಲ. ನನ್ನ ಸ್ಮರಣೆಯಲ್ಲಿ ಸ್ಮರನೇ ತುಂಬಿಕೊಂಡಿದ್ದಾನೆ. ಆ ಅಲ್ಲಮನನ್ನು ನನ್ನ ದಾರಿಯಲ್ಲಿಯೇ ನಾನು ಗೆಲ್ಲುತ್ತೇನೆ. ಬಲ್ಲವಳಾದ ನೀನು ಇನ್ನೊಮ್ಮೆ ಅವನನ್ನು ಕಾಣಿಸು. ನನ್ನ ನಾಟ್ಯಕ್ಕೆ ಮದ್ದಳೆ ನುಡಿಸುವಂತೆ ಹೇಳು. ಅಣಿಯಾಗಿ ಬರಲಿ. ನನ್ನ ಚಳಕದ ಮೋಡಿಗೆ ಸಿಲುಕಿ ಬಳಲುವಂತೆ ಮಾಡುತ್ತೇನೆ. ಒಲವನ್ನು ಬಿಟ್ಟೆ, ಛಲವನ್ನು ತೊಟ್ಟೆ.

ವಿಮಲೆ : ಮಧುಕೇಶ್ವರ ದೇವಾಲಯದ ಮುಖಮಂಟಪದಲ್ಲಿ ನರ್ತಿಸಲು ಸಿದ್ಧಳಾಗಿ ಬಾ.

ಮಾಯೆ : ನೀನು ಮದ್ದಳಿಗ ಅಲ್ಲಮನನ್ನು ಕರೆದುಕೊಂಡು ಬಾ. ಸೋಲು–ಗೆಲುವುಗಳನ್ನು ನೀನೇ ನಿರ್ಣಯಿಸಬಹುದು. (ಪ್ರಯಾಣ)

(ಅಲ್ಲಮ ಮತ್ತು ವಿಮಲೆ)

ವಿಮಲೆ : ಮಮಕಾರರಾಜನ ಮಗಳನ್ನು ಮರುಳುಗೊಳಿಸಿದ ಮದ್ದಳಿಗ ನೀನೋ?

ಈಗ ಅವಳು ನಿನಗಾಗಿ ಪರಿತಪಿಸಿ ಕಾದು ನಿಂತಿದ್ದಾಳೆ. ಅವಳನ್ನು ಸಂತೈಸು.

ಅಲ್ಲಮ : ಛೀ ! ಅವಳು ಕಾಮನ ಕೈಗೊಂಬೆ. ಆ ಹುಚ್ಚಿಯ ಮುಖ ನೋಡಲು ನನಗೆ ಇಷ್ಟವಿಲ್ಲ.

ವಿಮಲೆ : ಅವಳ ಅಂತಃಪುರಕ್ಕೋ ಅರಮನೆಗೋ ಬರುವದು ಬೇಡ. ಮಧುಕೇಶ್ವರ ಗುಡಿಗೆ ಬಾ.

ಅಲ್ಲಮ : ದೇವರ ದರ್ಶನಕ್ಕೆ ಯಾರೂ ಯಾವ ವೇಳೆಯಲ್ಲೂ ಹೋಗಬಹುದು. ಆಮಂತ್ರಣ ಯಾಕೆ?

ವಿಮಲೆ : ಇಂದಿನ ವಿಶೇಷಪೂಜೆಯಲ್ಲಿ ಇನ್ನೂ ಒಂದು ವಿಶೇಷ.

ಅಲ್ಲಮ : ಏನಂತಹ ವಿಶೇಷ?

ವಿಮಲೆ : ಮಹಾಮಂಗಳಾರತಿಗಿಂತ ಮೊದಲು ನರ್ತನ ಸೇವೆ.

ರಾಗ : ಕೇದಾರಗೌಳ **ತಾಳ :** ಝಂಪೆ

ನಲಿದು ನರ್ತನಗೈವಳು । ಮಾಯೇ ನೀ ।
ಸಲಿಸು ಸೇವೆಯ ಜತೆಯೊಳು ॥
ಕಲೆಗೆ ಕಾಣಿಕೆಯ ನೀಡಿ ।
ಪ್ರೇಕ್ಷಕರ । ನೊಲಿಸಿ ನೀವೊಂದುಗೂಡಿ ॥

ವಿಮಲೆ : ಇಂದಿನ ಪೂಜೆಯಲ್ಲಿ ಮಾಯೆ ನಾಟ್ಯವಾಡುತ್ತಾಳೆ. ನೀನು ಮದ್ದಳೆ ನುಡಿಸು, ನೀವಿಬ್ಬರೂ ಸಾಧನೆಯನ್ನು ಕಾಣಿಕೆಯಾಗಿ ನೀಡಿರಿ. ಪ್ರೇಕ್ಷಕರಿಗೆ ಅದು ಸಂತರ್ಪಣೆಯಾಗಲಿ.

ಅಲ್ಲಮ : ಆ ಮಾಯೆಯ ನರ್ತನಕ್ಕೆ ನಾನು ಮದ್ದಳೆ ನುಡಿಸುವದಿಲ್ಲ. ಅವಳಿಗೆ ಸಮರ್ಪಣಾಭಾವ ಎಂದರೇನು ಎಂಬುದೇ ಗೊತ್ತಿಲ್ಲ.

ವಿಮಲೆ : ಅವಳ ದೋಷವನ್ನೇ ಮುಂದೊಡ್ಡಿ ನೀನು ನುಣುಚಿಕೊಳ್ಳಲು ಯತ್ನಿಸುತ್ತಿದ್ದೀಯೆ. ಬಹುಶಃ ನಿನಗವಳನ್ನು ಎದುರಿಸಲು ಹೆದರಿಕೆಯಾಗಿರಬೇಕು.

ಅಲ್ಲಮ : ಹೆದರಿಕೆಯಲ್ಲ ಹೇಸಿಕೆ. ಸಂಪರ್ಕಕ್ಕೇ ಸಲ್ಲದ ದೋಷ ಅವಳಲ್ಲಿದೆ. ಹಾಗಾಗಿ ಅವಳ ಬಗ್ಗೆ ಜಿಗುಪ್ಸೆ.

ವಿಮಲೆ : ಅವಳ ನರ್ತನದಲ್ಲಿ ದೋಷ ಕಂಡರೆ ನೀನು ಪ್ರತಿಭಟಿಸು. ಆ ಸೇವೆಯಲ್ಲಿ ಭಾಗವಹಿಸುವದಿಲ್ಲ ಎಂದು ಜಾರಿಕೊಳ್ಳುವದು ಸರಿಯಲ್ಲ.

ಅಲ್ಲಮ : ನಿನ್ನ ಹೇಳಿಕೆಯನ್ನು ಮನ್ನಿಸುತ್ತೇನೆ. ಸಾತ್ವಿಕ ಭಾವದಿಂದ ನಟಿಸದೆ ತಾಮಸೀ ಕಳೆಯನ್ನು ಪ್ರದರ್ಶಿಸಿದರೆ ಮದ್ದಳೆಯನ್ನು ಒಗೆದು ಹೊರಟು ಹೋಗುತ್ತೇನೆ.

ವಿಮಲೆ : ಅಸಂಬದ್ಧ ಸಂಗತಿಗಳಿಗೆ ನೀನು ಹೊಂದಿಕೊಳ್ಳುವದು ಬೇಡ. ನಿನ್ನ ಮತ್ತು ಮಾಯೆಯ ಅಂತರಂಗದ ಬಗೆ ಬೇರೆ. ನಾಟ್ಯರಂಗದ ತಾಳ–ಮೇಳಕ್ಕೆ ಅದು ಅಡ್ಡಿಯಾಗಲಿಕ್ಕಿಲ್ಲ. ಏಳು ಹೋಗೋಣ. (ಪ್ರಯಾಣ)

(ವಿಮಲೆ ಪ್ರೇಕ್ಷಕಳಾಗಿ ಅಲ್ಲಮ ಮದ್ದಳಿಗನಾಗಿ ಮಾಯೆಯ ನಾಟ್ಯ)

ರಾಗ : ಬಿಲಹರಿ **ತಾಳ :** ರೂಪಕ

ಮಾಯೆ ನರ್ತಿಸಿದಳು ಮಣಿದು ನಮನ ಸಲ್ಲಿಸಿ ।
ತೋಂತರಿಕಿಟ ದಿಕುತದಿಮಿತ ತಾಳ ಮೇಳದಿ ।
ಚರಣ ಚಾರಣದಲಿ ಕರಣತಂತ್ರ ಕಾಣಿಸಿ ।
ತರಕಡ್‌ಕಡ್ತಕದಿನ್ನ ದಿಂಕಿಟದೀಕಡ್‌ಕಡ್ತ್ನ ಗತಿಯ ಸೃಷ್ಟಿಸಿ ।
ಶಿರವಲುಗಿಸಿ ಕಟಿಬಳುಕಿಸಿ ಹಸ್ತವ ತಿರುಹಿ ।
ತತ್ತರಿಕಡ್ತ್ನದಿಂ ದಿದ್ದಿಂತದ್ದಿಂ ತತ್ತೋಂಗಿಣದಿ ॥
ವಿವಿಧವಿಭಾನುಭಾವ ಸಮನ್ವಯದಲಿ ।
ದಿದ್ದಿನದಿತಾಂ ತಾಂತ ತೋಂತ ದೀಕಡ್‌ದಿಲಯದಲಿ ॥

(ನೃತ್ಯ ಮಾಡುತ್ತಾ ಕಾಮಲತೆಯಂತೆ ಬಳುಕಿ ಸುಳಿದು ಅಲ್ಲಮನನ್ನು ಆಲಂಗಿಸುತ್ತಾಳೆ.)

ರಾಗ : ಸೌರಾಷ್ಟ್ರ **ತಾಳ :** ತ್ರಿವುಡೆ

ಕ್ಷುದ್ರಕಾಮುಕಿ ಎನುತಲಲ್ಲಮ ।
ಮದ್ದಳೆಯ ನೆಗೆದೊಗೆದು ರಭಸದಿ ।
ಎದ್ದು ನಡೆದನು ಅಡವಿಯೆಡೆ ತಾ । ನೊದ್ದು ನೆಲವ ॥ ೧ ॥
ನೋಡಿ ಬೆಂಬತ್ತಿದಳು ಮಾಯೆಯು ।
ಕೂಡಿ ಜನ ಹೋ ಎನ್ನುತಿರೆ ತಾ ।
ನೋಡಿದಳು ಅಲ್ಲಮನನರಸುತ । ಕಾಡಿನೊಳಗೆ ॥ ೨ ॥
ಜವದೊಳಲ್ಲಮ ಬಯಲ ಸೇರಲು ।
ಹವಣವರಿತಾ ಮದನಿಕಾದ್ಯರು ।
ತವಕದಲಿ ತಡೆದವನೊಳೆಂದರು । ವಿವಶರಾಗಿ ॥ ೩ ॥

ದೃಶ್ಯ – ೭

ರಾಗ : ನವರೋಜ **ತಾಳ :** ಏಕ

ಅಲ್ಲಮ ನಿಲ್ಲು ನಿಲ್ಲು । ನಿನ್ನಾಟವವು । ಗುಲ್ಲಾದುದೆಲ್ಲೆಲ್ಲೆಲ್ಲು ॥
ಚಲ್ಲಾಟದಲಿ ಮಾಯೆಯ । ವಂಚಿಸಿ ಓಡಿ । ಇಲ್ಲಿಗೆ ಬಂದಿರ್ಪೆಯ ॥

ಮದನಿಕೆ : ದೇವಸ್ಥಾನದ ಬಾಗಿಲಿನಲ್ಲಿ ಕಾಣಿಸಿಕೊಂಡೆ. ಒಳ್ಳೆಯ ಮಾತಾಡಿದೆ. ಮದ್ದಳೆ ವಾದನದಲ್ಲಿ ನಿಪುಣ ಎಂದು ಮಾಯೆಗೆ ಪರಿಚಯ ಮಾಡಿಸಿದರೆ ಹೇಳದೆ ಕೇಳದೇ ಓಡಿ ಬಂದು ನಮ್ಮ ಮರ್ಯಾದೆ ಕಳೆದೆ.

ಕಲಾವತಿ : ಮಾಯೆಯ ಮನಸ್ಸನ್ನು ಸೆಳೆದೆ. ಬಹುಶಃ ವಶೀಕರಣ ಮದ್ದುಮಾಟ ನಿನಗೆ ಗೊತ್ತಿರಬೇಕು. ಮಾಂತ್ರಿಕನೋ ಹೇಗೆ? ಆ ರಾಜಕುಮಾರಿ ನಿನ್ನ ಬಗ್ಗೆ ಅನ್ನ ನೀರು ಬಿಡಬೇಕಿದ್ರೆ ನೀನೇ ಏನೋ ಮಾಡಿದ್ದೀಯೆ. ಮಹಾರಾಣಿಯವರಿಗೆ ವಿಷಯ ಗೊತ್ತಾಗಿದೆ. ಒಳ್ಳೇ ಮಾತಿನಲ್ಲಿ ನಮ್ಮ ಜತೆಗೆ ಬಾ. ಇಲ್ಲದಿದ್ದರೆ ಕಟ್ಟಿ ಎಳೆದುಕೊಂಡು ಹೋಗಿ ಕಾರಾಗೃಹಕ್ಕೆ ದೂಡುತ್ತಾರೆ.

ಅಲ್ಲಮ : ನೀವು ಮಾಯೆಯ ಸಖಿಯರು. ಅಂದು ಹಾಗೆ ಇಂದು ಹೀಗೆ ಎಂದೆಲ್ಲಾ ಹೇಳುತ್ತಾ ಇದ್ದೀರಿ. ನಾನು ಯಾವಾಗಲೂ ಇರುವದು ಹೀಗೇ.

ರಾಗ : ಸಾವೇರಿ **ತಾಳ :** ಕೋರೆ

ಎನಗಾವ ಬಯಕೆಯಿಲ್ಲ । ನೀವಾಗಿ ಅರ । ಮನೆಗೆ ಕರೆದೊಯ್ದಿರಲ್ಲ ।
ಮನವಿತ್ತು ಮಾಯೆ ಕಾಮಗೆ । ಮಿಥ್ಯಾರೋಪ । ವನು
ಮಾಳ್ಪಳಲ್ಲ ಹೀಗೆ ॥

ಅಲ್ಲಮ : ನನಗೆ ಉಳಿಯಲು ನೆಲೆ ಇಲ್ಲ. ಉಣ್ಣುವುದಕ್ಕೆ ಗತಿ ಇಲ್ಲ. ಅನುಗ್ರಹ ತೋರಿ ಅರಮನೆಯಲ್ಲಿ ಆಶ್ರಯ ಕೊಡಿಸಿ ಎಂದು ನಾನು ನಿಮ್ಮಲ್ಲಿ ಬೇಡಲಿಲ್ಲ. ನೀವಾಗಿ ಒತ್ತಾಯಿಸಿ ಕರೆದುಕೊಂಡು ಹೋಗಿದ್ದೀರಿ. ಆ ರಾಜಕುಮಾರಿ ಭರತ ನಾಟ್ಯಕ್ಕೆ ಪಕ್ಕವಾದ್ಯ ನುಡಿಸು ಅಂತ ಗೋಗರೆದದ್ದರಿಂದ ನಾನು ಅಲ್ಲಿ ಉಳಿದೆ. ನೀವೇ ಬಂದು ರಾಜಕುಮಾರಿಗೆ ಸರಿ ಇಲ್ಲ. ಸಂತೈಸು ಎಂದು ಅಂತಃಪುರಕ್ಕೆ ದೂಡಿದಿರಿ. ಆಗ ಗೊತ್ತಾಯ್ತು ಅವಳಿಗೆ ಕಾಮಪಿತ್ತ ನೆತ್ತಿಗೇರಿದೆ ಅಂತ. ಅವಳ

ರೋಗ ನನಗೂ ಅಂಟೀತು ಎಂದು ಭಾವಿಸಿ ಅಲ್ಲಿಂದ ಹೊರಟೆ. ಮನಸ್ಸಿನಲ್ಲಿ ಇರುವದೇ ಒಂದು, ಕಾಣಿಸಿಕೊಳ್ಳುವ ಕ್ರಮ ಇನ್ನೊಂದು. ನಿಮ್ಮ ವ್ಯವಹಾರದಲ್ಲಿ ಅಂತರಂಗ ಶುದ್ಧಿಯೂ ಇಲ್ಲ ಬಹಿರಂಗ ಶುದ್ಧಿಯೂ ಇಲ್ಲ. ಈಗ ಇಲ್ಲಿ ಬಂದು ಸಿಕ್ಕಂತೆ ಆರೋಪಿಸ್ತಾ ಇದ್ದೀರಿ. ಮಾಯೆ ಏನೂ ಹೇಳಿಯಾಳು, ಅವಳಿಗೆ ಮದವಿದೆ. ಮದನನ ಕಾಟವೂ ಇದೆ. ಪಿತ್ತ ಕಾಮಾಲೆ ರೋಗ ಆದವರಿಗೆ ಸುತ್ತೆಲ್ಲಾ ಅರಿಷಿಣ ಬಣ್ಣವೇ ಕಾಣುತ್ತದೆಯಂತೆ. ಭ್ರಾಂತಿಯಿಂದ ಬುದ್ಧಿಗೆಟ್ಟವರು ಏನೂ ಹೇಳ್ತಾರೆ ಏನೂ ಮಾಡ್ತಾರೆ.

ಮಾಯೆ : (ಪ್ರವೇಶಿಸಿ) ದ್ರೋಹೀ ನೀನಿಲ್ಲಿ ಇದ್ದೀಯಾ, ನೀನು ಅಲ್ಲಮನಲ್ಲ ಅಧಮ–

ರಾಗ : ಮೋಹನ **ತಾಳ** : ಆದಿ

ಬಲು ಮೋಸಗಾರ ನೀನು । ಮೋಹದ ಬಲೆ । ಯೊಳು ಸಿಲುಕಿಸಿ ಎನ್ನನು ॥
ಚಳಕದಿ ಕಾಡಿ ಮೋಡಿ ಮಾಡಿ ದೂಡಿ ಪೀಡಿಸಿ । ತುಳಿದೋಡಿ ಬಂದವನು ॥

ಮಾಯೆ : ಅಚ್ಚುಕಟ್ಟಾದ ಆಕಾರವಿದೆ. ಸುಂದರವಾದ ರೂಪವಿದೆ. ಆಕರ್ಷಕ ವಿದ್ಯೆ ಗೊತ್ತಿದೆ. ಯೌವನವೂ ಇದೆ. ವ್ಯವಹಾರ ಚಾತುರ್ಯವೂ ಇದೆ, ಲೋಕವನ್ನೇ ಮರುಳು ಮಾಡುವ ಗತ್ತುಗಾರ ನೀನು ಅಂತ ಗೊತ್ತಾಯ್ತು. ನನ್ನ ಕಣ್ಣೆದುರಿಗೆ ಬಂದೆ. ನನ್ನ ಹೃದಯವನ್ನು ಸೆಳೆದೆ. ನಾನು ನಿನ್ನನ್ನು ಗೌರವಿಸಿದೆ. ಆದರದ ಅತಿಥಿ ಸತ್ಕಾರ ನೀಡಿದೆ. ಅಂತಃಪುರಕ್ಕೂ ಕರೆಸಿಕೊಂಡೆ. ಆದರೆ ನೀನು ನನ್ನ ಭಾವನೆಯನ್ನೇ ತುಳಿದು ಹೊರಟು ಬಂದೆ. ಚೆಲುವಿನ ಬಲೆಯನ್ನೊಡ್ಡಿ ನನ್ನಂತಹ ಹರಿಣಿಯರನ್ನು ಹಿಡಿದು ಹಿಂಸಿಸುವ ಕಿರಾತ ನೀನು. ನಿನಗೆ ಹೃದಯವಿಲ್ಲ. ಮದ್ದಳಿಗನಾಗಿ ಮದ್ದಳೆಯನ್ನೇ ಎತ್ತಿ ಒಗೆದು ಹುಡಿಗೂಡಿಸಿದ್ದೀಯೆ. ಉಪಚಾರ ಮಾಡಿದವರಿಗೆ ಉಪದ್ರವ ನೀಡುವ ನೀನು ಕಲೆಗಾರನಲ್ಲ, ಕೊಲೆಗಾರ. ಈಗಲಾದರೂ ನನ್ನನ್ನು ಪರಿಗ್ರಹಿಸು, ಪತ್ನಿಯಾಗಿ ಅಂಗೀಕರಿಸು. ನಾನು ಸೋತಿದ್ದೇನೆ, ಶರಣಾಗಿದ್ದೇನೆ. ಮಾನ ಪ್ರಾಣಗಳನ್ನು ಪಾದದ ಬಳಿ ಅರ್ಪಿಸಿದ್ದೇನೆ. ಕಾಪಾಡು.

ಅಲ್ಲಮ : ಒಮ್ಮೆ ಆರೋಪಿಸುತ್ತೀಯೆ. ಇನ್ನೊಮ್ಮೆ ಆಶ್ರಯಿಸುತ್ತೀಯೆ. ಅರ್ಥವಿಲ್ಲದ ವರ್ತನೆ.

ರಾಗ : ಕೇದಾರಗೌಳ **ತಾಳ :** ಆದಿ

ಇಹ ಪರಂಗಳ ನೋಡದೆ । ಕಾಯದ ಪಕ್ಷ । ವಹಿಸಿ ನೀ ದಿನ ಕಳೆದೆ ॥
ಮಹಿಮೆಯ ಮರೆತು ಮೈಸುಖ ಬಯಸಿದ ನಿನ್ನ । ಸಹವಾಸ ಬೇಡೆನಗೆ ॥

ಅಲ್ಲಮ : ಕಾಮ, ಕ್ರೋಧ, ಲೋಭ, ಮದ, ಮತ್ಸರಗಳನ್ನು ಬಿಟ್ಟು ನಿನಗೆ ಇನ್ನೇನು ಗೊತ್ತಿದೆ. ಕಾಯವೇ ಧ್ಯೇಯ; ಧ್ಯೇಯವೇ ಕಾಯ. ಈ ನಿಲುವಿನಲ್ಲಿ ಬದುಕುವ ಕಾಯದ ಪಕ್ಷ ನಿನ್ನದು. ಕಾಯುವ ಪಕ್ಷದ ನೀತಿ ನಿನಗೆ ಹಿಡಿಸುವುದಿಲ್ಲ. ಇಹ–ಪರಗಳ ತಾರತಮ್ಯ ಗೊತ್ತಿಲ್ಲ. ಶಾರೀರಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದೇ ಬದುಕಿನ ರೀತಿ ನೀತಿ ಎಂದು ಭಾವಿಸಿದ ನೀನು ಹೆಣ್ಣು ಮೃಗಕ್ಕಿಂತ ಕೀಳು. ನನ್ನನ್ನು ಕಂಡು ನೀನು ಮನಸೋತದ್ದು ನನ್ನ ರೂಪಕ್ಕಾಗಿ ಅಲ್ಲ. ನಿನ್ನ ಆಸೆಗಾಗಿ, ಹಾಗಾಗಿ ನಿನಗದು ಬಲೆಯಾಗಿ ಕಾಣುತ್ತಿದೆ. ನೀನು ಬಯಕೆಯ ಬಲೆಯಲ್ಲಿ ಸಿಲುಕಿ ಕೊಂಡ ಅಬಲೆ. ಹಾಗಾಗಿ ಚೆಲುವಿನ ಬಲೆ ನೀನೇ. ಆರಾಧಿಸಬೇಕಾಗಿದ್ದ ಕಲೆಯನ್ನು ಬೇರೆ ಬೇರೆ ಉದ್ದೇಶಗಳಿಂದ ಬಳಸುವದು ಕಲೆಗೆ ಅಪಚಾರ. ನಾನು ಸೇವಾಭಾವದಿಂದ ಕಲೆಯನ್ನು ನಿವೇದಿಸಲು ಯತ್ನಿಸುತ್ತಿರುವಾಗ ನೀನು ಕಾಮಭಾವದಿಂದ ವರ್ತಿಸಿ ಕೆಡಿಸಿದೆ. ಅನುಷ್ಠಾನ ಮಾಡುವವರು ಅಪವಿತ್ರ ಜಲವನ್ನು ಚಲ್ಲಿದ ಹಾಗೆ ನಿನ್ನ ಸಹವಾಸದಿಂದ ಕಲುಷಿತಗೊಂಡ ಮದ್ದಳೆಯನ್ನು ಒಗೆದು ಒಡೆದು ಬಂದೆ. ಆಕಾರ ಕಳೆದುಕೊಂಡ ಮದ್ದಳೆಗೂ ಮುಕ್ತಿ ದೊರೆಯಿತು. ನೀನು ನನ್ನನ್ನು ಬಯಸಿದ್ದು ಶರೀರಸುಖಕ್ಕಾಗಿ. ಹುಚ್ಚು ಹೆಣ್ಣೇ ಬೆಳಕಿಗೂ ಕತ್ತಲೆಗೂ ಹೊಂದಿಕೆ ಸಾಧ್ಯವಿಲ್ಲ. ಹಾಲಿಗೆ ಹುಳಿ ತಾಗಿದರೆ ಅದು ಹಾಲಾಗಿ ಇರುವದಿಲ್ಲ. ನಿನ್ನ ದರ್ಪಕ್ಕೂ ಬೆಲೆಯಿಲ್ಲ, ದೈನ್ಯಕ್ಕೂ ಅರ್ಥವಿಲ್ಲ, ತೊಲಗಾಚೆ, ಸರಿ ದೂರ.

(ಧಿಕ್ಕರಿಸಿ ಹೊರಡುವನು. ಮಾಯೆಯೂ ಸರಿಯುವಳು.)

ದೃಶ್ಯ – ೮

(ನಿಜ ಅಲ್ಲಮ ಪ್ರಭು ರಂಗಕ್ಕೆ ಬರುವನು. ವಿಮಲೆ ಬಂದು ವಂದಿಸುವಳು.)

ವಿಮಲೆ : ಪ್ರಭುವೇ ಮಾಯೆ ಅಜ್ಞಾನಿ. ನೀನು ನಿರ್ಮಲ ಸುಜ್ಞಾನಿ. ದಯ ತೋರು ಸ್ವಾಮಿ.

ರಾಗ : ಮಲಹರಿ ತಾಳ : ರೂಪಕ

ಕ್ಷಮಿಸಿ ನೀನುದ್ಧರಿಸು ಇವಳ ದಯಾಸಾಗರ ।
ಭ್ರಮೆಯ ದೂರಗೈವ ತತ್ವಸುಧಾಶೇಖರ ॥
ಕಮಲ ರವಿಯ ಕಿರಣಕರಳದಿಹುದೆ ಶಂಕರ ।
ನಮಿಸಿದವರ ನಂಜಿಸದಿರು ಸಂಗಮೇಶ್ವರ ॥

ವಿಮಲೆ : ಮಾಯೆ ಮಾನವ ಧರ್ಮವನ್ನು ಮರೆತು ವರ್ತಿಸಿದ್ದಾಳೆ. ಅಹಂಕಾರದಿಂದ ನರ್ತಿಸಿದ್ದಾಳೆ. ಸಾಮಾನ್ಯರು ಇದನ್ನು ಸಹಿಸಲಾರರು, ಕ್ಷಮಿಸಲಾರರು. ನೀನು ಸರ್ವೇಶ್ವರ, ಕರುಣಾಸಾಗರ. ಪಾಪನಾಶಿನಿಯಾದ ಗಂಗೆ ನಿನ್ನ ಜಡೆಯಿಂದ ಭೂಮಿಗಿಳಿದಿದ್ದಾಳೆ. ಪಾಮರರನ್ನು ಪಾವನಗೊಳಿಸುವ ಮಹಿಮೆಯುಳ್ಳ ನೀನು ಈ ಮಾಯೆಯನ್ನು ಕ್ಷಮಿಸಿ– ಉದ್ಧರಿಸು. ಕತ್ತಲೆಯಲ್ಲಿ ಮುದುಡಿದ ತಾವರೆ ಸೂರ್ಯೋದಯದಲ್ಲಿ ಅರಳುತ್ತದೆ. ಆದರೆ ನಿನ್ನ ಸಂಪರ್ಕ ಸಾನ್ನಿಧ್ಯದಿಂದಲೂ ಮಾಯೆಯಲ್ಲಿ ಸಾತ್ವಿಕ ಭಾವ ಏಕೆ ಅರಳಲಿಲ್ಲ. ಪರುಷ ಶಿಲೆಯ ಸಂಪರ್ಕದಿಂದ ಲೋಹ ಬಂಗಾರವಾಗುತ್ತದೆ. ಈ ಮಾಯೆ ಪುನೀತಳಾಗಲಿಲ್ಲ. ಅಗ್ನಿ ದಗ್ಧವಾದ ವಸ್ತುಗಳೆಲ್ಲಾ ಭಸ್ಮದ ರೂಪು ಪಡೆಯುತ್ತವೆ. ಭೂಮಿಯಲ್ಲಿ ಬೆರೆತ ವಸ್ತುಗಳೆಲ್ಲಾ ಮಣ್ಣಾಗುತ್ತವೆ. ಈ ಸೃಷ್ಟಿ ನಿಯಮದ ಅರಿವುಳ್ಳ ಸರ್ವಜ್ಞ ನೀನು. ಸಮುದ್ರವನ್ನು ಸೇರಿದ ಹನಿಯೂ ಸಮುದ್ರವಾಗುತ್ತದೆ. ಶಿವತತ್ವ ಸುಧೆಯೂ ಇವಳನ್ನು ಬದುಕಿಸದಿದ್ದರೆ ಇವಳ ಗತಿಯೇನು? ಸಂಗಸಂಗತಿಗಳನ್ನು ಭಂಗಗೊಳಿಸಿ ಅಂಗವನ್ನು ಲಿಂಗೈಕ್ಯಗೊಳಿಸುವ ಸಂಗಮೇಶ್ವರಾ ಕಾಪಾಡು ಕಾಪಾಡು.

ಅಲ್ಲಮಪ್ರಭು : ವಿಮಲೇ, ಅಲ್ಲಮನ ನಿಜವನ್ನು ಕಂಡ ನೀನು ನಿರೂಪಿಸಿದ ವಿಷಯಗಳು ಸರಿಯಾಗಿಯೇ ಇವೆ. ಮಾಯೆ ವಿಮಲೆಯಲ್ಲ. ಬುದ್ಧಿಯನ್ನು ತಿದ್ದಿಕೊಳ್ಳುವಲ್ಲಿ ಶುದ್ಧಿಗೂ ಆದ್ಯತೆ ನೀಡಬೇಕು. ಶಮೆಗೂ– ಕ್ಷಮೆಗೂ, ಉದ್ಧಾರಕ್ಕೂ–ಸ್ವೀಕಾರಕ್ಕೂ ವ್ಯತ್ಯಾಸವಿದೆ. ಮಾಯೆಯನ್ನು ನಾನು ಸ್ವೀಕರಿಸಬೇಕೇ? ಸರಿಯಾದೀತೆ?

ರಾಗ : ಭೂಪಾಳಿ ತಾಳ : ರೂಪಕ

ನಿರುಪಮ ನಿರ್ಮಲ ನಿರ್ಗುಣ ಪರಶಿವತತ್ವಕೆ ।
ಬೆರೆಸಬಹುದೆ ಮಾಯೆಯನ್ನು ಪರಮತತ್ವಕೆ ॥
ಪರಿಶುದ್ಧಿಗೆ ಕಲಬೆರಕೆಯ ಕರಣ ಸಲ್ಲದು ।
ಹರಗುಣಕೊಪ್ಪಿದ ಗುರುಗುಣ ಭ್ರಮೆಯನೊಪ್ಪದು ॥

ಅಲ್ಲಮಪ್ರಭು : ವಿಮಲೇ, ಶುದ್ಧಿಗೆ ಸಂಬಂಧಿಸಿದ ನಿನಗೆ ತಿಳಿಸುವ ಅಗತ್ಯವೇ ಇಲ್ಲ. ನಿರುಪಮವೂ ನಿರ್ಮಲವೂ ಆದ ಪರಮ ಶಿವತತ್ವದ ತಿರುಳನ್ನು ತಿಳಿದವಳು ನೀನು. ಆ ತತ್ವ ಮಾಯೆಯನ್ನು ಸ್ವೀಕರಿಸುವುದಿಲ್ಲ. ಭಕ್ತಿಗೂ ದೈನ್ಯಕ್ಕೂ ದೈವಾನುಗ್ರಹ ದಯೆಗಳು ದೊರಕುತ್ತವೆ. ಅಹಂಕಾರ ದರ್ಪಗಳಿಗೆ ದೈವ ಬೆಂಬಲವಿಲ್ಲ. ಪಾಮರರನ್ನು ಅನುಕಂಪದಿಂದ ನೋಡಬೇಕು. ಮಾಯೆ ಪಾಮರಳಲ್ಲ, ಅಮರಳು, ಅಹಂಕಾರಿ. ಅರಿಷಡ್ವರ್ಗಗಳನ್ನು ಪೋಷಿಸುವವಳು. ಇವಳನ್ನು ಕರುಣೆಯಿಂದ ಕಂಡು ಆಶ್ರಯ ಕೊಟ್ಟರೆ ಜನಸಾಮಾನ್ಯರು ಅನುಗ್ರಹವನ್ನೇ ಅನುಮಾನದಿಂದ ಸ್ವೀಕರಿಸುವಂತಾದೀತು. ಶಿವ ತತ್ವದಲ್ಲಿಯೂ ಮಾಯೆ ಬೆರೆತಿದೆ ಎಂದು ತಿಳಿದರೆ ಬಲ್ಲವರು ಬಸವಳಿಯುತ್ತಾರೆ. ಕಾಲಿಗೆರಗಿದ್ದಾಳೆ ಎಂಬ ಕಾರಣದಿಂದ ಇವಳು ಪಾವನಳಾಗುವುದಿಲ್ಲ. ಪ್ರಕಾಶ ತತ್ವವನ್ನು ನೀನು ಬಲ್ಲೆ. ಕತ್ತಲೆಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಬೆಳಕಿನ ಅಭಾವವೇ ಕತ್ತಲು. ಬೆಳಕು ಕತ್ತಲೆಯನ್ನು ಸ್ವೀಕರಿಸಿದರೆ ಆಗ ಕತ್ತಲು ಬೆಳಕಿನ ಸ್ವಭಾವವಾಗಿ ಬಿಡುತ್ತದೆ. ಶಿವತತ್ತ್ವ ಮಾಯೆಯನ್ನು ಸ್ವೀಕರಿಸಿದರೆ ಶುಭಕ್ಕೆ ಮಾಯೆಯನ್ನು ಬೆರೆಸಿದಂತಾಗುತ್ತದೆ. ಹನಿ ಇಳಿದು ಹೊಳೆಯಾಗಿ ಹರಿದು ಸಮುದ್ರಕ್ಕೆ ಸೇರಿದರೆ ಆಗ ಬಿಂದುವೂ ಸಿಂಧುವಾಗುತ್ತದೆ. ಕೆರೆಗೋ ಭಾವಿಗೋ ಸೇರಿದರೆ ಅದೇ ಆಗುತ್ತದೆ. ಈ ಮಾಯೆ ಮೃಗಜಲ. ಪರುಷಗಲ್ಲು ಕಬ್ಬಿಣವನ್ನು ಬಂಗಾರವಾಗಿಸುತ್ತದೆ, ಕಟ್ಟಿಗೆಯನಲ್ಲ. ವಿಮಲೇ ನೀನು ಮಾಯೆಯ ಕುರಿತು ಅನುಕಂಪ ತೋರಿ ಕಲಬೆರಕೆಗೆ ಆಗ್ರಹಿಸಬೇಡ. ಇಲ್ಲಿ ನಡೆದ ಘಟನೆಗೆ ನೀನು ಪ್ರತ್ಯಕ್ಷ ಸಾಕ್ಷಿಯಾಗಿದ್ದೀಯೆ. ತಾಮಸೀ ಕಳೆ ಸಾತ್ವಿಕ ತೇಜವನ್ನು ಕುಂದಿಸಲಾರದು ಎಂಬುದನ್ನು ಕಂಡೆಯಲ್ಲ. ವಿಮಲೆಯಾದ ನೀನು ಮಾಯಾ ಕೋಲಾಹಲದ ಪ್ರೇಕ್ಷಕಳಾಗಿ ಬಂದು ಪರಿಣಾಮವನ್ನು ಕಂಡೆ. ಸಾತ್ವಿಕ ನೆಲೆಯಲ್ಲಿ ಸೋಲು ಗೆಲುವುಗಳಿಲ್ಲ. ಪಂಥ ಪಣಗಳಿಲ್ಲ. ಆಕಾಶಕ್ಕೆ ಆಕಾರವಿಲ್ಲ, ಅದು ಕೇವಲ ಅವಕಾಶ. ಪರೀಕ್ಷೆ ಮುಗಿಯಿತು. ಆದಿಶಕ್ತಿಯ ಇಚ್ಛೆಗೆ ಮಣಿದು ಧನ್ಯವಾದ ಸಲ್ಲಿಸುತ್ತೇನೆ– ಶಿವೋಹಂ ಧನ್ಯೋಸ್ಮಿ (ನಿರ್ಗಮನ)

ವಿಮಲೆ : ಮಾಯೇ ನಿನಗೆ ಪ್ರತ್ಯೇಕ ಅಸ್ತಿತ್ವವಿದೆ. ಇದನ್ನು ಆದಿಶಕ್ತಿ ಕಾಣಿಸಿದ್ದಾಳೆ. ಲೋಕದ ಕೋಲಾಹಲಗಳಿಗೆ ಕಾರಣಳು ನೀನು. ಅಲ್ಲಮನ ಗುರುತ್ವದ ಎದುರು ತಲ್ಲಣ ನಿನಗೇ ಆಯ್ತು. ಈ ವಿಚಾರವನ್ನು ಪಾರ್ವತೀ ದೇವಿಗೆ ತಿಳಿಸಬೇಕು. ಏಳು ಹೋಗೋಣ.

ದೃಶ್ಯ – ೯

(ಕೈಲಾಸ– ಪರಮೇಶ್ವರ–ಪಾರ್ವತಿ–ಪ್ರಮಥರು)

ರಾಗ : ಬಿಲಹರಿ **ತಾಳ :** ಅಷ್ಟ

ವಿಮಲೆ ವಂದಿಸುತ ಪೇಳಿದಳು । ದೇವೀ ।
ಭ್ರಮೆಗೊಳಲಿಲ್ಲವಲ್ಲಮನು ಚಿತ್ತದೊಳು ॥
ಮಮಕಾರ ತನುಭವೆ ಬಳಲಿ । ಸೋತು ।
ಶ್ರಮಿಸಿದಳಳುಕಿ ಮಹಾತ್ಮನಿಗೆರಗಿ ॥

ವಿಮಲೆ : ದೇವಿ, ನನ್ನ ಅಪ್ಪಣೆಯಂತೆ ನಾನು ಹೋಗಿ ಮಾಯೆಯನ್ನು ಎಚ್ಚರಿಸಿದೆ. ಆದರೆ ಮಮಕಾರ ರಾಜನ ಮಗಳು ಅಹಂಕಾರದಿಂದ ಅಲ್ಲಮನನ್ನು ಎದುರಿಸಿ ತಾನೇ ತೊಳಲಿ ಬಳಲಿ ಅಳಲಿ ಶರಣಾಗಿದ್ದಾಳೆ. ಜಗದ್ಗುರುವಾದ ಅಲ್ಲಮಪ್ರಭು ಮಾಯೆಯನ್ನು ಗೆದ್ದು ಮಹಿಮೆ ಕಾಣಿಸಿದ್ದಾನೆ.

ಪಾರ್ವತಿ : ಪರಮೇಶ್ವರಾ, ನಿನ್ನ ಮಾತೇ ಸತ್ಯವಾಯಿತು. ಅಲ್ಲಮನು ಮಹಾಯೋಗಿ ಜಗದ್ಗುರು. ಸಾಕ್ಷಾತ್ ಶಿವಸ್ವರೂಪ ಎಂಬುದು ಗೊತ್ತಾಯಿತು. ತಾಮಸೀ ಕಳೆಯನ್ನು ಭೂಮಿಗಿಳಿಸಿ ಸಾತ್ವಿಕ ಪ್ರಭೆಯನ್ನು ಕುಂದಿಸುವ ಪಂಥಕ್ಕಿಳಿದು ನಾನು ಸೋತೆ.

ಪರಮೇಶ್ವರ : ಮಾಯೆಯ ಸೋಲು, ಪರಶಿವೆಯ ಪರಾಭವವಲ್ಲ. ಆದಿಶಕ್ತಿಯ ಪಂಥದಲ್ಲಿ ವಾಸ್ತವಿಕ ಚೈತನ್ಯ ಪ್ರಕಟವಾಗಿದೆ.

ರಾಗ : ಮೋಹನ **ತಾಳ :** ತ್ರಿವುಡೆ

ಸತ್ವರಜ ತಾಮಸವ ಮೀರಿದ ।
ತತ್ವವೀಶಾವಾಸ್ಯವೆಂಬುದ ।
ನಿತ್ಯಗೊಳಿಸಿದೆ ಪಣದ ನೆವದಿ ಮ ।
ಹತ್ವ ಮಂಗಳ ಕಾಣಿಸೀ । ಮಹಿಮೆ ತೋರಿ ॥

ಈಶ್ವರ : ಶಿವನನ್ನು ತಮೋಗುಣ ಪ್ರಧಾನನೆಂದು ವಿಂಗಡಿಸುವವರನ್ನು ಎಚ್ಚರಿಸಿದಂತಾಯ್ತು. ದೇವತತ್ವದಲ್ಲಿ ಗುಣ ಪ್ರಧಾನವಾಗಿರುವುದಿಲ್ಲ. ಈಶ್ವರತ್ವ ತ್ರಿಗುಣಾತೀತ. ತಾಮಸೀ ಮಾಯೆಯನ್ನು ಅಲ್ಲಮ ಗೆದ್ದ. ಅಲ್ಲಮನೇ ಶಿವ, ಶಿವನೇ ಅಲ್ಲಮ ಅಲ್ಲವೇನೆ? ಪ್ರಶ್ನೆ ಕೇಳಿ, ಪಂಥ

ಹೂಡಿ, ನೀನು ಈ ಸಂಗತಿಯನ್ನು ಲೋಕದ ಮುಂದಿರಿಸಿದೆ. ನಿನ್ನ ಸಂಕಲ್ಪದಲ್ಲಿ ಶಿವತತ್ವದ ಮಹತ್ವವನ್ನು ಸಾರುವ ವಿಚಾರ ಇತ್ತು. ಈ ಲೀಲೆಯಿಂದ ಈಗದು ಲೋಕಕ್ಕೆ ವಿದಿತವಾಯ್ತು. ಮಂಗಳ ಗೌರಿಯ ಪಣವೂ ಮಂಗಳವೇ.

ಪ್ರಮಥರು– ವಿಮಲೆ : ಪಾರ್ವತಿಪತಯೇ ಹರಹರ ಮಹಾದೇವ.

ರಾಗ : ಬಿಲಹರಿ **ತಾಳ :** ಏಕ

ಮಂಗಳಂ ಮಹಲಿಂಗನಿಗೆ ಶಿವಗೆ । ಮಾಯಾಮದಂಗಳ ।
ಭಂಗಿಸುವ ಸುಜ್ಞಾನಪೂರ್ಣನಿಗೆ ॥ ಪಲ್ಲ ॥
ಸಂಗಡಿಸುವ ಭವಂಗಳ ಬದುಕಿಗೆ ।
ಅಂಗಲಿಂಗ ಪ್ರಸಂಗವ ಕಾಣಿಸಿ ।
ಹಂಗಿನ ಸಂಗವ ಭಂಗವಗೊಳಿಸುತ ।
ರಂಗಕೆ ಮಂಗಳದಿಂಗಿತವೀವಗೆ ॥ ಮಂಗಳಂ ॥

ರಾಗ : ಭೂಪಾಳಿ ಭಾಮಿನಿ

ಚಾಮರಸನುರು ಕವಿತಾರಚನಾ ।
ಧಾಮದಂಚಿಗೆ ನಿಂತು ಸುಕಲಾ ।
ಸಾಮರಸ್ಯಕೆ ಯಕ್ಷಗಾನದ ಸೊಗಡ ಸವಿಯುತಲಿ ॥
ತಾಮಸೀ ಮಾಯೆಯ ಪರಾಭವ ।
ದಾ ಮಹಿಮೆ ಬಣ್ಣಿಸಿದ ಕೃತಿಯಿದು ।
ಭಾಮೆ ಪಾರ್ವತಿ ಕೊರಳ ಮಂಗಳಸೂತ್ರವಾಗಿರಲಿ ॥

♦♦♦

ಅಕ್ಕಮಹಾದೇವಿ ಸಣ್ಣಾಟ

ಪಾತ್ರ ಪರಿಚಯ

ಅಲ್ಲಮಪ್ರಭು	:	ವೀರಶೈವ ಜಂಗಮ, ಶಿವಶರಣ.
ದೂತಿ	:	ಸೇವಕಿ.
ಅಕ್ಕಮಹಾದೇವಿ	:	ಉಡುತಡಿಯಲ್ಲಿರುವ ನಿರ್ಮಲಶೆಟ್ಟಿಯ ಮಗಳು ವಿರಕ್ತೆ, ಶಿವಭಕ್ತೆ.
ಶಂಕರ	:	ಅಕ್ಕಮಹಾದೇವಿಯ ತಮ್ಮ.
ನಿರ್ಮಲಶೆಟ್ಟಿ	:	ಅಕ್ಕಮಹಾದೇವಿಯ ತಂದೆ. ಉಡುತಡಿಯ ನಿವಾಸಿ.
ಕೌಶಿಕ	:	ಉಡುತಡಿ ಪಟ್ಟಣದ ದೊರೆ.
ಚಾರುಮತಿ	:	ಕೌಶಿಕ ರಾಜನ ಪಟ್ಟದ ರಾಣಿ.
ಚಂದ್ರಸೇನ	:	ರಾಜಕುಮಾರನ ವೇಷದಲ್ಲಿರುವ ಚಾರುಮತಿ.
ಸೈನಿಕ–೧ ಸೈನಿಕ–೨	{	ಕೌಶಿಕನ ಸೈನಿಕರು.

ಸ್ತುತಿ

(ಕಥೆಗಾರ ಹಾಗೂ ಹಿಮ್ಮೇಳದವರು)

ಶ್ರೀ ವಿಘ್ನೇಶ್ವರಾಯನಮಃ
ಶ್ರೀ ದುರ್ಗಾದೇವಿನಮಃ
ಶ್ರೀ ಸರಸ್ವತೀನಮಃ
ಶ್ರೀ ಲಕ್ಷ್ಮೀನಮಃ
ಶ್ರೀ ಶಿವಬಸವೇಶ್ವರನಮಃ

ಶ್ರೀ ಮಹೇಶ್ವರಾ ಜನಮನಪ್ರಿಯಕರಾ
ಕಾಮಸಂಹರ ಶಿವಭವಶಂಕರ
ನಿತ್ಯನಿರಂಜನನೇ ಸತ್ಯನಿತ್ಯನೇ ।
ಸತ್ಯಸುಖವ ಕೊಡು ನಿತ್ಯದಿ ಭಜಿಪೆವು ।

ಗಿರಿಜಾರಮಣನೆ ದುರಿತನಿವಾರಣನೆ
ಪರತರ ಗುರುವೇ ಕರುಣಿಸು ಬೇಡುವೆ ।
ಚೆನ್ನಿಗಧಾಮನೆ ಪುಣ್ಯ ಪುನೀತನೆ
ಭಕ್ತಿಲಿ ಬೇಡುವೆ ಅಭಯವಕೊಡು
ಕಥೆಯಾಡುವೆ ಪಾರುಮಾಡು ವಿಘ್ನನಿವಾರಕನೆ ।

ಪದ

ಶರಣರ ಪಾದ ಯುಗಗಳನು
ನಿತ್ಯದಿ ಭಜಿಸುವೆ ಅವರನ್ನು
ಅವರ ಕರುಣದಿ ಸ್ತುತಿಸುವೆನು
ಅವರ ನಂಬಿ ನಾ ಪೊಗಳುವೆನು
ಉಡುತಡಿ ಮಹಾದೇವಿಯ ಚರಿತೆಯನು
ಸರಸನಾಟಕ ರೂಪದಿಂದಾ ಚಿತ್ರಿಸುವೆನು
ಅಲ್ಲಮಪ್ರಭುವಿನ ಲೀಲೆಯನು ವರ್ಣಿಸುವೆನು
ಶಿವಭಕ್ತಿಯ ಮಹಿಮೆಯ ಪೇಳುವೆನು
ಸಭಾದಲ್ಲಿ ಕುಳಿತಿರುವಂತಾ ಪಂಡಿತರೇ
ಚಿತ್ತವಿಟ್ಟು ಕೇಳಿರಿ ಚಮತ್ಕಾರಾ
ಮುಕ್ತಿಯ ಆಧಾರಾ ತತ್ವದ ಸಾರಾ
ಗಂಡುಮೆಟ್ಟು ದೇವಗಿರಿ ಜಾಹಿರಾ
ಅಲ್ಲಿ ಇರುವ ಶ್ರೀ ವಿಘ್ನೇಶ್ವರಾ
ಆನತ ದಯದಿಂದ ನಾ ಕತೆಗಾರ
ರಚಿಸುವೆ ಕಥನ ಮಾಡಿ ಮಜಕೂರಾ

ಅಂಕ–೧

(ಅಲ್ಲಮಪ್ರಭುವಿನ ಪ್ರವೇಶ)

(ಅಲ್ಲಮಪ್ರಭು ಹಾಡುತ್ತ ರಂಗ ಪ್ರವೇಶ ಮಾಡಬೇಕು)

(ಪದ)

ಅಲ್ಲಮಪ್ರಭು : ಜಗವನುದ್ಧರಿಸಲು ಬಂದೆನು ನಾನೀಗ
ನಿಗಮಾತೀತನು ಗುರು ಬಂದೆನಿಲ್ಲಿಗೆ ॥ಪಲ್ಲ॥
ಶರಣರೆನ್ನಯ ಪ್ರಾಣ ಅವರೊಳೆನ್ನಯ ಕರುಣಾ
ಶರಣರ ನುಡಿಯನು ಹರಿಸುತಲಿ ಗಡಾ ॥
ಪರಿಭವದೊಳು ಬಿದ್ದ ನರರನ್ನು ಮಾಡಿ ಶುದ್ಧ
ಪರತರ ಧ್ಯಾನದಿಂದವರ ನೆನಿಸುತಲೀಗ ॥

(ಮಾತು) : ಓಹೋ! ಈ ಮಾಯಾ ಪ್ರಪಂಚದೊಳಗೆ ಬಿದ್ದು, ಅನಂತ ಕಾಲದಿಂದ ಒದ್ದಾಡುವಂತೆ ಮಾನವರ ಕಷ್ಟವನ್ನು ನೋಡಿ, ಅವರನ್ನು ಉದ್ಧಾರ ಮಾಡುವುದರ ಸಲುವಾಗಿ ಸಾಕ್ಷಾತ್ ಶಿವಸ್ವರೂಪರಾದಂಥ ಶಿವಶರಣರು ಈ ಮೃತ್ಯುಲೋಕದಲ್ಲಿ ಅವತಾರ ಮಾಡಿರುತ್ತಾರೆ. ಅವರ ಸೇವೆ ಮಾಡಿ, ಅವರಿಂದ ಜ್ಞಾನ ಪಡೆದುಕೊಂಡು ಭಕ್ತಿಯಿಂದ ಮುಕ್ತಿ ಹೊಂದಬೇಕು. ಅನರ್ಥ ಕಾಲ ಕಳೆಯಬಾರದು. ಯಾಕೆಂದರೆ, ಇದು ಅಶಾಶ್ವತವಾದ ಶರೀರವಿರುತ್ತದೆ ಎಂದು ತಿಳಿದುಕೊಂಡು, ಸ್ವಲ್ಪಾದರೂ ನಾಚಿಕೆ ಹಿಡಕೊಂಡು ಹಾದಿ ಹಿಡಿಯಬೇಕು. ಈ ಮನುಷ್ಯ ಜನ್ಮ ಹೇಗೆಂದರೆ ಬಂಗಾರದ ಖಣಿ ಇದ್ದಂತೆ ತಿಳಿಯಿರಿ. ನೆಲದೊಳಗೆ ಬಹು ದೂರದವರೆಗೆ ಇರುವ ದ್ರವ್ಯವನ್ನು ತೆಗೆದುಕೊಳ್ಳಬೇಕಾದರೆ ಅಂಜನವನ್ನು ಹಚ್ಚಿ ಒಬ್ಬ ಯಂತ್ರಗಾರನನ್ನು ಸಹಾಯಕ್ಕೆ ಕರೆದುಕೊಂಡು ಆ ದ್ರವ್ಯವನ್ನು ಹೇಗೆ ತೆಗೆದುಕೊಳ್ಳುತ್ತೀರೋ ಅದರಂತೆ ಜ್ಞಾನವೆನ್ನುವಂಥ ಅಂಜನವನ್ನು ಹಚ್ಚಿ, ಮಾಯೆ ಎನ್ನುವಂಥ ಕತ್ತಲೆಯನ್ನು ಓಡಿಸಿ, ಗುರು ಅನ್ನುವಂಥ ಮಂತ್ರಗಾರನ ಸಹಾಯದಿಂದ ತತ್ವ ಅನ್ನುವಂಥ ಭೂಮಿಯನ್ನು ಅಗೆದು, ನಿಜಾನಂದ ಎನ್ನುವಂಥ

ದ್ರವ್ಯವನ್ನು ತಕ್ಕೊಂಡು ಊಟ ಮಾಡಬೇಕು. ಅದರಿಂದ ಶಾಶ್ವತ ಸುಖ ಸಿಗುತ್ತದೆ.

ಎಲೈ ಮನುಷ್ಯ ಪ್ರಾಣಿಗಳೇ ಈ ಮನುಷ್ಯ ಜನ್ಮ ಹೋಯಿತೆಂದರೆ ಇನ್ನು ಮುಂದೆ ಸಿಗುವದು ದುರ್ಲಭವು. ಆದ್ದರಿಂದ ಇಂಥ ಅರಿವುಳ್ಳ ಜನ್ಮವು, ಆದಷ್ಟು ಪ್ರಯತ್ನ ಮಾಡಿ ಸಾಧು ಸತ್ಪುರುಷರಾದ ಶಿವಶರಣರ ಸೇವೆ ಮಾಡಿ ಅವರಿಂದ ಜ್ಞಾನ ಪಡೆದುಕೊಂಡು ಭಕ್ತಿಯಿಂದ ಮುಕ್ತಿ ಸಂಪಾದಿಸಬೇಕು. ಆದರೆ ನನ್ನ ಶಿಷ್ಯರೇ, ಹೀಗೆ ಮಾಡದೇ, ನನ್ನ ಹೊಲ, ನನ್ನ ಮನೆ, ನನ್ನ ಬದುಕು, ನನ್ನ ಬಾಳುವೆ ಅಂತಾ ಈ ಹೊಲಸು ಸಂಸಾರದ ಮೇಲೆ ಭ್ರಮೆಗೊಂಡು ಮಾಡಬಾರದ ಪಾಪವನ್ನು ಮಾಡಿ. ಕೇಳಬಾರದ ಕಷ್ಟವನ್ನು ಯಾಕೆ ಅನುಭವಿಸುತ್ತೀರಿ? ಎಷ್ಟೋ ಪುಣ್ಯ ಮಾಡಿದಲ್ಲಿ ಇಂಥ ಅರಿವುಗಳ ಜನ್ಮ ಸಿಕ್ಕಿದೆ. ಇಂಥ ಅರಿವುಳ್ಳ ಜನ್ಮದಲ್ಲಿ ಒಣ ಡೌಲು ಮಾಡಿ, ಪಾತರಗಿತ್ತಿಯಂತೆ ಅತ್ತಿಂದಿತ್ತ ಇತ್ತಿಂದತ್ತ ಹಾರಾಡಿ ಹಾಳಾಗಬೇಡಿರಿ.

ಶಿವ ಶಿವಾ! ಅಂಥಾ ಶಿವಭಜನೆ ಮಾಡಿ ಮುಕ್ತಿ ಸಾಮ್ರಾಜ್ಯವನ್ನು ಹೊಂದಿ ದಿವ್ಯಾನಂದವನ್ನು ಪಡೆದುಕೊಳ್ಳಿರಿ.

ದೂತಿ : (ಅಲ್ಲಮನನ್ನು ಕಂಡು) ಯಾರಪ್ಪಾ ಅಣ್ಣಾ ನೀನು, ನಿನಗುರ್ತು ಏನಾ? ಬಂದ ಕಾರಣವೇನು?

ಮೈಯಲ್ಲಿ ಕ್ಯಾವಿ ಅಂಗಿ
ಕೈಯಲ್ಲಿ ತಂಬಗಿ
ಬಗಲಾಗ ಚಿಗರಿಯ ಚರ್ಮಾ
ಕೊರಳಾಗ ರುದ್ರಾಕ್ಷಿ ಸರಾ
ಹಾಕಿಕೊಂಡು ಇಲ್ಯಾಕ ನಿಂತೀದಿ?

ಏನೋ ಪಾದ್ರಿಸಾಬಾ ಈ ಮಂದಿಗೆಲ್ಲ ಏನಾರ ಹೇಳಿ, ಎಲ್ಲಾರಿಗೂ ದೀಕ್ಷಾ ಕೊಡಸಬೇಕಂತ ಬಂದೀದೇನ? ನಿನ್ನೆಡಗಿವಿ ಕಿತ್ತೀತು, ನೆಟ್ಟಗ ಹೇಳು.

ಅಲ್ಲಮಪ್ರಭು : ಏನೇ? ನಾನು ಆ ಪಾದ್ರಿ ಅಲ್ಲಾ?

ದೂತಿ : ಹಾಗಾದರೆ ನೀನು ಯಾರು?

ಅಲ್ಲಮಪ್ರಭು : ನಾನು ಅಲ್ಲಮನು.

ದೂತಿ : ಅಲ್ಲೊ, ಅಲ್ಲಾನೋ, ಮುಲ್ಲಾನೋ?

ಅಲ್ಲಮಪ್ರಭು : (ಕಿವಿ ಹಿಡಿದು) ಏನೇ ಚೇಷ್ಟೆಯನ್ನು ಮಾಡುತ್ತೀಯಾ. ನಾನು ಅಲ್ಲಮಪ್ರಭು ಇದ್ದೇನೆ ನೋಡು.

ದೂತಿ : ತಿಳಿಯಿತು ಬಿಡು, ತಿಳಿಯಿತು ಬಿಡು. (ಕಿವಿ ಬಿಡಿಸಿಕೊಳ್ಳುತ್ತ).

ಅಲ್ಲಮಪ್ರಭು : ಏನು ತಿಳಿಯಿತು?

ದೂತಿ : ಅಲ್ಲಮಪ್ರಭುಸ್ವಾಮಿ ನಮ್ಮಪ್ಪ ಮಹಾದೇವ ಅನ್ನೋದು ತಿಳಿಯಿತು.

ಅಲ್ಲಮಪ್ರಭು: ದೂತಿ, ಹಾಗಾದರೆ ನಮಸ್ಕಾರ ಮಾಡು.

ದೂತಿ : ಅದೇಕೋ, ನೀನು ನನಗೆ ಗುರುಗಿರು ಏನು?

ಅಲ್ಲಮಪ್ರಭು: ನಿನಗೊಬ್ಬಳಿಗೇಕೇ? ಇಡೀ ಜಗತ್ತಿಗೇ ನಾ ಗುರು ಇದ್ದೇನೆ ನೋಡು.

ದೂತಿ : ಅದು ಹೇಗೆ? ನೀವಾದರೂ ಎಂಥ ಗುರು? ಏನೇನು ಮಾಡುತ್ತೀರಿ ಹೇಳು. ಚಲೋತ್ನಾಗರ ಹೇಳು ಕೇಳುತ್ತೇನೆ.

ಅಲ್ಲಮಪ್ರಭು: ದೂತಿ ಹಾಗಾದರೆ ಹೇಳಲಿಕ್ಕೇ ಬೇಕೇನು?

ದೂತಿ : ಹೇಳಲಿಕ್ಕೇಬೇಕು.

ಅಲ್ಲಮಪ್ರಭು: ಹಾಗಾದರೆ ಹೇಳುತ್ತೇನೆ ಕೇಳು.

ಪದ

ಅಲ್ಲಮಪ್ರಭುವರ ನಾನು ನಿತ್ಯನಿರಂಜನನೆ
ಕೇಳವ್ವ ದೂತೆ ತಿಳಿಸುವೆನೆಲ್ಲ ಉಕ್ತಿಯನು ॥ ಪಲ್ಲ ॥
ಅಜಹರಿ ರುದ್ರನನ್ನು ಹುಟ್ಟಿಸಿ ಮೂವರನ್ನು
ಜಗದ ಕರ್ತನನ್ನು ಪಾಲಿಸುವೆನು ನಾನು
ಜಗದಾತ್ಮಕನು ನಾನು ಜಗದ ಸೂತ್ರಕನು ನಾನು
ಜಗವನುದ್ಧರಿಸುವ ಸದ್ಗುರುವು ನಾನು
ಶರಣರ ಲೀಲೆಯ ಮಾಡಿ ಪರೀಕ್ಷೆಯ
ತೊಟ್ಟು ಈ ಲೋಕಕ್ಕೆ ಬಂದೆ ಕರುಣಿಸಲು.

(ಮಾತು) : ಏನೇ, ನಿರಾಕಾರವಾದಂತಾ ನಿರಂಜನ ಪರಬ್ರಹ್ಮ ವಸ್ತು ನಾನೇ ಅಂತಾ ತಿಳಿ. ನಾನು ಅನಾದಿ ಕಾಲದಲ್ಲಿ ಏನಾದರೊಂದು ಆಟ ಆಡಬೇಕಂತ ಸಂಕಲ್ಪಮಾಡಿಕೊಂಡು, ಈ ಜಗತ್ತನ್ನು ನಿರ್ಮಾಣಮಾಡುವುದು, ಸಲುಹುವುದು, ಸಂಹಾರ ಮಾಡುವುದು

ಈ ಮೂರೂ ಕೆಲಸಕ್ಕೆ ಬ್ರಹ್ಮ, ವಿಷ್ಣು, ರುದ್ರರೆನ್ನುವಂಥ ಮೂವರು ಕರ್ತರನ್ನು ಈ ಕೆಲಸಕ್ಕೆ ನೇಮಿಸಿ, ನಾನು ಸೂತ್ರಧಾರಕನಾಗಿ ಅನೇಕ ಬ್ರಹ್ಮಾಂಡಗಳನ್ನು ಗೊಂಬೆಗಳಂತೆ ಕುಣಿಸುತ್ತ, ನಾನಾ ಪ್ರಕಾರದ ಆಟವನ್ನು ಆಡುತ್ತೇನೆ. ಇದು ಅಲ್ಲದೇ ಈ ಜಗತ್ತಿನ ಮೇಲೆ ಇರತಕ್ಕ ಶಿವಶರಣರ ಸತ್ವಪರೀಕ್ಷೆ ಮಾಡಿ, ಅವರ ಕೀರ್ತಿಯನ್ನು ಈ ಲೋಕದ ತುಂಬ ಹೆಚ್ಚಿಸಬೇಕೆಂದು ಸ್ವತಃ ನಾನೇ ಬೇರೊಂದು ರೂಪಧರಿಸಿಕೊಂಡು ಬಂದು, ಅವರಲ್ಲಿ ಕೂಡಿ ಲೀಲೆಯ ಮಾಡಿ, ಅವರ ಸತ್ವಪರೀಕ್ಷೆ ಮಾಡುತ್ತೇನೆ. ಇದು ಅಲ್ಲದೇ ಸಕಲ ಚರಾಚರ ವಸ್ತುಗಳಿಗೆಲ್ಲಾ ಆಧಾರ ಭೂತವಾದಂತಾ ನಿರಾಕಾರ, ನಿರ್ವಿಕಲ್ಪ, ನಿರಂಜನ, ನಿರಾಧಾರಿ, ಸಚ್ಚಿದಾನಂದ ಸ್ವರೂಪನಾದ ಪರಾತ್ಪರ ಜಂಗಮವಸ್ತು ನಾನೇ ಅಂತಾ ತಿಳಿ. ನನ್ನನ್ನು ಈ ನರಲೋಕದ ಜನರು ಅಲ್ಲಮಪ್ರಭು ಅಂತಾ ಹೆಸರಿಟ್ಟು ಕರೆಯುತ್ತಾರೆ.

ದೂತಿ : ಏನು ಸ್ವಾಮಿ, ನೀವು ಅಲ್ಲಮಪ್ರಭು ಅನ್ನುವದೊಂದು ತಿಳಿಯಿತು. ಬಾಕಿಯದೇನೂ ತಿಳಿಯಲಿಲ್ಲ. ಜಂಗಮ ಅನ್ನುವದೊಂದು ಸ್ವಲ್ಪ ತಿಳಿದಾಂಗಾಯಿತು. ಈ ಮಾತಿನ ಮೇಲಿಂದ ನೀವು ಜಂಗಮರು ಆದಿರಿ ಅನ್ನುವಾಂಗ ಕಾಣತೈತೆ. ನೀವು ಜಂಗಮರು ಹೌದೇನ್ರೆಪಾ?

ಅಲ್ಲಮಪ್ರಭು : ಹೌದು ನಾನು ಜಂಗಮನಿದ್ದೇನೆ ನೋಡು.

ದೂತಿ : ನೀವು ಜಂಗಮರಾದರೆ ಈ ಎಡಗೈಯಾಗ ಜೋಳಿಗೆ ಹಾಕಿಕೊಂಡು ಬಲಗೈಯಾಗ ಬೆತ್ತವನ್ನು ಹಿಡಿದು, ಮನೆಮನೆಗೆ ಭಿಕ್ಷಾ ಅಂತ ಯಾಕೆ ಹೋಗುತ್ತೀರಪ್ಪಾ.

ಅಲ್ಲಮಪ್ರಭು : ಏನೇ ದೂತೆ, ಸಂಸಾರ ಎನ್ನುವಂಥ ಬಲೆಯೊಳಗೆ ಬಿದ್ದು, ಜ್ಞಾನವೆಲ್ಲವ ಮಣ್ಣುಗೂಡಿಸಿ, ಆಚಾರಗೆಟ್ಟು, ಅನಾಚಾರದಿಂದ ಭಿಕ್ಷೆ ಬೇಡಿ, ಹೊಟ್ಟೆ ತುಂಬಿಕೊಳ್ಳುವಂಥ ಹೀನ ಜಂಗಮನು ನಾನಲ್ಲ. ನಾನು ಎಂಥವನೆಂದರೆ, ಭಕ್ತಿ ಎನ್ನುವಂಥ ಜೋಳಿಗೆಯನ್ನು ಹಾಕಿ, ವೈರಾಗ್ಯ ಎನ್ನುವಂಥ ಬೆತ್ತವನ್ನು ಹಿಡಿದು, ಶಿವನ ಭಕ್ತರ ಹತ್ತಿರ ಹೋಗಿ ಶಿವಜ್ಞಾನ ಎನ್ನುವಂಥ ಭಿಕ್ಷೆ ಬೇಡಿ ತಂದು, ಶಿವಾಮೃತ ಎನ್ನುವಂಥ ದ್ರವ್ಯವನ್ನು ಊಟಾ ಮಾಡುವಂಥ ನಿರಾಭಾರಿ ಜಂಗಮ ನಾನು ಮತ್ತು ಶಿವನ ಭಕ್ತರಾದ ಶಿವಶರಣ-ಶರಣೆಯರ ಸತ್ವಪರೀಕ್ಷೆ ಮಾಡಿ ಅವರಿಗೆ ಸದ್ಗತಿಯನ್ನು ಕರುಣಿಸಿ ಉದ್ಧಾರ ಮಾಡುವಂಥ ಪರಮಗುರು ನಾನಿದ್ದೇನೆ.

ದೂತಿ : ಏನು? ನೀವು ಶಿವಶರಣರಿಗೆ ಸದ್ಗತಿಯನ್ನು ಕೊಡುವುದರ ಸಲುವಾಗಿ ಬಂದಿರೇನ್ರೀ? ಹಾಗಾದರೆ ಈ ಮೊದಲು ಯಾವ ಯಾವ ಶರಣರ ಉದ್ಧಾರ ಮಾಡೀರಿ ಹೇಳ್ರಿ.

ಅಲ್ಲಮಪ್ರಭು : ದಾಸಿ ಹೇಳುತ್ತೇನೆ ಕೇಳು.

ಪದ

(ಕೇಳವ್ವಾ ದೂತಿ ಹೇಳುವೆನೆಲ್ಲ ವಾರ್ತೆಯನು
ಭಕ್ತಿಯ ಶೀಲವ ಭಕ್ತಿಯ ಮೆಚ್ಚುತ
ಮುಕ್ತಿಯ ಕೊಡುವಂಥ ವೀರರನ್ನ
ಸನಕುನಂದನ ಸನತ್ಕುಮಾರನ
ಮನಸಿಜನ ಗೆದ್ದ ಪ್ರಭುವರ ॥

ಹರಿಹರ ಮಲುಹಣ ರೇವಣ ಶಂಕರ
ಮರುಳ ಪಂಡಿತ ಜಕಣಾಚಾರ್‍ಯರ
ಪರಶಿವ ಭಕ್ತಿಯ ನೋಡುತ ಅವರ
ಪರತರ ಮುಕ್ತಿಯ ಕೊಟ್ಟ ಪ್ರಭುವರ ನಾನು ॥

ಉರಿಗಣ್ಣಿನ ಸಿದ್ಧರಾಮ ಶಿವಯೋಗಿ
ಪೂರಾ ಕಂಡನು ಲಿಂಗದ ಮಹಿಮೆಯ
ಅರಿಕೆಯ ಮಾಡಿ ಕೊಟ್ಟು ತ್ರಿಗುಣ
ರೂಪವನು ಮೆರೆಯುವ ಪ್ರಭುವರ ನಾನು ॥

(ಮಾತು) : ಏನೇ, ಹಿಂದೆ ಸನಕುನಂದನ ಸನತ್ಕುಮಾರರೆನ್ನುವಂಥ ಋಷಿಗಳಿಗೆ ಜ್ಞಾನೋಪದೇಶ ಮಾಡಿ ಸಾಯುಜ್ಯ ಮುಕ್ತಿಯನು ಕೊಟ್ಟೆನು. ಮತ್ತು ಹರಿಹರ, ಮಲುಹಣ, ರೇವಣ, ಶಂಕರಾಚಾರ್‍ಯ ಇವರಲ್ಲದೇ ಇನ್ನೆಷ್ಟೋ ಜನ ಸದ್ಭಕ್ತರು ನನ್ನನ್ನು ಸ್ತುತಿಸಿ ಕೀರ್ತಿಸಿದ ಕಾರಣ ಅವರೆಲ್ಲರಿಗೂ ಜ್ಞಾನೋಪದೇಶಮಾಡಿ ಮೋಕ್ಷ ಪದವಿಯನ್ನು ಕೊಟ್ಟು ರಕ್ಷಣೆ ಮಾಡಿದೆನು. ದೂತಿ, ಆ ಸೊಲ್ಲಾಪುರದ ಸಿದ್ಧರಾಮ ಶಿವಯೋಗಿ ಇರುವನಲ್ಲಾ, ಅವನು ಶಿವನನ್ನು ಒಲಿಸಿ, ಅವನಿಂದ ಉರಿಗಣ್ಣನ್ನು ಪಡೆದುಕೊಂಡ. ಆ ಗರ್ವದಿಂದ ಯಾರ ದಾಕ್ಷಿಣ್ಯವಿಲ್ಲದೇ ಜ್ಞಾನಹೊಂದಿದ್ದರೆ ತೀರಿತು, ಬಾಕಿ ಕ್ರಿಯಾಜ್ಞಾನ ಸಾಮರಸ್ಯಗಳು ಯಾತಕ್ಕೆ ಬೇಕೆಂದು ಲಿಂಗವನ್ನು ಧರಿಸದೇ, ರುದ್ರಾಕ್ಷಿಯನ್ನು ಹಾಕಿಕೊಳ್ಳದೇ, ಹಣೆಯ ಮೇಲೆ ವಿಭೂತಿ ಹಚ್ಚಿಕೊಳ್ಳದೇ ಹಾಗೇ

ಕೋಣನ ಹಾಗೆ ಅಲೆದಾಡುತ್ತಿದ್ದ. ಆಗ ಅವನಿಗೆ ನಾನು ಹೋಗಿ ಭಕ್ತ ಜಂಗಮನಾದ ಮೇಲೆ ಕೊರಳಲ್ಲಿ ಲಿಂಗವಿರಬೇಕೆಂದು ಹೇಳಲು, ಅವನು ಸಿಟ್ಟಿಗೆದ್ದು ನನ್ನನ್ನು ಉರಿಗಣ್ಣಿನಿಂದ ನೋಡಿದ. ದೂತಿ, ಆ ಉರಿಗಣ್ಣು ನನಗೆಲ್ಲಿ ನಾಟಬೇಕು! ಆಗ ಏನೂ ಆಗಲಿಲ್ಲ. ಅವನು ನಾಚಿ ನನ್ನ ಪಾದಕ್ಕೆ ಬಿದ್ದನು. ನಾನು ಅವನಿಗೆ ಉಪದೇಶಮಾಡಿ, ಹಾದಿಗೆ ತಂದು ಕಲ್ಯಾಣಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಶೂನ್ಯ ಸಿಂಹಾಸನವನ್ನು ಸ್ಥಾಪಿಸಿ, ಚೆನ್ನಬಸವೇಶ್ವರನ ಕಡೆಯಿಂದ ಲಿಂಗಧಾರಣ ಮಾಡಿಸಿ, ಅಷ್ಟಾವರಣಗಳ ಪ್ರಭಾವ ತಿಳಿಸಿ, ಅವನನ್ನು ಉದ್ಧಾರ ಮಾಡಿದೆನಲ್ಲದೇ, ಈ ಜಗತ್ತನ್ನು ಉದ್ಧಾರ ಮಾಡುವುದರ ಸಲುವಾಗಿ ನಡಕಟ್ಟಿಕೊಂಡು ನಿಂತಿದ್ದೇನೆ. ಅಂದ ಮೇಲೆ ಯಾರ್‍ಯಾರು ಎಷ್ಟು ಮಂದಿ ಅಂತಾ ಹೇಳಲಿ! ಇಂಥಾ ಸಾವಿರಾರು ಮಂದಿಯನ್ನು ಉದ್ಧಾರಮಾಡಿ ಇಲ್ಲಿಗೆ ಬಂದಿದ್ದೇನೆ.

ದೂತಿ : ಹಾಗಾದರೆ ಇಲ್ಲಿಗೆ ಏತಕ್ಕೆ ಬಂದಿರುವಿರಿ?

ಅಲ್ಲಮಪ್ರಭು : ದಾಸಿ, ಹೇಳುತ್ತೇನೆ ಕೇಳು.

(ಪದ) ಉಡುತಡಿ ಪಟ್ಟಣದೊಳು
ಮಹಾದೇವಿ ಎಂಬುವಳು
ಕೇಳವ್ವ ದೂತಿ ಇರುವಳು ॥ ಪಲ್ಲ ॥

ದೇವಿಯು ನೋಡವ್ವ
ಒಬ್ಬ ಶಿವಶರಣೆಯವಳು
ಸಂಸಾರ ನೀಗಿ ಅವಳು
ಕೂಡಿ ವೈರಾಗ್ಯದೊಳು
ನಿತ್ಯ ಶಿವಧ್ಯಾನದೊಳು
ಇರುವಳು ಹಗಲಿರುಳು ॥ ೧ ॥

(ಮಾತು) : ಇಲ್ಲಿಗೆ ಏತಕ್ಕೆ ಬಂದೆನೆಂದರೆ ಉಡತಡಿ ಪಟ್ಟಣದೊಳಗೆ ಮಹಾದೇವಿ ಅನ್ನುವಂಥ ಶಿವಭಕ್ತೆಯೊಬ್ಬಳು ಇರುವಳಲ್ಲ. ಆಕೆಗಿಷ್ಟು ಭೆಟ್ಟಿಯಾಗಿ, ಆಕೆಯ ಶಿವಭಕ್ತಿಯನ್ನು ಪರೀಕ್ಷಿಸಿ ಆಕೆಯ ಕೀರ್ತಿಯನ್ನು ಸಮಸ್ತ ಜಗತ್ತಿಗೆ ಹರಡಿಸಬೇಕೆಂದು ಇಲ್ಲಿಗೆ ಬಂದಿದ್ದೇನೆ. ಈಗೀಂದೀಗ ಆ ಮಹಾದೇವಿಯ ಹತ್ತಿರ ಹೋಗುತ್ತೇವೆ.

ದೂತಿ : ಯಾಕ್ರಿ ಆಕಿ ನಿನಗೇನಾರ ಆಗಬೇಕೇನು? ಆಕೀಗೆ ಒಳ್ಳೇ ಕಾಳಜಿ ಮಾಡತೀರಲ್ಲಾ !

ಅಲ್ಲಮಪ್ರಭು : ಏನೇ, ಆ ಮಹಾದೇವಿಯೇ ಯಾಕೆ ಈ ಭೂಮಿಯ ಮೇಲೆ ಅದಾರಲ್ಲಾ ಅವರೆಲ್ಲರೂ ನನ್ನ ಬಳಗದವರು ನೋಡು.

ದೂತಿ : ಅದ್ಯಾಂಗೋ! ನೀನು ಅದೀಯಲ್ಲಾ ಒಂದು ಚೋಟು. ನಿನ್ನ ಬಳಗ ಇಷ್ಟೆಂದ ಮೇಲೆ, ನಿಮ್ಮ ಅಪ್ಪನ ಬಳಗ ಎಷ್ಟು ಐತೆ ಹೇಳರ ಹೇಳು.

ಅಲ್ಲಮಪ್ರಭು : ಏನೇ, ನನಗೆ ಎಲ್ಲಿಯ ತಂದೆ ತಾಯಿ! ನಾನೆ ಎಲ್ಲಾ ಲೋಕಕ್ಕೂ ತಾಯಿ ತಂದೆ. ನನ್ನಿಂದ ಈ ಜಗತ್ತು ನಿರ್ಮಾಣವಾಗಿದೆ. ಅಂದಮೇಲೆ ನನಗೆಲ್ಲಿ ತಾಯಿ–ತಂದೆ! ನನಗೆ ಯಾರೂ ಇಲ್ಲಾ ನೋಡು.

ದೂತಿ : ನಿನಗೆ ತಾಯಿ–ತಂದೆ ಯಾರೂ ಇಲ್ಲಾ!!

ಅಲ್ಲಮಪ್ರಭು : ನನಗೆ ಯಾರೂ ಇಲ್ಲಾ ದೂತಿ.

ದೂತಿ : ಹಾಗಾದರೆ ನೀವು ಹ್ಯಾಗೆ ಹುಟ್ಟಿದಿರಿ?

ಅಲ್ಲಮಪ್ರಭು : ಏನೇ, ನಾನು ಪರಮಾತ್ಮ. ನನಗೆ ಹುಟ್ಟು–ಸಾವು ಯಾವುದೂ ಇಲ್ಲಾ. ನಾನು ಶಿವಭಕ್ತರಿಗೆ ಪ್ರತ್ಯಕ್ಷನಾಗಬೇಕಂತ ಇಚ್ಛೆಯಾದಾಗ ನಾನು ಬೇಕಾದ ಸ್ವರೂಪಿಯಾಗುತ್ತೇನೆ ಮತ್ತು ಆ ಕೆಲಸ ತೀರಿದ ಮೇಲೆ ಮಾಯವಾಗುತ್ತೇನೆ. ನನಗೆ ಸಗುಣ–ನಿರ್ಗುಣ ಯಾವದೂ ಇಲ್ಲಾ. ಅಖಂಡ ಸಚ್ಚಿದಾನಂದನೇ ನಾನು ನೋಡು.

ದೂತಿ : ನೀವು ಅಖಂಡ ಅದೀರೇನ್ರೀ?

ಅಲ್ಲಮಪ್ರಭು : ಹೌದು ನಾನು ಅಖಂಡವಾಗಿದ್ದೇನೆ.

ದೂತಿ : ಹಾಗಾದರೆ ನೀವು ದೆವ್ವಗಿವ್ವ ಅದೀರೇನ್ರೀ?

ಅಲ್ಲಮಪ್ರಭು : ಏನೇ ದೂತಿ. ಹಾಗೆಲ್ಲಾ ನನ್ನ ಯೋಗ್ಯತೆ ಇಷ್ಟು ಇದೆಯಂತ ಈ ಲೋಕದ ಜನರಿಗೆ ಅಂತುಹತ್ತುವ ಹಾಗಿಲ್ಲಾ. ಅಂದ ಮೇಲೆ ನಿನ್ನಂಥವಳಿಗೆ ನನ್ನ ಸತ್ವ ಹೇಗೆ ತಿಳಿಯಬೇಕು. ಕೋಣನ ಮುಂದೆ ಕಿನ್ನೂರಿ ಬಾರಿಸಿದರೆ ಕೊಂಬು ಯಾವುದು ಕೊಳಗ ಯಾವುದು ಎನ್ನುವಂತೆ ನಿನಗೆ ಹೇಳುವುದೆಲ್ಲ ತಿಳಿಯುವ ಮಾತಲ್ಲ ಸಾಕು. ಸುಮ್ಮನೆ ಇರು.

ದೂತಿ : ಆಂ! ಏನಂದೀ, ನಾನು ಕೋಣನಹಾಗೆ ಕಾಣಿಸುತ್ತೇನೆಯೇ? ಈ ಜಗತ್ತನ್ನು ಅಲ್ಲಾಡಿಸುವೆನೆಂದು ನನ್ನನ್ನು ಅಳಗಾಡಿಸಲಿಕ್ಕೆ ಬಂದಿರುವೆಯಾ? ಹಂಗ ನಿನ್ನ ಬಡಿದು ಹಿಲಾಲಿನ್ಯಾಗ ಹಾಕಿ ಸುಟ್ಟು ಬಿಟ್ಟೇನು ತಿಳೀತಿಲ್ಲೋ?

ಅಲ್ಲಮಪ್ರಭು : ಏನೇ ಸುಟ್ಟುಗೊಂಡ ತಿನ್ನಲಿಕ್ಕೆ ನಾನೇನು ಗೊಂಜಾಳದತೆನೆ ಅಲ್ಲಾ. ಸಾಕು ಸುಮ್ಮನಿರು ನನಗೆ ವೇಳೆಯಾಗುತ್ತದೆ ಹೋಗುತ್ತೇನೆ.

ದೂತಿ : ಇನ್ನಿಷ್ಟು ಕೂಡ್ರಿ ಯಾಕ ಹೋಗುತ್ತೀರಿ? ಸುಮ್ಮಕ ಊರ ಸುದ್ದಿನೆಲ್ಲ ಮಾತನಾಡಿಕೋತ ಕುಂತಬಿಡೂನು.

ಅಲ್ಲಮಪ್ರಭು : ಛೇ! ಹುಚ್ಚಿ! ನಿನ್ನಂತೆ ನಾನೇನು ಹುಚ್ಚನಲ್ಲ. ವೇಳೆಯಾಗುತ್ತದೆ ಹೋಗುತ್ತೇನೆ. (ಪದ ಹೇಳುತ್ತ ನಿರ್ಗಮಿಸುವನು.)

ಪದ

ಪೋಗುವೆ ಮಹಾದೇವಿ ಬಳಿಗಿನ್ನ
ತಡೆಯದೇ ಎನ್ನಮನ ನೋಡದೇ ಅವಳನ್ನ
ಭಕ್ತಿಯ ನಿಧಿಯನ್ನು ‖ ಪಲ್ಲ ‖

ಭಕ್ತನೆಯನ್ನ ಸರಿ ಭಕ್ತ ಸುಖದ ಹರಿ
ಭಕ್ತನೆಯನ್ನ ದೊರಿ ಭಕ್ತನೆಯನ್ನ ಸರಿ ‖ ೧ ‖

ಶರಣೆಯ ಕೂಡಿ ಆಡಿ ಪರಿಪರಿ ಲೀಲಾಮಾಡಿ
ವರಭಕ್ತಿಯನು ನೋಡಿ ಬಲು ಹರುಷದಿಂದ ಕೂಡಿ ‖ ೨ ‖

ದೇವಗಿರಿಯ ಗ್ರಾಮ ದುರ್ಗಾದೇವಿಯ ಪ್ರೇಮ
ನಿತ್ಯವಿರಲಿ ನಮ್ಮ ಮೇಲೆ ಕರುಣ ‖ ೩ ‖

(ರಂಗದಲ್ಲಿ ಅಕ್ಕಮಹಾದೇವಿಯ ಪ್ರವೇಶ)

ಪದ

ಅಕ್ಕಮಹಾದೇವಿ : ಸ್ಮರಹರ ಶಂಕರ ಸ್ಮರಿಸುವೆ ಶ್ರೀಕರಾ
ಪೊರೆಯುವೆ ಭಕ್ತರ ಕರುಣಾಸಾಗರಾ
ಬಳಲುವೆ ಭವದೊಳು ತೊಳಲುವೆ ಕಷ್ಟದೊಳು
ಘಳಲನೇ ಕರುಣಿಸು ನೋಡಲೋ ಮಾಧವಾ
ನಳಿನ ಪಾದವಾ ಭಕ್ತಿಯಿಂದ ಭಜಿಪೆ ಸಲುಹುದೆನ್ನನು ‖ ೧ ‖

ವರಹುಲಿಚರ್ಮಾಂಬರಾ ಧರ್ಮದೇವರ
ತಿರುಗುವೆ ತ್ರಿಪುರವಾ ಉರದೇವ ಸತ್ವಾಸುರಾ
ಉರಗ ಭೂಷಣನೇ ಪರಮಪಾವನನೇ
ಕರುಣಿಸು ಎನ್ನನು ಮುದದಿಂದಾ ॥ ೨ ॥

ಹಾಲಕುಡಿಸಿದಾ ಸಣ್ಣ ಬಾಲಿಯ ನುಂಗಿದ ಜಾಣಾ
ಬಾಲನಕೊಂದು ಲೀಲೆಯ ತೋರಿದಾ
ನನ್ನೀ ಶೀಲವ ಕರುಣಿಸು ಬಾಲೆಯ ರಕ್ಷಿಸು ॥ ೩ ॥

(ಮಾತು) : ಆಹಾ!! ಪರಮಾತ್ಮನು ಈ ಮೃತ್ಯುಲೋಕದ ಮಾನವರ ಮೇಲೆ ಎಷ್ಟು ಕಾಳಜಿ ಇರುವನು ನೋಡ್ರಿ. ಇವರು ಸಂಸಾರದಲ್ಲಿ ಬಿದ್ದು ಒದ್ದಾಡುವುದನ್ನು ನೋಡಿ ಅಂತಃಕರುಣದಿಂದ ಇವರನ್ನು ಉದ್ಧಾರಮಾಡಬೇಕೆಂದು ಸತ್ವಃ ತಾವೇ ಮಾನವರ ರೂಪ ತೊಟ್ಟು ಗುರು ಅನಿಸಿಕೊಂಡು, ಎಲ್ಲರಿಗೂ ಜ್ಞಾನೋಪದೇಶ ಮಾಡಿ ಭವಸಾಗರವನ್ನು ದಾಟಿಸಿ ಮೋಕ್ಷ ಹೊಂದುವಂಥಾ ಹಾದಿ ತಿಳಿಸಿ ಅಷ್ಟಕ್ಕೇ ಬಿಟ್ಟನೇನು? ಬಿಡಲಿಲ್ಲಾ. ಮತ್ತೆ ಏನು ಮಾಡಿದನೆಂದರೆ ಮುಂದೆ ಬರುವ ಜನರು ಸಹಿತ ಇದರಂತೆ ನಡೆಯಲಿ. ಅವರ ಉದ್ಧಾರವಾಗಲೆಂದು ವೇದ ಶಾಸ್ತ್ರ ಪುರಾಣಗಳನ್ನು ನೋಡಿ, ಅದರಲ್ಲಿ ಹೇಳಿದಂತೆ ನಡೆದರೆ ಎಲ್ಲರಿಗೂ ಸದ್ಗತಿಯಾಗುತ್ತದೆ. ಇಂಥ ವೇದಶಾಸ್ತ್ರ ಪುರಾಣಗಳನ್ನು ಮಾಡಿ ಈ ದೇಶದ ತುಂಬೆಲ್ಲ ಹರವಿದರೂ ಅಷ್ಟಕ್ಕೇ ಬಿಟ್ಟನೇನು? ಬಿಡಲಿಲ್ಲ ಮತ್ತೆ ಏನು ಮಾಡಿದನೆಂದರೆ ಪಂಡಿತರು ಏನೊ ತಿಳಿಯದ ಮೂಢರಿಗೂ ಸಹ ಸರಿಯಾಗಿ ಮುಕ್ತಿಯಾಗಲೆಂದು ತಾನೇ ಈಶ್ವರಲಿಂಗ ಮೂರ್ತಿಯಾಗಿ ಈ ದೇಶದ ತುಂಬೆಲ್ಲ ವಾಸವಾಗಿದ್ದಾನೆ. ಇಂಥ ಈಶ್ವರಲಿಂಗ ಮೂರ್ತಿಯನ್ನು ಯಾರು ಭಕ್ತಿಯಿಂದ ಪೂಜಿ ಮಾಡುತ್ತಾರೋ ಅವರು ನಿಜವಾಗಿಯೂ ಮುಕ್ತಿಯನ್ನು ಹೊಂದುತ್ತಾರೆ. ಇದು ಸುಳ್ಳಲ್ಲ. ಇದು ಸುಳ್ಳು ಅಂದವರು ರೌರವ ನರಕಕ್ಕೆ ಗುರಿಯಾಗುತ್ತಾರೆ ಮತ್ತು ಸಚ್ಚಿದಾನಂದ ಸ್ವರೂಪನಾದ ಈಶ್ವರ ಲಿಂಗಮೂರ್ತಿಗೆ ಕಲ್ಲು ಅನ್ನಬಾರದು. ಯಾಕೆಂದರೆ ಆ ಕಲ್ಲು ದೇವಸ್ವರೂಪವಾಗಿರುತ್ತದೆ. ಭಕ್ತಿಯಿಂದ ಪೂಜೆ ಮಾಡಿದರೆ ಅವರಿಗೆ ಸಾಯುಜ್ಯ ಮುಕ್ತಿಯು ಲಭಿಸುತ್ತದೆ. ಅಂದಮೇಲೆ ಅಷ್ಟಶಂಭುಲಿಂಗ ಮೂರ್ತಿಯನ್ನು ಪೂಜೆಮಾಡಿರಿ. ಪೂಜೆಯ

ಫಲದಿಂದ ಸಂಸಾರದಲ್ಲಿ ಸುಖವುಂಟಾಗಿ ಕೊನೆಗೆ ಕೈಲಾಸ ಪದವಿ ಪಡೆದುಕೊಳ್ಳುತ್ತೀರಿ. ಅಂದರೆ ಈ ಮನುಷ್ಯ ಜನ್ಮದಲ್ಲಿ ಹುಟ್ಟಿದ್ದಕ್ಕೆ ಸಾರ್ಥಕವಾಗುತ್ತದೆ. ಇಂಥ ಶ್ರೇಷ್ಠ ಜನ್ಮವನ್ನು ವ್ಯರ್ಥ ಕಳೆಯಬೇಡಿರಿ. ಸಾಧು, ಶಿವಶರಣರ ಸೇವೆಮಾಡಿ ಜ್ಞಾನ ಸಂಪಾದಿಸಿ ಭಕ್ತಿಯಿಂದ ಮುಕ್ತಿಯನ್ನು ಹೊಂದಿರಿ. ಮತ್ತು ಈ ಶಂಭುಲಿಂಗನ ಪೂಜೆ ಮಾಡಿರಿ. ನಿಮಗೆಲ್ಲರಿಗೂ ಮೇಲಿಂದ ಮೇಲೆ ಶರಣು ಮಾಡಿ ಕೇಳಿಕೊಳ್ಳುತ್ತೇನೆ. ಅದರಂತೆ ನೀವಾದರೂ ಸನ್ಮಾರ್ಗದಿಂದ ನಡೆದುಕೊಳ್ಳಿರಿ.

ದೂತಿ : ಏನೇ ನೀನು ಯಾವಾಕಿ? ಈಗರ ಒಂದು ಬಂದು ಏನೇನರ ಹೇಳಿ ಹೋತು. ಈಗ ನೀನು ಬಂದು ಹಾಗೆ ಮಾಡಿರಿ! ಹೀಗೆ ಮಾಡಿರಿ ಅಂತಾ ಬಣ್ಣಾ ಸುರುವಾಕ ಹತ್ತೀದಿ. ಇಂತಾದನ್ನ ಹೇಳಿ ಯಾರನ್ನಾದರೂ ಗೊತ್ತಿಗೆ ಹಚ್ಚಬೇಕಂತ ಮಾಡಿರುವಿಯೇನು? ಹೇಳು ಮೊದಲು.

ಅಕ್ಕಮಹಾದೇವಿ : ಎನ್ನವ್ವ. ನಿನ್ನ ಹೆಸರೇನು?

ದೂತಿ : ಎನ್ನವ್ವ, ನನ್ನ ಹೆಸರು ದಾಸಿ. ಬೇಕಾದರ ದೂತಿ. ಇದರೊಳಗ ಬೇಕಾದ್ದು ಅನ್ನವ್ವಾ.

ಅಕ್ಕಮಹಾದೇವಿ : ಏನೇ, ನನ್ನ ಹೆಸರು ಯೋಗಿ. ಶರಣೆ, ಸನ್ಯಾಸಿ. ಇದು ಅಲ್ಲದೆ ನಿನ್ನಂತೆ ನನಗೆ ಶರಣದಾಸಿ, ಶರಣದಾಸಿ ಅಂತಾ ಕರೀತಾರ ನೋಡವ್ವ.

ದೂತಿ : ಇದರೊಳಗೆ ನನಗೇನೂ ತಿಳಿಯಲಿಲ್ಲ. ನೆಟ್ಟಗೆ ತಿಳಿಯುವ ಹಾಗೆ ಹೇಳss ನನ್ನ ಮಗಳ.

ಅಕ್ಕಮಹಾದೇವಿ : ನೀನು ಬಹಳ ಪಂಡಿತಳಿದ್ದಾಂಗಾಯಿತು ಬಿಡು. ನಿನಗೆ ತಿಳಿಯುವಂತೆ ಹೇಳುತ್ತೇನೆ ಕೇಳು.

ಪದ

ಕೇಳವ್ವ ಎನ್ನವಾರ್ತೆ ಸರಸಾಗಿ ಪೇಳುವೆ
ಸರ್ವವ ತಿಳಿಸುವೆ ಶಿವಾನುಭವಿಗಳ ಕೂಡಿದೆ
ಶಿವಧ್ಯಾನ ಸಂಪಾದನೆ ಮಾಡಿ ಶಿವನ ಕೊಂಡಾಡಿ
ಶಿವನಪಾಡಿ ಶಿವನೊಳು ಕೂಡಿನಾ ಪೋಗುವೆ ॥ ೧ ॥

ಹೊಲಸು ದೋಷ ಸಂಸಾರ ಕಂಡು
ಚಲದಲ್ಲಿ ಅದನ್ನ ಬಿಟ್ಟೇನ ನಾನು
ಹೊಂದಿದೆ ಘನತರ ವೈರಾಗ್ಯವನಾ ॥ ೨ ॥

ಹುಟ್ಟು ಸಾವು ಎಂಬ ಕಲ್ಪನೆ ಹರಿದು
ಕೆಟ್ಟ ಮಾಯವ ಕುಟ್ಟಿ ಹೊಡೆದು
ಸೃಷ್ಟಿಕರ್ತನ ಶ್ರೇಷ್ಠ ಶರಣವೆ
ನಿಷ್ಠೆಯಿಂದ ಮನಮುಟ್ಟಿ ಭಜಿಸುವೆ ॥ ೩ ॥

(ಮಾತು) : ಏನೇ ದಾಸಿ, ಈ ಮಾಯಾ ಸಂಸಾರದೊಳಗೆ ಏನು ಅದೆ? ಕಣ್ಣಿಗೆ ಇದು ಬಹಳ ಚಂದ ಕಾಣುತ್ತದೆ. ಪರಂತು ಇದರೊಳಗೆ ಹೊಕ್ಕರೆ ಮಾತ್ರ ಸರ್ವನಾಶವಾಗುತ್ತದೆ. ಹ್ಯಾಗೆಂದರೆ ಅದು ಒಂದು ದೀಪ ಅಂತಾ ತಿಳಿ. ಹಣ್ಣೆಂದು ಭಾವಿಸಿ ಅದನ್ನು ತಿನ್ನಬೇಕೆಂದು ಹಾರ್‍ಯಾಡುವ ಹುಳುಗಳೆಲ್ಲ ಆ ದೀಪಕ್ಕೆ ಬಿದ್ದು ಸುಟ್ಟುಕೊಂಡು ಹೇಗೆ ಸಾಯುವವೋ, ಅದರಂತೆ ಸಂಸಾರ ಅನ್ನುವಂತಹ ದೀಪವು ಮಾನವ ಜನ್ಮಕ್ಕೆ ಚಂದಕಂಡು ಅದರೊಳಗೆ ಬಿದ್ದು ಜನ್ಮ ಜನ್ಮಾಂತರಗಳಲ್ಲಿ ಸಹ ಅಳತೆಗೆಟ್ಟು ತಾಪಹೊಂದಿ ಒದ್ದಾಡುತ್ತಾರೆ. ಇಷ್ಟಾದರೂ ಪಾಪ ತೀರುವುದಿಲ್ಲ. ಈ ಸಂಸಾರವನ್ನು ದಾಟಲಾಗುವುದಿಲ್ಲ. ಸಂಸಾರ ವ್ಯಾಮೋಹ ಎಲ್ಲರನ್ನೂ ಹಾಳುಮಾಡಿ ನುಗ್ಗು ಮಾಡಿಬಿಡುತ್ತದೆ. ಇದನ್ನೆಲ್ಲ ವಿಚಾರ ಮಾಡಿದರೆ ಇಡೀ ಪ್ರಪಂಚವೇ ಒಂದು ಕೆಟ್ಟ ದೀಪ. ಇದರಲ್ಲಿ ಬಿದ್ದರೆ ನಮ್ಮ ಸ್ಥಿತಿ ನೆಟ್ಟಗಾಗುವುದಿಲ್ಲ. ಅಂತಾ ತಿಳಿದು ಈ ಸಂಸಾರವನ್ನು ದೂರಮಾಡಿ ಬಿಟ್ಟಿದ್ದೇನೆ. ಇದನ್ನು ಬಿಟ್ಟ ಕಾರಣ ವೈರಾಗ್ಯಹೊಂದಿ ವಿರಾಗಿಣಿ, ಸಂನ್ಯಾಸಿಯಾಗಿ ಶಿವನೇ ಗತಿ, ಶಿವನನ್ನು ಬಿಟ್ಟು ಯಾವುದೂ ಇಲ್ಲಾ ಅಂತಾ ತಿಳಿದು ಶಿವಧ್ಯಾನ ಪಡಕೊಂಡು, ನನ್ನ ಮನಸ್ಸನ್ನು ಶಿವನ ಪಾದದಲ್ಲಿ ಲೀನ ಮಾಡಿದ ಕಾರಣ ನನಗೆ ಶಿವಯೋಗಿ ಎನ್ನುತ್ತಾರೆ. ಇದು ಅಲ್ಲದೇ ಶಿವಸ್ವರೂಪರಾದಂಥ ಶಿವಶರಣರು ಅದಾರಲ್ಲಾ! ಅಂಥಾ ಶಿವಶರಣರ ಪಾದಸೇವಾ ಮಾಡುವ ಕಾರಣ ಅನುಕರಣೆ ಶರಣದಾಸಿ ಅಂತಾ ಕರೆಯುತ್ತಾರೆ. ಈ ಜನರು ನನಗೆ ಮಹಾದೇವಿ ಅಂತ ಕರೀತಾರ ನೋಡವ್ವ ದೂತಿ.

ದೂತಿ : ಏನss ನನ ಮಗಳss. ಮಹಾದೇವಿ ನಿನ್ನ ಬುಡ ಈಗ ಗೊತ್ತಾತು ಬಿಡು. ನೀನು ಸಂನ್ಯಾಸಿ ಅಂತೀದಿ ಹಾಗಾದರ ಮನೆಯಲ್ಲಿ ಏಕೆ

ಇರುವೆ. ಮೈತುಂಬ ಬೂದಿ ಬಡಕೊಂಡು, ಕೈಯಾಗ ಕುಂಬಳ ಸೊರಟಿ ಹಿಡಕೊಂಡು, ಕ್ಯಾವಿ ಅರವಿ ಹೊತಗೊಂಡು, ಬಾವಾಗೋಳ ಹಿಂಡಿನ್ಯಾಗ ಕೂಡಿಕೊಂಡು ಜೈ ಸೀತಾರಾಮ ಅಂತಾ ಹೋಗಬಾರದs ಇಲ್ಲಿ ಯಾತಕ ಬಂದೀ?

ಅಕ್ಕಮಹಾದೇವಿ : ಏನೇ, ಬೂದಿ ಬಡಕೊಂಡು, ಕ್ಯಾವಿ ಉಟಕೊಂಡು ಕುಂಬಳ ಸೊರಟಿ ಹಿಡಿದು ಸುಳ್ಳೇ ದೇಶ ದೇಶ ಸುತ್ತುವವರೆಲ್ಲಾ ಸಂನ್ಯಾಸಿಗಳಲ್ಲಾ.

ದೂತಿ : ಹಾಗಾದರೆ ಸಂನ್ಯಾಸಿಗಳೆಂದರೆ ಯಾರು ಹೇಳವ್ವ ಮಹಾದೇವಿ.

ಅಕ್ಕಮಹಾದೇವಿ : ಸಂನ್ಯಾಸಿಗಳು ಯಾರೆಂದರೆ,

(ಮಾತು) : ಈ ಇಡೀ ಪ್ರಪಂಚದ ಪ್ರಾಣಿಗಳೆಂದರೆ ಇರುವೆ, ಕೀಟಕ, ಇಂಥ ಕ್ಷುದ್ರ ಜೀವಿಗಳಲ್ಲಿ ಸಹಿತ ಸಂಸಾರ ಸುಖವನ್ನು ನೋಡಿದರೆ, ನರಕ ನೋಡಿದರೆ ಮನಸ್ಸಿಗೆ ಎಷ್ಟು ಅಸಹ್ಯವಾಗುತ್ತದೆಯೋ ಅಷ್ಟು ಅನರ್ಥವಾಗುತ್ತದೆ. ಅಷ್ಟು ಅಸಹ್ಯವೂ ಮೂಡಿ ಬಿಟ್ಟರೆ ವೈರಾಗ್ಯ ಬಂತೆಂದು ತಿಳಿಯಬೇಕು. ಇಂಥ ವೈರಾಗ್ಯ ಹೊಂದುವ ಶಕ್ತಿ ಯಾರಿಗೆ ಬರುತ್ತದೆಯೋ ಅವರಿಗಷ್ಟೇ ಸಂನ್ಯಾಸಿ ಅನ್ನಬೇಕು. ಅದರಂತೆ ನನ್ನಲ್ಲಿ ಅಂಥ ಶಕ್ತಿ ಇದ್ದಲ್ಲಿಯೇ ನನಗೆ ಸಂನ್ಯಾಸಿ ಅನ್ನುತ್ತಾರೆ. ನಾನು ಮನೆ ಹಿಡಿದುಕೊಂಡಿದ್ದರೂ ಸಂಸಾರಿಕಳಲ್ಲ ನೋಡು.

ದೂತಿ : ನೀನು ಸಂಸಾರಿಕಳಲ್ಲ ಅಂತೀದಿs ಮನೆಯಲ್ಲಿ ನಿಮ್ಮ ಅಪ್ಪ, ತಮ್ಮ ಅದಾನ. ನೀನೂ ಉಣತೀದಿ. ಅಡ್ಡಾಡತಿ, ಕೆಲಸ-ಬೊಗಸಿ ಮಾಡತಿ. ಇಷ್ಟೆಲ್ಲಾ ಹೇಳಿದ್ದು ನೀನು ಬಾವಾನಂಗ ಯಾವಗಾಗತೀಯವ್ವಾ.

ಅಕ್ಕಮಹಾದೇವಿ : ಹಾಗಲ್ಲಾ ದೂತಿ. ಜನಕರಾಯನ ಕಥೆಯನ್ನು ಕೇಳಿರುವಿಯೋ ಇಲ್ಲವೋ.

ದೂತಿ : ಕೇಳಿಲ್ಲಾ, ಹೇಳವ್ವಾ

ಅಕ್ಕಮಹಾದೇವಿ : ಅವನಿಗೆ ಸಾವಿರ ಹೆಂಡಂದಿರಿದ್ದರು. ಹೆಂಡಿರ ಸಂಗಡ ಪ್ರಪಂಚಮಾಡಿ ಋಷಿ ಅಂತ ಹೇಗೆ ಅನಿಸಿಕೊಂಡ. ಅದರಂತೆ ನಾನೂ ನೋಡು. ನಿಮ್ಮಂಥವರಿಗೆ ಪ್ರಾಪಂಚಿಕಳ ಹಾಗೆ ಕಂಡರೂ ವಿರಕ್ತಳಿದ್ದೇನೆ ನೋಡವ್ವಾ.

ದೂತಿ : ಏನೇನೋ ಹೇಳತಿ, ಯಾವ ರಾಜನಂತೆ ಅವನಿಗೆ ಸಾವಿರ ಮಂದಿ ಹೆಂಡಂದಿರಿದ್ದರಂತೆ, ಮೇಲಾಗಿ ರಾಜಕಾರಭಾರವನ್ನೂ ಮಾಡುತ್ತಿದ್ದನಂತೆ. ಇಷ್ಟೆಲ್ಲಾ ಇದ್ದರೂ ಋಷಿ ಅಂತ. ಅದೆಂತಾ ಋಷಿ. ಇಂಥ ಬಲಾಟಗಿರಿ ಯಾರ ಮುಂದೆ ಹೇಳತಿ. ತೆಗೆದು ಕಪಾಳಕ್ಕೆ ಹೊಡೆದೇನು. ಕರೇ ಕರೇ ಹೇಳವ್ವಾ.

ಅಕ್ಕಮಹಾದೇವಿ : ಏನೇ, ನಾನು ಸುಳ್ಳು ಹೇಳುವದಿಲ್ಲಾ. ಜನಕರಾಜನಿಗೆ ಸಾವಿರಮಂದಿ ಹೆಂಡಂದಿರಿದ್ದರು. ಅವನು ಅವರನ್ನು ಆಳುತ್ತಿದ್ದ. ರಾಜ್ಯಭಾರ ಮಾಡುತ್ತಿದ್ದ. ಅಂದ ಮೇಲೆ ಅವನು ಋಷಿ ಅಲ್ಲಾ ಅಂತೀಯಲ್ಲಾ. ಅವನು ಸಂಸಾರ ಮಾಡಿದರೇನಾಯಿತು. ಹಾಗೇನೂ ತಿಳಿದುಕೊಳ್ಳಬೇಡಾ. ಈಗ ನೋಡು, ರಾಡಿಯೊಳಗ ಒಂದು ಹುಳು ಅಡ್ಡಾಡುತ್ತಿರುವುದು. ಅದನ್ನು ಕುಂಬಾರ ಹುಳು ಎನ್ನುವರು. ನೋಡಿರುವಿಯೋ ಇಲ್ಲವೋ.

ದೂತಿ : ನೋಡಿದ್ದೇನೆ ಹೇಳವ್ವಾ.

ಅಕ್ಕಮಹಾದೇವಿ : ಹಾಗಾದರೆ ಅದು ಯಾವತ್ತೂ ಎಲ್ಲಿ ಓಡಾಡುತ್ತದೆ ಮತ್ತು ಎಲ್ಲಿ ಹೊರಳಾಡುತ್ತದೆ ಹೇಳು?

ದೂತಿ : ಅದು ಹೊರಳಾಡುವುದು ರಾತ್ರಿ–ಹಗಲು ಬರೇ ರಾಡಿಯೊಳಗ ನೋಡವ್ವಾ.

ಅಕ್ಕಮಹಾದೇವಿ : ಹಾಗಾದರೆ ಅದು ರಾಡಿಯನ್ನು ತನ್ನ ಮೈಗೆ ಸ್ವಲ್ಪಾದರೂ ಹಚ್ಚಿಕೊಳ್ಳತ್ತದೇನು?

ದೂತಿ : ಇಲ್ಲಾ ನೋಡು, ಅದು ಸ್ವಲ್ಪಾದರೂ ಮೈಗೆ ಹಚ್ಚಿಕೊಂಡಿರುವದಿಲ್ಲಾ.

ಅಕ್ಕಮಹಾದೇವಿ : ಹಾಗಾದರೆ ಅದರಂತೆ ನೋಡು ಆ ಜನಕರಾಜನು ಸಂಸಾರ ಎನ್ನುವ ರಾಡಿಯೊಳಗೆ ಹೊರಳಾಡಿ ತನ್ನ ಮೈಗೆ ಸ್ವಲ್ಪಾದರೂ ಹಚ್ಚಿಕೊಳ್ಳದೇ ರಾಜಋಷಿ ಅನಿಸಿಕೊಂಡ. ಮುಕ್ತಿಸಾಮ್ರಾಜ್ಯ ಹೊಂದಿ, ಅದರಂತೆ ನಾನಾದರೂ ಪ್ರಪಂಚದೊಳಗೆ ಇದ್ದರೂ ಒಂದಿಷ್ಟೂ ಹಚ್ಚಿಕೊಂಡಿಲ್ಲ ನೋಡವ್ವ.

ದೂತಿ : ಹೌದು ಬಿಡು ನಮ್ಮವ್ವ, ನೀನು ವಿರಕ್ತಳೆನ್ನುವುದು ಈಗ ತಿಳಿದಂಗಾತು. ಹೀಗೆ ಒಡೆದು ಹೇಳಿದರೆ ತಿಳದೀತವ್ವ, ಹಂಗ, ಓದಿಕಿ ಮಾಡಿದಂಗ, ಅರೆ ಅಲ್ಲಾ ಬಿಸಮಿಲ್ಲಾ ಅಂತ ಹೇಳಿದರೆ ನಮ್ಮಂಥ ಕೌದಿ ತಿನ್ನುವವರಿಗೆ

ಹ್ಯಾಂಗ ತಿಳದೀತವ್ವ. ಇದೆಲ್ಲ ಇರಲಿ ಮನೀಬಿಟ್ಟು ಈ ಅಗಸಿ ತನಕ ಯಾಕ ಬಂದಿ ಹೇಳವ್ವಾ.

ಅಕ್ಕಮಹಾದೇವಿ : ಏನೇ ದೂತಿ, ಇಲ್ಲಿಗೆ ಯಾತಕ್ಕೆ ಬಂದೆನೆಂದರೆ ಹೇಳುತ್ತೇನೆ ಕೇಳು.

ಪದ

(ಬಾರನ್ಯಾಕೋ ಎನ್ನಯ ಸಹೋದರಾ ಶಂಕರಾ
ಅವನ ನೋಡಲಿಕ್ಕೆ ಬಂದೇ ನಾ ಕಾತುರಾ ಕೇಳೆನ್ನ
ಮಜಕೂರಾ ॥ ಪಲ್ಲ ॥

ದಿನಾದಿನಾ ಲಗುಬೇಗ ಬರುತ್ತಿದ್ದನವ್ವ
ಹುಡುಗಾ ಯಾಕ ಬರಲಿಲ್ಲಾ ಈಗ
ಮನದೊಳಗೆ ಬೆಂದು ಗಾಬರಿಯಾಗಿ
ಬಂದೆ ನಾನು ತಿಳಿನೀನು ಕೇಳೆನ್ನ ಮಜಕೂರಾ ॥ ೧ ॥

(ಮಾತು) : ಏನವ್ವ, ಇಲ್ಲಿಗೆ ಯಾತಕ್ಕೆ ಬಂದೆನೆಂದರೆ ನನ್ನ ತಮ್ಮ ಶಂಕರ ಎನ್ನುವ ಹುಡುಗನು ಈಶ್ವರನ ಪೂಜೆಗೆ ಹೂವು ತರುತ್ತೇನೆಂದು ಹೋದವನು ಬಹಳ ಹೊತ್ತಾದರೂ ಬರಲಿಲ್ಲ. ದೇವರ ಪೂಜೆಗೆ ವೇಳೆಯು ಮಿರುತ್ತಬಂತು. ಹುಡುಗಾ ಏಕೆ ಬರಲಿಲ್ಲ ಅಂತಾ ಅವನನ್ನು ನೋಡುತ್ತ ಇಲ್ಲೀತನಕ ಬಂದೆ ನೋಡವ್ವಾ.

ದೂತಿ : ನಿಮ್ಮ ಹುಡುಗನನ್ನು ನೋಡಲಿಕ್ಕೆ ಬಂದೇನವ್ವಾ ಅದೆಂತಾದ್ಯೆತೋ ನಮ್ಮವ್ವಾ. ಇಲ್ಲೇ ಎಲ್ಲರ ಬರತೈತೇನ ನೋಡತೀನಿ ತಡಿಯವ್ವಾ. (ನೋಡಿದಂತೆ ಮಾಡುವಳು.) ಏನೇ ತಂಗಿ ಯಾವದೋ ಒಂದು ಗಿಡ್ಡಪುಟಾಣಿ ಬರಾಕ ಹತ್ತೈತಿ. ಅದೇ ಹೌದೇನು ನೋಡವ್ವ?

ಅಕ್ಕಮಹಾದೇವಿ : ಯಾವ ಕಡೆ ಅದಾನ ದಾಸಿ.

ದೂತಿ : ಅದು ಅಲ್ಲೇ ಹಾಸಿ ಬರತೈತೆ ನೋಡು ನಮ್ಮವ್ವ.

ಅಕ್ಕಮಹಾದೇವಿ : ಹೌದು ದಾಸಿ, ಅವನೇ ನೋಡು.

ದೂತಿ : ಏನೇ ಅದು ನಿಮ್ಮ ತಮ್ಮ ಒಂದು ದೊಡ್ಡ ಓತಿಕಾಟ ಆಗೇತಿ. ಜೀವನಾರ ಎಲ್ಲಿ ಹಿಡದೈತ್ಯೆ ತಂಗಿ? ಏನ ಆಕಾರ. ನಿಮ್ಮ ಅಪ್ಪ ಇದನ್ನು ನಿದ್ದಿಗಿದ್ದಿಗಣ್ಣಿನ್ಯಾಗ ಮಾಡಿದ್ನೇನು?

ಅಕ್ಕಮಹಾದೇವಿ : ಏನೇ ಹುಚ್ಚಿ, ನನ್ನ ಕೂಡಾ ಚೇಷ್ಟೆ ಮಾಡುತ್ತೀಯಾ? ಸಾಕು ಸುಮ್ಮನಿರು.

(ಶಂಕರ ಪ್ರವೇಶ. ಅಕ್ಕಮಹಾದೇವಿಯನ್ನು ನೋಡಿ)

ಶಂಕರ : ಇಲ್ಲಿಗ್ಯಾಕ ಬಂದೆವ್ವ ಸಹೋದರಿ.

ಅಕ್ಕಮಹಾದೇವಿ : ಲಿಂಗಪೂಜೆಯ ಹೊತ್ತು ಮೀರುತ್ತ ಬಂತು. ಆದ್ದರಿಂದ ಇಲ್ಲಿಗೆ ಬಂದೆ ನಾನು. ಏನಪ್ಪಾ ನೀನು ಹೋದವನು ಅತ್ತ ಹೋದಿ. ನಿನ್ನ ನೋಡುತ್ತ ಇಲ್ಲೀತನಕ ಬಂದೆ ನೋಡಪ್ಪ. ಇಷ್ಟು ತಡ ಯಾಕೆ ಮಾಡಿದೆ ನೋಡಪ್ಪಾ. ಯಾರ ಕೂಡ ಹರಟಿ ಹೊಡಕೋತ ನಿಂತಿದ್ದಿ. ದೇವರ ಪೂಜೆಯ ವೇಳೆ ಮೀರುತ್ತ ಬಂತು ನಿನಗೆ ಎಚ್ಚರ ಆಗಲಿಲ್ಲವೇನಪ್ಪ?

ಶಂಕರ : ಬಿಡವ್ವ ನಿನ್ನ ಪೂಜೆಗಿಷ್ಟು ಬೆಂಕಿ ಹಚ್ಚಿತು. ನಾನು ಸತ್ತು ಹೋಗುತ್ತಿದ್ದೆ. ನಾನು ಬೆರಕಿ ಅಂತ ಪಾರಾಗಿ ಬಂದೆ ನೋಡಕ್ಕಾ.

ಅಕ್ಕಮಹಾದೇವಿ : ಅದೇನು ಆಯಿತಪ್ಪ ಅಂತಾದ್ದು.

ಶಂಕರ : ಏನೆಂದರಽ ದಾರಿಯಲ್ಲಿ ಬರುವಾಗ ಎರಡು ಓತಿಕಾಟಾ ಒಂದಕ್ಕೊಂದು ಕಡದಾಡಲಿಕ್ಕೆ ಹತ್ತಿದ್ದವು. ಅವುಗಳನ್ನು ಬಿಡಸಬೇಕಂತ ತುಸು ಬೆದರಿಸಿದೆನವ್ವಾ. ಅವೆರಡೂ ತಿರುಗಿ ನನ್ನನೇ ಬೆನ್ನು ಹತ್ತಬೇಕೆನವ್ವಾ? ಅವು ನನ್ನನ್ನು ಬಿಡುವುದಿಲ್ಲ ಅಂತ ತಿಳಿದು ಹಿಂದಕ್ಕೆ ಹೊಳ್ಳಿದವನೇ ಓಡಿಹೋಗಿ ಒಂದು ಕಡ್ಲಿಗಿಡದ ಬುಡಕ ಅಡಗಿಕೊಂಡೆ. ಅವು ನನ್ನನ್ನು ಹುಡುಕಿ ಬೇಸತ್ತು ಅತ್ತ ಹೋದವು. ನಾನು ಮೆಲ್ಲಕ ಸಪ್ಪಳ ಮಾಡದೇ ಬಂದೆ ನೋಡು ಅಕ್ಕವ್ವಾ.

ಅಕ್ಕಮಹಾದೇವಿ : ಹೌದು ಬಿಡಪ್ಪ. ನೀನು ಬಂಟನಿದ್ದಾಂಗಾಯಿತು. ಇನ್ನು ಮನಿಗೆ ಹೋಗಿ ಪರಮಾತ್ಮನ ಪೂಜೆಗೆ ಕೂಡ್ರುವೆ ನಡೆಯಪ್ಪ.

ಶಂಕರ : ನಡೆಯಕ್ಕಾ ಹೋಗೋಣ.

ಅಕ್ಕಮಹಾದೇವಿ : ಪೂಜೆಯ ಸಾಮಗ್ರಿಗಳನ್ನು ತೆಗೆದುಕೊಂಡು ಬಾ.

ಶಂಕರ : ತಂದಿದ್ದೇನೆ ನಡೆಯಕ್ಕಾ.

(ಅಕ್ಕಮಹಾದೇವಿಯು ಈಶ್ವರನ ಪೂಜೆಗೆ ಕೂಡುವಳು.)

ಅಕ್ಕಮಹಾದೇವಿ : **ಪದ**

ಮುದದಿಂದ ರಕ್ಷಿಸು ಸರ್ವೇಶಾ
ಹಿಂದೆ ಮಹಾ ಮಹಾ ಋಷಿಗಳು ಸುಖಪಡದಾರೋ
ಈಗಿನ ಜನ ಪರಮಾತ್ಮನ ಮೆರೆತು
ಸುಖಾ ಬರಲೆಂತ ಆಶೆ ಪಡತಾರೋ
ದುಷ್ಟ ಕಾಲಕ ಮಳೆ ಬೆಳೆ ಹೋಗಿ
ಕಾಲರಾ, ಪ್ಲೇಗು ಬ್ಯಾನಿ ಹಬ್ಬತಾವೋ
ಕಾಲ ಬದಲಾತು ಜನರಿಗೆ ಬುದ್ಧಿ ಬರಲಿಲ್ಲೋ ॥

(ಮಾತು) ಆಹಾ! ಈಶ್ವರ ಪೂಜೆಗಿಂತ ಹೆಚ್ಚಿನ ಸುಖ ಯಾವದೂ ಇಲ್ಲಾ. ಆದ್ದರಿಂದಲೇ ಹಿಂದೆ ಮಹಾನ್ ಮಹಾನ್ ಋಷಿಗಳು, ಸತ್ಪುರುಷರು ಸದಾ ಪರಮಾತ್ಮನನ್ನು ಪೂಜಿಸಿ, ಸುಖದೊಳಗೆ ಓಲಾಡುತ್ತಿದ್ದರು. ಈಗಿನ ಜನರ ನೋಡಿರಿ, ಒಂದು ದಿವಸ ಬಿಟ್ಟು ಎರಡು ದಿವಸ ಇರು ಎಂದರೆ ಇರುತ್ತಾರೆ. ಕರೆದು ದೇವರ ಪೂಜೆ ಮಾಡೆಂದರೆ ಜೀವ ಹೋಗುವಂತೆ ಮಾಡುತ್ತಾರೆ. ಅಂದಮೇಲೆ ಪರಮಾತ್ಮನು ಇವರಿಗೆ ಸುಖವೆಂದರೂ ಕೊಡದೆ ಮಳೆ, ಬೆಳೆ ಇಲ್ಲದೇ ಬರಗಾಲ ಬಿದ್ದು ಅನ್ನ, ನೀರು, ಅರಿವೆಗೂ ಪರಿಯಾಗಿ ಒದ್ದಾಡುತ್ತ, ಪ್ಲೇಗು, ಕಾಲರಾ ಮುಂತಾದವುಗಳಿಂದಾ ಯಾವಾಗ ಬೇಕು ಆವಾಗ ಸಾಯುವ ಅವಸ್ಥೆ ಇಟ್ಟು ಬಿಟ್ಟಿದ್ದಾನೆ. ಇಷ್ಟಾದರೂ ಜನರಿಗೆ ಅರಿವು ಇಲ್ಲಾ. ಇದೆಲ್ಲಾ ಇರಲಿ. ಈಗ ನಾನು ಜೀವಾತ್ಮನನ್ನು ಪರಮಾತ್ಮನಲ್ಲಿ ಲೀನಗೊಳಿಸಿ ತದೇಕ ಚಿತ್ತದಿಂದ ಕುಳಿತುಕೊಳ್ಳುತ್ತೇನೆ.

(ಪ್ರಬ್ರಹ್ಮ ಚಿಂತನೆಯಲ್ಲಿ ಮಗ್ನಳಾಗುವಳು.)

(ಅಲ್ಲಿಗೆ ಅಲ್ಲಮಪಪ್ರಭುವಿನ ಆಗಮನ.)

ಪದ

ಅಲ್ಲಮಪ್ರಭು : ಭಕ್ತೋದ್ಧಾರಕನಾಗಿರುವೆ, ಜಗವ ಪಾಲಿಸುವಾ
ನಿರಂಜನಸ್ವರೂಪ ನಾನಾಗಿರುವೆ
ಶಿವಭಕ್ತರನ ಉದ್ಧಾರಗೈಯುವೆ ಜಗ...
ಸಚ್ಚಿದಾನಂದ ಸ್ವರೂಪ ನಾನಾಗಿರುವೆ ।

(ಹಾಡುತ್ತ ಬಂದ ಅಲ್ಲಮಪ್ರಭು ಅಕ್ಕಮಹಾದೇವಿಯ...ನ್ನು ನೋಡಿ)

(ಮಾತು) : ಓಹೋ! ಈ ಮಹಾದೇವಿಯು ನನ್ನ ಸಚ್ಚಿದಾನಂದ ಸ್ವರೂಪನಾದ ಈಶ್ವರಲಿಂಗಧ್ಯಾನದೊಳಗೆ ಪದ್ಮಾಸನ ಹಾಕಿಕೊಂಡು ಯೋಗಸಮಾಧಿಯಲ್ಲಿ ಕುಳಿತುಬಿಟ್ಟಿರುವಳಲ್ಲಾ. ಶಹಭಾಷ್!! ಶಹಭಾಷ್!! ಮಹಾದೇವಿ. ಇದ್ದರೆ ಇಂಥ ಭಕ್ತಿವಾಸಿಯಿರಬೇಕು. ಕೇವಲ ಡಾಂಭಿಕ ಪೂಜೆ ಮಾಡುವವರನ್ನು ತೆಗೆದುಕೊಂಡು ಏನು ಮಾಡಬೇಕು? ಭಕ್ತಿ, ಜ್ಞಾನ, ವೈರಾಗ್ಯ ಇವು ಮೂರರಿಂದ ಯಾರು ಸಂಪನ್ನರಿರುತ್ತಾರೋ ಅಂಥವರಿಗೆ ಸರ್ವೇಶನಾದ ನಾನು ಅವರ ಆಳಿನ ಆಳಾಗಿ ದುಡಿಯುತ್ತೇನೆ. ಆದುದರಿಂದಲೇ ಗುಡ್ಡವ್ವೆ ಎಂಬಾಕಿಗೆ ಮಣ್ಣು ಹೊರು ಎಂದು ರಾಜರ ಬುಟ್ಟಿ ಬಂದಾಗ, ನಾನು ಆಕೆಯ ಆಳಾಗಿ ಮಣ್ಣು ಹೊತ್ತು ಆಕೆಯ ಭಕ್ತಿಗೆ ತಕ್ಕ ಫಲವನ್ನು ಕೊಟ್ಟು ಬಂದೆನು. ಮತ್ತು ಸೌಂದರನೆಂಬ ಅಣ್ಣನ ಕೂಡ ಪರಿವೆ ಎಂಬ ಪಾತರದಾಕಿ ಮನೆಗೆ ಓಡ್ಯಾಡಿದೆನು. ಮತ್ತು ಕೈಯಲ್ಲಿ ಬಡಿಗಿ ಹಿಡಿದು ಬಾಣಾಸುರನ ಬಾಗಿಲ ಕಾಯ್ದೆನು. ಭಕ್ತರ ಪ್ರಾಣೋಭಯವೆಂದರೆ ಭಕ್ತರು ನನ್ನ ಜೀವ ಅಂತಾ ತಿಳಿದು ಅವರ ಸೇವೆ ಮಾಡುತ್ತೇನೆ. ಈಗ ಈ ಅಕ್ಕಮಹಾದೇವಿಗೆ ಪ್ರತ್ಯಕ್ಷವಾಗಬೇಕಂತ ಇಲ್ಲಿಗೆ ಬಂದಿರುವೆನು. ಈಗ ಇಲ್ಲಿ ಏನು ಮಾಡುತ್ತೇನೆಂದರೆ,

ಪದ

ದೇವಿಯೇ ನೋಡವ್ವ ಜ್ಯೋತಿಯನ್ನು
ಭೇದಿಸಿ ಮಾಡುವೆನು ನಿರಂಜನನಾಗಿ
ತ್ವರಿತದಲಿ ಹಾನಿಯನ್ನು ಭಕ್ತಿಯೋಗ ಬಿಡಿಸಿ
ಶಿವಧ್ಯಾನವನ್ನು ಕೆಡಿಸಿ ಭ್ರಾಂತಿಯ ಮಾಡಿಸಿ
ನೋಡುವೆನು ಪರೀಕ್ಷಿಸಿ
ಬಡ ಜಂಗಮನೆಂದು, ಕಷ್ಟವಾಗಿದೆಯೆಂದು
ಹೇಳುವೆನು ಸುಳ್ಳೊಂದು ಮಾಡುವೆ ಲೀಲೆಯಿಂದು ॥

(ಮಾತು) : ಈ ಮಹಾದೇವಿಯು ನನ್ನ ನಿರ್ಗುಣ ಸ್ವರೂಪದೊಳಗೆ ಚಿತ್ತವೇಶಮಾಡಿಕೊಂಡು ಪರಂಜ್ಯೋತಿಯನ್ನು ನೋಡುತ್ತ ಕುಳಿತಿರುವಳು. ಇವಳ ಪರಂಜ್ಯೋತಿಯಲ್ಲಿ ನನ್ನ ಸಾಕಾರ ಸ್ವರೂಪವನ್ನು ಪ್ರಕಟಮಾಡುತ್ತೇನೆ. ಅಂದರೆ ಈಕೆಯ ಚಿತ್ತ ಚಂಚಲವಾಗಿ ನನ್ನ ಕಡೆಗೆ ಲಕ್ಷ್ಯವಾಗುವಂತೆ ಈಗಿಂದೀಗ ಇವಳ ಧ್ಯಾನದೊಳಗೆ ನನ್ನ ಮೂರ್ತಿಯನ್ನು ಪ್ರಕಟಮಾಡುತ್ತೇನೆ.

ಅಕ್ಕಮಹಾದೇವಿ : (ಸ್ವಗತ) ಓಹೋ! ಇದೇನು ನಾನು ಪರಮಾತ್ಮನಲ್ಲಿ ಏಕನಿಷ್ಠೆಯಿಂದ ಚಿತ್ತೈಕ್ಯ ಮಾಡಿ ಯೋಗಸಮಾಧಿಯಲ್ಲಿ ಕುಳಿತ ಕಾಲಕ್ಕೆ ಒಬ್ಬ ಜಂಗಮ ಮೂರ್ತಿಯನ್ನು ಕಂಡಂತಾಯಿತಲ್ಲಾ! ಇದೇನು ಚಮತ್ಕಾರವಾಗಿದೆ. ಅಂಥವರು ಯಾರು ಬಂದಿದ್ದಾರು? ನನ್ನನ್ನು ಎಚ್ಚರಿಸಬೇಕೆಂದು ಹೀಗೆ ಪ್ರಕಟಮಾಡಿದ್ದಾರೇನು? ಹೌದು ಇದು ಸತ್ಯ. ಅಂಥವರು ಯಾರು ಬಂದಿದ್ದಾರೋ ನೋಡಬೇಕು. (ಸುತ್ತಮುತ್ತ ನೋಡಿ) ಓಹೋ ಇಲ್ಲಿ ಯಾರೂ ಇಲ್ಲಾ. ಅಂದಮೇಲೆ ಆತ ಸದಾಶಿವನೆ. ನನ್ನ ಧ್ಯಾನದೊಳಗೆ ಹಾಗೇ ಕಂಡಿದ್ದಾನೇನು? ಇದು ಏನೇ ಆಗಲಿ ಶಿವಧ್ಯಾನದೊಳಗೆ ಕುಳಿತುಬಿಡುತ್ತೇನೆ.

(ಅಕ್ಕಮಹಾದೇವಿಯು ಹಾಗೆಯೇ ಹಾಡುತ್ತ ಧ್ಯಾನಾಸಕ್ತಳಾಗುವಳು).

ಪದ

ಶಿವಧ್ಯಾನವ ಮಾಡುವೆ, ಶಿವಪೂಜೆಯ ಮಾಡುವೆ
ಶಿವಯೋಗ ಮುದ್ರೆಯಿಂದ, ಶಿವತತ್ವಜ್ಞಾನದಿಂದಾ
ಶಿವಮಯವಾಗಿ ॥ ೧ ॥

ವಿಷಯ ಸುಖಗಳ ಬಿಟ್ಟು, ದೋಷಗಳನೆಲ್ಲ ಸುಟ್ಟು
ಹೇಸಿಗುಣಗಳನ್ನೆಲ್ಲ ಬಿಟ್ಟು ಮೇದಿನಿಯೋಳುಖ್ಯಾತಿ
ದೇವಗಿರಿಗ್ರಾಮದಾಗ ವಿಘ್ನೇಶ್ವರ ನೀನೇ ಗತಿಯೆಂದು ನಾ॥ ೨ ॥

(ಧ್ಯಾನಮಗ್ನಳಾಗುವಳು.)

ಅಲ್ಲಮಪ್ರಭು : ಅಕ್ಕಮಹಾದೇವಿಯು ಎಚ್ಚರವಾಗಿ ಹೊರಗೆ ಬಂದು ಹುಡುಕಾಡಿ ಹೋಗಿ ಮತ್ತೆ ಶಿವಧ್ಯಾನದೊಳಗೆ ಕುಳಿತು ಬಿಟ್ಟಳಲ್ಲ! ಅವಳ ಜ್ಞಾನಕ್ಕೆ ವಿಘ್ನವೊಡ್ಡುತ್ತೇನೆ.

ಅಕ್ಕಮಹಾದೇವಿ : (ಎಚ್ಚತ್ತು) ಶಿವ ! ಶಿವ ! ಜಂಗಮ ಮೂರ್ತಿಯು ಮತ್ತೆ ನನ್ನ ಜ್ಞಾನದೊಳಗೆ ಕಂಡು ಮಾಯವಾಯಿತಲ್ಲ! ಅವರು ಯಾರಾಗಿರಬಹುದು! (ಸುತ್ತಮುತ್ತ ನೋಡಿ) ಓಹೋ ನನ್ನ ಜ್ಞಾನದಲ್ಲಿ ಕಂಡ ಪರಮಾತ್ಮನು ಇಲ್ಲಿಯೇ ಇರುವರಲ್ಲ. ಸ್ವಾಮಿ, ನಿಮಗೆ ನಮಸ್ಕರಿಸುತ್ತೇನೆ.

ಅಲ್ಲಮಪ್ರಭು : ಮಹಾದೇವಿ ನಿನಗೆ ಜಯವಾಗಲಿ!

ಹಾಯ್ ! ಹಾಯ್ ! ಶಂಕರಾ (ದುಃಖಮಾಡುವನು.)

ಅಕ್ಕಮಹಾದೇವಿ : ಅಯ್ಯೋ ಸ್ವಾಮಿ ನೀವು ಹೀಗೇಕೆ ದುಃಖ ಮಾಡುವಿರಿ?

ಅಲ್ಲಮಪ್ರಭು : ದೇವಿ, ನಮ್ಮಂಥ ಬಡ ಜಂಗಮರನ್ನು ಯಾರು ಕೇಳಬೇಕು? ನನ್ನ ಕಷ್ಟ ಪರಮಾತ್ಮನಿಗೆ ಹೇಗೆ ಗೊತ್ತಾಗುತ್ತದೆ !

ಅಕ್ಕಮಹಾದೇವಿ : ಯಾಕೆ ಸ್ವಾಮಿ? ನಿಮಗೇನು ಕಷ್ಟ ಆಗಿದೆ ತಿಳಿಸಿರಿ,

ಅಲ್ಲಮಪ್ರಭು : ದೇವಿ ಏನು ಮಾಡಲಿ ಹೇಳುವೆ ಕೇಳು.

ಪದ

ಹಿರಿಯರ ಪುಣ್ಯದಿಂದಲಿ ನಿಮ್ಮ ಬೇಟಿ ಆದೀತು
ನನ್ನ ಜೀವ ಉಳಿಯಿತು ॥ ಪಲ್ಲ ॥
ರೀತಿ ನೀತಿ ಎಲ್ಲಾ ಬಿಟ್ಟು, ಯೋಗಿಜನರು ದಾರಿಬಿಟ್ಟು

ಹೇಳಲು ಸಿಟ್ಟು ಬಂದು, ನನ್ನನ್ನು ಹೊಡೆಯಲು ಬಂದರವ್ವಾ ॥ ೧ ॥
ಲಿಂಗವ ಧರಿಸದೇ, ವಿಭೂತಿ ಹಚ್ಚದೇ
ಅಡ್ಡಾಡುವ ಜಂಗಮ ಕುಲದ
ಬಾದೆಗೆ ಗುರಿಯಾದೆನವ್ವಾ ॥ ॥ ೨ ॥

(ಮಾತು) : ಏನೇ ಮಹಾದೇವಿ, ನಾನು ಶಿವಯೋಗಿ, ನಾನು ಪಟ್ಟದ ದೇವರು ಅಂತಾ ದೊಡ್ಡ ದೊಡ್ಡ ಹೆಸರಿಟ್ಟುಕೊಂಡು ಜ್ಞಾನವೊಂದಿದ್ದರೆ ತೀರಿತು. ಕೊರಳೊಳಗೆ ಲಿಂಗಕಟ್ಟಿಕೊಳ್ಳುವುದು, ವಿಭೂತಿ ಹಚ್ಚಿಕೊಳ್ಳುವುದು, ರುದ್ರಾಕ್ಷಿ ಹಾಕಿಕೊಳ್ಳುವುದು ಇವೆಲ್ಲ ಬುದ್ಧಿಗೇಡಿಗಳ ಕೆಲಸವೆಂದು, ಕೊರಳೊಳಗೆ ಲಿಂಗ ಕಟ್ಟಿಕೊಳ್ಳದೇ ನಮ್ಮ ಸರಿ ಯಾರೂ ಇಲ್ಲಾ ಅಂತಾ ಅನೇಕ ಜಂಗಮರು ಕೋಣನ ಹಾಗೆ ಅಡ್ಡಾಡುತ್ತಾರೆ. ಅಂಥವರಿಗೆ ಏನು ಹೇಳಬೇಕು?

ಅಕ್ಕಮಹಾದೇವಿ : ಏನು ಹೇಳಿದ್ರಿ ಸ್ವಾಮಿ?

ಅಲ್ಲಮಪ್ರಭು : ಇನ್ನು ಮುಂದೆ ಹಾಗೆ ನಡಿಯಬೇಡಿರಿ. ಲೆಕ್ಕಾಚಾರದಂತೆ ನಡೆಯಿರಿ. ಅಂತಾ ನನ್ನ ಹುಚ್ಚುತನದಿಂದ ಹೇಳಲಿಕ್ಕೆ ಹೋಗಿ ಈ ಗತಿಯಾದೆನು. ನಮ್ಮ ಹಿಂದಿನ ಹಿರಿಯರ ಪುಣ್ಯ. ಜೀವದಿಂದಾ ಉಳಿದು ಪಾರಾಗಿ ಓಡಿ ಬಂದೆನು. ಈಗ ನನಗೆ ಅಳತೆಯಿಲ್ಲದಷ್ಟು ಸಂಕಟವಾಗುತ್ತಿದೆ. ನನ್ನನ್ನು ಸಂಕಟದಿಂದ ಪಾರುಮಾಡಿ ಉಳಿಸುವವರಾರು? ಹಾಯ್! ಹಾಯ್! ದೇವ! ಶಂಕರಾ!!

ಅಕ್ಕಮಹಾದೇವಿ : ಸ್ವಾಮಿ ಹಿಂಗ್ಯಾಕ್ರಿ? ಶಿವ ! ಶಿವ ! ನಿಮ್ಮಂಥ ಜಂಗಮರಿಗೆ ಕಷ್ಟವೇ? ಲಿಂಗ ಕಟ್ಟಿಕೊಳ್ಳದವರ್ಯಾರು? ನಿಮ್ಮನ್ನೇನು ಮಾಡಿದರು? ಮತ್ತು ನಿಮಗೇನು ಕಷ್ಟವಾಗಿದೆ?

ಅಲ್ಲಮಪ್ರಭು : ದೇವಿ ಸೊಲ್ಲಾಪುರದ ಸಿದ್ಧರಾಮ ಶಿವಯೋಗಿ ಇರುವನಲ್ಲ, ಅವನೇನು ಶಿವಯೋಗಿಯಂತೆ! ದೊಡ್ಡ ಜ್ಞಾನಿಯಂತೆ ! ಬಹಳ ಪಂಡಿತನಂತೆ ! ಅದೆಂಥಾ ಪಂಡಿತ? ಅವನ ದೊಡ್ಡ ದೊಡ್ಡ ಹೆಸರುಗಳನ್ನು ಕೇಳಿ ಅನಾಯಾಸವಾಗಿ ಅವನ ಭೇಟ್ಟಿಯಾಗಬೇಕೆಂದು ಹೋದೆನು. ಅವನ ಕೊರಳೊಳಗೆ ಲಿಂಗವಿಲ್ಲ, ರುದ್ರಾಕ್ಷಿ ಇಲ್ಲಾ. ಅವನನ್ನು ನೋಡಿ ನಾನು ಏನು ಅಂದೆನೆಂದರೆ?

ಅಕ್ಕಮಹಾದೇವಿ : ಏನು ಅಂದಿರಿ ಸ್ವಾಮಿ?

ಅಲ್ಲಮಪ್ರಭು : ಏನು? ನೀನು ಶಿವಯೋಗಿ ಅನಿಸಿಕೊಂಡು ನಿನಗೆ ಲಿಂಗವಿಲ್ಲ. ರುದ್ರಾಕ್ಷಿಯಿಲ್ಲ, ಹಣೆಯ ಮೇಲೆ ವಿಭೂತಿಯಿಲ್ಲಾ ಹೀಗೇಕೆ? ಅಂತ ಕೇಳಿದರೆ. ಭಕ್ತಿಜ್ಞಾನಗಳಿದ್ದರೆ ತೀರಿತು. ಈ ಕಲ್ಲಿನ ಲಿಂಗ ಮಾಡಿ ದನದ ಕೊರಳಲ್ಲಿ ಗುದ್ದಿ ಕಟ್ಟಿದಂಗ ಕಟ್ಟಿಕೊಂಡರೆ ಏನಾಗುವುದು? ಅಂತ ಸಿಟ್ಟಿಗೆದ್ದು ಉತ್ತರಿಸಿದ. ಆಗ ನಾನು ಯಾವನ ಹಣೆಯ ಮೇಲೆ ಭಸ್ಮ, ಕೊರಳೊಳಗೆ ರುದ್ರಾಕ್ಷಿ ಇರುವುದಿಲ್ಲವೋ ಅಂಥವನು ಬೇಕಾದಷ್ಟು ದೊಡ್ಡ ಪಂಡಿತಜ್ಞಾನಿಯಾದರೂ ಕೂಡ ಅವನನ್ನು ಅಸ್ಪ್ರಶ್ಯನೆಂದು ತಿಳಿದು ಅವನನ್ನು ಮುಟ್ಟಿಸಿಕೊಳ್ಳಬಾರದು. ಅವನ ಮುಖ ನೋಡಿದರೆ ಪಕ್ಕಕ್ಕೆ ಹೊರಳಿ ಹೋಗಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಅದರಂತೆ ನಿನಗೆ ಲಿಂಗವಿಲ್ಲ. ಭಸ್ಮವಿಲ್ಲ ಅಂದರೆ, ಆತನು ನನ್ನನ್ನು ಯಾರು ಕೇಳಬೇಕು ನೀನೇ ಅಸ್ಪೃಶ್ಯ ಎಂದು, ನಿನ್ನ ಮುಖ ಸಹ ನೋಡಲಾಗದು ಎಂದು ಸಿಟ್ಟಿಗೆದ್ದ. ನಾನು ತಿರುಗಿ ಬರಲಿಕ್ಕೆ ಹತ್ತಿದೆ. ಆಗ ಅವನು ನನ್ನನ್ನು ಏನು ಮಾಡಿದ ಗೊತ್ತೇ?

ಅಕ್ಕಮಹಾದೇವಿ : ಏನು ಮಾಡಿದನು ಸ್ವಾಮಿ?

ಅಲ್ಲಮಪ್ರಭು : ಏನು ಮಾಡಿದನೆಂದರೆ ಹೇಳುತ್ತೇನೆ ಕೇಳು,

ಪದ

ಶಿವಕೊಟ್ಟ ಉರಿಗಣ್ಣನಿಂದ ನಿನ್ನ ನೋಡಿದಾಕ್ಷಣ
ಮಾಡಲಿಲ್ಲಾ ಅನುಮಾನ ಆದೀತೋ ಎನಗೆ ಕಠಿಣ ॥ ಪಲ್ಲ ॥

ಉರಿಗಣ್ಣಿನ ಜ್ವಾಲೆಯನ್ನು ತಾಳಲಾರದೆ ಓಡಿದೆನು ಅಂತಾ
ಕೊಟ್ಟಾ ಉರಿಗಣ್ಣು, ಶಿವನು ತಾನು ॥ ೧ ॥

ಶಿವನಿಗೆ ಎಳ್ಳಷ್ಟು ಬುದ್ಧಿ ಇಲ್ಲವೇನು
ಅವನದೇನು ನೋಡಿ ಕೊಟ್ಟ ತಾನು ॥ ೨ ॥

ಕಣ್ಣು ಆದೀತೋ ಎನಗೆ ಕಠಿಣ
ಕಂಡ ಕಂಡವನನು ಸುಡುತಲಿರುವುದು ॥ ೩ ॥

ಅದರಿಂದೆ ಬಳಲಿದೆ ಓಡುತ್ತಾ ಬಂದೆ
ಬಡವನನ್ನು ಸಡಗರದಿಂದ ರಕ್ಷಿಸು ತಿಳಿನೀನೆ ॥ ೪ ॥

(ಮಾತು) : ಏನೇ ಮಹಾದೇವಿ! ಆ ಸಿದ್ಧರಾಮನು ನನ್ನನೇನು ಮಾಡಿದನೆಂದರೆ ಆ ಪರಮಾತ್ಮನು ಉರಿಗಣ್ಣನ್ನು ಕೊಟ್ಟಾನಲ್ಲಾ, ಆ ಉರಿಗಣಿನಿಂದ ನೋಡಿದ. ನೋಡಿದ ಕೂಡಲೇ ನನಗೆ ಸಿಡಿಲು ಬಡಿದಂತಾಗಿ ಬ್ರಹ್ಮಾಂಡಕ್ಕೆಲ್ಲಾ ಬೆಂಕಿ ಹತ್ತಿ ನಾನು ಹಾಗೆ ಸತ್ತೆನೆಂದು ತಿಳಿದು ಅಂಜಿ ಇಲ್ಲಿಗೆ ಓಡಿ ಬಂದೆ. ನೀನು ಹೇಗಾದರೂ ಮಾಡಿ ನನ್ನನ್ನು ರಕ್ಷಿಸು. ನಾನು ಒಬ್ಬ ಬಡ ಜಂಗಮನಿದ್ದೇನೆ. ನನಗೆ ಯಾರೂ ಇಲ್ಲಾ. ನಾನು ಇಲ್ಲಿಯೇ ಬಿದ್ದು ಬಿಡುತ್ತೇನೆ.

ಅಕ್ಕಮಹಾದೇವಿ : (ಸ್ವಗತ) ಓಹೋ! ಇವನೇನೂ ಬಡ ಜಂಗಮನಲ್ಲ. ಈ ಸೋಗು ಹಾಕಿಕೊಂಡು ಏನೋ ಒಂದು ನೆಪಮಾಡಿಕೊಂಡು ಆ ನಿರಂಜನ ಅಲ್ಲಮಪ್ರಭುಗಳೇ ಬಂದಂತೆ ಕಾಣುತ್ತದೆ, ಮುಂದೇನು ಚಮತ್ಕಾರವಾಗುತ್ತದೆಯೋ ನೋಡೋಣ. (ಪಕ್ಕಕ್ಕೆ ಸರಿದು) ಸ್ವಾಮಿ ನನಗೆ ಏನು ಮಾಡೆಂದಿರಿ?

ಅಲ್ಲಮಪ್ರಭು : ಮಹಾದೇವಿ ಏನು ಮಾಡಲಿ? ಆ ಸಿದ್ಧರಾಮನ ಮೇಲೆ ಎಳ್ಳಷ್ಟೂ ಕೋಪವಿಲ್ಲಾ. ಅವನಿಗೆ ವಿಚಾರವಿಲ್ಲದೇ ಉರಿಗಣ್ಣನ್ನು ಕೊಟ್ಟ ಆ ಬೋಳ್ಯಾ ಶಂಕರನನ್ನು ಕಡಿದು ಹಾಕುವಷ್ಟು ಸಿಟ್ಟು ಬಂದಿದೆ, ಆದರೆ ಮಾಡಬೇಕೇನು? ನಿರ್ವಾಹವಿಲ್ಲ. ಶಿವಾ ಅಂದರೆ ತಾನೇ ಬಂಟನಾಗಿ ಮನಸ್ಸಿಗೆ ಬಂದಂತೆ ಮಾಡಿ ಈ ಲೋಕವನ್ನೆಲ್ಲ ಹಾಳು ಮಾಡಲಿಕ್ಕೆ ಹತ್ತಿದ್ದಾನೆ. ಅದಕ್ಕೆ ಶಿವನನ್ನು ನಂಬಬೇಡಾ, ಶಿವನು ಬಹಳ ನೀಚನಿದ್ದಾನೆ ತಿಳಿಯಿತಿಲ್ಲೋ?

ಅಕ್ಕಮಹಾದೇವಿ : ಏನು ಸ್ವಾಮಿ? ಆ ಸಿದ್ಧರಾಮಯೋಗಿಗೆ ಉರಿಗಣ್ಣು ಕೊಟ್ಟಿದ್ದರ ಸಲುವಾಗಿ ಪರಮಾತ್ಮನು ನೀಚನೆಂದು ನಿಮ್ಮ ಅಭಿಪ್ರಾಯವಿದ್ದಂತಿದೆ!

ಅಲ್ಲಮಪ್ರಭು : ದೇವಿ ಇದೊಂದರ ಸಲುವಾಗಿ ಯಾಕೆ. ಇಂಥ ಹತ್ತೆಂಟು ರೀತಿಯಿಂದ ಶಿವನು ಬಹಳ ಖೊಟ್ಟಿಯಿದ್ದಾನೆ ನೋಡು.

ಅಕ್ಕಮಹಾದೇವಿ : ಹಾಗಾದರೆ ಶಿವನು ಹತ್ತೆಂಟು ರೀತಿಯಿಂದ ಖೊಟ್ಟಿಯೇನ್ರಿ?

ಅಲ್ಲಮಪ್ರಭು : ಅಹುದು ಶಿವ ಬಹಳ ಖೊಟ್ಟಿ.

ಅಕ್ಕಮಹಾದೇವಿ : ಹಾಗಾದರೆ ಹೇಳುತ್ತೇನೆ ಕೇಳ್ರಿ.

ಪದ

ಖೊಟ್ಟಿ ಖೊಟ್ಟಿ ಯಾವನು
ಶಿವನು ಮೃತ್ಯಲೋಕ ಹಿತಕಾಗಿ
ಕಾಲಕೂಟ ವಿಷವನಾ ಕುಡಿದಾ,
ಕಷ್ಟವಿಷವೆಂದರೆ ಶಿವನು ಕೇಳದಾದ
ಜಗವ ಸುಡುವುದೆಂದು ಅದನೆಲ್ಲಾ ತಾ ಕುಡಿದಾ
ಉಳಿಸಿದಾ ಲೋಕವನು ಶಿವನೊಳಗಿಲ್ಲ ಅಭಿಮಾನ ॥ ೧ ॥

ಆ ವಿಷದ ಜ್ವಾಲೆಗೆ ದೇವದಾನವರೆಲ್ಲ ಓಡಿದಾಗ ಕೆಟ್ಟು
ಎಷ್ಟು ಮಂದಿ ಸತ್ತುಹೋದರಾಗ ಸುಟ್ಟು
ಬ್ರಹ್ಮ ಓಡಿದಾ ಹರಿಯು ತಾ ಕ್ಷೀಣನಾದ
ವಿಷದ ಜ್ವಾಲೆ ಹಬ್ಬಿತು ಸರ್ವಲೋಕಕೆಲ್ಲ ॥ ೨ ॥

ಅಂಥ ವಿಷವನೆಲ್ಲ ಶಿವನು ಕುಡಿದು ಕುತ್ತಿಗೆಯಲ್ಲಿಟ್ಟುಕೊಂಡು
ಅಲ್ಲೆ ಇದ್ದ ವಿಷದಿಂದಾ ಅದಕ ನೀಲಕಂಠನೆಂಬ ಹೆಸರು
ಬಂದಿತು ಶಿವನಿಗೆ ಅದರಿಂದ ಎಲ್ಲರಿಗೂ
ಆದೀತು ರಕ್ಷಣ ಕೇಳ್ರೀ ನೀವೆಲ್ಲ ಶಿವನ ಲೀಲೆಯಾ ॥ ೩ ॥

(ಮಾತು) : ಏನ್ರೀ, ಪರಮಾತ್ಮನು ಬಹಳ ಖೊಟ್ಟಿ ಅಲ್ಲ. ಹಿಂದಕ್ಕೆ ದೇವದಾನವರೆಲ್ಲಾ ಕೂಡಿ ಮಂದಾರ ಪರ್ವತವನ್ನು ಕಡಗೋಲಾಗಿ ಮಾಡಿ, ವಾಸುಕಿ ಎನ್ನುವಂಥ ಹಾವನ್ನು ಸುತ್ತಿ ಕ್ಷೀರಸಾಗರವನ್ನು ಕಡಿಯಲಿಕ್ಕೆ ಹತ್ತಿದ್ದರು. ಅಲ್ಲಿ ಕಾಳಕೂಟ ವಿಷವು ಹಬ್ಬಿ ಇಹಲೋಕದ ತುಂಬ ಹಬ್ಬಿತು. ಮತ್ತು ಎಲ್ಲ ಪ್ರಾಣಿಗಳನ್ನು ಕೊಲ್ಲಹತ್ತಿತು. ಆ ವಿಷದ ಜ್ವಾಲೆಗೆ ದೇವದಾನವರು ಅರಿವಿಲ್ಲದೇ ಬಿದ್ದರು. ಬ್ರಹ್ಮನು ಓಡಿಹೋದನು. ವಿಷ್ಣು ಅದರ ಪೆಟ್ಟಿಗೆ ಸಿಲುಕಿ ಬಂಗಾರದಂಥವನು ಹೋಗಿ ಕರ್ರಗೆ ಆಗಿ ಕೃಷ್ಣನೆನಿಸಿಕೊಂಡ. ಇಷ್ಟೆಲ್ಲಾ ಗೋಳನ್ನು ಆ

ಮಹಾದೇವನು ನೋಡಿ, ಈ ವಿಷವು ಈ ಜಗತ್ತನ್ನು ಸುಡದೇ ಬಿಡುವದಿಲ್ಲವೆಂದು ತಿಳಿದು ಅದನ್ನು ಬಿಡಕೂಡದೆಂದು ಅದನ್ನು ನುಂಗಿ ಕುತ್ತಿಗೆಯಲ್ಲಿ ಇಟ್ಟುಕೊಂಡನು. ಆ ವಿಷವೇ ಪರಮಾತ್ಮನ ಕೊರಳಿಗೆ ಕಸ್ತೂರಿಯಂತೆ ಕಪ್ಪಾಗಿ ಸುತ್ತಿಕೊಂಡಿತು. ಆ ಕಪ್ಪಿನ ಸಲುವಾಗಿ ಶಿವನಿಗೆ ನೀಲಕಂಠನೆಂದು ಹೆಸರು ಬಂದಿತು. ಇಷ್ಟಲ್ಲದೇ ಲೋಕೋದ್ಧಾರದ ಸಲುವಾಗಿ ಪರಮಾತ್ಮನು ಘೋರ ವಿಷವಾಗಿದ್ದರೂ ಲಕ್ಷಿಸದೇ ಕುಡಿದುಬಿಟ್ಟನು. ಅಂಥವನಿಗೆ ನೀವು ಖೊಟ್ಟಿ ಅನ್ನುತ್ತೀರಿ. ಶಿವನಂಥ ಸಂಪನ್ನರು ಯಾರೂ ಇಲ್ಲಾಂತ ತಿಳಿದುಬಿಡ್ರಿ.

ಅಲ್ಲಮಪ್ರಭು : ಮಹಾದೇವಿ. ಶಿವನು ಅದೊಂದೆ ವಿಷವನ್ನು ಕುಡಿದದ್ದರ ಸಲುವಾಗಿ ಸಂಪನ್ನನಾದನೇ?

ಅಕ್ಕಮಹಾದೇವಿ : ಅದೊಂದರ ಸಲುವಾಗಿ ಅಲ್ಲಾ. ಶಿವನು ಮಾಡಿದ್ದೇನೆಂದರೆ, ಎಲ್ಲಾ ರೀತಿಯಿಂದಲೂ ಜಗತ್ತಿಗೆ ಕಲ್ಯಾಣವಾಗುವಂತೆ ಮಾಡಿದ್ದಾನೆ. ಅದರಿಂದ ಶಿವನು ಸರ್ವಸಂಪನ್ನನು.

ಅಲ್ಲಮಪ್ರಭು : ಏನು ಹೇಳುತ್ತಿ? ಶಿವನು ಅಂದರೆ ಲೋಕದ ಕಳ್ಳನಿದ್ದಂತೆ. ಅವನನ್ನು ಸಂಪನ್ನನೆನ್ನುತ್ತೀ. ನಿನಗೆ ಯಾವದೂ ತಿಳಿಯುವುದಿಲ್ಲ ಸುಮ್ಮನಿರು.

ಅಕ್ಕಮಹಾದೇವಿ : ಹೌದು ನಾನು ಹೆಣ್ಣು, ನನಗೆ ಏನೂ ತಿಳಿಯುವುದಿಲ್ಲಾ ನಿಜ. ಪರಮಾತ್ಮನು ಈ ಲೋಕದ ಕಳ್ಳನೆಂದಿರಲ್ಲಾ ಅವನೇನು ಕಳ್ಳತನ ಮಾಡಿದ. ಅದನ್ನು ಹೇಳಿ ಮುಂದೆ ಮಾತನಾಡಿ ಸ್ವಾಮಿ.

ಅಲ್ಲಮಪ್ರಭು : ಹಾಗಾದರೆ ಶಿವನು ಕಳ್ಳತನ ಮಾಡೇ ಇಲ್ಲs?

ಅಕ್ಕಮಹಾದೇವಿ : ಮಾಡಿದನೋ ಇಲ್ಲವೋ ತಾವೇ ಹೇಳಬೇಕು.

ಅಲ್ಲಮಪ್ರಭು : ಹಾಗಾದರೆ ಹೇಳುತ್ತೇನೆ ಕೇಳು.

ಪದ

ತುಡುಗಾ ಅಲ್ಲದಿದ್ದರೆ ಮತ್ತೆ ಹರಿಹರ ಬ್ರಹ್ಮರು ಕೂಡಿಕೊಂಡು
ಅನುಸೂಯಾನ ಬಳಿಗೆ ಯಾಕೆ ಹೋಗಿದ್ದಾ, ಸಂನ್ಯಾಸಿ ಸೋಗಲಿ
ಯಾಕೆ ಹಾಕಿದ್ದಾ ಭಿಕ್ಷಾ ಬೇಡುವ ನೆಪದಲ್ಲಿ

ಮೂವರು ಕೂಡಿ ಮಸಲತ್ತು ತೆಗೆದರು
ಯಾಕೆ ಯಾಕೆ ಹೋದರು ಹೇಳನೀನ
ಅನುಸೂಯಾನ ಬಳಿಗೆ ಹೋಗಿ ಬತ್ತಲೆಯಾಗಿ
ಭಿಕ್ಷೆ ನೀಡು ಅಂದರೆ ನಾವು ತಗೋತೀವಿ
ಯಾಕಂಥಾ ಪತಿವ್ರತೆಗೆ ಯಾಕೆ ಹಾಗೆ ಮಾಡಿದಾ
ಇದೆಂತಾ ಸಂಭಾವಿತ ಗುಣ ಅಲ್ಲದ ರೀತಿಯಾಕೆ
ಇವರಿಗೆ ಅಂಜಲಿಲ್ಲಾ ಅವಳ ಗಂಡನ ಪಾದತೀರ್ಥವ ತಂದು
ಮೂವರ ಮೇಲೆ ಚಿಮುಕಿಸಿದಳು ಆ ಪತಿವ್ರತೆ,
ಮೂವರೂ ಸಣ್ಣ ಕೂಸುಗಳಾಗಿ ಬಿದ್ದರು ಭೂಮಿಯ ಮೇಲೆ
ಅನುಸೂಯಾ ಪತಿವ್ರತೆ ಪ್ರೀತಯಿಂದ ಬತ್ತಲೆ ಬಂದಳು
ಬಂದು ಮೂವರಿಗೆ ಮೊಲೆ ಕುಡಿಸಿದಳು ಸತ್ವಶಾಲಿ.

(ಮಾತು) : ಮಹಾದೇವಿ ಪರಮಾತ್ಮನು ಕಳ್ಳನಲ್ಲ ಅಂದೆಯಲ್ಲಾ ಹಾಗಾದರೆ ವಿಷ್ಣು, ಬ್ರಹ್ಮರನ್ನು ಕೂಡಿಕೊಂಡು ಅತ್ರಿ ಮಹಾಋಷಿಯ ಹೆಂಡತಿಯ ಬಳಿಗೆ ಯಾತಕ್ಕೆ ಏನು ಬೇಡಲು ಹೋಗಿದ್ದರು?

ಅಕ್ಕಮಹಾದೇವಿ : ಭಿಕ್ಷೆ ಬೇಡಲು ಹೋಗಿದ್ದರು?

ಅಲ್ಲಮಪ್ರಭು : ಭಿಕ್ಷೆ ಬೇಡಲು ಹೋಗಿದ್ದರು ಅನ್ನುತ್ತೀಯಲ್ಲಾ ಹಾಗಾದರೆ ಆಕೆಯು ಭಿಕ್ಷೆ ನೀಡಲು ಬಂದರೆ ಸುಮ್ಮನೆ ತೆಗೆದುಕೊಂಡು ಬರದೇ ಹಾಗೇ ಯಾಕೆ ಬಂದರು?

ಅಕ್ಕಮಹಾದೇವಿ : ಏನೆಂದರು ವಿವರಿಸಿ ಸ್ವಾಮಿ?

ಅಲ್ಲಮಪ್ರಭು : ಹೀಗೆ ನಾವು ಭಿಕ್ಷೆ ತೆಗೆದುಕೊಳ್ಳುವುದಿಲ್ಲ. ಉಟ್ಟಂಥ ಸೀರೆಯನ್ನು ಕಳಚಿ ದಿಗಂಬರೆಯಾಗಿ ಬಂದು ನೀಡಿದರೆ ತೆಗೆದುಕೊಳ್ಳುತ್ತೇವೆ ಅಂದರು. ಪತಿವ್ರತೆಗೆ ಹೀಗೆಂದುದು ನ್ಯಾಯವೇ?

ಅಕ್ಕಮಹಾದೇವಿ : ಹಾಗೇ ಕರೆದರು? ಮುಂದೇನಾಯಿತು ಎಂಬುದನ್ನು ವಿಚಾರ ಮಾಡಿದರೆ ಅದು ನ್ಯಾಯವೋ? ಅನ್ಯಾಯವೋ ತಿಳಿಯುವದು.

ಅಲ್ಲಮಪ್ರಭು : ಮುಂದೆ ನಡೆದುದು ಇಷ್ಟು, ಸಾಧುಗಳು ಈ ರೀತಿ ಅಂದಕೂಡಲೇ ಆ ಅನುಸೂಯಾದೇವಿ ಆಗಲೆಂದು ಗಂಡನ ಪಾದ ತೊಳೆದು ಮೂರೂ ಮಂದಿಯ ಮೇಲೆ ಪನಿವಾರ ಚಿಮುಕಿಸಿದಳು. ಕೂಡಲೇ ಮೂವರೂ ಸಣ್ಣ ಕೂಸುಗಳಾದರು. ಆಗ ಅವಳು ಮೊದಲು

ಹೇಳಿದಂತೆ ದಿಗಂಬರೆಯಾಗಿ ಬಂದು ಮೂವರಿಗೂ ಮೊಲೆ ಕುಡಿಸಿ ತನ್ನ ಮಕ್ಕಳನ್ನಾಗಿ ಮಾಡಿಕೊಂಡಳು. ಅಂದಮೇಲೆ ಪರಮಾತ್ಮನು ಸಂಪನ್ನನು ಕಳ್ಳನಲ್ಲ ಎನ್ನುತ್ತೀಯಲ್ಲಾ ಇದು ಕಳ್ಳತನವಲ್ಲವೇ?

ಅಕ್ಕಮಹಾದೇವಿ : ಇದು ಕಳ್ಳತನವಲ್ಲಾ. ಪರಮಾತ್ಮನು ಹಾಗೆ ಯಾಕೆ ಮಾಡಿದನೆನ್ನುವುದನ್ನು ಹೇಳುತ್ತೇನೆ ಕೇಳಿರಿ,

ಪದ

ಅನುಸೂಯಾ ಪತಿವ್ರತೆ ಜಗಕ್ಕೆಲ್ಲ ತಿಳಿದುಬಂತು
ಶಿವನು ಅದಕ ಮಾಡಿದನು ಮಸಲತ್ತು
ಹರಿಹರ ಬ್ರಹ್ಮರು ಕೂಡಿಕೊಂಡು ಆಗ ತುರ್ತು
ಹಾಂಗ ಲೀಲೆಯ ಮಾಡಿ. ಅವಳ ಸತ್ವವ ನೋಡಿ
ಪತಿವ್ರತೆ ಹೆಚ್ಚೆಂದು ತೋರಿಸಿದ ಪ್ರಖ್ಯಾತ .
ಮುಂದೆ ಮೂವರೂ ಅನುಸೂಯಾನ ಮಕ್ಕಳಾಗಿ ಹುಟ್ಟಿ
ಬೆಳೆದು ಭೂಮಿಯ ಮೇಲೆ ಲೋಕ ಪ್ರಸಿದ್ಧರಾಗಿ
ಬ್ರಹ್ಮನು ಚಂದ್ರನಾದ, ಹರಿಯು ದತ್ತಾತ್ರೇಯನಾದ
ಶಿವನು ದೂರ್ವಾಸನಾದಾ ಕೇಳಿರಿ ಬುದ್ಧಿಮಾತಾ.

(ಮಾತು) : ಮುಂದೆ ಪರಮಾತ್ಮನು ಬ್ರಹ್ಮ, ವಿಷ್ಣು ಕೂಡಿಕೊಂಡು ಅನುಸೂಯಾನ ಬಳಿಗೆ ಯಾಕೆ ಹೋಗಿದ್ದನೆಂದರೆ, ಆಕೆಯ ಪತಿವ್ರತಾ ಧರ್ಮವನ್ನು ರಕ್ಷಣೆಮಾಡಿ ಪಾತಿವ್ರತ್ಯವೇ ಹೆಚ್ಚೆಂದು ಲೋಕಕೆಲ್ಲಾ ತಿಳಿಸುವುದರ ಸಲುವಾಗಿ ಅನುಸೂಯಾನ ಕೈಯಲ್ಲಿ ಸಿಕ್ಕು ಹಾಗೆ ಲೀಲೆಯ ಮಾಡಿ ಮೂವರೂ ಆಕೆಯ ಮಕ್ಕಳಾಗಿ ಹುಟ್ಟಿದರು. ಬ್ರಹ್ಮನು ಚಂದ್ರನಾಗಿಯೂ ವಿಷ್ಣುವು ದತ್ತಾತ್ರೇಯನಾಗಿಯೂ, ಶಿವನು ದೂರ್ವಾಸನಾಗಿಯೂ ಹುಟ್ಟಿ ಲೋಕ ಪ್ರಸಿದ್ಧರಾಗಿ ಹೋದರು ಇದನ್ನು ತಿಳಿಯದೇ ಶಿವನಿಗೆ ದೋಷ ಕೊಡಬಾರದು ಸ್ವಾಮಿ. ಬಂಗಾರ ಚಲೋ ಅಥವಾ ಸುಮಾರ ಎನ್ನುವದನ್ನು ನೀವು ಹೇಗೆ ಪರೀಕ್ಷೆ ಮಾಡುತ್ತೀರಾ?

ಅಲ್ಲಮಪ್ರಭು : ಒರೆಗಲ್ಲಿಗೆ ಹಚ್ಚಿದರೆ ತಿಳಿಯುತ್ತದೆ.

ಅಕ್ಕಮಹಾದೇವಿ : ಬಂಗಾರವನ್ನು ಹ್ಯಾಗೆ ಒರೆಗಲ್ಲಿನಿಂದ ಪರೀಕ್ಷೆ ಮಾಡುತ್ತೇವೋ, ಅದರಂತೆ ಅನುಸೂಯಾಳಂಥ ಆ ಮಹಾತ್ಮಳನ್ನು ಪರೀಕ್ಷೆ ಮಾಡಬೇಕಾದರೆ ಪರಮಾತ್ಮನು ಅವರಿಗೆ ಕಠಿಣ ಪ್ರಸಂಗ ತಂದು

ಅವರನ್ನು ಆ ಒರೆಗಲ್ಲಿಗೆ ತಿಕ್ಕಿ ಪರೀಕ್ಷೆ ಮಾಡುತ್ತಾನೆ. ಇದನ್ನೆಲ್ಲ ನೋಡಿದರೆ ಪರಮಾತ್ಮನು ಎಂದಿಗೂ ಕೆಟ್ಟವನಲ್ಲ. ಅವನು ಲೀಲೆ ಮಾಡುವ ಕಾರಣ ಹಾಗೆ ಮಾಡಿದನು. ಪೂರಾ ಹಕೀಕತ್ತು ತಿಳಿದರೆ ಪರಮಾತ್ಮನ ಕಡೆಗೆ ಎಳ್ಳಷ್ಟೂ ತಪ್ಪು ಹೊರಡುವುದಿಲ್ಲಾ. ಇದೆಲ್ಲವ ತಿಳಿಯದೇ ಪರಮಾತ್ಮನಿಗೆ ದೋಷ ಕೊಡಬಾರದು. ಯಾಕೆಂದರೆ, ವೇದಗಳು ಸಾರುವ ಹಾಗೆ ಯಾವತ್ತೂ ಚರಾಚರಾ ವಸ್ತುಗಳಿಂದ ಸ್ತುತಿ ಮಾಡಿಸಿಕೊಳ್ಳುವಂಥ ಪರಮಾತ್ಮನು ಇರುವನಲ್ಲಾ ಆ ಶಂಭುವನ್ನು ಯಾವನು ನಿಂದೆ ಮಾಡುವನೋ ಅವನು ರೌರವ ನರಕದಲ್ಲಿ ಅನುಭೋಗಿಸುವಂಥ ಕಷ್ಟವನ್ನು ನೂರು ವರುಷ ಹೇಳಿದರೂ ತೀರುವುದಿಲ್ಲಾ. ಅಂತಾ ಕಷ್ಟಕ್ಕೆ ಗುರಿಯಾಗುತ್ತಾನೆ ಎಂಬುದು ಪುರಾಣ ಪ್ರಸಿದ್ಧವಿದೆ. ಇದು ನಿಮಗೆ ಗೊತ್ತಿದ್ದೂ ನೀವು ಹೀಗೆ ಸೋಗು ಹಾಕಿಕೊಂಡು ನನ್ನ ಮುಂದೆ ಸುಳ್ಳು ಹೇಳಿ ನನ್ನನ್ನು ಪರೀಕ್ಷೆ ಮಾಡಲು ಬಂದಿರುವಿರಾ? ನಿಮ್ಮದೆಲ್ಲಾ ನನಗೆ ತಿಳಿತಿದೆ.

ಅಲ್ಲಮಪ್ರಭು : ದೇವಿ, ನನ್ನದೇನು ನಿನಗೆ ಗೊತ್ತಾಗಿದೆ? ನಾನು ಯಾರು? ಭಿಕ್ಷೆ ಬೇಡುವ ಜಂಗಮ. ಸೊಲ್ಲಾಪುರದ ಸಿದ್ಧರಾಮ ಶಿವಯೋಗಿಯ ಹೊಡೆತಕ್ಕೆ ಸಿಕ್ಕು ಓಡಿ ಬಂದು ಒದ್ದಾಡುತ್ತಿರುವವ. ನೀನಾದರೂ ಒಳ್ಳೇಯದು ಮಾಡುತ್ತೀಯೆಂದು ಬಂದರೆ ನೀನೂ ಕಾಳಜಿ ಮಾಡಲಿಲ್ಲ. ನಾನು ಮತ್ತೆಲ್ಲಿಗಾದರೂ ಹೋಗುತ್ತೇನೆ.

(ಹೋಗುವಂತೆ ನಟಿಸುವನು. ಆಗ ಮಹಾದೇವಿ ಅಡ್ಡಬಂದು ಅವನನ್ನು ತಡೆಯುವಳು.)

ಅಕ್ಕಮಹಾದೇವಿ : ನಿಮಗೆ ಏನು ಆಗಿದೆ? ಏನೂ ಇಲ್ಲಾ. ಎಲ್ಲವೂ ಸುಳ್ಳು ಮುಂದೆಮಾಡಿ ಹೇಳಬೇಡಿ. ತಮ್ಮನ್ನು ಪೂಜೆ ಮಾಡುತ್ತೇನೆ ಪ್ರತ್ಯಕ್ಷವಾಗಿ ನನ್ನನ್ನು ಉದ್ಧಾರಮಾಡಿ, ಹಾಗೇ ಎಲ್ಲಿಗೆ ಹೋಗುತ್ತೀರಿ?

ಅಲ್ಲಮಪ್ರಭು : ನಾನು ಭಿಕ್ಷೆಗೆ ಅಡ್ಡಾಡುವ ಜಂಗಮ. ನಾನು ಎಲ್ಲಿಗಾದರೂ ಹೋಗುತ್ತೇನೆ?

ಅಕ್ಕಮಹಾದೇವಿ : ನೀವು ಬಡ ಜಂಗಮರು ಹೌದೇ ಅಲ್ಲವೇ ಎನ್ನುವುದು ನನಗೆ ತಿಳಿದಿದೆ. ಇಂಥ ಸುಳ್ಳು ಯಾಕೆ ನುಡಿಯುತ್ತೀರಿ?

ಅಲ್ಲಮಪ್ರಭು : ಹೌದು. ನಾನು ಸುಳ್ಳು ಹೇಳುವ ಬಡ ಜಂಗಮನಿದ್ದೇನೆ ನೋಡು.

ಅಕ್ಕಮಹಾದೇವಿ : ಈ ಮೇಲಿನ ವೇಷ ಇಷ್ಟs ಸಾಕು. ನಿಜವಾಗಿ ತಾವು ಜಂಗಮರಲ್ಲಾ.

ಅಲ್ಲಮಪ್ರಭು : ಖರೆ, ನಾನು ಜಂಗಮನು ! ಅಲ್ಲಾs?

ಅಕ್ಕಮಹಾದೇವಿ : ಅಲ್ಲಾ. ಅಲ್ಲಾ.

ಅಲ್ಲಮಪ್ರಭು : ಹಾಗಾದರ ನಾನು ಯಾರು?

ಅಕ್ಕಮಹಾದೇವಿ : ನೀವು ಯಾರೆಂದರೆ ಹೇಳುತ್ತೇನೆ ಕೇಳಿರಿ.

ಪದ

ಪರಬ್ರಹ್ಮನಿರಂಜನ ಗುರುದೇವ
ಗುರುದೇವ ಅಲ್ಲಮಪ್ರಭು ನೀನು ॥ ಪಲ್ಲ ॥
ಬಲ್ಲೆನು ನಿನ್ನ ಗುಣ ಎನಿತೋ ಅನುಮಾನ
ನೀನೆಲ್ಲ ಜಂಗಮರಿಗೆ ಆಧಾರಭೂತನು
ನಿನಗೆ ಮೆಚ್ಚಿದೆ ನಾನು ಅನುಭವಿಯೋ ನೀನು
ಪರಶಿವನೆ ನಿನ್ನ ನಂಬಿದೆ ನಾನಿನ್ನ
ಮಾಡುವೆ ತವಚರಣ ಹಗಲಿರುಳು ನಿನ್ನ ಧ್ಯಾನ.

(ಮಾತು) ಸ್ವಾಮಿ ನೀವು ಯಾರೆಂದರೆ, ಸಾಕ್ಷಾತ್ ಪರಬ್ರಹ್ಮ. ಪರಶಿವ. ನರರನ್ನು ಉದ್ಧಾರ ಮಾಡುವುದರ ಸಲುವಾಗಿ ಅಲ್ಲಮಪ್ರಭು ಎನ್ನುವ ಹೆಸರಿನಿಂದ ಈ ಲೋಕದಲ್ಲಿ ಪ್ರಸಿದ್ಧರಾಗಿ ಅನೇಕ ಲೀಲೆಗಳನ್ನು ಮಾಡುವಿರಿ. ಅಲ್ಲಮಪ್ರಭು ಸ್ವಾಮಿಗಳೇ ಯಾಕೆ ಇದು ಸುಳ್ಳೇ?

ಅಲ್ಲಮಪ್ರಭು : (ಅಲ್ಲಮಪ್ರಭು ಸುಮ್ಮನೇ ನಿಂತಿರಬೇಕು.)

ಅಕ್ಕಮಹಾದೇವಿ : ಯಾಕೆ ಸುಮ್ಮನಾದಿರಿ. ಮಾತನಾಡಿ. ನೀವು ಅಲ್ಲಮಪ್ರಭು ಸ್ವಾಮಿಗಳು ಹೌದೋ, ಅಲ್ಲವೋ?

ಅಲ್ಲಮಪ್ರಭು : (ಸ್ವಗತ) ಇವಳು ನನ್ನ ಸ್ವರೂಪವನ್ನು ತಿಳಿದು ಗುರುತಿಸಿ ಬಿಟ್ಟಳು. ಇವಳು ಸಾಮಾನ್ಯಳಲ್ಲ. ಸಾಕ್ಷಾತ್ ಪಾರ್ವತಿಯೇ ಮಹಾದೇವಿಯ ಹೆಸರಿನಿಂದ ಈ ಉಡುತಡಿ ಪಟ್ಟಣದೊಳಗೆ ಅವತಾರ ಮಾಡಿದ್ದಾಳೆ. ಅಂದಮೇಲೆ ನನ್ನನ್ನು ಗುರುತಿಸದೇ ಬಿಡುತ್ತಾಳೆಯೇ? (ಪ್ರಕಟ) ಶಹಭಾಷ್! ಶಹಭಾಷ್! ಮಹಾದೇವಿ, ನೀನು ಚುರುಕು ಇರುವಿ.

ನಾನೇ ಸದಾಶಿವನು ಅನ್ನುವುದನ್ನು ಎಂಥಾ ಬೇಗನೆ ತಿಳಿದು ಬಿಟ್ಟೆ. ನೀನು ಬಹಳ ಚತುರೆ ಇರುವಿ ನೋಡು.

ಅಕ್ಕಮಹಾದೇವಿ : ಹೌದ್ರಿ, ನಾನು ಮಾತ್ರ ಚತುರೆ. ನೀವು ಚತುರರಲ್ಲವೇ?

ಅಲ್ಲಮಪ್ರಭು : ಹೌದು ನಾನು ಚತುರ.

ಅಕ್ಕಮಹಾದೇವಿ : ಈಗ ಪ್ರತ್ಯಕ್ಷ ಬಡ ಜಂಗಮರ ವೇಷ ಹಾಕಿಕೊಂಡು ಬಂದು ಬಡ ಜಂಗಮನೆಂದು ಹೇಳಿದಿರಿ. ಅಂದಮೇಲೆ ನೀವು ಚತುರರೋ, ನಾನು ಚತುರೆಯೋ ನೀವೇ ಹೇಳಿ?

ಅಲ್ಲಮಪ್ರಭು: ಹಾಗಾದರೆ ನಾನೇ ಚತುರ ಅಂದಂಗಾಯಿತು.

ಅಕ್ಕಮಹಾದೇವಿ : ಅಷ್ಟ, ಅಷ್ಟs, ಅಲ್ಲಾ, ಈ ಲೋಕದ ಚತುರರು ನೀವಿದ್ದೀರಿ.

ಅಲ್ಲಮಪ್ರಭು : ಹಾಗಾದರೆ ನೀನು ನನ್ನನ್ನು ಯಾತಕ್ಕೆ ಸ್ತುತಿ ಮಾಡುತ್ತೀ, ನಮ್ಮಂಥವರನ್ನು ಬೆನ್ನು ಹತ್ತಿ ನೀನು ಲೋಕದಲ್ಲಿ ಚತುರಿ ಆದೀ. ಇನ್ನು ಮೇಲೆ ನನ್ನ ಧ್ಯಾನವನ್ನು ಮಾಡಬೇಡಾ. ನೀನು ಸಂಭಾವಿತಳು. ನಿನ್ನ ಹತ್ತಿರ ನನ್ನಂಥವರು ನಿಲ್ಲಲಾಗದು. ನಾನು ಹೋಗುತ್ತೇನೆ.

(ಮಹಾದೇವಿ ತಡೆಯುವಳು.)

ಅಕ್ಕಮಹಾದೇವಿ : ಸ್ವಾಮಿ ನನ್ನ ಹುಚ್ಚುತನದಿಂದ ನಿಮ್ಮ ಮಾತಿನ ಕೂಡ ನಾನೂ ಮಾತನಾಡಿದೆ. ಸಿಟ್ಟಾಗಬೇಡಿ. ನಿಮ್ಮನ್ನು ಪೂಜೆ ಮಾಡುತ್ತೇನೆ ನಿಲ್ಲಿರಿ. ಹಾಗೇ ಎಲ್ಲಿಗೆ ಹೋಗುತ್ತೀರಿ?

ಅಲ್ಲಮಪ್ರಭು: ಏನೇ. ನಿನ್ನಿಂದ ಏನೇನೋ ಅನಿಸಿಕೊಂಡು ನಿನ್ನೊಂದಿಗೆ ಪೂಜೆ ಮಾಡಿಸಿಕೊಳ್ಳುತ್ತೆನೆಯೇ?

ಪದ

ಛೇ! ಛೇ! ಸರಿ ಮುಟ್ಟಬೇಡಾ
ನಿಲ್ಲುವದಿಲ್ಲಾ ನಾ ಪೋಗುವೆ ಬಿಡು ಮಾರ್ಗವನು ॥ ಪಲ್ಲ ॥

ನಾ ಪೋಗುವೆನು ಬಿಡು ಮಾರ್ಗವನು

ಅಕ್ಕಮಹಾದೇವಿ: ನಾ ಬಿಡುವುದಿಲ್ಲರಿ ನಿಮ್ಮನ್ನು.

ಅಲ್ಲಮಪ್ರಭು : ಛೇ ಬಿಡು. ಇಲ್ಲಿ ಬಂದು ಎನ್ನ ಮಾನ ಹೋಯಿತು!

ಅಕ್ಕಮಹಾದೇವಿ : ನಂದು ಬಹು ತಪ್ಪಾಯಿತು ಸ್ವಾಮಿ.

ಅಲ್ಲಮಪ್ರಭು : ನಾ ಕೇಳುವುದಿಲ್ಲ ನಿನ್ನ ಮಾತಾ.

ಅಕ್ಕಮಹಾದೇವಿ : ಸಿಟ್ಟು ಸೈರಿಸು ಪ್ರಖ್ಯಾತ. ನಿನ್ನನ್ನು ಕೆಣಕಿ ಅದೇನೊ ಅನರ್ಥವಾಯಿತು.

(ಅಲ್ಲಮಪ್ರಭು ಹೋಗುತ್ತಾನೆ)

ಅಕ್ಕಮಹಾದೇವಿ : (ಗಾಬರಿಯಿಂದ ಆಚೀಚೆ ಹುಡುಕಾಡುವಳು.)

(ಸ್ವಗತ) ಓಹೋ, ಮಾತಾಡುತ್ತ ಮಾತಾಡುತ್ತ ಮಾಯವಾಗಿ ಬಿಟ್ಟರಲ್ಲ. ನಾನು ಸಲಿಗೆಯಿಂದ ಮಾತನಾಡಿದ್ದಕ್ಕೆ ಸಿಟ್ಟಿಗೆದ್ದು ಹೋಗಿ ಬಿಟ್ಟರು. ಹೆಂಗಸರಿಗೆ ಬುದ್ಧಿ ಇಲ್ಲಾ ಎನ್ನುವ ಮಾತು ಸುಳ್ಳಲ್ಲ. ನಾನು ಎಂಥ ವಿರಕ್ತಳು. ಮನೆಗೆ ಬಂದ ಮಹಾದೇವನನ್ನು ಕಳೆದುಕೊಂಡು ಬಿಟ್ಟೆ. ಇದಕ್ಕೆ ಇನ್ನೇನು ಮಾಡಲಿ? (ಆಲೋಚಿಸಿ) ಇನ್ನಾದರೂ ಆ ಪ್ರಭುದೇವರು ಇದ್ದಲ್ಲಿಗೆ ಹೋಗಿ ನಂದು ತಪ್ಪಾಯಿತೆಂದು ಅವರ ಪಾದಕ್ಕೆ ಬಿದ್ದು, ಅವರನ್ನು ಕರಕೊಂಡು ಬಂದು ಪೂಜಾ ಮಾಡಿ ಕಳಿಸಿಕೊಡಬೇಕು. ಇದಕ್ಕೆ ನನಗೆ ಸಹಾಯ ಮಾಡುವವರು ಯಾರು? (ದೂತಿ ಏನು ಮಾಡುತ್ತಿರುವೆ? ಬೇಗ ಬಾ.)

ದೂತಿ : ಯಾಕಽ ಮಗಳಽ! ಮಹಾದೇವಿ, ಬಹಳ ಗಡಿಬಿಡಿ ಇದ್ದಂಗ ಕಾಣತೈತಿ. ಏನ ಕಳಕೊಂಡಿಯೇ ತಂಗೀ?

ಅಕ್ಕಮಹಾದೇವಿ : ಕಳಕೊಂಡಲ್ಲೇ ಹಿಂಗ ಚಿಂತಿ ಮಾಡ್ತೇನಿ ನೋಡು.

ದೂತಿ : ಏನ ಕಳಕೊಂಡಿಯೇ ತಂಗಿ?

ಅಕ್ಕಮಹಾದೇವಿ : ಪರಮಾತ್ಮನನ್ನು ಕಳಕೊಂಡಿದ್ದೇನೆ ಕೇಳವ್ವಾ.

ಪದ

ಹಾದಿಯ ಹೇಳು ದೂತಿ ನನ್ನಗಿನ್ನ
ಹಲಬುವೆ ಈಗ ನಾನು ಸಿಟ್ಟುಮಾಡಿ ॥ ಪಲ್ಲ ॥

ಗುರುವರನು ಎತ್ತ ಪೋದನು
ಸಲುಗಿಯಿಂದ ಆಡಿದೆನು ಪ್ರಭು
ಎಲ್ಲವು ನನ್ನ ಮೈಸೊಕ್ಕು ಮಾಡಿ
ನಾನು ಚತುರನೆಂದು ನಿಂದಾ ಮಾಡಿದೆನು ॥ ೧ ॥

ಹುಲಿ ಬಣ್ಣಕ್ಕಾಗಿ ನರಿ ಮೈ ಸುಟ್ಟುಕೊಂಡಂತೆ
ಎನಗೆ ಒಲೆಯಲಿಲ್ಲದ್ದು ಒಟ್ಟಗತಿಯು
ಯಾತರದೆನ್ನ ಧ್ಯಾನ ಎನಗೆ ಇಲ್ಲವ್ವಾ ಧ್ಯಾನ
ತಪ್ಪಿಗೆ ಹಚ್ಚಿಯನ್ನ ಹೋದ ಪರಮಾತ್ಮನಾ ॥ ೨ ॥

(ಮಾತು) : ಏನವ್ವಾ, ಸ್ವಾಮಿಯವರು ಒಬ್ಬ ಜಂಗಮನಂತೆ ವೇಷ ಹಾಕಿಕೊಂಡು ಬಂದಿದ್ದರು. ಅದಕ್ಕೆ ಅವರನ್ನು ಗುರುತು ಹಿಡಿದೆನು. ಅದಕ್ಕೆ ಅವರು ನೀನು ಬಲು ಚತುರೆ ಅಂದರು. ನಾನು ಸಲಿಗೆಯಿಂದ ನೀವು ಲೋಕದ ಚತುರರಿದ್ದೀರಿ ಅಂದೆನು. ಇಷ್ಟಕ್ಕೆ ಅವರು ಸಿಟ್ಟಿಗೆದ್ದು ಹೋಗಿ ಬಿಟ್ಟರು. ಅದಕ್ಕೆ ನೀನು ಏನಾದರೂ ಮಾಡಿ ಅವರನ್ನು ಕರೆದುಕೊಂಡು ಬರಬೇಕು ನೋಡವ್ವಾ ದೂತಿ.

ದೂತಿ : ಹಾಗಾದರೆ ಈಗಲೇ ಅವರನ್ನು ಹುಡುಕಿ ಕರೆದುಕೊಂಡು ಬರುತ್ತೇನೆ. ನನಗೇನು ಕೊಡುತ್ತೀಯವ್ವಾ.

ಅಕ್ಕಮಹಾದೇವಿ : ನೀನು ಬೇಡಿದ್ದು ಕೊಡುತ್ತೇನೆ.

ದೂತಿ : ನನಗೇನೂ ಬ್ಯಾಡವ್ವಾ. ಕರಿಗಡಬು ಮಾಡಿಸಿ ಉಣಿಸಿ ಬಿಡು ತಿಳೀಯಿತೇನು?

ಅಕ್ಕಮಹಾದೇವಿ : ಉಣಿಸುತ್ತೇನೆ. ಹೋಗವ್ವಾ. ಲಗು ಕರೆದುಕೊಂಡು ಬಾ.

ದೂತಿ : ಅವರು ಎತ್ತ ಹೋದರು?

ಅಕ್ಕಮಹಾದೇವಿ : ಇದೇ ಮಾರ್ಗವಾಗಿ ಹೋದರು ನೋಡವ್ವಾ.

ದೂತಿ : ಹಾಗಾದರೆ ಈಗಲೇ ಕರೆದುಕೊಂಡು ಬರುತ್ತೇನೆ.

(ದೂತಿ ಹೋಗುತ್ತಾಳೆ).

ದೃಶ್ಯ

ಪದ

ದೂತಿ : ಶರಣೆನೆ ಪ್ರೀತಿಯಿಂದಾ ಶಿವಶರಣರೆತ್ತ ಪೋದಾ
ಮಾಡಲಿ ಹ್ಯಾಂಗ ಶೇವಾ
ಅಲ್ಲೇ ಹೋಗುವರು ಹೌದೇನೋ ಶರಣರು
ಹೋಗಬೇಡಿರಿ ನೀವು, ಬರ್ರಿ ನಮ್ಮ ಮನಿತನ.

(ಮಾತು) : ಏ ಉದ್ದಂಗಿ ; ಏ ನಿಲುವಂಗೀ ಯಾಕ ಮಾತಾಡ್ತಿಯೋ. ಬಗ್ಗಿ ಕಲ್ಲ ತಗೊಳ್ಳಲೋ,

ಅಲ್ಲಮಪ್ರಭು : ಯಾಕೆ ನಿನಗೆ ಸೊಕ್ಕು ಬಂದಿದೆ. ಬೇಕೇನು ಬಡ್ತಾ?

ದೂತಿ : ಯಾಕೋ ನನ್ನ ಸೊಕ್ಕು ಕೇಳಾಕ ನೀಏನ ಸಕ್ರಿ, ಗೋದಿ ಕೊಂಡ ಕೊಟ್ಟಿಯೇನ? ಸುಮ್ಮನೇ ನಿಲ್ಲುತ್ತಿಯೋ ಕಲ್ಲಿನಿಂದಾ ಕಾಲು ಮುರಿಯಲೋ?

ಅಲ್ಲಮಪ್ರಭು : ಯಾಕೇ ನನ್ನಿಂದ ನಿನಗೇನು ಹರಕತ್ತು ಆಗಿದೆ?

ದೂತಿ : ನನಗೇನ ಹರಕತ್ತಾಗಿಲ್ಲಾ. ಆ ಸುಮತಿ ಮಹಾದೇವಿಗೆ ಹರಕತ್ತಾಗೇದ ಬರ್ರಿ.

ಅಲ್ಲಮಪ್ರಭು : ಆಕಿ ನನಗೆ ಕಂಡ ಕಂಡ ಹಾಗೆ ಅಂದಿರುವಳು. ನಾನು ಅಲ್ಲಿಗೆ ಬರುವುದಿಲ್ಲಾ ಹೋಗು.

ದೂತಿ : ನಿಮಗೆ ಅನ್ನಬಾರದ್ದು ಅಂದು. ಮಂಗ್ಯಾನಂಗ ಆಗಿ ಬುದ್ಧಿ ಬಂತು. ನಿದ್ದಿಗಣ್ಣಾಗ ಹೊಳ್ಯಾಡಾಕ ಹತ್ಯೆತಿ. ನಿಮ್ಮ ಕಾಲ ಬೀಳತೇನಿ ಬರ್ರಿ.

ಅಲ್ಲಮಪ್ರಭು : ಛೇ ! ಹುಚ್ಚಿ ಸರಿ ಅತ್ತ ನಾನು ಬರುವುದಿಲ್ಲ,

ಪದ

ದೂತಿ : ಪ್ರಭು ಸ್ವಾಮಿಗಳವರೇ ಎನ್ನ ಆಧಾರವನ್ನು
ಮುನ್ನ ಕಾಯಲಿ ಎನ್ನ ಮಾನವನು.
ಶರಣರೆನಿಸಿಕೊಂಡು ಕರುಣವ ತೋರೆಂದು
ಪರಿಪರಿ ಹಲಬುವೆ ಬರ್ರಿ ನಮ್ಮ ಮನೀತನಕ ॥

(ಮಾತು) : ಛೇ! ಹಾಗೆ ಮಾಡಬೇಡಿ. ಆಕೆಯು ಬಹಳ ಅಳಾಕ ಹತ್ತಿದ್ದಾಳೆ. ಆಕೆಯು ಮರುಗುವುದನ್ನು ನೋಡಿ ಸಾಕಾಗಿ ಕರೆಯಲು ಓಡಿ ಬಂದೆ ಬರ್ರಿ.

ಅಲ್ಲಮಪ್ರಭು : ನನಗೆ ಮತ್ತೇನಾದರೂ ಅಂದಾಳು ಬರುವುದಿಲ್ಲ.

ದೂತಿ : ಇಷ್ಟಕ್ಕs ರಾಮಾಯಣ ಆಗಿದೆ, ಇನ್ನೇನಂತಾಳ ಬರ್ರಿ.

ಅಲ್ಲಮಪ್ರಭು : ಹಾಗಾದರೆ ನಾನು ಬರಲೇಬೇಕೇ?

ದೂತಿ : ಕರೆಯಲು ಬಂದೇನ್ರಿ. ಇನ್ನೂ ಬರಲೇಬೇಕೆ ಅಂತ ಕೇಳತೀರಲ್ರೀ. ಸರಾಸರಾ ಹೋಗೋಣ ಬರ್ರಿ.

ಅಲ್ಲಮಪ್ರಭು : ಹಾಗಾದರೆ ನಡೆ ಹೋಗೋಣ.

ದೃಶ್ಯ

ದೂತಿ : ಮಹಾದೇವಿ ಕರಕೊಂಡು ಬಂದೇನು ನೋಡು. ಚೆಲೋತಂಗ ಕೈ ಹಚ್ಚು.

ಅಕ್ಕಮಹಾದೇವಿ : (ಅಲ್ಲಮಪ್ರಭುವಿಗೆ)

ಪದ

ಕ್ಷಮಿಸಿರಿ ನೀವು ಇದನ್ನ ತಿಳಿಯದೆ ಅಂದೆ ನಾ
ಅಪರಾಧಗೈದೆನಾ ನಿಮ್ಮ ಪಾದಕ್ಕೆ ಬಿದ್ದು ಬೇಡಿಕೊಂಬೆ ನಾ
ದಯಮಾಡಿರಿ ನೀವೇ ಪರಶಿವನವತಾರ ॥

ಅಲ್ಲಮಪ್ರಭು : ಪದ

ಬಿಡು ದೇವಿ ನಿನ್ನ ಚಿಂತೆಯೆನ್ನು
ದಯಮಾಡಲು ಬಂದಿರುವೆ ನಾ

ಅಕ್ಕಮಹಾದೇವಿ : ವರಮುಕ್ತಿಯ ಕೊಡು ಸರ್ವೇಶಾ
ಗಡಬಿಡಿಸು ಎನ್ನ ಬಹುಪಾಶಾ.

ಅಲ್ಲಮಪ್ರಭು : ಜ್ಞಾನಸ್ವರೂಪಳೇ ನೀನಿರುವಿ
ಜಗಉದ್ಧರಿಸಲು ಬಂದಿರುವಿ
ಎಲೇ ಮಹಾದೇವಿ ಅನುಭವಿ
ಸ್ವರೂಪವೇ ಮುಕ್ತಳೆನಿಸುವೆ ॥

(ಮಾತು) : ಮಹಾದೇವಿ ನಾನು ಹೋದುದಕ್ಕೆ ನಿಜವಾಗಿಯೂ ಹೋದರೆಂದು ತಿಳಿದಿರುವಿಯೇನು? ಛೇ ಹುಚ್ಚಿ, ಹಾಗೆನೂ ತಿಳಿದುಕೊಳ್ಳಬೇಡಾ. ನಿನಗೆ ಪ್ರತ್ಯಕ್ಷನಾಗಿ ನನ್ನ ಹಕೀಕತ್ತು ತಿಳಿಸುವ ಸಲುವಾಗಿ ಇಲ್ಲಿಗೆ ಬಂದು ಇಲ್ಲಿಯತನಕ ಇದೆಲ್ಲಾ ಮಾಡಿದೆ. ಸಾಕ್ಷಾತ್ ಸದಾಶಿವನಿರುವೆ. ನೀನು ನನ್ನ ಭಕ್ತಸ್ವರೂಪಳಾದ ಪಾರ್ವತಿದೇವಿಯೇ ಇರುವೆ. ಭಕ್ತರ ಉದ್ಧಾರ ಮಾಡುವ ಸಲುವಾಗಿ ನಾವಿಬ್ಬರೂ ಮನುಷ್ಯ ಸ್ವರೂಪವನ್ನು ತೊಟ್ಟು ಈ ನರಲೋಕಕ್ಕೆ ಬಂದಿರುವೆವು. ಅದರಂತೆ ನೀನು

ಶಿವಭಕ್ತಿ ಪ್ರಚಾರವನ್ನು ಮಾಡಿ, ಅದನ್ನು ಜಗದ ತುಂಬ ಹರಡು ತಿಳಿಯಿತೇ. ನಾನು ಈಗ ಕಲ್ಯಾಣ ಪಟ್ಟಣಕ್ಕೆ ಹೋಗಿ ಚೆನ್ನಬಸವೇಶರಾಜ, ಬಸವಣ್ಣ ಇವರಿಗೆ ಪ್ರತ್ಯಕ್ಷನಾಗಿ ಸಿದ್ಧರಾಮಶಿವಯೋಗಿಗೆ ಲಿಂಗಧಾರಣ ಮಾಡಿಸುತ್ತೇನೆ. ನನಗೆ ಹೋಗಲಿಕ್ಕೆ ಅನುಮತಿ ಕೊಡು.

ಅಕ್ಕಮಹಾದೇವಿ : ನಾನು ನಿಮ್ಮೊಂದಿಗೆ ಬರುತ್ತೇನೆ. ನಿಮ್ಮ ಪಾದ ಸೇವೆ ಮಾಡುವುದನ್ನು ಬಿಟ್ಟು ಇಲ್ಲಿ ಯಾಕೆ ಇರಲಿ, ಇನ್ನೇನು ಇರುವುದಿಲ್ಲ ಅಂತ ತಿಳಿದುಬಿಡಿರಿ.

ಅಲ್ಲಮಪ್ರಭು : ದೇವಿ ನೀನು ಇರಲಿಕ್ಕೇ ಬೇಕು. ಇಲ್ಲಿಯೇ ಇದ್ದು ಶಿವಭಕ್ತಿಯ ಪ್ರಭಾವವನ್ನು ಈ ಜಗತ್ತಿನಲ್ಲಿ ತೋರಿಸಿ ಭಕ್ತರನ್ನು ಉದ್ದಾರ ಮಾಡು. ಅಂದರೆ ಪಾದಸೇವಾ ಮಾಡುವದಕ್ಕಿಂತ ಹೆಚ್ಚಿನ ಆನಂದ ದೊರೆಯುತ್ತದೆ. ಅದಕ್ಕೇ ನೀನು ಈ ಉಡುತಡಿ ಪಟ್ಟಣದೊಳಗೆ ಇದ್ದಿರು. ಮತ್ತು ಯಾರು ನಿನಗೆ ಪ್ರತಿಕೂಲರಾಗುತ್ತಾರೋ ಅವರು ನಿನ್ನ ಶಾಪದಿಂದ ಸುಟ್ಟು ಹೋಗಲಿ. ತಿಳಿಯಿತೋ. ಇನ್ನು ನನಗೆ ಅಪ್ಪಣೆ ಕೊಡು.

ಅಕ್ಕಮಹಾದೇವಿ : ಸ್ವಾಮಿ ನಿಮ್ಮ ಅಪೇಕ್ಷೆಯನ್ನು ನಾನೂ ಎಂದಿಗೂ ಮೀರುವುದಿಲ್ಲ.

ಅಲ್ಲಮಪ್ರಭು : ಶಿವಭಕ್ತಿ, ಶಿವಜ್ಞಾನ, ಶಿವಾಚಾರ ಅನ್ನುವಂಥ ಬೀಜವನ್ನು ಬಿತ್ತಲಿಕ್ಕೆ ಹತ್ತಿರುವೆ. ಆಗ ಆ ಬೀಜ ಹುಟ್ಟಿ, ಮೊಳಕೆಯಾಗಿ ಸಸಿ ದೊಡ್ಡದಾದ ಕೂಡಲೇ ದೃಢಭಾವವೆನ್ನುವಂಥ ಹಣ್ಣು ಆಗುವುದಲ್ಲಾ. ಆ ಹಣ್ಣನ್ನು ಯಾವ ಪುಣ್ಯವಂತರು ಊಟ ಮಾಡುತ್ತಾರೋ ಅಂಥ ಪುಣ್ಯವಂತರೆಲ್ಲ ಕೂಡಿಕೊಂಡು, ಶ್ರೀಶೈಲದ ಕದಳೀ ವನದೊಳಗೆ ಎಲ್ಲರಿಗೂ ಮತ್ತೊಮ್ಮೆ ಉಪದೇಶ ಮಾಡುತ್ತಿರುತ್ತಾರೆ, ಆಗ ನೀನು ಅಲ್ಲಿಗೆ ಬರುವಿ. ಬಂದಾಗ ನಿನಗೆ ನನ್ನ ನಿಜರೂಪ ತೋರಿಸುತ್ತೇನೆ. ನೀನು ಕಾಳಜಿ ಮಾಡಬೇಡಾ. ನನಗೆ ಇನ್ನಾದರೂ ಅಪ್ಪಣೆಯನ್ನು ಕೊಡು.

ಅಕ್ಕಮಹಾದೇವಿ : ಸ್ವಾಮಿ ತಮಗೆ ಪೂಜೆ ಮಾಡುತ್ತೇನೆ. ಸ್ವೀಕರಿಸಬೇಕು.

ಅಲ್ಲಮಪ್ರಭು : ಆಗಲಿ ನಿನ್ನಿಚ್ಛೆ (ಈಗ ಪೂಜೆ ನಡೆಯಬೇಕು.)

ಅಕ್ಕಮಹಾದೇವಿ : (ಸ್ತೋತ್ರ)

ಪರವಸ್ತು ಪ್ರಭುವರ ವೇದತೀರ್ಥ
ಪಾಲಿಸು ಪ್ರಖ್ಯಾತ ಕಾಮಿತ ಫಲದಾತೆ
ಬಹುಪಾತಕೀರಿದು ತೀರ್ಥ ॥ ಪಲ್ಲ ॥

ನಿಮ್ಮನು ಪೂಜಿಸಿ ಆದೆನು ಸುಖವಾಸಿ
ಭುವದೊಳೆನಗಾಗುವಾಭಾಸಿ ತಪ್ಪಿತು ಇಂದಿಗೆ ಭೀತಿ ॥ ೧ ॥

ಎನ್ನ ಸರಿ ಯಾರೂ ಇಲ್ಲಾ; ಹೊಂದಿದೆ ಗುರುಬಲ
ಕಂಡೆನು ಜ್ಞಾನಶೀಲ ಭಕ್ತಿಮಾರ್ಗದ ಮೂಲ ॥ ೨ ॥

ಮೇದಿನಿಯೊಳು ಖ್ಯಾತಿ ದೇವಗಿರಿ ಗ್ರಾಮದ
ಬಸವೇಶನ ಕರುಣ ಇರಲಿ ಸಂಪೂರ್ಣ ॥ ೩ ॥

ಅಲ್ಲಮಪ್ರಭು : ದೇವಿ ಇನ್ನಾದರೂ ನಿನ್ನಾಣಿ ಸಂಪೂರ್ಣವಾಯಿತೋ?

ಅಕ್ಕಮಹಾದೇವಿ : ಸ್ವಾಮಿ ತೀರಿತು. ಆದರೆ ನಿಮ್ಮ ಅಂತಃಕರುಣವು ಯಾವಾಗಲೂ ನನ್ನ ಮೇಲೆ ಇರಬೇಕೆಂದು ಬೇಡಿಕೊಳ್ಳುತ್ತೇನೆ.

ಅಲ್ಲಮಪ್ರಭು : ದೇವಿ ನಿನ್ನ ಮೇಲೆ ನನ್ನ ಅಂತಃಕರುಣವು ಯಾವಾಗಲೂ ಇದೆ. ನೀ ಇರುವಲ್ಲಿಗೆ ಸ್ವತಃ ನಾನೇ ಬಂದು ಆಶೀರ್ವಾದ ಮಾಡುತ್ತೇನೆ. ಇಷ್ಟೇ ಅಲ್ಲ, ಪರಿಶುದ್ಧ ದೇವಗಿರಿಯಲ್ಲಿ ಬಸವಣ್ಣನು ಬಂದು ನಿನಗೆ ಬಂದಂಥ ವಿಘ್ನಗಳನ್ನು ಸಂಹಾರ ಮಾಡುವುದರ ಸಲುವಾಗಿ ಆಯುಧಪಾಣಿಯಾಗಿ ಟೊಂಕಕಟ್ಟಿ ನಿಂತಿದ್ದಾನೆ. ಶಿವಭಕ್ತಿ ಪ್ರಭಾವವನ್ನು ಈ ಜಗತ್ತಿನ ತುಂಬಾ ಹಬ್ಬಿಸು. ತಿಳಿಯಿತೋ, ಇನ್ನು ನನಗೆ ಹೋಗಲು ಅಪ್ಪಣೆ ಕೊಡು.

ಅಕ್ಕಮಹಾದೇವಿ : ಧನ್ಯಳಾದೆನು ಶಿವಶರಣರ ಪೂಜಿಸಿ, ನಮಸ್ಕಾರ ಹೋಗಿ ಬರ್ರಿ,

(ಇಬ್ಬರೂ ಹೋಗುವರು).

♦

ಅಂಕ–೨

(ನಿರ್ಮಲಶೆಟ್ಟಿ ಕುಬುಸದ ಕಣಗಳನ್ನು ಮಾರುತ್ತ ರಂಗಕ್ಕೆ ಪ್ರವೇಶ.)

ನಿರ್ಮಲಶೆಟ್ಟಿ : ಕುಬಸಾದ ಖಣಾ ತಗೋತೀರೇನವಾss ಕುಬಸಾss ನನ್ನದೇನು ಹಣೆಬರಹ. ಬೆಳಗಿನಿಂದ ಬಂದೇನಿ. ಈ ಊರನ್ನ ಬಾಳಸಾರೆ ಗಣಗಣ ತಿರುಗಿ ಹಲುಬಿದರೂ ಒಬ್ಬರಾದರೂ ಮಾತನಾಡಿಸಬಾರದೇ. ನಾನು ಕುಬಸಾ ತಗೋತೀರೇನವ್ವಾಂತ ಹಲುಬಿ ಸಾಕಾಯಿತು. ಮೊದಲs ಬಿಸಿಲು, ಆಮೇಲೆ ಉಪವಾಸ ಇರುವುದೊಂದು ಮತ್ತು ಈ ಗಂಟು ಹೊತ್ತು ತಿರುಗುವುದೊಂದು, ಹೀಗಾಗಿ ನನ್ನ ಕೈ ಕಾಲುಗಳೇ ಸೋತುಬಿಟ್ಟವು. ಇಷ್ಟಾದರೂ ಒಂದು ಖಣಾನೂ ಖರ್ಚಾಗಬಾರದೇ? ನನ್ನ ನಸೀಬಾ ಆ ಶಿವನೆ ಬಲ್ಲಾ. ನನಗೆ ಈ ಚಿಂತಿ ಇರುವಾಗಲೇ ಈಗೊಂದು ತಿಂಗಳ ಹಿಂದೆ ನನ್ನ ಹೆಂಡತಿ ಬಸಲಿಂಗಿ ದುರಗವ್ವನ ಬೇನ್ಯಾಗ ಸತ್ತುಹೋಗಿ ನನಗ ಎಂಥಾ ಪೇಚ ಹಾಕಿ ಬಿಟ್ಟಳು. ಪ್ರಪಂಚದ ಗೋಳಾಟ ಏನ್ ಹೇಳಬೇಕ್ರಪಾ? ಮನುಷ್ಯ ಜನ್ಮಕ್ಕೆ ನೋಡ್ರಿ ಇಂಥಾ ದರಿದ್ರತನ ಬರಬಾರದು. ಬಂತಂದರ ಚಿಂತಿ ಮಾಡಾಕ ಹಚ್ಚಿ ಗಂಡಸ್ತನ ಕಳೆದು ಬಿಡುತ್ತದೆ. ಈ ಸೂರೀ ಏನ ಹೇಳಲಿ? ಈ ಊರಿನ ರಾಜಾ ಕೌಶಿಕನ ಉರದಾಟ ಬಹಳ ನಡದೈತಿ. ಅವಗ ನಾವಂದ್ರ ಏನಾಗೇತೋ ಏನೋ? ಒಂಥರಾ ಮಾಡತಾನ. ಎಲ್ಲಾದಕೂ ದೇವರು ಅದಾನ. ಇಂಥ ಬರಗಾಲದೊಳಗ ಮಗಳು ಮಹಾದೇವಿಯಂತು ಲಿಂಗಪೂಜೆ, ಲಿಂಗಪೂಜೆ ಎಂದು ಹಗಲಿರುಳೂ ದೇವರ ಮುಂದೆ ಕುಳಿತಿರತಾಳ. ಅಡಗಿ ಮನಿಯಂದರ ಆಕಿ ಹುಟ್ಟಿದ ಮ್ಯಾಲ ಹಣಕಿ ಹಾಕಿಲ್ಲಾ. ನೋಡಿಲ್ಲಾ. ನಾನು ಸಿಟ್ಟಿಗೆದ್ದು ಆಕೆಯನ್ನು ಊಟಕ್ಕೆ ಕರೆಯದೇ ಹೋದರೆ, ಆಕೆಯು ಏಳು–ಎಂಟು ದಿವಸ ಉಪವಾಸ ಇರತಾಳ. ಏನೋ ಶಿವಯೋಗದೊಳಗ ಕುಳಿತಿರುತಾಳಂತ. ಅದೆಂಥಾ ಸುಡಗಾಡ ಶಿವಯೋಗವೋ. ಎಲ್ಲಿ ಕಲ್ತಾಳೋ ಏನೋ! ನಾನು ಹಾಗ್ಯಾಕ ಮಾಡುತ್ತೀ ಅಂತ ಕೇಳಿದರೆ, ನಾನು ಕೈಲಾಸಕ್ಕೆ ಹೋಗತೀನಿ ಅಂತಾ ಅನ್ನುತ್ತಾಳೆ. ಇದು ಹ್ಯಾಗಾದರೂ ಇರಲಿ! ಇನ್ನೂ ಒಂದು ಹೆಚ್ಚಿನ ಪ್ರಸಂಗಾ ಅದ ನೋಡ್ರೆಪ್ಪಾ. ಏನೆಂದರೆ

ಈ ಊರ ಅರಸ ಕೌಶಿಕರಾಜಾ ಅದಾನಲ್ಲಾ, ಅವಾ ಬಂಧು ನಿನ್ನ ಮಗಳನ್ನ ನನಗೆ ಲಗ್ನ ಮಾಡಿಕೊಡು ಎಂದು ಹಗಲೆಲ್ಲ ಉಪದ್ರವ ಕೊಡುತ್ತಾನೆ. ಅವಾ ನೋಡಿದರೆ ಕ್ಷತ್ರಿಯವ ನಾವು ನೋಡಿದರೆ ವೀರಶೈವರು. ಅವರಿಗೂ ನಮಗೂ ಬಳಕೆ ಹೇಗೆ ಸಾಧ್ಯ ಅಂತ ಕೇಳಿದರೆ, ಈ ಊರೊಳಗ ಇರಬೇಕಂತಿಯೋ ಇಲ್ಲಾ, ಊರು ಬಿಟ್ಟು ಹೋಗಬೇಕಂತಿಯೋ ಅನ್ನುತ್ತಾನೆ. ಅದರ ಸಲುವಾಗಿ ಸರಿರಾತ್ರಾಗ ನನ್ನ ಮಗಳನ್ನ ಕರಕೊಂಡು ಎಲ್ಲಾದರೂ ದೂರ ಹೋಗಬೇಕಂದರ ನನ್ನ ಮಗಳು ಅನ್ನುತ್ತಾಳೆ– "ಛೀ, ಆನೆಯ ಮೇಲೆ ಕುಳಿತವರು ಶ್ವಾನಕ್ಕೆ ಹೆದರಬೇಕೇ". ತಾನು ಆನೆಯ ಮೇಲೆ ಕುಳಿತವಳಂತೆ, ಆ ರಾಜ ಶ್ವಾನನಂತೆ. ಇದೆಂಥಾ ಸಮಜೂತು. ಏನರ ಇರಲಿ, ಅ ರಾಜ ನನ್ನ ಮನಿಮಟ ಬಂದರೆ ಬರಲಿ. ಅವನನ್ನು ಕಡಿದು ಹಾಕಿ ಬಿಡುತ್ತೇನೆ. ಏನ್ರೆಪಾ ಈ ಓಣಿಯೊಳಗ ವ್ಯಾಪಾರ ಆಗಲಿಲ್ಲಾ. ಮುಂದಿನ ಓಣಿಗಾದರೂ ಹೋಗುತ್ತೇನೆ. ಕುಬಸಾ ಬೇಕೇನೆವ್ವಾ ಕುಬಸಾಽಽ.

ದೃಶ್ಯ

(ಕೌಶಿಕ ರಾಜನ ಪ್ರವೇಶ)

ಕೌಶಿಕ : **ಪದ**

ಸುಂದರಾಂಗಿ ಮಾದೇವಿ ನಾನು ಎಂದು ಕೂಡುವೆನು
ಮಂದಗಮನೆ ಇಂದುಮುಖಿಯೇ ಎಂದು ನೋಡುವೆನು ॥ ಪಲ್ಲ ॥

ಮದನಪ್ರಿಯಳನ್ನು ಚಾರು ಚೆಲ್ವಿಕೆ ನಾರಿಮಣಿಯ
ಬಯಸಿ ನಾನು ಅಪಾರ ಕೊರಗಿದೆ ॥ ೧ ॥

ಬಾಲೆ ಮಾಲೆ ಶ್ಯಾಲೆ ಮದನ ಲೋಲೆ ಬಂದೆನು
ಹಾಲು ಸಕ್ಕರೆ ಕುಡಿದಂತೆ ಮೇಲೆ ಸೌಖ್ಯವು
ಸುಂದರಾಂಗಿ ಮಾದೇವಿ ನಾನು ಎಂದು ಕೂಡುವೆನು ॥ ॥ ೨ ॥

(ಮಾತು) : (ಸ್ವಗತ) ಓಹೋ! ಆ ಮಹಾದೇವಿಯಂಥ ಚೆಲುವೆ! ಅನುಪಮ ಲಾವಣ್ಯ ಒಯ್ಯಾರಗಳನ್ನು ನೋಡಿದಾಗಿನಿಂದ ಆಕೆಯನ್ನು ಯಾವಾಗ ಲಗ್ನವಾದೇನೆಂದು ನನ್ನ ಮನಸ್ಸು ಕುಣಿಯುತ್ತಿದೆ. ಆದರೆ ಮಾಡಬೇಕೇನು? ಅವಳು ವೀರಶೈವ ಧರ್ಮದವಳು. ನಾನು ಕ್ಷತ್ರಿಯ ವಂಶದವನು. ಅಂದ ಮೇಲೆ ನನಗೆ ಹೆಂಡತಿಯಾಗಲಿಕ್ಕೆ ಅವಳು ಸ್ವಲ್ಪ ಹಿಂದೆ ಮುಂದೆ

ನೋಡಲಿಕ್ಕೆ ಹತ್ತಿರುವಳು. ಆಕೆಯ ಮನಸ್ಸೇನು ನನ್ನ ಮೇಲೆ ಸಂಪೂರ್ಣವಿದೆ. ಅಂದಲ್ಲಿ ಎರಡನೇಯವರನ್ನು ಲಗ್ನವಾಗಬಾರದೆಂದು, ಇದೊಂದು ಜಾತಿಭೇದದ ಸಲುವಾಗಿ ನಾನು ಸಂನ್ಯಾಸಿ ಇದ್ದೇನೆ, ಲಗ್ನವಾಗುವುದಿಲ್ಲವೆಂದು ಮದುವೆಯ ಆಶೆ ಬಿಟ್ಟು ಕುಳಿತಿದ್ದಾಳೆ. ಇದಕ್ಕೆ ಇನ್ನೇನು ಮಾಡಬೇಕು. ಆ ಮಹಾದೇವಿಯು ತಾನಾಗಿ ಬಂದು ನನ್ನ ವಶವಾಗುವತನಕ ನನ್ನ ಮನಸ್ಸಿಗಂತೂ ಎಳ್ಳಷ್ಟೂ ಸಮಾಧಾನವಿಲ್ಲ. ನಾನೇ ಆಕೆ ಇದ್ದಲ್ಲಿಗೆ ಹೋಗಿ ಆಕೆಯನ್ನು ಜೋರಿನಿಂದ ಕೂಡಬೇಕೆಂದರೆ, ನಾನು ಈ ಊರ ಅರಸನಾಗಿ ಹಾಗೆ ಅಲ್ಲದ ಕೆಲಸ ಮಾಡಲಿಕ್ಕೆ ಹತ್ತಿದರೆ ಆಮೇಲೆ ಜನರು ಹಿಂದೆ ಮುಂದೆ ಹಾಸ್ಯ ಮಾಡುತ್ತಾರೆ. ಅಲ್ಲದೇ ಅವರು ಹಾದಿಯನ್ನು ಬಿಟ್ಟು ಬಿಡುತ್ತಾರೆ, ಇಷ್ಟರ ಸಲುವಾಗಿ ಎಷ್ಟು ದಿವಸ ಸುಮ್ಮನಿರಬೇಕಾಯಿತು. ನಾನು ಇನ್ನೇನು ತಡೆಯುವದಿಲ್ಲ. ಏನು ಮಾಡುತ್ತೇನೆಂದರೆ, ಆ ಮಹಾದೇವಿಯ ತಂದೆಗೆ ಮಾತಿನಲ್ಲಿ ಸಿಲುಕಿಸಿ ಇರುಕು ಹಾಕುತ್ತೇನೆ. ಅವನ ಕಡೆಯಿಂದ ಆಕೆಯನ್ನು ಒಪ್ಪಿಸುತ್ತೇನೆ. ಅಂದರೆ ಅವಳು ನಿರ್ವಾಹವಿಲ್ಲದೇ ತಾನೇ ಬಂದು ನನ್ನ ವಶವಾಗುತ್ತಾಳೆ, ಇಷ್ಟರ ಸಲುವಾಗಿ ಸುಮ್ಮನೆ ಹತ್ತೆಂಟು ಆಲೋಚನೆ ಮಾಡುವ ಕಾರಣಯಿಲ್ಲ. ಈಗೀಂದೀಗ ನಿರ್ಮಲನನ್ನು ಕರೆಯಲು ಕಳಿಸುತ್ತೇನೆ. (ಪ್ರಕಟ) ಎಲೋ ಒಳಗೆ ಯಾರು ಇರುವಿರಿ?

(ದೂತಿಯ ಪ್ರವೇಶ)

ದೂತಿ : ಯಾಕ್ರಿ? ನಾನು ದೂತಿ ನೀವು ಯಾರು?

ಕೌಶಿಕ : ಯಾಕೆ? ನಾನು ರಾಜಾ.

ದೂತಿ : ಎಂಥ ರಾಜಾ? ಕುಂಬಳ ರಾಜಾನೋ ಕಳಾವರ ರಾಜಾನೋ !

ಕೌಶಿಕ : ಈ ಉಡತಡಿ ಪಟ್ಟಣವನ್ನಾಳುವಂಥ ಕೌಶಿಕ ಬಹಾದ್ದೂರ ಇದ್ದೇನಿ ನೋಡು.

ದೂತಿ : (ಪರೀಕ್ಷೆ ಮಾಡಿ ನೋಡಿ) ಓಹೋ! ಕೌಶಿಕ ಮಹಾರಾಜರೇನ್ರೀ ಯಾಕ್ರೀ ನನ್ನ ಕಣ್ಣ ಕಾಣಿಸುದಿಲ್ಲರಿ. ಯಾಕ್ರಿ ಬಹಳ ಚಿಂತ್ಯಾಗ ಕೂಂತಂಗ ಕಾಣಸತೈತೆ.

ಕೌಶಿಕ : ದೂತಿ ಅದನ್ನೆಲ್ಲಾ ತೆಗೆದುಕೊಂಡು ಏನು ಮಾಡುತ್ತೀ. ಆ ಚಿಂತಿ ಬಿಡಿಸುವವರ ಮುಂದೆ ಹೇಳಿದರೆ. ಏನಾದರೂ ಆದೀತು. ನಿನ್ನಂಥವಳ ಮುಂದೆ ಹೇಳಿದರೆ ಏನು ಫಲವು. ಅದರಿಂದ ನೀನು ಸುಮ್ಮನೆ ಹೋಗು.

ದೂತಿ : ಆ! ಅಂದ್ರ ನಾನು ನಿಮಗೆ ಹಾಗೆ ಕಾಣಿಸುತ್ತೀನೋ. ರಾಜಾ ಆದರ ನಿನ್ನ ನಾಳಿಗೆ ನೋಡೇನು. ನಾನು ಎಂಥಾಕಿ. ಗಾಳಿಗೆ ಗಾಳಿ ಗಂಟು ಹಾಕುವಂಥ ಮಾಯಾಕಾರತಿ. ಅದೇನ್ರೀ ನಿಮ್ಮದು ಮೊದಲು ಹೇಳ್ರೀ. ಅದನ್ನು ಮಾಡಿದಾಗರ ಬಹಾದ್ದೂರ ದೂತಿ ಅಂತೀರಿಲ್ಲೋ?

ಕೌಶಿಕ : ದಾಸಿ ನಿನ್ನ ಹತ್ತಿರ ಅಂಥ ಶಕ್ತಿ ಇರುವುದೇನು?

ದೂತಿ : ಇರದೇನು ಮಾಡಿತು.

ಕೌಶಿಕ : ಹಾಗಾದರೆ ನಾ ಬೇಡಿದ್ದನ್ನು ತಂದು ಕೊಡುತ್ತೀಯೇನು?

ದೂತಿ : ನನಗೆ ಆಗದಂತಾದ್ದು ಈ ಭೂಮಿಯ ಮೇಲೆ ಏನೂ ಇಲ್ಲಂತ ತಿಳಿದು ಬಿಡ್ರಿ.

ಕೌಶಿಕ : ಅಲ್ಲ ದೂತಿ ಹಾಗಲ್ಲಾ, ಈಗ ನನಗೆ ಒಂದು ಹಣ್ಣು ಬೇಕಾಗಿದೆ ಅಂತಾ ತಿಳಿ. ಆ ಹಣ್ಣು ಮರದ ತುದಿಯಲ್ಲಿ ಬಹಳ ದೂರ ಇದ್ದಲ್ಲಿ ಅದು ಕಲ್ಲಿಗೆ ಬೀಳುವ ಹಾಗಿಲ್ಲ. ಮತ್ತು ಆ ಮರಕ್ಕೆ ಮಳ್ಳುಗಳು ಬಹಳವಿದ್ದುದರಿಂದ ಆ ಮರವೇ ಹತ್ತಲಿಕ್ಕೆ ಬರುವಂತಿಲ್ಲಾ. ಇದಕ್ಕೆ ಏನು ಮಾಡಬೇಕಂತ ಚಿಂತಿ ಮಾಡುತ್ತಿರುವೆ. ಇದಕ್ಕೆ ಏನು ಯುಕ್ತಿ ಮಾಡಬೇಕು ಹೇಳು ನೋಡೋಣ.

ದೂತಿ : ಇದಕ್ಕೆ ಏನು ಮಾಡಬೇಕೆಂದರೆ, ಆ ಹಣ್ಣು ಬೇಕಾದರೆ ಮರದ ಮುಳ್ಳುಗಳನ್ನು ಸವರಿಕೊಂತ ಹತ್ತಬೇಕು. ಅದು ಆಗದಿದ್ದರೆ, ಮರದ ಬೊಡ್ಡೆಯನ್ನು ಕಡಿದು ಉರುಳಿಸಿದರೆ, ಆಗಲಾದರೂ ಹಣ್ಣು ಸಿಕ್ಕೀತಿಲ್ಲೋ?

ಕೌಶಿಕ : ಹಾಗಾದರೆ ಇದರಂತೆ ಬೇತಮಾಡಿ, ನನಗೆ ಆ ಸ್ತು ತಂದು ಕೊಟ್ಟರೆ ಭಲೇ ದೂತಿ ಅನ್ನುತ್ತೇನೆ.

ದೂತಿ : ನಿಜವಾಗಿಯೂ ತಂದು ಕೊಡುತ್ತೇನೆ. ಆ ವಸ್ತು ಯಾವುದು?

ಕೌಶಿಕ :

ಪದ

ಮೂರುಲೋಕ ಜಯಿಸುವ ರೂಪವಂತಿ
ಇರುವಳೋ ಆ ಕಾಂತಿ ಮೀರಿದ ಮತಿವಂತಿ
ಬೇಕೆನಗೆ ಆ ರೂಪವಂತೆ ಕಾಂತಿ ॥
ಅಪರೂಪದ ಹೆಣ್ಣು ಸುಲಕ್ಷಣ ಸಂಪನ್ನಿ
ಮೈ ಬಣ್ಣ ಲಿಂಬಿಹಣ್ಣ ಬಳಕುವ ನಡಸಣ್ಣ
ಕಮಲ ಪೂರ್ವದ ಹೆಣ್ಣ ॥

ಬೆರಗಾಗಿ ನಿಂತೆನು ನೋಡಿ ಅವಳ ಚೆಲ್ವಿಕೆಯ
ರತಿದೇವಿ ಇರುವಳೋ ಸುದ್ದ ಶಾನ
ಕರತಂದು ಕೊಡು ಆ ಚೆಲ್ವಿಕೆಯ ॥

(ಮಾತು) : ಏನೇ ದಾಸಿ ಸ್ವರ್ಗ, ಮರ್ತ್ಯ, ಪಾತಾಳ ಈ ಮೂರೂ ಲೋಕಗಳಲ್ಲಿ ಎಲ್ಲಿ ಹುಡುಕಿದರೂ ಸಿಗದಂಥ ಒಂದು ಅಪರೂಪ ಆದಂತಾ ಹೆಣ್ಣು ನೋಡಿ ಬಂದಿರುವೆನು. ಅವಳ ಚೆಲುವಿಕೆ, ಹಾವಭಾವ, ಒಯ್ಯಾರವನ್ನು ವಿಚಾರ ಮಾಡಿನೋಡಿದರೆ ಕಾಮರಾಜನ ಹೆಂಡತಿ ರತಿದೇವಿಯೂ ಸಹ ಈಕೆಯ ಮುಂದೆ ನಾಚಬೇಕು. ಆಕೆಗೂ ಸಹ ಇಂಥಾ ಮೈಬಣ್ಣ ಇರಲಿಲ್ಲಾ. ದೂತಿ, ಆಕೆಯ ಚೆಲ್ವಿಕೆಯನ್ನು ಎಷ್ಟು ಹೇಳಿದರೂ ತೀರದು. ಅವಳೇನು ಸಾಮಾನ್ಯ ಹೆಣ್ಣಲ್ಲ. ಈ ಜಗತ್ತನ್ನು ವಶಮಾಡುವುದರ ಸಲುವಾಗಿ ಸ್ತ್ರೀ ಲಾವಣ್ಯ, ಅಭಿಮಾನ ಇವು ದೇವತೆಯೇ ಜಗನ್ಮೋಹಿನಿಯ ರೂಪ ತೊಟ್ಟು ಬಂದಂತೆ ತೋರುತ್ತದೆ. ಅವಳು ಸರಸ್ವತಿಯೋ, ಲಕ್ಷ್ಮಿಯೋ ಅಥವಾ ಪಾರ್ವತಿಯೋ, ಎಂತೆಂಥ ಕವಿಗಳು ಆಕೆಯ ವರ್ಣನೆಯನ್ನು ಮಾಡಲು ಆಗದೆ ಸೋತು ಹೋಗಿದ್ದಾರೆ. ಆ ನಾರಿಮಣಿಯನ್ನು ಹುಟ್ಟಿಸಿದ ಬ್ರಹ್ಮನ ಜಾಣತನವನ್ನು ಎಷ್ಟಂತ ಹೊಗಳಲಿ! ದೂತಿ ತೇಟ್ ಲಿಂಬಿ ಹಣ್ಣಿನಂತ ಮೈಬಣ್ಣ. ಆ ಹೆಣ್ಣು ನೋಡಿದ ಕೂಡಲೆ ಹೆಂಗ ಆಯಿತೆಂದರೆ ಕೋಲ್‌ಮಿಂಚು ಹೊಡೆದಂತಾಗಿ ಬುದ್ಧಿಗೆಟ್ಟು ಹುಚ್ಚನಾಗಿ ನಿಂತುಬಿಟ್ಟಿದ್ದೇನೆ.

ದೂತಿ : ಛೇ ಅದೆಂಥಾ ಹೆಣ್ಣು ನೋಡಿ ಬಂದಿರುವಿರಿ. ನಿಮ್ಮ ಪಟ್ಟದ ಹೆಂಡತಿ ಸುಮಾರು ಅದಾಳೇನ್ರೀ. ಚೆಂಗಳಿಕೆವ್ವ ನೋಡಿದಾಂಗಾಗತೈತೆ. ದೂರದ ಗುಡ್ಡ ಕಣ್ಣಿಗೆ ನುಣ್ಣಗೆ ಕಾಣತೈತೆ. ಎಲ್ಲೋ ದೂರದ ಕಳ್ಳಕಿಂಡ್ಯಾಗ ಹಣಕಿ ನೋಡಿದಾಂಗ ಕಾಣತೈತೆ. ಆಕಿ ಯಾವಾಕಿ ನಿನ್ನ ಮನಸ್ಸಿಗೆ ಒಳ್ಳೆ ಬಂದಾಂಗ ಕಾಣತೈತೆ. ಆ ಹುಚ್ಚಿಗೆ ಹೋಗಬ್ಯಾಡ್ರಿ ಮನಿಯೊಳಗಿನ ಹೆಂಡತಿ ಚೆಲ್ವಿಕಿಯಂಥಾದ್ದು. ಈ ಭೂಮಿಯ ಮೇಲೆ ಯಾವಾಕಿ ಇದ್ದಾಳು. ಅಂಥವರು ಯಾರೂ ಇಲ್ಲಾ ತಿಳಿದು ಬಿಡ್ರಿ.

ಕೌಶಿಕ : ಆ ಜಗತ್ತಿಗೆ ಕಣ್ಣು ಆದಂತಾ ಸೂರ್ಯನ ಬೆಳಕಿನ ಮುಂದೆ ಆ ರಾಡಿಯ ಮಿನುಕು ಹುಳುಗಳ ಬೆಳಕು ಸರಿಯಾದೀತೇನ್ರೀ. ಎಂದಿಗೂ ಸರಿಯಾಗಲಿಕ್ಕೆ ಸಾಧ್ಯವಿಲ್ಲಾ. ನಾನು ನೋಡಿದ ಹೆಣ್ಣಿನ ಚೆಲ್ವಿಕೆ, ಶೃಂಗಾರ ಹೆಂಡತಿ ಚಾರುಮತಿ ಒಬ್ಬಳು ಯಾಕೆ ಈ ಪೃಥ್ವಿಯ ಮೇಲೆ ಆಕೆಯಂಥಾ ಚೆಲುವಿಕೆಯು ಯಾರಿಗೂ ಇಲ್ಲಾ ಹೇಳುತ್ತೇನೆ ಕೇಳು.

ಪದ

ಪೂರ್ಣಚಂದ್ರನ ಸರಿ ಕೋಮಲಾಂಗಿಯ ಮಾರಿ
ಮಲ್ಲಿಗೆಯ ಮೊಗ್ಗಿನಂತೆ ಒಪ್ಪುವಂತೆ ಆ ಸ್ತ್ರೀಯಳು
ಇರುವಳೋ ರತಿಚೆಲ್ವಿಕೆ ಇರುವಳೋ ಆ ಕಾಂತೆ
ಮಂದಹಾಸದ ಆ ನಾರಿ ಇರುವಳೋ ಆ ವೈಯಾರಿ ॥

(ಮಾತು) : ದಾಸಿ ಆ ಹೆಣ್ಣಿನ ರೂಪ ಸೌಭಾಗ್ಯವನ್ನು ಎಷ್ಟಂತ ಹೇಳಲಿ! ಆ ಹೆಣ್ಣಿನ ಮುಖವು ಹುಣ್ಣಿಮೆಯ ಚಂದ್ರನಂತೆ ತಿಳಿದು ಅದನ್ನು ನುಂಗಬೇಕೆಂದು ಭಾವಿಸಿ, ಆಕೆಯ ತಲೆಯ ಕೂದಲು ಎನ್ನುವಂಥ ಯೌವನ ಸಿರಿಯು, ಆಕೆಯ ಮುಖವನ್ನು ನುಂಗಲಿಕ್ಕೆ ಹತ್ತಿದಂತೆ, ಆಕೆಯ ಹಣೆಯ ಸುತ್ತಲೂ ಮುಂಗುರುಳುಗಳು ಹರಡಿ ಬಹಳೇ ಸುಂದರವಾಗಿ ಕಾಣುತ್ತದೆ. ಆಕೆಯ ಮುಖ, ನಗುವಾಗ ಆಕೆಯ ಹಲ್ಲು ತೇಟ್ ಮಲ್ಲಿಗೆಯ ಮೊಗ್ಗಿನಂತೆ, ಆಕೆಯ ಮಂದಹಾಸಕ್ಕೆ ಮತ್ತಷ್ಟು ಉತ್ತೇಜನ ಕೊಡುತ್ತವೆ. ಇದೂ ಅಲ್ಲದೇ ಆಕೆಯ ನೆಟ್ಟನ ಮೂಗು ತೇಟ್ ಸಂಪಿಗೆಯ ತೆನಿಯಂತೆ, ತಳ ತಳ ಹೊಳೆಯುವ ಗಲ್ಲ, ಕಾಮನ ಬಿಲ್ಲನ್ನು ಹೋಲುವಂಥ ನವಿರಾದ ಹುಬ್ಬು, ಇಂಥ ಲಾವಣ್ಯಸಿರಿಯಾದ ಹೆಣ್ಣು, ಗಂಡಸರ ಮನಸ್ಸೆಂಬ ಮೃಗಗಳ ಬೇಟೆಯಾಡಿ ಒಲಿಸುವುದರ ಸಲುವಾಗಿ ಈ ನರಲೋಕದಲ್ಲಿ ಅವತಾರ ಮಾಡಿ ನನ್ನ ಮನಸ್ಸನ್ನು ತನ್ನ ಕಡೆಗೆ ಎಳೆದುಬಿಟ್ಟಿದ್ದಾಳೆ. ಆದ್ದರಿಂದ ನನಗೆ ಸಮಾಧಾನವಿಲ್ಲಾ ನೋಡು.

ದೂತಿ : ಏನ್ರೀ, ಆಕಿ ಚೆಲುವಿಕಿ ಹೇಳಬೇಕಾದರ ಆಕಿ ನಿಮಗೆ ಸಲ್ಲುವಂಥಾಕೇನ್ರೀ?

ಕೌಶಿಕ : ಹೌದು ನಮಗೆ ಸಲ್ಲುವಂಥಾಕಿ ಇದ್ದಾಳೆಂದೇ ತಿಳಿದು ಇಷ್ಟು ಮನಸ್ಸು ಹಾಕಿರುವೆನು. ಆಕೆ ನನಗೆ ಹೆಂಡತಿಯಾದರೆ ಹೇಗಾಗುತ್ತದೆ ಎಂದರೆ, ರತ್ನಕ್ಕೆ ಕುಂದಣ ಹಚ್ಚಿದರೆ ಎಷ್ಟು ಸುಂದರವಾಗಿ ಕಾಣಿಸುತ್ತದೆಯೋ ಅಷ್ಟು ನನ್ನ ಐಶ್ವರ್ಯಕ್ಕೆ ಶೋಭೆ ಉಂಟಾಗುತ್ತದೆ. ಅದಕ್ಕೆ ನೀನು ಏನಾದರೂ ಮಾಡಿ ಆಕೆಯನ್ನು ತಂದು ಕೊಡುತ್ತೇನೆಂದು ಹೇಳು.

ದೂತಿ : ಏನ್ರೀ, ಆಕೆಯನ್ನು ನಿಜವಾಗಿಯೂ ತಂದುಕೊಡುತ್ತೇನೆ. ಆಕೆಯು ಯಾವ ಪ್ರಾಂತದೊಳಗೆ, ಯಾವ ಊರೊಳಗೆ ಇರುವಳು? ಅದನ್ನು ಹೇಳ್ರೀ. ಅಂದರೆ ಹುಡಿಕಿಕೊಂಡು ಬರ್ತೇನಿ.

ಕೌಶಿಕ : ಏನೇ, ಎಲ್ಲಿ ಹುಡುಕಾಡುತ್ತಿ. ಕಸ್ತೂರಿ ಮೃಗಗಳನ್ನು ತನ್ನ ಕಂಕುಳದಲ್ಲಿಟ್ಟುಕೊಂಡು, ಸುಳ್ಳೇ ಗುಡ್ಡ ಗುಡ್ಡ ತಿರುಗಿದರೆ ಅದು

ಸಿಗಬಹುದೇನು? ಅದರಂತೆ ನಾನು ಬೇಡಿದ ವಸ್ತುವು ಈ ಉಡತಡಿ ಪಟ್ಟಣದಲ್ಲಿಯೇ ಇಟ್ಟುಕೊಂಡು ಎರಡನೇ ಊರು ತಿರುಗುತ್ತ ಹೋದರೆ ನಿನಗೆಲ್ಲಿ ಸಿಗಬೇಕು? ಆ ಹೆಣ್ಣು ಏನೂ ದೂರವಿಲ್ಲಾ ನೋಡು.

ದೂತಿ : ಹಾಗಾದರೆ ಆಕೆ ನಮ್ಮ ಊರಲ್ಲಿಯೇ ಅದಾಳೇನ್ರೀ?

ಕೌಶಿಕ : ಹೌದು ನಮ್ಮ ಊರಲ್ಲಿಯೇ ಇರುವಳು ನೋಡು.

ದೂತಿ : ನಮ್ಮ ಊರಾಗ ಎಲ್ಲಿ ಅದಾಳ್ರೀ?

ಕೌಶಿಕ : **ಪದ**

ನಿರ್ಮಲನ ಮನಿಯಲಿ ಇರುವಳೋ ಬಾಲಿ
ಜಗದಲಿ ಬಹು ಖ್ಯಾತಿ ಹೊಂದಿದ ಸತ್ವಮತಿ
ಸದ್ಗುಣಿ ಎನಿಸಿದಳು ಆ ಕಾಂತೆ
ದೇವಗಿರಿ ಈಶನ ಪೂಜಿಸುತಲಿ ಬಾಲಿ
ಅನುದಿನ ಮೆರೆಯುವಳೋ ಆ ಜಾಣೆ ಸುಖಪ್ರಾಣಿ.

(ಮಾತು) : ದೂತಿ ಆ ಕಾಂತಾಮಣಿಯು ಬಜಾರದಲ್ಲಿ ನಿರ್ಮಲ ಎನ್ನುವಂಥ ಜಂಗಮನು ಇರುವನಲ್ಲ! ಅವನ ಮನೆಯೊಳಗೆ ಇದ್ದಾಳೆ. ಆಕಾಶದೊಳಗಿನ ಚಂದ್ರನ ಪ್ರಕಾಶವು ಭೂಮಿಯ ಮೇಲೆ ಬಿದ್ದು ಭೂಮಿಯ ತುಂಬ ಬೆಳಕು ಹೇಗೆ ಬೀಳುವುದೋ, ಅಂತೆಯೇ ಆಕೆಯು ತನ್ನ ಮನೆಯೊಳಗೆ ಬೆಳೆದು, ಕೀರ್ತಿ ಎನ್ನುವಂಥಾ ಪ್ರಕಾಶದಿಂದ ಜಗತ್ತಿನ ತುಂಬ ಪ್ರಸಿದ್ಧಳಾಗಿದ್ದಾಳೆ. ಅಂಥ ಸುರೇಖವಾದ ಹೆಣ್ಣು ಈ ಭೂಮಿಯ ಮೇಲೆ ಎಲ್ಲಿಯೂ ಇಲ್ಲ ನೋಡು.

ದೂತಿ : ಅಂತಾ ಹೆಣ್ಣು ಐತೇನ್ರೀ. ಆಕೆಯ ಹೆಸರೇನು ಹೇಳ್ರಿ?

ಕೌಶಿಕ : ಮಹಾದೇವಿ ಅಂಥಾ. ಎಲ್ಲಾ ಜನ ಆ ರೂಪವಂತಿಗೆ ಆ ಚೆಲುವು ಕಾರಣವಾಗಿ ಮಹಾದೇವಿ ಅನ್ನುತ್ತಾರೆ.

ದೂತಿ : ಅದs ಸಂನ್ಯಾಸಿ ಮಹಾದೇವಿ ಹೌದಲ್ರೀ? ಆಕೆಯ ಇತಿಹಾಸನೆಲ್ಲಾ ಬಲ್ಲೆ ನಾನು. ನೀನು ಮೊದಲೇ ಹೇಳಬಾರದೇ, ಆಕೀ ಸುದ್ದಿ ಮೊದಲೇ ತಿಳಿದೈತ್ತಿ. ಈ ಊರನ್ನೇ ಅಳುಗಾಡಿಸುತ್ತೀನಿ ಅಂದಬಿಟ್ಟ ಮಗಳು ಅವಳು.

ಕೌಶಿಕ : ಆಕೆಯನ್ನು ನನಗೆ ತಂದು ಕೊಡಲಿಕ್ಕೇ ಬೇಕು.

ದೂತಿ : ಅದೇನು ಮಣ್ಣು ಬಾವಾ. ಅದಕ್ಕ ಪ್ರಪಂಚದ ಆಶೆ ಐತೋ ಇಲ್ಲೋ?

ಯಾವತ್ತೂ ಒಂದು ಕೋಣ್ಯಾಗ ಗಂಡಲಿಂಗಪ್ಪನ ಹಿಡಿದುಕೊಂಡು ಹೋಗಿ ಹಂಗ ಕೂತು ಬಿಡತ್ತೈತಿ, ಅದು ಎಲ್ಲೆರ ಬಾಳೇವು ಮಾಡತ್ತೈತೇನ್ರೀ. ಯಾರರ ಹೋಗಿ, ಹೆಣ್ಣು ಜಂಗಮಳು ಗಂಡು ಜಂಗಮನನ್ನು ಮದುವೆ ಮಾಡಿಕೊಂಡು ಪ್ರಪಂಚಮಾಡಿ ಗಂಡನಿಂದ ಸುಖವಾಗಿರಬೇಕೆಂದು ಹೇಳಿದವರಿಗೆ ಕವಕ್ಕನೇ ಏನಾದರೂ ಅಂದು ಬಿಡತ್ತೈತಿ. ಅದನ್ನೇನು ಸುಡತೀರಿ. ಸುಮ್ಮನೆ ರಾಜಾರಾಗಿ ಇರ್ರಿ.

ಕೌಶಿಕ : ಏನೇ, ಆಕೆ ಲಗ್ನವನ್ನು ಏಕೆ ಒಲ್ಲೆ ಎನ್ನುತ್ತಾಳೆ ಗೊತ್ತೇ? ಆದರೆ ರಾಜನನ್ನೇ ಗಂಡನಾಗಿ ಪಡೆಯಬೇಕು. ಇಲ್ಲವಾದರೆ ಲಗ್ನವೇ ಬೇಡಾ ಅನ್ನುತ್ತಾಳಂತೆ!

ದೂತಿ : ಅದೇನು ಬೇತು ಹೇಳು?

ಕೌಶಿಕ : ಆದರೆ ರಾಜನನ್ನು ಲಗ್ನವಾಗಬೇಕು. ಇಲ್ಲದಿದ್ದರೆ ಇಲ್ಲಾಂತ ಹಾಗೆ ಕುಳಿತುಬಿಟ್ಟಿದ್ದಾಳೆ. ಗಂಡನನ್ನು ಮಾಡಿಕೊಳ್ಳುವುದಿಲ್ಲಾ ಅಂತಾಳ. ಈ ಮಸಲತ್ತು ಮಂದಿಗೇನು ಗೊತ್ತು? ತಾನೇ ನನಗೆ ಹೆಂಡತಿಯಾಗುವನೆಂದು ಬರುತ್ತಿದ್ದಳು. ನಾ ಒಲ್ಲೆ ಎಂದರೆ ತನಗೆ ಅವಮಾನ ಆದೀತಂತ ಸುಮ್ಮನಿದ್ದಾಳೆ, ಮತ್ತೆ ಮಂದಿಯ ಮುಂದೆ ಹೇಳಿದರೆ ಅವರು ಏನಾದರೂ ಅಪವಾದ ಹೊರಿಸ್ಯಾರಂತ ಮಂದಿಯನ್ನೆಲ್ಲ ಬಿಡಿಸಿ ಬಿಟ್ಟಿದ್ದಾಳೆ. ನೀನು ಮಧ್ಯಸ್ಥಿಕೆ ವಹಿಸಿ ಆಕೆಯನ್ನು ತಿದ್ದಿ, ಒಪ್ಪಿಸಿಕೊಂಡು ಬರಬೇಕು ನೋಡು.

ದೂತಿ : ಏನಪಾ, ಆಕೆಯು ಒಪ್ಪಿದ್ದಾಳೆ, ತಿದ್ದಿ, ಮತ್ತೆ ಒಪ್ಪಿಸಿಕೊಂಡು ಬರಬೇಕಂತೀದಿ. ನಿನ್ನನ್ನು ಮದುವೆಯಾಗಲಿಕ್ಕೆ ಅವಳು ಒಪ್ಪಿದ್ದರೆ ಆಕೆಯನ್ನು ಏನು ತಿದ್ದಬೇಕು. ಒಂದೀಟು ಸುದ್ದಿ ಮಾಡಿದರ ತೀರಿತು. ಬೆನ್ನು ಹತ್ತಿ ಓಡಿ ಬರತಾಳ. ನೀನು ಏನರ ಸುಳ್ಳು ಹೇಳತೀಯೇನ? ಖರೇ ಖರೇ ಹೇಳು ಮತ್ತೆ.

ಕೌಶಿಕ : ಆ ಮಹಾದೇವಿ ನನ್ನನ್ನು ಮದುವೆಯಾಗಲಿಕ್ಕೆ ಒಪ್ಪಿದ್ದಾಳೆ ಅಂದೆನಲ್ಲ.

ದೂತಿ : ಹಾಗಾದರ ಆಕೆಯನ್ನು ನೀನು ಮಾತನಾಡಿಸಿ ನೋಡಿಯೇನು?

ಕೌಶಿಕ : ನಾನು ಎಲ್ಲಿಯೂ ಮಾತನಾಡಿರುವುದಿಲ್ಲ.

ದೂತಿ : ಹಾಗಾದರೆ ನಿನ್ನನ್ನು ಅವಳು ಲಗ್ನವಾಗುತ್ತಾಳೆಂದು ಯಾತರ ಮೇಲಿಂದ ಹೇಳುತ್ತೀರಿ.

ಕೌಶಿಕ : ನಾನು ಗಂಡನ್ನ ಮಾಡಿಕೊಳ್ಳಲಿಕ್ಕೆ ಒಲ್ಲೆ ಅಂತಾಳಲ್ಲಾ. ಆ ಮಾತಿನ ಮೇಲಿಂದ ರಾಜನನ್ನು ಲಗ್ನವಾಗಬೇಕು ಇಲ್ಲದಿದ್ದರೆ ಇಲ್ಲಾ ಅಂತಾ ತರ್ಕವನ್ನು ಮಾಡಿದ್ದೇನೆ.

ದೂತಿ : ಅಲಲಲSS!! ರಾಜನ ತರ್ಕ! 'ಕಿವುಡಾ ಕಿಚಡಿ ಬೇಡಿದರ ಗೌಡಾ ಹಚಡ ಬೇಡಿದಂತೆ' ಇದು ಆಟ. ಆಕಿ ಸಂಸಾರದೊಳಗ ಏನೂ ಹುರುಳಿಲ್ಲಾಂತ ತಿಳಿದು ಈ ಪ್ರಪಂಚದ ಆಶೆಯನ್ನು ಮರೆತು ಬಿಟ್ಟಿದ್ದಾಳೆ. ಆಕೆಯು ಗಂಡಸನ್ನು ಮಾಡಿಕೊಳ್ಳಬಾರದಂತಾ ಬಿಟ್ಟಾಳ.

ಕೌಶಿಕ : ದೂತಿ ಹಾಗಾದರೆ ನನ್ನದೇನು ಗತಿ. ಆಕೆಯು ನನಗೆ ವಶವಾಗಲಿಕ್ಕಿಲ್ಲವೇನು?

ದೂತಿ : ಎಂದೂ ಆಗುವುದಿಲ್ಲಾ ನೋಡು.

ಕೌಶಿಕ : ದೂತಿ ಹಾಗಾದರೆ ಇದಕ್ಕೆ ಏನು ಮಾಡಬೇಕು?

ದೂತಿ : (ಸ್ವ) ಹಿತ್ತಲದಾಗ ಗಜಮ್ ನಿಲ್ಲಬೇಕು ನೋಡ್ರಿ.

(ಪ್ರ) ನಿಮಗೆ ದೇವರೇ ಗತಿ.

ಕೌಶಿಕ : ದೂತಿ, ಹಿಂಗ ಅಂದ್ರ ನನ್ನ ಗತಿ! ಮತ್ತು ಹೇಳುತ್ತೇನೆ ಕೇಳುವಂಥವಳಾಗು.

ಪದ

ಕರೆತಂದು ಕೊಡು ತುರ್ತು
ಮಾನನಿ ಮಣಿಯನು ಮಾಡಿ ಬೇತ ॥ ಪಲ್ಲ ॥
ದೇವಿಯ ಕೂಡದೇ ಸೈರಿಸದೆನ್ನ ಮನ
ಹಲುಬಿ ಹಂಬಲಿಸಿ ಬಿಡುವೆನು ಪ್ರಾಣ
ಕರುಣಿಸಿ ನೀಎನ್ನ ಕರೆತಾ ಅವಳನ್ನ
ಕಾಂಚನ ದೋರಣ ಕೋಮಲಾಂಗಿಯ
ಮಾಯ ಮಂತ್ರದಿ ಅವಳ ಮನವೊಲಿಸಿ
ಬೇಡಿದ್ದ ಕೊಡುವೆನು ನೀ ತಿಳಿಸಿ
ಸವಿಮಾತನ್ನು ಬಳಸಿ ನೀ
ಪರಿಪರಿ ಬೋಧಿಸಿ ಅವಳನ್ನ
ಬರುವಂತೆ ಮಾಡವ್ವ ನೀ ದೂತಿ ॥

(ಮಾತು) : ಏನೇ ದೂತಿ, ಮಹಾದೇವಿಯನ್ನು ತಂದುಕೊಟ್ಟರೆ, ನನ್ನ ಪ್ರಾಣ ಉಳಿಯುತ್ತದೆ. ಇಲ್ಲದಿದ್ದರೆ ನಾನು ಜೀವದಿಂದಿರುವುದಿಲ್ಲ. ನಿನ್ನ ಕಡೆಯಿಂದ ಆಗದಿದ್ದರೆ ಸ್ವತಃ ನಾನೇ ಹೋಗಿ, ಆಕೆಗೆ ಹಾಗೆ ಹೀಗೆ ಹೇಳಿ, ಮನವೊಲಿಸಿ ನನಗೆ ಹೆಂಡತಿಯಾಗುವ ಹಾಗೆ ಮಾಡುತ್ತೇನೆ. ಆಕೆಯನ್ನು ಯಾವಾಗ ನೋಡೇನೆಂದು ನನ್ನ ಮನಸ್ಸು ಕುಣಿದಾಡುತ್ತದೆ.

ಅದಕ್ಕೆ ನೀನು ದಯಮಾಡಿ ಆಕೆಯನ್ನು ಕರೆದುಕೊಂಡು ಬರಲಿಕ್ಕೇ ಬೇಕು ನೋಡವ್ವ.

ದೂತಿ : ನಾನು ಮಹಾದೇವಿಯನ್ನು ಕರೆದುಕೊಂಡು ಬರದಿದ್ದರ ಜೀವಾ ಇಡುವದಿಲ್ಲವೇನ್ರೀ?

ಕೌಶಿಕ : ಇಡುವುದಿಲ್ಲ ನೋಡು.

ದೂತಿ : ಆಕೆಯನ್ನು ತಂದುಕೊಟ್ಟರೆ ನನಗೆ ಏನು ಕೊಡುತ್ತೀರಿ?

ಕೌಶಿಕ : ನೀನು ಬೇಡಿದನ್ನು ತಂದು ಕೊಡುತ್ತೇನೆ ನೋಡು.

ದೂತಿ : ನಿಮ್ಮ ರಾಜಮುದ್ರೆಯ ಪೈಕಿ ಏನಾದರೂ ಕೊಡುತ್ತೀರೇನ್ರಿ?

ಕೌಶಿಕ : ಮತ್ತೇನು ಬೇಕು ಹೇಳು?

ದೂತಿ : ನಿಮ್ಮ ಅಂಗಿಯನ್ನು, ನಿಮ್ಮ ತಲೆಯ ಮೇಲಿನ ಕಿರೀಟವನ್ನು ಕೊಡ್ರಿ, ಅಂದರೆ ಕೆಲಸ ಮಾಡಿಕೊಂಡು ಬರುತ್ತೇನೆ.

ಕೌಶಿಕ : ಏನು ದಾಸಿ. ಈ ರಾಜ್ಯ ಪೋಷಾಕುಗಳನ್ನು ಕೊಡಬೇಕೇನು?

ದೂತಿ : ಇವನ್ನೆಲ್ಲ ಕೊಡಬೇಕು ನೋಡ್ರಿ.

ಕೌಶಿಕ : ನಿನ್ನ ಮನಸ್ಸಿನಂತೆ ಯಾಕಾಗಲೊಲ್ಲದು ಕೊಡುತ್ತೇನೆ.

ಪದ

ತೆಗೆದು ಕೊಡುವೆ ಡ್ರೆಸ್
ತವಕದೀ ಮಾಡೆ ನೀ ಸಹಾಯ
ತಳ ತಳ ಹೊಳೆಯುವಂಥ
ವಜ್ರ ಮಾಣಿಕ್ಯಗಳ ಕೆಚ್ಚಿದ
ಈ ರಾಜಕಿರೀಟವನ್ನು ಮಾಡದೇ
ಅನುಮಾನ ಕೊಡುವೆನಾ ನಿನಗಿನ್ನಾ
ಹಿಡಿಯವ್ವಾ ಎಲ್ಲಾ ಬಿಟ್ಟ ಸಂಶಯನಾ ॥

(ಮಾತು) : ಏನೇ, ನೀನು ಬೇಡಿದಂತಾ ಎಲ್ಲಾ ಪೋಷಾಕು ಕೊಟ್ಟಿರುವೆನು. ಇನ್ನಾದರೂ ತೀರಿತಿಲ್ಲೋ ನಿನ್ನಾಶೆ.

ದೂತಿ : ತೀರಿತು ಹೋಗುವೆನು.

ಕೌಶಿಕ : ಏನೇ, ಇವನ್ನೆಲ್ಲಾ ಮುಚ್ಚಿಕೊಂಡು ಹೋಗು. ಈ ಊರವರು ನೋಡಿದರೆ ರಾಣಿಯಾದ ಚಾರುಮತಿಯ ಮುಂದೆ ಹೇಳಿ ನಮ್ಮಿಬ್ಬರನ್ನು ಪಜೀತಿ ಮಾಡ್ಯಾರು.

ದೂತಿ : ಅದ್ಯಾಕ್ರೀ, ನಿಮ್ಮ ಹೆಂಡತಿಗೆ ಎಷ್ಟು ಹೆದರತೀರಿ. ಆಕಿ ಈದ ಹುಲಿಯಾಗ್ಯಾಳೇನು? ಹೆಂಡತಿಗೆ ಹೆದರಿ ಎಂಥ ಬಾಳೇವು ಮಾಡತೀರಿ. ನಿಮ್ಮಂಥವರೆಲ್ಲಾ ಇಂಥಾದ್ದು ಮಾಡಿ ಹೆಂಗಸರನ್ನು ಏರಿಸಿ ಕುಳ್ಳಿರಿಸೀರಿ. ನನ್ನ ಬೈದಾಳು ಅನ್ನಾಕ ನಿಮಗ ನಾಚಿಕೆ ಇಲ್ಲವೇನ್ರೀ?

ಕೌಶಿಕ : ಏನೇ, ಇಂಥ ಅಲ್ಲದ ಕೆಲಸಕ್ಕೆ ಅವಳು ಸೇರುವುದಿಲ್ಲಾ. ಅದಿರಲಿ, ಇನ್ನು ಆ ಮಹಾದೇವಿಯನ್ನು ಕರಕೊಂಡು ಬಂದಿಯಾದರೆ ಮುಂದೆ ಅವಳಿಂದ ಏನು ಬಂದರೂ ನೋಡಿಕೊಳ್ಳುತ್ತೇನೆ. ನಾವು ಈಗ ಈ ಕೆಲಸಕ್ಕೆ ಪ್ರಾರಂಭ ಮಾಡಿರುವೆವು. ಇದರ ಸಲುವಾಗಿ ಇಷ್ಟು ಅಂಜಿಕೆ ಹುಟ್ಟಿದೆ ನೋಡು.

ದೂತಿ : (ಸ್ವಗತ) ಏನ ಗಟ್ಟಿ ಗಂಡಸಪಾ ಇವಾ. ಹಂಗರ ಬೇಡಪಾ ಈ ಉಸಾಬರಿ. (ಪ್ರಕಟ) ಹಿಡಿ ನಿನ್ನ ಸಾಮಾನು. ಹಿಂದಿನಿಂದ ನನ್ನ ಕಿಮ್ಮತ್ತು ಕಳದೀರಿ. ಹೇಸಿ ನಿಬ್ಬಣಕ ಹೋಗಬಾರದು, ಹೇಡಿ ಬೆನ್ನ ಕಟ್ಟಬಾರದು ಅಂತಾ ತಿಳಿದಂಗಾಯಿತು. ನಿನ್ನ ಕೂವತ್ತು ತಿಳೀತು. ತಗೋ ಇವನ್ನೆಲ್ಲ (ಎಂದು ಕೊಡಬೇಕು).

ಕೌಶಿಕ : ಛೇ! ಹಾಗೇನೂ ತಿಳಿಯಬೇಡಾ. ಆ ಮಹಾದೇವಿಯನ್ನು ಕರಕೊಂಡು ಬಂದದ್ದೆ ಹೌದಾದರೆ, ನನ್ನ ಪಟ್ಟದ ಹೆಂಡತಿಯನ್ನು ಹೊರಗೆ ಹಾಕುತ್ತೇನೆ. ಇದಕ್ಕ ಯಾಕ ಕಾಳಜೀ ಮಾಡತೀ. ಸುಮ್ಮನೆ ತಗೊಂಡು ಹೋಗು.

ದೂತಿ : ಏನ್ರೀ, ಮಹಾದೇವಿಯನ್ನು ಕರೆದುಕೊಂಡು ಬಂದರೆ ನಿಮ್ಮ ಪಟ್ಟದ ಹೆಂಡತಿಯನ್ನು ಹೊರಗೆ ಹಾಕುತ್ತೀರಾ?

ಕೌಶಿಕ : ಹೌದು, ಹೊರಗೆ ಹಾಕುತ್ತೇನೆ ನೋಡು.

ದೂತಿ : ಹಾಂಗ ಬಾಯಿಮಾತ ಹೇಳಿದರೆ ಅಲ್ಲಾ. ಹಾಕಬೇಕು ನೋಡು. ಆಕಿ ಹೊರಗೆ ಹೋಗದಿದ್ದರೆ, ನಾನೊಂದು ಮಸಲತ್ತು ಹೇಳುತ್ತೇನೆ ಕೇಳು.

ಕೌಶಿಕ : ಅದೇನು ಮಸಲತ್ತು ಹೇಳು.

ದೂತಿ : (ಕಿವಿಯಲ್ಲಿ ಹೇಳಿದಂತೆ ಮಾಡಿ) ತಿಳೀತಲ್ಲೋ. ಹಂಗ ಮಾಡಿಬಿಡು.

(ಚಾರುಮತಿಯ ಪ್ರವೇಶ)

ಚಾರುಮತಿ : ಪದ

ಏನೇ ಯಾರನ್ನು ಹೊರಗೆ ಹಾಕಿಸುವೆ
ನಾನೇನು ಮಾಡಿದ್ದೆ ನಿನಗೆ ಅಂಥಾದು ॥ ಪಲ್ಲ ॥
ಎನ್ನ ಕಾಂತನ ಕಿವಿಯೊಳಗೆ ನೀ ಹೇಳಿದ ಬೇತವನಾ
ಲಗು ಹೇಳ ನನ್ನ ಮುಂದೆ ಹೇಳದಿದ್ರ ಹಾಕುವೆ ಕೊಂದಾ
ಲಗು ಹೇಳೀಗ ನೀ ಮತಿವಂತಿ ಹಿಂಗ ಎಷ್ಟೆಷ್ಟು ಮಾಡಿದಿ ಹಿಂದೆ
ಈ ಮಣಿ ಪೀತಾಂಬರ ಸರ ಇವನೆಲ್ಲಿಗೆ ಒಯ್ಯುವಿ ತತ್ಪರ
ನಮ್ಮ ರಾಜರ ಸೀರಿ ಒಯ್ಯುವರ ನಾರಿ
ಹೀಂಗ ಗತಿಗೆಟ್ಟು ಏನೇನು ನೋಡುತಿ ನಾರಿ ॥

(ಮಾತು) : ಏನೇ ದಾಸಿ, ಯಾರನ್ನು ಹೊರಗೆ ಹಾಕಿಸುತ್ತೀ, ಏನು ಮಸಲತ್ತು? ಅದನ್ನು ರಾಜನ ಕಿವಿಯಲ್ಲಿ ಹೇಳಲಿಕ್ಕೆ ಹತ್ತಿರುವಿಯಲ್ಲಾ! ಇಲ್ಲದ್ದೊಂದು ಹೇಳಿ ಯಾರನ್ನು ಗೊತ್ತಿಗೆ ಹಚ್ಚಬೇಕಂತಾ ಮಾಡಿರುವಿ. ಈಗ ನನ್ನನ್ನು ಹೊರಗೆ ಹಾಕು ಅಂತಾ ಅವರಿಗೆ ಹೇಳಲಿಕ್ಕೆ ಹತ್ತಿರುವಿಯಲ್ಲಾ! ಈ ಪೀತಾಂಬರ, ಮುತ್ತಿನ ಸರ, ಈ ರಾಜನ ಕಿರೀಟ ಇವನೆಲ್ಲ ಎಲ್ಲಿಗೆ ತೆಗೆದುಕೊಂಡು ಹೋಗುವಿ. ಯಾರಿಗೆ ಕೊಡಲಿಕ್ಕೆ ಹೇಳು ಮೊದಲು. ಹೇಳುತ್ತೀಯೋ ಹೊಡೆತಾ ಬೇಕೋ, ಹೇಳು ಮೊದಲು.

(ಚಾರುಮತಿಯು ಕೌಶಿಕ ರಾಜನಿಗೆ) ಯಾಕ್ರೀ, ಇವನ್ನು ಯಾರಿಗೆ ಕೊಟ್ಟು ಕಳಿಸಬೇಕಂತ ಮಾಡಿರುವಿರಿ. ರಾಜರು ಅನಿಸಿಕೊಂಡು ಇಂಥ ಹೊಲಸು ದೂತಿಯ ಮಾತು ಕೇಳಬೇಕೆಂದರೆ ನಿಮಗಾದರೂ ನಾಚಿಗೆ ಇಲ್ಲೇನು?

(ದಾಸಿಯ ಕಡೆ ನೋಡಿ) ದೂತಿ ನೀ ಈಗ ಏನೇನು ಮಸಲತ್ತು ಮಾಡಿರುವಿ ಹೇಳು, ಹೇಳುತ್ತೀಯೋ ತಲೆ ಒಡೆಯಲೋ (ಹೊಡೆಯುವಳು).

ದೂತಿ : ಹೊಡೆಯಬೇಡಾ ನಮ್ಮವ್ವಾ. ನಿನ್ನ ಕಾಲಿಗೆ ಬಿದ್ದು ಇಲ್ಲಿ ನಡೆದದ್ದನ್ನೆಲ್ಲಾ ಹೇಳುತ್ತೇನೆ.

ಚಾರುಮತಿ : ಹಾಗಾದರೆ ಹೇಳು?

ದೂತಿ : ಇವನ್ನೆಲ್ಲ ಒಯ್ದು ಮಹಾದೇವಿಗೆ ಕೊಟ್ಟು, ಆಕೆಯನ್ನು ಕರೆದುಕೊಂಡು ಬಾರೆಂದು ಈ ಸಮಾನುಗಳನ್ನು ಕೊಟ್ಟಿದ್ದಾರೆ ರಾಜರು.

ಚಾರುಮತಿ : ಏನೇ ದಾಸಿ, ನನ್ನನ್ನು ಹೊರಗೆ ಹಾಕಂತ ಇವರಿಗೆ ಹೇಳಲಿಕ್ಕೆ ಹತ್ತಿರುವಿಯಲ್ಲಾ?

ದೂತಿ : ನಾನು ಅಂದಿಲ್ಲವ್ವ, ಅವರೇ ಅಂದರು.

ಚಾರುಮತಿ : ಇನ್ನೊಮ್ಮೆ ಇಂಥ ಕಾರಭಾರ ಮಾಡುತ್ತೀಯೇನು?

ದೂತಿ : ಇಲ್ಲ ನಮ್ಮವ್ವ, ಇಷ್ಟಕ್ಕs ಕುರಿಕೋಣ ಬಿದ್ದವು. ಇನ್ನ ಯಾತಕ್ಕೆ ಹೋಗಲೇ ನಮ್ಮವ್ವ?

ಚಾರುಮತಿ : ಇದೊಂದು ಸಾರೆ ಬಿಟ್ಟಿದ್ದೇನೆ, ಇಂಥಾದ್ದು ಎಲ್ಲಿಯಾದರೂ ಮಾಡಿದರೆ ಜೀವಾನ ಬಿಡಸತೇನಿ, ತಿಳಿಯಿತಿಲ್ಲೋ?

ದೂತಿ : ಕಡ್ಡೀ, ಕಸರು ಒಂದು ಉಳೀದಂಗ ತಿಳೀತವ್ವಾ. ಇವರ ಮಾತ ಕೇಳಿದರ ಆಗುವುದೇನು? ಹೀಂಗ ಬಡಿಸಿಕೊಳ್ಳುವುದು.

(ಸ್ವ) ಆಕೀ ಬಡಿಯುವಾಗ ಹಂಗs ನಿಂತ್ಯೆತಿ ನೋಡ ಕೋಣನಂಗ.

ಕೌಶಿಕ : ಏನೇ, ಇವುಗಳನ್ನು ಮುಚ್ಚಿಕೊಂಡು ಹೋಗೆಂದರೆ, ಇಲ್ಲದ ಶಿಫಾರಸ್ಸು ಮಾಡಿದಿ. ಇವಳಿಗೇಕೆ ಅಂಜಿಕೆ. ಇನ್ನಾದರೂ ತೆಗೆದುಕೊಂಡು ಹೋಗು.

ಚಾರುಮತಿ : ಎಲ್ಲಿಗೆ ಹೋಗುವುದು?

ಕೌಶಿಕ : ಅದನ್ನೆಲ್ಲ ಕೇಳಿ ಮಾಡುವುದೇನು?

ಚಾರುಮತಿ :

ಪದ

ಪರನಾರಿ ವ್ಯಸನವ ಬಿಡು ಬಿಡಿ ಪ್ರಿಯಾ
ನಾಚಿಕೆ ಇಲ್ಲೇನು ನಿನಗೆ ತುಸು
ನಾಚಿಕೆ ನಾಚಿಕೆ ಇಲ್ಲೇನೋ ನಿನಗ ॥ ಪಲ್ಲ ॥

ಅರಸನಾಗಿರುವೆ ಜನರೊಳು ಮೆರೆಯುವೆ
ದುರುಳ ಕಾರ್ಯವ ಮಾಡುತಲಿರುವೆ
ಊರ ತರುಣಿಯ ಕಾಣುತಲಿ
ಪರತರ ಧರ್ಮವ ನೀಗುತಲಿ
ಸರಿಯೇನು ಈ ಪಾಪದ ಮನವ
ಸೆರಗೊಡ್ಡಿ ಬೇಡುವೆ ರಮಣಾ
ಛೇ ಬಿಡು ಬಿಡು ನಿನ್ನ ವ್ಯಸನಾ ॥

ಕೌಶಿಕ :

ಪದ

ಬಿಡವೇನಾ ಹೆಣ್ಣಿನ್ನ ಚೆಲ್ವ ಮಡದಿಯೇ
ಬಿಡದೀ ಎನ್ನ ಜೀವಾ ತಡೆಯಲು ನಾ

ಚಾರುಮತಿ : ನೀವು ನನ್ನನ್ನೇನು ಮಾಡುತ್ತೀರಿ. ನಿನ್ನ ಪರಿಣಾಮವು ನೆಟ್ಟಗಾಗುವುದಿಲ್ಲ ಅನ್ನಲಿಕ್ಕೆ ನಾನೇನೂ ಸಾಮಾನ್ಯ ಹೆಂಗಸಲ್ಲ. ನಿಮ್ಮ ಸರಿಸಮಾನಸ್ಕಂದರಾದ ರಾಜ ಮನೆತನದವಳಿರುತ್ತೇನೆ. ಇದೂ ಅಲ್ಲದೇ ಮಹಾದೇವಿಯನ್ನು ತರುತ್ತೇನೆ, ತರುತ್ತೇನೆ ಅಂತಾ ಈ ರಾಜ್ಯದ ಸಂಪತ್ತನೆಲ್ಲಾ ಆಕೆಗೆ ಕೊಟ್ಟು ಹಾಳು ಮಾಡಲಿಕ್ಕೆ ಹತ್ತಿದರೆ, ನಿಮ್ಮನ್ನು ಹಾಗೆ ಬಿಡುವುದಿಲ್ಲಾಂತ ತಿಳಿದು ಬಿಡ್ರೀ.

ಕೌಶಿಕ : **ಪದ**

ನೀ ನನ್ನನು ಏನು ಮಾಡುವೆ ಕಾಂತೆ
ಆ ನಾರಿಯ ನಾ ತರುವುದು ಸತ್ಯ ॥ ಪಲ್ಲ ॥

ನಿನ್ನ ಮಾತಿಗೆ ಅಂಜುವೆನೇನು
ಎನ್ನ ಕಾರ್ಯವ ಮರೆಯುವೆನೇನು
ಎನ್ನ ರಾಜ್ಯವ ಕೊಡುವೆನು
ನನ್ನನ್ನು ಕೇಳುವರ‍್ಯಾರೆಲೆ ರಮಣಿ ॥ ೧ ॥

ಬಿಡಲಾರೆ ಮಹಾದೇವಿಯನ್ನ ರಮಣಿ
ತಡೆಯದೀಗ ಎನ್ನ ಪ್ರಾಣಾ
ಕಡು ಸಿಟ್ಟಾಗಿ ನುಡಿಯುವ ನೀನು
ಹೊಡೆದಟ್ಟುವೆ ತಿಳಿಯಲೆ ಕಾಂತೆ ॥ ೨ ॥

(ಮಾತು): ಏನೇ, ಮಹಾದೇವಿಯನ್ನು ಕರೆದುಕೊಂಡು ಬಂದರೆ ನಿನ್ನ ಮೇಲಿನ ಪ್ರೇಮ ಹೋದೀತೆಂದು ಹೊಟ್ಟೆಕಿಚ್ಚು ಮಾಡುವಿಯೆನು? ಹೌದೋ, ಅಲ್ಲವೋ? ಕಂಡಂಗ ಮಾತಾಡಿ ನೀನು ನನಗೆ ಹೆದರಿಕೆ ಹಾಕಿದರೆ ನಾನೇನೂ ಹೆದರುವವನಲ್ಲ. ಮತ್ತು ನೀನು ನನಗೆ ವಿಘ್ನವಾದರೆ, ನಿನ್ನನ್ನು ಮೊದಲು ರಾಜ್ಯ ಬಿಟ್ಟು ಹೊರಗೆ ಹಾಕಿ ಮುಂದೆ ನಿನಗೆ ತಿಳಿಯದಂತೆ ಮಾಡುತ್ತೇನೆ ನೋಡು.

ಚಾರುಮತಿ : ಆಗಲಿ ನಿಮ್ಮ ಮನಸ್ಸಿನೊಳಗೆ ಹಾಗಿದ್ದರೆ, ನನ್ನನ್ನು ಮೊದಲು ರಾಜ್ಯ ಬಿಟ್ಟು ಹೊರಗೆ ಹಾಕಿ, ಆ ಮೇಲೆ ನಿಮಗೆ ಬೇಕಾದಂತೆ ಮಾಡುವಂತ್ರೀ. ಹೇಳುತ್ತೇನೆ ಕೇಳ್ರೀ.

ಪದ

ತರವಲ್ಲ ಬಿಡು ಬಿಡು ಪರಹೆಣ್ಣಿನ ಫಲಾ
ಪರಿಪರಿ ಹೇಳುವೆನಿಷ್ಟು ನಿಮಗರಿವು ಹುಟ್ಟಲಿ ಶ್ರೇಷ್ಠಾ ॥ ಪಲ್ಲ ॥

ಪರಸತಿಗಾಗಿ ರಾವಣ, ಕೀಚಕ ಧರೆಯೊಳುರುಳಿದ
ಚರಿತವ ಕೇಳಿ ಮರೆಯದೇ ನೀ ಕಲಿಯದೇ ನೀ
ಅರುಹುವೆ ತಿಳಿದು ನೀ ನಿನ್ನೊಳು
ನರಜನ್ಮವಿದು ಜ್ಞಾನದ ಖಣಿ
ಇದು ಪುರುಷನೇ ಸುಳ್ಳಲ್ಲ ಬಿಡು
ಪರಸತಿಯ ಹಂಬಲ ಬಿಡು ॥

ಕೌಶಿಕ : **ಪದ**

ಮಿರಿದ ಸುಂದರಿ ಆ ಮಹಾದೇವಿ
ತಾಳೆನು ತಾಳೆ ತಾಳೆನು ತಾನು ॥ ಪಲ್ಲ ॥

ಚಾರುಮತಿ ಬಿಡು ಚಿಂತಿ
ಆ ನಾರಿಯ ತರುವುದು ಖಾತ್ರಿ
ಧರಣೀಪತಿ ನಾ ಸುಖಿಸುವೆ ನಿನ್ನೊಳು
ಸೈರಿಸು ನೀ ಕಮಲಾಕ್ಷಿ
ಶಿರಹರಿಸುವೆನು ಹರಣಾಕ್ಷಿ ॥

ಚಾರುಮತಿ : ಪ್ರಾಣನಾಥಾ. ದುಷ್ಟರನ್ನು ಸಂಹಾರ ಮಾಡಿ. ಶಿಷ್ಟರನ್ನು ಕಾಪಾಡಿ. ಧರ್ಮದ ರಕ್ಷಣೆ ಮಾಡುವುದರ ಸಲುವಾಗಿ ನಿಮ್ಮ ಕ್ಷತ್ರಿಯ ಕುಲವು ನಾಲ್ಕು ವರ್ಣಗಳಲ್ಲಿಯೇ ಪ್ರಸಿದ್ಧವಾಗಿದೆ. ಅದಕ್ಕೆ ಮಾನ ಹೋದ ಮೇಲೆ ಜೀವದಿಂದ ಏಕೆ ಇರಬೇಕು?

ಮನುಷ್ಯನಾದ ಮೇಲೆ ಪ್ರಾಣ ಹೋದರೂ ಚಿಂತಿಯಿಲ್ಲ. ಮಾನ ಕಳೆದುಕೊಳ್ಳಬಾರದು. ಯಾಕೆಂದರೆ ಈ ಶರೀರವು ಕ್ಷಣಿಕವಾದುದು. ಮಾನವು ಸೂರ್ಯ, ಚಂದ್ರಾದಿಗಳು ಇರುವವರೆಗೂ ಇರುತ್ತದೆ. ಆದ್ದರಿಂದ ಪ್ರಾಣ ಹೋದರೂ ಚಿಂತೆಯಿಲ್ಲ. ಮಾನ ಕಾಯ್ದುಕೊಳ್ಳಬೇಕೆಂದು ಪಂಡಿತರು ಹೇಳುತ್ತಾರೆ. ಆ ಮಹಾದೇವಿಯ ಉಸಾಬರಿ ಇಂದಿಗೆ ಬಿಟ್ಟುಬಿಡ್ರಿ.

ಕೌಶಿಕ : ಆ ಮಹಾದೇವಿಯ ಸಲುವಾಗಿ ಕೆಟ್ಟು, ರಾಜ್ಯ ಭ್ರಷ್ಟನಾಗಿ, ಮಾನ ಕಳೆದುಕೊಳ್ಳುವುದು ನನ್ನ ಅದೃಷ್ಟದೊಳಗಿದ್ದರೆ, ನಾನು ಆ ಮಹಾದೇವಿಯ ಉಸಾಬರಿ ಬಿಟ್ಟು ಮನೆಯೊಳಗೆ ಸುಮ್ಮನೆ ಕುಳಿತರೂ ಸಹಿತ ಆಗುವಂಥದು ಆಗದೇನು ಮಾಡೀತು! ಬಿಡುವುದಿಲ್ಲ. ನೀನು ಹೆಚ್ಚಿಗೆ ಹೇಳಬೇಡಾ, ಸುಮ್ಮನೆ ಹೋಗು. ಇಲ್ಲದಿದ್ದರೆ, ನಿನ್ನ ಕೈಕಾಲಿಗೆ ಸಂಕೋಲೆಯನ್ನು ಹಾಕಿಸಿ ಬಿಡುತ್ತೇನೆ ಅಂತಾ ತಿಳಿ.

ಚಾರುಮತಿ : ಅಷ್ಟಾದರೆ ಬಹಳ ಚಲೋ ಆಯಿತು. ಹಾಗೇ ಮಾಡಿರಿ. ಮೊದಲು ನನ್ನನ್ನು ತುರಂಗದೊಳಗೆ ಹಾಕಿಸಿ. ಆ ಮಹಾದೇವಿಯನ್ನು ಕರೆದುಕೊಂಡು ಬರುವಂತವರಾಗಿ.

ಕೌಶಿಕ : ಹೌದು ಕರೆದುಕೊಂಡು ಬರುತ್ತೇನೆ.

ಚಾರುಮತಿ : ಆಕೆಯನ್ನು ತಂದು ಏನು ಮಾಡುತ್ತೀರಿ?

ಕೌಶಿಕ : ಆಕೆಯನ್ನು ಲಗ್ನ ಮಾಡಿಕೊಳ್ಳುತ್ತೇನೆ.

ಚಾರುಮತಿ : ಆ ಮಹಾದೇವಿ ವೀರಶೈವಳು, ನೀವು ಕ್ಷತ್ರಿಯ ವಂಶದವರು. ನಿಮ್ಮನ್ನು ಆಕೆ ಮದುವೆ ಆಗಲು ಒಪ್ಪುವಳೇನ್ರೀ !

ಕೌಶಿಕ : ಒಪ್ಪದೇ ಬಿಡುವಳೇ. ಒಪ್ಪದಿದ್ದರೆ ಜೋರಿನಿಂದ ವಶಮಾಡಿಕೊಳ್ಳುತ್ತೇನೆ.

ಚಾರುಮತಿ : ಜೋರಿನಿಂದ ವಶಮಾಡಿಕೊಳ್ಳಲು ಆಕೆಯೇನು ಸಾಮಾನ್ಯ ಹೆಣ್ಣಲ್ಲ. ಕೇವಲ ಸಂನ್ಯಾಸಿ ಇರುತ್ತಾಳೆ, ಕಣ್ಣು ಮುಚ್ಚಿ ಕಣ್ಣು ತೆರೆಯುವದರೊಳಗೆ ನಿಮ್ಮನ್ನು, ನಿಮ್ಮ ರಾಜ್ಯವನ್ನು ಶಾಪವೆಂಬ ಬೆಂಕಿಯಿಂದ ಸುಟ್ಟು ಬೂದಿ ಮಾಡಿಬಿಟ್ಟಾಳು. ಐಶ್ವರ್ಯ, ಕಾಮದ ಮದದೊಳಗೆ ಕಣ್ಣು ಮುಚ್ಚಿಕೊಂಡು ಅಡ್ಡಾಡಬೇಡಿರಿ. ದುಡುಕಬೇಡಿರಿ. ಸ್ವಲ್ಪ ತಿಳಿದು ಆಕೆಯ ಗೊಡವಿಗೆ ಹೋಗದೆ ಸುಮ್ಮನೆ ಇದ್ದು ಬಿಡ್ರಿ.

ಕೌಶಿಕ : ಹುಲಿಯ ಸಾಮರ್ಥ್ಯ ಇಲಿಗಳಿಗೆ ಬಂದೀತೇನು? ಅದರಂತೆ ಶಾಪ ಕೊಡುವ ಶಕ್ತಿ ನಿಮ್ಮಂಥ ಹೆಂಗಸರಿಗೆ ಎಲ್ಲಿಂದ ಬರಬೇಕು. ಇಂಥ ಜಾಣ ಮಾತುಗಳನ್ನು ಬಿಡು. ನನ್ನ ಮುಂದೆ ನಡೆಯುವುದಿಲ್ಲಾಂತ ತಿಳಿದು ಬಿಡು.

ಚಾರುಮತಿ : ಏನ್ರೀ. ಹೆಂಗಸರಿಗೆ ಶಾಪ ಕೊಡುವ ಶಕ್ತಿ ಇಲ್ಲಾ ಅಂತೀರ್ರ್ಯಾ?

ಕೌಶಿಕ : ಇಲ್ಲವೇ ಇಲ್ಲಾ.

ಚಾರುಮತಿ : ಏನ್ರೀ, ಎಂಥೆಂಥಾ ಗಂಡಸರೂ ಹೆಂಗಸರ ಶಾಪದಿಂದ ಹಾಳಾಗಿ ಹೋಗಿದ್ದಾರೆ. ನೋಡಿಕೊಂಡು ಮಾತಾಡ್ರಿ.

ಕೌಶಿಕ : ಏನೇ ಹೆಂಗಸರ ಶಾಪದಿಂದ ಯಾರಿಗೇನೂ ಆಗಿಲ್ಲಾ. ಸುಮ್ಮನೆ ಸುಳ್ಳು ಹೇಳಬೇಡಾ.

ಚಾರುಮತಿ : ಏನ್ರೀ ಹೆಂಗಸರ ಶಾಪದಿಂದ ಯಾರಿಗೇನೂ ಆಗಿಲ್ಲಾ?

ಕೌಶಿಕ : ಯಾರಿಗೇನೂ ಆಗಿಲ್ಲಾ?

ಚಾರುಮತಿ : ಹಾಗಾದರೆ ಹೇಳುತ್ತೇನೆ ಕೇಳ್ರಿ.

ಪದ

ಯಾರಿಗೇನೂ ಆಗದಿದ್ದರೆ ದಮಯಂತಿ ಶಾಪದಿಂದಾ
ಬೇಡನೊಬ್ಬ ಸುಟ್ಟು ಬೂದಿಯಾಕಾದಾ ನಿಮಿಷದೊಳಗ
ಇದ್ದು ಇಲ್ಲದಾದ ಗಂಡಸು ಆಗಿದ್ದವನೂ ಭಸ್ಮವಾದನು
ಹೇಳಿರಿ ಎಲ್ಲಾ ತಿಳಿದು ಮಾಡುವುದ್ಯಾಕೆ ಸುಳ್ಳೇವಾದಾ ॥ ೧ ॥

ಹೆಂಗಸರ ಶಾಪದೊಳಗೆ ಜೀವ ಇಲ್ಲಾಂತ ಅವಾ
ದಮಯಂತಿ ಕೂಡ ಯಾಕ ವಾದಿಸಿದಾ
ಕಾಮನ ಕೂಡು ಅಂತಾ ಕಾಡಿದಾ
ಬುದ್ಧಿಯ ಕೇಳದಾದ ದಾರಿಯ ಬಿಡದಾದ
ತಿಳಿಯಲಿಲ್ಲ ಅವಗ ಕೆಟ್ಟ, ಪ್ರಾಯದ ಅಬ್ಬರದಿಂದಾ ॥ ೨ ॥

ಘನಪತಿವ್ರತೆ ಅವಳು ನಳರಾಜನ ಹೆಂಡತಿಯು
ಭೂಮಿಯ ಮ್ಯಾಲೆ ಖ್ಯಾತಿ ಪಡೆದಂಥಾ ಯುವತಿಯು
ಅಂತಾಕಿಗೇನು ಕಾಲ ಬಂದಿತು ಅಂತ ವನವಾಸದಲಿ ಕೆಟ್ಟ
ಆಕೆಯ ಮೇಲೆ ಮಾಡಿದ ಮೋಸವನು ಅದರಿಂದ ಆವ
ಸುಟ್ಟು ಬೂದಿಯಾದಾ ॥ ೩ ॥

(ಮಾತು) : ಏನ್ರೀ, ಹೆಂಗಸರ ಶಾಪದಿಂದಾ ಯಾರಿಗೇನೂ ಆಗಿಲ್ಲಾ ಅಂತೀರಿ. ನಳರಾಜನ ಹೆಂಡತಿ ದಮಯಂತಿಗೆ ವನವಾಸ ಬಂದಾಗ ಆಕೆಗೆ ಒಬ್ಬ ಬೇಡರವನು ಗಂಟುಬಿದ್ದು, ಕಾಮಸುಖ ಕೊಡು ಅಂತಾ ಬಹಳ ಕಾಡಿದನು. ಆಗ ಆಕೆಯು ಬೇಕಾದಷ್ಟು ಬುದ್ಧಿವಾದ ಹೇಳಿದರೂ ಕೇಳದೆ ಮೈಮುಟ್ಟ ಹೋದನು. ಆಗ ಆಕೆಯು ತನ್ನ ಪತಿವ್ರತಾ ಧರ್ಮಕ್ಕೆ ಭಂಗ ಬರುತ್ತದೆಂದು

ತಿಳಿದು ಸಿಟ್ಟಿಗೆದ್ದು, "ನೀನು ಸುಟ್ಟು ಬೂದಿಯಾಗು" ಎಂದು ಶಾಪಕೊಟ್ಟಳು. ಆಗ ಶಾಪದಿಂದ ಅವನು ಸುಟ್ಟು ಬೂದಿಯಾದನು. ಅಂದಮೇಲೆ ಹೆಂಗಸರ ಶಾಪದಿಂದ ಯಾರಿಗೇನು ಆಗಿಲ್ಲಾ. ಹಾಗಾದರೆ ಅವನು ಸುಟ್ಟುಬೂದಿ ಯಾಕಾದ. ಇದನ್ನು ಹೇಳಿ ಮುಂದೆ ಮಾತಾಡ್ರೀ.

ಕೌಶಿಕ : ಏನೇ, ಆ ದಮಯಂತಿ ಅಂದರೆ ಸಾಮಾನ್ಯ ಹೆಣ್ಣಲ್ಲ. ಆಕೆ ಅನಸೂಯಾ, ಅರುಂಧತಿ, ಲೋಪಾಮುದ್ರೆಯರಂತೆ ಪತಿವ್ರತೆಯಿದ್ದಳು. ಆಕೆಯ ಶಾಪದಿಂದಾ ಆ ಬೇಡನು ಸುಟ್ಟು ಬೂದಿಯಾದನು. ಅವರಂತೆ ಕಲಿಯುಗದಲ್ಲಿ ಹೆಂಗಸರು ಯಾರೂ ಅಂಥವರಿಲ್ಲಾಂತ ತಿಳಿದು ಬಿಡು.

ಚಾರುಮತಿ : ಏನ್ರೀ, ಕಲಿಯುಗದಲ್ಲಿ ಅಂತಾ ಮಹತ್ವದವರು ಯಾರೂ ಇಲ್ಲೇನ್ರೀ?

ಕೌಶಿಕ : ಯಾರೂ ಇಲ್ಲ ನೋಡು.

ಚಾರುಮತಿ : ನೀವೇನ ಮನಸ್ಸು ಹಾಕೀರಲ್ಲಾ, ಆ ಮಹಾದೇವಿ ಅಂಥವಳದಾಳ.

ಕೌಶಿಕ : ಆಕೆಯು ನರಮನುಷ್ಯಳು. ಬಹಳ ಚೆಲುವಿ. ಸುರೇಂದ್ರಿ ಹೆಂಗಸು ಇರುವಳು ನೋಡು.

ಚಾರುಮತಿ : ಛೇ, ಆಕೆ ನರಮನುಷ್ಯಳಲ್ಲಾ ಹೇಳುತ್ತೇನೆ ಕೇಳಿರಿ.

ಪದ

ಪಾಪಿಗಳನ್ನು ಸುಟ್ಟು ಬೂದಿ ಮಾಡುವಂಥ
ದಾವಾಗ್ನಿ ಮಹಾದೇವಿ ಕೇಳಿರವಳು ಮಹಾ ಅನುಭಾವಿ
ಆ ಸಂನ್ಯಾಸಿ ಮಾಡಲು ಕೋಪ ನಿನ್ನ ವಂಶವು ಉಳಿಯಲು ಬೂದಿ
ಸಾಧು ಸಜ್ಜನರಿಗೆ ಕೈದೀಪಾ, ಕೆಟ್ಟ ಜನರಿಗೆ ಕೊಡುವಳು ಲೋಪಾ
ಮೂರು ಲೋಕ ಸುಡುವಂಥ ಶಾಪಾ
ಮತಿವಂತಿ ಇರುವಳು ಭೂಪಾ ॥

(ಮಾತು) : ಏನ್ರೀ, ಆ ಮಹಾದೇವಿಯು ಸಿಟ್ಟಿಗೆದ್ದರೆ, ಮೂರು ಲೋಕವನ್ನು ಸುಟ್ಟು ಬೂದಿ ಮಾಡುವಂಥ ಮನಸುಳ್ಳವಳಿರುವಳು. ಅಂಥಾಕಿಗೆ ನೀವು ನರಮನುಷ್ಯಳೆಂದು ತಿಳಿದು ಆಕೆಯನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳಬೇಕಂತ ಬೇತ ಮಾಡಿರುವಿರಲ್ಲಾ. ನಿಮ್ಮ ಪರಿಣಾಮವೇನಾದೀತು? ಬೆಂಕಿಗೆ ಮುದ್ದು ಕೊಡಹೋದರೆ ಸುಡದೆ

ಬಿಟ್ಟೀತೇ? ನೀವು ಆಕೆಯ ಹತ್ತಿರ ಹೋದಿರೆಂದರೆ ನಿಮ್ಮ ಜೀವ ಉಳಿಯುವುದಿಲ್ಲ, ಆಕೆಯ ಶಾಪದಿಂದ ಸುಟ್ಟು ಬೂದಿಯಾಗಿ ಹಾರಿ ಹೋಗುತ್ತೀರಿ, ಆದ್ದರಿಂದ ಆಕೆಯ ಉಸಾಬರಿ ಬಿಟ್ಟು ರಾಜ್ಯಭಾರ ಮಾಡಿಕೊಂಡು ತಣ್ಣಗಿರ್ರಿ.

ಕೌಶಿಕ : ಏನೇ, ಆಕೆಯನ್ನು ತರುವುದನ್ನು ಬಿಡಿಸಬೇಕಂತ ನನ್ನ ಮುಂದೆ ಹತ್ತೆಂಟು ಸುಳ್ಳು ಸುದ್ದಿ ಹೇಳಬೇಡಾ, ಆ ಮಹಾದೇವಿಯ ಸಲುವಾಗಿ ನಾನು ಸತ್ತುಹೋದರೂ ಚಿಂತೆಯಿಲ್ಲಾ. ಸಾಯುವುದು ಒಮ್ಮೆ. ಹಗಲೆಲ್ಲ ಬೇರೆ ಸಾಯುವದಿಲ್ಲ. ಆ ಮಹಾದೇವಿಯನ್ನು ಕೂಡದೇ ಬಿಡುವುದಿಲ್ಲಾ ಅಂತಾ ತಿಳಿದು ಬಿಡು. ಮತ್ತೆ ಹೇಳುತ್ತೇನೆ ಕೇಳು.

ಪದ

ಸುಮ್ಮನೆ ಹೋಗs ನನ ಕಾಂತೇ
ಹೇಳುವೆ ಬಿಡು ನಿನ್ನ ಒಣಭ್ರಾಂತು ॥ ಪಲ್ಲ ॥
ದೇವಿಯ ಕೂಡಿ ನಾ ಘನಸುಖವ ಪಡೆಯುವೆನು ಛೇ ದುಷ್ಟೆ
ಚೆಲುವು ಯಾತಕ್ಕೆ ನಿನಗೆಷ್ಟು ಹೋಗು ನೀ ಅರಿಷ್ಟೆ
ಮನಸ್ಸಿಗೆ ಬಂದಂತೆ ನೀ ಆಡುತ್ತೀ ನೀ ಮತ್ತೆ ॥ ೧ ॥

ಚಾರುಮತಿ : **ಪದ**

ಇನ್ನೆಷ್ಟು ಹೇಳಲಿ ನಾನು
ಕೆಟ್ಟು ಹೋಗುವಿ ನೀ ಇನ್ನು
ಪದಭ್ರಷ್ಟನಾಗುವಿ ಇನ್ನು
ನಾನು ಅಂದದ್ದು ಏನು
ಪರಿನಾರಿಯ ಬಿಡು ಅಂದೇನು ॥

ಕೌಶಿಕ : **ಪದ**

ಹೋಗಲೇ ಕೆಟ್ಟ ವೈರೀ ನೀ
ಯಾತಕೆ ಹಲಬುವಿ ನೀನು
ಈ ಪರಿ ಮರುಗುತ ನೀ ಮನದೊಳು
ದೇವಿಗೆ ನಿನ್ನನ್ನು ದಾಸಿಯ ಮಾಡುವೆನು

ನಿನಗೇನೋ ಕೆಡಗಾಲ ಬಂದಿರುವುದು
ನೀ ತಿಳಿ ಮಾರಿ ದೇವಗಿರಿ ಬಸವೇಶನೆ ಬಲ್ಲ
ಸಾಕಿನ್ನು ನಡಿ ನಿನ್ನ ದಬ್ಬುವೆನು ನೋಡಲೆ ನಿನ್ನ
ಮಾನವನು ಕಳೆಯುವೆನು ನಾ ನಿನ್ನ ॥

(ಮಾತು) : ಛೇ! ದುಷ್ಟೆ, ಆ ಮಹಾದೇವಿಯನ್ನು ತರುವೆನೆಂಬ ಹೊಟ್ಟೆ ಕಿಚ್ಚಿನಿಂದ ಕಂಡ ಕಂಡ ಹಾಗೆ ಮಾತಾಡುತ್ತೀಯಲ್ಲಾ. ಯಾಕೆ ನಿನಗೆ ಹೇಗೆ ಕಾಣುವೆನು. ಸುಮ್ಮನೆ ಹೋಗು ಅಂತಾ ಅಂದರೆ ಸ್ವಲ್ಪಾದರೂ ದಾದ ಮಾಡಲೊಲ್ಲಿ. ಈಗೇನು ಹೋಗುತ್ತೀಯೋ ಚೆಂಡು ಹಿಡಿದು ನೂಕಲೇ ನಿನ್ನ. ನನ್ನ ಮುಂದೆ ನಿಲ್ಲಬೇಡಾ.

(ನೂಕುವನು). ಏ ದೂತಿ.

ದೂತಿ : ಏನ್ರೆಪಾ.

ಕೌಶಿಕ : ಇನ್ನಾದರೂ ಹೋಗಿ ಬಾ. ಈ ಪೀತಾಂಬರ, ಮುತ್ತಿನ ಸರವನ್ನು ಕೊಡುವೆನು ತಗೋ. ಈ ಕೆಲಸ ಮಾಡಿಕೊಂಡು ಬಾ ತಿಳಿಯಿತಿಲ್ಲೋ ದೂತಿ.

ದೂತಿ : ಹೂನ್ರೆಪಾ (ಹೋಗುವಳು).

♦

ಅಂಕ–೩

(ಮಹಾದೇವಿಯ ಮನೆಗೆ ದೂತಿಯ ಪ್ರವೇಶ)

ದೂತಿ : (ಪ್ರವೇಶ ಮಾಡುತ್ತ) [ಸ್ವಗತ] ಏನ್ರವ್ವಾ. ನಮ್ಮ ರಾಜನಿಗೆ ಹುಚ್ಚು ಇನ್ನೂ ಬಿಟ್ಟಿಲ್ಲಾ. ಈ ಮಹಾದೇವಿಗಂದ್ರ ಬೇಡಿದ್ದು ಕೊಡತಾನ. ಈಗ ರಾಜ್ಯವನ್ನು ಬೇಡಿದರೂ ಸೈ ಕೊಡತಾನ. 'ಹೆಂಗಸು ಮಾಯೆ, ಗಂಡಸು ನಾಯಿ' ಅಂತಾರಲ್ಲಾ ಅದೇನೂ ಸುಳ್ಳಲ್ಲ. ಆ ಮಹಾದೇವಿಯನ್ನು ಯಾವಾಗ ನೋಡೇನೋ ಅಂತಾ ಆಕೆಯನ್ನು ಕರೆದುಕೊಂಡು ಬಾಅಂತ ಒಂದೇ ಸಮನ ಗಂಟು ಬಿದ್ದಾನ. ಈ ಸಾಮಾನುಗಳನ್ನೆಲ್ಲ ಕೊಟ್ಟಾನ. ಇದರಾಗ ನಾನು ಕುಂಟಣಿತನದ ಕಸಬು ಮಾಡದಿದ್ರ ತೀರಿಹೋತಲ್ಲ. ಇದರಾಗ ಅರ್ಧ ಗಪ್ಪ ಮಾಡಿದೆನಂದ್ರ ಸಾಯೋತನಕ ಬೇಕಾದಾಂಗ ಕುಂತು ಉಣ್ಣಬಹುದು. ಇನ್ನೇನೈತಿ? ರಾಜಾಗಂತೂ ಹೊಡತಾ ಹಾಕಿದೆ, ಆ ಮಹಾದೇವಿಗೆ ನೋಡಿ ಮಳ್ಳುಮಾಡಿ ಕಬೂಲಿ ಮಾಡಿಸಿದೆ ಅಂದ್ರ ತೀರಿ ಹೋಯಿತು. ಮಹಾದೇವಿ ಮನೀತನಕಾ ಹೋಗತೇನಿ. (ಪ್ರಕಟ) ಮಹಾದೇವಿ... ಮಹಾದೇವಿ... ಮನಿಯೊಳಗ ಇರುವಿಯೇನು?

ಅಕ್ಕಮಹಾದೇವಿ : ಯಾರವರು? ಇದ್ದೇನೆ ಬರ್ರಿ.

ದೂತಿ : ನಾನು ಊರಾನ ಬಡವಿ ಬಂದಿದ್ದೇನವ್ವಾ.

ಅಕ್ಕಮಹಾದೇವಿ : ಛೀ ! ಏನ ಬಾರವ್ವ ರಾಜ್ಯ ಕಾರಭಾರ ನಿನ್ನದೆ ಅದೆ. ಅಂದಮೇಲೆ ನೀ ಹ್ಯಾಂಗ ಬಡವಿ. ಇನ್ನು ನಾವು ಬಡವರವ್ವಾ!

ದೂತಿ : ನಾ ಎಂಥಾ ರಾಜ್ಯ ವಾಡೇದಾಗ ಅಡ್ಡಾಡುವಾಕಿ? ನನಗೆ ದಾಸಿ ದಾಸಿ ಅಂತಾರ. ಹೇಳಿದವರ ಮಾತು ಕೇಳೊ ಕೆಲಸ ನನ್ನದು. ನಿನ್ನ ಬಾಯಿಮಾತು ಖರೇ ಆಗಲೆವ್ವಾ, ಆಗೇ ಬಿಟ್ಟೈತೆ. ರಾಜಾನೂ ನಮ್ಮವನೇ. ಅಂದ್ರ ರಾಜ್ಯಾ ಸಹಿತ ನಮ್ಮದಾತು ಹೌದಲ್ಲೊ? ನೀ ಹೇಳಿದಾಂಗ, ನನಗ ಸಾವುಕಾರಕಿ ಬಂದು ಜಂಭ ಹೆಚ್ಚಾಗಿ ನಿನಗೀಟು ಕೊಡಬೇಕಂತ ಬಂದೇನಿ. ಇನ್ನೇನು ನಿನ್ನ ನಸೀಬು ತೆರೆಯಿತು ಅಂತಾ ತಿಳಿದು ಬಿಡು.

ಅಕ್ಕಮಹಾದೇವಿ : ಅದೇನವ್ವಾ, ಮತ್ತs ಹಂಗ ಅಂದ್ರ ನನಗೇನು ತಿಳಿಯಬೇಕು?

ದೂತಿ : ತಿಳಿದೇನ ಮಾಡೀತು! ನಿನ್ನ ಬಡತನ ನೋಡಿ ನೋಡಿ ನನ್ನ ಜೀವ ಮರುಗಿ ನಿನ್ನನ್ನು ಸಾವುಕಾರ್ತಿ ಮಾಡಬೇಕಂತಾ ಬಂದೇನಿ ನೋಡು.

ಅಕ್ಕಮಹಾದೇವಿ : ನೋಡು, ಪಂಡಿತರು ಹೇಳತಾರ, ನನ್ನ ಹಣೆಯಲ್ಲಿ ಎಷ್ಟು ಬರೆದಿದೆಯೋ ಅಷ್ಟೇ. ಕಾಡಿನಲ್ಲಿದ್ದರೂ ಅಷ್ಟೇ, ಸುವರ್ಣಮಯವಾದ ಮೇರುವಿನಲ್ಲಿದ್ದರೂ ಅಷ್ಟೇ. ಈಗ ಒಂದು ಹರವಿಯನ್ನು ತೆಗೆದುಕೊಂಡು ಬಾವಿಯಲ್ಲಿ ಮುಳುಗಿಸಿದರೂ ಅಷ್ಟೇ. ಸಮುದ್ರದಲ್ಲಿ ಮುಳುಗಿಸಿದರೂ ಅಷ್ಟೇ. ಅದರಂತೆ ನನ್ನ ನಸೀಬು ಇದ್ದಂತೆ ಆದೀತು. ಅದಕ್ಕೆ ನೀನೇನು ಮಾಡುತ್ತೀ?

ದೂತಿ : ಏನೇ, ನೀ ಇಷ್ಟಕ್ಕ ಎಷ್ಟು ಶಾಸ್ತ್ರ ಹೇಳಿದಿ? ನನಗೆ ನಿನ್ನನ್ನು ಸಾವುಕಾರ್ತಿ ಮಾಡಲು ಆಗಾಕಿಲ್ಲಾ?

ಅಕ್ಕಮಹಾದೇವಿ : ಏನವ್ವ ಮನುಷ್ಯರ ಕಡೆಯಿಂದ ಹ್ಯಾಗೆ ಆದೀತು? ದೇವರು ಮಾಡಿದರೆ ಆದೀತು!

ದೂತಿ : ದೇವರು ಏನ ಮಾಡತಾನ. ಗುಡಿಯಾಗ ಕುಂತು ಬಿಟ್ಟಾನ, ಹತ್ತು ಸಾವಿರ ಕೊಡಲ್ಲಿ ಇಪ್ಪತ್ತು ಸಾವಿರ ಕೊಟ್ರ ನೀನೇ ಎಲ್ಲಾ ಆಗುವಿ ನೋಡು.

ಅಕ್ಕಮಹಾದೇವಿ : ಹಾಗಾದರೆ ಕೊಟ್ಟರೆ ಕೊಡವ್ವಾ.

ದೂತಿ : ತಗೋಳವ್ವ ಇವನ್ನ (ಕೌಶಿಕನು ಕಳಿಸಿದ ಚಿನ್ನದ ಪೋಷಾಕು ಕೊಡುವಳು.) ಇದೇನು ಹತ್ತು ಸಾವಿರ ಏನು ಇಪ್ಪತ್ತು ಸಾವಿರ ಅದಾವು ನೋಡು.

ಅಕ್ಕಮಹಾದೇವಿ : ದೂತಿ, ಇವನ್ನೆಲ್ಲಾ ಎಲ್ಲಿಂದ ತಂದೆ?

ದೂತಿ : ಯಾಕವ್ವ ಇದು ನಮ್ಮ ಮನಿಯಾಗ ಇರಬಾರದೇನು?

ಅಕ್ಕಮಹಾದೇವಿ : ಅಲ್ಲವ್ವ ಇವು ರಾಜರಿಗೆ ಸಲ್ಲತಕ್ಕಂಥ ಪೋಷಾಕುಗಳು. ಇವು ನಿಮ್ಮ ಮನೆಯಲ್ಲಿ ಹೇಗೆ ಬಂದಾವು?

ದೂತಿ : ಅದೆಲ್ಲಾ ಹಕೀಕತ್ತು ನಿನಗ್ಯಾತಕ್ಕ ಬೇಕು. ಬೇಕಾದರೆ ತಗೋ, ಬೇಡವಾದರೆ ಬಿಡು. ನಮ್ಮ ಬದುಕು ನಮಗೇನೂ ಬೇಸರವಿಲ್ಲಾ ನಾನು ಹೋಗುತ್ತೇನೆ.

ಅಕ್ಕಮಹಾದೇವಿ : ಹಾಗಾದರೆ ಹೋಗವ್ವಾ.

ದೂತಿ : ನಿನಗೇನು ಹುಚ್ಚು ಹಿಡಿದೈತೇನವ್ವಾ. ಕರೆದು ಹೆಣ್ಣು ಕೊಟ್ರ ಅಳಿಯಾಗ ಮಲರೋಗ ಅಂತ ಹಂಗ ಮಾಡಬೇಡಾ. ತೆಗೆದುಕೋ ಸುಮ್ಮನೇ.

ಅಕ್ಕಮಹಾದೇವಿ : **ಪದ**

ಬೇಡವ್ವ ನಮಗಿಂಥ ಒಡವಿ ವೈಯಾರ
ಇದು ಯಾಕ ಜರತರ ಶಿವಶರಣರು ಕೊಟ್ಟಾರ ಬಹಿಷ್ಕಾರ
ಹೊನ್ನು, ಹೆಣ್ಣು ಕಣ್ಣಿಗೆ ಬಹು ಸುಂದರ
ದೇಶಕ್ಕೆ ಮೆರೆಯುವ ದೇವಗಿರಿ ಗ್ರಾಮ ಪೂರಾ
ಬಸವಣ್ಣನ ದಯಾ ಇರುವುದು ನಮಗೆ ಪೂರಾ

ಅಕ್ಕಮಹಾದೇವಿ : ಇವೇನೂ ನನಗೆ ಬೇಡಾ. ಇವನ್ನು ಅರಸನು ನೋಡಿದನೆಂದರೆ. ತುಡುಗುಮಾಡಿ ತಂದಿರುವಿ ಅಂತಾ ನಮ್ಮನ್ನು ತುರಂಗಕ್ಕೆ ಹಾಕಿಸ್ಯಾನು. ಇವೇನೂ ಬೇಡ ನನಗೆ.

ದೂತಿ : ಯಾರು ತುರಂಗದಾಗ ಹಾಕಿಸುತ್ತಾರೆಂದು ಹೇಳಿದಿ?

ಅಕ್ಕಮಹಾದೇವಿ : ಈ ಊರ ಅರಸು.

ದೂತಿ : ಅವನsa ಕೊಟ್ಟು ಕಳಿಸ್ಯಾನ ನೋಡವ್ವ.

ಅಕ್ಕಮಹಾದೇವಿ : ರಾಜನು ಕೊಟ್ಟು ಕಳಿಸಿರುವನೇನು?

ದೂತಿ : ಹೌದವ್ವ.

ಅಕ್ಕಮಹಾದೇವಿ : ನನಗ್ಯಾಕೆ ಇವೆಲ್ಲ?

ದೂತಿ : ಅದೆಲ್ಲಾ ನನಗೇನು ಗೊತ್ತವ್ವ.

ಅಕ್ಕಮಹಾದೇವಿ : ಹಾಗಾದರೆ ತಾರವ್ವ (ತೆಗೆದುಕೊಂಡು) ಹೋಗವ್ವ ಇನ್ನು.

ದೂತಿ : ಹಾಗೇ ಹೋಗುವುದಿಲ್ಲವ್ವ.

ಅಕ್ಕಮಹಾದೇವಿ : ಮತ್ತೆ ಹೇಗೆ ಹೋಗಬೇಕಂತಿ?

ದೂತಿ : ಮುಂದೇ.

ಅಕ್ಕಮಹಾದೇವಿ : ಮುಂದೇನವ್ವಾ.

ದೂತಿ : ಇವು ಯಾತಕ್ಕೆ ಬಂದಾವಂತಾ ತಿಳಿದಿ.

ಅಕ್ಕಮಹಾದೇವಿ : ಇವು ಯಾತಕ್ಕೆ ಬಂದಿರುವವು.

ದೂತಿ : ವಿಚಾರ ಮಾಡಿನೋಡು. ನೀನು ಸಂನ್ಯಾಸಿ ಅದೀದಿ.

ಅಕ್ಕಮಹಾದೇವಿ : (ವಿಚಾರ ಮಾಡಿ) ಏನೇ, ಈಗ ತಿಳಿಯಿತು ಬಿಡು. ಅರಸನು ಇವನ್ನು ಯಾತಕ್ಕೆ ಕೊಟ್ಟು ಕಳಿಸಿರುವನೆಂದರೆ. ನಾನು ಸಂನ್ಯಾಸಿ ಇದ್ದೇನೆ. ಇವನ್ನು ಸುಟ್ಟು ಬೂದಿಮಾಡಿ ಪ್ರೀತಿಯಿಂದ ಹಚ್ಚಿಕೊಳ್ಳಲಿಕ್ಕೆ ಕಳಿಸಿದ್ದಾನೆ, ಅದಕ್ಕೆ ನಾನು ಈಗಿಂದೀಗ ಇವನ್ನು ಅಗ್ನಿಗೆ ಆಹುತಿ ಕೊಡುತ್ತೇನೆ. ನೀನು ಇನ್ನು ಹೋಗು.

ದೂತಿ : ಏನಂದಿ! ಇವನೆಲ್ಲ ಸುಡುತ್ತೀಯಾ?

ಅಕ್ಕಮಹಾದೇವಿ : ಹೌದು ಇವನೆಲ್ಲ ಸುಡುತ್ತೇನೆ.

ದೂತಿ : ನಿಮ್ಮಪ್ಪರ ಇಂಥಾವು ನೋಡಿದ್ದನೇನು? ರಾಜರು ಏನು ಹೇಳಿ ಕಳಿಸಿದರೆಂದರೆ, ಇವನೆಲ್ಲಾ ತಗೊಂಡು ನನ್ನ ಲಗ್ನವಾಗಂತ ಹೇಳಿ ಕಳಿಸ್ಯಾನ. ನಿನ್ನ ಹುಚ್ಚತನ ಎಲ್ಲಾ ಬಿಟ್ಟು ಬಿಡು. ನನ್ನ ಕೂಡ ಬಾ ಹೋಗೋನ.

ಅಕ್ಕಮಹಾದೇವಿ : ಛೀ! ಹುಚ್ಚಿ, ಹಾಗೆಲ್ಲಾ ನಾನು ಗಂಡನನ್ನು ಮಾಡಿ ಕೊಳ್ಳುವದಿಲ್ಲಾಂತ ನಿಮ್ಮ ರಾಜನಿಗೆ ಗೊತ್ತದೆ. ಇದನ್ನು ಸುಟ್ಟು ಬೂದಿಮಾಡಿ ಹಚ್ಚಿಕೊಳ್ಳಲೆಂದು ಕಳಸ್ಯಾನ. ಅದು ನಿನಗೆ ಹೇಗೆ ಗೊತ್ತಾಗಬೇಕು?

ಪದ

ಸುಟ್ಟು ಬೂದಿ ಮಾಡುವನೆಲ್ಲಾ
ಬಿಟ್ಟು ಹೋಗು ಇವನ್ನೆಲ್ಲಾ
ಪರಿಶುದ್ಧವಾದಂತಾ ಭಸ್ಮವಮಾಡಿ ಧರಿಸುವೆ
ಶಿವಸ್ತುತಿಯನು ಮಾಡಿ ಮರಗುವೆ
ಇದನೆಲ್ಲ ನೋಡಿ ಮರೆಯಾಗಿನ್ನು ನಿಲ್ಲದೆ ಓಡಿ ॥

ದೂತಿ : **ಪದ**

ಇಂಥಾ ಭೂಷಣವನ್ನು ಸುಡುವುದೆಂದರೆ
ಇಂಥಾ ಹುಚ್ಚಾಟತನವ ಮಾಡುವರೇ
ಮರುಗುವೆ ಇದನೆಲ್ಲ ನೋಡಿ
ಕೊಟ್ಟುಬಿಡು ನನಗೆ ॥

ಅಕ್ಕಮಹಾದೇವಿ : **ಪದ**

ಕೊಟ್ಟು ಬೇಡುವುದೆಂಥಾ ನಿನ್ನ ನಡತೆ
ಸುಟ್ಟು ಹೋದರೆ ನಿನಗ್ಯಾಕೆ ಚಿಂತೆ

ಬಿಟ್ಟು ಬಿಡೆನ್ನ ಈ ರೀತಿ
ಕೆಟ್ಟವಾದೀತು ನಡಿಯಿನ್ನು ದೂತಿ ॥

ದೂತಿ : ಏನೇ, ಹಾಂಗ–ಹೀಂಗ ಮಾಡಬೇಕಾದರೆ ನನ್ನ ಸಾಮಾನು ತಾ ತಗೊಂಡು ಹೋಗುತ್ತೇನೆ.

ಅಕ್ಕಮಹಾದೇವಿ : ನೀನು ಸುಮ್ಮನೆ ಹೋದರೆ ನಿನ್ನ ಗತಿ ನೆಟ್ಟಗಾಯಿತು. ಇಲ್ಲದಿದ್ದರೆ ನೆಟ್ಟಗಾಗಲಿಕ್ಕಿಲ್ಲ. ಯಾಕೆ ಏನಂದಿ? ಹೋಗುವಿಯೋ ಇಲ್ಲವೋ. ಇವನ್ನು ಕೊಡು ಅಂತಾ ನಾನೇನಾದರೂ ನಿಮ್ಮ ಮನಿಗೆ ಬಂದಿದ್ದೆನೇನು? ನನಗೆ ಯಾತಕ್ಕೆಂದು ಕೊಟ್ಟು, ಇದನ್ನು ಕೊಟ್ಟ ಮೇಲೆ ಇದರ ಆಶೆ ನಿನಗ್ಯಾತಕ್ಕ? ಇವು ಯಾವಾಗ ನನ್ನ ಸ್ವಾಧೀನ ಆದವೋ ಆಗ ತೀರಿತು. ನಾ ಸುಡುತ್ತೇನೆ. ಬೇಕಾದ್ದು ಮಾಡುತ್ತೇನೆ. ನೀನು ಇಲ್ಲಿ ನಿಲ್ಲಬೇಡಾ ಮನಿಗೆ ಹೋಗು.

ದೂತಿ : ನೀನು ಹೇಳುವುದಕ್ಕಿಂತಾ ಮೊದಲೇ ಹೋಗುತ್ತೇನೆ. ನೀನು ಇವನ್ನು ಸುಡುತ್ತೇನೆಂದೆಯಲ್ಲ. ಪಕ್ಕನೇ ಸುಟ್ಟುಗಿಟ್ಟಾಳು ಅಂತ ನಿಂತಿದ್ದೇನೆ. ಇವನ್ನು ಸುಡುವುದಿಲ್ಲಂತ ವಚನಕೊಡು. ಆಗ ಇಲ್ಲಿ ನಿಂತರೆ ಹೇಳುವಿಯಂತೆ.

ಅಕ್ಕಮಹಾದೇವಿ : ಹಾಗಾದರೆ ಈ ಉರಿಯೊಳಗೆ ಹಾಕಿ ಬಿಡುತ್ತೇನೆ. ನಿಲ್ಲು (ಎಂದು ಸುಡಲು ಹೋಗುವಳು).

ದೂತಿ : ಛೇ, ಬಿಡವ್ವ ಸುಡಬೇಡಾ. ಹಂಗs ನಿನಗ ತೋರಿಸಲಿಕ್ಕೆ ತಂದೇನಿ. ಆ ಹೊಲಸು ರಾಜಾ ಹೇಳಿದ್ದಕ್ಕೆ ತಂದೇನಿ. ಸುಡಬೇಡಾ, ತಾತಾ ನನ್ನ ಸಾಮಾನು.

ಅಕ್ಕಮಹಾದೇವಿ : ಏನು ಇವನ್ನು ನನಗೆ ತೋರಿಸಲಿಕ್ಕೆ ತಂದಿರುವಿ ಏನು ದೂತಿ?

ದೂತಿ : ಹೌದು ತೋರಿಸಾಕ ತಂದೇನಿ. ಇಷ್ಟೇ ಅಲ್ಲಾ, ಇವನ್ನು ತೋರಿಸಿದ ಮೇಲೆ ನೀನು ನಮ್ಮ ರಾಜರಿಗೇ...

ಅಕ್ಕಮಹಾದೇವಿ : ಏನಂದಿ? ನಿಮ್ಮ ರಾಜನಿಗೆ...

ದೂತಿ : ಅವುಗಳನ್ನು ನನ್ನ ಕೈಯಲ್ಲಿ ತಾ ಅಂದ್ರ ಹೇಳತೀನಿ ಮುಂದಿನದು.

ಅಕ್ಕಮಹಾದೇವಿ : ತಗೋ. (ಕೊಟ್ಟು) ಅದೇನು ಹೇಳಿದ್ದು. ಹೇಳು ಇನ್ನು ಮೇಲೆ...

೧ನೇ ಸೈನಿಕ : ಮಹಾದೇವಿ...ಮಹಾದೇವಿ... ಮನಿಯೊಳಗ ಇರುವಿಯೇನು? ಹೊರಗೆ ಬರುವಿಯೋ ನಾವೇ ಒಳಗೆ ಬರೋಣವೇ? ರಾಜರು ನಿನ್ನನ್ನು ಕರೆದುಕೊಂಡು ಬಾ ಅಂತಾ ಹೇಳ್ಯಾರ. ಅದಕ ಲಗು ಬಾ.

ನಿರ್ಮಲಶೆಟ್ಟಿ : ಯಾಕೆ ಸೇವಕರೇ ಇಲ್ಲೇಕೆ ಬಂದಿರುವಿರಿ. ನಡೆಯಿರಿ ನಡೆಯಿರಿ ಸುಮ್ಮನೆ.

ಅಕ್ಕಮಹಾದೇವಿ : ಥೂ ಪಾಪಿಷ್ಠರೇ, ನೀವು ಯಾರು ಸರಿಯಿರಿ. ನಮ್ಮ ಮನೆಯೊಳಗ ಬಂದು ಎಷ್ಟು ಪುಂಡಾಟಿಕೆಯನ್ನು ನಡೆಸಿರುವಿರಲ್ಲಾ. ನಿಮ್ಮ ಪರಿಣಾಮ ನೆಟ್ಟಗಾಗಲಿಕ್ಕಿಲ್ಲಾ. ಮುನ್ನೋಡಿ ಓಣಿಯೊಳಗೆ ನಿಂತು ಮಾತಾಡಿರಿ. ನೀವು ಯಾರು? ನಮ್ಮ ಮನೆಯೊಳಗೆ ಇಂಥಾ ಹುಡುಗಾಟಿಕೆ ನಡಿಸಲಿಕ್ಕೆ ಕಾರಣವೇನು?

೨ನೇ ಸೈನಿಕ : ನಮ್ಮ ರಾಜರು ನಿಮ್ಮನ್ನು ಕರೆದುಕೊಂಡು ಬಾ ಅಂತ ಹೇಳಿದರು. ನಿಮ್ಮನ್ನು ರಾಜರ ಹತ್ತಿರ ಒಯ್ಯಲು ಬಂದಿದ್ದೇವೆ. ನಡಿ ನಮ್ಮ ರಾಜರ ಹತ್ತಿರ.

ಅಕ್ಕಮಹಾದೇವಿ : ನನ್ನನ್ನು ಯಾಕೆ ಕರೆದುಕೊಂಡು ಬಾ ಅಂತಾ ಹೇಳಿದರು, ನಿಮ್ಮ ರಾಜರಿಗೆ ನನ್ನಲ್ಲಿ ಅಗತ್ಯದ ಕೆಲಸವೇನಿದೆ?

೧ನೇ ಸೈನಿಕ : ಅದೆಲ್ಲಾ ನಮಗೇನು ಗೊತ್ತು? ಅವರು ಕರೆದುಕೊಂಡು ಬಾ ಅಂತಾ ಹೇಳಿದರು. ಅವರು ಹೇಳಿದಂತೆ ನಾವು ಬಂದೆವು. ಸುಮ್ಮನೆ ಬಾ.

ಅಕ್ಕಮಹಾದೇವಿ : ಈಗ ಬರುತ್ತೇನೆ ನಡೆಯಿರಿ. ನಿಮ್ಮ ರಾಜನಿಗೆ ಬಹಳೇ ಸೊಕ್ಕು ಬಂದಂತೆ ಕಾಣುತ್ತದೆ. ಅವನೇನು ಮಾಡುತ್ತಾನೆ ನೋಡೋಣ. ತಮ್ಮಾ ಶಂಕರಾ. ಆ ಕೌಶಿಕನಿಗೆ ಬುದ್ಧಿ ಕಲಿಸಿ ಬರುತ್ತೇನೆ. ನೀನು ಕಾಳಜಿ ಮಾಡದೇ ಸ್ವಸ್ತ ಮನಿಯೊಳಗೆ ಇರು. ಈಗಲೇ ತಿರುಗಿ ಬರುತ್ತೇನೆ.

ಶಂಕರ : ಛೇ ಅಕ್ಕವ್ವಾ, ನೀನೇನೂ ಹೋಗಬೇಡಾ. ನಾನೇ ಹೋಗಿ ಆ ರಾಜನಿಗೆ ಬುದ್ಧಿ ಕಲಿಸಿ ಬರುತ್ತೇನೆ. ನೀನು ಹೋಗಬೇಡಾ. ತಣ್ಣಗೆ ಮನೆಯಲ್ಲಿರು. (ಸೈನಿಕರನ್ನು ಉದ್ದೇಶಿಸಿ) ಎಲೆ ಸೈನಿಕರೇ ನಡೆಯಿರಿ ನಾನೇ ಬರುತ್ತೇನೆ. ನಡೆಯಿರಿ. ನಿಮ್ಮ ರಾಜನ ಬಂಟತನ ನೋಡುತ್ತೇನೆ. ಅಕ್ಕವ್ವಾ, ನಾನೇ ಹೋಗಿ ಆ ರಾಜನ ಸೊಕ್ಕು ಇಳಿಸಿ ಬರುತ್ತೇನೆ. ನೀನು ಸುಮ್ಮನೆ ಮನೆಯಲ್ಲಿ ಹೋಗಿ ಕೂಡ್ರು.

ಅಕ್ಕಮಹಾದೇವಿ : ಛೇ, ಹುಚ್ಚಾ ಸುಮ್ಮನಿರು. ನಾನೇ ಹೋಗಿ ಆ ರಾಜನ ಗುಂಗು ಇಳಿಸಿ ಬರುತ್ತೇನೆ. ನೀನು ಸುಮ್ಮನೇ ಮನೆಯಲ್ಲಿ ಕುಳಿತಿರು.

ಶಂಕರ : ಎಲೇ ಮಕ್ಕಳಿರಾ, ನಮ್ಮ ಅಕ್ಕಗ ಏನರ ಅಂದರೆ ನಿಮ್ಮ ಟೊಪ್ಪಿಗೆ ಹಾರಂಗ ಬಡಿದೇನು ಹುಷಾರ್!

ದೃಶ್ಯ

(ಮಹಾದೇವಿಯು ರಾಜನ ಅರಮನೆಯನ್ನು ಪ್ರವೇಶಿಸುವುದು.)

ಕೌಶಿಕ : ದೂತಿ, ಮಹಾದೇವಿ ಬಂದಳೇನು?

ದೂತಿ : ಬರಾಕ ಹತ್ತಿದ್ದಾಳೆ. ಸೈನಿಕರು ಕರಕೊಂಡು ಬರಾಕ ಹತ್ತಿದ್ದಾರೆ.

ಕೌಶಿಕ : ದೂತಿ. ಯಾವ ಕಡೆ ಬರಲಿಕ್ಕೆ ಹತ್ತಿದ್ದಾರೆ?

ದೂತಿ : ಅದೋ ಅಲ್ಲೆ ನೋಡಿ (ಬೆರಳು ಮಾಡಿ ತೋರಿಸುವಳು)

ಕೌಶಿಕ : ದಾಸಿ ಸುಳ್ಳು ಹೇಳುತ್ತೀಯೇನು! ನನಗೆ ಕಾಣಿಸುತ್ತಿಲ್ಲಾ.

ದೂತಿ : ಸುಳ್ಯಾಕ್ರೀ. ಅಲ್ಲೇ ಗಿಡದಾಗ ಬರತಾಳ ನೋಡ್ರಿ.

ಕೌಶಿಕ : ದೂತಿ ಎಲ್ಲಿಯೂ ಕಾಣಿಸುವುದಿಲ್ಲಾ. ಸುಳ್ಳು ಹೇಳುತ್ತೀ. ನನ್ನ ಮಾತಿಗೆ ಆ ಮಹಾದೇವಿಯು ಏನು ಅಂದಳು?

ದೂತಿ : ಮತ್ತೇನಂತಾಳ್ರೀ. ನಾ ಎಲ್ಲಾ ಶಿಸ್ತು ಮಾಡಿಕೊಂಡು ಬಂದೇನ್ರಿ.

ಕೌಶಿಕ : ಹಾಗಾದರೆ ಆ ಮಹಾದೇವಿ ಬಂದ ಕೂಡಲೇ ಗಾಂಧರ್ವ ಲಗ್ನ ಆಗುವುದೊಂದೇ ತಡವೇನು?

ದೂತಿ : ಎಲ್ಲಾ ಲಗ್ನ ನಿಮ್ಮ ಐಶ್ವರ್ಯದ ಮೇಲೆ ಅಂತ ಎಲ್ಲಾ ಹೇಳ್ಯಾರ ನೋಡಿ.

ಕೌಶಿಕ : ಇಷ್ಟು ಸಿಸ್ತು ಆದರೆ ಬಹಳ ಚಲೋದಾಯಿತು. ಇನ್ನು ಆಕಿ ಬರುವುದರೊಳಗಾಗಿ ಏನೇನು ವ್ಯವಸ್ಥೆ ಮಾಡು ಎಂದು ಹೇಳಿದ್ದಾಳೆ.

ದೂತಿ : ಇನ್ನು ನಾ ಬರುವುದರೊಳಗೇ ಮಂಚದ ಮೇಲೆ ಕುಳಿತು, ಯಾವಾಗ ಬಂದಾಳಂತಾ ದಾರಿ ನೋಡಿ, ಜೀವಾಬಿಡುವ ವ್ಯವಸ್ಥಾ ಮಾಡಲು ಹೇಳ್ಯಾಳ ನೋಡ್ರಿ.

ಕೌಶಿಕ : ಹಾಗಾದರೆ ದೂತಿ ಬಾ ಇಲ್ಲಿ (ಕಿವಿಯಲ್ಲಿ ಹೇಳಬೇಕು).

(ದೂತಿ ತಲೆ ಅಲ್ಲಾಡಿಸುತ್ತ ಅತ್ತ ಹೋಗಲು, ಇತ್ತ ಸೈನಿಕರು ಮಹಾದೇವಿಯನ್ನು ಕರೆದುಕೊಂಡು ಬರಬೇಕು)

೨ನೇ ಸೈನಿಕ : ಮಹಾರಾಜರಿಗೆ ನಮಸ್ಕಾರ,

ಕೌಶಿಕ : ಮಹಾದೇವಿಯನ್ನು ಕರೆದುಕೊಂಡು ಬಂದಿರುವಿರೇನು?

೧ನೇ ಸೈನಿಕ :ಕರೆದುಕೊಂಡು ಬಂದಿರುವೆವು. ಇಲ್ಲಿರುವಳು ನೋಡ್ರಿ.

ಕೌಶಿಕ : ಹಾಗಾದರೆ ನೀವು ನಡೆಯಿರಿ. (ಸನ್ನೆ ಮಾಡುವನು).

(ಸ್ವಗತ) ಧನ್ಯ ಧನ್ಯ ನಾನೇ ಈ ಲೋಕದಲ್ಲಿ ನಾನೇ ಧನ್ಯನು.

(ಪ್ರಕಟ) ಸುಂದರಿ ಹೇಳುವೆನು ಕೇಳು.

ಪದ

ಜಾಣೆ ಮೋಹದ ಅರಗಣಿ
ಮಾತಾಡೆಯನ್ನ ಮಣಿಮಂಚದ ಮೇಲೆ ರತಿಗೂಡೆ
ಸುಂದರಿ ಸೊಬಗಿನ ವೈಯಾರಿ ಸುಖಬೇಡುವೆನು
ಅದರೊಳು ಮದವೇರಿ ಇಂದು ಮಾಡುವೆ ಕಾಮ
ಸುಖ ಎಲ್ಲಾ ಸುರಿ ತಿಳಿ ನೀನೀಗ ಒಯ್ಯಾರಿ ॥

(ಮಾತು) : ಹೇ ಸುಂದರಿ, ಮಹಾದೇವಿ, ನನ್ನ ಹತ್ತಿರ ಬಾ. ಅಷ್ಟೇಕೆ ದೂರ ಸರಿದು ನಿಂತಿರುವೆ. ನಾಚಿಕೆಯೇನು? ನಾಚಿಕೆ ಬಿಟ್ಟು ನನ್ನ ಕೂಡ ಪ್ರೀತಿಯಿಂದ ಮಾತಾಡು. ನನ್ನ ರಾಜ್ಯವೆಲ್ಲ ನಿನ್ನದೆ ಅದೆ. ಇಲ್ಲಿ ಮಂಚದ ಮೇಲೆ ತುಸು ಕೂಡು ಬಾ. (ಹಿಡಿಯಲಿಕ್ಕೆ ಹೋಗುವನು. ಮಹಾದೇವಿ ಹಿಂದೆ ಸರಿಯುವಳು).

ಅಕ್ಕಮಹಾದೇವಿ : ಥೂ, ಪಾಪಿಷ್ಟಾ, ದೂರ ಸರಿದು ಮಾತಾಡು, ಹೇಳುತ್ತೇನೆ ಕೇಳು.

ಪದ

ಸರಿ ದುರಾತ್ಮನೆ, ಸರಿ ಕೌಶಿಕನೇ
ಎನ್ನ ಮುಟ್ಟುವುದು ತರವಲ್ಲ
ಸರಿಯತ್ತ ಬರುವಿಯೇಕೆ ಮೈಮೇಲೆ
ನಾಚಿಕೆ ಇಲ್ಲದೇ ಬರುವೆ ನೀಯಾಕ

ಬಾಲಿಯರ ಮೈಮೇಲೆ ಸರಿ ಅತ್ತ
ಅರಸಾಗಿ ಸರಸಾಗಿ ಎಲ್ಲರಿಗೂ ಇರಬೇಕ

ಕೌಶಿಕ : **ಪದ**

ಯಾತಕ್ಕೆ ಬೊಗಳುವಿ ಬಿಡು ಅದೂ
ಭವಿ ಎನಿಸಿಕೊಂಡಿರುವಿ ಎಲೇ ಮಹಾದೇವಿ
ರಾಜನಿಗೆ ಶೂರನಿಗೆ ಅಂಜದೆ ಆಡುವಿ
ನಿಷ್ಟುರವಾಗಿ ಬಂದಿದೆ ನಿನಗಹಂಕಾರ
ಶಿಕ್ಷೆಯ ಕೊಡುವೆನು ನಿನಗೀಗ
ಮನಬಂದಂತೆ ಆಡಲೇ ನನಗೀಗ ॥

ಅಕ್ಕಮಹಾದೇವಿ : ಥೂ ಪಾಪಿಷ್ಟ, ದೂರ ಸರಿದು ನಿಂತು ಮಾತಾಡು. ನನ್ನ ಸಮೀಪಕ್ಕೆ ಬರಬೇಡಾ. ಬಂದರೆ ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ನನಗೆ ಶಿಕ್ಷೆಕೊಡುತ್ತೇನೆ ಅನ್ನುತ್ತೀಯಲ್ಲಾ ನಾನು ಅವತಾರೀ ಹೆಣ್ಣುಮಗಳಿದ್ದೇನೆ. ಇದನ್ನು ತಿಳಿದು ದೂರ ಸರಿದು ನಿಂತು ಮಾತಾಡು ತಿಳಿಯಿತಿಲ್ಲೋ.

ಕೌಶಿಕ : ವಾಹ್! ವಾಹ್ !! ವೈಯಾರಿ. ಇಂಥ ವೈಯಾರತನವನ್ನು ಎಲ್ಲಿಂದ ಕಲಿತುಕೊಂಡು ಬಂದಿರುವೆ. ನನ್ನ ಧೈರ್ಯ ಪರೀಕ್ಷೆ ಮಾಡಬೇಕಂತ ಇಷ್ಟೆಲ್ಲಾ ಮಾಡುವಿಯೇನು? ನಿನ್ನ ಸೋಗು ಎಲ್ಲಾ ಬಿಟ್ಟು ಮಂಚದ ಮೇಲೆ ಕುಳಿತುಕೊಂಡು ಕ್ಷೇಮ ವಿಚಾರವನ್ನು ಹೇಳು ಬಾ. ನಿನ್ನದೆಲ್ಲ ವಿಚಾರ ಮಾಡುವುದರ ಸಲುವಾಗಿಯೇ ಕರೆದುಕೊಂಡು ಬರಲು ಕಳಿಸಿದ್ದೆ. ಆದುದರಿಂದ ನಿನ್ನ ವಿಚಾರಗಳನ್ನು, ಕ್ಷೇಮವನ್ನು ಹೇಳು ಬಾ.

ಅಕ್ಕಮಹಾದೇವಿ : ನನ್ನ ಕ್ಷೇಮ, ಲಭಾಗಳನ್ನು ತೆಗೆದುಕೊಂಡು ಏನು ಮಾಡುವಿ? ನಿನಗೆ ನಾನೇನು ಸಂಬಂಧ? ದೂರ ಸರಿದು ನಿಂತು ಮಾತಾಡು.

ಕೌಶಿಕ : ಎಲ್ಲೈ ಮಹಾದೇವಿ, ನಾನು ರಾಜನು. ನೀ ನನ್ನ ಪ್ರಜೆಯು. ಅಂದಮೇಲೆ ನಿನ್ನ ಸುಖ-ದುಃಖಗಳನ್ನು ಕೇಳಲು ನಾನು ಬದ್ಧಸ್ಥನಲ್ಲವೇನು?

ಅಕ್ಕಮಹಾದೇವಿ : ನಿಂದs ನಿನಗ ಟಿಕಾಣಿ ಇಲ್ಲಾ ! ಅಂದ ಮೇಲೆ ನನ್ನ ಸುಖ-ದುಃಖಗಳನ್ನು ತಕ್ಕೊಂಡು ಏನು ಮಾಡುತ್ತೀ? ಈ ಜಗತ್ತನ್ನು ಸಂರಕ್ಷಣೆ ಮಾಡುವಂಥ ಪರಮಾತ್ಮನು ಇರುವನಲ್ಲಾ, ಆತನು ಮಾತ್ರ ಯಾವತ್ತೂ ಪ್ರಾಣಿಗಳ ಸುಖ-ದುಃಖಗಳನ್ನು ನೋಡಿ ಯಾವಾಗಲೂ ಕಾಪಾಡುತ್ತಾನೆ.

ಅಂಥವನ ಮುಂದೆ ಹೇಳಿದರೆ ಏನಾದರೂ ಆದೀತು. ನಿನ್ನಂಥವನ ಮುಂದೆ ಹೇಳಿದರೆ ಏನಾಗುವುದು? ಸುಮ್ಮನೆ ಕೂಡು ಹೋಗು.

ಕೌಶಿಕ : ಏನೇ, ನಾನು ಯಾರೆಂಬುದು ವಿಚಾರಿಸದೇ ಮಾತಾಡುತ್ತೀಯಲ್ಲಾ. ಹೀಗೇ ನಾನು ಬಿಡುವುದಿಲ್ಲಾ. ಜೋರಿನಿಂದ ಮಂಚಕ್ಕೆ ಒಯ್ದು ನನ್ನ ಆಶೆಯನ್ನು ಪೂರ್ಣ ಮಾಡಿಕೊಳ್ಳುತ್ತೇನೆ.

ಅಕ್ಕಮಹಾದೇವಿ : **ಪದ**

ತಡೀ ಕೌಶಿಕಾ ಬಿಡು ಮೈಯಮುಟ್ಟ ಬರುವುದು
ಎಂಥಾದ್ದು ನಿನ್ನ ನಡತಿ ಅರಸಾಗಿ ಎಲ್ಲಿ ಕಲತಿ
ಎಳ್ಳಷ್ಟೂ ಇಲ್ಲೋ ನಿನ್ನಲ್ಲಿ ಸುಗುಣ
ಅರಸಾಗಿ ಯಾತಕ ಹುಟ್ಟಿದೆ ನೀನು
ಛೀ ದುಷ್ಟ, ಪರಭ್ರಷ್ಟ ವ್ಯಸನವು ಯಾಕಿಷ್ಟಾ
ಮನೆಯೊಳು ಹೆಂಡತಿ ಇಲ್ಲೇನೋ ನಿನಗ
ಭೋಗಿಸು ಅವಳ ಕೂಡ ಸುಳ್ಳೇ ಯಾತಕ
ಬಯಸುವಿ ನೀ ಕೇಡ ॥

ಕೌಶಿಕ : **ಪದ**

ನೀನೇ ಎನ್ನಯ ಪ್ರೀತಿಯ ಮಡದಿ
ರತಿ ಸುಖ ಕೊಡು ಎನಗೆ ಮಡದಿ
ಬಿಡು ಕೋಪವನು ಮತ್ತ ಶಾಪ
ಕೊಡುತ ಎನಗೆ ಬಹು ತಾಪ
ಕೊಡುತ ತುರ್ತಾ ಮಂಚಕೆ ಬಾರೆ
ನಾ ಬೇಡುವೆ ನಿನ್ನೊಳು ಪ್ರೀತಿ ॥

(ಮಾತು): ನೀನು ನನ್ನನ್ನೇನು ಮಾಡುತ್ತೀ? ಇಂಥಾ ಒಣಡೌಲು ಬಿಟ್ಟು ಸುಮ್ಮನೆ ಮಂಚಕ್ಕೆ ಬರುತ್ತಿಯೋ ಇಲ್ಲವೋ ಹೇಳು?

ಅಕ್ಕಮಹಾದೇವಿ : ನಾನು ಬರುವುದಿಲ್ಲಾ.

ಕೌಶಿಕ : ನಾನು ಬಿಡುವುದಿಲ್ಲಾ.

ಅಕ್ಕಮಹಾದೇವಿ : ಏನು ಮಾಡುತ್ತೀಯೋ ಮಾಡು ನೋಡೋಣ?

ಕೌಶಿಕ :

ಪದ

ನಳಿನಾಕ್ಷಿ ಬಿಡು ಪಂಥ ತರವಲ್ಲ
ನಿನಗ್ಯಾತಕ ಬೇಕು ಒಣಜ್ಯಾಲಾ
ನೋಡೀನಿ ನಿಂದೆಲ್ಲ ಚುಂಬನ ಕೊಡು ಒಂದು
ಸುಂದರಿ ಎನಗೊಂದು ಕಾಮತಾಪಲಿ ಬೆಂದು
ಬಳಲಿದೆ ನಾನಿಂದು ಆಲಂಗಿಸು ಪ್ರಿಯೆ ಕರುಣಿಸು
ಕಾಮಕ್ರೀಡೆಗೆ ಎನ್ನ ಹೊಂದು ನಿನ್ನಾ ನೋಡಿದ್ದೆನೆಲ್ಲಾ ॥

(ಮಾತು) : ಹೇ ನಳಿನಾಕ್ಷಿ. ನೀ ಅಬಲೆಯಾದ ಹೆಣ್ಣು. ನೀ ಈ ರೀತಿ ಹಟಹಿಡಿಯುವುದು ತರವಲ್ಲ ನೋಡು. ಕಾಮ ತಾಪದಿಂದ ಬೆಂದು, ಬಳಲಿ, ಬಾಯಾರಿ ನೀರಾಗಿ ನಿಂತಿರುವೆನು. ಆದ್ದರಿಂದ ನನಗೊಂದು ಚುಂಬನವನ್ನು ಕೊಡು. ಈಗಿನ ಸಮಯದಲ್ಲಿ ಚುಂಬನವನ್ನು ಕೊಡದಿದ್ದರೆ, ವ್ಯರ್ಥವಾಗಿ ನನ್ನ ಪ್ರಾಣ ಹೋಗುತ್ತದೆ. ಆದ್ದರಿಂದ ಮಹಾದೇವಿ ಸ್ವಲ್ಪ ದಯಮಾಡು.

ಅಕ್ಕಮಹಾದೇವಿ :

ಪದ

ಪರಹೆಣ್ಣಿನ ಮ್ಯಾಲೆ ನಿನ್ನ ಮನಸ್ಯಾಕೇ ರಾಜನೇ
ಬಿಡು ಸಾಕು ಕೌಶಿಕನೇ ॥ ಪಲ್ಲ ॥

ಕಾಮ ತುಂಬ ಕೆಟ್ಟ ವ್ಯಸನವು
ಶಿವಧ್ಯಾನದಲ್ಲಿ ಹುಟ್ಟುವೆನು ಪರಮಾತ್ಮನ
ದೃಢಜ್ಞಾನವನ್ನು ಸೇರಿಸುತಲಿ
ಪಾರ್ವತಿಯನ್ನು ಮೋಹಿಸಿದಂತಾ
ದಾನವನನ್ನು ಆಗ ಶಾಪದಿ ಸುಟ್ಟನು
ಕೇಳೋ ರಾಜಾ ನೀನೀಗ ॥

(ಮಾತು): ಏನೇ ಕೌಶಿಕಾ, ಕಾಮ ಸುಖವೆನ್ನುವುದನ್ನು ಶಿವಭಕ್ತಿಯನ್ನುವಂಥ ಬೆಂಕಿಯಲ್ಲಿ ಸುಟ್ಟುಬಿಟ್ಟಿದ್ದೇನೆ. ಮುಂಚೆ ಪಾರ್ವತಿ ದೇವಿಯು ಪರಮಾತ್ಮನ ಸಲುವಾಗಿ ಮನಿಪ್ಲವ ದೇಶದೊಳಗೆ ತಪಸ್ಸು ಮಾಡುತ್ತಿದ್ದಳು. ಆಗ ಅಲ್ಲಿ ಒಬ್ಬ ರಾಕ್ಷಸನು ಆಕೆಯನ್ನು ನೋಡಿ ನಮಸ್ಕಾರ ಮಾಡಿದಾ. ಮತ್ತು ಆಕೆಯ ಚೆಲುವಿಕೆಯನ್ನು ನೋಡಿ ಆಕೆಯ ಮೇಲೆ ಕಾಮವಿಲಾಸಕ್ಕೆ ಮನಸ್ಸು ಮಾಡಿದಾ. ಅಷ್ಟರಲ್ಲಿ ಪಾರ್ವತಿಯು ಅದನ್ನು ತಿಳಿದು, ಸಿಟ್ಟಿನಿಂದು ಅವನನ್ನು ಸುಟ್ಟುಬಿಟ್ಟಳು. ಅಂದ ಮೇಲೆ ಆ ರಾಕ್ಷಸನು ಆ ದೇವಿಯಿಂದ

ಹೇಗೆ ಸುಟ್ಟುಕೊಂಡನು. ಅದರಂತೆ ನೀನು ನನ್ನಿಂದ ಸುಟ್ಟು ಹೋದಿ. ನಿನ್ನ ಕೆಟ್ಟ ವ್ಯಸನವನೆಲ್ಲ ಬಿಟ್ಟು ಬಿಡು.

ಕೌಶಿಕ : ಮಹಾದೇವಿ ಏನಂದಿ? ಆ ಪಾರ್ವತಿದೇವಿ, ಆ ರಾಕ್ಷಸನನ್ನು ಸುಟ್ಟು ಬೂದಿಮಾಡಿದಂತೆ ನೀನು ನನ್ನನ್ನು ಸುಟ್ಟು ಬಿಡುತ್ತೇನಂದೆಯಲ್ಲಾ! ನಿನ್ನಂಥ ಅಬಲೆಗೆ ಹೆದರುವೆನೇನು? ಛೀ! ಹುಚ್ಚಿ. ಇಂಥಾದ್ದು ಬಿಟ್ಟು ಬಿಡು ಹೇಳುತ್ತೇನೆ ಕೇಳು.

ಪದ

ಸುರತಕ್ಕೆ ಬಾ ಸಖಿ ತ್ವರಿತದಿ ಅಂಬುಜ ಮುಖಿ
ಚುಂಬನ ಕೊಡು ರಮಣಿ ಕಾಮನ ಅರಗಿಣಿ
ಸವಿಮಾತು ತಿಳಿದು ಬಾ ಕಾಮಿನಿ
ಅರಿಕೆ ನಿನಗಿಲ್ಲೇ ಶೌರ್ಯ ಸ್ಥಿರವಲ್ಲಾ
ನೋಡಿದ್ದಿ ನನದೆಲ್ಲಾ ॥

(ಮಾತು):ನೀನು ಏನೋ ಸುಳ್ಳು ಹೇಳಿ ನನ್ನನ್ನು ಮರಿಗೆಡವು ಬೇಡಾ. ನಾನು ನಿನ್ನನೇನೂ ಬಿಡುವುದಿಲ್ಲಾ. ಆ ಕಾರ್ಯಕ್ಕೆ ಮಾನಗೇಡಾಗಿ ಬರುವುದೇನು ಒಳ್ಳೇಯದಲ್ಲ. ಸುಮ್ಮನೆ ನನಗೊಂದು ಚುಂಬನ ಕೊಟ್ಟು ಕಾಮಸುಖಕ್ಕೆ ಅನುಕೂಲಳಾಗು. (ಸಮೀಪಕ್ಕೆ ಹೋಗುವನು)

ಅಕ್ಕಮಹಾದೇವಿ : ಛೇ ದುಷ್ಟಾ! ದೂರ ನಿಂತು ಮಾತಾಡು. ಮೈ ಮುಟ್ಟ ಬರಬೇಡಾ. ಐಶ್ವರ್ಯದ ಮಬ್ಬಿನಲ್ಲಿ ಕಣ್ಣು ಮುಚ್ಚಿಕೊಂಡು ಅರಿವಿಲ್ಲದೇ ಸೆರೆ ಕುಡಿದ ಮಂಗನಂತೆ ಯಾತಕ್ಕೆ ಜಿಗಿದಾಡುವಿ? ಹೇಳುತ್ತೇನೆ ಕೇಳು.

ಪದ

ಈ ದೇಹ ಸ್ಥಿರವಲ್ಲಾ
ಕಡೆಗಿದು ಮಣ್ಣಿನ ಪಾಲಾ ಆಗುವುದು ಸಿದ್ಧಾಂತಾ
ಎಲ್ಲರಿಗೂ ಗೊತ್ತಿದ್ದುದೇ ಮಾತಾ ಒದ್ದಾಡುವುದೇನು ಮರತಾ
ದೇವಗಿರಿ ಬಸವೇಶನ ನೆನೆಸು ಅನುದಿನ
ಕವಿ ಹೇಳ್ಯಾನ ಶಿವಣ್ಣಾ ॥

(ಮಾತು) : ಕೌಶಿಕಾ. ಈ ನರಜನ್ಮ ಸಿಗಬೇಕಾದರೆ ಎಷ್ಟೋ ಪುಣ್ಯ ಮಾಡಿ ಬರಬೇಕು. ಆದರೆ ಇದೂ ಒಂದಿಲ್ಲೊಂದು ದಿನ ಮಣ್ಣು ಪಾಲಾಗುತ್ತದೆ. ಇದು ಇರುವವರೆಗೆ ದಾನ-ಧರ್ಮ ಮಾಡಿ ಸದ್ಧರ್ಮದಿಂದ ನಡೆದು

ಹಗಲಿರುಳು ಶಿವಾ ಶಿವಾ ಎನ್ನುತ್ತ ಶಿವಭಜನೆ ಮಾಡಿ ರಾಮಚಂದ್ರನಂತೆ ಕೀರ್ತಿಗಳಿಸು. ಯಾಕೆಂದರೆ ಕೀರ್ತಿಯು ಸೂರ್ಯ, ಚಂದ್ರರಿರುವವರೆಗೂ ಇರುತ್ತದೆ. ಅದಕ್ಕೆ ನಾನು ಹೇಳುತ್ತಲಿರುವ ಲಕ್ಷಗೊಟ್ಟು ಕೇಳು ಇನ್ನಾದರೂ.

ಕೌಶಿಕ : ಏನು ಮಹಾದೇವಿ, ನನ್ನ ಮುಂದೆ ಏನಾದರೂ ಸುಳ್ಳು ಹೇಳಿ ದಾಟಲಿಕ್ಕೆ ಪ್ರಯತ್ನ ಮಾಡುತ್ತಿರುವೆಯೇನು? ದಾನ. ಧರ್ಮ ಯಾತಕ್ಕೆ ಬೇಕು. ಇದೆಲ್ಲ ಬಿಟ್ಟು ನನಗೊಂದು ಚುಂಬನವನ್ನು ಕೊಡು.

ಅಕ್ಕಮಹಾದೇವಿ : ಏನಪ್ಪಾ, ನೀನು ಎಂಥಾ ಹುಚ್ಚನಿರುವೆ? ನೀನು ನಾಲ್ಕು ಕಾಲಿನ ಪಶುಗಳೊಳಗೆ ಜಮಾ ಆಗಿರುವೆ ನೋಡು?

ಕೌಶಿಕ : ಏನೇ ನೀನು ನನಗೆ ದನ ಅಂದುಬಿಟ್ಟಿಯಲ್ಲ! ಈಗಿನ ಸಮಯದಲ್ಲಿ ಪಶು ಅಂದರೂ ಅನ್ನು ಸಂಭೋಗಕ್ಕೆ ಮಾತ್ರ ಬಾ.

ಅಕ್ಕಮಹಾದೇವಿ : ಥೂ, ಥೂ ಇಲ್ಲಿಯವರೆಗೆ ಹೇಳಿರುವುದೆಲ್ಲ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತೆ ಆಯಿತು. ನೀನು ಜಾಣನಲ್ಲ ನೋಡು.

ಕೌಶಿಕ : ನಾನು ಮಾತ್ರ ಜಾಣನಲ್ಲ. ನೀನು ಮಾತ್ರ ಜಾಣೆಯೇ?

ಅಕ್ಕಮಹಾದೇವಿ : ಹೌದು ಶಿವಭಕ್ತರೆಂದರೆ ಮಹಾಜ್ಞಾನಿಗಳು. ನಮಗೆ ಜಾಣರು ಅಲ್ಲಾ ಅಂತ ಅನ್ನುವವರಾರು?

ಕೌಶಿಕ : ಶಿವಭಕ್ತರೆಂದರೆ ಮಹಾಜ್ಞಾನಿಗಳೇನು?

ಅಕ್ಕಮಹಾದೇವಿ : ಹೌದು.

ಕೌಶಿಕ : ನೀವು ಮಹಾಜ್ಞಾನಿಗಳಾದರೆ ಅಲ್ಲದ ಕೆಲಸ ಏಕೆ ಮಾಡುವಿರಿ?

ಅಕ್ಕಮಹಾದೇವಿ : ಏನು ಮಾಡುತ್ತೇವೆ? ಶಿವಭಕ್ತರು ಅಲ್ಲದ ಕೆಲಸ ಮಾಡಿದರೆ ಶಿವನು ಹೇಗೆ ಒಲಿದಾನು? ಇದನ್ನು ತಿಳಿದು ಮಾತನಾಡು.

ಕೌಶಿಕ: ಮಹಾದೇವಿ. ಶಿವಶರಣರು ಅಲ್ಲದ ಕೆಲಸ ಮಾಡುವುದಿಲ್ಲ ಅನುತ್ತೀಯಲ್ಲಾ. ಹಾಗಾದರೆ ಪರಮಾತ್ಮ ಅವರಿಗೆ ಮೆಚ್ಚಿ ಪ್ರಸನ್ನನಾಗುತ್ತಾನೇನು?

ಅಕ್ಕಮಹಾದೇವಿ : ಹೌದು ಮತ್ತಿನ್ನೇನು?

ಕೌಶಿಕ : ಹಾಗಾದರೆ ಶರಣರು ಪಾಪಕರ್ಮಗಳನ್ನು ಮಾಡುವುದಿಲ್ಲವೇನು?

ಅಕ್ಕಮಹಾದೇವಿ : ಎಂದಿಗೂ ಮಾಡುವುದಿಲ್ಲ.

ಕೌಶಿಕ : **ಪದ**

ಮಾಡದಿದ್ದರೆ ಸೌಂದರನಂಬಿ ಅನ್ನುವಂಥ ಶಿವಶರಣ
ಶಿಶುಹತ್ಯಾ ಪಾಪ ಯಾಕೆ ಮಾಡಿದಾ
ತಿಳಿಯಿನ್ನಾದರೂ ಇದು ಎಂಥಾ ಕೃತ್ಯ
ಅವನು ಮಾಡಿದ ಶಿಶುಹತ್ಯ ಪಾಪವಲ್ಲೇನು?
ಇದು ನೋಡು ನೀ ಎಲ್ಲಾ ತಿಳಿದು
ತನ್ನ ಹೊಟ್ಟೆಯ ಮಗನ್ನ ತಾನು ನೋಡಲಿಲ್ಲಾ
ಕೊಂದು ಒಗೆದಾ ಅಂದಮೇಲೆ ಅವನೆಂಥ ಶಿವಶರಣಾ
ಶರಣರು ಪಾಪ ಮಾಡೋದಿಲ್ಲಾ ಅಂತಾ ಹೇಳ್ತಿ
ಇದು ಎಂಥ ವೀಪರೀತ ಮಗನ ಕೊಲ್ಲುವಂಥ ಪಾಪ
ಮಕ್ಕಳ ಜೋಕೆ ಮಾಡುವಂಥ ಶಕ್ತಿಯಿಲ್ಲದಿದ್ದರೆ
ಮತ್ತೆ ಸುರತ ಯಾಕೆ ಬಯಸುಬೇಕು
ಆ ಶರಣಾ ಹಡೆದ ಮೇಲೆ ಸಲುಹಬೇಕು
ಶಿಶುವನ್ನ ಆಗದಿದ್ದರೆ ತಾ ಪರರಿಗೆ ಕೊಡಬೇಕು
ಶಿಶುವ ಕೊಂದು ಆ ಪಾಪಾ ಅವನೇಕೆ ಮಾಡಿದಾ ॥

(ಮಾತು): ಏನೇ, ಶರಣರು ಪಾಪ ಮಾಡುವುದಿಲ್ಲಾ ಅನ್ನುತ್ತೀಯಲ್ಲಾ. ಹಾಗಾದರೆ ಸೌಂದರನಂಬಿ ಎಂಬ ಶರಣನು, ತನ್ನ ಹೆಂಡತಿ ಅವಳಿ ಜವಳಿ ಮಕ್ಕಳನ್ನು ಹಡೆಯಲು ಅವನು ಮೊದಲು ಹುಟ್ಟಿದ ಕೂಸನ್ನು ಇಟ್ಟುಕೊಂಡು, ಹಿಂದೆ ಹುಟ್ಟಿದ ಕೂಸನ್ನ ಹೊರಗೆ ಒಗೆದು ಬಿಟ್ಟ. ಶಿಶುಹತ್ಯ ಮಾಡಿದಾ ಮಹಾಪಾಪ. ಅದು ಹ್ಯಾಗೆಂದರೆ, ನೂರು ಗೋವು ಕೊಂದಷ್ಟು ಪಾಪವು ಒಬ್ಬ ಬ್ರಾಹ್ಮಣನನ್ನು ಕೊಂದರೆ ಬರುತ್ತದೆ. ೂರು ಬ್ರಾಹ್ಮಣರನ್ನು ಕೊಂದಷ್ಟು ಪಾಪವು ಒಬ್ಬ ಸ್ತ್ರೀಯಳನ್ನು ಕೊಂದರೆ ಬರುತ್ತದೆ. ಇಂದು ನೂರುಮಂದಿ ಸ್ತ್ರೀಯರನ್ನು ಕೊಂದಷ್ಟು ಪಾಪವು ಒಂದು ಶಿಶುವನ್ನು ಕೊಂದರೆ ಬರುತ್ತದೆ. ಈ ಪ್ರಕಾರ ಶಾಸ್ತ್ರವು ಹೇಳುತ್ತದೆ. ಅಂದಮೇಲೆ ಸೌಂದರನೆಂಬ ಶರಣನಿಗೆ ಇದು ಗೊತ್ತಿದ್ದೂ ಬೇಕೆಂದೇ ಶಿಶುಹತ್ಯವನ್ನು ಏಕೆ ಮಾಡಿದಾ? ಶರಣರು ಪಾಪ ಮಾಡುವುದಿಲ್ಲವೆನ್ನುತ್ತೀಯಲ್ಲಾ, ಮತ್ತೆ ಇದು ಪಾಪ ಅಲ್ಲವೇನು? ನೀನೇ ಹೇಳು.

ಅಕ್ಕಮಹಾದೇವಿ : ಎಲೋ ಅರಸ, ಸೌಂದರನೆಂಬ ಶರಣರು ಆ ಕೂಸನ್ನು ಏಕೆ ಕೊಂದನೆಂದರೆ ನಮ್ಮ ವೀರಶೈವ ಧರ್ಮದಲ್ಲಿ ಹೀಗೆ ಹೇಳಿದೆ.

ಕೌಶಿಕ : ದೇವಿ ಏನೆಂದು ಹೇಳಿದೆ?

ಅಕ್ಕಮಹಾದೇವಿ : ಕೌಶಿಕ ಕೇಳು, ಯಾವಾಗ ಕೂಸು ತಾಯಿಯ ಗರ್ಭದಿಂದ ಭೂಮಿಗೆ ಬಂದಿತೋ ಆಗ ಅರ್ಧ ಶರೀರವು ತಾಯಿಯ ಗರ್ಭದಲ್ಲಿರುವಾಗಲೇ ಆ ಕೂಸಿಗೆ ಲಿಂಗಧಾರಣ ಮಾಡಿಸಬೇಕಂತ ನಿಯಮವಿದೆ. ಆದರೆ ಅದೇ ಪ್ರಕಾರ ಶರಣನು ತನ್ನ ಹೆಂಡತಿ ಒಂದು ಕೂಸನ್ನು ಹಡೆಯುವಳೆಂದು ತಿಳಿದು, ಒಂದು ಲಿಂಗವನ್ನು ತಯಾರ ಮಾಡಿಕೊಂಡು ಕುಳಿತಿದ್ದ. ಆಗ ಅವನ ಹೆಂಡತಿ ಒಂದರ ನಂತರ ಮತ್ತೊಂದು ಗಳಿಗೆಯ ಮೇಲೆ ಮತ್ತೊಂದು ಕೂಸು ಹಡೆದಳು. ಆಗ ಈ ಎರಡನೆಯ ಕೂಸಿಗೆ ಲಿಂಗವನ್ನು ತಯಾರ ಮಾಡುವುದರೊಳಗಾಗಿ ವೇಳೆ ಮೀರಿತು. ಆಗ ಆ ಕೂಸು ಲಿಂಗವಿಲ್ಲದ ಭವಿಯೆಂದು ಇದು ನಮ್ಮ ಮನೆಯಲ್ಲಿ ಇರಕೂಡದೆಂದು ಹೊರಗೆ ಬೀಸಾಡಿಬಿಟ್ಟ, ಕೇಳಿದೆಯೋ ಅರಸ, ಧರ್ಮದ ಪ್ರಕಾರ ಅವನು ಹಾಗೆ ಮಾಡಿದಾ, ಇದರಲ್ಲಿ ಅವನದೇನು ತಪ್ಪು? ಧರ್ಮ ಪರಿಪಾಲನೆಗಾಗಿ ತನ್ನ ಹೊಟ್ಟೆಯ ಮಗನೆಂದರೂ ಕೇಳಲಿಲ್ಲ. ಅವನ ವೈರಾಗ್ಯವು ಎಂತಹುದು ತಿಳಿಯಿತೀಲ್ಲೋ?

ಕೌಶಿಕ : ದೇವಿ. ಅವನು ಲಿಂಗವಿಲ್ಲದ ಭವಿಯಂತಾ ಆ ಕೂಸನ್ನು ಮನೆಯೊಳಗೆ ಇಟ್ಟುಕೊಳ್ಳಬಾರದಂತ ಅದನ್ನು ಬೀಸಾಡಿದನೇನು?

ಅಕ್ಕಮಹಾದೇವಿ : ಹೌದು, ಹೌದು ನೋಡು ಕೌಶಿಕಾ.

ಕೌಶಿಕ : ಮಹಾದೇವಿ ಎಂಥಾ ಹುಚ್ಚುತನವು. ಒಂದು ಗೋಲಗುಂಡಿನ ಪ್ರಕಾರದ ಕಲ್ಲನ್ನು ಲಿಂಗ ಎಂದು ಕೊರಳಲ್ಲಿ ಕಟ್ಟಿಕೊಂಡರೆ ಏನಾಗುತ್ತದೆ?

ಅಕ್ಕಮಹಾದೇವಿ : ಎಲೋ ರಾಜಾ, ಕಲ್ಲು ಅನ್ನಬೇಡಾ. ಇಷ್ಟಲಿಂಗದ ಮಹತ್ವ ನಿಮ್ಮಂಥ ಭವಿಗಳಿಗೇನು ಗೊತ್ತು? ಕೇಳು, ಲಿಂಗದಲ್ಲಿ ಮೂರೂ ಲೋಕಗಳು ಅಡಗಿವೆ. ಯಾವತ್ತೂ ಚರಾಚರ ಪ್ರಾಣಿಗಳೆಲ್ಲಾ ಲಿಂಗದಲ್ಲಿಯೇ ಹೊರತು ಬೇರೆ ಅಸ್ತಿತ್ವವಿಲ್ಲಾ. ಈ ಪ್ರಕಾರ ಲಿಂಗ ಪುರಾಣದಲ್ಲಿ ಹೇಳಿದೆ. ಅಂದಮೇಲೆ ಮೂರು ಲೋಕವನೆಲ್ಲಾ ತನ್ನ ಉದರದಲ್ಲಿ ಇಂಬಿಟ್ಟುಕೊಂಡಂತ ಇಷ್ಟಲಿಂಗಕ್ಕೆ ಕಲ್ಲು ಅನ್ನುತ್ತೀಯಲ್ಲಾ. ಹಾಗೆ ಅನ್ನಬಾರದು. ಯಾಕೆಂದರೆ ನಿಂದೆ ಮಾಡಿದಂತೆ ಆಗುತ್ತದೆ. ಆ ಪಾಪ ನಿನ್ನನ್ನು ಎಂದೂ ಬಿಡುವುದಿಲ್ಲಾ. ನೋಡಿಕೊಂಡು ಮಾತನಾಡು ಅರಸನೇ.

ಕೌಶಿಕ : ದೇವಿ ಅಲ್ಲದ್ದು ಏಕೆ ಹೇಳುತ್ತೀ? ಆಡೋ ಹುಡುಗರ ಮುಂದೆ ಹೇಳು. ಅವರು ನಿಜ ಎಂದು ನಂಬುತ್ತಾರೆ. ಏನೇ ಗೋಲಿಗುಂಡಿನೊಳಗೆ

ಮೂರು ಲೋಕ ಆದಾವು ಅಂತs. ಇದಕ್ಕ ಯಾರಾದರೂ ಹೌದು ಅಂದಾರೇನು? ಶರಣರ ಹತ್ತಿರ ಎಳ್ಳಷ್ಟೂ ಹುರುಳಿಲ್ಲಾ ನೋಡು.

ಅಕ್ಕಮಹಾದೇವಿ : ಛೀ ಏನಂದಿರಿ. ಶರಣರೆಂದರೆ ಯಾರಂತ ತಿಳಿದಿರುವಿರಿ. ಈ ಭೂಮಿಯನ್ನು ಪುಡಿ ಮಾಡಬೇಕೆಂದರೆ ಮಾಡ್ಯಾರ. ಪೂರ್ವಕ್ಕೆ ಹುಟ್ಟುವ ಸೂರ್ಯನನ್ನು ಪಶ್ಚಿಮಕ್ಕೆಯಾದರೂ ಹುಟ್ಟಿಸಬಹುದು. ಸಿಟ್ಟಿಗೆದ್ದು ನೋಡಿದರೆ ನಕ್ಷತ್ರಗಳೇ ಎದುರು ಬರಬಹುದು. ಇಂಥ ಮಹಾತ್ಮರಿಗೆ ಸತ್ವವಿಲ್ಲ ಅನ್ನುವೆಯಲ್ಲಾ? ನಿನಗೇನು ತಿಳಿದಿದೆ? ಶಿವಶರಣರೆಂದರೆ ಶಿವನಕಿಂಥ ಹೆಚ್ಚಿನವರಂತಾ ತಿಳಿದು ಬಿಡು.

ಕೌಶಿಕ : ಏನೇ ಅಂದಾಗ್ಯೂ ಶಿವಶರಣರು ಶಿವನಕಿಂತ ಹೆಚ್ಚಿನವರೆಂತಾದರೆ ಅವರು ಏನು ಮಾಡ್ಯಾರ ಹೇಳರ ಹೇಳು?

ಅಕ್ಕಮಹಾದೇವಿ : ಎಲವೋ ಅರಸನೇ ಶಿವಶರಣರ ಹತ್ತಿರ ಸತ್ಯ ಇಲ್ಲ ಅಂದಾಂಗ ಆಯಿತಲ್ಲಾ.

ಕೌಶಿಕ : ಹೌದು ಸತ್ಯ ಇಲ್ಲಾ

ಅಕ್ಕಮಹಾದೇವಿ : ಏನು? ಶಿವಶರಣರ ಹತ್ತಿರ ಸತ್ಯವಿಲ್ಲವೇ?

ಕೌಶಿಕ : ಎಳ್ಳಷ್ಟೂ ಇಲ್ಲಾ ನೋಡು.

ಅಕ್ಕಮಹಾದೇವಿ : **ಪದ**

ಎಳ್ಳಷ್ಟೂ ಇಲ್ಲದಿದ್ದರೆ ಮುಸುಡೆ ಚೌಡಯ್ಯನೆಂಬ ಶರಣನು
ಗೊಂಬಿಯನ್ನು ಮನುಷ್ಯನನ್ನಾಗಿ ಮಾಡಿದ ಸತ ಎಲ್ಲಿಂದ ಬಂತು
ಅವನಿಗೆ ಶಿವಶರಣರಿಗೆ ಸತ್ವ ಇಲ್ಲಂತ ಆಡುವಿಯಲ್ಲಾ
ಮೂಲವ ತಿಳಿಯದೆ ಭೂಪಾ ಎಳ್ಳಷ್ಟೂ ಗೊತ್ತಿಲ್ಲಾ ನಿನಗೆ
ಭವಿಗಳೆಲ್ಲಾ ಕೂಡಿ ಒಂದೇ ಒಂದು ಬೇತು ಶರಣನನ್ನು
ಮಾನಗೇಡಿ ಮಾಡಲಿಕ್ಕೆ ತಂತ್ರವನ್ನು ಮಾಡಿದರು
ಮನುಷ್ಯಾಕೃತಿಯ ಗೊಂಬಿಯನ್ನು ಗೋಣಿಯ ಚೀಲದಲ್ಲಿ
ಅರಳೆಯ ತುಂಬಿ ಮೇಲೆ ಬಣ್ಣವನ್ನು ಹಚ್ಚಿ ತಂದರು
ಮನುಷ್ಯನಂತೆ ॥

(ಮಾತು) : ಕೌಶಿಕಾ. ಶಿವಭಕ್ತರ ಹತ್ತಿರ ಎಳ್ಳಷ್ಟೂ ಸತ್ಯ ಇಲ್ಲಾ ಅನ್ನುತ್ತೀಯಲ್ಲಾ. ಆ ಮುಸುಡೆ ಅನ್ನುವಂತ ಪಟ್ಟಣದೊಳಗೆ ಎಲ್ಲಾ ಭವಿಗಳು ಕೂಡಿ ಶಿವಶರಣನಾದ ಚೌಡಯ್ಯನಿಗೆ ಚೇಷ್ಟೆ ಮಾಡಬೇಕೆಂದು ಒಂದು ಅಕಲು

ಮಾಡಿದರು. ಅದೇನು ಅಂದರೆ, ಒಂದು ಗೋಣಿ ಚೀಲದೊಳಗೆ ಅರಳೆಯನ್ನು ತುಂಬಿ, ಅದನ್ನು ಮನುಷ್ಯಾಕೃತಿ ಮಾಡಿ, ವಿಭೂತಿ, ರುದ್ರಾಕ್ಷಿಧಾರಣ ಮಾಡಿಸಿ, ಅದನ್ನು ಒಯ್ದು ಒಂದು ಹಾಳು ಗುಡಿಯೊಳಗೆ ಕೆಡವಿ, ಓಹೋ ಒಬ್ಬ ಬಡ ಜಂಗಮನು ಸತ್ತಿರುವನು. ಇವನಿಗೆ ಯಾರೂ ದಿಕ್ಕಿಲ್ಲ. ನಮ್ಮಲ್ಲಿಯ ಶಿವಶರಣರು ಹಣವಿದ್ದರೆ ಮಾತ್ರ ಹೆಣ ಎಬ್ಬಿಸಿಕೊಂಡು, ಆ ಹೆಣವನ್ನು ಮಣ್ಣುಗಾಣಿಸುತ್ತಿದ್ದರು. ಇವರ ಹತ್ತಿರ ಏನೂ ಇಲ್ಲಾ ಅಂತ ತಿಳಿದು ಅವನ ಆ ಹೆಣದ ಸಮೀಪಕ್ಕೆ ಯಾರೂ ಬರಲಿಲ್ಲಾ ಎಂದು ಶಿವಶರಣರನ್ನು ಬೈಯುತ್ತ, ಪಾಪ ಇವನನ್ನು ಯಾರೂ ಮಣ್ಣುಗಾಣಿಸುವವರಿಲ್ಲಾ ಎಂದು ಒಂದು ವಿಮಾನ ಮಾಡಿ, ಅದರೊಳಗೆ ಕೂಡಿಸಿ, ನಾಲ್ಕು ಮಂದಿ ಜಂಗಮರನ್ನು ಬೆದರಿಸಿ ಕರೆದುಕೊಂಡು ಬಂದು, ಅವರ ಮೇಲೆ ಹೊರೆಸಿಕೊಂಡು ಶಿವಶರಣರನ್ನು ಬೈಯುತ್ತ ನಡೆದರು. ಆಗ ಚೌಡಯ್ಯನೆಂಬ ಶರಣನು ಇದು ಭವಿಗಳ ಕೃತಿ ಅಂತಾ ತಿಳಿದು, ಆವಾಗ ಶಿವಭಕ್ತರಿಗೆ ಅಪಹಾಸ್ಯ ಮಾಡುವುದರ ಸಲುವಾಗಿ ಭವಿಗಳು ಹೀಗೆ ಸಂಚನ್ನು ಮಾಡಿದ್ದಾರೆ. ಅದಕ್ಕೆ ಶಿವಭಕ್ತಿಯ ಪ್ರಭಾವವನ್ನು ತೋರಿಸಬೇಕೆಂದು ಹಾಗೆ ಒಂದು ಹತಾರವನ್ನು ತೆಗೆದುಕೊಂಡು ಆ ಗೋಣಿ ಚೀಲದೊಳಗಿನ ಗೊಂಬಿಗೆ ಮಾತಾಡಿಸಿದರು.

ಕೌಶಿಕ : ಏನೆಂದು ಮಾತಾಡಿಸಿದರು ಮಹಾದೇವಿ?

ಅಕ್ಕಮಹಾದೇವಿ : ಎಲೈ ನೀನು ಯಾತಕ್ಕೆ ಸುಮ್ಮನೆ ಕುಳಿತಿರುವೆ. ಎದ್ದು ಬಾ ಎಂದು ಅದಕ್ಕೆ ಆ ಹತಾರವನ್ನು ಮುಟ್ಟಿಸಿದರು. ಕೂಡಲೇ ಅದು ನಿಜವಾದ ಮನುಷ್ಯನಾಗಿ ಬಂದು ಶರಣರ ಪಾದಕ್ಕೆ ನಮಸ್ಕಾರ ಮಾಡಿತು. ಅದಕ್ಕೆ ಚೌಡಯ್ಯನು ಚಿರಂಜೀವಿಯಾಗು ಎಂದು ಆಶೀರ್ವಾದ ಮಾಡಿ ಶಿಷ್ಯನನ್ನಾಗಿ ಮಾಡಿಕೊಂಡನು. ರಾಜಾ ಶಿವಶರಣರಿಗೆ ಸತ್ಯವಿಲ್ಲೆಂದು ಅನ್ನುತ್ತಿಯಲ್ಲಾ. ಹಾಗಾದರೆ ಆ ಗೋಣಿ ಚೀಲದ ಅರಳೆಯ ಗೊಂಬೆಯು ನಿಜವಾದ ಮನುಷ್ಯನಾಗಬೇಕಾದರೆ, ಅವನ ಹತ್ತಿರ ಎಂಥಾ ಸತ್ಯ ಇದ್ದಾಂಗಾಯಿತು. ಇದನ್ನು ವಿಚಾರಿಸಿ ಮುಂದೆ ಮಾತನಾಡು.

ಕೌಶಿಕ : ಏನೇ, ನೀನು ಎಂಥಾ ಬೆರಕಿ ಇರುವಿ. ನಾನು ಬೇಕಾದ್ದು ಹೇಳಿದರೂ ಅದನ್ನೆಲ್ಲಾ ಸುಳ್ಳುಮಾಡಿ ನಿಂದೇ ನಿಜ ಎನ್ನುವಂತೆ ಮಾಡುವಿಯಲ್ಲಾ, ಇಂಥಾ ಬಾಯಿ ಬಡುಕುತನ ಎಲ್ಲಿ ಕಲಿತು ಬಂದಿರುವಿ. ನಿನ್ನಂಥಾ ಸುಳ್ಳು ಹೇಳುವವರನ್ನು ನಾನು ಎಲ್ಲಿಯೂ ಕಂಡಿಲ್ಲಾ ನೋಡು.

ಅಕ್ಕಮಹಾದೇವಿ : ಎಲ್ಯೆ ಅರಸನೇ, ನಾನು ಸುಳ್ಳು ಹೇಳುವವಳಲ್ಲಾ. ಸುಳ್ಳು ಹೇಳುವವರನ್ನು ಹಾಳು ಮಾಡುವಂಥ ಸಂನ್ಯಾಸಿ ಇದ್ದೇನೆ.

ಕೌಶಿಕ : ಏನೇ ಒಯ್ಯಾರಿ. ನೀನು ಹಾಗೆ ಹೇಳಿಕೊಂತ ನಿಂತರೆ ನೀನು ಬೆಳತನಕ ಹೇಳಿದರೂ ಇನ್ನೂ ಮೇಲೆ ಅದೇನೂ ಕಾರಣವಲ್ಲಾ. ಇದೆಲ್ಲಾ ಬಿಟ್ಟು ನನಗೊಂದು ಚುಂಬನವನ್ನು ಕೊಟ್ಟು ಕಾಮಸುಖಕ್ಕೆ ಅನುಕೂಲಳಾಗು ಬಾ.

ಅಕ್ಕಮಹಾದೇವಿ : ಛೀ! ದುಷ್ಟ, ಸರಿದು ನಿಂತು ಮಾತನಾಡು. ನನ್ನ ಮೈಮುಟ್ಟ ಬಂದರೆ ಸುಟ್ಟು ಬೂದಿಯಾಗುವೆ, ನಾನು ಸಂನ್ಯಾಸಿ ಇದ್ದೇನೆ. ಇಂಥಾ ಹುಡುಗಾಟಿಕೆಯನ್ನು ಬಿಟ್ಟು ಬಿಡು. ಯಾಕೆ ನಿನಗೆ ಯಾವದೂ ತಿಳಿಯುವುದಿಲ್ಲಾ? ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ಸ್ವಲ್ಪ ತಿಳಿದು ನೋಡು.

ಕೌಶಿಕ : ಏನೇ ನೀನು ಸಂನ್ಯಾಸಿಯಾದರೆ ನನಗೇನು? ನಾನು ಸಂನ್ಯಾಸಿ ಅದೇನಿ ಅಂತಾ ಪೌರುಷ ಹೇಳುತ್ತಿ ಯಾಕೆ? ನನ್ನನ್ನು ಏನು ಮಾಡುತ್ತೀ. ಸುಮ್ಮನೆ ಇಂಥ ಒಯ್ಯಾರವನ್ನು ಬಿಟ್ಟು ಬಿಡು.

ಪದ

ಬಾ ಬೇಗ ಮಹಾದೇವಿ ನೀನೀಗ ಸುರತಕ ಅನುಭಾವಿ

ಸೈರಿಸಲಾರೆನು ಈ ಸಮಯ ಮಾರನ ಬಾಧೆಯು ಕೊಲ್ಲುವುದೆನ್ನ
ತೋರಿ ಎನ್ನೊಳು ಕರುಣ ಪೂರೈಸು ಎನ್ನಯ ಆಸೆಯನು
ಚಾರುಗಾತ್ರಳೇ ನಿನ್ನ ನಂಬಿದೆ ನಾ ಸರಸಿಜಮುಖಿ
ನಿನಗೆ ವರನಾಗಿರುವೆ ನಾ ಗಡ ಹರುಷದಿ ನೀ ಸ್ಮರಣೆಯಕೊಟ್ಟು
ಎನ್ನ ಪರಿಹರಿಸೆನ್ನನು ಹರಷುಗೊಳಿಸು ನೀ ಪ್ರಿಯತಮೆ ॥

(ಮಾತು) : ದೇವಿ. ನನಗೆ ಕಾಮತಾಪವು ಮಿತಿಮೀರಿದೆ. ಜೀವ ಉಳಿಯದಂತೆ ಆಗಿದೆ. ನಿನಗೆ ಶಿರಬಾಗಿ ಬೇಡಿಕೊಳ್ಳುವೆ. ಬಂದು ದೃಢಾಲಿಂಗನವನ್ನು ಕೊಡು. (ಮೈಮುಟ್ಟ ಹೋಗಬೇಕು).

ಅಕ್ಕಮಹಾದೇವಿ : (ಹಿಂದೆ ಸರಿದು) ಥೂ ಮೂರ್ಖಾ! ಸರ್ಪನ ತಲೆಯೊಳಗಿನ ರತ್ನವು ಏನು ಮಾಡಿದರೂ ಸಿಕ್ಕುವುದಿಲ್ಲ. ಇನ್ನೊಮ್ಮೆ ಮೈಮುಟ್ಟ ಬಂದರೆ ಶಾಪವೆಂಬ ಖಡ್ಗದಿಂದ ನಿನ್ನ ಕೈಗಳನ್ನು ಕತ್ತರಿಸಿ ಬಿಟ್ಟೇನು! ತಿಳಿಯಿತೇ?

ನಾನು ಎಂಥವಳೆಂಬುದು. ನನ್ನಂಥ ಶಿವಭಕ್ತಳ ಮೇಲೆ ಕೈ ಮಾಡಿದರೆ ನಿನಗೆ ಏನೋ ಕೆಡುಗಾಲ ಬಂದಿರುತ್ತದೆ. ಸುಳ್ಳೇ ಯಾತಕ್ಕೆ ಕೆಡುವಿ. ಶಿವಶರಣರ ಸೇವೆಮಾಡಿ, ಅವರಿಂದ ಅಷ್ಟಾವರಣದ ತತ್ವವ ತಿಳಿದುಕೊಂಡು. ಶಿವದೀಕ್ಷೆ ಹೊಂದಿ ಶಿವಭಕ್ತನಾಗು. ಶಿವಭಕ್ತಿಯ ಪ್ರಭಾವಕ್ಕೆ ಮುಂದೆ ಈ ಮೂರು ಲೋಕದಲ್ಲಿ ಯಾವುದೂ ಇಲ್ಲಾ. ಆದುದರಿಂದ ವಿಭೂತಿ, ರುದ್ರಾಕ್ಷಿ ಹಾಗೂ ಲಿಂಗಧಾರಣ ಮಾಡಿಕೋ ಯಾಕೆ ಅರಸ ಸುಮ್ಮನಾದಿ?

ಕೌಶಿಕ : ಏನೇ, ಹೇಳುತ್ತೇನೆ ಕೇಳು.

ಪದ

ಇಂಥ ಬೋಧವ ನಾನು ಕೇಳುವೆನೇನೇ
ಎಂಥಾ ಹುಚ್ಚುತನ ಹೇಳಿದೆ ನೀ
ಹರಭಕ್ತನಾಗೆಂದು ಅರಸನ ಮರುಳ ಮಾಡಿ
ಪರಿಪರಿ ಬೋಧವ ನೀ ಎನಗೆ ಮಾಡಿ ‖ ೧ ‖

ಕಲ್ಲ ಕೊರಳಲ್ಲಿ ಕಟ್ಟು ಅನ್ನುವೆ
ಮೆಲ್ಲಮೆಲ್ಲನೆ ವಿಪರೀತ ಹೇಳುವೆ
ಸಲ್ಲದಿದು ರಾಜನಿಗೆ ದೇವಿ ನಾ ಒಲ್ಲೆನು
ನಿನ್ನದೆಲ್ಲ ಅನುಭಾವದ ಪುರಾಣ ‖ ೨ ‖

ಅಕ್ಕಮಹಾದೇವಿ : **ಪದ**

ಕೊರಳೊಳಗೆ ಲಿಂಗವ ಕಟ್ಟಿಸುವೆ
ವರಭಸ್ಮವ ನಿನಗೆ ಹಚ್ಚಿಸುವೆ
ಹರಭಕ್ತನನ್ನಾಗಿ ಮಾಡಿ ಬಿಡುವೆ
ನರಪಾಪಿ ನಿನ್ನ ಸೊಕ್ಕನ್ನು ನಾ ಮುರಿವೆ ‖

ಕೌಶಿಕ : ಏನೇ ನಾನೆಂಥ ಮಹಾರಾಜಾ. ನನ್ನಂಥವನಿಗೆ ಲಿಂಗಧಾರಣ ಮಾಡಿ, ಕೊರಳಲ್ಲಿ ಕಲ್ಲು ಕಟ್ಟಿ, ಮೈತುಂಬ ಬೂದಿಯ ಬಡಿಸಿ. ನನ್ನನ್ನು ಬೂದಿ ಬಡಕನನ್ನಾಗಿ ಮಾಡಬೇಕಂತಾ ಮಾಡಿರುವಿಯೇನು? ಇನ್ನೊಮ್ಮೆ ಲಿಂಗಧಾರಣ ಮಾಡು. ವಿಭೂತಿ ಹಚ್ಚಿಕೊಳ್ಳು. ಹಾಂಗs ಹೀಂಗs ಅಂದರೆ ನಿನ್ನ ನಾಲಿಗೆ ಕಿತ್ತು ಬಿಡುವೆ. ನಾನು ಯಾರೆಂಬುದನ್ನು ತಿಳಿದುಕೊಂಡು ಮಾತನಾಡು. ತಿಳಿಯಿತಿಲ್ಲೋ?

ಅಕ್ಕಮಹಾದೇವಿ : ನೀನು ಯಾರೆಂಬುದು ನನಗೇ ಮೊದಲೇ ತಿಳಿದಿದೆ. ಶಿವಭಕ್ತನಾಗುವಿಯೋ ಇಲ್ಲವೋ ಅಷ್ಟು ಹೇಳು?

ಕೌಶಿಕ : ನಾನು ಆಗುವುದಿಲ್ಲ ನೋಡು.

ಅಕ್ಕಮಹಾದೇವಿ : ನಾನು ನಿನ್ನನ್ನು ಶಿವಭಕ್ತನಾಗಿ ಮಾಡದೇ ಬಿಡುವುದಿಲ್ಲಾ ನೋಡು.

ಕೌಶಿಕ : ನಾನು ಆಗದಿದ್ದರೆ ನೀನೇನು ಮಾಡುತ್ತೀ?

ಅಕ್ಕಮಹಾದೇವಿ : ನೀನೇ ನನ್ನನ್ನು ಶಿವಭಕ್ತನನ್ನಾಗಿ ಮಾಡು ಅಂತಾ ಗಂಟು ಬಿದ್ದಿರಬೇಕು ಹಾಗೆ ಮಾಡುತ್ತೇನೆ ನೋಡು.

ಕೌಶಿಕ : ಏನೇ ನನ್ನ ಪ್ರಾಣಹೋದರೂ ಶಿವಭಕ್ತನಾಗುವುದಿಲ್ಲ ನೋಡು.

ಅಕ್ಕಮಹಾದೇವಿ : ನನ್ನ ಪ್ರಾಣಹೋದರೂ ನಿನ್ನನ್ನು ಶಿವಭಕ್ತನನ್ನಾಗಿ ಮಾಡದೇ ಬಿಡುವುದಿಲ್ಲ.

ಕೌಶಿಕ : ಏನೇ ನಾನು ಶಿವಭಕ್ತನಾದರೆ ಕ್ಷತ್ರಿಯ ಮಹಾರಾಜನೇ ಅಲ್ಲಾ ನೋಡು.

ಅಕ್ಕಮಹಾದೇವಿ : ನಿನ್ನನ್ನು ಶಿವಭಕ್ತನನ್ನಾಗಿ ಮಾಡದಿದ್ದರೆ ನಾನು ಶಿವಭಕ್ತಳೇ ಅಲ್ಲಾ ನೋಡು.

ಕೌಶಿಕ : ದುಷ್ಟೇ ನನ್ನ ಕೂಡ ಚೇಷ್ಟೆ ಮಾಡುತ್ತೀಯಾ ! ನನ್ನ ರಾಜ್ಯದೊಳಗೆ ನಿನ್ನನ್ನು ಇರಗೊಡಲಿಕ್ಕಿಲ್ಲ ಎಚ್ಚರದಿಂದ ಮಾತನಾಡು.

ಅಕ್ಕಮಹಾದೇವಿ : ನಿನ್ನ ರಾಜ್ಯ ಎಲ್ಲಿಯದು? ಅದನೆಲ್ಲ ಬಿಟ್ಟುಕೊಟ್ಟು ಹೋಗುವಂತೆ ಮಾಡುತ್ತೇನೆ ನೋಡು.

ಕೌಶಿಕ : ನಿಜವೇನು?

ಅಕ್ಕಮಹಾದೇವಿ : ನಿಜವಾಗಿಯೂ. ಇಷ್ಟೇ ಅಲ್ಲ. ನಿನ್ನನ್ನು ಉಡುತಡಿ ಪಟ್ಟಣದೊಳಗೆ ಭಿಕ್ಷೆಯ ಬೇಡಲಿಕ್ಕೆ ಹಚ್ಚದಿದ್ದರೆ ನಾನು ಉಟ್ಟಂತ ಸೀರೆಗೆ ನೆರಿಗೆಯೇ ಇಲ್ಲಾ ಅಂತಾ ತಿಳಿದು ಬಿಡು.

ಕೌಶಿಕ : ಛೇ ದುಷ್ಟೆ ! ಸಲಿಗೆ ಕೊಟ್ಟಿರುವೆನೆಂದು ಇಷ್ಟೆಲ್ಲಾ ಮಾತನಾಡುವಿಯೇನು? ಈಗೀಂದೀಗ ನಿನ್ನನ್ನು ಏನು ಮಾಡುತ್ತೇನೆ ನೋಡು. (ಹಿಡಿಯಲು ಹೋಗುವನು)

(ಮಹಾದೇವಿ ಮಾಯವಾಗುವಳು).

ಪದ

ಏನೀಗ ನಾ ಗೈಯುವೆ ಮಾನಾಪಹಾರವಿದೆ
ನಾನೀ ವಿಚಾರದೊಳೇನಿಂದು ಪೇಳ್ವೆ ತರುಣಿ
ಮಹಾದೇವಿಯ ಕೇಳಿದೆನೋ ನಾನಯ್ಯೋ
ಕುಮತಿಯ ನಾನಾಗಿ ಕೊರಗುವೆ ಮನದಿ
ಶೋಕಾಕುಲ ನಾದೆನು ಕಾಯಯ್ಯೋ ॥

(ಮಾತು): [ಸ್ವಗತ] ಓಹೋ! ಮಹಾದೇವಿ ಮಾಯವಾಗಿ ಬಿಟ್ಟಳಲ್ಲ! ಇದೇನು ಚಮತ್ಕಾರವಾಗಿದೆ. ನಾನು ಅವಳ ಕೂಡ ಸಂಭೋಗದ ಸಲುವಾಗಿ ಬೇಕಾದಷ್ಟು ಹೆಣಗಿದರೂ ಆಶ್ಚೈರಕ್ಕೆ ಗಪ್ಪಾಗಿ ಬಿಟ್ಟಳಲ್ಲ. ನಾನು ಅವಳಿಗೆ ಸುಮಾರಾಗುವ ಪ್ರಸಂಗ ಬಂದಿತಲ್ಲಾ. ಇದಕ್ಕೇನು ಮಾಡಲಿ? (ವಿಚಾರ ಮಾಡಿ) ಎಲ್ಲಿಯಾದರೂ ಹೋಗಿದ್ದಾಳು! ಆಕೆಯನ್ನು ಈಗೀಂದೀಗ ಶೋಧ ಮಾಡಿ ಬಿಡುತ್ತೇನೆ. (ಸುತ್ತಮುತ್ತ ಹುಡುಕಬೇಕು. ಅಷ್ಟರಲ್ಲಿ ದೂತಿಯ ಪ್ರವೇಶ)

ದೂತಿ : ಏನ್ರೀ ರಾಜರೇ. ಏನ ಕಳಕೊಂಡೀರಿ. ಬಲು ಹುಡಿಕ್ಯಾಡ್ತೀರಿ?

ಕೌಶಿಕ : ದಾಸಿ ಏನು ಹೇಳಲಿ. ಹೇಳುತ್ತೇನೆ ಕೇಳು.

ಪದ

ಮಾಯವಾಗಿ ಹೋದಳೇ ಮಹಾದೇವಿ
ಕೇಳ ಬಾರೇ ಮಾನಗೇಡಿ ಆದೆನು
ಅವಳ ಸಲುವಾಗಿ ನಿಂತೇನೋ ಮಂಗನಾಗಿ
ದೇವಿ ಇಲ್ಲದೆ ನಾನು ಸೈರಿಸಲಾರೆನು
ಹೋಯಿತೆನ್ನ ಪ್ರಾಣ ರಕ್ಷಿಸಲಿಕ್ಕೆ ಎನ್ನ ತರಲಾರೆ ಅವಳನ್ನ
ನೀ ಶೋಧಿಸಿ ಎಲ್ಲಿರುವಳೋ ಆ ಜಾಣೆ ನಿಂತೆನೋ ಮಂಗನಾಗಿ
ಆ ಮನೋಹರಿಯಳ ಮಂಜುಳ ನುಡಿಗಳ ಶೋಧಿಸಿ
ಮಾಡೋ ದಂಡ ಬಿಡುವುದಿಲ್ಲ ಬಾ ಮಹಾದೇವಿ
ಮಾಯವಾಗಿ ಪೋದೆ ನೀನು ನಿಂತೆನೋ ಮಂಗನಾಗಿ ॥

(ಮಾತು): ಹೇ ಪ್ರಿಯೆ, ಕೋಮಲಾಂಗಿ ಮಹಾದೇವಿ ಮಾಯವಾಗಿ ಎತ್ತ ಪೋದೆ? ನಿನ್ನ ಮುಖ ಕಮಲವನ್ನು ಯಾವಾಗ ನೋಡೆನೇ ಸುಂದರಿ. ನಿನ್ನ ಚಂದ್ರನಂತಾ ಮುಖವನ್ನು ತೋರಿಸು.

(ಅರೆಬರೆ ಮೂರ್ಛೆ ಹೋಗುವನು).

ದೂತಿ : ಯಾಕ್ರೀ ರಾಜರ ಹಿಂಗ್ಯಾಕ್ರೀ?

ಕೌಶಿಕ : (ಸಾವರಿಸಿಕೊಂಡು) ಆ...ಏನಂದಿ?

ದೂತಿ : ಹಿಂಗ್ಯಾಕ್ರೀಽ ನಿಮಗ ಹುಚ್ಚು ಹತ್ತೈತೇನು?

ಕೌಶಿಕ : ಹುಚ್ಚು ಹತ್ತದೇನು ಮಾಡೀತು. ದಾರಿಯಲ್ಲಿ ಬರುವಾಗ ಒಬ್ಬ ಬಡವನಿಗೆ ನಿಧಿ ದೊರೆತು ಆಗೀಂದಾಗ್ಗೆ ಗಪ್ಪಾದರೆ ಹೇಗೆ ಆಗುತ್ತದೆಯೋ ಅದರಂತೆ ಆ ಮಹಾದೇವಿಯು ಹುಚ್ಚು ಹಚ್ಚಿ ಬಿಟ್ಟಿರುವಳು. ಆದ್ದರಿಂದ ಆಕೆಯನ್ನು ನೀನು ಕರೆದುಕೊಂಡು ಬರಬೇಕು ನೋಡು.

ದೂತಿ : ಎಲ್ಲಿ ಹುಡುಕಬೇಕರಿ ಆಕೀನ್ನ?

ಕೌಶಿಕ : ದಾಸಿ, ಆ ಮಹಾದೇವಿ ಎಲ್ಲಿ ಮಾಯವಾದಳು ನೋಡು.

ದೂತಿ : ಹಾಗಾದರೆ ಈ ನೆಲವನ್ನು ಅಗೆದು ನೋಡಲೇನು ಮಾರಾಯಾ?

ಕೌಶಿಕ : ದೂತಿ, ಚೇಷ್ಟೆ ಮಾಡಬೇಡಾ. ನನಗೆ ಸಮಾಧಾನವಿಲ್ಲ. ಆ ಮಹಾದೇವಿಯು ಹೇಗೆ ಮಾಯವಾದಳು ನೋಡು?

ದೂತಿ : ಅಂಥಾಕೀಗೆ ಒಂದೇ ಸಮನೆ ಯಾಕರ ಗಂಟುಬಿದ್ದಿರಿ, ಆಕಿ ನಿಮ್ಮ ಜೀವ ಇಡಲಿಕ್ಕಿಲ್ಲ. ಆಕೆಯ ಉಸಾಬರಿ ಬಿಟ್ಟು ಬಿಡಿರಿ.

ಕೌಶಿಕ : **ಪದ**

ಹ್ಯಾಂಗ ಬಿಡತೀವ್ವ ಅಂಥ ಚೆಲುವಿನ
ದಿವ್ಯ ಪುತ್ಥಳಿಯನ್ನು. ಮಹಾದೇವಿ ಬಿಟ್ಟರೆ
ಎನ್ನಯ ಪ್ರಾಣ ಈಗ ಉಳಿಯದು ಕೇಳು ಇದು ಸತ್ಯ ॥

(ಮಾತು) : ಆ ಮಹಾದೇವಿಯ ಗೊಡವೆ ಬಿಡು ಅಂದ್ರೆ ನನ್ನ ಜೀವ ಉಳಿಯುವುದಿಲ್ಲಾ. ಅವಳ ಸಲುವಾಗಿ ಸತ್ತರೂ ಚಿಂತಿ ಇಲ್ಲಾ, ಹೋಗು ಹುಡಕು.

ದೂತಿ : ಕೇಳಿ ಕೇಳಿ ಸಾಕಾಯಿತು. ಹೋಗುತ್ತೇನೆ ಬಿಡಪ್ಪಾ.

(ಮಹಾದೇವಿಯನ್ನು ಕರೆದುಕೊಂಡು ಬರುವಳು.)

ನೋಡ್ರೀ ಕರೆದುಕೊಂಡು ಬಂದೇನ್ರಿ.

ಕೌಶಿಕ : ಸುಂದರಿ ಮಹಾದೇವಿ. ನನ್ನ ಬಿಟ್ಟು ಎಲ್ಲಿ ಮಾಯವಾಗಿದ್ದೆ. ನೀನು ಒಂದು ಕ್ಷಣ ಇಲ್ಲದಿದ್ದರೆ ನನ್ನ ಜೀವ ಹೋಗುತ್ತದೆ. ಆದ್ದರಿಂದ ಎನಗೊಂದು ಚುಂಬನ ಕೊಟ್ಟು ಕಾಮ ಸುಖಕ್ಕೆ ಅನುಕೂಲಳಾಗು.

(ಮುಟ್ಟಲು ಹೋಗುವನು).

ಅಕ್ಕಮಹಾದೇವಿ : ಛೀ! ಮೂಢಾ! ಹಲ್ಲು ಉಚ್ಚ್ಯಾವು. ನೋಡಿ ಎಚ್ಚರದಿಂದ ಮಾತಾಡು. ದೂರ ಸರಿದು ನಿಲ್ಲು.

ಕೌಶಿಕ : ಛೀ, ಏನೇ ಇಷ್ಟಾದರೂ ನನಗೆ ಹುಡುಗಾಟಿಕೆ ಮಾಡುವುದು ಬಿಡಲೊಲ್ಲೆಯಾ, ಈಗೀಂದೀಗ ನಿನ್ನನ್ನು ಮಾನಗೇಡಿಯನ್ನಾಗಿ ಮಾಡಿಬಿಡುತ್ತೇನೆ ನೋಡು.

ಅಕ್ಕಮಹಾದೇವಿ : ಛೀ ಮೂರ್ಖಾ, ನನ್ನನ್ನು ಮಾನಗೇಡಿ ಮಾಡುವಿಯಾ. ನಿನ್ನನ್ನು ನೋಡು ಏನು ಮಾಡುತ್ತೇನೆ.

ಕೌಶಿಕ : ನನ್ನದೇನು ಮಾಡುವುದು. ಈಗೀಂದೀಗ ನಿನ್ನನ್ನು ನೋಡು ಏನು ಮಾಡುತ್ತೇನೆ.

ಪದ

ನಿನ್ನ ಸೀರೆಯ ಸೆಳೆಯುವೆ ನಾನು
ಮಾನಹಾನಿಯ ಮಾಡುವೆ ನಿನ್ನ
ನಿನ್ನ ದಿಗಂಬರಳಾಗಿ ಮಾಡಿ ಘನಪಾತಕಿ
ನಿನ್ನ ಸೂರಿ ಬಿನ್ನವಿಲ್ಲದೆ ಬಿಡುವೆನು
ಕೂಡಿ ಎನ್ನಾಸೆಯ ಪೂರ್ತಿ ಮಾಡಿ ॥ ೧ ॥

ನರಪಾಲನ ಸತ್ವವ ತೋರಿಸುವೆ
ಜಿಗಿದಾಡಿದಿ ಫಲ ತೀರಿಸುವೆ
ಹರಿಭಕ್ತಿ ನಿನ್ನಲಿ ನೋಡೆ
ಪರಿಪರಿಯಿಂದಲಿ ನಿನ್ನ ಕಾಡ್ವೆ ॥ ೨ ॥

ಮೇದಿನಯೊಳಗೆ ಸನ್ನುತ ದೇವಗಿರಿಯ
ದೇವಗೆ ಉಚಿತ ಕರ್ಮರಾಗುವುದು
ಸತ್ಯ ಬಿನ್ನವಿಲ್ಲದೆ ನಡಿಸುವೆ ಪಂಥ ॥ ೩ ॥

(ರಾಜನು ಮಹಾದೇವಿಯ ಸೀರೆ ಹಿಡಿದು ಸೆಳೆಯುವನು. ಎಷ್ಟು ಸೀರೆ ಸೆಳೆದರೂ ಅದು ಮುಗಿಯುವುದಿಲ್ಲ.)

ಕೌಶಿಕ : (ಕೌತುಕದಿಂದ) ಓಹೋ! ಇದೇನು? ಇವಳ ಸೀರೆಯನ್ನು ಎಷ್ಟು ಸೆಳೆದರೂ, ಒಂದರ ಹಿಂದೆ ಮತ್ತೊಂದು ಹೆಚ್ಚಾಗಲಿಕ್ಕೆ ಹತ್ತಿತಲ್ಲಾ. ಇದು ಏನು ಹುಚ್ಚಾಟವು? ಏನು ಭೂತದಾಟವು! ಏನೋ ಶಿವಭಕ್ತೆಯ ಮಂಗಾಟವೋ? ಇದು ಯಾವುದೋ ನನಗೆ ತಿಳಿಯಲೊಲ್ಲದು. ಇರಲಿ! ಇವಳ ಸೀರೆಯು ಇನ್ನೆಷ್ಟು ಇರುವುದೋ ನೋಡಿ ಬಿಡುತ್ತೇನೆ. (ಎಂದು ಮತ್ತೆ ಸೀರೆಗೆ ಕೈ ಹಾಕುವನು.)

ಅಕ್ಕಮಹಾದೇವಿ : (ಅವಳು ಹಿಂದೆ ಸರಿದು ನಿಂತು) ಥೂ ಪಾಪಿ! ಚಾಂಡಾಲಾ ಇನ್ನೊಮ್ಮೆ ಮುಟ್ಟಿದರೆ ನೋಡು ಪಜೀತಿ.

ಕೌಶಿಕ : ನೋಡುತ್ತೇನೆ ನಿಲ್ಲು. (ಮತ್ತೆ ದುಡುಕುವನು)

ಪದ

ದುರುಳ ನಾರಿಯೇ ನೀ ಕೇಳೇ
ಸಾರಿ ಹೇಳುವೆ ನಾನು ಭರದಿಂದ
ಶೌರ್ಯಗೈಯುತ ನಾನು ಸೀರೆಯನು ಸೆಳೆಯುವೆನು ॥

ಅಕ್ಕಮಹಾದೇವಿ : ಪಾಪಿಷ್ಟಾ ನನ್ನಂಥಾ ಶಿವಭಕ್ತಳ ಮೇಲೆ ಕೈಮಾಡುತ್ತೀಯಲ್ಲಾ. ನನ್ನ ಶಿವಭಕ್ತಿಯಲ್ಲಿ ಏನಾದರೂ ಕೊರತೆ ಇರದಿದ್ದರೆ ಈಗ ನಿನ್ನ ದೇಹದಲ್ಲಿ ಅಗ್ನಿ ಜ್ವಾಲೆಯು ಹೆಚ್ಚಾಗಲಿ. ಮೂರ್ಖಾ ಯಾರ ಆಟ ಏನಾಗುತ್ತದೆ ನೋಡಿಕೋ (ಎಂದು ಶಾಪ ಕೊಡುವಳು).

ಕೌಶಿಕ : ಹಾಯ್! ಹಾಯ್! ಬಸವೇಶ್ವರಾ ಎನ್ನ ಒಡಲಲ್ಲಿ ಉರಿಯು ಹೆಚ್ಚಾಯಿತು, ಏನು ಮಾಡಲಿ ದೇವ (ದುಃಖದಿಂದ ಬೀಳುವನು). ಅಯ್ಯೋ ಎನ್ನ ಒಡಲೊಳಗೆ ದಾವಾಗ್ನಿಯು ಉತ್ಪನ್ನವಾಯಿತು. ಶಿವ ಶಿವಾ ತಾಳಲಾರೆನು. ನಾರಾಯಣಾ, ಮುಕುಂದಾ ನನ್ನನ್ನು ಸಂರಕ್ಷಣೆ ಮಾಡು ದೇವಾ. ತಾಪವು ಮಿತಿಮೀರಿ ಹೋಯಿತು. ಅಯ್ಯೋ ದೇವಾ ಹೇಗೆ ಮಾಡಲಿ! ಹಾಯ್ ದೇವಾ, ಹಾಯ್ ದೇವರೆ ನೀನಾದರೂ ಬಂದು ನನ್ನ ಪ್ರಾಣ ಉಳಿಸು.

ಪದ

ಅಯ್ಯೋ ಸಾಯುವೆ ನಾನೇ ಅನರ್ಥಾ
ಈಗ ತುರ್ತಾ ನಾನು ಕೆಟ್ಟೆ ಮಾಡಿ ಹೀಂಗ ಶರ್ತಾ
ಪಾಲಿಸೋ ಜಗದ ಕರ್ತಾ ಮೃತ್ಯುವಿಗೀಗ
ತುತ್ತಾಗಿರುವೆನು ಉರಿಯು ಕೊಲ್ಲುವದೆನ್ನ

ಅಯ್ಯೋ ಶಿವನೆ ಎನ್ನ ಪೊರಿಯೋ ನೀನೇ
ನಿನ್ನ ನಂಬಿದೆ ನಾ ನಿನ್ನ
ಉರಿವ ಜ್ವಾಲೆಗಳೆಲ್ಲಾ ಹೆಚ್ಚಿ ಮೈಯೊಳಗೆಲ್ಲಾ
ಸುಡುವುದು ನಿಂದೆಲ್ಲಾ ನಿಂತಿತು ಹಂಬಲ
ಜೀವಾ ಬಿಡುವೆನು ಸುಟ್ಟು ಹೋಗುವೆನು
ಅಯ್ಯೋ ಸೈರಿಸಲಾರೆನು ಇನ್ನು ನಾನು ॥

(ಮಾತು): ಹಾಯ್! ಹಾಯ್! ಮುರವರ್ಧನಾ, ಗರುಡಗಮನಾ, ನೀನು ಮುಂಚೆ ಪ್ರಹ್ಲಾದನನ್ನು ಉರಿಯುವ ಬೆಂಕಿಯೊಳಗಿಂದ ಹೇಗೆ ಪಾರು ಮಾಡಿದೆಯೋ ಅದರಂತೆ ನನ್ನನ್ನೂ ಪಾರು ಮಾಡು. ಯಾರಾದರೂ ಬಂದು ನನ್ನನ್ನು ಉಳಿಸಿಕೊಳ್ಳಿರಿ. ಉಳಿಸಿಕೊಳ್ಳಿರಿ

(ಎಂದು ಹೊರಳಾಡುವನು. ಅಷ್ಟರಲ್ಲಿ ದೂತಿ ಬರುವಳು.)

ದೂತಿ : ಓಹೋ ರಾಜರಿಗೆ ಏನೋ ಆಗೈತಿ. ಒದ್ದಾಡಲಿಕ್ಕೆ ಹತ್ತಿದ್ದಾರೆ. ಅಲಲಾ ಆಕಿ ಬೆರಕಿ ಮಾದೇವಿ. ಇವನಿಗೇನೋ ಗಾಲಮೇಲ ಮಾಡಿ ಹೋಗ್ಯಾಳ. (ಕೌಶಿಕನನ್ನು ನೋಡಿ) ಛೇ ನಮ್ಮ ರಾಜಾ ಸತ್ತು ಹೊರಳಾಡುವಂತಾಯಿತು. (ಗಾಳಿ ಬೀಸುವಳು, ಕಿವಿಯೊಳಗೆ ಊದುವಳು. ಚೈತನ್ಯ ಬರುವುದು).

ದೂತಿ : ಏನು ಆತ್ರೀ ನಿಮಗ?

ಕೌಶಿಕ : ದಾಸಿ, ದೂತಿ ನಾನು ಸಾಯುತ್ತೇನೆ. ನೀವೆಲ್ಲ ಇನ್ನು ಮೇಲೆ ನನ್ನ ಆಶೆಯನ್ನು ಬಿಟ್ಟು ಬಿಡಿರಿ. ಅಯ್ಯೋ ನನಗೆ ಸಂಕಟ ಹೆಚ್ಚಾಯಿತು. ದೂತಿ ಹೇಗಾದರೂ ಮಾಡಿ ನನ್ನನ್ನು ಉಳಿಸಿಕೊಳ್ಳಿ.

ದೂತಿ : ಹಾಗಾದರೆ ನಿಮಗೆ ಯಾರು ಏನು ಮಾಡಿದರು ಹೇಳ್ರಿ?

ಕೌಶಿಕ : ದೂತಿ, ಆ ಮಹಾದೇವಿಯು ನನಗೆ ಸಿಟ್ಟಿನಿಂದ ಸುಟ್ಟು ಹೋಗು ಅಂತಾ ಶಾಪ ಕೊಟ್ಟು ಹೋದಳು. ಆದ್ದರಿಂದ ಹೀಗೆ ಆಗಿರುವುದು. ಅಯ್ಯೋ ಶಿವಾ ಶಿವಾ ಈ ಕಷ್ಟದಿಂದ ನನ್ನನ್ನು ಪಾರುಮಾಡು. ಹಾಯ್ ಶಂಕರಾ, ದೇವ, ದಯಾಸಾಗರಾ (ಎಂದು ದುಃಖಮಾಡುತ್ತ ಕೆಳಗೆ ಬೀಳುವನು).

ದೂತಿ : ಏನ್ರೀ, ಆ ಸಂನ್ಯಾಸಿ ಹೆಸರು ತೆಗಿಬ್ಯಾಡಾಂತ ನಾನು ಅಂದೇ ಹೇಳಿದೆ. ಕೇಳದೇ ತಗದು ಈಗ ಒದ್ದಾಡಲಿಕ್ಕೆ ಹತ್ತಿರುವಿರಿ. ನಾನು ಹೇಳಿದ ಮಾತು ಆಕಿ ಕೇಳೂದಿಲ್ಲಾ. ಇನ್ನೇನು ಮಾಡಬೇಕು ನಾನು. ಆ ಮಹಾದೇವಿಯ ಕಾಲಿಗೆ ಬಿದ್ದು ಕ್ಷಮೆ ಬೇಡಿದರೆ ಇಲ್ಲಿಗೆ ಬರುತ್ತಾಳೆ. ಆಕೆಯೇ ನಿನ್ನ ಪಾರು ಮಾಡುತ್ತಾಳೆ.

ಕೌಶಿಕ : **ಪದ**

ಕರಕೊಂಡು ಬಾರವ್ವ ನೀ ಹೋಗಿ
ನಿನ ಪಾದಕ ಎರಗುವೆ ಶಿರಬಾಗಿ
ಹುಚ್ಚುತನದಿಂದ ಕೆಣಕಿ ಕೆಟ್ಟೆನವ್ವಾ
ಮಾದೇವಿ ಸತ್ವ ತಿಳಿಯದಾಯಿತವ್ವಾ
ದೇವಿಯಿಂದಲೇ ಈಗ ಪರಿಹಾರವ್ವಾ ॥

(ಮಾತು): ದಾಸಿ ಏನಾದರೂ ಮಾಡಿ ಆ ಮಹಾದೇವಿಯನ್ನು ಕರೆದುಕೊಂಡು ಬಂದರೆ ಆಕೆಯಿಂದ ನಾನು ಉದ್ಧಾರವಾಗುತ್ತೇನೆ. ಇಲ್ಲದಿದ್ದರೆ ನಾನು ಉಳಿಯುವದಿಲ್ಲಾ. ಅದಕ್ಕೆ ಹೇಗಾದರೂ ಮಾಡಿ ಮಹಾದೇವಿಯನ್ನು ಕರೆದುಕೊಂಡು ಬಾ ಹೋಗು.

ದೂತಿ : ಆಕಿ ಹಂಗs ಬರುವುದಿಲ್ಲಾ, ನಾನು ಹೇಳಿದ ಹಾಗೆ ಕೇಳುತ್ತೇನೆ ಅಂತಾ ವಚನ ಕೊಟ್ಟರೆ ಬರುತ್ತಾಳೆ. ಇಲ್ಲದಿದ್ದರೆ ಬರುವುದಿಲ್ಲಾ. ಇದಕ್ಕೆ ಹ್ಯಾಗೆ ಮಾಡುತ್ತೀರಿ?

ಕೌಶಿಕ : ದೂತಿ, ನಾನು ಆಕೆ ಹೇಳಿದ ಹಾಗೆ ಕೇಳುತ್ತೇನೆ. ಇಂದಿಗೆ ಆ ಮಹಾದೇವಿ ನನ್ನ ತಾಯಿ. ಆಕೆಯೇ ನನ್ನ ಗುರುವು. ಆಕೆ ಹೇಳಿದಂತೆ ನಾನು ಕೇಳುತ್ತೇನೆ. ಅದಕ್ಕೆ ಬೇಗ ಕರೆದುಕೊಂಡು ಬಾ ಹೋಗು.

ದೂತಿ : ಹಾಗಾದರೆ ನಾನು ಹೋಗುತ್ತೇನೆ. (ಹೋಗುವಳು)

ದೃಶ್ಯ

(ದೂತಿ ಮಹಾದೇವಿಯ ಬಳಿಗೆ ಬಂದು)

ದೂತಿ : ಅವ್ವಾ ಮಾದೇವಿಯೇ, ಮಹಾದೇವಿಯೇ ನೀನು ಏನು ಮಾಡುತ್ತಲಿರುವೆ?

ಅಕ್ಕಮಹಾದೇವಿ : (ಮಹಾದೇವಿಯು ಹೊರಗೆ ಬಂದು) ಯಾರವರು? (ನೋಡಿ) ಯಾಕವ್ವಾ ಯಾಕೆ ಬಂದಿ?

ದೂತಿ : ಏನವ್ವಾ ಮಹಾದೇವಿ. ನಮ್ಮ ಅರಸು ಜೀವಾ ಬಿಡಾಕಹತ್ಯೆತಿ. ನಿನ್ನ ಕಾಲು ಬೀಳುತ್ತೇನೆ ನಮ್ಮವ್ವಾ ಜೀವಾ ಉಳಿಸಬೇಕು.

ಅಕ್ಕಮಹಾದೇವಿ : ದೂತಿ ನಿಮ್ಮ ರಾಜನಿಗೆ ಅಳತೆಯಿಲ್ಲದಷ್ಟು ಅಹಂಕಾರ ಬಂದಿದೆ. ಹಾಗೆ ಒದ್ದಾಡಿ ಸತ್ತು ಹೋಗಲಿ.

ದೂತಿ : ಎಲ್ಲಿಯ ಸೊಕ್ಕು. ಆ ಸೊಕ್ಕು ಎಲ್ಲಾ ಹಾಳಾಗಿ ಹೋಗಿ ಬೆಂಕ್ಯಾಗ ಬಿದ್ದು

ವಿಲಿ ವಿಲಿ ಒದ್ದಾಡುತ್ತ, ಬಾಯಿ ಬಿಡಾಕ ಹತ್ತ್ಯಾನ. ಮತ್ತು ಆಕೆ ನನ್ನ ತಾಯಿ, ಆಕೆ ನನ್ನ ಗುರುವು. ಆಕೆ ಹೇಳಿದ ಹಾಗೆ ಕೇಳುತ್ತೇನೆ ಅಂತಾ ಒಂದೇಸವನೆ ಹಲಬಾಕ ಹತ್ತೇತಿ. ಅದಕ ನಿನ್ನ ಕಾಲ ಬೀಳತೇನಿ. ಬಂದು ಅವನ ಜೀವಾ ಉಳಿಸಬಾರದ?

ಅಕ್ಕಮಹಾದೇವಿ : ಹಾಗಾದರೆ ಬರುತ್ತೇನೆ ನಡೆ ಹೋಗೋಣ.

(ಕೌಶಿಕನಿರುವ ಕಡೆಗೆ ಹೋಗುವರು)

ದೃಶ್ಯ

ಕೌಶಿಕ : (ಪದ)

ಪಾಲಿಸು ಮಾದೇವಿ ಬೇಡುವೆ ಕರುಣಿಸು
ಅನುಭಾವಿ ಉರಿಜ್ವಾಲೆಗಳು ಎನ್ನ ಒಡಲೊಳು ವ್ಯಾಪಿಸಿ
ಸುಡುತ್ತಿರುವವು ಈಗ ಧಗ ಧಗಿಸಿ ತಾಳೇನು
ತಾಪವ ಹೋಗುವದೆನ್ನ ಜೀವಾ ಮಾಡುವೆ
ನಿನ್ನ ಸೇವಾ ತೋರು ನೀ ದಯವಾ ಎನಗೆ ॥

ಅಕ್ಕಮಹಾದೇವಿ : **ಪದ**

ಬುದ್ಧಿಯು ಬಂದಿದೆ ಹಮ್ಮವು ಅಡಗಿತೋ
ಛೇ ಪಾಪಿಯೇ ಸರಿಸರಿ ನಾಚಿಕೆಯಿಲ್ಲದವನಾ
ಮುಟ್ಟಬೇಡೆನ್ನನು ಛೀ ದುಷ್ಟಾ ಪರಭ್ರಷ್ಟಾ
ಹೊಂದುವಿರೋ ಈ ಪರಿ ಕಷ್ಟ ಆಗೋ ನೀ ಬಹುನಷ್ಟಾ ॥

ಕೌಶಿಕ : **ಪದ**

ಹಡೆದ ತಾಯಿಯು ನೀನೆ
ಗುರು ಹಿರಿಯಳು ನೀನೇ
ಎನ್ನ ತಪ್ಪನು ಕ್ಷಮಿಸು ಕರುಣಾಭರಣೆ
ನಂಬಿದೆನವ್ವಾ ನಿನ್ನ ಪಾದ ಪದ್ಮವನು
ಕ್ಷಮಿಸು ಈಗ ಎನ್ನ ಸಾಯುವೆ ನಾನು ॥

ಅಕ್ಕಮಹಾದೇವಿ : **ಪದ**

ಪಾಪಿಯೇ ಸರಿ ಸರಿ ತಾಳು ತಾಳೆಲೋ ಉರಿ
ನಿನ್ನ ಸಾಹಸವೆಲ್ಲಿ ಹೋದೀತೋ ನಿನ್ನಾಸೆಯು
ಹಾಳಾದೀತೋ

ಬುದ್ಧಿಯು ಬಂದಿತೆ ಒದ್ದಾಡು ಕಷ್ಟವ ಬಿಡು
ಭಕ್ತಿಯ ಮಹಿಮೆಯ ನೋಡು ಮೂರ್ಖನೆ ಹೊರಳಾಡು ॥

(ಮಾತು): ಛೇ ದುಷ್ಟಾ! ನನ್ನ ಜೀವ ಹೋದರೂ ಚಿಂತೆಯಿಲ್ಲಾ ಎಂದು ಮೈಮೇಲೆ ಏರಿ ಬರುತ್ತಿದ್ದಿಯಲ್ಲಾ. ಈಗ ಹಿಂದಕ್ಕೆ ಯಾಕೆ ಸರಿಯುತ್ತೀ? ಹಾಗೇ ಒದ್ದಾಡುತ್ತ ಸತ್ತುಹೋಗು.

ಕೌಶಿಕ : ಮಾತೋಶ್ರೀ! ಈ ಪಾಪಿಷ್ಟನ ತಪ್ಪನ್ನು ಕ್ಷಮಾ ಮಾಡಿಕೊಂಡು ಈ ಸಂಕಟದಿಂದ ಪಾರುಮಾಡು, (ಕೈ ಮುಗಿಯುವನು) ನಿನಗೆ ಶಿರಬಾಗಿ ಬೇಡಿಕೊಳ್ಳುತ್ತೇನೆ. ನನ್ನ ಹೊಟ್ಟೆಯೊಳಗೆ ಆಗುವ ಸಂಕಟದಿಂದ ಪಾರುಮಾಡು. ನಿವಾರಣಮಾಡು. ಹಾಯ್! ಹಾಯ್! ಸಾಯುವೆನು. ಸಾಯುವೆನು. ತಾಯಿ ಮಹಾದೇವಿ ರಕ್ಷಿಸು ರಕ್ಷಿಸು.

ಅಕ್ಕಮಹಾದೇವಿ : ಥೂ ಪಾಪಿಷ್ಟಾ! ನನ್ನ ಸಮೀಪಕ್ಕೆ ಬರಬೇಡಾ. ಹೀಗೆ ಒದ್ದಾಡುತ್ತ ಇರು. ರಕ್ಷಿಸು, ರಕ್ಷಿಸು ಅಂದರೆ ನಾನು ನಿನ್ನನ್ನು ಹೇಗೆ ರಕ್ಷಿಸಲಿ! ನೀನು ನನಗೆ ಮಂಚದ ಮೇಲೆ ಬಂದು ಕಾಮಸುಖವನ್ನು ಕೊಡು ಎಂದು ಅನ್ನುತ್ತಿದ್ದೆಯಲ್ಲಾ! ಆ ಕಾಮಸುಖದ ಸವಿಯನ್ನು ನೋಡು. ಮತ್ತೆ ಆ ಕಾಮಸುಖದ ಹಣ್ಣು ಎಷ್ಟು ಸಿಹಿಯಿರುವುದು ನೋಡು. ಇನ್ನು ಕಾಮಸುಖದ ಫಲವನ್ನು ಊಟ ಮಾಡು. ಇಷ್ಟಕ್ಕೇ ಸಾಕಾಯಿತು.

ಕೌಶಿಕ : ಮಾತೋಶ್ರೀ, ನಾನು ಅಜ್ಞಾನ ಮದದಿಂದ ಮಾಡಿದ ತಪ್ಪುಗಳನ್ನು ಸಿಟ್ಟಿಗೆ ಹಿಡಿಯಬೇಡಾ. ನಿನಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುವೆನು. ನನ್ನ ತಪ್ಪನ್ನು ಕ್ಷಮಾ ಮಾಡು. ನನ್ನನ್ನು ಈ ಸಂಕಟದಿಂದ ಪಾರು ಮಾಡಿದ ಪುಣ್ಯ ಕಟ್ಟಿಕೊಂಡತಾಗುತ್ತದೆ.

(ನಮಸ್ಕರಿಸುವನು).

ಅಕ್ಕಮಹಾದೇವಿ : ಅರಸನೇ ಬುದ್ಧಿ ಬಂದಿತೇ?

ಕೌಶಿಕ : ಮಾತೋಶ್ರೀ ಇಂಥಾ ಅನ್ಯಾಯವನ್ನು ಎಂದಿಗೂ ಮಾಡುವದಿಲ್ಲಾ? ಮೊದಲು ನನ್ನನ್ನು ಉದ್ಧಾರಮಾಡು.

ಅಕ್ಕಮಹಾದೇವಿ : ಹಾಗಾದರೆ ನಾನು ಹೇಳಿದಂತೆ ಕೇಳಿದರೆ ನಿನ್ನನ್ನು ಉದ್ಧಾರ ಮಾಡುತ್ತೇನೆ. ಇಲ್ಲದ್ದರೆ ಮಾಡುವುದಿಲ್ಲಾ ನೋಡು?

ಕೌಶಿಕ : ಮಾತೋಶ್ರೀ ನೀನು ಹೇಳಿದಂತೆ ಕೇಳುವೆನು.

ಅಕ್ಕಮಹಾದೇವಿ : ನಾನು ಹೇಳಿದ ಹಾಗೆ ಕೇಳುತ್ತೀಯಾ?

ಕೌಶಿಕ : ಕೇಳುತ್ತೇನೆ.

ಅಕ್ಕಮಹಾದೇವಿ : ಹಾಗಾದರೆ ಶಿವದೀಕ್ಷೆಯನ್ನು ತೆಗೆದುಕೊಂಡು ಶಿವ ಭಕ್ತನಾಗು.

ಕೌಶಿಕ : ಯಾಕಾಗಲೊಲ್ಲದು ಆಗುತ್ತೇನೆ. ಮೊದಲು ನನ್ನ ಪ್ರಾಣ ಉಳಿಸು.

ಅಕ್ಕಮಹಾದೇವಿ : ಹಾಗಾದರೆ ನೀನು ಶಿವಭಕ್ತನಾಗುತ್ತೀಯಾ?

ಕೌಶಿಕ : ಶಿವನ ಸಾಕ್ಷಿಯಾಗಿ ಶಿವಭಕ್ತನಾಗುತ್ತೇನೆ.

ಅಕ್ಕಮಹಾದೇವಿ : ನಿನಗೆ ಶಾಂತವಾಗುವ ಹಾಗೆ ಮಾಡುತ್ತೇನೆ ನಿಲ್ಲು. (ಅವನ ಹಣೆಗೆ, ಮೈಗೆ ವಿಭೂತಿ ಧರಿಸುವಳು).

ಕೌಶಿಕ : (ಆನಂದದಿಂದ ಎದ್ದು) ಓಹೋ! ನನ್ನ ತಾಪವೆಲ್ಲಾ ಶಾಂತವಾಯಿತು. ಇದು ಏನು ಚಮತ್ಕಾರವಾಗಿರಬೇಕು. ಶಿವ ಶಿವಾ ಸ್ವಲ್ಪು ಭಸ್ಮ ಹಚ್ಚಿದ ಕೂಡಲೇ ಹೇಳಲಿಕ್ಕೆ ಅಸಾಧ್ಯವಾದ ಸಂಕಟಗಳೆಲ್ಲ ಹೋಗಿ, ಈಗ ನನಗೆ ಅಳತೆಯಿಲ್ಲದಷ್ಟು ಆನಂದವಾಯಿತು. ಇದು ಏನು ಭಸ್ಮದ ಪ್ರಭಾವವೋ ಮತ್ತು ಮಹಾದೇವಿಯ ಸತ್ವದ ಪ್ರಭಾವವೋ! ಏನು ಶಿವಭಕ್ತಿಯ ಪ್ರಭಾವವೋ ಆಹಾ ತಿಳಿಯದು. ಈ ಮಾತೋಶ್ರೀ ಮಹಾದೇವಿಯ ಶಿವಭಕ್ತಿಯನ್ನು ಪಡೆಯುವುದರ ಸಲುವಾಗಿ ಆ ಶಿವಭಕ್ತಿಯ ಪ್ರಭಾವದಿಂದ ಇಷ್ಟೆಲ್ಲಾ ಆಯಿತು. ಧನ್ಯ ಧನ್ಯ. ಶಿವಭಕ್ತಿಯ ಪ್ರಭಾವದ ಮುಂದೆ ಯಾವುದೂ ಇಲ್ಲಾ. ಆದ್ದರಿಂದ ಹಿಂದಕ್ಕೆ ವಶಿಷ್ಠ ಋಷಿಯನ್ನು ಕೊಲ್ಲಬೇಕೆಂದು ಆ ವಿಶ್ವಾಮಿತ್ರನು ಬೇಕಾದಷ್ಟು ಪ್ರಯತ್ನ, ಪ್ರಯೋಗ ಮಾಡಿದರು. ಆ ವಶಿಷ್ಠ ಋಷಿಯು ಒಂದು ತೃಣ ಕಡ್ಡಿಯನ್ನು ಮಂತ್ರಿಸಿ ಮುಂದೆ ಇಟ್ಟುಕೊಂಡಿದ್ದನು. ಆ ತೃಣ ಕಡ್ಡಿಯು ಆ ವಿಶ್ವಾಮಿತ್ರನ ಶಸ್ತ್ರಗಳನ್ನೆಲ್ಲಾ ನುಂಗಿ ಬಿಡುತ್ತಿತ್ತು. ಆ ವಿಶ್ವಾಮಿತ್ರನು ಇದನ್ನೆಲ್ಲಾ ನೋಡಿ ಶಿವಭಕ್ತಿಯ ಪ್ರಭಾವವಿದು. ಇದರ ಮುಂದೆ ಯಾರ ಆಟವೂ ನಡೆಯುವುದಿಲ್ಲ ಎಂದು ತಿಳಿದು, ತಾನು ಶಿವಭಕ್ತಿಯನ್ನು ಪಡೆಯಬೇಕಂತ ತನ್ನ ರಾಜ್ಯವನ್ನೆಲ್ಲಾ ಬಿಟ್ಟು ಕೊಟ್ಟು, ಸಂನ್ಯಾಸಿಯಾಗಿ, ಎಷ್ಟೋ ತಪಸ್ಸು ಮಾಡಿ ಋಷಿ ಎನಿಸಿಕೊಂಡು ಶಿವಭಕ್ತಿಯ ಪ್ರಭಾವದಿಂದ ತಾನು ಮುಂದೆ ಬೇಕಾದಷ್ಟು ಅಗಾಧ ಕೃತ್ಯ ಮಾಡಿದನು. ಅಂದರೆ ತ್ರಿಶಂಕು ಮಹಾರಾಜನಿಗೆ ಒಂದು ಸ್ವರ್ಗಲೋಕವನ್ನು ಸೃಷ್ಟಿ ಮಾಡಿ ಕೊಟ್ಟು ಬಿಟ್ಟಾ, ಅಂದಮೇಲೆ ಶಿವಭಕ್ತಿಯ ಪ್ರಭಾವ ಎಂಥದ್ದು ನೋಡಿರಿ. ನಾನು ಈಗಿಂದೀಗ

ವಿಶ್ವಾಮಿತ್ರನಂತೆ ವೈರಾಗ್ಯ ಹೊಂದಿ, ಶಿವಭಕ್ತಿಯನ್ನು ಪಡೆಯುವೆ. ಮಾತೋಶ್ರೀ ನನ್ನ ಜನ್ಮವನ್ನು ಉದ್ಧಾರ ಮಾಡಿದಿ. ತಾಯಿ ನಾನು ಸಾವಿರಾರು ಜನ್ಮಗಳಲ್ಲಿ ನಿನ್ನ ಸೇವಾ ಮಾಡಿದರೂ ನೀವು ಮಾಡಿದ ಉಪಕಾರಕ್ಕೆ ನನ್ನ ಸೇವೆಯು ಎಳ್ಳಷ್ಟಾದರೂ ಸರಿಯಾಗಲಾರದು. ತಾಯೇ ನಿನ್ನ ಪಾದಕ್ಕೆ ಬಿದ್ದಿರುವೆನು ನನ್ನನ್ನು ಉದ್ಧಾರ ಮಾಡು.

ಅಕ್ಕಮಹಾದೇವಿ : ರಾಜಾ ಇನ್ನು ಮೇಲೆ ಶಿವಭಕ್ತನಾಗು ತಿಳಿಯಿತೆ?

ಕೌಶಿಕ : ತಾಯಿ ಅದೆಲ್ಲ ನನಗೇನು ಗೊತ್ತು? ನೀನೇ ತಿಳಿಸು.

ಅಕ್ಕಮಹಾದೇವಿ : ಹಾಗಾದರೆ ತಗೋ ಈ ಭಸ್ಮಧಾರಣ ಮಾಡು. ಈ ರುದ್ರಾಕ್ಷಿಯನ್ನು ಧರಿಸು (ಕೊಡುವಳು).

ಕೌಶಿಕ : ಅವ್ವಾ ಈ ಬೂದಿಯನ್ನು ಮತ್ತು ಯಾವದೋ ಗಿಡದ ಬೀಜವನ್ನು ಧರಿಸಿದರೇನಾಗುತ್ತದೆ? ಇದೆಲ್ಲ ನನ್ನ ಮನಸ್ಸಿಗೆ ಬರುವುದಿಲ್ಲ ತಾಯೇ.

ಅಕ್ಕಮಹಾದೇವಿ : ಛೇ! ಹುಚ್ಚಾ ಹಾಗೆ ಅನ್ನಬಾರದು. ರುದ್ರಾಕ್ಷಿ ಅಂದರೆ ಸಾಮಾನ್ಯವಲ್ಲಾ. ಈ ವಸ್ತುಗಳು ಅಷ್ಟಾವರಣ ವಸ್ತು ಇರುತ್ತವೆ ನೋಡಿ ಮಾತನಾಡು.

ಕೌಶಿಕ : ದೇವಿ ಅಷ್ಟಾವರಣ ಅಂದರೇನು?

ಅಕ್ಕಮಹಾದೇವಿ : ಹೇಳಲಿಕ್ಕೆ ಬೇಕೇನು?

ಕೌಶಿಕ : ಹೇಳಲಿಕ್ಕೇ ಬೇಕು.

ಅಕ್ಕಮಹಾದೇವಿ : ಹಾಗಾದರೆ ಹೇಳುತ್ತೇನೆ ಕೇಳು.

ಪದ

ನಿನಗೆ ಹೇಳುವೆನು ಭೂಪಾಲ
ನಿನಗೆ ಅಷ್ಟಾವರಣ ಮಾಲಾ
ತಿಳಿಯಿದರ ನಿಜವೆಲ್ಲಾ ॥ ಪಲ್ಲ ॥

ಗುರು ಆದಿಯಿಂದಲೇ ಮಂತ್ರವೇ ಕಡೆಯಲ್ಲಿ
ಈ ಅಷ್ಟಾವರಣದಲ್ಲಿ ಶಿವನು ಮನೆ ಮಾಡಿ
ಅಲ್ಲೆ ಇರುವನು ನಿತ್ಯ ಕೇಳಲಿ ಸತ್ಯ ಮಾತಿದು
ಶಾಸ್ತ್ರ ಸಿದ್ಧಾಂತದಾ ಮಾತಾ ॥ ೧ ॥

ಮಾಟ ವಸ್ತುಗಳ ಸಾಧಿಸು ಬಹಳಾ
ಪಡೆದಂತಾ ಯತಿಗಳಾ ಹೊಲಸು ಸಂಸಾರ
ಆಗಿಹುದು ಪಾಪ ಹೋಗಿಹುದು
ಅವರು ಮುಕ್ತಿಯ ಪಡೆದರು ಮುಂದೆ ॥ ೨ ॥

(ಮಾತು) : ರಾಜಾ, ಅಷ್ಟಾವರಣಗಳು ಯಾವವೆಂದರೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಇವೇ ಅಷ್ಟಾವರಣಗಳು. ವೀರಶೈವನಾದ ಮೇಲೆ ಇವನ್ನು ಪಾಲಿಸಬೇಕು. ಇವನ್ನು ಪಾಲಿಸಿದ ಎಷ್ಟೋ ಶಿವಯೋಗಿಗಳು ಈ ಹೊಲಸು ಸಂಸಾರದ ಮೋಹ ಜಾಲವನ್ನು ಬಿಟ್ಟು ಶಿವಸ್ವರೂಪರಾದರು ಕೇಳಿದೆಯಾ.

ಕೌಶಿಕ : ಅಷ್ಟಾವರಣದ ಮೂಲವು ತಿಳಿಯುವಂತೆ ಸರಳ ರೀತಿಯಿಂದ ಹೇಳು.

ಅಕ್ಕಮಹಾದೇವಿ : ಕೌಶಿಕಾ, ಗುರು ಅಂದರೆ, ಆ ಪರಮಾತ್ಮನೇ. ಮಂತ್ರೋಪದೇಶ ಮಾಡುವುದರ ಸಲುವಾಗಿ ಗುರು ರೂಪಧಾರಣ ಮಾಡಿ ಸುರಲೋಕದೊಳಗೆ ಬರುತ್ತಾನೆ. ಅಂಥಾ ಗುರುಸೇವೆ ಮಾಡಿ ಅವನಿಂದ ಶಿವತತ್ವವನ್ನು ಪಡೆಯಬೇಕು. ಮತ್ತು ಭಕ್ತರಿಂದ ಪೂಜೆಗೊಳ್ಳುವುದರ ಸಲುವಾಗಿ ಪರಮಾತ್ಮನೇ ಲಿಂಗಸ್ವರೂಪನಾಗಿರುತ್ತಾನೆ. ಅಂತಾ ಲಿಂಗವನ್ನು ಕೊರಳೊಳಗೆ ಧಾರಣಮಾಡಿ, ಈ ಹೊತ್ತು ಪೂಜಿಸಲಿಕ್ಕೇಬೇಕು. ಇದೂ ಅಲ್ಲದೇ ಧ್ಯಾನ ಪವಿತ್ರವಾದಂತೆ ಜಂಗಮ ಸ್ವರೂಪನಾದಂತಾ ಸದಾಶಿವನ ಪಾದತೀರ್ಥ ಎನಿಸಿದ್ದೆಲ್ಲ ಪಾದೋದಕ. ಆ ಪಾದೋದಕವನ್ನು ಸ್ವೀಕಾರಮಾಡಿ ಪವಿತ್ರವಾಗಬೇಕು. ಇನ್ನು ಗುರುಲಿಂಗ ಜಂಗಮಕ್ಕೆ ಅನ್ನ ವಸ್ತ್ರಾದಿ ನೈವೇದ್ಯ ಮಾಡಬೇಕು. ಹೀಗೆ ಅನ್ನ ಪ್ರಸಾದ ಮಾಡಿ ಆ ಪ್ರಸಾದವನ್ನು ಭಕ್ತಿಯಿಂದ ಊಟ ಮಾಡಬೇಕು. ಇನ್ನು ವಿಭೂತಿ ಅಂದರೆ, ಆಕಳ ಸಗಣಿಯನ್ನು ಸುಟ್ಟು ಪಾದೋದಕದಿಂದ ಪರಿಶುದ್ಧ ಮಾಡಬೇಕು. ಇದು ಭಸ್ಮವೆನಿಸುವುದು. ಅದು ಐಶ್ವರ್ಯವನ್ನು ಕೊಡುವಂಥದು. ಶಿವನ ಆನಂದಾಶ್ರುವಿನಿಂದ ರುದ್ರಾಕ್ಷಿ ಹುಟ್ಟಿತು. ಅಂಥ ರುದ್ರಾಕ್ಷಿ ಧರಿಸುವವರು ಸಾಕ್ಷಾತ್ ರುದ್ರಸ್ವರೂಪರು ಎಂದು ತಿಳಿಯಬೇಕು. ಇದು ಅಲ್ಲದೇ ಮಂತ್ರ ಅಂದರೆ ಶಿವನ ನಿಜಸ್ವರೂಪ ಇರುವುದಲ್ಲಾ. ಆ ಮಹಾಸ್ವರೂಪವನ್ನು ಗುರುತು ಮಾಡುವಂಥ ಸಾಧನವೇ ಪಂಚಾಕ್ಷರಿಯ ಮಂತ್ರ. ಆ ಮಂತ್ರವನ್ನು ಯಾವತ್ತಾದರೂ ಸಾಧ್ಯ ಮಾಡಬೇಕು. ವರಣ ಎಂದರೆ ಮುಚ್ಚಣ ರೂಪ. ಪ್ರಸಂಗತಾ ಮುಖ್ಯ ವಿಷಯಗಳು

ವಸ್ತುಸ್ಥಿತಿಯನ್ನು ಮುಟ್ಟಿ ಜಗತ್ತಿಗೆಲ್ಲ ಶಿವಮಂತ್ರವನ್ನು ತೋರಿಸುವಂಥಾ ಸಾಧುಗಳು ಅಷ್ಟೂ ಅಷ್ಟಾವರಣಗಳಲ್ಲಿ ವಿಶ್ವಾಸ ಇಟ್ಟವನೇ ಶಿವಭಕ್ತನಾಗುತ್ತಾನೆ. ಇಂಥಾ ಶಿವಭಕ್ತರು ಪರಮಾತ್ಮನನ್ನು ಗೊಂಬೆಯಂತೆ ಕುಣಿಸ್ಯಾಡಿ ಬಿಡುತ್ತಾರೆ. ಕೌಶಿಕ ಅಷ್ಟಾವರಣದ ಪ್ರಭಾವವು ಇನ್ನಾದರೂ ತಿಳಿಯಿತೇ? ಅಷ್ಟಾವರಣದಲ್ಲಿ ವಿಶ್ವಾಸವನ್ನಿಟ್ಟು ಶಿವಭಕ್ತನಾಗು. ಇದಕ್ಕೆ ಏನು ಅಂದಿ?

ಕೌಶಿಕ : ಈ ಅಷ್ಟಾವರಣಗಳ ಪ್ರಭಾವದಿಂದ ಯಾರಾದರೂ ಲೀಲಾ ಮಾಡಿರುವರೇನು?

ಅಕ್ಕಮಹಾದೇವಿ : ಓಹೋ! ಅಷ್ಟಾವರಣದಿಂದ ಮಹಾತ್ಮರು ಬೇಕಾದಷ್ಟು ಲೀಲೆ ಮಾಡಿದ್ದಾರೆ ನೋಡು.

ಕೌಶಿಕ : ಹಾಗಾದರೆ ಯಾರ್ಯಾರು ಏನೇನು ಮಾಡಿರುವರು?

ಅಕ್ಕಮಹಾದೇವಿ : ಯಾರ್ಯಾರು ಏನೇನು ಮಾಡಿರುವರೆಂದರೆ, ಹೇಳುತ್ತೇನೆ ಕೇಳು.

ಪದ

ಗುರುವಿನಿಂದ ಗುರುಭಕ್ತರಿಂದ, ಕಲಿಗಣನಾಥಾ
ಜಂಗಮದಿಂದ ಕೇತಯ್ಯನೆಂಬ ಶರಣ ॥ಪಲ್ಲ॥
ಮೂವರಿವರು ಮಾಡಿದರೋ ಲೀಲೆಯನು
ಜಗದೊಳು ಅದ್ಭುತ ಕರ್ತವ್ಯದಿಂದ ॥ ೧ ॥

ಪಾದೋದಕ ಮಾಡಿ ಮಹಿಮೆಯಿಂದ ತ್ರಿಮೂರ್ತಿಗಳು
ಶಿಶುಗಳಾಗಿ ಹೊರಳಾಡಿದರು ಅನುಸೂಯಾಳ ಬಳಿಯಲ್ಲಿ
ಪ್ರಸಾದದಿಂದ ಚಾರರನ್ನು ವಿಭೂತಿಯಿಂದ
ಭುಜಬಲ ರಾಮನಾ ॥ ೨ ॥

ರುದ್ರಾಕ್ಷಿಯಿಂದ ಸುಪ್ರದೀಪವೆಂಬುದು ಮಂತ್ರದಿಂದ
ಸಾನಂದ ಋಷಿಯವರು ಲೀಲೆ ತೋರಿಸಿ ಜಗದಲಿ ವಿಸ್ತರಿಸಿ
ಅಷ್ಟಾವರಣದ ಮಹಿಮೆ ತಿಳಿಸುವರೇ ಹೊಂದಿ ತಾವು
ಮರ್ಮ ॥ ೩ ॥

(ಮಾತು): ಅರಸಾ, ಅಷ್ಟಾವರಣದ ಮಹಿಮೆಯಿಂದ ಯಾರ್ಯಾರು ಸಿದ್ಧಿಯನ್ನು ಪಡೆದರೆಂದರೆ, ಗುರುಭಕ್ತ ಎಂಬ ಒಬ್ಬ ಯೋಗಿ, ಗುರು ಸೇವೆಯೇ ತನ್ನ ಪ್ರಾಣ ಎಂದು ತಿಳಿದು, ಹಗಲೂ, ಇರುಳೂ ಗುರು ಸೇವಾ

ಮಾಡುತ್ತಿದ್ದನು. ಅವನ ಗುರುಭಕ್ತಿಗೆ, ಆ ಗುರು ಮೆಚ್ಚಿ, ಅವನನ್ನು ಬಹಳ ಪ್ರೀತಿ ಮಾಡುತ್ತಿದ್ದ. ಆಗ ಉಳಿದ ಶಿಷ್ಯರೆಲ್ಲಾ ಆ ಗುರುಭಕ್ತನ ಮೇಲೆ ಹೊಟ್ಟೆಕಿಚ್ಚು ಮಾಡಲಿಕ್ಕೆ ಹತ್ತಿದರು. ಆಗ ಗುರುವು ಶಿಷ್ಯರ ಇಂಗಿತವನ್ನು ತಿಳಿದು, ಆ ಭಕ್ತನ ದೃಢಭಕ್ತಿಯನ್ನು ಅವರಿಗೆ ತೋರಿಸಬೇಕೆಂದು, ಅವನನ್ನು ಕರೆದುಕೊಂಡು, ಎಲೋ ಗುರುಭಕ್ತ ನೀನು ತ್ರಿಶೂಲದ ಮೇಲೆ ಕೂಡು ಅಂತಾ ಹೇಳಿದ. ಹೇಳಿದ ಕೂಡಲೇ ಆ ಗುರುಭಕ್ತನು ಗುರು ವಾಕ್ಯದಂತೆ ಅಲ್ಲಿ ಕಟ್ಟಿದಂಥ ತ್ರಿಶೂಲದ ಮೇಲೆ ಕುಳಿತುಕೊಂಡನು. ಕೂಡಲೇ ತ್ರಿಶೂಲವು ಆತನ ಮೈಯೊಳಗೆ ನಟ್ಟು ತಲೆಯೊಳಗೆ ಸೀದಾ ಪಾರಾಗಿ ಹೋಯಿತು. ಅಷ್ಟಾದರೂ ಗುರುಕರುಣನಾದ ಅವನಿಗೇನೂ ಆಗಲಿಲ್ಲಾ. ಆಗ ಗುರುವು ಎಲೋ ಗುರುಭಕ್ತಾ ನೀನು ಇನ್ನು ಆ ತ್ರಿಶೂಲದಿಂದ ಇಳಿದು ಬಾ ಅಂದಕೂಡಲೇ ಆ ಗುರುಭಕ್ತನು ಆಗೀಂದಾಗಲೇ ತ್ರಿಶೂಲದಿಂದಾ ಜಿಗಿದು ಪಾರಾಗಿ ಬಿಟ್ಟನು. ಆಗ ಅವನ ಮೈಯೊಳಗೆ ಎಳ್ಳಷ್ಟೂ ಸಹ ತ್ರಾಸವಿಲ್ಲದೇ ವಜ್ರಶರೀರವಾಯಿತು. ಅದನ್ನೆಲ್ಲಾ ಉಳಿದ ಶಿಷ್ಯರು ನೋಡಿ ನಾಚಿ ಸುಮ್ಮನಾದರು. ಕೇಳಿದಿಲ್ಲೋ ಅರಸು, ಗುರುಪ್ರಭಾವವೆಂದರೆ ಏನೆಂದು?

ಕೌಶಿಕ : ಹೌದು ಹೌದು ಮುಂದೇನಾಯಿತು?

ಅಕ್ಕಮಹಾದೇವಿ : ಕಲಿಗಣನಾಥನೆಂಬವನೊಬ್ಬ ಶರಣನು ಲಿಂಗವಿಲ್ಲದವರಿಗೆ, ಲಿಂಗ ಕಟ್ಟುತ್ತೇನೆಂದು ಅನ್ಯೋನ್ಯವಾದ ವ್ರತವನ್ನು ಹಿಡಿದಿದ್ದರು. ಆಗ ಸಾಕ್ಷಾತ್ ಶಿವನು ಲಿಂಗಧಾರಣ ಮಾಡದೇ ಅವರ ಹತ್ತಿರ ಬಂದನು. ಆಗ ಕಲಿಗಣನಾಥನು ಪರಮಾತ್ಮನಿಗೆ ಲಿಂಗಧಾರಣ ಮಾಡಿ ಅದರಿಂದ ಸಾಯುಜ್ಯ ಪದವಿಯನ್ನು ಪಡೆದನು. ಮತ್ತು ಯತೀಶ್ವರ ಕೇತಯ್ಯನೆಂಬ ಶರಣನು ತನ್ನ ಮನೆಯೊಳಗೆ ದನಗಳ ಕೊರಳೊಳಗೆ ಸಹಿತ ಲಿಂಗವನ್ನು ಕಟ್ಟಿದನು. ಒಂದು ದಿವಸ ತುಡುಗರು ಬಂದು ಆ ದನಗಳನೆಲ್ಲಾ ಬಿಟ್ಟುಕೊಂಡು ಹೋದರು. ಆ ದನದ ಕೊರಳೊಳಗಿನ ಲಿಂಗಗಳು ಯತೀಶ್ವರ ಕೇತಯ್ಯನ ಮನೆಯೊಳಗೆ ಬಂದು ಬಿದ್ದವು. ಮುಂದೆ ಆ ದನಗಳನ್ನು ತುಡುಗರು ಬೆನ್ನುಹತ್ತಿ ಹೋದರು, ಅನಂತರ ಏಳು ದಿವಸದ ತನಕ ತಮ್ಮ ಕೊರಳೊಳಗೆ ಲಿಂಗವಿಲ್ಲದ ಮೂಲಕ ಮೇವು ತಿನ್ನಲಿಲ್ಲ. ನೀರು ಕುಡಿಯಲಿಲ್ಲಾ. ಆಗ ಅವು ನಿತ್ರಾಣ ಆಗಿ ಸಾಯುವ ಹಾಗೆ ಆದವು. ಇಷ್ಟಾದ ಕೂಡಲೇ ಆ ತುಡುಗರು ಅವುಗಳನ್ನೆಲ್ಲ ಬಿಟ್ಟು ಬಿಟ್ಟರು. ಅವು ಬಿಟ್ಟ ಕೂಡಲೇ ಆ ಯತೀಶ್ವರ ಕೇತಯ್ಯನ ಮನೆಗೆ

ಬಂದು ತಮ್ಮ ತಮ್ಮ ಜಾಗೆಗಳಿಗೆ ಬಂದು ನಿಂತು ಬಿಟ್ಟವು. ಅಷ್ಟಾದರೂ ದನಗಳು ಮೇವು ತಿನ್ನಲಿಲ್ಲ. ನೀರು ಕುಡಿಯಲಿಲ್ಲಾ.

ಕೌಶಿಕ : ಹೌದೇ?

ಅಕ್ಕಮಹಾದೇವಿ : ಶರಣನು ಬಂದು ಅವುಗಳ ಕೊರಳೊಳಗೆ ಲಿಂಗ ಕಟ್ಟಿದ ಕೂಡಲೇ ಮೇವು ತಿಂದು, ನೀರು ಕುಡಿದವು. ನೋಡು ಇಂಥಾ ದನಗಳಾದರೂ ಲಿಂಗ ಅಂದರೆ ತಮ್ಮ ಜೀವಕ್ಕಿಂತಲೂ ಹೆಚ್ಚೆಂದು ತಿಳಿದು ಲಿಂಗದ ಮೇಲೆ ಭಕ್ತಿಯನ್ನಿಟ್ಟುಕೊಂಡು ಆ ಲಿಂಗ ಸ್ಮರಣೆಯನ್ನು ಮಾಡುತ್ತಿದ್ದವು.

ಕೌಶಿಕ : ಲಿಂಗದ ಮಹಿಮೆ ಇಷ್ಟು ದೊಡ್ಡದೆ?

ಅಕ್ಕಮಹಾದೇವಿ : ಇನ್ನು ಜಂಗಮ ಭಕ್ತನು ಯಾರೆಂದರೆ, ಜೀವಾ ಕಳಕೊಳ್ಳುತ್ತಿದ್ದ ಭೋಗಯ್ಯ ಒಂದು ದಿವಸ, ಪರಮಾತ್ಮನು ಅವನ ಜಂಗಮ ನಿಷ್ಠತೆಯನ್ನು ಪರೀಕ್ಷೆ ಮಾಡಬೇಕೆಂದು ಹೊಲೆಯರವನ ವೇಷ ಹಾಕಿಕೊಂಡು ಆ ಕೆಂಭಾವಿ ಭೋಗಯ್ಯನ ಮನೆಗೆ ಹೋದಾ. ಆಗ ಭೋಗಯ್ಯನು ತನ್ನ ಮನೆಗೆ ಜಂಗಮ ಬಂದನೆಂದು ತಿಳಿದು ಭಕ್ತಿಯಿಂದ ಜಂಗಮನನ್ನು ಪೂಜೆಮಾಡಿ ಊಟಕ್ಕೆ ಬಡಿಸಿ, ತಾನೂ ಹೊಲೆಯರವನ ಸಂಗಡ ಊಟ ಮಾಡುತ್ತಿದ್ದ. ಆಗ ಊರವರೆಲ್ಲ ನೋಡಿ ಆ ಹೊಲೆಯರವನ ಸಂಗಡ ಊಟಮಾಡಿ ಭೋಗಯ್ಯನು ಕುಲಭ್ರಷ್ಟನಾದನೆಂದು ಅವನ ಮೇಲೆ ಸಿಟ್ಟಿಗೆದ್ದರು.

ಕೌಶಿಕ : ಇದು ಸರಿಯೇ?

ಅಕ್ಕಮಹಾದೇವಿ : ಆಗ ಕೆಂಭಾವಿ ಭೋಗಯ್ಯನು ನಾನು ಈ ಊರೊಳಗೆ ಇರುವುದಿಲ್ಲೆಂದು ಊರನ್ನು ಬಿಟ್ಟು ಹೋಗಲಿಕ್ಕೆ ಹತ್ತಿದನು. ಆಗ ಊರೊಳಗಿನ ಲಿಂಗಗಳೆಲ್ಲ ಅವನ ಬೆನ್ನು ಹತ್ತಿ ಹೋಗಲಿಕ್ಕೆ ಹತ್ತಿದವು. ಆಗ ಊರೊಳಗೆ ಕೆಟ್ಟ ಅಪಶಕುನಗಳು ಆಗಲಿಕ್ಕೆ ಹತ್ತಿದವು. ಆಗ ಊರ ಜನರು ಅದನ್ನೆಲ್ಲ ನೋಡಿ ಅಂಜಿ, ಗಾಬರಿಯಾಗಿ ಓಡಿ ಬಂದು ಕೆಂಭಾವಿ ಭೋಗಯ್ಯನ ಪಾದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ಅವನನ್ನು ಊರಿಗೆ ಕರೆದುಕೊಂಡು ಬಂದು ಎಲ್ಲರೂ ಅವನಿಗೆ ಭಕ್ತರಾದರು. ಕೇಳಿದೆಯಿಲ್ಲೋ ಜಂಗಮಕ್ಕೆ ಕುಂದಿಲ್ಲ,

ಕೌಶಿಕ : ನಿಜಕ್ಕೂ ಇದನ್ನೆಲ್ಲಾ ಕೇಳಿ ಆನಂದವಾಯಿತು.

ಅಕ್ಕಮಹಾದೇವಿ : ಇನ್ನು ಪಾದೋದಕವೆಂಬ ಜಂಗಮರ ಪಾದತೀರ್ಥದಿಂದ ಅನುಸೂಯಾ ದೇವಿಯು ಕಪಟ ವೇಷ ಧರಿಸಿಕೊಂಡು ಬಂದಂಥ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕೂಸುಗಳನ್ನಾಗಿ ಮಾಡಿ, ತನ್ನ ಮಕ್ಕಳನ್ನು ಮಾಡಿಕೊಂಡು ಬಿಟ್ಟಳು. ರಾಜಾ, ಈ ಪಾದೋದಕ ಮಹಿಮೆಯು ಎಂಥಾದ್ದು ನೋಡು. ಆ ಅಷ್ಟಾವರಣದ ಸರಿಸಮಾನ ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂಬುದನ್ನು ತಿಳಿ.

ಕೌಶಿಕ : ತಾಯಿ ಇದೆಲ್ಲ ನನಗೇನು ಗೊತ್ತು? ಇಂಥ ಪವಿತ್ರವಾದಂಥ ಅಷ್ಟಾವರಣದ ಪ್ರಭಾವವನ್ನು ತಿಳಿಯಲು ನಾನು ಹಿಂದಿನ ಜನ್ಮಗಳಲ್ಲಿ ಎಷ್ಟೊ ಪುಣ್ಯಮಾಡಿ ಬಂದಿಲ್ಲಾ. ಈಗ ಗುರುಸ್ವರೂಪಳಾದ ನಿನ್ನಿಂದಾ ಮೊದಲು ನಾಲ್ಕು ಅಂದರೆ ಗುರು, ಲಿಂಗ, ಜಂಗಮ, ಪಾದೋದಕ ಅನ್ನುವಂಥದರ ಪ್ರಭಾವ ಗೊತ್ತಾಯಿತು. ಇನ್ನು ಪ್ರಸಾದ. ವಿಭೂತಿ. ರುದ್ರಾಕ್ಷಿ, ಮಂತ್ರ ಅನ್ನುವುಗಳ ನಾಲ್ಕರ ಮಹಿಮೆಯನ್ನು ಹೇಳಿ ನನ್ನ ಅಜ್ಞಾನವನ್ನೆಲ್ಲಾ ನಾಶಮಾಡಿ ನನ್ನನ್ನು ಉದ್ಧಾರ ಮಾಡಬೆಕು. ಮಹಾತಾಯೇ.

ಅಕ್ಕಮಹಾದೇವಿ : ಅಪ್ಪಾ ರಾಜಾ, ನಿನ್ನನ್ನು ಉದ್ಧಾರ ಮಾಡುವುದರ ಸಲುವಾಗಿಯೇ ಈ ಅಷ್ಟಾವರಣದ ಪ್ರಭಾವವನ್ನು ಹೇಳುತ್ತಿದ್ದೇನೆ. ಇನ್ನು ಪ್ರಸಾದದ ಮಹಿಮೆಯನ್ನು ಹೇಳುತ್ತೇನೆ. ಚಿತ್ತವಿಟ್ಟು ಕೇಳು.

ಕೌಶಿಕ : ಹೇಳಿರಿ.

ಅಕ್ಕಮಹಾದೇವಿ : ಅದೇನೆಂದರೆ, ವಾಚರನೆಂಬವನೊಬ್ಬ ಶರಣನು ಶಿವಸ್ವರೂಪನಾದಂಥವನು. ಆ ಶರಣನು ಊಟಮಾಡಿ ಚೆಲ್ಲಿದ ಮುಸುರೆಯನ್ನು ತೆಗೆದುಕೊಂಡು ಬಂದು, ಬಂಡಿಯ ಮೇಲೆ ಹೇರಿಕೊಂಡು ಬಂದು. ಆ ಪ್ರಸಾದದಿಂದ ತಾನು ತನ್ನ ಮನಿಯವರೆಲ್ಲರೂ ಸೇರಿ ಸಂರಕ್ಷಣೆ ಆಗುತ್ತಿದ್ದರು. ಆಗ ಆ ಊರ ಜನರು ಇವನು ಬಂಡಿಯ ಮೇಲೆ ಮುಸುರೆ ಹೇರಿಕೊಂಡು ಬಂದು ಈ ಊರನ್ನು ಅಶುದ್ಧ ಮಾಡುವನೆಂದು ತಿಳಿದು ಅವನನ್ನು ಬರಗೊಡಬಾರದೆಂದು ಬಂದು ಮಾಡಿದರು. ಆಗ ಆ ವಾಚರನು ಬಂಡಿಯ ಮೇಲೆ ಹೇರಿದ ಪ್ರಸಾದವನ್ನೆಲ್ಲಾ ಊರೊಳಗೆ ಚೆಲ್ಲಲಿಕ್ಕೆ ಹತ್ತಿದನು. ಆಗ ಪ್ರಸಾದವು ಬೆಂಕಿಯಾಗಿ ಊರನ್ನು ಸುಡಲಿಕ್ಕೆ ಹತ್ತಿತು. ಆಗ ಆ ಊರ ಜನರು ಅಂಜಿ ಓಡಿಬಂದು, ನಮ್ಮದು ತಪ್ಪಾಯಿತು. ಈ ಬೆಂಕಿಯನ್ನು ಶಾಂತಮಾಡಿ ಕಾಪಾಡಬೇಕೆಂದು ಅವನ ಚರಣಪಾದಗಳಿಗೆ ಎರಗಿದರು. ಆ ಶರಣನು

ಪ್ರಸಾದ ತರಲಿಕ್ಕೆ ಹತ್ತಿದನು. ಅರಸನೇ ಕೇಳು ಇದನ್ನು. ಇದೇ ಈ ಪ್ರಸಾದದ ಮಹಿಮೆ. ಅಂಥ ಪ್ರಸಾದಕ್ಕೆ ಮುಸುರೆ ಅಂದಕೂಡಲೇ ಬೆಂಕಿಯಾಗಿ ಬಿಟ್ಟಿತು. ಅದಕ್ಕೆ ಪ್ರಸಾದವನ್ನು ಯಾವಾಗಲೂ ಸದ್ಭಾವದಿಂದ ಸ್ವೀಕಾರ ಮಾಡಬೇಕೆಂದು ತಿಳಿದುಕೋ.

ಕೌಶಿಕ : ದೇವಿ ಪ್ರಸಾದದ ಲೀಲಾ ಕೇಳಿದೆನು. ಇನ್ನು ವಿಭೂತಿಯ ಲೀಲೆಯನ್ನು ವಿವರವಾಗಿ ಹೇಳಬೇಕು.

ಅಕ್ಕಮಹಾದೇವಿ : ವಿಭೂತಿಯ ಲೀಲೆ ಏನೆಂದರೆ, ಪೂರ್ವ ಕಾಲದಲ್ಲಿ ವಂಗದೇಶದಲ್ಲಿ ಭುಜಬಲ ಎಂಬ ಒಬ್ಬ ರಾಜನಿದ್ದ. ಅವನು ಒಂದು ಸಂಕ್ರಾಂತಿ ನಡೆದ ಕಾಲಕ್ಕೆ ಬ್ರಾಹ್ಮಣರಿಗೆ ದಾನಕೊಡಲಿಕ್ಕೆ ಹತ್ತಿದನು. ಆಗ ಅಲ್ಲಿಗೆ ವಿದರ್ಭ ದೇಶದ ಕುಶಾಲ ಎನ್ನುವ ಬ್ರಾಹ್ಮಣನು ಅಲ್ಲಿಗೆ ಬಂದನು. ಆಗ ಅರಸನು ಎಲ್ಲಾ ಬ್ರಾಹ್ಮಣರಿಗೆ ದಾನ ಕೊಡುತ್ತ ಕುಶಾಲ ಎನ್ನುವಂಥ ಬ್ರಾಹ್ಮಣನಿಗೂ ದಾನ ಕೊಡಲಿಕ್ಕೆ ಬಂದನು. ಆಗ ಆ ಬ್ರಾಹ್ಮಣನು ಏನೆಂದನೆಂದರೆ, ನಿನ್ನ ಹಣೆಯ ಮೇಲೆ ವಿಭೂತಿಯಿಲ್ಲ ಅದಕ್ಕೆ ಹಣೆಯ ಮೇಲೆ ವಿಭೂತಿಯನ್ನು ಇಟ್ಟುಕೊಂಡು ದಾನವನ್ನು ಕೊಡು ಅಂದನು. ಆಗ ಅರಸನು ಅವನ ಮಾತಿಗೆ ತಿರಸ್ಕಾರ ಮಾಡಿ ಹಣೆಗೆ ವಿಭೂತಿಯನ್ನು ಹಚ್ಚಿಕೊಳ್ಳಲಿಲ್ಲಾ. ಆಗ ಬ್ರಾಹ್ಮಣನು ಸಿಟ್ಟಿಗೆದ್ದು, "ನಿನ್ನ ದಾನ ನಮಗೆ ಬೇಕಾಗಿಲ್ಲ" ಎಂದು ಹೋಗ ಹತ್ತಿದನು. ಆಗ ಅರಸನ ಹೆಂಡತಿಯು, ಹಾಗೇ ಹೋದರೆ ನಮಗೆ ಪಾಪವಾಗುತ್ತದೆ ಎಂದು ತಿಳಿದು ಸುಳ್ಳೇ ಒಂದು ಶೀತಳು. ಆ ಬ್ರಾಹ್ಮಣನು ಸುಮ್ಮನೆ ಹೋದ. ಆ ವಿಭೂತಿಯನ್ನು ತಿರಸ್ಕಾರ ಮಾಡಿದ ಡೊಲದಿಂದ ಭುಜಬಲ ರಾಜನ ಸೈನ್ಯವೆಲ್ಲ ರೋಗ ಬಂದು ಸತ್ತುಹೋಯಿತು. ಆಗ ವೈರಿಗಳು ಬಂದು, ಆ ಸೈನ್ಯವನ್ನು ಹೊರದಬ್ಬಿ ಅರಸನ ರಾಜ್ಯವನ್ನು ತೆಗೆದುಕೊಂಡರು. ಆಗ ಭುಜಬಲನು ಓಡಿಹೋಗಿ ಕಾಡಪಳುವನ್ನು ಸಾರಿ, ಹೊಟ್ಟೆಯ ಸಲುವಾಗಿ ತುಡುಗು ಮಾಡಲಿಕ್ಕೆ ಹತ್ತಿದನು. ಆಗ ತುಡುಗು ಮಾಡುವಾಗ ಒಬ್ಬನ ಕೈಯಲ್ಲಿ ಸಿಕ್ಕನು. ಆಗ ಅವರ ಕೈಕಾಲುಗಳನ್ನು ಕಡಿದರು. ಅವನಿಗೆ ಗತಿಯಿಲ್ಲದೆ ಊರೊಳಗೆ ಭಿಕ್ಷೆ ಬೇಡಲಿಕ್ಕೆ ಹತ್ತಿದನು. ಆಗ ಅವನ ಹೆಂಡತಿಯು ಸುಳ್ಳೇ ಏನೋ ನುಡಿದಿದ್ದಳು. ಅದರ ಸಲುವಾಗಿ ಆಕೆಯ ಮೂಗಿಗೆ ರೋಗ ಹತ್ತಿ ಮೂಗು ಕತ್ತರಿಸಿ ಹೋಯಿತು. ಈ ಪ್ರಕಾರ ಗಂಡ-ಹೆಂಡರು ಅಳತೆಗಟ್ಟಿ ಕಷ್ಟವನ್ನು ಅನುಭೋಗಿಸ ಹತ್ತಿದರು. ಮುಂದೆ ಅವರು ಭಿಕ್ಷೆ ಬೇಡುತ್ತ ವಿದರ್ಭ ದೇಶಕ್ಕೆ ಹೋದರು. ಸಶೀಲ ಬ್ರಾಹ್ಮಣನು ಅವರ ಗೋಳಾಟವನ್ನು

ನೋಡಿ, ಅವರನ್ನೆಲ್ಲ ತಿಳಿದು ಇವರು ವಿಭೂತಿಯನ್ನು ಧಿಃಕ್ಕಾರ ಮಾಡಿದ ಸಲುವಾಗಿಯೇ ಹೀಗೆ ಆಗಿದ್ದಾರೆಂದು ತಿಳಿದು, ಅಲ್ಲಿಯೇ ಅವರಿಗೆ ವಿಭೂತಿಧಾರಣ ಮಾಡಿದ ಕೂಡಲೇ ಅವರ ಕೈಕಾಲು, ಕಿವಿ, ಮೂಗು ಆಗಿಂದಾಗ ಚಿಗಿತು ಮೊದಲಿನಂತೆ ಬಂದವು. ಇಷ್ಟೇ ಅಲ್ಲದೆ, ಅವರಿಗೆ ಸಂಪೂರ್ಣ ಜ್ಞಾನವೂ ಬಂತು. ಮುಂದೆ ಅದೇ ವಿಭೂತಿಯನ್ನು ಪ್ರಸಾದವೆಂದು ತೆಗೆದುಕೊಂಡು ತಮ್ಮ ರಾಜ್ಯಕ್ಕೆ ಹೋಗಿ ವೈರಿಗಳನ್ನು ಕೊಂದು ತಮ್ಮ ರಾಜ್ಯವನ್ನು ತಿರುಗಿ ಪಡೆದುಕೊಂಡು, ರಾಜ್ಯವಾಳಿ ಎಷ್ಟೋ ದಿವಸ ಕೈಲಾಸಕ್ಕೆ ಹೋದನು. ಕೌಶಿಕಾ ನೋಡು, ವಿಭೂತಿಯನ್ನು ಧಿಕ್ಕಾರ ಮಾಡಿದ್ದರಿಂದ ಅವನಿಗೆ ಹೀಗಾಯಿತು. ಆದ್ದರಿಂದ ಯಾವತ್ತೂ ಎಲ್ಲರೂ ವಿಭೂತಿಯನ್ನು ಧರಿಸಬೇಕು. ಇದರಿಂದ ಭೋಗ, ಮೋಕ್ಷ ಎರಡೂ ಸಾಧ್ಯವಾಗುತ್ತದೆಂದು ತಿಳಿದು ಬಿಡು.

ಕೌಶಿಕ : ದೇವಿಯವರೇ, ರುದ್ರಾಕ್ಷಿಯ ಮಹಿಮೆಯನ್ನು ಹೇಳಿ ನನ್ನನ್ನು ಈ ಭವದಿಂದ ಉದ್ಧಾರ ಮಾಡಿರಿ.

ಅಕ್ಕಮಹಾದೇವಿ : ಇನ್ನು ರುದ್ರಾಕ್ಷಿ ಮಹಿಮೆ ಏನೆಂದರೆ, ಸಮುದ್ರ ತೀರದಲ್ಲಿ ಯಾಚಕ ಎನ್ನುವಂಥ ಪುರದೊಳಗೆ ಸುಪ್ರಸಿದ್ಧ ಎನ್ನುವಂಥ ಒಬ್ಬ ಬ್ರಾಹ್ಮಣನು ತಾನು ರುದ್ರಾಕ್ಷಿಯನ್ನು ಧರಿಸಿ, ತನ್ನ ಮನೆಯೊಳಗಿನ ಸಮಸ್ತರಿಗೆ, ಬೆಕ್ಕಿನ ಕೊರಳೊಳಗೆ ಸಹಿತ ರುದ್ರಾಕ್ಷಿ ಧಾರಣ ಮಾಡಿ, ರುದ್ರಾಕ್ಷಿ ಧಾರಣ ಮಾಡಿದವರಿಗೆ ಮಾತ್ರ ದಾನ ಕೊಡುತ್ತೇನೆಂದು ವ್ರತ ಹಿಡಿದಿದ್ದನು. ಆಗ ಅವರ ಸುದ್ದಿಯನ್ನು ಕೇಳಿದ ಯೋಗ ಎನ್ನುವಂಥ ಋಷಿಯು ರುದ್ರಾಕ್ಷಿಯನ್ನು ಧರಿಸದೇ ಅವನ ಮನೆಗೆ ಭಿಕ್ಷೆ ಬೇಡಲು ಹೋದನು. ಆಗ ಸಾಂಪ್ರದಾಯಿಕ ಬ್ರಾಹ್ಮಣನು ಅವನ ಲಿಂಗದಲ್ಲಿ ರುದ್ರಾಕ್ಷಿಯು ಇಲ್ಲದಿರುವುದನ್ನು ನೋಡಿ ನೀನು ರುದ್ರಾಕ್ಷಿಯನ್ನು ಧರಿಸಿಲ್ಲಾ. ನೀನು ನನ್ನ ಬಾಗಿಲ ಮುಂದೆ ನಿಲ್ಲಬೇಡಾ. ನಿನಗೆ ಭಿಕ್ಷೆ ನೀಡುವುದಿಲ್ಲವೆಂದು ಬೆದರಿಸಿದನು. ಆಗ ಅವನ ಮಕ್ಕಳು ಬಡಿಗೆ ತೆಗೆದುಕೊಂಡು ಅವನನ್ನು ನೂಕಿ ಹೊರಗೆ ಹಾಕಿದರು. ಆಗ ಅವನು ಸಿಟ್ಟಿಗೆದ್ದು ಹೋಗಿ, ಆ ಊರ ಅರಸನಾದ ಸಾಲಂಕ ಎನ್ನುವ ರಾಜನ ಬಳಿಗೆ ಹೋದನು. ಆಗ ಅರಸನು ಬ್ರಾಹ್ಮಣನನ್ನು ಕರಿಸಿ, ಈ ಋಷಿಯನ್ನು ಯಾಕೆ ಮಾನಗೇಡು ಮಾಡಿದಿ ಅಂತಾ ಕೇಳಿದನು. ಆಗ ಕೇಳಿದ ಕೂಡಲೇ, ರುದ್ರಾಕ್ಷಿ ಇಲ್ಲದಿರುವವರಿಗೆ ನಾನು ದಾನವನ್ನು ಕೊಡುವುದಿಲ್ಲಾ. ರುದ್ರಾಕ್ಷಿ ಇಲ್ಲದಿರುವವರನ್ನು ನಮ್ಮ ಮನೆಯೊಳಗೆ ಹೋಗಗೊಡುವುದಿಲ್ಲೆಂದು

ನನ್ನ ವಚನವಿದೆ. ಹೀಗೆ ನಮ್ಮ ನೇಮವಿದೆ. ಅದರಂತೆ ಈ ಋಷಿಯು ರುದ್ರಾಕ್ಷಿ ಇಲ್ಲದೆ ಹಾಗೆ ಬಂದನು. ಬಂದ ಕೂಡಲೇ ನಮ್ಮ ಮನೆಯ ಮುಂದೆ ನಿಲ್ಲಬೇಡೆಂದು ಬೆದರಿಸಿದೆನು. ಇದರೊಳಗೆ ನನ್ನದೇನು ತಪ್ಪಿಲ್ಲ ಅಂದನು. ಆಗ ಆ ಋಷಿಯು ಸಿಟ್ಟಿಗೆದ್ದು ರುದ್ರಾಕ್ಷಿಯೊಳಗೆ ಏನು ಹುರುಳು ಅದೆ. ಅದೊಂದು ಗಿಡದ ಬೀಜವು. ಅಂಥ ಬೀಜಗಳನ್ನು ಸರಮಾಡಿಕೊಂಡು, ಕೊರಳೊಳಗೆ ಹಾಕಿಕೊಂಡರೆ ಆಗುವುದೇನು? ಇಂಥಾ ಹುಚ್ಚು ತನವನ್ನೆಲ್ಲಾ ಬಿಟ್ಟುಬಿಡು ಅಂದನು. ಆಗ ಸುಪ್ರದೀಪಕ ಬ್ರಾಹ್ಮಣನು ರುದ್ರಾಕ್ಷಿಯ ಮಹಿಮೆಯು ಗೊತ್ತಿಲ್ಲದೆ ಯಾಕೆ ಮಾತನಾಡುವಿ? ನಿನಗೆ ಬೇಕಾದಂಥ ಶಕ್ತಿಯಿದ್ದರೂ ರುದ್ರಾಕ್ಷಿ ಧರಿಸಿದವರ ಸರಿ ನೀನು ಎಂದೂ ಆಗುವುದಿಲ್ಲಾ ಎಂದು ಎನ್ನಲು ಆಗ ಗಂಗಾಮುನಿಯು ನಾನು ಸ್ವರ್ಗಕ್ಕೆ ಹೋಗಿ ಕಲ್ಪವೃಕ್ಷದ ಹೂವನ್ನು ತರುತ್ತೇನೆ ನೋಡೆಂದು ಯೋಗಬಲದಿಂದ ಸ್ವರ್ಗಕ್ಕೆ ಹೋಗಿ ಆ ಹೂವನ್ನು ತೆಗೆದುಕೊಂಡು ಬಂದನು. ಆಗ ಸುದೀಪಕ ಬ್ರಾಹ್ಮಣನು ಇದೇನು ಆಶ್ಚರ್ಯವಲ್ಲ ನಾನು ಬೆಕ್ಕಿನ ಮರಿಯ ಸಂಗಡ ತರಿಸುವೆನೆಂದು ಹೇಳಿ, ತನ್ನ ಮನಿಯೊಳಗಿನ ಬೆಕ್ಕಿನ ಮರಿಯನ್ನು ತರಿಸಿ, ಅದರ ಕೊರಳೊಳಗೆ ರುದ್ರಾಕ್ಷಿ ಮಾಲೆಯನ್ನು ಹಾಕಿ, ಅದನ್ನು ಮೇಲಕ್ಕೆ ಹಾರಿಸಿದನು. ರುದ್ರಾಕ್ಷಿ ಧಾರಣ ಮಾಡಿದ ಪ್ರಭಾವದಿಂದ ಅದು ಸ್ವರ್ಗಕ್ಕೆ ಹೋಯಿತು. ಆಗ ಅಲ್ಲಿ ದೇವೇಂದ್ರನು ಆ ಬೆಕ್ಕಿನ ಮರಿಯ ಕೂಡ ಕಲ್ಪವೃಕ್ಷದ ಹೂವನ್ನು ಕಳಿಸಿದನು. ಆ ಬೆಕ್ಕಿನ ಮರಿಯು ಕಲ್ಪವೃಕ್ಷದ ಹೂವನ್ನು ತಂದು ಇವರ ಮುಂದೆ ಇಟ್ಟು, ಅದು ಸುಪ್ರದೀಪಕ ಬ್ರಾಹ್ಮಣನನ್ನು ಪ್ರದಕ್ಷಿಣೆ ಮಾಡಿ, ನಮಸ್ಕಾರ ಮಾಡಿ ನಿಂತಿತು. ಆಗ ಆ ಗಂಗಾ ಋಷಿಯು ಅದನ್ನೆಲ್ಲ ನೋಡಿ, ರುದ್ರಾಕ್ಷಿ ಧಾರಣ ಫಲವು ಹೆಚ್ಚೆಂದು ತಿಳಿದು, ತಾನು ಆ ಬ್ರಾಹ್ಮಣನಿಗೆ ನಮಸ್ಕಾರ ಮಾಡಿ, ಅವರಿಂದಾ ತಾನು ರುದ್ರಾಕ್ಷಿಧಾರಣ ಮಾಡಿಸಿಕೊಂಡು ಹೋದನು. ಕೇಳೋ ರಾಜೇಂದ್ರ, ಯಾವ ಮನುಷ್ಯನು ರುದ್ರಾಕ್ಷಿ ಧಾರಣ ಮಾಡುವನೋ ಅವನು ಬ್ರಾಹ್ಮಣನಿಗಿಂತ ಹೆಚ್ಚೆಂದು ತಿಳಿದು ಬಿಡು.

ಕೌಶಿಕ : ಅವ್ವಾ, ಈ ಪುರಾಣ ಪ್ರಸಿದ್ಧವಾದ ಚರಿತ್ರೆಯನ್ನು ಕೇಳಿ ನನ್ನ ಪಾಪವೆಲ್ಲ ಸುಟ್ಟು ಹೋಯಿತು. ಇನ್ನು ಮಂತ್ರ ಅಂದರೇನು? ಅದರ ಪ್ರಭಾವದಿಂದ ಏನೇನು ಲೀಲೆಗಳಾಗುತ್ತದೆ ಅದನ್ನಿಷ್ಟು ಹೇಳುತಾಯೆ.

ಅಕ್ಕಮಹಾದೇವಿ : ರಾಜಾ, ಮಂತ್ರ ಅಂದರೆ ಪಂಚಾಕ್ಷರಿ ಮಂತ್ರ. ಇದರ ಮಹತ್ವವನ್ನು ಹೇಳುತ್ತೇನೆ ಕೇಳು. ಆ ಪಂಚಾಕ್ಷರಿಯ ಮಹತ್ವವೆಂದರೆ,

ಪೂರ್ವದಲ್ಲಿ ಸಾನಂದ ಋಷಿಯು ಸ್ವದೇಶ ಸಂಚಾರ ಮಾಡುತ್ತ ಯಮಲೋಕಕ್ಕೆ ಹೋದನು. ಅಲ್ಲಿಗೆ ಹೋದ ಕೂಡಲೇ ಕೋಟ್ಯಾನುಕೋಟಿ ಪ್ರಾಣಿಗಳೆಲ್ಲ ನರಕದೊಳಗೆ ಬಿದ್ದು ಕಷ್ಟದಿಂದ ಒದ್ದಾಡುವದನ್ನು ನೋಡಿ ಶಿವ! ಶಿವಾ!! ಪ್ರಾಣಿಗಳು ಎಂಥ ಘೋರ ತಮವಾದ ನರಕದೊಳಗೆ ಬಿದ್ದು, ನೋಡಬಾರದಂಥ ಕಷ್ಟವನ್ನು ಅನುಭೋಗಿಸಲಿಕ್ಕೆ ಹತ್ತಿರುವವಲ್ಲಾ. ಈ ಪ್ರಾಣಿಗಳ ದುಃಖವನ್ನು ನಾನು ಹ್ಯಾಗೆ ನೋಡಲಿ. ನೋಡದ ಹಾಗೆ ಸುಮ್ಮನೇ ಹೋಗುವುದು ಯೋಗ್ಯವಲ್ಲಾ ಎಂದು ವಿಚಾರಿಸಿ, ಕಷ್ಟದಿಂದ ಪ್ರಾಣಿಗಳನ್ನು ಉದ್ಧಾರ ಮಾಡಬೇಕೆಂದು ಆ ಸಾನಂದ ಋಷಿಯು ಆ ನರಕದೊಳಗಿನ ಪ್ರಾಣಿಗಳಿಗೆಲ್ಲ ಕೇಳಿಸುವಂತೆ ಶಿವ ಪಂಚಾಕ್ಷರಿ ಮಂತ್ರವನ್ನು "ನಮಃ ಶಿವಾಯ" ಅಂತಾ ಪಠಣ ಮಾಡಿದ. ಕೂಡಲೇ ಆ ನರಕದೊಳಗಿನ ಪ್ರಾಣಿಗಳೆಲ್ಲ ಅದನ್ನು ಕೇಳಿದ ಕೂಡಲೇ ನರಕದೊಳಗಿಂದ ಮುಕ್ತಿಯನ್ನು ಹೊಂದಿದವು. ಇನ್ನಾದರೂ ಈ ಮಂತ್ರದ ಮಹತ್ವವನ್ನು ತಿಳಿದುಕೋ. ಈ ಮಂತ್ರವು ಸಾವಿರ ಮುಖದ ಆದಿಶೇಷನಿಗೂ ಸಹ ವರ್ಣನೆ ಮಾಡುವುದು ಅಸಾಧ್ಯವಿರುತ್ತದೆ. ನಾನು ಹೇಳಿದಂಥ ಅಷ್ಟಾವರಣಗಳಲ್ಲಿ ವಿಶ್ವಾಸವನ್ನಿಟ್ಟು, ಅದನ್ನು ಧಾರಣಮಾಡಿ, ಶಿವ ಭಕ್ತನಾಗು, ಅಂದರೆ ಸಾಕ್ಷಾತ್ ಸದಾಶಿವ ಸ್ವರೂಪನಾಗುತ್ತೀ ಯಾಕೆ ಕೌಶಿಕ ರಾಜಾ ನಿನ್ನ ಮನಸ್ಸಿನಲ್ಲಿ ಇನ್ನು ಏನಾದರೂ ಕೇಳುವ ಆಶೆ ಇದ್ದರೆ ಕೇಳು.

ಕೌಶಿಕ : **ಪದ**

ಮತ್ತೆ ಯಾತರ ಆಶೆ ತಾಯೇ ಸೌಖ್ಯದಾಯೇ
ಅಷ್ಟಾವರಣದ ಮಹಿಮೆ ಕೇಳಿ ಹೊಂದಿದೆ ಪುಣ್ಯ ॥ ಪಲ್ಲ ॥

ಶಿವಭಕ್ತನಾಗಿ ಹೆಮ್ಮೆ ಪಡಿಯುವೆನವ್ವಾ
ಧರ್ಮ ಮಾತೆ ಎನ್ನಮಾಡು ಶಿವಭಕ್ತನನ್ನಾಗಿ
ನಿನ್ನ ನಂಬಿದೆನವ್ವಾ ನಾನು ಪ್ರತ್ಯಕ್ಷ ಮಹಾಮಾಯೆ ॥ ೧ ॥

ವಿಭೂತಿ ಹಚ್ಚುವೆ ರುದ್ರಾಕ್ಷಿ ಧರಿಸುವೆ
ಶಿವಮಂತ್ರ ಭಜಿಸುವೆ ಲಿಂಗವ ಧರಿಸುವೆ
ಕೊಡು ಎನಗೆ ಲಿಂಗವನ್ನು ತಾಯೇ ಮಹಾದೇವಿ
ಗುರುನೀನಾ ॥ ೨ ॥

ಮಾತು: ಅವ್ವಾ, ಈ ಅಷ್ಟಾವರಣದ ಪ್ರಭಾವ ಕೇಳಿ ಸಂತುಷ್ಟನಾದೆನು. ಆದ್ದರಿಂದ

ನನಗೆ ವಿಭೂತಿ, ರುದ್ರಾಕ್ಷಿ ಧಾರಣಮಾಡಿ, ನನ್ನನ್ನು ಶಿವಭಕ್ತನನ್ನಾಗಿ ಮಾಡು ತಾಯೇ.

ಅಕ್ಕಮಹಾದೇವಿ : ಅಪ್ಪಾ ಕೌಶಿಕಾ, ಶಿವಭಕ್ತನಾಗುವದೆಂದರೆ, ಸುಮ್ಮನೆ ಅಲ್ಲಾ. ಸಂಸಾರದ ಮೇಲೆ ಎಷ್ಟು ಮೋಹವಿರುವುದೋ ಇದರ ಹತ್ತುಪಾಲು ಮೋಹವು ಶಿವನಲ್ಲಿ ಇದ್ದರೆ ಆಗುತ್ತದೆ. ಅದಕ್ಕೆ ನೀನು ರಾಜನಿರುವಿ. ಆದ್ದರಿಂದ ಸಂಸಾರದ ಮೇಲೆ ಮೋಹವನ್ನು ಬಿಡುವುದು ಬಹಳ ಕಠಿಣವಿದೆ. ಅದರಿಂದ ನೀನು ಬಹಳ ಎಚ್ಚರದಿಂದ ನಡೆಯಬೇಕು ನೋಡು ರಾಜಾ.

ಕೌಶಿಕ : **ಪದ**

ಸಂಸಾರ ನೀಗಿದೆ ಮಮಜನನಿ ಬಹು ಧ್ಯಾನಿ
ಎನ್ನ ಕರುಣಿಸು ನೀ ಶಿವನ ಧ್ಯಾನಿ
ನಿಜ ಸುಖ ಸಂಪನ್ನಿ ಈ ರಾಜ ಕಿರೀಟ
ಯಾತಕ್ಕೆ ಬೇಕು ಎನಗೆ ಬಿಟ್ಟೆ ಚೆಲುವೆನೀಗ
ಒಗಿಯುವೆ ವಸ್ತ್ರವ ಸೀಳಿ ಒಗೆಯುವೆನು
ಎನಗೆ ಬೇಕು ಎನ್ನ ರಾಜ ಚಿನ್ನಗಳನ್ನೆಲ್ಲಾ
ತೆಗೆಯುವೆನು ನಿಜಸುಖ ಸಂಪನ್ನೆ ॥

(ಮಾತು): ಅವ್ವಾ, ಈಗ ನಾನು ಈ ರಾಜ ಪೋಷಾಕುಗಳನ್ನೆಲ್ಲಾ ತೆಗೆದು ಒಗೆದು ದೇವಿ ನಿನ್ನ ಪಾದ ಕೃಪೆಯಿಂದ ಈ ಭವಸಾಗರವನ್ನು ದಾಟಿ ಪಾರಾದೇನು. ನಮಗೆ ಶಿವದೀಕ್ಷೆಯನ್ನು ಕೊಟ್ಟು ಶಿವಭಕ್ತನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

(ಅಷ್ಟರಲ್ಲಿ ತನ್ನನ್ನು ತಾನೇ ನೋಡಿಕೊಂಡು)

ಆಹಾ! ನಾನು ಶಿವಭಕ್ತನಾಗಬೇಕೆಂದು ಹವಣಿಸುವುದರೊಳಗಾಗಿ ತನ್ನಿಂದ ತಾನೇ ಕಪನಿ ಅಂಗಿ ಆಯಿತಲ್ಲಾ, ಇನ್ನು ಮೇಲೆ ಎನಗೆ ಶಿವದೀಕ್ಷೆ ಕೊಟ್ಟು, ಈ ಲಿಂಗವನ್ನು ಕಟ್ಟಿ ಮಂತ್ರೋಪದೇಶಮಾಡಿ ನನ್ನನ್ನು ವೀರಶೈವನೆಂದು ಮಾಡು ತಾಯೇ.

ಅಕ್ಕಮಹಾದೇವಿ : ಶಹಭಾಷ್ ಕೌಶಿಕಾ, ಇಂದಿಗೆ ನೀನು ಶಿವಭಕ್ತನಾದೆ. ಭವಪಾಶದಿಂದ ಮುಕ್ತನಾದಿ. ಇಗೋ ಹಿಡಿ ಕೊರಳಲ್ಲಿ ರುದ್ರಾಕ್ಷಿ

ಮಾಲೆಯನ್ನು ಧರಿಸು. ಕಮಂಡಲ, ಕೃಷ್ಣಾಜಿನಗಳನ್ನು ತೆಗೆದುಕೊ (ಕೊಡುವಳು).

ಕೌಶಿಕ : ತಾಯಿ ಇಷ್ಟೇ ಆಯಿತೇನು? ಇಷ್ಟಲಿಂಗವನ್ನು ದಯಪಾಲಿಸಿ, ಗುರುಮಂತ್ರವನ್ನು ಉಪದೇಶ ಮಾಡು ತಾಯೇ.

ಅಕ್ಕಮಹಾದೇವಿ : ಕೌಶಿಕಾ ಮಂತ್ರೋಪದೇಶವ ಮಾಡಿ, ಇಷ್ಟಲಿಂಗವನ್ನು ಧಾರಣ ಮಾಡುವಂಥಾ ಶಿವಸ್ವರೂಪರಾದಂತಾ ಜಗದ್ಗುರು ಇಲ್ಲಾ. ಮಹಾಪ್ರಭು ಸ್ವಾಮಿಗಳು ಈಗ ಶ್ರೀಶೈಲದೊಳಗೆ ಇದ್ದಾರೆ. ಅಲ್ಲಿಗೆ ಹೋಗೋಣ ನಡೆ. ಅಂದರೆ ಅವರ ಕಡೆಯಿಂದ ನಿನಗೆ ಶಿವದೀಕ್ಷೆಯನ್ನು ಕೊಡಿಸುತ್ತೇನೆ. ನೀನು ಇನ್ನು ಮೇಲೆ ತಡಮಾಡಬೇಡಾ. ಈಗಿಂದೀಗಲೇ ಹೋಗೋಣ ನಡೆ.

ಕೌಶಿಕ :

ಪದ

ನಡಿಯವ್ವಾ ಬೇಗದಿ ಬರುವೆನಾ ಹರುಷದಿ
ಎನ್ನ ಕರುಣದಿ ನೋಡುತಿದಿ ನಾನೇ ಪುಣ್ಯಶಾಲಿ ಇನ್ನ
ನಾ ನಂಬಿದೆ ನಿನ್ನನ ಭೂಮಿಯೊಳಗ ಪ್ರಸಿದ್ಧ
ಲಕ್ಷ್ಮೇಶ್ವರ ಶುದ್ಧ ಭಕ್ತರ ಇಟ್ಟ ಪದ ಬಸವೇಶನೊಳು
ಕರುಣಿಸು ಮಾತ್ರ ಅನುಮಾನ ಅವನಿಗೆ ಮಾಡು
ಕರುಣಸಾಗರ ॥

ಮಾತು: ಅವ್ವಾ, ನನ್ನನ್ನು ಉದ್ಧಾರ ಮಾಡುವುದರ ಸಲುವಾಗಿ, ಸ್ವತಃ ನಿಂತು ಬಿಟ್ಟಿರುವಿ. ಅಂದಮೇಲೆ ನಿನ್ನಂಥಾ ಮಹಾತ್ಮಳ ಮಾತಿಗೆ ನಾನು ಒಲ್ಲೆನೆಂದು ಅಂದೇನೇಯೇ? ಶ್ರೀಶೈಲ ಪರ್ವತಕ್ಕೆ ಹೋಗಿ ನನ್ನನ್ನು ವೀರಶೈವನನ್ನಾಗಿ ಮಾಡಿ, ಅವರ ಪಾದ ಸೇವೆಯ ಮಾಡಲು ಹಚ್ಚು. ಹೇ ಜನನಿ, ಕಲ್ಯಾಣಿ, ನಿನ್ನ ಉಪಕಾರವನ್ನು ಜನ್ಮಜನ್ಮಾಂತರದಲ್ಲಿ ಹೊಗಳಿದರೂ ತೀರದಷ್ಟು ಆಯಿತು. ಇರಲಿ ತಾಯಿ, ನನ್ನಂಥಾ ಪಾಮರನನ್ನು ಉದ್ಧಾರ ಮಾಡಲಿಕ್ಕೆ ಬಂದಂಥಾ ನಿಮ್ಮಂಥಾ ಜ್ಞಾನಿಗಳ ಪ್ರಭಾವವು ನಮಗೆಲ್ಲಿ ತಿಳಿಯಬೇಕು. ತಾಯೇ, ತಡಮಾಡಿದರೆ ಉಪಯೋಗವಿಲ್ಲಾ, ಈಗಿಂದೀಗ ಶ್ರೀಶೈಲ ಪರ್ವತಕ್ಕೆ ಹೋಗೋಣ ನಡೆಯಿರಿ.

ಅಕ್ಕಮಹಾದೇವಿ : ಹಾಗಾದರೆ ಈಗೀಂದೀಗ ಶ್ರೀಶೈಲ ಪರ್ವತಕ್ಕೆ ಹೋಗೋಣ ನಡೆ. ನಾನು ನಮ್ಮ ತಂದೆಗೆ ಭೆಟ್ಟಿಯಾಗಿ ಅಪ್ಪಣೆಯನ್ನು ತೆಗೆದುಕೊಂಡು ಬರುತ್ತೇನೆ. ನೀನು ಮಾತ್ರ ಬೇಗನೇ ಬಾ ತಿಳಿಯಿತೇ?

ದೃಶ್ಯ

(ಸಂನ್ಯಾಸಿ ವೇಷದಲ್ಲಿ ಕೌಶಿಕನ ಪ್ರವೇಶ)

ಕೌಶಿಕ : **ಪದ**

ಶಿವಧೋ, ಹರಧೋ ಪರಿಪಾಲಿಸೆನ್ನನು ಶಂಭೋ ॥ ಪಲ್ಲ ॥
ಕೈಲಾಸ ಲಕ್ಷ್ಮೀಶ್ವರ ವಾಸ ಕರುಣಿಸೋ ನೀ ಬಸವೇಶಾ
ಗಡ ಬೇಧಿಸೋ ಎನ್ನ ಭವಪಾಶಾ ಮುಕ್ತಿಯ ಕೊಡು ಸರ್ವೇಶಾ ॥

ಮಾತು: ಭಿಕ್ಷಾಂದೇಹಿ! ಭಿಕ್ಷಾಂದೇಹಿ!! ಭಿಕ್ಷಾಂದೇಹಿ!!!

ದೂತಿ : ಯಾರವರು ಹೊರಗೆ ಬಂದವರು? ಯಾರು?

ಕೌಶಿಕ : ಯಾಕೆ, ದೂತಿ ಕೌಶಿಕ ರಾಜನಲ್ಲವೇ ನಾನು!

ದೂತಿ : ಅಯ್ಯ, ಕೌಶಿಕಾ ಮಹಾರಾಜರೇನು? ಹಿಂಗ್ಯಾಕ್ರೀ ನಿಮಗೇನು ಹುಚ್ಚು ಹಿಡಿದಿದೆಯೇನು?

ಕೌಶಿಕ : ದೂತಿ, ನನ್ನ ಆಶೆಯನ್ನು ಬಿಟ್ಟುಬಿಡು.

ದೂತಿ : ಅದ್ಯಾಕ್ರೀ, ನಿಮ್ಮ ಆಶೆ ಬಿಡುವುದು?

ಕೌಶಿಕ : ಯಾಕೆ ಅನ್ನುವುದೇನು? ಆಶೆ ತೀರಿತು. ಇನ್ನು ಮೇಲೆ ನಾನು ಮನೆಗೆ ಬರುವುದಿಲ್ಲಾ. ನಾನು ಮಹಾದೇವಿಯೊಂದಿಗೆ ಶ್ರೀಶೈಲಕ್ಕೆ ಹೋಗುವೆ.

ದೂತಿ : ಹೋಗಬೇಡಾ ನಿಲ್ಲಿರಿ. ಒಳಗೆ ಹೋಗಿ ಬರುತ್ತೇನೆ.

ಕೌಶಿಕ : ಅದೇಕೆ ಹೋಗಬಾರದು ದೂತಿ?

ದೂತಿ : ಅದ್ಯಾಕೆ ಹೋಗಬಾರದೆನ್ನುವುದನ್ನು ಹೇಳುತ್ತೇನೆ ಸ್ವಲ್ಪ ನಿಲ್ಲಿರಿ (ಒಳಗೆ ಹೋಗಿ ಚಾರುಮತಿಯನ್ನು ಕರೆದುಕೊಂಡು ಬರುವಳು.)

ಚಾರುಮತಿ : **ಪದ**

ಸರಿಯೇನು ಕಾಂತನೇ ನಿನಗಿದು ವೇಷ
ಯಾತರದು ನಿನ್ನ ಅಭಿಲಾಷಾ ಪಾಶಾ
ಛೀ ಎಂಥದೋ ನಿನ್ನ ಕೆಲಸ ॥ ಪಲ್ಲ ॥

ರಾಜ ಚಿನ್ಹಗಳೆಲ್ಲ ತೆಗೆದು ಯಾತಕ್ಕೆ ಧರಿಸಿಯೋ ಈ ವೇಷ
ಬುದ್ಧಿಯೇ ನಿಂತು ಹೋಯಿತೇ ಇಂದು
ಮಾಡುವುದಿನ್ನೇನು ನೀನು ಎಲ್ಲಿಂದಾ ಹುಡುಗಾಟಿಕೆಯನು

ಬಿಡು ಬಿಡು ಇಂದು ಗಡ ಇರು ಮನೆಯೊಳಗೆ
ಬಂದು ಸಡಗರದಿಂದಾ ನಡೆಯಿಂದು ॥

ಕೌಶಿಕ : **ಪದ**

ಮನೆಯು ಬೇಡಾ ಬದುಕು ಬೇಡಾ
ನಿನ್ನ ಕೂಡುವುದು ಬೇಡಾ ಸಂಸಾರವನ್ನು
ಬಿಟ್ಟೆನು ನಾನು ಹೊಂದಿ ವೈರಾಗ್ಯವನ್ನು
ಆದೆನೋ ಧನ್ಯ ಶಿವಶರಣರ ವಚನಾಮೃತವನ್ನು
ಕುಡಿದು ನಿಜಧಿಯೊಳು ನಾ ಹೋಗುವೆನು ॥

ಚಾರುಮತಿ : **ಪದ**

ಕಪನಿ ಅಂಗಿ ಕಮಂಡಲವು ರುದ್ರಾಕ್ಷಿಸರ
ಹಣೆಯೊಳಗೆ ಭಸ್ಮ ನಿಮಗ್ಯಾತಕ ರಾಯಾ
ರಾಜರು ನೀವು ಇದು ನಿಮಗೆಲ್ಲ ಹುಚ್ಚುತನವು
ಛೀ ಪ್ರಿಯಕಾಂತಾ ಸದ್ಗುಣ ಕಾಂತಾ
ಬಿಡುಪಂಥವ ಸಂನ್ಯಾಸಿಗಳಿಗೆಲ್ಲಿದೆ ಹಿತವು ॥

ಮಾತು: ಹೇ ಪ್ರಾಣಾ ಮನೋಹರ, ನೀವು ಮಹಾರಾಜರಾಗಿ ಇಂಥಾ ಸಂನ್ಯಾಸಿ ವೇಷವನ್ನು ಹಾಕಿಕೊಂಡ ಮೇಲೆ ನಿಮ್ಮ ಜ್ಞಾನವು ಎತ್ತ ಹೋಗಿರುವುದು. ಹೀಗೆ ಮಾಡಿದರೆ ಎರಡನೇ ರಾಜರು ನಗಲಿಕ್ಕಲ್ಲವೇ. ಈ ಪೋಷಾಕುಗಳನ್ನು ತೆಗೆದು, ಒಳಗೆ ಹೋಗಿ, ರಾಜ ಪೋಷಾಕುಗಳನ್ನು ಹಾಕಿಕೊಳ್ಳಿರಿ ಮತ್ತು ಹಾಗೆ ಹೀಗೆ ಆದರೆ ನಿಮ್ಮನೇನು ನಾನು ಬಿಡುವುದಿಲ್ಲಾ ಅಂತಾ ತಿಳಿದು ನೋಡಿರಿ.

ಕೌಶಿಕ : (ಮೌನವಾಗಿರುವನು).

ಚಾರುಮತಿ : ಯಾಕ್ರೀ ಮಾತನಾಡುವುದಿಲ್ಲಾ. ನಾನು ಒಂದೇ ಸಮನೆ ಒದರಿಕೊಂಡದ್ದು ಅರಿವೇ ಇಲ್ಲವೇನ್ರೀ?

ಕೌಶಿಕ : ಏನೇ ನಾನು ಅನ್ನುವುದೇನು. ಸಂಸಾರವನ್ನು ಬಿಟ್ಟು ನಾನು ಸಂನ್ಯಾಸಿ ಆಗಿರುವೆನು. ಗುರುವಾಕ್ಯದಂತೆ ನಾನು ಹೋಗುತ್ತೇನೆ.

(ಹೋಗ ಹತ್ತುವನು. ಅವಳು ಮುಂದೆ ಬಂದು ತಡೆಯುವಳು.)

ಚಾರುಮತಿ : ನನ್ನನ್ನು ಬಿಟ್ಟು ನೀವು ಎಲ್ಲಿಗೆ ಹೋಗುತ್ತೀರಿ?

ಕೌಶಿಕ : ಛೀ ದುಷ್ಟೇ ಸರಿ, ದೂರ ಸರಿದು ನಿಂತು ಮಾತನಾಡು.

ಚಾರುಮತಿ : ಸ್ವಾಮಿ, ಈಗ ಎಲ್ಲಿಗೆ ಹೋಗಿತ್ತೀರಿ? ನಿಲ್ಲಿರಿ ನಿಲ್ಲಿರಿ. ದೂತಿ ಬೇಗ ಬಾ. ಇವರಕೈಯೊಳಗಿನ ಸಾಮಾನುಗಳನ್ನೆಲ್ಲ ತೆಗೆದುಕೊಂಡು ಗಟ್ಟಿಯಾಗಿ ಹಿಡಿ ಬಿಡಬೇಡಾ.

ಕೌಶಿಕ :

ಪದ

ಛೀ ದುರಾತ್ಮಳೇ ಮುಟ್ಟಬೇಡಾ ನನ್ನ
ನಾನೆಷ್ಟು ಹೇಳಲಿಯಿನ್ನ ತರ್ಕಮಾಡಬೇಡ ಇನ್ನs ॥ ಪಲ್ಲ ॥

ಸಂನ್ಯಾಸಿಯಾದೆನು ಭಕ್ತನಾದೆನು ಬಿಡು ನೀ ಎನ್ನ
ಆಶೆಯನು ನರಜನ್ಮವನು ರಾಜ್ಯವು ಬೇಡಾ
ಕೋಶವು ಬೇಡಾ ಬಿಟ್ಟೆನು ಸಂಸಾರವನ್ನ
ಇದೆಲ್ಲ ಆಶೆಯನ್ನು ಬಿಟ್ಟೆನು ನಡಿನೀನು ॥ ೧ ॥

ಕಮಂಡಲ ತಾ ಕೃಷ್ಣಾಜಿನ ತಾ
ಆಡಮಾಡಬೇಡ ಎನ್ನೊಳು
ಅಲ್ಲದ ಮಾತಾ ಎನ್ನಾಶೆಯನು ಬಿಟ್ಟು ಬಿಡು ನೀನಾ
ಸೇವಿಸಿ ಆ ಶಿವಶರಣರನ್ನು ತಾತಾ ಇವನ್ನೆಲ್ಲ ಸುಮ್ಮನೆ
ಬಿಡು ಬಿಡು ನೀ, ನಾ ಹೋಗುವೆನು
ನನ್ನ ತಡವಿದವರ ನಿನ್ನ ಕೊಲ್ಲುವೆನು ॥ ೨ ॥

ದೃಶ್ಯ

(ದೂತಿ, ಮಹಾರಾಜರು ಹೋಗುವರು. ಹಿಡಿಯಬನ್ನಿ ಎಂದು ಚಾರುಮತಿ ಕೂಗುವಳು).

ಚಾರುಮತಿ : (ದುಃಖದಿಂದ) ಅಕಟಕಟಾ ದೇವಾ ಮಲ್ಲಿಕಾರ್ಜುನಾ ಘಾತವಾಯಿತು.

ಪದ

ಪ್ರಿಯ ಹೋದ ಎನ್ನೊಳು ಮೋಸ ಮಾಡಿ
ಕೋಪದಿ ಎನ್ನ ನೋಡಿ ನಿಷ್ಠುರ ಮಾತಾಡಿ
ತಪ್ಪಿಸಿ ಹೋದ ನೋಡಿ ॥ ಪಲ್ಲ ॥

ವೈರಾಗ್ಯ ಹೊಂದಿ ತಾನು ಸಂಸಾರ ನೀಗಿ ತಾನು
ವಿಷಯ ಸುಖಗಳನ್ನು ಕೇಳುವೆನೆಂದು ನುಡಿದನು ॥ ೧ ॥

ಗುರುಸೇವಾ ಮಾಡುವೆ ಜ್ಞಾನವ ಪಡೆಯುವೆ
ಮುಕ್ತಿಯ ಹೊಂದುವೆನೆಂದು ಪೋದನು ॥ ೨ ॥

ಖ್ಯಾತಿಯೊಳು ಪ್ರಖ್ಯಾತಿ ದೇವಗಿರಿಯ ಗ್ರಾಮ
ಬಸವೇಶನು ಘಾತ ಮಾಡಿದಾ ಸತ್ಯ ॥ ೩ ॥

ಮಾತು: ಅವ್ವಾ ದಾಸಿ ಪ್ರಾಣಪ್ರಿಯರು ಎತ್ತಹೋದರು. ಇನ್ನೇನು ಮಾಡಲಿ. ಪ್ರಾಣ ಪ್ರಿಯರನ್ನು ಬಿಟ್ಟು ಇನ್ನು ಹ್ಯಾಗೆ ಇರಲಿ. ಇನ್ನು ಮೇಲೆ ನಾನು ಪ್ರಾಣವನ್ನು ಇಡುವುದಿಲ್ಲಾ. ನನ್ನ ಆಶೆ ಬಿಟ್ಟು ಹೋಗವ್ವಾ ದೂತಿ.

ದೂತಿ : ಏನು ನಿಮಗೂ ಹುಚ್ಚು ಹತ್ತಿತೇನು? ಅದು ನೋಡಿದರೆ ಬಾವಾ ಆಗಿ ಹೋಯಿತು. ನೀ ನೋಡಿದರೆ ಜೀವಾ ಕೊಡಲೆಂದು ಹೊರಟೀದಿ ಎದ್ದು ಬಾ ಒಳಗೆ.

ಚಾರುಮತಿ : ನಾನು ಒಳಗೆ ಬರುವುದಿಲ್ಲ ದೂತಿ.

ದೂತಿ : ನಿಮ್ಮಂಥವರು ನಮ್ಮ ಕೈಯೊಳಗೆ ಇರೋತನಕ ನೀವು ಯಾಕೆ ಚಿಂತೆ ಮಾಡುತ್ತೀ ರಾಣಿ?

ಚಾರುಮತಿ : ದೂತಿ ನನ್ನ ಪ್ರಾಣಕಾಂತನನ್ನು ಕರೆದುಕೊಂಡು ಬಂದ ಮೇಲೆ ಒಳಗೆ ಬರುತ್ತೇನೆ.

ದೂತಿ : ನಿನ್ನ ಹಿತಕ್ಕೆ ಹೇಳುತ್ತೇನೆ ಒಳಗೆ ಬಾ.

ಚಾರುಮತಿ : ಏನದು ಹೇಳು?

ದೂತಿ : ಅವರು ಮರಳಿ ಬರುವ ಹಾಗೆ ಒಂದು ಬೇತು ಹೇಳುತ್ತೇನೆ ಹಂಗ ಮಾಡು.

ಚಾರುಮತಿ : ಅದೇನು ಬೇತು ಹೇಳು ದೂತಿ?

ದೂತಿ : ನಾನು ಹೇಳ್ತೀನಿ ನೀಮಾಡು.

ಚಾರುಮತಿ : ಮಾಡುತ್ತೇನೆ ನೋಡವ್ವಾ.

ದೂತಿ : ನೋಡ ಮತ್ತ, ನನ್ನ ಕಡೆಯಿಂದ ಆ ಕೆಲಸ ಆಗತೈತಿ. ನಿಮ್ಮಂಥವರ ಕಡೆಯಿಂದ ಆಗೋದಿಲ್ಲಾ ಅದಕ್ಕ ಹೇಳ್ತೀನಿ.

ಚಾರುಮತಿ : ದೂತಿ. ನನ್ನ ಹಿತಕ್ಕಾಗಿಯೇ ಹೇಳುತ್ತಿ, ನಾನು ಯಾಕೆ ಮಾಡಬಾರದು?

ದೂತಿ : ಏನೆಂದರೆ, ರಾಜ ಮಹಾದೇವಿಯನ್ನು ಬೆನ್ನುಹತ್ತಿ ಶ್ರೀಶೈಲಕ್ಕೆ ಹೋಗುತ್ತಾನೆ. ಅಲ್ಲಿ ಯಾವನೋ ಒಬ್ಬ ಸಾಧು ಅದಾನಂತ. ಅವನ ಸೇವಾ ಮಾಡುತ್ತೇನೆಂದಿದ್ದಾನೆ. ಅವರು ತಿರುಗಿ ಬರುವುದು ಕಠಿಣ ಆದೀತು ನೋಡು. ನಡಿ, ನಾವಾಗಿ ಹೋಗಿ ಬಾಯಿಬಡಕತನ ಮಾಡಿ ಅವನ ಮನಸ್ಸು ಒಡೆಸಿ, ಕರೆದುಕೊಂಡು ಬಂದರೆ ನೆಟ್ಟಗಾಗುತ್ತದೆ ನೋಡು.

ಚಾರುಮತಿ : ದೂತಿ ಅವರ ಮನಸ್ಸು ಒಡೆಸುವಂಥಾ ಜಾಣರು ಯಾರಿರುವರು?

ದೂತಿ : ಯಾರೂ ಇಲ್ಲಾ.. ನಿನ್ನ ಕಡೆಯಿಂದ ಆಗುತ್ತದೆ. ನೀನು ಶಾಸ್ತ್ರ ಪುರಾಣಗಳನ್ನೆಲ್ಲಾ ಬಲ್ಲವಳು. ನಿನ್ನ ಕಡೆಯಿಂದ ಆಗುತ್ತದೆ.

ಚಾರುಮತಿ : ದೂತಿ ನನ್ನ ಪ್ರಯತ್ನವೆಲ್ಲಾ ವ್ಯರ್ಥ ಹೋಗಿರುವುದು.

ದೂತಿ : ನಾ ಹೇಳಿದಾಂಗ ಕೇಳಾರ ಕೇಳು. ಒಂದು ಬೇತು ಹೇಳುತ್ತೇನೆ.

ಚಾರುಮತಿ : ಅದೇನು ಬೇತು ಹೇಳವ್ವಾ.

ದೂತಿ : ಅದೇನೆಂದರೆ (ಕಿವಿಯಲ್ಲಿ ಹೇಳಬೇಕು).

ಚಾರುಮತಿ : ದೂತಿ, ಹಾಗೆ ಮಾಡಿದರೆ ಜನರು ನಗಲಿಕ್ಕಿಲ್ಲವೇ?

ದೂತಿ : ನಗಲಿಕ್ಕೆ ಯಾರಿಗೆ ಗೊತ್ತಾಗುತ್ತದೆ?

ಚಾರುಮತಿ : ಹಾಗಾದರೆ ಇದು ನಿನ್ನ ಮನಸ್ಸಿಗೆ ಬರುತ್ತದೆಯೇನು?

ದೂತಿ : ನನ್ನ ಮನಸ್ಸಿಗೆ ಬಂದಲ್ಲೆ ಹೇಳುತ್ತೇನೆ?

ಚಾರುಮತಿ : ಹಾಗಾದರೆ ತೆಗೆದುಕೊಂಡು ಬಾ. (ದೂತಿ ರಾಜಪೋಷಾಕು ತರುವಳು) ದೂತಿ ಇವುಗಳನ್ನು ಧರಿಸಲೇ?

ದೂತಿ : ಹೌದು ಅವುಗಳನ್ನು ಧರಿಸಿಕೊಳ್ಳಿರಿ.

ಚಾರುಮತಿ :

ಪದ

ನಾ ಧರಿಸುವೆ ವೇಷ ಸ್ಥಿತಿಗ್ಗತ್ತಲಿ ಎನ್ನಯ ಕೆಲಸ ॥ ಪಲ್ಲ ॥

ಈ ಜರತಾರಿ ಕೋಟನ್ನು ತೊಡುವೆ
ಈ ಮುತ್ತಿನ ಹಾರವ ಧರಿಸುವೆ
ರಾಜ್ಯಭೂಷಣ ತೊಡುವೆ ನನಗೆ ಬಂದಿತು ರಾಜನ ಕಿರೀಟ ॥ ೧ ॥

ಬಹು ಚೆಂದಾಗಿ ತೋರುವುದೆನಗೆ ನಿಜವಾಗಿ ಪುರುಷಳಾಗುವ
ಪ್ರಸಂಗ ಎನಗೆ ಈಗ ಬಂದಿತು ಈ ಚೆಲುವೆಗೆ ॥ ೨ ॥

ದೇವಗಿರಿಯ ದೇವನು ತಾನು ಎನಗೆ ಪಾಲಿಸಲಿ ಪತಿಯನ್ನ
ನಾ ಭಜಿಸುವೆ ನಿತ್ಯ ಅವರನ್ನ ಈಗ ಪ್ರಸಂಗವಾಗುತಲಿನ್ನು ॥ ೩ ॥

ಮಾತು: ದೂತಿ ನೀನು ಹೇಳಿದ ಪ್ರಕಾರ್ರ ರಾಜ ಪೋಷಾಕುಗಳನ್ನೆಲ್ಲಾ ಧರಿಸಿದ್ದೇನೆ. ಅವರು ದೂರ ಹೋಗುತ್ತಾರೆ. ಅವರಿಗಿಂತಲೂ ನಾನು ಮುಂದಾಗಿ ಹೋಗಿ, ಆ ಘೋರಾರಣ್ಯದಲ್ಲಿ ಬೇಟೆಯಾಡುವ ಹಾಗೆ ಅಡ್ಡಾಡುತ್ತ ಇರುತ್ತೇನೆ. ಪ್ರಾಣಕಾಂತನು ಬರುವನು. ಬಂದ ಕೂಡಲೇ ನನ್ನ ಕುಶಲತ್ವವನ್ನು ತೋರಿಸುತ್ತೇನೆ. ನಾನು ಮರಳಿ ಬರುವತನಕ ಎಚ್ಚರದಿಂದಿರು ತಿಳಿಯಿತಿಲ್ಲೋ. ನಾನು ಹೋಗುತ್ತೇನೆ. ಅಪ್ಪಣೆ ಕೊಡು.

ದೂತಿ : ಅಪ್ಪಣೆ ಹೋಗಿಬರ್ರಿ. (ಇಬ್ಬರೂ ಹೋಗುವರು).

ದೃಶ್ಯ

(ಚಂದ್ರಸೇನನ ವೇಷದ ಚಾರುಮತಿಯ ಆಗಮನ)

ಚಂದ್ರಸೇನ :

ಪದ

ನಿಲ್ಲವೋ ವ್ಯಾಘ್ರನೇ ಪಾಪಿಯೇ ಕೊಲ್ಲುವೆ ನಿನ್ನ
ಬಿಲ್ಲು ಬಾಣದಿ ಗುರಿಯಿಂದ ಹೊಡೆದು ನಿನ್ನ ॥ ಪಲ್ಲ ॥

ಸದಾ ಪ್ರಾಣಿಗಳನ್ನು ನೀ ಮುಂದೆ ನಾ ಮಾಡುವೆ
ಲೀಲೆಯ ಕೊಂದು ಈಗೆಲ್ಲಿ ದಾಟುವೇ ನೀನು
ನಿನ್ನ ಪ್ರಾಣವ ತೆಗೆಯಲು ಬಂದೆನು ನಿನಗೆ ಬಂತು ಕಾಲಾ ॥ ೧ ॥

ತೋರುದಲ್ಲಾ ನಿಲ್ಲು ನಿನ್ನತಾಣ ನಿನ್ನ ಸ್ವಾರ್ಥದಕಾನನ
ಈ ಕಾನನದಲ್ಲಿ ಗಂಭೀರ ನೀನೊಬ್ಬನೇ ಆಗಿ
ಉಗ್ರಸಿಡಿಲಿನಂತೆ
ಗರ್ಜಿಸುವೆ ವೀರನೆಂದೆನಿಸದ ನಿನ್ನನ್ನು
ಜಯಿಸಿಕೊಳ್ಳುವೆ ವೀರಾ ॥ ೨ ॥

(ಚಾರುಮತಿ ಬೇಟೆಯಾಡುತ್ತ ಕಾನನದಲ್ಲಿ ಬರುವಳು.)

ಮಾತು : (ಕೌಶಿಕನಿಗೆ) ನೀವು ಯಾರು? ಇಂಥಾ ಭಯಂಕರ ಕಾಡಿನಲ್ಲಿ ಯಾತಕ್ಕೆ ಬಂದಿರುವಿರಿ, ಹುಲಿ, ಸಿಂಹ ಕಾಡು ಮೃಗಗಳ ಅಂಜಿಕೆಯು ಇಲ್ಲದೆ ನೀವು ಜೀವದಿಂದಾ ಮುಕ್ತರಾಗಬೇಕೆಂದು ಬಂದಂತೆ ಕಾಣುತ್ತದೆ. (ಗಾಬರಿಯಾಗಿ ನೋಡಿ) ಓಹೋ ನೀನು ಉಡುತಡಿಪಟ್ಟಣದ ಕೌಶಿಕ ಮಹಾರಾಜರಲ್ಲವೇ?

ಕೌಶಿಕ : ಹೌದು

ಚಂದ್ರಸೇನ : **ಪದ**

ಇದು ಏನು ಸೋಗು ಕೌಶಿಕಾ ಏನು ನಿಜ ಮೂರ್ಖ
ಧರಿಸಿದಿ ಪೋಷಾಕಾ ನಿನಗೇನು ಚಿಂತಿ ದುಃಖ ॥ ಪಲ್ಲ ॥

ಸಂನ್ಯಾಸಿಯಾಗಲೇನು ಬಂದಿತು ಗೊಂದಲ
ರಾಜ್ಯವೆಲ್ಲವು ಹಾಳು ಆದೀತೇನು ಹೇಳು
ನೀನು ನಿನ್ನ ಚರಿತವು ಏನು
ಯೋಗಿ ಆಗಲು ಕಾರಣವೇನು ॥ ೧ ॥

ಕೌಶಿಕ : **ಪದ**

ಜ್ಞಾನವ ಪಡೆಯಲು ಗುರುಸೇವಾ ಮಾಡಲು
ವಿರತಿ ಹೊಂದಿದೆ ಕೇಳು ಸಂಸಾರ ಮಾಡಿ ಹಾಳಾ
ಕೇಳು ನೀನು ಎನ್ನ ವಾರ್ತೆಯನಾ
ನಿನಗೇನು ಹೇಳುವೆ ನಾನು॥

ಚಂದ್ರಸೇನ : ಕೌಶಿಕಾ ಏನಂದಿ. ಆತ್ಮಶುದ್ಧಿಗಾಗಿ, ಜ್ಞಾನಸಂಪಾದನೆಗಾಗಿ ವೈರಾಗ್ಯ ಹೊಂದಿ, ಗುರುಸೇವೆ ಮಾಡಬೇಕೆಂದು ಸಂನ್ಯಾಸಿಯಾಗಿರುವೆ ಏನು? ಇದೇನು ಸಂನ್ಯಾಸಿ ಹುಚ್ಚು ಹಿಡಿಯಿತೇನು? ಇಂಥ ರಾಜಕುಲದಲ್ಲಿ ಕೀರ್ತಿಯನ್ನು ಪಡೆಯದೇ ಬಾವಾ ಆಗಿ ಮೈತುಂಬ ಬೂದಿ ಬಡಿದುಕೊಳ್ಳುದಕ್ಕಿಂತ ನಿಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕು. ಮೂರ್ಖಾ, ನಿನಗೆ ನಾಚಿಕೆ ಇಲ್ಲವೇ. ನನಗೆ ಮೋರೆಯನ್ನು ತೋರಿಸಬೇಡಾ ಅತ್ತ ನಡೆ.

ಕೌಶಿಕ : ಬಹಳ ನೆಟ್ಟಗೆ ಮಾಡಿದಿರಿ. ಇರಲಿ ನೀವು ಯಾರು? ಮತ್ತೆ ಯಾವ ದೇಶದ ಅರಸರು? ಇಲ್ಲಿ ಯಾತಕ್ಕೆ ಬಂದಿರುವಿರಿ? ಮೊದಲು ನಿಮ್ಮ ಪರಿಚಯವನ್ನು ಹೇಳಿರಿ.

ಚಂದ್ರಸೇನ : ನಾನು ಯಾರೆಂದರೆ, ಆಂಧ್ರದೇಶದ ಸರ್ವಚಾಮರನಾದ ವೀರಕೇತುವಿನ ಮಗ. ನನ್ನ ಹೆಸರು ಚಂದ್ರಸೇನನಿಗೆ ತಿಳಿಯಿತಿಲ್ಲೋ. ಇಲ್ಲಿ ಮಲಯಾಳ ದೇಶದ ಸಾದುಪಾಲ ಅರಸನು ಇರುವನಲ್ಲಾ ಅವನು ನನಗೆ ಮಾವನಾಗಬೇಕು. ನಾನು ಸಹಜವಾಗಿ ಇಲ್ಲಿಗೆ ಬಂದು ಒಂದು ತಿಂಗಳಾಯಿತು. ಆದರೆ ಈ ಅರಣ್ಯದಲ್ಲಿ ಬೇಟೆಯಾಡುವುದರ ಸಲುವಾಗಿ

ಬಂದಿರುತ್ತೇನೆ ತಿಳಿಯಿರಿ.

ಕೌಶಿಕ : ಆಹಾ! ಚಂದ್ರಸೇನಾ ನನ್ನ ಗುರುತನ್ನು ಯಾತರಮೇಲಿಂದ ಹಿಡಿದೆ. ನಮ್ಮ ನಿಮ್ಮ ಪರಿಚಯ ಈ ಮೊದಲು ಇಲ್ಲವೆಂದ ಮೇಲೆ ನನ್ನ ಗುರುತು ನಿಮಗೆ ಹೇಗೆ ಆಯಿತು.

ಚಂದ್ರಸೇನ : ಹಾಗಾದರೆ ನೀವು ಹಿಂದಕ್ಕೆ ಸೌರಾಷ್ಟ್ರ ಸೋಮನಾಥನ ದರ್ಶನಕ್ಕೆ ಬಂದಾಗ್ಗೆ. ಆಗ ನಾವು ನೀವು ಮಂತ್ರಿ ಜನರನ್ನು ಕೂಡಿಕೊಂಡು ಬಂದಿದ್ದೆವು. ಆಗ ನಾವು ನೀವು ಕೂಡಿಕೊಂಡು ಎಂಟು ದಿವಸ ಇದ್ದೆವು. ಅದರಿಂದಲೇ ನಿಮ್ಮ ಗುರುತು ಹಿಡಿದೆನು.

ಕೌಶಿಕ : ಓಹೋ ಆಗ ನೀನು ಸಣ್ಣವನಿದ್ದಿ. ಈಗ ಪ್ರಾಯಕ್ಕೆ ಬಂದು ರೂಪ ಬದಲಾಗಿ ಗುರ್ತು ಹತ್ತಲೊಲ್ಲದು. ನೀವೆಲ್ಲರೂ ಕ್ಷೇಮವೇ?

ಚಂದ್ರಸೇನ : ನಮ್ಮದೆಲ್ಲ ಕ್ಷೇಮವೇ ಸರಿ. ನಿಮ್ಮ ವಿಪರೀತ ಸ್ಥಿತಿಯನ್ನು ನೋಡಿ ನಾನು ಹುಚ್ಚನಾಗಿ ಬಿಟ್ಟೆನು. ನಿನ್ನ ಕೆಲಸವು, ಈ ನನ್ನ ಮನಸ್ಸಿಗೆ ಎಳ್ಳಷ್ಟೂ ಸಹ ಬರುವುದಿಲ್ಲ ನೋಡು.

ಕೌಶಿಕ : ಹ್ಯಾಗೆ ಬಂದೀತು. ಸಂಸಾರಿಕರಿಗೆ ಮತ್ತು ವಿರಕ್ತರಿಗೆ ಎಷ್ಟು ಅಂತರ ಇದೆ. ಸಂಸಾರಿಕರಿಗೆ ಸಂನ್ಯಾಸಿಗಳು ಎಳ್ಳಷ್ಟೂ ಚೆನ್ನಾಗಿ ಕಾಣುವುದಿಲ್ಲ. ಕಾಗೆಗಳ ಅಭ್ಯಾಸವಾದಂತೆ ಮಾವಿನ ಹಣ್ಣಿಗೆ ಆಸೆ ಮಾಡುವುದಿಲ್ಲ. ಬಾಕೀ ಬೇರೆ ಬೇವಿನ ಹಣ್ಣಿಗೆ ಎರಗುವವು ನೋಡು.

ಚಂದ್ರಸೇನ : ಕೌಶಿಕ ಏನಂದೀ? ಇದರ ಅರ್ಥವೇನು? ಕಾಗೆಯು ಮಾವಿನ ಹಣ್ಣಿಗೆ ಎರಗುವುದಿಲ್ಲ. ಬರೇ ಬೇವಿನಹಣ್ಣಿಗೆ ಎರಗುತ್ತದೆ. ಈ ಪ್ರಕಾರ ಅನ್ನುವೆಯಾ? ಇದರೊಳಗೆ ಬೇವಿನ ಹಣ್ಣು ಯಾವುದು? ಮಾವಿನ ಹಣ್ಣು ಯಾವುದು?

ಕೌಶಿಕ : ಮಾವಿನಹಣ್ಣು ಎಂದರೆ ವೈರಾಗ್ಯ ಸುಖ. ಬೇವಿನಹಣ್ಣು ಎಂದರೆ ಸಂಸಾರ ಸುಖ. ಈ ಮನುಷ್ಯನೇ ಕಾಗೆ. ಕಾಗೆ ಬೇವಿನಹಣ್ಣಿಗೆ ಹ್ಯಾಗೆ ಬೀಳುತ್ತದೆಯೋ, ಅದರಂತೆ ಈ ಮನುಷ್ಯನು ಕೇವಲ ಸಂಸಾರ ಸುಖಕ್ಕೇ ಬೀಳುತ್ತಾನೆ. ಈ ಹೊಲಸು ಸಂಸಾರವು ಶ್ರೇಷ್ಠವೆಂದು ತಿಳಿದು, ಅದರೊಳಗೆ ಬಿದ್ದು ಒದ್ದಾಡಿ. ಹಾಳಾಗಿ ಹೋಗುತ್ತಾರೆ. ಇದನ್ನೆಲ್ಲ ತಿಳಿದು ಸಂಸಾರವು ಬ್ಯಾಡಾಗಿ ಸಂನ್ಯಾಸಿ ಆಗಿರುವೆ ನೋಡು.

ಚಂದ್ರಸೇನ : ಏನಂದೀ ಕೌಶಿಕಾ, ಎಂತಹ ಹುಚ್ಚ ನೀನು. ನಿನ್ನ ಮಾತಿನ ಮೇಲಿಂದ

ಸಂಸಾರದಲ್ಲಿ ಮುಕ್ತಿಯಿಲ್ಲ ಅನ್ನುವ ಹಾಗೆ ಆಯಿತಲ್ಲಾ.

ಕೌಶಿಕ : ಹೌದು ನೋಡು.

ಚಂದ್ರಸೇನ : ಹಾಗಾದರೆ ಈ ಪ್ರಪಂಚದಿಂದ ಪರಮಾರ್ಥವಿಲ್ಲವೇ?

ಕೌಶಿಕ : ಇಲ್ಲ ಇಲ್ಲ!

ಚಂದ್ರಸೇನ : ಇಲ್ಲ!

ಕೌಶಿಕ : ಇಲ್ಲ.

ಚಂದ್ರಸೇನ : **ಪದ**

ಇಲ್ಲದಿದ್ರ ಅಜಾತಶತ್ರು ಹ್ಯಾಂಗ ಮುಕ್ತಿ ಹೊಂದಿದನು
ಪ್ರಪಂಚದೊಳಗೆ ಇದ್ದ ಅವನು ಜನ್ಮಾತ್ರ
ಬೇಕಾದಾಗ ಸಂಸಾರ ಮಾಡುತ್ತಿದ್ದನಂತೆ
ಸಂಸಾರ ಮಾಡಿ ಅವನು ಕೀರ್ತಿ ಪಡೆದನು
ಪ್ರಪಂಚದಿಂದ ಮುಕ್ತಿ ಅವನಿಗೆ ಹ್ಯಾಗಾದೀತು
ಹೇಳು ಮುಕ್ತಿ ॥ ೧ ॥

ಸಂಸಾರದಿಂದ ಎಲ್ಲಾ ಸುಖ ಸಂಸಾರದಿಂದ ಮುಕ್ತಿಸುಖ
ಸಂಸಾರದೊಂದಿಗಿನ ಸಖ್ಯ ಲೋಕದಲ್ಲಿ ಸಂಸಾರ ಬಿಟ್ಟು
ಸುಖವಿಲ್ಲ ಕೇಳಪ್ಪಾ
ಹೇಳಿರುವ ಮುಖ್ಯ ಸಂನ್ಯಾಸತ್ವದಲ್ಲಿ ಸೌಖ್ಯ ಬಹಳ ಇದ್ದರೆ
ಯತಿಗಳೆಲ್ಲಿ ಇರುತ್ತಿದ್ದರು, ಸಂಸಾರದಲ್ಲಿ ಹೆಂಡರನ್ನು
ಮದುವೆ ಮಾಡುವುದು, ಹೆಂಡರಿಲ್ಲದ ಬರೆ ಋಷಿಗಳುಂಟೋ
ಮುಂದೆ ಹೇಳು ಚೆಂದದಿಂದಲಿ ಅನುಭವದಿಂದ ॥ ೨ ॥

ಮಾತು : ಏನು ಕೌಶಿಕಾ, ಸಂಸಾರದಿಂದ ಪಾರಮಾರ್ಥ ಇಲ್ಲವೆಂದು ಅನುಭವವೆಲ್ಲ ನಿನಗೇನು ತಿಳಿದಿರುತ್ತದೆ. ಅಜಾತಶತ್ರು ಮೊದಲಾದ ಅರಸರು ಹೆಂಡರು ಕೂಡ ಪ್ರಪಂಚ ಮಾಡಿಯೂ ಪಾರಮಾರ್ಥವನ್ನು ಯಾಕೆ ಪಡೆದರು. ಸಂನ್ಯಾಸಿ ಸತ್ವದಲ್ಲಿ ಸುಖವಿದ್ದರೆ ಮುಂಚೆ ವಿರಕ್ತರಾದಂಥ ಋಷಿಗಳು ಹೆಂಡರನ್ನಾಳಿ, ಹೆಂಡರ ಕೂಡ ಸಂಸಾರಮಾಡಿ ತಪೋಬಲದಿಂದ ಮೋಕ್ಷ ಹೊಂದಿದರೆಂದು, ಹೀಗೆ ಎಲ್ಲ ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಈ ಸಂನ್ಯಾಸಿ ವೇಷವನ್ನು ಬಿಟ್ಟು ಸುಮ್ಮನೆ ಮನೆಗೆ ಹೋಗಿ ನಿನ್ನ ಹೆಂಡರ ಕೂಡ ಪ್ರಪಂಚ ಮಾಡುತ್ತಾ ರಾಜ್ಯವನ್ನು ಆಳು. ನಿನ್ನ ಹೆಂಡಿತಿಯು ಮಹಾ

ಪತಿವ್ರತೆ ಇರುವಳೆಂದು ಈ ಜಗತ್ತಿನ ತುಂಬೆಲ್ಲ ಪ್ರಸಿದ್ಧವಾಗಿರುತ್ತದೆ. ಅಂತಾಕಿಯನ್ನು ಬಿಟ್ಟು ಬಾವಾ ಆಗಿ, ಬೂದಿ ಬಡಿದುಕೊಳ್ಳಲಿಕ್ಕೆ ನಿನಗೆ ಯಾರು ಉಪದೇಶ ಮಾಡಿದರು? ಕೌಶಿಕಾ, ನನ್ನ ಮಾತು ಕೇಳು. ಸುಮ್ಮನೆ ಮನೆಗೆ ಹೋಗುತ್ತೀಯೋ ಇಲ್ಲೋ ಹೇಳು?

ಕೌಶಿಕ : ಚಂದ್ರಸೇನಾ, ನೀನು ಎಷ್ಟೇ ಹೇಳಿದರೂ ನಾನು ಕೇಳುವುದಿಲ್ಲ ನೋಡು.

ಚಂದ್ರಸೇನ : ಅದೇಕೆ ಕೇಳುವುದಿಲ್ಲ. ನಾನು ನಿಮಗೆ ಕೆಡಕು ಹೇಳುವೆನೇನು? ಬಾವಾ ಆಗು ಅಂತ ಉಪದೇಶ ಮಾಡಿದವರ್‍ಯಾರು ಅನ್ನುವುದನ್ನು ಹೇಳು.

ಕೌಶಿಕ : ಚಂದ್ರಸೇನಾ ನೀನು ನನ್ನನ್ನು ತೇಟ್ ಹುಚ್ಚನನ್ನಾಗಿ ಮಾಡಿ ಬಿಟ್ಟಿರುವೆಯಲ್ಲಾ. ಪ್ರಸಿದ್ಧ ಜ್ಞಾನಿಗಳಿಂದ ಉಪದೇಶ ತಕ್ಕೊಂಡು ವಿರಕ್ತನಾಗಿದ್ದೇನೆ. ನನಗೆ ಯಾತಕ್ಕೆ ಅನ್ನುವಿ ಸುಮ್ಮನೇ ಇರು.

ಚಂದ್ರಸೇನ : ಎಲೋ ನೀನು ಮಹಾಜ್ಞಾನಿಗಳಿಂದ ಉಪದೇಶ ತೆಗೆದುಕೊಂಡಿರುವೆ ಏನು?

ಕೌಶಿಕ : ಹೌದು ಮಹಾಜ್ಞಾನಿಗಳಿಂದ ಉಪದೇಶ ತೆಗೆದುಕೊಂಡಿರುತ್ತೇನೆ.

ಚಂದ್ರಸೇನ : ಅದೆಂಥಾ ಜ್ಞಾನಿಗಳೋ ನಿನಗೆ ಉಪದೇಶ ಮಾಡಿರುವವರು? ಹಾಗಾದರೆ ಆ ಜ್ಞಾನಿಗಳು ಯಾರು ಅನ್ನುವುದನ್ನು ಹೇಳು?

ಕೌಶಿಕ : ಯಾರೆಂದರೆ, ನಮ್ಮ ಉಡುತಡಿ ಪಟ್ಟಣದೊಳಗೆ ಮಹಾದೇವಿ ಎನ್ನುವಂಥ ಒಬ್ಬ ವಿರಕ್ತಳು ಶಿವಜ್ಞಾನ ಸಂಪನ್ನಳಾಗಿ ಶಿವಸಾಮ್ರಾಜ್ಯವನ್ನಾಳುತ್ತಿರುವಳು. ಆ ತಾಯಿಯೇ ಉಪದೇಶವನ್ನು ಕೊಟ್ಟು ನನ್ನನ್ನು ಕರುಣಿಸಿರುವಳು ನೋಡು.

ಚಂದ್ರಸೇನ : ಕೌಶಿಕಾ, ನಿನಗೆ ಉಪದೇಶ ಮಾಡಿರುವವಳು ಆ ಮಹಾದೇವಿಯೇ?

ಕೌಶಿಕ : ಹೌದು.

ಚಂದ್ರಸೇನ : ಅಂದಮೇಲೆ ತೀರಿಹೋಯಿತು ಕೇಳುವುದೇನು?

ಕೌಶಿಕ : ಚಂದ್ರಸೇನಾ ಅದೇಕೆ ಹಾಗೆನ್ನುವೆ? ಹೇಳು.

ಚಂದ್ರಸೇನ :

ಪದ

ಏನೆಂದು ಹೇಳಲಿ ಕೌಶಿಕಾ ಅವರನ್ನು ನಂಬಿ
ನೀ ಆದೀಯಲ್ಲೋ ಮೂರ್ಖಾ

ಆ ತರುಣಿ ಮಹಾದೇವಿ ಜಗದೊಳು ಮುರುಕು
ಶಾಸ್ತ್ರವ ಬೋಧಿಸುತಲಿ
ಈ ನರರನೆಲ್ಲಾ ಈ ನರಕದಲ್ಲಿ ತಿರುಗಾಡಿಸಿ ಕೆಟ್ಟು ಬಾ
ಹೋಮದ ತಂತ್ರವ ಬಲ್ಲೆನು ಸೋಗ
ಸಂಗೊಳಿಸುವ ಮಾಯೆ
ನಿದ್ರೆಯಲ್ಲಿ ಮಲಗಿ ಮಹೇಂದ್ರ ಜಾಲವನ್ನು ಒಗೆದು
ಸಾಧಿಸಿ ಮೆರೆಯುವಳು ತಾನು ॥

ಮಾತು : ಕೌಶಿಕಾ. ಮಹಾದೇವಿಯು ಯಾವತ್ತೂ ಜನರನ್ನೆಲ್ಲಾ ಮರುಳು ಮಾಡುವಂತಾ ಮಾಯಗಾರತಿ ಇರುವಳು ಬಲ್ಲೆಯೋ. ಆಕೆಯು ಜನನ–ಮರಣ, ಜಲಸ್ತಂಬ, ಅಗ್ನಿಸ್ತಂಬ ಇತಿಂಥಾ ಸಿದ್ಧಿಗಳನ್ನು ಪಡೆದು, ಆ ಸಿದ್ಧಿಗಳ ಬಲದಿಂದ ಈ ಜಗತ್ತನ್ನು ಮೋಸ ಮಾಡುತ್ತಿರುವಳು. ಬಳ್ಳಿಗಾಂವಿ ಪುರದೊಳಗೆ ಅಲ್ಲಮಪ್ರಭು ಎನ್ನುವ ಒಬ್ಬ ವಿರಕ್ತನು ಇರುವನಂತೆ, ಅವನ ಸುದ್ದಿಯನ್ನು ಕೇಳಿಲ್ಲವೇನು? ಮಹಾದೇವಿಯ ಕಥೆಯನ್ನೂ ಕೇಳಿಲ್ಲವೇನು? ಅಲ್ಲಮನಿಗೂ ಆ ಮಹಾದೇವಿಗೂ ಬಹಳೇ ವ್ಯೆವಾಟ ಇದೆ. ಅಲ್ಲಿಂದಾ ಅವರಿಬ್ಬರೂ ಮೇಲಿಂದ ಮೇಲೆ ಜನರಿಗೆ ಹುಚ್ಚು ಹಚ್ಚಲಿಕ್ಕೆ ಹತ್ತಿರುವರು. ಅವರ ಉಪದೇಶಕ್ಕೆ ಮರುಳಾಗುವಿಯೇನು? ನಿನಗೆ ಬುದ್ಧಿ ಎಲ್ಲಿರುವುದು. ಸುಮ್ಮನೆ ನನ್ನ ಮಾತು ಕೇಳಿ ಮನೆಗೆ ಹೋಗು.

ಕೌಶಿಕ : ಚಂದ್ರಸೇನಾ, ಮಹಾದೇವಿ, ಅಲ್ಲಮಪ್ರಭುಗಳ ಸತ್ವ ತಿಳಿಯದೇ ಕತ್ತೆಯ ಹಾಗೆ ಎತ್ತ ಒದರುತ್ತೀ. ಇನ್ನೊಮ್ಮೆ ಅವರನ್ನು ನಿಂದೆ ಮಾಡಿದರೆ ನಿನ್ನ ನಾಲಿಗೆಯನ್ನು ಕಿತ್ತೇನು? ಥೂ ಪಾಪಿಷ್ಟಾ, ಚಂಡಾಲನೇ ನಿನ್ನ ಕೂಡ ಮಾತನಾಡುವುದು ಸಾಕು.

ಚಂದ್ರಸೇನ : ಶಹಭಾಷ್ ಕೌಶಿಕಾ, ನಾನು ಪಾಪಿಷ್ಠಾ, ನೀನು ಪುಣ್ಯವಂತಾ ಬಲ್ಲೆಯಾ. ಅಂದಲ್ಲಿಯೇ ಹೆಂಡರು, ಮಕ್ಕಳು ಎಲ್ಲಾ ಬಿಟ್ಟು ಕೊಟ್ಟು, ಮ್ಯೆತುಂಬ ಬೂದಿ ಬಡಕೊಂಡು, ಮನೆಮಾರು ಬಿಟ್ಟುಕೊಟ್ಟು, ಗುಡ್ಡಾ ಸೇರಿದಿ. ಮಹಾದೇವಿಯನ್ನು ನಂಬಬೇಡಾ. ಅದರಿಂದ ಎಂದಿಗೂ ಸ್ಗತಿ ಹೊಂದಲಿಕ್ಕಿಲ್ಲಾ. ಸಮೀಪದಲ್ಲಿ ಬದರಿಕಾಶ್ರಮದಲ್ಲಿ ಕ್ಯಾತಯ್ಯ ಎನ್ನುವ ಋಷಿಗಳು ಇರುತ್ತಾರೆ. ಅವರನ್ನಾದರೂ ಕೇಳಿ, ಆ ಮಹಾದೇವಿಯ ಮೇಲಿನ ಆಶೆ ಬಿಟ್ಟು ಬಿಡು. ತಿಳಿಯಿತಿಲ್ಲೊ, ನಾನು ಹೋಗುತ್ತೇನೆ.

ಕೌಶಿಕ : ಏನು ಚಂದ್ರಸೇನಾ, ಇಲ್ಲಿ ಸಮೀಪದಲ್ಲಿ ಯಾವ ಋಷಿಗಳು ಇರುತ್ತಾರೆ.

ಚಂದ್ರಸೇನ : ಕ್ಯಾತಯ್ಯ ಮಹಾಋುಷಿಗಳಿರುತ್ತಾರೆ ನೋಡು.

ಕೌಶಿಕ : ಅವರು ಎಂಥವರಿರುವರು?

ಚಂದ್ರಸೇನ : ಅವರು ಜಗತ್ಪ್ರಸಿದ್ಧರಾದಂಥಾ ಋಷಿಗಳು. ಅವರ ಮಹಾತ್ಮ್ಯವು ಹರಿಹರ ಬ್ರಹ್ಮಾದಿಗಳಿಗೂ ಸಹಿತ ತಿಳಿಯದು. ಅವರನ್ನು ನೀನು ದರ್ಶನ ಮಾಡಿದರೆ ನಿನ್ನ ಜನ್ಮ ಉದ್ಧಾರವಾಯಿತೆಂದು ತಿಳಿ. ಅವರ ಪಾದದರ್ಶನದಿಂದ ಸದ್ಗತಿಯಾಗುತ್ತದೆ. ಅವರ ದರ್ಶನ ಇಚ್ಛೆ ನಿನಗಿದ್ದರೆ, ನೀನು ಹೀಗೆಯೇ ಅರ್ಧ ಮೈಲು ಹೋಗು! ಅಲ್ಲಿಂದ ಪೂರ್ವಕ್ಕೆ ಹೋದರೆ. ಅಲ್ಲಿ ಒಂದು ವಟವೃಕ್ಷದ ಬಳಿಯಲ್ಲಿ ಯೋಗ ಸಮಾಧಿಯಲ್ಲಿ ಕುಳಿತು ಬಿಟ್ಟಿರುತ್ತಾರೆ ತಿಳಿಯಿತಿಲ್ಲೋ. ಬೇಕಾದರೆ ಹೋಗು ಬೇಡವಾದರೆ ಬಿಡು. ಯಾಕೆ ಏನಂತಿ? ಹೋಗುತ್ತೀಯೋ ಇಲ್ಲವೋ?

ಕೌಶಿಕ : ಋಷಿಗಳ ಪಾದದರ್ಶನಕ್ಕೆ ಹೋಗದೆ ಏನುಮಾಡಲಿ? ಅಕಸ್ಮಾತ ಇಲ್ಲಿಗೆ ಬಂದೆನು. ಅವರು ನಮ್ಮಂಥವರ ಕೂಡ ಮಾತನಾಡುವರೇನು?

ಚಂದ್ರಸೇನ : ಏನು, ಕೌಶಿಕಾ ಮಾತಾಡದೇನು ಮಾಡ್ಯಾರು. ಎರಡನೇಯವರ ಉಪಚಾರ ಮಾಡುವುದರಲ್ಲಿ ಅವರಂಥವರು ಈ ಪೃಥ್ವಿಯ ಮೇಲೆ ಯಾರೂ ಇಲ್ಲಾ. ಅವರು ತ್ರಿಕಾಲಜ್ಞಾನಿಗಳು ಇರುತ್ತಾರೆ. ನಿಮ್ಮಂಥವರು ಹೋದ ಕೂಡಲೇ ಭೂತ, ಭವಿಷ್ಯ, ವರ್ತಮಾನ ಕಾಲಗಳನ್ನೆಲ್ಲ ನೀವು ಕೇಳದಿದ್ದರೂ ಮುಂಚಿತವಾಗಿಯೇ ಹೇಳುತ್ತಾರೆ. ಇದು ಹಿತಾ, ಇದು ಅಹಿತಾ ಅನ್ನುವುದನ್ನು ತಿಳಿಸಿಕೊಡುತ್ತಾರೆ. ಕೇಳಿದೆಯಾ ಇವನ್ನೆಲ್ಲಾ. ನೀನು ವಿಪರೀತ ಮಾಡಿಕೊಂಡಿರುವಿ. ನಿನಗೆ ಬಹಳ ಹೇಳಿಯಾಯಿತು. ನಾನು ಇನ್ನು ಬೇಟೆಯಾಡುತ್ತ ನನ್ನ ಊರ ಹಾದಿ ಹಿಡಿಯುತ್ತೇನೆ.

ಕೌಶಿಕ : ಒಳ್ಳೆಯದು ಹೋಗುವಂಥವನಾಗು.

ಚಂದ್ರಸೇನ : (ಸ್ವಗತ) ನಾನೀಗ ಋಷಿವೇಷ ಧರಿಸಿ ಅವನು ಬರುವಲ್ಲಿ ಕೂಡ್ರುವೆನು.

ದೃಶ್ಯ

(ಚಾರುಮತಿಯು ಋಷಿಯ ವೇಷ ಧರಿಸಿ ಕೂಡ್ರುವಳು.)

ಕೌಶಿಕ : ಸ್ವಾಮಿ ಪ್ರಣಾಮಗಳು. ನೀವು ಇಲ್ಲಿ ವಾಸಮಾಡಿ ಎಷ್ಟು ವರ್ಷಗಳಾದವು?

ಋಷಿ : ನಾನು ವಾಸಮಾಡಿ ಸರಾಸರಿ ಐದುನೂರು ವರ್ಷ ಆಯಿತು.

ಕೌಶಿಕ : ಏನು ಸ್ವಾಮಿ ಮನುಷ್ಯ ಜನ್ಮಕ್ಕೆ ನೂರುವರ್ಷ ಆಯುಷ್ಯ ಎಂದು ಹೇಳುತ್ತಾರೆ. ಹೀಗಿದ್ದೂ ನೀವು ಐದುನೂರು ವರ್ಷಗಳವರೆಗೆ ಹೇಗೆ ಬಾಳಿದಿರಿ ಸ್ವಾಮಿ ತಿಳಿಸಿ ಹೇಳಿ.

ಋಷಿ : ಎಲವೋ ತಪಸ್ಸಿನ ಶಕ್ತಿಯೆಂದರೆ ಎಂಥಾದ್ದೆಂದು ತಿಳಿದಿರುವಿ. ಅಂತಾ ತಪಸ್ಸಿನ ಬಲದಿಂದ ನಾನು ಇನ್ನು ಸಾವಿರ ವರ್ಷವಾದರೂ ಹೀಗೆಯೇ ಇರುತ್ತೇನೆ ನೋಡು. ಏನೋ ನೀನು ನನಗೆ ಗುರುಗಳೆಂದು ಅಂದೆಯಲ್ಲಾ ನಾನು ಇನ್ನೂ ಗುರುಸ್ವರೂಪವನ್ನು ಹೊಂದಿಲ್ಲಾ ಆದ್ದರಿಂದ ಹಾಗೆ ಅನ್ನಲಾಗದು.

ಕೌಶಿಕ : ಸ್ವಾಮಿ, ಇಂಥ ತಪೋಶಕ್ತಿಯನ್ನು ಪಡೆದಂಥ ನೀವು ಹೀಗಿದ್ದೂ ಗುರುಸ್ವರೂಪ ಹೊಂದಿಲ್ಲವೆಂದು ಅನ್ನುವಿರಲ್ಲಾ?

ಋಷಿ : ಎನೋ ನೀನು ಕೇವಲ ಆಯುಷ್ಯವನ್ನು ನೋಡಿ ಗುರು ಎಂದು ಕರೆಯುತ್ತೀಯಲ್ಲಾ. ಗುರುಸ್ವರೂಪವೆಂದರೆ ಸಾಧಾರಣವಲ್ಲಾ. ನನ್ನೇನು ಮಾಡುತ್ತೀ ಲಕ್ಷಾಂತರ ಸಂವತ್ಸರಗಳು ಕಳೆದುಹೋದರೂ ಎಂದೂ ಮುಪ್ಪು ಆಗದಂಥಾ ಎಷ್ಟೋ ಮುನಿಗಳು ಹಾಗೇ ಇದ್ದಾರೆ. ಅಂಥವರು ಸಹಿತ ಗುರು ಎನಿಸಿಕೊಳ್ಳಲಿಕ್ಕೆ ಹೆದರಿದರು. ಅಂದ ಮೇಲೆ ನನ್ನಂಥವನ ಪಾಡೇನು? ನಾನು ಇನ್ನು ಹ್ಯಾಗೆ ಗುರುವಾಗುವೆ ಎನ್ನುವುದನ್ನು ತಿಳಿ.

ಕೌಶಿಕ : ಸ್ವಾಮಿ, ನನಗೆ ನೀವು ಹಾಗೆ ಮಾತಾಡುವುದರ ಸಲುವಾಗಿ ಹೀಗೆ ಹೇಳುತ್ತಲಿರುವಿರಿ. ಈಗ ಸದ್ಯಕ್ಕೆ ಈ ಜಗತ್ತಿನಲ್ಲಿ ನಿಮ್ಮಂಥಾ ಗುರುಗಳು ಇಲ್ಲವೆಂದು ತಿಳಿದು ಬಿಡಿರಿ.

ಋಷಿ : **ಪದ**

ಹಾಗಾದರೆ ಗುರು ಎನ್ನತಿದ್ದಿ ಎನಗಾಗಿ
ತಪಃಶಕ್ತಿಯಿಂದ ಎನ್ನಯ ವಯಸ್ಸು ಬೆಳೆಯುವುದು
ಎನ್ನ ತಪಃಶಕ್ತಿಯ ಮಹಿಮೆಯ ನೀನು ಅರಿತಿಲ್ಲವೋ
ಗುರುವೆಂಬ ವಾರ್ತೆಯ ಕೇಳಿ ನಾನು ಸರಸಾಗಿ
ಹೇಳುವೆನೀಗ ನೀ ಅರಸನೇ ॥ ೧ ॥

ಅರಣ್ಯವಾಸಿಗೆ ಈಗ ಗುರುವೆಂತಿದಿಯೋಗಿ ಅರಸು
ಬಕದಾಲ್ಯ ಋಷಿ ಎಂಬವನು
ಎಷ್ಟೋ ಯುಗದಿ ತಪದಲ್ಲಿಹನು ಗುರು

ಎನಿಸಿ ಮರೆಯಲು ಅವನಿಗೆ ಸರಿಬಾರದು
ಕೇಳು ಅವನ ಮನ ॥ ॥ ೨ ॥

ಮಾತು: ಎಲೋ ನೀನು ಆಯುಷ್ಯ ಬೆಳೆದವರಿಗೆ ಗುರು ಎಂದು ಅನ್ನುತ್ತೀಯಲ್ಲಾ! ಬಕದಾಲ್ಯ ಋಷಿಯ ಚರಿತ್ರೆಯನ್ನು ಕೇಳಿಲ್ಲವೇನು? ಅವನ ಆಯುಷ್ಯವು ಅಷ್ಟು ಇಷ್ಟು ಅಂತಾ ಗೊತ್ತು ಹತ್ತೀತೇನು. ಲಕ್ಷ ವರುಷ ಕಳೆದರೆ ಒಂದು ಯುಗ ಆಗುತ್ತದೆ. ಇಂಥಾ ಸಾವಿರಾರು ಯುಗಗಳು ಎಂದು ತಿರುಗುತ್ತವೆಯೋ ಅಂದಿಗೆ ಚತುರ್ಮುಖ ಬ್ರಹ್ಮನಿಗೆ ಹಗಲು ಹೋಗಿ ರಾತ್ರಿ ಬರುತ್ತದೆ. ಈ ಮಾತಿನ ಮೇಲಿಂದಲೇ ನೂರಾರು ವರ್ಷ ಆದ ಮೇಲೆ ಒಬ್ಬ ಬ್ರಹ್ಮನು ಲಯವಾಗುತ್ತಾನೆ. ಇಂಥ ಬ್ರಹ್ಮರು. ಇಪ್ಪತ್ತು ಮಂದಿ ಲಯವಾದರೂ ಆ ಬಕದಾಲ್ಯ ಋಷಿಯು ಹಾಗೆ ಕುಳಿತುಕೊಂಡು ತಪಸ್ಸು ಮಾಡುತ್ತಿದ್ದನಂತೆ. ಇಷ್ಟು ಮಂದಿ ಬ್ರಹ್ಮರನ್ನು ತನ್ನ ಕಣ್ಮುಟ್ಟ ಲಯವಾಗಿ ಹೋದುದನ್ನು ನೋಡಿದರೂ ತಮಗೆ ಇನ್ನೂ ಗುರುಪದವಿ ಗುರುತ್ವ ಬಂದಿಲ್ಲವೆಂದು ತಿಳಿದು ಸ್ವತಃ ತನ್ನ ಬಾಯಿಯಿಂದಾ ಅನ್ನುತ್ತಿರುವನು. ನೋಡು ಅರಸಾ, ಅಂಥವನೇ ಹಾಗೆ ಅಂದಮೇಲೆ ನನ್ನಂಥವನ ಪಾಡೇನು? ಇದನ್ನೆಲ್ಲ ತಿಳಿದು ನನಗೆ ನಮಸ್ಕಾರ ಮಾಡಬೇಡಾ. ನಾನೂ ನಿನ್ನಂತೆಯೇ ಇರುತ್ತೇನೆ. ಕೇಳಿದೆಯಾ ಇನ್ನು ಮೇಲೆ ದೂರ ನಿಂತು ಮಾತನಾಡು.

ಕೌಶಿಕ : ಹಾಗಾದರೆ ಈ ಭೂಮಿಯ ಮೇಲೆ ಗುರು ಅನಿಸಿಕೊಂಡವರು ಯಾರಿದ್ದಾರಂತಿರಿ?

ಋಷಿ : ಹಾಗಾದರೆ ಹಿಮಾಲಯ ಪರ್ವತದೊಳಗೆ ಚಿದಂಬಕಾಶ್ರಮ ಅನ್ನುವಂಥ ಪುಣ್ಯಸ್ಥಾನವಿರುವುದು. ಈ ಪುಣ್ಯಸ್ಥಾನದಲ್ಲಿ ಸಚ್ಚಿದಾನಂದ ಅನ್ನುವಂಥ ಒಬ್ಬ ಋಷಿಯಿರುವನು. ಅವರನ್ನು ಬಿಟ್ಟು ಈ ಭೂಮಿಯ ಮೇಲೆ ಯಾರೂ ಇಲ್ಲವೆಂದು ತಿಳಿದುಬಿಡು. ಮತ್ತು ನೀನು ಗುರುಸೇವೆ ಮಾಡಬೇಕೆಂದು ಯಾರದೋ ಮಾತನ್ನು ಕೇಳಿ ತಯ್ಯಾರಾಗಿ ಹೊರಟು ಬಂದಿರುವೆಯಲ್ಲಾ. ನಿನಗೆ ಉಪದೇಶ ಮಾಡಿದರೆ ಮುಂದೆ ನಿನಗೆ ಗುರುಗಳಾಗುವುರೇನು? ಮತ್ತು ಅವರು ಎಂಥವರಿರುವರೆಂದರೆ, ಜನರನ್ನೆಲ್ಲ ಬೆಲ್ಲದಂತಾ ಮಾತಿನಿಂದ ಮರುಳು ಮಾಡಿ ಘಾತಮಾಡಲಿಕ್ಕೆ ಹತ್ತಿಸುವಂಥವರು. ತಿಳಿಯಿತೇ. ನಾನೇನೂ ಸುಳ್ಳು ಹೇಳುವುದಿಲ್ಲ. ತಿಳಿದು ಬಿಡು.

ಕೌಶಿಕ : (ಸ್ವಗತ) ಶಿವ! ಶಿವಾ!! ಆ ಮಹಾದೇವಿಯ ಉಪದೇಶದಿಂದ ಅಲ್ಲಮಪ್ರಭುಗಳ ಕಡೆಗೆ ಹೋಗಬೇಕೆಂದು ಹೊರಟು ಬಂದೆನು. ಇಷ್ಟರೊಳಗಾಗಿ ಈ ಋಷಿಗಳು ಅದನ್ನು ತಿಳಿದುಕೊಂಡು ಬಿಟ್ಟರು. ಇರಲಿ ನಾನು ಮತ್ತೆಲ್ಲಿಯೂ ಹೋಗಬಾರದು. ಇಲ್ಲಿಯೇ ನಿಮ್ಮ ದರ್ಶನಕ್ಕೆ ಬಂದಿರುವೆನೆಂದು ಸುಳ್ಳು ಹೇಳಿ ಅವರನ್ನು ಚೆನ್ನಾಗಿ ಪರೀಕ್ಷೆ ಮಾಡುತ್ತೇನೆ. (ಪ್ರಕಟ) ಸ್ವಾಮಿ ನಾನು ಮತ್ತೆಲ್ಲಿಯೂ ಹೋಗುವದರ ಸಲುವಾಗಿ ಬಂದಿಲ್ಲ. ನಿಮ್ಮ ಕೀರ್ತಿಯನ್ನು ಕೇಳಿ ನಿಮ್ಮ ದರ್ಶನಕ್ಕೆ ಬಂದಿರುವೆನು.

ಋಷಿ : ಛೇ ದುಷ್ಟಾ ನೀನು ನನ್ನ ಮುಂದೆ ಸುಳ್ಳು ಹೇಳುತ್ತೀಯಾ ಭ್ರಷ್ಟಾ. ಈಗ ಸದ್ಯಕ್ಕೆ ಸುಳ್ಳು ಹೇಳಲಿಕ್ಕೆ ಹತ್ತಿರುವಿ. ಮತ್ತು ಬಾಯಿಂದ ಸುಳ್ಳು ಹೇಳುವುದಿಲ್ಲ ಅನ್ನುತ್ತಿರುವೆ. ನಾನು ಯಾರೆಂದು ತಿಳಿದಿರುವೆ. ನಿಮ್ಮ ಅಪ್ಪನ ಬಿಟ್ಟು ನಿಮ್ಮ ಮುತ್ತಜ್ಜನ ಸುದ್ದಿಯನ್ನು ನಾನು ಬಲ್ಲೆನು. ಕೇಳಿದೆಯಾ ನನ್ನಂಥಾ ತ್ರಿಕಾಲ ಜ್ಞಾನಿಯ ಮುಂದೆ ಸುಳ್ಳು ಹೇಳಿದರೆ ಎಲ್ಲಿ ನಾಟಬೇಕು. ನಾನು ತ್ರಿಕಾಲ ಜ್ಞಾನಿಯು. ಪರಲೋಕವೆಂಬ ಪ್ರದೇಶಕ್ಕೆ ಈಗ ದೂರದರ್ಶನ ಇದೆ. ತಿಳಿಯಿತೇ. ನೀನು ಉಡುತಡಿ ಪಟ್ಟಣದ ಅರಸು ಕೌಶಿಕಾ. ನೀನು ಓರ್ವ ಮಹಾದೇವಿಯ ಉಪದೇಶಕ್ಕೆ ಮರುಳಾಗಿ ಮನೆ ಬಿಟ್ಟು ಅಲ್ಲಮಪ್ರಭುವಿನ ಹತ್ತಿರ ಹೋಗಬೇಕೆಂದು ಹೊರಟು ಬಂದಿರುವೆ. ಈ ಮಹಾದೇವಿಯು ಇಲ್ಲೇ ನನ್ನ ಸಮೀಪದಲ್ಲಿ ಬಂದಿರುವಳು. ಯಾಕೆ ಇದು ಸುಳ್ಳೋ ಅಥವಾ ನಿಜವೋ? ಇದನ್ನು ಸುಳ್ಳು ಅಂದರೆ ನಿನ್ನ ಹಲ್ಲು ಉಚ್ಚ್ಯಾವು ಜೋಕೆ. ನಿಜ ಹೇಳು.

ಕೌಶಿಕ : ಹೇ ಸ್ವಾಮಿ ನೀವು ಹೇಳಿದುದು ಎಲ್ಲವೂ ನಿಜ.

ಋಷಿ : ಹಾಗಾದರೆ ಸುಳ್ಳು ಯಾಕೆ ಹೇಳಿದಿ?

ಕೌಶಿಕ : ಸ್ವಾಮಿ ನಿಮ್ಮನ್ನು ಪರೀಕ್ಷೆ ಮಾಡಬೇಕೆಂದು ಇಷ್ಟೆಲ್ಲಾ ಸುಳ್ಳು ಮಾತನಾಡಿದೆ ಕ್ಷಮಿಸಬೇಕು.

ಋಷಿ : ನನ್ನನ್ನು ಪರೀಕ್ಷೆ ಮಾಡಲು ಬಂದಿರುವೆಯಾ. ಹರಿಹರ ಬ್ರಹ್ಮರುಗಳಿಗೂ ಸಹಿತ ನನ್ನನ್ನು ಪರೀಕ್ಷೆ ಮಾಡಲು ಸಾಮರ್ಥ್ಯ ಬರಲಿಲ್ಲ ಎಂದ ಮೇಲೆ ನಿನ್ನಂಥಾ ಕುನ್ನಿಯಿಂದ ಆಗುವುದೇನು. ನನ್ನನ್ನು ಪರೀಕ್ಷೆ ಮಾಡುವಷ್ಟು ಬುದ್ಧಿಯು ನಿನಗಿದ್ದರೆ, ನೀನ್ಯಾಕೆ ಆ ಮಹಾದೇವಿಯ ಉಪದೇಶಕ್ಕೆ ಮರುಳಾಗಿ ಆ ತುಡುಗ ಅಲ್ಲಮನ ಹತ್ತಿರ ಹೋಗಲಿಕ್ಕೆ ಯಾತಕ್ಕೆ ಬಂದಿರುವಿ? ಮತ್ತೆಲ್ಲಿಯಾದರೂ ನಿಜವಾದ ಸಾಧುಗಳ ಸೇವೆ ಮಾಡಿದರೆ

ಉದ್ಧಾರವಾಗುತ್ತೀ. ಈಗ ನೀನು ದೊಡ್ಡದೊಂದು ಕಲ್ಲು ಕಟ್ಟಿಗೊಂಡು ಮಡುವಿನಲ್ಲಿ ಬೀಳಲಿಕ್ಕೆ ಹತ್ತಿರುವೆ, ನಿಮ್ಮಂಥವನು ನಮ್ಮನ್ನು ಪರೀಕ್ಷೆ ಮಾಡುತ್ತೀಯಾ. ಛೇ ಮೂರ್ಖಾ ಅತ್ತ ನಡೆ.

ಕೌಶಿಕ : ಏನು ಸ್ವಾಮಿ ನನಗೆ ಆ ಮಹಾದೇವಿಯು ಉಪದೇಶ ಮಾಡಿದಂದಿನಿಂದ ಅಲ್ಲಮಪ್ರಭುಗಳ ಸೇವೆಮಾಡುವ ಬಯಕೆಯಿಂದ ಇಲ್ಲಿಗೆ ಬಂದದ್ದು ಕಲ್ಲು ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ ಆಯಿತೇನು?

ಋಷಿ : ಹೌದು ಮಡುವಿನಲ್ಲಿ ಬಿದ್ದಂತೆ ಆಯಿತು ನೋಡು ರಾಜಾ!

ಕೌಶಿಕ : ಹಾಗಾದರೆ ಆ ಮಹಾದೇವಿ ಮತ್ತು ಅಲ್ಲಮಪ್ರಭುಗಳು ಎಂದರೆ ಬಹಳೇ ಕನಿಷ್ಟರೇನು?

ಋಷಿ : ಕನಿಷ್ಟ ಎನ್ನುವುದೇಕೆ? ಅವರು ಲೋಕದ ತುಡುಗರು. ಇಷ್ಟೇ ಅಲ್ಲಾ, ಜಗತ್ತಿಗೆಲ್ಲಾ ಹುಚ್ಚು ಹಿಡಿಸಿ, ಮೋಜು ಮಾಡುವವರು. ನಿಮ್ಮಂಥಾ ರಾಜಾಧಿರಾಜರನ್ನು ದೇಶಕೋಶಗಳನ್ನೆಲ್ಲಾ ಬಿಡಿಸಿ ದಿಕ್ಕಿಲ್ಲದ ಪರದೇಶಿಯಂತೆ ಮಾಡಿ ಬೇಗನೆ ಗೊತ್ತಿಗೆ ಹಚ್ಚಿಬಿಡುವರು ಕೇಳಿದೆಯಾ! ನೀನು ಅಂಥವರನ್ನು ಬೆನ್ನು ಹತ್ತಿರುವೆಯೆಂದಮೇಲೆ ನೀನು ಯಾವ ಮಾರ್ಗಕ್ಕೂ ಹತ್ತುವುದಿಲ್ಲ. ನಡೆ ಅತ್ತ ಕಡೆ. ನನ್ನ ಮುಂದೆ ನಿಲ್ಲಬೇಡಾ. ಅವರ ಮಾತು ಕೇಳಿ ಎಲ್ಲಿಯಾದರೂ ಹಾಳಾಗಿ ಹೋಗು. ಹೊರಬೀಳು ಮೊದಲು ನನ್ನ ಆಶ್ರಮವನ್ನು ಬಿಡು.

ಕೌಶಿಕ : ಅಂಥ ಮಹಾತ್ಮರಿಗೆ ಕಂಡ ಕಂಡ ಹಾಗೆ ಮಾತಾಡಿಬಿಟ್ಟಿರಲ್ಲಾ, ಅವರು ಜ್ಞಾನಿಗಳಲ್ಲವೆ?

ಋಷಿ : ನಿಜವಾದ ಜ್ಞಾನಿಗಳು ಯಾರೆಂದರೆ–ಆತ್ಮಸಾಕ್ಷಾತ್ಕಾರ ಮಾಡಿ ಕೊಂಡವರು. ಸುಳ್ಳು ಜ್ಞಾನಿಗಳೆಂದರೆ– ಕೇವಲ ಡಾಂಭಿಕತನ ಹೇಳುವವರು.

ಕೌಶಿಕ : ಇದನ್ನೆಲ್ಲಾ ನಾನು ಮೊದಲೇ ಪರೀಕ್ಷೆ ಮಾಡಿಯೇ ಅವರ ಪಾದಕ್ಕೆ ಹೋಗಿ ಬಿದ್ದಿರುವೆನೆಂದು ತಿಳಿದು ಬಿಡು.

ಋಷಿ : ಏನೋ, ನೀನು ಬಹಳೇ ತಿಳಿದವರಂತೆ ಮಾತನಾಡುತ್ತೀಯಲ್ಲ! ಆದರೆ ಅವರ ಮಹಾತ್ಮ್ಯವು ನಿನಗೆ ಹೇಗೆ ತಿಳಿಯಿತು ಹೇಳು?

ಕೌಶಿಕ :

ಪದ

ನಾನು ಪರೀಕ್ಷೆಯನು ಮಾಡಿರುವೆ
ಅವರ ಸತ್ವವೆಲ್ಲವ ನೋಡಿರುವೆ ॥ ಪಲ್ಲ ॥

ಶಿವಜ್ಞಾನಿಗಳೇ ತಾನಹುದು
ಶಿವಶರಣರೆಂಬ ಪ್ರಖ್ಯಾತಿ ತಾನಹುದು ಕೀರ್ತಿ ।

ಮಾತು: ಛೀ, ಹಾಗೆನ್ನಬಾರದು ಸ್ವಾಮಿ, ಅದನ್ನೆಲ್ಲ ಪರೀಕ್ಷೆ ಮಾಡಿ ಸಂತುಷ್ಟಗೊಂಡು, ಅನುಭವ ಮಾಡಿಕೊಂಡು ಹೋಗಿ ಅವರ ಪಾದಕ್ಕೆ ಬಿದ್ದಿರುವೆನು.

ಋಷಿ : ನೀನು ಅವರಲ್ಲಿ ಏನು ಪರೀಕ್ಷೆ ಮಾಡಿರುವಿ? ನಿನಗೇನು ತಿಳಿಯುತ್ತದೆ? ಇರಲಿ! ಅವರಿಂದ ಸದ್ಗತಿ ದೊರೆಯುವುದೋ!

ಕೌಶಿಕ : ಸ್ವಾಮಿ, ಅಲ್ಲಮಪ್ರಭು ಮತ್ತು ಮಹಾದೇವಿಯವರನ್ನು ನಂಬಿದರೆ ಅಗತ್ಯವಾಗಿ ಸದ್ಗತಿ ದೊರೆಯುವುದು.

ಋಷಿ : ಕೌಶಿಕಾ, ಅವರಿಂದ ಏನಾದರೂ ಆಗುವುದೆಂದು ತಿಳಿದಿರುವೆಯಾ, ಕೆಲವರು ಬರೇ ಬಂಗಾಲಿ ವಿದ್ಯೆಯಿಂದ ಪಂಡಿತರೆನಿಸಿರುತ್ತಾರೆ. ಅಂಥವರು ಜನರನ್ನು ಮರುಳು ಮಾಡಿ. ಬೆಳಕಿಕೆ ಬಂದಿರುತ್ತಾರೆ. ಇಂಥಾದ್ದೆಲ್ಲಾ ನಿನಗೇನು ಗೊತ್ತು? ಬಂಗಾಲಿ ವಿದ್ಯೆ ಅಂದರೆ ಏನೆಂದು ತಿಳಿದಿರುವಿ? ಗಾಳಿ ಗಂಟು ಅಡವಿ ಪಾಲು ಅಂದಮೇಲೆ ಅವರಿಂದ ಎಲ್ಲಿ ಸದ್ಗತಿಯಾಗಬೇಕು? ಎಂದೂ ಆಗುವುದಿಲ್ಲಾ ಅಂತಾ ತಿಳಿದು ಬಿಡು.

ಕೌಶಿಕ : (ಸ್ವಗತ) ಆಹಾ! ಇವರು ಪ್ರಭುಸ್ವಾಮಿ ಮತ್ತು ಮಹಾದೇವಿಯವರ ವಿಷಯಕ್ಕೆ ನನಗೆ ಸಂಪೂರ್ಣ ಸಂಶಯ ಹುಟ್ಟಿಸಿದರಲ್ಲಾ!! ಅವರು ಇಂದ್ರಜಾಲ, ಮಹೇಂದ್ರಜಾಲದಿಂದ ಈ ಜಗತ್ತಿನಲ್ಲಿ ಪ್ರಭಾವಕ್ಕೆ ಬಂದಿರುತ್ತಾರೆಂದು ಈ ಯತಿಗಳು ಎಳ್ಳಷ್ಟೂ ಅಂಜಿಕೆ ಇಲ್ಲದೇ ಹೇಳುತ್ತಾರೆ. ಹೀಗೇ ಏಕೆ ಆಗಬಾರದು? ಜನವಶ, ರಾಜವಶ, ಸ್ತ್ರೀವಶ, ಜಲಸ್ತಂಬನ, ಅಗ್ನಿಸ್ತಂಬನ ಎಂಬ ಕಪಟ ಕೃತಿಗಳಿಂದ ಅನೇಕ ಜನರು ಅನೇಕ ಲೀಲೆಗಳನ್ನು ಮಾಡುತ್ತಾರೆಂದು ನಾನು ಬಲ್ಲವರಿಂದ ಕೇಳಿ ತಿಳಿದಿದ್ದೇನೆ ಮತ್ತು ಅನೇಕ ಗ್ರಂಥಗಳನ್ನು ಓದಿದ್ದೇನೆ. ಅಂದಮೇಲೆ ಇವರು ಅವರೇ ಯಾಕಾಗಿರಬಾರದು?

ಋಷಿ : ಈ ವಾರ್ತೆಯನ್ನು ಕೇಳಿ, ಅವರನ್ನು ಪರೀಕ್ಷೆ ಮಾಡಬೇಕೆಂದು ಹೋಗಿ, ಪರಕಾಯ ಪ್ರವೇಶ ಸಾಧನದಿಂದ ಅವರ ದೇಹದೊಳಗೆ ಹೊಕ್ಕು ಅವರ ಅಂತರಂಗವನ್ನೆಲ್ಲಾ ಪರೀಕ್ಷೆ ಮಾಡಿ, ಅವರಲ್ಲಿ ಏನೂ ಹುರುಳಿಲ್ಲವೆಂದು ತಿಳಿದು ಹೊರಗೆ ಬಂದೆನು. ಅಂದಮೇಲೆ ಅಂಥವರನ್ನು ನೀನು ನಂಬಿರುವೆ. ಅವರಿಂದ ನಿನಗೆ ಸದ್ಗತಿಯು ದೊರಕುವುದಿಲ್ಲ, ನನ್ನಲ್ಲಿ ನೀನು ಬಂದದ್ದರಿಂದ ನಿನ್ನನ್ನು ವ್ಯರ್ಥವಾಗಿ ಕೆಡಿಸಬಾರದೆಂದು ಹೇಳಿದೆನು.

ಇನ್ನು ಮೇಲೆ ನನ್ನ ಮಾತು ನಂಬು. ಇಲ್ಲಾ ಬಿಡು. ಬೇಕಾದ್ದು ಮಾಡಿಕೋ ನಡೆ.

ಕೌಶಿಕ : (ಸ್ವಗತ) ಶಿವ ಶಿವಾ! ಅಲ್ಲಮಪ್ರಭು, ಮಹಾದೇವಿಯರು ಶಿವಶರಣರೆಂದರೆ ಇವರು ಎಳ್ಳಷ್ಟೂ ಸೋಲಲೊಲ್ಲರಲ್ಲಾ! ಅವರು ಡಾಂಭಿಕರೇ ು ಸ್ಪಷ್ಟವಾಗಿ ಹೇಳುತ್ತಾರಲ್ಲಾ! ಇದೇನು ಚಮತ್ಕಾರಾ! ಅವರಿಗೆ ನಾನು ಡಾಂಭಿಕರೆಂದು ಹೇಗೆ ಅನ್ನಲಿ? ಆ ಮಹಾದೇವಿಯು ನನಗೆ ಸಿಟ್ಟಿನಿಂದ ಸುಟ್ಟು ಹೋಗೆಂದು ಶಾಪ ಕೊಡಲು ಕ್ಷಣದಲ್ಲೇ ನನ್ನ ಹೊಟ್ಟೆಯೊಳಗೆ ಬೆಂಕಿಯನ್ನು ಇಟ್ಟಂತೆ ಆಗಿ, ಬ್ರಹ್ಮಾಂಡಕ್ಕೆ ಬೆಂಕಿ ಹತ್ತಿದಂತೆ ಆಗಿ ನನಗೆ ಬಹಳೇ ಸಂಕಟವಾಯಿತು. ನನಗಾದ ಅಂಥಾ ಸಂಕಟವನ್ನು ತಾನು ವಿಭೂತಿಯನ್ನು ಹಚ್ಚಿ ಕಳೆದುಬಿಟ್ಟಳು. ಅಂದಮೇಲೆ ಅವಳಿಗೆ ಸುಳ್ಳು ಅಂತಾ ಹ್ಯಾಗೆ ಅನ್ನಲಿ! ಈಗ ಈ ಯತಿವರ್ಯರು ನನಗೆ ಅದರ ವಿಸ್ತಾರವನ್ನೆಲ್ಲ ಕಂಡವರ ಹಾಗೆ ಹೇಳುತ್ತಿರುವರಲ್ಲಾ! ಇವರಿಗಂತೂ ನಾನೇ ಸುಳ್ಳು ಹೇಳುವೆನೆಂದಾಗಿದೆ.

(ಪ್ರಕಟ)ಮಹಾಋಷಿಗಳೇ, ನೀವು ಏನೇ ಹೇಳಿದರೂ, ನಾನಂತೂ ಮಹಾಶಿವಭಕ್ತೆ ಮಹಾದೇವಿಯ ತಪೋಶಕ್ತಿಗೆ ತಲೆ ಬಾಗಿರುವೆನು. ಅವಳ ಉಪದೇಶದಂತೆ ಶೂನ್ಯಸಿಂಹಾಸನಾಧೀಶ್ವರ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಕಂಡು ಅವರಿಂದ ಲಿಂಗಧಾರಣ ಮಾಡಿಸಿಕೊಂಡು ಮುಕ್ತಿಮಾರ್ಗ ಕಂಡುಕೊಳ್ಳಬೇಕೆಂಬ ಅಚಲ ನಿಷ್ಠೆಯುಳ್ಳವನಾಗಿರುವೆನು. ಕಾರಣ ತಮ್ಮ ಯಾವ ಉಪದೇಶವೂ ನನಗೆ ಬೇಕಿಲ್ಲ. ತಾವಿನ್ನು ಹೊರಡಬಹುದು.

ಋಷಿ : ಎಲವೋ ಮೂರ್ಖ ರಾಜನೇ, ಈವರೆಗೆ ನಿನಗೆ ಹೇಳಿದ ಉಪದೇಶವೆಲ್ಲ ಭೋರ್ಗಲ್ಲ ಮೇಲೆ ಮಳೆ ಸುರಿದಂತಯಿತು. ಮೂರ್ಖನಿಗೆ ತತ್ವವಿಚಾರ ತಿಳಿಸಿ ಹೇಳಲು ಹೋಗಿ ನಾನೂ ಮೂರ್ಖನಾದೆ. ಹೋಗು ಹೋಗು ಕೆಟ್ಟ ಮೇಲೆ ಬುದ್ಧಿ ಬಂದರೆ ಏನು ಫಲವು ಹೋಗುತ್ತೇನೆ.

(ಸ್ವಗತ) ಹೇ ಶಿವಶಿವಾ! ಪತಿಯನ್ನು ಕಳೆದುಕೊಂಡು ನಾನು ಹೇಗೆ ಬದಕಲಿ! ದಾಸಿಯ ಮಾತನ್ನು ಕೇಳಿ ರಾಜಕುಮಾರನಾದೆ, ಋಷಿಯಾದೆ. ಎಲ್ಲ ತಿಳಿಹೇಳಿ ಸೋತು ಹೋದೆನು. ಅಯ್ಯೋ ಆ ನನ್ನ ಕಪಟತನಕ್ಕೆ ತಕ್ಕ ಪ್ರಾಯಶ್ಚಿತ್ತವೂ ಆಯಿತು. ನನ್ನ ಪತಿ ಇಲ್ಲದೇ ಬದುಕಲಾರೆ. ನನ್ನ ಪತಿವ್ರತ ಧರ್ಮದಿಂದ ನನ್ನ ಪತಿಯನ್ನು ಮರಳಿ ಪಡೆಯಲು ದೇವರಲ್ಲಿ ಪ್ರಾರ್ಥಿಸುವೆ.

(ಹೋಗುವಳು)

ದೃಶ್ಯ

(ಸಂನ್ಯಾಸಿ ವೇಷದ ಕೌಶಿಕನ ಪ್ರವೇಶ)

ಕೌಶಿಕ : (ಸ್ವಗತ) ಶಿವಶಿವಾ! ತಾಯಿ ಮಹಾದೇವಿ ನೀನಿನ್ನೂ ನನ್ನೊಡನೆ ಬರಲೇ ಇಲ್ಲ. ಶ್ರೀಶೈಲ ಇನ್ನೆಷ್ಟು ದೂರವಿರುವುದೋ ಏನೋ. ನನಗಂತೂ ಈ ಕಾನನದಲ್ಲಿ ನಡೆದು ನಡೆದು ಸಾಕಾಗಿ ಹೋಗಿರುವುದು. ದೇವಾ ಮಲ್ಲಿಕಾರ್ಜುನಸ್ವಾಮಿ ಬೇಗ ಅಲ್ಲಮಪ್ರಭುಗಳನ್ನು ದರ್ಶನ ಮಾಡಿಸು ತಂದೆ. (ಹೋಗುವನು)

(ಚಾರುಮತಿಯ ಪ್ರವೇಶ)

ಚಾರುಮತಿ : (ಸ್ವಗತ) ಹೇ ತಂದೆ ಮಲ್ಲಿಕಾರ್ಜುನಾ. ನನಗೆ ನನ್ನ ಪತಿಯನ್ನು ದೊರಕಿಸು ತಂದೆ. ನನ್ನ ಪತಿದೇವರ ಪಾದಪೂಜೆ ಮಾಡಿ ಆ ಪಾದೋದಕವನ್ನು ಸ್ವೀಕರಿಸುವತನಕ ಒಂದು ಹನಿ ನೀರನ್ನು ಕುಡಿಯುವುದಿಲ್ಲ. ಅನ್ನದ ಅಗಳು ಮುಟ್ಟುವುದಿಲ್ಲ. ಕೆದರಿದ ಜಡೆ ಹಾಗೇ ಇರಲಿ. ನನ್ನ ಪ್ರಾಣ ಹೋದರೂ ಹೋಗಲಿ. ನನ್ನ ಪತಿ ಕೌಶಿಕ ಮಹಾರಾಜನನ್ನು ನನಗೆ ಕೊಡು ದೇವಾ.

(ಕಣ್ಣು ಮುಚ್ಚಿ ಪ್ರಾರ್ಥಿಸುತ್ತ ಕೂಡ್ರುವಳು)

ಅಲ್ಲಮಪ್ರಭು : (ತೆರೆಯ ಮರೆಯಲ್ಲಿ ಇಣಕಿ ನೋಡಿ) ಆಹಾಹಾ!! ಭಕ್ತರಿದ್ದರೆ ಹೀಗಿರಬೇಕು. ಹೆಂಡತಿ ಇದ್ದರೆ ಪತಿವ್ರತಾ ಚಾರುಮತಿಯಂಥವರಿರಬೇಕು.

ಚಾರುಮತಿ : ದೇವಾ! ನನ್ನ ಶಕ್ತಿಯಲ್ಲಾ ಎಲ್ಲಿ ಹೋಯಿತು? ದೇಹವು ಕ್ಷೀಣವಾಯಿತು. ಇನ್ನು ತಾಳಲಾರೆನು. ಪ್ರಾಣೇಶ್ವರಾ ನಿನ್ನನ್ನು ಕಣ್ತುಂಬಾ ನೋಡಿ ಪ್ರಾಣ ಬಿಡಬೇಕೆಂಬ ಆಶೆ ಈಡೇರಲಿಲ್ಲ. ಪ್ರಾಣೇಶ್ವರಾ, ಪ್ರಾಣೇಶ್ವರಾ!

(ಮೂರ್ಛೆ ಹೋಗಿ ಬೀಳುತ್ತಾಳೆ)

(ಅಲ್ಲಮಪ್ರಭುವಿನ ಪ್ರವೇಶ)

ಅಲ್ಲಮಪ್ರಭು : ತಾಯಿ ಮೆಚ್ಚಿದೆ, ನಿನ್ನ ಪತಿಭಕ್ತಿಗೆ ಮೆಚ್ಚಿದೆ. ನಿನ್ನ ಪ್ರಾಣಕ್ಕಿಂತಲೂ ನಿನ್ನ ಪತಿಯೇ ಹೆಚ್ಚೆಂದು ನಂಬಿರುವ ನಿನ್ನ ಕಷ್ಟವನ್ನು ಇದೀಗ ಪರಿಹರಿಸುತ್ತೇನೆ. ಇದೋ ನಿನಗೆ ಪ್ರತ್ಯಕ್ಷವಾಗಿದ್ದೇನೆ. ನಿನ್ನ ಇಷ್ಟವೇನಿರುವುದು ಕೇಳಿಕೋ ಬೇಗನೇ, ಪರಿಹರಿಸುತ್ತೇನೆ.

(ಕೈಯಿಂದ ಅಭಯ ಹಸ್ತ ತೋರಿಸುತ್ತಲೇ ಆಕೆ ಮೂರ್ಛೆಯಿಂದ ಎಚ್ಚರವಾಗುತ್ತಾಳೆ.)

ಚಾರುಮತಿ : ಧನ್ಯಳಾದೆ ತಂದೆ, ಧನ್ಯಳಾದೆ (ನಮಸ್ಕರಿಸುವಳು).

ಅಲ್ಲಮಪ್ರಭು : ಏಳು ಮಗಳೇ ನಿನಗೆ ಕಲ್ಯಾಣವಾಗಲಿ! ನಿನ್ನ ಇಷ್ಟವೇನಿರುವುದು ಕೇಳಿಕೋ.

ಚಾರುಮತಿ : ತಂದೆ, ಮಹಾಪ್ರಭು, ಯಾವ ಜನ್ಮಾಂತರದ ಪುಣ್ಯ ವಿಶೇಷವೋ ನನಗೆ ತಮ್ಮ ದಿವ್ಯದರ್ಶನವಾಯಿತು. ತಂದೆ, ನಾನು ತಮ್ಮಲ್ಲಿ ಎರಡು ವರಗಳನ್ನು ಕೇಳಬೇಕೆಂದು ಆಶಿಸಿರುವೆನು. ಕೃಪೆ ಮಾಡಬೇಕು ಪ್ರಭುವೇ.

ಅಲ್ಲಮಪ್ರಭು : ಕೇಳು ಮಗಳೇ.

ಚಾರುಮತಿ : ದೇವಾ, ನನ್ನ ಪತಿಯು ಸಂಸಾರ ಬಿಟ್ಟು ಸಂನ್ಯಾಸಿಯಾಗಿರುವನು. ಅವರು ಸಂನ್ಯಾಸಿ ವೇಷ ತೊರೆದು ನನ್ನ ಪತಿಯು ನನಗೆ ದೊರಕಬೇಕು. ಇನ್ನೊಂದು ಬೇಡಿಕೆಯೆಂದರೆ, ನಮ್ಮ ರಾಜ್ಯವು ನಮಗೆ ದೊರೆತು, ಮೊದಲಿನಂತೆ ನನ್ನ ಪತಿ ಕೌಶಿಕ ಮಹಾರಾಜನಾಗಿ ರಾಜ್ಯವಾಳಬೇಕು. ಈ ಎರಡು ವರಗಳನ್ನು ಕೊಟ್ಟು ನನ್ನನ್ನು ಉದ್ಧಾರ ಮಾಡು ತಂದೆ. ನಿಮಗೆ ಶಿರಬಾಗಿ ಬೇಡುವೆ. ದಯಪಾಲಿಸು ಪ್ರಭುವೆ.

ಅಲ್ಲಮಪ್ರಭು : ತಥಾಸ್ತು. ನೀ ಕೇಳಿದಂತೆ ಹಾಗೇ ಆಗಲಿ! ಈ ಕೌಶಿಕ ರಾಜನು ಸಂನ್ಯಾಸ ದೀಕ್ಷೆ ತೊಟ್ಟು ನನ್ನನ್ನು ಕಾಣಲು ಶ್ರೀಶೈಲದ ಕಡೆಗೇ ಬರುತ್ತಿರುವನು. ನಡೆ ತಾಯಿ ಶ್ರೀಶೈಲಕ್ಕೆ ಹೋಗೋಣ.

ಚಾರುಮತಿ : ದೇವಾ, ಅವರು ಸುರಕ್ಷಿತವಾಗಿದ್ದಾರೆಯೇ? ದೇವಾ ಅವರ ಮೇಲೆ ಕರುಣೆಯಿರಲಿ.

ಅಲ್ಲಮಪ್ರಭು : ಹೌದು, ಕಾಯಾ, ವಾಚಾ, ಮನಸಾ ಈ ಎಲ್ಲದರಿಂದಲೂ ಶುದ್ಧವಾಗಿದ್ದಾನೆ. ಮಹಾಶಿವಶರಣೆ ಅಕ್ಕಮಹಾದೇವಿಯ ನಿರೂಪದಂತೆ ನನ್ನನ್ನು ಭೆಟ್ಟಿಯಾಗಲೆಂದೇ ಬರುತ್ತಿರುವನು. ಆತನಿಗೆ ಇಷ್ಟ ಲಿಂಗಧಾರಣ ಮಾಡಿ, ಮಂತ್ರೋಪದೇಶ ಮಾಡುತ್ತೇನೆ. ನಾವಿಬ್ಬರೂ ಶ್ರೀಶೈಲಕ್ಕೆ ಹೋಗೋಣ. ತಾಯಿ ಅಕ್ಕಮಹಾದೇವಿ ಮತ್ತು ಕೌಶಿಕ ಇಬ್ಬರೂ ಅಲ್ಲೇ ಬರುವರು. ಆಗ ಅಲ್ಲಿ ಎಲ್ಲ ಶಿವಶರಣರೂ ಕೂಡುವರು. ಅಲ್ಲಿಯೇ ಎಲ್ಲರಿಗೂ ಮುಕ್ತಿ ಕೊಡುವೆ ನಡೆಯಿರಿ.

ದೃಶ್ಯ

(ಎಲ್ಲರೂ ಶ್ರೀಶೈಲ ಪರ್ವತದಲ್ಲಿ ಕುಳಿತುರುತ್ತಾರೆ.)

ಅಲ್ಲಮಪ್ರಭು : ಎಲ್ಲರಿಗೂ ಮಂಗಲವಾಗಲಿ! ಮಹಾದೇವಿ, ಕೌಶಿಕ ರಾಜನ

ಗರ್ವಭಂಗಮಾಡಿ, ಸಂನ್ಯಾಸ ದೀಕ್ಷೆ ಕೊಟ್ಟಿರುವೆಯಲ್ಲ ತಾಯಿ. ನಿನ್ನ ಮಹಾಶಕ್ತಿಗೆ ಮೆಚ್ಚಿದೆ, ಮೆಚ್ಚಿದೆ.

ಅಕ್ಕಮಹಾದೇವಿ : ಜಗದ್ಗುರುವೆ, ಶಿವಸ್ವರೂಪರಾದಂಥಾ ತಾವು ಈ ಮಹಾರಾಜನಿಗೆ ಇಷ್ಟಲಿಂಗ ಧಾರಣ ಮಾಡಿರಿ. ನನ್ನ ಉಪದೇಶದಿಂದ ಸಕಲ ಭಾಗ್ಯ, ಅರಸೊತ್ತಿಗೆ ತೊರೆದು ಸಂನ್ಯಾಸಿ ಆಗಿರುವನು. ಆತನಿಗೀಗ ಹಮ್ಮು-ಬಿಮ್ಮುಗಳ ಯಾವ ಬಾಧೆಯಿಲ್ಲ.

ಅಲ್ಲಮಪ್ರಭು : ದೇವಿ, ನನ್ನ ಅಭಿಲಾಷೆಯ ಪ್ರಕಾರ ಜಗತ್ತಿನಲ್ಲಿ ಶಿವಜ್ಞಾನವನ್ನು ಹೆಚ್ಚಿಸಿದಿ. ನಿನ್ನ ಕೀರ್ತಿ ಅಜರಾಮರವಾಗಿ ಉಳಿಯಲಿ! ಇದೋ ಈ ಕೌಶಿಕ ಮಹಾರಾಜನಿಗೆ ಇಷ್ಟಲಿಂಗಧಾರಣೆ ಮಾಡುತ್ತೇನೆ.

(ಕೊರಳೊಳಗೆ ಕ್ಯಾವಿ ಅರಿವೆಯಲ್ಲಿ ಕಟ್ಟಿದ ಲಿಂಗ ಧಾರಣಮಾಡಿ, ರಾಜನ ಕಿವಿಯಲ್ಲಿ ಗೌಪ್ಯ ಮಂತ್ರೋಪದೇಶ ಮಾಡಬೇಕು.)

ಈಗ ಕೌಶಿಕರಾಜ ಲಿಂಗಾಯತನಾಗಿದ್ದಾನೆ. ಅಂದರೆ ಲಿಂಗವನ್ನು ಆಯತ ಮಾಡಿಕೊಂಡಿದ್ದಾನೆ. ಷಟ್‌ಸ್ಥಲ, ಅಷ್ಟಾವರಣಗಳನ್ನು ಪಾಲಿಸುತ್ತ ಸದ್‌ಬುದ್ಧಿವಂತನಾಗಲೆಂದು ಆಶೀರ್ವದಿಸಿದ್ದೇನೆ. ಅವನು ಸಂನ್ಯಾಸ ಬಿಟ್ಟು ತನ್ನ ರಾಜ್ಯವನ್ನು ಆಳಲಿ. ಅವನಿಗೆ ನೀನೇ ಆಶೀರ್ವಾದ ಮಾಡು. ಮರಳಿ ಹೋಗಲಿ.

ಕೌಶಿಕ : ಹೇ ಪ್ರಭುವೇ, ನನಗೆ ರಾಜ್ಯವು ಬೇಡಾ. ಹೆಂಡತಿಯು ಬೇಡಾ. ನಾನು ತಿಳಿಯದೇ, ಈ ಸಂಸಾರವು ಬಹಳೇ ಸುಲಭವೆಂದು ತಿಳಿದು ಈ ತಾಯಿಯನ್ನು ಬೇಕಾದಷ್ಟು ಕಾಡಿಕಾಡಿ ಪಶ್ಚಾತ್ತಾಪಪಟ್ಟು, ಈಗ ನಾನು ಮುಕ್ತಿ ಹೊಂದಬೇಕೆಂದು ನಿಮ್ಮ ದರ್ಶನಕ್ಕೆ ಬಂದಿರುವೆನು. ನಿಮ್ಮ ಪಾದಸೇವೆ ಮಾಡುತ್ತ ಇಲ್ಲಿಯೇ ಇರುವೆನು. ನಾನು ಮತ್ತೆಲ್ಲಿ ಹೋಗಲಾರೆ.

ಅಲ್ಲಮಪ್ರಭು : ಕೌಶಿಕಾ, ನೀನು ಹೀಗೆ ಅಜ್ಞಾನವನ್ನೆಲ್ಲಾ ಅಳಿದು ಸಂಸಾರ ನೀಗಿ ಸಂನ್ಯಾಸಿ ಆದರೆ ನಿನಗೆ ಮುಕ್ತಿ ಆಗಲಾರದು. ನಿನ್ನ ಹೆಂಡತಿ ಮಹಾಪತಿವ್ರತೆ, ಮಹಾಭಕ್ತಿವಾನಳು. ಆಕೆಯು ತನ್ನ ಪ್ರಾಣಕ್ಕಿಂತ ತನ್ನ ಗಂಡನೇ ಬೇಕೆಂದು ಪ್ರಾಣಬಿಡಲು ಸಿದ್ಧಳಾದವಳು. ಆಕೆಯ ಬಯಕೆಯನ್ನು ಬದಿಗಿಟ್ಟು, ನೀನು ಸಂನ್ಯಾಸಿಯಾಗಿ ಮುಕ್ತಿ ಪಡೆಯಬೇಕೆಂದರೆ, ಅದು ಎಂದಿಗೂ ಸಾಧ್ಯವಿಲ್ಲ. ನೀನು ಸಂಸಾರ ಮಾಡಿ ರಾಜ್ಯ ಕಾರುಭಾರ ಮಾಡು. ಅಂದರೆ ನೀನು ಸಂನ್ಯಾಸಿಯಾದರಷ್ಟೇ ಮುಕ್ತಿ ಸಿಗುವುದು ಅಂತಾ ತಿಳಿಯಬೇಡಾ. ಸಂಸಾರದಲ್ಲಿ ಇದ್ದರೇನಾಯಿತು? ಸ್ವಲ್ಪು ಕಾಲವಾದರೂ ಶಿವಶಿವಾ

ಅಂತಾ ಶಿವ ಭಜನೆ ಮಾಡಿದರೆ ಎಲ್ಲರೂ ಮೋಕ್ಷ ಹೊಂದುತ್ತಾರೆ. ಆದ್ದರಿಂದ ನೀವು ಗಂಡ-ಹೆಂಡತಿಯರು ಸುಖದಿಂದ ರಾಜ್ಯ ಕಾರಭಾರ ಮಾಡಿ ಕೊನೆಗೆ ಮುಕ್ತಿ ಹೊಂದಿರಿ. ಹೋಗಿರಿನ್ನು ನಿಮಗೆ ಒಳ್ಳೆಯದಾಗಲಿ!

ಕೌಶಿಕ : ಆಗಲಿ ತಂದೇ, ನೀವು ಹೇಳಿದಂತೆಯೇ ಆಗಲಿ. ಆದರೆ ನಮ್ಮ ಮೇಲೆ ನಿಮ್ಮ ಅಂತಃಕ್ಕರುಣವು ಸದಾ ಇರಲೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಅಲ್ಲಮಪ್ರಭು : ಯಾವತ್ತೂ ಮಾನವ ಕುಲಕೋಟಿಯನ್ನು ಉದ್ಧಾರ ಮಾಡುವುದರ ಸಲುವಾಗಿ ಸ್ವತಃ ನಾನೇ ನಿಂತಿರುವೆನು. ಹೋಗಿ ಬನ್ನಿರಿ.

ಕೌಶಿಕ, ಚಾರುಮತಿ : (ಇಬ್ಬರೂ) ಮಹಾಪ್ರಭುವೆ ತಮಗೆ ನಮ್ಮ ಪ್ರಾಣಾಮಗಳು. ತಾಯಿ ಅಕ್ಕಮಹಾದೇವಿಯವರೇ ತಮಗೆ ನಮ್ಮ ಪ್ರಣಾಮಗಳು. ತಾವು ನಮಗೆ ಗುರುಪದೇಶ ಮಾಡಿ ಆಶೀರ್ವದಿಸಿರಿ.

(ಅಲ್ಲಮಪ್ರಭು, ಕೌಶಿಕ ಮತ್ತು ಚಾರುಮತಿ ದಂಪತಿಗಳಿಬ್ಬರಿಗೂ ಕಿವಿಯಲ್ಲಿ ಗುರೂಪದೇಶ ಮಾಡಬೇಕು.)

ಅಲ್ಲಮಪ್ರಭು : (ಅಕ್ಕಮಹಾದೇವಿ ಕುರಿತು) ದೇವಿ, ಇದುವರೆಗೂ ನಿನ್ನ ಶಾಪದಿಂದ ಗಂಡ-ಹೆಂಡತಿಯರಿಬ್ಬರೂ ಅಗಲಿರುವರು. ಇವರಿಬ್ಬರಿಗೂ ಶಿವದೀಕ್ಷೆ ಕೊಟ್ಟು ಪುನರ್ ವಿವಾಹ ಮಾಡೋಣ.

(ಕೌಶಿಕನು ರಾಜಪೋಷಾಕು ಧರಿಸಬೇಕು. ವಿವಾಹ ಸಂಭ್ರಮ)

ಕೌಶಿಕ : ತಾಯಿ ಮಹಾದೇವಿ, ತಾವು ಕೈಲಾಸದಲ್ಲಿರುವ ಪಾರ್ವತಿಯೇ ಹೌದು. ಅಲ್ಲಮಪ್ರಭು ಸ್ವಾಮಿಯವರು ಸಾಕ್ಷಾತ್ ಮಲ್ಲಿಕಾರ್ಜುನನೇ ಆಗಿರುವುದು ಸತ್ಯ. ಯಾವತ್ತೂ ನರಲೋಕದ ಜನರು ಇದುವರೆಗೂ ಮಹಾಶಿವಶರಣಿ ಅಕ್ಕಮಹಾದೇವಿಯ ಕಥೆಯನ್ನು ಅರಿತವರಾಗಿದ್ದಾರೆ. ಈ ಜಗತ್ತಿನಲ್ಲಿ ಪಾತಿವ್ರತ್ಯವೇ ಮೇಲು ಎಂಬುದು ತಿಳಿದಿದೆ. ಆದ್ದರಿಂದ ಶಿವಭಕ್ತಿಯಿಂದ ನಡೆಯಿರೆಂದು ಲೋಕವಾಸಿಯಾದ ನಿಮ್ಮೆಲ್ಲರಿಗೆ ಶಿರಬಾಗಿ ಬೇಡುವೆನು. ಸಾಕ್ಷಾತ್ ದೇವನಿಧಿಯಾದ ಅಲ್ಲಮಪ್ರಭುಗಳನ್ನು, ಮಾತೆ ಮಹಾದೇವಿಯನ್ನು ಸ್ತುತಿಸಿ, ದುರ್ಗಾದೇವಿಯನ್ನು ಸ್ಮರಿಸಿ, ಶ್ರೀ ಮಲ್ಲಿಕಾರ್ಜುನನ ಕೃಪೆಯಿಂದ ನಾವೆಲ್ಲರೂ ಮಂಗಲ ಪಾಡುವಾ.

(ಮಂಗಲ ಪದ)

ಮುತ್ತಿನಾರತಿಯನ್ನು ಎತ್ತಿ ಬೆಳಗುವೆನೀಗ
ಸತ್ಯಮೂರ್ತಿ ಅಕ್ಕಮಹಾದೇವಿ ಪಾರ್ವತಿಗೆ ॥ ೧ ॥

ಸತ್ಯ ನಿರ್ಮಲ ಸುಮತಿ ಗರ್ಭದಿ
ಸಾತ್ವಿಕ ಕಳೆ ಮೂರ್ತಿಗೊಳ್ಳುತೆ
ಪ್ರೀತಿಯಿಂದ ಧರೆಗಿಳಿದು ಬಂದಿಹ
ನಿತ್ಯ ನಿರ್ಮಲ ದೇವಿಗೆ ಪಾರ್ವತಿಗೆ ॥ ೨ ॥

ದುಷ್ಟ ಕೌಶಿಕನೊಳಗೆ ಮೂಡಿದ
ಕೆಟ್ಟ ಕಾಮನ ಸುಟ್ಟು ಹಾಕುತ
ಶ್ರೇಷ್ಠ ಕಲ್ಯಾಣಕ್ಕೆ ಪೋಗುವೆ
ದೃಷ್ಟಿಯಿಂದ ಪ್ರಭು ಕಂಡ ಸತಿಗೆ ಪಾರ್ವತಿಗೆ ॥ ೩ ॥

ಅಂಗ ಪತಿತಾ ಸತಿಯಳನು ತಾ
ಅಂಗ ಭೋಗವ ದೂರ ಮಾಡುತ
ಲಿಂಗಾಂಗ ಸಮರಸ ಪಡೆಯುತ
ಲಿಂಗದೊಳು ಬಯಲಾದ ದೇವಿಗೆ ಪಾರ್ವತಿಗೆ ॥ ೪ ॥

ದೇವಗಿರಿ ಪುರದೊಳಗೆ ಮೆರೆವಾ
ಪುಟ್ಟರಾಜ ಕರುಣ ಕಂದಗೆ
ಶಿವಯೋಗಿ ಕುಮಾರನು ಪೊರೆದ
ಶಿವನ ಪರಮ ಜ್ಯೋತಿಗೆ ಪಾರ್ವತಿಗೆ ॥ ೫ ॥

–ಸಮಾಪ್ತ–

ಕೆಲವು ದೇಸಿ ಪದಗಳಿಗೆ ಅರ್ಥ

ಗಡಾ	–	ಬೇಗನೇ
ಏನಾ	–	ಏನು
ಅಂತು ಹತ್ತುವುದಿಲ್ಲ	–	ನೆಲೆ ಗೊತ್ತಾಗುವುದಿಲ್ಲ
ಚಲ	–	ಛಲ
ಬುಡಾ	–	ತಳ, ಪೂರ್ಣ ಪರಿಚಯ
ಬಲಾಟಗಿರಿ	–	ತಾರಾತಿಗಡಿ
ಅಲ್ಲೇ ಹಾಸಿ	–	ಅಲ್ಲಿಯೇ ಹಾಯ್ದು
ಹೊಳ್ಳು	–	ಹೊರಳು
ಬೇಟಿ	–	ಭೆಟ್ಟಿ
ಬಾಡಿಗೆ	–	ಭಾಡಿಗೆ
ಹಕೀಕತ್ತು	–	ವಿಷಯ
ತಿಳಿತಿದೆ	–	ತಿಳಿಯುತ್ತಿದೆ
ಬೇತಮಾಡಿ	–	ಹಂಚಿಕೆ ಮಾಡಿ
ಕವಕ್ಕನೇ	–	ತಡವಿಲ್ಲದೇ
ಬೇತು	–	ಹಂಚಿಕೆ
ರಾಜ್ಯ ಪೋಷಾಕು	–	ರಾಜಪೋಷಾಕು
ಕೂವತ್ತು	–	ಶಕ್ತಿ
ಮಸಲತ್ತು	–	ಹಂಚಿಕೆ

ಲಗು	–	ಬೇಗನೆ
ಬಿಡದೇನಾ	–	ಬಿಡುವುದಿಲ್ಲ
ಕಬೂಲಿ ಮಾಡಿದೆ	–	ಒಪ್ಪಿಸಿದೆ
ಒಣಚ್ಯಾಲಾ	–	ಸುಮ್ಮನೇ ಸೋಗು
ಬೆರಕಿ	–	ಜಾಣೆ, ಚತುರೆ
ನೆರಿಗೆಯೇ	–	ನಿರಿಗೆಯೇ
ಅಖೈರಕ್ಕೆ	–	ಕೊನೆಗೆ
ಕೆಣಕಿ	–	ತಡುವಿ
ಹಲಬು	–	ಬಾಯಿಬಿಡು
ತ್ರಾಸು	–	ಕಷ್ಟವು
ನಿತ್ರಾಣ	–	ಶಕ್ತಿಹೀನ

♦ ♦ ♦

ಶಿವಶರಣ ಹರಳಯ್ಯ

(ಸಣ್ಣಾಟ)

ನೀಲಕಂಠ ಕವಿಯ

ಶಿವಶರಣ ಹರಳಯ್ಯ

(ಹರಳಯ್ಯನವರ ಹೆಂಡತಿಯಾದ ಚನ್ನವ್ವನು, ಮಹಾಮನೆಯಿಂದ (ಬಸವೇಶ್ವರನ) ಪ್ರಸಾದ ತಕ್ಕೊಂಡು ಬರುವಳು)

ಚನ್ನವ್ವ :

॥ ಪದ ॥

ದೊರೆತುದೀ ಮಹಾಪ್ರಸಾದ ।
ಹರನ ಪರಮ ಕರುಣದಿ ॥ ಪಲ್ಲ ॥

ದೊರೆಯಲಳವೆ ಭವಿಗಳಿಗಿದು ।
ಹರಭಕ್ತಿಭರಿತ ಪಡೆವ ॥
ದುರಿತವ ವಿಧ್ವಂಸಗೈದು ।
ಚಿರಸೌಖ್ಯವ ನೀಡುವ ॥ ೧ ॥

ಮಗೂ ಸದಾಶಿವ ಬಾ, ಏನು ಮಾಡುತ್ತಿರುವೆ. ಇನ್ನೂ ಸ್ನಾನಮಾಡಿ ಲಿಂಗಪೂಜಾ ನೆರವೇರಿಸಿದಿಯೋ ಇಲ್ಲವೋ, ಬಹಳ ವೇಳೆಯಾಗಿದೆ. (ಸದಾಶಿವ ಬಂದು)

ಸದಾಶಿವ :ಅವ್ವಾ, ನೀನತ್ತ ಸಾಗಿದ ಕೂಡಲೆ ಮಜ್ಜನಗೈದು, ಲಿಂಗಪೂಜಾ ಮಾಡಿ ನಿನ್ನ ದಾರೀ ನೋಡುತ್ತ ನಿಂತಿದ್ದೇನೆ. ನೀನು ಬೇಗನೆ ಬರಬಾರದೇನು? ಯಾಕೆ ತಡ ಮಾಡಿದಿ? ಅದೇನು ತಂದಿರುವಿ ? ಅವ್ವಾ ತಾ ನನಗೂ.

ಚನ್ನವ್ವ :ಇದೇನೆಂದರೆ ಬಸವೇಶ್ವರ ಪ್ರಭುಗಳು ದಿನಾಲು ಒಂದು ಲಕ್ಷ ತೊಂಭತ್ತಾರು ಸಾವಿರ ಗಣಾರಾಧನೆಯನ್ನು ಮಾಡುತ್ತಿರುವರಲ್ಲವೇ. ಅಲ್ಲಿಯ ಪ್ರಸಾದ ಪಡೆಯಬೇಕೆಂದು ಈ ಹೊತ್ತು ಆ ಸಮಯಕ್ಕೆ ನಾನೂ ಹೋದೆ. ಹೋದದ್ದಕ್ಕೆ ಶಿವನ ಕೃಪೆಯಿಂದ ನನಗೂ ಸಿಕ್ಕಿತು. ಅದೇ ಈ ಮಹಾಪ್ರಸಾದ, ನಿನ್ನ ಹೆತ್ತವರನ್ನು ಕರೆ. ನಾವೆಲ್ಲರೂ ಈ ಪ್ರಸಾದ ಸೇವಿಸಿ ಪುನೀತರಾಗೋಣ.

ಸದಾಶಿವ : ಅಪ್ಪನನ್ನೂ ಕರೆಯಬೇಕೆ? ಈಗಲೇ ಕರೆಸುವೆ. (ಅವರು ಬರುವರು).

ಹರಳಯ್ಯ : ಪ್ರಿಯೆ, ಯಾಕೆ ಕರೆಸಿದೆ ಎನ್ನನ್ನು?

ಚನ್ನವ್ವ : ನಾಥಾ, ಬಸವಪ್ರಭುವಿನರಮನೆಯಿಂದ ಮಹಾಪ್ರಸಾದ ತಂದಿದ್ದೇನೆ. ಈಶ್ವರ ಕೃಪೆಯಿಂದ ನಮಗೆ ಲಭ್ಯವಾಯಿತು. ಆ ಪ್ರಸಾದ ಸೇವಿಸಲಿಕ್ಕೆ ಕರೆಸಿದೆ ಇಷ್ಟೆ.

ಹರಳಯ್ಯ : ಶುಭಾಂಗೀ, ಅಂಥಾ ಮಹಾಪ್ರಸಾದ ನಮಗೆ ಪ್ರಾಪ್ತವಾದದ್ದು ಆದ್ಯಾವ ನಮ್ಮ ಪೂರ್ವ ಜನ್ಮದ ಪುಣ್ಯವೋ ಏನೋ; ಬಹಳ ಒಳ್ಳೆಯದಾಯಿತು. ನಾವು ಸಂತೋಷದಿಂದ ಪ್ರಸಾದ ಸೇವನೆ ಮಾಡೋಣ. ಮಜ್ಜನವಾಗಿದೆ. ಲಿಂಗಪೂಜಾ ನೆರವೇರಲ್ಪಟ್ಟಿದೆ. ಮತ್ತೇನು ಆ ಪ್ರಸಾದ ಎಡೆಮಾಡು. ಮೂವರೂ ಒಮ್ಮೆಲೇ ಕೂತು ಆರೋಗಿಸೋಣ. ಮಗೂ ಸದಾಶಿವಾ ಕೂಡ್ರು, ಊಟ ಮಾಡೋಣ.

ಸದಾಶಿವ : ಅಪ್ಪಾ ಕೂತೆ (ಚನ್ನವ್ವ ಎಡೆಮಾಡಿಕೊಡುವಳು).

ಮೂವರೂ : ಪಾರ್ವತೀಪತೇ ಹರಹರ ಮಹಾದೇವ (ಎಂದು ತಮ್ಮ ಇಷ್ಟ ಲಿಂಗಕ್ಕೆ ಅರ್ಪಿಸಿ ಊಟಮಾಡುವರು).

ಹರಳಯ್ಯ : ಕೋಮಲೆ, ಈ ಪ್ರಸಾದದ ರುಚಿಯೂ, ಅಂದಗಾರಿಕೆಯೂ ಎಂಥ ಹೆಚ್ಚಿನದೇ ! ನಾನು ಇಲ್ಲಿಯವರೆಗೆ ಇಂಥ ಸ್ವಾದಿಷ್ಟ ಪಕ್ವಾನ್ನ ಎಂದೂ ಕಂಡಿದ್ದಿಲ್ಲ. ಈ ಹೊತ್ತು ನೀನು ಹ್ಯಾಗೆ ಪ್ರಯತ್ನ ಮಾಡಿ ತಂದೆಯೋ. ನಿನ್ನಿಂದ ಕಂಡೆ, ಉಂಡು ತೃಪ್ತನಾದೆ. ಪ್ರಸಾದದ ಮಹಿಮೆಯನ್ನು ಶಾಸ್ತ್ರಗಳಲ್ಲಿ ಸರಸಾಗಿ ಬಣ್ಣಿಸಿದೆ. ಅಂಥಾ ಮಹಾಪ್ರಸಾದ ಈ ಹೊತ್ತು ಸೇವಿಸಿದ್ದರಿಂದ ನಮ್ಮ ಜನ್ಮ ಪಾವನವಾದವು, ಕಂಡಿಯಾ.

ಸದಾಶಿವ : ಅಪ್ಪಾ, ಇಂಥಾ ಮಹಾಪ್ರಸಾದ ದಿನಾಲು ನಮಗೆ ದೊರೆಯುವಂತೆ ಶಿವನು ನಮ್ಮ ಮೇಲೆ ದಯಮಾಡಬಾರದೇನು. ನೋಡು, ನನಗೆ ಇನ್ನು ಮೇಲೆ ಪ್ರತಿದಿನ ಇಂಥ ಊಟವೇ ಬೇಕು.

ಚನ್ನವ್ವ : ಸದಾಶಿವಾ, ಪರಮಾತ್ಮನ ಕೃಪೆ ಇದ್ದರೆ ಸಿಕ್ಕೀತು. ದಿನಾಲು ನೀನು ಆತನನ್ನು ಭಕ್ತಿಯಿಂದ ಪೂಜಿಸುತ್ತ ಭಜಿಸುತ್ತಿದ್ದರೆ ಕೊಟ್ಟೇ ಕೊಡುವನು. ಹಾಲು ಬೇಕೆಂದು ಹಟಮಾಡಿದ ಉಪಮನ್ಯುವಿಗೆ ಬೇಕಾದಷ್ಟು ಕುಡಿಯೆಂದು ಹಾಲಿನ ಸಮುದ್ರವನ್ನೇ ತೋರಿಸಲಿಲ್ಲವೇ. ಅದರಂತೆ ನಿನಗೂ ಕೊಟ್ಟಾನು. ಆತನನ್ನು ಅನನ್ಯ ಭಾವದಿಂದ ಪೂಜಿಸಲಿಕ್ಕೆ ಬೇಕು ಇಷ್ಟೇ. ಅಂದರೆ

ಭಕ್ತರು ಬೇಡಿದ್ದನ್ನು ತಕ್ಷಣವೇ ಕೊಡಲಿಕ್ಕೆ ಆ ಮಹಾದೇವನು ಸಿದ್ಧನಾಗಿಯೇ ನಿಂತಿರುವನು, ತಿಳಿಯಿತೇ.

ಸದಾಶಿವ : ಹಾಗಿದ್ದರೆ ನಾನು ಆತನನ್ನು ಭಕ್ತಿಯಿಂದ ದಿನಾಲು ತಪ್ಪದೆ ಪೂಜಿಸುವೆನವ್ವಾ. ಆ ಅಂದರೆ ಇಂಥ ಪ್ರಸಾದ ಆತನು ನನಗೆ ದಿನಾಲೂ ಕೊಡಲಿ.

ಹರಳಯ್ಯ : ಸುಶೀಲೇ, ದ್ವಿತೀಯ ಶಂಭುವೆನಿಸಿದ ಆ ಬಸವಪ್ರಭುವಿನಗೂಡ ಒಂದೆರಡು ಸರಸ ಮಾತುಗಳನ್ನಾಡಿ ಅವರ ಪ್ರೇಮ ಸಂಪಾದಿಸಿಕೊಳ್ಳಬೇಕೆಂಬಾಸೆ ನನಗೆ ಬಹು ದಿವಸದಿಂದ ಇದೆ. ಆದರೆ ಅದು ಸಾಧಿಸಲೊಲ್ಲದು. ಅಂಥ ಪುಣ್ಯ ಸಮಯ ಎಂದು ಒದಗುವುದೋ ಶಿವನೇ ಬಲ್ಲ.

ಚನ್ನವ್ವ : ಅಷ್ಟೊಂದು ಇಚ್ಛೆ ಇದ್ದರೆ ಈಗಲೇ ಹೋಗಿರಿ. ಆ ಪ್ರಭುವು ದಿನಾಲು ನೆರವೇರಿಸಲ್ಪಡುವ ಗಣಾರಾಧನೆ ಈಗ ಮುಗಿದಿದೆ. ಅವರೂ ಇಷ್ಟೊತ್ತಿಗೆ ಪ್ರಸಾದ ತಕ್ಕೊಂಡಿರಬಹುದು. ಇನ್ನು ತಡವಾಡದೆ ಅವರು ರಾಜದರ್ಬಾರಿಗೆ ಆಗಮಿಸುವರು. ದಾರಿಯಲ್ಲಿ ನೀವು ಹೋಗಿ ಅವರಿಗೆ ಶರಣು ಅರ್ಪಿಸಿದರೆ ಆ ಪ್ರಭುವಿನ ದೃಷ್ಟಿ ತಪ್ಪದೇ ನಿಮ್ಮ ಮೇಲೆ ಬೀಳುವುದು. ತಿಳಿಯಿತೇ ಇಷ್ಟು ಮಾಡಿರಿ.

ಹರಳಯ್ಯ : ಹೌದು, ಇದು ಒಳ್ಳೇ ಹಂಚಿಕೆ. ಪ್ರಿಯೆ, ಹಾಗಾದರೆ ಈಗಲೇ ಹೋಗಿ ರಾಜಬೀದಿಯಲ್ಲಿ ಅವರ ಮಾರ್ಗ ನಿರೀಕ್ಷಿಸುತ್ತ ನಿಲ್ಲುತ್ತೇನೆ.

ಚನ್ನವ್ವ : ಬೇಗ ಹೋಗಿರಿ. ಪರಮಾತ್ಮನು ಅನುಗ್ರಹ ಮಾಡುವನು. (ಹೋಗುವನು).

ಮಗುವೇ ಯಜಮಾನರು ಬರುವವರೆಗೆ ಓರಿಗೆಯ ಬಾಲಕರೊಡನೆ ಆಡವಾಡಲಿಕ್ಕೆ ಹೋಗು. ನಾನು ನನ್ನ ಕೆಲಸಕ್ಕೆ ತೊಡಗುತ್ತೇನೆ.

ಸದಾಶಿವ : ಅವ್ವಾ ಹಾಗೇ ಆಗಲಿ (ಹೋಗುವನು).

ಸ್ಥಳ : ರಾಜಬೀದಿ

(ಬಸವೇಶ ಮಂತ್ರಿಗಳು ರಾಜಬೀದಿಯಲ್ಲಿ ಬರುತ್ತಿರುವದನ್ನು ಹರಳಯ್ಯನು ನೋಡಿ).

ಹರಳಯ್ಯ : ಓಹೋ. ಬಸವೇಶ ಪ್ರಭುಗಳು ಬಂದರು. (ಸಮೀಪಕ್ಕೆ ಹೋಗಿ) ಪ್ರಭುಗಳೇ, ತಮ್ಮ ದಾಸಾನುದಾಸನಾದ ಈ ಹರಳನೆಂಬ ಅಂತ್ಯಜನ ಶರಣು. (ಎಂದು ವಂದಿಸುವನು).

ಬಸವ : ಶರಣಂಗೆ ಶರಣು ಮಹಾ ಶರಣು. ಹರಳಯ್ಯ ಏಳು, ಏನು ನಿನ್ನ ಅಭಿಲಾಷೆ? ಅಂಜಬೇಡ. ಎಂಥದಿದ್ದರೂ ಹೇಳು.

ಹರಳಯ್ಯ : (ಗಾಬರಿಯಾಗಿ) ಪ್ರಭುಗಳೇ ಇದೇನು, ತಮ್ಮ ವಾಣಿಯಿಂದ ಶರಣಂಗೆ ಶರಣು ಮಹಾಶರಣು ಎಂದು ಉದ್ಗಾರ ಹೊರಡಲಿಕ್ಕೆ ಕಾರಣವೇನು? ನಾನೊಬ್ಬ ದರಿದ್ರ ಹೊಲೆಯ. ನೀವು ನೋಡಿದರೆ ರಾಜ್ಯಭಾರ ನಡೆಸುವಂಥ ಪ್ರಧಾನಮಂತ್ರಿಗಳು. ನೀವೆತ್ತ ಹರಕ ಹೊಲೆಯ ನಾನೆತ್ತ ! ಇಂಥಾ ನನಗೆ ನೀವು ಮಹಾಶರಣು ಅನ್ನಬೇಕೆ? ಇದು ಆಶೀರ್ವಾದವೋ ಅಥವಾ ನನ್ನ ವಂಶಾರಣ್ಯವನ್ನೇ ದಗ್ಧಗೊಳಿಸುವ ದಾವಾನಲವೋ. ದ್ವಿತೀಯ ಶಂಭುವೇ, ಏನೇನೂ ತಿಳಿಯದ ನಾನು ನಿಮ್ಮ ಗೂಡ ಹ್ಯಾಗೆ ವರ್ತಿಸಬೇಕೆಂಬುವದು ಗೊತ್ತಿಲ್ಲದೆ ನಡುದಾರಿಯಲ್ಲಿ ಹೀಗೆ ಶರಣು ಎಂದು ವಂದಿಸಿದ್ದು ಅಯೋಗ್ಯವಿದ್ದರೆ ಕ್ಷಮಿಸುವ ಕೃಪೆಯಾಗಬೇಕೆಂದು ಪಾದದಲ್ಲಿ ಬೇಡಿಕೊಳ್ಳುವೆನು (ಎಂದು ಕೈ ಮುಗಿಯುವನು).

ಬಸವ : ಏನು ಹರಳಯ್ಯ, ನೀನು ಹೀಗೆ ಗಾಬರಿಯಾಗಬಹುದೇ? ನೀನು ಹೊಲೆಯಕುಲ ಸಂಭೂತನಾದರೂ ಹಾಗೆಂದು ಭಾವಿಸಬೇಡ ಕಂಡಿಯಾ. ಮಹಾ ಶಿವಭಕ್ತನಿರುವೆಯೆಂದು ನಾನು ಮೊದಲೇ ತಿಳಿದಿದ್ದೇನೆ. "ಭಕ್ತಃ ಪ್ರಾಣೋಮಯ" ಅಂದರೆ ಭಕ್ತರೇ ನನ್ನ ಪ್ರಾಣ ಸ್ವರೂಪರೆಂದು ಆ ಪರಮಾತ್ಮನು ಸ್ವತಃ ತನ್ನ ವಾಣಿಯಿಂದಲೇ ನುಡಿದಿರುವನೆಂದ ಮೇಲೆ ಆತನ ಭಕ್ತನಾದ ನೀನು ಆ ಶಿವನೇ ಇರುವಿಯೆಂದು ನಿಶ್ಚಯವಾಗಿ ನಂಬಿ, ಮಹಾಶರಣುಯೆಂದು ನಿನ್ನನ್ನು ವಿಶೇಷವಾಗಿ ಗೌರವಿಸಿದ್ದೇನೆ. ಅನ್ಯಥಾ ತಿಳಿದು ಭಯಪಡಬೇಡ.

ಹರಳಯ್ಯ : ಪ್ರಭೋ, ಯಃಕಶ್ಚಿತ ಪಾಮರನಾದ ನಾನು ಅಂಥ ಗೌರವಕ್ಕೆ ಪಾತ್ರನಲ್ಲ. ಗುಬ್ಬಿಗೆ ಬ್ರಹ್ಮಾಸ್ತ್ರ ಹೂಡಿದಂತೆಯೂ, ಬಾಳೆಗೆ ಬಿರುಗಾಳಿ ಬೀಸಿದಂತೆಯೂ ಇದಾಯಿತು. ಅಂದಮೇಲೆ ನನ್ನ ಪ್ರಾಣ ಹ್ಯಾಗೆ ಉಳಿಯಬೇಕು. ಎನ್ನೆದೆಯೊಡೆದು ನೀರಾಗಿ ಹೋಗಿದೆ. ಮಹಾತ್ಮರೇ, ಕೃಪೆ ಮಾಡಬೇಕು.

ಬಸವ : ಹರಳಯ್ಯ, ನಿಮ್ಮಂಥ ಮಹಾಶರಣರ ಕೃಪೆ ಪಡೆಯುವುದೇ ನನ್ನ ಧ್ಯೇಯ. ಹೀಗಿದ್ದು ನೀನು ಕೃಪೆ ಮಾಡೆಂದು ನನ್ನನ್ನು ಪ್ರಾರ್ಥಿಸುವುದು ಇದಾವ ಕಡೆಯ ಮಾತು. ಹಾಗೆ ಇನ್ನೂ ನಿನ್ನ ಸಂಶಯ ಬಿಡದಿದ್ದರೆ ನೀನು ಶರಣೆಂದುದಕ್ಕೆ ನಾನೂ ಶರಣು ಅನ್ನುವದು ಯೋಗ್ಯವೋ ಅಯೋಗ್ಯವೋ?

ಹರಳಯ್ಯ : ಶರಣಂಗೆ ಶರಣು ಅನ್ನುವದು ಯೋಗ್ಯವು. ಅಷ್ಟೇ ಅನ್ನದೆ ಮೇಲೆ ಮಹಾಶರಣು ಎಂದು ಪ್ರಸ್ತಾಪಿಸಿದಿರಿ. ಅಂದ ಮೇಲೆ ನೀವು ನನ್ನನ್ನು ಪಾತಾಳಕ್ಕೆ ತಳ್ಳಿದಂತಾಯಿತಲ್ಲವೇ? ನೀವೇ ನೋಡಿರಿ.

ಬಸವ : ಹಾಗಲ್ಲ ಹರಳಯ್ಯ, ಒಳ್ಳೆ ವಿಚಾರಮಾಡು. ನೀನು ಶರಣೆಂದುದಕ್ಕೆ ನಿನ್ನ ಶರಣು ನಿಂಗೆ ಸಲ್ಲಿತು. ನೀನು ಮಹಾಶರಣ. ಇಷ್ಟಲಿಂಗಧಾರಿಯಾದ್ದರಿಂದ ನನ್ನ ಇಷ್ಟಲಿಂಗವೇ ನಿನ್ನ ಕಂಠಗತನಾಗಿದ್ದಾನೆ. ನನ್ನವನಿಗೂ ನಿನ್ನವನಿಗೂ ತಿಲಾಂಶ ಸಹ ಭೇದವನ್ನೆಣಿಸದ ನಾನು ಆ ಮಹಲಿಂಗನಿಗೆ ಮಹಾಶರಣು ಅರ್ಪಣವಾಗಲೆಂದು ನುಡಿದಿದ್ದೇನೆ. ಇಷ್ಟೇ ಶರಣ ಶ್ರೇಷ್ಠ. ಈಗಾದರೂ ಇದರ ಮರ್ಮ ತಿಳಿಯಿತೇ? ಇನ್ನು ನಿನ್ನ ಸಂದೇಹ ಬಿಟ್ಟು ಸಾನಂದಚಿತ್ತನಾಗಿ ಏನಾದರೂ ಕೇಳುವದಿದ್ದರೆ ಕೇಳು.

ಹರಳಯ್ಯ :– ॥ ಪದ ॥

ತೊಲಗಿತು ಸಂಶಯವೀಗಾ । ಸುಲಲಿತ ತವಬೋಧೆಯಿಂದ ಪಾವನನಾದೇ ॥
ಕಲುಷಾರಣ್ಯಕೆ ಬಡಬಾನಲ । ನೀನಹುದಯ್ಯ ಭಕ್ತಜನವನ ಚೈತ್ರಾ ॥ ೧ ॥

ಹರಳಯ್ಯ : ದೊರೆಯೇ, ನಾನು ಹರ್ಷಿತನಾದೆ. ದೊಡ್ಡವರಾದ ತಾವು ಮಹಾಶರಣು ಎಂದು ಕಿರುಳುಕನಾದ ನನಗೆ ನುಡಿದದ್ದು ದೊಡ್ಡ ಆಘಾತವೆಂದು ತಿಳಿದಿದ್ದೆ. ಶಿವಭಕ್ತರೆಲ್ಲರೂ ಶಿವಸ್ವರೂಪರೇ ಎಂದು ಮನದಟ್ಟಾದ ನಿಮ್ಮ ಭಾವನೆ ನನಗೀಗ ಪ್ರಕಟವಾಯಿತು. ನಿಮ್ಮ ವಾಣಿಯಿಂದ ಹೊರಟ ಮಾರ್ಮಿಕ ತತ್ವವು, ನಿಮ್ಮ ವಿಚಾರ ಸರಣಿಯು ಅಗಾಧವಾದದ್ದೂ ಆಗಮಸಾರ ಪರಿಪೂರ್ಣವಾದದ್ದೂ ಎಂಬುದು ನನ್ನ ನಿದರ್ಶನಕ್ಕೆ ಬಂದು ನೀವು ಜಗತ್ಪೂಜ್ಯರೇ ಇದ್ದು ಜಗದೋದ್ಧಾರಕ್ಕಾಗಿಯೇ ಅವತರಿಸಿ ಬಂದಿರುವಿರೆಂಬುದನ್ನು ಈಗ ಮನಗಂಡೆನು. ಕರುಣಾಸಿಂಧುಗಳೇ ನಿಮ್ಮ ದರ್ಶನ, ಸಂಭಾಷಣೆಯಿಂದ ಕೃತಾರ್ಥನಾದೆ. ಇನ್ನು ಗಮನಿಸಿರಿ. ಆದರೆ ಬಡವನಾದ ನನ್ನ ಮೇಲೆ ದಯವಿರಲಿ ಇಷ್ಟೇ ಬೇಡುವೆನು.

ಬಸವ : ನನ್ನ ದಯವೆಷ್ಟರದು? ಆ ಪರಮಾತ್ಮನ ಕೃಪೆ ನಿನ್ನ ಮೇಲೆ ಸಂಪೂರ್ಣವಿದೆ. ಕಾಮಧೇನುವನ್ನಾಶ್ರಯಿಸಿದವನು ಬರಡಾಕಳನ್ನಾಶಿಸಿ ಫಲವೇನು? ನಿನಗೆಂದೆಂದೂ ಶ್ರೇಯಸ್ಸೇ ಉಂಟು ಹೋಗು. (ಹರಳಯ್ಯ ನಮಿಸುವನು– ಬಸವಯ್ಯ ಅತ್ತ ಸಾಗುವನು).

ಹರಳಯ್ಯ : ಬಸವ ದಂಡೇಶನ ವಿಚಾರವು ಅಮೋಘವಾದದ್ದು.

(ಚನ್ನವ್ವ ಬರುವಳು)

ಚನ್ನವ್ವ : ಪ್ರಾಣೇಶನು ಬಸವೇಶ್ವರರ ದರ್ಶನಕ್ಕೆ ಹೋದವರು ಇನ್ನೂ ಬರಲಿಲ್ಲ. ಯಾಕೆ ತಡೆದಿರಬಹುದು. (ಅತ್ತ ಕಡೆ ನೋಡಿ) ಓಹೋ ಬಂದರು. (ಹರಳಯ್ಯ ಬರಲು) ನಾಥಾ, ಬಸವಪ್ರಭುಗಳ ದರ್ಶನವಾಗಿ ಕ್ಷೇಮಕರ ಸಂಭಾಷಣೆಗಳೇನಾದರೂ ನಡೆದು ಮನಸ್ಸಿಗೆ ಸಮಾಧಾನವಾಯಿತೋ ಹ್ಯಾಗೆ?

ಹರಳಯ್ಯ : ಮಾನಿನಿ, ಆ ಮಹಾತ್ಮನ ದರ್ಶನವಾಯಿತು. ಸಂಭಾಷಣವಾದರೂ ಆಯಿತು. ಆ ಸಂಭಾಷಣೆಯ ರೀತಿಯು ನನ್ನನ್ನು ಬಹು ಗಾಬರಿಗೊಳಿಸಿತ್ತು. ನಾನು ಅಧಃಪತನಕ್ಕೇ ಇಳಿದೆನೆಂದು ತಿಳಿದಿದ್ದೆ. ಆದರೆ ಆತನು ಕರುಣಾಮಯನು. ನನ್ನ ಭಯಭೀತ ಸ್ಥಿತಿ ಕಂಡು ಆ ಮಾತಿನ ಕ್ರಮ ತಿಳಿಸಿ ಸಮಾಧಾನಗೊಳಿಸಿದನು. ಚನ್ನೆ, ಆ ಬಸವೇಶನ ಉದಾತ್ತ ತಾತ್ವಿಕ ವಿಚಾರವು ಅಗಮ್ಯವಾಗಿದೆ ತಿಳಿಯಿತೇ.

ಚನ್ನವ್ವ : ನೀವು ಭಯಭೀತರಾಗುವಂಥ ಮಾತಿನ ಪ್ರಸಂಗ ಅದೆಂತು ನಡೆಯಿತು?

ಹರಳಯ್ಯ : ಎಂತೆಂದರೆ, ನಾನು ಆ ಮಹಾನುಭಾವನ ಸಮೀಪಕ್ಕೆ ಹೋಗಿ ನಮಸ್ಕಾರ ಮಾಡುತ್ತ ಶರಣೆಂದು ನುಡಿದೆ. ಅದಕ್ಕೆ ಆತನು ಪ್ರತಿಯಾಗಿ ಶರಣಂಗೆ ಶರಣು ಮಹಾಶರಣು ಅಂದನು. ನಾನು ಒಮ್ಮೆ ಶರಣೆಂದುದಕ್ಕೆ ಆತನು ಒಂದೇ ಶರಣು ಅಂದಿದ್ದರೆ ನಾನು ಬೆದರುತ್ತಿದ್ದಿಲ್ಲ. ಒಮ್ಮೆ ಶರಣೆಂದ ಮೇಲೆ ಮಹಾಶರಣು ಎಂದು ಅಂದುಬಿಟ್ಟನು. ಅಂದ ಮೇಲೆ ಯಃಕಶ್ಚಿತನಾದ ನಾನು ಬಡವ, ಆತನು ಮಹಾಮಂತ್ರಿ, ಅಂಥವನು ನನ್ನನ್ನು ದ್ವಿರುಕ್ತಿಯಿಂದ ಸಂಭಾವಿಸಿದ್ದೆಂದರೆ ಇದೇನೋ ಎನ್ನ ಕೆಟ್ಟ ಪರಿಣಾಮವೇ ಎಂದು ತಿಳಿದೆ. ಪ್ರಭೋ, ಹೀಗ್ಯಾಕೆ ಅಂದೆ. ಕರುಣಿಸಬೇಕೆಂದು ನಾನು ಬಿನ್ನವಿಸಿಕೊಳ್ಳಲು, ನೀನು ಅಂಜಬೇಡ ನಿನಗೊಂದು ಶರಣು, ನೀನು ಕೊರಳಲ್ಲಿ ಧರಿಸಿದಂಥ ಲಿಂಗಯ್ಯನಿಗೊಂದು ಮಹಾಶರಣನ್ನರ್ಪಿಸಿದೆ. ಇದರಲ್ಲೇನೂ ತಪ್ಪಿಲ್ಲವೆಂದು ತಿಳಿಸಿ ನನ್ನನ್ನು ಕೃತಾರ್ಥಗೊಳಿಸಿದನು. ಸುಶೀಲೆ, ಏನು ಅವನ ವಿಚಾರ ಸರಣಿಯು. ಅಂತೇ ಆತನು ಮಹಾತ್ಮನೆನಿಸಿರುವನು. ಅವನಲ್ಲಿ ದಯಾ-ಧರ್ಮದ ಕೋಡಿಯು ಸದಾ ಹರಿಯುತ್ತಿರುವುದು. ಅದನ್ನೇನು ವರ್ಣಿಸಲಿ.

ಚನ್ನವ್ವ : ಹೌದು, ಈ ಮಾತು ನಿಜ. ಅಂಥಾದ್ದೇನು ಮಾಡಬೇಕು? (ವಿಚಾರಿಸಿ) ಹುಂ, ಹೀಗೆ ಮಾಡುವದೇ ಸರಿಯಾದದ್ದು. ಪ್ರಿಯತಮೆ, ನಾವು ಆತನಿಗೆ ಮೆಟ್ಟಲಿಕ್ಕೆ ಅಪರೂಪವಾದ ಪಾದರಕ್ಷೆಯ ಜೋಡನ್ನು ಮಾಡಿಕೊಡೋಣ.

ನಮ್ಮಿಂದಾಗತಕ್ಕ ಕೆಲಸವಿದೇ. ಇದಕ್ಕೂ ಹೆಚ್ಚಿನದು ನಮ್ಮಿಂದಾಗತಕ್ಕದ್ದಿಲ್ಲ. ಇದಕ್ಕೆ ನಿನ್ನ ಅಂಬೋಣವೇನು?

ಚನ್ನವ್ವ : ಹೌದು, ನಮ್ಮಿಂದಾಗುವಷ್ಟನ್ನು ಮಾಡಲೇಬೇಕು. ಆ ಪ್ರಭುವಿಗೆ ಸಲ್ಲತಕ್ಕಂಥ ಚಪ್ಪಲಿ ಆಗಬೇಕು. ನೋಡಿದವರೆಲ್ಲರಿಗೂ ಈ ಜೋಡನ್ನು ಮೆಟ್ಟುವ ಯೋಗ್ಯತೆ ನಮ್ಮದಲ್ಲವೆಂದು ಒಡೆದು ಕಾಣುವಂತೆ ಶೋಭಾಯಮಾನವಾಗಿರಬೇಕು. ಹಾಗೆ ಕಾಣಲು ಹ್ಯಾಗೆ ಮಾಡಬೇಕೋ ಹಾಗೆ ಮಾಡಿಕೊಟ್ಟರೆ ಕೊಟ್ಟದ್ದು ಸಾರ್ಥಕವಾಗುವದು.

ಹರಳಯ್ಯ : ಹಾಗೆಂತು ಮಾಡಬೇಕು, ನೀನೇ ಹೇಳು. ಅದರಂತೆ ಮಾಡುವೆನು.

ಚನ್ನವ್ವ : ನಾನು ಹೇಳುವದೆಂದರೆ ಆ ಜೋಡಿಗೆ ಮುತ್ತು ಮಾಣಿಕ ವಜ್ರ ಹರಳುಗಳನ್ನು ಅಲ್ಲಲ್ಲಿ ಹಚ್ಚಿ ಅದರ ಬೆಲೆಯನ್ನು ಕಟ್ಟಲು ಸಾಧ್ಯವಲ್ಲವೆನ್ನುವಂತೆ ಮಾಡಬೇಕು.

ಹರಳಯ್ಯ : ಅಂಥಾ ಮುತ್ತುರತ್ನಗಳು ನಮಗೆಲ್ಲಿಂದ ಬರಬೇಕೇ? ಇದೇನು ಹೌರಗೆ ಹೇಳಿಬಿಟ್ಟೆ. ಕಾಜಿನ ಮಣಿಗಳನ್ನು ತರುವಷ್ಟೂ ನಮಗೆ ಶಕ್ತಿ ಇಲ್ಲ. ಬರೆ ಬಾಯಿಂದ ಅಂದರೆ ಅದಂತಾಯಿತೇನು?

ಚನ್ನವ್ವ : ನಾಥಾ, ಬರೆ ಬಾಯಿಂದ ಹೇಳುವ ಹೆಂಗಸು ನಾನಲ್ಲ. ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ನಾನು ಕೊಡುವೆನು. ನೀನು ಚಪ್ಪಲಿ ತಯಾರಿಸುವ ಹಂಚಿಕೆ ಮಾಡು.

ಹರಳಯ್ಯ : ನೀನು ಮುತ್ತು ರತ್ನಗಳನ್ನು ಕೊಡುವೆಯೋ?

ಚನ್ನವ್ವ : ಹೌದು ಕೊಡುವೆನು.

ಹರಳಯ್ಯ : ಎಲ್ಲಿಂದ ಕೊಡುವಿ?

ಚನ್ನವ್ವ : ಎಲ್ಲಿಂದೆಂದರೆ, ದ್ವಿತೀಯ ಶಂಭುವೆನಿಸಿದ ಆ ಬಸವಪ್ರಭುವು ಮೆಟ್ಟಲಿಕ್ಕೆ ಆ ಪಾದರಕ್ಷೆ ಶೃಂಗಾರವಾಗಲು ಮಹಾದೇವನನ್ನು ಪ್ರಾರ್ಥಿಸಿ ನನ್ನ ತೊಡೆಯೊಳಗೆ ಅಮೂಲ್ಯ ಮುತ್ತುರತ್ನಾದಿಗಳು ಉಂಟಾಗಲೆಂದು ಸಂಕಲ್ಪಿಸಿ ಕೇಳುವೆನು. ಇಂಥಾ ಮಹಾತ್ಮರ ಸೇವಾ ಕೆಲಸಕ್ಕಾಗಿ ಆ ಶಿವನು ಕರುಣಿಸದಿರುವನೇ? ತಕ್ಷಣವೇ ಬೇಡಿಕೊಳ್ಳುವೆನು. ಬೇಕಾದಷ್ಟು ಮುತ್ತುರತ್ನಗಳು ಸಿಗುವವು. ಅವನ್ನು ತಕ್ಕೊಂಡು ಜೋಡಿಗೆ ಹೊಂದಿಸಿಕೊಳ್ಳಬೇಕು ಮತ್ತೇನು?

ಹರಳಯ್ಯ :– ॥ ಪದ ॥

ಧನ್ಯ ಧನ್ಯ ಪರಮ ಸಾಧ್ವಿ । ನೀನೇ ಧನ್ಯ ಜಗದೊಳು ॥ ಪ ॥
ಎಷ್ಟು ಪೊಗಳಲಾರಿಗಳವು । ಶ್ರೇಷ್ಠ ನಿನ್ನಯಭಿಮತ ।
ಸೃಷ್ಟಿಯೊಳು ನಾ ಕಾಣೆನಿಂಥ । ನಿಷ್ಠೆ ಭಾಪು ಭಾಪು ಓಹೋ ॥ ೧ ॥

ಭಾಪು ಭಾಪು ಪರಮ ಸಾಧ್ವಿಯೇ ಭಾಪು. ನಿಮ್ಮಂಥ ಸುಶೀಳೆಯರ ಶ್ರೇಷ್ಠತಮ ಸತ್ವದ ಪ್ರಭಾವಕ್ಕೆ ಆ ಪರಮಾತ್ಮನೇ ಭ್ರಾಂತನಾಗಿರುವಲ್ಲಿ ಉಳಿದವರ ಪಾಡೇನು? ಅಂತೆಯೇ ಅನಸೂಯಾದೇವಿಗೆ ತ್ರಿಮೂರ್ತಿಗಳು ಮಕ್ಕಳಾದರು. ಅನಲಾಯಿಗೆ ಕಾಡ್ಗಿಚ್ಚು ಶೀತಳವಾಯಿತು. ಯಮನ ಕೈಯೊಳಗೆ ಸಿಕ್ಕ ಗಂಡನನ್ನು ಸಾವಿತ್ರಿದೇವಿ ಪುನಃ ಬದುಕಿಸಿದಳು. ಶಾಂಡಿಲಿಯ ಪ್ರಭಾವಕ್ಕಂಜಿ ಸೂರ್ಯನು ಹತ್ತು ದಿವಸ ಉದಯವಾಗದೇ ನಿಂತನು. ಇಂಥಾ ಸುಮಂಗಲೆಯರಿಗೆ ಜನ್ಮ ಕೊಟ್ಟ ಈ ಭೂಮಾತೆಯು ನಿಮ್ಮಂಥವರಿಂದಲೇ ಪಾವನಳಾಗಿದ್ದಾಳೆ. ಮಾನಿನಿ, ನಿನ್ನ ಸಂಕಲ್ಪ ಎಂದೂ ಸುಳ್ಳಾಗದು. ನೀನು ನಿನ್ನ ತೊಡೆ ಸೀಳಿ ಕೊಡುವದು ಬೇಡ. ಈ ಕೆಲಸ ನನ್ನದಾದ್ದರಿಂದ ನಾನೇ ನನ್ನ ತೊಡೆ ಸೀಳಿ ಬೇಕಾದಷ್ಟು ಮುತ್ತುರತ್ನ ಪಡೆದು ಪಾದರಕ್ಷೆ ತಯಾರಿಸುವೆನು. ವಿಲಂಬವ್ಯಾಕೆ ಈಗಲೇ ಸೀಳುವೆನು. ಭೋ ಜಗದ್ರಕ್ಷಕಾ, ಭಕ್ತ ಬಾಂಧವಾ, ಗೌರೀಧವಾ ಬಸವೇಶ್ವರ ಯೋಗ್ಯತೆಗೊಪ್ಪತಕ್ಕಂಥ ಪಾದುಕೆಗಳನ್ನು ತಯಾರಿಸಲು ಮುತ್ತು ರತ್ನ ಬೇಕು. ಅವುಗಳ ಸಲುವಾಗಿ ನನ್ನ ತೊಡೆಯನ್ನು ಸೀಳುವೆನು. ಮೇದಾರ ಕೇತಯ್ಯ ಕಡಿಯುವ ಬಿದಿರುಗಳೊಳಗೆ ಮುತ್ತುರತ್ನಗಳನ್ನು ಹೇರಳವಾಗಿ ಹ್ಯಾಗೆ ತುಂಬಿದ್ದಿಯೋ ಅದರಂತೆ ಈಗ ನನ್ನ ತೊಡೆಯೊಳಗೆ ತುಂಬಿರಿಸು ತಿಳಿಯಿತೇ. (ಎಂದವನೇ ತೊಡೆಯನ್ನು ಸೀಳಲು ಸಾಕಷ್ಟು ಮುತ್ತು ಮಾಣಿಕಗಳುದುರುವವು. ಅವನ್ನು ನೋಡಿ).

ನೋಡು ಪ್ರಮದೆ, ದಯಾಸಾಗರನಾದ ಪರಮಾತ್ಮನು ನನ್ನ ತೊಡೆಯೊಳಗಿಂದ ಮಿತಿಯಿಲ್ಲದಷ್ಟು ನವರತ್ನ ಸುರುಹಿದನು. ಈ ರತ್ನಗಳು ಅದೆಷ್ಟು ಝಗ ಝಗಾಯಿಸ ಹತ್ತಿವೆ. ಇನ್ನೇನು ಇವನ್ನು ತಕ್ಕೊಂಡು ಚಪ್ಪಲಿಗಳನ್ನು ಈಗಲೇ ತಯಾರಿಸುವೆನು.

ಚನ್ನವ್ವ : ಪರಮಾತ್ಮನ ಮಹಿಮೆ ಅಗಾಧವಾದದ್ದು. ಆಗಲಿ, ಇನ್ನು ಬೇಗನೆ ಪಾದರಕ್ಷೆಯ ಕೆಲಸಕ್ಕಾರಂಭ ಮಾಡಿರಿ. ಶಿವಪೂಜಾ ಸಮಯವು ಸಮೀಪಿಸಿತು. ನಾನು ನನ್ನ ಕೆಲಸ ನೋಡಿಕೊಳ್ಳುವೆ.

ಹರಳಯ್ಯ : ಹೋಗು.

(ಪಾದರಕ್ಷೆ ಹೊಲಿಯುತ್ತ ಅಲ್ಲಲ್ಲಿ ಮುತ್ತು ರತ್ನಾದಿಗಳನ್ನು ಜೋಡಿಸುವನು)

ಕಂದ ॥ ಆದವು ಚಪ್ಪಲಿಯಾಗಳೆ ।

ಮೇದಿನಿ ಜನ ಭಾಷುಯೆಂದು ಕೊಡಹಲಿ ಶಿರಮಂ ॥
ಮೋದವು ಪೆರ್ಚೆಯಮಾತ್ಯಂ ।
ಸಾದರದಿಂ ಕಾಣ್ಬನೆನ್ನನೆಂದವ ತಿಳಿದಂ ॥ ೧ ॥

ಸುಶೀಲೆ, ಪಾದರಕ್ಷೆ ತಯಾರಿಸಿದೆ ಹ್ಯಾಗಾಗಿವೆ ನೋಡು.

ಚನ್ನವ್ವ : (ನೋಡಿ) ಓಹೋ, ಅತ್ಯುತ್ತಮವಾದವು. ಆ ಬಸವ ಪ್ರಭುವಿನ ಪಾದಕ್ಕೆ ಒಪ್ಪುವಂಥವಾದವು. ನೋಡುವವರಿಗೆ ಆಶ್ಚರ್ಯಕರವಾದವು. ನಾಥಾ, ನಿನ್ನ ಬುದ್ಧಿ ಚಾತುರ್ಯಕ್ಕೆಣೆಯಿಲ್ಲ. ಇಗೋ ತಕ್ಕೊಳ್ಳಿ (ಕೊಟ್ಟು) ಆ ಮಹಾತ್ಮರಿಗೆ ಈಗಲೇ ಒಯ್ದು ಮುಟ್ಟಿಸಿ ಬಿಡಿರಿ; ಮತ್ತೇನು?

ಹರಳಯ್ಯ : (ತಕ್ಕೊಂಡು) ಈಗಲೇ ಒಯ್ದು ಮುಟ್ಟಿಸುವೆ. ಮತ್ತೇಕೆ ತಡ. ಸುಶೀಲೇ, ಅಲ್ಲಿ ಸ್ವಲ್ಪ ತಡವಾದರೂ ನೀನು ಚಿಂತಿಸದಿರು, ತಿಳಿಯಿತೇ, ಹೋಗುವೆ. (ಹೋಗುವನು).

ಬಸವೇಶ್ವರನ ಮಹಾಮನೆ

ಬಸವ :– ॥ ಪದ ॥

ಅಮಾಮಾ ಧನ್ಯನಾದೆ । ಪ್ರಮಥರ ವಚನವ ನಾನಾಲಿಸಿ ॥ ಪ ॥
ಎನ್ನನುದ್ಧರಿಸುವ । ದನ್ನು ಸ್ಮರಿಸುತಾಂ ।
ನನ್ನಿಯಿಂದಿಲ್ಲಿಗೆ ಐತಂದಿರುವನು ॥
ಎನ್ನಯ ಭಾಗ್ಯವನ್ನೇನು ಬಣ್ಣಿಪೆನೊ ।
ಪನ್ನಗಭೂಷಣ ತಾನೊಲಿದೆನ್ನ ॥ ೧ ॥

ಶಿವಶರಣರ ಆಶೀರ್ವಾದವೆಂಬ ಕವಚವನ್ನು ನಾನು ಧಾರಣ ಮಾಡಿದ್ದರಿಂದ ನನಗೇತರ ಭಯವೂ ಇಲ್ಲ. ಅಘಟಿತಘಟನಾ ಮಹಿಮಾಶಾಲಿಗಳಾದ ಅಂಥ ಶರಣ ಸಮಾಜವು ಈ ಕಲ್ಯಾಣ ಪಟ್ಟಣದಲ್ಲಿ ನೆಲಸಿದ್ದೆಂದರೆ ನನ್ನ ಉದ್ಧಾರಕ್ಕಾಗಿಯೇ ಎಂದು ತಿಳಿದಿರುವೆ. ನಾನು ಅದೆಂಥ ಭಾಗ್ಯವಂತನೋ ! ಆ ಶರಣರ ಸದ್ಬೋಧಾಮೃತ ಪಾನ ಮಾಡಿ ಮಾಡಿ ಯನಗೆ ಶಿವ ಸಾಯುಜ್ಯಪದವು ಕರತಲಾಮಲಕವಾಗಿದೆ. ಆಯಿತು ಯನ್ನ ಕೋರಿಕೆ ಈಡೇರಿತು. ಯನ್ನ ಜನ್ಮ ಸಾರ್ಥಕವಾಯಿತು. ಓಹೋ ಇದೇನು ಹರಳಯ್ಯನೆಂಬುವನ ಆಗಮನವಾದಂತೆ ಸೂಚನೆಯಾಯಿತು. ಹೊರಗೆ ನೋಡುವಾ (ಹೊರಗೆ ಬಂದು ಹರಳಯ್ಯನನ್ನು ನೋಡಿ) ಬನ್ನಿ ಹರಳಯ್ಯನವರೇ ಯಾಕೆ ಬರೋಣವಾಯಿತು?

ಹರಳಯ್ಯ : ಪ್ರಭೋ, ಅಂಥ ಮಹತ್ಕೆಲಸ ಏನೂ ಇಲ್ಲ. ಈ ಬಡ ದಾಸನ ಸೇವೆ ತಮ್ಮ ಪಾದ ದ್ವಂದ್ವಕ್ಕರ್ಪಣವಾಗಲೆಂದು ಪಾದರಕ್ಷೆ ತಯಾರಿಸಿ ತಂದಿದ್ದೇನೆ. ಇದೋ (ಹೊರಗೆ ತೆಗೆದು) ಇವೇ ಇವನ್ನು ಮೆಟ್ಟುವ ಕೃಪೆಯಾಗಬೇಕು. ಪ್ರಭೋ (ಅಂಥ ಅಮೂಲ್ಯ ರತ್ನಾದಿಗಳಿಂದ ಶೃಂಗರಿಸಲ್ಪಟ್ಟ ಆ ಚಪ್ಪಲಿಗಳನ್ನು ಬಸವೇಶ್ವರನು ಕಂಡು ಆಶ್ಚರ್ಯಭರಿತನಾಗಿ)

ಬಸವ : ಓಹೋ ಶರಣವರೇಣ್ಯ ಇವೇನು ಅಮೂಲ್ಯ ರತ್ನಾದಿಗಳಿಂದಲಂಕೃತವಾಗಿ ಕಣ್ಣು ಕುಕ್ಕುವಂತೆ ಝುಗಝುಗಿಸುತ್ತಿರುವವಲ್ಲ. ಇಂಥ ನವರತ್ನಗಳನ್ನೆಲ್ಲಿಂದ ತಂದೆ. ಹ್ಯಾಗೆ ಮಾಡಿದೆ । ಇಂಥ ಪಾದರಕ್ಷೆ ಮೆಟ್ಟುವುದನ್ನು ಬಿಡು, ಮುಟ್ಟುವ ಯೋಗ್ಯತೆಯವ ಸಹ ನಾನಲ್ಲ. ಏಸು ರಮಣೀಯವಾಗಿ ಒಪ್ಪುವವೋ. ಹರಳಯ್ಯ, ನೀನು ಬಹು ಚತುರನು. ಮೇಲಾಗಿ ಮಹಿಮಾ ಪುರುಷನು. ಅದಕ್ಕಂತೆಯೇ ನಿನ್ನಿಂದ ಇಂಥಾ ಪಾದರಕ್ಷೆ ರಚಿಸಲ್ಪಟ್ಟವು. ಇಂಥ ವಿಚಿತ್ರ ಕೆಲಸ ಮಾಡುವವನು ಈ ಜಗತ್ತಿನಲ್ಲಿ ನೀನೇ ಅಲ್ಲದೆ ಮತ್ಯಾವನೂ ಇಲ್ಲ, ಕೇಳಿದೆಯಾ.

ಹರಳಯ್ಯ : ಪ್ರಭೋ ಅದೆಲ್ಲ ತಮಗೆ ಗೊತ್ತು. ತಮ್ಮ ಮನಸಿಗೆ ಬಂದರೆ ಇಡೀ ಜಗತ್ತಿಗೆ ಬಂದಂತಾಯಿತು. ಆನಂದ. ಇನ್ನು ಇವನ್ನು ಮೆಟ್ಟಿರಿ ನೋಡೋಣ. ತಮಗಾಗಿಯೇ ಮಾಡಿ ತಂದಿದ್ದೇನೆ.

ಬಸವ : ಛೇ, ನಾನೊಲ್ಲೆನಲ್ಲಾ. ಇವನ್ನು ಮೆಟ್ಟುವ ಯೋಗ್ಯತೆಯನಗಿಲ್ಲ. ಇವು ಅಪ್ರತಿಮವಾದ್ದರಿಂದ ಅಪ್ರತಿಮ ಮಹಿಮಾಶಾಲಿಯಾದ ಆ ಅಲ್ಲಮಪ್ರಭುರಾಯನೇ ಇವನ್ನು ಮೆಟ್ಟತಕ್ಕ ಸಮರ್ಥನು. ನನಗೂ ಈ ಜಗತ್ತಿಗೂ ಆತನೇ ಗುರುನಾಥನು. ಅಂಥವನಿಗೆ ¨ಲ್ಲತಕ್ಕ ಇವುಗಳನ್ನು ಇದೋ ನೋಡು ತಲೆಯ ಮೇಲೆ ಪುಷ್ಪದಂತೆ ಧರಿಸುವೆನು. (ತಲೆಯ ಮೇಲಿಟ್ಟುಕೊಂಡು) ಶಹಬ್ಬಾಸ್ ಹರಳಯ್ಯ ಶಹಬ್ಬಾಸ್. ನನ್ನ ಗುರುನಾಥನ ಪಾದರಕ್ಷೆಗಳು ಇಡೀ ಜಗತ್ತನ್ನೇ ಪವಿತ್ರಗೊಳಿಸುವವು. ಇಂಥವನ್ನು ನಾನು ತಲೆಯಲ್ಲಿ ಧರಿಸಿದ್ದರಿಂದ ಪರಮಪಾವನನಾದೆ. ಆಯಿತು ಇನ್ನೇನು ಇವನ್ನು ತೆಗೆದುಕೊ. ಆ ಸದ್ಗುರುವು ಇಲ್ಲಿ ಬಂದಾಗ್ಗೆ ನಿನಗೆ ತಿಳಿಸುವೆನು. ಆಗ್ಗೆಯೇ ತಂದುಕೊಡು. ಇವುಗಳನ್ನು ಆತ ನೋಡಿದ ಕೂಡಲೆ ಆತನ ಅಂತಃಕರಣವು ನಿನ್ನ ಮೇಲೆ ಅಮಿತವಾಗಿ ಹರಡಿ ನಿನಗೆಂಥ ಪದವಿ ಲಭ್ಯವಾಗುವುದೋ ಶಿವನೇ ಬಲ್ಲ. ಆತನು ಬರುವವರೆಗೆ ನೀನು ಮಾತ್ರ ಇವನ್ನು ಬಹು ಜೋಕೆಯಿಂದ ಇಡು. ಈಗ ನಿನ್ನ ಸದ್ಭಾವನೆಗಾಗಿ ನಾನು ಕೊಡುವದನ್ನು ಸಂತೋಷದಿಂದ ತೆಗೆದುಕೊಂಡು ಹೋಗು.

ಅನ್ಯಥಾ ತಿಳಿಯಬೇಡ (ಒಳಗೆ ಹೋಗಿ ರೂಪಾಯಿ, ಕಾಳು, ಹಣ್ಣು, ಹಂಪಲ, ಪಕ್ವಾನ್ನ ಮೊದಲಾದವುಗಳನ್ನು ತಂದು ಕೊಡುವನು).

ಬಸವ : ನೀಲಲೋಚನೆ, ಅಪ್ರತಿಮವಾದ ಗುರುನಾಥನ ಪಾದರಕ್ಷೆಗಳನ್ನು ಅವಲೋಕಿಸು ಬಾ. ಈ ಪವಿತ್ರವಾದವುಗಳನ್ನು ಕಂಡು ನಿನ್ನ ಕಣ್ಣುಗಳು ಪುನೀತವಾಗಲಿ. (ನೀಲಮ್ಮ ಬರುವಳು)

ನೀಲ : ಆವೆಲ್ಲಿರುವವು.

ಬಸವ : ನೋಡು ಇವೇ. ಸದ್ಗುರು ಅಲ್ಲಮ ಪ್ರಭುರಾಯನು ಮೆಟ್ಟ ತಕ್ಕಂಥವು. ಆತನ ಹೊರ್ತು ಬೇರೆ ಯಾವನಾದರೂ ಇವನ್ನು ಕಾಲಿಗೆ ಮುಟ್ಟಿದರೆ ಸಾಕು ಆತನು ಉರಿಬಿದ್ದು ಸತ್ತುಹೋಗುವನು. ಇದು ಸತ್ಯಮಾತು. ಶುಭಾಂಗೀ ನೋಡು ಇವನ್ನು ಈ ಹರಳಯ್ಯನೇ ಮಾಡಿದ್ದಾರೆ. ಎಷ್ಟು ಅಮೌಲ್ಯವಾಗಿರುವವು.

ನೀಲಮ್ಮ : ಪ್ರಾಣದರಸಾ, ಇವನ್ನು ನೋಡಲು ನನ್ನ ಕಣ್ಣಿಗೆ ಸಾಧ್ಯವಲ್ಲ. ಇವುಗಳಿಗೆ ಹೊಂದಿಸಿದ ಈ ನವರತ್ನಗಳ ಹೊಳಪು ನನ್ನ ಕಣ್ಣನ್ನೇ ಕುಕ್ಕಲಾರಂಭಿಸಿದವು. ಎಷ್ಟು ಮನೋಹರವಾಗಿ ಒಪ್ಪುತ್ತಿರುವವು? ಧನ್ಯ ಧನ್ಯ ಇವನ್ನು ವಿರಚಿಸಿದ ಈ ಮಹಾನುಭಾವನು ಶಿವಸ್ವರೂಪನೆಂದೇ ನನಗೆ ಭಾಸವಾಗಹತ್ತಿದೆ. ಇರಲಿ ಪ್ರಿಯಕರಾ, ಈತನನ್ನು ನೋಡಿದರೆ ತೀರಾ ಬಡವನಂತೆ ಕಾಣುವನು. ಆದರೆ ಈ ರಕ್ಷೆಗಳಿಗೆ ಇಂಥಾ ಅಮೌಲ್ಯ ರತ್ನಗಳನ್ನು ಎಲ್ಲಿಂದ ತಂದು ಹೊದಿಕೆ ಮಾಡಿರಬಹುದು?

ಬಸವ :ಸುಶೀಲೆ, ಇಂಥ ರತ್ನಗಳು ಆಗಮ್ಯ. ಈತನು ಸಾಧಾರಣ ಪುರುಷನಲ್ಲ. ತನ್ನ ತೊಡೆಯನ್ನು ಸೀಳಿ ಅಲ್ಲಿಂದ ಪಡೆದಿದ್ದಾನೆ. ಅಂದ ಮೇಲೆ ಇವನ ಅಗಾಧ ಮಹಿಮೆಯನ್ನೆಂತು ಬಣ್ಣಿಸಬೇಕು.

ನೀಲಮ್ಮ : ಶಿವಶಿವಾ ಹೀಗೇನು? ಈತನು ಕೇವಲ ಶಿವನೇ ಸರಿ. ಆಗಲಿ ಈತನನ್ನು ಸಂಭಾವಿಸುವ ಸಲುವಾಗಿ ನನ್ನ ಕೊರಳೊಳಗಿನ ಚಂದ್ರಹಾರ ಇವನಿಗೆ ಕೊಡಬೇಕೆಂದಿಚ್ಛೆಯಾಗಿದೆ. ಇದಕ್ಕೆ ನಿಮ್ಮ ಅನುಮತಿ ಇರುವದೆ?

ಬಸವ : ಕೊಡು. ಎನಗೆ ಬಹು ಸಂತೋಷ.

ನೀಲಮ್ಮ : ಹಾಗಾದರೆ ಕೊಡುವೆ. (ಕೊರಳೊಳಗಿನ ಮಾಲಿಕೆ ತೆಗೆದು ಹರಳಯ್ಯನಿಗೆ) ಮಹಾತ್ಮಾ, ನಿನ್ನ ಅಮೋಘವಾದ ಬುದ್ಧಿ ಚಾತುರ್ಯಕ್ಕೆ ಸಂತೋಷಳಾಗಿ ಇಗೋ ಈ ಚಂದ್ರಹಾರ ಪಾರಿತೋಷವಾಗಿ ಕೊಡುತ್ತೇನೆ. ನೀನು ನಿನ್ನ

ಪತ್ನಿಯ ಕೊರಳೊಳಗೆ ಧರಿಸು. ಇಗೋ ತೆಗೆದುಕೋ.

ಹರಳಯ್ಯ : (ತಕ್ಕೊಂಡು) ಮಾತೋಶ್ರೀ ಆನಂದ ಮಹದಾನಂದ.

ನೀಲಮ್ಮ : ಅಯ್ಯಾ, ನೀನು ದಿನಾಲು ಬಂದು ಪ್ರಸಾದ ತಕ್ಕೊಂಡು ಹೋಗು. ತಿಳಿಯಿತೇ. ಸ್ವತಃ ನಾನೇ ಕೊಡುವೆ.

ಹರಳಯ್ಯ : ತಾಯೀ, ಹಾಗೇ ಆಗಲಿ.

ಬಸವ : ಶರಣ ಮತ್ತೇನು.....

ಹರಳಯ್ಯ: ಪ್ರಭುವೇ, ನಿಮ್ಮ ಕರುಣೆಯೊಂದಿದ್ದರೆ ಸಾಕು. ಈಗ ನೀವು ಕೊಟ್ಟದ್ದು ಆಮರಣಪರ್ಯಂತ ಕೂತು ಉಂಡರೂ ತೀರದಷ್ಟನ್ನು ಕೊಟ್ಟಿರಿ. ಇನ್ನೇನು ಬೇಡಲಿ. ಪ್ರಭೋ ನಾನು ಮಹಾತೃಪ್ತನಾದೆ. ಇನ್ನು ಹೋಗುವೆನು. ಅಪ್ಪಣೆ ಕೊಡಿರಿ.

ಬಸವ : ಹೋಗು ಅಪ್ಪಣೆ. ಈ ಪಾದರಕ್ಷೆಗಳನ್ನು ಮಾತ್ರ ಜೋಕೆಯಿಂದಿಡು.

ಹರಳಯ್ಯ : ಆ ಪ್ರಭುಗಳು ಬರುವವರೆಗೆ ಇವನ್ನು ಬಹು ಎಚ್ಚರದಿಂದ ಜೋಪಾನ ಮಾಡುತ್ತೇನೆ. ಇದಕ್ಕೆ ಆಲೋಚಿಸಬೇಡಿರಿ. ಹೋಗಿ ಬರುವೆ. (ನಮಸ್ಕರಿಸುವನು).

ಬಸವ : ಪರಮಾತ್ಮನು ಅಪಾರ ಸುಖವೀಯಲಿ, ಹೋಗು. (ಹರಳಯ್ಯ ಹೋಗುವನು).

ನೀಲಮ್ಮ : ನಾಥಾ, ನಮ್ಮ ಈ ಕಲ್ಯಾಣ ನಗರದಲ್ಲಿ ಎಂಥೆಂಥ ಮಹಿಮಾಶಾಲಿಗಳು ಗೌಪ್ಯವಾಗಿಯೇ ಇದ್ದಾರೆ. ಅಂಥವರ ನೆಲೆ ಹ್ಯಾಗೆ ತಿಳಿಯಬೇಕು.

ಬಸವ : ಶರಣರ ಇರವು ಪರಮಾತ್ಮನಿಗೆ ಸಹ ತಿಳಿಯಲು ಅಳವಡದಿರುವಲ್ಲಿ ನಮ್ಮಂಥವರ ಪಾಡೇನು? ಇರಲಿ ನಡೆ, ಪರಮಾತ್ಮನನ್ನು ಪೂಜಿಸಲಿಕ್ಕೆ ಹೋಗೋಣ.

ನೀಲಮ್ಮ : ನಡೆಯಿರಿ (ಹೋಗುವರು).

ಹರಳಯ್ಯನ ಪ್ರವೇಶ

ಹರಳಯ್ಯ : (ದಾರಿಯಲ್ಲಿ) ಬಸವೇಶ್ವರನೂ, ನೀಲಾಂಬೆಯೂ ನನಗೆ ಸಾಕಷ್ಟು ಸಂಭಾವನೆಯನ್ನಿತ್ತರು. ಇನ್ನು ಇವರ ಉಪಕಾರವನ್ನು ನಾನ್ಯಾವ ರೀತಿಯಿಂದ ತೀರಿಸಬೇಕು? ಜನ್ಮದಾರಭ್ಯ ಆಮರಣ ಪರ್ಯಂತರ

ಇವರ ಸೇವೆ ಮಾಡಿದರೂ ಈ ಉಪಕಾರ ತೀರದ ಮಾತು. ಆ ಪರಮಾತ್ಮನೇ ಇದಕ್ಕೇನು ಮಾಡುವನೋ ಮಾಡಿಕೊಳ್ಳಲಿ.

(ಮಧುವಯ್ಯ ಬರುವನು).

ಮಧುವಯ್ಯ : ಎಲೋ ನೀನು ಯಾರು? ಬಗಲಲ್ಲಿ ಮುಸುಕಿನೊಳಗೆ ಏನು ಒಯ್ಯುತ್ತಿರುವಿ?

ಹರಳಯ್ಯ : ಅಪ್ಪನವರೇ ನಾನೊಬ್ಬ ಸಾಮಾನ್ಯ. ನನ್ನ ಹೆಸರು ಹರಳ. ಈ ಬಗಲಿಲ್ಲಿ ಇದ್ದ ಸಾಮಾನದ ಗೊಡಿವೆ ನಿಮಗೇತಕ್ಕೆ ಬೇಕು? ಸುಮ್ಮನೆ-ಹೋಗಿರಿ.

ಮಧುವಯ್ಯ : ಯಾಕೆಲೆ? ಸುಮ್ಮನೆ ಹೋಗೆನ್ನುವಿ? ಇಷ್ಟು ಸೊಕ್ಕೇ ನಿನ್ನದು. ನಮ್ಮಂಥವರು ನಿನ್ನ ಕಣ್ಣಿಗೆ ತೃಣದಂತೆ ಕಾರಣುವವೇನು? ಅಧಮಾ, ನಿನ್ನ ಬಗಲಲ್ಲೇನನ್ನಿರಿಸಿಕೊಂಡಿರುವಿ ತೆಗೆ ಮೊದಲು ಅದನ್ನು.

ಹರಳಯ್ಯ: ಅವು ನಿಮ್ಮಂಥವರು ನೋಡುವವಲ್ಲ. ಅದಕ್ಕಂತೆಯೇ ನಾನು ತೋರಿಸುವದಿಲ್ಲ. ಸುಮ್ಮನೇ ನಿಮ್ಮ ಹಾದೀ ಹಿಡಿದು ಸಾಗಿರಿ.

ಮಧುವಯ್ಯ : ಎಲೋ ಅಧಮಾ, ನೀನು ನನಗೆ ತೋರಿಸುವದಿಲ್ಲವೇ? ತೋರಿಸದಿದ್ದರೆ ನೋಡು, ಇಲ್ಲಿಯೇ ನಿನ್ನನ್ನು ತುಳಿದು ಬಿಡುತ್ತೇನೆ. ಯಾಕೆ ಏನನ್ನುವಿ, ಈಗ ಆ? (ಹೊಡೆಯಲಿಕ್ಕೆ ಹೋಗುವನು).

ಹರಳಯ್ಯ : ಹೊಡೆ ನೋಡೋಣ? ಈಗ ಬಸವೇಶ್ವರನ ಮಹಾಮನೆಯಿಂದ ಬಂದಿದ್ದೇನೆ. ಸಾಕಷ್ಟು ಅನ್ನ ಪ್ರಸಾದ ಕೊಟ್ಟಿದ್ದಾರೆ. ಕಾರಣ ನೀನು ನನ್ನನ್ನು ಮುಟ್ಟದೇ ದೂರ ಸರಿದು ನಿಲ್ಲು.

ಮಧುವಯ್ಯ : ನೀಚಾ, ನಿನ್ನನ್ನು ನಾವು ಮುಟ್ಟತಕ್ಕದ್ದಲ್ಲ. ಹೀಗಿದ್ದು ನೀನು ನನ್ನನ್ನು ಮುಟ್ಟಬೇಡೆನ್ನುವಿಯಾ ಚಾಂಡಾಲಾ. ಈಗಲೆ ನೋಡು ನಿನ್ನ ಪರಿಣಾಮ ಬೇಡಾಗಿ ಹೋಗುವದು. ಯಾಕೆ ಏನನ್ನುವಿ? ನಿನ್ನ ಮುಸುಕಿನೊಳಗಿದ್ದವನ್ನು ತೋರಿಸುವಿಯೋ ಇಲ್ಲವೋ?

ಹರಳಯ್ಯ :ತೋರಿಸುವದೇನು, ಇವು ಪಾದರಕ್ಷೆಗಳು, ನಿಮ್ಮಂಥವರಿಗೆ ಸಲ್ಲತಕ್ಕವುಗಳಲ್ಲ. ಬಸವೇಶ್ವರ ಇವನ್ನು ಮೆಟ್ಟಲು ನಾನಸಮರ್ಥನು. ಇವು ಪ್ರಭುದೇವರಿಗೆ ಸಲ್ಲತಕ್ಕಂಥವು. ಆತನು ಬಂದಾಗ್ಗೆ ಅವನಿಗೆ ಅರ್ಪಿಸುವದೆಂದು ನಿಯಮಿಸಿ ಕಳುಹಿದ್ದಾರೆ. ಅಂದ ಮೇಲೆ ಅವರಿಗೆ ಕೊಡತಕ್ಕವುಗಳನ್ನು ನಿಮ್ಮಂಥವರಿಗೆ ತೋರಿಸಿ ಪ್ರಯೋಜನವೇನು? ಸುಮ್ಮನೆ ಹೋಗಿರಿ.

ಮಧುವಯ್ಯ : ಎಂಥ ಪ್ರಭುದೇವನೋ? ಬಸವನೊಬ್ಬನಿಗೆ ಮಾತ್ರ ಆತ ದೊಡ್ಡವನಾಗಿರುವನು. ಶ್ರೇಷ್ಠ ಕುಲಾಚಾರ ಸಂಪನ್ನರಾದ ನಮ್ಮ ಮುಂದೆ ಆ ಪ್ರಭು ಹಾಗೂ ಬಸವನ ದೊಡ್ಡಸ್ತಿಕೆಯನ್ನೇನು ಹೇಳುವಿ? ಹುಚ್ಚು ಹಿಡಿದಿದೆ ಆ ಬಸವನ ತಲೆಗೆ, ಹುಚ್ಚು. ಅದೆಲ್ಲ ಇರಲಿ, ತೆಗೆ ಕಡೆಗೆ. ಅವನ್ನು ಮೊದಲು ನೋಡುವೆ.

ಹರಳಯ್ಯ : ಇಷ್ಟು ಅಬ್ಬರ ಮಾಡಲಿಕ್ಕೆ ನೀನ್ಯಾರು? ಸುಮ್ಮನೆ ಹೋಗಬಾರದೇ?

ಮಧುವಯ್ಯ: ನಾನು ಅಷ್ಟಪ್ರಧಾನರಲ್ಲಿ ಒಬ್ಬನು. ಉಪಮಂತ್ರಿಯು ನಾನೇ. ಮಧುವರಸನೆಂದು ಈ ಇಡೀ ಕಲ್ಯಾಣ ಪಟ್ಟಣದಲ್ಲಿ ಖ್ಯಾತಿಗೊಂಡವನಿದ್ದೇನೆ. ನೋಡಿ ಎಚ್ಚರದಿಂದ ಬೊಗಳು ತಿಳಿಯಿತೇ ಎಚ್ಚರದಿಂದ.

ಹರಳಯ್ಯ : ಬೊಗಳಲಿಕ್ಕೆ ನಾನು ನಾಯಿಯಲ್ಲ. ಬಸವೇಶ್ವರ ಹಾಗೂ ಪ್ರಭು ದೇವರನ್ನು ಹೀಯಾಳಿಸುವ ಪಾಪಿಷ್ಠಾ ನೀನೆಂಥವನಿದ್ದು ನಿನ್ನನ್ನೇನು ಸುಡಬೇಕು? ಶಿವಭಕ್ತನಲ್ಲದ ನೀನು ಭವಿಯು. ಭವಿಗಳ ಮುಖಸಹಿತ ನೋಡಕೂಡದೆಂದು ಆಗಮ ಪ್ರಮಾಣವಿದೆ. ಇನ್ನು ಹೆಚ್ಚಾಗಿ ಮಾತಾಡಿ ನನ್ನನ್ನು ರೊಚ್ಚಿಗೆಬ್ಬಿಸಬೇಡ. ನಾನೂ ಶಿವಭಕ್ತನಿದ್ದೇನೆ. ಕೈಗೆ ಕೈಹತ್ತಿದರೆ ನಿನ್ನ ಪರಿಣಾಮ ಹೀಗೇ ಆದೀತೆಂದು ಹೇಳಲಿಕ್ಕೆ ಯಾವನಿಗೂ ಆಗದು. ಕಾರಣ ಸುಮ್ಮನೆ ನಿನ್ನ ಹಾದೀ ಹಿಡಿದು ಹೋಗು.

ಮಧುವಯ್ಯ : ಎಲಾ ನೀಚಾ, ಚಾಂಡಾಲಾ. ಮಂತ್ರಿಯಾದ ನನಗೆ ತುಸು ಭೀತಿಯಿಲ್ಲದೆ ಕಂಡಂತೆ ಮಾತಾಡುವಿಯಾ ಅಧಮಾ. ಈ ಪಾದರಕ್ಷೆಗಳನ್ನು ತೋರಿಸುವಿಯೋ ಇಲ್ಲವೋ?

ಹರಳಯ್ಯ :ನೋಡುವ ಅಪೇಕ್ಷೆಯಿಂದ ತೋರಿಸೆಂದರೆ ತೋರಿಸುವೆನು. (ಅವನ್ನು ಹೊರಗೆ ತೆಗೆದು) ಇಗೋ ನೋಡು, ಇವು ಹ್ಯಾಗಿವೆ?

ಮಧುವಯ್ಯ :(ನೋಡಿ) ಓಹೋ ಇವು ಬಹಳೇ ಚನ್ನಾಗಿರುವವು. ಇವುಗಳ ಬೆಲೆಯೇನು?

ಹರಳಯ್ಯ : ಕೋಟ್ಯಾವಧಿ ರೂಪಾಯಿ ಕೊಟ್ಟರೂ ಇವುಗಳ ಬೆಲೆ ಸರಿಯಾಗಲಾರದು. ನಾನು ಇವನ್ನು ಮಾರಲಿಕ್ಕೆ ತಂದಿಲ್ಲ. ಪ್ರಭುದೇವರಿಗೇ ಅರ್ಪಿಸತಕ್ಕದ್ದದೆ. ನೋಡುವದಾಯಿತಲ್ಲವೋ ಇನ್ನೇನು ನಿನ್ನ ದಾರಿ ಹಿಡಿ.

ಮಧುವಯ್ಯ : ಸೊಕ್ಕಿನ ಮಗನೇ, ಹಗಲೆಲ್ಲ ದಾರೀ ಹಿಡಿಯೆಂದು ಇದನ್ನೇನು ನುಡಿಯುವಿ. ಹಲ್ಲುಬ್ಯಾವು. ಎಚ್ಚರದಿಂದ ಮಾತಾಡು. ಈ ಚಪ್ಪಲಿಗಳ ಕಿಮ್ಮತ್ತೇನು ಹೇಳು ಇವು ನನಗೇ ಬೇಕು. ಆ ಪ್ರಭುವೆಂದರೆ ಲೋಕದಲ್ಲಿ ಅವನೇ ಹೆಚ್ಚಿನವನಲ್ಲ. ಅವನಿಗೆ ಕೊಡುವದಿದ್ದರೆ ಬೇರೆ ಮತ್ತೆ ತಯಾರಿಸಿಕೊಡು. ಈಗ ಇವಕ್ಕೇನು ಬೆಲೆ ಹೇಳು ಮೊದಲು.

ಹರಳಯ್ಯ :ನಿನಗೆ ಬೇಕಾದರೆ ಬೇರೆ ಮಾಡಿಕೊಡುವೆ. ಇವನ್ನು ಮಾತ್ರ ಕೊಡುವದಿಲ್ಲ.

ಮಧುವಯ್ಯ : ನನಗೆ ಇವೇ ಬೇಕು. ನೀನು ಕೊಡದಿದ್ದರೆ ನಾನು ಬಿಡುವದಿಲ್ಲ.

ಹರಳಯ್ಯ :ನಾನು ಕೊಡುವದೇ ಇಲ್ಲ. ಏನು ಮಾಡುವಿಯೋ ಮಾಡು ನೋಡೋಣ.

ಮಧುವಯ್ಯ : ಏನು ಮಾಡುವಿಯೆಂದರೆ ಕಸಿದು, ಮೆಟ್ಟಿಕೊಂಡು ಹೋಗುವೆನು. ಆ ಮೇಲೆ ನೀನೇನು ಮಾಡುವಿ ನನ್ನನ್ನು?

ಹರಳಯ್ಯ: ನಿನ್ನನ್ನು ಮಾಡುವದೇನು ತಡಹತ್ತುವದಿಲ್ಲ. ಸುಳ್ಳೇ ಪ್ರಾಣಕ್ಕೆರವಾಗಬೇಡ. ಮಹಾತ್ಮರಿಗೆ ಅರ್ಪಿಸಲ್ಪಡುವ ಈ ಪಾದರಕ್ಷೆ ಬೆಂಕಿ ಇದ್ದಂತೆ. ಇವನ್ನು ನೀನು ಮೆಟ್ಟಿದರೆ ಸುಟ್ಟು ಭಸ್ಮವಾದೀ. ನನ್ನ ಮಾತು ಕೇಳು, ಇವುಗಳ ಹಂಬಲ ಬಿಟ್ಟು ಸುಮ್ಮನೆ ಹೋಗು.

ಮಧುವಯ್ಯ :ಎಲೇ, ಹೆಚ್ಚಿಗೆ ಒದರಬೇಡ. ಬೆಲೆ ತಕ್ಕೊಂಡು ಕೊಟ್ಟು ಹೋಗುವೆಯೋ ಅಥವಾ ಹಾಗೇ ಕೊಟ್ಟು ಹೋಗುವಿಯೋ.

ಹರಳಯ್ಯ : ನೀನೇನು ಸಾವಿಗೆ ಬಂದಿರುವೆಯೋ ಹ್ಯಾಗೆ? ಇವು ನಿನ್ನ ಕಾಲಿಗೆ ಮುಟ್ಟಿದರೆ ಸಾಕು ನಿನಗೆ ಉರಿ ಹತ್ತಿ ಆ ಸಂಕಟ ತಾಳದೆ ಒದ್ದಾಡಿ ಸತ್ತು ಹೋಗುವಿ. ಸತ್ಯ ಮಾತು.

ಮಧುವಯ್ಯ : ನಾನೊದ್ದಾಡಿ ಸತ್ತರೂ ಚಿಂತೆ ಇಲ್ಲ. ಇವನ್ನು ಮೆಟ್ಟದೆ ಬಿಡುವದಿಲ್ಲ.

ಹರಳಯ್ಯ : ಎಷ್ಟು ಹೇಳಿದರೂ ಕೇಳಲೊಲ್ಲೆ. ಮೆಟ್ಟುವೆಯೋ? ಮೆಟ್ಟು, ನೋಡೋಣ (ಎಂದು ಚೆಲ್ಲುವನು).

ಮಧುವಯ್ಯ : ಹಾಗಾದರೆ ನೋಡು (ಕೈಯಲ್ಲಿ ತಕ್ಕೊಂಡು ಮೆಟ್ಟಲುದ್ಯುಕ್ತನಾಗುವಷ್ಟರಲ್ಲಿ ಹೊಟ್ಟೆಯಲ್ಲಿ ದಾವಾಗ್ನಿಯಂತೆ ಉರಿ ಹೆಚ್ಚಾಗಿ ಸಂಕಟವಾಗಹತ್ತುವದು). ಅಯ್ಯೋ, ಹೊಟ್ಟೆಯೊಳಗೆ ದಾವಾಗ್ನಿಯಂತೆ ಉರಿಬಿದ್ದು ಸುಡಲಾರಂಭಿಸಿತು. ಆಹಾ ! (ಬೀಳುವನು) ಈ ಸಂಕಟ ತಾಳೆನು ತಾಳೆನು. ಅಕಟಾ ಯಾರಾದರೂ ಬಂದು ಎನ್ನನ್ನು ಉಳಿಸಿಕೊಳ್ಳಿರಿ, ಉಳಿಸಿಕೊಳ್ಳಿರಿ.

ಹರಳ :ಶಿವಶರಣರಲ್ಲದೆ ಮಿಕ್ಕ ಮಾನವನು ನಿನ್ನನ್ನು ರಕ್ಷಿಸಲಿಕ್ಕೆ ಅದಾವನು ಸಮರ್ಥನು? ಮೂರ್ಖಾ ಹೀಗೇ ಒದ್ದಾಡು. ಒದ್ದಾಡಿ ಸತ್ತು ಹೋಗು. (ಪಾದರಕ್ಷೆ ತಕ್ಕೊಂಡು ಹರಳಯ್ಯ ಹೋಗುವನು.)

॥ ಪದ ॥

ಮಧುವಯ್ಯ :

ಸೈರಿಸೆನಾ ಸೈರಿಸೆನಾ ಸೈರಿಸೆನಾ ಭೂರಿಸಂಕಟ ॥ ಪ ॥
ಒಡಲೊಳು ಸುಡುವದು । ಬಡಬಾನಲ ಪೆರ್ಚಿ ।
ಕಡುತಾಪವು ಅಕಟಾ । ತಡೆಯಲೆಂತಿದನು ನಾ ॥ ೧ ॥

ಅಯ್ಯೋ, ನನ್ನನ್ನು ಯಾರಾದರೂ ಈ ಸಂಕಟದಿಂದ ಪಾರು ಮಾಡಿರೋ ಪಾರು ಮಾಡಿರಿ (ಒದ್ದ್ಯಾಡುತ್ತಿರಲು ಅದನ್ನು ನೋಡಿ ಮನೆಯವರು ಬಂದು ಅವನನ್ನು ಒಯ್ಯುವರು (ತೆರೆಯಲ್ಲಿ) ಅಕಟಾ ಸಾಯುವೆನೋ, ಸಾಯುವೆನು ಬೇಗನೆ ನನ್ನನ್ನು ಉಳಿಸಿರಿ ಅಷ್ಟರಲ್ಲಿ ಶಾಸ್ತ್ರ ಗೊಲ್ಲ ವೈದ್ಯರು ಬರುವರು).

ಗೊಲ್ಲರು: ಬೆನ್ನು ಶೂಲೆಗೆ ಔಷಧ, ವಾಯು ಶೂಲೆಗೆ ಔಷಧ, ಕ್ಷಯರೋಗ ಚಿಕಿತ್ಸಾ, ಕಣ್ಣು ಬೇನೆಗೆ ಔಷಧ.

೨ನೇ ಗೊಲ್ಲ: ನಾರು ಹುಣ್ಣಿಗೆ ಔಷಧ, ಹಾವು ಕಡಿದಿದ್ದಕ್ಕೆ ಔಷಧ, ಹೊಟ್ಟೆಯೊಳಗೆ ಉರಿಬಿದ್ದದ್ದಕ್ಕೆ ಔಷಧ (ಓಣಿಯಲ್ಲಿ ಸಾರುತ್ತ ಬರುವರು. ಅವರನ್ನು ಕಂಡು ಮಧುವರಸನ ಹೆಂಡತಿಯು).

ಪದ್ಮಾವತಿ: ಆಯ್ಯಾ. ಇತ್ತ ಬನ್ನಿರಿ.

ಗೊಲ್ಲ: ಅಮ್ಮಾ ಯಾಕೆ, ಏನದೆ ನಿಮ್ಮದು?

ಪದ್ಮಾವತಿ: ನಮ್ಮ ಮನೆಯವರು ಹೊಟ್ಟೆಯೊಳಗೆ ಉರಿಯೆಂದು ಸಂಕಟದಿಂದ ಒದ್ದಾಡಹತ್ತಿದ್ದಾರೆ. ನೆಟ್ಟಗೆ ಮಾಡುತ್ತೀರಾ?

ಗೊಲ್ಲ: ಅಮ್ಮಾ, ಅವಶ್ಯ ಮಾಡುತ್ತೇವೆ. ಅದಕ್ಕೆ ಇಪ್ಪತ್ತು ರೂಪಾಯಿ ಔಷಧ ಖರ್ಚು ಬರುವದು, ಸದ್ಯಾ ಕೊಡಬೇಕು ತಾಯೀ.

ಪದ್ಮಾವತಿ: ಕೊಡುತ್ತೇನೆ, ಒಳಗೆ ಬನ್ನಿ (ಅವರು ಬಂದು ಆತನ ನಾಡೀ ಹಿಡಿದು ಚಿಕಿತ್ಸೆ ಮಾಡುವರು.)

ಗೊಲ್ಲರು: ಅಮ್ಮಾ ಇದು ಉಷ್ಣವಾಯುವಿವ ಪ್ರತಾಪವಿದೆ. ನಾಡಿಗಳಲ್ಲಿ ಮಿತಿಮೀರಿದ

ಶಕೆ ಹೆಚ್ಚಾಗುತ್ತ ಸಂಕಟ ಕೊಡಹತ್ತಿದೆ. ಬೇಗ ಔಷಧ ಪ್ರಯೋಗ ಮಾಡಬೇಕು. ತಡಮಾಡಿದರೆ ಘಾತ ಪ್ರಸಂಗವಿದೆ ತಾಯೀ.

ಪದ್ಮಾವತಿ: ಇಗೋ ತಕ್ಕೊಳ್ಳಿರಿ ಇಪ್ಪತ್ತು ರೂಪಾಯಿ. ಇನ್ನೂ ಐದು ಹೆಚ್ಚು ಕೊಟ್ಟಿದ್ದೇನೆ ತಕ್ಕೊಳ್ಳಿರಿ. ಬೇಗನೆ ಇವರಿಗೆ ಸಮಾಧಾ:.ವಾಗುವಂತೆ ಮಾಡಿರಿ.

ಗೊಲ್ಲ : ಓಹೋ ! ಈಗಲೆ ಸಮಾಧಾನಗೊಳಿಸುವೆವು. ತಾಯಿ, ಕಾಳಜಿ ಬಿಡಿರಿ. (ಔಷಧ ಕೂಡಿಸಿ ಕುಡಿಯಲಿಕ್ಕೆ ಕೊಡುವರು. ಅವನು ಕುಡಿಯುವನು.)

ಮಧುವಯ್ಯ: ಅಯ್ಯೋ, ಸಂಕಟವು ಮಿತಿಮೀರಿ ಹೆಚ್ಚಾಯಿತು. ಸಾಯುವೆನೋ ಸಾಯುವೆನು (ಬಹಳ ಹೊರಳಾಡುವನು).

ಗೊಲ್ಲ: ಶಿವಾ ಶಿವಾ ಇದೇನು, ಭಂಗಾರ ಭಸ್ಮ, ಪವಳ ಭಸ್ಮ, ಶಿಲಾಜಿತಭಸ್ಮ, ಇಂಥ ಅಮೂಲ್ಯ ಔಷಧ ತಯಾರಿಸಿ ಕೊಟ್ಟಿದ್ದೇನೆ. ಈ ಔಷಧಕ್ಕೆ ಈ ರೋಗ ಅವಶ್ಯ ಕಡಿಮೆಯಾಗಲಿಕ್ಕೆ ಬೇಕು. ಇನ್ನೊಂದು ತುಸು ನೋಡೋಣ.

ಮಧುವಯ್ಯ: ಏನು ನೋಡುವಿರೋ ನನ್ನ ಪ್ರಾಣ ಹೋಗಹತ್ತಿದೆ. ಅಕಟಾ ಸಂಕಟ ಮಿತಿ ಮೀರಿತು, ಸಾಯುವೆನು ಸಾಯುವೆನು.

ಗೊಲ್ಲರು: ಅಮ್ಮಾ. ನಮ್ಮ ಪ್ರಯತ್ನ ಮುಗಿಯಿತು. (ಒಂದು ಗುಳಿಗೆ ಕೊಟ್ಟು) ಈ ಗುಟಿಕೆಯೊಂದನ್ನು ನುಂಗಿರಿ). (ಅವನು ನುಂಗುವನು ಮತ್ತೂ ಏನೂ ಆಗುವುದಿಲ್ಲ). ತಾಯೀ, ಈ ರೋಗ ಎಂಥ ವೈದ್ಯನಿಂದಲೂ ನಿವಾರಣೆಯಾಗುವುದಿಲ್ಲ. ನಾವು ಹೋಗುತ್ತೇವೆ. (ಹೊರಬಿದ್ದು) ಅಮಲ ಪೈತ್ಯಕ್ಕೌಷಧ, ಸಂಧಿವಾತಕ್ಕೌಷಧ (ಅನ್ನುತ್ತ ಹೋಗುವರು).

ಮಧುವಯ್ಯ: ಅಯ್ಯೋ, ತಾಳೆನು. ತಾಳೆನು ಪದ್ಮಾವತೀ ಬೇಗನೆ ದೊಡ್ಡ ವೈದ್ಯರನ್ನು ಕರೆಸಿ ಚಿಕಿತ್ಸೆ ಮಾಡಿಸು. ಸಾಯುವೆ ಬೇಗ ಕರೆಯಿಸು.

ಪದ್ಮಾವತಿ : ಕರೆಯಿಸುವೆ ಸ್ವಲ್ಪ ತಡೆಯಿರಿ. (ಸೇವಕನಿಗೆ) ರಾಜಾರಾಮ್ ಬೇಗನೆ ಹೋಗಿ ಪ್ರಸಿದ್ಧರಾದ ಆ ನಿಂಬಾಳಕರ ಹಾಗೂ ಸಂತಾಲ ಇವರಿಬ್ಬರನ್ನೂ ಬೇಗನೆ ಕರಕೊಂಡು ಬಾ ಹೋಗು. (ಅವನು ಹೋಗಿ ಕರತರುವನು. ಪದ್ಮಾವತಿ ಮಧುವರಸನ ಹೊಟ್ಟೆಯನ್ನು ತಿಕ್ಕುತ್ತ ಕೂತಿರುವಳು. ವೈದ್ಯರು ಬರಲು ಪದ್ಮಾವತಿ ಎದ್ದು) ಬನ್ನಿರಿ ವೈದ್ಯರಾಜರೇ, ಈ ಯಜಮಾನರ ಸ್ಥಿತಿ ವಿಪರೀತವಾಗಿದೆ. ದಯಮಾಡಿ ತಾವು ಗುಣಪಡಿಸಬೇಕು. ನೀವು

ಬೇಡಿದಷ್ಟು ಹಣ ನಾನು ಕೊಡುತ್ತೇನೆ. ಸದ್ಯ ಚಿಕಿತ್ಸೆ ಮಾಡಿರಿ. ಎಷ್ಟು ಬೇಡುವಿರೋ ಬೇಡಿರಿ, ಮುಂಗಡವೇ ಕೊಡುವೆ. ಮೊದಲು ನೋಡಿರಿ.

ವೈದ್ಯರು: ಒಳ್ಳೇದು ತಾಯಿ ಹಾಗೇ ಆಗಲಿ. ಪರವಾಯಿಲ್ಲ ಒಳ್ಳೇ ಚಿಕಿತ್ಸೆ ಮಾಡುವೆವು. (ಡಿಗ್ರಿ ಹಚ್ಚಿ ಎಲ್ಲ ಬಗೆಯಿಂದ ನೋಡುವರು. ಆಮೇಲೆ ಕಾಗದದ ಮೇಲೆ ಔಷಧ ಟಿಪ್ಪಣಿ ಮಾಡುವರು. ಮಾಡಿ) ತಾಯೀ, ಈಗ ಸದ್ಯಕ್ಕೆ ಎರಡುನೂರು ರೂಪಾಯಿಯ ಔಷಧ ಪ್ರಯೋಗಿಸಿದರೆ ಇವರಿಗೆ ಗುಣವಾಗುವುದು. ಇಲ್ಲದಿದ್ದರೆ ಬಹು ತ್ರಾಸವದೆ ನೋಡಿರಿ.

ಪದ್ಮಾವತಿ : ಎರಡು ನ್ಯೂರ್‍ಯಾಕೆ ಮುನ್ನೂರು ಕೊಡುವೆ (ಇಗೋ ತಕ್ಕೊಳ್ಳಿರಿ ಎಂದು ಒಳಗಿಂದ ತಂದುಕೊಟ್ಟು) ಇನ್ನು ನಿಮ್ಮ ಔಷಧ ಪ್ರಯೋಗ ನಡೆಸಿರಿ.

ವೈದ್ಯರು:ಇನ್ನು ಚಿಂತೆ ಮಾಡಲವಶ್ಯವಿಲ್ಲ ತಾಯೀ, ಈಗಲೇ ಗುಣಪಡಿಸುವೆವು. (ಔಷಧ ಬಾಟಲಿ ತೆಗೆ ತೆಗೆದು ಕೂಡಿಸುತ್ತ ಕುಡಿಸುವರು. ಹೊಟ್ಟೆಗೂ ಹಚ್ಚುವರು. ಅದರಿಂದೇನೂ ಆಗುವದಿಲ್ಲ).

ಮಧುವಯ್ಯ : ಅಯ್ಯೋ ವೈದ್ಯರೇ, ನಿಮ್ಮ ಔಷಧದಿಂದ ಮಿತಿಮೀರಿ ತಾಪವಾಗಹತ್ತಿತು. ಆಹಾ, ತಾಳೆನು ತಾಳೆನು (ಹೊರಳಾಡಲು ಅವರು ಡಿಗ್ರಿ ಹಚ್ಚಿ ನೋಡಿ ಗಾಬರಿಯಾಗಿ).

ವೈದ್ಯರು:ತಾಯೀ, ಈ ರೋಗವು ಎಂಥ ಔಷದೋಪಚಾರದಿಂದಲೂ ಗುಣವಾಗತಕ್ಕದ್ದಲ್ಲ. ಪ್ರಸಂಗವು ತೀರಾ ಕಠಿಣವದೆ. ಇನ್ನು ಮುಂದೆ ಮಾಡತಕ್ಕದ್ದೇನು? ನೀವೇ ನೋಡಿಕೊಳ್ಳಿರಿ, ನಾವು ಹೋಗುವೆವು (ಹೋಗುವರು).

ಮಧುವಯ್ಯ : ಪ್ರಿಯೆ, ಪದ್ಮಾವತಿ ಈ ಸಂಕಟ ತಾಳಲಾರೆ. ಸಾಕಷ್ಟು ನೀರನ್ನಾದರೂ ನನ್ನ ಹೊಟ್ಟೆಯ ಮೇಲೆ ಸುರುಹಿಸು.

ಪದ್ಮಾವತಿ : ಹಾಗೇ ಮಾಡುವೆ. (ಕೊಡಗಳಿಂದ ಹತ್ತಿಪ್ಪತ್ತು ಬಾರಿ ನೀರು ಸುರುವ ಹಚ್ಚುವಳು. ಮನೆಯೊಳಗಿನ ನೀರೆಲ್ಲ ತೀರುವವು.)

ಮಧುವಯ್ಯ: ಇನ್ನೂ ನೀರು ಹಣಿಸಿರೋ ಹಣಿಸಿರಿ. ಈ ಸಂಕಟ ತಾಳಲಾರೆ. ಕೆರೆಯಿಂದ ತಂದು ತಂದು ಹಾಕಿರಿ. (ಆಳುಗಳು ಮತ್ತೂ ನೀರು ಹಾಕುವರು) ಅಯ್ಯೋ, ಇನ್ನೂ ಗುಣವಾಗಲೊಲ್ಲದು. ಅಕಟಾ ಸಾಯುವೆನು ಸಾಯುವೆನು.

ನಿಂತಿರುವೆನೆಂದ ಮೇಲೆ ನಿರ್ವಾಹವಿಲ್ಲ. ಆಗಲಿ ಹೋಗುವೆನು. (ಕೊಡ ತಕ್ಕೊಂಡು ಹೋಗುವಳು. ಹೊರಗೆ ಬಂದು) ಕೆರೆಗೆ ಹೋಗಬೇಕಾದರೆ ಒಂದು ಮೈಲಿನ ಮೇಲೆ ಇದೆ. ಇಂಥಾ ಕತ್ತಲೆಯಲ್ಲಿ ಒಬ್ಬಳೇ ಹ್ಯಾಗೆ ಹೋಗಲಿ. ಇತ್ತ ಕಡೆಯೊಂದು ತುಸು ದೂರ ಒಬ್ಬರ ಹಿತ್ತಲಲ್ಲಿ ಹೊಕ್ಕು ತುಂಬುವ ಭಾವಿ ಇದೆ. ಅದನ್ನು ನಾನು ಬಹು ದಿವಸದ ಹಿಂದೆ ನೋಡಿದ್ದರಿಂದ ಇಂಥ ಓಣಿ ಇಂಥ ಹಿತ್ತಲ ಎಂಬುದು ಆಗಲೇ ಮರೆತು ಹೋಗಿದೆ. ಎಷ್ಟು ಹುಡುಕಿದರೂ ಈ ಕತ್ತಲೆಯಲ್ಲಿ ನನಗ್ಹ್ಯಾಗೆ ಶೋಧವಾಗಬೇಕು? ಉಪಾಯವಿಲ್ಲ. ಆ ಭಾವಿಯೇ ಸಮೀಪವಾದ್ದರಿಂದ ಅದನ್ನೇ ಹುಡುಕುವಾ (ಹೋಗುವಳು).

ಶಾಮಲೆ :

॥ ಪದ ॥

ಎಲ್ಲಿರುವದು ಆ ಕೂಪವು ಶಿವ ಶಿವಾ ।
ಮೆಲ್ಲನೆ ಬರುತಿಹೆ ಅರಸುತ ಪಥವಾ ॥ ಪಲ್ಲ ॥
ಘೋರತಿಮಿರ ಮುಸುಕಿ ತುಸು । ದಾರಿಕಾಣದಾಗಿದೆ ।
ತೋರದೆನಗೆ ಮುಂದಿನ ಬಗೆ । ಕ್ರೂರದೆಸೆಯಚಿನ್ಹವಿದಕೆ
ಏನುಪಾಯಗೈವೆನು ॥ ೧ ॥

ಓಹೋ, ನಾನು ಹಾದೀ ತಪ್ಪಿ ಎತ್ತ ಬಂದೆನೋ ಏನೋ ಆ ಕೂಪವೆತ್ತದೆಯೋ ಯಾರಿಗೆ ಗೊತ್ತು? ದಾರಿಯಲ್ಲಿ ಒಬ್ಬರೂ ಭೆಟ್ಟಿಯಾಗಲಿಲ್ಲ, ಕೇಳಬೇಕೆಂದರೆ. ಈಗ ಐದು ತಾಸು ರಾತ್ರಿಯಾಗಿದೆ. ಎಲ್ಲರೂ ನಿದ್ರಾಲೋಲರಾಗಿದ್ದಾರೆ. ಇನ್ನೆತ್ತ ಹೋಗಲಿ? ದಟ್ಟಾದ ಕತ್ತಲೆ ಮುಸುಕಿದ್ದರಿಂದ ದಾರಿಯೂ ಮನೆಗಳೂ ಹಿತ್ತಲುಗಳೂ ಏನೂ ಕಾಣಲೊಲ್ಲವು. ಏನೋ ಇನ್ನೊಂದು ತುಸು ಮುಂದಕ್ಕೆ ಹೋಗಿ ನೋಡುವೆನು ದೇವರು ಹಚ್ಚಿದ್ದಾಗಲಿ (ಎಂದು ಹೋಗುವಳು. ಹೋಗಿ ಹರಳಯ್ಯನ ಮನೆಯ ಹಿತ್ತಲ ಕೊಳಚೆಯೊಳಗೆ ಸಿಗುವಳು). ಶಿವಶಿವಾ, ಈಗೆಲ್ಲಿ ಬಂದೆನೋ ಏನೋ ಈ ಕೊಳಚೆಯೊಳಗೆ ಸಿಕ್ಕುಬಿದ್ದೆ. ಈ ಗುಂಡಿಯೊಳಗೆ ದುರ್ಗಂಧಮಯವಾದ ಹೊಲಸು ನೀರು ಇವೆ. ಇವನ್ನು ತಗೆದುಕೊಂಡು ಹೋಗಿ ಆ ಮಧುವರಸನ ಮೇಲೆ ಸುರುಹಿದರಾಯಿತು. ನಾನೇನು ಮಾಡಲಿ? ಇದೊಂದು ದೇವರೇ ಕೂಡಿಸಿಕೊಟ್ಟಂತಾಯಿತು. ಈ ಕೊಳಚೆ ನೀರನ್ನೇ ತುಂಬಿಕೊಳ್ಳುವೆನು. (ತುಂಬಿಕೊಂಡು ಹೊತ್ತುಕೊಂಡು ನಡೆಯುವಳು).

ಭೋ ದೇವಾ. ಅಪದ್ಬಾಂಧವಾ ಸದಾಶಿವಾ, ನೀನೇ ನನ್ನನ್ನು ಕೃಪೆ

ಪದ್ಮಾವತಿ : ಅಯ್ಯೋ ಇದೇನು? ಒಮ್ಮಿಂದೊಮ್ಮೆ ನಾಥನಿಗೆ ಪ್ರಾಣಸಂಕಟ ಪ್ರಸಂಗವೇ ಒದಗಿತಲ್ಲಾ. ವಿಶ್ವಂಭರನಾದ ನಾರಾಯಣನೇ ಲಕ್ಷ್ಮೀಕಾಂತನೇ ವೆಂಕಟರಮಣಮೂರ್ತಿಯೇ ಉಡುಪಿಯ ನಿವಾಸಾ ನೀವು ನನ್ನ ಪ್ರಾಣೇಶನಿಗೆ ಹಿತವಾಗುವಂತೆ ಮಾಡಿರಿ. ಕಣ್ಣು ತೆರೆಯಿರಿ. ಈತನಿಗ ಗುಣವಾಗುವಂತೆ ಮಾಡಿದ್ದಾದರೆ ನಿಮಗೆ ಹತ್ತು ಸಾವಿರ ಕಿಮ್ಮತ್ತಿನ ಭಂಗಾರದ ದಾಗೀನು ತಿಂಗಳೊಳಗಾಗಿ ಮಾಡಿಸಿಕೊಡ್ತೇವೆ. ಇದಕ್ಕೆ ತಪ್ಪುವದಿಲ್ಲ. ಅದಕ್ಕೆ ಮುಂಗಡವಾಗಿಯೇ ಈಗ ನೂರು ನೂರು ರೂಪಾಯಿ ಮುಡುಪು ಕಟ್ಟಿಡುವೆ. ಬೇಗ ಕಾಂತನ ಸಂಕಟ ನಿವಾರಣೆ ಮಾಡಿರಿ. (ಮುಡುಪು ಕಟ್ಟಿ ಭಸ್ಮ ತಂದು ಅವನ ಹಣೆಗೂ ಹೊಟ್ಟೆಗೂ ಹಚ್ಚುವಳು. ಅದು ಶಮನವಾಗುವುದಿಲ್ಲ) ಭೋ ಜಿನೇಶ್ವರಾ, 'ಅಹಿಂಸಾ ಪರಮೋ ಧರ್ಮಃ' ಎಂಬ ನಿನ್ನ ತತ್ವವು ಸಾರ್ಥಕವಾಗುವಂತೆ. ಈ ಯನ್ನ ನಾಥನು ಮಹಾವ್ಯಾಧಿಯಿಂದ ಬಾಧೆಪಡುತ್ತಿರುವದನ್ನು ಈಗಲೇ ಪರಿಹರಿಸು. ಅಂದರೆ ನಿನ್ನ ದೇವಾಲಯದ ಶಿಖರಕ್ಕೆ ಭಂಗಾರದ ತಗಡು ಕೂಡ್ರಿಸಿ ಕೊಡುವೆ ದೇವಾ. ಇದಕ್ಕೆ ತಪ್ಪುವುದಿಲ್ಲ. ಬೇಗನೆ ಅಂತಃಕರಣ ಮಾಡು.

ಮಧುವಯ್ಯ : ಪ್ರಿಯೆ, ಪದ್ಮಾವತೀ ಈ ಸಂಕಟ ತಾಳಲಾರೆ. ನಿಜವಾಗಿ ಸಾಯುವೆನು. ನನಗೆ ಇನ್ನೂ ನೀರು ತಂದು ಹಾಕಿರಿ. ತಡೆಯಲಾರೆ ಅಕಟಾ ತಡೆಯಲಾರೆ. (ಹೊರಳಾಡುವನು).

ಪದ್ಮಾವತಿ :ಎಷ್ಟಂತ ನೀರು ಹಣಿಸಬೇಕು. ಮನೆಯೊಳಗಿನ ನೀರೆಲ್ಲ ತೀರಿ ಆಳು ಮಕ್ಕಳು ಕೆರೆಯಿಂದ ತಂದು ಹಾಕಿ ಹಾಕಿ ಬೇಸತ್ತು ಎತ್ತೋ ಹೋಗಿಬಿಟ್ಟರು. ಈಗ ಮನೆಯೊಳಗೆ ಕುಡಿಯಲಿಕ್ಕೆ ಸಹ ನೀರು ಇಲ್ಲ. ಇನ್ನೇನು ಮಾಡಲಿ? (ದಾಸಿಗೆ) ಅವ್ವಾ ಶಾಮಲೆ, ನಾಥನು ಇನ್ನೂ ನೀರು ಹಾಕಿರೆಂದು ಹಲುಬುತ್ತಿದ್ದಾನೆ. ಆಳುಗಳೆಲ್ಲ ಎತ್ತಲೋ ಹೋದರು. ನೀನೇ ಎಲ್ಲಿಗಾದರೂ ಹೋಗಿ ಒಂದು ಕೊಡ ನೀರು ತೆಗೆದುಕೊಂಡು ಬಾರವ್ವಾ ಬೇಗನೆ.

ಶಾಮಲೆ: ತಾಯಿ, ಈಗ ಮೂರು ನಾಲ್ಕು ತಾಸು ರಾತ್ರಿಯಾಗಿದೆ. ಒಬ್ಬಳೇ ಎಲ್ಲೆಂದು ಹೋಗಲಿ.

ಪದ್ಮಾವತಿ : ಅವ್ವಾ ಹಾಗೆನ್ನಬೇಡ, ಪ್ರಸಂಗವೇ ಹಾಗೆ ಬಂದಿದೆ. ನಿನ್ನ ಕಾಲಿಗೆರಗುವೆ. ದಯಮಾಡಿ ಹೋಗಿ ಎಲ್ಯಾದರೂ ತಕ್ಕೊಂಡು ಬಾ ಹೋಗು.

ಶಾಮಲೆ : ಇದೊಂದು ಪ್ರಾಣಸಂಕಟವೇ. ಯಾವಾಗ್ಯೆ ನಿಮ್ಮ ಆಳಾಗಿ ಬಂದು

ಮಾಡಿ ಮನೆಗೆ ಮುಟ್ಟುವಂತೆ ಮಾಡು. ಎಲ್ಲಿ ಇರುವೆನೋ, ಹ್ಯಾಗೆ ಬಂದೆನೋ, ಮನೆ ಯಾವ ಕಡೆಗಿರುವದೋ ಈ ಕತ್ತಲಲ್ಲಿ ನನಗೆ ಯಾವದೂ ತಿಳಿಯಲೊಲ್ಲದು. ಕರುಣಾಕರಾ ಮನೆಯ ದಾರಿ ಹಿಡಿಸು (ಎಂದು ಹೋಗಹತ್ತಲು, ಮನೆಗೆ ಸುರಕ್ಷಿತವಾಗಿ ಮುಟ್ಟುವಳು).

ಪದ್ಮಾವತಿ : ಶಾಮಲೆ ಹೋದವಳು ಇನ್ನೂ ಬರಲಿಲ್ಲ. ಬಹಳ ವೇಳೆಯಾಯಿತು. ಕತ್ತಲೆಯಲ್ಲಿ ಒಬ್ಬಳನ್ನೇ ಕಳಿಸಿದ್ದು. ಪಾಪ, ಏನು ಮಾಡಬೇಕಿನ್ನು?

ಶಾಮಲೆ :(ಬರುವಳು) ಅಮ್ಮಾ ಬಂದೆ, ಕೊಡ ಇಳುಹಿಕೊಳ್ಳಿರಿ.

ಪದ್ಮಾವತಿ : ಶಾಮಲೆ ಬಂದೆಯಾ? ಶಹಬಾಶ್. ನೀನು ಗಟ್ಟಿಗಳು (ಕೊಡ ಇಳುಹುತ್ತ). ನಾಥಾ, ಶಾಮಲಾ ನೀರು ತಂದಳು. ನಿಮ್ಮ ಮೇಲೆ ಈಗಲೇ ಹಾಕಬೇಕೆ?

ಮಧುವಯ್ಯ : ಅಯ್ಯೋ, ಸಾಯುವೆನು ಬೇಗ ಹಾಕು. (ಪದ್ಮಾವತಿ ಹಾಕಲು ಆತನ ಸಂಕಟವೆಲ್ಲವೂ ತಕ್ಷಣವೇ ನಿವಾರಣವಾಗಿ ಸಾನಂದಚಿತ್ತನಾಗಿ ಎದ್ದು ಕೂಡ್ರುವನು). ಓಹೋ, ಈ ನೀರು ಹಾಕಿದ ಕೂಡಲೆ ನನ್ನ ಅನಿವಾರ ಸಂಕಟವೆಲ್ಲ ಹೇಳ ಹೆಸರಿಲ್ಲದೆ ಪಲಾಯನವಾಯಿತು. ಆನಂದವನು ಕಂಡೆ. ದೇವರು ಕರುಣಿಸಿದನು. ಶಾಮಲಾ, ಈ ನೀರನ್ನು ಎಲ್ಲಿಂದ ತಂದೆ? ನೀನೇ ನನ್ನನ್ನು ಬದುಕಿಸಿದಿ. ಇಂದಿಗೆ ನೀನೇ ನನ್ನ ತಾಯಿ. ಈ ನಿನ್ನ ಉಪಕಾರ ಎಂದೆಂದೂ ಮರೆಯದಂತಾಯಿತು ಕಂಡಿಯಾ. ಇರಲಿ, ಈ ನೀರೊಳಗೆ ಏನಾದರೂ ಅಂಥ ಔಷಧವನ್ನು ಹಾಕಿದೆಯೋ ಏನು ಮಾಡಿದಿ?

ಶಾಮಲಾ: ಒಡೆಯರೇ, ಎಲ್ಲಿಯ ಔಷಧ, ಬರೇ ನೀರೇ ಇದ್ದವು.

ಮಧುವಯ್ಯ: ಹಾಗಾದರೆ ಈ ನೀರನ್ನೆಲ್ಲಿಂದ ತಂದೆ?

ಶಾಮಲೆ: ಇಂಥಲ್ಲಿಯವೆಂದು ನನಗೆ ಹೇಳಲಿಕ್ಕೆ ಬರುವಂತಿಲ್ಲ. ಕತ್ತಲೊಳಗೆ ಎತ್ತೋ ಹೋಗಿ ಹಿಂದು ಹಿತ್ತಲೊಳಗೆ ನಡೆದಿರಲಾಗಿ, ಅಕಸ್ಮಾತ್ ಒಂದು ನೀರು ಗುಂಡಿಯೊಳಗೆ ಕಾಲಿಟ್ಟೆ. ಅವೇ ನೀರನ್ನು ತುಂಬಿಕೊಂಡು ಬಂದೆ. ಇದರ ಹೊರ್ತು ಮತ್ತೇನೂ ಗೊತ್ತಿಲ್ಲ.

ಮಧುವಯ್ಯ : ಹಾಗಾದರೆ ಆ ನೀರು ಎಲ್ಲಿಯವು? ಬೆಳಗಾದ ಕೂಡಲೇ ಶೋಧಿಸಲಿಕ್ಕೇ ಬೇಕು. ಅವು ತೀರ್ಥದಂತೆ ಪವಿತ್ರವಾಗಿರುವವು. ಮೈಮೇಲೆ ಸುರಿದಾಕ್ಷಣವೇ ಅಂಥ ಸಂಕಟ ಪರಾಭವವಾದ ಮೇಲೆ ಪಾನ

ಮಾಡಿದರಂತೂ ಕೇಳುವದೇನು. ಭವ ರೋಗವೇ ಹಿಂಗಿ ಹೋಗುವದು. ಅರುಣೋದಯವಾದ ಕೂಡಲೇ ಆ ನೀರ ಗುಂಡಿಯನ್ನು ಯನಗೆ ತೋರಿಸಲಿಕ್ಕೆ ಬೇಕು.

ಶಾಮಲೆ: ಆಗಲಿ, ಬಂದ ಹಾದಿಯ ಸುಳುವ್ಹಿಡಿದು ಗೊತ್ತು ಹಚ್ಚುವೆ.

ಮಧುವಯ್ಯ : ಪ್ರಿಯೇ ಪದ್ಮಾವತೀ, ಹೊಟ್ಟೆ ಹಸಿಯಿತು. ಏನಾದರೂ ತಿನ್ನಲಿಕ್ಕೆ ಕೊಡು, ಶಾಮಲೆಗೂ ಕೊಡು.

ಪದ್ಮಾವತಿ : (ತಂದುಕೊಟ್ಟು) ಇಗೋ ತಕ್ಕೊಳ್ಳಿರಿ. (ಹಣ್ಣುಹಂಪಲ ಹಾಲಿನ ಸ್ವಾರೆ ಕೊಡುವಳು). ಶಾಮಲಾ, ನೀನೂ ತೆಗೆದುಕೋ ಯಜಮಾನರ ಪ್ರಾಣವನ್ನುಳಿಸಿದೆ. (ಆಕೆಗೂ ಕೊಡುವಳು).

ಶಾಮಲೆ: ನಾನೇನು ಉಳಿಸಲಿ, ದೇವರು ಉಳಿಸಿದನು. (ಎಂದು ಅವನ್ನು ತಕ್ಕೊಂಡು ತಿನ್ನುವಳು).

ಮಧುವಯ್ಯ: ಈಗ ಬಹು ಸಮಾಧಾನವಾಯಿತು, ತೃಪ್ತನಾದೆ. ಆನಂದ ಶರಧಿಯಲ್ಲಿ ಲೋಲುಪ್ತನಾದೆ (ಎದ್ದು ಹೊರಗೆ ಬಂದು ನೋಡಿ), ಓಹೋ ಬೆಳಗಾಯಿತು. ನನಗೆ ಶಾಂತಿಯನ್ನು ಕೊಟ್ಟ ಆ ನೀರಿನ ಸ್ಥಾನವಾವುದು? ಅದನ್ನು ಶೋಧಿಸಲು ಈಗಲೆ ತೆರಳುವಾ, ಶಾಮಲೆ, ತೀರಾ ಬೆಳಗಾಗಿದೆ. ನೀ ತಂದ ನೀರು ಯಾವಲ್ಲಿ ತೋರಿಸು ನಡೆ, ಈಗಲೇ ಹೋಗೋಣ.

ಶಾಮಲೆ : ಹಾಗಾದರೆ ನಡೆಯಿರಿ. (ಹೋಗುವರು. ಆ ನೀರು ಹರಳಯ್ಯನ ಮನೆಯ ಹಿತ್ತಲಲ್ಲಿಯ ಬಚ್ಚಲ ನೀರಿನ ತೆಗ್ಗು ಆಗುವದು. ಅಲ್ಲಿಗೆ ಬರುವರು). ಪ್ರಭೋ ಇವೇ ನೀರು ನಿಮ್ಮ ಅನಿವಾರ ಸಂಕಟ ನಿವಾರಣ ಮಾಡಿದಂಥವು. ಕತ್ತಲಲ್ಲಿ ಎನೂ ಕಾಣದೆ ನೀರಾದರಾಯಿತೆಂದು ಈ ಹೊಲಸು ನೀರನ್ನೇ ತಂದೆನು.

ಮಧುವಯ್ಯ : ಇವೇ ನೀರೇ? ಓಹೋ, ಇದು ಯಾರದೋ ಮನೆಯ ಬಚ್ಚಲದ ಕೊಳಚೆ ನೀರು. ಇಂಥಾ ಕೊಳಚೆ ನೀರು ಬರೇ ಮೇಲೆ ಸುರುಹಿದ್ದರಿಂದ ನನ್ನ ಅತ್ಯಂತ ತಾಪವು ನಿವಾರಣವಾಗಬೇಕಾದರೆ ಇಲ್ಲಿ ಒಂದು ಏನೋ ಅಗಾಧ ಮಹಿಮೆ ಇದೆ. ಈ ಮನೆ ಯಾರದು ವಿಚಾರಿಸೋಣ (ಮುಂದೆ ಬಂದು), ಈ ಮನೆ ಒಳಗೆ ಯಾರಿದ್ದೀರಿ? (ಹರಳಯ್ಯ ಹೊರಗೆ ಬಂದು).

ಹರಳ : ಅಪ್ಪಾ, ಈ ಮನೆಯವನು ನಾನೇ ಬನ್ನಿ. ಯಾಕೆ ಬೆಳಗಾಗುವದರೊಳಗೆ

ಬಂದಿರಿ? ಪ್ರಭೋ, ನನ್ನ ಕಡೆ ಅಂಥದೇನು ಕೆಲಸವಿದೆ.

ಮಧುವಯ್ಯ : (ತನ್ನೊಳಗೆ) ಓಹೋ ನಿನ್ನಿನಾತನೇ ಇವನು. ಪಾದರಕ್ಷೆಯ ವ್ಯಾಜದಿಂದ ಕೈಕೈ ಹತ್ತುವ ಪ್ರಸಂಗವಾಗಿ ನನ್ನ ಸೊಕ್ಕೇ ನನ್ನ ಮೈ ತಿನ್ನಿತು. ಮೇಲಾಗಿ ಇವನು ಸ್ನಾನ ಮಾಡುತ್ತಿರುವ ಬಚ್ಚಲ ಕೊಳಚೆ ನೀರಿನಿಂದಲೇ ನನಗೆ ಗುಣವಾಯಿತು. ಅಂದಮೇಲೆ ಈತನು ಸಾಧಾರಣ ಪುರುಷನಲ್ಲ. ಇವನು ಮಹಾತ್ಮನೇ ಇರುವನು. ನಿನ್ನಿನ ತಪ್ಪನ್ನು ಕ್ಷಮಿಸೆಂದು ಬೇಡಿ ಇವನ ಪ್ರೇಮ ಸಂಪಾದಿಸುವೆ. (ಆತನಿಗೆ) ಭಕ್ತ ಶ್ರೇಷ್ಠಾ, ನಿನ್ನೆ ನಾನು ಮಾಡಿದ ಆಟಕ್ಕೆ ತಕ್ಕ ಪ್ರಾಯಶ್ಚಿತ್ತ ಹೊಂದಿ ಪ್ರಾಣಕ್ಕೇ ಎರವಾಗಿದ್ದೆ. ಅಂಥಾ ಅಪಾರ ಸಂಕಟವು ಈ ನಿಮ್ಮ ಹಿತ್ತಲ ಬಚ್ಚಲ ಕೊಳಚೆ ನೀರಿನಿಂದ ನಿವಾರಣವಾಯಿತು. ಇದು ನಿಜವಾದ ಮಾತು. ಆ ಕೊಳಚೆ ನೀರಿನಲ್ಲಿ ಅಷ್ಟು ಪ್ರಭಾವವಿರಬೇಕಾದರೆ ನೀನೆಂಥಾ ಮಹಿಮಾಶಾಲಿ ಇರಬೇಕು. ಮಹಾತ್ಮಾ, ಅಧಿಕಾರದ ಬಲದಿಂದಲೂ, ಐಶ್ವರ್ಯದ ಮದದಿಂದಲೂ ನಿನ್ನ ಯೋಗ್ಯತೆಯನ್ನರಿಯದೆ ನಿನಗೆ ಕಂಡಂತೆ ಮಾತಾಡಿದೆ. ಈಗ ಬುದ್ಧಿ ಬಂತು. ಕುನ್ನಿಯಾದ ಯನ್ನಪರಾಧ ಕ್ಷಮಿಸಿ, ಯನ್ನನ್ನು ಕರುಣಿಸು. ಇದೋ ಪಾದಕ್ಕೆರಗುವೆ (ನಮಸ್ಕರಿಸುವನು).

ಹರಳಯ್ಯ : ಏಳು ಏಳು ಮಂತ್ರೀಶಾ, ದೊಡ್ಡವನಾದ ನೀನು ನನ್ನ ಪಾದಕ್ಕೆರಗ ಬೇಕೇ? ನಾನು ಯಃಕಶ್ಚಿತ ಮನುಷ್ಯ. ನಾನು ನಿನ್ನನ್ನೇನು ಮಾಡಲು ಸಮರ್ಥನು? ನೀನು ನನಗೆ ಬೇಡಿಕೊಳ್ಳುವುದನ್ನು ಮತ್ತಾರಾದರೂ ನೋಡಿದರೆ ನಗಬಹುದು. ನಿನ್ನ ಮೇಲೆ ನನ್ನದೆಳ್ಳಷ್ಟೂ ಸಿಟ್ಟಿಲ್ಲ, ನೀನು ಸಂತೋಷದಿಂದ ಮನೆಗೆ ಹೋಗು. ತಿಳಿಯಿತೇ ಮತ್ತೇನು?

ಮಧುವಯ್ಯ : ನಿಮ್ಮ ಪ್ರೇಮ ನನ್ನ ಮೇಲೆ ಸದಾ ಇರಬೇಕು ಇಷ್ಟೇ. ಶಿವಭಕ್ತಿ ಮಾರ್ಗ ಹಿಡಿದು ನೀವು ಆ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವಿರಿ. ಅಂಥಾ ಶಿವಭಕ್ತಿಯ ಮಾರ್ಗ ನನಗೂ ತೋರಿಸಿರಿ. ನಾನೂ ಶಿವದೀಕ್ಷೆ ಹೊಂದಿ ಅನನ್ಯಭಾವದಿಂದ ಪೂಜಿಸಿ ಭಜಿಸಿ ಸದಾ ಆ ಶಿವಧ್ಯಾನಸಕ್ತನಾಗುವೆ. ಕೃಪಾಳುಂಯನ್ನೀ ಆಶೆಯನ್ನು ಈಡೇರಿಸುವಂಥವನಾಗು, ತಿಳಿಯಿತೇ.

ಹರಳಯ್ಯ : ಮಂತ್ರಿವರಾ, ಯಾವತ್ತೂ ಶಿವನನ್ನೇ ಆರಾಧಿಸುವವನಿಗೆ ಯಾವ ಕೊರತೆಯೂ ಇಲ್ಲ. ಎಂಥ ರೋಗಾದಿಗಳೂ, ತ್ರಾಸಗಳೂ ಬರವು. ಭವರೋಗವೇ ಹಾಳಾಗಿ ಹೋಗುವಲ್ಲಿ ಮಿಕ್ಕವುಗಳ ಪಾಡೇನು? ಇನ್ನು

ಹೋಗು, ಸುಖಿಯಾಗಿ ಆ ಭಗವಂತನನ್ನು ಪೂಜಿಸುತ್ತ ಕಾಲ ಕಳೆ. ತಿಳಿಯಿತೇ, ಹೋಗು. (ಇಷ್ಟರಲ್ಲಿ ಹರಳಯ್ಯನ ಮಗನು ಹೊರಗೆ ಬರುವನು).

ಮಧುವಯ್ಯ : (ಆ ಹುಡುಗನನ್ನು ನೋಡಿ) ಮಹಾತ್ಮ ಇವನಾರು?

ಹರಳಯ್ಯ : ಇವನು ನನ್ನ ಮಗನು. ಇವನೊಬ್ಬನೇ ನಮಗೆ. ಇವನಾದರೂ ತಕ್ಕ ಮಟ್ಟಿಗೆ ಗುಣವಂತನೂ, ಬುದ್ಧಿವಂತನೂ, ಶಿವಶಕ್ತಿಯುತನೂ ಆಗಿ ಸದಾ ನಮ್ಮನ್ನು ಆನಂದಪಡಿಸುತ್ತಿರುವನು.

ಮಧುವಯ್ಯ : ಹೌದು, ಈ ಹುಡುಗನು ಭಾಗ್ಯವಂತನಿದ್ದಾನೆ. ಇವನ ಮುಖ ಲಕ್ಷಣವೂ ಸರ್ವಾಂಗ ಸೌಂದರ್ಯವೂ ನೋಡುವವರ ಚಿತ್ತವನ್ನಾಕರ್ಷಿಸುವಂಥವವೆ. ಧೈರ್ಯಶಾಲಿಯೂ, ಬುದ್ಧಿಶಾಲಿಯೂ, ಭಾಗ್ಯಶಾಲಿಯೂ ಇರುತ್ತಾನೆ. ಧನ್ಯ ಧನ್ಯ ಮಹಾತ್ಮಾ, ನೀನು ಮಹಾ ಪುಣ್ಯನಿಧಿ. ಇರಲಿ ಹೋಗಿ ಬರುವೆ ಕೃಪೆಯಿರಲಿ.

ಹರಳಯ್ಯ : ಹೋಗಿರಿ, ದೇವರು ನಿಮಗೆ ಯಶಸ್ಸು ಕೊಡಲಿ (ಮಧುವರಸ ಹೋಗುವನು).

ಮಗ : ಅಪ್ಪಾ. ಅವರ್‍ಯಾರು ಬಂದವರು?

ಹರಳಯ್ಯ : ಅವನೊಬ್ಬ ಮಂತ್ರಿಯು, ನಿನ್ನಿನ ದಿವಸ ನನ್ನೊಡನೆ ವಾದಿಸಿ ಭಯಂಕರ ಕಷ್ಟಕ್ಕೆ ಗುರಿಯಾಗಿ ಏನೋ ನಮ್ಮ ಬಚ್ಚಲ ನೀರಿನಿಂದ ಗುಣ ಹೊಂದಿದನಂತೆ. ಅದರ ಪ್ರಾಯಶ್ಚಿತ್ತವಾಗಿ ಬಂದು ನನ್ನ ಮೇಲೆ ದಯೆ ಮಾಡೆಂದು ಬೇಡಿಕೊಂಡನು. ನಮಗೂ ನಿಮಗೂ ಆ ಪರಮಾತ್ಮನೇ ಇದ್ದಾನೆ, ಆತನನ್ನೇ ಆರಾಧಿಸುತ್ತಿರು ಹೋಗು ಎಂದು ಕಳುಹಿಸಿದೆ, ಇಷ್ಟೇ. ಆಗಲಿ ನಮ್ಮ ಕೆಲಸವೇನು ನೋಡೋಣ ನಡೆ.

ಮಗ : ಹೋಗೋಣ ನಡೆ (ಒಳಗೆ ಹೋಗುವರು).

–(ಮಧುವರಸ ಮನೆಗೆ ಬಂದು)–

ಮಧುವಯ್ಯ : ಪ್ರಿಯೆ, ಪದ್ಮಾವತಿ ವಿಚಿತ್ರವು. ನನ್ನ ಸಂಕಟ ನಿವಾರಣ ಮಾಡಿದ ನೀರು, ಸಮಗಾರ ಹರಳಯ್ಯನೆಂಬವನ ಮನೆಯ ಹಿತ್ತಲದಲ್ಲಿದ್ದ ಬಚ್ಚಲದ ಕೊಳಚೆ ನೀರು. ಆ ಕೊಳಚೆ ನೀರಿನಲ್ಲಿಯೇ ಅಂಥ ಸಾಮರ್ಥ್ಯವಿದ್ದ ಮೇಲೆ ಆ ಮಹಾತ್ಮನಲ್ಲಿಯ ಅಗಾಧ ಸಾಮರ್ಥ್ಯ–ವರ್ಣಿಸಲಿಕ್ಕೆ ಸಾವಿರ ಮುಖದ ಆದಿಶೇಷನಿಗೂ ಸಹ ಆಗದು ತಿಳಿಯಿತೇ. ನಿನ್ನೆಯ ದಿವಸ

ವ್ಯರ್ಥವಾಗಿ ಆತನೊಡನೆ ವಾದಿಸಿ ಅಂಥಾ ಭಯಂಕರ ಸಂಕಟವನ್ನನುಭವಿಸಿದೆ ಮತ್ತು ಅವನು ಜಳಕ ಮಾಡುವ ಬಚ್ಚಲ ನೀರು ಜಮೆಯಾದ ಕೊಳಚೆ ನೀರಿನಿಂದಲೇ ನಾನು ಬದುಕಿದೆ. ಅದಕ್ಕೆ ಹ್ಯಾಗಾದರೂ ಮಾಡಿ ಅವನ ಪ್ರೇಮ ಸಂಪಾದಿಸಬೇಕು. ಇಂದಿಗೆ ನಾವು ಶಿವಭಕ್ತರಾಗಬೇಕು. ಆತನಿಗೆ ಹದಿನಾರು ವರ್ಷದ ಒಬ್ಬನೇ ಮಗನಿದ್ದು ಆ ಹುಡುಗ ಸುಂದರನೂ ಸಲ್ಲಕ್ಷಣಸಂಪನ್ನನೂ, ಭಾಗ್ಯವಂತನೂ ಇದ್ದಾನೆ. ಅವನಿಗೆ ನಮ್ಮ ಮಗಳಾದ ಇಂದಿರೆಯನ್ನು ಕೊಟ್ಟು ಲಗ್ನ ಮಾಡಬೇಕೆಂದು ನನ್ನಿಚ್ಛೆಯಾಗಿದೆ. ಇದಕ್ಕೆ ನಿನ್ನ ಅಂಬೋಣವೇನು?

ಪದ್ಮಾವತಿ : ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ನಿಮ್ಮ ಮಾತು ಮೀರಿ ನಾನೆಂದೂ ನಡೆದಿಲ್ಲ. ಮುಂದೂ ನಡೆಯುವದಿಲ್ಲ.

ಮಧುವಯ್ಯ : ಆಯಿತು, ಕೇಳಲೇಬೇಕಲ್ಲವೇ ನಿನ್ನನ್ನು. ಜಾತಿಯನ್ನು ನೋಡುವ ಕಾರಣವಿಲ್ಲ. ಎಂಥ ಜಾತಿಯವನಾದರೇನು. ಶಿವಕೃಪೆ ಪಡೆದಾತನೇ ಉತ್ತಮ ಕುಲಜಾತನೆಂದು ತಿಳಿಯಬೇಕು. ಅವರು ಬಡವರಿದ್ದರೂ ನಮಗಿರುವ ನಾಲ್ಕಾರು ಮನೆಗಳಲ್ಲಿ ಒಂದನ್ನು, ಹೊಲ ಸಾಕಷ್ಟನ್ನು ಕೊಟ್ಟರಾಯಿತು. ನಮಗೇನು ದೇವರು ಕಡಿಮೆ ಮಾಡಿಲ್ಲ. ಅದಕ್ಕಿಷ್ಟು ಮಾಡಿ ಆ ಹುಡುಗನಿಗೆ ನಮ್ಮ ಇಂದಿರೆಯನ್ನು ವಿವಾಹ ಮಾಡಿ ಊರೊಳಗೇ ತಂದಿಟ್ಟುಕೊಂಡು ಅವರ ಪ್ರೇಮ ಸಂಪಾದಿಸೋಣ. ಯಾಕೆ ಏನೆಂದೆ? ಇನ್ನೊಮ್ಮೆ ಭಾಷೆ ಕೊಡು.

ಪದ್ಮಾವತಿ : ಕೊಟ್ಟು ಬಿಡಿರಿ ಇಂದಿರೆಯನ್ನು, ಮತ್ತೇನು ಹೇಳಲಿ?

ಮಧುವಯ್ಯ : ಆಯಿತು ಬಿಡು, ಆತನನ್ನು ಕೇಳಲಿಕ್ಕೆ ಈಗಲೇ ಹೋಗುತ್ತೇನೆ.

ಪದ್ಮಾವತಿ : ಹೋಗಿರಿ. (ಇಬ್ಬರೂ ಹೋಗುವರು).

(ಹರಳಯ್ಯನ ಮನೆ)

(ಹರಳಯ್ಯ ಕೆಲಸ ಮಾಡುತ್ತ ಕುಳಿತಿರುವನು.)

ಹರಳಯ್ಯ : ಚನ್ನೇ, ನೀರನ್ನಷ್ಟು ತೆಗೆದುಕೊಂಡು ಬಾ ಇಲ್ಲಿ. ಚರ್ಮಕ್ಕೆ ಪ್ರೋಕ್ಷಿಸಲು ಕಡಿಮೆಯಾಗಿವೆ.

ಚನ್ನಮ್ಮ: (ತಂದು) ತಕ್ಕೊಳ್ಳಿರಿ (ನೀರು ಹನಿಸುವಳು), (ಅಷ್ಟರಲ್ಲಿ ಮಧುವರಸ ಬರುವನು).

ಮಧುವಯ್ಯ : ಹರಳಯ್ಯನವರೇ ಶರಣು.

ಹರಳಯ್ಯ : ಶರಣು ಮಂತ್ರಿಗಳೇ ಬರಬೇಕು. ಮತ್ತೇ ಬರೋಣವಾಯಿತು ಏನು?

ಮಧುವಯ್ಯ : ಹರಳಯ್ಯನವರೇ ನನ್ನದೊಂದು ಬಿನ್ನಹವುಂಟು. ಅದಕ್ಕೆ ನೀವು ಸಮ್ಮತಿಸಬೇಕು. ನಮಗೂ ನಿಮಗೂ ಹಿತಕರವಾಗುವುದನ್ನೇ ಮಾಡಲುಬಂದಿರುವೆ. ತಾವು ಅನಾದರಿಸಬಾರದು ಅಷ್ಟೇ.

ಹರಳಯ್ಯ: ಮಂತ್ರಿಗಳೇ, ಅದೇನು ಅಂಥ ಮಹತ್ಕಾರ್ಯ. ಏನೂ ಸಂಶಯವಿಲ್ಲದೆ ಹೇಳಬೇಕು.

ಮಧುವಯ್ಯ: ಹೇಳಬೇಕೇ?

ಹರಳಯ್ಯ: ಹೇಳಿಬಿಡಿರಿ.

ಮಧುವಯ್ಯ: ಹೇಳುವದೇನು, ನಿಮ್ಮ ಮಗನಿಗೆ ನಮ್ಮ ಮಗಳನ್ನು ಕೊಟ್ಟು ಲಗ್ನ ಮಾಡುವೆವು. ಇದಕ್ಕೆ ನೀವು ಅನುಮತಿ ಕೊಡಬೇಕು ಇಷ್ಟೇ.

ಹರಳಯ್ಯ: (ಗಾಬರಿಯಾಗಿ) ಓಹೋ, ಮಂತ್ರಿವರ್ಯಾ ಇದೇನು. ನಾವ್ಯಾರು ನೀವ್ಯಾರು? ನನ್ನ ಯೋಗ್ಯತೆಯೇನು? ನಿಮ್ಮ ಯೋಗ್ಯತೆಯೇನು. ಕೇಳಿದವರು ನಕ್ಕಾರು. ಮತ್ತಾರ ಮುಂದೂ ಉಸುರದೆ ಸುಮ್ಮನೆ ಮನೆಗೆ ಹೋಗಿರಿ.

ಮಧುವಯ್ಯ: ಛೇ, ಈ ಮಾತಿಗೆ ನಿಮ್ಮ ಸಮ್ಮತಿ ಪಡೆಯದೇ ಹಾಗೇ ಎಂದೂ ಹೋಗುವುದಿಲ್ಲ.

ಹರಳಯ್ಯ: ಏನು ಮಾತಿದು? ನೀನು ದೊಡ್ಡ ಅಧಿಕಾರಿ, ಮಂತ್ರಿ ಪದವಿಯವನು, ಮೇಲಾಗಿ ದೊಡ್ಡ ಐಶ್ವರ್ಯವಂತ. ನಾನಾದರೆ ಜೋಡುಗಳನ್ನೊಲಿದು ಹೊಟ್ಟೆ ತುಂಬಿಸಿಕೊಳ್ಳುವವ, ತೀರ ಬಡವ. ಹೀಗಿದ್ದು ನಮಗೂ ನಿಮಗೂ ಶರೀರ ಸಂಬಂಧವಾಗುವದೆಂದರೆ ಹುಚ್ಚಾಟವಲ್ಲವೋ. ಸರಿಸಮಾನಸ್ಕರಲ್ಲಿ ಆಗುವದು ವಿಹಿತವು. ಹೀಗೆ ನೀನು ಆಶೆಮಾಡಿ ಬಂದದ್ದು ವ್ಯರ್ಥ. ಮಂತ್ರಿ ಶ್ರೇಷ್ಠಾ, ನೋಡು ಪೂರಾ ವಿಚಾರಿಸು. ದಿನಾಲು ಬೇಕಾದ ಮೃಷ್ಟಾನ್ನಗಳನ್ನುಂಡು ಬಿಸಿಲು ಮಳೆ ಗಾಳಿಯನ್ನು ನೋಡದೆ ಬೆಳೆದ ನಿನ್ನ ಮಗಳು, ದಿನಾಲು ತಂಗಳನ್ನವನ್ನುಂಡು ಕಾಲಹರಣ ಮಾಡುವ ನಮ್ಮ ಮನಿಯಲ್ಲಿ ಹ್ಯಾಗೆ ಪೂರೈಸಬೇಕು. ಇದು ಆಗುವ

ಮಾತಲ್ಲ. ಕೈಮುಗಿದು ಹೇಳುವೆ. ದಯಮಾಡಿ ನಿಮಗೆ ಸಲ್ಲುವಂಥವರಲ್ಲಿ ನೋಡಿಕೊಳ್ಳಿರಿ, ಹೋಗಿರಿ.

ಮಧುವಯ್ಯ : ಹರಳಯ್ಯನವರೇ, ನನ್ನ ಮಗಳೂ ನೀವೆಲ್ಲರೂ ಸುಖರೂಪದಿಂದ ಇರುವಂತೆ ಮಾಡುವೆ. ಯಾವ ತರದ ಕೊರತೆಯೂ ಬರದಂತೆ ವ್ಯವಸ್ಥೆ ಸಹ ಇಡುವೆ. ಅದರ ಗೋಜು ಬಿಡಿರಿ. ನನ್ನ ಮಗಳನ್ನು ನಿಮ್ಮ ಮಗನಿಗೆ ಕೊಟ್ಟೇ ತೀರುವೆನೆಂಬ ಪ್ರತಿಜ್ಞೆ ಮಾಡಿ ಬಂದಿದ್ದೇನೆ. ಎನ್ನ ಪ್ರತಿಜ್ಞೆ ಸಫಲವಾಗುವಂತೆ ದಯಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಹರಳಯ್ಯ: ನೀವು ಉಚ್ಚ ಕುಲದವರು, ನಾವು ನೀಚ ಕುಲದವರು. ನಮಗೂ ನಿಮಗೂ ಹ್ಯಾಗೆ ಸಂಬಂಧವಾಗಬೇಕು. ಮಧುವರಸರೇ ನನಗೆ ಬಹು ಅಂಜಿಕೆ ಬರಹತ್ತಿದೆ. ನಿಮ್ಮ ಪ್ರತಿಜ್ಞೆಯನ್ನು ಹ್ಯಾಗೆ ಕೊನೆಗಾಣಿಸಬೇಕು?

ಮಧುವಯ್ಯ: ನಾನು ಕೇಳುವದೇ ಇಲ್ಲ. ಪುನಃ ಪುನಃ ಹೇಳಿದರೂ ಅದೇ ಮಾತು. ನೀವು ಇದಕ್ಕೆ ಸಮ್ಮತಿಸದಿದ್ದರೆ ನಾನು ಅನ್ನ ನೀರು ಬಿಟ್ಟು ಪ್ರಾಣನೀಗುವೇ. ತಿಳಿಯಿತೇ ಇದೇ ಕಡೆಯ ಮಾತು.

ಹರಳಯ್ಯ: ಹೀಗೆಂದರೆ ನಾನು ಹ್ಯಾಗೆ ಪಾರಾಗಬೇಕು? ಆಗಲಿ, ಇಷ್ಟೊಂದು ನಿಮ್ಮಾಶೆ ಇದ್ದರೆ ಇದಕ್ಕೆ ಬಸವೇಶ್ವರ ಪ್ರಭುಗಳು ಸಮ್ಮತಿ ಕೊಟ್ಟರೆ, ನಾನೂ ಸಮ್ಮತಿ ಕೊಡುವೆ ಬಲ್ಲಿರಾ?

ಮಧುವಯ್ಯ: ಹಾಗಾದರೆ ಬಸವೇಶ್ವರ ಹತ್ತಿರ ಈಗಲೇ ಹೋಗೋಣ ನಡೆಯಿರಿ. ಅಲ್ಲಿಯೇ ಪೂರ್ಣವಾಗಲಿ.

ಹರಳಯ್ಯ: ಹಾಗಾದರೆ ನಡೆಯಿರಿ (ಇಬ್ಬರೂ ಹೋಗುವರು.)

(ಬಸವೇಶ್ವರನ ಮನೆ)

ಮಧುವಯ್ಯ: ಸೇವಕಾ, ಬಸವೇಶ್ವರ ಪ್ರಭುಗಳು ಏನು ಮಾಡುತ್ತಿದ್ದಾರೆ?

ಸೇವಕ: ಒಳಗೆ ಕೂತಿರುವರು.

ಮಧುವಯ್ಯ: ಹಾಗಾದರೆ, ಮಧುವರಸ ಹಾಗೂ ಹರಳಯ್ಯ ಬಂದಿದ್ದಾರೆಂದು ತಿಳಿಸು. (ಸೇವಕ ಹೋಗಿ ತಿಳಿಸಲು ಬಸವೇಶ್ವರರು ಬಂದು)

ಬಸವ: ಬನ್ನಿರಿ, ಮಧುವರಸ-ಹರಳಯ್ಯಗಳೇ, ಇತ್ತ ಉಚಿತಾಸನದ ಮೇಲೆ ಕುಳಿತುಕೊಳ್ಳಿರಿ. (ಕೂಡ್ರುವರು). ತಾವಿಬ್ಬರೂ ಏಕೆ ಬಂದಿರಿ ನನ್ನ ಹತ್ತಿರ.

ಮಧುವಯ್ಯ: ಏಕೆಂದರೆ, ಮಹಾತ್ಮನಾದ ಈ ಹರಳಯ್ಯನ ಮಗನಿಗೆ ನನ್ನ ಮಗಳಾದ ಇಂದಿರಾಂಬಿಕೆಯನ್ನು ಕೊಟ್ಟು ವಿವಾಹ ಮಾಡಲು ಸಿದ್ಧನಾಗಿದ್ದೇನೆ. ಅದಕ್ಕೆ ನಿಮ್ಮ ಅನುಮತಿ ಬೇಕೆಂದು ಈ ಹರಳಯ್ಯನವರು ಬಂದಿದ್ದಾರೆ. ಆದರೆ ತಾವು ಈ ಕಾರ್ಯಕ್ಕೆ ಅನುಮೋದನೆ ಕೊಡುವ, ಕೃಪೆಯಾಗಬೇಕು ಬಲ್ಲಿರಾ.

ಬಸವ: ಇದಕ್ಕೆ ನನ್ನ ಅನುಮತಿ ಬೇಕೇ? ಮಧುವರಸರೇ, ಈ ಹರಳಯ್ಯನೆಂದರೆ ಮಹಾ ಶರಣ. ಇಂಥವರ ಗೂಡ ಸಹವಾಸವಾಗಬೇಕಾದರೆ ಎಷ್ಟೋ ಜನ್ಮದ ಪುಣ್ಯ. ಆಗಲಿ, ನನಗನಕಾ ಸಮ್ಮತವಿದೆ. ಲೋಕರೂಢಿಗೆ ಮಾತ್ರ ವಿರೋಧವದೆ, ಲೋಕರೂಢಿಯನ್ನು ತಕ್ಕೊಂಡೇನು ಮಾಡುವದು? ತಮಗೆ ಸುಖವೂ ಜನ್ಮ ಪಾವನವೂ ಆಗುವುದನ್ನೇ ನೋಡಿಕೊಳ್ಳುವುದು ಮಾನವ ಜನ್ಮದ ಮುಖ್ಯ ಉದ್ದೇಶವಾಗಿದೆ. ಬಲ್ಲವರಾದ ತಮಗೆ ನಾನು ಹೆಚ್ಚಾಗಿ ಏನು ಹೇಳಲಿ? ಹರಳಯ್ಯನ ಮಗನಿಗೆ ನಿಮ್ಮ ಮಗಳನ್ನು ಕೊಡುವುದೆಂದರೆ ಹಾಲು ಸಕ್ಕರೆ ಬೆರಸಿದಂತೆಯೇ ಸರಿ.

ಮಧುವಯ್ಯ: ನೋಡಿರಿ ಹರಳಯ್ಯನವರೇ, ಈ ಪ್ರಭುಗಳ ಅನುಮೋದನೆ ಏಂತಾಯಿತು ತಿಳಿದಿರಾ.

ಹರಳಯ್ಯ: ತಿಳಿದೆ, ಇನ್ನು ಮೇಲೆ ಈ ಪ್ರಭುಗಳೂ ನೀವೂ ಕೂಡಿಯೇ ಏನು ಮಾಡುವುದೋ ಮಾಡಿಬಿಡಿರಿ.

ಬಸವ: ಮಧುವರಸರೇ, ಲಗ್ನದ ಸಮಾರಂಭ ನೆರವೇರಿಸಿಯೇ ಬಿಡಿರಿ. ಹೋಗಿರಿ. ಇನ್ನೇನು ಹರಳಯ್ಯನವರೇ ಇದಕ್ಕೇನೂ ಸಂದೇಹ ಬೇಡ. ಕಲ್ಯಾಣ ಕಾರ್ಯ ನೆರವೇರಿಸಿಕೊಳ್ಳಿ. (ಎಲ್ಲರೂ ಹೋಗುವರು).

ವಿವಾಹ ಮಂಟಪ

'ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ
ರಾಶಿಕೂಟ ಋಣಸಂಬಂಧ ಉಂಟೆಂದು ಹೇಳಿರಯ್ಯ
ಚಂದ್ರಬಲ ತಾರಾಬಲ ಅಂದೇ ಉಂಟೆಂದು ಹೇಳಿರಯ್ಯ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ
ಕೂಡಲಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯ'

(ವಿವಾಹ ಮಂಟಪ ಮಧುವರಸನ ಮನೆಯ ಮುಂದೆ ವಧೂ-ವರರು

ಹಸೆಯ ಜಗುಲಿಯ ಮೇಲೆ ಕೂತಿದ್ದಾರೆ. ಅಕ್ಷತಾರೋಪಣ ಸಮಯ. ಶಿವಾಚಾರ ಅಯ್ಯನವರು ಮಂಗಲಾಷ್ಟಕ ಅನ್ನುವರು.

॥ ಮಂಗಲಾಷ್ಟಕ ॥

ಗಂಧರ್ವಾದಿ ಮುನಿಃ ನಿಭಂ ಸುರ್ವೈರ್ಹರಿ ಹರ ಬ್ರಹ್ಮಾದಿರ್ಭಿರ್ವಂದಿತಂ ।
ಗಾಯತ್ರ್ಯಾಗಮ ವೇದಶಾಸ್ತ್ರ ವಿನುತಂ ಸೃಷ್ಟಿಸ್ಥಿತಿಸ್ತು
ನಿತ್ಯಾನಂದಂ ಪರಾತ್ಪರತರಂ ಪ್ರತ್ಯಕ್ಷ ಯಜ್ಞಾಧಿಪಂ ।
ಮನೂರ್ಷಿಯದಾ ಪೂರುಷಂ ಕುರ್ವಂತು ಓಂ ಮಂಗಲಂ ॥ ೧ ॥

(ಅಕ್ಷತಾರೋಪಣವಾಗುವದು. ವಧೂವರರಿಗೆ ಮುತ್ತೈದೆಯರು ಆರತಿ ಬೆಳಗುವರು. ಮಧುವರಸನೂ ಹರಳಯ್ಯನೂ ಜಂಗಮ ಹಾಗೂ ಬ್ರಾಹ್ಮಣರಿಗೆ ಭಿಕ್ಷೆ ಕೊಟ್ಟು ತೃಪ್ತಿಪಡಿಸುವರು. ಲಗ್ನ ಸಮಾಪ್ತಿ).

(ಉಳಿದ ಪ್ರಧಾನರೆಲ್ಲ ಕೂಡಿ ಬಿಜ್ಜಳ ರಾಜನಿಗೆ ಮಧುವರಸ ಹರಳಯ್ಯಗಳ ಶರೀರ ಸಂಬಂಧವನ್ನರುಪುವರು).

ಮಂತ್ರಿ: ಮಹಾರಾಜರಿಗೆ ವಂದನವು.

ಬಿಜ್ಜಳ: ಶುಭವಾಗಲಿ, ಬಾ ಮಂತ್ರಿವರ್ಯಾ ಯಾಕೆ ಬಂದೆ?

ಮಂತ್ರಿ: ಮಹಾರಾಜ, ತಮ್ಮಂಥ ಮಹಾರಾಜರು ಈ ಪಟ್ಟಣದಲ್ಲಿ ಇರಲಿಕ್ಕಾಗಿ ನಿಮ್ಮ ಹೆದರಿಕೆ ತುಸು ಸಹ ಇಲ್ಲದೆ ಕುಲಭ್ರಷ್ಟರೆಲ್ಲ ಕೂಡಿ ನಮ್ಮ ಊರ ಮಾನವನ್ನೇ ಕಳೆದುಬಿಟ್ಟರು.

ಬಿಜ್ಜಳ: ಏನು, ಯಾರು? ಅಂಥ ಅಲ್ಲದ ಅಸಹ್ಯ ಕುಲಗೇಡಿತನವನ್ನು ಏನು ಮಾಡಿದರು?

ಮಂತ್ರಿ: ಪ್ರಭೋ, ಏನೆಂದರೆ ಮಧುವರಸ ಮಂತ್ರಿಯು ತನ್ನ ಮಗಳನ್ನು ಹರಳಯ್ಯನೆಂಬ ಒಬ್ಬ ಸಮಗಾರನ ಮಗನಿಗೆ ಕೊಟ್ಟು ತನ್ನ ಬಾಗಿಲಲ್ಲಿಯೇ ಮದುವೆ ಮಾಡಿದನು. ಇನ್ನು ಆ ಹುಡುಗನಿಗೆ ತನ್ನದೊಂದು ಮನೆಯನ್ನು ಕೊಟ್ಟು ಊರಲ್ಲಿಯೇ ಇಟ್ಟುಕೊಳ್ಳುವನಂತೆ. ಅಂದಮೇಲೆ ಮಹಾರಾಜ ಊರು, ಹೊಲೆಗೇರಿಯೂ ಒಂದೇ ಆಯ್ತಲ್ಲವೋ ನೀವೇ ನೋಡಿರಿ. ಇಂಥ ಭ್ರಷ್ಟಾಚಾರದಿಂದ ಈ ನಗರದಲ್ಲಿ ಇನ್ನು ಮುಂದೆ ಏನೇನು ನಡೆಯುವದೋ ಯಾರಿಗೆ ಗೊತ್ತು. ನೀವು ಈ ಪ್ರಸಂಗದಲ್ಲಿ

ಅಲಕ್ಷಿಸಕೂಡದು. ಜಾತಿಭ್ರಷ್ಟತೆಯ ಪಾಪ ಅನಿವಾರ ಪಾಪ. ನೀವು ಯೋಗ್ಯ ವಿಚಾರಿಸಲೇಬೇಕು ಮಹಾನ್.

ಬಿಜ್ಜಳ: ಇಂಥ ನೀಚ ಕೆಲಸಕ್ಕೆ ಅದಾರು ಪ್ರೋತ್ಸಾಹ ಕೊಟ್ಟರು?

ಮಂತ್ರಿ: ಇರುವನಲ್ಲ ಆ ಬಸವಣ್ಣ, ಇನ್ನೂ ಏನೇನು ಮಾಡಬೇಕೆಂದು ಹವಣಿಸಿರುವನೋ ಅದಾರಿಗೆ ಗೊತ್ತು. ಮಹಾರಾಜರಾದ ನಿಮ್ಮ ಹೆದರಿಕೆ ಅವನಿಗೆ ಎಳ್ಳಷ್ಟೂ ಇಲ್ಲ. ಅಂತೆಯೇ ಇಂಥ ಅನಾಚಾರಗಳಾಗಹತ್ತಿದವು ಬಲ್ಲಿರಾ.

ಬಿಜ್ಜಳ: ಸಚಿವಾ, ಬಲಾಢ್ಯ ರಾಜನಾದ ನಾನು ಪ್ರತ್ಯಕ್ಷ ಇರಲಿಕ್ಕಾಗಿಯೇ ಇಂಥ ಅಲ್ಲದ ಅಸಂಗ ಕೃತ್ಯಕ್ಕೆ ಸ್ವತಃ ಮುಂದಾಳಾಗಿ ತಾನೇ ಬೇಕಾದ ಹಾಗೆ ಮಾಡಹತ್ತಿದನೆಂದ ಮೇಲೆ ತೀರಿಹೋಯ್ತು. ಆ ಹೊತ್ತೇ ಅವನಿಗೆ ರಾಜದರ್ಬಾರದಿಂದ ಬಹಿಷ್ಕಾರ, ಮತ್ತೂ ಮಧುವರಸನನ್ನೂ ಆ ಹರಳನನ್ನೂ ಆನೆಯ ಕಾಲಿಗೆ ಕಟ್ಟಿ ಎಳೆಸಿ ಬಿಡಲಿ ಆಯಿತೇ. ರಾಜಾಜ್ಞೆ ಇಂತಾದುದೆಂದು ಡಂಗುರ ಮುಖವಾಗಿ ಪ್ರಸಿದ್ಧಪಡಿಸು ಹೋಗು.

ಮಂತ್ರಿ: ಮಹದಾಜ್ಞೆ (ಹೋಗುವನು)

–(ಬಸವೇಶ್ವರರು ಬಂದು)–

ಬಸವ: ಓಹೋ, ಬಿಜ್ಜಳನು ಮಧುವರಸ ಹಾಗೂ ಹರಳಯ್ಯನನ್ನೂ ಆನೆಯ ಕಾಲಿಗೆ ಕಟ್ಟಿ ಎಳೆಸಿ ಕೊಲ್ಲುವ ಶಿಕ್ಷೆ ವಿಧಿಸಿದನಂತೆ. ನನಗೆ ಇನ್ನು ರಾಜ ದರ್ಬಾರಿಗೆ ಹೋಗಬಾರದೆಂದು ರಾಜಾಜ್ಞೆಯಂತೆ, ಅಂದ ಮೇಲೆ ಈ ಕಲ್ಯಾಣ ಪಟ್ಟಣದ ಅಂತ್ಯಕಾಲವೂ ತೀರಾ ಸಮೀಪಿಸಿದೆ. ಅಂತೆಯೇ ರಾಜನಿಂದ ಇಂಥಾ ನಿಂದ್ಯ ಕಾರ್ಯ ಸಂಭವಿಸುವ ಪರಿಣಾಮ ಒದಗಿತು. ನಾನಿನ್ನು ಇಲ್ಲಿ ಒಂದು ಕ್ಷಣ ಸಹ ನಿಲ್ಲುವದಿಲ್ಲ ಈಗಲೇ ಕೂಡಲಸಂಗಮನ ಸನ್ನಿಧಿಗೆ ಸಾರಿ ಅವನೊಳಗೈಕ್ಯನಾಗುವೆ.

(ಕೂಡಲ ಸಂಗಮಕ್ಕೆ ತೆರಳುತ್ತಾನೆ)

॥ ಆರತಿ ॥

ಜಯ ಮಂಗಲವಿರಲಿ ಶಂಭುವಿಗೆ ॥ಪಲ್ಲ॥
ವೃಷಭಾರೂಢಗೆ । ಶಶಿಧರ ಜೂಡಗೆ ।
ಕುಸುಮ ಶರಮರುಹಿದ । ಅಸಮಾಕ್ಷನಿಗೆ ॥ ೧ ॥

ಭಕ್ತರಕ್ಷಕನಿಗೆ । ಮುಕ್ತಿದಾಯಕನಿಗೆ ।
ಯುಕ್ತಿಗಮ್ಯ । ಶಕ್ತಿಯಿಂ ಶೋಭಿಪಗೆ ॥ ೨ ॥

ಕಾದರೊಳ್ಳಿಯ ವೀರ । ಭದ್ರದೇವನ ಭರ ।
ಮೋದದಿಂದೀಕ್ಷಿಪ । ಚಂದ್ರಶೇಖರ ಶಿವಗೆ ॥ ೩ ॥

ಸಮಾಪ್ತ ಮಂಗಳ ಮಹಾ

♦ ♦ ♦

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ "ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ 12ನೇ ಶತಮಾನದ ಶರಣರಿಗೆ ಸಂಬಂಧಿಸಿದ ಬಯಲಾಟಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಗ್ರಾಮಾಂತರ ಪ್ರದೇಶದ ಜನರ ಕಲ್ಪನೆ ಹೇಗಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬